ಎಲ್ಲರಿಗೂ ಬೇಕಾದ್ದು.

ಪರಮ ಹಿತೈಷಿಯಾದ ತರಹವಾರಿ ಹೂವಿನ ಸಾರಗಳು. ಸೀಸೆಗಳಿಗೂ ಪೆಟ್ಟಿಗೆ ೧ಕ್ಕೆ ರೂ. ೫. (ರವಾನಿಸುವ [illegible]) ನಿಮ್ಮ ಆರ್ಡರಿನ ಸಂಗಡ ೨ ರೂಪಾಯಿ [illegible] ಬಾಕಿ ಮೊಬಲಗಿಗೆ ವಿ. ಪಿ. ಮಾಡುತ್ತೇವೆ

ಎಸ್. ಟಿ. ಎ.
ಬೆಂಗಳೂರು ಸಿಟಿ.

ಕ್ರಯ ೧-೮-೦ **ಭಾಷಾನಿಧಿ** ಅಂಚೆ ಬೇರೆ.

ಬೋಧಕರ ಸಹಾಯವಿಲ್ಲದೆ ಕನ್ನಡ, ತೆಲುಗು, ಅರವ, ಮಲೆಯಾಳ ಗ್ರಂಥ, ಸಂಸ್ಕೃತ, ಮಹಾರಾಷ್ಟ್ರ, ಗುಜರಾತಿ, ಬಂಗಾಳಿ, ಈ ಒಂಬತ್ತು ಸೋದರ ಲಿಪಿಗಳನ್ನು ಬಹು ಸುಲಭವಾಗಿ ಕಲಿಸುವುದು

ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಕ್ರಯ ೧-೪-೦ **ಹಿಂದೀಭಾಷಾ ಪ್ರವೇಶದಾಯಿನಿ.** ಅಂಚೆ ಬೇರೆ

ಭಾರತ ಭೂಮಿಯ ಪ್ರಜಾಸಾಮಾನ್ಯವೆಲ್ಲಕ್ಕೂ ಮುಖ್ಯ ಭಾಷೆ ಇದೊಂದೇ.

ಹೊಸದಾಗಿ ಕಲಿಯುವವರಿಗೆ ಕಲಿಸುವವರ ಅಗತ್ಯವಿಲ್ಲದ ಬಹು ಸುಲಭವಾಗಿ ತಿಳಿಯುವಂತೆ ಬರೆದಿದೆ

ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಬೆಂಗಾಲಿ, ಮಹಾರಾಷ್ಟ್ರ, ಉರ್ದು, ಭಾಷೆಗಳಿಗೆ ಬೇರೆಬೇರೆ ಪುಸ್ತಕಗಳು ಅಚ್ಚಾಗುತ್ತಿವೆ [80 14]

ವಿಳಾಸ:— ಭಾರತಿ ಸಂಪಂಗಿರಾಮು,
"ಸವಿನುಡಿ"ಯ ಸಂಪಾದಕ,
42 ಸಿ ಬೀದಿ, ಕೋಟೆ, ಬೆಂಗಳೂರು ಸಿಟಿ

ಅಪೂರ್ವ ಸಂದರ್ಭ.

ಅಕ್ಕಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದು ಬಲ್ಲವರಾದರೂ ಕೂಡಾ ಹಳ್ಳಿಗಳಲ್ಲಾದರೂ ಪಟ್ಟಣಗಳಲ್ಲಾದರೂ ಬರೀ ಜೀವನ ಮಾಡುವುದಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು ಅತ್ಯಾಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ[illegible]ಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ಮಾಹಿತಿ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ಬರೆದಲ್ಲಿ ಉಚಿತ ಕೊಡುವೆವು.

M Anantha Prabhu,
The Tailoring House and
School of Scientific Tailor's Cutting,
MANGALORE, SOUTH KANARA

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಛಾಪೆ

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ [illegible] ಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಪದ್ಯಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ ಶಾಸ್ತ್ರರೀತಿಯಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು ಅಲಂಕಾರಗಳು, ಸ್ವರಜತಿಗಳು ವರ್ಣಗಳು [illegible], ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ಕೆಲವು ಕೀರ್ತನೆಗಳು ಸಹ ಸ್ವರಸಹಿತ ಕೊಡಲ್ಪಟ್ಟಿರುತ್ತವೆ. ಈ ಛಾಪೆಯಲ್ಲಿ ಎರಡನೆ ಛಾಪೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳನ್ನು [illegible] ಬೆಲೆ ೧೦ ಆಣೆ

[illegible] ೦—೬—೦ [illegible] ೦—೬—೦

ವಿಳಾಸ —
ಎಚ್. ಎನ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ದರ್ಬಾರ್ ಸೋಪು

ಈ ಸೋಪನ್ನು ಕೊಡಲು ಗಳಿಗೆ ಒಂದೇ ಒಂದ ಧಡಿಮ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡಷ್ಟು ಕೈಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ಕೋಂಟವೂ ಇಲ್ಲದೆ ಕೂದಲನ್ನು ತೆಗೆದುಬಿಡು[illegible]

ನಮ್ಮ ದರ್ಬಾರ್ ಸೋಪು

ಗಂಡೆ, ಮೊಡವೆ, ಬಚ್ಚು, ಹುಳಿ, ನವೆ ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ ರೂ 1—14—1
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ „ 1—10—1
ವಿಲಾಯಿತಿ ಸೋಪ ನಾಶಿಕ ಬುಕ್ಕಿ „ 1— 9— .

ವಿಳಾಸ— ವೈರಂ ಅಂಡ್ ಕೊ,
ಇರುಕಪ್ಪನ ಬೀದಿ, ಮದರಾಸು.

೧೯೨೦ನೇ ಜನವರಿಯಿಂದ ಆರಂಭ } **ಸದ್ಬೋಧಕ ಗ್ರಂಥಮಾಲೆ.** (ತ್ರೈಮಾಸಿಕ ಪುಸ್ತಕ) { ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ [illegible], ವಿನೋದವಲ್ಲದೆ, ಸ್ಥಳೀಯವಾರ್ತೆ ವಿವರ[illegible] [illegible] ಪ್ರಕಟವಾಗುವುದು. [illegible] ಕನ್ನಡಿಗರೂ [illegible] ಕನ್ನಡಾಭಿಮಾನಿಗಳೂ [illegible] ವಾರ್ಷಿಕ ಚಂದಾ [illegible] ಒಂದೇ ರೂಪಾಯಿ [illegible] ಮಾತೃಭಾಷಾ ಪೋಷಕರಾದ [illegible] ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ— ಎಸ್ ರಂಗಸ್ವಾಮಯ್ಯ, ಸಂಪಾದಕ [illegible],
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತ್ಕಲ್, (ದಕ್ಷಿಣ ಕನ್ನಡ).

ಅಥವಾ — S R Hebbar & Bros.,
General Merchants, SURATKAL, S. K.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿತ.

Authorised and fully paid up Capital Rs. 300,000—0—0	ಅಧಿಕಾರಿಗಳೊಳಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 30[illegible]—0
Reserve and other sinking Funds ,, 120306—11—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 120[illegible]—0

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತ[illegible]

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 6th January 1920. — P. Gopal[illegible] Sec[illegible]

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮ[illegible] ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇ[illegible] ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ [illegible] ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡು[illegible] ಟ್ಯಾಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಬಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ [illegible]
ಸುಗಂಧಕಾರ[illegible]

ನ್ಯೂ Discoveries of the Twentieth Century.

Substitute for Quinine!

Powder I. [illegible] ಸೇವನೆಯಿಂದ ಮಲೇರಿಯಾ ಎಂಬ [illegible]
[illegible] ಸಲ ತಗೆದುಕೊಳ್ಳುವುದರಿಂದ ಮರ[illegible] ಶರಗಿಹೋಗುತ್ತವೆ. [illegible] ಶೀಸೆ 1ಕ್ಕೆ ರೂ. ೧.

Smallpox Preventive.

Powder No. II. ವರ್ಷ 3—7 ದಿವಸ ಸೇವನೆಯಿಂದ [illegible] ಸಿಡುಬು (ಅಮ್ಮನರೋಗ) [illegible] ಒಂದು ವೇಳೆ ಹತ್ತಿದರೆ [illegible] ಶೀಸೆ 1ಕ್ಕೆ ರೂ. 1—0—0.

Cholera Specific.

Pills No. I. ಕಾಲರಾ ಎಂಬ ವಾಂತಿಭೇದಿಯು ಎಷ್ಟು [illegible] ಈ ಔಷಧವನ್ನು ಒಂದೇ ಸಲ ಸೇವಿಸುವದರಿಂದ ಫಕ್ಕನೇ [illegible] ನಿಲ್ಲುವದು. 48 ಮಾತ್ರೆ ರೂ. 1—8—0.

Vishuchikanjan.

Pills No. II. ವಾಂತಿಭೇದಿಯು ಕಠಿಣವಾಗಿ [illegible] ಈ ಮಾತ್ರೆಗಳ ಅಂಜನದಿಂದ [illegible] ಬರಿಸುವದು. ಮತ್ತು ಕಾಲರಾ ಎಂಬ ವಾಂತಿಭೇದಿಯು ತಕ್ಷಣವೇ ನಿಲ್ಲುವದು.
24 ಮಾತ್ರೆಗಳಿಗೆ ರೂ. 1—0—0.

N. B. ಈ ಔಷಧಗಳ ಎಸರು ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ತರದ ರೋಗಗಳಿಗೆ ಸಿದ್ಧ ಮಾಡಿಟ್ಟಿರುವ ಔಷಧಗಳ ಸ್ಟೋರ್ ಸಿಗುತ್ತಾ ಇರುವದು. ನಮ್ಮ ಕ್ರಯವಿಲ್ಲದ ಕೆಟಲಾಗನ್ನು ತರಿಸಿ ನೋಡಿರಿ. [illegible] ಪ್ರಯೋಗಿಸಿರಿ.

SRI BHAVANISHANKER AYURVEDIC DESPENSARY,
BRAHMAVAR, S. KANARA.

ಫೇಮ್ಸ್ ಪಂಚ್, ಆಟೋಮೋಟಿವ್ ಸೆಂಟ್.



ಈ ನಕ್ಷೆಯಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ಇರಿಡಿಯಂ ಭಂಗಾರದ ಮುಳ್ಳು ಹಾಕಿಯತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತಿನ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವರಿಗೆ ಫೇಮ್ಸ್ ಪಂಚ್, ಆಟೋಮೋಟಿವ್ ಸೆಂಟ್ ಇನಾಂ-ಸಹಿತ ರೂ. ೧—೪—೦,

O. O. LINGAM & Co,
No. 2, Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ
ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಾತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರ ಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು. ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರತ ಕೂದಲು ಕಪ್ಪಾಗುತ್ತವೆ. ರೋಗಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸಿಖಿನ ಮಾಸುವ ನೋವು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.

4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವೇಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪಾರಂಪರ್ಯ ಗುರುಗಳಿಂದ ಸಿದ್ಧಪಡಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೊಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ಡಾಕ್ಟರ್ ವ್ಯಾ. ನಿಶಿಮ್ಯೂರಾ ಎಂಬವರು ಮಂಗಳೂರು ಹಂಪನಕಟ್ಟೆ "ಪಿರೇರಾ ಬಿಲ್ಡಿಂಗ್ಸಿನ" ಮಾಳಿಗೆಯಲ್ಲಿ ತಮ್ಮ ಆಫೀಸು ಮಾಡಿರುವರು.

ಎಲ್ಲಾ ವಿಧದ ದಂತಚಿಕಿತ್ಸೆಗಳನ್ನೂ ಅತ್ಯಾಧುನಿಕ ರೀತಿಯಲ್ಲಿ ಮಾಡುವರು.

ಗಿರಾಕಿಗಳನ್ನು ಪರೀಕ್ಷಿಸಿ ಅಭಿಪ್ರಾಯಕೊಡುವುದಕ್ಕೆ ಫೀಸೇ ತೆಗೆದುಕೊಳ್ಳಲಾಗುವುದಿಲ್ಲ.

Dr. Y. Nishimura,
Japanese Dentist.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷ[illegible]

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರ[illegible]
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರ[illegible]
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರ[illegible]
4 ಫೆರಮ್ ಫೋಸ್	8 ಮ್ಯಗ್ನೆಸಿಯ ಫೋಸ್	12 ಸಿಲಿಸಿ[illegible]

ಕ್ರಯ

ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ
ನಾಲ್ಕು ,,	C	,,	,,	,,
ಒಂದು ಔನ್ಸಿನ	A	,,	,,	,,

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ [illegible]

ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.

ಜೀವರಸಾಯನಿ ವೈದ್ಯಶಾಸ್ತ್ರ ಎಂಬ [illegible] ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು [illegible] ವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ [illegible] ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎ[illegible] ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ [illegible] ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆನಾ[illegible]
ಎಲೆಕ್ಟ್ರೊ ಹೊಮಿಯೊಪೆತಿ ಡಿಸ್ಪೆನ್ಸ[illegible]

ವಿದೇಶ ವರ್ತಮಾನ.

ಯುರೋಪದ ಅನವಸ್ಥೆ—ರುಶ್ಯದಲ್ಲಿ ಬೊಲ್ಶೆವಿಕರ ಬಲವು [illegible] ಬಂದಂತೆ [illegible] ಪ್ರಾಂತದಲ್ಲಿ ಎದ್ದ [illegible] ಬೊಲ್ಶೆವಿಕರೊಡನೆ [illegible] ಎದುರಿಸಿಕೊಂಡಿದ್ದರೂ [illegible] ಬಲವನ್ನು ಮುರಿಯಲು ಸಾಧ್ಯವಾಗಲಿಲ್ಲ. ದಕ್ಷಿಣ ದಿಕ್ಕಿನಲ್ಲಿ [illegible] ಬೊಲ್ಶೆವಿಕರು ೮೦ ಮೈಲುಗಳಷ್ಟು ದೂರದ [illegible] ಬಂದಿರುವರು. ಜನರಲ್ ಡೆನಿಕಿನ್ ಮಾಡಿದ ಸಹಾಯವು [illegible] ಎಡ್ಮಿರಲ್ ಕೊಲ್ಚಕನೂ ಬೊಲ್ಶೆವಿಕರನ್ನು [illegible] ಸೈಬೀರಿಯದ ಪೂರ್ವ ಕರಾವಳಿಯಲ್ಲಿ ಇವರ [illegible] ಇದರ ಪರಿಣಾಮವೇನಾದೀತು ಎಂದು ಬೇಗನೆ ಗೊತ್ತಾಗಬಹುದು [illegible] ಇಂತು ಬೊಲ್ಶೆವಿಕರು ತಮ್ಮ ಅಧಿಕಾರವನ್ನು ವಿಸ್ತರಿಸಿದ ಪ್ರಾಂತದಲ್ಲಿ [illegible] ನಡೆಸುತ್ತಿದ್ದಾರೆಂದು ವಿಲಾಯತಿಯ ಪತ್ರಿಕೆಗಳು ಪ್ರಕಟಿಸುತ್ತಿದ್ದಾವೆ.

ಅಮೇರಿಕ ಮೊದಲಾದ ಶತ್ರುದೇಶಗಳ ಸುದ್ದಿ ಹೆಚ್ಚಾಗಿ ಕೇಳಿಸುವುದಿಲ್ಲ. [illegible] ಯುದ್ಧದಲ್ಲಿ [illegible] ತಮ್ಮ [illegible] ಸರಿಗೊಳಿಸುತ್ತಲೂ, ತಮ್ಮ ಜನ [illegible] ಉಂಟಾದ ಆಹಾರದ [illegible] ಕಡಿಮೆ ಮಾಡಲಿಕ್ಕೆ ಯತ್ನಿಸುತ್ತಲೂ [illegible].

ಇಟಲಿಯು [illegible] ಬಟಕೆಯನ್ನು [illegible] ಯುದ್ಧಕಾಲದಲ್ಲಿ ಲಂಡನ್ನಿನಲ್ಲಿ [illegible] ಇಂಗ್ಲೆಂಡು ಮತ್ತು ಫ್ರಾನ್ಸ್ ದೇಶಗಳೂ [illegible] ಒಪ್ಪಂದದ ಶರ್ತಗಳನ್ನು ಪೂರೈಸಬೇಕೆಂದು [illegible] ಇದಲ್ಲದೆ ಬಹಳ ಕಾಲದವರೆಗೆ ಒಸ್ಟ್ರಿಯದೊಡನೆ [illegible] ಉದ್ದೇಶವಾದ [illegible] ಅಂಥ ಉದ್ದೇಶಕ್ಕೆ ಭಂಗ [illegible] ಎಂದು ಅದರ ಮುಖ್ಯ ಮಂತ್ರಿಯು ವಾದಿಸುತ್ತಿರುವನು. ಹೀಗಾಗಿ ಸ್ವಾತಂತ್ರ್ಯ [illegible] ಉದ್ದೇಶವು [illegible] ಕೋರುವುದಿಲ್ಲ.

ತುರ್ಕಿಯೊಡನೆ ಒಪ್ಪಂದದ ಶರ್ತಗಳು ಚರ್ಚೆಯಲ್ಲಿವೆ ಎಂದು ಹೇಳಬೇಕು [illegible] ಸಿಗಬೇಕಾದ [illegible] ಭೂಮಿಯು [illegible] ವಿಶೇಷವಾಗಿ [illegible] ಬ್ರಿಟಿಷ ಸೈನ್ಯದಿಂದ ಹಿಡಿಯಲ್ಪಟ್ಟ ಕಾರಣ, ಅಲ್ಲಿಯ [illegible] ಸ್ವರಾಜ್ಯಭಾರದ ತತ್ವಗಳನ್ನು ಅಂಗೀಕರಿಸುವವರೆಗೆ ಬ್ರಿಟಿಷ ಸರಕಾರ [illegible] ಎನ್ನಬೇಕು. ಈಗ ಅಲ್ಲಿ [illegible] ಬ್ರಿಟಿಷ ಸರಕಾರದವರು [illegible] ಈ ಕಾಲವು ಅಂಥಾ ಕೆಲಸಕ್ಕೆ [illegible] ಹಳೇ ಆಸ್ತಿಯ ಮೇಲೆ [illegible] ಹೊಸ ಆಸ್ತಿ [illegible] ಕೈ ಹಾಕಬಾರದು ಎಂದು [illegible] ಲಂಡನ್ [illegible] ಪತ್ರಿಕೆಯು ಉದ್ಘೋಷಿಸುತ್ತಿದೆ.

ಪೆರ್ಶಿಯದ ಭಾಗವು ಬ್ರಿಟಿಷ ಸೈನ್ಯದವರಿಂದ ಹಿಡಿಯಲ್ಪಟ್ಟದ್ದರೂ ಅಲ್ಲಿ ಫ್ರೆಂಚ [illegible] ಹಕ್ಕಿಗೆ ಅಕ್ರಮವಾಯಿತು ಎಂಬ ಆಕ್ಷೇಪ [illegible] ಕಾರಣ ಆ ಭಾಗವನ್ನು ಫ್ರೆಂಚರ ವಶ ಬಿಟ್ಟು ಅಲ್ಲಿ [illegible] ಬ್ರಿಟಿಷ ಸೈನ್ಯವು ಹಿಂತಿರುಗಿತು.

ಸ್ಮಿರ್ನಾ ಭಾಗದಲ್ಲಿಯ [illegible] ಪ್ರದೇಶಗಳಲ್ಲಿಯೂ ಗ್ರೀಕರ [illegible] ಕೆಲವು ಇವೆ ಎಂಬಂತೆ [illegible].

ಈಚೆಗೆ ಇಜಿಪ್ತದಲ್ಲಿ ತುರ್ಕಿಯಿಂದ ಸ್ವಾತಂತ್ರ್ಯವನ್ನು ಪಡೆದ [illegible] ಬ್ರಿಟಿಷರ ಉಪಕಾರಸ್ಮರಣೆಯನ್ನು ಮಾಡುತ್ತಿದ್ದು ಈಗ ರಾಜ್ಯದ ವ್ಯವಸ್ಥೆಗೆ ಬಂದಿರುವ ಲಾರ್ಡ ಮಿಲ್ನರ್ ಪ್ರಭೃತಿಗಳಿಗೆ [illegible] ಆನಂದದಿಂದ ಸ್ವಾಗತ ಮಾಡಿ [illegible] ಇಜಿಪ್ತ [illegible] ತುರ್ಕಿಯ [illegible] ರಾಜ್ಯವಾಗಿದ್ದರೂ ಅಲ್ಲಿ ಒಬ್ಬ [illegible] ಇದ್ದರು. ಸುಧಾರಿತ ರಾಜ್ಯ ಕ್ರಮಗಳನ್ನು ಅಲ್ಲಿಯ ಜನಗಳಿಗೆ ಕಲಿಸಿ, ಯುರೋಪದ ಶಿಕ್ಷಣ ಕ್ರಮಗಳನ್ನು ಅಲ್ಲಿ ಹರಡಿ, ಹಲವು ವರ್ಷಗಳ ಹಿಂದೆ ಲಾರ್ಡ ಕ್ರೋಮರ್ ಎಂಬವರು [illegible] ಕಡೆಯಿಂದ [illegible] ಅಲ್ಲಿ ಅನೇಕ [illegible] ಮುಂತಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದರು. ಈ ಸುಧಾರಿತ ಶಿಕ್ಷಣವನ್ನು ಹೊಂದಿದ ಜನರು ಲಾರ್ಡ ಕ್ರೋಮರ್ ಇಜಿಪ್ತ ದೇಶಕ್ಕೆ [illegible] ಅಲ್ಲಿ [illegible] ಮುಂತಾದ ಪ್ರಜಾಪ್ರತಿನಿಧಿ ಸಭೆಗಳನ್ನು [illegible] ಯುರೋಪದ [illegible] ರಾಜ್ಯಭಾರ ಕ್ರಮವನ್ನು ಅಲ್ಲಿ [illegible] ಉತ್ಸಾಹದಿಂದ ಇದ್ದರು. ಅದರ ಲಾರ್ಡ ಕ್ರೋಮರರ ನಂತರ ಅಲ್ಲಿಗೆ ಬ್ರಿಟಿಷ [illegible] ಬಂದಂಥವರು ಅಷ್ಟು ಉದಾರಭಾವದವರಲ್ಲದ ಕಾರಣ ಅಲ್ಲಿಯ ಜನಗಳಲ್ಲಿ [illegible] ಕೆಲವು [illegible] ಬ್ರಿಟಿಷರ ಉಪಕಾರಸ್ಮರಣೆ ಮಾಡುವುದಕ್ಕೆ [illegible] ಅಧಿಕಾರ ಸೂತ್ರಗಳನ್ನು ತಾವೇ ಕೈಕೊಳ್ಳಬೇಕೆಂದಿದ್ದರು. ಇಂಥವ [illegible] ಅಲ್ಲಿಗೆ ಕಳುಹಿಸಲ್ಪಟ್ಟ ಲಾರ್ಡ ಕಿಚನರ್ ಪ್ರಭೃತಿಗಳ [illegible] ಕೆಲವು ಸಮಯದಲ್ಲಿಯೇ ಮಹಾ ಯುದ್ಧವು ಪ್ರಾರಂಭಿಸಿದ್ದರಿಂದ ಬ್ರಿಟಿಷರ ಯುದ್ಧಮಂತ್ರಿಯಾಗಿ [illegible] ಯುದ್ಧ ಕಾಲದಲ್ಲಿ [illegible] ಬ್ರಿಟಿಷರ [illegible] ಇಜಿಪ್ತದವರಲ್ಲಿದ್ದರೂ ಅವರ [illegible] ಅವಕಾಶ ಸಿಗಲಿಲ್ಲವೆಂದ [illegible] ವ್ಯಸನಗೊಂಡರು. ಕಡೆಗೆ ಯುದ್ಧಕಾಲದಲ್ಲಿ ಅವರಿಗೆ [illegible] ತುರ್ಕಿ ಸುಲ್ತಾನರ ಅಧಿಕಾರವನ್ನು ಕಡಿದುಬಿಟ್ಟು ಇಜಿಪ್ತದ [illegible] ಸ್ವತಂತ್ರ [illegible] ಅದರ ರಾಜ್ಯಸೂತ್ರವನ್ನು ಅವರ [illegible] ಒಪ್ಪಿಸದಿದ್ದ [illegible] ಬಹಳ [illegible] ಬ್ರಿಟಿಷರು ಅಲ್ಲಿಗೆ ಹೋಗಿ [illegible] ಪ್ರಯೋಗ ಮಾಡಬೇಕಾಗಿ [illegible] ಎಲ್ಲವನ್ನು ಹೇಗೂ ಇಲ್ಲಿ [illegible] ಉಂಟುಮಾಡಿ [illegible] ಈಗ ಅಲ್ಲಿ ರಾಜ್ಯದ [illegible] ವ್ಯವಸ್ಥೆ ಹೇಗಾಗಬೇಕೆಂದು [illegible] ಉದ್ದೇಶದಿಂದ ಲಾರ್ಡ ಮಿಲ್ನರ್ ಬ್ರಿಟಿಷ ಪಾರ್ಲಮೆಂಟಿನ [illegible] ಅಲ್ಲಿಗೆ ಕಳುಹಿಸಿದ್ದಾರೆ.

ಐರ್ಲೆಂಡವು ಹೋಮ್‌ರೂಲ್‌ಗಾಗಿ ಹಲವು ವರ್ಷದಿಂದ [illegible] ಅದರ ಉದ್ದೇಶವು [illegible] ಯುದ್ಧ [illegible] ಹೋಮ್‌ರೂಲ್ [illegible] ಹೋಮ್‌ರೂಲ್ ಬೇಡವೆಂದು ವಾದಿಸಿದ ಒಂದು ಪಕ್ಷದವರು [illegible] ಸಿನ್‌ಫೇನ್ [illegible] ಬಹಳ [illegible] ಅವರಲ್ಲಿ ಕೆಲವರು ಅಲ್ಲಿಯ ಗವರ್ನರಾದ ಲಾರ್ಡ ಫ್ರೆಂಚರವರ [illegible] ಮೇಲೆ ಗುಂಡುಹಾರಿಸಿದರು. ಅದರ [illegible] ಈಗ ಎಲ್ಲರಿಗೂ [illegible] ಬ್ರಿಟಿಷ ಮಂತ್ರಿ [illegible] ಇದರ ಪರಿಣಾಮವು ಬೇಗನೆ ಗೊತ್ತಾಗುವುದು.

ಒಳದೇಶ ವರ್ತಮಾನ.

ಬೊಂಬಾಯಿ ಗಿರಣಿಗಳು—ಇಲ್ಲಿ ಸುಮಾರು ೫೦ ಗಿರಣಿ [illegible] ಕೆಲಸ ನಿಲ್ಲಿಸಿಬಿಟ್ಟಿದ್ದಾರೆ. ಕಾರಣವು ಇನ್ನೂ ಗೊತ್ತಾಗಲಿಲ್ಲ.

ಹೈದರಾಬಾದಿನಲ್ಲಿ ಕ್ರೈಸ್ತ ಮಿಶ್ಯನರಿಗಳ ಚಟುವಟಿಕೆ—ಕೆಲವು ದಿವಸಗಳ ಹಿಂದೆ ಬಿಜವಾಡದಲ್ಲಿ ದಕ್ಷಿಣ ಹಿಂದೂಸ್ಥಾನದ ಕ್ರೈಸ್ತ ಮಿಶ್ಯನರಿಗಳ ಸಮ್ಮೇಳನದಲ್ಲಿ ಒಬ್ಬ ಪಾದ್ರಿಯು [illegible] ಹೈದರಾಬಾದು ಸಂಸ್ಥಾನದಲ್ಲಿ ಕಳೆದ [illegible] ವರ್ಷಗಳಲ್ಲಿ [illegible] ೧೪,೦೮೦ ಮಂದಿ ಕ್ರೈಸ್ತಮತಕ್ಕೆ ಸೇರಿದ್ದಾರಂತೆ.

ಕಲ್ಕತ್ತಾ ಯೂನಿವರ್ಸಿಟಿ—ಈ ಯೂನಿವರ್ಸಿಟಿಗೆ ಸರ್. ರಾಸಬಿಹಾರಿ ಘೋಷರು [illegible] ಪ್ರಚಾರಕ್ಕಾಗಿ ಕೊಟ್ಟ ರೂ ೧,೧೪೩,೦೦೦ ರೂಪಾಯಿ ಮತ್ತು [illegible] ಕುಮಾರ ಗುರುಪ್ರಸಾದ ಸಿಂಗರಿಂದ ಸಿಕ್ಕಿದ ೬,೬೦,೦೦೦ ರೂಪಾಯಿ ಮತ್ತು ಕೆಲವು ಸ್ಥಿರಸೊತ್ತನ್ನೂ ಯೂನಿವರ್ಸಿಟಿಯವರು ಆದರ [illegible] ಕವಾಗಿ ಸ್ವೀಕರಿಸಿದರು.

ಹಿಂದೂಸ್ಥಾನದಲ್ಲಿ ವಿಮಾನಗಳ ಟಪ್ಪಾಲು—ಬೊಂಬಾಯಿಯಿಂದ ಕರಾಚಿಗೆ ವಿಮಾನಗಳಲ್ಲಿ ಟಪ್ಪಾಲು ಕೊಂಡುಹೋಗಿಸುವ ಏರ್ಪಾಡು ಇದೇ ತಿಂಗಳ ೧೬ನೇ ತಾರೀಕಿನಿಂದ ಪ್ರಾರಂಭಿಸುವುದು.

ಮಹಮ್ಮದ ಅಲ್ಲಿ, ಶೌಕತ್ ಅಲ್ಲಿ—ಇಂಡಿಯಾ ಡಿಫೆನ್ಸ್ ಆಕ್ಟಿನ ಮೇರೆಗೆ ನಿರ್ಬಂಧಿತರಾದ ಮಹಮ್ಮದ ಅಲ್ಲಿ ಮತ್ತು ಅವರ ಸಹೋದರ ಶೌಕತ್ ಅಲ್ಲಿ ಇವರಿಬ್ಬರೂ ಬಾದಶಾಹಿ ಜಾಹೀರನಾಮೆಗೆ ಅನುಗುಣವಾಗಿ ಬಂಧವಿಮುಕ್ತಿ ಹೊಂದಿದರು.

ಮುಸ್ಲಿಮರೀಗಿನ ವಾರ್ಷಿಕ ಅಧಿವೇಶನ—ಅಮೃತಸರದಲ್ಲಿ ಜರಗಿದ ಈ ಅಧಿವೇಶನದಲ್ಲಿ ಹಿಂದು ಮುಸಲ್ಮಾನರೊಳಗೆ ಈಚೆಗೆ ಕಲೆದೂರಿದ ಮೈತ್ರಿಭಾವವು ಇನ್ನಷ್ಟು ಪುಷ್ಟಿಯಾಗುವಂತೆ ಬಕ್ರೀದ ಹಬ್ಬದ ದಿನ ಮುಸಲ್ಮಾನರು ಸಾಧ್ಯವಿದ್ದ ಮಟ್ಟಿಗೆ ಗೋವಧೆಯನ್ನು ವರ್ಜಿಸಿ ಅದಕ್ಕೆ ಬದಲಾಗಿ ಬೇರೆ ಆಹಾರ ಪ್ರಾಣಿಗಳಿಂದ ತೃಪ್ತಿಪಡೆಯಬೇಕೆಂದು ಡಾ। ಅನ್ಸಾರಿಯವರ [illegible] ಸರ್ವಾನುಮತದಿಂದ ಉತ್ಸಾಹಪೂರ್ವಕವಾಗಿ ಮಂಜೂರಾಯಿತು.

ದಕ್ಷಿಣ ಕನ್ನಡಾ

ಪುತ್ತೂರು.—ಉಪ್ಪಿನಂಗಡಿ ತಾಲೂಕಿನ ೧೯೧೯ನೇ ಫಸಲಿಯ ಜಮಾಬಂದಿಯು ಬರುವ ೧೯೨೦ನೇ ಇಸವಿ ಜನವರಿ [illegible] ೧೨ರಿಂದ ೧೫ರ ವರೆಗೆ ಪುತ್ತೂರ [illegible] ವರೆಗೆ ಸುಳ್ಯ [illegible] ವರೆಗೆ ವಿಟ್ಲ ಫೆಬ್ರವರಿ [illegible] ವರೆಗೆ ಬೆಳ್ತಂಗಡಿ ಈ ರೀತಿ ಮುಕ್ಕಾಂಗಳಲ್ಲಿ ಜಿಲ್ಲಾ ಕಲೆಕ್ಟರ ದೊರೆಗಳವರಿಂದ ನಡೆಸಲ್ಪಡುವುದು. ಜಮಾಬಂದಿ ಸಮಯ ವರ್ಗದಾರರ ಮತ್ತು ರೈತರ [illegible] ಕೇಳುವರೆಂದು ಹುಕುಂ ಜಾರಿ [illegible].

೧೯೨೦ನೇ ಇಸವಿ ಎಪ್ರಿಲ್ ೧ನೇ ತಾರೀಕಿಗೆ ಆರಂಭವಾಗಿ ೧೯೨೦ನೇ ಇಸವಿ ಮಾರ್ಚ [illegible] ಅಂತ್ಯವಾಗುವ ವರ್ಷದ ಬಗ್ಗೆ ಶರಾಬ ಗುತ್ತಿಗೆಗಳ [illegible] ೧೯೨೦ನೇ ಇಸವಿ ಫೆಬ್ರವರಿ [illegible] ಮಂಗಳೂರು [illegible] ಬೆಳ್ತಂಗಡಿ ಮತ್ತು ಕುಂದಾಪುರ [illegible] ಪುತ್ತೂರು [illegible] ಕಾಸರಗೋಡು [illegible] ಈ ರೀತಿ ಪುತ್ತೂರು ಬೆಳ್ತಂಗಡಿ ಮುಕ್ಕಾಂಗಳಲ್ಲಿ ಜಿಲ್ಲಾ ಕಲೆಕ್ಟರ ದೊರೆಗಳವರಿಂದಲೂ [illegible] ಮುಕ್ಕಾಂನಲ್ಲಿ ಮಂಗಳೂರು ಡಿವಿಜನಲ್ ಆಫೀಸರರಿಂದಲೂ ಏಲಂ ಆಗುವದೆಂತ ಪ್ರಕಟಿಸಿರುವರು.

ಪಬ್ಲಿಕ ಕಟ್ಟಡ [illegible] ಕಂಪೆನಿಯ [illegible] ಇಲ್ಲಿಂದ ಮಂಗಳೂರಿಗೆ ಒಂದೇಸಲ ಚಲಾವಣೆಯಾಗುತ್ತಿತ್ತು. ಈಗ ಇನ್ನೊಂದು [illegible] ಚಲಾವಣೆಗೆ [illegible] ಆರಂಭಿಸಿಯದೆ.

ಅಕ್ಕಿಕ್ರಯವು ಮುಡಿ ೧೦ [illegible] ಅಕ್ಕಿಭಕ್ತದ ದಕ್ಷ [illegible] ನಡೆಯುತ್ತದೆ.

ಶರಾಬ ಗುತ್ತಿಗೆಗಳು ಹಬ್ಬದ ದಿವಸಗಳಲ್ಲಿ ಬಂದುಮಾಡಿದರೂ ಸೋಡಾ ಅಂಗಡಿಗಳು ಬಂದುಮಾಡದ [illegible] ಇರುವುದೇ? ಸೋಡಾ ಅಂಗಡಿಗಳಲ್ಲಿ ಶರಾಬು ಸಿಕ್ಕಲಿಕ್ಕೆ ಅಸ್ತಿ ಉಂಟೇ?

ಈ ವರ್ಷ ಇಲ್ಲಿ ಕೆಲವು ಗುತ್ತಿಗೆಗಳು [illegible] ಸಂಬಂಧ ಏಲಂ ಆಗದೆ ಇದ್ದರೂ [illegible] ಸಿಕ್ಕದಿದ್ದರೂ ಮುತ್ತದಾರರ ಲೈಸನ್ಸ್ ಬಂದು ಮಾಡಿದ್ದರಿಂದ [illegible] ನೀರಿನಂತೆ [illegible].

ಇಲ್ಲಿ ಅಕ್ಕಿ [illegible] ಸಂಬಂಧ ಇಲ್ಲಿಯ ಸುಮಾರು ೩೦೦ ಜನ [illegible] ಇಲ್ಲಿಂದ ಮಂಗಳೂರಿಗೆ [illegible] ಗಾಡಿಗಳನ್ನು ಇಲ್ಲಿಯ ಪೋಲಿಸ ಸ್ಟೇಶನ [illegible] ವಾಪಸು ಕಳುಹಿಸಿರುವರು. ಈ ಬಗ್ಗೆ ಇಲ್ಲಿಯ ಸಾಹುಕಾರ ಮ। ರಾ। ರಾ। [illegible] ಯಿಂದ [illegible] ಈವರೆಗೆ ಈ ಕುರಿತ [illegible] ಯಿಂದ ಜಿಲ್ಲಾ ಕಲೆಕ್ಟರ ದೊರೆಗಳವರಿಗೊಂದು [illegible] ಕೇಳುತ್ತೇವೆ.

ಸುಳ್ಯ:—ಸುಳ್ಯಮಾಗಣೆ ನಿವಾಸಿಗಳು ಪ್ರತ್ಯೇಕ ಹೋಬಳಿ [illegible] ಸ್ಥಳದಲ್ಲಿ ಒಂದು ಸಂತೆಯನ್ನು ಕಟ್ಟಿಸೋಣಾಗಬೇಕಾಗಿ ಬರಕೊಂಡ ಅರ್ಜಿಗೆ [illegible] ತಾಲೂಕುಬೋರ್ಡಿನಿಂದ ಸಾಧ್ಯವಿಲ್ಲಾ ಎಂಬ ಹುಕುಂ ಹಕ್ಕಿದ್ದರಿಂದ ಡಿಸ್ಟ್ರಿಕ್ಟಬೋರ್ಡಿನವರು [illegible] ಈ ಕೆಲಸವನ್ನು [illegible] ಕೊಳ್ಳಬೇಕೆಂಬ [illegible] ನಿಮ್ಮ ಪತ್ರಿಕೆಯಲ್ಲಿ ಕೊಡಬೇಕಾಗಿ ಪ್ರಾರ್ಥಿಸುವೆವು.

ಈ ದಾರಿಯು ದಿನ ೧ಕ್ಕೆ ನೂರಾರು ಜನರು [illegible] ದಾರಿಯಾಗಿರುವುದಲ್ಲದೆ, [illegible] ಜಾನುವಾರಸಂತೆ ಮತ್ತು [illegible] ಒಂದು ತಿಂಗಳು [illegible] ಜಾತ್ರೆಸಮಯ ದಿನ ೧ಕ್ಕೆ ಸಾವಿರಾರು ಜನರು [illegible] ಆಗುವ ದಾರಿಯಾಗಿರುವುದರಿಂದ ಡಿಸ್ಟ್ರಿಕ್ಟ್‌ಬೋರ್ಡಿನ [illegible] ಈ [illegible] ದೃಷ್ಟಿಯನ್ನಿಟ್ಟು ಈ ಕೆಲಸ [illegible] ಹಿಂದುಳಿದ [illegible] ಬಹಳ ಉಪಕಾರವಾಗುತ್ತಿತ್ತು.

ಕಳದ ವರ್ಷದ ಜಮಾಬಂದಿ ಸಮಯ ಜಮಾಬಂದಿ ಆಫೀಸರವರು ಊರ ನಿವಾಸಿಗಳನ್ನು ಕೂಡಿಸಿ, ಸಂಕಷ್ಟಗಳನ್ನು ಕೇಳಿಕೊಂಡಂತೆಯೇ [illegible] ಜಮಾಬಂದಿ ಸಮಯ [illegible] ಊರ ನಿವಾಸಿಗಳನ್ನು ಕೂಡಿಸಿ ಕೊಂಡು ಸಂಕಷ್ಟಗಳನ್ನು ಕೇಳಿಕೊಂಡು [illegible] ಕಲೆಕ್ಟರ ದೊರೆಗಳವರು [illegible] ನಂಬುತ್ತೇವೆ.

ಹಲ್ಲೂರು [illegible] ದೇವಸ್ಥಾನಕ್ಕೆ [illegible] ಈ ಹಾಲ್ಲೂರು ಗ್ರಾಮದ [illegible] ಮತ್ತು [illegible] ಗ್ರಾಮದ ದೇವಸ್ಥಾನದ ಸಮೀಪ ಒಂದೊಂದು ಬಾವಿಯು ಅತೀ ಅಗತ್ಯ—ಹಾಲ್ಲೂರು ಗ್ರಾಮದ [illegible] ರಸ್ತೆಯು [illegible] ಸಮೀಪ [illegible] ಯಲ್ಲಿ ಮತ್ತು ಗುತ್ತಿಗಾರು ಗ್ರಾಮದ ಶಾಲೆಸಮೀಪವೂ ಮತ್ತು [illegible] ಗ್ರಾಮದ ದೇವಸ್ಥಾನದ ಸಮೀಪ ಒಂದೊಂದು ಛತ್ರ ಕಟ್ಟಿಸುತ್ತಿದ್ದರೆ ಬಡ ಪ್ರಯಾಣಿಕರಿಗೆ ಬಹಳ ಉಪಕಾರವಾಗುತ್ತಿತ್ತು.

ಹೊಸಾಡು:—ಈ ತಾಲೂಕಿನ ಪರಸ್ಪರ ಸಹಾಯಕ ಸಂಘಗಳ ಸ.ಕ್ರ ಇನ್ಸ್ಪೆಕ್ಟರು ಮ। ರಾ। ರಾ। ರಾಮನಾಥಯ್ಯನವರು ಇಲ್ಲಿಗೆ ಸದೇ ಸದೇ ಬಂದು ಇಲ್ಲಿಯ ಜನರಿಗೆ ಪ್ರೋತ್ಸಾಹಿಸಿ ಈ ಗ್ರಾಮದ ಬೋರ್ಡುಶಾಲಾ ಮಂದಿರದಲ್ಲಿ ತಾ ೧೧—೧೨—'೧೯ನೇ ದಿವಸ [illegible] ಸಹಕಾರ ಸಂಘವನ್ನು ತೆರೆದು ಇದಕ್ಕೆ ಈ ದಿವಸವೇ ೩೩ ಜನ ಮೆಂಬರರು ಸೇರಿ [illegible] ಪಾಲುಗಳನ್ನು ತೆಗೆದುಕೊಂಡು ಜಮೆಯಾದ ರೂ [illegible]—೧೨—೦ಲ್ಲಿ ಒಬ್ಬ ಪಾಲುದಾರನಿಗೆ [illegible] ಅಗತ್ಯವಾಗುವ ೫೦ ರೂಪಾಯಿ ಒಂದು ಸಾಲ ಸಹ ಕೊಟ್ಟಿರುತ್ತಾರೆ. ಇನ್ನು ಸದರಿ ಸಂಘಕ್ಕೆ ಸೇರುವವರು ಅನೇಕರಿರುವರು. ಸದರಿ ಸಂಘ ಇಲ್ಲಿ ತೆರೆಯುವರೆ ಈ ಗ್ರಾಮದ ಶ್ಯಾನುಭೋಗರು ಮ। ರಾ। ರಾ। [illegible] ಪದ್ಮನಾಭಯ್ಯನವರೂ, ಕೋಟಿಮಠಸ್ಥಾನದ [illegible] ಮೆಂಬರು ಶ್ರೀಯುತ [illegible] ಬಹಳ ಉತ್ತೇಜನ ಕೊಟ್ಟಿರುತ್ತಾರೆ. ಈ ಗ್ರಾಮದಲ್ಲಿ ಹೊಸದಾಗಿ ಬೋರ್ಡ ಶಾಲಾ ಹೊಸದಸ್ತೆ, ಸಹಕಾರ ಸಂಘ ಈ ೩ ನೂತನವಾಗಿ ಆದವುಗಳು. ಆದರೆ ಇವುಗಳ ಪೂರ್ಣ ಪ್ರಯೋಜನ ದೊರೆಯಬೇಕಾದರೆ ಶಾಲೆಗೂ ರಸ್ತೆಗೂ ಅನುಕೂಲವಾದ ಬಾವ [illegible] ಪೋಸ್ಟಾಫೀಸು ಹೀಗೆ ೩ ಕೆಲಸಗಳು ಸರಕಾರದವರು ದಯಪಾಲಿಸಿದ್ದರೆ—ಇಲ್ಲಿಯ ಜನರಿಗೂ ಪ್ರಯಾಣಿಕರಿಗೂ ಚಿರಸ್ಮರಣೀಯವಾದ ಉಪಕಾರವಾಗುತ್ತಿತ್ತು.

ವಂಡಸೆ (ಕುಂದಾಪುರ ತಾಲೂಕು) ನಮ್ಮ ವಂಡಸೆ ಗ್ರಾಮದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಒಂದು ಬೋರ್ಡುಶಾಲೆಗೆ ಸ್ವಂತ ಕಟ್ಟಡ ಬರ್ಜರಿಯ ಇದೇ [illegible] ೧೯೨೦ನೇ ಇಸವಿ [illegible] ಒಳಗೆ ಕಟ್ಟಡ ಕಟ್ಟಿಸಿ ಬೋರ್ಡಿನವರಿಗೆ ವಹಿಸಿಕೊಡುವದೆಂತ ಆಲೋಚನೆ ಮಾಡಿ ಕೆಲವು ಜನರಿಂದ ವಂತಿಗೆಪಟ್ಟಿ ತಯಾರಿಸಿರುತ್ತೇವೆ. ವಂತಿಗೆ ವಾಗ್ದಾನಮಾಡಿದವರ ಹೆಸರು ಈ ಕೆಳಗೆ ವಿವರಿಸಿದಂತೆ ಆಗಿರುತ್ತದೆ.

ವಾಗ್ದಾನಮಾಡಿದವರ ಹೆಸರು ಮತ್ತು ಮೊಬಲಗು—ಎಡಮೊಗೆ [illegible] ಶೆಟ್ಟಿ ರೂ [illegible]೫೦ ವಂಡಸೆ ಪಟೇಲ [illegible] ಶೆಟ್ಟಿ ರೂ ೨೫ ವಂಡಸೆ ರಾಮಣ್ಣ ಉಪಾಧ್ಯರು ರೂ ೧೫ ವಂಡಸೆ [illegible] ರೂ ೨೫ ವಂಡಸೆ ಅನಂತಕೃಷ್ಣ [illegible] ರೂ ೨೫, [illegible] ಚಿಕ್ಕಯ್ಯ ಶೆಟ್ಟಿ ರೂ ೧೫, ದೊಡ್ಡಮನೆ [illegible] ಶೆಟ್ಟಿ ರೂ ೧೫ [illegible] ಸುಬ್ಬಯ್ಯ ಶೆಟ್ಟಿ ರೂ ೧೦ ವಂಡಸೆ [illegible] ಶೆಟ್ಟಿ ರೂ ೫ ಪೋಲೀಸ್ [illegible] ನಾರಾಯಣ ರೂ ೨ [illegible] ಗಿರ್ಡ [illegible] ರೂ ೫ [illegible] ಮೋಸ್ತಿ ರೂ ೫ [illegible] ರೂ ೫ [illegible] ಪದ್ಮನಾಭ ಶಾನಭೋಗರ ರೂ ೧೦ [illegible] ಗೋವಿಂದ ಶೆಟ್ಟಿ ರೂ ೧೫ [illegible] ಚಿಕ್ಕಯ್ಯ ಶೆಟ್ಟಿ ರೂ ೧೦, [illegible] ಸುಬ್ಬಣ್ಣ ಶೆಟ್ಟಿ ರೂ ೫ [illegible] ಗೋವಿಂದ ಶೆಟ್ಟಿ ರೂ ೫ [illegible] ಶೆಟ್ಟಿ ರೂ ೧೦, [illegible] ಶೆಟ್ಟಿ ರೂ ೧೦ [illegible] ಶೆಟ್ಟಿ ರೂ ೧೫ ವಂಡಸೆ [illegible] ಶೆಟ್ಟಿ ರೂ ೧೫ [illegible] ವಂಕಪ್ಪ ಶೆಟ್ಟಿ ರೂ ೧೦ ಮೊತ್ತ ರೂ ೩೦೭—೦—೦ ಈ ಪ್ರಕಾರ ವಾಗ್ದಾನಮಾಡಿದ್ದಾರೆ. ಇನ್ನು ಹೆಚ್ಚಿಗೆ ಸಂಗತಿಯನ್ನು ಮುಂದಿನ ಪತ್ರಿಕೆಗೆ ವಿವರಿಸುತ್ತೇನೆ.

ಕಾಪು—ಅಕ್ಕಿಯ ಧಾರಣೆ ದಿನೇ ದಿನೇ ಏರುತ್ತಲೇ ಇದೆ. ಅಕ್ಕಿಯ ಗಾಡಿಗಳು ದಿನಾಲೂ [illegible] ದಿಕ್ಕಿಗೆ ಹೋಗುತ್ತಲಿವೆ. ಎಷ್ಟು ಜನರ [illegible] ಜೀವನ ಕಳೆವುದೆಂತೋ? ತಿಂಗಳಿಕೆಯು, ಎಷ್ಟು [illegible] ಪ್ರಿಯವಾಗಿರುವ ಈ ಕಾಲದಲ್ಲಿ ಬಡ ನೌಕರರಾದ [illegible] ಉಪಾಧ್ಯಾಯರ ಕಡೆಗೆ [illegible] ವಿಷಯ ಇನ್ನುವರೆಗೂ ಬೋರ್ಡಿನವರು ಆಲೋಚಿಸಲಾಗದೇ! [illegible] ಇನ್ನು [illegible] ತಿಳಿಯದು! ಪರಮಾತ್ಮನೇ ಬಲ್ಲ.

ಕಳೆದ [illegible] ಅಕ್ಕಿಯ [illegible] ಜನರ [illegible] ಕಳವು ಮಾಡಿರುತ್ತಾರಷ್ಟೆ. [illegible] ಕಳವು ಮಾಡಿದವರನ್ನೆಲ್ಲಾ ಸೇಶನ್ ಕೋರ್ಟಿನಲ್ಲಿ [illegible] ಆದರೆ ಇನ್ನಂಜೆ ಮತ್ತು [illegible] ಕಳವು ಮಾಡಿದವರಿಗೆಲ್ಲಾ [illegible] ಮೆಜಿಸ್ಟ್ರೇಟರು ೩—೩ ತಿಂಗಳಂತೆ ಶಿಕ್ಷೆ ಮ [illegible] ವಿಧಿಸಿರುವರು. ಈ ವರ್ಷವೂ ಅದೇ [illegible] ಆಗದಂತೆ ಜನರು ಎಚ್ಚರಿಕೆಯಿಂದಿರಬೇಕು.

ಎರ್ಮಾಳ [illegible] ಬಾಬುಶೆಟ್ಟಿ ಮತ್ತು [illegible] ಶೆಟ್ಟಿ ಇವರೊಳಗೆ ನಡೆದ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ [illegible] ಕಳ್ಳರೆಂದು ಸಾಬೀತಾದವರು [illegible] ಮಹಾಲಿಂಗ ಸೆಟ್ಟಿ [illegible] ೨೦೦ [illegible] ವಿಧಿಸಿರುವರು.

ಎರ್ಮಾಳ ಶ್ರೀ ಜನಾರ್ದನ ದೇವಸ್ಥಾನದ ವಾರ್ಷಿಕಾವಧಿ ನಡೆಯುವ ರಥೋತ್ಸವ ಮತ್ತು [illegible] ಈಗಿನ ಆಡಳಿತ [illegible] ಬಲು ವಿಜೃಂಭಣೆಯಿಂದ ನಡೆದ [illegible] ಉಡುಪಿಯಿಂದ ಶ್ರೀ ಅದಮಾರು ಮತ್ತು ಶ್ರೀ ಸೋದೆ ಮಠದ ಸ್ವಾಮಿಗಳವರು [illegible] ಸಮ್ಮುಖದಲ್ಲಿ [illegible] ಈಗ ಆಡಳಿತ [illegible] ಸಂಕಪ್ಪ ಶೆಟ್ಟರು ಬಲು [illegible] ಎಂದು [illegible] ಈ ವರ್ಷ [illegible] ಉತ್ಸವದ ಸಮಯ ಜನರು ಮನಸ್ಸು ಕೊಡದಂತೆ ಪೋಲೀಸಿನವರು ಎಚ್ಚರಿಕೆಯಿಂದಿರುವುದು ಉತ್ತಮ.

ಮೂಳೂರು—[illegible] ಜಿಲ್ಲಾ ಕೊಪ್ಪದಲ್ಲಿ ವ್ಯಾಪಾರ ಮಾಡುತ್ತಿದ್ದ [illegible] ತನ್ನ ಅಂಗಡಿಯಲ್ಲಿ ಕೆಲಸಕ್ಕೆ ಇದ್ದವನೊಬ್ಬ ಪ್ಲೇಗ್ ರೋಗದಿಂದ ಮೃತಪಟ್ಟದ್ದರಿಂದ ಅಲ್ಲಿಂದ [illegible] ಮನೆಯಾಳುಗಳಿಗೆ ಬರುವಾಗ ಅರ್ಧ ದಾರಿಯಲ್ಲಿ ಈ ರೋಗವು ಶುರುವಾಯಿತು. [illegible] ಊರಿಗೆ ತಂದರು. ಇಲ್ಲಿ ಇವನು ಕಳೆದ [illegible] ಶುಕ್ರವಾರ ಮೃತಪಟ್ಟನು.

ಶಾಂತಪಕ್ಷದವರ ಪರಿಷತ್ತು.

ಕಲ್ಕತ್ತದಲ್ಲಿ ಕ್ರಿಸ್‌ಮಸ್ ರಜೆಯಲ್ಲಿ ಹಿಂದುಸ್ಥಾನದ ಶಾಂತಪಕ್ಷದವರ ಪರಿಷತ್ತಿನ ಸಮ್ಮೇಳನವು ಜರಗಿತು. ಇದಕ್ಕೆ ಅಧ್ಯಕ್ಷರಾಗಿದ್ದ ಸರ್ ಪಿ. ಎಸ. ಶಿವಸ್ವಾಮಿ ಅಯ್ಯರವರ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೇವೆ. ಹಿಂದಿನ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಭಾಷಣವನ್ನು ಇವರ [illegible] ರಾಷ್ಟ್ರೀಯ ಸಭೆಯ ಉದ್ದೇಶಗಳಿಗೆ ಈ ಶಾಂತಪಕ್ಷದವರ ಪರಿಷತ್ತಿನ ಉದ್ದೇಶಕ್ಕೂ ಎಷ್ಟರಮಟ್ಟಿನ ಭೇದವಿದೆ ಎಂಬುದು ವಾಚಕರಿಗೆ ಗೊತ್ತಾಗುವುದು. ಈ ವಿಷಯವನ್ನು ಸರ್ ಶಿವಸ್ವಾಮಿ ಅಯ್ಯರು ಎತ್ತಿಕೊಂಡಿದ್ದನ್ನು ಓದಿದಾಗ ಈ ಭೇದವು ಇನ್ನಷ್ಟು ಮನದಟ್ಟಾಗುವುದು.

(ಮುಂದೆ ನೋಡಿರಿ [illegible])

ಅನುಕ್ರಮಣಿಕೆ

ಲೇಖ—
೧. ಅಮೃತಸರದ ರಾಷ್ಟ್ರೀಯ ಸಭೆ [illegible]

ಪ್ರಬಂಧಗಳು:—
೨. ಮುಂಬಯಿಯಲ್ಲಿ [illegible]
೩. [illegible]
೪. [illegible]
೫. [illegible]
೬. [illegible]

ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ
ಸ್ವದೇಶ ವರ್ತಮಾನ
[illegible] ... ,,
[illegible] ... ೫-೮
ಸಾಂಪತ್ತಿಕ ವಿಚಾರ ... ,,
"[illegible]" ಎಂಬ [illegible] ... ,,
[illegible] ... ೮-೯
[illegible] ... ,,
[illegible] ಮಹಾಸಭೆ ... ,,

ಸ್ವದೇಶಾಭಿಮಾನಿ.

ಶಕ ೧೮೪೧ ಪುಷ್ಯ ಬ॥ ೪ ಶುಕ್ರವಾರ.

ಅಮೃತಸರದ ರಾಷ್ಟ್ರೀಯ ಸಭೆ.

ಡಿಶಂಬರ ತಾ. ೨೭ರಲ್ಲಿ ಪ್ರಾರಂಭವಾಗಿ ಜನವರಿ ತಾ. ೧ರಲ್ಲಿ ಅಂತ್ಯವಾದ ರಾಷ್ಟ್ರೀಯ ಸಭೆಯ ಈ ವರ್ಷದ ಅಧಿವೇಶನದ ವೃತ್ತಾಂತದಿಂದ ಈಗ ಸಾಮಾನ್ಯವಾಗಿ ಎಲ್ಲರ ಕಿವಿಗಳು ತುಂಬಿ ಹೋಗಿವೆ. ಶ್ರದ್ಧಾನಂದ ಸ್ವಾಮಿಜಿಗಳ ಸ್ವಾಗತಪರ ಭಾಷಣ, ಪಂಡಿತ ಮೋತಿಲಾಲ ನೆಹರುಗಳ ಅಧ್ಯಕ್ಷಸ್ಥಾನದ ವ್ಯಾಸಪೀಠದಿಂದ ಹೊರಟ ರಾಷ್ಟ್ರೀಯ ಪ್ರಶ್ನೆಗಳ ಮೀಮಾಂಸೆ ಮತ್ತು ಗಾಂಧಿ, ಟಿಳಕ, ಮಾಲವೀಯ, ಬಾನರ್ಜಿ, ಜೀನಾ, ಕಸ್ತೂರಿ ರಂಗ ಅಯ್ಯಂಗಾರ, ಹಸನ ಇಮಾಮ ಇತ್ಯಾದಿ ವಕ್ತೃಗಳು ರಾಜಕಾರಣದ ವಿವಿಧ ಠರಾವುಗಳ ವಿಷಯವಾಗಿ ಪ್ರದರ್ಶಿಸಿದ ದಿಟ್ಟತನದ ವಿಚಾರಗಳು ದೇಶಭಕ್ತರ ಸಹೃದಯವಾದ ಅಂತರಂಗಗಳನ್ನು ತಮ್ಮ ಕಡೆಗೆ ಎಳೆಯ ಹತ್ತಿವೆ. ಅದರಲ್ಲಿ ಆಶ್ಚರ್ಯವೇನು? ಈ ಎಲ್ಲ ಸಂಗತಿಗಳಿಂದ ರಾಷ್ಟ್ರೀಯ ಸಭೆಯ ಕಳೆದ ಅಧಿವೇಶನವು ಸಂಪೂರ್ಣವಾಗಿ ಯಶಸ್ವಿ ಮಾತ್ರವಲ್ಲ, ಮರೆಮಾಚದೆ ಹೇಳುವುದಾದರೆ, ಅಪೂರ್ವವಾಗಿದೆ ಎಂಬುದನ್ನು ನಾವು ಕಳೆದ ಶುಕ್ರವಾರವೆ ವಾಚಕ ವರ್ಗಕ್ಕೆ ತಿಳಿಸಿದ್ದೇವೆ.

ಈ ವರ್ಷದ ಅಧಿವೇಶನದ ಸರಿಯಾದ ಮೀಮಾಂಸೆಯನ್ನು ಮಾಡಬೇಕಾದರೆ ಎರಡು ಮೂರು ಸಂಗತಿಗಳನ್ನು ಆಲೋಚಿಸಬೇಕು. ಸರ್ ಮಾಯ್ಕೆಲ್ ಓಡ್ವಾಯರ್ ಮತ್ತು ಅವರ ಹಸ್ತಕ ಜನರಲ್ ಡಾಯರ್ ಇವರ ಅವಿವೇಕದ, ನಿಃಸಹಾನುಭೂತಿಯ ಮತ್ತು ನಿರಂಕುಶತೆಯ ಭಯಂಕರ ಕೃತ್ಯಗಳಿಂದಲೂ, ಅಂಥ ಕೃತ್ಯಗಳ ಬಗ್ಗೆ ಹಿಂದುಸ್ಥಾನದ ಅಧಿಕಾರಿಗಳಾದ ಲೋರ್ಡ ಚೆಮ್ಸಫರ್ಡರು ಹೆಚ್ಚಿನ ವಿಷಾದವನ್ನು ವ್ಯಕ್ತಗೊಳಿಸಲಿಲ್ಲವಾದ್ದರಿಂದಲೂ ಎಲ್ಲ ದೇಶಭಕ್ತರ ಅಂತಃಕರಣಗಳು ಕ್ಷುಬ್ಧವಾಗಿದ್ದವು; ಲಷ್ಕರಕಾನೂನಿನ ಘೋರ ಅನರ್ಥಕ್ಕೆ ಗುರಿಯಾಗಿ ಅನಾಥ ಸ್ಥಿತಿಗೆ ಬಂದ ಪಂಜಾಬಿಗಳ ವಿಷಯದಲ್ಲಿ ಮಿಕ್ಕ ದೇಶಬಾಂಧವರ ಹೃದಯಗಳು ಆರ್ದ್ರಾಶ್ರುಗಳಿಂದ ತುಂಬಿಹೋಗಿದ್ದವು; ಇದೊಂದು ಸಂಗತಿ. ರಾಜಕೀಯ ಸುಧಾರಣೆಗಳ ವಿಷಯವಾಗಿ ರಾಷ್ಟ್ರೀಯ ಸಭೆಯ ಧೋರಣವನ್ನು ಹೇಳುವುದಾದರೆ ಕಳೆದ ಎರಡು ವರ್ಷಗಳ ಅದರ ಠರಾವು, ಅದರ ಡೆಪ್ಯುಟೇಶನು ವಿಲಾಯತಿಯ ಸಂಯುಕ್ತ ಕಮಿಟಿಯ ಮುಂದೆ ಇಟ್ಟ ಸಂಗತಿ ಹಾಗು ಕೇಳಿಕೆ ಇವುಗಳನ್ನು ಪಾರ್ಲಿಮೆಂಟಿನಲ್ಲಿ ಈಗ ಪಾಸಾದ ಹಿಂದೀ ಸುಧಾರಣಾ ಕಾನೂನಿನಲ್ಲಿ ಹೆಚ್ಚಿನ ಮಟ್ಟಿಗೆ ಅಂಗೀಕರಿಸಲಿಲ್ಲವಾದ ಕಾರಣ ರಾಷ್ಟ್ರೀಯ ಸಭೆಗೆ ಈ ಸುಧಾರಣೆಗಳಿಂದ ಅಷ್ಟೊಂದು ಪ್ರೋತ್ಸಾಹವುಂಟಾಗುವ ಸಂಭವವಿದ್ದಿಲ್ಲ. ಅಂತು ಸಂಕ್ಷೇಪದಿಂದ ಹೀಗೆ ಹೇಳಬಹುದು. ಕೇಳಿದಷ್ಟು ಸುಧಾರಣೆಗಳು ಕೈಗೆ ಸಿಕ್ಕಿಲ್ಲ; ಮೇಲಾಗಿ ಪಂಜಾಬಿನ ಅನರ್ಥಕ್ಕೆ ದಿಕ್ಕಿಲ್ಲ. ಒಂದು ಕಡೆಯಲ್ಲಿ ಇಂಥ ನೋಟವು ನಡೆಕೊಂಡಿರುವಾಗ ಇನ್ನೊಂದು ಕಡೆಯಲ್ಲಿ ಬಾದಶಹರ ಸದಯಾಂತಃಕರಣದಿಂದ ಹೊರಟ ಉದಾರ ವಚನಗಳಿಂದ ಪರಿಪೂರಿತವಾದ ಜಾಹೀರನಾಮೆಯು—ಹಿಂದೀದೇಶದ ರಾಜಕೀಯ ಸನದು—ಅವತರಿಸಿತು; ಪಂಜಾಬದ ಮುಖಂಡರು ಬಂಧಮುಕ್ತರಾಗಿ ಬಂದರು; ಮೂರು ನಾಲ್ಕು ವರ್ಷಗಳಿಂದ ಬಂದಿಯಲ್ಲಿ ಬಿದ್ದ ಅಲ್ಲಿ ಬಂಧುಗಳು ಬಿಡುಗಡೆ ಹೊಂದಿದರು; ಮಾತ್ರ [illegible] ಯಲ್ಲಿ [illegible] ಹಿಂದೀ [illegible] ಹಾಗು [illegible] ಸಮಯದ [illegible] ಮತ್ತು [illegible] ಸ್ಥಾನ [illegible] ನಿಂದ [illegible] ಹಿಂದೀ ರಾಷ್ಟ್ರಕ್ಕೆ ಅನುಕೂಲವಾದ [illegible] ವಾತಿನಿಂದ, ಹಿಂದೀದೇಶದ ಸುದೈವವು ತೆರೆಯಿತು. ಸಾರಾಂಶ, ಒಂದು ಕಡೆಯಲ್ಲಿ ಉದ್ವೇಗದ ನೋಟ, ಮತ್ತೊಂದು ಕಡೆಯಲ್ಲಿ ಉದಾರ ಮತ್ತು ಸಹಾನುಭೂತಿಯ ದೇಖಾವೆ. ಇಂಥ ಸಮ್ಮಿಶ್ರ ಮನೋವಿಕಾರಗಳ — ಮನೋವಿಕಾರಗಳೆಂದು ಹೇಳುವುದಕ್ಕಿಂತ ಸಮ್ಮಿಶ್ರವಾತಾವರಣದ—ಪರಿಸ್ಥಿತಿಯಲ್ಲಿ ಅಮೃತಸರದ ಅಧಿವೇಶನವು ಜರಗಿತು. ಈ ಪೂರ್ವರಂಗವನ್ನು ವಾಚಕರು ಮನಸ್ಸಿನಲ್ಲಿಟ್ಟು ರಾಷ್ಟ್ರೀಯ ಸಭೆಯ ಇತಿವೃತ್ತವನ್ನು ಓದಹತ್ತಿದರೆ ಅದರ ಸೀನುಗಳು ಎಷ್ಟು ಸಮರ್ಪಕವಾಗಿ ಪ್ರತಿಬಿಂಬಿತವಾಗಿವೆ ಎಂಬುದು ಅವರಿಗೆ ಸಹಜವಾಗಿಯೆ ತಿಳಿದುಬಂದೀತು. ಮತ್ತು ನಾವಾದರೂ ಇದೇ ದೃಷ್ಟಿಯಿಂದ ಕಳೆದ ಅಧಿವೇಶನದ ಮೀಮಾಂಸೆಯನ್ನು ಸಂಕ್ಷೇಪದಿಂದ ಕೆಳಗೆ ಕೊಡುತ್ತೇವೆ.

ಅಧ್ಯಕ್ಷರಾದ ಪಂಡಿತ ಮೋತಿಲಾಲ ನೆಹರು ಇವರ ಭಾಷಣದಲ್ಲಿ ನಾವು ಕಳೆದ ಸಾರಿ ಸೂಚಿಸಿದ್ದಂತೆ, ಪಂಜಾಬ ಪ್ರಕರಣವು ಮುಖ್ಯವಾಗಿ ಮತ್ತು ರಾಜಕೀಯ ಸುಧಾರಣೆಯ ಅಪೂರ್ಣತೆ ಇತ್ಯಾದಿ ವಿಷಯಗಳು ಸಾಮಾನ್ಯವಾಗಿ ಮೇಲೆ ತೋರಿಸಿದಂತೆ ಉದ್ವೇಗದ ವಾತಾವರಣದಿಂದ ಹುಟ್ಟಿದವುಗಳು. ಓಡ್ವಾಯರ್ ಮತ್ತು ಡಾಯರ್ ಈ ಉಭಯತರ ನಿರಂಕುಶಾಧಿಕಾರದ ವಿಲಾಸಗಳನ್ನು ಅಧ್ಯಕ್ಷರು ಅತಿ ಸ್ಪಷ್ಟ ಶಬ್ದಗಳಿಂದ ಈ ಮಹಾಸಭೆಯ ಮುಂದೆ ಉಲ್ಲೇಖಿಸಿದರು; ಮಾತ್ರವಲ್ಲ, ಪರಮ ಪೂಜ್ಯರಾದ ಬಾದಶಹರೂ, ನ್ಯಾಯ- ನೀತಿ ಪ್ರಿಯವಾದ ಬ್ರಿಟಿಷ್ ಜನಾಂಗವು ಯಾರನ್ನು ಸಂಪೂರ್ಣವಾಗಿ ಭರವಸೆಯಿಂದ ತಮ್ಮ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಟ್ಟರೂ ಆ ಗವರ್ನರ ಜನರಲ್ಲರಾದ ವೈಸರಾಯ ಲೋರ್ಡ ಚೆಮ್ಸಫರ್ಡ ದೊರೆಗಳು ತಮ್ಮ ಮಹತ್ತಾದ ಸ್ಥಾನಕ್ಕೂ, ತಮ್ಮ ಮೇಲೆ ಇಟ್ಟ ನಂಬಿಕೆಗೂ ಸರಿಯಾಗಿಯೆ ನಡೆದುಕೊಂಡಿದ್ದಾರೊ, ನಾಳೆ ಈ ಪ್ರಭುಗಳು ಬ್ರಿಟಿಷ್ ಜನಾಂಗಕ್ಕೆ ಸರಿಯಾದ ಸಮಾಧಾನವನ್ನು ಕೊಟ್ಟಾರಲ್ಲವೆ ಎಂದು ಕೂಡ ಪಂಡಿತನೆಹರುಗಳು ನಿಃಪಾಯದಿಂದ ಕೇಳಿದ್ದಾರೆ. ಅಧ್ಯಕ್ಷರ ಭಾಷಣದ ಈ ಭಾಗವು ಕ್ಷುಬ್ಧವಾದ ಹಿಂದೀ ವಾತಾವರಣದ ನಿದರ್ಶಕವಾಗಿರುವಂತೆ ಲೋರ್ಡ ಚೆಮ್ಸಫರ್ಡರನ್ನು ವೈಸರಾಯ ಸ್ಥಾನದಿಂದ ಹಿಂದಕ್ಕೆ ಕರೆಯಬೇಕೆಂದು ಪಾಸಾದ ಠರಾವು ಕೂಡ ಅದರದೇ ಸೂಚಕವಾಗಿದೆ. ಮಿ. ಸೈಯದ ಹಸನರವರು ಲೋರ್ಡ ಚೆಮ್ಸಫರ್ಡರ ಆಳಿಕೆಯ ಸಮಾಲೋಚನೆಯನ್ನು ಮಾಡಿ ಅವರನ್ನು ಹಿಂದಕ್ಕೆ ಕರೆಯಿಸಬೇಕೆಂದು ಠರಾವನ್ನು ತಂದರು. ಸದರಿ ಠರಾವನ್ನು ಮದ್ರಾಸಿನ 'ಹಿಂದು' ಪತ್ರದ ಸಂಪಾದಕರಾದ ಮಿ. ಕಸ್ತೂರಿ ರಂಗಅಯ್ಯಂಗಾರರವರು ಅನುಮೋದಿಸುವಾಗಲೂ ಮಿ। ಎಸ್. ಆರ್. ಬೊಮ್ಮನಜಿ, ಡೊ. ಕಿಚ್ಲು ಮಿ. ಜತೀಂದ್ರನಾಥ ಬಾನರ್ಜಿ, ಮಿ. ಮಹಮ್ಮದ, ಶ್ರೀಯುತ ಬಿಪಿನ ಚಂದ್ರಪಾಲ, ಮಿ ಸತ್ಯಮೂರ್ತಿ, ಮಿ. ಭಗತರಾಮ, ಮಿ. ಪಿ. ಚಕ್ರವರ್ತಿ ಮುಂತಾದ ಮುಖಂಡರು ಪುಷ್ಟೀಕರಿಸುವಾಗಲೂ ಲೋರ್ಡ ಚೆಮ್ಸಫರ್ಡರು, ಪ್ರಥಮದಲ್ಲಿ ಪ್ರೆಸ್ ಡೆಪ್ಯುಟೇಶನಿಗೆ ಕೊಟ್ಟ ಕಠೋರವಾದ ಉತ್ತರ, ಡಿಫೆನ್ಸ್ ಒಫ್ ಇಂಡಿಯಾ ಎಕ್ಟಿನ ದುರುಪಯೋಗ, ಲಷ್ಕರ ಕಾನೂನಿನ ಜಾರಿ, ಪಂಜಾಬಿನ ಅನರ್ಥ, ಸರ್. ಶಂಕರನ್ ನಾಯರರವರ ರಾಜಿನಾಮೆ, ಸುಧಾರಣೆಗಳ ವಿಷಯದಲ್ಲಿ ಹಿಂದೂಸ್ಥಾನ ಸರಕಾರದ ಪರವಾಗಿ ಪಾರ್ಲಿಮೆಂಟಿನ ಕಮಿಟಿಗೆ ಕಳುಹಿಸಿಕೊಟ್ಟ ಅಭಿಪ್ರಾಯಪತ್ರಿಕೆ ಇತ್ಯಾದಿ ಸಮಸ್ತ ಸಂಗತಿಗಳನ್ನು ವಕ್ತೃಗಳು ಉದ್ಘಾಟಿಸಿದರು. ಪರಂತು ನಾಮದಾರ ವಿ. ಎಸ್. ಶರ್ಮಾ ಇವರು ಸದರಿ ಠರಾವನ್ನು ಎದುರಿಸಿದರು. ಈ ನಾಮದಾರರು ಕೂಡ ರೋಲಿಟ್ ಎಕ್ಟು ಪಾಸಾದಾಗ ತಾವು ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟವರು! ಆದರೂ ದೊರೆಗಳ ಆಳಿಕೆಯ ಎರಡನೆಯ ಪಕ್ಷವನ್ನು ಸಭಿಕರ ಮುಂದಿಡಲು ಯತ್ನಿಸಿ ಕೆಲವು ಸಂಗತಿಗಳನ್ನು ಹೇಳಿದರು. ಪರಂತು ಅವರ ನಂತರ ಸಭೆಯ ಮುಂದೆ ಬಂದವರು ಶರ್ಮರ ಹೇತ್ವಾಭಾಸ ಪೂರ್ಣವಾದ ಸಂಗತಿಗಳನ್ನೆಲ್ಲ ಖಂಡಿಸಿದರು. ಇರಲಿ. ಸಾರಾಂಶವೇನೆಂದರೆ ಮೇಲಿನ ಠರಾವಾಗಲಿ, ಮತ್ತು ಜಲಿಯನ್ ವಾಲಾ ಬಾಗಿನ ಹೃದಯ ದ್ರಾವಕವಾದ ಕಥೆಯಾಗಲಿ, ಹಾಗು ಮೇಲೆ ಹೇಳಿದಂತೆ ಅಧ್ಯಕ್ಷರ ಭಾಷಣವಾಗಲಿ ಇವೆಲ್ಲ ಅಸಮಾಧಾನದ ದ್ಯೋತಕಗಳೆಂಬುದಕ್ಕೆ ಸಂದೇಹವಿಲ್ಲ. ಜಲಿಯನ್‌ವಾಲಾ ಬಾಗು ಡಾಯರರ ಪ್ರತಾಪದಿಂದ ರಕ್ತಕುಂಡವಾಗಿ ಹೋಗಿರುವುದರಿಂದ ಪಂಡಿತ ಮಾಲವೀಯರು ಸದರಿ ಬಾಗಿನಲ್ಲಿ ಒಂದು ಸ್ಮಾರಕವನ್ನು ಕಟ್ಟಿಸಬೇಕೆಂದು ಸೂಚಿಸಿದರು. ಈ ಠರಾವು ಕೂಡಾ ಪಾಸಾಯಿತು. ಈ ಸಂದರ್ಭದಲ್ಲಿ ಮಾಲವೀಯರು 'ಜಲಿಯಾನ ವಾಲಾ ಬಾಗು' ಒಂದು ಪುಣ್ಯ ಕ್ಷೇತ್ರವೆಂದು ತಿಳಿಯಬೇಕು; ಇಲ್ಲಿ ಮಡಿದವರು ದೇಶಕ್ಕಾಗಿ ಮಡಿದಿದ್ದಾರೆ. ಆದ್ದರಿಂದ ಚಿರಸ್ಮರಣೀಯವಾದ ರಾಷ್ಟ್ರೀಯ ಸ್ಮಾರಕವನ್ನು ಇಲ್ಲಿ ನಿರ್ಮಿಸುವ ಅಗತ್ಯವಿದ್ದ ಕಾರಣ ಎಲ್ಲ ದೇಶವತ್ಸಲರು ಉದಾರ ಹಸ್ತದಿಂದ ಸಹಾಯಮಾಡಬೇಕೆಂದು ವಿಜ್ಞಾಪಿಸಿಕೊಂಡರು ಮಿ. ಬೊಮ್ಮನಜಿಯವರು ೫೦ ಸಾವಿರ ರೂಪಾಯಿಗಳನ್ನು ವಾಗ್ದಾನ ಮಾಡಿದರು. ಅಂತೆಯೆ ಇತರರು ಕೂಡ ಸಹಾಯ ಮಾಡಲು ಒಪ್ಪಿಕೊಂಡಿದ್ದಾರೆ.

[illegible] ವಿಲಾಯತಿಯ [illegible] ದಲ್ಲಿ ಗ್ರಥಿತವಾದ ಇನ್ನೊಂದು [illegible] ಬಾದಶಹರ ಜಾಹೀರನಾಮೆಯು ಕೊಂಗ್ರೆಸ್ ಅಧಿವೇಶನದ ಪ್ರಾರಂಭ ಕಾಲದಲ್ಲಿ ಹೊರಟ ಕಾರಣ, ಹಾಗು ರಾಜಕೀಯ ಕೈದಿಗಳ ವಿಮೋಚನವಾಗ ಹತ್ತಿದ್ದರಿಂದ ಮುಖಂಡರ ವಿಚಾರ ಮಾರ್ಗದೊಳಗಿನ ಉಗ್ರತೆಯು ಕಡಿಮೆಯಾಗಹತ್ತಿತು. ಅಲ್ಲದೆ ಬಾದಶಹರು ತಮ್ಮ ಸನದಿನಲ್ಲಿ ರಾಜಕೀಯ ಸುಧಾರಣೆಗಳನ್ನು ಯಶಸ್ವಿಗಳನ್ನಾಗಿ ಮಾಡಲು ಜನತೆಯು ಅಧಿಕಾರಿಗಳೊಡನೆಯೂ ಅಧಿಕಾರಿಗಳು ಜನತೆಯೊಡನೆಯೂ ಪರಸ್ಪರ ಸಹಕಾರ್ಯವನ್ನು ನಡಿಸಬೇಕು ಎಂದು ಇತ್ತಂಡದವರಿಗೂ ಸರಿಯಾಗಿ ಸಮದೃಷ್ಟಿಯಿಂದ ಬೋಧಿಸಿರುವುದರಿಂದ ಅಧಿಕಾರಿಗಳು ಇನ್ನು ಮುಂದೆ ತಮ್ಮ ಪೂರ್ವ ಸಂಪ್ರದಾಯದ ಅಹಂಭಾವವನ್ನು ಬದಿಗಿಟ್ಟು ಜನತೆಯ ಸಹಕಾರಿತೆಯನ್ನು ಅಪೇಕ್ಷಿಸಲು ಕಲಿಯಬೇಕೆಂಬ ಭರವಸೆಯು ಬಾದಶಹರ ಜಾಹೀರನಾಮೆಯಿಂದ ತೋರಹತ್ತಿತು. ಈ ಎರಡು ಅನುಕೂಲ ಕಾರಣಗಳ ಜೊತೆಗೆ ಇನ್ನೊಂದು ಮುಖ್ಯವಾದ ಸಂಗತಿಯನ್ನು ಹೇಳಬೇಕಾಗಿದೆ. ಹೊಸ ಸುಧಾರಣೆಗಳ ರಚನೆಯು ಸ್ವಾಭಾವಿಕವಾಗಿಯೆ ಅಧಿಕಾರಿ ವರ್ಗದ ಎಂದರೆ ನೋಕರ ಶಾಹಿಯ ದರ್ಪವನ್ನು ಕೆಳಗೆ ತಗ್ಗಿಸಿದೆ. ಆದರಲ್ಲಿ ಮೇಲಿನಂತೆ ಪುನಃ ಬಾದಶಹರ ಉಪದೇಶ. ಎಂದ ಮೇಲೆ ನೋಕರಶಾಹಿಯ ದಿವಸಗಳು ಇನ್ನು ಮುಂದೆ ನಿಲ್ಲಲಿಕ್ಕಿಲ್ಲವೆಂಬ ಭಾವನೆಯು, ಈ ಎಲ್ಲ ಕಾರಣಗಳಿಂದ ರಾಷ್ಟ್ರೀಯ ಸಭೆಯ ಮಂಟಪವನ್ನು ಪ್ರವೇಶಿಸುವಾಗಲೆ ದೇಶಭಕ್ತರ ಹೃದಯವನ್ನು ಆವರಿಸಿಕೊಂಡರೆ ಅದರಲ್ಲಿ ಯಾವ ಅಸ್ವಾಭಾವಿಕತೆಯೂ ಇಲ್ಲ. ನಮ್ಮ ಈ ವಿಧಾನಕ್ಕೆ ನಿದರ್ಶನವನ್ನು ತೋರಿಸಿಕೊಡಬೇಕಾದರೆ, ಎಂದರೆ ಹೊಸದಾಗಿ ಉದ್ಭವಿಸಿದ ಉದಾರ ಧೋರಣದಿಂದ ಜನತೆಯಲ್ಲಿ—ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಲ್ಲಿ ಸಮಾಧಾನ ಉಂಟಾಗ ಹತ್ತಿತೆಂಬುದಕ್ಕೆ ಉತ್ತಮವಾದ ಪ್ರತೀತಿಯನ್ನು ತೋರಿಸಿಕೊಡಬೇಕಾದರೆ, ಬಾದಶಹರ ಬಳಿಗೆ ಕೃತಜ್ಞತೆಯನ್ನು ಸಮರ್ಪಿಸುವ ಠರಾವನ್ನು ತೋರಿಸಿಕೊಡಬಹುದು ಇಷ್ಟೆಯಲ್ಲ, ಹೊಸ ಸುಧಾರಣೆಗಳು ಅಷ್ಟೊಂದು ಆಶಾಜನಕವಲ್ಲ, ಎಂದು ವಿಧಿಸುವ ಠರಾವಿನಲ್ಲಿ, ಚರ್ಚೆಯ ಅನಂತರ, ಯೋಗ್ಯ ಶಬ್ದಯೋಜನೆಗಳನ್ನು ಮಾಡಿ ಹಾಗು ಮೊಂಟೆಗ್ಯು ದೊರೆಗಳ ಆಭಾರ ಪ್ರದರ್ಶನವನ್ನು ಸಹ ಅದರಲ್ಲಿ ಉಲ್ಲೇಖಿಸಿ ಈ ರೀತಿಯಿಂದ ಆವಾಪೋದ್ವಾಪಗಳಿಂದ ಸರ್ವಾಂಗ ಸುಂದರವಾದ ಠರಾವು ಯಾವುದು ಪಾಸಾಯಿತೊ ಅದು ಸಹ ಜನರ ಶಾಂತವೃತ್ತಿಯ ಸಾಕ್ಷಿಯನ್ನು ಕೊಡುತ್ತದೆ.

ರಾಷ್ಟ್ರೀಯ ಸಭೆಯ ಅಧಿವೇಶನದ ಮನೋಲಕ್ಷಣೆಯನ್ನು ಪೃಥಕ್ಕರಿಸಿ ನೋಡಲಪೇಕ್ಷಿಸುವವರು ಮೇಲೆ ವಿವರಿಸಿದ ನಾಲ್ಕೈದು ಠರಾವುಗಳಿಂದ ಸಮಾಧಾನಪಡುವರೆಂದು ನಂಬಿದ್ದೇವೆ. ಈಗ ನಾಗರಿಕ ಹಕ್ಕುಗಳ ಸಂರಕ್ಷಣ, ಖಲೀಫತ ಪ್ರಶ್ನೆ ಇತ್ಯಾದಿ ಇತರ ಅನೇಕ ಠರಾವುಗಳು ಪಾಸಾಗಿವೆಯಾದರೂ ಅವು ವಿಶೇಷ ಮತಭೇದಾಸ್ಪದವಾದ ಸಂಗತಿಗಳಲ್ಲ. ವಿಲಾಯತಿಯಲ್ಲಿ ಹಿಂದೀ ಸ್ವರಾಜ್ಯದ ಪ್ರಶ್ನೆಯು ಅಲ್ಲಿಯ ಜನತೆಯ ಮುಂದೆ ಯಾವಾಗಲೂ ಪ್ರಾಮುಖ್ಯದಿಂದ ಇರುವಂತೆಯೆ ಅಲ್ಲಿ ಸನದಶೀರ ಚಳವಳವು ನಡೆಕೊಂಡಿದ್ದು ಆ ಮೂಲಕ ನಮ್ಮ ಇಷ್ಟಧ್ಯೇಯವನ್ನು ಹೊಂದುವಂತೆಯೂ ಯಾವ ಯಾವ ಪ್ರಯತ್ನಗಳನ್ನು ನಡಿಸಬೇಕೆಂಬುವನ್ನು ನಿರ್ಣಯಿಸಿ ಆ ಮೇರೆಗೆ ಮುಂದರಿಸಲು ಒಂದು ಕಮಿಟಿಯು ಕೂಡ ಮೊನ್ನೆಯ ಅಧಿವೇಶನದಲ್ಲಿ ನೇಮಿಸಲ್ಪಟ್ಟಿತು. ಈ ರೀತಿಯಿಂದ ಅಮೃತಸರದ ರಾಷ್ಟ್ರೀಯ ಸಭೆಯ ಕಾರ್ಯಗಳು ಉತ್ಸಾಹದಿಂದಲೂ, ಆಸ್ಥಾಪೂರ್ವಕವಾಗಿಯೂ ನಡೆದವು. ಬರುವ ವರ್ಷದ ಅಧಿವೇಶನಕ್ಕೆ ನಾಗಪೂರದವರ ಆಮಂತ್ರಣವನ್ನು ಸ್ವೀಕರಿಸಿದ ಬಳಿಕ ಸಭಾಧ್ಯಕ್ಷರಾದ ಪಂಡಿತ ಮೋತಿಲಾಲ ನೆಹರುಗಳು ಸಭಾಕಾರ್ಯಗಳ ಸಮಾರೋಪವನ್ನು ಮಾಡುವಾಗ ಪ್ರತಿನಿಧಿಗಳಿಗೂ, ದೇಶ ಬಂಧುಗಳಿಗೂ, ಹೇಳಿದ ಕೆಲವು ಮಾತುಗಳು ಬಹು ಮನನೀಯವಾಗಿವೆ. "ರಾಜಕಾರಣದ ಕರ್ತವ್ಯಗಳು ಸುಲಭವಾದವುಗಳಲ್ಲ; ಅವುಗಳನ್ನು ನೆರವೇರಿಸಲು ಅವಿಶ್ರಾಂತ ಶ್ರಮವು ಅವಶ್ಯಕವು. ಈ ಕರ್ತವ್ಯಮಾರ್ಗವನ್ನು ಅವಲಂಬಿಸಿದವರಿಗೆ ಅಧಿಕಾರಿಗಳ ಸಹಾಯವು ಇರುವುದಿಲ್ಲ. ಕೆಲಕೆಲವು ಸಂದರ್ಭಗಳಲ್ಲಿ ಅನೇಕ ವಿಘ್ನಗಳು ಬಂದು ಹೋಗುತ್ತವೆ. ಆದರೆ ಅದರಿಂದ ಯಾರೂ ನಿರಾಶೆ ಪಡಬಾರದು. ಇನ್ನೂ ಯತ್ನಿಸಬೇಕು. ಸ್ವೀಕೃತ ಕಾರ್ಯದಲ್ಲಿ ಬರುವ ಅಪಜಯವು ಒಂದು ತರದಿಂದ ಉದ್ದಿಷ್ಟ ಧ್ಯೇಯವನ್ನು ಸಮೀಪಿಸುವುದೆ ಸರಿ. ಆದ್ದರಿಂದ ಯಾರೂ ನಿರಾಶೆಯಿಂದ ಕಂಗೆಟ್ಟು ಹೋಗಬಾರದು ರಾಷ್ಟ್ರೀಯ ಸಭೆಯು ೩೩ ವರ್ಷಗಳಿಂದ ಅವಿರತಯತ್ನವನ್ನು ನಡಿಸಿದ್ದರಿಂದ ಈಗ ಎಲ್ಲೊ ಕೆಲವು ಘನವಾದ ಸುಧಾರಣೆಗಳು ದೊರಕಹತ್ತಿವೆ. ಇದೇ ಇನ್ನು ಮುಂದಿನ ಚಳವಳಕ್ಕೆ ಒಂದು ಉತ್ತಮವಾದ ಜಾಹೀರಾತು. ಆದ್ದರಿಂದ ಎಲ್ಲ ಪ್ರತಿನಿಧಿಗಳು ಈ ಸಂದೇಶವನ್ನು ಊರೂರುಗಳಲ್ಲಿ ಮತ್ತು ಹಳ್ಳಿಹಳ್ಳಿಗಳಲ್ಲಿ ಸಾರಬೇಕು. ಇದು ಪಂಡಿತನೆಹರುಗಳ ಹೃದ್ಗತವು."

ಇರಲಿ; ರಾಷ್ಟ್ರೀಯ ಸಭೆಯ ಪ್ರಸ್ತಾಪವು ಬಹಳ ಬೆಳೆಯಿತು. ಪಂಚಾಂಗವನ್ನು ದಿನಾಲು ಮನೆಮನೆಯವರು ಓದಬೇಕೆಂದಿದ್ದರೂ ಓದುವುದು ಕಡಿಮೆ. ಆದ್ದರಿಂದ ವರ್ಷಪ್ರತಿಪದೆಯ ಒಂದು ದಿನವಾದರೂ ಇಡೀ ವರ್ಷಫಲವನ್ನು ಹೇಳುವ, ಹಾಗು ಕೇಳುವ ವಾಡಿಕೆ ಇದೆ. ಇದೇ ನ್ಯಾಯದಿಂದ ರಾಷ್ಟ್ರೀಯ ಸಭೆಯ ಮುಖ್ಯ ಮುಖ್ಯವಾದ ಸಮಗ್ರ ಸಂಗತಿಗಳನ್ನು ಇಷ್ಟು ವಿಸ್ತಾರದಿಂದ ನಮಗೆ ಇಲ್ಲಿ ಕೊಡಬೇಕಾಗಿ ಬಂತು. ಇನ್ನು ಈ ವಿಷಯವನ್ನು ಬೆಳಸಿ ವಾಚಕರ ಸಹಿಷ್ಣುತೆಯ ಪ್ರಯೋಜನವನ್ನು ಪಡೆಕೊಳ್ಳುವುದು ಚಂದವಲ್ಲ. ಆದ್ದರಿಂದ ಇಲ್ಲಿ ವಿರಮಿಸುವೆವು.

ಸ್ಫುಟ ವಿಚಾರಗಳು

೧ ಮುಂಬಯಿಯಲ್ಲಿ ಜೆ ಎನ್ ಮಿಲ್ಸ್ ವರ್ಕ್‌ಶೋಪಿನ ಹಾಗು ಗಿರಣಿಯ ಕಾಮಗಾರರು (ಕೂಲಿಗಳು) ಮುಷ್ಕರ ಹಾಕಿದ್ದಾರೆಂಬ ವಾರ್ತೆಯು ಬಂದಿದೆ ಮುಷ್ಕರಹಾಕಿದ ಕಾಮಗಾರರ ಸಂಖ್ಯೆಯು ೫೦ ಸಾವಿರಕ್ಕೆ ಕಡಿಮೆ ಇಲ್ಲ ಕಳೆದ ವರ್ಷವು ಇದೇ ನಮೂನೆಯ ಭಯಂಕರವಾದ ಮುಷ್ಕರವು ಬಿದ್ದಿತ್ತು ಆಗ ಈ ಮುಷ್ಕರಾಳುಗಳ ಕಷ್ಟನಷ್ಟಗಳನ್ನು ಸಹಾನುಭೂತಿಯ ದೃಷ್ಟಿಯಿಂದ ಪರಿಹರಿಸಬಹುದೆಂಬ ವಚನವು ಅವರಿಗೆ ಕೊಡಲ್ಪಟ್ಟ ಕಾರಣ ಈ ಆಶ್ವಾಸನವನ್ನು ನಂಬಿ ಅವರು ಪುನಃ ತಂತಮ್ಮ ಕೆಲಸಗಳನ್ನು ಕೈಕೊಂಡಿದ್ದರು ಇಂಥ ಪರಿಸ್ಥಿತಿಯಲ್ಲಿ ಇಷ್ಟು ಬೇಗನೆ ಇದರ ಪುನರಾವರ್ತನೆ ಆದೀತೆಂದು ಯಾರೂ ನೆನಸಿರಲಿಲ್ಲ ಆದರೆ ಬಂಡವಾಳಿಗರಿಗೂ, ಕಾಮಗಾರರಿಗೂ ಯುರೋಪಿನ ದೇಶಗಳಲ್ಲಿ ಹಾಗು ಅಮೇರಿಕಾದಲ್ಲಿ ಹೇಗೆ ಮೇಲಿಂದ ಮೇಲೆ ತಾಗಿ ಬರತಿದೆಯೊ ಹಾಗೆಯೆ ನಮ್ಮ ದೇಶದಲ್ಲೂ ಈ ಉಪಕ್ರಮವು ಪ್ರಾರಂಭವಾಗ ಹತ್ತಿದೆ ಎಂದು ಬಂಡವಾಳಿಗರ ಮತ್ತು ಕಾಮಗಾರರ ಸಂಬಂಧದ ಇತ್ತಲಾಗಿನ ಇತಿಹಾಸವನ್ನು ನೋಡಿ ಹೇಳಬೇಕಾಗುತ್ತದೆ ಇಂಥ ಮುಷ್ಕರಗಳು ಆಗುವುದರಿಂದ ಒಂದು ವರ್ಗಕ್ಕೆ ತತ್ಕಾಲ ಕೂಂಚ ಕಷ್ಟ ಒದಗುವುದಾದರೂ ಅವರವರ ಹಿತಸಂಬಂಧವನ್ನು ಕಾಪಾಡಿಕೊಳ್ಳುವುದು ನೈಸರ್ಗಿಕ ಹಕ್ಕಿನದಾದ್ದರಿಂದ ಕೊನೆಗ ಇದರ ಪ್ರಯೋಜನವು ಲೋಕಹಿತದಲ್ಲಿಯೆ ಪರಿಣಮಿಸುತ್ತದೆ ಮುಂಬಾಯಿಯ ಕಾಮಗಾರ ಹಿತವರ್ಧಿನೀ ಸಭೆಯು ಈ ಸಂಗತಿಗಳನ್ನೆಲ್ಲ ಆಲೋಚಿಸಿ ಮುಷ್ಕರಾಳುಗಳ ಕೇಳಿಕೆಗಳನ್ನು ಯೋಗ್ಯರೀತಿಯಿಂದ ಬಂಡವಾಳಿಗರ ಮುಂದಿಡಲು ಯತ್ನಿಸುತ್ತಿದೆ ಅದನ್ನು ಬಂಡವಾಳಿಗರು ಆಲೋಚನೆಯಲ್ಲಿ ತೆಕೊಂಡು ಈ ಎಡವರ್ಗದ ಕಷ್ಟಗಳನ್ನು ನಿವೃತ್ತಪಡಿಸುವರೆಂದು ನಂಬುತ್ತೇವೆ

೨ ಫಿಜಿ ದ್ವೀಪದಲ್ಲಿ ಹಿಂದೀ ಕೂಲಿಗಳಿಗೆ ಗೆಯ್ಮೆ ಕರಾರಿನ ಶರ್ತಗಳಿಗೆ ಒಳಗಾಗಿ ವಾಚಾಮಗೋಚರವಾದ ಕಷ್ಟಗಳನ್ನು ಅನುಭವಿಸಬೇಕಾಗಿತ್ತು ಮತ್ತು ಈ ಕಾರಣದಿಂದ ಅವರ ಮಾನುಷತ್ವಕ್ಕೆ ಹರಿದ್ರಾಲೇಪನ (ಅರಶಿನ ಹಚುವುದು) ವಾದಂತಾಗಿತ್ತು ಪರಂತು ಈ ತಿಂಗಳ ಎರಡನೆ ತಾರೀಕಿನಿಂದ ಗೆಯ್ಮೆಕರಾರಿನ ಕೂಲಿಯಾಳುತನವನ್ನು ಸರಕಾರವು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದೆ ಎಂದು ತಿಳಿಸಲಿಕ್ಕೆ ಸಂತೋಷಪಡುತ್ತೇವೆ ಈ ದುಷ್ಟ ಪದ್ಧತಿಯ ನಿವರ್ತನಕ್ಕೆ ಫಿಜಿಯೊಳಗಿನ ಕಾರ್ಯಕಾರಿ ಕೌನ್ಸಿಲು ಹಾಗು ಪ್ಲಾಂಟರ್ಸ್ ಎಸೋಸಿಯೇಷನು ಇವು ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾವೆ ಇದರಲ್ಲಿ ಇನೂ ವಿಶೇಷ ಮತ್ತು ತುಂಬಾ ಸಂತೋಷದ ವಾರ್ತೆ ಇದೇ ರೀತಿಯಿಂದ ಇತರ ಕಡೆಗಳಲ್ಲೂ ಹಿಂದೀ ವಸಾಹತದ ಚಳೆಯು ಸರಿಯಾಗಿ ವಿಮರ್ಶಿಸಲ್ಪಟ್ಟರೆ ಇನ್ನು ಎಷ್ಟೋ ಉತ್ತಮ ಆಗಬಹುದು ತತ್ಕಾಲಕ್ಕೆ ಈ ವರ್ಷದ ಆರಂಭದಲ್ಲಿ ಫಿಜಿಯೊಳಗಿನ ಅಡಚಣೆ ನಿರ್ಮೂಲವಾಯಿತಲ್ಲ ಇದೇ ಒಹು ದೊಡ್ಡ ಮಾತು

೩ ಕಲಕತ್ತೆಯ ಸರ್ ರಾಸಬಿಹಾರಿ ಘೋಷರವರ ಹೆಸರನ್ನು ಕೇಳದವನು ಸುಶಿಕ್ಷಿತರಲ್ಲಿ ಒಹಶಃ ಇರಲಿಕ್ಕಿಲ್ಲ ಇವರು ಕೆಲವು ವರ್ಷಗಳ ಹಿಂದೆ ಕಲಕತ್ತಾ ಯುನಿವರ್ಸಿಟಿಗೆ ೧೦ ಲಕ್ಷ ರೂಪಾಯಿಗಳನ್ನು ಸೈನ್ಸ್ ಕೋಲೇಜನ್ನು ಸ್ಥಾಪಿಸುವ ಉದ್ದೇಶದಿಂದ ದಾನ ಮಾಡಿದ್ದರು ಈಗಲೆ ಇವರ ವಿದ್ಯಾಪ್ರಿಯತೆಯೂ, ಔದಾರ್ಯವೂ, ದೇಶವಾತ್ಸಲ್ಯವೂ ವ್ಯಕ್ತವಾಗಿ ಹೋಗಿವೆ ಇದೇ ಮಹನೀಯರು ಸದರಿ ಸೈನ್ಸ್ ಕೋಲೇಜಿಗೆ ೧೧ ಲಕ್ಷ ೪೩ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಇದನ್ನು ತಿಳಿಸಲು ನಾವು ತುಂಬಾ ಸಂತೋಷಪಡುಪಡತ್ತೇವೆ ಈ ನೂತನ ದಾನದ ಉದ್ದೇಶವು 'Technological Institution' ಎಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದಿರುವುದು ಬಂಗಾಲದಲ್ಲಿ ವಿದ್ಯಾವಂತರಿರುವಂತೆ ವಿದ್ಯೋತ್ತೇಜಕರೂ ಇದ್ದಾರೆ ಮಾತ್ರವಲ್ಲ ತಮ್ಮ ಸಂಪತ್ತು ತಾವು ಗಳಿಸಿದ್ದರೂ ದೇಶದೊಳಗಿನದೇ ಆದ್ದರಿಂದ ಅವರ ಕೆಲವಂಶವಾದರೂ ದೇಶಾಭಿವೃದ್ಧಿಯ ಕಾರ್ಯವಿನಿಯೋಗವಾಗಬೇಕೆಂಬ ಪುಣ್ಯಭಾವನೆಯು ಬಂಗಾಲದ ಸುಶಿಕ್ಷಿತ ಪ್ರಾಂತದಲ್ಲಿ ಎಷ್ಟೋ ಸಾರಿ ಕಂಡು ಬರುತ್ತದೆ ಇದು ಬಂಗಾಲಿಗಳಿಗೆ ಅಭಿಮಾನಾಸ್ಪದವಾದ ಮಾತು ಹಿಂದುಸ್ಥಾನದೊಳಗಿನ ಇತರ ಭಾಗಗಳಲ್ಲೂ—ವಿಶೇಷತಃ ಕರ್ನಾಟಕದಲ್ಲಿ ಈ ಸದ್ಗುಣದ ಅನುಕರಣವುಂಟಾಗಲೆಂದು ನಾವು ಪ್ರಾರ್ಥಿಸುವೆವು

೪ ಪಂಜಾಬಿನ ಸುಪ್ರಸಿದ್ಧ ದೇಶಭಕ್ತರಾದ ಲಾಲಾ ಲಜಪತರಾಯರು ಹಿಂದುಸ್ಥಾನಕ್ಕೆ ಬರಕೂಡದೆಂದು ಸರಕಾರದ ನಿರ್ಬಂಧವಿತ್ತು ಬಾದಶಹರ ಜಾಹೀರನಾಮೆಯಿಂದ ಅದು ಕಳಚಿಹೋಯಿತೆಂದು ಲಾಲಾಜಿಯವರು ಹಿಂದುಸ್ಥಾನಕ್ಕೆ ಬರಲು ಹೊರಟಿದ್ದಾರೆಂದು ಬಂದ ಬಾತಮಿಯಿಂದ ಸ್ಪಷ್ಟವಾಗುತ್ತದೆ ಲಾಲಾಜಿಯವರು ಅಮೇರಿಕಾದಲ್ಲಿರುವಾಗ ಅವರ ಮೇಲೆ ರಾಜದ್ರೋಹಿತ್ವದ ಆರೋಪವು ಮಾಡಲ್ಪಟ್ಟಿತು ಅವರು ಬರೆದ ಪುಸ್ತಕದಲ್ಲಿ ರಾಜದ್ರೋಹವು ತುಂಬಿದೆ, ಅದು ಹಿಂದುಸ್ಥಾನಕ್ಕೆ ಹೋಗಕೂಡದು, ಇತ್ಯಾದಿ ಅನೇಕ ವಿಷಯಗಳು ಲಾಲಾಜಿಗಳಿಗೆ ಎದುರಾಗಿ ಈಗ ಎಷ್ಟೋ ಸಮಯದಿಂದ ನಡೆಯುತ್ತಿದ್ದವು ಲಾಲಾಜಿಯವರು ಅಮೇರಿಕದಲ್ಲಿದ್ದುದಾಗಲೂ ಹಿಂದೀ ದೇಶದ ಅಮೂಲ್ಯವಾದ ಸೇವೆಯನ್ನು ಮಾಡಲು ತಪ್ಪಲಿಲ್ಲ ಅಲ್ಲಿ ಇಂಡಿಯನ್ ಹೋಮ್‌ರೂಲ್ ಲೀಗಿನ ಒಂದು ಶಾಖೆಯನ್ನು ಸ್ಥಾಪಿಸಿ, ಆ ಮೂಲಕ ಅಮೇರಿಕನರಿಗೆ ಹಿಂದುಸ್ಥಾನದ ಮಾಹಿತಿಯನ್ನು ಕೊಟ್ಟು ಅವರಲ್ಲಿ ಹಿಂದುಸ್ಥಾನದ ವಿಷಯವಾಗಿ ಸಹಾನುಭೂತಿಯನ್ನು ಹುಟ್ಟಿಸಿದ್ದಾರೆ ಈ ಮೇರೆಗೆ ಅನ್ಯ ದೇಶದಲ್ಲಿದ್ದರೂ ಸ್ವದೇಶ ಸೇವೆಯನ್ನು ಮಾಡುತ್ತಿದ್ದ ಲಾಲಾ ಲಜಪತರಾಯರು ಪುನಃ ತಮ್ಮ ಪ್ರಿಯ ಸ್ವದೇಶಭೂಮಿಗೆ ಬರುತ್ತಿದ್ದಾರೆ ಎಂಬುದನ್ನು ಕೇಳಿ ಯಾರಿಗೆ ತಾನೆ ಸಂತೋಷವಾಗಲಿಕ್ಕಿಲ್ಲ!

೫ ವಿದ್ಯಾ ಇಲಾಖೆಯ ಪುನರ್ಘಟನೆಯ ವಿಷಯದಲ್ಲಿ ಭಾರತಮಂತ್ರಿಗಳಾದ ಮಿ ಮೊಂಟೆಗ್ಯುಗಳ ಶಿಫಾರಸುಗಳು ಪ್ರಕಟವಾಗಿವೆ ಈ ಇಲಾಖೆಯಲ್ಲಿ ನೇಕಡಾ ೫೦ರಷ್ಟು ಅಧಿಕಾರಗಳು ಹಿಂದಿಗಳಿಗಿರಬೇಕೆಂದು ಭಾರತ ಮಂತ್ರಿಗಳ ಶಿಫಾರಸು ಇದೆ ಶಿಕ್ಷಣದಂಥ ಕೇವಲ ನಿರುಪದ್ರವಕರ ಖಾತೆಯಲ್ಲಿ ಸಹ ಇದಕ್ಕಿಂತ ಹಿಂದಿಗಳಿಗೆ ಹೆಚ್ಚಿನ ಪ್ರವೇಶವು ಸಿಗಬಾರದು, ಎಂದರೆ ಇದು ತುಂಬಾ ಶೋಚನೀಯವಾಗಿದೆ ಈ ವಿಷಯದಲ್ಲೂ ಹಾಗು ಇತರ ವಿಷಯದಲ್ಲೂ ಅನೇಕ ಸಂಗತಿಗಳನ್ನು ವಾಚಕರ ಮುಂದೆ ಇಡಬೇಕು ಆದರೆ ಅವುಗಳನ್ನು ಬರುವ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು ಒಟ್ಟಾರೆ ಒಂದು ಮಾತು ಹೇಳುವುದಾದರೆ ಭಾರತ ಮಂತ್ರಿಗಳು ಈ ವಿಷಯದಲ್ಲಿ ಹಿಂದೀ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ಔದಾರ್ಯವನ್ನು ತೋರಿಸಬೇಕಿತ್ತು ಹಿಂದಿಗಳ ಈ ನಿರೀಕ್ಷಣೆಯು ಸಫಲವಾಗಲಿಲ್ಲ

~~~

ಮಂಗಳೂರು

~~~

ನವವರ್ಷದ ಬಹುಮಾನಗಳು—ನಮ್ಮ ಜಿಲ್ಲೆಯ ಪೋಲೀಸ್ ಪ್ರೊಸಿಕ್ಯೂಟಿಂಗ್ ಇನ್ಸ್‌ಪೆಕ್ಟರಾಗಿರುವ ಮ ರಾ ಕಾನಾಡು ನಾರಾಯಣರಾಯರಿಗೂ ವಿಶಾಖ ಪಟ್ಟದಲ್ಲಿ ಅಸಿಸ್ಟಾಂಟ ಸರ್ಜನರಾದ ಮ ರಾ ತಾಳಿ ಶಿವರಾಯರಿಗೂ ರಾವಸಾಹೇಬ ಎಂಬ ಬಿರುದು ಸಿಕ್ಕಿದೆಂದು ಕೇಳಿ ನಾವು ಸಂತೋಷಪಡತ್ತೇವೆ

ಕಳೆದ ಆದಿತ್ಯವಾರ ರವರೆಂಡ್ ಫಾದರ್ [illegible] ಅಧ್ಯಕ್ಷತೆಯಲ್ಲಿ ಇಲ್ಲಿಯ ಕೆಥೋಲಿಕ್ ಯೂನಿಯನ್ ಕ್ಲಬ್ಬಿನಲ್ಲಿ ಕೆಥೋಲಿಕ್ ಸಭಿಕರ ಒಂದು ಸಭೆಯು ನೆರೆಯಿತು ಅಕ್ಕಿ ಮುಂತಾದ ಅತ್ಯಾವಶ್ಯಕ ಆಹಾರ ಜಿನಸುಗಳ ಬೆಲೆ [illegible] ತೊಂದರೆಗಳನ್ನು ಒಹು ಮಟ್ಟಿಗೆ ನಿವಾರಿಸುವ ಸಲುವಾಗಿ ಸ್ವಜಾತಿಯ ಒಂದ ಸಂಘವು ಸ್ಥಾಪನೆಯಾಯಿತ ಈ ಸಂಘವು ಪಾಲ [illegible] ರೂ ೨—೦—೦ ಮೇರೆಗಿನ [illegible] ರೂಪಾಯಿ ಬಂಡವಾಳವನ್ನು ಎತ್ತಬೆಕಾಗಿ ನಿರ್ಣಯವಾಯಿತು ಅಂದೇ ಸುಮಾರು ೩೦೦೦ ಪಾಲುಗಳ ಕೆಲವು ಗೃಹಸ್ಥರು [illegible] ವಂತೆ

ರಾವ್ ಬಹದೂರ್ ಸ ಬೀರ ರಘುನಾಥಯ್ಯನವರು ಮಂಗಳೂರ ತಾಲೂಕು ಬೋರ್ಡ ಮೆಂಬರಿಕೆಯ [illegible] ಮುಗಿದಿದ್ದು ಈ ಪದಕ್ಕೆ ಇವರ ಹೊರತು ಬೇರೆ ಯಾರೂ ಉಮೇದವಾರರಾಗಿ ನಿಲ್ಲದೆ ಇರುವುದರಿಂದ ಇವರೇ ಪುನಃ ಮಂಗಳೂರು ಇಲೆಕ್ಟರಲ್ ಸರ್ಕಲಿನಿಂದ ಈ ಬೋರ್ಡಿನ ಮೆಂಬರರಾದರು

ಮೈಸೂರು ಸರಕಾರವು ಹುರಳಿ ಮುಂತಾದ ಧಾನ್ಯಗಳು ತಮ್ಮ ಪ್ರಾಂತ್ಯದಿಂದ ಇತರ ಕಡೆಗೆ ರಫ್ತು ಮಾಡತಕ್ಕದ್ದಕ್ಕೆ ಇಟ್ಟ ಕಂಟ್ರೋಲನ್ನು ಇದೇ ಕಳೆದ ಡಿಶಂಬರ ತಿಂಗಳಿಂದ ತೆಗೆದು ಹಾಕಿರುತ್ತದೆ ಇದರಿಂದ ಹುರಳಿಯ ಬೆಲೆಯು ಸ್ವಲ್ಪ ಕಡಿಮೆಯಾಗುವ ಸಂಭವ ಕಾಣುತ್ತಿದೆ

ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನ ಈ ಜಿಲ್ಲೆಯ ಸಬ್ ಡಿವಿಜನಲ್ ಆಫೀಸರರಾದ ಮ| ರಾ| ರಾ ಅಡ್ಡೆ ಕುಲಸ್ವಾಮಿ ಪಿಳ್ಳೆಯವರಿಗೆ ಇಲ್ಲಿಂದ ಕನ್ನಾನೂರಿಗೆ ವರ್ಗವಾಗಿ ಅಲ್ಲಿಯ ಸಬ್ ಡಿವಿಜನಲ್ ಆಫಿಸರರಾದ ಮ| ರಾ ಪಿ ರಂಗಸ್ವಾಮಿ ಅಯ್ಯಂಗಾರರು ಇಲ್ಲಿಗೆ ಬಂದಿರುವರು

ಹಿಂದುಸ್ಥಾನಕ್ಕೆ ಬಂದಿದ್ದ ಪಾರ್ಲಿಮೆಂಟ ಸಭೆಯ ಮೆಂಬರ ರಾದ ಮಿ ಚಾರ್ಲ್ಸ ರೊಬರ್ಟ್ಸರೆಂಬವರು ಇಲ್ಲಿಗೆ ಚಿತ್ತೈಸಿ ಕಳೆದ ವಾರ ಉಡುಪಿ ಕಾರ್ಕಳ ಮುಂತಾದ ಜಿಲ್ಲೆಯ ಪಟ್ಟಣಗಳನ್ನು ಸಂದರ್ಶಿಸಿ ಕಳೆದ ಬುಧವಾರ ಹಿಂತೆರಳಿರುವರು ಇವರು ಮೊಂಟಗ್ಯೂ ಚೆಮ್ಸ್‌ಫೋರ್ಡ ಯೋಜನೆಯಂತೆ ನಿರ್ಮಿತವಾಗುವ ವೈಸರಾಯರ ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೊದಲನೇ ಪ್ರಸಿಡೆಂಟರಾಗಲಿಕ್ಕಿರುವರೆಂದು ವದಂತಿ ಇದೆ

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ, ಇಲ್ಲಿ ದೊರೆಯತಕ್ಕ ಪುಸ್ತಕಗಳ ಪಟ್ಟಿಯ ಸಪ್ಲಿಮೆಂಟು ಒಂದನ್ನು ಈ ಸಂಚಿಕೆಯೊಂದಿಗೆ ಇಟ್ಟಿರುತ್ತದೆ

ಕಳೆದ ಡಿಶಂಬರ ತಿಂಗಳಲ್ಲಿ ಪಟ್ಟಣದಲ್ಲಿ ೧೫೭ ಜನನಗಳೂ, ೯೭ ಮರಣಗಳೂ ಸಂಭವಿಸಿದವು ಕಳೆದ ವರ್ಷ ಇದೇ ತಿಂಗಳಲ್ಲಿ ೧೫೦ ಜನನಗಳೂ, ೩೦೮ ಮರಣಗಳೂ ಇದ್ದವು

ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರ ಸರ್ಕೀಟು ತಾ ೯ ಸುಳ್ಯ; ತಾ ೧೦-೧೧ ೧೨ ೧೩ ಸಂಪಾಜೆ; ತಾ ೧೪-೧೫-೧೬ ಕೋಡಿಕಾನ, ತಾ ೧೭-೧೮-೧೯ ಆರಂತೋಡು, ತಾ ೨೦-೨೧ ಸುಳ್ಯ

ಇಲ್ಲಿಯ ಜಪ್ಪಿನ ಸರಕಾರಿ ದೊಡ್ಡ ಬಳಿಯಲ್ಲಿರುವ ಮಿ ಸಿಂಸೋನ್ ಸುಚಿತ್ರರ ಮನೆಯಲ್ಲಿ ಕಳೆದ ತಾ ೫ನೇ ಸೋಮವಾರ ಬೆಳಿಗ್ಗೆ ಒಂದು ದನವು ಐದು ಕಾಲುಗಳುಳ್ಳ ಒಂದು ಹೆಣ್ಣು ಕರು ಹಾಕಿರುತ್ತದೆ – ಈ ಕರುವಿಗೆ ಹೆಚ್ಚಾಗಿ ಬಂದಿದ್ದ ಈ ೫ನೇ ಕಾಲು ಹೆಗಲಿನ ಎಡಪಾರ್ಶ್ವಕ್ಕೆ ಜೋತಾಡಿಕೊಂಡಿರುವುದು ಈ ಕರುವು ಇತರ ಕರುಗಳಂತೆಯೇ ಹಾಲನ್ನು ಕುಡಿಯುತ್ತ ಬಲು ಚುರುಕಾಗಿರುತ್ತದೆ

ಲಾಹೋರಿನ ಆರ್ಯಪ್ರಸಾರಿಕ ಸಭೆಯ ಉಪದೇಶಕರಾದ ಶ್ರೀಯುತ ಪಂಡಿತ ಋಷಿರಾಮಜಿಯವರು ಬರುವ ಆದಿತ್ಯವಾರದಿಂದ ಫೆಬ್ರವರಿ ತಾ ೧೫ ವರೇಗಿನ ನಾಲ್ಕು ಆದಿತ್ಯವಾರಗಳಲ್ಲಿ ಸನ್ಯಾಸಿ ಗುಡ್ಡೆಯಲ್ಲಿ ಒಂದೊಂದು ದಿನ ಕೆಳಗಿನ ಒಂದೊಂದು ವಿಷಯ ಮಲ್ಲಿಯಾಗಿ ಭಾಷಣಮಾಡುವರು "ಹಿಂದೂ ಮತದ ಈಗಿನ ಸ್ಥಿತಿ ಭಗವಂತನನ್ನು ಭಜಿಸುವುದೇಕೆ ಆತನನ್ನು ಭಜಿಸುವುದು ಹೇಗೆ ಸಂಧ್ಯಾವಂದನೆ ಮತ್ತು ಇತರ ನಿತ್ಯಕರ್ಮಗಳು" ಈ ಭಾಷಣಗಳಿಗೆ ಸಕಲರಿಗೂ ಸುಸ್ವಾಗತವಿದೆ

ಬೈಂದೂರು ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮ| ರಾ| ಕೆ [illegible] ರವರು ಪೋಲೀಸ್ ಸುಪರಿಂಟೆಂಡಂಟ ದೊರೆಗಳವರ ರೀಡರರಾಗಿ ನೇಮಿಸಲ್ಪಟ್ಟು ಉಡುಪಿಯ ಸಬ್ ಇನ್ಸ್‌ಪೆಕ್ಟರ ಮ| ರಾ ರಾ| ಆರೂರು ಸದಾಶಿವರಾಯರು ಬೈಂದೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ

ಪೆನ್‌ಶನ್ ಹೊಂದಿದ್ದ ರಿಟಾಯರ್ಡ್ ಡಿಪ್ಯುಟಿ ಕಲೆಕ್ಟರರಾದ ಮಿ ಜೆ ಎಲ್ ಸಲ್ಡಾನ್ಹರು ಇದೇ ಕಳೆದ ಆದಿತ್ಯವಾರ ಸುಮಾರು [illegible] ನೇ ವಯಸ್ಸಿನಲ್ಲಿ ಕಾಲವಶರಾದರು ಸ್ವರ್ಗಸ್ಥರು ಡಿಪ್ಯುಟಿ ಕಲೆಕ್ಟರ ಪದವಿಯ ವರೇಗೆ ಸರಕಾರಿ ಹುದ್ದೆಯನ್ನು ಯೋಗ್ಯ ರೀತಿಯಲ್ಲಿ ನಡೆಸಿ ಪೆನ್‌ಶನ್ ಹೊಂದಿದ ಮೇಲೆಯೂ ಲೋಕಸೇವಾ ತತ್ಪರರಾಗಿ [illegible] ಕೆಥೋಲಿಕ ಕೋಓಪರೇಟಿವ್ ಸೊಸೈಟಿಯ ಪ್ರೆಸಿಡೆಂಟರಾಗಿಯೂ [illegible] ಆಡಳಿತೆ ಸಭೆಯ ಮೆಂಬರರಾಗಿಯೂ ಜಿಲ್ಲಾ ಕಥೋಲಿಕ್ ಸಂಘದ ವೈಸ್ ಪ್ರೆಸಿಡೆಂಟರಾಗಿಯೂ ಮುನ್ಸಿಪಾಲಿಟಿಯ [illegible] ಸದಸ್ಯರಾಗಿಯೂ ಇದ್ದು ತಮ್ಮ ಸಮಾಜ ಸೇವೆಯನ್ನೂ ಲೋಕಸೇವೆಯನ್ನು ಮಾಡುತ್ತಿದ್ದು ಜನಪ್ರೀತಿಗೆ ಪಾತ್ರರಾಗಿದ್ದರು ಈ ವೃದ್ಧರ ಆಗಲಿಕೆಗಾಗಿ [illegible] ಕೆಥೋಲಿಕ ಬಾಂಧವರೊಡನೆ ನಾವು ಸಹ ಈ ಮೂಲಕ ವ್ಯಕ್ತಪಡಿಸುತ್ತೇವೆ ಶರೀರದ [illegible] ವನ್ನು ವರ್ಷದಲ್ಲಿ ನೋಡಬೇಕೆಂಬಂತೆ ಈ ವೃದ್ಧರು ತಮ್ಮ ವೃದ್ಧಾಪ್ಯದಲ್ಲಿ ಯಾವ [illegible] ಸಂಕಷ್ಟಕ್ಕೆ ಒಳಗಾಗದ ದೇವಾಲಯಕ್ಕೆ ಹೋಗಿ [illegible] ಹೊರಟವರು ಅಕಸ್ಮಾತ್ತಾಗಿ ಪ್ರಾಣವನ್ನು ಬಿಟ್ಟದ್ದು ಮನಸ್ಸಿಗೆ ಆಗಿದ [illegible] ವರ್ಷ [illegible] ವಾಗಿತ್ತು

ನಿನ್ನೆ ದಿನ ಕೂಡಿ ಕೆಥೋಲಿಕ ಕೋಓಪರೇಟಿವ್ ಸೊಸೈಟಿಯ ಮೀಟಿಂಗಿನಲ್ಲಿ [illegible] ಮಿ ಜೆ ಎಲ್ ಸಲ್ಡಾನ್ಹರ ಪ್ರೆಸಿಡೆಂಟ ಹುದ್ದೆಗೆ ಸದರಿ ಸೊಸೈಟಿಯ ಆಡಳಿತೆ ಮೆಂಬರರಾದ ವಕೀಲ ಮಿ [illegible] ಸೋಜರವರು ಚುನಾಯಿಸಲ್ಪಟ್ಟರು ಈ ಸೊಸೈಟಿಯ ವಾರ್ಷಿಕ ಮಹಾಸಭೆಯು ಬರುವ ಆದಿತ್ಯವಾರ ಪ್ರಾತಃ [illegible] ಕ್ಕೆ ಸದರಿ ಸಂಘದ ಆಫೀಸಿನಲ್ಲಿ ಕೂಡತಕ್ಕದಿದೆ

ಮಂಗಳೂರ ತಾಲೂಕಿನ ಗ್ರಾಮಗಳ [illegible] ಪಸಲಿಯ ಜಮಾಬಂದಿಯು ಇದೇ ತಿಂಗಳ ತಾ ೧೯ರಿಂದ ಫೆಬ್ರವರಿ ತಾರೀಕು ೨೧ರ ವರೇಗೆ ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರಿಂದ ಮಾಡೋಣಾಗುವದು—ಈ ಪೈಕಿ ಜನವರಿ ತಾ ೧೯ರಿಂದ ೧೮ರ ವರೇಗೆ ಬಂಟವಾಳದಲ್ಲಿ ಜನವರಿ ತಾ ೨೯ರಿಂದ ೩೧ರ ವರೇಗೆ ಮುಲ್ಕಿಯಲ್ಲಿ, ಫೆಬ್ರವರಿ ತಾ ೨ರಿಂದ ೪ರ ವರೇಗೆ ಬಜ್ಪೆಯಲ್ಲಿ, ಫೆಬ್ರವರಿ ತಾ ೭ರಿಂದ ೧೧ರ ವರೇಗೆ ಗುರುಪುರದಲ್ಲಿ ಮತ್ತು ಫೆಬ್ರವರಿ ೧೪ರಿಂದ ೨೧ರ ವರೇಗ ಮಂಗಳೂರಲ್ಲಿಯೂ ನಡೆಯುವುದು

ಬಾವಟಗುಡ್ಡೆಯ ಬಳಿಯಲ್ಲಿ ಮಹಿಳಾಸಭೆಯವರ ಬಗ್ಗಾಗಿ ಹೊಸತಾಗಿ ಕಟ್ಟಿಸೋಣಾಗುವ ಮಂದಿರದ ಕೆಲಸವು ಪೂರ್ಣವಾಗುತ್ತ ಬಂದಿರುತ್ತದೆ ಈ ಮಂದಿರದ ಪ್ರವೇಶೋತ್ಸವವು ಒಹುಶಃ ಬರುವ ವಾರ ನಡೆಯಲಿಕ್ಕಿದೆ

ಇಲ್ಲಿಯ ಕ್ರಿಶ್ಚನ್ ಮಹಿಳೆಯರು ಕಳೆದವಾರ ಸ್ವಜಾತಿಯ ಮಹಿಳೆಯರ ಮಂದಿರ ಒಂದನ್ನು ಕಟ್ಟಿಸುವ ಸಲುವಾಗಿ ನಾಟಕ ಒಂದನ್ನು ಅಭಿನಯಿಸಿದರಾಗಿಯೂ ಇದಕ್ಕೆ ಸುಮಾರು ಒಂದು ಸಾವಿರದಷ್ಟು ಹಣವು ಜಮೆಯಾಯಿತಾಗಿಯೂ ತಿಳಿದುಬರುತ್ತದೆ

~~~
~~~

[illegible]

[illegible] ಈ ವರೆಗೆ ಜನತೆಯು ಪಡೆದ ಅನುಭವವನ್ನು ಪ್ರಕಾರದಲ್ಲಿ [illegible] ವರ್ಷಗಳಲ್ಲಿ [illegible] ಹೊಂದುತ್ತಾ ಬಂದಿದೆ ಎಂಬುದನ್ನು ವ್ಯಕ್ತಗೊಳಿ[illegible] ಸಂಕಷ್ಟಕಾಲದಲ್ಲಿ [illegible] ಈ ವರೆಗೆ ಇದ್ದ ಸ್ಥಿತಿಯಲ್ಲಿ ಸುಧಾರಣೆಗೆ ತುಂಬಾ ಅವಕಾಶಕೊಟ್ಟಿದೆ ಎಂದು ವಿವರಿಸಿದರು. ಪಾರ್ಲಿಮೆಂಟಿನಲ್ಲಿ ಇದಕ್ಕೆ ಯಾವುದೇ ವಿರೋಧಗಳು ಬರಲಿಕ್ಕೆ ಇದ್ದವು ಅಥವಾ ಬಂದವು [illegible] ಹರಿಗೆಯಾಗಬೇಕಾದಾಗ ಎಲ್ಲಾ ಪಕ್ಷದವರಿಗೂ ಸಾಕಷ್ಟು ಸಮಾಧಾನಕರವಾಗುವ ರೀತಿಯಲ್ಲಿ ಈ ಬಿಲಿನ ಚರ್ಚೆಯನ್ನು ನಾಮ.ದಾರ ಮೊಂಟೆಗು ಸಾಹೇಬರು ಅದು ತುಸ್ತುಮುಗಿಯದೆ ಹೋದ ಮಹಾವಿಚಾರದ ಕುರಿತು ಬಾದಶಹರ ಮನ್ನಣೆಯ [illegible] ಎಂದು ಸರ್ ಶಿವಸ್ವಾಮಿ ಅಯ್ಯರು ವಿವರಿಸಿದರು.

ಈಗ ಮಂಜೂರಾದ ಆಕ್ಟಿನ ಜಾರಿಯ ಕಾಲದಲ್ಲಿ ಜನತೆ ಮತ್ತು ಸರಕಾರ [illegible] ಯಾವ ಬಗೆಯ ವಿಶ್ವಾಸವೂ ಅನನ್ಯಭಾವವೂ ಆಗತ್ಯವಿದೆ ಎಂಬುದನ್ನು [illegible] ಸರ್ ಶಿವಸ್ವಾಮಿ ಅಯ್ಯರು ಶಾಂತ ಮತ್ತು ಉಗ್ರಪಕ್ಷದವರೊಳಗೆ ಉಂಟಾದ ಭಿನ್ನಾಭಿಪ್ರಾಯಗಳನ್ನು ಈ ರೀತಿಯಾಗಿ ಉಲ್ಲೇಖಿಸಿದರು—

"ಶಾಂತಪಕ್ಷವು ಈಗಿನ ಆಕ್ಟು ಜವಾಬದಾರಿ ಸಂಕಾರದ ದಾರಿಗೆ ಮುಂದ [illegible] ಹೋಗುತ್ತಿದೆ ಎಂದು ತಿಳಿಯುವಾಗ, ಉಗ್ರಪಕ್ಷದವರು ಆ ಆಕ್ಟು [illegible] ಅಸಮಾಧಾನಕರವಾಗಿ ಗಣಿಸುತ್ತಾರೆ. ಮುಂದಿನ ಸುಧಾರಣೆಗಳು ನಮಗೆ ಸಿಗಬೇಕಾದರೆ ಈಗಿನ ನೂತನ ಕ್ರಮಗಳನ್ನು ಜಾರಿಗೆ ತರಲಿಕ್ಕೆ ಸರಕಾರವು ಹರಸಿಕೊಂಡು ಮತ್ತು ಸಂಪೂರ್ಣ ಸಹಾನುಭೂತಿಯನ್ನು ತೋರಿಸಿದರೆ ಮಾತ್ರವೆ ಮುಂದಿನ ದಾರಿ ಸುಗಮವಾದೀತು ಎಂದು ಶಾಂತಪಕ್ಷದವರು ತಿಳಿಯುವುದಾದರೆ ಉಗ್ರಪಕ್ಷದವರು ಹಾಗೆ ಸಹಾಯಮಾಡುವ ಬದಲಾಗಿ ತಮ್ಮ ಅಸಮಾಧಾನವನ್ನು ತೋರ್ಪಡಿಸುವ [illegible]ವನ್ನು ಎಷ್ಟಾದರೂ ಕಾರ್ಯಸಾಧಿಸಬೇಕೆಂದಿರುವರು. ಇದು ಕಾರ್ಯಭಾಗದ ಕಡೆಗೆ ಹೋಗಬೇಕಾದ ಜನತೆಯ ಮನಸ್ಸನ್ನು ಬರೆ ಒಣವಾತಗಳ ಕಡೆಗೆ ಆಕರ್ಷಿಸುವುದಲ್ಲದೆ ವ್ಯವಸ್ಥೆಮಾಡುವ ಕಡೆಗೆ ಸಾಗಿಸದು. ದ್ವಿಮುಖಿ ಸರಕಾರದ ಕ್ರಮವು ಸುಗಮವಾಗಬೇಕೆಂದಿದ್ದರೆ ಜನತೆಯ ಉದ್ಧರಣೆಗಾಗಿ ಸರಕಾರವು ಕೈಕೊಳ್ಳುವ ಕ್ರಿಯೆಯಿಂದು ವಿಚಾರಿಸಿಯೂ ನಾವು ಕೈಕೊಡಲೇ ಬೇಕು. ಎಂದಿಗೆ ಅವು ಜನತೆಗೆ ವಿರೋಧಕರವಾಗಿ ಪರಿಣಮಿಸುತ್ತವೊ ಆಗ ನಾವು ಅವನ್ನು ನಿರ್ದಾಕ್ಷಿಣ್ಯದಿಂದ ಖಂಡಿಸಿ ನುಡಿಯಬೇಕು. ಹೀಗಿನ್ನುವಾಗ ಕಾರಣವಿಲ್ಲದ ಸರಕಾರದ ಯಂತ್ರ ಚಾಲನೆಗೆ ಅಡ್ಡತೀಲನ್ನು ಹಾಕುವುದು ಪ್ರಶಸ್ತವಲ್ಲ. 'ಟ್ರಾನ್ಸಫರ್ಡ' ಮತ್ತು 'ರಿಜರ್ವ' ಖಾತೆಗಳೊಳಗೆ ಪರಸ್ಪರ ಅನುಬಂಧವಿಲ್ಲವೆಂದು ನಾವು ತಿಳಿಯುವುದಿಲ್ಲ. ಎರಡೂ ಸರಿಯಾಗಿ ನಡೆಯಬೇಕೆಂಬದೇ ನಮ್ಮ ಕೋರಿಕೆಯಾಗಬೇಕು."

"ಹೊಸ ಕ್ರಮವು ಜಾರಿಗೆ ಬರುವಾಗ ಕಂಡುಬರುವ ಕುಂದುಕಗಳನ್ನು ಹೋಗಲಾಡಿಸಲು ನಾವು ಪ್ರಯತ್ನ ಪಡೆಬೇಕಲ್ಲದೆ ಅವನ್ನೆ ಆಸ್ತ್ರವಾಗಿಟ್ಟು ಈಗಿನ ಸುಧಾರಣೆ ಆಕ್ಟನ್ನು ಮೂಲೆಗೊತ್ತಬಾರದವಂದು ಸರಿಯಲ್ಲ. ಈ ರೀತಿಯ ದುರಾಗ್ರಹದಿಂದ ಚಳವಳ ಎಬ್ಬಿಸಿ ಮುಂದೆ ಇಲ್ಲಿಯ ಅನವಸ್ಥೆಯನ್ನು ಅಳಿಗಿಸಲಿಕ್ಕೆ ಪಾರ್ಲಿಮೆಂಟಿನವರು ತಮ್ಮ ಶಸ್ತ್ರದಿಂದಾರು ಮತ್ತು ನಮಗೆ ಜವಾಬ್ದಾರ ಸರಕಾರದ ಸಂಪೂರ್ಣ ಹಂತವನ್ನು ಕೊಡುವರೆಂದ ನಂಬಿದರೆ ಬುದ್ಧಿ ತಪ್ಪು. ಶಾಂತಪಕ್ಷದ ಧ್ಯೇಯವು ರಾಷ್ಟ್ರೀಯ ಪಕ್ಷದವರ ಧ್ಯೇಯದಂತೆ ಮಹತ್ವದಾಗಿದ್ದರೂ ಕಾಲೋಚಿತವಾಗಿ ಎಷ್ಟು ಸುಲಭವಿದೆ ಎಂಬ ವಿಚಾರವು ಎದುರಿಗಿಟ್ಟು ಶಾಂತಪಕ್ಷದವರು ಮುಂದೆ ಸಾಗಿದಷ್ಟಕ್ಕೆ ಹಿಂದೆ ಜಾಂಬೋಳದ ಹಾಗೆ ಹಡೆಮುಗಳನ್ನು ಕೊಟ್ಟು ರಥವನ್ನು ನೂಕುತ್ತಿದ್ದಾರೆ. ಈ ಸಂದರ್ಭದಲ್ಲಿ ಈಗ ಆದ ಎರಡು ತಂಡಗಳ ಪರಿಣಾಮವು ಮುಂದ ಹೇಗಾದೀತ ಎಂದ ಈಗ ನಿರ್ಧರಿಸಲು ಸಾಧ್ಯವಿಲ್ಲ. ಆದರೂ ಈ ಎರಡು ತಂಡಗಳು ಈಗೀಗಲೇ ಕೈಗೆ ಕೈಜೋಡಿಸಿ ಒಕ್ಕಟ್ಟಿಗೆ ಬರುವವು ಎಂದು ಹೇಳಲು ಸಾಧ್ಯವಿಲ್ಲ. ಒಂದು ವೇಳೆ ಇಂಥ ತಂಡಗಳ ಪರಸ್ಪರ ವ್ಯಕ್ತಿದ್ವೇಷದಿಂದ ಉಂಟಾಗಿಲ್ಲವೆಂತಾದರೆ ಅಂಥ ಭಿನ್ನಾಭಿಪ್ರಾಯಗಳನ್ನು ಅನುಸರಿಸುವ ತಂಡಗಳಿದ್ದರೂ ರಾಜಕಾರ್ಯಕ್ಕೆ ಬಾಧಕವಾಗಲಾರದು. ರಾಜಕಾರಣದ ರಥವು ಸಿಕ್ಕಾಬಟ್ಟೆ ಓಡದ ಹಾಗೆ ಅದಕ್ಕೆ ಅಡ್ಡಮರವನ್ನು ಅಲ್ಲಲ್ಲಿ ಒತವವರು ಬೇಕುಬೇಕು. ಇಲ್ಲವಾದರೆ ವೇಗವನ್ನು ತಡೆಯಲಾರದ ಸ್ವಲ್ಪ ಓರೆಕೋರೆಯಾದೊಡನೆ ರಥವು ಚರಂಡಿಯಲ್ಲಿ ಸಿಕ್ಕಿಬಿದ್ದೀತ. ಈ ವರೆಗೆ ಜನತೆಗೆ ಯಾವ ಬಗೆಯ ಸ್ವಾತಂತ್ರ್ಯವೂ ಇರಲಿಲ್ಲ. ನೌಕರಶಾಹಿಯವರಿಂದ ಅಧಿಕಾರವನ್ನು ಕೊಂಡುಕೊಂಡಂತೆ ಬಿಡಿಸಿಕೊಳ್ಳುವದಕ್ಕೆನೆ ಎಲ್ಲರೂ ಒಗ್ಗಟ್ಟಾಗಿ ಬೇಕಾಗಿತ್ತು. ಈಗ ಸಿಕ್ಕಿದನ್ನು ಯಾವ ವೇಗದಲ್ಲಿ ಕೈಕೊಳ್ಳಬೇಕು ಎಂಬುದನ್ನು ನಿಶ್ಚಯಿಸುವುದಕ್ಕೆ ಭಿನ್ನಾಭಿಪ್ರಾಯವಿರುವ ಎರಡು ತಂಡಗಳಿದ್ದರೂ ಬಾಧಕವಿಲ್ಲ, ಇನ್ನಷ್ಟು ಪ್ರಯೋಜನವೆ ಆಗುವುದು. ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಈಗ ಇರುವ ತಂಡಗಳಲ್ಲಿ ಯಾವ ದಾವರೊಂದು ಒಂದೇ ತಂಡದ ಬೆನ್ನುಹಿಡಿದು ನಿಲ್ಲುವುದು ನಮಗೆ ಎಂದೆಂದಿಗೂ ಸಂಯೋಗಲಾರದು. ಅಲ್ಲಿಯ ಎಲ್ಲಾ ತಂಡಗಳೊಡನೆ ನಾವು ಸ್ನೇಹವನ್ನು ಬೆಳೆಸಬೇಕು."

(ಮುಂದರಿಸಲಾಗುವುದು)

ಸಾಂಪತ್ತಿಕ ವಿಚಾರ.

ತೈಲ್ಯವಿರುವ ಪದಾರ್ಥಗಳು.

ನಮ್ಮ ಜಿಲ್ಲೆಯಲ್ಲಿ ಹತ್ತಿಯ ವ್ಯವಸಾಯವು ವಿಶೇಷವಾಗಿಲ್ಲವಾದರೂ ಕಾಸರಗೋಡು ತಾಲೂಕಿನ ದಕ್ಷಿಣ ಭಾಗದಾದ ನೀಲೇಶ್ವರ ಡಿವಿಜನ್ನಿನ ಕುಮರಿಗಳಲ್ಲಿ ಹತ್ತಿ ಪೈದಾಸ್ತು ಮಾಡುತ್ತಾರೆ. ಹತ್ತಿಯನ್ನು ಬಟ್ಟೆ ಮೊದಲಾದುವುಗಳ ಗೋಸ್ಕರ ನೂತ ಮೇಲೆ ಉಳಿದ ಹತ್ತಿಕಾಳನ್ನು ದನಕರುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ. ಆದರೆ ಈ ಹತ್ತಿಕಾಳಿನಲ್ಲಿ ಒಳ್ಳೆ ತೈಲ್ಯವು ಇದೆ ಎಂಬುದನ್ನು ಹಲವರು ತಿಳಿಯರು. ಮುಂಬಾಯಿ ಸಂಸ್ಥಾನದ ಅನೇಕ ಕಡೆಗಳಲ್ಲಿ ಈ ಹತ್ತಿಕಾಳಿನ ಎಣ್ಣೆಯನ್ನು ಆಹಾರವಾಗಿ ಪ್ರಯೋಗಿಸುತ್ತಾರೆ.

ಹತ್ತಿಕಾಳಿನಲ್ಲಿ ಅದರ ತೂಕದ ನೇಕಡಾ ೧೮ರಷ್ಟು ಅಂಶವು ತೈಲ ಪದಾರ್ಥ. ಇಷ್ಟು ಹೆಚ್ಚಿನ ತೈಲ್ಯವಿರುವ ಕಾಳನ್ನು ಜಾನುವಾರುಗಳಿಗೆ ಆಹಾರವಾಗಿ ಕೊಡುವುದು ಆಗತ್ಯವಿಲ್ಲ. ಅವುಗಳಿಗೆ ಅಷ್ಟು ಅಂಶದ ತೈಲವು ಅಜೀರ್ಣವನ್ನು ತಂದೊದಗಿಸುತ್ತದೆ ಎಂದು ತಜ್ಞರ ಅಭಿಪ್ರಾಯ. ಆ ಎಣ್ಣೆಯ ಅಂಶವನ್ನು ಹಿಂಡಿತೆಗೆದು ಉಳಿಯುವ ಹಿಂಡಿಯಲ್ಲಿ ಹಿಂದುಳಿದ ತೈಲ್ಯ ಪದಾರ್ಥವು ಜಾನುವಾರುಗಳಿಗೆ ಸಾಕಷ್ಟಾಗಿದೆ.

[illegible]

[illegible] ಹಾಗೆ ಉಪಯೋಗಿಸುವುದಕ್ಕೋಸ್ಕರ ಈ ಎಣ್ಣೆಯನ್ನು ಚೆನ್ನಾಗಿ ಶೋಧಿಸಿ ಶುದ್ಧಮಾಡಬೇಕು. ಈ ಎಣ್ಣೆಯನ್ನು ಕೆಲವು ಬಗೆಯ ಮುಲಾಮುಗಳನ್ನು ತಯಾರಿಸುವುದಕ್ಕೂ ವಿಲಾಯತಿಯ ಔಷಧಾಲಯಗಳಲ್ಲಿ ಉಪಯೋಗಿಸುತ್ತಾರೆ. ಹತ್ತಿಯನ್ನು ಬೆಳೆಸುವ ಪ್ರದೇಶಗಳಲ್ಲಿ ಇಂಥ ಎಣ್ಣೆಯ ಗಾಣಗಳನ್ನು [illegible] ಪೈದಾಸ್ತು ಮಾಡುವುದಕ್ಕೆ ಯತ್ನಿಸಬಹುದು. ಈ ಕಾಳಿನ ಹಿಂಡಿಯು ಗೊಬ್ಬರವಾಗುವುದರಿಂದ ಕೃಷಿಕರು ತಮ್ಮ ಸ್ವಂತ ಕೃಷಿಯ ಬಗ್ಗೆ ಉಪಯೋಗಿಸಲಿಕ್ಕೆ ಅಥವಾ ಪರದೇಶಗಳಿಗೆ ಅದನ್ನು ರಫ್ತುಮಾಡುವುದಕ್ಕೆ ಯತ್ನಿಸಬಹುದು. ಆಗ ಒಂದು ಕಡೆಯಲ್ಲಿ ನೇಯಿಗೆ, ಇನ್ನೊಂದು ಕಡೆಯಲ್ಲಿ ಈ ಗಾಣದಿಂದ ಎಣ್ಣೆ ಹಿಂಡಿಗಳ ಕೈಗಾರಿಕೆಯು ಹೊಸ ವಿಧದಲ್ಲಿ ನಮ್ಮ ಜಿಲ್ಲೆಯ ಕೃಷಿಕರಿಗೆ ಪ್ರಯೋಜನಕರವಾಗುವುದು.

ಇದಲ್ಲದೆ ನಮ್ಮ ಜಿಲ್ಲೆಯ ಕಾಡುಗಳಲ್ಲಿ ಇನ್ನೂ ಅನೇಕ ವಿಧದ ತೈಲ್ಯದ ಬೀಜಕಾಯಿಗಳು ಸಮೃದ್ಧಿಯಾಗಿವೆ. ಅನೇಕಾನೇಕ ಜನರು ಅವುಗಳ ಪ್ರಯೋಜನ ತಿಳಿಯದೆ ಹಟತ್ತರಾಗಿಯೇ ಇದ್ದಾರೆ. ಆದರೆ ಅವುಗಳಲ್ಲಿ ಕೆಲವು ಬೀಜಗಳನ್ನು ಹಿಂಡಿ ಕಲ್ಲಿಕೋಟೆಯ ಸರಕಾರಿ ಸಾಬೂನುಕಾರ್ಖಾನೆಯಲ್ಲಿ ಪರಿಶೋಧಿಸುತ್ತಿರುವರು. ಕೆಲವುಗಳಲ್ಲಿರುವ ಎಣ್ಣೆಯು ಸಾಬೂನಿಗೆ ತುಂಬಾ ಪ್ರಯೋಜನಕಾರಿಯಾಗಿದೆಯಂತೆ. ಹೊಂಗೆ, ಹೊನ್ನೆ, ದೂಪ, ರಿಂಟೆಕಾಯಿ, ರೋಗನು ಇವು ನಮ್ಮ ಜಿಲ್ಲೆಯಲ್ಲಿ ತೈಲ್ಯದಾಯಕ ಪದಾರ್ಥಗಳು. ಹೊಂಗಾರಕನ ಬೀಜ, ಕಾಡುಗೇರು ಗಜಗನಕಾಯಿ ಇವುಗಳಲ್ಲಿಯೂ ತೈಲ್ಯವಿದೆ. ಇವುಗಳನ್ನು ಹಿಂಡುವುದಕ್ಕೆ ಯಾರೂ ಈ ವರೆಗೆ ಮೊದಲು ಮಾಡಿಲ್ಲ.

ಮೇಲೆ ಹೇಳಿದ ಸಸ್ಯಸಂಬಂಧವಾದ ತೈಲ್ಯಗಳು ಅಲ್ಲದೆ ಪ್ರಾಣಿಸಂಬಂಧವಾದ ತೈಲ್ಯಗಳೂ ಇವೆ. ಇವುಗಳಲ್ಲಿ ಚರ್ಬಿ ಒಂದುಬಗೆಯ ತೈಲ್ಯ. ಈ ಚರ್ಬಿಯು ಪಶ್ಚಿಮ ಕರಾವಳಿಯಲ್ಲಿ ಸುಮಾರು ೨೦೦೦ರಿಂದ ೩೦೦ ಟನ್ನುಗಳ ವರೆಗೆ ಸಿಕ್ಕೀತೆಂಬದಾಗಿ ಅಂದಾಜುಕಟ್ಟಿದ್ದಾರೆ. ಮಂಗಳೂರಿನಲ್ಲಿ ಒಬ್ಬಿಬ್ಬರು ಕ್ರೈಸ್ತರು ಈ ಚರ್ಬಿಯಿಂದ ಮಯಣದ ಬತ್ತಿಗಳನ್ನು ಮಾಡುತ್ತಾರೆ. ಆದರೆ ಈ ಕೈಗಾರಿಕೆಯು ಇನ್ನೂ ವಿಶೇಷ ಬೆಳಕಿಗೆ ಬಂದಿಲ್ಲ. ಇಗರ್ಜಿಗಳಲ್ಲಿ ಹೆಚ್ಚಾಗಿ ಇಂಥ ಬತ್ತಿಗಳನ್ನು ಉಪಯೋಗಿಸುವುದರಿಂದ ಈ ಕೈಗಾರಿಕೆಯು ಈಗ ಕೆಲವರ ಜೀವನವನ್ನು ಸಾಗಿಸುತ್ತಿದೆ.

ಆದರೆ ಈ ಬಗೆಯ ಚರ್ಬಿಯು ಶುದ್ಧವಾಗಿಲ್ಲ. ಅದನ್ನು ತಯಾರಿಸುವ ಮತ್ತು ಸಂಗ್ರಹಮಾಡುವ ಕ್ರಮವು ಇನ್ನೂ ವ್ಯವಸ್ಥೆಗೂ ಸುಧಾರಣೆಗೂ ಬಂದಿಲ್ಲ. ಇದನ್ನು ಕ್ರಮಕ್ಕೆ ತರಲು ತುಂಬಾ ಅವಕಾಶವಿದೆ.

ಆದರೆ ಈಗೀಗಲೆ ಶಕ್ಯವಟ್ಟಿಗೆ ತಲೆಎತ್ತಿದ ಇನ್ನೊಂದು ಎಣ್ಣೆ ಕೈಗಾರಿಕೆಯು ಮುಂದೆ ನಮ್ಮ ಜಿಲ್ಲೆಯ ಮೊಗೇರರಿಗೂ ಇತರರಿಗೂ ತುಂಬಾ ಪ್ರಯೋಜನಕಾರಿಯಾದೀತು. ಮೀನಿನ ಎಣ್ಣೆಯನ್ನು ಹಿಂಡಿ ಹಿಂದುಳಿದ ಹಿಂಡಿಯನ್ನು ಗೊಬ್ಬರವಾಗಿ ಕಾಫಿತೋಟಗಳಿಗೆ ವಿಕ್ರಯಿಸುವ ಕೈಗಾರಿಕೆಯು ಈಗ ಕೆಲವು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಹಬ್ಬಿಕೊಂಡಿದೆ. ಮಂಗಳೂರು ತಾಲೂಕಿನ ಕರಾವಳಿಯಲ್ಲಿ ಸುಮಾರು ಇಂಥ ೫೦ ಕಾರ್ಖಾನೆಗಳಿವೆ. ಉಡುಪಿ ತಾಲೂಕಿನಲ್ಲಿ ಸುಮಾರು ಅಷ್ಟೆ ಸಂಖ್ಯೆ ಇದೆ. ಕಾಸರಗೋಡು ತಾಲೂಕಿನಲ್ಲಿ ಇದ ಇನ್ನೂ ಪ್ರಚಾರಕ್ಕೆ ಬರಲಿಲ್ಲ. ಆದರೆ ವಾಸನೆಯನ್ನು ತಕ್ಕವಟ್ಟಿಗೆ ತೆಗೆದು ಹಾಕಿದರೆ ಆ ಎಣ್ಣೆಯ ಮೃತ್ಯವರಾಗಿ ನೊರೆಗಿಹೋದವರಿಗೆ ಕಾಡ್‌ಲಿವರ್ ಎಣ್ಣೆಯಷ್ಟೆ ಪ್ರಯೋಜನಕಾರಿಯಾಗಿದೆ. ಈ ಎಣ್ಣೆಯಿಂದಲೂ ಸಾಬೂನಗಳನ್ನು ಕಲ್ಲಿಕೋಟೆಯ ಕಾರ್ಖಾನೆಯಲ್ಲಿ ಮಾಡಲು ಯತ್ನಿಸಿದ್ದಾರೆ. ಫಿಶ್ಶರೀಸ್ ಇಲಾಖೆಯ ಪ್ರೋತ್ಸಾಹದಿಂದ ಈ ಎಣ್ಣೆಕೈಗಾರಿಕೆಯು ಸ್ವಲ್ಪ ತಲೆಎತ್ತಿ ಈಗ ಒಂದೆರಡು ಸಹಕಾರ ಸಂಘಗಳೂ ಈ ಕೈಗಾರಿಕೆಯ ಪ್ರಸಾರಕ್ಕೆ ಜನ್ಮವೆತ್ತಿವೆ.

ಮಲ್ಲಿಗೆಸಾಪ್ಪಿನ ಎಣ್ಣೆ, ಗಂಧದ ಎಣ್ಣೆ, ಇವು ಕೆಲವು ವಿಧವಾಗಿ ಉಪಯೋಗಕ್ಕಿವೆ. ಈ ಮೈಸೂರು ಗಂಧದ ಎಣ್ಣೆಯು ಮೈಸೂರು ಸರಕಾರದವರು ಗಂಧವನ್ನು ಇಲ್ಲಿ ಕಳುಹಿಸಲು ಆತಂಕಮಾಡಿದ್ದರಿಂದ ಈಗ ಮೊದಲಿನಂತೆ ತಯಾರಾಗದು.

"ಕ್ಯಾಲೊಮೆಲ್" ಎಂಬ ಪಾದರಸದ ಉಪ್ಪು

ಈಗ ಅನೇಕ ಜನರು, ಹೊಟ್ಟೆಯಲ್ಲಿಯೂ, ಪಚನಿನ್ನಲ್ಲಿಯೂ ತಲೆದೋರುವ ನಾನಾತರದ ರೋಗಗಳಿಂದ ಬಾಧೆಪಡುತ್ತಿರುವುದಕ್ಕೆ, ಈ ದೇಶದ ಕೆಲವು ಹಿಂದೂ ವೈದ್ಯರಲ್ಲಿಯೂ, ಅಂಗಡಿಗಳಲ್ಲಿಯೂ ದೊರೆಯುವ 'ಕ್ಯಾಲೊಮೆಲ್' ಎಂಬ ಉಪ್ಪನ್ನು ಉಪಯೋಗಿಸುವುದೇ ಮುಖ್ಯ ಕಾರಣವೆಂದು ತಿಳಿದುಬಂದಿದೆ. ಅಜಾಗ್ರತೆಯಾಗಿ ಮಾಡಿದ ಈ ಉಪ್ಪಿನಲ್ಲಿ ಪಾದರಸ ಸಂಬಂಧವಾದ "ಪರ್‌ಕ್ಲೋರೈಡ" ಎಂಬ ವಿಷಪದಾರ್ಥವು ಸೇರಿದೆ. ಆದುದರಿಂದ ಎಲ್ಲಾ ವೈದ್ಯರೂ, ಅಂಗಡಿಯವರೂ ತಮ್ಮಲ್ಲಿರುವ ಈ 'ಕ್ಯಾಲೊಮೆಲ್' ಎಂಬ ಉಪ್ಪು ಶುದ್ಧವಾಗಿ ತಯಾರಿಸಲ್ಪಟ್ಟಿದೆಯೋ ಎಂಬದನ್ನು ನಿರ್ಧಾರವಾಗಿ ತಿಳಿದುಕೊಂಡು, ಆ ಮೇಲೆ ಅದನ್ನು ಇತರರಿಗೆ ಕೊಡಬೇಕು. ಅದರಂತೆಯೇ ಅಂಗಡಿಯಿಂದಾಗಲಿ, ವೈದ್ಯರಿಂದಾಗಲಿ ಈ ಉಪ್ಪನ್ನು ತರುವವರು, ಈ ವಿಷಯವನ್ನು ಚೆನ್ನಾಗಿ ವಿಚಾರಿಸಿ, ಅದು ಒಳ್ಳೇ ಪ್ರಾಮಾಣಿಕರಿಂದ ಶುದ್ಧಿಮಾಡಿ ತಯಾರಿಸಲ್ಪಟ್ಟಿದೆಯೋ ಎಂಬುದನ್ನು ನಿಶ್ಚಯವಾಗಿ ತಿಳಿದುಕೊಂಡಮೇಲೆ ಅದನ್ನುಪಯೋಗಿಸಬೇಕು.

೨ ಸಾಮಾನ್ಯವಾಗಿ ಈ ಉಪ್ಪನ್ನು ತಯಾರಿಸುವ ಕ್ರಮವು ಹೇಗೆಂದರೆ— ಮೂರು ಭಾಗ ಪಾದರಸವನ್ನೂ, ನಾಲ್ಕು ಭಾಗದಷ್ಟು "ಪರ್‌ಕ್ಲೋರೈಡ" ಎಂಬ ಪಾದರಸದ ಪುಡಿಯನ್ನೂ ಸೇರಿಸಿ ಕಾಯಿಸಿದರೆ ಅದರಿಂದ ಬಿಸಿಯಾದ ಹಬೆಯು ಹೊರಡುವುದು. ಆ ಹಬೆಯನ್ನು ಒಂದು ತಂಪಾದ ಪಾತ್ರಕ್ಕೆ ಬಿಟ್ಟುಕೊಂಡರೆ, ಅಲ್ಲಿ ಬಿಳೀ ಬಣ್ಣದ ಸಣ್ಣ ಧೂಳಿಗಳು ಸೇರುತ್ತಬರುವುವು. ಇದೇ "ಕ್ಯಾಲೊಮೆಲ್" ಎಂದು ಕರೆಯಲ್ಪಡುವುದು. ಆದರೆ ಇದು ಅಷ್ಟು ಶುದ್ಧವಾದುದಲ್ಲ. ಇದರಲ್ಲಿ "ಪರ್‌ಕ್ಲೋರೈಡ್" ಎಂಬ ವಿಷಪದಾರ್ಥದ ಕೆಲವು ಭಾಗವು ಇನ್ನೂ ಇದ್ದೇ ಇರುವುದು. ಆದುದರಿಂದ ಈ ಪುಡಿಯನ್ನು ತಿರುಗಿ ಬಿಸಿನೀರಿನಲ್ಲಿ ಹಾಕಿ, ಚೆನ್ನಾಗಿ ಕದಡಿದರೆ ಆ "ಪರ್‌ಕ್ಲೋರೈಡ್" ಎಂಬ ವಿಷಪದಾರ್ಥವು ನೀರಿನಲ್ಲಿ ಕರಗಿ, "ಕ್ಯಾಲೊಮೆಲ್" ಎಂಬ ಉಪ್ಪು ಮಾತ್ರ ಕರಗದೆ ಹಾಗೆಯೇ ಕೆಳದಲಿ ನಿಲ್ಲುವುದು. ಹೀಗೆ ಸ್ವಲ್ಪ ಹೊತ್ತಿನವರೆಗೆ ಇಟ್ಟದ್ದನ್ನು ಅದರ ಮೇಲಿನ ತಿಳಿಯನ್ನು ಹೊರಕ್ಕೆ ಚೆಲ್ಲಿ, ತಿರುಗಿ ಮೊದಲಿನಂತೆಯೇ ಸ್ವಲ್ಪ ಬಿಸಿ ನೀರನ್ನು ಬಿಟ್ಟು, ಚೆನ್ನಾಗಿ ಕದಡಿ, ಸ್ವಲ್ಪ ಹೊತ್ತು ಇಟ್ಟದ್ದನ್ನು ಆ ಮೇಲೆ ಮೇಲಿನ ತಿಳಿಯನ್ನು ಹೊರಕ್ಕೆ [illegible]. ಹೀಗೆಯೇ ಮೂರು [illegible] ನೀರಿನಲ್ಲಿ [illegible]ವನ್ನು

[illegible] ಉಪ್ಪನ್ನು ಉಪಯೋಗಿಸಬಾರದು [illegible]

[illegible]

ಸೂರೆಯು ಕಂಡುಬಂದರೆ ಆಗ ಆ ಉಪ್ಪಿನಲ್ಲಿ ಇನ್ನೂ "ಪರ್‌ಕ್ಲೋರೈಡ್" ಎಂಬ ವಿಷಪದಾರ್ಥವು ಹೋಗಿಲ್ಲವೆಂದೂ, ಆ ಉಪ್ಪನ್ನು ಉಪಯೋಗಿಸುವುದು ಅಪಾಯಕರವೆಂದೂ ತಿಳಿಯಬೇಕು.

ಸಕ್ಕರೆಯ ಪೂರೈಕೆ.

(ಲೇಖಾಂಕ ೨)

ಆಹಾರಸಾಮಗ್ರಿಗಳ ಚಲಾವಣೆಯ ಮೇಲೆ ಸುಂಕ ಹಾಕಬಾರದು ಎಂಬ ತತ್ವವನ್ನು ಬಹುಕಾಲದಿಂದಲೂ ಪ್ರತಿಪಾದಿಸಿಕೊಂಡು ಇದ್ದ ಬ್ರಿಟಿಷ ಜನಾಂಗವು ಆಗತ್ಯ ಬಿದ್ದಾಗ ಅದಕ್ಕೂ ಸುಂಕಹಾಕಲು ಮುಂದರಿಸಿತು ಎಂಬುದನ್ನು ಹಿಂದಿನ ಡಿಸೆಂಬರ್ ೧೯ನೇ ಸಂಚಿಕೆಯಲ್ಲಿ ಹೇಳಿದೆವು. ಆದರೆ ಈ ಅಸ್ತ್ರವನ್ನು ಬ್ರಿಟಿಷರಲ್ಲಿ ಕೂಡಲ್ಲ. ಲೋರ್ಡ ಕರ್ಝನ ಪ್ರಭೃತಿಗಳು ವೈಸರಾಯಿಗಳಾಗಿ ಬಂದ ಕೆಲವು ಸಮಯದೊಳಗಾಗಿಯೂ ಹಿಂದೂಸ್ಥಾನದಲ್ಲಿ ಹೂಡಲಾಯಿತು. ಆ ಸಮಯದಲ್ಲಿ ಲೋರ್ಡ ಕರ್ಝನ್ನರು ಹಿಂದೂಸ್ಥಾನದ ಸಕ್ಕರೆಯ ಕೈಗಾರಿಕೆಯ ಪರವಾಗಿಯೇ ಈ ಸಂಕೇತ ನಿರ್ಬಂಧವನ್ನು ಹೂಡಿಸಿದರೆಂದು ಪ್ರಜಾಮುಖಂಡರ ಮತ್ತು ದೇಶೀಯ ವರ್ತಮಾನ ಪತ್ರಿಕಾಕರ್ತರ ಅಭಿಪ್ರಾಯವಿದ್ದಿತ್ತು. ಆದರೆ ಹಿಂದೂಸ್ಥಾನದ ಸತ್ಪುತ್ರರಲ್ಲಿ ಒಬ್ಬರಾದ ಮತ್ತು ಆ ಕಾಲದಲ್ಲಿ ರಾಜಕೀಯ ವಿಚಾರದ್ವಾರದಲ್ಲಿ ಮುಂದಾಳಾದ ಸರ್ ಪಿ ಎಮ್ ಮೇಥಾ (ಮುಂಬಯಿಯ ಹೆಸರುವಾಸಿ ಬೆರಿಷ್ಟರ್) ಇವರು ಮಾತ್ರ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಈ ವಿಷಯವಾಗಿ ಆಕ್ಷೇಪವನ್ನೆತ್ತಿದ್ದರು. ಆದರೆ ಲೋರ್ಡ ಕರ್ಝನರ ಕಾರ್‌ಬಾರಿಯಲ್ಲಿ ಮಂಕುತಲೆದ ಜನರಿಗೆ ಮೇಥಾರ ಮಾತುಗಳು ಕೇಳಿಸಲಿ ಇಲ್ಲ. ಈ ಸುಂಕದ ಏರ್ಪಾಡು ಹಿಂದೀ ಸಕ್ಕರೆಯ ಕೈಗಾರಿಕೆಯ ಉದ್ಧರಣೆಗಾಗಿ ಬರಲಿಲ್ಲ. ಮೊರಿಸಿಯಸ್ ದ್ವೀಪದ ಬ್ರಿಟಿಷ ಪ್ರಜೆಗಳು ತಮ್ಮ ಕೈಗಾರಿಕೆಗೆ ಒಸ್ಟ್ರಿಯ ಮತ್ತು ಜರ್ಮನಿಯ ಸಕ್ಕರೆ ಕೈಗಾರಿಕೆಯಿಂದ ಬರಬಹುದೆಂದು ಎಣಿಸಿದ ಹೊಡೆತವನ್ನು ತಡೆಸಬೇಕಾಗಿ ಮೊರೆ ಇಟ್ಟ ಮೇರೆಗೆ ಆಗಿನ ವಸಾಹತುಗಳ ಸೆಕ್ರೆಟರಿಗಳಾಗಿದ್ದ ಮಿ। ಚೆಂಬರಲೇನರ ಮನಸ್ಸನ್ನು ಸಲ್ಲಿಸುವುದಕ್ಕಾಗಿ ಕರ್ಝನ ಮಹಾಶಯರು ಈ ದೇಶದ ಮೇಲೆ ಸುಂಕಹೊರಿಸಲು ಮುಂದರಿಸಿದರು. ಇದರಿಂದ ನಮ್ಮ ದೇಶಕ್ಕೆ ಪ್ರಯೋಜನ ಕೊಡುವ ಬದಲಾಗಿ "೭ ವರ್ಷಗಳ ವರೆಗೆ ಜಾರಿಯಲ್ಲಿದ್ದ ಕೂಡಾ ಆಗಿನ ಇಂಡಿಯಾ ಸರಕಾರದ ಕೋಶಾಧೀಶರ ಅಭಿಮತದಲ್ಲಿ ಅಷ್ಟಲ್ಲ ಫಲಕಾರಿಯಾದವು! ಈ ಕೋಶಾಧೀಶರ ಮಾತುಗಳನ್ನು ಒಂದು ಕಡೆಯಲ್ಲಿ ಎತ್ತಿಬರೆದು ಸರ್ ಡಿ ಇ ವಾಛಾಪ್ರಭೃತಿಗಳು ಅವನ್ನು ಹೀಗೆ ಟೀಕಿಸಿದ್ದಾರೆ — ಮೊರಿಸಿಯಸದ ಸಕ್ಕರೆಯೇ ದೇಶೀಯ ಸಕ್ಕರೆಯ ಕೈಗಾರಿಕೆಯಲ್ಲಿ ಕ್ಷಯರೋಗದ ಅಣುಗಳನ್ನು ಪಸರಿಸಿ ಮೆಲ್ಲಮೆಲ್ಲಗೆ ಅದನ್ನು ಮರಣಶಯ್ಯೆಯಲ್ಲಿ ಮಲಗಿಸಿತ್ತು ಎಂಬ ವಿಚಾರವನ್ನು ತಿಳಿಯದ ಜನರಲ್ಲಿ ಲೋರ್ಡ ಕರ್ಝನ್ನರು ಹಿಂದೂಸ್ಥಾನದ ಕೈಗಾರಿಕೆಗಳನ್ನು ಉದ್ಧರಿಸಲಿಕ್ಕೆಂದೆ ಬಂದ ಅವತಾರ ಪುರುಷರೆಂಬ ಭ್ರಾಂತಿಯು ಹುಟ್ಟಿಕೊಂಡಿತ್ತು. ಬ್ರಿಟಿಷರ ವಸಾಹತುಗಳ ಮಂತ್ರಿಯಾಗಿದ್ದ ಮಿ। ಚೆಂಬರಲೇನರು ಈ ಸುಂಕದ ಹೊರೆಯನ್ನು ಹಿಂದೂಸ್ಥಾನದ ಮೇಲೆ ಹೊರಿಸಬೇಕೆಂದು ಬಲವಂತ ಪಡಿಸಿದ್ದಾಗ ವೈಸರಾಯಿಗಳಾಗಿದ್ದ ಲೋರ್ಡ ಎಲ್ಜಿನರು ಮೊರಿಸಿಯಸ್ ಸಕ್ಕರೆಯ ಕೈಗಾರಿಕೆಯು ಒಸ್ಟ್ರಿಯ ಮತ್ತು ಜರ್ಮನ ಕೈಗಾರಿಕೆಯಿಂದ ಸೋತುಹೋಗುವ ಹಾಗಿಲ್ಲವೆಂದು ವಿನಂತಿಸಿದ್ದು, ಅಂಥ ಸಂಕಟವನ್ನು ಆಕ್ಷೇಪಿಸಿ ಬರೆದಿದ್ದರು. ಅವರನಂತರ ವೈಸರಾಯಿಗಳಾಗಿ ಬಂದ ಲೋ। ಕರ್ಝನರು ಹಿಂದೂಸ್ಥಾನದಲ್ಲಿ ಕಾಲು ಕಾಲಿಟ್ಟು ಇನ್ನೂ ನಾಲ್ಕು ತಿಂಗಳಾಗಲಿಲ್ಲ. ಮಿ। ಚೆಂಬರಲೇನರ ಸೂಚನೆಯನ್ನು ಅನುಸರಿಸಿ ಈ ಪ್ರತಿಕಾರದ ಸುಂಕದ ಹೊರೆಯನ್ನು ಹೊರಿಸಿದರು." ಹೀಗೆ ಈ ಸುಂಕವು ನಮ್ಮ ಹಿಂದೂಸ್ಥಾನದ ಕೈಗಾರಿಕೆಗೆ ಏನೊಂದು ಪ್ರೋತ್ಸಾಹ ಕೊಡಲಿಲ್ಲವೆಂಬುದು ಸ್ಪಷ್ಟವಾಗುವುದು. ಇನ್ನೊಂದು ಕಡೆ ಹಿಂದೂಸ್ಥಾನದ ಸರಕಾರದ ಬೊಕ್ಕಸಕ್ಕೆ ಇದರಿಂದ ಹೆಚ್ಚು ಹಣವೂ ಬರಲಿಲ್ಲ, ಯಾಕೆಂದರೆ ಈ ಸುಂಕದ ನಿರ್ಬಂಧವಿಲ್ಲದ ಮೊರಿಸಿಯಸ್ ಸಕ್ಕರೆ ಇಲ್ಲಿ ಧಾರಾಳವಾಗಿ ಬರಲಾರಂಭಿಸಿತು. ೧೯೧೮–೧೯ನೆ ಇಸವಿಯಲ್ಲಿ ಹಿಂದುಸ್ಥಾನಕ್ಕೆ ಬಂದ ಸಕ್ಕರೆ ಇಲ್ಲಿ ಅನ್ಯದೇಶಗಳಿಂದ ಮುಖ್ಯವಾಗಿ ಮೊರಿಸಿಯಸ್ ದ್ವೀಪದಿಂದ ಬಂದಿತ್ತು.

೧೯೧೧ನೆ ಇಸವಿಯಲ್ಲಿ ವರಿಷ್ಠ ನ್ಯಾಯವಿಧಾಯಕ ಸಭೆಯಲ್ಲಿ ಈ ಸಕ್ಕರೆಯ ಕೈಗಾರಿಕೆಯ ಪ್ರಶ್ನವನ್ನು ಕುರಿತು ಒಂದು ಕಮಿಟಿಯನ್ನು ಏರ್ಪಡಿಸಿ, ಅವರಿಂದ ವಿಚಾರ ನಡೆಸುವುದು ಯೋಗ್ಯವೆಂದು ನಾಮದಾರ ಗೋಖಲೆಯವರು ಸೂಚನೆ ತರುವಾಗ, ನಾಮದಾರ ಮದನಮೋಹನ ಮಾಲವೀಯರು ಅವರು ಹಿಂದೆ ಮಾಡಿದ ಸೂಚನೆಗಳನ್ನು ಅಧಿವೇಶನದ ಮುಂದಿಟ್ಟರು. ಅದರಲ್ಲಿ ಪ್ರತೀಕಾರ ಸುಂಕವನ್ನು ಹಾಕುವುದಕ್ಕೆ ಬದಲಾಗಿ ಸಕ್ಕರೆಯ ಕೈಗಾರಿಕೆಯ ಪರಿಶೋಧನೆಗೆ ಬೇಕಾದ ರಾಸಾಯನಿಕ ತಜ್ಞರ ಸಹಾಯವನ್ನು ಈ ದೇಶದ ಕೃಷಿಕರಿಗೆ ಒದಗಿಸಿಕೊಡುವುದು, ಕೃಷಿಕರು ಅವರು ಪೈರು ಬೆಳೆಸುವ ಆಸ್ತಿಯ ಮೇಲೆ ಇರುವ ಹಕ್ಕುಗಳನ್ನು ಬಲಪಡಿಸುವುದು, ಕಬ್ಬಿನ ಬೆಳೆಗೆ ಸಾಕಷ್ಟು ಜಲಾಶ್ರಯವನ್ನು ಒದಗಿಸಿಕೊಡುವುದು ಮುಂತಾದ ಸೂಚನೆಗಳನ್ನು ಸಭೆಯ ಮುಂದಿಟ್ಟರು. ಈ ಸೂಚನೆಯು ಆಗ ಮಂಜೂರಾಗಲಿಲ್ಲವೆಂದು ಹಿಂದೆಯೇ ಹೇಳಿದೆವು.

ಎಷ್ಟು ಸುಧಾರಣೆಯ ಅಂಶವು ನಮ್ಮ ಕೈಸೇರಬಹುದು ಎಂದು ನಾವು ಮನಸ್ಸಿನೊಳಗೆ ಕಲ್ಪಿಸಿಕೊಂಡಿದ್ದೆವೂ ಅದಕ್ಕಿಂತಲೂ ಹೆಚ್ಚಿನ ಸಲಹೆಗಳು ನಮಗೆ ಸಿಕ್ಕಿವೆ ಎಂದು ಲೋರ್ಡ ಸಿಂಹರ ಅಭಿಪ್ರಾಯ. ಇದನ್ನು ಸಮರ್ಥಿಸುವುದಕ್ಕೆ ಅವರು ಹೀಗೆ ಹೇಳಿದರು:—"ನಮ್ಮ ಸಾರ್ವಭೌಮರ ಇತರ ವಸಾಹತುಗಳಲ್ಲಿ ಜನಕೆಗೆ ಕೋಶಾಧಿಕಾರವು ಎಷ್ಟರಮಟ್ಟಿಗೆ ಇದೆಯೋ ಅಷ್ಟೇ ಹಿಂದುಸ್ಥಾನಕ್ಕೂ ಸಿಗಬೇಕೆಂದು ಜೊಯಿಂಟ್ ಕಮ್ಮಿಟಿಯವರು ಸೂಚಿಸಿದ್ದರು ಎಂದು ಆ ರಿಪೋರ್ಟನ್ನು ಓದಿದವರೆಲ್ಲರಿಗೂ ಗೊತ್ತೇ ಇರುವುದು. ಹಾಗಿದ್ದರೆ ಈ ಹೊಸ ಎಕ್ಟಿನಲ್ಲಿ ಅದನ್ನು ಸ್ಪಷ್ಟವಾಗಿ ಅಂಗೀಕರಿಸಿದಂತೆ ಯಾಕೆ ತೋರುವುದಿಲ್ಲ ಎಂತ ನೀವು ನನ್ನೊಡನೆ ಕೇಳಬಹುದು; ಮತ್ತು ಸ್ವಾಭಾವಿಕವಾಗಿ ನಾವು ಸಂಶಯಚಿತ್ತರಾಗಿರುವುದರಿಂದ—ಇದಕ್ಕೆ ಹಿಂದೂಸ್ಥಾನದ ಕೆಲವು ವಿಹಿವಾಟುಗಳು ಎಡೆಯನ್ನು ಕೊಟ್ಟಿರುವುವು—ಈಗಿನ ಎಕ್ಟನ್ನು ನೀವು ಅದೇ ಬಗೆಯ ಸಂದೇಹದಿಂದ ಕಾಣುತ್ತೀರಿ. ಮತ್ತು ಜೊಯಿಂಟ್ ಕಮ್ಮಿಟಿಯವರ ಈ ಸೂಚನೆಯು ಈ ಎಕ್ಟಿನಲ್ಲಿ ರೂಪುಗೊಳ್ಳದ ಕಾರಣ ಅದನ್ನು ಪಾರ್ಲಿಮೆಂಟಿನವರು ಅಂಗೀಕರಿಸಲಿಲ್ಲವೆಂದು ಕೆಲವರು ಆಕ್ಷೇಪಿಸಲಿಕ್ಕೂ ಕಾರಣವಿದೆ. ಆದರೆ ಇಂಥ ಸಂದೇಹವು ಇನ್ನಾದರೂ ತೊಲಗಿಹೋಗುತ್ತಿರುವುದು ಒಳ್ಳೆಯದು. ಯಾಕೆಂದರೆ ನಮ್ಮ ಕಂದಾಯವನ್ನು ವಿನಿಯೋಗಿಸುವುದಕ್ಕೆ ಸಂಪೂರ್ಣ ಅಧಿಕಾರವು ನಮಗೆಯೇ ಇರಬೇಕೆಂಬ ವಿಷಯವನ್ನು ಈ ಎಕ್ಟಿನಲ್ಲಿ ಕಾಣಿಸದೆ ಇರುವುದಕ್ಕೆ ಜೊಯಿಂಟ್ ಕಮ್ಮಿಟಿಯವರೇ ಕಾರಣಗಳನ್ನು ಕೊಟ್ಟಿರುವರು. ಹೇಗೆಂದರೆ ಒಸ್ಟ್ರೇಲಿಯ ಕೆನಡಾ ಮುಂತಾದ ವಸಾಹತುಗಳ ಕಾನೂನುಗಳ ಸಂಪುಟಗಳಲ್ಲಿ ಹುಡುಕಿದರೂ ಈ ಬಗೆಯ ಸ್ವಾತಂತ್ರ್ಯವನ್ನು ಆಯಾ ವಸಾಹತುಗಳ ಜನತೆಗೆ ಒಪ್ಪಿಸಿಕೊಟ್ಟಿದೆ ಎಂಬುದು ಎಲ್ಲಿಯೂ ಕಂಡು ಬರುವುದಿಲ್ಲ. ಸ್ಥೂಲದೃಷ್ಟಿಯಿಂದ ನೋಡಿದರೆ ಬ್ರಿಟಿಷ ಪಾರ್ಲಿಮೆಂಟಿನವರಿಗಿನ ಈ ಸಂಪೂರ್ಣ ಅಧಿಕಾರವು ಇದೆಯಲ್ಲದೆ ವಸಾಹತುಗಳಿಗೆ ಆ ಸ್ವಾತಂತ್ರ್ಯವು ಇಲ್ಲ. ಆದ್ದರಿಂದ ಈ ವಿಷಯದಲ್ಲಿ ಎಕ್ಟಿನಲ್ಲಿ ನಮೂದಿಸಲಿಕ್ಕೆ ಸಾಧ್ಯವಾಗಲಿಲ್ಲ. ಒಂದು ವೇಳೆ ಅಂಥ ಅಧಿಕಾರವನ್ನು ಪಾರ್ಲಿಮೆಂಟಿನವರು ಒಪ್ಪಿಸಿಕೊಟ್ಟಿದ್ದಾರೆಂದು ಎಕ್ಟನ್ನು ಮಾಡಿದರೂ ಹೊಸ ಚುನಾವಣೆಯಾದ ಪಾರ್ಲಿಮೆಂಟ ಸಭೆಯಲ್ಲಿ ಆ ಎಕ್ಟನ್ನು ರದ್ದುಮಾಡಿ ಆ ಅಧಿಕಾರವನ್ನು ತಮ್ಮ ಕೈಯೊಳಗೆ ಪುನಃ ತಂದುಕೊಳ್ಳಲಿಕ್ಕೆ ಪಾರ್ಲಿಮೆಂಟಿನವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದ್ದರಿಂದ ಒಂದು ಕೈಯಿಂದ ಒಂದು ಅಧಿಕಾರವನ್ನು ಕೊಟ್ಟು ಇನ್ನೊಂದು ಕೈಯಿಂದ ಅದನ್ನು ಕಿತ್ತು ತೆಗೆಯುವ ಏರ್ಪಾಡಿಗಿಂತಲೂ ಇತರ ವಸಾಹತುಗಳ ಹಾಗೆಯೇ ಪರಸ್ಪರ ಮೈತ್ರಿಭಾವದಿಂದ ಈ ಬಗೆಯ ಅಧಿಕಾರವನ್ನು ಹಿಂದೂಸ್ಥಾನದ ಸರಕಾರದವರು ನಡೆಸುವಂತೆಯೂ ಅದನ್ನು ಪಾರ್ಲಿಮೆಂಟಿನವರು ಅಡ್ಡಿ ಬಾರದಂತೆಯೂ ಕ್ರಮವಿರುವುದೇ ಒಳ್ಳೆಯದು. ಹೀಗಾದ್ದರಿಂದ ಮುಂದಿನ ನಮ್ಮ ಏಳಿಗೆಯ ದಾರಿಯನ್ನು ತಿದ್ದಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ನಮ್ಮ ಮೊಂಡತನದಿಂದ ನಾವೇ ಆ ದಾರಿಗೆ ಮುಳ್ಳನ್ನು ಹಾಕಿಕೊಳ್ಳಬಹುದು. ಅಥವಾ ಅದನ್ನು ಸುಗಮವಾಗಿ ಮಾಡಿಕೊಳ್ಳಬಹುದು. ಯಾವವರೆಗೆ ಈಗಿನ ಎಕ್ಟಿನ ನಿಬಂಧನೆಗಳನ್ನು ಜಾರಿಗೆ ತರಲಿಕ್ಕೆ ಜನತೆಯು ಸಹಕಾರದ ಕೈ ಚಾಚುತ್ತದೋ ಅವರೆಗೆ ನಮ್ಮ ದಾರಿಯು ಸುಗಮವಾಗಿದೆ. ಈ ವಿಷಯವು ನಮ್ಮ ಮಾನ್ಯಂತರಲ್ಲಿ ಅನೇಕರ ಮನಸ್ಸಿನಲ್ಲಿ ಹೊಳೆದಿದೆ ಎಂಬುದು ತುಂಬಾ ಸಂತೋಷದ ಮಾತು." ಹೀಗೆ ಹೇಳಿ ನಾಮದಾರರು ತಮ್ಮ ಭಾಷಣವನ್ನು ಮುಗಿಸಿದರು.

[illegible]

ಸ್ವದೇಶಾಭಿಮಾನಿ.

[illegible] ಮಾಘ ಶು ೨ ಶುಕ್ರವಾರ.

ಆಗ್ರಹದ ಸೂಚನೆ.

ಮದ್ರಾಸಿನ 'ಪಬ್ಲಿಸಿಟಿ ಬೋರ್ಡ್' ಎಂದರೆ ಪ್ರಕಟನಾಮಂಡಲವು ನಮ್ಮ ಸಂಸ್ಥಾನದೊಳಗಿನ ಆಹಾರಜೀನಸುಗಳ ಕ್ರಯದ ವಿಷಯವನ್ನು ವಿಮರ್ಶಿಸಿ ಒಂದು ಪ್ರಸಿದ್ಧ ಪತ್ರಕವನ್ನು ಹೊರಡಿಸಿದೆ. ಸದರೀ ಪತ್ರಕವನ್ನು ನೋಡುವಾಗ ಇಡೀ ಸಂಸ್ಥಾನದೊಳಗಿನ ಕ್ರಯವೆ ಏರಿರುವಂತೆ ತೋರುತ್ತದೆ. ಈ ಪರಿಸ್ಥಿತಿಯ ಕಾರಣಗಳಲ್ಲಿ ಒಂದು ವ್ಯಾಪಕವಾದ ಕಾರಣವು, ಸದರಿ ಪ್ರಕಟನೆಯಲ್ಲಿ ಯಾವುದು ತೋರಿಸಲ್ಪಟ್ಟಿದೆಂದರೆ ಲೋಕದೊಳಗಿನ ಧಾನ್ಯಗಳ ಕ್ರಯವೆ ಮೂಲತಃ ಹೆಚ್ಚಾದ್ದರಿಂದ ಹಿಂದುಸ್ಥಾನದೊಳಗಿನ ಧಾನ್ಯದ ಮೇಲೂ ಅದರ ಪರಿಣಾಮವುಂಟಾಗಿದೆ. ಅದರಂತೆಯೆ ಲೋಕದಲ್ಲಿ ಬೆಳೆಯಾದರೂ ಬಿಟ್ಟಿನಮೇಲೆ ಸಮೃದ್ಧಸ್ಥಿತಿಯಲ್ಲಿ ಇಲ್ಲ. ಈ ಎರಡು ಕಾರಣಗಳಿಂದ ಈ ವರ್ಷದ ಧಾರಣೆಯು ಹೆಚ್ಚಾಗಿದೆ ಎಂದು ಜಾಹೀರ ಪತ್ರಕದಿಂದ ಗೊತ್ತಾಗುತ್ತದೆ. ಬೆಳೆಯ ಮತ್ತು ರಫ್ತಿನ ನ್ಯೂನತೆ ಹಾಗು ಜಲಕಿವಣಿಯ ವಿಸ್ತಾರ ಈ ಕಾರಣಗಳಿಂದ ಸರಕಾರಕ್ಕೆ ಜಾಗ್ರತೆ ತಕ್ಕೊಳ್ಳುವುದು ಆವಶ್ಯವಾಗಿ ಸಂಸ್ಥಾನದ ಹೊರಗೆ ಹೋಗುವ ಸರಕನ್ನು ನಿರ್ಬಂಧಿಸಬೇಕಾಗಿ ಬಂತು. ಮತ್ತು ಬ್ರಹ್ಮದೇಶ ಹಾಗು ಕೃಷ್ಣಾಜಿಲ್ಲೆ ಇವುಗಳಲ್ಲಿ ಕಂಟ್ರೋಲನ್ನು ಇಡಬೇಕಾಗಿ ಬಂತು. ಪರಂತು ಕೃಷ್ಣಾಜಿಲ್ಲೆಯವರಿಗೆ ಅಲ್ಲಿಯ ಅಕ್ಕಿಯ ಮೇಲೆ ಇಟ್ಟ ಕಂಟ್ರೋಲು ಅಷ್ಟೊಂದು ಸಂತೋಷದ್ದಲ್ಲ. ಕಾರಣ, ಅಕ್ಕಿಯನ್ನು ಹೊರಗೆ ಕಳುಹಿಸಿ ವ್ಯಾಪಾರದಿಂದ ಒದಗಬಹುದಾದ ಲಾಭವು ತಮ್ಮ ಕೈತಪ್ಪಿಸಿದಂತಾಗುತ್ತದೆಂಬುದು ಅವರ ಅಭಿಪ್ರಾಯವಿದೆ. ಆದ್ದರಿಂದ ಕಂಟ್ರೋಲಿನ ಪದ್ಧತಿಯನ್ನು ಇಟ್ಟುಕೊಂಡರೂ ಅದರಿಂದ ಜನರ ಸಂಕಷ್ಟಗಳು ಪೂರ್ಣ ಹೋಗುತ್ತವೆ ಎಂದು ಹೇಳಲಾಗುವುದಿಲ್ಲ ಎಂದು ಪ್ರಕಟನಾಮಂಡಲದ ಅಭಿಪ್ರಾಯ.

ಕೃಷ್ಣಾಜಿಲ್ಲೆಯಲ್ಲಿ ಅಕ್ಕಿಯ ಮೇಲೆ ಕಂಟ್ರೋಲನ್ನು ಇಟ್ಟಿರುವ ಕಾರಣ ಅಲ್ಲಿಯ ಜನರಿಗೆ—ಸರ್ವರಿಗೂ ಅಲ್ಲ, ಜಮೀನುದಾರರಿಗೆ ಹಾಗು ವ್ಯಾಪಾರಿಗಳಿಗೆ—ಒಂದುವೇಳೆ ಲಾಭಸಂದರ್ಭವು ತಪ್ಪಿಹೋಗಿರಬಹುದು. ಅಂಥವರ ಆಕ್ಷೇಪಗಳನ್ನು ಕೊಂಚ ಬದಿಗಿಟ್ಟು ಇಲ್ಲಿ ಜನರ ಅನುಭವದ ದೃಷ್ಟಿಯಿಂದ ಈ ವರುಷದ ಪರಿಸ್ಥಿತಿಯನ್ನು ಆಲೋಚಿಸಿ ಒಂದು ನಿರ್ಣಯವನ್ನು ಕೊಡುವುದಾದರೆ ದಕ್ಷಿಣಕನ್ನಡ ಜಿಲ್ಲೆಯೊಳಗಿನ ಅಕ್ಕಿಯ ಮೇಲೆ ಕಂಟ್ರೋಲಿರುವುದೆ ಒಳ್ಳೇದು, ಜನರ ಹಿತದ್ದೆಂದು ತೋರುತ್ತದೆ. ಈಗ ಇರುವ ಅಕ್ಕಿಯ ದರವನ್ನು ನಾವು ಇಲ್ಲಿ ಪುನಃ ಬರೆದು ತೋರಿಸಬೇಕಾದ ಅಗತ್ಯವಿಲ್ಲ. ಇಲ್ಲಿಯ ಧಾರಣೆಯ ಪರಿಸ್ಥಿತಿಯನ್ನೆಲ್ಲ ಸಮೂದಿಸಿ ದಕ್ಷಿಣಕನ್ನಡಿಗರಿಗೆ ಪ್ರಕೃತದ ಮತ್ತು ಮುಂದಿನ ಮಳೆ ದಿವಸಗಳು ಕಷ್ಟದವುಗಳಾಗಬಾರದು, ಅದಕ್ಕೆ ಇಲ್ಲಿಯ ಅಕ್ಕಿಯ ಮೇಲೆ ಕಂಟ್ರೋಲಿಡುವ ಅಥವಾ ಬೇರೆ ಕಡೆಗಳಿಂದ ಅಕ್ಕಿಯನ್ನು ಪೂರಯಿಸಿ ಕೊಡುವ ಯಾವುದಾದರೂ ಉಪಾಯವನ್ನು ಸರಕಾರವು ಮಾಡಬೇಕೆಂದು ಇಲ್ಲಿಯ ಜಿಲ್ಲಾ ಸಂಘವು ಸರಕಾರದ ಬಳಿಗೆ ಒಂದು ವಿಜ್ಞಾಪನೆಯನ್ನು ಮಾಡಿಕೊಂಡಿದೆ ಎಂದು ಕೇಳುತ್ತೇವೆ. ಸರಕಾರದ ಕಡೆಯಿಂದ ಇದಕ್ಕೆ ಯಾವ ಉತ್ತರ ಬಂದಿದೆ ಎಂಬುದು ಗೊತ್ತಾಗಿಲ್ಲ. ಇದು ಬಡಬಗ್ಗರ ಹೊಟ್ಟೆಯ ಪ್ರಶ್ನೆಯಾದ್ದರಿಂದ ಈ ಕಡೆಗೆ ಸರಕಾರವು ಸಹಾನುಭೂತಿಯಿಂದ ನೋಡುವುದು ಆವಶ್ಯಕವು.

ಈ ಸಂದರ್ಭದಲ್ಲಿ ಸರಕಾರವು ದಕ್ಷಿಣ ಕನ್ನಡ ಜಿಲ್ಲೆಗೆ ಯಾವ ತರದ ಮದತನ್ನು ಕೊಡಬೇಕೆಂಬುದರ ಬಗ್ಗೆ ನಾವು ಹೊಸ [illegible]

[illegible] ಪ್ರಕಟನೆಯೊಳಗಿನ ಈ ವಾಕ್ಯವನ್ನು ವಾಚಕರ ಮುಂದಿಡೋಣ: "ಮದ್ರಾಸು ಸಂಸ್ಥಾನದಲ್ಲಿರುವ ಧಾರಣೆಗಿಂತಲೂ ಕೃಷ್ಣಾ ಜಿಲ್ಲೆಯ ಧಾರಣೆಯು ಕೆಳಗಿದೆ. ಮದ್ರಾಸ ಸಂಸ್ಥಾನದ [illegible] ಹೋಲಿಸಿ ನೋಡಿದರೆ [illegible] ನಮ್ಮ ಸಂಸ್ಥಾನದ ಧಾರಣೆಯು ಕಡಿಮೆ ಇದೆ. ಹಾಗು ಮುಂಬಯಿ ಧಾರಣೆಯು ಹಿಂದುಸ್ಥಾನದ ಹೊರಗೆ ಇರುವ ಧಾರಣೆಗಿಂತಲೂ ಕಡಿಮೆ ಇದೆ" ಎಂದು ಪ್ರಕಟನಾ ಪತ್ರಕದಲ್ಲಿ ವಿಶದವಾಗಿ ಬರೆದಿದೆ. ಕೃಷ್ಣಾ ಜಿಲ್ಲೆಯಲ್ಲಿ ಧಾರಣೆ ಕಡಿಮೆ ಇರಲು ಅಲ್ಲಿಯ ಪ್ರತಿಬಂಧವೆ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಅದೇ ಉಪಾಯವನ್ನು ಇಲ್ಲಿಯೂ ಅವಲಂಬಿಸಿದರೆ ಈ ಜಿಲ್ಲೆಯವರ ಮೇಲೆ ಸರಕಾರವು ಒಂದು ದೊಡ್ಡ ಉಪಕಾರ ಮಾಡಿದಂತಾಗುತ್ತಿತ್ತು. ಸರಕಾರವು ಈ ಸೂಚನೆಯನ್ನು ಗಮನಕ್ಕೆ ತಂದೀತೆಂದು ಕೋರುತ್ತೇವೆ.

ಸ್ಫುಟ ವಿಚಾರಗಳು.

೧. ಇನ್ನೊಂದು ಕಡೆಯಲ್ಲಿ ರಾಜಕುವರಾರ ಕೊಲಿಜಿನ ವಿಷಯದಲ್ಲಿ ಮದ್ರಾಸಿನಲ್ಲಿ ಜರಗಿದ ಸಮ್ಮೇಲನದ ವೃತ್ತಾಂತವನ್ನು ವಾಚಕರು ಓದಬಹುದು. 'ನ್ಯೂ ಎಂಗಟನ್ ಇನ್ಸ್‌ಟಿಟ್ಯೂಟ'ದಲ್ಲಿ ಆದ ಕೊಲೆಯ ವೃತ್ತಾಂತವನ್ನು ನಾವು ಹಿಂದೆ ಕೊಟ್ಟಿರುವೆವು. ಈ ಕೊಲೆಯ ಸಮಾಚಾರವು ಇನ್ನೂ ವಿಚಾರದಲ್ಲಿ ಬಾಕಿ ಇರುವುದರಿಂದ ಅದರ ಪಕ್ಷ ಪರಪಕ್ಷವನ್ನು ಈಗ ನಾವು ಚರ್ಚಿಸಲಾರೆವು. ಇಷ್ಟೆ ಹೇಳಿದರೆ ಸಾಕು. ಜಮೀನುದಾರರ ಈ ಸಮ್ಮೇಲನದಲ್ಲಿ ಮಾಡಿದ ಠರಾವು ಸಮಂಜಸವಾಗಿಯೇ ಇದೆ. ಜಮೀನುದಾರರ ಮಕ್ಕಳು ಇತರ ಯೋಗ್ಯಸಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದುವುದರಿಂದ ಅವರ ಗೌರವಕ್ಕೇನು ಕುಂದುಕ ಬರಲಾರದು. ಅದಕ್ಕೆ ಬದಲಾಗಿ ತಮ್ಮ ಮಹತ್ತಾದ ಆಸ್ತಿಪಾಸ್ತಿಗಳ ವಿಚಾರದ ಭಾರವು ಅವರ ಹೆಗಲ ಮೇಲೆ ಬಂದಾಗ ಅಗತ್ಯವಾಗಿ ಬೇಕಾದ ವ್ಯಕ್ತಿಪರ ತಿಳವಳಿಕೆಯು ಜನಸಾಮಾನ್ಯರೊಂದಿಗೆ ಬೆರತುಕೊಳ್ಳುವುದರಿಂದ ಮಾತ್ರವೇ ಆದೀತಲ್ಲದೆ ಅವರು ಅನ್ಯ ಜನಾಂಗದವರೋ ಎಂಬಂತೆ ಅವರನ್ನು ಬೇರೆಯಾಗಿರಿಸಿ ಅವರಿಗೋಸ್ಕರವೇ ಒಂದು ವಿದ್ಯಾಲಯವನ್ನು ಏರ್ಪಡಿಸುವುದು ಅಷ್ಟೊಂದು ಹಿತಕಾರಿಯಲ್ಲ. ಅವರೂ ಇತರರಂತೆ ಭಾರತಪುತ್ರರೆಂಬ ಭಾವನೆಯು ಅವರಲ್ಲಿ ಹುಟ್ಟಬೇಕಾದರೆ ಅವರು ಇತರರೊಡನೆ ಬಾಲ್ಯದಿಂದಲೆ ಬೆರತುಕೊಳ್ಳಬೇಕು. ಅದರೆ ದುರ್ವರ್ತನಕ್ಕೆ ಇಳಿಯದಂತೆ—ಹೇರಳ ದ್ರವ್ಯವು ಇದ್ದು ವಿದ್ಯೆಯಿಂದ ಹುಟ್ಟುವ ಸೌಜನ್ಯವು ಇಲ್ಲದಿದ್ದರೆ ಶ್ರೀಮಂತರಿಗೆ ದುಶ್ಚಾಳಿ ಬೇಗನೆ ಹಿಡಿಯುತ್ತದೆ-ಇವರಿಗೆ ತಕ್ಕ ಮೇಲ್ವಿಚಾರದಲ್ಲಿ ಇರಗೊಡಿಸುವುದಕ್ಕೂ ಅವರ ಪದವಿಗೆ ಸರಿಯಾದ ರೀತಿಯಲ್ಲಿ ಅವರ ಆರೈಕೆ ನೋಡಲಿಕ್ಕೂ ಅವರಿಗೋಸ್ಕರ ಪ್ರತ್ಯೇಕ ಹೊಸ್ಟೆಲನ್ನು ನಿರ್ಮಾಣ ಮಾಡುವುದರಿಂದ ಯಾರೂ ಆಕ್ಷೇಪಿಸಲಾರರು. ಕಲವೇ ಕೆಲವು ಮಂದಿ ಜಮೀನುದಾರ ತರುಣರಿಗೋಸ್ಕರ ದೊಡ್ಡದೊಂದು ಕೊಲೆಜನ್ನು ಏರ್ಪಡಿಸಿ ಅದರಿಂದ ಹೇರಳ ಹಣವನ್ನು ಸರಕಾರವು ವೆಚ್ಚಮಾಡುವುದೆಂದರೆ ಇತರ ಜನಗಳಿಗೆ ಅನ್ಯಾಯವಾದೀತು. ಇದರಲ್ಲಿ ಸರಕಾರದವರಾದರೂ ಒಂದು ಮಾತನ್ನು ಸ್ಮರಣೆಯಲ್ಲಿಡಬೇಕಾಗಿದೆ. ಈ ಜಮೀನುದಾರರ ಕಂದಾಯವು ಮೊದಲೇ ಹಲವು ವರ್ಷಗಳ ಹಿಂದೆ ಅಂದರೆ ಬ್ರಿಟಿಷ್ ಆಡಳಿತೆಯ ಆರಂಭದಲ್ಲಿ ಮಿತಿಕಟ್ಟಿಹೋಗಿದೆ. ಇನ್ನು ಅದನ್ನು ಏರಿಸಲು ಸಾಧ್ಯವಿಲ್ಲ. ಆದರೆ ರೈತವಾರಿ ಜನಗಳ ಕಂದಾಯವು ನಿಯಮಿತ ಕಾಲಕ್ಕೊಮ್ಮೆ ಏರುತ್ತಲೆ ಇದೆ. ತಮಗೋಸ್ಕರ ಬೇಕಾಗುವ ಕೊಲೆಜನ್ನೂ ಇನ್ನಾವ ಸಂಸ್ಥೆಯನ್ನೂ ಸರಕಾರದ ಸಹಾಯವಿಲ್ಲದೆನೇ ಏರ್ಪಡಿಸುವುದು ಈ ಜಮೀನುದಾರರಿಗೆ ಕಷ್ಟಸಾಧ್ಯವಲ್ಲ. ಆದರೆ ಅದೇ ಅನುಕೂಲತೆಯು ಇತರ ಕೃಷಿತಾಪಿ ಜನಗಳಿಗೆ ಇಲ್ಲ. ಆದ್ದರಿಂದ ಈ ಸಹಾಯಶೂನ್ಯರ ಸಲಹೆಗಳನ್ನು ಸಂಪಾದಿಸಿ ಕೊಟ್ಟನಂತರ ಜಮೀನುದಾರರಿಗೆ ವಿಶೇಷ ಸಲಹೆಗಳನ್ನು ಕೊಡುವ ವಿಚಾರವನ್ನು ಸರಕಾರವು ಮಾಡಬಹುದು.

೨. ನೇಕ್ ನಾಮದಾರರಾದ ಲೋರ್ಡ್ ಸಿಂಹರು ಇಂಗ್ಲಂಡಿನಿಂದ ಸ್ವದೇಶಕ್ಕೆ ಬಂದಿರುವರು. ಇವರು ಮುಂಬಯಿಯ ಬಂದರಕ್ಕೆ ಇಳಿದ ಮೇಲೆ ಮುಂಬಯಿಯ ಗವರ್ನರ ದೊರೆಗಳ ಪರವಾಗಿಯೂ ಅವರ ಸ್ನೇಹಿತ ಮಂಡಳಿಯ ಪರವಾಗಿಯೂ ಅವರ ಸ್ವಾಗತವು ಮಾಡಲ್ಪಟ್ಟಿತು. ಲೋರ್ಡ ಸಿಂಹರು ಎರಡು ದಿವಸ ಮುಂಬಯಿಯಲ್ಲಿರುವಾಗ ಅಲ್ಲಿಯ 'ಸ್ಟೂಡೆಂಟ್ಸ್ ಬ್ರದರ್‌ಹುಡ್' 'ಲಿಬರಲ್ ಎಸೋಸಿಯೇಷನ್' ಮುಂತಾದ ಸಂಸ್ಥೆಗಳ ಮಾನಪತ್ರಗಳನ್ನು ಸ್ವೀಕರಿಸಿದರು. ಮಾನಪತ್ರಗಳಿಗೆ ಪ್ರತ್ಯುತ್ತರವನ್ನು ಕೊಡುವಾಗ ಅವರು ತಮ್ಮ ವಿಚಾರಗಳನ್ನು ಪ್ರದರ್ಶಿಸಿದ್ದಲ್ಲದೆ, ಪತ್ರಿಕೆಗಳ ಬಾತಮೀದಾರನೊಡನೆಯೂ ಅವರು ಕೆಲವು ಸಂಗತಿಗಳನ್ನು [illegible] ಸಿಂಹರು, ಮುಖ್ಯ [illegible]

[illegible] ವುದು ಒಳ್ಳೇದು. ಇಂಥ ಕೆಲಸಗಳಲ್ಲಿ ತರಬೇತನ್ನು ಕೊಡುವ ವಿಷಯವು ಒಂದು ಉದಾಹರಣವನ್ನು ತಕ್ಕೊಂಡು ಆಲೋಚಿಸಿದರೆ ಸ್ಪಷ್ಟವಾಗುವ ಹಾಗಿದೆ. ಸ್ಥಾನಿಕ ಸ್ವರಾಜ್ಯ, ಶಿಕ್ಷಣ, ಆರೋಗ್ಯ ಈ ಮೂರು ಮಹತ್ವದ ಖಾತೆಗಳು ಜನತೆಯ ಕೈಗೆ ಒಪ್ಪಿಸಲ್ಪಡುತ್ತವೆಂದು ನೆನೆಸೋಣ. ಈ ಮೂರು ಇಲಾಖೆಗಳಲ್ಲಿ ತರಬೇತನ್ನು ಹೊಂದಲು ತಮ್ಮ ಶಕ್ತಿಸರ್ವಸ್ವವನ್ನೂ ಕೂಡ ವೆಚ್ಚಮಾಡುವ ಹಾಗಿದೆ. ನ್ಯಾಯಾಧಿಕಾರ ಹಾಗು ದಂಡಾಧಿಕಾರ ಈ ಹೊಸ ಖಾತೆಗಳನ್ನು ಕೂಡಲೆ ಪ್ರಜೆಗಳ ಕೈಗೊಪ್ಪಿಸಬೇಕೆಂದು ಚಳವಳ ಎಬ್ಬಿಸುವುದಕ್ಕಿಂತ ಸ್ಥಾನಿಕ ಸ್ವರಾಜ್ಯ, ಶಿಕ್ಷಣ ಮುಂತಾದ ಕೈಗೆ ಬಂದ ಇಲಾಖೆಗಳ ಅನುಭವವನ್ನು ಹೇಗೆ ಮಾಡಿಕೊಳ್ಳಬಹುದು, ಈ ಇಲಾಖೆಗಳು ಜನತೆಯ ನಿಜವಾದ ಹಿತಕ್ಕೆ ಕಾರಣವಾಗಬೇಕಾದರೆ ಅವುಗಳನ್ನು ಕುರಿತು ಈಗಿನಿಂದಲೆ ಯಾವ ಧೋರಣವನ್ನಿಟ್ಟುಕೊಳ್ಳಬೇಕು ಇತ್ಯಾದಿ ಎಷ್ಟೋ ಸಂಗತಿಗಳ ಸಾಧನದಲ್ಲಿ ಯತ್ನಿಸುವುದು ಜಾಣತನವಲ್ಲವೆ? ಬರುವ ವರುಷದಲ್ಲೇ ನಮಗೆ ಈ ಅಧಿಕಾರಗಳು ಸಿಗುವವು. ಆದರೆ ಅವುಗಳನ್ನು ನಡಿಸಲಿಕ್ಕೆ ನಾವು ಪಾತ್ರರಿದ್ದೇವೊ? ಇಲ್ಲ, ಹೀಗಿರಲು 'ಇದ್ದ ಮಕ್ಕಳಿಗೆ ಗತಿ ಇಲ್ಲ, ಇನ್ನು ಕೊಡು ಸದಾಶಿವ" ಎಂಬ ಮಾತಿನಂತೆ ಕೈಗೆ ಬಂದ ಖಾತೆಗಳನ್ನು ನಡಿಸುವ ಸರಿಯಾದ ಅನುಭವ, ಪಾತ್ರತೆ, ಇತ್ಯಾದಿ ಇಲ್ಲದೆ ಇರುವಾಗ ನ್ಯಾಯ ಮತ್ತು ಅಮಲಬಜಾವಣೆಯ ಇಲಾಖೆಗಳ ಸಂಪಾದನೆಗಾಗಿ ಚಳವಳನ್ನು ಮಾಡಲು ಸಂಕಲ್ಪಿಸುವುದು ಸಮಯದ ಮತ್ತು ಸಾಮರ್ಥ್ಯದ ದುರುಪಯೋಗವಲ್ಲವೆ?" ಸುಧಾರಣೆಗಳ ಕಾನೂನಿನ ವಿಷಯದಲ್ಲಿ ಇಷ್ಟು ಸಂಗತಿಗಳನ್ನು ಹೇಳಿ ಲೋರ್ಡ ಚೆಮ್ಸ್‌ಫರ್ಡ ದೊರೆಗಳ ಮೇಲೆ ಸಹಾನುಭೂತಿ ಶೂನ್ಯತೆಯ ಆರೋಪಣೆಯನ್ನಿಟ್ಟು ಅವರನ್ನು ಹಿಂದಕ್ಕೆ ಕರೆಯಿಸಬೇಕೆಂದು ಅಭಿಪ್ರಾಯಪಟ್ಟದ್ದು ಉಚಿತವಲ್ಲವೆಂದು ಲೋರ್ಡ ಸಿಂಹರು ಹೇಳಿದರು. ವೈಸರಾಯರು ಮೊ. ಚೆ. ಯೋಜನೆಯನ್ನು ತಯಾರಿಸುವುದರಲ್ಲಾಗಲಿ ಅಥವಾ ಅನಂತರ ಹಿಂದುಸ್ಥಾನ ಸರಕಾರದ ಕಡೆಯಿಂದ ಕಳುಹಿಸಲ್ಪಟ್ಟ ಪತ್ರಕದಲ್ಲಾಗಲಿ ಹಿಂದೀ ಸುಧಾರಣೆಗಳ ಕಾಲನ್ನು ಹಿಂದಕ್ಕೆ ಎಳೆಯಲಿಲ್ಲ, ಆದ್ದರಿಂದ ಮಿ. ಮೊಂಟಗ್ಯುಗಳು ಹೇಗೆ ನಮ್ಮ ದೇಶದ ಕೃತಜ್ಞತೆಗೆ ಪಾತ್ರರಾಗಿರುವರೊ ಹಾಗೆಯೆ ಚೆಮ್ಸ್‌ಫರ್ಡರು ಸಹ ಪಾತ್ರರಾಗಿದ್ದಾರೆ ಎಂಬ ಮುಖ್ಯಾಭಿಪ್ರಾಯಗಳನ್ನು ಸಿಂಹರು ಹಿಂದುಸ್ಥಾನದ ಜನರಿಗೆ ತಿಳಿಸಿರುವರು.

೩. ಲೊ. ಸಿಂಹರು ಬಂದ ಬೋಟಿನಿಂದಲೆ ನಾಮ. ವಿ. ಜೇ. ಪಟೇಲ, ನಾಮ. ಗಣೇಶ ಶ್ರೀಕೃಷ್ಣ ಖಾಪರ್ಡೇ ಹಾಗೂ ಡೊ. ಸಾಠೇ ಈ ಮೂವರು—ಕೊಂಗ್ರೆಸ್ ಡಪ್ಯುಟೇಷನಿನ ಪ್ರತಿನಿಧಿಗಳು ಮುಂಬಯಿಗೆ ಬಂದಿಳಿದರು. ಈ ಮಹಾನುಭಾವರಿಗೂ ಕೂಡ ಮುಂಬಯಿಕರರು ಸ್ವಾಗತವನ್ನು ಕೊಟ್ಟರು. ಮುಂಬಯಿಯ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಪರವಾಗಿಯೂ ಇತರ ಸಾರ್ವಜನಿಕ ಸಂಸ್ಥೆಗಳ ಪರವಾಗಿಯೂ ಮೇಲಿನ ತ್ರಿಮೂರ್ತಿಗಳನ್ನು ಸತ್ಕರಿಸಲು ಸೇರಿದ ಪ್ರಚಂಡ ಸಭೆಯಲ್ಲಿ ನಾಮ. ಪಟೇಲರು ಸುಧಾರಣಾ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಗುವ ಸಂದರ್ಭದಲ್ಲಿ ಯಾವ ಯಾವ ತೊಂದರೆಗಳು ಹೇಗೆ ಹೇಗೆ ಬಂದವು ಎಂಬುದನ್ನು ವಿಸ್ತಾರದಿಂದ ಪ್ರಸ್ತಾಪಿಸಿದರು. ಲೇಬರ ಪಾರ್ಟಿಯವರು ರಾಷ್ಟ್ರೀಯ ಸಭೆಯ ಕೇಳಿಕೆಗಳಿಗನುಸಾರವಾಗಿ ಅನೇಕ ಉಪಸೂಚನೆಗಳನ್ನು ಹೇಗೆ ತಂದರು ಮತ್ತು ಈ ಸಂದರ್ಭದಲ್ಲಿ ಈ ಉಪಸೂಚನೆಗಳನ್ನು ಕಡಿದು ಹಾಕಲು ಮೋಹಿನೀ ವಿದ್ಯೆಯು ತನ್ನ ಪ್ರಭಾವವನ್ನು ತೋರಿಸದೆ ಇರುವ ಉಪಕಾರವನ್ನು ಮಾಡಿದ್ದರೆ ಅವು ಪಾಸಾಗುವ ಸಂಭವವು ಹೇಗೆ ಇತ್ತು, ಇನ್ನಾದರೂ ಅಲ್ಲಿಯ ಲೇಬರಪಾರ್ಟಿಯು ಹಿಂದೀ ರಾಷ್ಟ್ರದ ಸ್ವರಾಜ್ಯವನ್ನು ಕುರಿತು ಹೇಗೆ ಸಂಪೂರ್ಣ ಸಹಾನುಭೂತಿಯನ್ನಿದೆ ಎಂಬುದನ್ನು ನಾಮದಾರ ಪಟೇಲರು ಶ್ರೋತೃವರ್ಗಕ್ಕೆ ತಿಳಿಸಿಕೊಟ್ಟರು. ಅಲ್ಲದೆ, ಹಿಂದುಸ್ಥಾನವು ಇನ್ನು ಮುಂದಿನ ಹಕ್ಕುಗಳನ್ನು ಸಂಪಾದಿಸುವುದಕ್ಕಾಗಿ, ಸಾಮ್ರಾಜ್ಯದೊಳಗಿನ ಇತರ ಪ್ರದೇಶಗಳಿಗಿರುವಂತೆ ಹಿಂದುಸ್ಥಾನಕ್ಕೂ ಸರಿಯಾದ ನಾಗರಿಕತನದ ಹಕ್ಕು ಸಿಗುವಂತೆ ಯತ್ನಿಸುವುದಕ್ಕಾಗಿ ಲೇಬರಪಾರ್ಟಿಯು ಅತ್ಯಾಗ್ರಹದಿಂದ ಹಿಂದಿಗಳಿಗೆ ಸೂಚಿಸಿದೆ ಎಂದು ಅವರು ಲೇಬರಪಾರ್ಟಿಯ ಸಂದೇಶವನ್ನು ವಿಶ್ರುತಪಡಿಸಿದರು. "ಅಧಿಕ ಹಕ್ಕುಗಳನ್ನು ಸಂಪಾದಿಸಲು ಹಿಂದುಸ್ಥಾನದಲ್ಲಿ ಹ್ಯಾಗೆ ಚಳವಳವು ಅಗತ್ಯವೊ ಹಾಗೆಯೆ ಸ್ವತಃ ಇಂಗ್ಲಂಡಿನಲ್ಲೂ ಅಮೇರಿಕದಲ್ಲೂ ಚಳವಳವು ಅತೀ ಅಗತ್ಯವಾಗಿದೆ. ಇಂಥ ಅವಿರತ ಚಳವಳವು ಮಾತೃಭೂಮಿಯ ಸೇವೆಗೂ ಉದ್ಧಾರಕ್ಕೂ ಅವಶ್ಯಕವಾಗಿದೆಂಬ ನಿಶ್ಚಯದಿಂದ ನಾನು ವಿಲಾಯತಿಯಿಂದ ಹಿಂತಿರುಗಿದ್ದೇನೆ." ಎಂದು ನಾಮ. ಪಟೇಲರು ಹೇಳಿದರು.

ನಾವು. ಪಟೇಲರ ಮತ್ತು ರಾಷ್ಟ್ರೀಯ ಸಭೆಯ ಅಭಿಪ್ರಾಯವನ್ನು ಸರಿಯಾಗಿ ಹೇಳುವುದಾದರೆ ಈ ರೀತಿ ವಿವರಿಸಬಹುದು. ಧ್ರುವ ಪದವು ಪ್ರಾಪ್ತವಾಗಬೇಕೆಂಬ ಧ್ಯೇಯದಿಂದ ತಪಸ್ಸು ಮಾಡುವ ಧ್ರುವನಿಗೆ ಆ ಪದವು ದೊರಕುವ ವರೆಗೆ ವಿಶ್ರಾಂತಿಯು ಇರುವುದಿಲ್ಲ. ಸ್ವರ್ಗವು ಸಿಗಲಿ, ವೈಕುಂಠ ಲೋಕವು ಪ್ರಾಪ್ತವಾಗಲಿ, ಸತ್ಯಲೋಕದ ಆನಂದವು ಲಭಿಸಲಿ ಆದರೂ ಧ್ರುವನಿಗೆ ಧ್ರುವಪದವೇ ಧ್ಯೇಯವಾದ್ದರಿಂದ ಅವನು ಆ ಧ್ಯೇಯದ ಕಡೆಗನೇ ಹೋಗುವನು. ಸಾಯುಜ್ಯ ಮುಕ್ತಿಯನ್ನು ಅಪೇಕ್ಷಿಸುವ ಮುಮುಕ್ಷುವಿಗೆ ಸಾಲೋಕ್ಯ ಸಾಮೀಪ್ಯಗಳೆಂತಿರಲಿ, ಸಾರೂಪ್ಯದಿಂದ ಕೂಡ ತೃಪ್ತಿಯಾಗುವುದಿಲ್ಲ. ಎಂದರೆ ಈ ಮಾತಿನ ಎಲ್ಲ ಅರ್ಥವು "ನನಿಶ್ಚಿತಾರ್ಥಾದ್ವಿರಮಂತಿಧೀರಾಃ" ಎಂದು ನಮ್ಮ ಪತ್ರಿಕೆಗೆ ಆದರ್ಶವಾಗಿಟ್ಟುಕೊಂಡ ಸೂಕ್ತಿಯಲ್ಲಿ ಹೇಳಿದ್ದ ಆಗಿದೆ. ಎಂದ ಮೇಲೆ ಹಿಂದಿಗಳ ಪ್ರಯತ್ನದಿಂದಾಗಲಿ, ಮಿ. ಮೊಂಟೆಗ್ಯೂ, ಲಾರ್ಡ ಚೆಮ್ಸಫರ್ಡ ಹಾಗು ಇತರ ಮಹನೀಯರ ಉದಾರ ಅಂತಃಕರಣದಿಂದಾಗಲಿ ಇಲ್ಲವೆ ಜಗತ್ತಿನಲ್ಲಿ ಲೋಕಸತ್ತೆಯನ್ನು ಪ್ರಸವಿಸುವ ಈ ಕಾಲದ ಮಹಾತ್ಮ್ಯದಿಂದಾಗಲಿ ಹಿಂದಿಗಳಿಗೆ ಈಗ ಯಾವ ಸುಧಾರಣೆಗಳು ದೊರಕಿವೆಯೊ ಅವುಗಳನ್ನು ಬಿಟ್ಟುಬಿಡಬೇಕೆಂದು ಹೇಗೆ ಅರ್ಥವಾಗುತ್ತದೆ? ಅಥವಾ ಅವುಗಳನ್ನು ಹೊಂದಿದ ಮೇಲೆ ವರ್ಷಾಕಾಲದಲ್ಲಿ ಹೊರಗೆ ಅಜಸ್ರವಾದ ವೃಷ್ಟಿ ಧಾರೆಗಳು ಬೀಳುವಾಗ ಕೆಲವು ಸೋಮಾರಿಗಳು ತಮ್ಮ ಕೈಕಾಲುಗಳನ್ನು ಬೆಚ್ಚಗಾದ ಕಂಬಳಿಯಲ್ಲಿ ಹಾಕಿಕೊಂಡು ಹೇಗೆ ಮಲಗುವರೊ ಹಾಗ್ಯೆ ಈ ಹಕ್ಕುಗಳ ಮಳೆಯು ಬೀಳುವಾಗ ಸುಮ್ಮನೆ ಬಿದ್ದುಕೊಳ್ಳಬೇಕೆಂದು ಅರ್ಥವಾಗಬಹುದೆ? ವರ್ಷಾಸಮಯದಲ್ಲಿ ಸೋಮಾರಿಯು ಮಲಗಿಕೊಂಡರೂ ಒಕ್ಕಲಿಗನು ಆ ಮಳೆನೀರಿನ ಸಂಪೂರ್ಣ ಪ್ರಯೋಜನವನ್ನು ಪಡೆಕೊಳ್ಳಲು ಸಾಧ್ಯವಿದ್ದಷ್ಟು ಒದ್ದಾಡುವನಲ್ಲದೆ ಭವಿಷ್ಯ ದೃಷ್ಟಿಯನ್ನಿಟ್ಟುಕೊಂಡು ಬೇಸಿಗೆಕಾಲದ ಸಂಪೂರ್ಣ ಸುಖದ ಸಾಧನವನ್ನು ತಯಾರಿಸುವನು. ಇದು ಲೋಕ ವ್ಯವಹಾರವು. ಇದು ಸ್ವಹಿತದ ಕೆಲಸವು. ಇದನ್ನು ಯಾರು ಯಾರಿಗೂ ಹೇಳಬೇಕಾದ ಅಥವಾ ಉಪದೇಶಿಸಬೇಕಾದ ಅಗತ್ಯವಿಲ್ಲ. ಮನಸ್ಸಿಗೆ ಇನ್ನಾವುದರ ಪುಟ ಕೊಡದೆ ಪರಿಸ್ಥಿತಿಯನ್ನು ನೋಡಹತ್ತಿದರೆ ಆ ಸ್ವಚ್ಛ ಮನಸ್ಸಿನ ಮುಂದೆ ಲೋಕ ವ್ಯವಹಾರದ ನಿರ್ಮಲ ದೇಖಾವೆಯು ಕಾಣಿಸುತ್ತದೆ. ಮತ್ತು ಇದೇ ದೇಖಾವೆಯನ್ನು ನಾಮ. ಪಟೇಲರು ತಮ್ಮ ಮುಂಬಯಿಯ ಭಾಷಣದಲ್ಲಿ ಜನರ ಮುಂದಿಟ್ಟಿದ್ದಾರೆ.

೪. ಸ್ವದೇಶದಲ್ಲೇ ನಿಂತು ತನ್ನ ಉದ್ಯೋಗಶೀಲತೆ ಪೌರುಷ ಮುಂತಾದನ್ನು ಕೆಡಿಸಿಕೊಳ್ಳುವುದಕ್ಕಿಂತ ಪರದೇಶದಲ್ಲಿ ಹೋಗಿ ಉದ್ಯೋಗ ವ್ಯಾಪಾರ ಮುಂತಾದನ್ನು ಮಾಡುವುದು ಗಂಡಸುತನವೆಂದು ಸಾಹಸ ಪ್ರಿಯರು ಉಪದೇಶಿಸುವುದುಂಟು. ಆದರೆ ಹಿಂದಿಗಳಿಗೆ ಈ ತತ್ವವನ್ನು ಅನುಸರಿಸುವುದು ಈಗಿನ ಲೋಕಸ್ಥಿತಿಯಲ್ಲಿ ತುಂಬಾ ಕಷ್ಟವೆಂದು ಹೇಳಬೇಕಾಗುತ್ತದೆ. ಆಫ್ರಿಕದಲ್ಲಿ ಹೋಗಿರುವ ಹಿಂದಿಗಳ ವಿಷಯವಾಗಿ ದಿನೇ ದಿನೇ ಬರುವ ವರ್ತಮಾನಗಳನ್ನು ನೋಡುವಾಗ ಅಲ್ಲಿ ಹಿಂದಿ ಬಾಂಧವರಿಗೆ ಯುರೋಪಿಯನರಿಂದ ಅನೇಕ ನಿರ್ಬಂಧನಗಳನ್ನೂ ಕಷ್ಟಗಳನ್ನೂ ಸಹಿಸುವ ಪ್ರಸಂಗವು ಒದಗುತ್ತದೆಂದು ತೋರುತ್ತದೆ. ಕೆಲವು ದಿವಸಗಳ ಹಿಂದೆ ಟ್ರಾನ್ಸ್ವಾಲಿನಲ್ಲಿ ಒಂದು ಕಾನೂನನ್ನು ಪಾಸುಮಾಡಿ ಹಿಂದಿಗಳಿಗೆ ಇನ್ನುಮುಂದೆ ಅಲ್ಲಿ ಸ್ಥಿರ ಆಸ್ತಿಗಳನ್ನು ಮಾಡುವ ಹಕ್ಕಿಲ್ಲವೆಂದು ವಿಧಿಸಲಾಯಿತು. ಈ ಸಂದರ್ಭದಲ್ಲಿ ಮೊದಲಿನಿಂದಲೇ ಜಮೀನುದಾರರಾಗಿರುವವರಿಗೆ ಈ ಕಾಲು ಲಗಾವಾಗಲಿಕ್ಕಿಲ್ಲವೆಂದು ಸ್ಪಷ್ಟ ಹೇಳಲಾಗಿತ್ತು. ಆದರೆ ಈಚೆಗೆ ಬಂದ ವರ್ತಮಾನವನ್ನು ನೋಡುವಾಗ ಮೊದಲಿನ ಆಶ್ವಾಸನವು ಕೇವಲ ಸಮಯವನ್ನು ದೂಡಿಕೊಂಡು ಹೋಗುವುದಕ್ಕೇನೆ ಇತ್ತೆಂದು ಹೇಳಬೇಕಾಗುತ್ತದೆ. ಟ್ರಾನ್ಸ್ವಾಲಿನ ಕೋರ್ಟು ಈಚೆಗೆ ಒಂದು ದಾವೆಯಲ್ಲಿ ಆಸ್ತಿಯ ಹಸ್ತಾಂತರವನ್ನು ರದ್ದುಮಾಡಿದೆ. ಈ ಆಸ್ತಿಯು ಒಂದು ಹಳೇ [illegible] ಕಂಪೆನಿಯದು. ಅದರ ಆಸ್ತಿಗೆ ಮೊದಲಿನ ಆಶ್ವಾಸನದ ಪ್ರಕಾರ ಈ ಹುಕುಮು ಅನ್ವಿತವಾಗುವುದಿಲ್ಲ. ಪರಂತು ಇಲ್ಲಿ ತಿಳಕೊಳ್ಳಬೇಕಾದ ತಾತ್ಪರ್ಯವೇನೆಂದರೆ ಮೊದಲಿನದು ಆಶ್ವಾಸನ ಮತ್ತು ಈಗಿನದು ಹುಕುಮು! ಇದಕ್ಕಿಂತ ಬೇರೆ ವಿಧದಿಂದ ಇವುಗಳನ್ನು ಪ್ರತ್ಯೇಕಿಸಿ ತೋರಿಸಬೇಕಾದ ಅಗತ್ಯವಿಲ್ಲ. ಇರಲಿ; ತನ್ನ ಎಲ್ಲ ಅವಯವಗಳನ್ನು ಒಂದೇ ಪ್ರಕಾರವಾಗಿ ಪ್ರೀತಿಸಬೇಕಾದ ಸಾಮ್ರಾಜ್ಯ ಸರಕಾರವು ಹಿಂದಿಗಳಿಗೆ ವಸಾಹತುಗಳಲ್ಲಿ ಉಂಟಾಗುವ ಸಂಕಷ್ಟಗಳನ್ನು ಪರಿಹರಿಸುವುದರಲ್ಲಿ ಆಲಸ್ಯ ಅಥವಾ ಔದಾಸೀನ್ಯ ಮಾಡುವುದು ಅದರ ಸಮದೃಷ್ಟಿಯ ಅಭಿಮಾನಕ್ಕೆ ಕೇವಲ ಅನುಚಿತವಾಗಿದೆ.

ತಿರುಕುಳಿ.

ಶನಿವಾರ ಸೋಮವಾರಂಗಳನು ತಮ್ಮ ವರ |
ದಿನಗಳೆಂದೆಣಿಸಿ ಆ ದಿನಗಳಲಿ ಬಂದು ||
ಅನವರತ ಬಹುವಿಧದ ವೇಷಧಾರಿಗಳಾಗಿ |
ಧನಕೆಂದು ಬೇಡುವರು ಬಾಗಿಲಲಿ ನಿಂತು || ೧ ||

ವಾಮಕರದಲ್ಲಿ ತಂಬೂರಿಯನು ಹಿಡಿಯುತ್ತ |
"ಟೊಮುಟೊಮೆಂ"ಬ ಧ್ವನಿಗೈದು ದಾರಿಸುತ ||
ನೇಮದಿಂ ಪಾಡಿ "ಟಕ್ಕಿನ ಕೊಂಡದಾರೆ"ನುತ |
"ಹೇ! ಮಹಾಜನರೆ! ಭಿಕ್ಷೆಯನೀಡೆ"ನುವರು || ೨ ||

ಕಾಣಿಯೊಂದರಲಿ ಸುಣ್ಣಗಟ್ಟಿ ಮೆಟ್ಟುಂಡರಲಿ |
ವೇಣುವನು ಧರಿಸುತ್ತ "ಭೂಂಭೂಂ"ಎನುತಲಿ ||
"ದೀನನಲಿ ಕರುಣೆಯಿಡಿ ಧೊರೆಯಗಳೆ"ಎಂದೆನುತ |
ಮಾನವನು ತೊರೆದು ಬೇಡುವರಿಂತು ಕೆಲರು || ೩ ||

ಮಂಗಣ್ಣನನು ತಂದು ಅಂಗಳದೊಳಾಡಿಸುತ |
"ರಂಗಣ್ಣ! ಲಾಗ ಹಾಕೆಲೋ" ಎನುತೆಪಾಡಿ ||
"ಮಂಗರಣ್ಣನಿಗೆ ಕೊಡಿ ಹಣವೆ"ನುತ ಬೇಡಿ |
ನುಂಗುವರು ಮಂಗನಿಂ ಪಡೆದುದನು ಕೆಲರು || ೪ ||

ತಂದು ಗೂಳಿಗಳನ್ನು ಸಿಂಗರಿಸಿ ಬಹುವಿಧದಿ |
ಮುಂದುಗಡೆಯಲಿ ಢೋಲ "ಡುಮುಡುಮ್ಮೆ"ಬಡೆದು ||
"ಮುಂದಾಗಿ ರಾಮಪ್ಪ! ನಿನ್ನ ಯಜಮಾನರನು |
ವಂದಿಸೆ"ನ್ನುತೆ ಕುಣಿಸಿ ಕೆಲರು ಬೇಡುವರು || ೫ ||

ಹಾಲಕ್ಕಿಯಾಗುತ್ತೆ "ಕಟಕಟ್ಟ" ಎಂದಾಡಿ |
ಕಾಲಬಲ್ಲವರೆಂದು ಬಹಳ ಸಟೆಯಾಡಿ ||
ಹೇಳುತ್ತೆ "ಶುಭವಾಗುತ್ತೈತೆತ್ತೈತೆ"ನುತಿಂತು |
ಬಾಳೆಹಣವನು ಪಡೆವರತ್ತೆ ಸೊಗಸಾಗಿ || ೬ ||

ಬೂದಿಯನು ಬಳೆದು ಕೌಪೀನವನು ಧರಿಸುತ್ತೆ |
"ಮಾಧವಾ! ನಾರಾಯಣಾ"ನುತೆ ಸಟೆಜಪಿಸೀ ||
ಸಾಧುಗಳೆನಿಸಲೊಂದು ಬಟ್ಟಲನು ಹಿಡಿಯುತ್ತೆ |
ಬೇಡಿ ಹಣವನು ಪಡೆವರಿಂತಿನ್ನು ಕೆಲರು || ೭ ||

"ಕರಕಾಲು ಸರಿಯಿರಲು ತಿರಿಯುವುದು ನೀವೆಂತು |
ಸರಿಯಾಗದೆ"ನಲು, ನೆವಹೇಳುವರು,—"ಹಿಂತೆ ||
ನೆರೆದಿಪ್ಪ ಅಪ್ಪಂದಿರೆಲ್ಲ ಭಿಕ್ಷೆಯನಿತ್ತು |
ಹೊರಿಸಿದರು ಹೊಟ್ಟೆಯನು ಅನುಸರಿಪೆವದನು" || ೮ ||

ಕರಕಾಲು ಬಲಿದಿರಲು ಪಾಲುಮಾರಿಕೆಯಿಂದ |
ತಿರಿವಿಕೆಯ ವೃತ್ತಿಯೆಂದೆಸಗಿ ಯಾಚಿಸುವ ||
ತಿರುಕರಾಲಸ್ಯ ಬೆಳಸಲು ಸಂಚಕಾರವನು |
ಸುರಿವ ದಾನಿಯದಾವ ದೇಶಾಭಿಮಾನಿ? || ೯ ||

ಜಿ. ಯಸ್. ಲಕ್ಷ್ಮಣ ಪೈ.

ಮಂಗಳೂರು.

ಈ ತಿಂಗಳ ತಾರೀಕು ೨೭ನೇ ಮಂಗಳವಾರ ದಿನ ಮಂಜೇಶ್ವರ ಟ್ರಾವಲರ್ಸ್ ಬಂಗಲೆಯಲ್ಲಿ ಪುತ್ತೂರು ತಾಲೂಕು ಬೋರ್ಡು ಮೆಂಬರರ ಸಭೆಯು ಕೂಡುವುದು.

ಈ ದಿನ ರಾತ್ರೆ ೯ ಗಂಟೆಗೆ ಕೆನರಾ ಹೈ ಸ್ಕೂಲಿನಲ್ಲಿ 'ಮೌರ್ಯ ಸಿಂಹಾಸನ' ಎಂಬ ನಾಟಕವಾಡಲ್ಪಡುವುದು. ಇದರಿಂದ ಉತ್ಪನ್ನವಾದ ದ್ರವ್ಯವು ಶಾಲಾ ಕಟ್ಟಡಕ್ಕೆ ಉಪಯೋಗಿಸಲಾಗುವುದು.

ಕೋರ್ಟವಾರ್ಡ ಮುನ್ಸಿಪಲ್ ಕೌನ್ಸಿಲ ಮೆಂಬರಿಕೆಗೆ ಮಿ. ಮಿಖಾಯಿಲ್ ಆಲ್ವರಿಸ್ ಬಿ. ಎ ಎಲ್. ಎಲ್. ಬಿ. ವಕೀಲ, ಎ. ಪಿ. ಸೋಜ ಬಿ. ಎ. ಬಿ. ಎಲ್. ವಕೀಲ, ಮಿ. ಜೊಕಿಂ ಸಾಯಿಸ್ ಮತ್ತು ಪೆನಶ್ಯನ್ ಹೊಂದಿದ ಸಿವಿಲ್ ಎಪೊತ್‌ಕೆರಿ ಡಾಕ್ಟರರಾದ ಮಿ. ಕುಲಾಸರವರು ಉಮೇದ್ವಾರರಾಗಿ ನಿಂತಿರುವರು.

ಈ ದಿನ ಸಾಯಂಕಾಲ ಗೌಡಸಾರಸ್ವತ ಬ್ರಾಹ್ಮಣ ವೃಂದದ ಗುರುಗಳಾದ ಶ್ರೀ ಕಾಶಿ ಸಂಸ್ಥಾನದ ಶ್ರೀ ಸುಕೃತೀಂದ್ರ ತೀರ್ಥ ಪಾದಂಗಳವರು ಇಲ್ಲಿಗೆ ಚಿತ್ತೈಸುವರು.

ನಿನ್ನೆ ದಿನ ನಡೆದ ಇಂಟರ ಸ್ಕೂಲ ಜಿಮ್ನಾಸ್ಟಿಕ್ಸ್ ಪಂದ್ಯಾಟದಲ್ಲಿ ಗವರ್ನಮೆಂಟ ಕಾಲೇಜಿನವರು ಗೆದ್ದರು.

ಈ ತಿಂಗಳ ತಾ ೧೧ರಿಂದ ಮೂರು ಸೆಶ್ಯನ್ ಮೊಕದ್ದಮೆಗಳು ತನಖಿಯಾದವು. ಮೊದಲನೆಯದು ಬಂಟವಾಳ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟದ್ದಾಗಿತ್ತು. ಈ ಮೊಕದ್ದಮೆಯಲ್ಲಿ ಸೂಫಿಬ್ಯಾರಿ ವಗೈರೆ ಆರು ಮಂದಿ ಮಾಪಿಳ್ಳೆಯವರು ಐ. ಪಿ. ಸಿ. ಕೋಡಿನ ೩೯೫ನೇ ಸೆಕ್ಶನಿನ ಮೇರೆಗೆ ದಕಾಯಿತಿಯನ್ನು ನಡೆಸಿದರೆಂಬ ಆರೋಪಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಆದರೆ ಇದಕ್ಕೆ ಸಮ್ಬಂಧಪಟ್ಟ ಕೆಲವು ಪ್ರೊಸಿಕ್ಯೂಶನ್ ಸಾಕ್ಷಿಗಾರರಿಗೆ ನೋಟಿಸನ್ನು ಕೊಡದೇ ಇದ್ದು, ಅವರು ಕೋರ್ಟಿನ ಮುಂದೆ ಹಾಜರಿರದೆ ಇರುವುದರಿಂದ ಇದರ ತನಖಿಯು ಬರುವ ತಿಂಗಳಿಗೆ ಮುಂದರಿಸಲ್ಪಟ್ಟಿದೆ. ಎರಡನೇ ಮೊಕದ್ದಮೆಯು ಪುತ್ತೂರು ಸ್ಟೇಶನರಿ ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟುಮಾಡಲ್ಪಟ್ಟದ್ದಾಗಿತ್ತು. ಇದರಲ್ಲಿ ಮೈದಿನ್ ಕುಂಞ ವಗೈರೆ ನಾಲ್ವರು ಕಳೆದ ತಾ. ೨೩—೯—೧೯ರಲ್ಲಿ ಉಪ್ಪಿನಂಗಡಿ ತಾಲೂಕಿನ ಅವತಕೋಲು ಹಳ್ಳಿಯಲ್ಲಿ ದೂಮಣ್ಣ ಗೌಡರೆಂಬವರ ಮನೆಗೆ ಕನ್ನಹಾಕಿ ನಗಗಳು ಪಾತ್ರೆಗಳು ಮುಂತಾದ ಸೊತ್ತುಗಳನ್ನು ಕಳವುಮಾಡಿದರೆಂಬ ತಪ್ಪಿಗೆ ಗುರಿಮಾಡಲ್ಪಟ್ಟಿದ್ದರು. ತನಖಿಯಲ್ಲಿ ಜೂರಿಯವರು ಆರೋಪಿಗಳ ಮೇಲೆ ತಕ್ಕುದಾದ ರುಜುವಾತಿಲ್ಲವೆಂದು ನಿರ್ಣಯಿಸಿದರು. ಜಡ್ಜರು ಇದನ್ನು ಒಪ್ಪಿ ಮೇಲಿನ ಆರೋಪಿಗಳನ್ನು ಬಿಡುಗಡೆಮಾಡಿದರು.

ಅನಂತರ ಪುತ್ತೂರು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟ ಖೂನಿ ಮೊಕದ್ದಮೆಯು ವಿಚಾರಣೆಯಾಯಿತು. ಇದರಲ್ಲಿ ಕಲಾಯಿ ಧಾಮನೆಂಬವನು ತನ್ನ ಅಳಿಯನನ್ನು ಕಳೆದ ಒಕ್ಟೋಬರ ತಾ ೧೫ರಲ್ಲಿ ಸ್ವಹಸ್ತದಿಂದ ಕತ್ತಿಯ ಮೂಲಕ ವಧಿಸಿದನೆಂಬ ಕ್ರಿಮಿನಲ್ ತಪ್ಪಿಗೆ ಹೊಣೆಮಾಡಲ್ಪಟ್ಟಿದ್ದನು. ಈ ಕೊಲೆಯ ಕಾರಣವೇನೆಂದರೆ—ಇವರಿಬ್ಬರೊಳಗೆ ಹಲವು ಕಾಲದಿಂದ ಪರಸ್ಪರ ದ್ವೇಷವಿತ್ತು. ಹೀಗಿರುತ್ತ ಈ ಕೃತ್ಯವು ನಡೆದ ಮೇಲಿನ ದಿನ ಆರೋಪಿಯು ತನ್ನ ಅಳಿಯನ ಉಪಪತ್ನಿಯಾದ ಲಕ್ಷ್ಮಿ ಎಂಬವಳನ್ನು ಬೈದನೆಂಬ ಕಾರಣದಿಂದ ಇಬ್ಬರೊಳಗೂ ಹೋರಾಟವಾಗಿ ಜಗಳದಲ್ಲಿ ಮಾವನಿಂದ ಅಳಿಯನು ಹತನಾದನೆಂದು ತನಖಿಯಲ್ಲಿ ತೋರುತ್ತಿದೆ. ವಿಚಾರಣೆಯಲ್ಲಿ ಆರೋಪಿಯು ತನ್ನ ಆತ್ಮರಕ್ಷಣೆಗಾಗಿ ತಾನು ಈ ಘೋರ ಕೃತ್ಯವನ್ನು ನಡೆಸಿದನೆಂದು ಒಪ್ಪಿದ್ದನು. ಜೂರಿಯವರು ಆಪಾದಿತನು ಆರೋಪಿಯಲ್ಲವಾಗಿ ಕಂಡುಹಿಡಿದರು. ಜಡ್ಜರು ಇವರ ಅಭಿಪ್ರಾಯಕ್ಕೆ ಸಮವಾಗಿ ಸದರಿಯವನನ್ನು ವಿಮೋಚನೆಮಾಡಿದರು.

ಕಳೆದ ಜನವರಿ ತಾ. ೧೮ರಲ್ಲು ತೆಗೆದ ಲಖನೌ ಪಟ್ಟಣದ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಅರ್ಫನೇಜ್ ಫಂಡಿನ ಸಹಾಯಾರ್ಥವಾಗಿ ತೆಗೆಯಲಾದ ಸೋಡತಿಯಲ್ಲಿ ಮಂಗಳೂರ ತಾಲೂಕಿನ ಮದ್ಯಗ್ರಾಮದ ಉಗ್ರಾಣಿ ಸುಬ್ಬಮೊಯಿಲಿ ಎಂಬವನಿಗೆ ರೂ. ೧೫೦೦ ಬಂದಿರುವುದಾಗಿ ನಮ್ಮ ಬಾತ್ಮಿದಾರರೊಬ್ಬರು ತಿಳಿಸಿರುತ್ತಾರೆ.

ಇದೇ ತಿಂಗಳ ತಾ. ೨೫ನೇ ಆದಿತ್ಯವಾರ ಬೆಳಿಗ್ಗೆ ೮-೩೦ ಗಂಟೆಗೆ ಇಲ್ಲಿಯ ಥಿಯೋಸೋಫಿಕಲ್ ಸೊಸ್ಯಾಟಿಯಲ್ಲಿ ಮ್ಹ। ರಾ। ವಕೀಲ ಯು. ಸಿ. ಕೃಷ್ಣಭಟ್ಟ ಬಿ. ಎ. ಬಿ. ಎಲ್. ರವರು 'ಪ್ರಾರ್ಥನೆಗಳೂ ಸಂಸ್ಕಾರಗಳೂ' ಎಂಬ ವಿಷಯವಾಗಿ ಉಪನ್ಯಾಸಮಾಡುವರು. ಎಲ್ಲರಿಗೂ ಸುಸ್ವಾಗತವಿದೆ.

ಹಿಂದೂಸ್ಥಾನದಲ್ಲಿ ಸಕ್ಕರೆ ಕೈಗಾರಿಕೆಯನ್ನು ಕುರಿತು ನೇಮಕವಾದ ಕಮ್ಮಿಶನಿನವರು ಬರುವ ಮಾರ್ಚಿ ತಾ. ೪ಕ್ಕೆ ತಂಜಾವೂರಿನಿಂದ ಹೊರಟು ತಾ. ೫ಕ್ಕೆ ಇಲ್ಲಿಗೆ ತಲಪುವರು. ತಾ. ೮ ಮತ್ತು ೯ ಈ ಎರಡು ದಿನಗಳಲ್ಲಿ ಇಲ್ಲಿದ್ದು, ಇಲ್ಲಿ ಕಬ್ಬಿನ ಕೈಗಾರಿಕೆಯನ್ನು ಕುರಿತು ಯಾವ ಯಾವ ಸುಧಾರಣೆಗಳನ್ನು ಮಾಡಬಹುದು ಎಂಬುದನ್ನು ಪರ್ಯಾಲೋಚಿಸುವರು. ಮತ್ತು ಇಲ್ಲಿ ಬೆಳೆಯುವ ತಾಳೇಮರ ಮುಂತಾದವುಗಳನ್ನು ಸಹ ಪರೀಕ್ಷಿಸಿ ತಾ. ೧೦ಕ್ಕೆ ಕೊಯಮುತ್ತೂರಿಗೆ ಹಿಂತೆರಳುವರು.

ಶ್ರೀ

ಓಂ ನಮೋ ಭಗವತೇ ಭದ್ರನರಸಿಂಹಾಯ.

ಮಾರಾರೀನುತ ಪಾದಾಬ್ಜೋ ಮಂಜುಲಾಲಯಗೋವಿಭುಃ ।
ಮಾಧೂಪಮಾಶ್ರಿತಾಂಗೋಽಸೋ ಭಾಸತೇನೃಹರಿಃ ಸದಾ ॥

ಸಮಸ್ತ ಗೌಡಸಾರಸ್ವತ ಬ್ರಾಹ್ಮಣ ಬಂಧುಗಳಿಗೆ ವಿಜ್ಞಾಪನೆ.

ಇದೇ ಸಂವತ್ಸರದ ಮಾಘ ಶುಕ್ಲ ಪೂರ್ಣಿಮೆಯು ಬುಧವಾರ (ತಾ. 4—2—'20) ದಿನ ಇಲ್ಲಿ ಶ್ರೀ ದೇವಸ್ಥಾನದಲ್ಲಿ

ಶ್ರೀ ಮದನಂತೇಶ್ವರ

ಸಹಿತ

ಶ್ರೀ ಭದ್ರನರಸಿಂಹಸ್ವಾಮಿಗೆ

ಸಹಸ್ರ ಕುಂಭಾಭಿಷೇಕವು

ನೈಯ್ಯಲ್ಪಡಲಿಕ್ಕಿರುವುದರಿಂದ ತಾವು ಸರ್ವರೂ ಒಪ್ಪೊತ್ತಿಗೆ ಮುಂಚಿತವಾಗಿ ಇಲ್ಲಿಗೈತಂದು, ಸದರೀ ಮಂಗಲೋತ್ಸವವನ್ನು ಸಾಂಗಗೊಳಿಸಿ, ಶ್ರೀ ಸ್ವಾಮಿಯ ಶ್ರೀಮುಡಿ ಗಂಧಪ್ರಸಾದಾದಿಗಳನ್ನು ಸ್ವೀಕರಿಸಿ ಕೃತಾರ್ಥರಾಗಬೇಕೆಂದು ಸವಿನಯವಾಗಿ ವಿಜ್ಞಾಪಿಸುತ್ತೇನೆ.

ಶ್ರೀಮದನಂತೇಶ್ವರ ದೇವಸ್ಥಾನ, ಮಂಜೇಶ್ವರ, ತಾ. 18—1—'20.

ಮಂಜೇಶ್ವರ ಪದ್ಮನಾಭಭಟ್ಟ, ಮೊಕ್ತೇಸರ.

ಸ ಜಯತಿ ಭದ್ರನೃಸಿಂಹೋ ಶವಾಕ್ಷ ವಾನಂತ ಶೇಷಸಂಯುಕ್ತಃ ।
ಮಂಜುಲಪುರೇಽರ್ಚಿತೋ ಯಃ ಸಾರಸ್ವತ ಗೌಡವಿಪ್ರವರ್ಗೇಣ ॥

ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಇದೇ ಮಾಘ ಶುಕ್ಲ ಹುಣ್ಣಿಮೆಯು ಬುಧವಾರ (ತಾ. 4—2—'20) ದಿನ ನೆರವೇರತಕ್ಕ ಸಹಸ್ರಕುಂಭಾಭಿಷೇಕದ ಮಹಾಪರ್ವಕ್ಕೆ ಅನೇಕ ಊರುಗಳಿಂದ ನಮ್ಮ ಸ್ವಜಾತಿಯ ಬಾಂಧವರು ಬರುವವರಾದ್ದರಿಂದ, ಅನ್ನೆ ಇಲ್ಲಿ ಸಾಂದ್ರವಾದ ಜನಸ್ತೋಮವು ಕೂಡುವ ಸಂಭವವಿದೆ. ಅಂಥಾ ಸಂದರ್ಭದಲ್ಲಿ ಅವರೆಲ್ಲರಿಗೆ ಬೇಕಾಗುವ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೂ, ಅವರಿಗೆ ಯಾವ ಬಗೆಯಿಂದಲೂ ತೊಂದರೆ ಬಾರದಂತೆ ಉಪಚರಿಸಲಿಕ್ಕೂ

ಸ್ವಯಂಸೇವಕರು

ಬೇಕಾಗಿರುವುದರಿಂದ, ಶ್ರೀ ದೇವರಲ್ಲಿ ಭಕ್ತಿ ಬಾಂಧವರಲ್ಲಿ ಆದರವುಳ್ಳ ಸ್ವಜಾತಿಯ ಯುವಕರು ಅಸ್ವಾರ್ಥವಾದ ಈ ಸ್ವಯಂ ಸೇವೆಯ ಕಾರ್ಯವನ್ನು ಕೈಕೊಳ್ಳಬೇಕೆಂದು ಪ್ರಾರ್ಥನೆ. ಹೀಗೆ ಸ್ವಯಂ ಸೇವಕರಾಗಿ ಇಲ್ಲಿಗೆ ಬರಲಿಕ್ಕೆ ಸಮ್ಮತಿಯುಳ್ಳವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಮುಂಚಿತವಾಗಿಯೇ ತಿಳುಹಿಸಿ, ಮಾಘ ಶುದ್ಧ ೧೩ಯು ಫೆಬ್ರುವರಿ 1ನೆ ತಾರೀಕಿನೊಳಗೆ ಇಲ್ಲಿಗೆ ಬಂದು ಸೇರಬೇಕೆಂದು ವಿಜ್ಞಾಪನೆ.

ಮಂಜೇಶ್ವರ, ತಾ. 18-1-'20.

ಎಮ್. ಗೋವಿಂದ ಶೈ.

ನೋಟೀಸು.

ನನ್ನಲ್ಲಿ ಸುಮಾರು 14 ವರ್ಷದಿಂದ ರೈಟರ್ ಕೆಲಸಕ್ಕೆ ಇದ್ದ ಪಕೀರನ್ಯಾಕನನ್ನು ಇದೇ ತಿಂಗಳ ತಾ. 21ಕ್ಕೆ ನಾನು ಕೆಲಸದಿಂದ ತೆಗೆದು ಇರುವದರಿಂದ ನನ್ನ ಬಾಬ್ತು ಯಾವತ್ತು ದೇವಾದೇವಿಗಳನ್ನು ವ ಹಣ ವಸೂಲ್ಲು ಆಗಲೀ ಕೊಡಕೂಡದು, ಹಣ ವಸೂಲು ಕೊಟ್ಟಲ್ಲಿ ವ ಲೇವಾದೇವಿ ನಡಿಸಿದ್ದಲ್ಲಿ ನಾನು ಅದಕ್ಕೆ ಜವಾಬ್ದಾರನಾಗಿರುವದಿಲ್ಲ ಎಂತ ಈ ಮೂಲಕ ಸರ್ವರಿಗೆ ಎಚ್ಚರಿಸಲಾಗಿಯದೆ.

ಎ. ಸೋಮಪ್ಪ,
ಟೋಡಾ ವಾಟರ್ ಮ್ಯಾನುಫ್ಯಾಕ್ಚರ್, ಮಂಗಳೂರು.

[illegible]

ವಿದ್ಯಾಭ್ಯಾಸವು ಸಾಗಬೇಕೆಂದು ನಿರ್ಧರಿಸಲಾಯಿತು.

ಈ ಹಾಸ್ಟೇಲಿಗೋಸ್ಕರ ಸಂಗ್ರಹವಾಗುವ ಹಣವು ವಂತಿಗೆದಾರರ ಪ್ರತಿನಿಧಿ ಗವರ್ನರ ಸಾಹೇಬರಿಂದ ಆರಿಸಲ್ಪಟ್ಟ ಒಂದು ಆಡಳಿತೆಯ ಸಭೆಯವರ ವಶಕ್ಕೆ ಇಟ್ಟು ಇವೆಕ್ಕೆ ರೆವಿನ್ಯೂ ಬೋರ್ಡಿನ "ಸೆಕ್ರೆಟರಿ ಆಫ್ ಸ್ಟೇಟ್" ಮೆಂಬರರೂ ವಿದ್ಯಾಖಾತೆಯ ಡಿರೆಕ್ಟರರೂ ಸರಕಾರದವರಿಂದ ಮೆಂಬರರಾಗಿರಬೇಕೆಂದು ನಿರ್ಣಯವಾಯಿತು.

ಈ ಹಾಸ್ಟೇಲಿನ ಬಗ್ಗೆ ಸರಕಾರದವರು ಬಾಡಿಗೆ ಇಲ್ಲದೆ ಒಂದು ಕಟ್ಟೋಣವನ್ನು ಒದಗಿಸಿಕೊಡಬೇಕೆಂದೂ ಅದರ ಮೇಲ್ವಿಚಾರಕ್ಕೆ ವಿಲಾಯತಿಯ ಶಾಲೆಗಳ ಅನುಭವವಿದ್ದ ಯೋಗ್ಯ ಯುರೋಪಿಯನನ್ನು ಮ್ಯಾನೇಜಿಂಗ್ ಬೋರ್ಡಿನವರ ಸಮ್ಮತಿಯಿಂದ ನೇಮಕ ಮಾಡಬೇಕೆಂದು ನಿಷ್ಕರ್ಷಿಸಲಾಯಿತು. ಮ್ಯಾನೇಜಿಂಗ್ ಬೋರ್ಡಿಗೆ ೯ ಮೆಂಬರರು, ಆ ಪೈಕಿ ಮೇಲೆ ಹೇಳಿದ ಸರಕಾರದವರ ಮೆಂಬರರಲ್ಲದೆ, ಉಳಿದವರು ಗವರ್ನರ ಸಾಹೇಬರಿಂದ ವಂತಿಗೆದಾರರ ಪ್ರತಿನಿಧಿಗಳಾಗಿ ಆರಿಸಲ್ಪಡಬೇಕೆಂದು ನಿರ್ಧಾರವಾಯಿತು. ಹಾಸ್ಟೇಲನ್ನು ಪ್ರಾರಂಭಿಸುವ ತಾರೀಖು ನಿಶ್ಚಯವಾಗಲಿಲ್ಲ. ಆದರೆ ಅವರಿಗೆ ಕೂಡಿದ ಬಗ್ಗೆ ಸಂಗ್ರಹವಾದ ಹಣವನ್ನು ಈ ಹಾಸ್ಟೇಲಿನ ಬಗ್ಗೆ ಉಪಯೋಗಿಸಬೇಕಾಗಿ ತೀರ್ಮಾನ ಮಾಡಲಾಯಿತು.

ಸೆಪ್ಟೆಂಬರದ ಕೊನೆಯಲ್ಲಿ ಅಧ್ಯಕ್ಷರು ಮಾಡಿದ ಭಾಷಣದಲ್ಲಿ ವಂತಿಗೆದಾರರ ಸಮ್ಮೇಲನವು ವರ್ಷಕ್ಕೊಮ್ಮೆ ಅಥವಾ ಎರಡಾವರ್ತಿ ಸೇರಿ ಹಾಸ್ಟೇಲು ದಾರರಿಗಿರುವ ಅಡಚಣೆಗಳನ್ನು ಕುರಿತು ಚರ್ಚೆಗಳನ್ನು ಮಾಡುವುದಾದರೆ ಒಳ್ಳೇದಿತ್ತು ಎಂಬ ಸೂಚನೆ ಇತ್ತು.

ಬಂಗಾರದ ದೇವಸ್ಥಾನದ ಅಮೃತಸರ ಪಟ್ಟಣವು.

(ಲೇಖಕ:— [illegible])

ಲೇಖಾಂಕ ೧.

ಅಮೃತಸರ ಇದು ಪಂಜಾಬಿನಲ್ಲಿ ಎರಡನೆಯ ಪಟ್ಟಣವು. ದೊಡ್ಡ ಶತಮಾನಗಳ ಹಿಂದಿನಿಂದಲೂ "ಸೀಖ್" ಗುರುಗಳ ವಾಸಸ್ಥಳವಾಗಿದೆ. ಇಲ್ಲಿ ಒಂದು ಬಂಗಾರದ ದೇವಸ್ಥಾನವು ಇದೆ. ಆದ್ದರಿಂದ ಈ ಪಟ್ಟಣದ ಹೆಸರು ಹಿಂದೂ ದೇಶದ [illegible]

[illegible]

ಇಂದು ಸಹಾಯದಿಂದಲೂ, ತನ್ನ ದೇಶದಲ್ಲಿ ಈ ಪಟ್ಟಣದ ಮಹತ್ವ [illegible] ಈ ಕಾರಣಗಳಿಂದ ಈ ಸಮಯದಲ್ಲಿ ಈ ಪಟ್ಟಣದ ವಿಚಾರವಾದ ಕೆಲವು ಅವಶ್ಯವಾಗಿರಬಹುದೆಂದು ತಿಳಿದಿರುವೆನು.

ಪಟ್ಟಣದ ಚರಿತ್ರೆ.

ಯಾವ ಸರೋವರದ ಮಧ್ಯದಲ್ಲಿರುವ ದೇವಾಲಯದಿಂದ ಈ ಪಟ್ಟಣಕ್ಕೆ 'ಅಮೃತಸರ' (ಅಮರ-ಅಮೃತದಿಂದ ತುಂಬಿದ-ಸರೋವರ) ಎಂಬ ಹೆಸರು ಬಂದಿರುವದೋ, ಆ ಸರೋವರದ ದಡದಲ್ಲಿ 'ಸೀಖ್'ರ ನಾಲ್ಕನೆಯ ಗುರುವಾದ ರಾಮದಾಸನು ಸನ್ ೧೫೭೪ನೆಯ ಇಸವಿಯಲ್ಲಿ ಬಂದು ನೆಲಸಿದನು. ಅಂದಿನಿಂದ ಈ ಪಟ್ಟಣದ ಚರಿತ್ರೆಯು ಪ್ರಾರಂಭವಾಗುವದು. ಆದರೆ 'ಸೀಖ್' ಗುರುಗಳ ವಿಲಾಸವಾದ ಸ್ಥಳಪುರಾಣವು ಕಟ್ಟುಕಥೆಯೂ ಈ ಕಾಲವನ್ನು ಸಾವಿರಾರು ವರ್ಷದಿಂದಲೂ ಹಿಂದಕ್ಕೆ ಕಳ್ಳುವವು. ಗುರುನಾನಕನ ಧ್ಯಾನಮಾಡುವ ಸಮಯದಲ್ಲಿ ಈ ಸರೋವರದ ಬಳಿಗೆ ಬರುತ್ತಿದ್ದನಂತೆ. ಸನ್ ೧೫೭೭ರಲ್ಲಿ ಗುರುರಾಮದಾಸನು ಅಕ್ಬರ್ ಚಕ್ರವರ್ತಿಯಿಂದ ಈ ಸರೋವರವನ್ನು ಉಚಿತವಾಗಿ ಪಡೆದುಕೊಂಡನು. ಇದರ ಸುತ್ತಲೂ ೫೦೦ ಬಿಘಗಳಷ್ಟು ಜಮೀನನ್ನು ಕೊಂಡುಕೊಂಡನು. ಆ ಮೇಲೆ ಈ ಸರೋವರವನ್ನು ಆಳವಾಗಿ ಅಗೆದರು. ಕ್ರಯಕ್ಕೆ ಪಡೆಕೊಂಡ ಸ್ಥಳದಲ್ಲಿ ಈಗಿನ ಅಮೃತಸರದ ಶಂಕುಸ್ಥಾಪನೆಯೂ ಆಯಿತು. "ಮುಂದೆ ಸ್ವಲ್ಪ ಕಾಲದಲ್ಲಿಯೇ ಇದು ಪವಿತ್ರವಾದ ಸ್ಥಳವೆಂದು ಪ್ರಸಿದ್ಧಿಯಾಗಿ 'ಸೀಖ್' ಮತಾನುಯಾಯಿಗಳೆಲ್ಲರೂ ಇಲ್ಲಿ ನೆಲಸಿ ಇದನ್ನು ಒಂದು ಸಣ್ಣ ಪಟ್ಟಣವನ್ನಾಗಿ ಮಾಡಿದರು. ಆ ಸರೋವರದ ಮಧ್ಯದಲ್ಲಿದ್ದ ನಡು ಗಡ್ಡೆಯ ಮೇಲೆ ಒಂದು ದೇವಾಲಯವನ್ನು ನಿರ್ಮಿಸಬೇಕೆಂದಿದ್ದನು. ಆದರೆ ಆತನ ವಿಚಾರವು ಫಲಿತವಾಗುವದಕ್ಕೆ ಮೊದಲೇ ಆತನು ಮರಣಕ್ಕೀಡಾಗಬೇಕಾದ್ದರಿಂದ, ಆ ಕಾರ್ಯವನ್ನು ತನ್ನ ಮಗನೂ, 'ಸೀಖ್'ರ ಐದನೆಯ ಗುರುವೂ ಆದ ಅರ್ಜುನನಿಗೆ ವಹಿಸಿ ತಾನು ಇಹಲೋಕವನ್ನು ತ್ಯಜಿಸಿದನೆ"ಂದು ಅಮೃತಸರದ ಇತಿಹಾಸಕಾರನಾದ ಮೇಜರ್ ನಿವೆಲ್ ಸಾಹೇಬರು ಬರೆದಿರುವರು. ಈ ದೇವಾಲಯವು ಬಹು ಅಂದವಾಗಬೇಕೆಂದೆಣಿಸಿ ಗುರು ಅರ್ಜುನನು ಲಾಹೋರ್ ಬಳಿಯಲ್ಲಿದ್ದ ಮಿಯಾನ್ ಮೀರ್ ಎಂಬೊಬ್ಬ ಮಹಮ್ಮದೀಯ ಸಾಧುವನ್ನು ಕರೆಸಿಕೊಂಡು, ಅದರ ಶಂಕುಸ್ಥಾಪನೆಯನ್ನು ಆ ಸಾಧುವಿನ ಕೈಯಿಂದಲೇ ಮಾಡಿಸಿದನೆಂದು ಸ್ಥಳಪುರಾಣವಿರುವದು. ಮತ್ತೆ, ಆ ಸಾಧುವು ಶಂಕುಸ್ಥಾಪನೆ ಮಾಡುವಾಗ ಕಾರಿಗಾರನೊಬ್ಬನ ಕಲ್ಲನ್ನು ಸರಿಯಾಗಿಡದೆ ಸ್ವಲ್ಪ ಕೊಂಕಾಗಿದ್ದರಿಂದ ಅವನ ಮೇಸ್ತ್ರಿಯು ಅದನ್ನು ಸರಿಪಡಿಸಿದನೆಂದೂ ಆಗ ಆತನು ಅಶಂತುಷ್ಟನಾಗಿ [illegible] ಈ ಕಟ್ಟಡಕ್ಕೆ ವಿನಾಶಕಾಲವು ಒದಗಿಬರುವದು. ನೀನು ಈ ಕಲ್ಲನ್ನು ಮುಟ್ಟದೇ ಇದ್ದರೆ ಅದು ಸ್ಥಿರವಾಗಿರುತ್ತಿತ್ತು" ಎಂದು ಹೇಳಿದನೆಂದೂ ಒಂದು ಕಥೆಯೂ ಇರುವದು. ಆದರೆ ಆ ಸಾಧುವಿನ ಭವಿಷ್ಯತ್ ವಾಕ್ಯವು ನಿಜವಾಯಿತೆಂದು ಮುಂದೆ ಗೊತ್ತಾಗುವದು.

ಆ ದೇವಾಲಯದ ಕಟ್ಟೋಣವು ಮುಗಿದ ನಂತರ ಅದಕ್ಕೆ 'ಹರಿಮಂದಿರ' ವೆಂದು ನಾಮಕರಣವಾಯಿತು. ಪವಿತ್ರವಾದ ಸ್ಥಳವೆಂದು ಪ್ರಸಿದ್ಧಿಯನ್ನೈದಿದ್ದ ಪಟ್ಟಣವೂ ಬೆಳೆಯಿತು. [illegible]

[illegible]

ಈ ಪಟ್ಟಣವೂ ಅದರ ನೋಟವೂ:

ಸನ್ ೧೭೬೧ರಲ್ಲಿ 'ಸೀಖ್'ರ ಎರಡನೆಯ ಪತನವಾದ ನಂತರ ಅಮೃತಸರವು ಬ್ರಿಟಿಷರ ಅಧೀನಕ್ಕೊಳಪಟ್ಟಿತು. ಅನಂತರ ಮುಂಚಿನ ಪಟ್ಟಣದ ಬಹು ಭಾಗವು ನಾಶಪಡಿಸಲ್ಪಟ್ಟಿತು. ಈಗಿರುವ ಪಟ್ಟಣದ ಹಳೆಯ ಭಾಗವೆಂದರೆ ಸನ್ ೧೮೦೩ನೆಯ ವರ್ಷದಿಂದೀಚೆಗೆ ಕಟ್ಟಲ್ಪಟ್ಟದ್ದು; ಮತ್ತೆ ಉಳಿದ ಭಾಗವೆಲ್ಲ ಈಚೀಚೆಗೆ ನಿರ್ಮಿತವಾಯಿತು. ಪುರಾತನ ಮನೆಗಳಲ್ಲಿ ಕೆಲವು ಮನೋರಂಜಕವಾಗಿಯೂ ಚಿತ್ರಯುಕ್ತವಾಗಿ ಮುಂದಕ್ಕೆ ಚಾಚಿಕೊಂಡಿರುವ ಮೊಗಸಾಲೆಯಿಂದಲೂ, ಗುಹೆಗಳಂತೆ ತೋರುವ ಕಿಂಡಿಕಿಟಕಿಗಳಿಂದಲೂ, ಅಂದವಾಗಿ ಕೊರೆಯಲ್ಪಟ್ಟಿರುವ ಬಾಗಿಲುಗಳಿಂದಲೂ ಶೋಭಿಸುತ್ತಿರುವವು. ಪಟ್ಟಣದ ಮಧ್ಯ ಭಾಗವು ವಿಶೇಷ ಜನಸಾಂದ್ರತೆಯುಳ್ಳದ್ದಾಗಿ, ಅಲ್ಲಲ್ಲಿ ಬಳಿಕೆಗಳಿಲ್ಲದಿರುವ, ದುರ್ಗಂಧದಿಂದ ನಾರುತ್ತಿರುವ, ಡೊಂಕುಡೊಂಕಾಗಿರುವ ಅನೇಕ ಓಣಿಗಳುಳ್ಳದ್ದಾಗಿರುವದು. ಆದರೆ ಪಟ್ಟಣಕ್ಕೆ ಹೊರಗೆ ಜನರು ವಾಸಿಸುವ 'ಸಿವಿಲ್ ಲೈನ್ಸ್' ಎಂಬೆಡೆಯಲ್ಲಿ ರಸ್ತೆಗಳು ಅಗಲವಾಗಿಯೂ ಸ್ವಚ್ಛವಾಗಿಯೂ ಇಡಲ್ಪಟ್ಟಿದೆ. ಇದು ಬಿಳಿಯ ಜನರ ಪೇಟೆ!

ಅಮೃತಸರದ ನೋಟಗಳಲ್ಲೆಲ್ಲ ಬಂಗಾರದ ಮಂದಿರವು ಮುಖ್ಯವಾದ್ದು, ಈ ಊರಿನ ಮಧ್ಯದಲ್ಲಿರುವ ಸರೋವರದಿಂದ ಮೇಲಕ್ಕೆದ್ದಂತೆ ಎತ್ತರವಾಗಿ ಶೋಭಿಸುತ್ತದೆ. ಇದರ ಮತ್ತು ಸರೋವರ ತೀರದ ಮಧ್ಯದಲ್ಲಿ ಶ್ವೇತಶಿಲೆಗಳಿಂದ ನಿರ್ಮಿತವಾದ ಒಂದು ಸೇತುವೆಯಿದೆ. [illegible]

[illegible]

ಸಹಕಾರ.

ಕೃಷಿಕರ ಲೇವಾದೇವಿ ಸಂಘಗಳು.

೧೯೧೮—೧೯ನೆ ಇಸವಿಯ ವರ್ಷದಲ್ಲಿ ಸಹಕಾರಿ ಸಂಘಗಳ ಅಭಿವೃದ್ಧಿಯನ್ನು ಕುರಿತು ಬರೆಯುವಾಗ ಮದ್ರಾಸು ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಮಿ| ಹೆಮಿಂಗ್‌ವೇ ಸಾಹೇಬರು ತನ್ನ ವರದಿಯಲ್ಲಿ ಹೀಗೆ ಬರೆದಿರುತ್ತಾರೆ:—

"ಜೂನ್ ೩೦ನೆ ತಾರೀಕಿನವರೆಗೆ ಮದ್ರಾಸು ಸಂಸ್ಥಾನದಲ್ಲಿ [illegible] ಕೃಷಿಕರ ಸಂಘಗಳು ಇದ್ದವು. ಇವುಗಳಲ್ಲಿ [illegible] ಮೆಂಬರರು; ಈ ಪೈಕಿ [illegible] ಕೃಷಿಕರಲ್ಲದವರು, [illegible] ಕೃಷಿಯೊಡನೆ ಇತರ ವೃತ್ತಿಗಳನ್ನು ಅನುಸರಿಸುವವರು; ಉಳಿದ [illegible] ಕೃಷಿಕರು ಅಂದರೆ ಕೇವಲ ಕೃಷಿಯಿಂದಲೇ ಜೀವಿಸುವವರು. ಈ [illegible] ಮಂದಿಗಳಲ್ಲಿ [illegible] ಮಂದಿ ಸ್ವಂತ ಕೃಷಿಮಾಡದೆ ಇತರ ಜನರಿಂದ ಸಾಗುವಳಿ ಕೆಲಸ ಮಾಡಿಸುವ ವರ್ಗದವರು. [illegible] ಸ್ವಂತ ಕೃಷಿಮಾಡುವ ವರ್ಗದವರು. [illegible] ಗೇಣಿ ಒಕ್ಕಲುಗಳು, [illegible] ಕೃಷಿಯ ಕೂಲಿ ವೃತ್ತಿಯವರು. ಈ ಸಂಖ್ಯೆಯನ್ನು ಕಂಡಾಗಲೇ ತಂತಮ್ಮ ಹಳ್ಳಿಯ ಬಡ ಜನರನ್ನು ಸಂಘಗಳಲ್ಲಿ ಸೇರಿಸಿಕೊಳ್ಳಲಿಕ್ಕೆ ಸರ್ಗದಾರ ಸಮಾಜವು ಕೈ ಬಿಡದ ಹಿಂದಕ್ಕೆ ಎಳೆಯುತ್ತದೆ ಎಂಬ ಸಂದೇಹವು ಬರುವುದು. ಒಕ್ಕಲುಗಳಲ್ಲಿ ಹಲವರಿಗೆ ಸ್ವಂತ ಬಿಟ್ಟರೆ ಬೇರೆ ಆಸ್ತಿಗಳು ಇರಬಹುದು ಎಂಬ ವಿಷಯವನ್ನು ನಾವು ಲಕ್ಷ್ಯಕ್ಕೆ ತಂದರೂ ಈ ಸಂಘಗಳಿಂದ ಹಳ್ಳಿಯ ಬಡಜನರಿಗೆ ಧಾರಾಳವಾಗಿ ಪ್ರತ್ಯಕ್ಷ ಸಹಾಯ ಸಿಗುವುದಿಲ್ಲವೆಂಬುದು ಎದ್ದುಕಾಣುವದು." ಈ ವಿಷಯವನ್ನು ಮುಂದಿಟ್ಟು ಪರಾಮರ್ಶೆಮಾಡುತ್ತ ಕೂಡ ಹಲವು ಹಳ್ಳಿಸಂಘಗಳ ಮೆಂಬರರೊಡನೆಯೂ ಇತರ ಸಹಕಾರಿ ಜನರೊಡನೆಯೂ ಚರ್ಚಿಸಿದಾಗ ಅವು ವಾಸ್ತವವಾದದ್ದೆಂದು ಅವರು ಒಪ್ಪಿಕೊಂಡಿದ್ದಾರೆ ಎಂದೂ, ಏನೂ ಆಸ್ತಿಪಾಸ್ತಿ ಇಲ್ಲದವನಿಗೆ ಸಾಲ ಕೊಟ್ಟರೆ ಅದನ್ನು ವಸೂಲು ಮಾಡುವ ಬಗೆ ಹೇಗೆ ಎಂಬ ಆಕ್ಷೇಪಗಳು ಬಂದವೆಂದೂ ರಿಜಿಸ್ಟ್ರಾರ ಸಾಹೇಬರು ಹೇಳಿ ಈ ಬಗೆಯಲ್ಲಿ ಅಂಥಾ ಭಾವನೆಯನ್ನು ಖಂಡಿಸಲು ಯತ್ನಿಸಿದ್ದಾರೆ.

"ಒಂದೇ ಕುಟುಂಬವು ಹಲವು ತಲೆಮಾರುಗಳಿಂದ ಒಂದೇ ಗ್ರಾಮದಲ್ಲಿ ಜೀವಿಸಿಕೊಂಡಿದ್ದರೆ, ಅದರಲ್ಲಿರುವ ಜನಗಳು ಕಾಯಕಷ್ಟದಿಂದಲೂ ಪ್ರಾಮಾಣಿಕತೆಯಿಂದಲೂ ಜೀವಿಸುವಂಥವರಿದ್ದರೆ ಆ ಕುಟುಂಬದವರು ಪಡೆದ ಸಾಲವನ್ನು ಹಿಂದಕ್ಕೆ ಕೊಡದೆ ಇರಲಾರರು. ಕಳವು, ಭಿಕ್ಷೆ ಇಂತಹ ವೃತ್ತಿಗಳಿಗೆ ಇಳಿಯದೆ ಕೆಲವು ಕಾಲದವರೆಗೆ ಹಳ್ಳಿ ಧನಿಕನ ಹಣವನ್ನು ಸಾಲ ಪಡೆದು ಜೀವನೋಪಾಯ ಸಾಧಿಸಬಲ್ಲವನಾದರೆ ಈ ಸಂಘದಿಂದ ಸಾಲ ಪಡೆದು ಅದನ್ನು ಹಿಂತಿರಲಿಕ್ಕೆ ಅವನಿಗೆ ಎಂದೂ ಅಸಾಧ್ಯವಾಗದು. ಸಹಕಾರಿ ಸಂಘಗಳು ಮೆಂಬರರ ಗುಣ ನಡತೆಯನ್ನು ಆಧರಿಸಿ ಸಾಲಕೊಡಬೇಕೆಂದು ಸಹಕಾರದ ಮುಖ್ಯ ತತ್ವವಾಗಿದೆ, ಆ ಮೆಂಬರನಿಗೆ ಸ್ಥಿರಚರ ಆಸ್ತಿ ಏನಿದೆ ಎಂಬುದು ಮುಖ್ಯ ವಿಚಾರದ ವಿಷಯವಲ್ಲ ಎಂದು ನಾನು ಆಗಾಗ ಬೋಧಿಸುತ್ತಿದ್ದೇನೆ. ಹೀಗಾದ್ದರಿಂದ ಬಡಜನರನ್ನು ಮೆಂಬರರಾಗಿ ಮಾಡಿಕೊಳ್ಳಲಿಕ್ಕೂ ಅವರಿಗೆ ಅಗತ್ಯವಾದ ಸಾಲವನ್ನು ಕೊಡಲಿಕ್ಕೂ ಹಳ್ಳಿಸಂಘಗಳು ನಿರಾಕರಿಸುವುದಾದರೆ ಮೂಲದ ಧ್ಯೇಯವನ್ನು ಮರೆತಂತೆ ಆಗುತ್ತದೆ." ಹೀಗೆ ಈ ಬಡ ಜನರ ಸೌಕರ್ಯಗಳಿಗೆ ಸಂಘಗಳು ಒದಗಿ ಬಾರದಿದ್ದರೆ ಅವರುಗಳಿಗೆನೆ ಬೇರೆ ಸಂಘಗಳನ್ನು ಏರ್ಪಡಿಸಬೇಕಾದೀತು ಎಂಬ ಮಾತುಗಳಿಂದ ಎಚ್ಚರಿಸುವಾಗ ಮಿ| ಹೆಮಿಂಗ್‌ವೇ ಹೀಗನ್ನುತ್ತಾರೆ:—

"ದಕ್ಷಿಣಕನ್ನಡ ಮತ್ತು ಮಲಬಾರ ಜಿಲ್ಲೆಗಳಲ್ಲಿ ಇತರ ಜಿಲ್ಲೆಗಳಿಗಿಂತಲೂ ಈ ಬಗೆಯ ಬಡಜನರನ್ನು ಹೆಚ್ಚಾಗಿ ದಾಖಲು ಮಾಡಿದ್ದಾರೆ. ದಕ್ಷಿಣಕನ್ನಡದಲ್ಲಿ [illegible], ಮಲಬಾರದಲ್ಲಿ [illegible] ಮಂದಿ ಈ ಬಗೆಯ ಬಡಜನರು ಸಂಘಗಳಿಂದ ಪ್ರಯೋಜನ ಹೊಂದುತಲಿದ್ದಾರೆ".

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಪಾಲುಮಾಲಿಕರಿಗೆ ನೋಟೀಸು.

೧೯೧೯ ನವಂಬರ ತಿಂಗಳ ತಾ. 29ರಲ್ಲಿ ಕೂಡಿದ ಪಾಲುಮಾಲಿಕರ ಮಹಾಸಭೆಯಲ್ಲಿ [illegible] ಮಹಾಸಭೆಯು ಕಳೆದ ಡಿಸೆಂಬರ ತಿಂಗಳ ತಾ. 30ರಲ್ಲಿ ಕೂಡತಕ್ಕದೆಂದು ನಿಶ್ಚಯಿಸಲ್ಪಟ್ಟಿತಷ್ಟೆ. ನವಂಬರ ತಿಂಗಳಲ್ಲಿ ಕೂಡಿದ ಈ ಸಭೆಯು ನಂತರ ಕಂಪೆನಿ ಆಕ್ಟಿಗೆ ಅನುಗುಣವಾಗಿ ವಾರ್ಷಿಕ ಹಿಸೆದಾರರ ಪಟ್ಟಿ ಇತ್ಯಾದಿಗಳನ್ನು ಜೋಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟೆಂಟ ರಿಜಿಸ್ಟ್ರಾರರಿಗೆ ಕಳುಹಿಸಿಕೊಟ್ಟಲ್ಲಿ ಈ ವಾರ್ಷಿಕ ಪಟ್ಟಿಯು ಅಪೂರ್ಣವೆಂತ ಮೊದಲಾಗಿ ಅಸಿಸ್ಟೆಂಟ ರಿಜಿಸ್ಟ್ರಾರರವರು ಬರೆದಿರುತ್ತಾರೆ. ಕಂಪೆನಿಯ ಹಿಸೆದಾರರ ಮೂಲ ರಿಜಿಸ್ಟ್ರಿಯು ಕಂಪೆನಿಯ ಇತರ ಲೆಕ್ಕಪುಸ್ತಕಗಳು ರಿಕಾರ್ಡು ವಗೈರೆ ಸಹಿತ ಮಾಜಿ ಮೆನೇಜಿಂಗ್ ಏಜಂಟರಲ್ಲಿ ಒಬ್ಬರಾಗಿದ್ದ ಮೆಸ್ಸರ್ಸ್ ಬಿ. ಬಾಬುರಾವ್ ಎಂಡ್ ಸನ್ಸ್‌ರವರ ಮೂಲಕ ಕೋರ್ಟಿಗೆ ದಾಖಲಾದ್ದರಿಂದ ಅಂಥಾ ಹಿಸೆದಾರರ ರಿಜಿಸ್ಟ್ರಿಯ ಆಧಾರದ [illegible] ತರಿಯಬೇಕಾಗಿದ್ದರೂ ಈ ರೀತಿ ಕಳುಹಿಸಲಾಗಲಿಲ್ಲ. ಆದರೆ 1918ನೇ [illegible]ದಲ್ಲಿ ರಿಜಿಸ್ಟ್ರಿ ಆಫೀಸಿನಲ್ಲಿ ಮಾಜಿ ಮೆನೇಜಿಂಗ್ ಏಜಂಟರು ದಾಖಲುಮಾಡಿದ ಹಿಸೆದಾರರ ವಾರ್ಷಿಕ ಪಟ್ಟಿಯ ನಕಲು ಪಡೆದು, ಈ ಪಟ್ಟಿಯು 1919ನೇ ವರ್ಷದ ಮಹಾಸಭೆಯನ್ನು ಕರೆಯಲು ಸಂಪೂರ್ಣವಿರಬಹುದೆಂಬ ನಂಬಿಕೆಯಿಂದ ಕಳೆದ ನವಂಬರ ತಿಂಗಳಲ್ಲಿ ಪಾಲುಮಾಲಿಕರ ಸಭೆಯನ್ನು ಆಮಂತ್ರಿಸಿದೆವು. ಆದರೆ ಈ ಸಭೆಯ ನಂತರ ನಾವು ಆಧರಿಸಿಕೊಂಡಿದ್ದ ಹಿಸೆದಾರರ ಪಟ್ಟಿಯು ಸಂಪೂರ್ಣವಲ್ಲವೆಂತ ತಿಳಿದು ಹೋದ ಪ್ರಕಾರ ನಮ್ಮ ತಿಳುವಳಿಕೆಗೆ ಬಂದದ್ದರಿಂದ ನವಂಬರ ತಿಂಗಳಲ್ಲಿ ಕೂಡಿದ ಸಭೆಯು ಶಾಸನಪ್ರಕಾರ ನಡೆದುದಾಗಲಿಲ್ಲವಾಗಿ ಅಲ್ಲದೆ, ಹಿಸೆಗಳನ್ನು ಕ್ರಯಕ್ಕೆ ಪಡಕೊಂಡು ಅಂಥಾ ಕ್ರಯ ಸಾಧನಗಳ ಪ್ರಕಾರ ಹಿಸೆದಾರರ ರಿಜಿಸ್ಟ್ರಿಯಲ್ಲಿ ಬೇಕಾದ ಬದಲಾವಣೆಗಳು ಜರಗದೆ ಬಾಕಿ ಇದ್ದು, ಈಗಿನ ಡೈರೆಕ್ಟರರು ಮಹಾಸಭೆಯನ್ನು ಆಮಂತ್ರಿಸಲು ಆಧರಿಸಿದ್ದ ಪಟ್ಟಿಯು ಅಪೂರ್ಣವಾದ್ದರಿಂದ ಈ ನ್ಯೂನತೆಗಳನ್ನು ಹೋಗಲಾಡಿಸಿ ಶಾಸನಕ್ಕೆ ಅನುಗುಣವಾದ ಹಿಸೆದಾರರ ರಿಜಿಸ್ಟ್ರಿಯನ್ನು ಏರ್ಪಡಿಸಿ ನಂತರ ಮಹಾಸಭೆಯನ್ನು ಕರೆಯಬೇಕೆಂಬಿತ್ಯಾದಿ ನೋಟೀಸು ಸಹ ಪಾಲುಮಾಲಿಕರ ಕಡೆಯಿಂದ ಬಂದಿರುವುದರಿಂದಲೂ ಡಿಸೆಂಬರದಲ್ಲಿ ಕೂಡಬೇಕೆಂದಿದ್ದ ಸಭೆಯನ್ನು ಕೂಡಿಸಲು ಸಾಧ್ಯವಾಗಲಿಲ್ಲ. ಕೋರ್ಟಿನಲ್ಲಿ ದಾಖಲಾದ ಹಿಸೆದಾರರ ರಿಜಿಸ್ಟ್ರಿಯು ಮುಂತಾದ ನಕಲನ್ನು ಪಡಕೊಂಡು ಇದರ ಆಧಾರದಿಂದ ಹಿಸೆದಾರರ ಪಟ್ಟಿಯು ತಯಾರಿಸಲಾಗುತ್ತದೆ. ಈ ರಿಜಿಸ್ಟ್ರಿ ಮುಂತಾದ ನಕಲು ದೊರೆತಕೂಡಲೆ ಮಹಾಸಭೆಯ ಕೂಡಬೇಕಾದ ತಾರೀಕು ನಿರ್ಣಯಿಸಲ್ಪಟ್ಟು ಕೂಡಲೇ ತಿಳಿಸಲಾಗುವುದು.

(ಅಪ್ಪಣೆ ಪ್ರಕಾರ)

M. Shridara Kudva,
Secretary.

The Canara Public Conveyance Co. Ltd., Mangalore.

ಮದ್ದು ಕೊಡಬೇಡಿ! ನಮ್ಮ ರೋಗಿಗಳನ್ನು ಸುಮ್ಮನೆ ಪರೀಕ್ಷಿಸುವೆವು!!

ರೋಗಿಗಳೇ ಹೆದರುವಿರೇಕೆ? ಇಂಗ್ಲಿಷ್ ಔಷಧಗಳ ಬೆಲೆಯೂ ಹೆಚ್ಚು, ಡಾಕ್ಟರರ ಚಾರ್ಜೂ (ಫೀ) ಹೆಚ್ಚಿದೆಯೇ? ಹಾಗಾದರೆ ನಮ್ಮಲ್ಲಿಗೆ ಬನ್ನಿ! ನಾವು ನಿಮ್ಮನ್ನು ಹಣ ತೆಗೆದುಕೊಳ್ಳದೆ ಪರೀಕ್ಷಿಸಿ, ಆ ದಿವ್ಯವಾದ ಇಂಗ್ಲಿಷ್ ಔಷಧಗಳಿಗೆ ಸಮಾನವಾದ ಸುಲಭ ಬೆಲೆಯುಳ್ಳ ಆಯುರ್ವೇದೀಯ ಔಷಧಗಳನ್ನು ಕೊಟ್ಟು ಗುಣಪಡಿಸುವೆವು.

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮಾಯಿ ದೇವಾಲಯದ ಮುಂದಿನ ರಸ್ತೆ, ಮಂಗಳೂರು.

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ, ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

ಇವರು ಹೊಸಬರಲ್ಲ! ಏಕೆಂದರೆ ಭಯಂಕರವಾದ ನ್ಯೂಮೋನಿಯಾ, ಪ್ಲ್ಯೂರಸಿ, ಟ್ಯಾಫಾಯಿಡ್, ಕೊಲೆರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಷ್ಟಸಾಧ್ಯವೂ ಗೂಢವೂ ಆದ ರೋಗಗಳನ್ನು ದಿವ್ಯ ವನಸ್ಪತಿಗಳ ಮೂಲಕ ಸ್ವಲ್ಪ ಕಾಲದಲ್ಲಿಯೇ ಗುಣಪಡಿಸಿ ಸುಪ್ರಸಿದ್ಧರಾಗಿರುವರು. ಬಂದು ಒಂದು ಸಾರಿ ಪರೀಕ್ಷಿಸಿ ನೋಡಿ!

ಅಪೂರ್ವ ಗ್ರಂಥ.

ಪಂಚರಾತ್ರಾಂತರ್ಗತ ಪದ್ಮಸಂಹಿತೋಕ್ತ "ಸಹಸ್ರಕಲಶಾಭಿಷೇಕ" ವಿಧಾನವು ಸಾಂಗೋಪಾಂಗ, ಸಮಂತ್ರಕ, ಸಚಿತ್ರವಾದದ್ದು ಅಚ್ಚು ಮಾಡಿದೆ. ಕಾಪಿರೈಟ ಹಕ್ಕು ಪ್ರಕಾಶಕರದ್ದು.

ಪುಸ್ತಕ ಸಿಕ್ಕುವ ಸ್ಥಳ:—

ಲಕ್ಷ್ಮಣಭಕ್ತ ಫ್ರೀರೀಡಿಂಗ್ ರೂಮ್ ಮತ್ತು ಲೈಬ್ರರಿ.

ಮಂಜೇಶ್ವರ, (ದಕ್ಷಿಣ ಕನ್ನಡ).

ನೋಟೀಸು.

ಸಹಸ್ರ ಕಲಶಾಭಿಷೇಕಕ್ಕೆ ಆಗತ್ಯವಾದ ಮಂಟಪರಚನಾಕ್ರಮ ಕಲಶಗಳಲ್ಲಿ ಹಾಕತಕ್ಕ ದ್ರವ್ಯಾದಿಗಳ ಹೆಸರು (ಮದ್ದುಗಳು ವಗೈರೆ ಸಾಮಗ್ರಿಗಳ ವಿವಿಧ ಭಾಷೆಗಳ ಹೆಸರು, ಗುರುತುಗಳು) ಇತ್ಯಾದಿ ಸಂಪೂರ್ಣ ಅನುಭವ ಈ ಕೆಳಗೆ ಹೆಸರು ಕಾಣಿಸಿದವರಿಂದ ಪಡೆಯಬಹುದು. ಸ್ವಾರ್ಥತ್ಯಾಗಿಯಾಗಿ ನಕ್ಷಿರುಳಿನಲ್ಲಿ ಕೂಡಾ ಅನುಭವ ಕೊಡುವರೆ ಸಿದ್ಧರಾಗಿರುತ್ತಾರೆ.

ಮ್ಯಾನೇಜರ್,

ವಿಶ್ವವೈದ್ಯಾಲಯ, ಮಂಜೇಶ್ವರ.

WANTED.

A cash-keeper, must be of respectable family. Cash security deposit. Pay according to qualification.

Apply to:—

Peirce Leslie & Co. Ltd.,
Mangalore.

The Canara Bank Ltd, Mangalore.

ಕೆನರಾ ಬ್ಯಾಂಕು ಲಿಮಿಟೆಡ್, ಮಂಗಳೂರು.

NOTICE.

It is hereby given that under section 37 of the Indian Companies Act No. VII of '13 the Directors have resolved that the register of members be closed from Monday the 2nd February 1920 to Sunday the 22nd February 1920 (both days inclusive.)

ನೋಟೀಸು.

ಇಂಡಿಯನ್ ಕಂಪೆನಿ ಆಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಬ್ಯಾಂಕಿನ ಪಾಲುಮಾಲಿಕರ ರಿಜಿಸ್ಟ್ರಿಯು (Register of Members) ಇದೇ ಫೆಬ್ರವರಿ ತಾರೀಕು 2ನೇ ಸೋಮವಾರ ಲಾಗಾಯತು ಫೆಬ್ರವರಿ ತಾ. 22ನೇ ಆದಿತ್ಯವಾರದ ವರೇಗೆ ಶೇರುಗಳ ವಹಿವಾಟು ನಡಿಸದಂತೆ ಮುಚ್ಚಲ್ಪಡತಕ್ಕದ್ದಾಗಿ (closed) ಡೈರೆಕ್ಟರರುಗಳು ನಿರ್ಣಯಿಸಿರುತ್ತಾರೆ ಎಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ.

(By order)

Canara Bank Ltd.
Mangalore, 10—1—1920.

T. Gopal Naik,
Secretary.

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನಂ ಮಾಘ ಶು|| ೪ ಶನಿವಾರದಿಂದ ಮಾಘ ಶು|| ೧೦ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ ನೆಯ ಜನವರಿ ಫ್ರಯಿಡೇ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ.
24	ಶನಿ	[illegible]	[illegible]	ಶತಭಿಷಾ	[illegible]	೧೦	7·0	6·26
25	ರವಿ	[illegible]	[illegible]	ಪೂ. ಭಾ.	[illegible]	೧೧	7·0	6·26
26	ಸೋಮ	[illegible]	[illegible]	ಉ. ಭಾ.	[illegible]	[illegible]	7·0	6·27
27	ಕುಜ	[illegible]	[illegible]	ರೇವತೀ	[illegible]	[illegible]	6·59	6·27
28	ಬುಧ	[illegible]	[illegible]	ಅಶ್ವಿನೀ	[illegible]	[illegible]	6·59	6·28
29	ಗುರು	[illegible]	[illegible]	ಭರಣಿ	[illegible]	[illegible]	6·59	6·28
30	ಶುಕ್ರ	೧೦	[illegible]	ಕೃತ್ತಿಕಾ	[illegible]	[illegible]	6·59	6·29

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಜನವರಿ)

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕಪಕ್ಷ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ
16	92—4	69—2	—	...
17	90—0	70—5	—	...
18	88—7	69—9	—	...
19	90—5	69—3	—	...
20	89—8	69—4	—	...
21	92—0	68—2	—	—
22	90—6	69—2	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಕತಿ ಅಕ್ಕಿಮುಡಿ ಗಳ್ಯ	...	9—14	10— 8
ಗುಮ್ಮ ,, ,,	...	9— 0	9— 8
ಹೊಸ ರಾಶಿ ಮುಡಿ ಗಳ್ಯ	...	8—12	9— 4
ಅವಲಕ್ಕಿ ಬೆಳ್ತಿಗೆ ,,	...	11— 8	12— 0
ಗುದ್ದು ಬೆಳ್ತಿಗೆ ,, ,,	...	10— 4	10— 8
ರಂಗೂನ ಬೆಳ್ತಿಗೆ ಗೋಣಿ ಗಳ್ಯ	...	13— 0	16— 0
ಗೋದಿ ಗೋಣಿ ಗಳ್ಯ	...	25— 8	26— 0
ಜೋಳ ಗೋಣಿ ಗಳ್ಯ	...	15— 4	16— 0
ಕಡಲೆ ಗೋಣಿ ಗಳ್ಯ	...	22— 8	23— 0
ತೊಗರಿ ಗೋಣಿ ಗಳ್ಯ	...	20— 0	21— 0
ತೊಗರಿಬೇಳೆ ಗೋಣಿ ಗಳ್ಯ	...	26— 0	31— 0
ಉದ್ದು ಗೋಣಿ ಗಳ್ಯ	...	22— 8	23— 0
ಹೆಸರು ಗೋಣಿ ಗಳ್ಯ	...	22— 8	23— 0
ಊರು ಬೆಲ್ಲ ಖಂಡಿ ಗಳ್ಯ	...	75— 0	80— 0
ಉಪ್ಪು ಗೋಣಿ ಗಳ್ಯ	...	4— 0	4— 6
ಕೊಬ್ರಿ ಖಂಡಿ ಗಳ್ಯ	...	145— 0	155— 0
ಕೊಪ್ಪ ಹಿಂಡಿ ಖಂಡಿ ಗಳ್ಯ	...	36— 0	37— 0
ಎಳ್ಳಿಂಡಿ ಖಂಡಿ ಗಳ್ಯ	...	61— 4	62— 8
ಕೊಬ್ರಿ ಎಣ್ಣೆ ಮಣ ಗಳ್ಯ	...	11— 8	11—12
ಎಳ್ಳೆಣ್ಣೆ ಮಣ ಗಳ್ಯ	...	11—12	11—14
ಹರಳೆಣ್ಣೆ ಚೆಟ್ಟಿನ ಗಳ್ಯ	...	9— 3	9—15
ಮೋರಿಷ ಸಕ್ಕರೆ ಮಣ ಗಳ್ಯ	...	9—10	9—12
ಮೆಣಸಿನ ಕಾಯಿ ಮಣ ಗಳ್ಯ	...	9— 0	9— 8
ನವಣೆ ಮುಡಿ ಗಳ್ಯ	...	14— 8	15— 0
ಕೊತ್ತಂಬರಿ ಮುಡಿ ಗಳ್ಯ	...	5—10	5—12
ಕಾಫಿ ಖಂಡಿ ಗಳ್ಯ	...	315— 0	340— 0
ಹೊಸ ಅಡಿಕೆ ಖಂಡಿ ಗಳ್ಯ	...	110— 0	115— 0
ಹಳೆ ಕಾಳುಮೆಣಸು ಖಂಡಿ ಗಳ್ಯ	...	205— 0	210— 0
ಮೂಲಕ್ಕಿ ಮಣ ಗಳ್ಯ	...	20— 0	25— 0
ಗೇರುಬೀಜ ಮುಡಿ ಗಳ್ಯ	...	5— 8	—
ಕಬ್ಬಿಣ ಖಂಡಿ ಗಳ್ಯ	...	100— 0	120— 0
ತಾಂಬ್ರ ತಗಡು ಮಣ ಗಳ್ಯ	...	30— 0	32— 0
ತಾಂಬ್ರ ಪಾತ್ರಗಳು ಮಣ ಗಳ್ಯ	...	40— 0	44— 0
ಚೀನಿ ಬೆಳ್ಳಿ ಸೇರು ಗಳ್ಯ	...	31— 3	
ಹಿತ್ತಾಳೆ ತಗಡು ಮಣ ಗಳ್ಯ	...	26— 0	

ಆರೋಗ್ಯ ಮಂದಿರ

[illegible]

ವಿಳಾಸ:— [illegible] ಬ್ರದರ್ಸ್,
[illegible] ಮಂದಿರ,
[illegible]

[illegible] ಮೈಸೂರು

[illegible]

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
[illegible] ಬೆಂಗಳೂರು ಸಿಟಿ.

ಅತ್ಯುಪಯುಕ್ತವಾದ ಪುಸ್ತಕಗಳು.

ಕನ್ನಡ ನಾವೆಲ್‌ಗಳು.

		ರೂ.	ಆ.	ಪೈ.
ಅಜಿತಕುಮಾರ	...	0	5	0
ರಘುಮಾಧವ	...	0	6	0
ಕುಮುದಾ	...	0	8	0
ಮಹಾರಾಣಿ ಗೃಹಶೀಲೆ	...	0	3	0
ಶ್ರೇಷ್ಠಿ ನಾರಾಯಣರಾವ್	...	0	4	0
ಚಂದ್ರಗುಪ್ತ ಚಕ್ರವರ್ತಿ	...	1	0	0
ಬಾಲಿಕಾ ನೀತಿಮಾಲಿಕೆ	...	0	2	0
ರಾವಣಶಕ್ತಿ ನಾಶ	...	0	2	0
ಮುಕ್ತಾಹಾರ	...	0	2	0
ಹಿಂದೂ ವ್ರತವಿವೇಕ	...	0	10	0

ದಾಸರ ಪದಗಳು.

		ರೂ.	ಆ.	ಪೈ.
ಪುರಂದರದಾಸರ ಪದಗಳು ಭಾಗ 1	...	0	8	0
ಭಾಗ 2	...	0	8	0
ಉದಯರಾಗ	...	0	4	0
ತುಲಸೀ ಸಂಕೀರ್ತನೆ ಪದಗಳು	...	0	2	6
ಲಕ್ಷ್ಮೀ ಶೋಭನ ಹಾಡು	...	0	2	0
ಹರಿನಾಮ ಸಂಕೀರ್ತನೆ ಪದಗಳು	...	0	5	0

ಫೋರ್ಮುಗಳು ಇತ್ಯಾದಿ.

			ರೂ.	ಆ.	ಪೈ.
ಕೋರ್ಟು ಫೋರ್ಮುಗಳು	100ಕ್ಕೆ	...	0	14	0
ಗೇಣಿಚೀಟು	,,	...	0	14	0
ಪರ್ಮಿಟು	,,	...	0	14	0
ಡಿಮಾಂಡ ನೋಟೀಸ್	,,	...	0	10	0
ಕುಲಿಕಾಂಡಿನ ರಶೀದಿ ಫೋರ್ಮು	,,	...	0	12	0
,, ,,	50ಕ್ಕೆ	...	0	7	0
,, ,,	25ಕ್ಕೆ	...	0	4	0
ಚಕ್‌ರೋಲ್ ಪುಸ್ತಕಗಳು	100 ಪುಟ	...	2	0	0
,, ,,	50 ,,	...	1	4	0
,, ,,	25 ,,	...	0	12	0
ಶಾಲಾ ಹುಡುಗರ ಹಾಜರು ರಿಜಿಸ್ಟ್ರಿ	100 ,,	...	2	0	0
,, ,,	50 ,,	...	1	4	0
,, ,,	25 ,,	...	0	12	0
ಶಾಲಾ ಉಪಾಧ್ಯಾಯರ ಹಾಜರು ರಿಜಿಸ್ಟ್ರಿ	25 ಪುಟ	...	0	12	0

ಇವುಗಳಲ್ಲದೆ ಅಂಗಡಿ, ಫೆಂಡೆಸ್ನಾಶಿ ಸಾಹುಕಾರರಿಗೆ ಅಗತ್ಯ [illegible] ವರ್ಗ-ಊಳಿಗ ಪುಸ್ತಕಗಳೂ ಶಾಲಾ ವಿದ್ಯಾರ್ಥಿಗಳ ಬಗ್ಗೆ ತಯಾರಿಸಿದ ಎಕ್ಸರಸೈಜ ಡ್ರ್ಯಾಯಿಂಗ್ ವಗೈರೆ ಪುಸ್ತಕಗಳೂ ತಯಾರಿವೆ.

ವಿಳಾಸ:— ಮ್ಯಾನೇಜರ್,
[illegible],
ರಥಬೀದಿ, ಮಂಗಳೂರು.

ಕನ್ನಡ ಪ್ರಬಂಧ ಲೇಖನಾ ಕ್ರಮವನ್ನು ಕಲಿಸುವ
ವಿದ್ಯಾರ್ಥಿಗಳ ಕೈಪಿಡಿ.

ಮ. ರಾ. ಎಂ. ಬಾಬು ಬಿ. ಎ., ಎಲ್. ಟಿ. ಯವರಿಂದ ರಚಿಸಲ್ಪಟ್ಟ

ಕನ್ನಡ ಮಾದರಿ ಉಪನ್ಯಾಸಗಳು

(ಮೂರು ಭಾಗಗಳಲ್ಲಿ)

ಒಂದನೆಯ ಭಾಗ—ಲೋವರ್ ಸೆಕೆಂಡರಿ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 6. ಎರಡನೆಯ ಭಾಗ—ಹೈಸ್ಕೂಲ್ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 6. ಮೂರನೆಯ ಭಾಗ—ಕಾಲೇಜು ಕ್ಲಾಸು ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ. ಬೆಲೆ ಆಣೆ 12.

ಪ್ರತಿಗಳು ಸಿಗುವ ವಿಳಾಸ:—
ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

[illegible]

ಗುರುತನ್ನು [illegible]
ಲಕ್ಷ್ಯದಲ್ಲಿಡಿ. [illegible]

ಹಿಂದೂಸ್ಥಾನದಲ್ಲಿ ಬೇರೆಯೂ [illegible] ವನಸ್ಪತಿಗಳಿಂದ ತಯಾರಿಸಲ್ಪಟ್ಟ "ಗಜಕರ್ಣದ ಮುಲಾಮು" [illegible] ಒಂದು ಬಾಟ್ಲಿಯನ್ನು ಇಟ್ಟುಕೊಳ್ಳತಕ್ಕದ್ದು ಅಗತ್ಯ. ಒಂದು ಡಜನಿಗೆ ರೂ. 3—0—0. 24 ಬಾಟ್ಲಿಗೆ ರೂ. 5—8—0. 50 ಬಾಟ್ಲಿಗೆ ರೂ. 10—0—0. ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" [illegible]

ಸೂಚನೆ:—ನಾವು ಮುಂಬಯಿಯಿಂದ [illegible]

Manora & Co.,
Hill Road, P. O. Bandra,
BOMBAY.

ಸುಗಂಧ ಕಲ್ಪನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅತ್ಯುತ್ತಮವಾದ 30 ವಿಧ ಊದಿನಕಡ್ಡಿ, ಅನೇಕ ವಿಧ ಗಂಧದ ಬತ್ತಿ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್ ಇತ್ತರ್, ಅನೇಕ ಬಗೆ ಸುವಾಸನೆ ಎಣ್ಣೆ, ಸ್ನೋ, ಪಮೇಡ್, [illegible] ಇವೇ ಮೊದಲಾದ [illegible] ವಿಷಯಗಳು, [illegible] ಬಿಲೆ ರೂ. 1—0—0.

ವಿಳಾಸ:— ಕೆ. ಪುಟ್ಟಪ್ಪ, [illegible] ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

ಉಚಿತ. [illegible] ಸೆಂಟ್ ಬಾಟ್ಲಿಗಳು. ಉಚಿತ.

ಮಹೋನ್ನತವಾದ ಫೌಂಟನ್ ಪೆನ್.



ಈ ನಿಬ್ಬಿನಲ್ಲಿ ಇರುವ ಪೆನಾ [illegible] ಮುಲಾಮಿನಿಂದ [illegible] ಪ್ರತಿಯೊಂದು [illegible] ಸುವಾಸನೆಯ (Best Perfume) ಬಾಟ್ಲಿಗಳು [illegible]

ಬಹುಮಾನ ಸಹಿತ ಒಂದು ಪೆನ್ನಿನ ಬೆಲೆ ರೂ. 1—10—0.

ನಮ್ಮ ವಿಳಾಸ:— ಮಹಾರಾಷ್ಟ್ರ ಟ್ರೇಡಿಂಗ್ ಕಂಪೆನಿ,
[illegible] ತಿರುಪಳ್ಳಿ ಬೀದಿ, ಮದರಾಸ್.

ಯೂರೋಪಿಯನ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ
ನಾಂಡಾ ಆಯಿಲ್ (ನರಗಳ ಶಕ್ತಿವರ್ಧಕ ತೈಲ).

ಅನೇಕರು ಬಾಲ್ಯದಲ್ಲಿ [illegible]

ಕ್ರಯ ಪ್ರತಿ ಬಾಟ್ಲಿಗೆ ರೂ. 1—0—2.

ನಮ್ಮ ವಿಳಾಸ:— [illegible] ಕಂಪೆನಿ,
[illegible]

[illegible] ಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
[illegible]				[illegible]	0	2	0
[illegible]	0	4	0	[illegible]	0	6	0
[illegible]	0	8	0	[illegible]	1 0	4	0
[illegible]	0	12	0	[illegible]	II 0	3	0
[illegible]	1	4	0	[illegible]	III 0	4	6
[illegible]	1	4	0	[illegible]			
[illegible]	1	8	0	[illegible]	0	6	0
[illegible]				[illegible]	0	1	6
[illegible]	1 0	4	6	[illegible]	0	8	0
[illegible]	0	6	0	[illegible]	0	6	0
[illegible]	0	3	0	[illegible]	2	0	0
ರಘುವಂಶ	0	10	0	[illegible]	0	12	0
[illegible]	0	13	0	[illegible]	0	3	6
[illegible]	0	14	0	[illegible]	0	10	0
[illegible]	0	14	0	[illegible]	0	12	6
[illegible]	1	0	0	[illegible]	0	8	0
[illegible]	0	2	0	[illegible]	0	12	0
[illegible]	0	2	0	ನ ಹಾರಾಡ ಅಭ್ಯಾಸ ಬಾಯಿ	0	12	0

ಇತ್ಯಾದಿ ಎಲ್ಲಾ ಕನ್ನಡ ಪುಸ್ತಕಗಳು ನಮ್ಮಲ್ಲಿ ಸಿಗುವುವು. [illegible]

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.
ಇಂಡಿಯಾ ಸರಕಾರದಲ್ಲಿ [illegible] ಅನ್ವಯ
ಟ್ರೇಡ್ ಮಾರ್ಕ್ ರಿಜಿಸ್ಟರ್ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಸಮರ್ಪಕವಾಗಿ [illegible]

ರೋಗದ ನಾಮಗಳು.

[illegible]

ಹೆಚ್. ಎಂ. ಮುಲ್ಲಾ, ಸಂಶೋಧಕ ಅರ್ಕಶಫಾ,
33 [illegible] (ಬೆಳಗಾವಿ).

ಪ್ಲೇಗನ್ನು ನಿರ್ಮೂಲವಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.—

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈನೂದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ. ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1—4—0 ಚಿಕ್ಕ ಸ್ವಾಜು ಆಣೆ 12. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ಶತಧೌತ ಘೃತಗಳೆಂಬ ಈ ಘೃತವು ಪ್ಲೇಗ್ ಬ್ಯೂಬೋ ಎಂಬ ಗಡ್ಡೆಯನ್ನು ಹುಟ್ಟುವಾಯ ಕರಗಿಸುವದಲ್ಲದೆ, ಹಳೆ ವ್ರಣ ಮತ್ತು ನಾರುವ ಹುಣ್ಣುಗಳನ್ನು ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 14. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಆತಂಕನಿಗ್ರಹ ಗುಳಿಗೆಗಳು.

ಈ ಗುಳಿಗೆಗಳು ಆರೋಗ್ಯವನ್ನು ಕೊಡುತ್ತ, ರಕ್ತವನ್ನು ಶುದ್ಧಿ ಮಾಡಿ ಯವ್ವನವನ್ನು ಕಾಪಾಡುತ್ತ, ಸ್ವಪ್ನೇಂದ್ರಿಯವನ್ನು ಸ್ಥಿರಪಡಿಸುತ್ತವೆ. 32 ಗುಳಿಗೆಗಳಿಗೆ ರೂ. 1—0—0.

ಅಮೃತಾಂಜನ ಅವಲೇಹ.

ಇದು ರಕ್ತವನ್ನು ಶುದ್ಧಿಮಾಡುತ್ತ, ಸ್ವಪ್ನೇಂದ್ರಿಯ, ಧಾತುನಷ್ಟ ಮುಂತಾದವುಗಳನ್ನು ನಿಲ್ಲಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತ, ಶರೀರದಲ್ಲಿರುವ ಅಧಿಕವಾದ ಉಷ್ಣವನ್ನು ಕಡಿಮೆಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತ, ಕ್ಷಯ ಮುಂತಾದ ತಕ್ಷಣ ವಾತ ರೋಗ ಮುಂತಾದುವನ್ನು ವಾಸಿಮಾಡುತ್ತದೆ. 20 ತೊಲದ ಡಬ್ಬಿಗೆ ರೂ. 2—0—0.

"ಕಾಮಶಾಸ್ತ್ರ"

ದಕ್ಷ ನವೀನವಾಗಿ ಶೋಧಿಸಿದ್ದೇವೆ! ಈ ಪುಸ್ತಕವು ನಿಮಗುಬಿತ; ಬಹುಮಾನ;— ಪಾರಿತೋಷಕ!!!

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್ಸ್, ಗೋವಾ, ಫೀಜಿಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿದ್ದಾರೆ.

ಮಹಾಭಾಗ್ಯ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಹಾಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತಜ್ವರ, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಟಿನ, ಬಹುಜಿನಡ, ಕೆಟ್ಟ ಹವಾ ಮತ್ತು ಕಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳತು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತ ಅತ್ಯುಪಯೋಗವಾಗುವಂತೆ ಗುಣಪಡಿಸುತ್ತದೆ.

- ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
- ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
- ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುತ್ತದೆ. 260 ಮಾತ್ರೆಗಳುಳ್ಳ ಸೀಸೆಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗ್)—ಅನೇಕ ಸಲ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೊಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ಕಾಣಿ ಹೇಳುವಿರಿ. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ಸರಿದು ಹೋಗುತ್ತದೆ. ಸೀಸೆಗೆ 8 ಆಣೆ. 5ಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ವೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಪುಷ್ಟಿಕರವಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚುರುಕಾಗಿ ಆರೋಗ್ಯಶಾಲಿಗಳಾಗುತ್ತಾರೆ. ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ಪಾಳ್ಯನ್ನ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಡಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆ ಯಿಂದ — ವೀರ್ಯವು ಕೆಟ್ಟಿರುವಂತೆ



ಇದ್ದರೂ ಸ್ವಪ್ನೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿ ಇಡುವುದು. ಮೆದುಳಿಗೆ ಬಲವನ್ನು ಉಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕಟ್ಟುವುದು, ಸೊಂಟದ ನೋವು ಸ್ವಲ್ಪವೂ ಇರದಂತೆ ಮಾಡುವುದು. ಈ ಸಾಲಾಮಿಸ್ರಿ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರೂಪಿಸಬಹುದಾದರೆ ಮೇಲೆ ಕಂಡ ಬಹುಮಾನವನ್ನು ಕೊಡಲ್ಪಡುತ್ತದೆ. ನಾವು ಹೀಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು 40 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 3-4 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರ ವರೆಗೂ ಗುಣ ಕೊಡುತ್ತದೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

ಈಗ ಧಾಂಗಿಯ ಬಾಜಾರ ಹೆಚ್ಚಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೊ, ಬೆಂಗಳೂರು ಸಿಟಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬ್ಲಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗತ, ಉಳುಕು, ಛಳಿಯು, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ಗರ ಕಿಮ್ಮತು 0—2—0; ಒಂದು ಡಜನು ಬಾಟ್ಲಿಗಳಿಗೆ ರೂ. 1—8—0.

"ಗಜಕರ್ಣದ ಮುಲಾಮು"

ಗಜಕರ್ಣ, ಖುನುಬು, ಖಜ್ಜಿ, ದದ್ರು, ಹುಳುಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಚ್ಚುವವರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಗಕ್ಕೆ 0—2—0; ಒಂದು ಡಜನಿಗೆ ರೂ. 1—8—0.

ನಮ್ಮ ಔಷಧಗಳ ಗುಣೋತ್ಕರ್ಷತೆಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಪದಕಗಳು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು. ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡಿರಿ.

ದಿ. ಮ್ಯಾನೇಜರ್—ಶ್ರೀ ದೇವೀಪ್ರಸಾದ ಕಂಪೆನಿ,
ಪೋಸ್ಟು ಚಾಕೂರು, ದ. ಕನ್ನಡ.

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಬೇನು ಇತ್ಯಾದಿ ಖಂಡಿತವಾಗಿ ಗುಣವಾಗುತ್ತವೆ. ಕೊರತಿಯೂದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವೇ ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಸೀಸೆ 1ಕ್ಕೆ ಕ್ರಯ ರೂ. 1—4—0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ 12 ಸೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸ್ಪ್ರಿಂಗ ಸಾದ ಕಾಫಿ ಹುಡಿ.

I	ಕ್ಲಾಸ್	0—10—0	ಒಂದು ರಾತ್ರಿ
II	ಕ್ಲಾಸ್	0—8—0	
III	ಕ್ಲಾಸ್	0—6—0	

ಹೊಟೇಲುಗಳಿಗೂ ವರ್ತಕರಿಗೂ ಧಾರಾಳವಾಗಿ ಮೈಲಪಾಸೆಯ ಮೇಲೆ ರವಾನಿಸಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತವೆ.

STANY BROTHERS, MANGALORE.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಿಡಿಸುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು.



ಇದರಲ್ಲಿ ರಾತ್ರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಕಠಿಣ ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.

ನಮ್ಮ ವಿಳಾಸ:— ವಿ. ಪಿ. ಎಸ್. ಪಾಣಿ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣವಾಗಿರುವ ತಯಾರಿಸಿದ

1920ನೆಯ ಇಸವಿ ಕ್ಯಾಲೆಂಡರ್.

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚಿಗಾಗಿ ಎರಡಾಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—
ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES.

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಜರೀ ಬಣ್ಣದ ಸೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಛಾಪಾಯಿಸಿದ "ನೇತ್ರಾನಂದ" ಕರವಾದ ಸೀರೆಗಳು ಕೆಳಗಿನ ಕಂಪೆನಿಯವರ ಹತ್ತಿರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನೂತನ ಕೆಂಪು (Congo Red) ಹರವ ಮತ್ತು ಇತರ ಬಣ್ಣಗಳು ಕಡಿಮೆ ಕ್ರಯದಲ್ಲಿ ಸಿಕ್ಕರಿಕುವವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಸೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟ, ಮಂಗಳೂರು.

ಡಾಕ್ಟರ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಿಗಳು.

1. [illegible] ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, [illegible] ಹೃದಯದ ರುಬಿಟ್ಟ ಲಿಪ್ಟರ (ಕಾಲರ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ [illegible] ಆರೋಗ್ಯವನ್ನುಂಟುಮಾಡುವದು. [illegible] ಯ ದಿವ್ಯ [illegible] ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. [illegible] ಬಾಟ್ಲಿ ಗಕ್ಕೆ ರೂ. [illegible] ಟಿ. ಪ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲಕ್ಕೆ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂಧುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ಗಕ್ಕೆ ರೂ. [illegible]

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. [illegible] ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. [illegible]

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ಗಕ್ಕೆ ರೂ. [illegible]

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶೋರನುರ, (ಮಲೆಬಾರ).

[illegible] ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ [illegible] ಸಾಮಾನುಗಳು ಇರುವ ಚಿಕ್ಕ ಸೆಟ್ಟು ಗಕ್ಕೆ ರೂ. [illegible] ಮಧ್ಯಮ ತರದ ಸೆಟ್ಟು ಗಕ್ಕೆ ರೂ. [illegible] ದೊಡ್ಡ ಸೆಟ್ಟು ಉತ್ತಮತರದ ಗಕ್ಕೆ ರೂ. [illegible]

ದೇಶ, ಸಾಮಾನು ವಗೈರೆ ಕಟಿರಾಗು ಬೇಕಾದವರಿಗೆ ಇನಾಮಾಗಿ ಕಳಿಸಲಾಗುತ್ತದೆ.
ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS — Siromani Narayanacharya,
Chaukamba, BENARES CITY.

ವಿಳಾಸ — ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ಅಪೂರ್ವ ಸಂದರ್ಭ.

ಅಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಹಿಡುಬಾರದ ವರಾದರೂ ಕಾಲಾ ಹಳ್ಳಿಗಳಲ್ಲಾದರೂ ಪಟ್ಟಣಗಳಲ್ಲಾದರೂ ಚರೋ ಜೀವನ ಬುಡಿಯಲಿಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು ಆಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ವಿಶೇಷ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ಸಮಗೆ ಬರೆದಲ್ಲಿ ಪ್ರಕಟ ಕೊಡುವೆವು.

M. Anantha Prabhu,
The Tailoring House and
School of Scientific Tailor's Cutting,
MANGALORE, SOUTH KANARA.

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.
ವಿಳಾಸ:—

ರಾಜವೈದ್ಯ ನಾರಾಯಣಜೀ ಕೇಶವಜೀ,
೩೭, ಜೈನಾಬಜಾರು ರೋಡು, ಮದರಾಸು.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು. ಕಾಗದಗಳು ಕಾರಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ	110	ಅಕ್ಷರಗಳ ಪೆಟ್ಟಿ	ರೂ.	1–8–0
„	170	„	„	1-14–0
„	250	„	„	2–8–0
„	350	„	„	3-12–0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. [illegible]

ಈ ಗಡಿಯಾರವು ನಿಕಲಿನದಾಗಿರುವದಲ್ಲ, ಫೇಸ್, ಧೂಳು ಸೇರದಂತೆ ಎರಡು ಕದವೂ ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನವೀನವಾಗಿ ತಯಾರಿಸಿದೆ. ಬಹುಮಾನಗಳ ವಿವರ:— ಕರಿಪೆಟ್ಟಿ ೧, ಕನ್ನಡಿ ೧, ಗುಂಡಿಗಳು [illegible] ಟಿನ ರೋಜಾ ಹೂವು ೧, ಬೀಸಣಿಗೆ ೧, ಬ್ರೂಚ್ ೧, ಬಾಚಣಿಗೆ ೧ [illegible] ೧೧ ಬಹುಮಾನಗಳ ಸಹಿತ ರೂ. [illegible]

ವಿಳಾಸ:— ರಾಸ್‌ವಾಚ್ ಎಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಭಾಷೆ.

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ ಮತ್ತು ಎಲ್ಲರಲ್ಲಿಯೂ ಬಳಕೆಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಪದ್ಯಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ ಶಾಸ್ತ್ರರೀತಿಯಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು, ಅಲಂಕಾರಗಳು, ಸ್ವರಜತಿಗಳು, ವರ್ಣಗಳು, ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ತೆಲುಗು ಕೀರ್ತನೆಗಳು ಸಹ ಸ್ವರಸಹಿತ ಕೊಡಲ್ಪಟ್ಟಿರುತ್ತದೆ. ಈ ಭಾಷೆಯಲ್ಲಿ ಎರಡನೆ ಭಾಷೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳಿವೆ. ಪುಟಗಳು [illegible] ಬೆಲೆ ೧೦ ಆಣೆ.

ರಾಮಾಯಣ ಸಂಗ್ರಹ ಬಾಲಕಾಂಡ [illegible] ಸುಭದ್ರ [illegible]

ವಿಳಾಸ:—

ಎಚ್. ಎಸ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗೊನೊರ್ಯಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ:— 2 ಘಂಟೆಗೆ ಒಂದಾವರ್ತಿ 5 ಹನಿದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ,
ಮಂಗಳೂರು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರೆದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಸ್. ರೆಡಿ ಸೆಟ್ಸ್ ರೇಜರು ಮತ್ತು ದಸ್ತೂರದ ಎಂಟಿಟೇಜ್ ಎಂಬುವ ಜ್ವರದ ಔಷಧವು ನಮ್ಮಲ್ಲಿ ದೊರಕುತ್ತದೆ. ಶೀಘ್ರದಲ್ಲಿ ಬರೆಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.
Jamnadas Building, Pitha Street,
FORT, BOMBAY.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು ರಾ. ಆಲೇಮಾನ ವೆಂಕಟರಾವ್ ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

☞ ಇದನ್ನು ಮದ್ರಾಸ ಸರಕಾರದವರು [illegible] ವರ್ಷದ ಇಂಟರ ಮೀಡಿಯಟ್ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಲು ಪ್ರತ್ಯೇಕ. ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶಾಶ್ವತವಾದ [illegible] ದುರಭ್ಯಾಸಗಳಿಂದ [illegible] ಮದ್ದಿಂದ [illegible]

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಟು ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷವು [illegible] ವಾತಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, [illegible] ಶರೀರದಲ್ಲಿ ರಕ್ತವು ಕಡಿಮೆಯಾಗಿದ್ದರೂ, [illegible] ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಸಿರು ಬರುವದೂ, [illegible] ಸಕಲರೋಗ ಸಂಹಾರಿಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದೂ ಇಲ್ಲವು. ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು. ಕ್ರಯ 15 ತೊಲೆ ಡಬ್ಬಿ 1ಕ್ಕೆ ರೂ. 2—0—0.

ವಿಳಾಸ:— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 308

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪. ಮಂಗಳೂರು, ತಾರೀಕು ೩ನೇ ಜನವರಿ ಶುಕ್ರವಾರ ೧೯೧೦. ಸಂಚಿಕೆ ೫೧

'ನೈಟ್ರೇಟ್ ಆಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖ್ಯಾತಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಇದು ಎಲ್ಲೆಲ್ಲಿಯೂ ದೊರಕುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪ್ಪೊ,

6-7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಕೋಲೇರಾ! (ವಾಂತಿಭೇದಿ)

ವಾಂತಿಭೇದಿಯಿಂದ ಉಂಟಾದ ಹಾವಳಿ ಏನೆಂಬುದು ಈ ಕಾಲದಲ್ಲಿ ಸರ್ವರ ಸ್ಮರಣೆಯಲ್ಲಿರಬಹುದು.

ಬಡಜನರು ಹೊಸ ಅಕ್ಕಿ ಈಗಲೇ ಊಟಮಾಡುವುದರಿಂದ ಈ ವಾಂತಿಭೇದಿಯು ಇನ್ನೂ ಹಬ್ಬುವ ಸಂದೇಹ ಇದೆ. ಇಂಥ ಕಾಲದಲ್ಲಿ ಜೀವಕ್ಕೆ ಯಾಕೆ ಅಪಾಯವನ್ನು ತಂದುಕೊಳ್ಳುವಿರಿ. ಕೂಡಲೆ ಈ ಕೆಳಗಿನ ಔಷಧಿಯನ್ನು ಸಂಗ್ರಹಿಸಿಕೊಳ್ಳಿರಿ.

'ಕೆಂಪೊರೀನ್'

CAMPHOREINE

ಎಂಬ ಲೋಕಪ್ರಸಿದ್ಧವಾದ ಈ ಪರಿಹಾರದ ಔಷಧವನ್ನು,
ದಿ. ಓರಿಯಂಟಲ್ ಸ್ಪೆಸಿಫಿಕ್ ಡಿಪ್ಪೊ, ವೆಪರಿ, ಮದ್ರಾಸು

The Oriental Specific Depot,
Vepery, MADRAS.

ಈ ವಿಳಾಸಕ್ಕೆ ಬರದಲ್ಲಿ ಸಿಕ್ಕುವುದು.
ಬೆಲೆ ೧ ರೂಪಾಯಿ. ಇದರಲ್ಲಿ ಅಂಚೆಹಾಸಲು ಸೇರಿಲ್ಲ.

ವಾತಶಮನಾಯು

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರುಗಳಿಂದನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳು, ಯೋಗ್ಯತಾಪತ್ರಗಳು ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಶಮನಾಯು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಗಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾಮಾಲೆ, ಉಬ್ಬಸ, ಕೆಮ್ಮು ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, ಮೊದಲಾದವುಗಳಿಗೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದಿವೆ ಉಪನಯನಗಳು, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗಿ ವಸ್ತ್ರಗಳು, ಧೋತಿಗಳು, ಟೊಪ್ಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ವರ್ತಕ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭದರಗಳು, ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ

ಡಿಶಂಬರ — ಜನವರಿಗಳ ಸಂಚಿಕೆಯು ಪ್ರಕಟವಾಗಿರುವುದು.

ಇದರಲ್ಲಿ ಬರುವ ಮುಖ್ಯ ವಿಷಯ:— ಭಕ್ತಿಯ ವಿಚಾರ, ಸುಪ್ರಸಿದ್ಧ ಸ್ವಾಮಿ. ಶ್ರದ್ಧಾನಂದರ ಸಂಕ್ಷಿಪ್ತ ಜೀವನಚರಿತ್ರೆ, ಮಹಾತ್ಮ ಶ್ರೀಮನ್ಮಧ್ವಾಚಾರ್ಯರ ಜೀವನಚರಿತ (ಛಾಯಾಚಿತ್ರಗಳ ಸಹಿತ); ಶ್ರೀಯುತ ಅರವಿಂದ ಘೋಷರು ತಮ್ಮ ಚೆಂಡತಿಗೆ ಬರೆದ ಪತ್ರಗಳು; ದೇಶೀಯ ವಿದ್ಯಾಭ್ಯಾಸ, ಚಾಣಕ್ಯನ ಧರ್ಮಶಾಸ್ತ್ರ, ಪ್ರಾಸಂಗಿಕ ಟಿಪ್ಪಣಿಗಳು, ಚಂಪೀವಿಭಾಗ, ಇವೇ ಮುಂತಾದ ಅನೇಕ ವಿಷಯಗಳು, ಪುರವಣಿ (ಸಪ್ಲಿಮೆಂಟ್)ದಲ್ಲಿ "ಅಮೃತಕಲ" [illegible]
ಇದರಿಂದ ಬಾಹಿರಾತ್ತುಗಾರರಿಗೆ ವಿಶೇಷಲಾಭವಾಗುವುದು. ದರ್ಶಕ್ಕೆ ಬರೆಯಬೇಕು.
[illegible] ಜೀವನ ಚರಿತ್ರೆ (ಚಿತ್ರ ಸಹಿತ) ಕ್ರಯ ೪ ಆಣೆ.
ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ ಕ್ರಯ ೪ ಆಣೆ.
ವಾರ್ಷಿಕ ವರ್ಗಣಿ ರೂ. ೨-೮-೦. ಮಾದರಿ ಸಂಚಿಕೆಯ ಬೆಲೆ ೩ ಆ.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂ ರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು
ಮತ್ತು
ಹೋಮ್ಯೋಪಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಯೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಯೆ 7½ ಘಂಟೆಯಿಂದ ರಾತ್ರಿ 9 ಘಂಟೆ ತನಕ, ಸುಲಭವಾದ ದರದಲ್ಲಿ ಮಾರೋಣಾಗುತ್ತವೆ:

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ	0—3—6
,, 4	,,	,,	0—6—0
,, 1 ಔನ್ಸಿನ	,,	,,	0—12—0
ಹೋಮಿಯೋಪಥಿಕ್ 2 ಡ್ರಾಮಿನ	,,	,,	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಭವನ)
ರಥಬೀದಿ, ಮಂಗಳೂರು.

Authorised capital	[illegible]
Issued capital	[illegible]
Subscribed capital	1,33,550—0—0
Paid up capital	39,302—1—11
Deposits	59,397—1—9
Reserve and other Funds	5,258—9—6

Fixed deposits received for 3, 6, 9 months at 6½% for 1 year and above at 7% at the discretion of the Managing Committee. In the case of all deposits interest will be paid quarterly.

Cummulative deposits are received repayable in 45 months at Rs. 50/- per each rupee deposited monthly.

Current a/c deposits opened free of charge and interest will be paid at 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the last year. Shares are available.

Payments to the Corporation may be made to the credit of the Corporation at the Bank of Madras, Mangalore.

[illegible]	39,302—1—11
ಠೇವಣಿಗಳು	59,397—1—9
ಕ್ಷೇಮನಿಧಿ ಮತ್ತು ಇತರ ಫಂಡುಗಳು	5,258—9—6

ಕಾಯಂ ಠೇವಣಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡೋಣಾಗುವದು. ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು.

ಪ್ರತಿ [illegible] ರೂ. 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡೋಣಾಗುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳೋಣಾಗುವವು. ಪ್ರತಿ ತಿಂಗಳ 4ನೇ ತಾರೀಕಿನಿಂದ ಅಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ವೊಬಲಗಿನ ಮೇಲೆ ಸಾಲಿಯಾನ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು.

ಯೋಗ್ಯ ಜವಾಬ್ದಾರಿಯು ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತವೆ.

ಪಾಲುವಾಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡೋಣಾಗಿಯದೆ. ಶೇರುಗಳು ವಾರಾಟಕ್ಕೆ ತಯಾರಿವೆ.

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ವಸೂಲು ಕೊಡಬಹುದು.

UDIPI,
1st, December 1919.

Naimpalli Ananda Rao,
Secretary.

ಕ್ಷೇತ್ರ ಮಂತ್ರಕ [illegible]

[illegible] ಯುವುದಕ್ಕೆ ಅತ್ಯುತ್ತಮವಾದ ತೈಲ [illegible] ಹಲವರು ಇದನ್ನು ಪರಿಶೋಧಿಸಿ [illegible] ಸುವಾಸನೆಯೂ ಇದೆ. ಸ್ವರ [illegible] ಬಹುದಾಗುತ್ತದೆ.

[illegible] ಸೀಸೆಗೆ ಬೆಲೆ ೧ ರೂಪಾಯಿ.

[illegible] ಮತ್ತು ಕಂಪೆನಿ,
[illegible], ಮದ್ರಾಸ್.

[illegible] ಫಾರ್ ಹೆಲ್ತ್

[illegible] ಮತ್ತು [illegible] ಅತ್ಯಂತ ಹಿತಕರವಾದ [illegible] ಪೀಡೆ ಬಾರದಂತೆ ಆರೋಗ್ಯ [illegible] ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆ ಕ್ರಯ ರೂ. 1—4—0 ಮಾತ್ರ.

ಡಾಯಬೆಟೀಸ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.,
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು.

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅಗ್ಗಣಿ ಮುದ್ದೆ
ಇಲಿಗಳ ಥಕ್ಕ ಥೈ.
ಅಂಗಳ ಮೊಗ್ಗು
ಗುಡುಗುಡು ಗುಮ್ಮಟದೇವರು
ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ. 0—7—0.
ವಿ. ಪಿ. ರೂ. 0—8—0.

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ ವಾಚನಾಭಿರುಚಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ಕರ್ಣಾಟಕ ಮಹಾಶಯರೇ ಓದಿದಿರಾ!

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ, ಇಂಗ್ಲಿಷ, ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ. ಮಾನವ ವರ್ಗದವರಿಗೆ ಬೇಕಾದ ಎಲ್ಲ ರಹಸ್ಯಗಳು, ವೀರ್ಯವೃದ್ಧಿಸುವದಕ್ಕೆ ಕಾರಣಗಳು, ಗರ್ಭಿಣಿ ಅನುಸರಿಸುವ ವಿಧವು, ಗರ್ಭಿಣಿಗೆ ಬೇಕಾದ ಮರ್ಮಗಳು, ನವಮಾಸದ ಪಿಂಡದ ವಿವರಗಳು, ಶಿಶು ಉತ್ಪತ್ತಿ ವಿಧಿ, ಶಿಶು ಸಂರಕ್ಷಣೆ ಮಾಡುವ ವಿಧ, ಸ್ತ್ರೀಧರ್ಮನೀತಿಗಳು, ಮಾಸ [illegible], ಧಾತುರೋಗ ಶಾಸ್ತ್ರ (ಗುಪ್ತವೈದ್ಯ) [illegible] ಕುಟುಂಬ [illegible] ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮ [illegible] ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ [illegible] ಮಾಡುವ ಔಷಧಗಳೂ ಇನ್ನೂ ಅನೇಕ ಭಾಗಗಳಿಂದ ಚಿತ್ರಪಟಗಳ ಸಹಿತ [illegible] ಕಾಗದದಲ್ಲಿ ಪ್ರಿಂಟ ಆಗಿ ಮಾರಾಟಕ್ಕೆ ತಯಾರಾಗಿದೆ. ಕ್ರಯ ಪ್ರತಿಗೆ 12 ಆಣೆ.

ಮೊದಲಿನ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ.

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ.

ಈ ಪುಸ್ತಕದಲ್ಲಿ ನವೀನರೀತಿಯ ಕೋಲ ಚಿತ್ರಗಳೂ, ಅಡಿಗೆ ಮಾಡುವ ವಿಧ, ಭಕ್ಷ್ಯಗಳೂ ಮತ್ತು ಮಿಠಾಯಿ ದಿನಸುಗಳೂ, (Sweetmeats) ಪ್ರಸಾದಗಳೂ, ಕೇಕುಗಳೂ, (Cakes) ಬಿಸ್ಕಟ್ ಗಳೂ, (Biscuits) ಶರಬತ್, (Syrup,) ಉಪ್ಪಿನಕಾಯಿಗಳ ವಿಧಾನಗಳು ಮೊದಲಾದ ದಿನಸುಗಳನ್ನು ಮಾಡುವ ವಿಧಗಳು ಇದರಲ್ಲಿ ಅಡಗಿವೆ. ಪ್ರತಿ ಒಬ್ಬ ಸ್ತ್ರೀಗೂ ಅವಶ್ಯವಾಗಿ ಬೇಕಾದ ಪುಸ್ತಕ. ಕ್ರಯ ಆಣೆ ೬.

ವಿಳಾಸ:— ಮಹಾರಾಜ ಪುಸ್ತಕಶಾಲೆ,
೧೨ ಅರುಣಾಚಲ ಮೊದಲಿ ಬೀದಿ, ಸಾಹುಕಾರ್ ಪೇಟೆ, ಮದರಾಸ್.

ಮಲೆಜ್ವರ.
ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಬೆಲೆ ೧೨ ಆಣೆ.

ವಿಷವಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಲೇಶವೂ ಇಲ್ಲ.

ಹಿಂದೂಸ್ಥಾನ, ಬನರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೋನಗಳಿಂದಲೂ ಕಳೆದ ೩೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

ಪುನೆಯ ಕೃಷಿಕಾಲೇಜಿನ ಅಧ್ಯಾಪಕರಾದ [ಡಾ| ಮಾನ್ ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ:—"ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ತೃಪ್ತಿಕರ ಗುಣಾಂತರವಾಯಿತು."

ನಮ್ಮ ಏಜಂಟರು ಈ ವರೆಗೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

ಕರ್ಣಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

Agent: – The Woollen Mart, *Mangalore.*

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ ಡೆಂಟೋನ" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಗಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುದಿನ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಶರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಹೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಹುಡುಗರು
ಸಶಕ್ತರೂ ನಿರೋಗಿಗಳೂ
ಆಗುವದಕ್ಕೆ

ಡೋಂಗರೆ

ಇವರ ಬಾಲಾಮೃತವನ್ನು
ಕೊಡುವದು

ಇದು ಒಂದೇ
ಉಪಾಯವಿರುತ್ತದೆ.

ಒಂದು ಶೀಸೆಯ ಬೆಲೆ ೧೨ ಆಣೆ,
ಟಪ್ಪಾಲು ಖರ್ಚು ೬ ಆಣೆ.

ಕೇ. ಟೀ. ಡೋಂಗರೆ ಕಂಪನಿ,
ಗಿರಿಗಾಂವ, ಮುಂಬಯಿ.

ಮಂಗಳೂರು ಏಜಂಟರು:
ಉಲ್ಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಆರ್. ಮಾರ್ಟಿನ್ನರ ಲವ್ಹಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ, ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ.

ಕ್ರಯ ಬಾಟ್ಲಿಗಳಿಗೆ ರೂಪಾಯಿ ೧—೪—೦.

ಆರ್. ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲು, ಗೂರಲು ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೪—೦.

ಆರ್. ಮಾರ್ಟಿನ್ನರ ಗ್ಲಿಟೋಡಾಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಿಂದ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸತಾಗಿದ್ದರೂ ಸರಿ, ಉರಿಯುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಚೆಲುವಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ, ಸೀಸೆ ಒಂದಕ್ಕೆ ರೂ. ೨—೦—೦.

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ D. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣೀ:—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ, ವಿವರಿಸಲಸದಳವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ:—

ಕೇಸರೀ ಕುಠೀರಂ,
ಆಯುರ್ವೇದ ಔಷಧಾಲಯ,
33 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್‌ಮೋರ, ಮದರಾಸ್.

ಬ್ರಾಂಚ್ ಆಫೀಸು:—
9 ಬಂದರ್ ಸ್ಟ್ರೀಟ್.
ಜಾರ್ಜಟೌನ್, ಮದರಾಸ್.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಛಿಟ್ಟು, ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಜಾಡ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಷ್ಟೇ ಪ್ರಚುರಕ್ಕೆ ತಂದಿರುತ್ತೇವೆ. ಮೇಲಿನ ಜಾಡ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅವರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಹ ಇತರ ಸೋಂಕು ರೋಗಗಳು ತಟ್ಟದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರ ಪ್ರದಾವಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಈವರೆಗೆ ಇದು ಕೋಟೀರಾ ರೋಗಿಗಳನ್ನು ಗುಣಪಡಿಸಿರುತ್ತದೆ.

ಕ್ರಯ ಸೀಸೆ ೧ರ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು:— ದಿ ಇಕ್ವಿಟ್ಯೆಬ್ಲ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ, ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ, ಪೋಲಿ, ದ. ಕ.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೋಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ವಪ್ ಮುಂತಾದವುಗಳಿಗೆ ಉಭಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಈ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಿಗಳ ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ್ಯ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾಗಿ ಸುಲಭವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದಲ್ಲಿ ತಿಳಿವುದಾಗುವುದು.

ವೈದ್ಯಶಾಲೆಯ ವ್ಯಾಲಿಕರೂ ಮುಖ್ಯರೂ ಆದ ದಾಮೋದರ ನಂಬೀಶನರು ಅಧಿಕ್ಷವಾಗಿ ಬರುವ ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚೈಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತಪಂತಿರುವುದು. ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧

೩. ನವನೀತಮಧ್ವುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮುಂತಾದ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೩೬ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನದ್ಯುತಿ—ತಿಮಿರ, ಉರಿಗಣ್ಣು, ನೀರ ಏಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇದುರುಗಣ್ಣು, ಕೀವು ಬರುವುದು. ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್,
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

ಎಲ್ಲರಿಗೂ ಬೇಕಾದ್ದು.

ನಮ್ಮ ಪರಮ ಹಿತೈಷಿಯಾದ ತರಹೆವಾರಿ ಹೂವಿನ ಸಾರಗಳು, ೧೨ ಮುದ್ರಿ ಸೀಸೆಗಳಿಗೂ ಪೆಟ್ಟಿಗೆ ೧ಕ್ಕೆ ರೂ. ೩. (ರವಾನಿಸುವ ಖರ್ಚು ಅಲಾಯಿದಾ) ನಿಮ್ಮ ಆರ್ಡರಿನ ಸಂಗಡ ೨ ರೂಪಾಯಿ ಕಳುಹಿಸಬೇಕು. ಬಾಕಿ ಮೊಬಲಗಿಗೆ ವಿ. ಪಿ. ಮಾಡುತ್ತೇವೆ.

ವಿಳಾಸ— ಎಸ್. ಟಿ. ಎ.
ಬೆಂಗಳೂರು ಸಿಟಿ.

ಕ್ರಯ ೧-೪-೦ **ಭಾಷಾನಿಧಿ** ಅಂಚೆ ಬೇರೆ.

ಬೋಧಕರ ಸಹಾಯವಿಲ್ಲದೆ ಕನ್ನಡ, ತೆಲುಗು, ಅರವ, ಮಲೆಯಾಳ ಗ್ರಂಥ, ಸಂಸ್ಕೃತ, ಮಹಾರಾಷ್ಟ್ರ, ಗುಜರಾತಿ, ಬಂಗಾಲಿ, ಈ ಒಂಬತ್ತು ಸೋದರ ಲಿಪಿಗಳನ್ನು ಬಹು ಸುಲಭವಾಗಿ ಕಲಿಸುವುದು.

ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಕ್ರಯ **ಹಿಂದೀಭಾಷಾ** ಅಂಚೆ
೧-೪-೦ **ಪ್ರವೇಶದಾಯಿನಿ.** ಬೇರೆ.

ಭಾರತ ಖಂಡದ ಪ್ರಜಾಸಾಮಾನ್ಯವೆಲ್ಲಕ್ಕೂ ಮುಖ್ಯ ಭಾಷೆ ಇದೊಂದೇ!

ಹೊಸದಾಗಿ ಕಲಿಯುವವರಿಗೆ ಕಲಿಸುವವರ ಆವಶ್ಯವಿಲ್ಲದೆ ಬಹು ಸುಲಭವಾಗಿ ತಿಳಿಯುವಂತೆ ಬರೆದಿದೆ.

ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಬಂಗಾಲಿ, ಮಹಾರಾಷ್ಟ್ರ, ಉರ್ದು, ಭಾಷೆಗಳಿಗೆ ಬೇರೆಬೇರೆ ಪುಸ್ತಕಗಳು ಅಚ್ಚಾಗುತ್ತಿವೆ. [80-16]

ವಿಳಾಸ— ಭಾರತಿ ಸಂಪಂಗಿರಾಮು,
"ಸವಿನುಡಿ"ಯ ಸಂಪಾದಕ.
42 ಸಿ. ಬೀದಿ, ಕೋಟೆ, ಬೆಂಗಳೂರು ಸಿಟಿ.

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಧಾತುವು ಹೋಗುತ್ತಿದ್ದರೂ, ಧಾತುವು ಕೆಟ್ಟುಹೋಗಿದ್ದರೂ ಬಹು ಬೇಗನೆ ಗುಣಮಾಡುವದು. ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು. ಕೈಕಾಲು, ಸೊಂಟದ ನೋವುಗಳನ್ನು ಕೂಡಲೆ ನಿಂದ್ರಿಸುವದು. ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು.

ಕ್ರಯ ೪೦ ಮಾತ್ರೆಗಳ ಡಬ್ಬಿ ೧ಕ್ಕೆ ೧—೦—೦

ವಿಳಾಸ:— ಮದನಮಂಜರಿ ಫಾರ್ಮಸಿ,
೨೬. ಚೈನಾಬಜಾರು ರೋಡು, ಮದರಾಸು.

ಡಾಕ್ಟರ್ ವ್ಹಾ. ನಿಶಿಮ್ಯುರಾ ಎಂಬವರು ಮಂಗಳೂರು ಹಂಪನಕಟ್ಟೆ "ಪಿರೇರಾ ಬಿಲ್ಡಿಂಗ್ಸಿನ" ಮಾಳಿಗೆಯಲ್ಲಿ ತಮ್ಮ ಆಫೀಸು ಮಾಡಿರುವರು.

ಎಲ್ಲಾ ವಿಧದ ದಂತಚಿಕಿತ್ಸೆಗಳನ್ನೂ ಅತ್ಯಾಧುನಿಕ ರೀತಿಯಲ್ಲಿ ಮಾಡುವರು.

ಗಿರಾಕಿಗಳನ್ನು ಪರೀಕ್ಷಿಸಿ ಅಭಿಪ್ರಾಯಕೊಡುವುದಕ್ಕೆ ಫೀಸೇ ತೆಗೆದುಕೊಳ್ಳಲಾಗುವುದಿಲ್ಲ.

Dr. Y. Nishimura.
Japanese Dentist.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಲ ಹಾಕಿದರೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು.

ಗಂಡೆ, ಮೊಡವೆ, ಖಜ್ಜಿ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

೩ ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ.	0—14—0.
ಒಂದೇ ಸಲ ೩ ಪೆಟ್ಟಿಗೆ ತರಿಸಿಕೊಂಡರೆ	,,	1—10—0.
ವಿಲಾಯಿತಿ ರೋಮನಾಶಕ ಬುಕ್ಕಿ	,,	0—8—0.

ವಿಳಾಸ— ವೈರಂ ಅಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

೧೯೨೦ನೇ ಜನವರಿಯಿಂದ ಆರಂಭ. } **ಸದ್ಬೋಧಕ ಗ್ರಂಥಮಾಲೆ.** (ತ್ರೈಮಾಸಿಕ ಪುಸ್ತಕ). } ವಾರ್ಷಿಕ ಚಂದಾ ಅಂಚೆ ಸಹಿತ ರೂ. ೧ ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ, ಉತ್ತೇಜನ, ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಶೀರ್ಷಿಕೆಯವೂ ಪ್ರಕಟವಾಗುವುವು. ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು. ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗಣೆದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸ್ವಿ ಜುಲೈ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ತಿ ಕೊಡಲ್ಪಟ್ಟ ಮೂಲಧನವು ರೂ. 300,000—0—0
Reserve and other sinking Funds ,, 120306—11—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 120306—11—0

ಕಾಯಮ್ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ತೆಗೆದುಕೊಳ್ಳಲ್ಪಡುತ್ತವೆ.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರೆಯತಕ್ಕದು.

Canara Bank Ltd.,
Mangalore, 6th January 1920.

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರೆತ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.

4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಸೇರಿಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪ್ರಾಚೀನ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ನೋಟೀಸು.

ಕಾಸರಗೋಡು ತಾಲೂಕು ಪಾಡಿಮಾಗಣೆ ನೆಕ್ರಾಜೆಗ್ರಾಮದ [illegible] ಇರುವ ಮಾಜಿ ಪಟೇಲ ಕುಂಞಂಣ ರೈ ಸೊಸೆ [illegible] ಹೆಂಗಸು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವ ದೇನಂದರೆ:—

ನಾನು ಬರಹ ಗೊತ್ತಿಲ್ಲದ ಬರೇ ರೇಖೆ ದಸ್ತ್ರತಿನ ಹೆಂಗಸಾಗಿರುತ್ತೇನೆ. ರಿಜಿಸ್ಟ್ರಿ ಅಲ್ಲದ, ಬೇರೆ ಎಲ್ಲಾ ದಾಖಲೆಗಳಲ್ಲಿ ನನ್ನ ಗೆರೆ ದಸ್ತ್ರತಿನ ಕರಾರ ನನ್ನ ಮಗ ರಾಮಯ್ಯನ ಸಾಕ್ಷಿ ವಿನಹಾ ನನ್ನ [illegible] ಮಂಜೂರಾಗತಕ್ಕದ್ದಲ್ಲಾ.

"ಟಿಶ್ಯು ರೆಮಿಡಿಸ್"

ಎಂಬ

ಷುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯಾ

ಕ್ರಯ				ರೂ. ಆ. ಪೈ.
ಎರಡು ಡ್ರಾಮಿನ	D	ಸೈಜ್	ಸೀಸೆ ಒಂದರ	0—3—6
ನಾಲ್ಕು ,,	C	,,	,,	0—6—0
ಒಂದು ಔನ್ಸಿನ	A	,,	,,	0—12—0

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗಳೂರು.

New Discoveries of the Twentieth Century.

Substitute for Quinine!

Powder I. ಇದರ ಸೇವನೆಯಿಂದ ಮಲೇರಿಯಾ ಎಂಬ ಛಳಿ ಜ್ವರವು ಎಷ್ಟು ಕಠಿಣವಾದರೂ ಈ ಔಷಧಗಳಿಗಾಗಿ ಥಟ್ಟನೆ ಬಿಡುವುದು. ಇದರ 3—4 ಸಾರಿ ತೆಗೆದುಕೊಳ್ಳುವುದರಿಂದ ಮರೀ [illegible] ಹಾಗೆ [illegible] ಡಬ್ಬಿ 1ಕ್ಕೆ ರೂ. 1.

Smallpox Preventive.

Powder No. II. ಇದರ 3—7 ದಿವಸ ಸೇವನೆಯಿಂದ ಭಯಂಕರವಾದ ಸಿಡುಬು ಎಂಬ ಸಿಡುಬು (ಅಂಟುರೋಗವು) ತಗಲುವುದಿಲ್ಲ. [illegible] ಸ್ವಲ್ಪದಲ್ಲಿಯೇ ಬಿದ್ದು ಹೋಗಿ ಅಪಾಯವಿಲ್ಲದೆ ಹುಷಾರು ಆಗುವರು. ಡಬ್ಬಿ 1ಕ್ಕೆ ರೂ. 1—0—0.

Cholera Specific.

Pills No. I. ಕಾಲರಾ ಎಂಬ ವಾಂತಿಭೇದಿಯು ಎಷ್ಟು ಕಠಿಣವಾದರೂ ಈ ಔಷಧವನ್ನು ಒಂದೇ ಸಾರಿ ಸೇವಿಸುವುದರಿಂದ ಥಟ್ಟನೇ ನಿಲ್ಲುವದು. 48 ಮಾತ್ರೆ ರೂ. 1—8—0.

Vishuchikanjan.

Pills No. II. ವಾಂತಿಭೇದಿಯು ಕಠಿಣವಾಗಿ ಸ್ಮೃತಿ ತಪ್ಪಿದರೆ ಈ ಮಾತ್ರೆಗಳ ಅಂಜನದಿಂದ ಸ್ಮೃತಿ ತಿರುಗುವುದು. ಮತ್ತು ಕಾಲರಾ ಎಂಬ ವಾಂತಿಭೇದಿಯು ತಕ್ಷಣವೇ ನಿಲ್ಲುವದು. 24 ಮಾತ್ರೆಗಳಿಗೆ ರೂ. 1—0—0.

N. B. ಈ ಔಷಧಗಳ ಬಿನಾ ನಮ್ಮ ದವಾಖಾನೆಯಲ್ಲಿ ಎಲ್ಲಾ ತರದ ರೋಗಗಳಿಗೆ ಸಿದ್ಧ ಮಾಡಿಟ್ಟಿರುವ ಔಷಧಗಳ ಸ್ಟೋಕ್ ಯಾವಾಗಲೂ ಇರುವದು. ನಮ್ಮ ಕ್ರಯಪಟ್ಟಿಯ ಕೆಟಲಾಗನ್ನು ಕೂಡಲೆ ತರಿಸಿ, ಸ್ವತಃ ತರಲ್ಲಿ ಪ್ರಚಾರಗೊಳಿಸಿರಿ.

SRI BHAVANISHANKER AYURVEDIC DESPENSARY,
BRAHMAVAR, S. KANARA.

ರೇಷ್ಮೆ ಪಂಚೆ, ಆಟೋಮೋಟಿಕ್ ಪೆನ್ ಸೆಟ್.

ಈ ನಕ್ಷೆಯಲ್ಲಿ ಕಂಡ ಇಂಕ ಅಕ್ಷರ ಬರೆಯುವ ಫೌಂಟೆನ್ ಪೇನಾ ಇದಕ್ಕೆ ಇರಿಡಿಯಂ ಪೋಯಿಂಟ್ ಬಂಗಾರದ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಟಿಕ್ ಸೆಂಟ್ ಇನಾಂ ಸಹಿತ ರೂ. ೧—೪—೦.

C. O. LINGAM & Co,
No. 2. Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂರ್ತಿ ಗಣಪಯ್ಯ ಎಂಡ್ ಸನ್ಸರವರ ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ. ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೊಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚಾಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೋಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆ ಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿತ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂರ್ತಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಪರದೇಶ ವರ್ತಮಾನ.

[illegible]

...ಇದ್ದಾಗ ರಷ್ಯದಲ್ಲಿ ಯಥೇಷ್ಟ [illegible] ...ಯುತ್ತಿ, ಅಮೇರಿಕೆಯಿಂದ ಆಹಾರ ಸಾಮಗ್ರಿಗಳನ್ನು ತರಿಸುವದಕ್ಕಿಂತ ಈ ರೀತಿಯಾಗಿ ರುಷ್ಯದಿಂದ ತರಿಸಿಕೊಳ್ಳುವದಕ್ಕೆ ಖರ್ಚು ಕಡಿಮೆ ಎಂದು ಈ ಮುತ್ಸದ್ದಿಗಳು ಈಗ ಪ್ರಕಟಿಸುತ್ತಿದ್ದಾರೆ. ಈ ವರೆಗೆ ರುಷ್ಯದೊಡನೆ ವ್ಯಾಪಾರಕ್ಕೆ ಇದ್ದ ನಿರ್ಬಂಧವು ಹೋಯಿತೆಂದರೆ ಪ್ರಬಂಧಕ್ಕೆ ರುಷ್ಯದವರೊಡನೆ ಒಪ್ಪಂದ [illegible] ಕಾಲವು ದೂರವಾಗಿಲ್ಲವಷ್ಟೇ.

ಒಂದು ಕಡೆ ಈ ವರ್ತಮಾನವು ಕೇಳಿಸುವಾಗ ಇನ್ನೊಂದು ಕಡೆ ಈ ಬೊಲಶೆವಿಕರು ಮಧ್ಯ ಆಸ್ಯದ ಮುಸಲ್ಮಾನ ರಾಜ್ಯಗಳಲ್ಲಿ ತಮ್ಮ ಒಳಸಂಚನ್ನು ನಡೆಯಿಸುತ್ತಾರೆಂದು, ವರ್ತಮಾನವೂ ಇದೆ. ಟೈಮ್ಸ್ ಆಫ್ ಇಂಡಿಯಾದಂಥ ಪತ್ರಿಕೆಗಳೂ ಈ ಕಾಲದಲ್ಲಿ ಕಂಟಾ ಎಚ್ಚರದಿಂದ ಇರಬೇಕೆಂದು ಸರಕಾರದವರಿಗೆ ಸಾರುತ್ತಿದ್ದಾರೆ. ಅಂತೂ ಹೀಗೆ ಬೊಲಶೆವಿಕರನ್ನು ದೂರುವದು, ಅವರೊಡನೆ ವ್ಯಾಪಾರ ವಹಿವಾಟುಗಳನ್ನು ಬೆಳೆಸುವದು, ಅವರನ್ನು ಕುರಿತು ಇತರರಿಗೆ ಎಚ್ಚರಿಸುವದು. ಇದರ ನಿಜವಾದ ಪರಿಸ್ಥಿತಿಯು ಏನು ಎಂಬದು ಇನ್ನೂ ಗೊತ್ತಾಗುವದಿಲ್ಲ.

ಫ್ರಾನ್ಸದಲ್ಲಿ ಸರಕಾರದ ಅಧ್ಯಕ್ಷಸ್ಥಾನಕ್ಕೆ ಮುಖ್ಯ ಮಂತ್ರಿಯಾದ ಕ್ಲೆಮೆನ್ಸೋಯೂ, ಯುದ್ಧದ ಜಯಕ್ಕೆ ಮುಖ್ಯ ಕಾರಣರಾಗಿದ್ದ ಮಾರ್ಶಲ್ ಫೋಶ್ ಇವರಿಬ್ಬರು ಇತರರೊಂದಿಗೆ ಉಮೇದ್ವಾರರಾಗಿದ್ದರು. ಇಬ್ಬರಿಗೂ ಈ ಪದವಿಯು ಸಿಗಲಿಲ್ಲ. ಮ. ಡಿಶಾನೆಲ್ ಎಂಬವರು ಅಧ್ಯಕ್ಷರಾಗಿಯೂ ಮ. ಮಿಲ್ಲೆರೆಂಡ್ ಮುಖ್ಯ ಮಂತ್ರಿಯಾಗಿಯೂ ಆರಿಸಲ್ಪಟ್ಟರು. ಅಂದರೆ ಯುದ್ಧದ ಜಯದಿಂದ ಬಂದ ಜ್ವರವು ಇಳಿದು ಈಗ ಫ್ರಾನ್ಸ್ ದೇಶದ ಜನರು ದೇಶದ ವ್ಯವಸ್ಥೆಯನ್ನು ಮಾಡುವ ಕಾಲದಲ್ಲಿ ಹಿಂದಿನ ಶಸ್ತ್ರಾಸ್ತ್ರಶಾಲಿಗಳನ್ನೂ ಯೋಧ್ಧರನ್ನೂ ಒಂದು ಬದಿಗಿಟ್ಟು ಇತರರನ್ನು ಹುಡುಕಿಕೊಂಡಂತೆ ಕಾಣುವದು. ಈ ರೀತಿ ದೃಷ್ಟಿಪರಿವರ್ತನೆಯ ಕಾರಣವು ಗೊತ್ತಾಗುವದಿಲ್ಲ. ಆದರೆ ಮಿತ್ರಪಕ್ಷದ ಸಂಧಿಕೂಟದಲ್ಲಿ ಅಧ್ಯಕ್ಷಸ್ಥಾನವನ್ನು ಈ ವರೆಗೆ ನಡೆಸುತ್ತಿದ್ದ ಕ್ಲೆಮೆನ್ಸೋಯೂ ಈಗ ಅಲ್ಲಿಂದ ಇಳಿದುಹೋದರು.

ಜರ್ಮನ ಕೈಸರನನ್ನು ಒಪ್ಪಿಸಿಕೊಡಬೇಕೆಂದು ಸಂಧಿಕೂಟದ ಕಡೆಯಿಂದ ತಯಾರಾದ ಪತ್ರವು ಡಚ್ಚ ಸರಕಾರಕ್ಕೆ ಕಳುಹಿಸಲ್ಪಟ್ಟಿದೆ. ಉತ್ತರವು ದೊರೆಯಲಿಲ್ಲ. ಕೈಸರನನ್ನು ಒಪ್ಪಿಸಿಕೊಡದೆ ಇದ್ದರೆ ಮಿತ್ರಪಕ್ಷದ ಎದುರಿನಲ್ಲಿ ಡಚ್ಚ ಸರಕಾರವು ಧೈರ್ಯಮಾಡೀತೇ ಎಂದು ನೋಡಲಿಕ್ಕೆ ಇದೆ.

ಜರ್ಮನಿಯಲ್ಲಿ ಕೈಸರನನ್ನು ಪುನಃ ಪಟ್ಟಕ್ಕೆ ತರುವ ಒಳಸಂಚು ನಡೆಯುತ್ತಿದೆ ಎಂಬಂತೆ ವರ್ತಮಾನಪತ್ರಿಕೆಗಳಿಗೆ ಬಾತ್ಮೀದಾರರು ಬರೆಯುತ್ತಿದ್ದಾರೆ. ಆದರೆ ಸಂಧಿಪತ್ರಕ್ಕೆ ಸಹಿಯನ್ನು ಹಾಕಿ ಅದರ ಜಾರಿಯನ್ನು ನಡೆಸುತ್ತಿರುವ ಪ್ರಜಾಸತ್ತಾಕ ಸರಕಾರವು ಬಲವಾಗಿದ್ದರೆ ಈ ಒಳಸಂಚು ದರಿದ್ರನ ಕನಸಿನಂತೆ ವ್ಯರ್ಥವಾಗುವದು.

ಇಟಲಿಯ ಮುಖ್ಯ ಮಂತ್ರಿಯೂ ಯುಗೊಸ್ಲೇವ ಜನಾಂಗದ ಪ್ರತಿನಿಧಿಗಳೂ ತಂತಮ್ಮ ಹಕ್ಕು ಬಾಧ್ಯತೆಗಳನ್ನು ಸಂಧಿಕೂಟದ ಮುಂದೆ ವ್ಯವಹರಿಸಿದ ನಂತರ ತೀರ್ಮಾನಕ್ಕೆ ಇತ್ತಟ್ಟಿನ ಅಭಿಪ್ರಾಯಗಳು ಸಾಕಾಗದೆ ಇಟಲಿಯ ಮಂತ್ರಿಯು ಹಿಂತೆರಳಿದರೆಂದೂ ಯುಗೊಸ್ಲೇವರಿಗೆ ತಮ್ಮ ಅಭಿಪ್ರಾಯ ಮನೋಗತವನ್ನು ತಿಳಿಸಲಿಕ್ಕೆ ಕೆಲವು ದಿನಗಳ ವಾಯಿದೆ ಕೊಟ್ಟಿದೆ ಎಂದೂ ತಿಳಿಯುತ್ತೇವೆ.

ತುರ್ಕಿಯ ಚರ್ಚೆ ಇನ್ನೂ ಮುಗಿಯಲಿಲ್ಲ. ಸಂಧಿಕೂಟದ ಮುಂದೆ ಈ ಚರ್ಚೆ ಬಂದಾಗ ಮಿ. ಮೊಂಟೆಗರು ಪುನಃ ಮುಸಲ್ಮಾನರ ಅಭಿಮತ ಆಕಾಂಕ್ಷೆಗಳನ್ನು ಅಲ್ಲಿ ತಿಳಿಸಿರುವರು. ಇದಲ್ಲದೆ ಶ್ರೀಮಂತ ಆಗಾಖಾನ್, ನೇಕ ನಾಮದಾರ ಅಮೀರ ಅಲಿ, ಲೋರ್ಡ ಎಮ್ಹಿಲ್ ಮುಂತಾದವರ ಸಹಿಗಳುಳ್ಳ ಒಂದು ಪತ್ರವು ಬ್ರಿಟಿಷ ಮಂತ್ರಿಕೂಟದ ಮುಂದೆ ಸಮರ್ಪಿಸಲ್ಪಟ್ಟಿದೆ. ಅದರಲ್ಲಿ ಹಿಂದೀ ಮುಸಲ್ಮಾನರಿಗೆ ಈಗ ಹುಟ್ಟಿರುವ ಕಳವಳವನ್ನು ನಿದಾಕ್ಷಿಣ್ಯದ ಮಾತುಗಳಿಂದ ವರ್ಣಿಸಿದ್ದಾರೆ. ಕೊನಸ್ಟಂಟಿನೋಪಲದಲ್ಲಿ ತುರ್ಕಿ ಸುಲ್ತಾನರಿಗೆ ಮತಸಂಬಂಧವಾದ ಅಧಿಕಾರವನ್ನು ಮಾತ್ರ ಬಿಟ್ಟು ರಾಜಕೀಯ ಅಧಿಕಾರವನ್ನು ಜನಾಂಗಗಳು ವಹಿಸಿಕೊಳ್ಳುವದು ಯೋಗ್ಯವೆಂಬಂತೆ ಬಗೆಬಗೆಯ ಸೂಚನೆಗಳಿದ್ದರೂ ಇನ್ನೂ ಯಾವುದಾದರೂ ಖಂಡಿತ ರೀತಿಯ ನಿರ್ಣಯವಾಗಲಿಲ್ಲ.

ಅಮೇರಿಕವು ಇನ್ನೂ ಸಂಧಿಪತ್ರಕ್ಕೆ ಸಹಿಕೊಡಲಿಲ್ಲ. ಪ್ರೆ. ವಿಲ್ಸನರು ತಾವು ಕೊಟ್ಟ ಮಾತನ್ನು ಅಮೇರಿಕದ ಪಾರ್ಲಮೆಂಟಿನವರು ಸಲ್ಲಿಸಬೇಕೆಂದು ಒತ್ತಾಯಪಡಿಸುತ್ತಾರೆ. ಫಲಿತಾಂಶ ಇನ್ನೂ ಗೊತ್ತಾಗಲಿಲ್ಲ.

ಹಡಗು ನಾಶ:—ಅಮೇರಿಕದಲ್ಲಿ ಹಾಲಿಫಾಕ್ಸ ಎಂಬಲ್ಲಿಂದ ೪೦೦ ಮೈಲು ದೂರ ಸಮುದ್ರದಲ್ಲಿ ೫೦೦ ಪ್ರಯಾಣಸ್ಥರೊಡಗೂಡಿದ 'ಪೂವ್ಹೈಟನ್' ಎಂಬ ಹಡಗು ಮುಳುಗುವಂತಿದೆ. ಅದರಲ್ಲಿ ಜನರನ್ನು ಉಳಿಸಲಿಕ್ಕಾಗಿ 'ಸೆಮ್ರಿಕ್' ಎಂಬ ಹಡಗು ಯತ್ನಿಸುತ್ತಿದೆ.

ಒಳದೇಶ ವರ್ತಮಾನ.

ಮೈಸೂರಿನಲ್ಲಿ ಮೊಫ್ತ ವಿದ್ಯಾಭ್ಯಾಸ—ಮೈಸೂರ ಸರಕಾರದವರ ಅಪ್ಪಣೆಮೂಡದ ಮೇರೆಗೆ ಇದೇ ಬರುವ ಜುಲೈ ೧ನೆ ತಾರೀಕಿನಿಂದ ಮೈಸೂರು ಪ್ರಾಂತದ ಮಿಡ್ಲ್ ಸ್ಕೂಲುಗಳಲ್ಲಿ ಅಂದರೆ ೫ನೆ ಎಂಗ್ಲೊವರ್ನ್ಯಾಕ್ಯುಲರ್ ಕ್ಲಾಸು ವರೆಗೆ ಮಕ್ಕಳಿಗೆ ಫೀಜು ಕೊಡದೆ ಮೊಫ್ತಿಯಿಂದಲೇ ಶಿಕ್ಷಣ ಸಿಗುವದು.

ವಿಮಾನಗಳ ಮೂಲಕ ಟಪ್ಪಾಲು—ಇದೇ ತಿಂಗಳ ೨೪ನೆ ತಾರೀಕಿನಿಂದ ಮುಂಬೈಯಿಂದ ಕರಾಚಿಗೆ ವಿಮಾನಗಳ ಮೂಲಕ ಟಪ್ಪಾಲು ಸಾಗಿಸುವದಕ್ಕೆ ಪ್ರಥಮತಃ ಪ್ರಾರಂಭವಾಗಿದೆ.

ದಕ್ಷಿಣ ಕನ್ನಡ.

ಪಾಣೆಮಂಗಳೂರು:—ಇಲ್ಲಿ ಕೆಲವು ವರ್ಷಗಳಿಂದ ಬೊಂಡಾಲಗುತ್ತು ರಾಮಣ್ಣ ಶೆಟ್ಟಿಯವರ ಪ್ರಯತ್ನದಿಂದ ಶಾಮೂರು ಜನವರಿ ತಿಂಗಳಲ್ಲಿ ಕಂಬಳವನ್ನು ಆರಂಭಿಸಿ ಬಲಿಷ್ಠವಾದ ಕೋಣಗಳನ್ನು ಓಡಿಸುತ್ತಿದ್ದರಲ್ಲಿ ಹಳ್ಳಿಗರ ಮನೋಹರವನ್ನು ಪಡೆಯುತ್ತಿರುವರಷ್ಟೆ. ಅದೇ ಮೇರೆಗೆ ಬರುವ ಫೆಬ್ರವರಿ ತಿಂಗಳ ತಾ. [illegible] ಆದಿತ್ಯವಾರ ದಿವಸ ಆಗುವ ಪಂಚಾಂಗದ ಕಂಬಳದಲ್ಲಿ ಗೆದ್ದ ಕೋಣಗಳ ಮಾಲಿಕರಿಗೆ ಒಂದು ಬಿಸ್ಪದ ಪದಕವನ್ನು [illegible] ಕೊಡಲ್ಪಡುವದು. [illegible]

[illegible]

ಸುರತ್ಕಲ್:—[illegible] ರಾತ್ರಿ ಸುಮಾರು [illegible] ಗಂಟೆಯ ವರೆಗೆ ಅಲ್ಲಿ ಬಿದ್ದಿದ್ದಾಗ್ಗೆ ಸಂಬಂಧಪಟ್ಟ ಅಧಿಕಾರಿಗಳು [illegible] ಯಾವ ತನಿಖೆಯನ್ನಾಗಲಿ ಅಥವಾ ಏರ್ಪಾಡನ್ನಾಗಲಿ ಮಾಡದೆ [illegible] ಕಾರಣವಾಗುತ್ತದೆ.

ಬಂಗಾರದ ದೇವಸ್ಥಾನವನ್ನುಳ್ಳ ಅಮೃತಸರ ಪಟ್ಟಣವು.

ಲೇಖಕ:—ಡಿ. ಕೆ. ಭಾರದ್ವಾಜ ವಿದ್ಯಾಭೂಷಣ, ಲಾಹೋರ.

ನಿಜವಾಗಿ ಹೇಳಬೇಕಾದರೆ ಬಂಗಾರದ ದೇವಾಲಯದ ಕಟ್ಟಡವು ಅಷ್ಟು ಅಂದವಾಗಿಲ್ಲ. ಅದರಲ್ಲಿ ಮುಸಲ್ಮಾನರ ಸ್ಮಾರಕಮಂದಿರಗಳಲ್ಲಿ ತೋರುವ ದಿವ್ಯ ಪ್ರಭಾವವೂ ಇಲ್ಲ. ಮಸೀದಿಗಳಲ್ಲಿ ತೋರುವ ಸೂಕ್ಷ್ಮವಾದ ಕಲಾಕೌಶಲ್ಯದ ಸೂಚನೆಯೂ ಇಲ್ಲ. ಅದು ಪ್ರಕಾಶಮಾನವಾಗಿಯೂ ಕಾಣುವದು. ಅದರ ಸೌಂದರ್ಯದ ಬೆಡಗು ಕಣ್ಣುಕಟ್ಟುವಂತಿದೆಯೆ ವಿನಾ, ಚಿತ್ತಾಕರ್ಷಕವಾಗಿಲ್ಲ. ಅಲ್ಲಿ ಅಗಲವಾದ ಎತ್ತರವಾದ ಸುತ್ತುಪೌಳಿಗಳೂ, ಬಾದಶಹರ ಕಾಲದ ಕಲ್ಲುಗಳಂಥ ಮನೆಗಳೂ, ಗೋಪುರಗಳೂ ಬೃಹತ್ತಾದ ಪ್ರವೇಶದ್ವಾರವೂ ಇಲ್ಲ. ಅದರ ಮೇಲಿರುವ ಸೇತುವೆಯೂ ಸೊಂಟಕ್ಕೆ ಬಹು ಅಂದವಾಗಿರುವದು. ಆದರೆ ಈ ಮಂದಿರದ ಪೂರ್ವ ದಿಕ್ಕಿನಲ್ಲಿ ಪ್ರಾಚ್ಯಶಿಲ್ಪದ 'ಗಾಥಿಕ್' ಎಂಬ ಶೈಲಿಯಲ್ಲಿ ಕಟ್ಟಲ್ಪಟ್ಟು ಉನ್ನತವಾಗಿ ನಿಂತಿರುವ ಕೆಂಪುಬಣ್ಣದ 'ಗಡಿಯಾರದ ಗೋಪುರ (ಕ್ಲಾಕ ಟವರ)' ದಿಂದ ಇದರ ಅಂದಕ್ಕೆ ಕುಂದಾದಂತೆ ತೋರುವದು. ಇದನ್ನು ೧೮೬೨ನೆಯ ಇಸವಿಯಲ್ಲಿ ಕಟ್ಟಲಾರಂಭಿಸಿದ ಚೌಕದ ಸ್ಥಳದಲ್ಲಿ ಕಟ್ಟಬೇಕೆಂದು ನಿರ್ಧರಿಸಲಾಗಿ, ಅದೇ ವರ್ಷದಲ್ಲಿ ಅದರ ಕಟ್ಟೋಣವು ಪ್ರಾರಂಭವಾಯಿತು. ಮುಂದೆ ೧೨ ವರ್ಷಗಳ ನಂತರ ಇದರ ಕಟ್ಟಡವು ಪೂರ್ತಿಯಾಯಿತು. ಈ ಮಧ್ಯದಲ್ಲಿ ಪಟ್ಟಣದ ಕಟ್ಟೋಣಕ್ಕೆ ಬೇರೆ ಸ್ಥಳವು ಗೊತ್ತಾಯಿತು. ಆದರೆ ಈ ಗೋಪುರವು ಮಾತ್ರ ಇಲ್ಲಿಯೇ ನಿಂತಿತು.

ಅಮೃತಸರದಲ್ಲಿ ನೋಡತಕ್ಕ ಇತರ ಸ್ಥಳಗಳಲ್ಲಿ 'ರಾಮ್ ಬಾಗ್' ಮೇಲೆ ಹೇಳಿದ ಕೋಟೆಗಳು, ಮುಂಚೆ ಪಂಜಾಬಿನ ಲೆಫ್ಟಿನೆಂಟ್ ಗವರ್ನರಾಗಿದ್ದ ಸರ್. ಜಾನ್ ಲಾರೆನ್ಸನ ಸಾಹೇಬರ ಹೆಸರಿನಲ್ಲಿ ನಿರ್ಮಿತವಾಗಿ ೧೮೬೮ ಡಿಸೆಂಬರದಲ್ಲಿ ನಡೆದ ಕಾಂಗ್ರೆಸ್ ಸಭೆಯ ಮಹಾ ಸಭಾಮಂಟಪದಿಂದ ಶೋಭಿಸುತ್ತಿದ್ದ ದೊಡ್ಡ ಉದ್ಯಾನವೂ ಮತ್ತು ಇತರ ಉದ್ಯಾನಗಳೂ ಇರುವವು.

ಪಟ್ಟಣದ ಉತ್ತರಕ್ಕೆ 'ಸಿವಿಲ್ ಲೈನ್ಸ್' ಎಂಬ ಪೇಟೆಯಲ್ಲಿ ಬೀಡು ಜನರ ವಸತಿಯೂ, ಅದರಾಚೆಗೆ ದಂಡಿನ ವಸತಿಯೂ ಇರುವವು. ಪಟ್ಟಣದೊಳಗಿರುವ ಮುಖ್ಯವಾದ ಕಟ್ಟಡಗಳಲ್ಲಿ, ಮುನಿಸಿಪಲ್ ಟೌನ್‌ಹಾಲ್, ಕೊತ್ವಾಲಿ, ಪಬ್ಲಿಕ್ ಲೈಬ್ರರಿ ಮತ್ತು ಗವರ್ನಮೆಂಟ್ ಸ್ಕೂಲ್ ಇವು ಮುಖ್ಯವಾದವು. 'ಕ್ವೀನ್ಸ್ ಪಾರ್ಕ' ಎಂಬ ಉದ್ಯಾನದ ಮಧ್ಯದಲ್ಲಿರುವ ವಿಕ್ಟೋರಿಯಾ ಮಹಾರಾಣಿಯವರ ಶ್ವೇತ ಶಿಲಾಪ್ರತಿಮೆಯೂ ಮನೋರಂಜಕವಾಗಿ ಪಟ್ಟಣಕ್ಕೆ ಶೋಭಾಯಮಾನವಾಗಿದೆ. 'ಸಿವಿಲ್ ಲಾಯಿನ್ಸ್'ದಲ್ಲಿ ಕೋರ್ಟುಗಳೂ, ಟ್ರಿಜರಿ ಕಚೇರಿಯೂ, ಪ್ರಾಟೆಸ್ಟೆಂಟ್ ಮತ್ತು ರೋಮನ್ ಕೆಥೋಲಿಕ್ ದೇವಾಲಯಗಳೂ, ಪೋಸ್ಟು ಮತ್ತು ಟೆಲಿಗ್ರಾಫ್ ಆಫೀಸುಗಳೂ, ಕ್ಲಬೂ ಇರುವವು. ಪಂಜಾಬು ಪ್ರಾಂತ್ಯದಲ್ಲಿರುವ ವಿದ್ಯಾಲಯಗಳಲ್ಲಿ ಸುಪ್ರಸಿದ್ಧವಾದ 'ಖಾಲ್ಸಾ ಕಾಲೇಜ್' ಎಂಬ ವಿದ್ಯಾಲಯವು ಇಲ್ಲಿಗೆ ಮೂರು ಮೈಲು ದೂರದಲ್ಲಿರುವದು.

ಉತ್ತರ ಹಿಂದೂಸ್ಥಾನದ ಉತ್ತರದಲ್ಲಿ ಬೋಖಾರಾ, ಕಾಬೂಲ್ ಮತ್ತು ಕಾಶ್ಮೀರದೊಂದಿಗೂ, ಕಲ್ಕತ್ತಾ, ಮುಂಬಾಯಿ, ಮದ್ರಾಸು ಮತ್ತು ಇತರ ಸುಪ್ರಸಿದ್ಧ ವ್ಯಾಪಾರಸ್ಥಳಗಳೊಂದಿಗೆ ಆಮದುರಫ್ತು ಮಾಡುವ ಮುಖ್ಯ ಪಟ್ಟಣಗಳಲ್ಲಿ ಅಮೃತಸರವು ಮುಖ್ಯಪಟ್ಟಣವಾಗಿ ವಿಶೇಷ ಅಭಿವೃದ್ಧಿಸ್ಥಿತಿಯಲ್ಲಿರುವದು. ಇಲ್ಲಿಗೆ ಆಮದಾಗುವ ಜಿನಸಿಗಳಲ್ಲಿ ಧಾನ್ಯಗಳು, ಸಕ್ಕರೆ, ಎಣ್ಣೆ, ಉಪ್ಪು, ಹೊಗೆಸೊಪ್ಪು, ಹತ್ತಿ, ಇಂಗ್ಲಿಷರವರ ಕೆಲವು ಬಟ್ಟೆಬರೆಗಳು, ಕಾಶ್ಮೀರದ ಶಾಲುಗಳು, ರೇಷ್ಮೆ, ಮಣ್ಣಿನ ಮಡಕೆ ಮುಂತಾದವು, ಕಬ್ಬಿಣದ ಸಾಮಾನುಗಳು, ಚಹಾ ಎಲೆ, ಬಣ್ಣಗಳು—ಇವು ಮುಖ್ಯವಾದವು. ಇಲ್ಲಿಂದ ರಫ್ತಾಗುವ ಸಾಮಾನುಗಳಲ್ಲಿ ಇಲ್ಲಿನ ವ್ಯಾಪಾರದಲ್ಲಿ ವಿಶೇಷವಾಗಿ ದೊರೆಯುವ ಸಾಮಾನುಗಳೂ, ಇಲ್ಲಿಯೆ ತಯಾರಾಗುವ ಉಣ್ಣೆ ಮತ್ತು ರೇಷ್ಮೆಯ ಬಟ್ಟೆಗಳೂ ಮುಖ್ಯವಾದುವು. ಈ ಪಟ್ಟಣವು ಶಾಲುಗಳು ಮತ್ತು ಜಮಖಾನೆಗಳ ನೇಯಿಗೆಗೆ ಸುಪ್ರಸಿದ್ಧವಾಗಿರುವದು. ಇವು ರಡೂ ಕೈಮಗ್ಗಗಳಲ್ಲಿಯೇ ತಯಾರಾಗುವವು. ಇಲ್ಲಿ ತಯಾರಾಗುವ ಶಾಲುಗಳು ಕಾಶ್ಮೀರದ ಶಾಲುಗಳಷ್ಟು ಅಂದವಾಗಿಯೂ ಹೆಚ್ಚು ಬೆಲೆಯುಳ್ಳದ್ದಾಗಿಯೂ ಇಲ್ಲ. ಆದರೂ ಅವು ಬೇಗ ಖರ್ಚಾಗಿಹೋಗುವವು. ಅಮೃತಸರವು ಶಾಲಿನ ನೇಯಿಗೆಗೆ ಪ್ರಸಿದ್ಧಿಯಾಗಿರುವದಲ್ಲದೆ, ಕಾಶ್ಮೀರದ ಶಾಲಿನ ವ್ಯಾಪಾರಕ್ಕೂ ಇದು ಮುಖ್ಯ ಸ್ಥಳವಾಗಿದೆ. ಇಲ್ಲಿ ಅದಕ್ಕಾಗಿ ಅನೇಕ ಯುರೋಪಿಯನ್ ವ್ಯಾಪಾರಿಗಳ ದಲಾಲರು ಇರುವರು. ಪರಸ್ಥಳದವರು ಇಲ್ಲಿನ ನೇಯಿಗೆಯವರ ಕಾರ್ಖಾನೆಗಳನ್ನು ನೋಡುವಂತಿದೆ. ಮೇಜರ್ ನವೆಲ್ ಸಾಹೇಬನು ಇಲ್ಲಿನ ನೇಯಿಗೆಯವರ ಕಾರ್ಖಾನೆಯ ವಿಚಾರವಾಗಿ "ಈ ಪಟ್ಟಣವನ್ನು ನೋಡಲಿಕ್ಕೆ ಬಂದವರು ಈ ಕಾರ್ಖಾನೆಗಳಲ್ಲಿ ಜಮಖಾನೆಗಳು ಮಗ್ಗದ ಮೇಲೆ ತಯಾರಾಗುತ್ತಿರುವ ರೀತಿಯನ್ನು ನೋಡುವದರಿಂದ ಪೌರ್ವಾತ್ಯದೇಶದವರು ಜಮಖಾನೆಗಳ ಮೇಲೆ ಕಾಲಿಡುವದಕ್ಕೆ ಮುಂಚೆ ತಂತಮ್ಮ ಪಾದರಕ್ಷೆಗಳನ್ನು ತೆಗೆದಿಡುವದೇಕೆಂಬುದನ್ನು ತಿಳಿಯುವದಲ್ಲದೆ ಅದಕ್ಕೆ ತಮ್ಮ ಸಹಾನುಭೂತಿಯನ್ನು ತೋರಿಸಲಾರಂಭಿಸುವರು" ಎಂದು ಬರೆದಿರುವನು.

ಮೊನ್ನೆ ನಡೆದ ಅತ್ಯಾಚಾರಗಳು.

ಮೊನ್ನೆ ನಡೆದ ಅತ್ಯಾಚಾರಗಳ ವಿಚಾರಗಳನ್ನು ಸಂಕ್ಷಿಪ್ತವಾಗಿಯಾದರೂ ವಿವರಿಸದೆ, ಈಗ ಬರೆದಿರುವ ಆ ಪಟ್ಟಣದ ಚರಿತ್ರೆಯು ಪೂರ್ಣವೆಂದೆನಿಸಿಕೊಳ್ಳಲಾರದು. ಆದ್ದರಿಂದ ಸಾಧ್ಯವಾದಷ್ಟು ಸಂಕ್ಷಿಪ್ತವಾಗಿ ಆ ವಿಷಯವನ್ನು ಇಲ್ಲಿ ವಿವರಿಸುವೆವು. ಕಳೆದ ಎಪ್ರಿಲ್ ತಿಂಗಳಲ್ಲಿ ನಡೆದ ಅತ್ಯಾಚಾರಗಳಿಂದ ಆ ಪಟ್ಟಣದ ಅಂಗದ ಮೇಲೆ ದೊಡ್ಡ ದೊಡ್ಡ ಬರೆಯ ಗುರುತುಗಳು ಉಳಿದುಕೊಂಡಿರುವದು. ಆದರೆ ಅದರಿಂದ ಜನಗಳ ಮನಸ್ಸಿನ ಮೇಲುಂಟಾಗಿರುವ ಪರಿಣಾಮವು ವಿಶೇಷ ಮಹತ್ವದ್ದಾಗಿದೆ. ಅಮೃತಸರದ ಆ ಅನಾಹುತಗಳ ಸಂಕ್ಷಿಪ್ತ ಇತಿಹಾಸವನ್ನು ಇಲ್ಲಿ ಬರೆಯುವೆವು. ಕಳೆದ ವರ್ಷ (ಸನ್ ೧೯೧೯) ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಸಭೆಯಲ್ಲಿ ಪ್ರಜಾಪ್ರತಿನಿಧಿಗಳೆಲ್ಲರೂ ವಿರುದ್ಧವಾಗಿದ್ದರೂ ಅವರ ಅಭಿಪ್ರಾಯವನ್ನು ಲಕ್ಷಿಸದೆ ರೌಲಟ್ ಮಸೂದೆಯನ್ನು ಕಾಯಿದೆಯಾಗಿ ಅಂಗೀಕರಿಸಲಾಯಿತು. ಅದಕ್ಕಾಗಿ ಪ್ರತಿಭಟನೆಯನ್ನು ಸೂಚಿಸುವದಕ್ಕೋಸ್ಕರ ಮಹಾತ್ಮಾ ಗಾಂಧಿಯವರ ಉಪದೇಶಾನುಸಾರವಾಗಿ ಮಾರ್ಚ್ ೩೦ (ಸನ್ ೧೯೧೯) ನೆಯ ದಿವಸ ಹರತಾಳ ಅಥವಾ ವ್ಯಾಪಾರ ಮುಂತಾದ ಕಾರ್ಯಗಳನ್ನು ನಿಲ್ಲಿಸಿಬಿಡುವ ಆಜ್ಞೆಯನ್ನು ಈ ಪಟ್ಟಣದವರು ನೆರವೇರಿಸಿದರು. ಆ ದಿನ ಸಾಯಂಕಾಲ ಪ್ರಜೆಗಳ ಒಂದು ಮಹಾಸಭೆಯು ಅಮೃತಸರದಲ್ಲಿ [illegible] ಪ್ರಜಾಮುಖಂಡರುಗಳು ಅದೇ ರೌಲಟ್ ಮಸೂದೆಯ ವಿರೋಧವಾಗಿ ಭಾಷಣಗಳನ್ನು ಮಾಡಿ [illegible] ನಿರ್ಣಯವನ್ನು ಅಂಗೀಕರಿಸಿದರು. ಮುಂದಿನ ಎಪ್ರಿಲ್ ತಿಂಗಳ ೬ನೆಯ ತಾರೀಕಿನ ದಿನ ಹಿಂದುಸ್ಥಾನದ ಇತರೆಡೆಗಳಂತೆ ಇಲ್ಲಿಯೂ ಹರತಾಳವನ್ನು ಆಚರಿಸಿದರು. ಇದು [illegible] ದೊಡ್ಡದಾದ ಒಂದು ಸಭೆಯು ಸೇರಿತು. ಆದರೆ ಇದಕ್ಕೆ ಹಿಂದಿನ ದಿನ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ಕೆಲವು ಪ್ರಜಾಮುಖಂಡರು ಯಾವ ಸಭೆಯಲ್ಲೂ ಭಾಷಣ ಮಾಡಕೂಡದೆಂಬ ನಿಷೇಧವನ್ನು ಅವರಿಗೆ ತಂದದ್ದರಿಂದ, ಮುಂಚೆ ಭಾಷಣ ಕೊಟ್ಟ ಮುಖಂಡರಲ್ಲಿ ಕೆಲವರು ಆ ದಿನ ಭಾಷಣ ಮಾಡಲಾಗಲಿಲ್ಲ. ಉತ್ತರ ಹಿಂದೂಸ್ಥಾನದ ಹಿಂದೂ ಹಬ್ಬಗಳಲ್ಲಿ ದಸರಾ ಹಬ್ಬವನ್ನುಳಿದು ಶ್ರೀ ರಾಮನವಮಿಯಂಥಾ ಹಬ್ಬವು ಮತ್ತೊಂದಿಲ್ಲ. ಆ ಹಬ್ಬವನ್ನು ವಿಶೇಷ ವಿಜೃಂಭಣೆಯಿಂದಾಚರಿಸುವರು. ಈ ಹಬ್ಬವು ಎಪ್ರಿಲ್ ೯ನೆಯ ತಾರೀಕಿನ ದಿನ ಆಚರಿಸಲ್ಪಡಬೇಕಾಗಿತ್ತು. ಈ ನಗರಕ್ಕೆ ಮುಂಚೆ ಆ (ನವಮಿಯ) ದಿನ ಹಿಂದುಗಳಿಗೆ [illegible] ಕಾಲದಲ್ಲಿ ಸ್ವಪ್ನದಲ್ಲಿಯೂ [illegible] ಎಷ್ಟು ಎಚ್ಚರದಿಂದಿದ್ದರೂ ಹಿಂದೂ ಮುಸಲ್ಮಾನರೊಳಗೆ ಕಲಹ ಉಂಟಾಗಿ ಶಾಂತಿಗೆ ಭಂಗಬರುತ್ತಿತ್ತು. ಆದರೆ ಈ ವರ್ಷ (೧೯೧೯) ಡಾ॥ ಕಿಚ್ಲೂ ಮತ್ತು ಡಾ॥ ಸತ್ಯಪಾಲ—ಇವರುಗಳ ಮೇಲ್ಪಂಕ್ತಿಯಿಂದ ಶ್ರೀ ರಾಮನವಮಿಯ ಹಬ್ಬದ ದಿನವು ಹಿಂದೂ ಮುಸಲ್ಮಾನ ಬಂಧುಗಳ ಸ್ನೇಹಪ್ರದರ್ಶನದ ದಿನವಾಗಿ ಪರಿಣಮಿಸಿತು. ಆ ಇಬ್ಬರು ಮಹನೀಯರ ಪ್ರಾರ್ಥನಾನುಸಾರವಾಗಿ ಆ ದಿನ ಪೋಲೀಸರ ಬಂದೋಬಸ್ತನ್ನು ತೆಗೆದುಬಿಟ್ಟರು. ಹಿಂದೂ ಮುಸಲ್ಮಾನ ಸ್ವಯಂ ಸೇವಕರು ಆ ದಿನದ ಉತ್ಸವವನ್ನು ಬಹು ಕ್ರಮವಾಗಿಯೂ ಶಾಂತವಾಗಿಯೂ ನಡೆಯುವಂತೆ ಮಾಡಿದರು. ಆ ದಿನದ ಹಿಂದೂಗಳ ಉತ್ಸವದಲ್ಲಿ ಡಾ॥ ಕಿಚ್ಲೂ ಇವರ ಅಧ್ಯಕ್ಷತೆಯಲ್ಲಿ ಅನೇಕಾನೇಕ ಮಹಮ್ಮದೀಯ ಬಂಧುಗಳೂ ಬಂದು ಸೇರಿಕೊಂಡರು. ಎಲ್ಲವೂ ಶಾಂತರೀತಿಯಲ್ಲಿ ನೆರವೇರಿತು. ಇದರಿಂದ [illegible] ದಿನದ ಮುಖಂಡರಾಗಿಯೂ ರೌಲಟ್ ಮಸೂದೆಗೆ ವಿರುದ್ಧರಾಗಿ ಮುಂಚೆಯೆ ಸುಪ್ರಸಿದ್ಧರಾಗಿದ್ದ ಡಾ॥ ಸತ್ಯಪಾಲ, ಡಾ॥ ಕಿಚ್ಲೂ ಇವರುಗಳು ಮತ್ತಷ್ಟು ಸುಪ್ರಸಿದ್ಧರಾದರು. ಎಂದರೆ ೯ನೆಯ ತಾರೀಕಿನ ದಿನ ಇವರು ಪ್ರಜಾನುರಾಗದ ಅತ್ಯುನ್ನತ ಶಿಖರವನ್ನಡರಿದ್ದಾರೆಂದು ಹೇಳಬಹುದು. ಪಂಜಾಬು ಸರಕಾರದವರಿಗೆ ಇದು ಸಹನವಾಗಲಿಲ್ಲ. ೧೦ನೆಯ ತಾರೀಕಿನ ಬೆಳಿಗ್ಗೆ ೧೦ ಗಂಟೆಗೆ ಡೆಪ್ಯುಟಿ ಕಮಿಷನರ್ ಸಾಹೇಬರು ಅವರಿಬ್ಬರನ್ನೂ ಕರೆಸಿ, ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ಪ್ರಕಾರ ಅವರನ್ನು ಕೈದುಮಾಡಿ, ಮೋಟಾರಿನಲ್ಲಿ ಕುಳ್ಳಿರಿಸಿ, ಅವರನ್ನು ಧರ್ಮಶಾಲೆ ಎಂಬಲ್ಲಿಗೆ ಕಳುಹಿಸಿದರು. ಈ ಸಮಾಚಾರವು ಕಾಳ್ಗಿಚ್ಚಿನಂತೆ ಬಹುಬೇಗ ಊರೆಲ್ಲ ಹರಡಿಕೊಂಡು ಮುಂದೆ ಸುಮಾರು ಕಾಲುಗಂಟೆಯೊಳಗಾಗಿ ಪಟ್ಟಣದ ಅಂಗಡಿಯ ಬಾಗಿಲುಗಳೆಲ್ಲ ಮುಚ್ಚಲ್ಪಟ್ಟವು. ಶೀಘ್ರವಲ್ಲಿಯೆ ಜನಗಳು ತಂಡೋಪತಂಡವಾಗಿ ನೆರೆದು ಆ ಗುಂಪಿನವರು ಡೆಪ್ಯುಟಿ ಕಮಿಷನರ್ ಸಾಹೇಬರನ್ನು ನೋಡಿ ಸೆರೆಯಾಳುಗಳನ್ನು ಬಿಡುವಂತೆ ಪ್ರಾರ್ಥಿಸುವದಕ್ಕಾಗಿ ಸಿವಿಲ್ ಲೈನ್ಸ್ ಕಡೆಗೆ ಹೊರಟರು. ಸಿವಿಲ್ ಲಾಯಿನ್ಸ್‌ಗೆ ಹೋಗಬೇಕಾದರೆ ರೈಲುರಸ್ತೆಯ ಮೇಲಿರುವ ಎರಡು ಸೇತುವೆಗಳಲ್ಲಿ ಯಾವದಾದರೊಂದನ್ನಾದರೂ ದಾಟಿಯೇ ಹೋಗಬೇಕು. ಗುಂಪಿನವರು ಆ ಸೇತುವೆಗಳ ಕಳಭಾಗಕ್ಕೆ ಸೇರುತ್ತಲೆ ಅಲ್ಲಿ ಪೋಲಿಸ್ ಮತ್ತು ಸೇನಾಳುಗಳನ್ನು ಸಂಧಿಸಿದರು. ಆಗ ಆ ಗುಂಪಿನವರು ಚದರಬೇಕೆಂದು ಅಪ್ಪಣೆಯಾಯಿತು. ಆದರೆ ಆ ಗುಂಪಿನವರು ಅದಕ್ಕೆ ಒಪ್ಪಲಿಲ್ಲವಾದ್ದರಿಂದ ಕುದುರೆ ಸೇನಾಳುಗಳು ನಿರಾಯುಧರಾಗಿದ್ದ ಗುಂಪಿನವರ ಮೇಲೆ ಗುಂಡನ್ನು ಹಾರಿಸಿ, ಅವರನ್ನು ಹಿಂದಕ್ಕೋಡಿಸಲು ಯತ್ನಿಸಿದರು. ಅವರ ಗುಂಡಿನಿಂದ ಇಬ್ಬರು ಮೃತರಾಗಿ, ಮತ್ತು ಅನೇಕರಿಗೆ ಬಲವಾದ ಘಾಯಗಳೂ ಆದವು. ಈ ಗುಂಪಿನಲ್ಲಿ ಸೇರಿಕೊಂಡಿದ್ದ ಕೆಲವರು ಪಟಿಂಗರು ಈ ರಕ್ತಸ್ರಾವದಿಂದ ಕೋಪೋದ್ರೇಕರಾಗಿ, ಬೇರೆ ಬೇರೆ ದಿಕ್ಕುಗಳಲ್ಲಿ ಚದರಿ, ನ್ಯಾಶನಲ್ ಬ್ಯಾಂಕ್, ಚಾರ್ಟರ್ಡ ಬ್ಯಾಂಕ್, ಅಲ್ಲಾಯನ್ಸ್ ಬ್ಯಾಂಕ್, ಟೌನ್ ಹಾಲ್, ಪಿ.ಸನ್ ಚರ್ಚ್ ಮತ್ತು ಪಂಜಾಬ ರಿಲಿಜಿಯಸ ಬುಕ್‌ಡಿಪೊ ಇವುಗಳನ್ನು ಸುಟ್ಟು, ಬಹು ಕ್ರೂರತನದಿಂದ ನ್ಯಾಶನಲ್ ಬ್ಯಾಂಕಿನ ಮಿ॥ ಸ್ಟೀವರ್ಟ್ ಮತ್ತು ಮಿ॥ ಸ್ಕೋಟ್‌ರನ್ನೂ, ಅಲ್ಲಾಯನ್ಸ್ ಬ್ಯಾಂಕಿನ ಮಿ॥ ಜಿ. ಎಮ್. ಥಾಮಸನ್‌ರನ್ನೂ ಕೊಲೆಮಾಡಿದರು. ಇಬ್ಬರು ಯುರೋಪಿಯನ್ ಸಭ್ಯಸ್ತ್ರೀಯರೂ (ಅವರಲ್ಲಿ ಒಬ್ಬಾಕೆ ವೈದ್ಯಳು ಮತ್ತೊಬ್ಬಳು ನರ್ಸಳು) ಈ ಗುಂಪಿನವರಿಂದ ಎದುರಿಸಲ್ಪಟ್ಟು, ಅವರಲ್ಲಿ ವೈದ್ಯಳಾದ ಮಿಸೆಸ್ ಈಸ್‌ಡನ್ ಎಂಬಾಕೆಯು ತಪ್ಪಿಸಿಕೊಂಡಳು, ಆದರೆ ಆ ಗುಂಪಿನವರು ಎರಡನೆಯಾಕೆಯ ಮೇಲೆ ಬಿದ್ದರು. ಈ ಅನ್ಯಾಯಕರವೂ ಶೋಚನೀಯವೂ ಆದ ಕಾರ್ಯವು ಪಟ್ಟಣದಲ್ಲಿಯೇ ನಡೆಯಿತು. ಪಟ್ಟಣದ ಹೊರಗಾದರೂ ಸಾರ್ಜಂಟ್ ರೋಲೆಂಡ್ಸ್, ಕ್ಯಾಂಪಿನ ಇಲೆಕ್ಟ್ರಿಶಿಯನ್ ಮತ್ತು ರೈಲು ಗಾರ್ಡನಾದ ರಾಬಿನ್‌ಸನ್—ಇವರುಗಳನ್ನು ಸಾಯುವಂತೆ ಹೊಡೆದರು. ಸ್ಟೇಶನ್‌ಯಾರ್ಡನ್ನು ಸುಟ್ಟುಬಿಟ್ಟರು. ಟೆಲಿಗ್ರಾಫ್ ಆಫೀಸಿನ ಮೇಲೆ ಬೀಳಲು ಹೋದ ಗುಂಪನ್ನು ಅಲ್ಲಿಯವರು ಹಿಂದಕ್ಕೋಡಿಸಿದರು. ಮರುದಿನ ಮೃತರ ದೇಹವನ್ನು ದಹನ ಮಾಡಿದರು. ಅಧಿಕಾರಿವರ್ಗದವರು ಈ ದಂಗೆಯಲ್ಲಿ ಇಂಥಿಂಥವರು ಸೇರಿದವರೆಂಬ ಅನುಮಾನದ ಮೇಲೆ ಅನೇಕರನ್ನು ಹಿಡಿದರು. ಪಟ್ಟಣದ ಸುತ್ತಲು ಸೇನೆಯ ಕಾವಲಿಟ್ಟು, ಸಿವಿಲ್ ಲಾಯಿನ್ಸ್‌ಗೆ ಹೋಗತಕ್ಕ ದಾರಿಗಳಲ್ಲಿ ಬಂದೋಬಸ್ತಾದ ಕಾವಲನ್ನಿಟ್ಟರು. ಲಾಹೋರ್ ಮತ್ತು ಜಲಂಧರಗಳಿಂದ ಹೊಸ ಸೇನೆಯನ್ನು ತರಿಸಲಾಯಿತು. ಸಿವಿಲ್ ಲಾಯಿನ್ಸ್‌ದಲ್ಲಿದ್ದ ಯುರೋಪಿಯನ್ ಜನರನ್ನು ಕೋಟೆಯೊಳಕ್ಕೆ ಕಳುಹಿಸಿದರು. ಸಿವಿಲ್ ಅಧಿಕಾರಿಗಳ ಹೆಡ್ ಕ್ವಾರ್ಟರ್ಸ್‌ನ್ನು ರೈಲ್ವೆ ಸ್ಟೇಶನಿಗೆ ಸಾಗಿಸಿದರು. ೧೧ ಮತ್ತು ೧೨ನೆಯ ತಾರೀಕಿನ ದಿನಗಳಲ್ಲಿ ಯಾವ ವಿಧವಾದ ಕಾನೂನಿನ ವಿರುದ್ಧಾಚರಣೆಯೂ ಅತ್ಯಾಚಾರವೂ ನಡೆಯದೆ ಪಟ್ಟಣದಲ್ಲೆಲ್ಲ ಶಾಂತಿಯ ಸಾಮ್ರಾಜ್ಯವು ನೆಲೆಗೊಂಡಿತ್ತು. ಜನರೆಲ್ಲರೂ ತಂತಮ್ಮ ಬೆಳಗ್ಗಿನ ಕರ್ತವ್ಯಗಳಲ್ಲಿ ನಿರತರಾಗಿದ್ದರು. ಈ ಸಮಯದಲ್ಲಿ ಜನರಲ್ ಡಾಯರ್ ಸಾಹೇಬರು ಜಲಂಧರದಿಂದ ದೊಡ್ಡದೊಂದು ಸೇನೆಯನ್ನು ತೆಗೆದುಕೊಂಡು ಬಂದು, ಸಮರಶಾಸನ ವಿಧಿಯು ಆಚರಣೆಗೆ ಬರುವದಕ್ಕೆ ಮುಂಚೆಯೇ ಡೆಪ್ಯುಟಿ ಕಮಿಶನರಿಂದ ಆಳಿಕೆಯ ಅಧಿಕಾರವನ್ನು ವಹಿಸಿಕೊಂಡರು. ಈ ರೀತಿಯಾದ ಆಚರಣೆಯನ್ನು ಯಾವ ಕಾನೂನಿನ ಪ್ರಕಾರ ಮಾಡಿದರೆಂಬದು ರಹಸ್ಯವಾಗಿತ್ತು. ೧೨ನೆಯ ತಾರೀಕಿನ ದಿನ ಸ್ವಲ್ಪಕಾಲ ಗಂಟೆಗಳ ವಿನಾ ಉಳಿದ ಕಾಲದಲ್ಲಿ ಪಟ್ಟಣದವರೆಲ್ಲರು ಸಿವಿಲ್ ಅಧಿಕಾರಿಗಳಿಗೆ ವಿಧೇಯರಾಗಿ ನಡೆದುಕೊಂಡರು. ೧೧ನೆಯ ದಿನ ಪ್ರಜೆಗಳೆಲ್ಲರು ಡೆಪ್ಯುಟಿ ಕಮಿಶನರರ ಅಪ್ಪಣೆ ಪಡೆದವರಾಗಿ, ಶಾಂತರೀತಿಯಲ್ಲಿ ಶವಗಳನ್ನು ಧರ್ಮಮಾಡಿದರು. ಇದಕ್ಕೆ ನಿದರ್ಶನವಾಗಿತ್ತು. ಮತ್ತ ೧೧ ಮತ್ತು ೧೨ನೆಯ ತಾರೀಕಿನ ದಿನ ಸಿವಿಲ್ ಅಧಿಕಾರಿಗಳು, ಜನಗಳೊಂದಿಗೆ ಯಾವ ವಿರೋಧವೂ ಇಲ್ಲದೆ ಕೆಲವರನ್ನು ಸೆರೆಹಿಡಿದು ಕೈದುಮಾಡಿದರು. ಹೀಗಿದ್ದರೂ ಪಟ್ಟಣವನ್ನು ಸಿವಿಲ್ ಅಧಿಕಾರಿಗಳಿಂದ ಮಿಲಿಟರಿ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದು ಬಹು ಅನ್ಯಾಯವೂ ಅನಾವಶ್ಯಕವೂ ಆದ ಕೆಲಸವೆಂಬುದು ಸ್ಪಷ್ಟವಾಗಿತ್ತು. ಆದರೆ ಈ ಅಧಿಕಾರದ ಬದಲಾವಣೆಯಿಂದ ಬ್ರಿಟಿಷರ ಇತಿಹಾಸದಲ್ಲಿ ಇದುವರೆಗೆ ನಡೆಯದಿರುವಂಥಾ ಅನಾಹುತವು ನಡೆಯಿತು. ಜನರಲ್ ಡ್ಯಾಯರರು ಅಮೃತಸರದ ಅಧಿಕಾರವನ್ನು ವಹಿಸಿಕೊಂಡ ಮೇಲೆ ರಾಮಬಾಗ್‌ನಲ್ಲಿ ತನ್ನ ಮುಖ್ಯ ಕಾರ್ಯಾಲಯವನ್ನು ಸ್ಥಾಪಿಸಿ, ಶಾಂತಿಕ್ರಮಗಳನ್ನು ಪುನಃ ನೆಲೆಗೊಳಿಸುವದಕ್ಕೆ ಪ್ರಯತ್ನಮಾಡಲಾರಂಭಿಸಿದರು. ಮರುದಿನ ಎಂದರೆ ೧೩ನೆಯ ತಾರೀಕಿನ ದಿನ ಜಲಿಯನ್‌ವಾಲಾ ಬಾಗಿನ ಕೊಲೆಯ ಅನಾಹುತದ ದಿನವು. ಈ ಅತ್ಯಾಚಾರದ ವಿಚಾರವಾಗಿ ಅನೇಕ ವೃತ್ತಪತ್ರಿಕೆಗಳಲ್ಲಿ ಅನೇಕ ಲೇಖನಗಳು ಬಂದಿರುವವು. ಆದರೂ ಈ ಚರಿತ್ರೆಯನ್ನು ಸ್ವಲ್ಪ ವಿವರಿಸದೆ ಮುಗಿಸಲಾಗದು.

[illegible]

ಸ್ವದೇಶಾಭಿಮಾನಿ.

ಶಕ ೧೮೪೧ ಮಾಘ ಶು॥ ೧೦ ಶುಕ್ರವಾರ.

ರಾಷ್ಟ್ರೀಯ ಸಭೆಯೂ ರಾಷ್ಟ್ರೀಯ ಭಾಷೆಯೂ.

ನೊನ್ನೆಯ ಡಿಸೆಂಬರ ತಿಂಗಳಲ್ಲಿ ಜರಗಿದ ಅಮೃತಸರದ ರಾಷ್ಟ್ರೀಯ ಸಭೆಯ ಅಧಿವೇಶನವು ಸರ್ವಾಂಗಗಳಿಂದ ಸುಂದರವಾದರೂ ಅದರ ಕಾರ್ಯಕ್ರಮದ ಮೇಲೆ ಇತರ ಆಕ್ಷೇಪಗಳ ಸಂಗಡನೆ ಹಿಂದೀ ಭಾಷೆಯನ್ನು ಅಧಿಕವಾಗಿ ಉಪಯೋಗಿಸಿದ ಬಗ್ಗೆ ಒಂದು ಆಕ್ಷೇಪವು ಬಂದಿದೆ. ಹಿಂದೂಸ್ಥಾನದೊಳಗಿನ ಎಲ್ಲ ಭಾಗಗಳಿಂದ ಪ್ರತಿನಿಧಿಗಳು ರಾಷ್ಟ್ರೀಯ ಸಭೆಗೆ ಬಂದಿರುತ್ತಾರೆ; ಅವರಿಗೆಲ್ಲ ಹಿಂದೀ ಭಾಷೆಯ ಜ್ಞಾನವಿರದು; ಉದಾಹರಣಾರ್ಥವಾಗಿ ಮದ್ರಾಸಿನವರಿಗೆ ಹಿಂದೀ ಭಾಷೆಯು ಅಪರಿಚಿತವಾಗಿರುವುದರಿಂದ ಅಂಥ ವಕ್ತೃಗಳ ಭಾಷಣವು ಅಪರಿಚಿತರ ದೃಷ್ಟಿಯಿಂದ ವ್ಯರ್ಥವಾಗುವುದು; ಅಲ್ಲದೆ ರಾಷ್ಟ್ರೀಯ ಸಭೆಯು ಇಡೀ ರಾಷ್ಟ್ರದ ಆಕಾಂಕ್ಷೆ, ಹಾಲಹವಾಲಿ ಮುಂತಾದವುಗಳನ್ನು ರಾಜ್ಯಕರ್ತರ ಮುಂದಿಡುವ ಸಂಸ್ಥೆಯಾಗಿರುವುದರಿಂದ ರಾಜ್ಯಕರ್ತರ ಯಾವ ಭಾಷೆಯೊ ಅಂಥ ರಾಜಕೀಯವಾದ ಇಂಗ್ಲಿಷ ಭಾಷೆಯಿಂದಲೆ ಆ ಸಂಸ್ಥೆಯ ಎಲ್ಲ ತರದ ವ್ಯವಹಾರವು ನಡೆಯುವುದು ಉಚಿತವು; ಹೀಗಿರುವಲ್ಲಿ ಹಿಂದೀಭಾಷೆಯನ್ನು ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಉಪಯೋಗಿಸಿದ್ದು ಯೋಗ್ಯವಲ್ಲ; ಸ್ವಾಮಿ ಶ್ರದ್ಧಾನಂದರು ಮಾಡಿದ ಸ್ವಾಗತಪರ ಭಾಷಣ ಮಹಾತ್ಮ ಗಾಂಧಿ, ಪಂಡಿತ ಮಾಲವೀಯ ಇತ್ಯಾದಿ ವಕ್ತೃಗಳ ಉಪನ್ಯಾಸ ಇವೆಲ್ಲ ಹಿಂದೀ ಭಾಷೆಯಲ್ಲಿ ಗ್ರಥಿತವಾಗಿದ್ದವು; ಮತ್ತು ಇತರ ಭಾಷಣಕ್ಕಿಂತಲೂ ಇವೇ ಅಧಿಕವಾಗಿದ್ದವು; ಸಾರಾಂಶ, ಈ ವರ್ಷದ ಅಧಿವೇಶನದಲ್ಲಿ ಹಿಂದೀ ಭಾಷೆಯ ಪ್ರಾಚುರ್ಯವು ಕಂಡು ಬಂದದ್ದರಿಂದ ಈ ಅಧಿವೇಶನಕ್ಕೆ 'ರಾಷ್ಟ್ರೀಯ'ವೆಂಬ ವಿಶೇಷಣವು ಅನ್ವಿತವಾಗುವುದಿಲ್ಲವೆಂದು ಆಕ್ಷೇಪವಿದೆ.

ವಸ್ತುತಃ ವಿಚಾರ ಮಾಡಿದರೆ ಈ ಆಕ್ಷೇಪದಲ್ಲಿ ಏನೂ ಅರ್ಥವಿಲ್ಲೆಂದು ಹೇಳಬೇಕಾಗುತ್ತದೆ. ರಾಷ್ಟ್ರೀಯ ಸಭೆಯು ಹಿಂದೀ ರಾಷ್ಟ್ರದ್ದು. ಹಿಂದೀ ರಾಷ್ಟ್ರದ ಭಾಷೆಯು ಇಂಗ್ಲೀಷಲ್ಲ. ಒಂದು ಜನಾಂಗದವರು ಇನ್ನೊಂದು ಜನಾಂಗದ ಭಾಷೆಯಲ್ಲಿ ವ್ಯವಹಾರ ಮಾಡುವುದು ಒಂದು ಹಿಂದುಸ್ಥಾನದಲ್ಲಿ ಅಲ್ಲದೆ ಇನ್ನೆಲ್ಲೂ ಇಲ್ಲ. ಹಿಂದೂಸ್ಥಾನದೊಳಗಿನ ಬರೆ ಭಾಷೆಯ ಸಂಗತಿಯೆ ಮಾತ್ರವಲ್ಲ, ಎಲ್ಲ ಸಂಗತಿಗಳು ವಿಚಿತ್ರವಾದುವುಗಳೆ; ಹಿಂದುಸ್ಥಾನದ ವಿದ್ಯಾಲಯಗಳು ದೇಶೀಯವಲ್ಲ; ಹಿಂದೂಸ್ಥಾನದ ರಾಜಕೀಯ ಕಾರಭಾರವು ದೇಶೀಯ ಪದ್ಧತಿಯದಲ್ಲ; ಹಿಂದೂಸ್ಥಾನದೊಳಗಿನ ಔಷಧ ಇಲಾಖೆಯು ದೇಶೀಯವಲ್ಲ, ಹಿಂದೂಸ್ಥಾನದೊಳಗಿನ ಪೇಟೆಯು ದೇಶೀಯವಲ್ಲ. ಈ ರೀತಿಯಿಂದ ಎಷ್ಟು ದೇಶೀಯವಲ್ಲದ—ರಾಷ್ಟ್ರೀಯವಲ್ಲದ ವಿಷಯಗಳನ್ನು ತೋರಿಸಿ ಕೊಡಬಹುದು. ಈ ಪ್ರಕಾರ ಎಲ್ಲ ಸಂಗತಿಗಳು ವಿದೇಶೀಯವಿರುವಾಗ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಹಿಂದೀ ಭಾಷೆಯಂಥ ಸಾರ್ವರಾಷ್ಟ್ರೀಯ ಭಾಷೆಯು ಸ್ಥಾನವನ್ನು ಪಡೆದದ್ದು ಕೆಲವರಿಗೆ ವಿಚಿತ್ರವಾಗಿ ಕಾಣುತ್ತದೆ. ಮಾತ್ರವಲ್ಲ, ರಾಷ್ಟ್ರೀಯ ಸಭೆಯಲ್ಲಿ ಈ ಭಾಷೆಗೆ ಪ್ರವೇಶವನ್ನು ಕೊಡದ ಅವರ ಭಾಷಾಪಾವಿತ್ರ್ಯವನ್ನು ಹಾಗೆಯೇ ಇರಗೊಡಬೇಕೆಂದು ಅವರು ನೆನಸುವದಾದರೆ ಅದು ಹಿಂದೂಸ್ಥಾನದ ಹಿತದ ದೃಷ್ಟಿಯಿಂದ ಕೇವಲ ವಿಘಾತಕವಾಗಿದೆಂದು ನಮ್ಮ ಕೆಳಗಿನ ಉಪಪಾದನದ ಮೇಲಿಂದ ತಿಳಿದು ಬಂದೀತು.

ರಾಷ್ಟ್ರೀಯ ಸಭೆಯು ಜನ್ಮವೆತ್ತಿ ಈಗ ೩೦।೩೫ ವರ್ಷಗಳಾದವಷ್ಟು. ಇದರ ಮುಖ್ಯ ಉದ್ದೇಶಗಳು ಎರಡು. ಒಂದು, ಹಿಂದೀ ರಾಷ್ಟ್ರದ ಹಾಲುಹವಾಲಗಳನ್ನೂ ಆಕಾಂಕ್ಷೆಗಳನ್ನೂ ರಾಜ್ಯಕರ್ತರ ಮುಂದಿಡುವುದು. ಇನ್ನೊಂದು ಹಿಂದೀ ದೇಶದ [illegible]

[illegible] ಜಾಗೃತಿಯ ಯಾವ [illegible] ಅದರ ಮುಖ್ಯ ಉದ್ದೇಶವು [illegible] ಅದನ್ನು ಅದು ಈಗ ತಾನೆ ಒಂದೆರಡು ವರ್ಷಗಳಿಂದ ಕೈಕೊಳ್ಳ ಹತ್ತಿದೆ. ರಾಷ್ಟ್ರೀಯ ಸಭೆಯು ಇತ್ತಲಾಗೆ ಲೋಕಮತಕ್ಕೆ ಹೆಚ್ಚಿನ ಚಾಲನೆಯನ್ನು ಕೊಡಹತ್ತಿದೆ ಎಂಬುದಕ್ಕೆ ಉತ್ತಮವಾದ ಪ್ರತ್ಯಂತರವು ಯಾವುದೆಂದರೆ, ಅದರ ವಾರ್ಷಿಕ ಅಧಿವೇಶನದಲ್ಲಿ ಬರಬರುತ್ತ ಪ್ರತಿನಿಧಿಗಳ ಸಂಖ್ಯೆ, ಆ ಪ್ರತಿನಿಧಿಗಳ ಯೋಗ್ಯತಾಕ್ಷೇತ್ರ, ಪ್ರೇಕ್ಷಕರ ಸಂಖ್ಯೆ ಇವೆಲ್ಲ ಹೆಚ್ಚುತ್ತ ಹೋಗಿ, ಈಗ ರಾಷ್ಟ್ರೀಯ ಸಭೆಯ ಮಂಟಪವನ್ನು ತಯಾರಿಸುವುದೆಂದರೆ, ಈ ವರ್ಷದ ಅನುಭವದಿಂದ ಸಾಮಾನ್ಯವಾಗಿ ೧೮-೨೦ ಸಾವಿರ ಜನರಿಗೆ ಸೇರುವಷ್ಟು ಜಾಗೆಯನ್ನು ಕಲ್ಪಿಸಬೇಕಾಗುತ್ತದೆ. ಈಗ ಎರಡು ವರ್ಷಗಳಿಂದ ಬೇಸಾಯಗಾರರು ರಾಷ್ಟ್ರೀಯ ಸಭೆಯ ಮಂಟಪವನ್ನು ಸುಶೋಭಿಸ ಹತ್ತಿದ್ದಾರೆ ಎಂದಾದ ಮೇಲೆ ಆ ವರ್ಗದಲ್ಲೂ ರಾಷ್ಟ್ರೀಯ ಆಕಾಂಕ್ಷೆಗಳ ಜಾಗೃತಿಯುಂಟಾಗ ಹತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಭಾಷೆಯ ವ್ಯವಹಾರವನ್ನೆ ಇಟ್ಟುಕೊಂಡರೆ ಅದು ಹೇಗೆ ರಾಷ್ಟ್ರದೊಳಗಿನ ಎಲ್ಲ ಸಾಮಾನ್ಯಜನರ ಸಮಾವೇಶಕ್ಕಾಗಲಿ, ಆಕಾಂಕ್ಷೆಗಾಗಲಿ ಅನುಕೂಲವಾದೀತು? ರಾಷ್ಟ್ರೀಯ ಸಭೆಯೆಂದು ಹೆಸರು ಕೊಡೋಣ, ೩೦ ಕೋಟಿಯ ಜನ ಸಂಖ್ಯೆಯ ಪ್ರತಿನಿಧಿಗಳೆಂದು ಕೆಲವು ನೂರು, ಕಿಂಬಹುನಾ ಹೆಚ್ಚೆಂದರೆ ೨—೩ ಸಾವಿರ ಪ್ರತಿನಿಧಿಗಳು ಬರೋಣ, ಮತ್ತು ಅದರ ಎಲ್ಲ ವ್ಯವಹಾರಗಳು ಸಾಮಾನ್ಯ ಜನರಿಗೆ ಬಾಗಿಲು ಹಾಕಿ ಅವರಿಗೆ ಅಪರಿಚಿತವಾದ ಭಾಷೆಯಲ್ಲಿ ನಡೆಯೋಣ, ಇಂಥ ಅಸಮಂಜಸವಾದ ಫಾರ್ಸಿಗೆ ಈಗಿನ ಆತ್ಮನಿರ್ಣಯದ ಮನುವಿನಲ್ಲಿ ಯಾವ ರಾಷ್ಟ್ರವು ಮನ್ನಣೆಯನ್ನು ಕೊಟ್ಟೀತು? ಪರಭಾಷೆಯಿಂದಲೆ ಅದರ ವ್ಯವಹಾರಗಳು ನಡೆಸಬೇಕೆಂದು ಹೇಳುವ ಇಂಥ ಅತ್ಯಾಚಾರವನ್ನು ಯಾವ ಜನಾಂಗವು ತನ್ನ ತಲೆಯ ಮೇಲೆ ಕುಳ್ಳಿರಿಸಿ ಕೊಂಡೀತು? ಈಗ ಸಾಮಾನ್ಯ ಜನರನ್ನು ಬದಿಗಿಟ್ಟು ರಾಷ್ಟ್ರೀಯ ಸಭೆಯು ಯಾವಾಗ ಕೆಲವು ಸುಶಿಕ್ಷಿತರ ಮತಾನುವರ್ತಿಯಾಗಿತ್ತೊ ಆಗ 'ಇದು ರಾಷ್ಟ್ರೀಯ ಸಭೆಯಲ್ಲ, ಇದರಲ್ಲಿ ಇಂಗ್ಲಿಷ್ ಕಲಿತ ಕೆಲವು ನಿರುದ್ಯೋಗಿ ಸುಶಿಕ್ಷಿತರು ಮಾತ್ರ ಅತ್ತಿಂದಿತ್ತ ಇತ್ತಿಂದತ್ತ ಸುಳಿದಾಡುತ್ತಾರೆ, ಇದರಲ್ಲಿ ಯಾವ ಘನತೆಯೂ ಇಲ್ಲ, ಎಂಬಿತ್ಯಾದಿ ಆಕ್ಷೇಪಗಳನ್ನು ರಾಷ್ಟ್ರೀಯ ಸಭೆಯ ಪ್ರತಿಪಕ್ಷಗಳು ಮಾಡುತ್ತಿದ್ದವು. ಮತ್ತು ಒಂದು ದೃಷ್ಟಿಯಿಂದ ಆ ಆಕ್ಷೇಪಗಳು ಸಮರ್ಥನೀಯವಾಗಿದ್ದವು. ಆದರೆ ಈಗ ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಸಾಮಾನ್ಯ ಜನಸಮಾಜವನ್ನು ಆಕರ್ಷಿಸುವಂತೆ ಮತ್ತು ಅವರಲ್ಲಿ ನಿಜವಾದ ಜಾಗ್ರುತಿಯುಂಟಾಗುವಂತೆ ಯಾವಾಗ ಆವಶ್ಯಕ ಮತ್ತು ಮಹತ್ವದ ಸುಧಾರಣೆಗಳು ಆಗಹತ್ತಿದವೊ ಆಗ ಮೇಲಿನಂಥ ಆಕ್ಷೇಪವನ್ನು ಇನ್ನೊಂದು ವರ್ಗದವರು ಮಾಡಹತ್ತಿದ್ದಾರೆ. ಪರಂತು ಇದು ಯಾವ ದೃಷ್ಟಿಯಿಂದಲೂ ಸಮರ್ಥನೀಯವಲ್ಲ.

ರಾಷ್ಟ್ರೀಯ ಸಭೆಯ ಕಾರ್ಯಗಳು ರಾಷ್ಟ್ರೀಯ ಭಾಷೆಯಾದ ಹಿಂದಿಯಲ್ಲಿ ನಡೆಯುವುದು ಎಷ್ಟು ಆವಶ್ಯಕ ಮತ್ತು ಆ ಭಾಷೆಯು ಮದ್ರಾಸಿನಂಥ ದ್ರಾವಿಡ ಭಾಷಾಮಯವಾದ ಒಂದು ಪ್ರಾಂತ್ಯಕ್ಕೆ ಅಪರಿಚಿತವಾಗಿದ್ದರೂ ಅವರು ಅದನ್ನು ಪ್ರಚಾರದಲ್ಲಿ ತಂದುಕೊಳ್ಳಲು ಯತ್ನಿಸುವದು ಎಷ್ಟು ಅಗತ್ಯವು, ಇತ್ಯಾದಿ ವಿಷಯಗಳನ್ನು ಮಹಾತ್ಮಾ ಗಾಂಧಿಗಳು "ಮದ್ರಾಸಿನವರಿಗೆ ವಿಜ್ಞಾಪನೆ" ಎಂಬ ಒಂದು ಲೇಖದಲ್ಲಿ ಸಮರ್ಪಕವಾಗಿ ಪ್ರತಿಪಾದಿಸಿದ್ದಾರೆ. ಮಹಾತ್ಮಾ ಗಾಂಧಿಗಳ ಈ ಲೇಖನಕ್ಕೆ ಮಿಸೆಸ್ ಬಿಝುಂಟರ ಆಕ್ಷೇಪವು ಮೂಲಕಾರಣವು. ಮಹಾತ್ಮಾ ಗಾಂಧಿಗಳು ರಾಷ್ಟ್ರೀಯ ವ್ಯವಹಾರಕ್ಕೆ ಅತ್ಯುತ್ತಮ ಸಾಧನವಾದ ಹಿಂದುಸ್ಥಾನಿ ಭಾಷೆಯನ್ನು—ಹಿಂದಿ ಮತ್ತು ಉರ್ದು ಭಾಷೆಗಳ ಸಂಮಿಶ್ರಣ ರೂಪವಾದ ಹಿಂದೂಸ್ಥಾನಿಯನ್ನು ಮದ್ರಾಸ ಸಂಸ್ಥಾನದ ಜನತೆಯು ಅಭ್ಯಸಿಸಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಬರೆದಿರುವರು. ಉತ್ತರ ದೇಶದಲ್ಲಿ ಹಿಂದುಗಳಾಗಲಿ, ಹಿಂದುಸ್ಥಾನಿಯಾಗಲಿ ಅಪರಿಚಿತವಲ್ಲ. ಮದ್ರಾಸ ಸಂಸ್ಥಾನದಲ್ಲಿ ಹಿಂದುಗಳನ್ನು ಬಿಟ್ಟರೆ ಮುಸಲ್ಮಾನರಿಗೆ ಅದು ಗೊತ್ತಿಲ್ಲದ ಇಲ್ಲ ಎಂದ ಮೇಲೆ ದ್ರಾವಿಡ ಭಾಷೆಯ ಕೆಲವರ ಮಟ್ಟಿಗೆ ಮಾತ್ರ ಇದು ನವೀನವಾಗಿರುವುದು. ಇಷ್ಟು ಕಡಿಮೆ ಜನರಿಗಾಗಿ ಏತದ್ದೇಶೀಯವಾದ ರಾಷ್ಟ್ರೀಯ ಭಾಷೆಯನ್ನು ಬಿಟ್ಟು ಇಂಗ್ಲೀಷಿನಿಂದ ವ್ಯವಹಾರವನ್ನು ನಡಿಸಬೇಕೆಂದು ವಾದಿಸುವುದು ಕೇವಲ ದುರಾಗ್ರಹವಲ್ಲವೆ? ಈಗ ಇಂಗ್ಲೀಷನ್ನು ರಾಷ್ಟ್ರೀಯ ಭಾಷೆಯನ್ನಾಗಿ ಇಟ್ಟುಕೊಳ್ಳೋಣವೆಂದರೆ ಅದು ಸುತರಾಂ ಅಸಾಧ್ಯವು. ಮೂವತ್ತು ಚಿಲ್ಲರ ಕೋಟಿ ಪ್ರಜೆಗಳಲ್ಲಿ ಮದ್ರಾಸಿನ ಬರೆ ೩ ಕೋಟಿ ೭೦ ಲಕ್ಷ ಜನರಿಗಾಗಿ ರಾಷ್ಟ್ರೀಯ ಭಾಷೆಯಾಗತಕ್ಕ ಹಿಂದೀಯನ್ನು ತಿರಸ್ಕರಿಸುವುದು ಯಾವ ನ್ಯಾಯ್ಯ! ಮತ್ತು ಇಷ್ಟು ಜನಸಮುದಾಯಕ್ಕಾಗಿ ದೇಶವೆಲ್ಲಕ್ಕೆ ಅಪರಿಚಿತವಾಗಿರುವ ಇಂಗ್ಲಿಷನ್ನು ಇಟ್ಟುಕೊಳ್ಳುವದೆಂದರೆ ಅದು ಎಷ್ಟು ಚಂದ? ಹಿಂದುಸ್ಥಾನದಲ್ಲಿ ಇಂಗ್ಲಿಷ ಭಾಷೆಯನ್ನು ರಾಷ್ಟ್ರೀಯ ಭಾಷೆಯ ಸ್ಥಾನದಲ್ಲಿ ತಂದಿಡುವುದು ಅನೇಕ ಪ್ರಮಾಣಗಳಿಂದಲೂ ಸಾಧ್ಯವಾಗುವ ಸಂಗತಿಯಲ್ಲ. ಯಾಕೆಂದರೆ [illegible] ಯಾವ ಭಾಷೆ [illegible] ರಾಷ್ಟ್ರೀಯ ಭಾಷೆಯು. ಈ [illegible] ಹಿಂದೀ [illegible] ಯಾವಾಗ [illegible] ಸುಕಾಲವು [illegible] ಬಂದೀತು! ಕಲ್ಪನಾಶಕ್ತಿಯನ್ನು ಎಷ್ಟು ದೂರಕ್ಕೆ ಎಳೆಯಲು [illegible] ಎಷ್ಟು ದೂರಕ್ಕೆ ಎಳೆದರೂ ಅದರ ದೃಷ್ಟಿಗೆ [illegible] ಗೋಚರವಾಗುವುದು ಸಾಧ್ಯವಿಲ್ಲ. [illegible] ಸಮಾಚಿತವಲ್ಲದ್ದು? ಅಥವಾ ತಿಳುವಳಿಕೆಗೆ ಬರುವುದಕ್ಕಿಂತ ಮುಂಚೆ [illegible] ಅವಶ್ಯ ಪದಾರ್ಥವನ್ನು ಸೇವಿಸಿಕೊಂಡು ಇರಬೇಕಾಗುತ್ತಿತ್ತು ಎಂಬುದರಿಂದ [illegible] ವಹಿವಾಟನ್ನು ಆ ಪದಾರ್ಥದ ಗುಣದೋಷಗಳು [illegible] ಬಳಕ ಕೂಡ ನಡಿಸಿಕೊಂಡು ಬರಬೇಕೆಂದು ಹೇಳುವುದು ಅಸಮಂಜಸವಲ್ಲವೆ? ಪರಂತು ಇಂಥ ಅಸಮಂಜಸವಾದವನ್ನು ಕೂಡ ಮಾಡುವವರಿದ್ದಾರೆ. ವಸ್ತುತಃ ಬಿಝುಂಟರು ಹಿಂದೀ ಭಾಷೆಯನ್ನು ಪುರಸ್ಕರಿಸುವವರಲ್ಲಿ ಒಬ್ಬರಾಗಿದ್ದರು. ಏಕರಾಷ್ಟ್ರೀಯತ್ವಕ್ಕೆ ಏಕಭಾಷೆ, ಏಕಲಿಪಿ, ಏಕಧರ್ಮ ಮುಂತಾದ್ದಿರಬೇಕೆಂದು ಅವರು ಮೊದಲನೇಕ ಸಾರಿ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದರು. ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಿದ್ದರು ಮಾತ್ರವಲ್ಲ, ಅವರು "ನ್ಯೂ ಇಂಡಿಯಾ" ಎಂಬ ತಮ್ಮ ಇಂಗ್ಲಿಷ್ ಪತ್ರಿಕೆಯಲ್ಲಿ ವಾರಕ್ಕೊಂದು ಸಾರಿ ಹಿಂದೀ ಕಾಲಮನ್ನು ಕೊಡುವ ಕ್ರಮವನ್ನು ಇಟ್ಟುಕೊಂಡಿದ್ದಾರೆ. ಆಗ ರಾಷ್ಟ್ರೀಯ ಸಭೆಯಲ್ಲಿ ಮಾತ್ರ ಹಿಂದೀ ಭಾಷೆಯ ಪ್ರಚುರವಾದ್ದಕ್ಕೆ ಬಿಝುಂಟರಿಗೆ ಸಿಟ್ಟು ಯಾಕೆ? ರಾಷ್ಟ್ರೀಯ ಸಭೆಯೊಳಗಿನ ಇತರ ವಿಷಯಗಳ ಬಗ್ಗೆ ಮತಭೇದವಿದ್ದರೆ, ಅಥವಾ ಅದರಲ್ಲಿಯ ಠರಾವುಗಳು ವಿಘಾತಕವೆಂದು ಅವರಿಗೆ ಕಂಡುಬಂದರೆ ಅವುಗಳನ್ನು ಮಾತ್ರ ಟೀಕಿಸುವುದು ಯುಕ್ತವಾದೀತು. ಹೊರತು ಒಂದು ಸಂಗತಿಯು ಪ್ರತಿಕೂಲವಾಯಿತೆಂಬುದರಿಂದ ಎಲ್ಲವನ್ನೂ ಟೀಕಿಸುವುದು ಕಿಂಬಹುನಾ ದೂಷಿಸುವುದು ಸರಿಯಲ್ಲ. ಬಿಟ್ಟನ ಕಾಲು ಕುಂಟಾಗಿದ್ದರೆ ಅವನು ಚಂದವಾಗಿ ಹಾಡಿದ್ದನ್ನು ಕೂಡ ನಿಷೇಧಿಸಬೇಕೆಂದುಂಟೆ? ಕಾಲು ಕುಂಟಾದರೆ ಅವನ ಕಂಠಮಾಧುರ್ಯಕ್ಕೆ ತೊಡಕು ಬಂದೀತೆ? ನ್ಯಾಯದೃಷ್ಟಿಯಿಂದ ಒಂದರ ಬಗ್ಗೆ ಎಲ್ಲವನ್ನೂ ದೂಷಿಸುವುದು ಸರಿಯಲ್ಲವಾದರೂ 'ಬೇಡದವಳು ಬಳಸಿದ ಬೆಣ್ಣೆಯಲ್ಲಿ ಕೂಡ ಕಲ್ಲು ಸಿಗುತ್ತದೆ!' ಈ ಲೋಕದಲ್ಲಿ ಈ ನ್ಯಾಯವನ್ನೆ ಅನುಸರಿಸುವ ವಾಡಿಕೆಯು. ಆದರೂ ಮಹಾತ್ಮಗಾಂಧಿಗಳು ರಾಷ್ಟ್ರೀಯ ಭಾಷೆಯ ಪ್ರಸಾರಾರ್ಥವಾಗಿ ಮದ್ರಾಸಿನಲ್ಲಿ ಮುಖಂಡರು ವಿಶೇಷತಃ ಮಿಸೆಸ್ ಬಿಝುಂಟರು ತಮ್ಮ ಸಂಪೂರ್ಣ ಪ್ರಯತ್ನವನ್ನು ನಡಿಸಬೇಕೆಂದು ವಿಜ್ಞಾಪಿಸಿಕೊಂಡಿದ್ದಾರೆ.

ಸ್ಫುಟ ವಿಚಾರಗಳು.

೧. ಈಗ ನಾಲ್ಕೈದು ವಾರಗಳಿಂದ ಮುಂಬಯಿಯಲ್ಲಿ ಬಿದ್ದಿರುವ ಕಾಮಗಾರರ ಮುಷ್ಕರವು ಇನ್ನೂ ಅಂತ್ಯವಾಗಲಿಲ್ಲ. ಇದು ದುಃಖದ ಮಾತಾಗಿದೆ. ಟ್ರಾಮ್ವೇ ಕಂಪನಿಯಲ್ಲಿ ಕೆಲಸಮಾಡುವ ಕಾಮಗಾರರ ಕೇಳಿಕೆಗಳನ್ನು ಕಂಪೆನಿಯ ಮೆನೆಜಿಂಗ್ ಡಿರೆಕ್ಟರರು ಮಾನ್ಯ ಮಾಡಿದ್ದಾರೆ. ಇದೊಂದು ಸಮಾಧಾನಕರವಾದ ಸಂಗತಿಯಲ್ಲದ ಬೇರೆ ಯಾವ ಬಂಡವಾಳಿಗರೂ ತಮ್ಮ ಕಾಮಗಾರರ ಹಾಲುಹವಾಲಗಳಿಗೆ ಸಹಾನುಭೂತಿಯ ದೃಷ್ಟಿಯಿಂದ ಕಿವಿಗೊಟ್ಟಂತೆ ಕಂಡು ಬರುವುದಿಲ್ಲ. ಗಿರಣಿಮಾಲಕರ ಎಸೋಶಿಯೇಶನಿನ ಸಭೆಗಳಮೇಲೆ ಸಭೆಗಳು ಕೂಡುತ್ತಿವೆಯಾದರೂ ಆ ಸಭೆಗಳ ಕೂಡುವಿಕೆಯಿಂದ ಅವರಿಗೆ ಕಾಮಗಾರರ ಕೇಳಿಕೆಗಳನ್ನು ಸಮಾಧಾನಪಡಿಸುವ ರೀತಿಯಲ್ಲಿ ಒಂದು ಸಂಗತಿಯೂ ನಿಷ್ಪನ್ನವಾದ್ದು ಕಂಡುಬರುವುದಿಲ್ಲ. ಆದ್ದರಿಂದ ಕಾಮಗಾರರ ಸಂಸ್ಥೆಗಳು ಈಗ ಮುಂಬಯಿಯ ಗವರ್ನರ ದೊರೆಗಳಿಗೆ ಮಧ್ಯಸ್ಥಿಕೆಯನ್ನು ಮಾಡಲು ಕೇಳಿಕೊಂಡಿದ್ದಾರೆ. ಲೇಬರ ಸಟ್ಲಮೆಂಟಿನ ಅಧ್ಯಕ್ಷರಾದ ಸರ್. ನಾರಾಯಣ ಚಂದಾವರಕರರು ಗವರ್ನರ ದೊರೆಗಳನ್ನು ಕಂಡು ಗಿರಣೀ ಕಾಮಗಾರರ ಕೇಳಿಕೆಗಳನ್ನು ಗವರ್ನರ ದೊರೆಗಳ ಮುಂದೆ ಇಟ್ಟಿದ್ದಾರೆ. ಹಾಗು ಬೆರಿಷ್ಟರ ಬಾಪ್ತಿಸ್ತರವರು ಸಹ ಕಾಮಗಾರರ ಪರವಾಗಿ ಗವರ್ನರರಿಗೆ ಎಲ್ಲ ಹಾಲುಹವಾಲಗಳನ್ನು ತಿಳಿಸಿ ಈ ಸಂದರ್ಭದಲ್ಲಿ ದೊರೆಗಳು ಮಧ್ಯಸ್ಥಿಕೆಯನ್ನು ಮಾಡಬೇಕೆಂದು ಹೇಳಿರುವರು. ಮಿ. ಬಾಪ್ತಿಸ್ತರ ಈ ವಿನಂತಿಗೆ ಗವರ್ನರಸಾಹೇಬರು ಕೂಡಲೇ ಈ ವಿಷಯದಲ್ಲಿ ಪ್ರವೇಶಿಸಿ ಯೋಗ್ಯ ಉಪಾಯಗಳನ್ನು ಕೈಕೊಳ್ಳುವರು ಎಂಬ ಉತ್ತರ ಬಂದಿದೆ. ಅಂತು ಕಾಮಗಾರರ ಕಷ್ಟಗಳಿಗೆ ಬಂಡವಾಳಿಗರು ಕಿವಿಗೊಡದೆ ಇದ್ದುದರಿಂದ ಕೊನೆಗೆ ಕಾಮಗಾರರಿಗೆ ಗವರ್ನರದೊರೆಗಳ ಮಧ್ಯಸ್ಥಿಕೆಯನ್ನು ಕೇಳಬೇಕಾಗಿ ಬಂತು. ಇದು ತುಂಬಾ ಶೋಚನೀಯವು, ಕಾಮಗಾರರು ದೊರೆಗಳನ್ನು ಮಧ್ಯಸ್ಥರಾಗಬೇಕೆಂದು ಕೇಳಿದ್ದು ಶೋಚನೀಯವಲ್ಲ; ಈ ದೂರು ದೊರೆಗಳತನಕ ಹೋಗುವಷ್ಟು ಬಂಡವಾಳಿಗರು ಅವಕಾಶ ಕೊಟ್ಟದ್ದು ಶೋಚನೀಯವು.

೨. ಪರಂತು ಗವರ್ನರ ದೊರೆಗಳ ವರೆಗೆ ದೂರು ಹೋದ ಬಳಿಕವಾದರೂ ಬಂಡವಾಳಿಗರು ಕಾಮಗಾರರ ಅಪೇಕ್ಷೆಗಳಲ್ಲಿ ಕೆಲವನ್ನಾದರೂ ಪೂರಯಿಸುವ ತಯಾರಿಯಲ್ಲಿ ಇದ್ದಾರೆಂದು ಪ್ರಕಟವಾಗಿದೆ. ಗಿರಣಿಮಾಲಕರ ಸಂಘದ ಕಡೆಯಿಂದ ಪ್ರಕಟಗೊಂಡಿರುವದು ಏನೆಂದರೆ, ನಿಯಮಿತ ಸಂಬಳದವರಿಗೆ ಶೇಕಡಾ ೨೦ರಂತೆ, ಇನ್ನು ಕೆಲವರಿಗೆ ಶೇಕಡಾ ೪೦ರಂತೆ ಸಂಬಳವನ್ನು ಏರಿಸಲಾದೀತು; ಧಾನ್ಯದ ಕ್ರಯವು ಏರಿದ್ದಕ್ಕಾಗಿ ಆ ಬಗ್ಗೆ ಕೆಲವು ಭತ್ತೆ ಕೊಡಲಾದೀತು. ಮತ್ತು ಕೆಲಸದ [illegible]

ಲಾಗಿದೆ. ಆದರೆ ಕಾಮಗಾರರ ಇತರ ಕೋರಿಕೆಗಳ ಬಗ್ಗೆ ಬಂಡವಾಳಿಗರ ನಿರ್ಣಯವೇನೆಂದರೆ, ಕಾಮಗಾರರಿಗೆ ವಾರ್ಷಿಕ ಬೋನಸಿನ ಬಗ್ಗೆ ಈಗಲೆ ನಿಶ್ಚಿತವಾದ ಅಭಿವಚನವನ್ನು ಕೊಡಲು ಸಾಧ್ಯವಿಲ್ಲ, ಅವರ ಆಯಾ ವರ್ಷದ ಎಲ್ಲ ಕಾಮಗಾರರಿಯ ವ್ಯಕ್ತಿ ಹಾಗು ವಾರ್ಷಿಕ ಲಾಭದ ಮೇಲೆ ಅದು ಹೊಂದಿಕೊಂಡಿದೆ, ಈಗ ಇರುವ ರಜೆ ದಿವಸಗಳೇ ಬೇಕಷ್ಟಿರುವುದರಿಂದ ಇನ್ನೂ ರಜೆಯ ದಿವಸಗಳನ್ನು ಹೆಚ್ಚಿಸಲಾಗುವುದಿಲ್ಲ, ಎಂಬಿತ್ಯಾದಿ ರೀತಿಯಿಂದ ಗಿರಣಿಯ ಮಾಲಕರು ಕಾಮಗಾರರನ್ನು ತಿಳಿಸಿದ್ದಾರೆ. ಗಿರಣಿಯ ಮಾಲಕರು ತಿಳಿಸಿದ ಕೆಂಬಹುನ್ನಾ ನಿರಾಕರಿಸಿದ ಸಂಗತಿಗಳಲ್ಲಿ ಹೆಚ್ಚು ಉದ್ವೇಗ ಕಾರಕವಾದ ಸಂಗತಿಯು ಯಾವುದೆಂದರೆ, ಮುಷ್ಕರದ ದಿವಸಗಳ ಕಾಮಗಾರರ ಸಂಬಳವನ್ನು ಕೊಡಲಾಗುವುದಿಲ್ಲವೆಂಬುದು. ಗಿರಣಿಯ ಮಾಲಕರ ಎಸೋಸಿಯೇಷನಿನ ಈ ನಿರ್ಣಯವು ಪ್ರಸಿದ್ಧವಾದ ಬಳಿಕ ಕಾಮಗಾರರು ತಮ್ಮ ಕೇಳಿಕೆಗಳನ್ನು ಸಮಗ್ರವಾಗಿ ಮಾನ್ಯವಾದದೆ ತಾವು ಕೆಲಸಕ್ಕೆ ಬರುವುದಿಲ್ಲ, ವಿಶೇಷತಃ ಮುಷ್ಕರ ದಿವಸಗಳ ಸಂಬಳವನ್ನು ಕೊಡದೆ ಇದ್ದರೆ ತಮಗೆ ಪುನಃ ಪೂರ್ವವತ್ ಕೆಲಸವನ್ನು ಕೈಕೊಳ್ಳಲು ಸಾಧ್ಯವಿಲ್ಲವೆಂದು ಪ್ರಕಟಿಸಿದ್ದಾರೆ. ಕಾಮಗಾರರಿಗೆ ಅವರ ಮುಷ್ಕರದ ದಿವಸಗಳ ಸಂಬಳವನ್ನು ಕೊಡಲು ಗಿರಣಿಯ ಮಾಲಕರು ನಿರಾಕರಿಸುವುದು ಚೆಂದವಲ್ಲ, ಈ ಅವಧಿಯಲ್ಲಿ ಕಾಮಗಾರರು ಸಾಲ ತೆಗೆದು ನಿರ್ವಾಹವಮಾಡಿಕೊಂಡಿದ್ದಾರೆ. ಆ ಸಾಲದ ನಿವೃತ್ತಿಯು ಹೇಗಾಗಬೇಕಾಯಿತು? ಕಾಮಗಾರರ ಈ ಇಕ್ಕಟ್ಟನ್ನು ಬಗೆಹರಿಸುವುದು ಬಂಡವಾಳಿಗರ ಕರ್ತವ್ಯ. ಆದರೂ ಇಂಥ ಪರಿಸ್ಥಿತಿಯಲ್ಲಿ ಕೆಲವು ಗಿರಣಿಗಳ ಕೆಲವು ಕಾಮಗಾರರು ಕೆಲಸಕ್ಕೆ ಹೋಗುತ್ತಿದ್ದಾರೆಂದು ವರ್ತಮಾನವು ಬಂದಿದೆ. ತಥಾಪಿ ಮುಂಬಯಿಯ ವಾತಾವರಣದಲ್ಲಿ ಬೀಸಿರುವ ಮುಷ್ಕರದ ಮೋಡವು ಇನ್ನೂ ಹೋಗಿಲ್ಲ.

೩ ಮುಂಬಯಿಯ ಮುಷ್ಕರದ ಮೋಡವು ಮುಂಬಯಿಯಲ್ಲಂತು ಕರಗಿಹೋಗಲಿಲ್ಲವಲ್ಲ, ಆದರೆ ಅದೆ ಮೋಡವು ಲಾಹೋರು, ಬಂಗಾಲ, ಕಲಕತ್ತಾ ಮೊಂತಾದ ಕಡೆಗಳಲ್ಲಿ ಹಾರಿದಂತೆ ಮದ್ರಾಸ ಪಟ್ಟಣದಲ್ಲಿ ಕೂಡ ಬಂದಿದೆ. ಜನವರಿ ತಾ ೩೦ರಲ್ಲಿ ಮದ್ರಾಸಿನ ಇಲಕ್ಟ್ರಿಕ್ ಟ್ರೇಮ್ವೇಗಳ ಕಾಮಗಾರರು ಮುಷ್ಕರವನ್ನು ಹಾಕಿದ್ದಾರೆ. ಕಾಮಗಾರರ ಮುಷ್ಕರಗಳು ಯಾಕೆ ಏಳುತ್ತವೆ ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ. ಧಾರಣೆಯು ಏರಿನಂತೆ ಸಂಬಳದ ಏರು ಕೂಡ ಆಗುತ್ತ ಹೋಗಿದ್ದರೆ ಎಲ್ಲಿಯ ಕಾಮಗಾರರಿಗಾದರೂ ಮುಷ್ಕರವನ್ನು ಹಾಕುವ ಕಾರಣವಿರುವುದಿಲ್ಲ. ಅರ್ಥಾತ್ ಮದ್ರಾಸಿನ ಟ್ರೇಮ್ವೇ ಕಾಮಗಾರರು ಈ ವರೆಗ ಎಷ್ಟೋ ಸಾರಿ ತಮ್ಮ ಸಂಬಳವನ್ನು ಹೆಚ್ಚಿಸಬೇಕು, ನೇಕಡಾ ೩೦ರಂತೆ ಯುದ್ಧದ ಭತ್ತೆಯನ್ನು ಕೊಡಬೇಕು, ದಿವಸದ ಕೂಲಿಯಲ್ಲಿ ಪ್ರಕೃತಕ್ಕಿಂತ ೨ ಆಣೆ ಹೆಚ್ಚು ಕೊಡಬೇಕು ಹಾಗು ಮುಂಗಾಯಿ ಭತ್ತೆ ಎಂಬಂತೆ ದಿನ ಒಂದಕ್ಕೆ ಇನ್ನೂ ೨ ಆಣೆ ಅದಿಕವಾಗಿ ಕೊಡಬೇಕು, ಇತ್ಯಾದಿ ಯಾವ ಹಾಲುಹವಾಲಗಳನ್ನು ಕೇಳಿಕೊಂಡಿದ್ದರೂ ಅವುಗಳನ್ನೆ ಈ ಮುಷ್ಕರದ ಮೂಲಕ ವ್ಯವಸ್ಥಿತವಾಗಿ ಕೇಳಿದ್ದಾರೆ. ಮದ್ರಾಸಿನ ಕಾಮಗಾರರ ಕಡೆಗ ಮಿ. ಬಿ ಎಸ್ ಅರುಂಡೇಲ ಹಾಗು, ಮಿ ಎಮ್ ಎಸ್ ಕಾಮತ್ ಮೊದಲಾದವರು ಇದ್ದಾರೆ. ಈ ಸಹೃದಯರ ಪ್ರಯತ್ನದಿಂದ ಕಾಮಗಾರರ ಸಂಕಷ್ಟಗಳು ನಿವಾರಣವಾದಾವು ಎಂಬುದಕ್ಕೆ ಸಂಶಯವಿಲ್ಲ. ಅಂತು ಈಗಿನ ಕಾಲದಲ್ಲಿ ಬಡ ಕಾಮಗಾರರಿಗ ಮುಷ್ಕರವೆಂಬುದೆ ಮುಖ್ಯ ಅಸ್ತ್ರವು. ಅದು ಬಡವರ ಅಸ್ತ್ರವಾಗಿರುವುದರಿಂದ ಬಂಡವಾಳಿಗರಿಗ ಒಂದು ತೀವ್ರವಾದ ಅಂಜನವು.

೪ ಮಧ್ಯ ಏಸಿಯದಲ್ಲಿ ಬೊಲಶೆವಿಕರ ಹಾವಳಿಯ, ಅತ್ಯಾಚಾರವು ಹೆಚ್ಚುತ್ತ ಬಂದಿದೆ ಎಂದು ಈಚೆಗ ಆಗಾಗ್ಗ ತಂತಿಗಳು ಬರುತ್ತಿದ್ದವು. ಈಚೆಗ ಬಂದ ತಂತಿಯ ವರ್ತಮಾನದ ಮೇಲಿಂದ ಅವರು ಅಫಘಾನಸ್ಥಾನದ ವರೆಗೆ ತಮ್ಮ ಕೈಕಾಲುಗಳನ್ನು ಹಬ್ಬಿಸಿದ್ದಾರೆ ಎಂದು ಗೊತ್ತಾಗುತ್ತದೆ. ಬೊಲಶೆವಿಕರ ಈ ವ್ಯಾಪ್ತಿಯ ದಸೆಯಿಂದ ನಮ್ಮ ಮಿತ್ರಸಂಘಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಹಿತಸಂರಕ್ಷಣೆಗಾಗಿಯೂ, ಜೋರ್ಜಿಯಾ ಪ್ರದೇಶದ ಸಂರಕ್ಷಣೆಗಾಗಿಯೂ ಉಪಾಯಗಳನ್ನು ಕೈಕೊಳ್ಳಬೇಕಾಗಿ ಬಂದಿದೆ. ಮಾತ್ರವಲ್ಲ, ಅನೇಕ ಬ್ರಿಟಿಷ್ ಸೈನಿಕರು ಕಪ್ಪು ಸಮುದ್ರದ ವರೆಗ ಹೋಗಿ ಬೊಲಶೆವಿಕರನ್ನು ತಡೆ ಕೊಡುವವರಿದ್ದಾರೆ. ಬೊಲಶೆವಿಕರ ವ್ಯಾಪ್ತಿಯು ಹಿಂದುಸ್ಥಾನದ ಉತ್ತರ ಮೇರೆಯ ವರೆಗೆ ಒಂದುವೇಳೆ ಬರಬಹುದೆಂದು ಮೊದಲ ಇಂಗ್ಲಂಡಿನ ಮುತ್ಸದ್ದಿಗಳು ಯೋಚಿಸಿಕೊಂಡಿದ್ದರಿಂದ ಆದರ ಪ್ರತೀಕಾರಾರ್ಥವಾಗಿ ಯಾವ ಸಿದ್ಧತೆಯು ಬೇಕಾಗಿರುವುದೊ ಅದನ್ನು ಅವರು ಮೊದಲೆ ಏರ್ಪಡಿಸಿಟ್ಟ ಕಾರಣ ಹಿಂದುಸ್ಥಾನ ಸರಕಾರಕ್ಕೆ ಈ ಬೊಲಶೆವಿಕರ ಅಭಿಯೋಗಕ್ಕಾಗಿ ಯಾವ ತರದಿಂದಲೂ ಅಂಜಬೇಕಾದ ಕಾರಣವಿಲ್ಲ. ಪರಂತು ಒಂದು ಸೂಚನೆಯು ಈ ಪರಿಸ್ಥಿತಿಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಅಫಘಾನ ಮುಂತಾದ ಮಹಮ್ಮದೀಯ ಜನಾಂಗಗಳು ಟರ್ಕಿಯ ಖಲಿಫತಿನ ಪ್ರಶ್ನೆಯ ವ್ಯವಸ್ಥೆಯು ಹೇಗಾಗುತ್ತದೆ ಎಂಬುದನ್ನು ಒಂದುವೇಳೆ ನೋಡಿಕೊಂಡಿರಬಹುದು. ಸದರಿ ಪ್ರಶ್ನೆಯನ್ನು ಇಂದ ಸ್ಥಾನದೊಳಗಿನ ಮುಸಲ್ಮಾನರ ಮತಕ್ಕನುಗುಣವಾಗಿ ನಿರ್ಣಯಿಸಲ್ಪಟ್ಟರೆ ಆ ಸಮಯದಲ್ಲಿ ಎಲ್ಲ ಮುಸಲ್ಮಾನರ ಮನಸ್ಸು ಶಾಂತವಾಗಿ ನಮ್ಮ ಸಾರ್ವಭೌಮ ಸರಕಾರಕ್ಕೆ ಅವರ ಸಂಪೂರ್ಣ ಸಹಾಯವೂ ಸಿಗದೆ ಇರಲಿಕ್ಕಿಲ್ಲ. ಮಿ ಮೊಂಟೆಗ್ಯುಗಳು ಪಾರ್ಲಮೆಂಟ್ ಗಳಲ್ಲಿನ ಬೊಂಬಾಯಿ ಸ್ಥಾನಿಕರಿಗಿಂತ ಸದರೀ ಪ್ರಶ್ನೆಯ ವಿಷಯವಾಗಿ ಪ್ರದರ್ಶಿಸಿದ ಹೇತುಗಳನ್ನು ನೋಡುವಾಗ ಅವರು ಬ್ರಿಟಿಷ್ ಮತ್ತು ಫ್ರೆಂಚ ಮುತ್ಸದ್ದಿಗಳ ಮುಂದೆ ಹಿಂದೀ ಮುಸಲ್ಮಾನರ ಹೇಳಿಕೆಯನ್ನು ಬಲವಾಗಿ ಇಡಲು ತಪ್ಪಲಿಕ್ಕಿಲ್ಲವೆಂದು ಹೇಳಬಹುದಾಗಿದೆ.

ಮಂಗಳೂರು.

ಇದೇ ಬರುವ ಫೆಬ್ರುವರಿ ತಾರೀಕು ೧೪ರಿಂದ ಮೈಲ್ ಬಂಡಿಯು ಸಾಯಂಕಾಲ ಗಂಟೆ ೭ಕ್ಕೆ ಮದರಾಸಿನಿಂದ ಬಿಡಲ್ಪಟ್ಟು ಮಾರಣೆ ದಿನ ಸಾಯಂಕಾಲ ೬ ಗಂಟೆಕ್ಕೆ ನಮ್ಮ ಪಟ್ಟಣಕ್ಕೆ ತಲ್ಪುವುದು ಮತ್ತು ಇಲ್ಲಿಂದ ಅದೇ ಬಂಡಿಯು ಪ್ರಾತಃಕಾಲ ೧೦-೧೫ಕ್ಕೆ ಹೊರಟು ಮರುದಿನ ರಾತ್ರಿ ೧೦-೩೫ಕ್ಕೆ ಮದರಾಸಿಗೆ ಮುಟ್ಟುವುದು.

ಕಳೆದ ತಾರೀಕು ೩೭ನೇ ಮಂಗಳವಾರ ಡಿಸ್ಟ್ರಿಕ್ಟ ಬೋರ್ಡ ಮೆಂಬರರ ಚುನಾವಣೆ ಬಗ್ಗೆ ಕೂಡಿದ ಮಂಗಳೂರ ತಾಲೂಕು ಬೋರ್ಡಿನ ಸಭೆಯಲ್ಲಿ ಮ| ರಾ| ಕನ್ನೆಮಾರ ರಘುಚಂದ್ರ ಬಲ್ಲಾಳರಿಗೆ ೭ ಮತಗಳೂ (ಓಟು) ಮ| ರಾ| ರಾ| ಬ್ರೋಳ ಮಾದವ ರಾಯರಿಗೆ ೬ ಮತಗಳೂ ದೊರಕಿ ರಾ| ಬಲ್ಲಾಳರು ಚುನಾಯಿಸಲ್ಪಟ್ಟರು.

ಡಾಕ್ಟರ ಪೂರ್ಲಿಕ್ಕೆ ವಡೇರ ಬೆಟ್ಟು ರಾಮಕಾಮತ್‌ರವರು ಮದರಾಸ್ ಮುನ್ಸಿಪಲ್ ಕೋರ್ಪೋರೇಶನಿನ ಮೆಂಬರರಾಗಿ ಚುನಾಯಿಸಲ್ಪಟ್ಟದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಇಲ್ಲಿಯ ಕೆನರಾ ಬ್ಯಾಂಕಿನ ಬಾಬತು ವರುಷಾವದಿಗೆ ಕೂಡಬೇಕಾದ ಎಲ್ಲಾ ಶೇರ್‌ಹೋಲ್‌ಡರರ ಸಭೆಯು ಇದೇ ಬರುವ ಫೆಬ್ರುವರಿ ತಾರೀಕು ೧೫ನೇ ಆದಿತ್ಯವಾರ ಮಧ್ಯಾಹ್ನ ೪-೩೦ ಗಂಟೆಗೆ ಸದರಿ ಬ್ಯಾಂಕಿನ ಆಫೀಸಿನಲ್ಲಿ ಕೂಡುವದು.

ಕಳೆದ ತಾರೀಕು ೧೭ನೇ ಸಂಚಿಕೆಯಲ್ಲಿ ಸೂಚಿಸಿದಂತೆ ಡಿಸ್ಟ್ರಿಕ್ಟ ಎಸೋಸಿಯೇಶನಿನವರು ಮದರಾಸಿನ ವಿದ್ಯಾ ಇಲಾಖೆಯ ಡಿರೆಕ್ಟರರಾದ ಮಿ ಲಿಟ್ಲ್‌ಹಯ್ಲ್ಸ ದೊರೆಯವರ ... [illegible] ...ತ್ರದೇವರಾಗಿ ತಿಳಿಯುತ್ತೇವೆ.

ಮಂಗಳೂರ - ತಸಾರಿಸ್ಥರ ಶ್ರೀವೆಂಕಟರಮಣ ದೇವಸ್ಥಾನದ ರಥೋತ್ಸವವು ಕಾಂಡಿಯದ ... ಶ್ರೀಮತ್ ಸುಕೃತೀಂದ್ರ ತೀರ್ಥ ಪಾದಂಗಳವರ ಸಮಕ್ಷದಲ್ಲಿ ಜರಗಿತ. ... ಗಳಿಗೂ ಸಮಾರಾಧನೆಗಳಿಗೂ ಈ ವರುಷ ... ಅದಿಕ ಜನ ಸ್ತೋಮವು ಕೂಡಿತ್ತು. ಶ್ರೀ ಪಾದಂಗಳವರು ಇಲ್ಲಿಂದ ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಬರುವ ಹುಣ್ಣಿಮೆ ದಿವಸ ನೆರವೇರುವ ಸಹಸ್ರ ಕುಂಭಾಭಿಷೇಕ, ಮಹೋತ್ಸವಕ್ಕೆ ಚಿತ್ತೈಸುವರಾಗಿ ತಿಳಿಯುತ್ತೇವೆ.

ನಮ್ಮ ಪಟ್ಟಣಕ್ಕೆ ನಳ್ಳಿಗಳ ಮೂಲಕ ನೀರಿನ ಪುರವರೆಯನ್ನು ಒದಗಿಸುವುದಾದರೆ ಯಾವ ಕಡೆಗಳಿಂದ ನೀರನ್ನು ತರಬಹುದು ಎಂಬುದನ್ನು ತಿಳಿಯುವುದಕ್ಕಾಗಿ ಡಿಪ್ಯುಟಿ ಸನಟರಿ ಇಂಜನಿಯರರಾದ ಮಿ ಬಿ ಆರ್ ಹರಿಸಿಂಗರವರು ಕಳೆದ ವಾರದಲ್ಲಿ ಇಲ್ಲಿಗ ಬಂದು ... ರಾಮಸಮುದ್ರ, ಪಡುಸಿದ್ಧ ಯಲ್ಲಿರುವ ಹೊಸಮಾರ ಬಳಿ ಜಲಪಾತ ಮುಂತಾದವನ್ನು ಪರಿಶೋಧಿಸಿ ಹೋಗಿರುವರು.

ಇಲ್ಲಿಯ ಮಹಿಳಾ ಸಭೆಯವರು ಹೊಸತಾಗಿ ಕಟ್ಟಿಸಿದ ತಮ್ಮ ಮಂದಿರದಲ್ಲಿ ಇದೇ ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಮಾಯಾಲಾಂದ್ರ (ಮೆಜಿಕ್‌ಲಂಟರ್ನ್) ಮೂಲಕ ನೈಸರ್ಗಿಕ ಮತ್ತು ಪ್ರಾಕೃತಿಕ ವಿದ್ಯಮಾನಗಳಿಂದ ಪವೆಯಲ್ಲಿ ಪ್ರಲಾವಣೆಗಳಾಗುವುದು, ಹೇಗೆ ಭೂಕಂಪ ಜ್ವಾಲಾಮುಖಿ ಇವೇ ಮೊದಲಾದುವುಗಳು ಸಂಭವಿಸುವುದು ಹೇಗೆ ಎಂಬಿವನ್ನು ತೋರಿಸುವರು, ಸಕಲರಿಗೂ ಸುಸ್ವಾಗತವಿದೆ.

ಮಂಗಳೂರ ಟ್ರಜರಿ ಹೆಡ್ ಎಕೌಂಟಾಂಟರಾದ ಮ| ರಾ| ರಾ| ಕುಳಾಯಿ ಮಾರ್ತಾಂಡೆಕಣಿಯವರು ಪೆನ್‌ಶನ್ ಹೊಂದಿ ಕಳೆದ ತಾ ೨೭ರಿಂದ ಕೆಲಸದಿಂದ ನಿವೃತ್ತರಾಗಿರುವುದರಿಂದ ಉಡುಪಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ| ರಾ| ರಾ| ಬಿ ರಘುನಾಥ ಭಂಡಾರಿಯವರು ಇವರ ಹುದ್ದೆಯಲ್ಲಿ ನೇಮಿಸಲ್ಪಟ್ಟಿರುತ್ತಾರೆ. ಮ| ರಾ| ರಾ| ರಘುನಾಥ ಭಂಡಾರಿಗಳು ಈ ಕೆಲಸಕ್ಕೆ ಹಾಜರಾಗುವ ವರೇಗ ಕುಂದಾಪುರ ತಾಲೂಕು ಹೆಡ್ ಎಕೌಂಟಾಂಟ್ ಮ| ರಾ| ರಾ| ಕೋಟಕಾರ ಸುಬ್ಬರಾಯರು ನೇಮಕವಾಗಿದ್ದಾರೆ.

ಪುತ್ತೂರು ತಾಲೂಕು ಹೆಡ್ ಎಕೌಂಟಾಂಟರಾದ ಮ| ರಾ| ರಾ| ಮಂಕಿ ಸದಾಶಿವರಾಯರಿಗೆ ಒಂದು ತಿಂಗಳ ಪ್ರಿವಿಲೆಜ್ ರಜೆಯು ಮಂಜೂರಾಗಿದೆ.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವರ್ಷಾವಧಿಯ ಸಭೆಯು ನಾಳೆ ದಿನ ಸಾಯಂಕಾಲ ಗಂಟೆ ೪ ೩೦ಕ್ಕೆ ಕೂಡುವದು.

ಕಳೆದ ಹಪ್ತೆಯಲ್ಲಿ ಇಲ್ಲಿಯ ಸೆಶ್ಶನ್ ಕೋರ್ಟಿನಲ್ಲಿ ಉಡುಪಿ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟ ಖೂನಿ ಮೊಕದ್ದಮೆಯ ತನಿಖೆಯಾಯಿತು. ಇದರಲ್ಲಿ ಉಡುಪಿ ತಾಲೂಕಿನ ಮಣಿಪುರ ಎಂಬ ಹಳ್ಳಿಯಲ್ಲಿ ಬಾಬುಪೂಜಾರಿಯೆಂಬ ಬಿಲ್ಲವನೊಬ್ಬನು ತನ್ನ ಸ್ವಜಾತಿಯ ಪರದೇಶಿಯೆಂಬವನನ್ನು ತಾ ೧೯ ೧೧ ೧೯ಲು ಹಾರೆಯಿಂದ ಹೊಡೆದು ಕೊಂದನೆಂಬ ಆರೋಪಣೆಗೆ ಗುರಿಮಾಡಲ್ಪಟ್ಟಿದ್ದನು. ಈ ಖೂನಿಗೆ ಮೃತನು ಅನುಭವಿಸಿ ಬರುವ ಪಟ್ಟಗದ್ದೆಯಲ್ಲೇ ಸಂಭವಿಸಿತ್ತು. ಮೃತನ ಮಗಳಿಗ ತಾಗಿ ಅಪಾದಿತನ ಮೈದುನನ ಪೂಜಾರಿಯೆಂಬವನ ಗಟ್ಟಿ ಇದ್ದವು. ಇವರಿಬ್ಬರ ಗದ್ದೆಗಳ ಮಧ್ಯೆ ಇರುವ ಕಟ್ಟಪುಣಿಯನ್ನು ಸುಗ್ಗಿ ಎಳೆಯನ್ನು ಬೆಳೆಸುವ ಕಾಲದಲ್ಲಿ ದುರುಸ್ತಿ ಮಾಡುವ ವಿಚಾರದಲ್ಲಿ ಆಗಾಗ್ಗೆ ಇವರಿಬ್ಬರೊಳಗೂ ಪಲವು ಸರಾಸಗಳಿಂದ ಜಗಳವಿತ್ತು. ಖೂನಿಯು ನಡೆದ ದಿನ ಸುಮಾರು ೧೧ ಗಂಟೆಗೆ ಮೃತನು ಗದ್ದೆಯನ್ನು ಉಳುವಾಗ ಈ ಗದ್ದೆಯ ಕಟ್ಟಪುಣಿಯನ್ನು ದುರುಸ್ತಿ ಮಾಡಿದ ಬಗ್ಗೆ ಅಪಾದಿತನು ನಾನಾ ತರದ ಬೈಗಳಿಂದ ಜಗಳ ಮಾಡತೊಡಗಿದನು. ಹೀಗೆ ಜಗಳ ಮಾಡುತ್ತಾ ಅಪಾದಿತನು ಗದ್ದೆಯಿಂದ ಹಾರೆಯನ್ನು ತೆಗೆದು ಈತನನ್ನು ಹೊಡೆಯಲು ಅದೇ ದಿನ ಸಾಯಂಕಾಲ ೮ ಗಂಟೆಗೆ ಮೃತನಾದನು. ಅಪಾದಿತನು ತಪ್ಪಿತವನ್ನು ನಿರಾಕರಿಸಿದನು. ಜೂರಿಯವರು ಇವನನ್ನು ಖೂನಿಗೋಸ್ಕರವಲ್ಲ ನರಘಾತದ ತಕ್ಸೀರು ರುಜುವಾಗುತ್ತದೆಂದು ಅಭಿಪ್ರಾಯಪಟ್ಟರು. ಆದರೆ ಜಡ್ಜರು ಈತನನ್ನು ಅಪರಾಧಿಯಲ್ಲವಾಗಿ ಬಿಡುಗಡೆ ಮಾಡಿದರು.

ಮೈಸೂರು ಸಿವಿಲ್ ಸರ್ವಿಸಿನ—ಚುನಾವಣೆಯಾದವರಲ್ಲಿ ಮ ರಾ ಕೆಲ್ಲಾಡಿ ಗುರುದತ್ತ ಎಂಬವರು ಒಬ್ಬರು. ಇವರು ಕುಂದಾಪುರ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು ಈಗ ಬೆಂಗಳೂರಿನ ಮಿಶ್ಯನಹೈಸ್ಕೂಲ್ ಅಧ್ಯಾಪಕರಾದ ಮ ರಾ ಕೆಲ್ಲಾಡಿ ಸುಂದರ ರಾವ್‌ಬಿ ಎ ಎಲ್ ಟಿ ಇವರ ಹಿರೆ ಮಗ ಮತ್ತು ಕಾಸರಗೋಡಿನ ಮ ರಾ ಚಂದಾವರ ನರಸಿಂಗರಾಯರ ಅಳಿಯ. ಮೈಸೂರು ಸಿವಿಲ್ ಸರ್ವಿಸಿಗೆ ಸೇರಿ ಪ್ರೊಬೆಶನರಿ ಅಸಿಸ್ಟಾಂಟ ಕಮಿಶನರಾಗಿ ನಮ್ಮ ಜಿಲ್ಲೆಯವರಲ್ಲಿ ಚುನಾಯಿಸಲ್ಪಟ್ಟವರ ಪೈಕಿ ಇವರು ಎರಡನೆಯವರು. ಒಂದೆರಡು ವರ್ಷಗಳ ಹಿಂದೆ ಮ. ರಾ ಗಂಗೊಳ್ಳಿ ರಾಮರಾಯರ (ತಾಲೂಕು ಶಿರಸ್ತೆದಾರ) ಕಿರೆ ಮಗ ಮ ರಾ ಗಂಗೊಳ್ಳಿಯವರು ಚುನಾಯಿಸಲ್ಪಟ್ಟಿದ್ದಾರೆ.

ವೈದ್ಯ ಬಿ ಆರ್ ಹರಿದಾಸರವರ ಶ್ರೀಸಮರ್ಥ ಆಯುರ್ವೇದೀಯ ಔಷಧಾಲಯದ ಜಾಹೀರಾತಿನ ಸಪ್ಲಿಮೆಂಟು ಈ ಸಂಚಿಕೆಯೊಂದಿಗೆ ಇಟ್ಟಿರುತ್ತದೆ.

ಸ್ವೀಕಾರ —ಬೆಂಗಳೂರ ಸ್ಟಾರ್ ಟ್ರೇಡಿಂಗ್ ಎಸೋಸಿಯೇಶನಿನವರಿಂದ ಕಳೆ ಹಿಸಲ್ಪಟ್ಟ ಆರ್ಟ ಪರ್ಪ್ಯುಚುವೆಲ್ ಕೆಲಂಡರು ಮತ್ತು ದಿಕ್ಕಿ ರೋಜಾ ಸಂಡೆ ಸೆಂಪಲ್ಸ ಬಾಕ್ಸಿಯನ್ನು ವಂದನಾ ಪೂರ್ವಕವಾಗಿ ಸ್ವೀಕರಿಸಿದ್ದೇವೆ. ... [illegible] ... ಕೆಲಂಡರನ್ನು ಸಹ ... ತವಾಗಿ ಕಳುಹಿಸುವರು.

ಮ ರಾ ರಾ ವೆ ಚಕ್ರಕೋಡಿ ಸುಬ್ಬಣ್ಣ ಶಾಸ್ತ್ರಿಗಳವರಿಂದ ಗಣಿಸಿ ತಯಾರಿಸಲ್ಪಟ್ಟ ರೌದ್ರಿ ಸಂವತ್ಸರದ ಪಂಚಾಂಗವು. ಇದರ ಬೆಲೆ ಆಣೆ ೩. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸುವದು.

ಚ ಸುಬ್ಬಣ್ಣಶಾಸ್ತ್ರಿ,
ಪುಣಚಾ ಗ್ರಾಮ ವಿಟ್ಲ ಪೋಸ್ಟು

ಶ್ರೀ

ಓಂ ನಮೋ ಭಗವತೇ ಭದ್ರನರಸಿಂಹಾಯ.

ಪ್ರಾರ್ಥಿತಾರ್ಥ ಪ್ರದಾನಾಭೋ ಮಂಜುಲಾಲಯಗೋಚರ |
ಮಾಮಾಪನ್ನಾಶ್ರಿತಾಂಗೋಸೌ ಪಾತನ್ನೃಹರಿ ಸದಾ |

ಸಮಸ್ತ ಗೌಡಸಾರಸ್ವತ ಬ್ರಾಹ್ಮಣ ಬಂಧುಗಳಿಗೆ ವಿಜ್ಞಾಪನೆ

ಇದ ಸಂವತ್ಸರದ ಮಾಘ ಶುಕ್ಲ ಪೌರ್ಣಿಮಿಯ ಬುಧವಾರ (೨ 4—2—20) ದಿನ ಇಲ್ಲಿ ಶ್ರೀ ದೇವಸ್ಥಾನದಲ್ಲಿ

ಶ್ರೀ ಮದನಂತೇಶ್ವರ

ಸಹಿತ

ಶ್ರೀ ಬದ್ರನರಸಿಂಹಸ್ವಾಮಿಗ

ಸಹಸ್ರ ಕುಂಭಾಭಿಷೇಕವು

ನೆರವೇರಲಿಕ್ಕಿರುವುದರಿಂದ ತಾವು ಸರ್ವರೂ ಒಪ್ಪತ್ತಿಗ ಮುಂಚಿತವಾಗಿ ಇಲ್ಲಿಗೆ ಬಂದು ಸದರೀ ಮಹೋತ್ಸವವನ್ನು ಸಾಂಗಗೊಳಿಸಿ ಶ್ರೀ ಸ್ವಾಮಿಯ ಶ್ರೀಮುಡಿ ಗಂಧಪ್ರಸಾದಾದಿಗಳನ್ನು ಸ್ವೀಕರಿಸಿ ಕೃತಾರ್ಥರಾಗಬೇಕೆಂದು ಸವಿನಯವಾಗಿ ವಿಜ್ಞಾಪಿಸುತ್ತೇನೆ.

ಶ್ರೀಮದನಂತೇಶ್ವರ ದೇವಸ್ಥಾನ
ಮಂಜೇಶ್ವರ
ತಾ 18—1 '20

ಮಂಜೇಶ್ವರ ಪದ್ಮನಾಭಭಟ್ಟ
ಮೊಕ್ತೇಸರ

ಸ ಜಯತಿ ಬದ್ರನೃಸಿಂಹೋ ಶರಣಾಗತವಾನಂತ ಶೇಷಸಂಯುಕ್ತಃ |
ಮಂಜುಲಪುರೇ ಚ ಜಿತೇ ಯಃ ಸಾರಸ್ವತ ಗೌಡವಿಪ್ರವರ್ಗೇಣ ||

ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಇದೇ ಮಾಘ ಶುಕ್ಲ ಹುಣ್ಣಿಮೆಯು ಬುದವಾರ (ತಾ 4—2—'20) ದಿನ ನೆರವೇರತಕ್ಕ ಸಹಸ್ರಕುಂಭಾಭಿಷೇಕದ ಮಹಾಪರ್ವಕ್ಕೆ ಅನೇಕ ಊರುಗಳಿಂದ ನಮ್ಮ ಸ್ವಜಾತಿಯ ಬಾಂಧವರು ಬರುವರಾದ್ದರಿಂದ, ಆಗ ಇಲ್ಲಿ ಸಾಂದ್ರವಾದ ಜನಸ್ತೋಮವು ಕೂಡುವ ಸಂಭವವಿದೆ. ಅಂಥಾ ಸಂದಣಿಯಲ್ಲಿ ಅವರೆಲ್ಲರಿಗೆ ಬೇಕಾಗುವ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೂ, ಅವರಿಗೆ ಯಾವ ಬಗೆಯಿಂದಲೂ ತೊಂದರೆ ಬಾರದಂತೆ ಉಪಚರಿಸಲಿಕ್ಕೂ

ಸ್ವಯಂ ಸೇವಕರು

ಬೇಕಾಗಿರುವುದರಿಂದ, ಶ್ರೀ ದೇವರಲ್ಲಿ ಭಕ್ತಿ ಬಾಂಧವರಲ್ಲಿ ಆದರವುಳ್ಳ ಸ್ವಜಾತಿಯ ಯುವಕರು ಅಸ್ವಾರ್ಥವಾದ ಈ ಸ್ವಯಂ ಸೇವೆಯ ಕಾರ್ಯವನ್ನು ಕೈಕೊಳ್ಳಬೇಕೆಂದು ಪ್ರಾರ್ಥನೆ. ಹೀಗೆ ಸ್ವಯಂ ಸೇವಕರಾಗಿ ಇಲ್ಲಿಗೆ ಬರಲಿಕ್ಕೆ ಸಮ್ಮತಿಯುಳ್ಳವರು ಈ ಕೆಳಗ ಹೆಸರು ಕಾಣಿಸಿದವರಿಗೆ ಮುಂಚಿತವಾಗಿಯೇ ತಿಳಿಸಿ, ಮಾಘ ಶುದ್ಧ ೧೪ಯು ಫೆಬ್ರುವರಿ ೨ನೆ ತಾರೀಕಿನೊಳಗ ಇಲ್ಲಿಗ ಬಂದು ಸೇರಬೇಕೆಂದು ವಿಜ್ಞಾಪನೆ.

ಮಂಜೇಶ್ವರ,
ತಾ 18-1 '20.

ಎಮ್ ಗೋವಿಂದ ಶೈ.

[illegible]

... ಕಾಡುಗಳ ಅನಾನುಕೂಲತೆಗಳನ್ನು ... ರಾತ್ರಿ ಬಹಳ ಸರಿಯಾದ ... ಉತ್ತರಗಳಿಂದ ಜನಗಳು ಸಮಾಧಾನ ... ಈ ಕೆಳಗಿನ ಅರ್ಜಿಗಳು ಅಲ್ಲಿ ... —

೧. ಸರಕಾರ ಭೂಮಿಗಳಿಂದ ಸೊಪ್ಪು ಕಡ್ಡಿಯನ್ನೂ ತರಗೆಲೆಯನ್ನೂ ... ತೆಗೆಯುವಂತೆ ... ಯಾವುದಾದರೊಂದು ಗ್ರಾಮ ... ಗ್ರಾಮದ ಮುಖಂಡರ ಒಂದು ಪಂಚಾಯತನ್ನು ಏರ್ಪಡಿಸಿ, ಆ ಪಂಚಾಯತಿ ... ಮನ್ನಾಜಾತಿಯ ಮರಗಳಿಗೆ ಅಪಾಯ ... ಹಾಗೆಯೂ ... ಬೆಂಕಿ ಹತ್ತದಂತೆಯೂ ... ಜವಾಬ್ದಾರಿ ... ವಹಿಸಿಕೊಳ್ಳುವುದಾದರೆ ಮನ್ನಾಜಾತಿಯ ಮರ ಹೊರತು ಇತರ ಜಾತಿಯ ಮರಗಳ ಸೊಪ್ಪು ಕಡ್ಡಿಯನ್ನು ಧಾರಾಳವಾಗಿ ಕೊಯ್ದುಕೊಂಡು ಹೋಗುವುದಕ್ಕೆ ಬಿಡಬಹುದು. ಇದಕ್ಕೆ ಆಯಾ ಗ್ರಾಮಸ್ಥರು ಒಂದು ಪಂಚಾಯತನ್ನು ಏರ್ಪಡಿಸಿಕೊಂಡು ಅರ್ಜಿಯನ್ನು ಬರೆದುಕೊಳ್ಳಬೇಕು. ಈ ಹಕ್ಕನ್ನು ದುರುಪಯೋಗ ಮಾಡಿದರೆ ಸರಕಾರದವರು ಹಿಂತೆಗೆಯಬಹುದು; ಆದರೆ ತರಗೆಲೆಯು ಕಾಡುಗಳ ಬೆಳವಣಿಗೆಗೆ ಅತ್ಯವಶ್ಯವಾದ್ದರಿಂದ ಅದನ್ನು ಒಟ್ಟುಗೂಡಿಸಿಕೊಂಡು ಹೋಗಲುಬಿಡಲಾಗುವುದಿಲ್ಲ ಎಂದು ಕಲೆಕ್ಟರ ದೊರೆಗಳು ಡಿ. ಫಾರೆಸ್ಟ ಅಫಿಸರರೊಡನೆ ವಿಚಾರಿಸಿ ಜನರಿಗೆ ತಿಳಿಸಿದರು.

೨. ಕಾಡು ಮೃಗಗಳ ಹಾವಳಿಯನ್ನು ಕಡಿಮೆ ಮಾಡುವುದಕ್ಕೋಸ್ಕರ ಬೇಟೆ ಮಾಡುವುದಕ್ಕೆ ಹಳ್ಳಿಯವರು ಸಹಾಯ ಕೇಳಿದಾಗ ಫಾರೆಸ್ಟ ಇಲಾಖೆಯ ಒಳ ನೌಕರರು ಕೂಡಲೇ ಅವರಿಗೆ ಸಹಾಯಮಾಡುವಂತೆ ಸರ್ಕಾರದವರು ಕೊಡುತ್ತೇವೆಂದು ಡಿಸ್ಟ್ರಿಕ್ಟ ಫಾರೆಸ್ಟ ಅಫಿಸರರು ಒಪ್ಪಿಕೊಂಡರು. ಜಿಂಕೆ ಮೊದಲಾದ ಹಲ್ಲು ಹಾನಿಕರವಲ್ಲದ ಮತ್ತು ಅಮೌಲ್ಯವಾದ ಪ್ರಾಣಿಗಳನ್ನು ಸುಮ್ಮನೆ ಕೊಲ್ಲಬಾರದಾಗಿ ಸರಕಾರ ಕಡೆಯಿಂದ ತಿಳಿಸಿದರು.

೩. ಕತ್ತರಿ ಕಾಣಿಕೆಯನ್ನು ನಿರ್ಣಯಿಸುವಾಗ ನೆಲದಿಂದ ೪ ಫೀಟು ಎತ್ತರದಲ್ಲಿ ಮರದ ಸುತ್ತಳತೆಯನ್ನು ಮಾಡಿ ಮರದ ಘನಫೂಟಿಗೆ ದರವನ್ನು ನಿರ್ಣಯಿಸುವ ಕ್ರಮಕ್ಕಿಂತಲೂ ಮರದ ಬುಡ ತುದಿ ಮತ್ತು ಮಧ್ಯಭಾಗದ ಸುತ್ತಳತೆಯ ಸರಾಸರಿ ಎಣಿಸಿದರೆ ಆಗಬಹುದೆಂದು ಹೇಳಿದ್ದಕ್ಕೆ ಈಗಿನ ಕ್ರಮಗಳಿಂದ ಜನರಿಗೆ ವಿಶೇಷ ನಷ್ಟವಾಗದು, ಆದರೂ ಕೊಡಗಿನಲ್ಲಿ ಈಚೆಗೆ ಜಾರಿಯಲ್ಲಿ ತಂದ ಕ್ರಮವು ಸಮಾಧಾನಕರವೆಂದು ಭಾವಿಸಲ್ಪಡುವುದರಿಂದ ಆ ಕ್ರಮಗಳನ್ನು ಕೇಳಿ, ಅವುಗಳ ಆಧಾರದಿಂದ ಇಲ್ಲಿ ಆಗತಕ್ಕವಿರುವ ಬದಲಾವಣೆಗಳನ್ನು ಮಾಡಬಹುದೆಂದು ದೊರೆಗಳು ತಿಳಿಸಿದರು.

೪. ಕುಮಕಿ, ಕಾನ ಮತ್ತು ಬಾಣೆಗಳಲ್ಲಿರುವ ಮನ್ನಾಜಾತಿಯ ಮರಗಳನ್ನು ಸಾಗಿಸುವಾಗ 'ಪರ್ಮಿಟು' ಪಡೆಕೊಳ್ಳುವ ಕ್ರಮವನ್ನು ತೆಗೆದುಹಾಕಬೇಕೆಂದು ಕೇಳಿಕೊಂಡದ್ದಕ್ಕೆ ಅದರಿಂದ ವಿಶೇಷ ತೊಂದರೆ ಇಲ್ಲ, ಸಕಾಲದಲ್ಲಿ ತಹಶಿಲ್ದಾರರಿಗೆ ಅರ್ಜಿ ಹಾಕಿಕೊಂಡರೆ ಪರ್ಮಿಟು ಬೇಗನೆ ಸಿಗಲಿಕ್ಕೆ ಅಡ್ಡಿಯಾಗಲಾರದೆಂದು ದೊರೆಗಳು ಹೇಳಿದರು.

೫. ಸ್ವಂತ ಕುಮಕಿಯಿಂದ ಕೃಷಿ ಅಥವಾ ತನ್ನ ಗೃಹಕೃತ್ಯದ ಬಗ್ಗೆ ಬೇಕಾದ ಕಟ್ಟಿಗೆ ಮರಮುಟ್ಟನ್ನು ಕಡಿದು, 'ಪರ್ಮಿಟು' ಇಲ್ಲದೆ ಲಗ್ನಿಯಾದ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ 'ಪರ್ಮಿಟು' ಇಲ್ಲದೆ ಸಾಗಿಸಲಿಕ್ಕೆ ಆಕ್ಷೇಪವಿಲ್ಲವೆಂದೂ ಬಹಳ ದೂರವಿರುವ ಹಳ್ಳಿಮನೆಗೆ ಸಾಗಿಸುವುದಾದರೆ ಮಾತ್ರ ಪರ್ಮಿಟು ಆಗತಕ್ಕದ್ದೆಂದೂ ಈ ಬಗೆಯ ಪರ್ಮಿಟು ಕೊಡುವ ತನ್ನ ಅಧಿಕಾರವನ್ನು ಜನರ ಅನುಕೂಲತೆಗೋಸ್ಕರ ಆಯಾ ತಾಲೂಕಿನ ತಹಸಿಲ್ದಾರರಿಗೆ ಕೊಡುವೆನೆಂದೂ ಕಲೆಕ್ಟರರು ಒಪ್ಪಿಕೊಟ್ಟರು.

೬. ಸ್ವಂತ ಕುಮಕಿಯಲ್ಲಿ ಕುಚ್ಚಿಕಾಡನ್ನು ಸುಟ್ಟು ಕಂದಾಯ ಮಾಫಿಯುಳ್ಳ ಧಾನ್ಯ ಬೆಳೆಸಲಿಕ್ಕೋಸ್ಕರ ಅರ್ಜಿ ಬರಕೊಂಡಲ್ಲಿ ಆ ಬಗ್ಗೆ ಹುಕುಂ ಕೊಡುತ್ತೇನೆಂದು ಕಲೆಕ್ಟರ್ ದೊರೆಗಳು ಒಪ್ಪಿಕೊಟ್ಟರು.

೭. ಅಮೃತ ಮತ್ತು ಸುಳ್ಯ ತಾಲೂಕುಗಳಲ್ಲಿ ೧೯೭೭ನೇ ಫಸಲಿಯ ಮುಂಚೆ ಇದ್ದ ಧರಖಾಸ್ತು ಮತ್ತು ವರ್ಗಗಳಲ್ಲಿ ಕಾನ ಮತ್ತು ಬಾಣೆಗಳು ಇಲ್ಲದ್ದಲ್ಲಿ ಕುಮಕಿ ಹಕ್ಕನ್ನು ಕೊಡಬೇಕೆಂದು ಕೇಳಿದ್ದಕ್ಕೆ ಈ ವಿಷಯವಾಗಿ ಈ ಮೊದಲೇ ಕಟ್ಟುನಿಟ್ಟಾದ ಹುಕುಂ ಇದೆ, ಆದರೂ ಅದನ್ನು ಪರ್ಯಾಲೋಚಿಸಿ ಯಾವ ಸುಖಗಳನ್ನು ಕೊಡಲಿಕ್ಕೆ ಸಾಧ್ಯವಿದೆ ಎಂದು ಆಲೋಚನೆಮಾಡುವುದಾಗಿ ಹೇಳಿದರು.

೮. ರಿಜರ್ವ ಕಾಡುಗಳಲ್ಲಿ ಮಂದೆ ಹೊಡಕೊಂಡು ಮೇಯಿಸುವ ಹುಡುಗರು ಚೂರಿಯನ್ನು ಹಿಡಿದುಕೊಂಡು ಕಾಡೊಳಗೆ ಹೋಗಲು ಆಕ್ಷೇಪವಿಲ್ಲ, ಕತ್ತಿಯನ್ನು ಮಾತ್ರ ಕೊಂಡುಹೋಗಲಿಕ್ಕೆ ನಿರ್ಬಂಧವಿದೆ ಎಂದು ತಿಳಿಯಬೇಕು.

೯. ರಿಜರ್ವ ಕಾಡುಗಳಲ್ಲಿ ಮಂದೆ ಮೇಯಿಸಲಿಕ್ಕೆ ಫೀಜು ಮಾಫಿಯಿಂದ ಕೊಡಬೇಕು ಎಂದು ಕೇಳಿದ್ದಕ್ಕೆ ಮೇಲೆ ಹೇಳಿದ ವಿಧದ ಪಂಚಾಯತುಗಳು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ನಡಿಸಿ ಕಾಡುಗಳಲ್ಲಿ ಬೆಂಕಿ ಹತ್ತದೆ ಹಾಗೆ ಎಚ್ಚರದಿಂದಿರುತ್ತಾರೆಂದು ತಿಳಿದಾಗ ಮಂದೆ ಮೇಯಿಸಲಿಕ್ಕೆ ವಸೂಲಾಗುವ ಫೀಜನ್ನು ಒಂದಕ್ಕೆ ಆ ಜನಗಳಿಗೆನೆ ಕೊಡಲಾಗುವದೆಂದು ತಿಳಿಸಿದರು.

೧೦. ಸಾಗುಭೂಮಿಯಿಂದ ೩ ಫರ್ಲಾಂಗಿನೊಳಗೆ ಇದ್ದ ರಿಜರ್ವ ಕಾಡಿನ ಅಂಶವನ್ನು ಕೋರಿ ತನಗೆ ಅರ್ಜಿ ಬರಕೊಂಡಲ್ಲಿ ಅದನ್ನು ಸ್ಥಳತನಿಖೆಯಿಂದ ತೆಗೆದುಹಾಕಬಹುದೋ ಎಂಬದನ್ನು ಆಲೋಚಿಸಲಾಗುವುದು ಎಂದು ದೊರೆಗಳು ತಿಳಿಸಿದರು.

೧೧. ಕಾಡಾನೆಗಳಿಂದಲೂ 'ಬಂಟುಕಾಳಿ' ಎಂಬ ಹುಳಗಳಿಂದಲೂ ಬೆಳೆಗೆ ಹಾನಿ ಬಾಧಕ್ಕೆ ತೀರ್ವೆಯಲ್ಲಿ ರಿಯಾಯತಿಕೊಡುವ ಅಧಿಕಾರವು ತನಗಿಲ್ಲ, ಬಂಟುಕಾಳಿ ಹುಳಗಳನ್ನು ಅದಕ್ಕಾಗಿಯೇ ತಯಾರಿಸಿದ ಬಲೆಗಳಿಂದ ಹಿಡಿದು ನಾಶಪಡಿಸುವುದೇ ಈ ವರೆಗೆ ಗೊತ್ತಾದ ಉಪಾಯಗಳಲ್ಲಿ ಉತ್ತಮ ... [illegible]

[illegible]

೧೮. ಅಕ್ಕಲುಗಳಲ್ಲಿ ಧಾನ್ಯದವಸಗಳನ್ನು ತೀರ್ವೆ ಮಾಫಿಯಿಂದ ಬೆಳೆಸಲಿಕ್ಕೆ ಆಕ್ಷೇಪವಿಲ್ಲ. ಆದರೆ ಆ ಕುಂಬ ಮೊದಲಾಗಿ ತಹಸಿಲ್ದಾರರಿಂದ ಅಪ್ಪಣೆ ಬರಹ ಮೂಲಕ ಪಡೆಯಬೇಕೆಂದು ದೊರೆಗಳು ತಿಳಿಸಿದರು.

(ಮುಂದರಿಸಲಾಗುವುದು)

ಮಲೇರಿಯಾ (ಅಥವಾ ಮಲೆನಾಡು) ಜ್ವರ.

(ಡಾಕ್ಟರ್, ಯು. ರಾಮ ರಾವ್)

ಕಾರಣಗಳು ಮತ್ತು ಲಕ್ಷಣಗಳು.

೧. ಮಲೆ ಜ್ವರವು, ಬೇರೆ ಪ್ರಾಣಿಗಳ ರಕ್ತದಲ್ಲಿಯೇ ಜೀವಿಸುವ ಕೆಲವು ಸಣ್ಣಸೂಕ್ಷ್ಮ ಕ್ರಿಮಿಗಳಿಂದ ಉಂಟಾಗುವುದು. ಮನುಷ್ಯರ ರಕ್ತದಲ್ಲಿ ಈ ಕ್ರಿಮಿಗಳು ಸೇರಿದಾಗ, ಅವುಗಳ ಸಂಖ್ಯೆಯು ಅಲ್ಲಿ ಬಹಳವಾಗಿ ಹೆಚ್ಚಿಹೋಗುವುದು. ಹೀಗೆ ರಕ್ತದಲ್ಲಿ ಈ ಕ್ರಿಮಿಗಳು ಹೆಚ್ಚಿದರೆ ಈ ಜ್ವರವು ಬರುವುದು.

೨. ಮಲೇರಿಯಾ ಎಂಬುದು ಒಂದು ವಿಜಾತೀಯವಾದ ಜ್ವರವು. ಆಗಾಗ ನಿಂತುನಿಂತು ಬರುವುದು. ಈ ಜ್ವರದಿಂದ ಮೈಯಲ್ಲಿ ಕಾಯುವ ಉಷ್ಣಾಂಶವು (ಜ್ವರದ ಡಿಗ್ರಿ) ಸಾಮಾನ್ಯವಾಗಿ ಮನುಷ್ಯದೇಹದಲ್ಲಿರಬೇಕಾದ ಉಷ್ಣಕ್ಕೆ ಸಮಾನವಾಗಿಯೂ, ಒಂದೊಂದು ಸಮಯದಲ್ಲಿ ಅದಕ್ಕಿಂತಲೂ ಕಡಿಮೆಯಾಗಿದ್ದು, ಆಗಾಗ ಹೆಚ್ಚುತ್ತ ಬರುವುದು, ಆಗಾಗ ನಿಂತ ಹಾಗೆ ತೋರಿ, ತಿರುಗಿ ಕ್ಲುಪ್ತ ಕಾಲಕ್ಕೆ ಕಾಣಿಸಿಕೊಳ್ಳುವುದೇ ಈ ಜ್ವರದ ಸ್ವಾಭಾವಿಕಲಕ್ಷಣವು. ಇವುಗಳಲ್ಲಿ ೨೪ ಘಂಟೆಗಳಿಗೊಂದಾವರ್ತಿ ಎಂದರೆ, ಪ್ರತಿದಿನವೂ ಒಂದು ಕ್ಲುಪ್ತಕಾಲಕ್ಕೆ ಸರಿಯಾಗಿ ಜ್ವರವು ಏರುತ್ತ ಬರುವದು ಒಂದು ವಿಧವು. ಇದಕ್ಕೆ ದಿನಜ್ವರವೆಂದು ಹೆಸರು. ೪೮ ಘಂಟೆಗಳಿಗೆ ಒಂದಾವರ್ತಿ ಬರುವುದು ಮತ್ತೊಂದು ವಿಧವು. ಇದಕ್ಕೆ ಮೂರನೇ ಚಳಿ, ಅಥವಾ ದಿನ ಬಿಟ್ಟು ದಿನದ ಜ್ವರವೆಂದು ಹೆಸರು. ೭೨ ಘಂಟೆಗಳಿಗೊಂದಾವರ್ತಿ ಕಾಣಿಸಿಕೊಳ್ಳುವುದು ಇನ್ನೊಂದು ವಿಧವು. ಇದನ್ನು ನಾಲ್ಕನೇ ಚಳಿಯೆಂದೂ ಚಾತುರ್ಥಿಕ ಜ್ವರವೆಂದೂ ಹೇಳುವರು.

೪. ಮೇಲೆ ಹೇಳಿದ ಯಾವ ವಿಧದ ಜ್ವರವಾಗಿದ್ದರೂ, ಅದು ಕಾಣಿಸಿಕೊಂಡಾಗ, ಮೊದಲು ಚಳಿ, ಆ ಮೇಲೆ ಜ್ವರ, ಆ ಮೇಲೆ ಬೆವರು, ಈ ಮೂರು ಸ್ಥಿತಿಗಳೂ ಒಂದಾದ ಮೇಲೊಂದು ಕ್ರಮವಾಗಿ ಮೈಯಲ್ಲಿ ಕಾಣಿಸುವುವು. ಮೊದಲು ಚಳಿ ಬಂದಾಗ, ಕಾಲಿಂದ ತಲೆಯ ವರೆಗೆ, ಮೈಯಲ್ಲವೂ ನಡುಗುವುದು. ಇಷ್ಟು ಚಳಿಯಿಂದ ಮೈ ನಡುಗುತ್ತಿರುವಾಗಲೂ, ದೇಹದಲ್ಲಿ ಜ್ವರದ ಕಾವು ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತ ಬರುವುದು. ಆ ಮೇಲೆ ಸ್ವಲ್ಪ ಹೊತ್ತಿನೊಳಗಾಗಿ ನಡುಕವು ನಿಂತುಹೋಗಿ, ಜ್ವರವು ೧೦೩, ೧೦೪, ೧೦೫ ಡಿಗ್ರಿಗಳ ವರೆಗೆ ಏರುವುದು. ಕೆಲವು ಸಂದರ್ಭಗಳಲ್ಲಿ ಅದಕ್ಕೆ ಮೇಲೆಯೂ ಕಾಣಿಸುವದುಂಟು. ಆ ಮೇಲೆ ಜ್ವರವು ನಿಲ್ಲುವದಕ್ಕೆ ಸೂಚನೆಯಾಗಿ, ಮೈಯಲ್ಲವೂ ಬಹಳವಾಗಿ ಬೆವರುವುದು. ಬೆವರು ಬಂದೊಡನೆ ಜ್ವರವು ತಗ್ಗಿಹೋಗುವುದು.

ಈ ವ್ಯಾಧಿಯನ್ನು ನಿವಾರಿಸುವ ಮಾರ್ಗಗಳು.

೫. ಮಲೇರಿಯಾ ಎಂಬುದು, ಒಂದು ವಿಧವಾದ ಅಂಟುರೋಗವು ಆದರೆ ನೇರವಾಗಿ ಮನುಷ್ಯರಿಂದ ಮನುಷ್ಯರಿಗೆ ಅಂಟಲಾರದು. ಸೊಳ್ಳೆಗಳು ಈ ವ್ಯಾಧಿಯನ್ನು ಒಬ್ಬರಿಂದೊಬ್ಬರಿಗೆ ಅಂಟಿಸುವವು. ಹೇಗೆಂದರೆ, ಸೊಳ್ಳೆಗಳು ಈ ರೋಗವುಳ್ಳ ಯಾವನಾದರೂ ಒಬ್ಬ ಮನುಷ್ಯನನ್ನು ಕಚ್ಚಿದಾಗ, ಅವನ ರಕ್ತದಲ್ಲಿರುವ ವಿಷಕ್ರಿಮಿಗಳು, ಆ ಸೊಳ್ಳೆಗಳ ಹೊಟ್ಟೆಯಲ್ಲಿ ಹೋಗಿ ಸೇರುವುವು. "ಅನೋಫಿಲೀಸ್" ಎಂಬ ಒಂದು ಜಾತಿಯ ಸೊಳ್ಳೆಗಳವೆ. ಈ ಸೊಳ್ಳೆಗಳ ಹೊಟ್ಟೆಯಲ್ಲಿ ಸೇರಿದಾಗ, ಆ ವಿಷಕ್ರಿಮಿಗಳು ಅಲ್ಲಿಯೇ ಬಹಳವಾಗಿ ಹೆಚ್ಚುವವು. ಈ ಜಾತಿಯ ಸೊಳ್ಳೆಗಳು ಇತರ ಮನುಷ್ಯರನ್ನು ಕಚ್ಚಿದರೆ, ಇವುಗಳ ಕೊಳ್ಳಿನ ಮಾರ್ಗವಾಗಿ, ಆ ವಿಷಕ್ರಿಮಿಗಳಲ್ಲಿ ಕೆಲವು, ಅವರ ರಕ್ತದಲ್ಲಿಯೂ ಹೋಗಿ ಸೇರುವುದರಿಂದ, ಅವರಿಗೂ ಆ ವ್ಯಾಧಿಯು ಬರುವುದು. ಈ ಕಾರಣದಿಂದ ಮಲೇರಿಯಾ ಜ್ವರವೆಂಬುದು ಸೊಳ್ಳೆಗಳ ಕಡಿತದಿಂದಲೇ ಒಬ್ಬರಿಂದೊಬ್ಬರಿಗೆ ವ್ಯಾಪಿಸುವುದು.

೬. ಕೆಲವು ಕಾಲಕ್ಕೆ ಹಿಂದೆ ನೆನಸಿದ್ದಂತೆ, ಕೊಳಕು ನೀರನ್ನು ಕುಡಿಯುವುದರಿಂದಾಗಲಿ, ಕೆಟ್ಟ ಗಾಳಿಯನ್ನು ಶ್ವಾಸಿಸುವುದರಿಂದಾಗಲಿ, ನೆಲದ ಮಣ್ಣಿನ ಮೂಲಕವಾಗಿಯಾಗಲಿ, ಮನುಷ್ಯರಿಗೆ ಈ ರೋಗವು ಬರಲಾರದು. ಆದರೆ ಕೊಳಕು ನೀರೂ, ಕೆಟ್ಟ ಗಾಳಿಯೂ ನೇರವಾಗಿ ಈ ರೋಗಕ್ಕೆ ಕಾರಣವಾಗದಿದ್ದರೂ, ಈ ವ್ಯಾಧಿಯನ್ನು ಒಬ್ಬರಿಂದೊಬ್ಬರಿಗೆ ತಂದು ಅಂಟಿಸತಕ್ಕ ಸೊಳ್ಳೆಗಳಿಗೆ ಅವು ವಾಸಸ್ಥಳಗಳಾಗುವುದರಿಂದ ಅವೂ ಒಂದು ವಿಧವಾಗಿ, ಈ ವ್ಯಾಧಿಗೆ ಕಾರಣವೆಂದು ಹೇಳಬಹುದು. ಮುಖ್ಯವಾಗಿ ಮಲೇರಿಯಾ ಜ್ವರವು ಸೊಳ್ಳೆಗಳ ಮೂಲಕವಾಗಿಯೇ ಒಬ್ಬರಿಂದೊಬ್ಬರಿಗೆ ವ್ಯಾಪಿಸುವುದೇ ಹೊರತು ಬೇರೆ ವಿಧದಿಂದ ಬರಲಾರದೆಂದು ಈಗ ನಿರ್ಧರಿಸಲ್ಪಟ್ಟಿದೆ.

೭. ಈ ಕಾರಣಗಳಿಂದ, ಸೊಳ್ಳೆಗಳ ಕಡಿತವನ್ನು ತಪ್ಪಿಸಿಕೊಳ್ಳುವುದೇ ಈ ರೋಗನಿವಾರಣೆಗೆ ಮುಖ್ಯವಾದ ಉಪಾಯವು. ಇದಕ್ಕಾಗಿ ಕೆಳಗೆ ಕಾಣಿಸಿದ ಎರಡು ಮಾರ್ಗಗಳುಂಟು:—(a) ನಿಮ್ಮ ಸುತ್ತುಮುತ್ತಲೂ ಸೊಳ್ಳೆಗಳಿದ್ದರೂ, ಅವು ನಿಮ್ಮನ್ನು ಕಚ್ಚದ ಹಾಗೆ ಮಾಡುವುದೊಂದು. (b) ಸಾಧ್ಯವಾದ ಪುಟ್ಟಿಗೆ ನಿಮ್ಮ ಸುತ್ತುಮುತ್ತಲೂ ಸೊಳ್ಳೆಗಳು ಸೇರದ ಹಾಗೆ ಮಾಡುವುದು ಮತ್ತೊಂದು.

(a) ಸೊಳ್ಳೆಗಳ ಕಡಿತಕ್ಕೆ ಸಿಕ್ಕದ ಹಾಗೆ ತಪ್ಪಿಸಿಕೊಳ್ಳುವುದು.

೮. ದೊಡ್ಡ ಸೊಳ್ಳೆಗಳು, ಸಾಧಾರಣವಾಗಿ ಹಗಲಿನಲ್ಲಿ ಕಚ್ಚಲಾರವು. ಅವು ಹಗಲು ಕತ್ತಲಲ್ಲಿ ಯಾದಾಗಲೂ ಮನೆಗಳೊಳಗೆ ನೆರಳುಳ್ಳ ಸ್ಥಳವನ್ನೇ ...

[illegible]

೯. ಎಲ್ಲಾ ಜಾತಿ ಸೊಳ್ಳೆಗಳೂ ಈ ವಿಷಜ್ವರವನ್ನು ಅಂಟಿಸಲಾರವು. ಆದುದರಿಂದ, ಸೊಳ್ಳೆಗಳು ಕಚ್ಚಿದಾಗಲೆಲ್ಲಾ ನಮಗೆ ಈ ಜ್ವರವು ಬರುವುದೆಂಬ ಭಯವಿಲ್ಲ. ಆಗಾಗ ಹೆಚ್ಚಾಗಿ ಸೊಳ್ಳೆಗಳು ಕಚ್ಚುತ್ತಿದ್ದರೆ, ಆಗ ನಿಮಗೆ ಈ ಜ್ವರವು ತಗಲುವ ಸಂಭವವುಂಟು.

(b) ನಿಮ್ಮ ಸುತ್ತುಮುತ್ತಲಿನ ಸ್ಥಳಗಳಲ್ಲಿ ಸೊಳ್ಳೆಗಳು ಸೇರದ ಹಾಗೆ ಮಾಡುವುದು.

೧೦. ಎಲ್ಲಿಯಾದರೂ ಗುಂಡಿಗಳಲ್ಲಿ ನೀರು ನಿಂತಿದ್ದಾಗ, ಆ ನೀರಿನ ಮೇಲೆ ಸೊಳ್ಳೆಗಳು ತಮ್ಮ ಮೊಟ್ಟೆಗಳನ್ನಿಟ್ಟು, ಮರಿ ಇಡುವುವು. ಆದುದರಿಂದ ನಿಮ್ಮ ಸುತ್ತುಮುತ್ತಿನ ಪ್ರದೇಶಗಳಲ್ಲಿ, ಅಲ್ಲಲ್ಲಿ ಬಹಳ ದಿನಗಳ ವರೆಗೆ ನೀರು ನಿಲ್ಲುವದಕ್ಕೆ ಅವಕಾಶ ಕೊಡದಂತೆ ಎಚ್ಚರದಿಂದಿದ್ದರೆ, ಅದರ ಮೇಲಿನ ಮೊಟ್ಟೆಗಳೆಲ್ಲವೂ ಮರಿಗಳಾಗುವುದಕ್ಕೂ, ಅದರಿಂದ ಸೊಳ್ಳೆಗಳು ಹೆಚ್ಚುವುದಕ್ಕೂ ಅವಕಾಶವಿಲ್ಲ. ಸೊಳ್ಳೆಗಳು ತಾವು ಹುಟ್ಟಿದ ಸ್ಥಳಕ್ಕೆ ಸಮೀಪವಾಗಿಯೇ ಹಾರಾಡುತ್ತಿರುವವೇ ಹೊರತು, ಬಹಳ ದೂರಕ್ಕೆ ಹೋಗಲಾರವು. ಆದುದರಿಂದ ನೀವು ನಿಮ್ಮ ಮನೆಗಳಲ್ಲಿಯೂ, ಅದಕ್ಕೆ ಸಮೀಪವಾದ ಸುತ್ತುಮುತ್ತಲಿನ ಸ್ಥಳಗಳಲ್ಲಿಯೂ, ಅಲ್ಲಲ್ಲಿ ನೀರು ನಿಲ್ಲದಂತೆ ಮಾಡಿದ್ದರೆ, ಸೊಳ್ಳೆಗಳು ಹುಟ್ಟಲಾರವು.

೧೧. ನಿಮ್ಮ ಸುತ್ತುಮುತ್ತಲೂ ಗುಂಡಿಗಳಲ್ಲಿ ಎಲ್ಲಿಯಾದರೂ ನೀರ್ ನಿಂತಿದ್ದರೆ, ಅದರ ಮೇಲೆ ಮಣ್ಣನ್ನು ತಂದು ಸುರಿಯಬೇಕು. ಮನೆಯ ಸುತ್ತಲೂ ಬಿದ್ದ ನೀರು ಧಾರಾಳವಾಗಿ ಹೊರಗೆ ಹರಿದುಹೋಗುವಂತೆ, ಚರಂಡಿಗಳನ್ನಿಡಿಸಬೇಕು. ಮನೆಯೊಳಗೆ ಅಲ್ಲಲ್ಲಿ ತೇವವಾಗದಂತೆ ನೋಡಿಕೊಳ್ಳಬೇಕು. ನಿಮ್ಮ ಮನೆಗೆ ಸಮೀಪವಾಗಿ, ಯಾವುದಾದರೂ ಹಳ್ಳದಲ್ಲಿ ಹೆಚ್ಚಾಗಿ ನೀರು ನಿಂತಿದ್ದು, ಅದನ್ನು ಹೊರಗೆ ಹೋಗುವ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಅದರ ಮೇಲೆ ಸ್ವಲ್ಪ ಸೀಮೆಯೆಣ್ಣೆ (ಚಿಮ್ಣಿಯೆಣ್ಣೆ)ಯನ್ನು ಸುರಿಯಬೇಕು. ಒಂದು ಚದರ ಗಜದಷ್ಟು ಅಗಲಕ್ಕೆ, ಒಂದು ಟೀ ಸ್ಪೂನಿನಷ್ಟು ಎಣ್ಣೆಯನ್ನು ಸುರಿದರೆ ಸಾಕು. ಆ ಮೇಲೆ ಅಲ್ಲಿ ಸೊಳ್ಳೆಗಳು ಹುಟ್ಟಲಾರವು. ಹೀಗೆ ಸೀಮೆಯೆಣ್ಣೆಯನ್ನು ಬಿಟ್ಟರೆ, ಅದರಿಂದ ಆ ನೀರಿನಲ್ಲಿರುವ ಮೊಟ್ಟೆಮರಿಗಳೆಲ್ಲವೂ ಆಗಲೇ ಸಾಯುವುವಲ್ಲದೆ, ತಿರುಗಿ ಆ ನೀರಿನ ಮೇಲೆ ಮೊಟ್ಟೆ ಇಡುವುದಕ್ಕಾಗಿ ದೊಡ್ಡ ಸೊಳ್ಳೆಗಳೂ ಬರಲಾರವು. ೧೦ ಅಥವಾ ೧೫ ದಿನಗಳಿಗೆ ಮೇಲೆ, ಯಾವ ಸ್ಥಳದಲ್ಲಿಯಾಗಲಿ ಎಷ್ಟೇ ಸ್ವಲ್ಪವಾಗಿ ಹಳೇ ನೀರು ನಿಂತಿದ್ದರೂ ಅದರಿಂದ ಜನಗಳ ಆರೋಗ್ಯಕ್ಕೆ ಹಾನಿಯುಂಟು. ಅದರಲ್ಲಿಯೂ ಮಲೇರಿಯಾ ಜ್ವರವಿದ್ದ ಕಡೆಗಳಲ್ಲಿ ಹಾಗೆ ಬಿಡುವದು ತುಂಬ ಅಪಾಯಕರವು.

೧೨. ಕೆಲಸಕ್ಕೆ ಬಾರದ ಹಳೇ ಕೋಟೆಗಳು, ತಗರದ ಖಾಲೀ ಡಬ್ಬಿಗಳು, ಮಡಕೆಯ ಚೂರುಗಳು, ಇವೇ ಮೊದಲಾಗಿ, ನೀರು ನಿಲ್ಲುವದಕ್ಕೆ ಅವಕಾಶವಾದ ಹಳೇ ಸಾಮಾನುಗಳು ಯಾವುದನ್ನೂ ಮನೆಯಲ್ಲಿ ಇರಿಸಬಾರದು. ಮತ್ತು ಮನೆಯಲ್ಲಿ ನೀರು ತುಂಬುವ ತೊಟ್ಟಿಗಳನ್ನೂ, ಅದಕ್ಕೆ ನೀರು ಬಿಟ್ಟುಕೊಳ್ಳುವುದಕ್ಕಾಗಿ ಮಾಡಿದ ಜಲಮಾರ್ಗಗಳನ್ನೂ, ಕೊನೆಯ ಪಕ್ಷಕ್ಕೆ ೮ ದಿನಗಳಿಗೊಂದಾವರ್ತಿಯಾದರೂ ತೊಳೆದು ಶುದ್ಧಮಾಡುತ್ತಿರಬೇಕು. ಮಳೆಗಾಲದಲ್ಲಿ ದೊಡ್ಡ ಮಳೆಯು ಬಿದ್ದ ಮೇಲೆ, ಮನೆಯ ಸುತ್ತಿನ ತೋಟಗಳನ್ನೆಲ್ಲಾ ಚೆನ್ನಾಗಿ ನೋಡಿ, ಅಲ್ಲಲ್ಲಿ ನೀರು ನಿಂತ ಕಡೆಗಳಲ್ಲಿ ಮಣ್ಣು ಹಾಕಿ ಸಮತಟ್ಟುಮಾಡಬೇಕು.

೧೩. ಕೊಳೆಯಾದ ಅಂಗಿಗಳನ್ನೂ, ಉಡುಪುಗಳನ್ನೂ, ಧೋತ್ರಗಳನ್ನೂ ಗೋಡೆಗಳಲ್ಲಿಯಾಗಲಿ, ಗೂಟಗಳಲ್ಲಿಯಾಗಲಿ ಸಿಕ್ಕಿದ ಕಡೆ ತೂಗುಹಾಕಬಾರದು. ಕೊಳೆಯಾದ ಬಟ್ಟೆಗಳನ್ನೂ ಸಿಕ್ಕಿದ ಕಡೆ ರಾಶಿ ಹಾಕಿಡಬಾರದು. ಸೊಳ್ಳೆಗಳಿಗೆ ಇವುಗಳೇ ಅನುಕೂಲವಾದ ವಾಸಸ್ಥಳಗಳು. ಆದುದರಿಂದ ಉಪಯೋಗಿಸದೆ ಇರತಕ್ಕ ಬಟ್ಟೆಗಳನ್ನೆಲ್ಲಾ ಪ್ರತ್ಯೇಕವಾದ ಒಂದು ಪೆಟ್ಟಿಗೆಯಲ್ಲಿ ಹಾಕಿ, ಚೆನ್ನಾಗಿ ಮುಚ್ಚಿಡಬೇಕು.

೧೪. ಸ್ವಾಭಾವಿಕವಾಗಿ ಯಾವುದಾದರೂ ಹೊಗೆ ಇದ್ದ ಕಡೆಯಲ್ಲಿ ಸೊಳ್ಳೆಗಳು ಬರಲಾರವು. ಹೊಗೆಯು ಹೆಚ್ಚಾಗಿದ್ದರೆ ಅವುಗಳಿಗೆ ಪ್ರಜ್ಞೆ ತಪ್ಪಿ ಸಾಯುವುದೂ ಉಂಟು. ಆದುದರಿಂದ ಸೊಳ್ಳೆಗಳನ್ನು ಕೊಲ್ಲಬೇಕಾದರೆ, ಯಾವುದಾದರೂ ಧೂಪವನ್ನು ಹಾಕಿ, ಆ ಹೊಗೆಯು ಹೊರಗೆ ಹೋಗದಂತೆ, ಕಿಟಿಕಿ ಬಾಗಿಲುಗಳನ್ನೆಲ್ಲಾ ಚೆನ್ನಾಗಿ ಮುಚ್ಚಿಟ್ಟರೆ, ಅದರಿಂದ ಸೊಳ್ಳೆಗಳು ಸತ್ತುಹೋಗುವುವು. ಇದಕ್ಕಾಗಿ ಸ್ವಲ್ಪ ಸಾಂಬ್ರಾಣಿಯನ್ನು (ಲೋಬಾನನ್ನು) ಬೆಂಕಿಯಲ್ಲಿ ಹಾಕಿ ಉರಿಸುವುದು ಎಲ್ಲಕ್ಕಿಂತಲೂ ಸುಲಭವಾದುದಿಯೂ ಅಪಾಯವಿಲ್ಲದೆಯೂ ಇರತಕ್ಕ ಮಾರ್ಗವು. ಇದಕ್ಕೆ ಬದಲಾಗಿ, ಗಂಧಕ, ಬೇವಿನೆಲೆ, ಹೊಗೆಸೊಪ್ಪು ಇವು ಮೂರರಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು.

ಮಲೇರಿಯಾ ಜ್ವರಕ್ಕೆ ಚಿಕಿತ್ಸೆ.

೧೫. ಕಾಲಶುದ್ಧಿಯು (ಮಲವಿಸರ್ಜನೆಯು) ಕ್ರಮವಾಗಿ ನಡೆಯುವಂತೆ ಮಾಡಬೇಕಾದುದು ಪ್ರಧಾನಕಾರ್ಯವು. ಇದಕ್ಕಾಗಿ ಆಗಾಗ ಜುಲಾಬು ತೆಗೆದುಕೊಳ್ಳುತ್ತಿರಬೇಕು. ಜುಲಾಬು ತೆಗೆದುಕೊಂಡ ಮೇಲೆ, ದಿನಕ್ಕೆ ಮೂರು ಸಲ ಹತ್ತು ಗ್ರೇನ್‌ಗಳಷ್ಟು ಕ್ವಿನೈನಾ ಪುಡಿಯನ್ನು ನೀರು ಬೆರಸಿದ ನಿಂಬೆಹಣ್ಣಿನ ರಸದಲ್ಲಿ ಕದಡಿ ಕುಡಿಯುತ್ತಿರಬೇಕು. ಹೀಗೆಯೇ ಮೂರು ದಿನಗಳ ವರೆಗೆ ಮಾಡುತ್ತಾ ಬಂದು, ಆ ಮೇಲೆ ರಾತ್ರಿಯಲ್ಲಿ ಒಂದು ವೇಳೆ ಮಾತ್ರ ಒಂದು ವಾರದವರೆಗೆ ಆ ಕ್ವಿನೈನಾ ಪುಡಿಯನ್ನು ಸೇವಿಸಿಕೊಳ್ಳಬೇಕು.

ತಿದ್ದುಪಡಿ. ಕಳೆದ ೨೫—೧—೧೯೨೫ನೇ ತಾರೀಕಿನ ಸಂಚಿಕೆಯ "ಅಪೂರ್ವ ಗ್ರಂಥ"ದ ಜಾಹೀರಾತಿನಲ್ಲಿ "ಸಹಸ್ರಕಲಶಾಭಿಷೇಕ" ಎಂಬುವ ಶಬ್ದದ ಮೊದಲು "ಏಕೋತ್ತರ" ಎಂಬುವ ಶಬ್ದವನ್ನು ಇಟ್ಟು ಗ್ರಂಥದ ಹೆಸರನ್ನು "ಏಕೋತ್ತರ ಸಹಸ್ರಕಲಶಾಭಿಷೇಕ" ಎಂದು ಓದುವಂತೆ ಪ್ರಾರ್ಥನೆ.

ಪತ್ರವ್ಯವಹಾರ.

ಸನ್ಮಾನ್ಯ ಪತ್ರಿಕಕರ್ತರೇ!

ತಮ್ಮ ತಾ. ೩—೧—೧೯೨೦ನೇ ಸ್ವದೇಶಾಭಿಮಾನಿಯ ಪತ್ರವ್ಯವಹಾರ ಭಾಗದಲ್ಲಿ ಪ್ರಕಟವಾದ 'ಕುಂದಾಪುರ ತಾಲೂಕಿನ ಒಬ್ಬ ವಿಚಾರ್ಶೀಲ' ರ ಲೇಖವನ್ನು ಓದಿದೆನು. ಅದು ತುಂಬಾ ವಿಚಾರ ಪೂರ್ಣವೇ ಆಗಿದೆ, ಸಂದೇಹವಿಲ್ಲ. ಆದರೂ ಆ ವಿಚಾರಿಗಳು ತಮ್ಮ ಸುಭಾಗದ ಕಾರ್ಯಕರ್ತರುಗಳ ವಿಷಯ ತುಂಬಾ ವಿಚಾರ ಮಾಡಿರುವದಲ್ಲದೆ ಪಡೀಲರ ಹಾಗೂ ಉಗ್ರಾಣಿಗಳ ಕಾರ್ಯಭಾಗದ ವಿಚಾರವನ್ನು ಪೂರ್ಣ ಪಡಿಸಲಿಲ್ಲವಾದ್ದರಿಂದ ಆ ಭಾಗದಲ್ಲಿ ಅಪೂರ್ಣವಾದ ವಿಷಯದ ಪಟ್ಟಿಗೆ ಪೂರ್ಣಗೊಳಿಸುವ ಸಲುವಾಗಿ ಬರೆದ ಈ ಕೆಳಗಿನ ವಿಚಾರಸ್ವರೂಪಕ್ಕೆ ಅದೇ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳವನ್ನು ಉದಾರಭಾವದಿಂದ ಅನುಗ್ರಹಿಸುವಿರಾಗಿ ನಂಬಿರುವೆನು.

ಉಗ್ರಾಣಿಗಳು—ಇವರ ಕೆಲಸಗಳು ದಿನೇ ದಿನೇ ವೃದ್ಧಿಯಾಗುತ್ತಾ ಬರುತ್ತವೆ. ಕೆಲಸವು ಹೀಗೆ ಕಡಿಮೆಯಿದ್ದ ಮುಂಚಿನ ಕಾಲದಲ್ಲಿ ಇವರು ವ್ಯವಸಾಯ ಮುಂತಾದ ಇತರ ಕಾರ್ಯಗಳನ್ನು ನಿರ್ವಹಿಸುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಈಗಿನ ಪರಿಸ್ಥಿತಿಯಲ್ಲಿ ಅಂಥಾ ವ್ಯಾಪಾರ ವ್ಯವಸಾಯಗಳನ್ನು ನಿರ್ವಹಿಸುವುದು [illegible] ಅಸಾಧ್ಯವಾಗಿದೆ—ಯಾಕೆಂದರೆ ಒಬ್ಬ ಉಗ್ರಾಣಿಯು ವ್ಯವಸಾಯವನ್ನು [illegible]ಂದನೆನ್ನುವಾ. ಅಷ್ಟರಲ್ಲಿ ಮುಖ್ಯ ದಿವಸದಲ್ಲಿ ಅಲೋಚನೆಗಳನ್ನು ದಗಿಸಿಕೊಂಡು ನೆಟ್ಟ ನಡುವುದಕ್ಕೆ ಸಿದ್ಧಪಡಿಸಿಕೊಂಡಿರುವಾಗ ಅಕಸ್ಮಾತ್ ಮಣಿಯಾರ್ ಡೋಂಟಿ ದರೋಡೆಗಳಿಗೋ ದ. ಅಧಿಕಾರಿಗಳ ಆಗಮನಪ್ರೋಗ್ರಾಮಿನಲ್ಲಿ ಒದಗಿತೆಂದರೆ ಆಯಿತು. ಆ ಬಡ ಉಗ್ರಾಣಿಯು ಸರ್ವಸ್ವವನ್ನು ಬಿಟ್ಟು ನಿಂತ ಕಾಲಿನಿಂದಲೇ ಓಡಬೇಕು. ಆ ಮೇಲೆ ಕೇಳುವುದೇನು ಅವರ ವ್ಯವಸಾಯವೈಭವ! ಹಾಳುಮಾಡಿದ್ದ ಆಳೆಂಬ ಗಾದೆಯಂತೆ ಆಗುವುದೇ ನಿಶ್ಚಯ. ಇಂಥಾಸ್ಥಲದಲ್ಲಿ ಬೇರೆ ವೃತ್ತಿಯು ಹೇಗೆ ಸಾಧ್ಯ? ಒಂದೇ ಕಡೆಯು ಹೊಡಕವಾದರೆ ಹೇಗಾದರೂ ಸಹಿಸಬಹುದು. ವಿಲೇಜ ಪೋಲೀಸ್ ಕೆಲಸ—ಬೀಟು ತಿರುಗಬೇಕು. ಜನನ ಮರಣದ ವಿಚಾರವಾಗಬೇಕು. ಸಾಂಕ್ರಾಮಿಕ ರೋಗವಿದ್ದಾಗ 'ರಿಪೋರ್ಟು' ಒಪ್ಪಬೇಕು. ಶೀರ್ವಪರಲ್ಲಿಗೆ ಓಡ್ಯಾಡಬೇಕು. ಸಿವಿಲ್ ಕ್ರಿಮಿನಲ್ ಬಾಬಿನ ಸಮ್ಮನ್ಸು ಜ್ಯಾರಿಯಾಗಲೇ ಬೇಕು ಪಕ್ಷಕಾರರಿಂದ ಒಟ್ಟಿಗಿದ್ದು ಸಹಾಯಮಾಡಬೇಕು. ಇನ್ನೊಂದು ಎಲ್ಲಾ ಖಾತೆಯವರ ಸೇವೆಯೂ ಸ್ವಗ್ರಾಮದಲ್ಲಿ ಇವರಿಂದ ಜರಗಲೇ ಬೇಕು. ಸರಬರಾಯಿಯಂತೂ ಮಾಡಬೇಕಾದ ಮುಖ್ಯ ಕೆಲಸವೇ. ಲ್ಯಾಂಡ್ ರಿಕಾರ್ಡ ಹಿಡಿದಿರುವವರ ಒಟ್ಟಿಗಿದ್ದು ಸರ್ವೆ ಕಲ್ಲು ಹೊತ್ತು ಹಾಕುವ ಕೆಲಸವೂ ಇವರ ಪಾಲಿಗೆ ಬಂದಿದೆ. ಹೀಗೆ ನೂರಾರು ಕೆಲಸಗಳ ಗುರಿಯಾಗಿಯೂ ಹಸಿದು ಮನೆಗೆ ಹೋದರೆ ಒಪ್ಪೊತ್ತಿನ ಗಂಜಿಗೂ ತತ್ವಾರವಾಗಿ ಮನೆ ಮಕ್ಕಳು ಗೋಳಾಡುವನ್ನು ನೋಡಿ ಆ ಬಡ ವ್ಯಕ್ತಿಯ ಸ್ಥಿತಿ ಹೇಗಾಗಬೇಕೋ? ದೇವರೇ ಬಲ್ಲ! ಇದು ಸಹನಾತೀತವಾದ ದುಃಖವಲ್ಲವೇ? ಆದ್ದರಿಂದ ಉಗ್ರಾಣಿಗಳಿಗೆ ಜನನ ಮರಣ ವಿಚಾರ ಹಾಗೂ ಬೀಟು ಕೆಲಸದಲ್ಲಿ ಸ್ವಲ್ಪ ಸವಾಬ್ದಾರಿಕೆಯನ್ನು ಕೊಟ್ಟು—ಮಾಡಿಸು ಪ್ರಾಂತ್ಯ, ಕರಾವಳಿ ಗ್ರಾಮದಲ್ಲಿರುವ ಕೆಲಸಗಳ ವಿಸ್ತಾರಕ್ಕನುಸರಿಸಿರುವ ರಿಂದ ೧೨: ವರೆಗೂ ಸಲಬು ನಿಶ್ಚಿತ ವ್ಯವಸ್ಥೆಯಾಗದೆ ನಿರ್ವಾಹವಾಗದು. ಪ್ರಯಾಣ ಕಾಲದಲ್ಲಿ ದಿನಕ್ಕೆ ೦—೪—೦ ಭತ್ಯವೂ ಕ್ಷಾಮಕಾಲದ ಮುಂಗಾಯ ಭತ್ಯವೂ ದೊರಕುವಂತಾಗಬೇಕು. ದೀನದಯಾಳುವಾದ ಘನ ಸರಕಾರವು ಈ ನಿರ್ಗತಿಕರುಗಳನ್ನು ದಯಾದ್ರ್ಯಭಾವದಿಂದ ಪಾಲಿಸಬೇಕಾಗಿ ಪ್ರಾರ್ಥನೆ.

ಉಗ್ರಾಣಿದೇವರು.

ಫೀಸು ಇಲ್ಲ! ರೋಗಪರೀಕ್ಷೆಗೆ ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ, ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡು ಬರುತ್ತದೆ. ನಿಮ್ಸನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತ ವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ್ವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೇ ಅತ್ಯುತ್ತಮವಾದವುಗಳು."

ಡಾ. ಎನ್. ಜೀ. ಸರದೇಸಾಯಿ,

ಎಮ್. ಬಿ. (ಲಂಡನ್)

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮ್ಮಾಯಿ ದೇವಾಲಯದ ಹಿಂದಿನ ರಸ್ತೆ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಪತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

ಇವರು ಹೊಟರಲ್ಲಿ [illegible] ಏಕೆಂದರೆ ಭಯಂಕರವಾದ ನ್ಯೂಮೋನಿಯಾ, ಪ್ಲೇಗು, ಟ್ಯಾಫಾಯಿಡ್, ಕಾಲರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಷ್ಟಸಾಧ್ಯವೂ ಗೂಢವೂ ಆದ ರೋಗಗಳನ್ನು ದಿವ್ಯ ವನಸ್ಪತಿಗಳ ಮೂಲಕ ಸ್ವಲ್ಪ ಕಾಲದಲ್ಲಿಯೇ ಗುಣಪಡಿಸಿ ಸುಪ್ರಸಿದ್ಧರಾಗಿರುವರು. ಬಂದು ಒಂದು ಸಾರಿ ಪರೀಕ್ಷಿಸಿ ನೋಡಿ!

ಅದೊ ನೋಡಿರಿ! ಅಪೂರ್ವ ಗ್ರಂಥ!!! ಬಿಡಬೇಡಿರಿ!

ಆನಂತರ ಸಿಕ್ಕಲೀ ಸಿಕ್ಕಲಾರದು.

ಪಂಚರಾತ್ರಾಂತರ್ಗತ ಪದ್ಮಸಂಹಿತೋಕ್ತ "ಏಕೋತ್ತರಸಹಸ್ರಕಲಶಾಭಿಷೇಕ" ವಿಧಾನವು ಸಾಂಗೋಪಾಂಗ, ಸಮಂತ್ರಕ, ಸಚಿತ್ರವಾಗಿ ಅಚ್ಚಾಗಿದೆ. ಇದರ ಸರ್ವ ಹಕ್ಕುಗಳನ್ನು ಪ್ರಕಾಶಕರು ಸ್ವಾಧೀನ ಇಟ್ಟುಕೊಂಡಿರುವರು.

ಪುಸ್ತಕ ಸಿಕ್ಕುವ ಸ್ಥಳ:—

ಲಕ್ಷ್ಮೀಭಕ್ತ ಫ್ರೀರೀಡಿಂಗ್ ರೂಮ್ ಮತ್ತು ಲೈಬ್ರರಿ.

ಮಂಜೇಶ್ವರ, (ದಕ್ಷಿಣ ಕನ್ನಡ).

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟನಲ್ಲಿ

ಕ್ರಮನಂಬ್ರ $\frac{1045}{19}$

ಕಾಸರಗೋಡು ವೆಂಕಟ್ರಮಣ ದೇವಸ್ಥಾನದ ಸರ್ವೋತ್ತಮ ಭಟ್ಟರ ಮಗ ವಾಸುದೇವ ಭಟ್ಟ } ವಾದಿ.

ಮತ್ತು

ಕೆ. ಪಿ. ಅಚ್ಯುತಯ್ಯ ಸಹಾ—ಪ್ರತಿವಾದಿರು.

ಇವರೊಳಗೆ

ಸದರಿ ವಾದಿ ವಾಸುದೇವ ಭಟ್ಟನು ತನ್ನ ಕುಟುಂಬದ ಹಕ್ಕಿನ ಕಾಸರಗೋಡು ಶ್ರೀ ವೆಂಕಟ್ರಮಣ ದೇವಸ್ಥಾನದ ಪೂಜೆ ಹಕ್ಕು ಮತ್ತು ಸದರಿ ದೇವಸ್ಥಾನಕ್ಕೆ ಬಿಟ್ಟುಕೊಟ್ಟ ಆಸ್ತಿಗಳ ಬಾಬ್ತು ಸದರಿ ಪೂಜೆಗೆ ಸಂಬಂಧಪಟ್ಟ ಹುಟ್ಟುವಳಿ ವಸೂಲು ಮಾಡುವ ಹಕ್ಕುಕೂಡಾ ತನಗೆ ಬಿಡಿಸಿಕೊಡಬೇಕೆಂತಲೂ ಕೈಪೇತು ತಾರೀಕು ಲಾಗಾಯ್ತು ಮುಂದಿನ ಹುಟ್ಟುವಳಿಯನ್ನು ಕೊಡಿಸಬೇಕೆಂತ ಕೂಡಾ ಸದರಿ ವ್ಯಾಜ್ಯ ದಾಖಲು ಮಾಡಿರುತ್ತಾನೆ. ಸ ಆ ವ್ಯಾಜ್ಯವು ಇದೇ 1920ನೇ ಇಸವಿ ಜನವರಿ ತಾರೀಕು 30ಕ್ಕೆ ಪ್ರಥಮ ತನಿಖೆಗೆ ಇಟ್ಟಿರುತ್ತದೆ. ಆದರಿಂದ ಸದರಿ ವ್ಯಾಜ್ಯ ಕಾಸರಗೋಡು ಊರಿನ ಗೌಡಸಾರಸ್ವತ ಬ್ರಾಹ್ಮಣ ಜಾತಿಯ ಎಲ್ಲಾ ಮೆಂಬರ ಮೇಲೆ ದಾಖಲು ಮಾಡಿದ್ದರಿಂದ ಸದರಿ ಜಾತಿಯವರ ಪೈಕಿ ಸದರಿ ವ್ಯಾಜ್ಯದಲ್ಲಿ ಪಕ್ಷಿಯಾಗಿ ಸೇರಿ ವ್ಯವಹರಿಸಬೇಕೆಂತ ಮನಸುಳ್ಳವರು 1920ನೇ ಇಸವಿ ಜನವರಿ ತಾರೀಕು 30ರಲ್ಲು ಹಗಲು 10 ಗಂಟೆಗೆ ಕಾಸರಗೋಡು ಮುನ್ಸಿಫ್ ಕೋರ್ಟ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

K. Raru Noir,

District Munsif.

Wanted

A Higher Elementary trained mistress on Rs. 15—1—20.

A Secondary Grade trained mistress on Rs. 20—2—30 for the Hindu Girls' School, Karkal, S. K. Applications should reach the undersigned by the 15th of March 1920.

K. Subraya Kamath.

Manager.

ANNOUNCEMENT.

This is to announce that the Governing Body of the Kanara Education Society, Kumta, in its meeting held on 4th instant, revised the scale of pay, promotions &c. in the case of Life-members and permanent Teachers of its institution, the Gibb High School, Kumta, fixing the starting salary of a fresh ordinary graduate to be Rs. 50/– per month (and a higher start in the case of graduates with higher qualifications), the maximum being Rs. 125/– to be attained in 18 years by 9 increments and the Life-members and permanent Teachers having the advantage of the Society's Provident Fund and Pension arrangement and a bonus in case they should qualify themselves for S. T. C., S. T. C. D., B. T. or L. T.

Intending candidates may apply for further particulars to the undersigned.

Kanara Education Society's Office, Kumta.
12th January 1920.

Chairman,
Governing Body,
Kanara Education Society,
Kumta.

WANTED.

A cash-keeper, must be of respectable family. Cash security deposit. Pay according to qualification.

Apply to:—

Peirce Leslie & Co., Ltd.,

Mangalore.

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನಂ ಮಾಘ ಶು| ೩ ಶನಿವಾರದಿಂದ ಮಾಘ ಶು| ೧೦ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಫೆಬ್ರವರಿ ಪ್ರಯಂತರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ.
						ಥ		
31	ಶನಿ	೧೧	[illegible]	ರೋಹಿಣಿ	೧೩.೪೮	೧೭	6·59	6·29
1	ರವಿ	೧೨	೩೩.೪೮	ಮೃಗಶಿರಾ	[illegible]	೧೮	6·59	6·30
2	ಸೋಮ	೧೩	೩೦.೨೮	ಆರ್ದ್ರಾ	[illegible]	೧೯	6·59	6·31
3	ಕುಜ	೧೪	೨೫.೪೦	ಪುನರ್ವಸೂ	೨.೩೩	೨೦	6·59	6·31
4	ಬುಧ	೦	೨೧.೨೮	ಆಶ್ಲೇಷಾ	[illegible]	೨೧	6·59	6·31
5	ಗುರು	೧	೧೮.೨೬	ಮಘಾ	೫೬.೧೪	೨೨	6·58	6·32
6	ಶುಕ್ರ	೨	೧೬.೧೬	ಪುಬ್ಬಾ	೫೭.೧೬	೨೩	6·58	6·32

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಜನವರಿ)

Date ತಾರೀಖು	Temperature. ಉಷ್ಣ (ಕಾವು) Maximum ಅಧಿಕಾಂಶ	Minimum ಅಲ್ಪಾಂಶ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ
23	91—8	68—7	—	...
24	89—6	70—2	—	...
25	89—3	72—1	—	...
26	90—0	71—5	—	...
27	88—5	73—7	—	...
28	90—6	76—0	—	—
29	87—8	74—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಹೊಸ ಮಸ್ಸಿ ಅಕ್ಕಿಮುಡಿ ೧ಕ್ಕೆ	...	9—14	10—8
ಗುಡ್ಡ ,, ,,	...	9—4	9—10
ಹೊಸ ದಾರಿ ಮುಡಿ ೧ಕ್ಕೆ	...	9—0	9—6
ಅವ್ವಲ್ ಬೆಳ್ತಿಗೆ ,,	...	11—8	12—4
ಗುಡ್ಡ ಬೆಳ್ತಿಗೆ ,, ,,	...	10—4	10—8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	15—0	16—0
ಗೋಧಿ ಗೋಣಿ ೧ಕ್ಕೆ	...	25—8	26—0
ಹುರುಳಿ ಗೋಣಿ ೧ಕ್ಕೆ	...	15—4	16—0
ಕಡಲೆ ಗೋಣಿ ೧ಕ್ಕೆ	...	22—8	23—0
ತೊಗರಿ ಗೋಣಿ ೧ಕ್ಕೆ	...	20—0	27—0
ತೊಗರಿಬೇಳೆ ಗೋಣಿ ೧ಕ್ಕೆ	...	26—0	31—0
ಉದ್ದು ಗೋಣಿ ೧ಕ್ಕೆ	...	22—8	23—0
ಹೆಸರು ಗೋಣಿ ೧ಕ್ಕೆ	...	22—8	23—0
ಊರು ಬೆಲ್ಲ ಖಂಡಿ ೧ಕ್ಕೆ	...	75—0	80—0
ಉಪ್ಪು ಗೋಣಿ ೧ಕ್ಕೆ	...	4—0	4—6
ಮೆಣಸು ಖಂಡಿ ೧ಕ್ಕೆ	...	145—0	155—0
ಮೆಣಸು ಹಿಂಡಿ ಖಂಡಿ ೧ಕ್ಕೆ	...	36—0	37—0
ಎಳ್ಳಿಂಡಿ ಖಂಡಿ ೧ಕ್ಕೆ	...	61—4	62—8
ಮೆಣಸು ಎಣ್ಣೆ ಮುಡಿ ೧ಕ್ಕೆ	...	11—8	11—12
ಎಳ್ಳೆಣ್ಣೆ ಮುಡಿ ೧ಕ್ಕೆ	...	11—12	11—14
ಭರುಣೆಎಣ್ಣೆ ಪಟ್ಟಿಗೆ ೧ಕ್ಕೆ	...	9—3	9—15
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	9—10	9—13
ಮೆಣಸಿನ ಕಾಯಿ ಮುಡಿ ೧ಕ್ಕೆ	...	10—4	11—0
ಸಾಸಿವೆ ಮುಡಿ ೧ಕ್ಕೆ	...	14—8	15—0
ಕೊತ್ತಂಬರಿ ಮುಡಿ ೧ಕ್ಕೆ	...	5—10	5—12
ಕಾಫಿ ಖಂಡಿ ೧ಕ್ಕೆ	...	315—0	340—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	...	110—0	115—0
ಹಳೆ ಶಾಲುಮೇಣಸು ಖಂಡಿ ೧ಕ್ಕೆ	...	205—0	210—0
ಯಾಲಕ್ಕಿ ಮಣ ೧ಕ್ಕೆ	...	20—0	25—0
ಗೇರುಬೀಜ ಮುಡಿ ೧ಕ್ಕೆ	...	5—8	—
ಕಬ್ಬಿಣ ಖಂಡಿ ೧ಕ್ಕೆ	...	100—0	120—0
ತಾಂಬ್ರ ತಗಡು ಮಣ ೧ಕ್ಕೆ	...	30—0	32—0
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	40—0	44—0
ಚೀನಾ ಬೆಲ್ಲ ಸೇರು ೧ಕ್ಕೆ	...	31—8	
ಹಿತ್ತಾಳೆ ತಗಡು ಮಣ ೧ಕ್ಕೆ	...	28—0	

"ವೈದ್ಯಾಮೃತ ಮಂದಿರಂ"

[illegible] ಆಯುರ್ವೇದ ವೈದ್ಯ[illegible] ಶಾಸ್ತ್ರ[illegible] ಎಲ್ಲಾ ತೈಲಗಳೂ, [illegible]ಗಳೂ, ಕಷಾಯಗಳೂ, ದ್ರವ [illegible], [illegible]ಗಳೂ, [illegible]ಗಳೂ, ಮಾತ್ರೆಗಳು ಇತ್ಯಾದಿ [illegible] ದೇಶಗಳಿಂದ ತರಿಸಿದ ಕಸ್ತೂರಿ, [illegible], ಕುಂಕುಮ[illegible] ಮುಂತಾದವುಗಳೂ ಸುಲಭವಾದ [illegible] ದೊರೆಯುತ್ತವೆ. ಪತ್ರಕ್ಕೆ ರೋಗದ ಪ್ರಕೃತಿಯನ್ನು [illegible]ವಾಗಿ ಬರೆದು ತಿಳಿಸಿದರೆ ಅಗತ್ಯವಾದ ಔಷಧಗಳನ್ನು ಅನುಪಾನ [illegible] ಸಮೇತ ವಿ. ಪಿ. ಮೂಲಕ ಕಳುಹಿಸುವ.

ವಿಳಾಸ:— [illegible] ಅಂಡ್ ಬ್ರದರ್ಸ್,

ವೈದ್ಯಾಮೃತ ಮಂದಿರಂ,

[illegible]ಶ್ವರ, ದ. ಕನ್ನಡ.

ಕರ್ಪೂರ [illegible] ರು

ಸುವಾಸಿತ! ಊದು ಬತ್ತಿಗಳು. ಮನೋರಂಜಕ!!

[illegible] ಬತ್ತಿ, ಸೇರಿಗೆ ರೂ. [illegible] | ಘಸುಗು ಬತ್ತಿ ಸೇರು ರೂ. [illegible]
[illegible] ಬತ್ತಿ „ „ | ಅರಗಿನ ಕೋಲೆ ಒಳ್ಳೆ „ [illegible]
[illegible] ಬತ್ತಿ „ „ | ಗಂಧದ ಬಳ್ಳಿ „ „ [illegible]
[illegible] ಬತ್ತಿ „ „

ಅತ್ತರುಗಳು:— ಗುಲಾಬ್, ಅಂಬರ್, [illegible], ಕೋಲೆ „ „ [illegible]

ಸೆಂಟುಗಳು:— [illegible], ಗುಲಾಬಿ, [illegible] (ವಿಲಾಯತಿ, ಅಮೇರಿಕ, [illegible] ತಯಾರಿಸಿದ್ದು) ½ [illegible] ಬಾಟ್ಲಿ ರೂ. [illegible]

[illegible] ಅಥವಾ ಸುಗಂಧ ದೂಪ, ಸುಗಂಧ [illegible] ಪುಡಿ, ಪಾಲುಮಡಿ, [illegible] ಕೊರೆದ ಹಚ್ಚಿ ಗಳ್ಳೆ ರೂ. [illegible]

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,

ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಅತ್ಯುಪಯುಕ್ತವಾದ ಪುಸ್ತಕಗಳು.

ಕನ್ನಡ ನಾವೆಲ್‌ಗಳು.

	ರೂ.	ಆ.	ಪೈ.
ಅಜಿತಕುಮಾರ	0	5	0
ರಮಾಮಾಧವ	0	6	0
ಕುಮುದಾ	0	8	0
ಮಹಾರಾಣಿ ಗೃಹಶೀಲೆ	0	3	0
ಶೇಕ್ಷಿ ನಾರಾಯಣರಾವ್	0	4	0
ಚಂದ್ರಗುಪ್ತ ಚಕ್ರವರ್ತಿ	1	0	0
ಬಾಲಿಕಾ ನೀತಿಮಾಲಿಕೆ	0	2	0
ರಾಜಭಕ್ತಿಸಾರ	0	2	0
ಮುಕ್ತಾಹಾರ	0	2	0
ಹಿಂದೂ ವ್ರತವಿವೇಕ...	0	10	0

ದಾಸರ ಪದಗಳು.

	ರೂ.	ಆ.	ಪೈ.
ಪುರಂಧರದಾಸರ ಪದಗಳು ಭಾಗ 1 ...	0	8	0
„ ಭಾಗ 2 ...	0	8	0
ಉದಯರಾಗ	0	4	0
ತುಲಸೀ ಸಂಕೀರ್ತನೆ ಪದಗಳು	0	2	0
ಲಕ್ಷ್ಮೀ ಶೋಭನ ಹಾಡು	0	2	0
ಹರಿನಾಮ ಸಂಕೀರ್ತನ ಪದಗಳು ...	0	5	0

ಫೋರ್ಮುಗಳು ಇತ್ಯಾದಿ.

		ರೂ.	ಆ.	ಪೈ.
ಕೋರ್ಟು ಫೋರ್ಮುಗಳು	100ಕ್ಕೆ ...	0	14	0
ಗೇಣಿಚೀಟು „	„ ...	0	14	0
ಪರ್ಮಿಟು „	„ ...	0	14	0
ಡಿಮಾಂಡ ನೋಟು „	„ ...	0	10	0
ಕುರಿಪಂಡಿನ ರಶೀದಿ ಫೋರ್ಮು	„ ...	0	12	0
„ „	50ಕ್ಕೆ ...	0	7	0
„ „	25ಕ್ಕೆ ...	0	4	0
ಚೆಕ್‌ರೋಲ್ ಪುಸ್ತಕಗಳು	100 ಪುಟ ...	2	0	0
„ „	50 „ ...	1	4	0
„ „	25 „ ...	0	12	0
ಶಾಲಾ ಹುಡುಗರ ಹಾಜರು ರಿಜಿಸ್ಟ್ರಿ	100 „ ...	2	0	0
„ „	50 „ ...	1	4	0
„ „	25 „ ...	0	12	0
ಶಾಲಾ ಉಪಾಧ್ಯಾಯರ ಹಾಜರು ರಿಜಿಸ್ತ್ರಿ	25 ಪುಟ	0	12	0

ಇವುಗಳಲ್ಲದೆ ಅಂಗಡಿ, ಭಂಡಸಾಲೆ ಸಾವಕಾರರಿಗೆ ಅಗತ್ಯರುವ ವರ್ಗ-ಖಾಳಿಗ ಪುಸ್ತಕಗಳೂ ಶಾಲಾ ವಿದ್ಯಾರ್ಥಿಗಳ ಬಗ್ಗೆ ತಯಾರಿಸಿದ ಎಕ್ಸರಸೈಜ ಡ್ರಾಯಿಂಗ್ ವಗೈರೆ ಪುಸ್ತಕಗಳೂ ತಯಾರಿವೆ.

ವಿಳಾಸ:— ಮ್ಯಾನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಕನ್ನಡ ಪ್ರಬಂಧ ಲೇಖನಾ ಕ್ರಮವನ್ನು ಕಲಿಸುವ ವಿದ್ಯಾರ್ಥಿಗಳ ಕೈಪಿಡಿ..

ಮ. ರಾ. ಎಂ. [illegible] ಬಿ. ಎ., ಎಲ್. ಟಿ. ಯವರಿಂದ ರಚಿಸಲ್ಪಟ್ಟ

ಕನ್ನಡ ಮಾದರಿ ಉಪನ್ಯಾಸಗಳು

(ಮೂರು ಭಾಗಗಳಲ್ಲಿ)

ಒಂದನೆಯ ಭಾಗ—ಲೋವರ್ ಸೆಕೆಂಡರಿ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 6. ಎರಡನೆಯ ಭಾಗ—ಹೈಸ್ಕೂಲ್ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 6. ಮೂರನೆಯ ಭಾಗ—ಕಾಲೇಜು ಕ್ಲಾಸು ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 12.

ಪ್ರತಿಗಳು ಸಿಗುವ ವಿಳಾಸ:—

ಮ್ಯಾನೇಜರ್,

ಶಾರದಾ ಛಾಪಖಾನೆ, ಮಂಗಳೂರು.

ಸುಲಭ ಕ್ರಯ!! [illegible] !!!

ರೋಯಲ್ ಇಂಡಿಯನ್ ಬಾಂ.

(ಅಮೃತಾಂಜನ)

ಇದೇ ಟ್ರೇಡ್ ಗುರುತನ್ನು ಲಕ್ಷ್ಯದಲ್ಲಿಡಿರಿ. ಒಂದರ ಕ್ರಯ ಆಣೆ ೮.

ROYAL INDIAN BALM — TRADE MARK — MANORA & Co. BOMBAY

[illegible] ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು:— ಇದರ ಉಪಯೋಗದಿಂದ ತಲೆನೋವು, ಶಿಡಿ, ಶಿರೋಭಾರ, ಗಂಟು, ಗಂಟಿನ ನೋವು, ಎದೆಶೀತ, ಎದೆನೋವು, ಉಳುಕುವದು, ವಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಘಾಯ, ಇಸುಬು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮುದ್ರ ಪ್ರಯಾಣ, ರೈಲ್ವೆ ಮುಸಾಫರಿ ಯಾ ಹಳ್ಳಿಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. [illegible]; 24 ಬಾಟ್ಲಿಗೆ ರೂ. [illegible]; 50 ಬಾಟ್ಲಿಗೆ ರೂ. [illegible] ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ [illegible]; ದಂತಮಂಜನ ಕಜ್ಜಿ ಮುಲಾಮು ಆಣೆ [illegible]; ಹೆಯರ್ ಆಯಿಲ್, ಜೇಳು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ಸಾತ ಮುಂಬಯಿಂದ ರಫ್ತಾಗತಕ್ಕ ವಿಲಾಯತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ವಸ್ತುಗಳನ್ನೂ ಅದಷ್ಟು ಮಿತ್ತವ್ಯಯ ಕ್ರಮದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ವಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ [illegible] ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬಳ್ಳಿ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್‌ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಪೈಮೆಟಂ, ಪನ್ನೀರು, ವಿಲಾಯತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕೆ ಸುಕರವಾದ ತೈಲ ಇವೇ ಮೊದಲಾದ [illegible] ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ರಸಗನ್ನಡಿ, ಚೀನಾಪಾತ್ರೆ, ವಾರ್ನಿಸ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ದಂತ ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಸ್, ಕಾಪಿಂಗ್‌ಪ್ರೆಸ್, ಮತ್ತು ಯಂತ್ರ, ಲಿತೋಗ್ರಾಫಿಯಂತ್ರ, ಲಿತೋ ಪ್ರೆಸ್‌ಯಂತ್ರ, ಮತ್ತು ನಾನಾ ವಿಧ ಯಂತ್ರ, ಯಂತ್ರಿಪೌಡರು, ಕಾಗದಕ್ಕೆ ಮೆರುಗು, ಪ್ಲೇಟುಬೋರ್ಡು, ಫೋಟೋ ಮುಂತಾದ [illegible] ವಿಷಯಗಳು. ಒಬ್ಬರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕ ಸಿದ್ಧಂತಯೇ. ಬೆಲೆ ರೂ. [illegible].

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,

ನಂ. 12 ಟ್ಯಾಂಕ್‌ರೋಡು,

ಬೆಂಗಳೂರು ಸಿಟಿ.

ಉಚಿತ. [illegible] ಸೆಂಟ್ ಬಾಟ್ಲಿಗಳು. ಉಚಿತ.

ಮೇಲಾದ ಫೌಂಟನ್ ಪೆನ್.



ಈ ನಕ್ಷೆಯಲ್ಲಿ ಕಂಡ ಪೇನಾಗಳು ಸೀಮೆಯಲ್ಲಿ ಫೌಂಟನ್ ಪೇನಾ ತಯಾರುಮಾಡುವದರಲ್ಲಿ ಪ್ರಖ್ಯಾತಿ ಹೊಂದಿದ ಕಂಪನಿಯವರಿಂದ ತಯಾರಾಗಿ ಬಂದರುತ್ತೆ. [illegible] ಯುವ ಪಸಿದ್ಧವಾದ ಕ್ಯಾರೆಟ್ ಗೋಲ್ಡಿನ ಮುಳ್ಳು ಹಾಕಿರುತ್ತೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತಿನಂತೆ ಸ್ಪಷ್ಟವಾಗಿ ಬರೆಯುವದು. ಈ ಪೇನಾಗಳು ಪ್ರಖ್ಯಾತಿ ಹೊಂದುವದಕ್ಕಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ [illegible] ಡಜನ್ ರೋಸ್ ಸುಗಂಧ ದ್ರವ್ಯದ (Best Perfume) ಬಾಟ್ಲಿಗಳು ಬಾಕ್ಸ್ ಸಹಿತ ಬಹುಮಾನವಾಗಿ ಕೊಡಲ್ಪಡುತ್ತೆ. ತ್ವರೆಮಾಡಿರಿ.

ಬಹುಮಾನ ಸಹಿತ ಕ್ರಯ ಪೇನಾ ಒಕ್ಕೆ ರೂ. [illegible].

ನಮ್ಮ ವಿಳಾಸ:— ಮಹರಾಟ ಟ್ರೇಡಿಂಗ್ ಕಂಪೆನಿ,

[illegible] ತಿರುಪಳ್ಳಿ ಬೀದಿ, ಮದರಾಸ್.

ಯೌರೋಪಿಯನ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸಾಂಡಾ ಆಯಿಲ್ (ನರಗಳ ಶಕ್ತಿವರ್ಧಕ ತೈಲ.)

ಅನೇಕರು ಬಾಲ್ಯದಲ್ಲಿ ಕೆಟ್ಟ ಅಟಗಳಿಂದ ದೇಹವನ್ನು ಕೆಡಿಸಿಕೊಂಡು ತಮಗಿರುವ ವ್ಯಾಧಿಯನ್ನು ಡಾಕ್ಟರುಗಳಲ್ಲಿ ಹೇಳಿ ಸರಿಯಾದ ಔಷಧವನ್ನು ಪಡೆಯದೇ ಪ್ರಸಂಚದ ಸುಖವನ್ನು ಮರೆತುಬಿಡುವದು. ಇಂಥಾವರುಗಳ ಉಪಯೋಗಕ್ಕೋಸ್ಕರವಾಗಿ ಈ ನಪುಂಸಕ [illegible] ತೈಲವನ್ನು ತಯಾರಿಸಿರುವರು. ಇವನ್ನು [illegible] ಒಂದು ವಾರ [illegible]ದರಿಂದ ಗುಣವಾಗಿ, ಕಳೆದುಕೊಂಡ ಶಕ್ತಿಯನ್ನು ಪುನಃ ಕೊಡುವದು. ಕ್ರಯ ಸೀಸೆ ಒಂದರ ರೂ. [illegible]

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ,

[illegible] ತಿರುಪಳ್ಳಿ ಬೀದಿ ಮದರಾಸು.

[illegible] 1920ನೇ ಇಸವಿಯ ಸ್ಕೂಲುಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
[illegible]	0	6	0	[illegible]	0	2	0
[illegible]	0	6	0	ಗುಣಾದರ್ಶ	0	6	0
[illegible]	0	12	0	[illegible] ಭಾಗ I	0	4	0
[illegible] ಭಾಗ 1	0	8	0	„ II	0	3	0
ಅಕ್ಬರ್ ಚರಿತ್ರೆ	1	1	0	„ III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
[illegible] ಚರಿತ್ರೆ I	0	8	6	[illegible]	0	6	0
				[illegible]	0	1	6
[illegible]	0	6	0	[illegible]	0	8	0
ಸಾವಿತ್ರೀ ಚರಿತ್ರೆ	0	2	3	[illegible]	0	6	0
ರಮಾನಂದ	0	10	0	[illegible]	2	0	0
ಸುವ್ರತ	0	13	0	[illegible]	0	12	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಸಾರ	0	14	0	ಹಿಂದೂ ವ್ರತವಿವೇಕ	0	10	[illegible]
ಜ್ಯೋತಿಶ್ಶಾಸ್ತ್ರ	1	0	0	[illegible]	0	12	6
ಪ್ರಹ್ಲಾದ	0	2	0	[illegible]	0	8	0
ಧ್ರುವ	0	2	0	[illegible] ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ [illegible]ನೇ ಇಸವಿಯ [illegible]ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ. [illegible]ನೇ ಇಸವಿಯಿಂದ ತಾ. [illegible]ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ [illegible]ನೇ ಇಸವಿ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ-ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂಬ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಮೂವತ್ತು [illegible] ಅನುಭವಕ್ಕೆ ಬಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯಕವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇದೀ [illegible] ಬಳಕೆ ಪೇಶಕ್ಕೆಲ್ಲ ರೋಗಿ ರೋಗಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ [illegible] ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ನಮ್ಮ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು, ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಆದೂರು ಬೇಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಮುಲಕ್ಷ್ಯವಾದದ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹವಳರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ); ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನ್ನಸ, ಮೊದಲಾದ ರೋಗವು, ಕಣ್ಣಿನೊಳಗೆ ಬಿಳುವ ಬೀಳುವಿಕೆ ಮತ್ತು ಕಣ್ಣುನೋವು, ವಮ್ಮು, ಕೆಮ್ಮು, ಶ್ವಾಸ, ಅಜೀರ್ಣ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರ್ಧಲೆಶೂಲಿ, ನರಶೂಲಿ, ವಾತಶೂಲಿ, [illegible], ಗುಪ್ತಸ್ಥಾನ [illegible], ಹುರಳು ಕಲ್ಲು, ಗಜಗರ್ಣ, [illegible], ಇಸಬು, ಘಾಯಪ್ರವಾ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗಮ್ಮು, ಅತ್ತಿ, ಮುಟ್ಟಿಹೋಗ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಸಣ್ಣ ಕೂಸುಗಳಿಗೆ ಪೈಪ್ಪಂಗಡ ನಹ ತಿಳಿಯದ ಇಷ ಅನೇಕ ರೋಗಗಳು, ಚೇಳು ಮತ್ತು ಸರ್ಪವಂತ ಇದರ ಹೊರತು ಇನ್ನೂ ಅನೇಕ ರೋಗಗಳು ಬಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೂಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟಲಿ ಒಂದಕ್ಕೆ [illegible] ರೂಪಾಯಿ. ನಮೂನ ಉದ್ದೇಶ [illegible] ಆಣೆ. ಹೊರದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. [illegible]ರಿಂದ [illegible] ಬಾಟಲಿಗಳ ವರೆಗೆ ಕಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದು ಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೇಟೆ ಹೊರಟರೆ ಪತನ ತಕ್ಕೊಳ್ಳುತ್ತೇವೆ. ಮತ್ತು ಹಚ್ಚಿನ ನಾಟಿ ಇ [illegible] ಬೇಕಾದಲ್ಲಿ ಪೋಸ್ಟು ತಿಕೇಟು ಬಿಗಕ ಇರದ ಹೊರತು ದೊರೆಯುವಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನ ಭಾಷೆಗಳಲ್ಲಿ ಛಾಪಿಸಿದ್ದುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಕೊಡಬಹುದು. ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟು ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಶೇಖ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,

33 ಹೆಡ್ ಆಫೀಸ್ [illegible], (ಬೆಳಗಾಂವ).

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಲಂಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಸಾವಿರಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಪ್ಲೇಗ್‌ಮಾರಿಪಾನಕ. ಪ್ಲೇಗ್‌ಮಾರಿ ಪಾನಕವನ್ನು ಪ್ರತಿನಿತ್ಯವೂ ಸೇವಿಸ ಬೇಕಾದ ಪ್ರಕಾರ ತೆಗೆದುಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ. ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1—4—0 ಟಪ್ಪಾಲು ಖರ್ಚು ಆಣೆ 12. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ಶತಧೌತ ಘೃತಗಳೆಂಬ ಈ ಮುಲಾಮು ಪ್ಲೇಗ್ ಗಡ್ಡೆ ಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳ್ಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 14 ಟಪ್ಪಾಲು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಹಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ ವಿ ಎಸ್. ಎ ಎಮ್ ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ—"ಪಂಡಿಟ್", ಮದರಾಸ್.

ಆತಂಕನಿಗ್ರಹ ಗುಳಿಗೆಗಳು.

ಈ ಗುಳಿಗೆಗಳು ಜೀರ್ಣಶಕ್ತಿಯನ್ನು ಕೊಡುತ್ತೆ, ರಕ್ತವನ್ನು ಶುದ್ಧಿ ಮಾಡಿ ಪುಷ್ಟಿಪಡಿಸುತ್ತೆ, ಸ್ನಾಯುಗಳನ್ನು ಬಲಪಡಿಸುತ್ತೆ, ಸ್ಮರಣೆಂದ್ರಿಯವನ್ನು ಸರಿಪಡಿಸುತ್ತೆ. 32 ಗುಳಿಗೆಗಳಿಗೆ ರೂ. 1—0—0

ಅಮೃತಪ್ರಾಶ ಅವಲೇಹ.

ಇದು ರಕ್ತವನ್ನು ಶುದ್ಧಿಮಾಡುತ್ತೆ, ಸ್ಮರಣೆಂದ್ರಿಯ, ಧಾತುವನ್ನು ಮುಂತಾದವುಗಳನ್ನು ಹೆಚ್ಚಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತೆ. ಶರೀರದಲ್ಲಿರುವ ಅಧಿಕವಾದ ಉಷ್ಣವನ್ನು ಕಡಿಮೆಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಕೆಮ್ಮು, ಕ್ಷಯ, ಅತಿಸಾರ ಕರೆನೋವು ಎದೆನೋವು ಮುಂತಾದವುಗಳನ್ನು ವಾಸಿಮಾಡುತ್ತೆ. 20 ತೊಲೆದ ಡಬ್ಬಿಗೆ ರೂ. 2—0—0

ಕಾಮಶಾಸ್ತ್ರ

ದಕ್ಷಿ ಸಹಿತವಾಗಿ ಬರೆದು ಕೇಳುವವರಿಗೆ ಈ ಪುಸ್ತಕವು ನಮಗೆ ಉಚಿತ; ಬಹುಮಾನ,— ಪಾರಿತೋಷಕ !!!

ವಿಳಾಸ—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸ್.

Local Agents **Raphael & Co.,**
Brito Buildings,
Hampankatta, MANGALORE.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕೋಪಯೋಗ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದಲ್ಲಿರುವ ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್ಸ್, ಗೋವಾ, ಫೀಜಿ ಐಲೆಂಡ್, ಆಫ್ರಿಕಾ ಮೊದಲಾದ ದೇಶದವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಈ ಮಾತ್ರೆಗಳ ಒಂದು ಲೋಕೋಪಯೋಗ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮತ್ತು ವಾಡಿಕೆ ವೈದ್ಯರ ಸಹಾಯವನ್ನು ಅಪೇಕ್ಷಿಸಬೇಕಾದ್ದು ಅಗತ್ಯವಿರುವುದಿಲ್ಲ.

ಶೀತ, ಶೀತಜ್ವರ, ಅಜೀರ್ಣ, ವಾತ್ಸರ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಹೆರಿಗೆಯಾದ ಬಳಿಕ ಉಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅತ್ಯಾಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರಿಕೆ ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗ್)—ಅಕ್ಕಪಕ್ಕದಲ್ಲಿ ಪ್ಲೇಗು ರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ... ಲಕ್ಷ್ಮೀವಿಲಾಸ ರಸದ ಸೇವನೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸಂಪೂರ್ಣವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾನೇ ಹೇಳುವ ... ಪಾಳ್ಯದ ಜ್ವರಗಳು, ಸನ್ನಿಪಾತ ಇವುಗಳು ಶೀಘ್ರ ಗುಣವಾಗುತ್ತವೆ. ಸೀಸೆಗೆ ರೂ 1 ರಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ಶ್ವೇತಕುಷ್ಠ, ಕಜ್ಜಿ ಶಮನಗೊಳಿಸುತ್ತದೆ. ... ಸೀಸೆಗೆ 8 ಆಣೆ ... ಕ್ಕೆ ಒಂದು ಇನಾಮು

ನೈತ್ರಾನಂದಾಂಜನ—ನೇತ್ರದ ಬೇನೆಗಳು ... ಪೊರೆ, ... ಆದಿಯಾದ ಬೇನೆಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1 ರಕ್ಕೆ ಒಂದು ಇನಾಮು

ಬಾಲಸುಧೋದಯ—ಮಕ್ಕಳಿಗೆ ಬಲಹೀನತೆ ... ಮಂದ, ವಾಂತಿ, ಅಜೀರ್ಣ, ಜ್ವರ, ಕೆಮ್ಮು, ... ಸೀಸೆಗೆ ಆಣೆ 12 ... ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ವಿಶ್ವಾಸಾರ್ಹ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸ ಲಾಗುವ ಈ ಮುರಬ್ಬಾ ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯ ನಾಶದಿಂದ ಇದ್ದರೂ ಸ್ಮರಣೇಂದ್ರಿಯವಾದರೂ, ಮತ್ತು ಶರೀರದಿಂದ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ ಹಸಿವು ಇಲ್ಲದಿದ್ದರೂ, ವಿಚಾರಶಕ್ತಿಯು ಸರಿಯಾಗಿ ಇಲ್ಲದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರೀ ಮುರಬ್ಬದ ಸೇವನೆಯಿಂದ ಗುಣವಾಗಿ ಶರೀರವನ್ನು ಪುಷ್ಟಿಗೊಳಿಸುವುದು, ಬುದ್ಧಿಗೆ—ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟದನೋವು ಸ್ವಲ್ಪವಾದರೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ಸರ್ಟಿಫಿಕೇಟುಗಳು ಬಂದಿವೆ. ... ಕಲ್ಕತ್ತಾ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪಟ್ಟಣಗಳಿಂದ ಯೋಗ್ಯತಾಪತ್ರಗಳು ಬಂದಿವೆ. ... ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ... ಇದನ್ನು ಯಾರಾದರೂ ಸುಳ್ಳು ಎಂದು ನಿರ್ಧರಿಸಿದರೆ ... ಒಂದು ಸಾವಿರ ರೂಪಾಯಿ ಬಹುಮಾನ ಕೊಡಲ್ಪಡುವುದು.

ಒಂದು ಡಬ್ಬಿ ಮುರಬ್ಬವನ್ನು ಕೆಲ ದಿವಸಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. 3-4 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು. ಕ್ರಯ ಒಂದು ಡಬ್ಬಿಗೆ ರೂಪಾಯಿ 2.

"ಈಗ ಘಾಂಗಿರು ಬಾಜಾರ ಕೆಟ್ಟಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ 2 ಯಾ 3 ಡಬ್ಬಿಗಳಿಗೆ 12 ಆಣೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ
ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ಪಿತ್ತ, ಕಫ, ಜಿಗತ, ಉಳುಕು, ಚಳಿಯು, ತಲೆನೋವು, ಸೊಂಟನೋವು, ಹೊಟ್ಟೆನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಗಿರ ಕ್ರಯವು ೦—೬—೦, ಒಂದು ಡಜನ್ ಬಾಟ್ಲಿಗಳಿಗೆ ರೂ ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಗುರು, ಚಿಬ್ಬು, ದದ್ದು, ಹುಳಕಡ್ಡಿ, ನವೆ, ಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳನ್ನು ಬೇಗನೆ ವಾಸಿ ಮಾಡುವುದರಲ್ಲಿ ಇದು ನಿಸ್ಸಂಶಯವಾಗಿ ಇದರಿಂದ ನಿವಾರಣೆ ಯಾಗುವವು. ಡಬ್ಬಿ ಗಿರ ೦—೫—೦ ಒಂದು ಡಜನಿಗೆ ರೂ ೩—೮—೦

ನಮ್ಮ ಔಷಧಗಳ ಗುಣಾತಿಶಯಕ್ಕೆ ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಪ್ರಶಂಸಾಪತ್ರಗಳು ಬಂದಿರುವವು. ಹಾಸ್ತಿಯಾಗಿ ಕೊಂಡು ಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವುದು. ಕ್ಯಾಟಲಾಗಿಗೂ ವಿಶೇಷ ವಿವರಕ್ಕೂ ಬರೆಯಿರಿ.

ಡಿ. ಮಹ್ಮ ನೇಜರ್—ಶ್ರೀ ದೇವೀಪ್ರಸಾದ ಕಂಪೆನಿ, ... ಪೇಟೆ, ...

The Indian Tooth-ache Specific.
ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವುದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಕಿಳಿತ, ಬಾವು, ರಕ್ತ ಬೀಳು ಇತ್ಯಾದಿ ಖಂಡಿತವಾಗಿ ಗುಣವಾಗುತ್ತವೆ. ... ಹಲ್ಲುಗಳಿಂದ ಕಠಿಣ ನೋವು ... ಇದು ಒಂದು ದಿವ್ಯ ಔಷಧ ... ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಸೀಸೆ ಒಂದಕ್ಕೆ ಕ್ರಯ ರೂ 1—4—0 ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ 12 ಸೀಸೆ ತರಿಸಿಕೊಂಡರೆ ರೂ 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	0—10—0	ಒಂದು ಪೌಂಡಿಗೆ
II	ಕ್ಲಾಸ್	0—8—0	
III	ಕ್ಲಾಸ್	0—6—0	

ಹೊಟೇಲುಗಳಿಗೂ ವರ್ತಕರಿಗೂ ಧಾರಾಳವಾಗಿ ಕಮಿಶನು ಕೊಡಲಾಗುವುದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವದು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒಂದು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ 5—8—0



ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ್‌ಪೇಟೆ, ಮದ್ರಾಸ್

ಕೂಡಲೇ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲೆಂಡರ್.

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ಇಂತಿ —

ವಿ ಎ ಎಸ್. ಪಾಣಿ ಕಂಪೆನಿ,
ಸಾಹುಕಾರ್ ಪೇಟೆ, ಮದ್ರಾಸು

NETRANAND SAREES.

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಸೀರೆಗಳು! ಬಹಳ ಕಮ್ಮಿ ಕ್ರಯ

ಎಲ್ಲಾ ಬಣ್ಣಗಳ ಛಾಪ ಹೊಂದಿ "ನೇತ್ರಾನಂದ" ಎಂಬ ಸೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನಾಸಿಕ ಕೆಂಪು (Congo Red) ಹಳದಿ ವ ಮತ್ತು ಇತರ ಬಣ್ಣಗಳೂ ಕಡಿಮೆ ಕ್ರಯದಲ್ಲಿ ದೊರಕುವವು.

ವಿಶೇಷ ವಿವರಕ್ಕಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಸೀತಾರಾಮವಿಠ್ಠಲ ಕಂಪೆನಿ,
ಮಿಲ್ಲ್ಸ್ ಏಜಂಟರು ಮರ್ಚಂಟ್ಸ್, ಹಂಪನಕಟ್ಟೆ, ಮಂಗಳೂರು.

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಜೀವನಾಮೃತವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕೆಮ್ಮು, ರಕ್ತವಾಂತಿ, ಹೃದಯದ ದುರ್ಬಲತೆ, ಲಿವರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ನ ಎಲ್ಲ ತರದ ದುರ್ಬಲತೆಯು ... ಗುಣಮಾಡುವದು. ಇನ್ನು ಯಂಥಾ ಜ್ವರಕ್ಕೂ, ಅಶಕ್ತ ಜನರಿಗೂ, ... ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟಿ. ಖ. ವಗೈರೆ ಬೇರೆ.

2. ವಿಜಯಸಂಜೀವಿನಿಸ್ಸೆಲ. ಕಾಲತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮ ಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶೋರನುರ, (ಮಲೆಬಾರ).

... ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ತಗಡಿನಿಂದ ತಯಾರಾದವುಗಳು. ಮಕ್ಕಳ ಆಟಿಗೆಗೆ ಯೋಗ್ಯವಾದಂಥ ... ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೨—೦—೦. ಮಧ್ಯಮ ತರದ ಸೆಟ್ಟು ೧ಕ್ಕೆ ರೂ. ೩—೬—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೫—೦—೦.
ರೇಷ್ಮೆ ಸಾಮಾನು ವಗೈರೆ ಕೆಟಲಾಗು ಬೇಕಾದವರಿಗೆ ಇನಾಮಾಗಿ ಕಳಿಸಲಾಗುವದು.
ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS— Siromani Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ಅಪೂರ್ವ ಸಂದರ್ಭ.

ಅತ್ಯಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದುಬಾರದವರಾದರೂ ಕೂಡಾ ಹಳ್ಳಿಗಳಲ್ಲಾದರೂ ಪಟ್ಟಣಗಳಲ್ಲಾದರೂ ಚಲೋ ಜೀವನ ದುಡಿಯಲಿಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು ಅತ್ಯಾಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ಮಾಹಿತಿ ಪತ್ರಗಳನ್ನಪೇಕ್ಷಿಸುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ನಮಗೆ ಬರೆದಲ್ಲಿ ತಿಳಿಸಿ ಕೊಡುವೆವು.

M. Anantha Prabhu,
The Tailoring House and,
School of Scientific Tailor's Cutting,
MANGALORE, SOUTH KANARA.

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಛಾಪೆ.

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ ಮತ್ತು ಎಲ್ಲರಲ್ಲಿಯೂ ಬಳಕೆಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಪದ್ಯ ಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ, ಶಾಸ್ತ್ರರೀತಿಯಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು, ಅಲಂಕಾರಗಳು, ಸ್ವರಜತಿಗಳು, ವರ್ಣಗಳು, ತ್ಯಾಗಯ್ಯರ್, ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ತೆಲುಗು ಕೀರ್ತನೆಗಳು ಸಹ ಸ್ವರಸಹಿತ ಕೊಟ್ಟಿರುತ್ತದೆ. ಈ ಛಾಪೆಯಲ್ಲಿ ಎರಡನೆ ಛಾಪೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳಿವೆ. ಪುಟಗಳು ೯೫. ಬೆಲೆ ೧೦ ಆಣೆ.

ರಾಮಾಯಣ ಸಂಗ್ರಹ ಬಾಲಕಾಂಡ ೦—೬—೦. ಸುಭದ್ರೆ ೦—೬—೦.
ವಿಳಾಸ:—

ಎಚ್. ಎಸ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.
ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.
ವಿಳಾಸ:—

ರಾಜವೈದ್ಯ ನಾರಾಯಣಜೀ ಕೇಶವಜೀ,
೨೭. ಜೈನಾಬಜಾರು ರೋಡು, ಮದರಾಸು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎನ್.ಎನ್ ರೆಡಿ ಸೇಫ್ಟಿ ರೇಜರು ಮತ್ತು ಪಸ್ತೂರರ ಎಂಟಿಟೀಪ್ ಎಂಬುವ ಜ್ವರದ ಪಿತ್ರಹವು ನಮ್ಮಲ್ಲಿ ದೊರಕುತ್ತದೆ. ಶೀಘ್ರದಲ್ಲಿ ಬರಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.,
Jumnadas Building, Pitha Street,
FORT: BOMBAY.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು ರಾ. ಆಲೀಮಾನ ವೆಂಕಟರಾವ್ ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

☞ ಇದನ್ನು ಮದ್ರಾಸ ಸರಕಾರದವರು ೧೯೨೦ನೇ ವರ್ಷದ ಸಂಟಿರ ಮೆಟ್ರಿಕ್ಯುಲೇಟ್ ಪರೀಕ್ಷೆಗೆ ಪಠ್ಯಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಲು ಪ್ರತ್ಯೇಕ.
ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು. ಕಾಗದಗಳು ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ 110	ಅಕ್ಷರಗಳ ಪೆಟ್ಟಿ	ರೂ.	1—8—0
„ 170	„	„	1-14—0
„ 250	„	„	2—8—0
„ 350	„	„	3-12—0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.

ಈ ಗಡಿಯಾರವು ಮುಚ್ಚಳವುಳ್ಳದಾಗಿರುವದು. ಘಾಳಿ, ಧೂಳು ಸೇರದಂತೆ ಎರಡು ಕಡೆಯೂ ದಪ್ಪವು ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನಮಗಾಗಿ ತಯಾರಿಸಿದೆ.

ಬಹುಮಾನಗಳ ವಿವರ:— ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಜಾ ಹೂವು ೧, ಬೀಸಣಿಗೆ ೧, ಬ್ರೂಚ್ ೧, ಚಾಚಣಿಗೆ ೧, ಸೆಂಟ್ ಬುಡ್ಡಿ ೧, ಜುಮ್ಮಾ ೧೧ ಬಹುಮಾನಗಳ ಸಹಿತ ರೂ. ೪—೮—೦;

ವಿಳಾಸ:— ರಾಸ್‌ವಾಚ್ ಎಂಡ್ ಕೊ.,
ಇರುಳಪ್ಪನ ಬೀದಿ, ಮದರಾಸು.

ಶಾಶ್ವತವಾದ

ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ಮರಣಾಂತರವು ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಮರಮಟ್ಟುಗಳಿಗೆ ಇರುವಂತೆ ಮಾನವನಿಗೂ ಹೇಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ಅಭಿವೃದ್ಧಿ ಮತ್ತು ಕ್ಷಯ ಈ ಅವಸ್ಥೆಗಳಿದ್ದಾವೊ ಹಾಗೆಯೆ ಆ ಮಾನವ ವ್ಯಕ್ತಿಗಳ ಸಮಾಜಕ್ಕೂ ಈ ಅವಸ್ಥೆಗಳು ಬಂದು ಬಡುತ್ತವೆ. ವ್ಯಕ್ತಿಗಿರುವ ಗುಣದೋಷಗಳು ಸದಾಯಗಳಿರುವುದು. ಅತಿದೇಶನ್ಯಾಯದಿಂದ ಸಹಜವೆನಿಸಿದರೂ ಅದು ನಿಜವಾಗಿ ಅಷ್ಟೊಂದು ಸುಬೋಧವಾದ್ದಲ್ಲ. ಒಂದು ಸಮಾಜದೊಳಗಿನ ಕೆಲವು ವ್ಯಕ್ತಿಗಳಿಗೆ [illegible] ಇರುವಾಗ [illegible] ಕೆಲವು ವ್ಯಕ್ತಿಗಳಿಗೆ [illegible] [illegible] ಯುಕ್ತವಾದೀತೆ? ಹತ್ತು ಜನರಲ್ಲಿ ೭-೮ ಜನರು ಕೊಡೆ ಹಿಡಿದುಕೊಂಡು ಹೋಗುತ್ತಾರೆ, ಉಳಿದವರು ಕೊಡೆಯಿಲ್ಲದೆ ಹೋಗುವರು; ಆದರೂ 'ಛತ್ರಧರರು ಹೋಗುತ್ತಾರೆ' ಎಂದು ಹೇಳುವದುಂಟು. 'ಛತ್ರಧರರು ಹೋಗುತ್ತಾರೆ' ಎಂಬುದು ಅಕ್ಷರಶಃ ಸತ್ಯವಲ್ಲವಾದರೂ ಲಕ್ಷಣೆಯಿಂದ ಹಾಗೆ ಹೇಳುವ ವಾಡಿಕೆಯು ಬಿದ್ದಿದೆ ಇದರಂತೆಯೆ ಒಂದು ಸಮಾಜದೊಳಗಿನ ಅಧಿಕ ಸಂಖ್ಯೆಯ ಅಭಿವೃದ್ಧಿ ಕ್ಷಯಗಳ ಮೇಲೆ ಸಾಮಾಜಿಕ ಅಭಿವೃದ್ಧಿ ಕ್ಷಯಗಳು ಹೊಂದಿಕೊಂಡಿವೆ ಎಂದು ಒಂದು ವೇಳೆ ಕೆಲವರು ವಾದಿಸತೊಡಗಿದರೆ ಅದರ ಅರ್ಥವು ಸಮಾಜದ ವೃದ್ಧಿಕ್ಷಯಗಳು ಉಪಚರಿತವಾದವುಗಳು ಆರೋಪಿತವಾದವುಗಳು ಎಂದಾಗುವದು. ಪರಂತು ಕೋಟಿ ಪ್ರತಿಕೋಟಿ, ಉತ್ತರ ಪ್ರತ್ಯುತ್ತರ ಇತ್ಯಾದಿ ಈ ತರ್ಕಜಾಲವನ್ನು ಬದಿಗಿಟ್ಟು ಲೋಕದೊಳಗಿನ ಹಿಂದಿನ ಸಮಾಜಗಳ ಮತ್ತು ಈಗಿನ ಸಮಾಜಗಳ ಇತಿಹಾಸವನ್ನು ನೋಡಿದರೆ ಸಮಾಜದ ಉದಯಾಸ್ತಗಳು ಆರೋಪಿತವಲ್ಲ ಒಬ್ಬನ ಮೈಯಲ್ಲಿ ಜ್ವರವು ಪ್ರವೇಶಿಸಿದರೆ ಅದು ಹೇಗೆ ಅವನ ಇಡೀ ಶರೀರವನ್ನು ವ್ಯಾಪಿಸುವದೊ ಅಥವಾ ರಸಾಯನವನ್ನು ಸೇವಿಸಿದರೆ ಅದು ಹೇಗೆ ಶರೀರದ ಎಲ್ಲಾ ಭಾಗಗಳ ಮೇಲೆ ಸುಖಪರಿಣಾಮವನ್ನುಂಟುಮಾಡುವದೊ ಹಾಗೆಯೆ ಈ ಉದಯಾಸ್ತಗಳು ಸಮಾಜದ ಅವಯವಗಳಾದ ಎಲ್ಲ ವ್ಯಕ್ತಿಗಳನ್ನು ಆವರಿಸಿಕೊಳ್ಳುತ್ತವೆ ಎಂದು ಕಂಡುಬರುತ್ತದೆ

ಸಮಾಜದ ವೃದ್ಧಿಕ್ಷಯಗಳು ಕಿಂಬಹುನಾ ಉದಯಾಸ್ತಗಳು ಇವು ಮಹಾಕವಿ ಕಾಳಿದಾಸನ ಮಾತಿನಂತೆ 'ಚಕ್ರನೇಮಿ ಕ್ರಮದಿಂದ' ನಿಯತವಾದವುಗಳಾದರೂ ಮಾನವ ಬುದ್ಧಿಯು ಸೃಷ್ಟಿಯ ನಿಷ್ಠುರತೆಯೊಡನೆ ಹೋರಾಡುವ ಕಠಿಣ ವ್ರತವನ್ನು ಈ ಸೃಷ್ಟಿಯ ಆದಿಯಿಂದಲು ಆಚರಿಸಿಕೊಂಡು ಬಂದಿದೆ. ಮತ್ತು ಅದು ಈ ರೀತಿಯಿಂದ ಹೋರಾಡಿಕೊಂಡು ವಿವಿಧ ವಿಷಯಗಳ ಅನುಭವದ ಬಲದಿಂದ ವಿವಿಧ ಶಾಸ್ತ್ರಗಳನ್ನು ರಚಿಸಿದೆ ಅನುಭವದ ಬಲದಿಂದ ಒದ್ದಿ ನಿರ್ಣಿತವಾದ ಯಾವ ವಿವಿಧ ಶಾಸ್ತ್ರಗಳವೆಯೋ ಅವುಗಳಲ್ಲಿ ಸಮಾಜ ಶಾಸ್ತ್ರವು ಒಂದು ಮುಖ್ಯ ಶಾಸ್ತ್ರವಾಗಿದೆ ಈ ಶಾಸ್ತ್ರದ ಜ್ಞಾನವು ಸಮಾಜದ ಉದಯಾಸ್ತಗಳನ್ನು ತಡಿಸುವುದಿಲ್ಲವಾದರೂ ಆಯಾ ಅವಸ್ಥೆಗಳು ನಿಯತಕಾಲದ ಮಟ್ಟಿಗಾದರೂ ನಿಲ್ಲಬೇಕು, ಕೂಡಲೆ ಕೂಡಲೆ ಅವಸ್ಥಾಂತರವನ್ನು ಪಡೆಯಬಾರದು ಎಂದು ಪ್ರತಿಯೊಬ್ಬ ಸಮಾಜಹಿತೈಷಿಯು ಮನ್ನಿಸದೆ ಇರಲಿಕ್ಕಿಲ್ಲ ಸಮಾಜದ ಅಭಿವೃದ್ಧಿಯ ಕಾಲವು ಚಿರಕಾಲಿಕವಾಗುವಂತೆ ಅಥವಾ ಅಭಿವೃದ್ಧಿಯು ಇದ್ದಿಲ್ಲವಾದರೆ ಅದರ ಪ್ರಾಪ್ತಿಯಗೋಸ್ಕರ ಯೋಗ್ಯ ಉದ್ಯೋಗವನ್ನು ಕೈಕೊಳ್ಳುವಂತೆ ಹಾಗು ಕ್ಷಯದ ಆಳಿಕೆಯು ನಡೆದಿದ್ದರೆ ಅದರ ನಿವೃತ್ತಿಯುಂಟಾಗುವಂತೆ ಏನು ಮಾಡಬೇಕಾದ್ದು ಇತ್ಯಾದಿ ಅನೇಕ ಗಹನಪ್ರಮೇಯಗಳು ಸಮಾಜ ಶಾಸ್ತ್ರದಲ್ಲಿ ಗ್ರಥಿತವಾಗಿರುತ್ತವೆ ಅವುಗಳನ್ನು ಪತ್ರಿಕೆಯಲ್ಲಿ ಪ್ರಸ್ತಾಪಿಸುವುದು ಸಾಧ್ಯವಿಲ್ಲ ಆದರೂ ಸಮಾಜೋದ್ಧಾರದ ಕೆಲವು ಮಹತ್ವದ ಮೂಲತತ್ವಗಳನ್ನು ವಿವರಿಸಬೇಕೆಂದಿದ್ದೇವೆ ಈ ವಿಷಯವು ಕೆಲವರ ಮಟ್ಟಿಗೆ ಅಷ್ಟೊಂದು ಆಕರ್ಷಕವಾಗಲಿಕ್ಕಿಲ್ಲವಾದರೂ ಸಮಾಜಶಾಸ್ತ್ರಜ್ಞರಿಗೆ ಉಪಯುಕ್ತವಾದೀತೆಂದು ಭರವಸೆ ಇದೆ. ಇಷ್ಟು ಮಾತುಗಳನ್ನು ವಿಷಯಪ್ರವೇಶದ ಸಂದರ್ಭದಲ್ಲಿ ಸೂಚಿಸಿ ಮುಂದಿನ ವಿಷಯವನ್ನು ಯಥಾವಕಾಶ ಮತ್ತು ಯಥಾನುಕೂಲ ಚರ್ಚಿಸೋಣ

ಸ್ಫುಟ ವಿಚಾರಗಳು.

೧ ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನವು ದಿಲ್ಲಿಯಲ್ಲಿ ಜನವರಿ ತಾ. ೩೦ರಿಂದ ಪ್ರಾರಂಭವಾಗಿದೆ. ಎಂದಿನ ಕ್ರಮದಂತೆ ವೈಸರಾಯ ದೊರೆಗಳು ಅಧಿವೇಶನದ ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು ವೈಸರಾಯರ ಭಾಷಣದಲ್ಲಿ ಹಿಂದೀಸುಧಾರಣೆಯ ಕಾನೂನು, ಈ ಕಾನೂನಿನ ಯಶಸ್ವಿತೆಯ ಬಗ್ಗೆ, ಮುಂದಿನ ಕಾರ್ಯಸಾಧನ, ಕೈಗಾರಿಕೆಯ ಅಭಿವೃದ್ಧಿ ಹಾಗು ಪೂರ್ವ ದಕ್ಷಿಣ ಆಫ್ರಿಕಗಳಲ್ಲಿಯ ಹಿಂದೀ ಜನರು, ವಾಯವ್ಯ ಸರಹದ್ದಿನ ಮತ್ತು ಅಮೀರರ ವಿಷಯ ಇತ್ಯಾದಿ ಅನೇಕ ಸಂಗತಿಗಳ ಉಲ್ಲೇಖಗಳಿದ್ದವು. ಹಿಂದೀ ಸುಧಾರಣಾ ಕಾನೂನಿನ ಸಂಗತಿಯನ್ನು ಉಲ್ಲೇಖಿಸುವಾಗ ವೈಸರಾಯ ದೊರೆಗಳು ಮಿ ಮೊಂಟೆಗ್ಯು ದೊರೆಗಳ ಅವರ ದೀರ್ಘೋದ್ಯೋಗ, ಹಿಡಿದ ಕಾರ್ಯವನ್ನು ಕೊನೆಗೊಯ್ಯುವ ನಿಶ್ಚಯ. ಇತ್ಯಾದಿ ಭಾರತ ಮಂತ್ರಿಗಳ ಗುಣಗಳ ಬಗ್ಗೆ ವಂದನೆಗಳನ್ನು ಸಮರ್ಪಿಸಿದರು ಹಾಗು ಲೊ. ಮೆಸ್ಟನ್ ದೊರೆಗಳ ಕಾರ್ಯ ಜಾಣತನ, ಸಮಯಾವಧಾನತೆ ಮತ್ತು ವಿಶೇಷತಃ ಸುಧಾರಣಾ ಪ್ರಸ್ತಾಪಿನ ಆದಿಯಿಂದ ಕೊನೆತನಕ ನಡಕೊಂಡಿದ್ದ ಅವರ ಚಟುವಟಿಕೆ ಇವುಗಳನ್ನು ನಿರ್ದೇಶಿಸಿ ಈ ದೊರೆಗಳು ಸಹ ಪ್ರಶಂಸೆಗೆ ಪಾತ್ರರಾಗಿದ್ದಾರೆಂದು ಹೇಳಿ, ಕೊನೆಗೆ ಇನ್ನೂ ಇಬ್ಬರ ಹೆಸರುಗಳನ್ನು ಈ ಮಾಲೆಯಲ್ಲಿ ಸುರಿದು ವೈಸರಾಯರು ಈ ಪ್ರಶಂಸಾ ಅಧ್ಯಾಯವನ್ನು ಮುಗಿಸಿದರು. ಈ ಪ್ರಶಂಸಾ ಅಧ್ಯಾಯದಲ್ಲಿ ಬರೆ ಮೂವರ ಹೆಸರುಗಳು ಮಾತ್ರ ಕಂಡುಬರುವುದರಿಂದ ಇತರರು ಪರಿಶ್ರಮವನ್ನಾಗಲಿ, ಪ್ರಯತ್ನವನ್ನಾಗಲಿ ಮಾಡಲಿಲ್ಲ, ಅಥವಾ [illegible] [illegible] ಇಲ್ಲದ [illegible] ಈ ಕಾರಣದಿಂದ ಪ್ರಸ್ತುತ ಸ್ಥಿತಿಯಲ್ಲಿ [illegible] ಅಸಾಧ್ಯವಾದರೂ ಇವರು [illegible] ಪಾತ್ರರಾಗಿದ್ದಾರೆಂದು [illegible] ಹಿಂದುಸ್ಥಾನದ ಅರ್ಥಶಕ್ತಿಯನ್ನು [illegible] ಹಿಂದುಸ್ಥಾನದೊಳಗಿನ ಈ ವರ್ಷದ [illegible] ರಾಗಿಯ ಬೆಳೆಯು ಸಮೃದ್ಧವಾಗಿದೆ, ಆದರೂ [illegible] ಮಾತ್ರ ಏರಿಕೊಂಡಿದೆ, ಇದು ಮೆಲ್ಲಮೆಲ್ಲನೆ ಕಡಿಮೆಯಾಗಬೇಕು ಮತ್ತು ಹಾಗೆ ಕಡಿಮೆಯಾಗುವವರೆಗೆ ಇಲ್ಲಿಂದ ಆಹಾರ ಜಿನಸುಗಳನ್ನು ಹೊರಗೆ ಕಳುಹಿಸಲು ಸರಕಾರವು ಸಹಸಾ ಬಿಡಲಿಕ್ಕಿಲ್ಲವೆಂದು ಹೇಳಿದರು. ಇದಲ್ಲದೆ ಶಿಕ್ಷಣದ ವಿಷಯದಲ್ಲಿ ಸೆಡ್‌ಲರ ಕಮಿಶನಿನ ಶಿಫಾರಸುಗಳನ್ನು ಇತರ ಎಲ್ಲ ಯುನಿವರ್ಸಿಟಿಗಳಲ್ಲಿ ಜಾರಿಯಲ್ಲಿ ತರಲು ಬೇರೆ ಪ್ರಾಂತಿಕ ಸರಕಾರಗಳು ಒಪ್ಪಿಕೊಂಡಿದ್ದಾವೆ, ಆದ್ದರಿಂದ ಈ ಭಾಗದ ಸುಧಾರಣೆಗಳು ಬೇಗನೆ ವಿದ್ಯಾ ಇಲಾಖೆಯ ಕ್ಷಿತಿಜದ ಮೇಲೆ ಮೂಡುವವು ಎಂದು ವೈಸರಾಯರು ಸೂಚಿಸಿದ ವಿಷಯವು ಸಂತೋಷಕರವಾಗಿದೆ ವೈಸರಾಯರು ಹಿಂದುಸ್ಥಾನದ ವಾಯವ್ಯ ಸರಹದ್ದಿನಲ್ಲಿ ಪ್ರಕೃತವಿರುವ ಪರಿಸ್ಥಿತಿಯನ್ನು ವರ್ಣಿಸಿ ಅಮೀರರು ಒಪ್ಪಂದವನ್ನು ಇತ್ತಲಾಗೆ ಮಾಡಿಯೂ ಪುನಃ ಬೊಲ್‌ಶೇವಿಕರೊಡನೆ ಡೆಪ್ಯುಟೇಷನು ಇತ್ಯಾದಿ ಕಳುಹಿಸಿ ಹೇಗೆ ಅತ್ತಲಾಗೆ ಸಂಧಾನ ಮಾಡಹತ್ತಿದ್ದಾರೆ ಎಂಬುದನ್ನು ತೋರಿಸಿಕೊಟ್ಟರು. ಹಾಗೆಯೆ ಪ್ರಭುಗಳು ಈಚೆಗೆ ಪ್ರಸಿದ್ಧವಾದ ಬಾದಶಹಿ ಜಾಹಿರನಾಮೆಯ ವಿಷಯವನ್ನು ನಿರ್ದೇಶಿಸಿ ಮುಂದಿನ ಸುಧಾರಣೆಗಳ ಯಶಸ್ವಿತೆಯ ಬಗ್ಗೆ ಪ್ರಜೆಗಳೂ ಅಧಿಕಾರಿಗಳೂ ಸಹಕಾರ್ಯದಿಂದ ಕೆಲಸಮಾಡಬೇಕೆಂದಿರುವ ಬಾದಶಹರ ಸದಿಚ್ಛೆಯಂತೆ ಎಲ್ಲರೂ ನಡೆಕೊಳ್ಳುವುದಗತ್ಯವಿದೆ ಎಂದು ಕೂಡ ಹೇಳಿದರು. ಅಮೇರಿಗೆ ಲೋ. ಚೆಮ್ಸಫರ್ಡರು ತಮ್ಮ ಭಾಷಣದಲ್ಲಿ ಅನೇಕ ಸಂಗತಿಗಳನ್ನು ಉಲ್ಲೇಖಿಸಿದರು. ಈ ಮಹತ್ವದ ಸಂಗತಿಗಳನ್ನು ಲೋರ್ಡ ಸಾಹೇಬರು ಹೇಗೆ ಉಲ್ಲೇಖಿಸಿರುವರೊ ಹಾಗೆಯೇ ಬೇರೆ ಅವಶ್ಯಕ ಮತ್ತು ಮಹತ್ವದ ಸಂಗತಿಗಳನ್ನು ಬಿಟ್ಟೂ ಇದ್ದಾರೆ ಉದಾಹರಣಾರ್ಥವಾಗಿ, ರಾಜಕೀಯ ಕೈದಿಗಳನ್ನು ಬಿಡುವ ಬಗ್ಗೆ ಬಾದಶಹರವರು ತಮ್ಮ ಸದಿಚ್ಛೆಯನ್ನು ತೋರಿಸಿದ್ದಕ್ಕೆ ಆ ಸದಿಚ್ಛೆಯನ್ನು ತಾವು ಎಷ್ಟರಮಟ್ಟಿಗೆ ಕೊನೆಗಾಣಿಸಿದ್ದೇವೆ, ಪಂಕ್ತಿಪ್ರಪಂಚದನ್ನಿಷದೆ ಎಲ್ಲ ರಾಜಕೀಯ ಕೈದಿಗಳನ್ನು ಮಾಫಿ ಕೊಡಬೇಕೆಂದು ಕೇಳಿಕೊಳ್ಳುವ ಲೋಕಮತವನ್ನು ತಾವು ಎಷ್ಟರಮಟ್ಟಿಗೆ ಸಮಾಧಾನಪಡಿಸಿದ್ದೇವೆ, ಜನರಲ್ ಡಾಯರರ ದುಷ್ಕೃತ್ಯವು ಸ್ವಂತ ಅವರ ಮುಖದಿಂದಲೆ ಜಾಹಿರವಾದ ಮೇಲೆ ಹಿಂದುಸ್ಥಾನ ಸರಕಾರವು ಈ ವಿಷಯದಲ್ಲಿ ಯಾವ ಧೋರಣವನ್ನು ಅಂಗೀಕರಿಸುವುದಿದೆ ಎಂಬಿತ್ಯಾದಿ ವಿಷಯಗಳು ಮಹತ್ವದವೂ ಆವಶ್ಯಕವೂ ಆಗಿದ್ದವು. ಈ ವಿಷಯದಲ್ಲಿ ವೈಸರಾಯ ದೊರೆಗಳು ತಮ್ಮ ವಿಚಾರಗಳನ್ನು ಪ್ರದರ್ಶಿಸುವರೆಂದು ಪ್ರಜೆಗಳು ಪ್ರತೀಕ್ಷಿಸಿಕೊಂಡಿದ್ದರು, ಪರಂತು ಅವರ ಭಾಷಣದಲ್ಲಿ ಇವುಗಳ ನಾಮನಿರ್ದೇಶವೂ ಕೂಡ ಇಲ್ಲ!

೨ ವರಿಷ್ಠ ಕೌನ್ಸಿಲಿನಲ್ಲಿ ವೈಸರಾಯರ ಪ್ರಾಥಮಿಕ ಭಾಷಣವು ನಡೆದ ಬಳಿಕ ಕೆಲವು ಸವಾಲು ಜವಾಬುಗಳು ನಡೆದು ಸರಕಾರದ ಕಡೆಯಿಂದ ಒಂದೆರಡು ಬಿಲುಗಳು ದಾಖಲು ಮಾಡಲ್ಪಟ್ಟವು ಅನಂತರ ನಾಮದಾರ ಸಿಂಹರು ಬಾದಶಹರ ಜಾಹಿರನಾಮೆಯ ಬಗ್ಗೆ ಅವರ ಆಭಾರ ಪ್ರದರ್ಶನದ ಠರಾವನ್ನು ತಂದರು ನಾಮದಾರ ಸಿಂಹರು ಈ ಠರಾವನ್ನು ಮುಂದಿಡುವಾಗ ಕೆಲವು ಮನನೀಯ ವಿಚಾರಗಳನ್ನು ಪ್ರದರ್ಶಿಸಿದರು. ಹಿಂದೀ ಜನರು ಅನೇಕ ಸಂದರ್ಭಗಳಲ್ಲಿ ಇಲ್ಲಿಯ ನೋಕರಶಾಹಿಯನ್ನು ಟೀಕಿಸುತ್ತಾರಾದರೂ ಅವರಲ್ಲಿ ಬಾದಶಹರ ವಿಷಯದಲ್ಲಿ ಸಂಪೂರ್ಣ ರಾಜನಿಷ್ಠೆಯು ಉಂಟು, ಅದಕ್ಕೆ ಎಂದೂ ಕಿಲುಬು ಬರುವುದಿಲ್ಲ, ಮಾತ್ರವಲ್ಲ ಉದಾರಭಾವದಿಂದ ಪರಿಪೂರಿತವಾದ ಇಂತಹ ಜಾಹಿರನಾಮೆಗಳು ಪ್ರಕಟವಾದಾಗಂತೂ ಆ ರಾಜನಿಷ್ಠೆಯು ಹೆಚ್ಚು ಉಜ್ವಲಿತವಾಗುತ್ತದೆ ಎಂದು ಹೇಳಿ ಹಿಂದೀ ಸುಧಾರಣೆಯ ಕಾನೂನು ಯಶಸ್ವಿಯಾಗಬೇಕಾದರೆ ಹಿಂದಿಗಳು ಅಧಿಕಾರಿಗಳೂ ಹಾಗು ಯುರೋಪಿಯನ್ ವರ್ಗದವರೂ ಐಮ್ಮತದಿಂದ ಸಹಕಾರಿತೆಯನ್ನು ಕೂಡಬೇಕೆಂದು ಬಾದಶಹರ ಅಪೇಕ್ಷೆ ಇದ್ದು ಅದಕ್ಕಾಗಿ ಹಿಂದೀ ರಾಷ್ಟ್ರವು ತನ್ನ ಸಹಕಾರ್ಯವನ್ನು ಕೊಡಲು ಸಿದ್ಧವಾಗಿದೆ ಎಂದು ಹೇಳಿ ನಾಮದಾರ ಸಿಂಹರು ತಮ್ಮ ಭಾಷಣವನ್ನು ಮುಗಿಸಿದರು ಈ ಠರಾವಿಗೆ ನಾಮದಾರ ಸುರೇಂದ್ರ ಬಾನರ್ಜಿ, ಕರೀಮಭಾಯಿ, ಚಿಟಣಾವೀಸ, ಶರ್ಮಾ, ಅಯ್ಯಂಗಾರ, ಸಪ್ರು ಮುಂತಾದ ಅನೇಕ ಹಿಂದೀ ಸಭಾಸದರು ತಮ್ಮ ಸಮ್ಮತಿಯನ್ನೂ ಪುಷ್ಟೀಕರಣವನ್ನೂ ಕೊಟ್ಟದ್ದಲ್ಲದೆ, ಮಿ. ಕ್ರಮ್, ಮಿ ಪೆಟಿಟ್ ಈ ಮೆಂಬರರು ಸಹ ಯುರೋಪಿಯನ್ ವರ್ಗದ ಸಹಕಾರ್ಯದ ಬಗ್ಗೆ ಅಭಿವಚನವನ್ನು ಕೊಟ್ಟರು. ನಾಮದಾರ ಸುರೇಂದ್ರ ಬಾನರ್ಜಿಗಳು ತಮ್ಮ ಭಾಷಣದಲ್ಲಿ 'ಮಿ. ಮೊಂಟೆಗ್ಯುಗಳ ಆಭಾರಪ್ರದರ್ಶನದ ಉಲ್ಲೇಖವಿಲ್ಲ'ವೆಂದು ಕೊಂಚ ಬೇಸರಪಟ್ಟಿದ್ದರು. ಪರಂತು ನಾಮದಾರ ಸಿಂಹರು ಸದರೀ ಠರಾವಿನ ವಾದವಿವಾದವನ್ನು ಉಪಸಂಹರಿಸುವಾಗ 'ಬಾದಶಹರ ಜಾಹೀರನಾಮೆಯ ಬಗ್ಗೆ ಬಾದಶಹರ ಆಭಾರಪ್ರದರ್ಶನದ ಠರಾವಿದು. ಇದರಲ್ಲಿ ಅನ್ಯರ ಸಂಬಂಧವನ್ನು ಸುರಿಯುವುದು ಉಚಿತವಲ್ಲ; ಬಾನರ್ಜಿಗಳಿಗೆ ಮಿ. ಮೊಂಟೆಗ್ಯುಗಳ ಆಭಾರವನ್ನು ಮನ್ನಿಸಬೇಕೆಂದಿದ್ದರೆ ಅದಕ್ಕೋಸ್ಕರ ಒಂದು ಸ್ವತಂತ್ರ ಠರಾವನ್ನು ತರಲು ಅವರಿಗೆ ಸ್ವಾತಂತ್ರ್ಯವಿದೆ' ಎಂದು ಸಮರ್ಪಕವಾದ ಉತ್ತರವನ್ನು ಕೊಟ್ಟರು. ಬಾದಶಹರ ಆಭಾರಪ್ರದರ್ಶನದ ಈ ಠರಾವು ಸರ್ವಾನುಮತದಿಂದ ಪಾಸಾಯಿತು. ಈ ಠರಾವು ಪಾಸಾದ ಬಳಿಕ ಕೌನ್ಸಿಲು [illegible] ಮುಂದೂಡಲ್ಪಟ್ಟಿತು.

೬. ಕಳೆದ ಶತಮಾನದ ಶಿಕ್ಷಣ ಇಲಾಖೆಯ ವರದಿಯು ಗೋಷ ವಾರೆಯನ್ನು ಕೆಲವು ಮಾತುಗಳಿಂದಲೇ ಹೇಳುವುದಾದರೆ, ಕಾಲೇಜುಗಳ ಸಂಖ್ಯೆಯು ಮೊದಲಿನಷ್ಟೇ ಇರುವುದಾದರೂ, ಅವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯು ಮೊದಲಿನಗಿಂತ ಕಡಿಮೆಯಾಗಿದೆ. ಸೆಕೆಂಡರಿ ಶಾಲೆಗಳ ಸಂಖ್ಯೆಯು ಹೆಚ್ಚಿದ್ದಾದರೂ ಮೊದಲಿನ ಕ್ರಮದಿಂದ ಹೆಚ್ಚಲ್ಲ. ಪ್ರಾಥಮಿಕ ಶಾಲೆಗಳು ಹೆಚ್ಚಾಗಿದ್ದಾವೆ; ಪರಂತು ಅವುಗಳಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆ ಇದೆ. ಸಾರಾಂಶ, ಶಾಲಾ—ಕಾಲೇಜುಗಳ ಕಟ್ಟೋಣಗಳು ಒಂದು ವೇಳೆ ಸಂಖ್ಯೆಯಲ್ಲಿ ವೃದ್ಧಿ ವಾದರೂ ವಿದ್ಯಾರ್ಥಿಗಳ ಪ್ರಮಾಣವು ಯಾವಾಗ [illegible] ಸಂತೋಷವಾಗಲಿಕ್ಕಿಲ್ಲ. ಕಟ್ಟೋಣದಂಥಾ ನಿರ್ಜೀವ ಪದಾರ್ಥಗಳ ಏರು ಶಿಕ್ಷಣಕ್ಕೆ ಮುಖ್ಯ ಆಶ್ರಯಭೂತರಾದ ವಿದ್ಯಾರ್ಥಿಗಳ ಏರಿಗೆ ಉಪಕಾರವಾಗುತ್ತದೆ ನಿಜ. ಪರಂತು ಇತರ ಕಾರಣಗಳು ಸಜೀವ ಪದಾರ್ಥಗಳ ಅಭಿವೃದ್ಧಿಯನ್ನು ತಡೆಯುವುದಾದರೆ ಆ ನಿರ್ಜೀವದ ಮೌಲ್ಯವು ಖಂಡಿತವಾಗಿ ಯಾರನ್ನೂ ಹರ್ಷಿಸಲಿಕ್ಕಿಲ್ಲ. ಈಗ ಡಿರೆಕ್ಟರರು ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾದ ಬಗ್ಗೆ ತಮ್ಮ ಮತದಿಂದ ಆಯಾ ಕಾರಣಗಳನ್ನು ತೋರಿಸಲು ಯತ್ನಿಸಿದ್ದಾರೆ. ಹೌದು. ಆದರೆ ಹಸಿದವನ ಹೊಟ್ಟೆಯು ಅನ್ನದಿಂದಲೆ ತುಂಬಬೇಕಲ್ಲದೆ ಅನ್ನದ ವರ್ಣನೆಯಿಂದ ಇಲ್ಲವೆ ಮೀಮಾಂಸೆಯಿಂದ ತುಂಬಲಾರದು. ಇದು ಹೇಗೂ ಹಾಗೆಯೆ ಕಾರಣವಿಮರ್ಶೆಯಿಂದ ಶಿಕ್ಷಣಾಭಿಲಾಷಿಗಳ ಮನಸ್ತೃಪ್ತಿಯು ಉಂಟಾಗಲಾರದು.

೭. ಇಂಗ್ಲೆಂಡಿನೊಳಗಿನ ಕೆಲವು ತಂತಿಗಳನ್ನು ನೋಡುವಾಗ ರುಶ್ಯದ ಪರಿಸ್ಥಿತಿಯ ದೆಸೆಯಿಂದ ಇಂಗ್ಲೆಂಡಿನ ಲೋಕಮತದಲ್ಲಿ ವಿವಿಧತ್ವವು ಉಂಟಾಗಿದೆಂದು ತೋರುತ್ತದೆ. ರುಶ್ಯದಲ್ಲಿ ಈಚೆಗೆ ೩೦ ವರ್ಷಗಳಿಂದ ಬೆಳೆಯದಷ್ಟು ಧಾನ್ಯವು ಈ ವರ್ಷ ಬೆಳೆದಿದ್ದು ಬ್ರಿಟಿಷ್ ಮತ್ತು ಫ್ರೆಂಚ ಸರಕಾರಗಳು ರುಶ್ಯದೊಡನೆ ವ್ಯಾಪಾರವನ್ನು ಇಡಕೂಡದೆಂದು ಬಹಿಷ್ಕಾರವನ್ನು ಹಾಕಿದ್ದಾದರೆ ಇಂಗ್ಲೆಂಡಿನಲ್ಲಿ ಉಪವಾಸ ಬೀಳುವ ಜನರಿಗೆ ವಿನಾಕಾರಣ ಕಷ್ಟಗಳನ್ನು ಸಹಿಸಬೇಕಾಯಿತ್ತು, ಆದ್ದರಿಂದ ಮಿತ್ರಸಂಘದ ಈ ಬಹಿಷ್ಕಾರದ ಧೋರಣವು ಏನೂ ಪ್ರಶಸ್ತವಲ್ಲವೆಂದು ಇಂಗ್ಲೆಂಡಿನೊಳಗಿನ ಲೇಬರ್ ಮತ್ತು ಲಿಬರಲ್ ಪಾರ್ಟಿಯವರು ಪ್ರತಿಪಾದಿಸುತ್ತಿದ್ದಾರೆ. ಈಗಿನ ಮಂತ್ರಿಮಂಡಲವು ಸಮ್ಮಿಶ್ರಪಕ್ಷದ್ದು. ಪರಂತು ಅದರ ಎಲ್ಲ ನಿರ್ಣಯಗಳು ಎಲ್ಲ ಪಕ್ಷಗಳಿಗೆ ಮಾನ್ಯವಾಗುತ್ತವೆಂದಿಲ್ಲ. ದೃಷ್ಟಾಂತಕ್ಕಾಗಿ ಮೇಲಿನ ಬಹಿಷ್ಕಾರದ ಸಂಗತಿಯನ್ನೆ ಉದಾಹರಿಸಬಹುದು. ಈ ಸಂದರ್ಭವನ್ನು ಸಾಧಿಸಿಕೊಂಡು ಮಿ। ಎಸ್ಕ್ವಿಥರು—ಲಿಬರಲ್ ಪಕ್ಷದವರು—ಇವರು ಮಿ। ಲೊಯ್ಡ ಜೋರ್ಜರಿಗಿಂತ ಮುಂಚೆ ಮಂತ್ರಿಪದದಲ್ಲಿದ್ದರು—ಈಗಿನ ಮಂತ್ರಿಮಂಡಲದ ದೋಷಗಳನ್ನೂ, ತಪ್ಪಿನ ಧೋರಣವನ್ನೂ ಹೊರಗೆಡವಿ ಅಲ್ಲಲ್ಲಿ ಉಪನ್ಯಾಸಗಳನ್ನು ಕೊಡುತ್ತಿದ್ದಾರೆ. ಹಾಗು ಪಾರ್ಲಿಮೆಂಟಿನಲ್ಲಿ ಪೆಸ್ಲೆ ಎಂಬ ಪಂಗಡದವರ ಪ್ರತಿನಿಧಿಗಳಾಗಿ ಬರಲು ಉಮೇದವಾರರಾಗಿ ನಿಂತಿರುವರು. ಇವರ ಪ್ರತಿಸ್ಪರ್ಧಿಗಳಾದ ಮಿ। ಲೊಯ್ಡ ಜೋರ್ಜ ಮಂತ್ರಿಗಳು ಬಹು ಧೋರಣೆಗಳಾದ್ದರಿಂದಲೂ ಮುತ್ಸದಿಗಳಾದ್ದರಿಂದಲೂ ಲೋಕಮತವನ್ನು ತಮ್ಮ ಕಡೆಗೆನೇ ಎಳೆದುಕೊಳ್ಳುವ ಚಾತುರ್ಯವು ಅವರಲ್ಲಿ ಉಂಟು. ಆದ್ದರಿಂದ ಒಂದು ವೇಳೆ ಎಲ್ಲಾ ಪಾರ್ಲಿಮೆಂಟಿನ ಚುನಾವಣೆಯು ಪುನಃ ಆಗುವ ಸಂದರ್ಭವು ಬಂದರೆ—ಅದು ಬರಲಿಕ್ಕಿಲ್ಲ—ಅದರಲ್ಲಿ ಬಹುಶಃ ಈಗಿನ ಮಂತ್ರಿಮಂಡಲವೆ ಯಶಸ್ವಿಯಾದೀತೆಂದು ಹೇಳುತ್ತಾರೆ. ಮತ್ತು ಅದರಿಂದಲೆ ಸದ್ಯಃ ಆಗಿ ಮುಗಿದ ಫ್ರಾನ್ಸಿನೊಳಗಿನ ಪರಿಷತ್ತಿನಲ್ಲಿ ರುಶ್ಯದೊಡನೆ ವ್ಯಾಪಾರವನ್ನು ನಡೆಯಲು ಆತಂಕವಿಲ್ಲವೆಂದು ನಿರ್ಣಯಿಸೋಣಾಗಿದೆ. ಇದು ಮಿ। ಲೊಯ್ಡ ಜೋರ್ಜರ ಪ್ರಯತ್ನದ ಫಲವು.

೮. ಹಿಂದೀ ದೇಶಭಕ್ತರಾದ ಲಾಲಾ ಲಜಪತರಾಯರು ಅಮೇರಿಕೆಯಿಂದ ಹೊರಟು ಇಂಗ್ಲೆಂಡಿಗೆ ಬಂದರು. ಅಲ್ಲಿ ಅವರು ಎರಡು ಮೂರು ದಿವಸ ಮಾತ್ರ ಇದ್ದು ಅಲ್ಲಿಂದ ಹಿಂದುಸ್ಥಾನಕ್ಕೆ ಬರಲು ಹೊರಟಿದ್ದಾರೆ. ಅವರು ಇಂಗ್ಲೆಂಡಿನಲ್ಲಿ ಬಂದಾಗ ಯಾವ ಸಾರ್ವಜನಿಕ ಭಾಷಣವನ್ನು ಕೊಟ್ಟಿಲ್ಲವಾದರೂ ಬಾತಮೀದಾರರ ಸರಿಮುಖದಿಂದ ಹಿಂದೀ ಸುಧಾರಣಾ ಕಾನೂನಿನ ವಿಷಯದ ಅವರ ಮಾತುಗಳು ಹಿಂದುಸ್ಥಾನದಲ್ಲಿ ಬಂದಿವೆ. ಅವರು ಅಭಿಪ್ರಾಯ ಪಡುವಂತೆ ಈಗ ಕೊಟ್ಟಿರುವ ಸುಧಾರಣೆಗಳು ಮುಂದಿನ ಹಿಂದೀ ಸ್ವರಾಜ್ಯದ ಪ್ರಾಥಮಿಕ ಮೆಟ್ಟಿಲುಗಳಾಗಿವೆ. ಇವುಗಳನ್ನು ಜನತೆಯು ಸ್ವೀಕರಿಸಿ ಮುಂದಿನ ಹಂತನ್ನು ಪಡಕೊಳ್ಳಲು ಯೋಗ್ಯ ದಾರಿಯನ್ನು ತಯಾರಿಸಿಕೊಳ್ಳಬೇಕು, ಹಿಂದೀ ರಾಷ್ಟ್ರದೊಳಗಿನ ಎಲ್ಲ ಪಕ್ಷಗಳ ಪ್ರಮುಖ ಮುಂದಾಳುಗಳು ಒಟ್ಟಿಗೆ ಸೇರಿ ಕೆಲಸಮಾಡಬೇಕು, ವಿಶೇಷತಃ ಈ ಬಗ್ಗೆ ಲೋಕಮತವನ್ನು ಸುಶಿಕ್ಷಿತ ಪಡಿಸಲು ಎಲ್ಲರೂ ಏಕತ್ರ ಸೇರಬೇಕು, ಎಂಬಿತ್ಯಾದಿ ಯೋಗ್ಯವಾದ ಮತ್ತು ಹಿತಪರಿಣಾಮಿಯಾದ ವಿಚಾರಗಳನ್ನು ಲಾಲಾಜಿಯವರು ಪ್ರದರ್ಶಿಸಿದ್ದಾರೆ. ಇರಲಿ, ಲಾಲಾಜಿಯವರು ತಮ್ಮ ಮಾತೃಭೂಮಿಯನ್ನು ಎಷ್ಟರ ಮಟ್ಟಿಗೆ ಅಕೃತ್ರಿಮ ಭಾವದಿಂದ ಪ್ರೀತಿಸುತ್ತಾರೆಂದು ಈ ಹೊತ್ತು ಯಾರಿಗೂ ಹೇಳಬೇಕಾದ ಅಗತ್ಯವಿಲ್ಲ. ಮತ್ತು ಇದರ ಪ್ರತಿಫಲವಾಗಿ ಅವರ ದೇಶಬಾಂಧವರಾದರೂ ಲಾಲಾಜಿಗಳನ್ನು ಎಷ್ಟು ಪೂಜ್ಯಭಾವದಿಂದ ಮನ್ನಣೆಯನ್ನು ಮಾಡುತ್ತಾರೆಂಬುದನ್ನು ಬರೆದು ತೋರಿಸಬೇಕಾದ ಅವಶ್ಯವಿಲ್ಲ. ಇಂಥ ದೇಶಭಕ್ತರು ಕೆಲವು ಅಕಾರಣವಾದ ಅಪವಾದಕ್ಕೆ ಒಳಗಾಗಿ ರಾಜ್ಯಕರ್ತರ ಕೋಪದ ದೆಸೆಯಿಂದ ಅವರಿಗೆ ಇಷ್ಟು ಸಮಯ ಸ್ವದೇಶವನ್ನು ಸಂದರ್ಶಿಸಲು ಸಾಧ್ಯವಿರಲಿಲ್ಲ. ಪರಂತು ಅವರ [illegible] ಈಗ ರಾಜ್ಯಕರ್ತರ ದೃಷ್ಟಿಯು ನಿರ್ಮಲವಾಗಿ ಅವರು ಯಥಾಪ್ರಕಾರ ತನ್ನ ಪ್ರಿಯ ಮಾತೃದೇಶಕ್ಕೆ ಬರುತ್ತಿದ್ದಾರೆ; ಅವರನ್ನು ದೇಶಬಾಂಧವರು ಆದರದಿಂದಲೂ ಉತ್ಸಾಹದಿಂದಲೂ, ಅಕೃತ್ರಿಮ ಪೂಜ್ಯಬುದ್ಧಿಯಿಂದಲೂ ಸತ್ಕರಿಸಲು ಎಂದೂ ತಪ್ಪಲಿಕ್ಕಿಲ್ಲವೆಂದು ನಾವು ಭಾವಿಸುತ್ತೇವೆ.

೯. ಮುಂಬಯಿ ಪಟ್ಟಣದಲ್ಲಿ ಈಗ ೫-೬ ವಾರಗಳಿಂದ ನಡಕೊಂಡಿದ್ದ ಕಾಮಗಾರರ ಮುಷ್ಕರವು ಅಂತ್ಯವಾದ ಸುದ್ದಿಯು ಬಂದಿದೆ ಎಂಬದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ಗಿರಣಿಯ ಮಾಲಿಕರು ಕಾಮಗಾರರ ಮುಖ್ಯ ಕೇಳಿಕೆಗಳನ್ನು ಪೂರಯಿಸುವಂತೆ ಮುಂಬಯಿಯ ಗವರ್ನರ ದೊರೆಗಳು ಮಧ್ಯಸ್ಥಿಕೆ ಮಾಡಿದ್ದರಿಂದ ಮುಷ್ಕರವು ಸದ್ಯಃ ಅಂತ್ಯವಾಗಿದೆ. ಒಪ್ಪಂದವೆಂಬುದರ ಅರ್ಥವು ಎರಡೂ ಪಕ್ಷದವರು ತಂತಮ್ಮ ಕೆಲಕೆಲವು ಸಂಗತಿಗಳನ್ನು ಕಿಂಬಹುನಾ ಆಗ್ರಹಗಳನ್ನು ಬಿಟ್ಟುಬಿಡಬೇಕೆಂದಾಗುತ್ತದೆ. ಪ್ರತಿಯೊಂದು ಪಕ್ಷವು ತಮ್ಮ ಹಟವನ್ನೇ ಹಿಡಿದು ಕುಳಿತರೆ ಅವು ಒತ್ತಟ್ಟಿಗೆ ಎಂದೂ ಬರಲಾರವು. ಈ ದೃಷ್ಟಿಯಿಂದ ವಿಚಾರ ಮಾಡಿದ್ದಲ್ಲಿ ಮುಂಬಯಿಯ ಗಿರಣಿ ಮಾಲಿಕರಾಗಲಿ ಅಥವಾ ಕಾಮಗಾರರಾಗಲಿ ತಮ್ಮತಮ್ಮ ಆಗ್ರಹವನ್ನು ಬದಿಗಟ್ಟಿ ಒಪ್ಪಂದವನ್ನು ಮಾಡಿಕೊಂಡದ್ದು ಈ ಉಭಯತರಿಗೂ ಭೂಷಣಾವಹವೂ ಹಿತಾವಹವೂ ಆಗಿದೆ. ಈ ಕಾಲದಲ್ಲಿ ಕೇವಲ ಸ್ವಲಾಭವನ್ನೆ ಅಥವಾ ಸ್ವಪ್ರಯೋಜನವನ್ನೆ ನೋಡಿಕೊಂಡಿದ್ದರೆ ಸಾಲದು. ಅನ್ಯರ ಹಿತಸಂಬಂಧವನ್ನು ವಿಶೇಷತಃ ತಮ್ಮನ್ನು ಹೊಂದಿಕೊಂಡಿರುವವರ ಯೋಗಕ್ಷೇಮವನ್ನು ನೋಡುವುದು ಎಲ್ಲರ ಕರ್ತವ್ಯವಾಗಿದೆ.

ಮಂಗಳೂರು.

ಗೋಕರ್ಣದಲ್ಲಿ ನಡಿಯುವ ಜಾತ್ರೆಗೆ ಹೋಗುವ ಯಾತ್ರಿಕರ ಸೌಕರ್ಯಾರ್ಥ ಬಗ್ಗೆ ತಾರೀಕು ೧೬ಕ್ಕೆ ಇಲ್ಲಿಂದ ಬಿಡೋಣಾಗುವ ಬೊಂಬೆಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರು ಕುಮಟೆ ಬಂದರವನ್ನು ಸೇರದೆ ಹೊನ್ನಾವರ ಬಂದರವನ್ನು ಸೇರಿ ಸೀದಾ ತದ್ರಿ ಎಂಬಲ್ಲಿಗೆ ಹೋಗಿ ನಿಂತು ನಂತರ ಕುಮಟೆಯಲ್ಲಿನ ಪ್ರಯಾಣಸ್ಥರನ್ನೂ, ಸರಕುಗಳನ್ನೂ ತೆಗೆದುಕೊಳ್ಳಲು ಹಿಂತಿರುಗಿ ಕುಮಟೆಗೆ ಹೋಗುವುದು.

ಈ ತಿಂಗಳ ತಾರೀಕು ೨೫ನೇ ಆದಿತ್ಯವಾರ ಅಕ್ಕಿಯ ಸ್ಥಿತಿಯನ್ನು ಕುರಿತು ಆಲೋಚಿಸುವ ಬಗ್ಗೆ ಇಲ್ಲಿಯ ಜಿಲ್ಲಾ ಸಂಘದವರ ಸಭೆಯೊಂದು ನೆರವೇರುವುದಾಗಿ ಸದರಿ ಸಂಘದ ಸೆಕ್ರೆಟರಿಗಳು ತಿಳಿಸಿರುತ್ತಾರೆ.

ಮ. ರಾ. ರಾ. ಪಿ. ಮಹಾಬಲೇಶ್ವರ ರಾಯರು ಕಾರ್ಕಳ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ, ಕಾರ್ಕಳ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ. ರಾ. ರಾ. ಬಿ. ಪರಮೇಶ್ವರಯ್ಯನವರು ಉಡುಪಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಈ ವರೇಗೆ ಮ. ರಾ. ರಾ. ಪೊಯಿಗೆ ಕೊರಗಪ್ಪನವರ ಹೆಸರಲ್ಲಿದ್ದ ಇಲ್ಲಿಯ ಶ್ರೀ ಗೋಕರ್ಣನಾಥ ದೇವಸ್ಥಾನದ ಸೊತ್ತುಗಳು ಕಳೆದ ತಾರೀಕು ೨೦—೧—೨೦ರಲ್ಲಿ ರಿಜಿಸ್ಟ್ರಿ ನಿಶಿ ರಿಲೀಜ್ ಡೀಡ್ ಮೂಲಕ ಸದರಿ ದೇವರ ಭಂಡಾರಕ್ಕೆ ಒಪ್ಪಿಸಿಕೊಡಲ್ಪಟ್ಟಿರುತ್ತವೆಂತಲೂ, ಈಗ ನವೀನವಾಗಿ ಸ್ಥಾಪಿಸೋಣಾದ ಬಿಲ್ಲವರ ಯೂನಿಯನ್ ಎಂಬ ಸಂಸ್ಥೆಯ ಪರವಾಗಿ ಮ. ರಾ. ಕೊರಗಪ್ಪನವರು ಸದರಿ ದೇವಸ್ಥಾನದ ವಿನಿಯೋಗನಗಳನ್ನು ನಡಿಸಬೇಕಾಗಿ ನಿರ್ಣಯಗಳಾದವೆಂದೂ ಟ್ರಸ್ಟಿದಾರರೊಬ್ಬರು ತಿಳಿಸಿರುವರು.

ಕುಂದಾಪುರ ತಾಲೂಕಿನ ಸಹಕಾರ ಸಂಘಗಳ ಯೂನಿಯನ್ನಿನ ಸೆಕ್ರೆಟರಿಗಳಾದ ಮ. ರಾ. ರಾ. ಕೆ. ಎಲ್. ಭಂಡಾರಿ ಬಿ. ಎ ಯವರು ಸಹಕಾರ ಸಂಘಗಳ ಒನರೆರಿ ಅಸಿಸ್ಟಾಂಟ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ.

ಕಳೆದ ಸೋಮವಾರ ದಿನ ಗವರ್ನಮೆಂಟ್ ಕೊಲೇಜಿಗೂ ಮಿಶನ್ ಶಾಲೆಗೂ ನಡೆದ ಇಂಟರ ಸ್ಕೂಲ ಜಿಮ್ಖಾನಾ ಫೂಟ್‌ಬೋಲ್ ಪಂದ್ಯಾಟದಲ್ಲಿ ಮಿಶನ್‌ಶಾಲೆಯವರು ಗೆದ್ದರು.

ಇಲ್ಲಿಯ ಹೆಂಗಸರ ಆಸ್ಪತ್ರೆಯಲ್ಲಿ ಕಳೆದ ತಾರೀಕು ೩ರಲ್ಲಿ ಮ್ಯೋಲಜಾತಿಯವಳೊಬ್ಬಳು ವಿಚಿತ್ರಕರವಾದ ಒಂದು ಶಿಶುವನ್ನು ಹೆತ್ತಿದ್ದಳು. ಈ ಶಿಶುವಿಗೆ ಅರ್ಧಾಂಶ ಹೊಟ್ಟೆಯಿಂದ ಕೂಡಿದ ಪಕ್ಕಗಳೆರಡೂ ಒಟ್ಟಿಗೆ ಸೇರಿಹೋಗಿ ಹೊಟ್ಟೆ ಮಾತ್ರ ಒಂದೇ ಎಂಬಂತೆ ತೋರುತ್ತಿತ್ತು. ಬಾಕಿ ಎಲ್ಲಾ ಅವಯವಗಳು ಪ್ರತ್ಯಪ್ರತ್ಯೇಕವಾಗಿ ಪೂರ್ಣವಾಗಿದ್ದವು. ಡಿಸ್ಟ್ರಿಕ್ಟ ಸರ್ಜನರೂ, ಅಸಿಸ್ಟಾಂಟ ಸರ್ಜನರೂ ಈ ಶಿಶುವನ್ನು ಬಹಳ ಜಾಗರೂಕತೆಯಿಂದ ತೆಗೆದು ಮಗುವಿನ ತಾಯಿಯನ್ನು ಬದುಕಿಸಿದರು. ಕಳೆದ ತಾರೀಕು ೩ನೆಯ ಅರ್ಥಸಾಧಕ ಪತ್ರಿಕೆಯಲ್ಲಿ ಇನ್ನೊಂದು ವಿಚಿತ್ರ ಶಿಶುವಿನ ಕುರಿತು ಹೀಗೆ ಪ್ರಕಟವಾಗಿದೆ.

“ಭುವನೇಶ್ವರಕ್ಕೆ ನಾಲ್ಕು ಮೈಲಿಯ ದೂರದಲ್ಲಿರುವ ಒಂದು ಗ್ರಾಮದಲ್ಲಿ ಐದು ವರ್ಷದ ಒಂದು ಶಿಶುವು ಇರುವುದು. ಇದಕ್ಕೆ ಮೂರು ಕಾಲುಗಳುಂಟು. ಮಧ್ಯದ ಕಾಲಿನ ಉದ್ದ ಅಕ್ಕಪಕ್ಕದ ಕಾಲುಗಳಿಗಿಂತ ಮೂರು ಅಂಗುಲ ಕಡಿಮೆ. ಇದರಲ್ಲಿ ಏಳು ಬೆರಳುಗಳುಂಟು. ಈ ಮಗುವಿಗೆ ಎರಡು ಇಂದ್ರಿಯಗಳೂ ಉಂಟು. ಈ ವಿಚಿತ್ರ ಮಗುವಿನ ಹೆಸರು ಭೈರವ”.

ಇಲ್ಲಿಯ ಥಿಯೋಸೊಫಿಕಲ್ ಸೊಸೈಟಿಯ ಬಗ್ಗೆ ಹೊಸತಾಗಿ ಕಟ್ಟಿಸೋಣಾಗುವ ಕಟ್ಟೋಣದ ಬುನಾದಿಕಲ್ಲು ಇದೇ ಬರುವ ತಾ ೨೫ನೇ ಆದಿತ್ಯವಾರ ಹಾಕಲ್ಪಡುವುದು. ಈ ಕಾರ್ಯವನ್ನು ನೆರವೇರಿಸಲು ಕಲ್ಲಿಕೋಟೆಯ ಮ। ರಾ। ರಾ। ಮಂಜೇರಿ ರಾಮಅಯ್ಯರ್ ಬಿ. ಎ. ಬಿ. ಎಲ್. ಇವರು ಒಪ್ಪಿರುವರು. ಅಂದಿನ ಪ್ರಾತಃಕಾಲ ೮ ಗಂಟೆಗೆ ಇವರು [illegible] ಬಾಲಿಕಾ ಪಾಠಶಾಲೆಯ ಸಭಾಮಂಟಪದಲ್ಲಿ ಇಲ್ಲಿಯ ಥಿಯೋಸೊಫಿಕಲ್ ಸೊಸೈಟಿಯ ಪರವಾಗಿ ಒಂದು ಭಾಷಣವನ್ನು ಸಹ ಮಾಡುವರು. ಇವೆರಡಕ್ಕೂ ಸಕಲರಿಗೂ ಸುಸ್ವಾಗತವಿರುವುದು.

ಮಂಗಳೂರು ತಾಲೂಕುಬೋರ್ಡಿನ ಮೀಟಿಂಗು ಈ ತಿಂಗಳ ತಾ. ೨೪ನೇ ಮಂಗಳವಾರ ಮಧ್ಯಾಹ್ನ ೩ ಗಂಟೆಗೆ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಕೂಡುವುದು. ಈ ಮೀಟಿಂಗಿನಲ್ಲಿ ಸದರಿ ಬೋರ್ಡಿನ ಪ್ರೆಸಿಡೆಂಟರ ಚುನಾವಣೆಯೂ, ಡಿಸ್ಟ್ರಿಕ್ಟ ಬೋರ್ಡಿನ ಬಗ್ಗೆ ಒಬ್ಬ ಮೆಂಬರರ ಚುನಾವಣೆಯೂ ನಡಿಯುವುದು.

ಕೋಒಪರೇಟಿವ್ ಸಂಘಗಳ ಅಸಿಸ್ಟಾಂಟ ರಿಜಿಸ್ಟ್ರಾರರವರ ಆಫೀಸು ಕೊಡಿಯಾಲಬೈಲ್ [illegible] ಎದುರಿನಲ್ಲಿರುವ ಮಂಗಳೂರ ಕೋಒಪರೇಟಿವ್ ಸ್ಟೋರ್ಸಿನ ಮಾಳಿಗೆಯಲ್ಲಿ ತೆರೆಯೋಣಾಗಿದೆ.

ಇಲ್ಲಿಯ ಮಹಿಳಾ ಸಭೆಯವರು ಶಾಲೆಗೆ ಹೋಗದಿರುವ ಸ್ತ್ರೀಯರಿಗೆ ಗೃಹಕೃತ್ಯಕ್ಕೆ ಬೇಕಾದ ಮಾಹಿತಿ, ಕಸೂತಿ, ಹಿಂದೂ ದೇಶದ ಚರಿತೆ ಮುಂತಾದ ಶಿಕ್ಷಣವನ್ನು ಪ್ರತ್ಯೇಕವಾದ ಒಂದು ಕಟ್ಟೋಣದಲ್ಲಿ ಕೊಡುತ್ತಿದ್ದರಷ್ಟೆ. ಈಗ ಈ ಶಿಕ್ಷಣವು ಬಾವಟಗುಡ್ಡೆಯಲ್ಲಿರುವ ಅವರ ಮಂದಿರದಲ್ಲಿ ಕೊಡೋಣಾಗುತ್ತದೆ. ಸದರಿ ಶಿಕ್ಷಣವನ್ನು ಪಡೆಯಲಪೇಕ್ಷಿಸುವವರು ತ್ವರ್ಯದಲ್ಲಿ ಬಂದು ಸೇರಬೇಕಾಗಿ ಸಭೆಯವರು ಅಪೇಕ್ಷಿಸುತ್ತಾರೆ.

ಕಳೆದ ದಶಂಬರ ತಾ. ೨೫ನೇ ಗುರುವಾರ ಮಂಗಳೂರು ಮಲಯಾಳಿ ಬಿಲ್ಲವರ ಸಮಾಜದವರ ಒಂದು ಸಭೆ ಸೇರಿ “ಶ್ರೀ ಭಗವತಿ ಸ್ಥಾನವನ್ನು” ಜೀರ್ಣೋದ್ಧಾರ ಮಾಡುವ ಉದ್ದೇಶದಿಂದ “ಶ್ರೀ ಭಗವತಿ ವಿದ್ಯೋದಯ ಮಂಡಳಿಯು” ನೂತನವಾಗಿ ಸ್ಥಾಪಿಸಲ್ಪಟ್ಟಿತು— ದಕ್ಷಿಣ ಗಂಗೋತ್ರಿಯಲ್ಲಿ ಶಿವಲಿಂಗವು ದಿನಂಪ್ರತಿ ಪಕ್ಷಪಕ್ಷ ಕ್ಷಯ ವೃದ್ಧಿಯನ್ನು ತೋರಿಸುವ ಮಹಾತ್ಮ್ಯಕ್ಕಿಂತ ಇಮ್ಮಡಿಯಾಗಿ— ಕುದ್ರೋಳಿ ಶ್ರೀ ಭಗವತಿ ದೇವಸ್ಥಾನದಲ್ಲಿ ಸುಮಾರು ೧೫ ಫೀಟು ಎತ್ತರವಾಗಿ ಅಂದವಾಗಿ ಚಿತ್ರಗಳಿಂದ ಕೆತ್ತಲ್ಪಟ್ಟ ಶಿಲಾಮಯವಾದ “ದೀಪಸ್ತಂಭವು” ತನ್ನಷ್ಟಕ್ಕೆನೇ ಉತ್ಸವ ಸಮಯಗಳಲ್ಲಿ ಕಂಪನವಾಗಿ ತನ್ನ ಅಜ್ಜಿನಲ್ಲಿ ಸ್ಥಿರವಾಗಿ ಪುನಃಸ್ಥಾಯಿಯಾಗುವ ಮಹದಾಶ್ಚರ್ಯವನ್ನು ಕೆಂಡಸೇವೆ, ಮೂರ್ತಿಬಲಿ, ಮುಂತಾದ ಮಹಾತ್ಮ್ಯ ಲೀಲೆಗಳನ್ನು ಶಕ್ತಿ ಪ್ರದಾಯಕವನ್ನು ಲೋಕದಲ್ಲಿ ವ್ಯಾಪಿಸಿರುವ ಶ್ರೀ ದೇವಿಯು ಅನಾದಿಯಿಂದಲೇ ಈ ಸ್ಥಳದಲ್ಲಿ ಲೀಲಾವತಾರದಿಂದ ಜನರಿಗೆ ದೃಶ್ಯವಾದರೂ, ಈ ಸಮಾಜದವರ ದಾರಿದ್ರ್ಯತೆಯಿಂದಲೋ— ಫಲ ಮತ್ಸರಾದಿಗಳಿಂದಲೋ ಪಾವನವಾದ ಸ್ಥಳವು ಜೀರ್ಣವಾಗಿರುವುದನ್ನು ಈಗ ಶ್ರೀ ಭಗವತಿ ವಿದ್ಯೋದಯ ಮಂಡಳಿಯವರು ಜೀರ್ಣೋದ್ಧಾರ ಮಾಡಲು ಯತ್ನಿಸುವ ವಿಧವನ್ನು ಕಂಡು ಮಂಗಳೂರು ನಿವಾಸಿಕರೆಲ್ಲರೂ ತುಂಬಾ ಸಂತೋಷ ಪಡುವುದಾಗಿದೆ.

ಒಬ್ಬ ನಿವಾಸಿಕ.

WANTED.

Application from Matriculates or holders of completed School Leaving Certificates for undergoing training for employment as Supervisors of Co-operative Socities.. Applicants should state their age, caste and all qualifications in detail. If applicants know typewriting, samples of typewriting to accompany the applications with a declaration that the sample was typed by the applicant himself. Samples of English and Kanarese handwriting also to accompany the applications. Other languages, known, if any, to be stated with the exact extent of such knowledge and applications to be accompanied with a sample of the handwriting in such languages also. The candidates selected have to undergo training AT THEIR OWN EXPENSE for three months, out of which a fortnight is to be spent in a Co-operative Society in the District, a fortnight in the office of the Assistant Registrar of Co-operative Societies, Mangalore, six weeks with an Inspector of Co-operative Societies touring in the District and a fortnight touring with the Assistant Registrar of Co-operative Societies. The candidates will then become eligible for appointment as probationary Supervisors and will be appointed as such as soon as a supervisor's vacancy occurs. The probation will ordinarily cease when the candidates have worked as Supervisors for a total period of twelve months, and at the end of probation the candidates will be eligible for appointments as regular Supervisors on the occurrence of vacancies. Supervisors will draw a monthly pay of Rs. 25/- and a fixed monthly travelling allowance of Rs. 15/-. Supervisers are eligible for the benefits of a Staff Provident Fund also. Candidates must be prepared to work in any part of the South Kanara District. Applications are to reach the undersigned on or before the 23rd February, 1920.

South Kanara Central Co-operative Bank, Ltd., Puttur, SOUTH KANARA.
Dated 31st January, 1920.

M. ANANTA RAU,
Secretary.

[illegible]

ಮೇಲೆ ... ಅವನು ತನ್ನ ಸೇನೆಯೊಂದಿಗೆ ... ಮೇಲೆ ಎಡಬಲ ... [illegible]

[illegible] ... ಈ ಸಭೆಯು ಸೇರಿದ್ದ ದಿನ ಅಮೃತ ಸರದಲ್ಲಿ ಪ್ರಾರ್ಥನೆಯು ... ಮತ್ತು ಉತ್ಸವ ನಡೆದಿತ್ತು, ದೂರ ದೂರದವರೂ ಆ ಪಟ್ಟಣಕ್ಕೆ ಬಂದು, ಅಲ್ಲಿ ಸಭೆಯು ಸೇರುವ ಸುದ್ದಿಯನ್ನು ಕೇಳಿದು ... ಅದನ್ನು ನೋಡುವುದಕ್ಕಾಗಿ ಬಂದಿದ್ದರು. ಈ ಗುಂಪಿನಲ್ಲಿ ... ಅಗಲ ... ಗುಂಪಿನಲ್ಲಿ ಮುದುಕರೂ, ಹುಡುಗರೂ, ಮಕ್ಕಳಾದಿ ... ಎಲ್ಲಾ ವಯಸ್ಸಿನ ಜನರೂ ಇದ್ದರು. ಆದರೆ ಜನರಲ್ ಡ್ಯಾಯರ್ ... ಮನಸ್ಸಿಗೆ ಈಗ ಹತ್ತಿತೋ! ಈ ಸಭೆಯಲ್ಲಿ ನೆರೆದಿದ್ದವರಲ್ಲ ... ತನ್ನ "ಯಾವ ಸಭೆಯನ್ನೂ ಸೇರಕೂಡದೆಂಬ" ಶಾಸನವು ಗೊತ್ತಿರಲಿಲ್ಲವೆಂಬ ವಿಚಾರವು ಅವನಿಗೆ ಹತ್ತಲಿಲ್ಲ. ಕ್ಷಣದೊಳಗೆ ಆತನು, ಅಲ್ಲಿನ ಜನರಿಗೆ ಯಾವ ಎಚ್ಚರಿಕೆಯನ್ನೂ ಕೊಡದೆ, ತಡೆಯಿಲ್ಲದಂತೆ ಅವರ ಮೇಲೆ ಗುಂಡಿನ ಮಳೆ ಗರೆಸಿಬಿಟ್ಟನು — ಮತ್ತು, ಸಾಧ್ಯವಿದ್ದಷ್ಟು ತಪ್ಪಿಸಿಕೊಂಡು ಓಡಿ ಹೋಗು ... ಜನರ ಗುಂಪಿನ ಮೇಲೆ ಆ ಧೈರ್ಯಶಾಲಿಯಾದ ಜನರಲ್ ಸಾಹೇಬನು ... ಗುಂಡನ್ನು ಹಾರಿಸುತ್ತಿದ್ದನು! ಆಗ ಹಂಟರ್ ಕಮಿಟಿಯವರೊಡನೆ ಆತನೇ ಕೊಟ್ಟ ಸಾಕ್ಷಿಯಿಂದ, "ತನ್ನ ಮದ್ದಿನ ಸಾಮಾನುಗಳು ಮುಗಿದುಹೋಗುವವರೆಗೆ ತಾನು ಗುಂಡು ಹಾರಿಸುತ್ತಿದ್ದನು; ನಿಲ್ಲಿಸಿದನೇ ಹೊರತು ಮಿಕ್ಕಾವ ಕಾರಣದಿಂದ ತಾನು ನಿಲ್ಲಿಸಲಿಲ್ಲ" ವೆಂದು ತಿಳಿದುಬಂದಿದೆ. ಈ ರೀತಿಯಾದ ಭಯಂಕರವಾದ ಅತ್ಯಾಚಾರವು ನಡೆದ ಮೇಲೆ ಆತನು ತನ್ನ ಸೇನೆಯವರನ್ನು ಕರೆದು ಕೊಂಡು, ಅಲ್ಲಿ ಸತ್ತಿದ್ದ ಮತ್ತು ಸಾಯುತ್ತಿದ್ದ ನೂರಾರು ಜನರ ವಿಚಾರವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಹೊರಟುಹೋದನು. ಮತ್ತೆ ತನ್ನ ಸಾಲಿನ ಕಾನೂನಿನಲ್ಲಿ ಯಾವ ತಪ್ಪುಗಾರನೂ ಪಾರಾಗಲಾರನೆಂದು ತೋರಿಸುವಂತೆ, ಅದೇ ದಿನ ಬೆಳಿಗ್ಗೆ, "ರಾತ್ರಿ ೮ ಘಂಟೆಯಿಂದ ಯಾರಾದರೂ ಬೀದಿಯಲ್ಲಿ ತಿರುಗಾಡುವುದನ್ನು ಕಂಡರೆ, ಅವರನ್ನು ಬಹು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುವದೆ"ಂದು ವಿಧಿಸಿದ್ದ ಆತನ ಆಜ್ಞೆಯನ್ನು ಯಾರಾದರೂ ಉಲ್ಲಂಘಿಸುವವರೋ ಎಂದು ಪರೀಕ್ಷಿಸಲು, ರಾತ್ರಿ ೯ ಗಂಟೆಗೆ ಹೊರಕ್ಕೆ ಸಂಚಾರ ಹೊರಟನು. ಇದರಿಂದ ಅಲ್ಲಿ ಮೃತರಾಗಿದ್ದವರ ಬಂಧುಗಳು ಶವಗಳನ್ನು ಸಾಗಿಸುವುದಕ್ಕೂ, ಗಾಯಹೊಂದಿದವರ ಸ್ನೇಹಿತರು ಅವರಿಗೆ ಯಾವ ವಿಧವಾದ ಚಿಕಿತ್ಸೆ ಸಾಧನಗಳನ್ನು ಮಾಡುವುದಕ್ಕೂ, ಮಾರ್ಗವಿಲ್ಲದಂತಾಯಿತು.

ವಾಚಕರೇ ಆಯಿತು. ಇಡೀ ಹಿಂದುಸ್ಥಾನವನ್ನೇ ನಡುಗಿಸಿಬಿಟ್ಟ ಆ "ಅತಿಕ್ರೂರವೂ, ಉದ್ದೇಶ ಪೂರ್ವಕವೂ ಆದ ಜಲ್ಲಿಯನ್‌ವಾಲಾ ಬಾಗಿನ ಕೊಲೆ"ಯ ಸಂಕ್ಷಿಪ್ತ ಇತಿಹಾಸವು ಮುಗಿಯಿತು. ಐರಿಷ್ ಪೃಥುವಿನ ಅನುಮತಿಯನ್ನು ಪಡೆದಾ ಬ್ರಿಟಿಷ್ ಜನರಲ್ಲಿನ ಭಯಂಕರವಾದ ಪಾತಕ ಕೃತ್ಯದ ವಿಚಾರವಾಗಿ ಮಾತನಾಡುವಾಗ ನಮ್ಮ ಭಾಷೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಅಸಾಧ್ಯವು. ಆದರೆ ಹಂಟರ್ ಕಮಿಟಿಯವರ ವಿಚಾರಣೆಯು ಇನ್ನೂ ನಡೆಯುತ್ತಲಿರುವುದರಿಂದ ನಾವೂ ಅವರ ನಿರ್ಣಯವನ್ನು ನೋಡಬೇಕಾಗಿದೆ.

ನಿಜವಾಗಿ ಅಮೃತಸರದಲ್ಲಿ ಈ ಪಶುಪ್ರಾಯವು ಒಂದೇ ಅಥವಾ ಕೊನೆಯ ವ್ಯವಹಾರವಾಗಿರಲಿಲ್ಲ. ಈ ಕೊಲೆಯಾದ ಎರಡು ದಿನಗಳ ಮೇಲೆ ಎಂದರೆ ಎಪ್ರಿಲ್ ೧೫ನೆಯ ತಾರೀಖಿನ ದಿನ ಅಲ್ಲಿ ಯುದ್ಧದ ಕಾನೂನು ಆಚರಣೆಗೆ ಬಂದು, ಆಮೇಲೆ ನಾಗರಿಕ ಜನಾಂಗದ ಇತಿಹಾಸದಲ್ಲಿ, ರವೀಂದ್ರನಾಥ ಠಾಕೂರರು ಹೇಳುವಂತೆ ಕೆಲವು ಸಂದರ್ಭಗಳನ್ನು ಬಿಟ್ಟು, ಇದಕ್ಕೆ ಸಮಾನವಾದ್ದು ಮತ್ತೊಂದಿಲ್ಲವೆನ್ನಿಸಿಕೊಳ್ಳುವಂಥಾ ಪ್ರಜಾಪೀಡನವೂ ಉಗ್ರಶಾಸನವೂ ಆಚರಣೆಗೆ ಬಂದವು. ದಂಗೆಯಾಳುಗಳಿಗೆ ಪಾಠವನ್ನು ಕಲಿಸುವ ಆಗಿನ ಸಮಯದಲ್ಲಿ ಎಂಥಾ ಕೆಲಸವೂ ಹೀನವಾದ್ದು ಎನಿಸಿಕೊಂಡಿರಲಿಲ್ಲ; ಮತ್ತೆ ಎಂಥಾ ಕ್ರೂರ ಶಿಕ್ಷೆಯಾದರೂ ಅದು ಕ್ರೂರವಾದ್ದು ಎನಿಸಿಕೊಂಡಿರಲಿಲ್ಲ ಆಗ ಮನಸ್ಸು ಬಂದಂತೆ ಜನರನ್ನು ಕೈದುಮಾಡುವುದು, ಕೈಕೋಳಗಳನ್ನು ಹಾಕುವುದು, ಮಾನಾರ್ಹರಾದ ಅನೇಕರನ್ನು ವಿಚಾರಣೆ ಇಲ್ಲದ ಬಹು ದಿನಗಳ ವರೆಗೆ ಕಾವಲಿನಲ್ಲಿಟ್ಟಿರುವುದು, ಬ್ಯಾರಿಸ್ಟರ್ ಮತ್ತು ವಕೀಲರನ್ನು ಸ್ಪೆಶಲ್ ಪೋಲಿಸ್ ಕಾನ್‌ಸ್ಟೇಬಲ್‌ರಾಗಿ ನೇಮಕಮಾಡುವುದು ಬ್ರಿಟಿಷ್ ಅಧಿಕಾರಿಗಳಿಗೆ ಎಲ್ಲರಿಂದಲೂ ಬಲವಾದ ಸಲಾಮು ಮಾಡಿಸುವುದು ಇವೇ ಮೊದಲಾದ ಅನೇಕ ದುಷ್ಕೃತ್ಯಗಳ [illegible]ಯು ಅಮೃತಸರದ ಮೇಲೆ ಹೊರಿಸಲ್ಪಟ್ಟಿತ್ತು. ಅವರ ಪೈಕಿ ಕೆಲವರು ಬೀದಿಗಳವರ ಅಪರಾಧಕ್ಕಾಗಿ ಪಟ್ಟಣಿಗರನ್ನು ಹೊಟ್ಟೆಯಿಂದ ನಡೆದುಕೊಂಡು ಹೋಗುವರೆಂದು ವಿಧಿಸಿದ್ದು ಮಾತ್ರ ಎಲ್ಲಾ ದುಷ್ಕೃತ್ಯಗಳಿಗಿಂತಲೂ ಹೆಚ್ಚು ಮಾನಭಂಗಕರವಾದ್ದಾಗಿಯೂ ಇತ್ತು. ಇಂಥಾ ಕ್ರೂರವಾದ ಅತ್ಯಾಚಾರಗಳ ವಿಚಾರವಾಗಿ ಹೆಚ್ಚು ವಿವರಿಸುವ ಆವಶ್ಯಕವಿಲ್ಲ. ಹಂಟರ್ ಕಮಿಟಿಯವರ ಮುಂದಿನ ಸಾಕ್ಷಿಗಳಿಂದ ಈ ವಿಚಾರಗಳೆಲ್ಲವೂ ಸ್ಪಷ್ಟವಾಗಿ ತಿಳಿದಿರುವವು. ಇನ್ನು ಇಲ್ಲಿ ಇಷ್ಟು ಹೇಳಿದರೆ ಸಾಕು. ಈ ಅತ್ಯಾಚಾರಗಳಿಂದ ಹಿಂದೂಸ್ಥಾನದಲ್ಲಿ ಬ್ರಿಟಿಷರ ಆಳಿಕೆಯ ಇತಿಹಾಸ ಬಂದು ಅಧ್ಯಾಯವು ವಿಶೇಷ ಕಲಂಕಿತವಾಗಿರುವುದು. ಈ ಸಮಾಚಾರವು ಇಂಗ್ಲೆಂಡಿಗೆ ಸೇರಿ, ಅಲ್ಲಿ ಬ್ರಿಟಿಷ್ ಸರಕಾರವೂ ಮತ್ತು ಬ್ರಿಟಿಷ್ ಪಾರ್ಲಿಮೆಂಟಿನವರೂ ವಿಚಾರದಲ್ಲಿ ಅಪರಾಧಿಗಳಾದವರು ಎಂಥಾ ಉಚ್ಚಪದವಿಯಲ್ಲಿದ್ದರೂ ಲಕ್ಷಿಸದೇ ಅವರನ್ನು ಸರಿಯಾಗಿ ಶಿಕ್ಷಿಸಿ, ಇನ್ನು ಮುಂದೆ ಈ ದೇಶದಲ್ಲಿ ಅವರ ಪ್ರತಿನಿಧಿಗಳು ಅವರ ಹೆಸರಿನಲ್ಲಿ ಇಂಥಾ ಅತ್ಯಾಚಾರವನ್ನು ಆಚರಿಸದಿರುವಂತೆ ಮಾಡಲು, ಅವರಿಂದ ಶಪಥಮಾಡಿಸುವಷ್ಟು ನ್ಯಾಯಪಕ್ಷಪಾತವು ಆ ಮಹಾದೇಶದವರ ಅಂತರಾತ್ಮನಲ್ಲಿ ಉದಯಿಸುವುದೆಂದು ನಂಬಿರುವೆವು.

ಡಿಸೆಂಬರ್ 1919. } ಡಿ. "ಟ್ರಿಬ್ಯೂನ್" ಆಫೀಸು.

ಸಹಸ್ರ ಕುಂಭಾಭಿಷೇಕವು.

ಮಂಜೇಶ್ವರದಲ್ಲಿರುವ ಶ್ರೀಮದನಂತೇಶ್ವರ ದೇವಸ್ಥಾನವು ಗೋವೆಯಿಂದ ಕನ್ಯಾಕುಮಾರಿ ವರೆಗೆ ಪಸರಿಸಿರುವ ಗೌಡಸಾರಸ್ವತ ಬ್ರಾಹ್ಮಣ ಜಾತಿವರ್ಗದವರ ಆಧೀನದ ವ ಅಧಿಕಾರದಲ್ಲಿರುವ ಪ್ರಸಿದ್ಧ ದೇವಾಲಯ. ಈ ದೇವಸ್ಥಾನದಲ್ಲಿ ಭಾರದ್ವಾಜ ಕುಟುಂಬದ ಬ್ರಾಹ್ಮಣರೊಬ್ಬರು ಶ್ರೀದೇವರ ಶಕ್ತಿಯಿಂದ ಅವಿಷ್ಟರಾಗಿ ಸಂಜ್ಞಾಭಾಷೆಯಿಂದ ಜನರು ಮಾಡಿಕೊಳ್ಳುವ ಅರಿಕೆಗಳಿಗೆ ಅಪ್ಪಣೆಗಳನ್ನಿತ್ತು ಕಷ್ಟಪರಿಹರಿಸುವ ವಾಡಿಕೆಯು ಬಹಳ ಪುರಾತನ ಕಾಲದಿಂದ ಇದೆ ಎಂಬ ವಿಷಯವು ಈ ಕ್ಷೇತ್ರದ ಸ್ಕಾಂದಪುರಾಣೋಕ್ತವಾದ ಮಹಾತ್ಮೆಯಿಂದ ವಿದಿತವಾಗುತ್ತದೆ. ಈ ದೇವಸ್ಥಾನದಲ್ಲಿ ಸುಮಾರು ೯೫ ವರ್ಷಗಳ ಹಿಂದೆ ಯುವಸಂವತ್ಸರದ ಮಾರ್ಗಶಿರ ಶು ೧೫ (೧೨-೧೨-೧೮೩೫)ಗೆ ಶ್ರೀಮತ್ ಧ್ರುವತೇಂದ್ರ ತೀರ್ಥ ಶ್ರೀಪಾದಂಗಳವರ ಪ್ರಮುಖದಿಂದ ಸಹಸ್ರ ಕುಂಭಾಭಿಷೇಕವು ನಡೆಯಿತು. ಅದೇ ಕಳೆದ ಮಾರ್ಗಶಿರ ಶು ೬ ರಿಂದ ... ದಿನ ಶ್ರೀಮತ್ ... [illegible]

[illegible] ... ಶ್ರೀ ದೇವರ ... ಕೋಟೇಶ್ವರ, ಮಂಗಳೂರು, ... ಬಸರೂರು ... ಶ್ರೀ ದೇವರ ... ಮುಂಜೇಶ್ವರದಲ್ಲಿ ನೆರೆದರು. ಶ್ರೀ ದೇವರ ... ಕಾರವಾರ, ಹೊನ್ನಾವರ, ಮಂಗಳೂರು, ಕೋಟೇಶ್ವರ, ಉತ್ತರಕನ್ನಡ, ದಕ್ಷಿಣ ಮಹಾರಾಷ್ಟ್ರ ಮೈಸೂರು ಸೀಮೆಯ ಮೊದಲಾದ ಪ್ರಾಂತ್ಯಗಳಿಂದ ಬಂದ ... [illegible]

... ಖ್ಯಾತರಾದ ರಾವ್ ಬಹದ್ದೂರ ಸುಜೀರ ರಘುನಾಥಯ್ಯನವರೂ, ರಿಟಾಯರ್ಡ್ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರಾದ ಮ॥ ರಾ॥ ರಾ॥ ತಿಮ್ಮಪ್ಪಯ್ಯ ರಾಮಾಚಾರ್ಯರೂ, ಹೈಕೋರ್ಟ್ ವಕೀಲರಾದ ಮ॥ ರಾ॥ ರಾ॥ ಪಾಂಗಾಳ ಸುಬ್ರಾವರವರೂ ಇನ್ನೂ ಅನೇಕ ಮಾನ್ಯ ಗೃಹಸ್ಥರೂ ದಯಮಾಡಿಸಿದ್ದರು.

೧೪ಯು ಸೋಮವಾರ ವಾಸ್ತು ಹೋಮವೂ ನವಗ್ರಹ ಹೋಮವೂ ನಡೆದವು. ೧೫ ದಿನ ಶ್ರೀ ನೃಸಿಂಹ ಮಂತ್ರದ ವ ವಿಷ್ಣುಗಾಯತ್ರಿ ಮಂತ್ರದ ಪ್ರತ್ಯೇಕ ಲಕ್ಷ ಜಪವೂ ಹೋಮವೂ ನಡೆದವು. ಮಾರನೆಯ ದಿನ ೧೬ಯ ಪರ್ವದಲ್ಲಿ ಹಂಚ ರಂಗಗಳಿಂದ ವಿಧ್ಯುಕ್ತರೀತ್ಯಾ ಬರೆದ ಸುಂದರವಾದ ಮಹಾ ಮಂಡಲದಲ್ಲಿ ೧೦೦೮ ಮೃತ್ತಿಕಾ ಕುಂಭಗಳು ಪೂಜಿಸಲ್ಪಟ್ಟು ಅಂದು ಸಾಯಂಕಾಲ ಘಂಟೆ ೫ರಿಂದ ರಾತ್ರಿ ೧೨ ಘಂಟೆ ವರೆಗೆ ನಾಲ್ಕೈದು ಸಾವಿರ ಸೀಯಾಳದ ಪಂಚಾಮೃತ ಅಭಿಷೇಕವೂ ಈ ಭಾರತ ವರ್ಷದ ಅನೇಕ ಕಡೆಗಳಿಂದ ಸಂಗ್ರಹಿಸಲ್ಪಟ್ಟ ಸುಮಾರು ೫೦ ಪುಣ್ಯನದಿಗಳ ತೀರ್ಥೋದಕಗಳೂ ಆ ಬಳಿಕ ಈ ಸಹಸ್ರಕುಂಭಗಳ ಅಭಿಷೇಕವೂ ಮಹಾ ವಿಜೃಂಭಣೆಯಿಂದ ನೆರವೇರಿದವು. ಈ ಮಧ್ಯೇ ಸುಮಾರು ೩೦೦ ಮಂದಿ ವರ್ಗದವರು ಶ್ರೀ ನೃಸಿಂಹಾನಂತೇಶ್ವರ ಪಾರಾಯಣೆಗೆ ಸ್ಥಿರವಾಗಿ ನಾವಾಕ್ಕೆ ಒಂದರಂತೆ ದಂಡವತ್ ನಮಸ್ಕಾರಗಳನ್ನು ಸಮರ್ಪಿಸಿದರು. ಇವರಲ್ಲಿ ಇಂಗ್ಲಿಷ ವಿದ್ಯಾಭ್ಯಾಸವನ್ನು ಹೊಂದಿನ ಯುವಕರು ಅಧಿಕವಾಗಿದ್ದರು.

ಈ ಸಹಸ್ರಕುಂಭಾಭಿಷೇಕ ವಿಧಿಯು ಪಂಚರಾತ್ರಾಂತರ್ಗತ ಪದ್ಮ ಸಂಹಿತೆಯಲ್ಲಿ ವಿವರಿಸಲ್ಪಟ್ಟಿದೆ. ಈ ವಿಧಿಯಲ್ಲಿ ಅನೇಕ ಔಷಧಗಳೂ ಅನೇಕ ಫಲ, ಅಂಕುರ, ಪಂಚಪತ್ರ, ಕ್ಷೇತ್ರಗಳೂ, ಅನೇಕ ಸ್ಥಾನಗಳ ಮೃತ್ತಿಕೆಗಳೂ ಅನೇಕ ಬಗೆಯ ಧಾನ್ಯಗಳೂ, ಸೂರ್ಯಕಾಂತ ಚಂದ್ರಕಾಂತ ಮೊದಲಾದ ಅನೇಕ ಪ್ರಸ್ತರಗಳೂ, ಲೋಹಗಳೂ, ಅನೇಕ ಬಗೆಯ ಉದಕಗಳೂ ಇತ್ಯಾದಿ ಕಷ್ಟಸಾಧ್ಯವಾದ ಸಾಮಗ್ರಿಗಳ ಸಂಗ್ರಹವು ಹೇಳಲ್ಪಟ್ಟಿರುತ್ತದೆ. ಶ್ರೀ ದೇವರ ಅನುಗ್ರಹದಿಂದ ಪ್ರತೀಕಲಶಕ್ಕೆ ಬೇಕಾದ ಎಲ್ಲಾ ಬಗೆಯ ವಸ್ತುಗಳು ಸಂಗ್ರಹಿಸಲ್ಪಟ್ಟು ಹಿಮಾಚಲದಿಂದ ಹಿಮವೂ ವಿಂಧ್ಯಾಚಲ, ನೀಲಗಿರಿ, ಕುರುಕ್ಷೇತ್ರ, ಕುದುರೆಮುಖ ಇವೇ ಮೊದಲಾದ ೭ ಕಾಡು ಹಂದಿಯ ಕೋರೆಯು, ಆನೆಯ ದಾಡೆಯು ಪುತ್ತಿನ ವಗ್ಗರ ಅನೇಕ ಮೃತ್ತಿಕೆಗಳೂ ವ ಬೇರೆ ಎಲ್ಲಾ ಜೀನಸುಗಳೂ ವಿಧ್ಯುಕ್ತರೀತಿಯಿಂದ ಶ್ರೀ ದೇವರಿಗೆ ಅಭಿಷೇಕವಾದವು. ಇಂಥಾ ಸಂಗ್ರಹಕ್ಕೆ ಈ ಜಿಲ್ಲೆಯ ವ ಪರಜಿಲ್ಲೆಗಳಿಂದಲೂ ಉತ್ತರ ಹಿಂದುಸ್ಥಾನದ ಅನೇಕ ಭಾಗಗಳಿಂದಲೂ ಅನೇಕ ಮಹಾನುಭಾವರು ತಮ್ಮ ತಮ್ಮ ಖರ್ಚಿನಿಂದ ಬೇಕಾದ ವಸ್ತುಗಳನ್ನು ಕೊಟ್ಟಿದ್ದರು.

ಸದರಿ ಸಹಸ್ರ ಕುಂಭಾಭಿಷೇಕದ ದಿನ ಗೌಡಸಾರಸ್ವತ ಬ್ರಾಹ್ಮಣ ವರ್ಗೀಕರಾದ ಮಂಜೇಶ್ವರ ಕ್ಷೇತ್ರದ ಎಲ್ಲಾ ಬಗೆಯ ಬ್ರಾಹ್ಮಣರ ದೇವಸ್ಥಾನಗಳಲ್ಲಿಯೂ, ಬ್ರಾಹ್ಮಣೇತರರ ಭೂತಸ್ಥಾನಗಳಲ್ಲಿಯೂ, ಮುಸಲ್ಮಾನರ ಮಸೀದಿಗಳಲ್ಲಿಯೂ ಕ್ರೈಸ್ತರ ಸಭೆಗಳಲ್ಲಿಯೂ ಸರ್ವಜಾತಿಯ ಶ್ರೇಯಸ್ಸಿನ ಬಗ್ಗೆ ಪ್ರಾರ್ಥನೆಗಳೂ ಧರ್ಮವೂ ನಡೆಯಬೇಕೆಂದು ಆಯಾಯ ಸಮುದಾಯದ ಸಭ್ಯರಿಗೆ ಸರಿಯಾಗಿ ಹಣವನ್ನು ಕೊಟ್ಟಿರುವುದಲ್ಲದೆ ಆ ಕ್ಷೇತ್ರದ ಶಾಲೆಗಳಲ್ಲಿ ಮಕ್ಕಳಿಗೆ ಮಿಠಾಯಿ ಬದ್ದುಗಳನ್ನು, ಪಂಚಮರಿಗೂ ಕೊರಗರಿಗೂ ಅಕ್ಕಿಯನ್ನು ಹಂಚಲಾಗಿದೆ.

ಈ ಮಹೋತ್ಸವಕ್ಕೆ ಸಹಾಯವನ್ನೆಸಗಲು ಕಾರ್ಕಳದಿಂದಲೂ ಮಂಗಳೂರಿನಿಂದಲೂ ವ ಇತರ ಅನೇಕ ಊರುಗಳಿಂದಲೂ ಸುಮಾರು ೨೦೦ ಮಂದಿ ಸ್ವಯಂಸೇವಕರು ಈ ಬಗ್ಗೆ ಎರಡು ದಿವಸ ಮುಂಚಿತವಾಗಿಯೇ ಇಲ್ಲಿಗೆ ಬಂದು ಸೇರಿ ಈ ಕಾರ್ಯಕ್ಕೆ ಯಾವ ವಿಧದ ಊನವೂ ಬಾರದಂತೆ ಯಾತ್ರಿಕರೆಲ್ಲರಿಗೂ ಕಾರ್ಯಕ್ರಮಕ್ಕೂ ಕಲ್ಪಿಸಿದ ಸೌಕರ್ಯಗಳನ್ನು ನೋಡುವಾಗ ಸದರಿ ಸ್ವಯಂಸೇವಕರ ನಿಸ್ವಾರ್ಥ ವರ್ತನೆ ಬಗ್ಗೆ ಅವರಿಗೆ ಎಷ್ಟು ಕೃತಜ್ಞರಾದರೂ ಸಾಲದು. ಈ ಸ್ವಯಂಸೇವಕರೆಲ್ಲರೂ ಶೀಪ್ರತಿಮೆಯನ್ನು "ಸಹಸ್ರ ಕುಂಭಾಭಿಷೇಕ, ಮಂಜೇಶ್ವರ ೧೯೧೯" (ಶಾರ್ವರೀ ಸಂವತ್ಸರ) ಎಂಬ ಅಕ್ಷರಗಳ ಕೆತ್ತನೆಯ ಬೆಳ್ಳಿಯ ಬಿಲ್ಲೆಗಳು ಬಲಗೈಗೆ ಕಟ್ಟುವ ಬಗ್ಗೆ ಪುರಸ್ಕಾರವಾಗಿ ಕೊಡಲ್ಪಟ್ಟಿದ್ದವು.

ಈ ಮಹೋತ್ಸವಕ್ಕೆ ಸೇರಿದ ಜನರಿಗೆ ಭೋಜನಕ್ಕೆ ದೇವಸ್ಥಾನದಲ್ಲಿ ಸ್ಥಳ ಸಾಕಾಗದ್ದರಿಂದ ಸದರಿ ಸುತ್ತುಗಳಲ್ಲಿ ಅಲ್ಲಲ್ಲಿ ಚಪ್ಪರಗಳನ್ನು ಹಾಕಿದ್ದಲ್ಲದೆ ಮೇಲಣ ರಥಬೀದಿಯಲ್ಲಿ ಕೂಡಾ ದೊಡ್ಡ ಚಪ್ಪರವು ಹಾಕಿತ್ತು. ಭೋಜನಕ್ಕೆ ಗಂಡಸರೆಲ್ಲರೂ ಸುತ್ತುಗಳಲ್ಲಿಯೂ ಹೆಂಗಸರು ರಥಬೀದಿಯ ಚಪ್ಪರದಲ್ಲಿಯೂ ಕುಳಿತುಕೊಳ್ಳುವಂತೆ ವ್ಯವಸ್ಥೆಮಾಡಿತ್ತು. ಇಡೀ ರಾತ್ರೆ ಗ್ಯಾಸ್‌ದೀಪಗಳನ್ನು ಹಚ್ಚಿಸುವ ಏರ್ಪಾಡು ಮಾಡಿತ್ತು. ಇಂಥಾ ದೊಡ್ಡ ಜನಸಮೂಹವು ಕೂಡಿದ ಎಡೆಯಲ್ಲಿ ಶ್ರೀದೇವರ ಅನುಗ್ರಹದಿಂದ ಯಾವದೊಂದು ಬಗೆಯ ಸಾಂಕ್ರಾಮಿಕ ರೋಗವಾದರೂ ಕಾಣಿಸ್ಸದೆ ಜನರೆಲ್ಲರೂ ಈ ಮಹೋತ್ಸವವನ್ನು ನೋಡಿ ಸಂತೋಷದಿಂದ ಅವರವರ ಊರುಗಳಿಗೆ ತೆರಳಿದರು.

ಜಿಲ್ಲಾ ಕಲ್ಲೆಕ್ಟರರ ಜಮಾಬಂದಿ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು).

೧೫. ಪಟ್ಟಾದಾರರು ಕುಮಕಿ ಮತ್ತು ಹಾಡಿ ಬಾಣೆ ಸ್ಥಳಗಳಿಗೆ ರೆವಿನ್ಯೂ ಅಧಿಕಾರಿಗಳ ಅಪ್ಪಣೆ ಪಡೆಕೊಳ್ಳದೆ ಬೇಲಿ ವಗೈರೆ ಮಾಡಬಹುದೆಂದು ಕಲ್ಲೆಕ್ಟರ ದೊರೆಗಳ ಅಭಿಪ್ರಾಯ.

೧೬. ಸರಕಾರದಿಂದ ಮನ್ನಣೆ ಹೊಂದುವ ಜನೋಪಕಾರ್ಯ ಮತ್ತು ಮತಸಂಬಂಧವಾದ ಸಂಸ್ಥೆಗಳಿಗೆ ಮುಫತ್ತಾಗಿ ಮರವಿಟ್ಟು ಸರಕಾರ ಕಾಡುಗಳಿಂದ ಒದಗಿಸಲು ಈಗಿನ ನಿಬಂಧನೆಗಳ ಮೇರೆಗೆ ಅನುಕೂಲವಿಲ್ಲ ಎಂದು ಕಲ್ಲೆಕ್ಟರ ಸಾಹೇಬರು ಉತ್ತರವಿತ್ತರು.

೧೭. ಗೋಚರಾವಿಗೆ ಬೇರೆ ಸ್ಥಳಗಳನ್ನು ಬಿಂಗಡಿಸಿಡುವುದರಿಂದ ಉಪಕಾರಕ್ಕೆ ಬದಲಾಗಿ ಅಪಕಾರವೇ ಉಂಟಾಗುತ್ತದೆ, ಆದ್ದರಿಂದ ಖಾಸಗಿ ವರ್ಗ ಸ್ಥಳಗಳಲ್ಲಿಯೇ ಜಾನುವಾರುಗಳನ್ನು ಮೇಯಿಸುವುದು ಒಳ್ಳೇದೆಂದು ಕಲ್ಲೆಕ್ಟರರ ಸೂಚನೆ.

೧೮. ಕ್ವಿನೀನು ಮತ್ತು ಸಾಂಕ್ರಾಮಿಕ ಪರಿಹಾರಕ ಔಷಧಗಳನ್ನು ಗ್ರಾಮ ಉದ್ಯೋಗಸ್ಥರ ಮೂಲಕ ಧರ್ಮಾರ್ಥವಾಗಿ ಒದಗಿಸಿಕೊಡುವ ಏರ್ಪಾಡನ್ನು ಹಳ್ಳಿಗಳಲ್ಲಿ ಜಾರಿಗೆ ತರಬೇಕೆಂದು ಜನರು ಕೇಳಿಕೊಂಡದ್ದಕ್ಕೆ ೩೦ ಪೊಟ್ಟಣಗಳನ್ನು ಹಂಚುವುದಕ್ಕೆ ಅಗಲೇ ವಿಲೇವಾರಿ ಆಗಿದೆ ಎಂತಲೂ ಆಸ್ಪತ್ರೆಗಳಲ್ಲಿ ಗ್ರಾಮ ಉದ್ಯೋಗಸ್ಥರಿಗೆ ಈ ಔಷಧ ಸೇವನೆಯ ಕ್ರಮಗಳನ್ನು ಕಲಿಸು ಅನುಭವವನ್ನು ಕೊಡಿಸುವಂತೆ ಜಿಲ್ಲಾ ಮೆಡಿಕಲ್ ಅಧಿಕಾರಿಗೆ ಬರೆಯಲಾಗುವದೆಂದು ತಿಳಿಸಲಾಯಿತು.

[illegible]

... ಅದಕ್ಕೆ ... ಉತ್ತರ ... [illegible]

೨೨. ಕಲ್ಲಾಡಿ, ಕೊಡಿಯಾಲ, ಸುಬ್ರಮಣ್ಯ, ಮಂಜೊಟ್ಟಿ, ಇವೇ ಈ ಗ್ರಾಮಗಳಲ್ಲಿ ... [illegible] ... ಸೇತುವೆ ಮಾಡುವದಕ್ಕೆ ... [illegible]

... ಯುವರಿಗೆ ... [illegible]

೨೩. ಮಂಗಳೂರು ಮಡಿಕೇರಿ ರಸ್ತೆಯು ... ಮತ್ತು ಕೊಡಂಗೆರೆ ಸುಬ್ರಮಣ್ಯ ರಸ್ತೆಯು ... ವರೆಗೆ ಯಾವದೊಂದು ಅಂತರವನ್ನು ಕಡಿಮೆ ಮಾಡುವಂತೆ ಒಂದು ಮಾರ್ಗವು ಅಗತ್ಯವಿದೆ ಎಂದದ್ದಕ್ಕೆ ಈಗ ಹಣವಿಲ್ಲ, ಆದರೆ ಈ ವಿಷಯವನ್ನು ತಾಲೂಕು ಬೋರ್ಡ್ ಪ್ರೆಸಿಡೆಂಟರು ನವಿನಲ್ಲಿ ಟ್ಟುಕೊಳ್ಳುವಂತೆ ಅವರಿಗೆ ಬರೆಯುತ್ತೇನೆಂದು ಕಲ್ಲೆಕ್ಟರರು ಉತ್ತರ ಕೊಟ್ಟರು. ಕಡೇ ಸುಬ್ರಮಣ್ಯ ರಸ್ತೆಯು ... (ಬಾಗಿಲುಕಲ್ಲು) ಎಂಬ ... ಸುಬ್ರಮಣ್ಯ ರಸ್ತೆಯನ್ನು ಗುತ್ತಿಗಾರಕ್ಕೆ ಬಂದು ಕೂಡಿಸುವ ವಿಷಯಕ್ಕೂ, ... ವರದ ದಾರಿಯಾಗಿ ... ದಿಂದ ಆಧೂರ ವರೆಗೆ ರಸ್ತೆ ಕಡಿಸುವ ವಿಷಯಕ್ಕೂ ಬಂಗಾಡಿಯಿಂದ ಬೆಳ್ತಂಗಡಿ ರಸ್ತೆಮಾಡಿಸುವುದಕ್ಕೂ ಇದೇ ಉತ್ತರ ಸಿಕ್ಕಿತು.

೨೪. ಅರಂತೋಡಿನಿಂದ ಕೋಡಿಕಾಜಕ್ಕೆ ಹೋಗುವ ರಸ್ತೆಯನ್ನು ಬೇಗನೆ ಮುಗಿಸುವ ಅವಶ್ಯವಿದೆ ಎಂದು ಕೇಳಿದ್ದಕ್ಕೆ ಆ ರಸ್ತೆಯನ್ನು ರಿಸರ್ವ ಫೊರೆಸ್ಟಿನ ಮಾರ್ಗವಾಗಿ ಕೊಂಡುಹೋಗುವದಕ್ಕೆ ಅಪ್ಪಣೆಯಿಲ್ಲೆಂದು ಫೊರೆಸ್ಟು ಇಲಾಖೆಯವರು ಒಂದು ವರ್ಷದ ಹಿಂದೆ ತಿಳಿಸಿದ್ದರೆಂದೂ, ಮಾಣಿಯ ತನಕ ಮಂಗಳದ ರಸ್ತೆಯ ವಿಷಯವು ಫೊರೆಸ್ಟ ಇಲಾಖೆಯವರ ವಿಚಾರದಲ್ಲಿ ಬಾಕಿ ಇದೆ ಎಂತಲೂ ಉತ್ತರ ಸಿಕ್ಕಿತು.

೨೫. ಸುಳ್ಯ ಮತ್ತು ಕೋಡಿಕಾಜದಲ್ಲಿ ಬರ ಪ್ರಯಾಣಿಕರಿಗೆ ತಂಗುವದಕ್ಕೆ ಛತ್ರ ಕಟ್ಟಿಸುವ ವಿಷಯವನ್ನು ತಾಲೂಕುಬೋರ್ಡಿನವರ ಅವಗಾಹನೆಗೆ ತರುತ್ತೇನೆಂತಲೂ ಹೀಗಿದ್ದರೂ ಖಾಸಗಿ ಜನರು ಇಂಥ ಧರ್ಮಸಹಾಯವನ್ನು ಮಾಡಲಿಕ್ಕೆ ಅವಕಾಶವಿದೆ ಎಂತಲೂ ಉತ್ತರ ಸಿಕ್ಕಿತು.

೨೬. ಗ್ರಾಮ ಕೋರ್ಟುಗಳಲ್ಲಿ ಕೋರ್ಟು ಫೀಸು ವಸೂಲು ಮಾಡುವ ಕ್ರಮವನ್ನು ತೆಗೆದುಹಾಕಬಾರದೇ ಎಂದು ಕೇಳಿದ್ದಕ್ಕೆ ತನ್ಮೂಲಕ ವ್ಯಾಜ್ಯಸಾಧ್ಯಗಳು ಹೆಚ್ಚುವಂತೆ ಮಾಡುವುದು ಸರಕಾರದ ಉದ್ದೇಶವಲ್ಲ ಎಂದು ಜವಾಬು ಬಂತು.

೨೭. ಸುಳ್ಯದಲ್ಲಿ ಒಂದು ಬಾಲಿಕಾಪಾಠಶಾಲೆ ಮತ್ತು ಒಂದು ಮಾಪಿಳ್ಳೆಯರ ಶಾಲೆಯನ್ನು ಸ್ಥಾಪಿಸುವ ಪ್ರಸ್ತಾಪವನ್ನು ತಾಲೂಕುಬೋರ್ಡಿನವರಿಗೆ ತಿಳಿಸುತ್ತೇನೆಂದು ಕಲ್ಲೆಕ್ಟರ ದೊರೆಗಳು ಹೇಳಿದರು.

೨೮. ೩ ವರ್ಷಗಳಿಗೆ ಮಿಕ್ಕಿ ಹಿಂದಿನ ಕಂದಾಯವನ್ನು ವಸೂಲು ಮಾಡಬಾರದೆಂಬ ಸೂಚನೆಯನ್ನು ಅನುಸರಿಸಲು ಸಾಧ್ಯವಿಲ್ಲವಂತೆ.

೨೯. ಸಾಕ್ಷಿಗಾರರ ಭತ್ಯೆಯ ಮತ್ತು ಊಟದ ಎಲೋವೆನ್ಸ್ ದರಗಳನ್ನು ಈಗಿನ ಡ್ರಾಕ್ ದರಗಳಿಗೆ ಅನುಸರಿಸಿ ಏರಿಸುವಂತೆ ಮದ್ರಾಸು ಸರಕಾರದವರಿಗೆ ಬರೆಕೊಳ್ಳುತ್ತೇನೆಂದು ಉತ್ತರ ಸಿಕ್ಕಿತು.

೩೦. ಕುರಗುಂದದ ಜಾನುವಾರು ಸಂತೆಯನ್ನು ಸುಬ್ರಮಣ್ಯ ಷಷ್ಠಿಯ ಜಾತ್ರೆಯ ನಂತರ ಜರಗಿಸಬೇಕೆಂಬ ಸೂಚನೆಯನ್ನು ದೊರೆಗಳು ಒಪ್ಪಿಕೊಂಡರು. ಜಾನುವಾರುಗಳನ್ನು ಅಲ್ಲಿ ಕಟ್ಟಿಹಾಕಿದ್ದಕ್ಕೆ ಫೀಸು ವಸೂಲು ಮಾಡಬಾರದೆಂಬ ಸೂಚನೆಯನ್ನು ಆಲೋಚಿಸಿ ಉತ್ತರ ಕೊಡುತ್ತೇನೆಂದೂ ಒಳ್ಳೆ ಜಾನುವಾರುಗಳನ್ನು ತಂದವರಿಗೆ ಇನಾಂ ಹಂಚುವ ವಿಚಾರವು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸೇರಿದ್ದಾಗಿದೆ ಎಂದು ದೊರೆಗಳು ಹೇಳಿದರು.

೩೧. ಬಂಕಾನಾ (ನೀಕದ ಹೂ) ಮತ್ತು ಇತರ ಕಾಡುಗಿಡಗಳು ವ್ಯಾಪಿಸಿಕೊಳ್ಳುವದನ್ನು ನಾಶಪಡಿಸುವದಕ್ಕೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಲ್ಲದೆ ಕೃಷಿ ಇಲಾಖೆಯವರು ಈ ವಿಷಯದಲ್ಲಿ ನೂತನ ವಿಧಾನಗಳನ್ನು ಕಂಡುಹಿಡಿಯಲು ಯತ್ನಿಸುತ್ತಿದ್ದಾರೆ ಎಂದು ಕಲೆಕ್ಟರ್ ದೊರೆಗಳು ತಿಳಿಸಿದರು.

೩೨. ದೇಲಂಪಾಡಿ ಗ್ರಾಮವನ್ನು ಉಪ್ಪಿನಂಗಡಿ ತಾಲೂಕಿಗೆ ಸೇರಿಸುವುದನ್ನು ಕುರಿತು ಪ್ರಾಂತಿಕ ಸರಕಾರದವರಿಗೆ ಬರೆಕೊಳ್ಳುತ್ತೇನೆಂದು ದೊರೆಗಳ ಮಾತು ಸಿಕ್ಕಿತು.

ಪತ್ರವ್ಯವಹಾರ.

ಶ್ಯಾನುಭೋಗರ ಸ್ವಾನುಭೋಗ.

ಸ್ವಾಮಿ,

ಸರಕಾರದವರ ಕೀಳ ನೌಕರರ ಸಂಬಳದ ಗೋಳು ಎಲ್ಲೆಲ್ಲಿಯೂ ಕೇಳಿಸುತ್ತದಷ್ಟೇ. "ಉದ್ಯಾನದೇವರು" ತನ್ನ ಗೋಳನ್ನು ತಮ್ಮ ಗತಸಂಚಿಕೆಯಲ್ಲಿ ಪ್ರಕಟಿಸಿದರು. ಶ್ಯಾನುಭೋಗರನ್ನಾದರೋ ಶ್ಯಾನಭೋವಾದಿಯಲ್ಲಿ ಎಣಿಸುತ್ತಾರೆ ಸ್ವಾಮಿ. ಮೊದಲೇ ಧಾರಣೆಗಳ ಹುಟ್ಟಿ ಮತ್ತೆ ಸಂಬಳ ಕಡಿಮೆ. ಅನಂತರ ಆ ಕಡಿಮೆ ಸಂಬಳದಲ್ಲಿ ಕೊಡುವ ಒಮ್ಮೆ ದಂಡನೆ, ಮತ್ತೊಮ್ಮೆ ಜುಲುಮಾನೆ, ಇನ್ನೊಮ್ಮೆ ಶಿಕ್ಷೆ, ಎಂಬದಾಗಿ ಹೆಚ್ಚಿನ ಅಂಶವನ್ನು ತಾಲೂಕಿನ "ರಾಯರು" ಕತ್ತರಿಸುತ್ತಾರೆ. ಪಟೇಲ, ಶ್ಯಾನುಭೋಗರಂತಹ ಚಿಕ್ಕ ನೌಕರರಿಗೆ ಹೆಚ್ಚು ಜುಲುಮಾನೆಯನ್ನು ವಿಧಿಸಕೂಡದೆಂದು ಗವರ್ನಮೆಂಟ್ ಹುಕುಮೇ ಇದೆಯಂತೆ, ನಮ್ಮ "ರಾಯರು" "ಜಾವರಾದರು" ಮಾತ್ರ ಅದನ್ನು ಮನ್ನಿಸುವುದೇ ಇಲ್ಲ. ಅಥವಾ ಅಂಥಾ ಒಂದು "ಜೀ. ಓ." (G. O.) ಉಂಟೆಂಬುದೇ ಅವರಿಗೆ ಗೊತ್ತಿಲ್ಲವೋ ಏನೋ, ಅಥವಾ ಒಂದುವೇಳೆ ಗೊತ್ತಿದ್ದರೂ ತಮಗೆ ಅನುಕೂಲವಾಗಿ ಮರೆತುಬಿಡುವರೋ ಏನೋ, ಅಂತೂ ಎಂತಹ "ಜೀ. ಓ." ವಿದ್ದರೂ, ಇಲ್ಲದಿದ್ದರೂ, ಬಡವನಿಗೆ ಜೀವವೇ ಇಲ್ಲದಂತೆ ಮಾಡುತ್ತಾರೆ, ಸ್ವಾಮಿ, ಜುಲುಮಾನೆಯಂತಹ ಶಿಕ್ಷೆಯನ್ನು ಬಹಳವಾಗಿ ಯಾವ ನಮೂನೆಯ ನೌಕರರಿಗೆ ವಿಧಿಸಿದರೂ, ಬಹಳ ಕೆಟ್ಟದು. ಒಂದು ವೇಳೆ ಪಟೇಲರಾದರೆ, ಸಹಿಸಲಿಕ್ಕೂ ಸಹಿಸ್ಯಾರು. ಬಡಶ್ಯಾನುಭೋಗರು ಹಾಳಾಗಿಯೇ ಹೋಗುತ್ತಾರೆ. ಇದು ನಿಜವೋ ಸುಳ್ಳೋ ಎಂಬುದು ಬೆಳತಂಗಡಿ ಡಿಪ್ಟಿ ತಹಶೀಲ್ದಾರ ಮಹಾಶಯರ ಕಚೇರಿಯ ಜುಲುಮಾನೆ ರಿಜಿಸ್ಟ್ರಿಯನ್ನು ಒಮ್ಮೆ ನೋಡಿದರೆ ವ್ಯಕ್ತವಾದೀತು. ತಮ್ಮ ಈಗಿನ ಹಜರ್ ಜಿಲ್ಲಾ ಕಲೆಕ್ಟರರಿಗೆ ಕನ್ನಡ ಬರುತ್ತದಂತೆ. ಆದ್ದರಿಂದ ತಮ್ಮ ಕನ್ನಡಪತ್ರಿಕೆಯನ್ನು ಮರೆಹೊಕ್ಕಿದ್ದೇನೆ. ಜಿಲ್ಲಾ ಕಲೆಕ್ಟರವರು ಇದೇ ತಿಂಗಳ ತಾರೀಕು ೫ರಿಂದ ಬೆಳ್ತಂಗಡಿ ಮೊಕ್ಕಾಮಿನಲ್ಲಿ ಜಮಾಬಂದಿ ಮಾಡುತ್ತಾರಂತೆ. ಆದ್ದರಿಂದ ಆ ಸಮಯಕ್ಕೆ ಸರಿಯಾಗಿ ಪ್ರಕಟಿಸಬೇಕೆಂದು ತಮ್ಮ ಬಳಿಗೆ ಬಂದಿದ್ದೇನೆ. ಬೆಳತಂಗಡಿ ಮೊಕ್ಕಾಮಿನಲ್ಲಿದ್ದಾಗ ಅಲ್ಲಿಯ ಡಿಪ್ಟಿ ತಹಶೀಲ್ದಾರರವರ ೧೯೧೯ನೇ ಇಸವಿ ಎಪ್ರಿಲ್ ತಾರೀಕು ೧ ವರೆಗೆ ಜುಲುಮಾನೆಯ ರೂಪದ "ಜಮೆ"ಯೇ ಎಷ್ಟಾಗಿಯದೆಂಬ ವಿಷಯದಲ್ಲಿ "ಬಂದಿ" ನೋಡಿದರೆ "ಜಮಾಬಂದಿ"ಯು ಒಂದು ಮುತ್ತು ಉದ್ದೇಶವು ನೆರವೇರುವುದರಲ್ಲಿ ಸಂದೇಹವಿಲ್ಲ. ಆಷ್ಟೊಂದು ಮಾಡಿದರೆ ಈ ಪ್ರಯತ್ನವು ಸಾರ್ಥಕವಾದೀತು.

ಶ್ಯಾನುಭೋಗಿ ಶ್ಯಾನುಭೋಗ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟು ಮುನ್ಸೀಫ್ ಕೋರ್ಟಿನಲ್ಲಿ

ಕ್ರಮನಂಬ್ರ 1045/19

ಕಾಸರಗೋಡು ವೆಂಕಟ್ರಮಣ ದೇವಸ್ಥಾನದ ಸರ್ವೋತ್ತಮ ಭಟ್ಟರ ಮಗ ವಾಸುದೇವ ಭಟ್ಟ } ವಾದಿ

ಮತ್ತು

ಕೆ ಪಿ. ಅಚ್ಯುತ್ತಯ್ಯ ಸಹಾ—ಪ್ರತಿವಾದಿರು

ಇವರೊಳಗೆ

ಸದರಿ ವಾದಿ ವಾಸುದೇವ ಭಟ್ಟನು ತನ್ನ ಕುಟುಂಬದ ಹಕ್ಕಿನ ಕಾಸರಗೋಡು ಶ್ರೀ ವೆಂಕಟ್ರಮಣ ದೇವಸ್ಥಾನದ ಪೂಜೆ ಹಕ್ಕು ಮತ್ತು ಸದರಿ ದೇವಸ್ಥಾನಕ್ಕೆ ಬಿಟ್ಟುಕೊಟ್ಟ ಆಸ್ತಿಗಳ ಬಾಬ್ತು ಸದರಿ ಪೂಜೆಗೆ ಸಂಬಂಧಪಟ್ಟ ಹುಟ್ಟುವಳಿ ವಸೂಲು ಮಾಡುವ ಹಕ್ಕುಕೂಡಾ ತನಗೆ ಬಿಡಿಸಿಕೊಡಬೇಕೆಂತಲೂ ಕೈವಶೀತು ತಾರೀಕು ಲಾಗ್ಯಾತು ಮುಂದಿನ ಹುಟ್ಟುವಳಿಯನ್ನು ಕೊಡಿಸಬೇಕೆಂತ ಕೂಡಾ ಸದರಿ ವ್ಯಾಜ್ಯ ದಾಖಲು ಮಾಡಿರುತ್ತಾನೆ ವ ಆ ವ್ಯಾಜ್ಯವು ಇದೇ 1920ನೇ ಇಸವಿ ಫೆಬ್ರುವರಿ ತಾರೀಕು 25ಕ್ಕೆ ತನಿಖೆಗೆ ಇಟ್ಟಿರುತ್ತದೆ ಆದರಿಂದ ಸದರಿ ವ್ಯಾಜ್ಯ ಕಾಸರಗೋಡು ಊರಿನ ಗೌಡಸಾರಸ್ವತ ಬ್ರಾಹ್ಮಣ ಜಾತಿಯ ಎಲ್ಲಾ ಮೆಂಬರ ಮೇಲೆ ದಾಖಲು ಮಾಡಿದ್ದರಿಂದ ಸದರಿ ಜಾತಿಯವರ ಪೈಕಿ ಸದರಿ ವ್ಯಾಜ್ಯದಲ್ಲಿ ಕಕ್ಷಿಯಾಗಿ ಸೇರಿ ವ್ಯವಹರಿಸಬೇಕೆಂತ ಮನಸುಳ್ಳವರು 1920ನೇ ಇಸವಿ ಜನವರಿ ತಾರೀಕು 30ಕ್ಕಲ್ಲು ಹಗಲು 10 ಗಂಟೆಗ ಕಾಸರಗೋಡು ಮುನ್ಸೀಫ್ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ

K Raru Nair
District Munsif

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

O P No 1/1920

ಮ್ಯಾನರ ಸೋಮ್ಯಯ್ಯ ಪಣಿಯಪ್ಪ ಮ್ಯಯ್ಯನ ಮಗ ರಕ್ಷಕಳು ತಾಯಿ ಬೀಮಾಕ್ಷಿ ಅಮ್ಮ ಉಡ್ಪಿ ತಾಲೂಕು ಪಾರಂಪಳ್ಳಿ ಗ್ರಾಮ } ಅರ್ಜಿದಾರ

1	ನಾಗಪ್ಪ ಮ್ಯಯ್ಯ	ವೆಂಕಟಸುಬ್ಬ ಮ್ಯಯ್ಯನ	ಎದ್ರಿರು
2	ಶೇಷಪ್ಪ ಮ್ಯಯ್ಯ	ಮಗಂದಿರು, ಉಡ್ಪಿ	
3	ರಾಮ ಮ್ಯಯ್ಯ	ತಾಲೂಕು ಗುಂಡ್ಮಿಗ್ರಾಮ	

ಅರ್ಜಿದಾರನ ತಂದೆ ಇತ್ತಲಾಗಿ ಮೃತಪಟ್ಟ ಪಣಿಯಪ್ಪ ಮ್ಯಯ್ಯನು ಹೊರಗೆ ಸಾಲವಾಗಿ ಕೊಟ್ಟಿರುವ ಹಣಗಳ ವಸೂಲಿಯ ಬಗ್ಗೆ ತನಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ದಾಖಲುಮಾಡಿದ ಸದರಿ ಅರ್ಜಿಯನ್ನು ಮೇಲ್ಕಂಡ ಕೋರ್ಟಿನಲ್ಲಿ ತಾ 11—2—1920ನೇ ದಿವಸ ತನಿಕೆಗೆ ಇಟ್ಟಿರುವದರಿಂದ ಸದರಿ ಅರ್ಜಿ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಸದರಿ ತನಿಕೆ ದಿವಸ ಯಾ ಮುಂಚಿತವಾಗಿ ಜ್ಞಾಹೀರು ಮಾಡಬೇಕಾಗಿ ಇದರಿಂದ ತಿಳಿಸೋಣಾಗುತ್ತದೆ

Coondapoor, *2—2—1920* } M MADAPPA URALA *Vakil for Petitioner*

ಫೀಸು ಇಲ್ಲ! ರೋಗಪರೀಕ್ಷೆಗೆ ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡು ಬರುತ್ತದೆ ನಿಮ್ಮನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ ಅದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು"

ಡೊ ಎನ್ ಜೀ ಸರದೇಸಾಯಿ,
ಎಲ್ ಎಮ್ ಎಸ್ (ಲಂಡನ್)

ಇನ್ನು ಭಯಪಡಬೇಡಿ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮ್ಮಾಯಿ ದೇವಾಲಯದ ಮುಂದಿನ ರಸ್ತೆ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೆ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು — ಬಿ. ಆರ್. ಹರಿದಾಸ್, ಚಿಕಿತ್ಸಕರು.

ಅವರು ಮರೆಯಬೇಡಿ! ಅಂಥದ ಭಯಂಕರವಾದ ಸನ್ನಿಪಾತಜ್ವರ, ಕ್ಷಯರೋಗ, ಟೈಫಾಯಿಡ್, ಕಾಲರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಠಿಣವ್ಯಾಧಿಗಳು ಪ್ರಾರಂಭದಲ್ಲಿ ಅಲ್ಪ ರೋಗಗಳಾಗಿದ್ದು ತಮ್ಮ ಪಿಕಿತ್ಸೆಯಿಂದ ... ಯಾವುದು ಬಂದು ಹಾನಿ ಪಡೆಯಬೇಡಿ!

ವಾಚಕ ಮಹನೀಯರೇ—

ನಮ್ಮಿಂದ ಪ್ರಕಟವಾದ ರೌದ್ರಿ ಸಂವತ್ಸರ ಪಂಚಾಂಗದಲ್ಲಿ ಆಶ್ವಿನ ಶುಕ್ಲ ೧೫ಯ ಚಂದ್ರ ಗ್ರಹಣವು "ರೇವತೀ ನಕ್ಷತ್ರ, ಮೀನರಾಶಿ" ಎಂದು 7ನೇಯ ಪುಟದಲ್ಲಿ ಲೇಖಕದೋಷದಿಂದ ಬಿದ್ದು ಹೋಗಿದ್ದನ್ನು "ಅಶ್ವಿನೀ ನಕ್ಷತ್ರ ಮೇಷರಾಶಿ" ಇದು ಅಶ್ವಿನೀ ನಕ್ಷತ್ರ ಮೇಷ-ಕನ್ಯಾದಿರಾಶಿಯವರಿಗೆ ಅರಿಷ್ಟ ಎಂತ ತಿದ್ದಿಕೊಳ್ಳಬೇಕು

ಆದು ತಪ್ಪಿನ ಪಂಚಾಂಗದಿಂದಲೇ ಸ್ಪಷ್ಟವಾಗುವದಿದ್ದರೂ ಗತ ವರ್ಷದಂತೆ ವಾಚಕರಿಗೆ ಚೋದ್ಯಾಸ್ಪದವಾಗದಿರಲೆಂದು ವಿಜ್ಞಾಪಿಸುತ್ತಿರುವ,

ಚಕ್ರಕೋಡಿ ಪಂಚಾಂಗ ಸಂಪಾದಕರು.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗವದು, ತಲೆವುರಿ, ಕಣ್ಣುವುರಿ ಕಿವಿಯಿಂದ ಕೀವು ಸೋರುವುದು, ಕವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ಕಡುಕಪ್ಪು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸಕ್ಕೆ ಆಣೆ ೧೨, ಒಕ್ಕೆ ರೂ ೨ ದೊಡ್ಡ ಸೀಸಗೆ ರೂ ೧—೮—೦

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹಸಿಹಸಿಯಾಗಿ ಹೋಗುವದು ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬಳುವದು ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ ಬಾಟ್ಲಿ ೧೨ರ ಕ್ರಯ ೧—೮—೦, ಬಾಟ್ಲಿ ೩ರ ಕ್ರಯ ೪—೦—೦

ನಾರೀನವಜೀ ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು ಸೊಂಟನೋವು, ಶ್ವೇತ ಪ್ರದರ (ಬಿಳೀ ಸೆರಗು) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ ಬಾಟ್ಲಿಗೆ ರೂ ೨—೦—೦

ಚಿನ್ ಚಿನ್ ಬಾಮ್ ಎಲ್ಲಾ ತರದ ಸೋವಿನ ತಲನೋವು, ಜಖಂ ಗಾಯ, ಚೇಳುಕಡಿತ ತಕ್ಷಣ ಗುಣ ಬೆಲೆ ಸುಲಭ, ಚರಣಿ ೧ಕ್ಕೆ ಆ ೬ ಗಜಕರ್ಣದ ಮುಲಾಮು ಡಬ್ಬಿಗ ಆ ೪

ದಂತಶೋಧಿನಿಚೂರ್ಣ ಇದು ಹಲ್ಲುಗಳನ್ನು ಶೊಕ್ಕಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಬಿಗಿಪಡಿಸಿ ಹಲ್ಲು ನೋವು, ದವಡೆ ಉರಿ, ಬಾಯಿಹುಣ್ಣು ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ೧ಕ್ಕೆ ಆಣೆ ೫.

ಲಂಗ್ಸ್‌ಟೋನು ಕೆಮ್ಮು, ನೆಗಡಿ ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಪಡಿಸಿ ಧಾತುಪುಷ್ಟಿಯನ್ನುಂಟುಮಾಡುತ್ತದೆ ಡಬ್ಬಿ ೧ಕ್ಕೆ ರೂ. ೨—೦—೦, ಅಂಚೆ ಹಾಸಲು ಬೇರೆ ಕ್ಯಾಟಲಾಗಿಗ ಬರೆಯಿರಿ

ವಿಳಾಸ — ಮನೋಲ್ಲಾಸಿನಿ ಕಂಪನಿ,
ಕೆಂಕನಾಡಿ ಪೋಸ್ಟು

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು

ಧಾತುರಂಜಿತ — ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಸೇರಿ ನಂಕಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಬಾಕ್ಷಿ ಇವೇ ಮುಂತಾದ ಬಹು ರೋಗಗಳುಂಟಾಗುವವು ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ ಮೂಲೇಂದ್ರಿಯ ರಚನೆ, ವೀರ್ಯ ನಷ್ಟ ಕ್ರಮ, ನಪುಂಸಕತ್ವ ಭೇದ, ವಂಧ್ಯಾ ರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧ ಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ಕಾಚವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ— ಭಾರತಿ ಬುಕ್‌ಡಿಪೋ,
೧೧೦, ಸೆಪಲ್‌ಪೇಟೆ, ಬೆಂಗಳೂರು ಸಿಟಿ

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನ ಮಾಘ ಬ ೩ ಶನಿವಾರದಿಂದ ಮಾಘ ಬ ೯ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ ನೆಯ ಫೆಬ್ರುವರಿ ಪ್ರಯಿಂತಿಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ಸೂರ್ಯ ಉ	ಸೂರ್ಯ ಅಸ್ತ.
7	ಶನಿ	೩	೧೫.೧೪	ಉತ್ತರಾ	೫೮.೨೮	೨೪	6 58	6 32
8	ರವಿ	೪	೧೫.೪೭	ಹಸ್ತಾ	೬೦ ೦	೨೫	6·58	6·33
9	ಸೋಮ	೫	೧೭.೧೪	ಹಸ್ತಾ	೧ ೧೬	೨೬	6 57	6·33
10	ಕುಜ	೬	೨೦ ೧೮	ಚಿತ್ರಾ	೪ ೫೭	೨೭	6 57	6 33
11	ಬುಧ	೭	೨೪.೧೪	ಸ್ವಾತಿ	೧೦ ೨	೨೮	6 57	6·34
12	ಗುರು	೮	೨೯ ೦	ವಿಶಾಖಾ	೧೬ ೫	೨೯	6 56	6 34
13	ಶುಕ್ರ	೯	೩೩ ೫೮	ಅನುರಾಧಾ	೨೩ ೨೦	೧	6·56	6·34

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಜನವರಿ)

Date ತಾರೀಖು	Temperature ಉಷ್ಣ (ಕಾವು) Maximum ಜಾಸ್ತಿ	Minimum ಕಡಿಮೆ	Rainfall ಮಳೆ ದಿನದ ಮಳೆ	ಜನವರಿ ೧ರಿಂದ
30	90—3	72—8	—	
31	90—4	70—9	—	
1	89—3	70—3	—	
2	91—1	70—9	—	
3	91—2	71 8	—	
4	88—5	70—1	—	—
5	87—0	70—2	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಆ	ವರೆಗೆ ರೂ ಆ
ಹೊಸ ಮಸ್ಕತಿ ಅಕ್ಕಿಮುಡಿ ೧ಕ್ಕೆ	9—14	10—8
ಗುಡ್ಡು „ „	9—4	9—12
ಹೊಸ ರಾತಿ ಮುಡಿ ೧ಕ್ಕೆ	8—14	9—
ಅವ್ವಲ್ ಬೆಲ್ತಿಗೆ „	11—8	12—
ಗುಡ್ಡು ಬೆಲ್ತಿಗೆ „ „	10—4	10—
ರಂಗೂನ ಬೆಲ್ತಿಗೆ ಗೋಣಿ ೧ಕ್ಕೆ	15—0	16—
ಗೋದಿ ಗೋಣಿ ೧ಕ್ಕೆ	25—8	26—
ಹುರುಳಿ ಗೋಣಿ ೧ಕ್ಕೆ	15—4	16—
ಕಡಲೆ ಗೋಣಿ ೧ಕ್ಕೆ	23—8	23—0
ತೊಗರಿ ಗೋಣಿ ೧ಕ್ಕೆ	20—0	21—0
ಕೊತ್ತುಂಬರಿ ಗೋಣಿ ೧ಕ್ಕೆ	26—0	31—0
ಉದ್ದು ಗೋಣಿ ೧ಕ್ಕೆ	22—8	25—0
ಹೆಸರು ಗೋಣಿ ೧ಕ್ಕೆ	22—8	23—0
ಊರು ಬೆಲ್ಲ ಖಂಡಿ ೧ಕ್ಕೆ	80—0	82—8
ಉಪ್ಪು ಗೋಣಿ ೧ಕ್ಕೆ	4—0	4—6
ಕೊಬ್ರಿ ಖಂಡಿ ೧ಕ್ಕೆ	140—0	150—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	36—8	37—0
ಎಳ್ಳಿಂಡಿ ಖಂಡಿ ೧ಕ್ಕೆ	60—0	61—4
ಕೊಬ್ರಿ ಎಣ್ಣೆ ಮಣ ೧ಕ್ಕೆ	11—2	11—8
ಎಳ್ಳೆಣ್ಣೆ ಮಣ ೧ಕ್ಕೆ	11—8	11—12
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ …	9—3	9—10
ಜೋನಿ ಸಕ್ಕರೆ ಮಣ ೧ಕ್ಕೆ	9—10	9—12
ಮೆಣಸಿನ ಕಾಯಿ ಮಣ ೧ಕ್ಕೆ	10—4	11—0
ಸಾಸಿವೆ ಮುಡಿ ೧ಕ್ಕೆ	14—8	15—0
ಕೊತ್ತುಂಬರಿ ಮುಡಿ ೧ಕ್ಕೆ	6—10	6—12
ಕಾಫಿ ಖಂಡಿ ೧ಕ್ಕೆ	295—0	315—0
ಬೇಗೋಟು ಅಡಿಕೆ ಖಂಡಿ ೧ಕ್ಕೆ	110—0	120—0
ಹಳೆ ಬೇಗೋಟು	135—0	140—0
ಹಳೆ ಕಾರುಮೆಣಸು ಖಂಡಿ ೧ಕ್ಕೆ	205—0	210—0
ಮೂಲಿಕೈ ಮಣ ೧ಕ್ಕೆ ..	25—0	32—0
ಗೇರುಬೀಜ ಮುಡಿ ೧ಕ್ಕೆ	5—8	—
ಕಬ್ಬಿಣ ಖಂಡಿ ೧ಕ್ಕೆ .	100—0	120—0
ತಾಂಬ್ರ ತಗಡು ಮಣ ೧ಕ್ಕೆ ..	29—4	30—0
ತಾಂಬ್ರ ಪಾತ್ರಗಳು ಮಣ ೧ಕ್ಕೆ …	40—0	42—0
ಚೀನಿ ಬೆಳ್ಳಿ ಸೇರು ೧ಕ್ಕೆ …	31—8	
ಹಿತ್ತಾಳೆ ತಗಡು ಮಣ ೧ಕ್ಕೆ ..	28—0	

"ವೈದ್ಯಾಮೃತ ಮಂದಿರಂ"

ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಿದ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವ್ಯಗಳೂ, ಘೃತಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿವರವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನ [illegible]

ವಿಳಾಸ:— ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
[illegible] ಕನ್ನಡ.

ಹಲೋ ಮೈಸೂರು

ಸುವಾಸನೆ! ಊದುಬತ್ತಿಗಳು. ಮನೋರಂಜಕ!!

[illegible] ಬತ್ತಿ, [illegible]	ಘಮಘಮ ಬತ್ತಿ ಸೇರು ರೂ. ೩
[illegible] ಬತ್ತಿ [illegible]	ಅರಗಜ ತೊಲೆ ೧ಕ್ಕೆ „ ೩
[illegible] ಬತ್ತಿ „ „	ಗಂಧದ ಬಳ್ಳಿ „ „ ೧
[illegible] ಬತ್ತಿ „ „	

ಅತ್ತರುಗಳು:— ಗುಲಾಬ್, ಅಂಬರ್, ಹೀನಾ, ತೊಲೆ „ „ ೪

ಸೆಂಟುಗಳು:— ಮಲ್ಲಿಗೆ, ಗುಲಾಬಿ, ಮುಷ್ಕು, ಸಾರಸಪ (ವಿಲಾಯತಿ, ಅಮೇರಿಕ, ಸ್ವಿಟ್ಜರ್ಲ್ಯಾಂಡುಗಳಲ್ಲಿ ತಯಾರಿಸಿದ್ದು) ½ ಔನ್ಸ್ ಬಾಟ್ಲಿ ರೂ. ೪.

ದಶಾಂಗ ಅಥವಾ ಸುಗಂಧ ರೂಪ, ಸುಗಂಧ ಅರಿಶಿನ ಪುಡಿ, ಬಾಲುಕುಡಿ, ಸೀರು ತೊಳೆದ ಹಪ್ಪಿ ೧ಕ್ಕೆ ರೂ. ೧.

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಅತ್ಯುಪಯುಕ್ತವಾದ ಪುಸ್ತಕಗಳು.

ಕನ್ನಡ ನಾವೆಲ್‌ಗಳು.

	ರೂ.	ಆ.	ಪೈ.
ಅದೃಷ್ಟಕುಮಾರ	0	5	0
ದಮಯಂತಿ ಮಾಧವ	0	6	0
ಕುಮುದಾ	0	8	0
ಮಹಾರಾಣಿ ಗೃಹಶೀಲೆ	0	3	0
ದೇಶ್ಪಾಂಡೆ ನಾರಾಯಣರಾವ್	0	4	0
ಚಂದ್ರಗುಪ್ತ ಚಕ್ರವರ್ತಿ	1	0	0
ಬಾಲಿಕಾ ನೀತಿಮಾಲಿಕೆ	0	2	0
ರಾಜಭಕ್ತಿ ಸಾರ	0	2	0
ಮುಕ್ತಾಹಾರ	0	2	0
ಹಿಂದೂ ವ್ರತವಿವೇಕ...	0	10	0

ದಾಸರ ಪದಗಳು.

	ರೂ.	ಆ.	ಪೈ.
ಪುರಂದರದಾಸರ ಪದಗಳು ಭಾಗ 1 ...	0	8	0
ಭಾಗ 2 ...	0	8	0
ಉದಯರಾಗ	0	4	0
ತುಲಸೀ ಸಂಕೀರ್ತನೆ ಪದಗಳು	0	2	0
ಲಕ್ಷ್ಮೀ ಶೋಭನ ಹಾಡು	0	2	0
ವಿಷ್ಣುನಾಮ ಸಂಕೀರ್ತನ ಪದಗಳು ...	0	5	0

ಫೋರ್ಮುಗಳು ಇತ್ಯಾದಿ.

		ರೂ.	ಆ.	ಪೈ.
ನೋಟೀಸು ಫೋರ್ಮುಗಳು	100ಕ್ಕೆ ...	0	14	0
ರಶೀದಿ „	„ ...	0	14	0
ರಿಪೋರ್ಟು „	„ ...	0	14	0
ಪ್ರಾಮಿಸರಿ ನೋಟು „	„ ...	0	10	0
ಸಂಬಳದ ರಶೀದಿ ಫೋರ್ಮು	„ ...	0	12	0
„ „	50ಕ್ಕೆ ...	0	7	0
„ „	25ಕ್ಕೆ ...	0	4	0
ಚೆಕ್‌ರೋಲ್ ಪುಸ್ತಕಗಳು	100 ಪುಟ ...	2	0	0
„ „	50 „ ...	1	4	0
„ „	25 „ ...	0	12	0
ಶಾಲಾ ಹುಡುಗರ ಹಾಜರು ರಿಜಿಸ್ಟ್ರಿ	100 „ ...	2	0	0
„	50 „ ...	1	4	0
„	25 „ ...	0	12	0
ಶಾಲಾ ಉಪಾಧ್ಯಾಯರ ಹಾಜರು ರಿಜಿಸ್ಟ್ರಿ	25 ಪುಟ	0	12	0

ಇವುಗಳಲ್ಲದೆ ಅಂಗಡಿ, ಛಂದಸಾಲೆ ಸಾವಕಾರರಿಗೆ ಅಗತ್ಯವಿರುವ ವರ್ಗ-ಟೂಳಿಗ ಪುಸ್ತಕಗಳೂ ಶಾಲಾ ವಿದ್ಯಾರ್ಥಿಗಳ ಬಗ್ಗೆ ತಯಾರಿಸಿದ ಎಕ್ಸರಸೈಜ ಡ್ರಾಯಿಂಗ್ ವಗೈರೆ ಪುಸ್ತಕಗಳೂ ತಯಾರಿವೆ.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಕನ್ನಡ ಪ್ರಬಂಧ ಲೇಖನಾ ಕ್ರಮವನ್ನು ಕಲಿಸುವ ವಿದ್ಯಾರ್ಥಿಗಳ ಕೈಪಿಡಿ.

ಮ್ಯ. ರಾ. ಎಂ. ಬಾಬು ಬಿ. ಎ., ಎಲ್. ಟಿ. ಯವರಿಂದ ರಚಿಸಲ್ಪಟ್ಟ

ಕನ್ನಡ ಮಾದರಿ ಉಪನ್ಯಾಸಗಳು

(ಮೂರು ಭಾಗಗಳಲ್ಲಿ)

ಒಂದನೆಯ ಭಾಗ—ಲೋವರ್ ಸೆಕೆಂಡರಿ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 4. ಎರಡನೆಯ ಭಾಗ—ಹೈಸ್ಕೂಲ್ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 6. ಮೂರನೆಯ ಭಾಗ—ಕಾಲೇಜು ಕ್ಲಾಸು ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಬೆಲೆ ಆಣೆ 12.

ಪ್ರತಿಗಳು ಸಿಗುವ ವಿಳಾಸ:—
ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ರೋಯಲ್ ಇಂಡಿಯನ್ ಬಾಂ.

(ರಿಜಿಸ್ಟರ್ಡ)

ಈ ದೇ[illegible] ಬಾಟ್ಲಿ ಗುರುತನ್ನು ಒಂದರ ಕ್ರಯ ಲಕ್ಷ್ಯದಲ್ಲಿಡಿರಿ. ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು:— ಇದರ ಉಪಯೋಗದಿಂದ ತಲೆನೋವು, ಶಿರ[illegible], ಶಿರೋಭಾರ, ಗಂಟು, ಗಂಟು ನೋವು, ಎದೆಶೀತ, ಎದೆನೋವು, ಉಬ್ಬುವದು, ವಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಗಾಯ, ಚಳುಮು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮುದ್ರ ಪ್ರಯಾಣ, ರೈಲ್ವೆ ಮುಸಾಫರಿ, ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. [illegible]; 24 ಬಾಟ್ಲಿಗೆ ರೂ. [illegible]; [illegible] ಬಾಟ್ಲಿಗೆ ರೂ. [illegible] ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪; ದಂತಮಂಜನ, ಕಜ್ಜಿ ಮುಲಾಮು ಆಣೆ ೩; ಹೇಯರ್ ಆಯಿಲ್, ಚೇಳು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:— [illegible] ರಫ್ತಾಗತಕ್ಕ ವಿಲಾಯತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲನ್ನೂ ಅವಶ್ಯ ಮಾಟ್ಟಿನ [illegible] ದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ೩೦ ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬತ್ತಿ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್‌ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಪೈನ್‌ಬಾಂ, ಪನ್ನೀರು, ವಿಲಾಯತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕನುಕೂಲವಾದ ತೈಲ ಇವೇ ಮೊದಲಾದ ೧೦೬ ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ರಸಗನ್ನಡಿ, ಚೀನಾಪಾತ್ರೆ, ವಾರ್ನೀಸ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ದಂತ ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಸ್, ಶಾಫಿಂಗ್‌ಪ್ರೆಸ್, ಮತ್ತು ಮಸಿ, ಲಿತೋಗ್ರಾಫಿ ಮಸಿ, ಲಿತೋ ಪ್ರೆಸ್ ಮಸಿ, ಮತ್ತು ನಾನಾ ವಿಧ ಮಸಿ, ಮಸಿಪೌಡರು, ಕಾಗದಕ್ಕೆ ಮೆರುಗು, ಸ್ಟೀರಿಯೋಟೈಪ್, ಫೋಟೋಗ್ರಫಿ ಮುಂತಾದ ೬೦ ವಿಷಯಗಳು ಇತರರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕ ಸಿದ್ಧಂತೆಯೇ. ಬೆಲೆ ರೂ. ೧—೦—೦.

ವಿಳಾಸ:— ಕೆ. ಪುಟ್ಟಪ್ಪ, ಆರೋಗ್ಯಸಾಧಕ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

ಉಚಿತ. ೧೨ ಸೆಂಟ್ ಬಾಟ್ಲಿಗಳು. ಉಚಿತ.

ಮೇಲಾದ ಫೌಂಟನ್ ಪೆನ್.



ಈ ನಕ್ಷೆಯಲ್ಲಿ ಕಂಡ ಪೇನಾಗಳು ಸೀಮೆಯಲ್ಲಿ ಫೌಂಟನ್ ಪೇನಾ ತಯಾರುಮಾಡುವದರಲ್ಲಿ ಪ್ರಖ್ಯಾತ ಹೊಂದಿದ ಕಂಪನಿಯವರಿಂದ ತಯಾರಾಗಿ ಬಂದಿರುತ್ತವೆ. ಇಂಕಿ ಅದರ ಬಳಿ [illegible] ರುತ್ತ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತಿನ ಹಾಗೆ ಮುದ್ದಾಗಿ ಬರೆಯುವವು. ಈ ಪೇನಾಗಳು ಪ್ರಖ್ಯಾತಿ ಹೊಂದುವದಕ್ಕಾಗಿ ಈ ಪೇನಾವನ್ನು ಕೊಂಡುಕೊಳ್ಳುವವರಿಗೆ ೧ ಡಜನ್ ರೋಸ್ ಸುಗಂಧ ದ್ರವ್ಯದ (Best Perfume) ಬಾಟ್ಲಿಗಳು ಡಾಕ್ಸ ಸಹಿತ ಬಹುಮಾನವಾಗಿ ಕೊಡಲ್ಪಡುತ್ತ. ತ್ವರೆಮಾಡಿರಿ.

ಬಹುಮಾನ ಸಹಿತ ಕ್ರಯ ಪೇನಾ ೧ಕ್ಕೆ ರೂ. ೧—೧೦—೦.

ನಮ್ಮ ವಿಳಾಸ:— ಮಹರಾಟ ಟ್ರೇಡಿಂಗ್ ಕಂಪೆನಿ,
೧೩ ತಿರುವಳ್ಳಿ ಬೀದಿ, ಮದರಾಸ್.

ಯೌರೋಪಿಯನ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸಾಂಡಾ ಆಯಿಲ್ (ನರಗಳ ಶಕ್ತಿವರ್ಧಕ ತೈಲ.)



ಅನೇಕರು ಬಾಲ್ಯದಲ್ಲಿ ಕೆಟ್ಟ ಆಟಗಳಿಂದ ದೇಹವನ್ನು ಕೆಡಿಸಿಕೊಂಡು ತಮಗಿರುವ ವ್ಯಾಧಿಯನ್ನು ಡಾಕ್ಟರುಗಳಲ್ಲಿ ಹೇಳಿ ಸರಿಯಾದ ಔಷಧವನ್ನು ಪಡೆಯದೆ ಪ್ರಪಂಚದ ಸುಖವನ್ನು ಮರೆತುಬಿಡುವರು. ಇಂಥಾ ವರುಗಳ ಉಪಯೋಗಕ್ಕೋಸ್ಕರವಾಗಿ ಈ ನಪುಂಸಕ ತ್ವಾರಿ ತೈಲವನ್ನು ತಯಾರಿಸಿರುವೆವು. ಇದನ್ನು ಶರೀರಕ್ಕೆ ಒಂದು ವಾರ ಸವರುವದರಿಂದ ಗುಣವಾಗಿ, ಕಳೆದುಕೊಂಡ ಶಕ್ತಿಯನ್ನು ಪುನಃ ಕೊಡುವದು. ಕ್ರಯ ಸೀಸೆ ೧ಕ್ಕೆ ರೂ. ೧—೦—೦

ನಮ್ಮ ವಿಳಾಸ:— ಬಿಟಿ ವಾಚ್ ಕಂಪೆನಿ,
೧೩ ತಿರುವಳ್ಳಿ ಬೀದಿ, ಮದರಾಸು.

ಮದ್ರಾಸ್ ಸರಕಾರದವರಿಂದ 1920ನೇ ವರ್ಷದ ಶಾಲೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ— ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣಸಿರಿಮಾಲೆ	0	6	0
ಪಂಪಾಶತ	0	12	0	[illegible] ಭಾಗ I	0	4	0
ಪದ್ಯಸಾರ ಭಾಗ 1	0	8	0	„ „ II	0	3	0
ಅಕ್ಬರ್ ಚರಿತ್ರೆ	1	1	0	„ „ III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಕುಮುದಮದನಕುಮಾರ ಚರಿತ್ರೆ I	0	8	0	ವಿಷವಲ್ಲರಿ	0	6	0
				[illegible]	0	[illegible]	0
ಅಧಿಕಾರಿಗಳ ಪುಸ್ತಕ	0	6	0	ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂಕ್ರಾಂತಿ	0	6	0
ರಮಾನಂದ	0	10	0	ಅಬಲಾಸಚ್ಚರಿತ್ರರತ್ನಮಾಲೆ	2	0	0
ಸುವ್ರತ	0	13	0	ನಿರ್ಮಲೆ	0	12	0
ಪ್ರಬಂಧಮಂಜರಿ	0	14	0	ಪದಕ್ರಿಯ (ಬಾಲವ್ಯಾಕರಣ)	0	3	[illegible]
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	10	0
ಜ್ಯೋತಿಶ್ಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	ಮಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್‌ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನಮಾಡಿಕೆಯಾಗಿ ತಾ. ೧೦-೮-೧೯೦೮ನೇ ಇಸವಿಯಿಂದ ತಾ. ೧-೯-೧೯೧೮ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾದ ಆದೆ ಇದು ಯಾವತ್ತರು ಸ್ವತಃ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದದ್ದರಿಂದ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ. ಅವು ಬರೆಯುವಲ್ಲಿ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗಮುಕ್ತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ರುಲುಗಳ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕೆಪಿತಾಣೆ, ಮೂಗಿನೊಳಗಿನ ಪೀನಸ, ಮೊದಲಾದ ರೋಗವು, ಕಣ್ಣಿನೊಳಗಿನ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಸ್ಸು, ಇದ್ದಲಿಸ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರ್ಧತಲೆಶೂಲಿ, ನೆಟ್ಟಶೂಲಿ, ವಾತಶೂಲಿ, ಕೀಳುಬೇನೆ, ಗುದ್ದವ್ವನ ಬೇನೆ, ಹುರುಕು, ಕಜ್ಜಿ, ಗಜಗರ್ಣ, ತದ್ದು, ಇಸುಬು, ಘಾಯಿವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂತರ, ಸಣ್ಣ ಕೂಸುಗಳ ಬಾಲಜ್ವರ, ಕೋಡಗೆಮ್ಮು, ಅರವು, ಮುಟ್ಟುರೋಗ, ಹೊಟ್ಟೆ ಫುಗ್ಗುರೋಗ, ವೃ[illegible], ಮತ್ತು ಸಣ್ಣ ಕೂಸುಗಳಿಗೆ ವೃದ್ಧರಿಗೂ ಸಹ ತಿಳಿಯದೆ ಇದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರತು ಇನ್ನೂ ಅನೇಕ ರೋಗಗಳು ಪಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಇದ್ದು ಬಂಧಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲಿ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದೆಷ್ಟು 5 ಆಣೆ. ತೂಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೨ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಸ್ಟ ಪಾರ್ಸಲ ಮೂಲಕ ಕಳಿಸುತ್ತೇವೆ. ಮತ್ತು ಹಳ್ಳಿಗಳ ಮಾಲಕರು ವ ಕಟಲಾಗು ಬೇಕಾದಲ್ಲಿ ಪೋಸ್ಟ ತಿಕೇಟು ಅಗಲ ಇದ್ದರ ಹೊರತು ದೊರೆಯುವದಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪ್ರತಿಂದು ಪ್ರಕಾರ ಬಾಟ್ಲಿಯು ಸಿಕ್ಕಿತು ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸಟ್ಟಿಗೆ ರೂ. 2—2—0 ಕೋಲೇರಾ ಔಷಧದ ದೊಡ್ಡ ಸಟ್ಟಿಗೆ ರೂ. 1—2—0

" ಸಣ್ಣ " 1—6—0 " ಸಣ್ಣ " " 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜೋರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—
ಪಂಡಿತ್, ಮದರಾಸ್.

ಆತಂಕನಿಗ್ರಹ ಗುಳಿಗೆಗಳು.

ಈ ಗುಳಿಗೆಗಳು ಜೀರ್ಣಶಕ್ತಿಯನ್ನು ಕೊಡುತ್ತೆ, ರಕ್ತವನ್ನು ಶುದ್ಧಿ ಮಾಡಿ ಉತ್ಸಾಹವನ್ನು ಉಂಟುಮಾಡುತ್ತೆ, ಜ್ಞಾನೇಂದ್ರಿಯವನ್ನು ಬಲಿಷ್ಠಪಡಿಸುತ್ತೆ. 32 ಗುಳಿಗೆಗಳಿಗೆ ರೂ. 1—0—0.

ಅಮೃತಪ್ರಾಶ ಅವಲೇಹ.

ಇದು ರಕ್ತವನ್ನು ಶುದ್ಧಿಮಾಡುತ್ತೆ. ಜ್ಞಾನೇಂದ್ರಿಯ, ಧಾತುನಷ್ಟ ಮುಂತಾದವುಗಳನ್ನು ನಿಲ್ಲಿಸಿ ದೇಹಕ್ಕೆ ಕಾಂತಿಯನ್ನು ಬಲವನ್ನು ಕೊಡುತ್ತೆ. ಶರೀರದಲ್ಲಿರುವ ಅಧಿಕವಾದ ಉಷ್ಣವನ್ನು ಕಡಿಮೆಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತೆ. ಕ್ಷಯ ಅತಿಸಾರ ಶಲೆನೋವು ಎದೆನೋವು ಮುಂತಾದವುಗಳನ್ನು ವಾಸಿಮಾಡುತ್ತೆ. 20 ತೊಲದ ಡಬ್ಬಿಗೆ ರೂ. 2—0—0.

"ಕಾಮಶಾಸ್ತ್ರ"

ದಲ್ಲಿ ನವೀನವಾಗಿ ಶೇಖರಿಸಿದ್ದೇವೆ. ಆ ಪುಸ್ತಕವು ನಿಮಗುಚಿತ; ಬಹುಮಾನ;— ಪಾರಿತೋಷಕ !!!

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನೂರು ಮಾತ್ರೆಗಳ ವೈದ್ಯರ ಸಮಾನವೆಂಬುದು ನಿಜವಾಗಿಯೂ ಸತ್ಯವಾದ.

ಶೀತ, ಶೀತಜ್ವರ, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅತಿ ಶೀಘ್ರವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 25 ಮಾತ್ರೆಗಳುಳ್ಳ ಒಟ್ಟಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಅಸಂಖ್ಯಾತರು ಪ್ಲೇಗುರೋಗಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿದ್ದಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ಖಾತರಿ ಹೇಳುವೆವು. ದಿನಜ್ವರ, ಮೂರನೆ ನಾಲ್ಕನೆ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 6ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಕೇಶಗಳ ಗಡ್ಡೆ ಕರಗುತ್ತದೆ. ಸಂದುಗಳ ನೋವು ಬೇಗನೆ ಹೋಗುತ್ತದೆ. ಸೀಸೆಗೆ 8 ಆಣೆ. 6ಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಕೂಡಲೇ ಹೊಟ್ಟೆಯುಬ್ಬರ, ವಾಂತಿ ಭೇದಿ, ಶೀತಜ್ವರ, ಅಜೀರ್ಣದ ಭೇದಿಗಳು ಗುಣವಾಗುತ್ತವೆ. ಸೀಸೆಗೆ ರೂ. 1. 6ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಹಿತಕಾರಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೆಮ್ಮು, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲಾ ಗುಣವಾಗಿ ಮಕ್ಕಳು ಚುರುಕಾಗಿ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ ಆಣೆ 6. 6ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಟ್ಲಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವುದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯ ಶಿಥಿಲವಾದ ಅಧ್ವರ ಸ್ವಪ್ನೇಂದ್ರಿಯವಾದವರು, ಮೂತ್ರದೊಂದಿಗೆ ವೀರ್ಯ ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರು, ಹಸಿವು ಇಲ್ಲದಿದ್ದರು, ಮಲಬದ್ಧತೆಯು ಸರಿಯಾಗಿ ಆಗದಿದ್ದರೂ, ಶರೀರದ ರಕ್ತ ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮುದುಕರಿಗೆ ಬಲವನ್ನುಂಟುಮಾಡುವುದು, ಹಳೇ ಶಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕಾ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಸುಳ್ಳು ಎಂದು ನಿರ್ಧರಿಸತಕ್ಕವರ ಮೇಲೆ ಕಂಡ ಬಹುಮಾನವ ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ವಿನಾಕಾರಣವಾಗಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬ ಮುರಬ್ಬವನ್ನು 21 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. 3 ಡಬ್ಬಗಳನ್ನು ಉಪಯೋಗಿಸುವುದರಿಂದ ಜನ್ಮಾಂತರ ವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬದ ಜತೆಯಲ್ಲಿರುವುದು. ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಛಾಂಗಿಯ ಚಾರ್ಜ್ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪ್ಪಾಲ ಖರ್ಚು 1 ಡಬ್ಬಿಗೆ 8 ಆಣೆ; 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೊ, ಬೆಂಗಳೂರು ಸಿಟಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶಿಕ್ಷಣದ ಇಲಾಖೆಯಲ್ಲಿ ಸುಧಾರಣೆ ಮತ್ತು ಕ್ರಾಂತಿಯುಂಟಾಗುವ ಈ ಸಮಯದಲ್ಲಿ ಶಿಕ್ಷಣದ ಕ್ಷೇತ್ರದಲ್ಲಿ ವ್ಯವಸಾಯ ಮಾಡುವ ಎಲ್ಲ ತರಗತಿಯ ಅಧ್ಯಾಪಕರಲ್ಲಿ ಈಚೆಗೆ ಒಂದು ತರದ ಜಾಗ್ರತಿಯು ಉಂಟಾಗಿದೆ. ಇದು ಸಮಾಧಾನದ ಮಾತಾಗಿದೆ. ಈ ತರದ ಜಾಗ್ರತಿಯು ಅವರಲ್ಲುಂಟಾಗಲು ಮುಂದೆ ಬರುವ ಶಿಕ್ಷಣದ ಸುಧಾರಣೆಯೆ ಕಾರಣವೆಂದು ಹೇಳುವುದಕ್ಕಿಂತ ಈಗಿನ ಪೇಟೆಯ ಧಾರಣೆಯೆ ಕಾರಣವೆಂದು ಹೇಳುವುದು ಯಥಾರ್ಥವಾದ ವಿಧಾನವಾದೀತು. ಎಂದಮೇಲೆ ಅಧ್ಯಾಪಕ ವರ್ಗದಲ್ಲಿ ಉತ್ಪನ್ನವಾದ ಜಾಗ್ರತಿಯು ಸಂಬಳದ ವಿಷಯವಾಗಿ ಎಂಬುದನ್ನು ಪುನಃ ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಕೆಲವು ಸಮಯದ ಹಿಂದೆ ಡಿರೆಕ್ಟರು ದೊರೆಗಳು ಅನಂತಪುರಕ್ಕೆ ಚಿತ್ತಯಿಸಿದಾಗ ಅಲ್ಲಿಯ ಮ್ಯುನಿಸಿಪಾಲಿಟಿ ಹೈಸ್ಕೂಲಿನ ಅಧ್ಯಾಪಕರು ದೊರೆಗಳ ಹತ್ತರ ಹೋಗಿ ತಮ್ಮ ಹಾಲಹವಾಲೆಗಳನ್ನು ಹೇಳಿಕೊಂಡರು, ಮತ್ತು ದೊರೆಗಳು ಆಗ ಅವರಿಗೆ ಯಾವ ಸಂಭಾವನೆಯನ್ನು ಕೊಟ್ಟರು ಎಂಬೀ ವಿಷಯವನ್ನು ನಾವು ಹಿಂದೆಯೆ ವಾಚಕರ ಅವಗಾಹನಕ್ಕೆ ತಂದುಕೊಟ್ಟಿದ್ದೇವೆ. ಇರಲಿ. ಅಂತು ಅನಂತಪುರದ ಶಿಕ್ಷಕವರ್ಗಕ್ಕೆ ಡಿರೆಕ್ಟರು ದೊರೆಗಳಿಂದ ದೊರೆತ ಉತ್ತರದ ಮೇಲಿಂದ ಡಿರೆಕ್ಟರರ ಮಕ್ಕಿಗಾದರೂ ಮರ್ಜಿಯು ಹೇಗುಂಟು ಎಂಬುದು ಊಹಿಸಿದಂತಾಯಿತಷ್ಟೆ. ಈ ಸ್ವಲ್ಪದರ್ಶನವನ್ನು ಸಾಧಿಸಿಕೊಂಡು ಈ ಸಂಸ್ಥಾನದ ಹೈಸ್ಕೂಲುಗಳ ಎಲ್ಲ ಅಸಿಸ್ಟಂಟ ಶಿಕ್ಷಕರು ಗವರ್ನರ ದೊರೆಗಳಿಗೆ ತಮ್ಮ ಕೋರಿಕೆಗಳನ್ನು ಅರ್ಜಿಯ ಮುಖಾಂತರ ತಿಳಿಸಿದ್ದಾರೆ. ಈ ಅರ್ಜಿಯಲ್ಲಿ ಎಚ್ ಬಿ ಎ ಎಲ್ ಟಿಯ ತರಗತಿಯು ಈಗ ಶಿಕ್ಷಣ ಇಲಾಖೆಯ ಹೌತಂವರಣದಲ್ಲಿ ಯಾವುದಿದೆ, ಆದರೆ ಅವನು ಕಾಲೇಜಿನ ನಾಲ್ಕು ಮತ್ತು ಒಂದು ಹೀಗೆ ಐದು ವರ್ಷಗಳ ಕೋರ್ಸನ್ನು ವ್ಯಾಸಂಗಮಾಡಿ ಎಷ್ಟು ದ್ರವ್ಯವನ್ನು ವೆಚ್ಚ ಮಾಡಿದ್ದಾನೊ ಅದಕ್ಕೆ ಅವನಿಗೆ ಸರಿಯಾದ ಪ್ರತಿಫಲವು ಹೇಗೆ ಸಿಗುವುದಿಲ್ಲ, ಇಷ್ಟು ವರ್ಷದ ವ್ಯಾಸಂಗ ಮತ್ತು ದ್ರವ್ಯವ್ಯಯಸಾಧ್ಯವಾದ ಡಿಗ್ರಿ ಲೈನಿನಲ್ಲಿ ಉತ್ತೀರ್ಣನಾದವನಿಗೆ ಇಲ್ಲವೆ ನ್ಯಾಯ ಅಥವಾ ಮುಲಕಿಖಾತೆಯಲ್ಲಿಯ ನೋಕರನಿಗೆ ಸರಕಾರವು ಎಷ್ಟು ಸಂಬಳಕೊಡುತ್ತದೊ ಅಷ್ಟೆ ಸಂಬಳವನ್ನು ಎಲ್ ಟಿ ಶಿಕ್ಷಕನಿಗೆ ಮಾತ್ರ ಯಾಕೆ ಕೊಡಬಾರದು ಎಂಬಿತ್ಯಾದಿ ವಿಷಯಗಳು ಸದರಿ ಅರ್ಜಿಯಲ್ಲಿ ಸಕಾರಣವಾಗಿ ತೋರಿಸಲ್ಪಟ್ಟಿವೆ. ಹಾಗು ಎಲ್. ಟಿ. ಗಳಿಗೆ ರೂ. ೧೦೦—೧೦—೩೦೦, ಎಫ್ ಎ ಯವರಿಗೆ ರೂ ೭೦—೭—೧೫೦, ಮೆಟ್ರಿಕ್ ಪಾಸಾದವರಿಗೆ ರೂ ೪೦—೪—೭೦, ಡ್ರಾಯಿಂಗ್, ಡ್ರಿಲ್, ಕೊಮರ್ಶಲ್ ಶಿಕ್ಷಕರಿಗೆ ರೂ ४೦—४—೭೦ ಈ ಮೇರೆಗೆ ಸಂಬಳವು ಅದರಲ್ಲಿ ನಿರ್ದೇಶಿಸಲ್ಪಟ್ಟಿದೆ. ಈ ಅರ್ಜಿಗಳು ಸಾಧಾರಣವಾಗಿ ಈ ಸಂಸ್ಥಾನದೊಳಗಿನ ಎಲ್ಲ ಭಾಗಗಳಿಂದ ಹೋಗಿವೆ ಎಂದು ಕೇಳುತ್ತೇವೆ. ಹಾಗು ನಮ್ಮ ಮಂಗಳೂರಿನಿಂದ ಕೂಡ ಹೋಗಿದ್ದಾವೆಂದು ತಿಳಿಸಲು ನಮಗೆ ಸಂತೋಷವಾಗುವುದು.

ಈ ಮೇರೆಗೆ ಅಸಿಸ್ಟಂಟ್ ಅಧ್ಯಾಪಕ ವರ್ಗದಲ್ಲಿ ಜಾಗ್ರತಿಯುಂಟಾದಂತೆ ಸಂಸ್ಕೃತ ಮತ್ತು ದೇಶೀಯ ಭಾಷಾಧ್ಯಾಪಕರಾದ ಪಂಡಿತರಲ್ಲೂ ಜಾಗ್ರತೆಯುಂಟಾಗಿ ಅವರೂ ಕೂಡ ನಮ್ಮ ಕೇಳಿಕೆಯನ್ನು ಅರ್ಜಿ ಮುಖಾಂತರ ಗವರ್ನರರ ದೊರೆಗಳ ಸನ್ನಿಧಿಗೆ ಕಳುಹಿಸಿದ್ದಾರೆಂದು ಕೇಳುತ್ತೇವೆ. ಮಾತ್ರವಲ್ಲ, ಮದ್ರಾಸಿನ ದೈನಿಕ ಪತ್ರಿಕೆಗಳಲ್ಲಿ ಈ ಅರ್ಜಿಯ ಆಶಯವು ಪ್ರಕಟವಾಗಿದೆ. ಅದನ್ನು ನೋಡುವಾಗ ನಮ್ಮ ಬಂಧುಗಳಾದ 'ಹಿಂದು' ಪತ್ರಕಾರರು ಹೇಳುವಂತೆ ದೇಶದೊಳಗಿನ ಪಂಡಿತವರ್ಗವು ನಿಜವಾಗಿ ಅನುಕಂಪನೀಯ ಸ್ಥಿತಿಯಲ್ಲಿದೆ, ಮತ್ತು ಈ ವಿಷಯದಲ್ಲಿ ಸುಶಿಕ್ಷಿತ ಲೋಕಮತವು ಅವರ ವಿಷಯವಾಗಿ ಸಹಾನುಭೂತಿ ಪರವಾಗಿದೆ ಎಂಬುದಕ್ಕೆ ಸಂದೇಹವಿಲ್ಲ. ಪಂಡಿತವರ್ಗವು ದೇಶೀಯ ರಾಜ್ಯಗಳು ಅಸ್ತಮಿಸಿದಂದಿನಿಂದ ಮಾನ್ಯತೆಯು ಮತ್ತು ಸಾಂಪತ್ತಿಕ ದೃಷ್ಟ್ಯಾ ಹೀನತೆಗೆ ಬಂದಿದ್ದರೂ ಅವರವರ ವಿಶಿಷ್ಟ ವಿಷಯದಲ್ಲಿ ಅವರ ಪರಿಶ್ರಮವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ವಾಙ್ಮಯ ವಿಷಯವನ್ನು ಯುನಿವರ್ಸಿಟಿ ಪದವೀಧರರಷ್ಟೆ ವರ್ಷಗಳ ತನಕ ವ್ಯಾಸಂಗಮಾಡಿದ ವಿದ್ಯಾವಂತರು ಈಗಿನಂಥ ಸುಧಾರಿಸಿದ ರಾಜ್ಯಕಾರಭಾರದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿಸಲ್ಪಡುವುದು ನಿಜವಾಗಿ ಶೋಚನೀಯವಾಗಿದೆ. ಪಂಡಿತ ವರ್ಗದ ಸ್ಥಿತಿಯು, ಮರೆಮಾಚದೆ ಹೇಳುವುದಾದರೆ ಅಸ್ಪೃಶ್ಯವರ್ಗದ ತರಗತಿಗೆ ಬಂದು ತಲಪಿದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅದು ಹೇಗೂ ಇರಲಿ, ಪಂಡಿತರು ಇತರರಷ್ಟು ಕೃತಪರಿಶ್ರಮರಾಗಿರುತ್ತ ಅವರ ನಿರ್ವಾಹವು ಮಾತ್ರ ಕಷ್ಟಸಾಧ್ಯವಾಗುವುದೆಂಬುದು ಅಸಹನೀಯವಾದ ಮಾತಾಗಿದೆ. ಈಗಿನ ಕಾಲದಲ್ಲಿ ಪಂಡಿತರ ಸಂಬಳವು ೩೫ ರೂ ಹೆಚ್ಚೆಂದರೆ ೬೦-೭೦ಕ್ಕೆ ಮಿಕ್ಕುವದು ಬಹಳ ಅಪರೂಪ. ಆದ್ದರಿಂದ ಅವರು ಮಾಡಿಕೊಂಡಿರುವ ಮನವಿಯಲ್ಲಿ ೭೫ರಿಂದ ೧೦೦ ರೂಪಾಯಿ ಕೊಡಬೇಕೆಂದು ನಿರ್ದಿಷ್ಟವಾಗಿದೆ. ಈಗ ಎರಡು ಸರ್ಗ ಕಾವ್ಯವನ್ನು ಓದಿ ಅಥವಾ ನಾಲ್ಕು ಪದ್ಯಗಳನ್ನು ಕಲಿತು ಕಾವ್ಯ ಕಟ್ಟಿ, ಹೈಸ್ಕೂಲಿನ ಅಥವಾ ಕಾಲೇಜಿನ ಪಂಡಿತಪೀಠವನ್ನು ಅಲಂಕರಿಸುವ ವ್ಯಕ್ತಿಗಳೂ ಕೆಲವಿದ್ದಾರೆ, ಇಲ್ಲವೆಂದಿಲ್ಲ. ಆದರೆ ಇಂಥವರನ್ನು ಆಯಾ ಸ್ಥಾನದಲ್ಲಿ ಯೋಜಿಸುವುದೆ ಮೊದಲು ತಪ್ಪಲ್ಲದೆ ಅದಕ್ಕಾಗಿ ಇಡೀ ಪಂಡಿತ ವರ್ಗವನ್ನು ಕಡಿಮೆ ಸಂಬಳದಿಂದ ಗೈಯಿಸುವುದು ನ್ಯಾಯ್ಯವಲ್ಲ. ಪಂಡಿತ ವರ್ಗವನ್ನು ತಯಾರಿಸಲು ಇಂತಿಂಥ ಗ್ರಂಥಗಳ ಅಧ್ಯಯನವು ಆವಶ್ಯಕವು, ಪರೀಕ್ಷೆಯು ಆವಶ್ಯಕವು, ಮತ್ತು ಆ ರೀತಿಯಿಂದ ಉತ್ತೀರ್ಣರಾದವರೆ ಪಂಡಿತ ಕೆಲಸಕ್ಕೆ ಬರಬೇಕೆಂದು ಸರಕಾರವು ಕಟ್ಟಾಜ್ಞೆಯನ್ನು ಮಾಡಿ ಜಾರಿಯಲ್ಲು ತರಲು ಉದ್ಯುಕ್ತವಾದರೆ ಯಾವ ತೊಂದರೆಯೂ ಒದಗುವ ಹಾಗಿಲ್ಲ ಮತ್ತು ಪಂಡಿತಕಂಡವರು ಪಾಂಡಿತ್ಯದ ಹೊದಿಕೆಯನ್ನು ಹೊದ್ದುಕೊಳ್ಳಲು ಕಾರಣವೂ ಇಲ್ಲ.

ಕಾಯಿಪಲ್ಯಗಳ ಬಗ್ಗಾದ ಗೊಬ್ಬರ

"ವೈಜ್ಞಾನಿಕ ವ್ಯವಸಾಯಕ"ವೆಂಬುವ ಒಂದು ಪತ್ರಿಕೆಯಲ್ಲಿ ಕಾಯಿಪಲ್ಯಗಳನ್ನು ಬೆಳಸಿ, ಮಾರ್ಕೇಟಿಗೆ ಅದನ್ನು ಕೊಂಡೊಯ್ದು ಮಾರಿಯೆ ದಿನಹರಣೆಯನ್ನು ಮಾಡುವ ಬೇಸಾಯದ ಸಲುವಾಗಿ ಶಾಸ್ತ್ರೀಯವಾದ ಲೇಖವೊಂದು ಪ್ರಕಟವಾಗಿದೆ. ಫಲವು ಎಷ್ಟಕ್ಕೆ ಉತ್ತಮವೊ ಅಷ್ಟಕ್ಕೆ ಫಲಗಳೂ ಉತ್ತಮವಾಗಿ, ಉಪಯೋಗಿಸಿದ ಗೊಬ್ಬರದ ಬೆಲೆಯಲ್ಲಿ ಒಂದೇ ಹಾಗೆ, ಒಂದು ರೂಪಾಯಿಯಂತೆ ಹುಟ್ಟನ್ನುಂಟುಮಾಡುವಂಥ ಉತ್ತಮವಾದ ಗೊಬ್ಬರಗಳು ಯಾವುವೆಂದು ಬೇಸಾಯಿಗಳು ತಿಳಿದರೆ, ಅವರ ಜೀವನೋಪಾಯವು ಸುಲಭವಾಗುವುದು. ಇಂಥ ಕಾಯಿಪಲ್ಯಗಳು ಬೆಳೆವ ಸ್ಥಳವನ್ನು ವರ್ಷಕ್ಕೆ ಕ್ರಮಸಿ ಬಪಕ್ಷ ಎರಡು ಬಾರಿಯಾದರೆ ಬಿತ್ತುವುದಿದ್ದು, ಅದುಕಾರಣ, ಭೂಮಿಯೊಳಗಣ ಸಾರವೆಲ್ಲ ಬತ್ತುವುದಲ್ಲದೆ, ಪುನಃ ಸಾರವು ಮೂಲಕವಾದ ಗೊಬ್ಬರವೇನೂ ಅದಕ್ಕೆ ಸಲ್ಲುವಂತಿಲ್ಲ. ಅದೇ ದೆಸೆಯಿಂದ ಉತ್ತಮವಾದ ಗೊಬ್ಬರವನ್ನು ಕೃಷಿಕ್ಷೇತ್ರಗಳಿಗೆ ಕೂಡದೆ ಉಪಾಯವಿಲ್ಲ. ನೂರಕ್ಕೆ ೪ ರಿಂದ ೬ರ ವರೆಗೂ ಅಂಶದ ಸೌಳುಪ್ಪನ್ನು ಕೂಡಿದ ಗೊಬ್ಬರವು ಉತ್ತಮವಾದುದು. ಎಲೆಗಳನ್ನೆ ಮಾರಾಟಮಾಡುವ ಒಗ್ಗ ಬೆಳೆಸುವ ಬಳಗಳಲ್ಲಿ ಎರಡು ಬಾರಿ ಸೌಳುಪ್ಪನ್ನು ಉಪಯೋಗಿಸುವುದಿದೆ. ಕೆಲವು ಬೇಸಾಯಿಗಳು ಸೌಳುಪ್ಪು (ನೈಟ್ರೇಟ ಒಫ್ ಸೋಡಾ) ಹೊರತಾಗಿ, ಇತರ ಯಾವ ಗೊಬ್ಬರವನ್ನೂ ಹಾಕುವುದೇ ಇಲ್ಲ. ಇದರಿಂದ ಮಣ್ಣಿನಲ್ಲಿ ತೇವು ಬಹುಕಾಲ ಇರುವಂತಾಗಿ ಸಸಿಗ ಹಚ್ಚನೆ ಉಪಕಾರವುಂಟಾಗುವುದು. ಸೌಳುಪ್ಪನ್ನು ಉಪಯೋಗಿಸುವವರು ಅದನ್ನು ಸಸಿಗಳ ಬೇರುಗಳಿಗೆ ತಗಲದಂತೆ, ಮಣ್ಣಿನಲ್ಲಿ ಮಾತ್ರ ಚೆನ್ನಾಗಿ ಬೆರಸಬೇಕಾಗಿದೆ.

ಯುದ್ಧ ಪರ್ಯವಸಾನ

॥ ಭಾಮಿನಿ ॥

ಕಳೆದುದೀ ನೆಲ ಕೆಲವು ವರ್ಷನ ।
ತೊಳಲಿ ಬಳಲುತ ಘೋರ ಯುದ್ಧಾ ।
ನಳದಿ ಲೋಕವು ತಪಿಸುತಿದ್ದಾ ಬೇಗೆ ಯೇನೆಂಬೆ ॥
ಬಳಸಿ ಬಂದಾ ಹಾಳುಗೋಳದು ।
ಮುಳಿದು ಸುಟ್ಟುದು ಸೇನೆಯೂರನು ।
ಅಳಿದು ಬಿದ್ದುವು ಕೋಟೆಕೊತ್ತಳ ಗ್ರಾಮ ಬೀದಿಗಳು ॥ ೧ ॥

ತನಯನಳಿದಾ ಸುದ್ದಿ ಪಿತನಿಗೆ, ।
ಇನೆಯ ಮಡಿದಾ ವಾರ್ತೆ ನಾರಿಗೆ, ।
ಘನ ಸರಕಿನೊಡ ನೌಕೆ ಮುಳುಗಿದ ವಾರ್ತೆ ವಣಿಜನಿಗೆ, ॥
ಜನಪತಿಗೆ ನಿಜಸೇನೆ ತಿರುಗಿದ ।
ಮನ ಕೆಡುಗೆದು ವಾರ್ತೆ ಮುಂದಿನ ।
ಧನಿಕರಿಗೆ ಸಾರ್ಥಕ್ಕಾಗಿ ಬೇಕೆಂದು ಹೇಳುವವನಾರು? ॥

ಶತ್ರುಗಳ ಹಾವಳಿಯ ಸಹಿಸುತ ।
ಮಿತ್ರಮಂಡಲಿಯೊಡನೆ ಸೇರುತ, ।
ಶತ್ರುಗಳ ಮಾರ್ಬಲವ ಕುಗ್ಗಿಸಿ, ದಿನದಿನದೊಳವರ ॥
ಕೃತ್ರಿಮವ ಹರಿಹರಿದು, ನಮ್ಮನು ।
ಪುತ್ರರಂದದಿ ಕಾಯುತವರನು, ।
ಮಿತ್ರಭಾವದಿ ಸೆಳದ, ಜೋರ್ಜಗೆ ಜಯವು ಸಮನಿಸಲಿ ॥

ಅಳಿದುಹೋಗಲಿ ಕದನವೆಂಬುದು ।
ಉಳಿದು ಬದುಕಲಿ ಜನರು ! ಶಾಂತಿಯ ।
ತಳೆದು ಮೆರೆಯಲಿ ಯಾಂಗ್ಲಭೂಮಿಯು ! ಭಾರತೀಯರಿಗೆ ॥
ಬಳಸಿ ಬೆಳೆದ ಬಯಕೆ ಸಲಿಸುತ ।
ಇಳೆಯ ದರ್ಮವ ಸಲಹಲವರೆ ।
ಬಳೆಯುತರು ಎಂಬುದನು ಲೋಕಕೆ ಮೆರೆಯಲಿಂಗ್ಲಂಡು ॥ ४ ॥

ಶಾಂತಿ ಸಮರದೊಳಳಿದ ವೀರಗೆ ।
ಶಾಂತಿಯವನನುಸರಿಪ ಬಳಗಕೆ ।
ಶಾಂತಿಯರಸಗೆ ಶಾಂತಿ ಕೃಷಿಕಗೆ ಶಾಂತಿ ಸರ್ವರಿಗೆ ॥
ಶಾಂತಿ ಜನನಿಯು ಹೋಗಬೇಡಾ ।
ಶಾಂತಿಯೇ ಜೀವನಕೆ ನಿಜ ನೆಲೆ ।
ಶಾಂತಿ ಜನಪದಗಳಿಗೆ ಲೋಕಕೆ ಶಾಂತಿಯೆಲ್ಲ ದೆಯೂ ॥ ೫ ॥

S R KORDCAL

ಮಂಗಳೂರು

ಪಪ್ರವರಿ ತಿಂಗಳ 'ಸ್ವಸನು' ಹಿಂದಿನ ಸೋಮವಾರ ಪ್ರಾರಂಭವಾಯಿತು. ಮಂಗಳೂರು ಟವನ್ ಸಬ್ ಮೆಜಿಸ್ಟ್ರೇಟರಿಂದ 'ಕಮಿಟ್' ಮಾಡಲ್ಪಟ್ಟ ಮೊಕದ್ದಮೆಯು ಮೊದಲು ವಿಚಾರಕ್ಕೆ ಬಂತು. ಫೆರ್ಮನ್ನೂರು ಗ್ರಾಮದಲ್ಲಿ ಕಳೆದ ನವೆಂಬರ್ ೩ನೆ ತಾರೀಕಿಗೆ ನೆಂಬವನು ಒಂಟಿಪ್ಪ ಎಂಬವನನ್ನು ಚೂರಿಯಿಂದ ತಿವಿದುಕೊಂದು ಅಪಾದಿತನಾಗಿದ್ದನು. ಮೃತನಿಗೂ ಅಪರಾಧಿಗೂ ಮದುವೆಮಾಡಿಕೊಳ್ಳದ ಸಂಬಂಧ ನ್ಯಾಯ ಎದ್ದಿತ್ತೆಂದು, ದಿಗ ಒಂಟಿಪ್ಪನು ಅವನ ಸಹೋದರನೂ ದೊಣ್ಣೆಗಳಿಂದ ಹೊಡೆಯತೊಡಗಿದ ಕಾರಣ ಕತ್ತಿಯನ್ನು ತಾನು ಪ್ರಯೋಗಿಸಿದ್ದಾಗಿ ಅಪರಾಧಿಯು ಒಪ್ಪಿಕೊಂಡನು. ತಕ್ಸೀರು ರುಜುವಾಗುತ್ತದೆಂದು ಎಸೆಸ್ಸರರು ಅಭಿಪ್ರಾಯಪಟ್ಟರೂ ಆ ಅಭಿಪ್ರಾಯವನ್ನು ಅಲ್ಲಗಳೆದು ಜಡ್ಜರು ಅಪರಾಧಿಯನ್ನು ರುಜುವಾತು ಸಾಕಷ್ಟು ಇಲ್ಲ ಎಂದು ಖುಲಾಸಮಾಡಿದರು.

ಪೆನ್ಶನ್ ಹೊಂದಿದ ತಹಸಿಲ್ದಾರ್ ಮಿ ನೊರ್ಬರ್ಟ ಫರ್ನಾಂಡಿಸರ ಕಳೆದ ಸೋಮವಾರ ದಿನ ಪ್ರಾತಃ ೧೧ ಗಂಟೆಗೆ ಸ್ವರ್ಗಸ್ಥರಾದರು.

ಕಳೆದ ಜನವರಿ ತಿಂಗಳಲ್ಲಿ ಪಟ್ಟಣದಲ್ಲಿ ೧೩೦ ಜನನಗಳೂ ೮೪ ಮರಣಗಳೂ ಸಂಭವಿಸಿದವು. ಕಳೆದ ವರುಷ ಇದೇ ತಿಂಗಳಲ್ಲಿ ೧೪೧ ಜನನಗಳೂ ೭೩ ಮರಣಗಳೂ ಇದ್ದವು.

ಗೌಡಸಾರಸ್ವತ ಬ್ರಾಹ್ಮಣ ವೃಂದದ ಗುರುಗಳಾದ ಶ್ರೀ ಕಾಶಿ ಸಂಸ್ಥಾನದ ಶ್ರೀ ಸುಕೃತೀಂದ್ರ ತೀರ್ಥಪಾದಂಗಳವರು ಮಂಜೇಶ್ವರದಿಂದ ನಿನ್ನೆ ದಿನ ಸಾಯಂಕಾಲಕ್ಕೆ ಇಲ್ಲಿಗೆ ಚಿತ್ತೈಸಿರುವರು.

ಬರುವ ತಾರೀಕು ೨೩ನೇ ಆದಿತ್ಯವಾರ ಕೂಡಲಿಕ್ಕಿರುವ ಜಿಲ್ಲಾ ಸಂಘದ (ಡಿಸ್ಟ್ರಿಕ್ಟ್ ಅಸೋಸಿಯೇಶನಿನ) ಸಭೆಯಲ್ಲಿ ಕಳೆದ ಡಿಸಂಬರ ತಾರೀಕು ೧೪ರಲ್ಲು ಕೂಡಿದ ಈ ಸಂಘದ ಸಭೆಯಲ್ಲಿ ಅಕ್ಕಿಯು ಈ ಜಿಲ್ಲೆಯಿಂದ ಬೇರೆ ಪ್ರಾಂತ್ಯಗಳಿಗೆ ಅತಿರೇಕವಾಗಿ ರಫ್ತಾಗುವುದರಿಂದ ಇಲ್ಲಿ ಅದರ ಧಾರಣೆಯು ಬಹಳವಾಗಿ ಏರುತ್ತದೆ. ಹೀಗಿರುವುದರಿಂದ ಇತರ ಭಾಗಗಳಿಂದ ಇಲ್ಲಿಗೆ ಅಕ್ಕಿಯನ್ನು ತರಿಸುವಂತೆ ಆಮದುರಫ್ತಿನ ಮೇಲಿನ ನಿರ್ಬಂಧವನ್ನು ತೆಗೆದುಹಾಕಬೇಕು ಇಲ್ಲವೆ ಇಲ್ಲಿಂದ ಬೇರೆ ಕಡೆಗೆ ಅಕ್ಕಿಯನ್ನು ರಫ್ತುಮಾಡುವುದಕ್ಕೆ ನಿಬಂಧಹಾಕಬೇಕು ಎಂದು ಮುಂತಾದ ವಿಷಯಗಳನ್ನು ಕುರಿತು ಸರಕಾರಕ್ಕೆ ಒಂದೊಂದು ಮನವಿಗೆ ಈ ವರೆಗೆ ಉತ್ತರವಿಲ್ಲದಿರುವುದರಿಂದ ಈ ವಿಷಯದಲ್ಲಿ ಮುಂದಕ್ಕೆ ಯಾವ ಉಪಾಯವನ್ನು ಕೈಕೊಳ್ಳತಕ್ಕದು ಮತ್ತು ಮೂಲಗೇಣಿ ಕಾನೂನಿನ ಆವಶ್ಯಕತೆ ಈ ಎರಡು ವಿಷಯಗಳು ಚರ್ಚೆಗೆ ಬರುವವು.

ಡಿಸ್ಟ್ರಿಕ್ಟಬೋರ್ಡ್ ಮೀಟಿಂಗು ತಾ. ೨೩ನೇ ಸೋಮವಾರ ಮಧ್ಯಾಹ್ನ ೩ ಗಂಟೆಗೆ ಕಲೆಕ್ಟರರ ಆಫೀಸಿನಲ್ಲಿ ಕೂಡುವುದು.

ಪ್ರೊಫೆಸರ್ ಎಸ್ ಶೇಷಪ್ಪನವರ ಬಿ ನ್ಯೂ ಕೆನರಾ ಸರ್ಕಸು ಇಲ್ಲಿಂದ ಹೊರಟು ಕುಂದಾಪುರ ಉಡುಪಿ ಮುಂತಾದ ಜಿಲ್ಲೆಯ ಪಟ್ಟಣಗಳನ್ನು ಸಂದರ್ಶಿಸಿ ಈಗ ಬಂಟವಾಳಕ್ಕೆ ತೆರಳಿರುವುದು. ಇಲ್ಲಿ ಕೆಲವು ದೇಖಾವೆಗಳನ್ನು ತೋರಿಸಿ ಜಿಲ್ಲೆಯ ಉಳಿದ ಭಾಗಗಳಲ್ಲಿ ತನ್ನ ಆಟಗಳನ್ನು ಪ್ರದರ್ಶಿಸಲಿಕ್ಕಿರುವುದು. ಈ ಕಂಪೆನಿಗೆ ಎಲ್ಲಾ ಕಡೆಗಳಲ್ಲಿಯೂ ತಕ್ಕುದಾದ ಪ್ರೋತ್ಸಾಹವು ಸಿಕ್ಕೀತೆಂದು ಭರವಸೆ ಪಡುತ್ತೇವೆ.

ನಮ್ಮ ಊರಿನವರಾದ ಡಾಕ್ಟರ್ ಪಿ. ವೆಂಕಟರಾವ್ ಎಂಬಿ ವರು ಈ ವರೆಗೆ ಕನ್ನಾನ್ನೂರು ಅತ್ತಕಡೆ ಇದ್ದು ಈಗ ಇಲ್ಲಿಗೆ ಬಂದಿರುತ್ತಾರೆ. ಇವರು ಇನ್ನುಮುಂದೆ ಇಲ್ಲಿಯೇ ತಮ್ಮ ಸ್ವಂತ ಔಷಧಾಲಯವನ್ನು ತೆರೆಯುವರಾಗಿ ಕೇಳುತ್ತೇವೆ. ಇವರನ್ನು ಎಲ್ಲರೂ ಪ್ರೋತ್ಸಹಿಸುವರಾಗಿ ನಂಬುತ್ತೇವೆ.

ಇಂಟರಸ್ಕೂಲ್ ಜಿಮ್ನಾಸ್ಟಿಕ್ ಹೊಕ್ಕಿಯಾಟದ ಕಪ್ಪು ಇಲ್ಲಿಯ ಯಂಗ್‌ಮೆನ್ಸ್ ಟೀಮಿಗೆ ಕೊಡಲ್ಪಡುವುದಾಗಿ ತಿಳಿಯುತ್ತೇವೆ.

ಟೌನ್‌ಹೋಲ್ ಕಟ್ಟಡದ ಕುರಿತು ಇದೇ ತಾ. ೧೭ನೇ ಸಾಯಂಕಾಲ ಬೆಂಚ್‌ಕೋರ್ಟಿನಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡುವದು.

[illegible] ಕೊಡದಿದ್ದರೂ ತಿಳಿದುಬರುತ್ತದೆ. ಇಂಥಾ ಅವಕಾಶ ಬರಲು [illegible] ಅಂಥಾ ಕೆಲಸಗಳಲ್ಲಿ ಕೈಹಚ್ಚುವ ಪ್ರವೇಶವೇ [illegible] ಅಲ್ಲಲ್ಲಿ ಜನಗಳು [illegible] ನಾಲ್ಕರಷ್ಟು [illegible] ಮಾಡಿಸಿರುವರೆಂದು ಕೇಳುತ್ತೇವೆ—

ಮದ್ರಾಸು ಪ್ರಾಂತಿಕ ಸರಕಾರದ ಜಮಾ ಖರ್ಚು.

1920—1921

ಇದೇ ತಿಂಗಳ ೫ನೇ ತಾರೀಕಿಗೆ ಮದ್ರಾಸಿನಲ್ಲಿ ಆದಗಿದ ಮದ್ರಾಸು ನ್ಯಾಯ ವಿಧಾಯಕ ಸಭೆಯ ಅಧಿವೇಶನದಲ್ಲಿ ನಾಮದಾರ ಟೊಡ್ಹಂಟರ್ ಸಾಹೇಬರು ೧೯೨೦—೨೧ನೆ ವರ್ಷದ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಮಂಡಳಿಗೆ ಒಪ್ಪಿಸಿದರು. ಆ ಕಾಲದಲ್ಲಿ ಅವರು ಮಾಡಿದ ಭಾಷಣದಲ್ಲಿ ಮೊತ್ತಮೊದಲು ಗತ ವರ್ಷದ ಪರಿಸ್ಥಿತಿಯನ್ನು ಸಂಕ್ಷೇಪವಾಗಿ ವಿವರಿಸುವಾಗ ಆಹಾರದ ತುಟ್ಟಿ, ರೈಲು ಮಾರ್ಗವಾಗಿ ಸಾಮಾನು ಸಾಗಿಸುವುದಕ್ಕೆ ಡಬ್ಬಿಗಳ ಅಭಾವ, ಇವುಗಳನ್ನು ಒಂದೆರಡು ಮಾತುಗಳಲ್ಲಿ ಹೇಳಿ, ಯುದ್ಧಕಾಲದಲ್ಲಿ ಹಿಂದಿನ ಶಿಲಕು ಹಣವನ್ನು ಖರ್ಚು ಮಾಡಬಾರದಾಗಿ ಇಟ್ಟ ನಿರ್ಬಂಧದಿಂದ ಹಲವು ಸಲಹೆಗಳ ಕಡೆಗೆ ಲಕ್ಷ್ಯ ಕೊಡಲು ಸಾಧ್ಯವಾಗಲಿಲ್ಲವೆಂದು ತಿಳಿಸಿದರು. ಕ್ಷಾಮವು ತಲೆದೋರಿದ ಸಂಬಂಧ ಕಾಮಗಾರಿಯನ್ನು ನಡೆಸುವುದಕ್ಕೆ ೩೦ಲಕ್ಷ ರೂಪಾಯಿ ಖರ್ಚು ತಗಲಿತಂತೆ. ಇದರೊಂದಿಗೆ ಖಾಸಗಿ ಫಂಡುಗಳಿಂದ ಕೂಡಿಸಿದ ಹಣವೂ ಈ ಕೆಲಸಕ್ಕೆ ವಿನಿಯೋಗಿಸಲ್ಪಟ್ಟಿತು. ಗಂಜಾಂ ಜಿಲ್ಲೆಯಲ್ಲಿ ಬಡಜನರಿಗೆ ಬಟ್ಟೆಬರೆ ಒದಗಿಸಲಿಕ್ಕೆ ರೂ. ೨,೫೦,೦೦೦, ಇದಕ್ಕೆ ಸಹಾಯಾರ್ಥವಾಗಿ "ಇಂಡಿಯನ್ ಪೀಪಲ್ಸ್" ಫಂಡಿನಿಂದ ರೂ. ೫೦,೫೦೦ ಸಹ ವೆಚ್ಚವಾಯಿತಂತೆ. ಕೃಷ್ಣಾ ಜಿಲ್ಲೆಯ ಒಳಪ್ರಾಂತದಲ್ಲಿ ಕ್ಷಾಮ ಬಾಧೆಯ ನಿಮಿತ್ತ ಜನೋಪಕಾರದ ಕಾಮಗಾರಿಗಳನ್ನು ಪ್ರಾರಂಭಿಸಿದರೂ, ೨೦೦೦೦ರೂಪಾಯಿಗೆ ಮಿಕ್ಕಿ ವೆಚ್ಚಮಾಡುವ ಅಗತ್ಯ ಬೀಳಲಿಲ್ಲವೆಂದು ತಿಳಿಯುತ್ತೇವೆ. ಬರ್ಮಾದಿಂದ ಇತರ ಜಿಲ್ಲೆಗಳಿಗೆ ೩೫,೦೦೦ ಟನ್ನು ಅಕ್ಕಿಯನ್ನು ಒದಗಿಸಿದ್ದಲ್ಲದೆ ಕೃಷ್ಣಾ ಮತ್ತು ತಂಜಾವೂರ ಜಿಲ್ಲೆಗಳ ಅಕ್ಕಿಯನ್ನು ನಿರ್ಬಂಧದ ಮೂಲಕ ಸರಕಾರದವರು ಕೊಂಡುಕೊಂಡು ಆಹಾರ ತುಟ್ಟಿಯಾದ ಜಿಲ್ಲೆಗಳ ಪೂರೈಕೆಯನ್ನು ನೋಡಿಕೊಂಡರು. ಇದಲ್ಲದೆ ಕೃಷಿ ವಿಸ್ತಾರವನ್ನು ಯೋಚಿಸಿ ಹಿಂದಿನ ೫ ವರ್ಷಗಳ ಸರಾಸರಿಗಿಂತ ಮೊದಲನೆ ಪೈರಿನಲ್ಲಿ ನೇಕಡಾ ೧೦ರಷ್ಟು ಮತ್ತು ೨ನೇ ಪೈರಿನಲ್ಲಿ ನೇಕಡಾ ೨೨ರಷ್ಟು ಪೈದಾಸ್ತನ್ನು ಹೆಚ್ಚಿಸಲು ಸಾಧ್ಯವಾಯಿತೆಂದು ತಿಳಿಯುತ್ತೇವೆ. ಹೀಗಿದ್ದರೂ ಹಲವು ಕಡೆಗಳಲ್ಲಿ ಪೈದಾಸ್ತಿಯ ಬೇದಾತನ್ನು ಏರಿಸಲಿಕ್ಕೆ ಅವಕಾಶವಿದೆ, ಮುಖ್ಯವಾಗಿ ಮಲಬಾರಿನಂತೆ ಸರ್ವ ಅನುಕೂಲತೆಯು ಇದ್ದು ಕೂಡಾ ಜಿಲ್ಲೆಯ ಜನರಿಗೆ ಬೇಕಾಗಿದ್ದ ಬೇದಾತಿನ ೫ನೆ ೧ಅಂಶ ಮಾತ್ರ ಅಲ್ಲಿ ಪೈದಾಸ್ತು ಆಗುತ್ತಿದೆ ಎಂದು ನಾಮದಾರ ಟೊಡ್ಹಂಟರ್ ಸಾಹೇಬರು ಹೇಳಿದರು.

ಅನಂತರ ೧೯೧೯-೨೦ನೆ ವರ್ಷದ ಅಂಕದ ತಿದ್ದುಪಡಿ ಅಂದಾಜು ಪಟ್ಟಿಯ ಮೇರೆಗೆ ವ್ಯಾಪಾರ ಚಲಾವಣೆಯ ಅಭಿವೃದ್ಧಿಯ ದೆಸೆಯಿಂದ [illegible] ಮತ್ತು ರಿಜಿಸ್ಟ್ರಿ ಫೀಸು, ವ್ಯಾಜ್ಯ ಸಾಕ್ಷಿಗಳ ನಿಮಿತ್ತ ಕೋರ್ಟುಫೀಸಿನ ರಕಮಿನಲ್ಲಿ ಅಭಿವೃದ್ಧಿ ಇದೆ ಎಂದು ಹೇಳಿ ಇವೆರಡರಲ್ಲಿಯೂ ಅಂದಾಜುಪಟ್ಟಿ ೮೩ ಲಕ್ಷದಿಂದ ೯೫ ಲಕ್ಷಕ್ಕೂ ೨೭ ಲಕ್ಷದಿಂದ ೩೩ಲಕ್ಷಕ್ಕೂ ಏರಿತೆಂತಲೂ 'ಇನ್ ಕಂಟ್ಯಾಕ್ಸ್' ೩೫.೯೫ ಲಕ್ಷದಿಂದ ೫೬॥ ಲಕ್ಷಕ್ಕೆ ಏರಿತೆಂತಲೂ ನಾವು ತಿಳಿಯುತ್ತೇವೆ. ಇದಲ್ಲದೆ ಆಹಾರದ ಧಾರಣೆಯು ಇಮ್ಮಡಿಯಾಗಿ ಅದೇ ದಾಮಾಶಯದಲ್ಲಿ ಕೂಲಿಯ ದರವು ಸುಮಾರು ಏರಿದ್ದರೂ ಸುಂಕ ಹಾಕುವ ವಸ್ತುಗಳ ಬೆಲೆಯು ಅದೇ ದಾಮಾಶಯದಿಂದ ಏರಲಿಲ್ಲ, ಹೀಗಾಗಿ ೧೯೨೦ನೆ ಮಾರ್ಚ ಅಖೈರಿಗೆ ಅಂತ್ಯವಾಗುವ ವರ್ಷದಲ್ಲಿ ಎಲ್ಲಾಯಿ ರೆವಿನ್ಯೂ ೫೩೪.೦೬ಲಕ್ಷ ರೂಪಾಯಿಯಿಂದ ೫೬೬.೫೦ ಲಕ್ಷಕ್ಕೆ ಮಾತ್ರವೇ ಏರಿತು, ಈಗ ದೇಶೀಯ ಸರಾಬಿನ ತೆರಿಗೆಯನ್ನು ಬರುವ ಏಪ್ರಿಲ್ ೧ನೆ ತಾರೀಕಿನಿಂದ ಇನ್ನು ಸ್ವಲ್ಪ ಏರಿಸಿದೆ ಎಂದು ಮಿ॥ ಟೊಡ್ಹಂಟರ್ ಸಾಹೇಬರು ತಿಳಿಸಿದರು.

ಈ ಮೊದಲು ಸರಕಾರಿ ಕಾಡುಗಳನ್ನು ಸುರಕ್ಷಿತ ಪಡಿಸುವ ಕೆಲಸ ಮಾತ್ರವೇ ವಿಶೇಷವಾಗಿ ನಡೆಯುತ್ತಿತ್ತು. ಯುದ್ಧ ಕಾಲದಲ್ಲಿ ಬೇರೆ ಬೇರೆ ಪ್ರಯೋಜನಕರವಾದ ವಸ್ತುಗಳು ಕಾಡುಗಳ ಮೂಲಕ ದೊರೆಯುತ್ತವೆ ಎಂದು ತಿಳಿದು ಬಂದ ಮೇಲೆ ಅದರ ವಿಚಾರ ತೆಗೆದುಕೊಂಡದರಿಂದ, ಚರ್ಮ ಹದ ಮಾಡುವ ವಸ್ತುಗಳು, ಮರಮಟ್ಟು, ಗಂಧ, ಕಟ್ಟಿಗೆ, ಇದ್ದಲು ಇವುಗಳ ಮೂಲಕ ಸರಕಾರದ ಉತ್ಪನ್ನವು ಈ ಚಾಲ್ತಿ ವರ್ಷದಲ್ಲಿ ಏರಿಬಂತು. ಗತವರ್ಷದಲ್ಲಿ ೪೭ಲಕ್ಷ ೧೯ಸಾವಿರ ರೂಪಾಯಿ ಆದಾಯವಿದ್ದರೆ ಈ ವರ್ಷದಲ್ಲಿ ೭೧ಲಕ್ಷವಾಗಿದೆ. ಅದೇ ಮೇರೆಗೆ ಖರ್ಚು ಸಹಾ ಗತವರ್ಷಕ್ಕಿಂತ ೪ಲಕ್ಷ ರೂಪಾಯಿ ಹೆಚ್ಚಿದೆ ಎಂದು ತಿಳಿಯುತ್ತೇವೆ.

ಈ ವರ್ಷದಲ್ಲಿ ಖರ್ಚಿನ ಮಟ್ಟಿಗೆ ಮೊಬಲಗು ಏರಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕಟ್ಟೋಣಗಳಿಗೆ ಬೇಕಾದ ಸಾಮಗ್ರಿಗಳ ಬೆಲೆ ವಿಶೇಷ ಏರಿದ ಕಾರಣ ನೇಕಡಾ ೩೫ರಷ್ಟು ಖರ್ಚು ಏರಿತು. ಆರೋಗ್ಯ ಇಲಾಖೆಯಲ್ಲಿ ಇದಕ್ಕಿಂತಲೂ ಇನ್ನೂ ಖರ್ಚು ಹೆಚ್ಚಾಯಿತು. ಇದೇ ರೀತಿಯಲ್ಲಿ ಸಿಬಂದಿ ಖರ್ಚಿನಲ್ಲಿಯೂ ಏರಿದ ಧಾರಣೆಯ ನಿಮಿತ್ತ ಎಲೋವೆನ್ಸ್ ವಗೈರೆ ಏರಿಸಬೇಕಾಗಿ ಬಂತು. ಮತ್ತು ಜೈಲ ಇಲಾಖೆ ಆಸ್ಪತ್ರೆಯ ಇಲಾಖೆಗಳಲ್ಲಿಯೂ ಸಾಮಗ್ರಿಗಳ ಬೆಲೆ ಏರಿದ ಸಂಬಂಧ ಖರ್ಚಿನ ಮೊಬಲಗು ಏರಿಕೊಂಡು ಬಂತು ಎಂದು ಹೇಳಿ ಅದರ ಖರ್ಚಿನ ಪಟ್ಟಿಯನ್ನು ಇಲಾಖೆಯವರು ಕೊಟ್ಟಿರುವರು.

ಅನಂತರ ಮುಂದಿನ ವರ್ಷದ ಆಜಮಾಯಿಷ ಪಟ್ಟಿಯನ್ನು ಸಭೆಯ ಮುಂದಿಟ್ಟು ಜಮಾ ಖರ್ಚಿನ ಅಂದಾಜನ್ನು ಚರ್ಚಿಸುವಾಗ ನಾಮದಾರ ಟೊಡ್ಹಂಟರರು ಹೀಗಂದರು. 'ಈ ವರ್ಷದ ಫಸಲು ಸ್ಥಿತಿ ಚೆನ್ನಾಗಿರುವುದರಿಂದಲೂ ವ್ಯಾಪಾರ ಚಲಿವಾಟಿಗೆ ಇರುವ ಅಡಚಣೆಗಳು ಕಡಿಮೆಯಾಗುತ್ತ ಬರುವುದರಿಂದಲೂ ಯುದ್ಧ ಕಾಲದಲ್ಲಿ ವರ್ಷಾಂತ್ಯಾ ಉಳಿದ ಶಿಲಕನ್ನು ಮುಟ್ಟದೆ ಕಾಯ್ದಿರಿಸಿಟ್ಟು ಇರುವುದರಿಂದಲೂ ಈ ೧೯೨೦ನೆ ಏಪ್ರಿಲ್ ೧ನೆ ತಾರೀಕಿಗೆ ಶಿಲಕು ೨೦೬ಲಕ್ಷ ರೂಪಾಯಿ ಇರುವುದು. ಈ ೧೯೨೦-೨೧ನೆ ವರ್ಷದಲ್ಲಿ ಜಮಾ ೯೭೩ಲಕ್ಷ ೭೫ಸಾವಿರ, ಖರ್ಚು ೧೦೮೯ಲಕ್ಷ ೯ಸಾವಿರ ರೂಪಾಯಿ, ವರ್ಷಾಂತ್ಯದಲ್ಲಿ ೯೦ಲಕ್ಷ ೬೫ ಸಾವಿರ ರೂಪಾಯಿ ಮಾತ್ರ ಶಿಲಕು ಉಳಿಯಬಹುದಾಗಿ ಮಿ॥ ಟೊಡ್ಹಂಟರ್ ಸಾಹೇಬರು

[illegible] ಕಂಪನಿಗಳಿಗಿಂತ ಹೆಚ್ಚಿನ ಬಂಡವಾಳವನ್ನು ತೀರಿಸುವಂತೆ ಏರ್ಪಡಿಸಿದ್ದ [illegible] ಟಿಕ್ಸ ಚಾಲ್ತಿ ವರ್ಷದಷ್ಟು ಹುಟ್ಟಲಾರದು ಎಂದು ನೆನಸಿ ಅಂದಾಜಿನಲ್ಲಿ ೧೧ ಲಕ್ಷ ರೂಪಾಯಿ ಕಡಿಮೆ ಮಾಡಿದೆ. ಫಾರೆಸ್ಟು ಮತ್ತು ರಿಜಿಸ್ಟ್ರೇಷನ್ ಈ ಎರಡು ಖಾತೆಗಳಲ್ಲಿಯೂ ಚಾಲ್ತಿ ವರ್ಷದಷ್ಟು ಆದಾಯವಿರಲಾರದು ಎಂದು ನಾಮದಾರರ ಅಭಿಪ್ರಾಯವಿದೆ.

ಖರ್ಚಿನ ಅಂದಾಜು ಪಟ್ಟಿಯ ಮೇರೆಗೆ ಸಿಬಂದಿಯ ಸಂಬಳದಲ್ಲಿ ವಿಶೇಷ ವೃದ್ಧಿ ಕಾಣುತ್ತದೆ. ಪಬ್ಲಿಕ ಸರ್ವಿಸ ಕಮಿಶನದವರ ರಿಪೋರ್ಟಿನ ಸೂಚನೆಗಳನ್ನು ಆಲೋಚಿಸಿ ತಯಾರಿಸಿದ ಏರ್ಪಾಡುಗಳು ಸ್ಟೇಟ ಸೆಕ್ರೆಟರಿಗಳ ಮಂಜೂರಾತಿಯನ್ನು ಪಡೆದಿವೆ. ಇವುಗಳ ಮೇರೆಗೆ ಸುಪೀರಿಯರ್ ಸರ್ವಿಸ ಸಿಬಂದಿಯ ಖರ್ಚು ಚಾಲ್ತಿ ವರ್ಷಕ್ಕಿಂತಲೂ ೨೪ಲಕ್ಷ ರೂಪಾಯಿಗೆ ಏರುವುದು. ಸಬೋರ್ಡಿನೆಟ ಸರ್ವಿಸ ಮತ್ತು ಚಿಲ್ಲರೆ ನೌಕರರ ಸಂಬಳಗಳ ವಿಷಯ ಏರಿಸುವ ನಿಮಿತ್ತ ಏರ್ಪಟ್ಟ 'ಸೆಲೆಕ್ಟ ಕಮಿಟಿ'ಯ ಸೂಚನೆಗಳು ಇನ್ನೂ ಸಂಪೂರ್ಣ ತಯಾರಾಗಿಲ್ಲವಾದರೂ ಮುಂದಿನ ವರ್ಷದಲ್ಲಿ ಈ ಸಿಬಂದಿಗಳ ಬಗ್ಗೆ ೫೩ಲಕ್ಷ ರೂಪಾಯಿ ಸುಮಾರು ಬೇಕಾಗಬಹುದಂತೆ. ಈ ವಿಲೆವಾರಿಯಲ್ಲಿ ಗ್ರಾಮ ಉದ್ಯೋಗಸ್ಥರ ಸಂಬಳದ ದರಗಳು ಹೆಚ್ಚುವವೆಂದು ನಾವು ತಿಳಿಯುತ್ತೇವೆ.

ಪಬ್ಲಿಕ್ ವರ್ಕ್ಸ ಇಲಾಖೆಯಲ್ಲಿ ಚಾಲ್ತಿ ವರ್ಷಕ್ಕಿಂತ ೩೦ಲಕ್ಷ ೩೪ಸಾವಿರ ರೂಪಾಯಿ ಹೆಚ್ಚಿಗೆ ಖರ್ಚಾಗಬಹುದೆಂದು ಆಜಮಾಯಿಷ ಮಾಡಿದ್ದಾರೆ. ಯುದ್ಧ ಕಾಲದಲ್ಲಿ ಬಾಕಿ ನಿಲ್ಲಿಸಿದ ಹಲವು ಕಾಮಗಾರಿಗಳನ್ನು ಈಗ ಕೈಕೊಳ್ಳುವ ಅಗತ್ಯವಿದ್ದು ಹೀಗೆ ಖರ್ಚಿನ ದಾಮಾಶಯವು ಏರಿದೆ ಎಂದು ನಾಮದಾರರು ಹೇಳುತ್ತಾರೆ.

(ಮುಂದರಿಸಲಾಗುವುದು.)

ಬತ್ತದ ಪೈರು. (ಪಬ್ಲಿಸಿಟಿ ಬಿರೊ)

ವಿಟ್ಲಕ್ಕೆ ಸಮೀಪ ಕೋಲ್ನಾಡು ಗ್ರಾಮದ ಜಮೀನುದಾರ ಮ॥ ರಾ॥ ಯನ್. ರಾಮಭಟ್ಟರು ಕಳೆದ ಒಕ್ಟೋಬರ್ ೯ನೆ ತಾರೀಕಿಗೆ ಈ ಪಬ್ಲಿಸಿಟಿ ಬಿರೊಗೆ ಒಂದು ಪತ್ರವನ್ನು ಬರೆದಿದ್ದರು. ಬತ್ತದ ಕದಿರು ಹಣ್ಣಾಗಿ ಕೊಯ್ಲಿಗೆ ಬರುವ ಮುಂಚೆಯೆ ಹಲವು ಕಡೆಗಳಲ್ಲಿ ಉದುರಿಹೋಗುವುದರಿಂದ ಅನೇಕ ಕೃಷಿಕರಿಗೆ ಹೇರಳ ನಷ್ಟವಾಗುತ್ತಿದೆ, ಅದಕ್ಕೆ ಪರಿಹಾರವೇನಾದರೂ ಇದೆಯೇ, ತನಗೆ ತಿಳಿಸಬೇಕೆಂದು ಆ ಪತ್ರದಲ್ಲಿ ಇವರು ಬರೆದಿದ್ದರು. ಈ ವಿಷಯವನ್ನು ಎಗ್ರಿಕಲ್ಚರ್ ಇಲಾಖೆಯ ಡೆಪ್ಯೂಟಿ ಡೈರೆಕ್ಟರರಿಗೆ ಈ ಪಬ್ಲಿಸಿಟಿ ಬಿರೊದವರು ಬರೆದು ತರಿಸಿದ ಪ್ರತ್ಯುತ್ತರವನ್ನು ಕೃಷಿಕರ ತಿಳಿವಳಿಕೆ ಬಗ್ಗೆ ಅವರು ಪ್ರಕಟಿಸಿರುವರು. ಅದರಲ್ಲಿ ಹೀಗಿದೆ.—

ತೆನೆ ಉದುರುವುದು ಹುಳಬಾಧೆ ಅಥವಾ ಬೇರೆ ಏನಾದರೂ ರೋಗ ನಿಮಿತ್ತದಿಂದಲ್ಲ. ತೆನೆಗಳು ಒಂದೇ ಕಾಲದಲ್ಲಿ ಹಣ್ಣಾಗದೆ ಬೇರೆ ಬೇರೆ ಕಾಲಗಳಲ್ಲಿ ಹಣ್ಣಾಗುವುದೇ ಇದರ ಕಾರಣ. ಮೊದಲು ಹಣ್ಣಾದ ತೆನೆಗಳು ಮೊದಲು ಉದುರಿಬಿಡುತ್ತವೆ. ಇದಕ್ಕೆ ಮೂರು ಕಾರಣಗಳಿವೆ.

(೧) ಬತ್ತದ ಬೀಜದಲ್ಲಿ ವಿವಿಧ ಬಗೆಯ ಕಾಳುಗಳ ಮಿಶ್ರವಿದೆ. ಇವುಗಳಲ್ಲಿ ಕೆಲವು ಬೇಗನೆ ಹಣ್ಣಾಗುತ್ತವೆ; ಇನ್ನು ಕೆಲವು ಅನಂತರ ಹಣ್ಣಾಗುತ್ತವೆ. ಈ ಉಪಟಳವನ್ನು ತಪ್ಪಿಸುವುದಕ್ಕೆ ರೈತನು ಕೊಯ್ಲು ಕೆಲಸವಾದೊಡನೆ ಒಂದೇ ಬಗೆಯ ಬೆಳೆದ ಕದಿರುಗಳನ್ನು ಆಯ್ದುಕೊಳ್ಳಬೇಕು. ಅವನ್ನು ಮುಂದಿನ ವರ್ಷಕ್ಕೆ ಬೀಜವಾಗಿ ಉಪಯೋಗಿಸಬೇಕು. ಇದಕ್ಕೆ ಖರ್ಚು ವಿಶೇಷವಿಲ್ಲ. ಈ ರೀತಿಯಾಗಿ ಆಯ್ದುಕೊಳ್ಳುವ ಕ್ರಮವನ್ನು ಕೂಲಿಯಾಳುಗಳಿಗೆ ಬೇಗನೇ ಕಲಿಸಬಹುದು. ಈ ಕ್ರಮದಿಂದ ರೈತನು ತನ್ನ ಗದ್ದೆಯಲ್ಲಿ ಕೆಂಪು ಬಿಳಿ ಅಕ್ಕಿಯ ಮಿಶ್ರಣದ ಬದಲಾಗಿ ಶುದ್ಧ ಬಿಳುಪಾದ ಅಕ್ಕಿಯನ್ನು ಬೆಳೆಯಿಸಬಹುದು. [illegible] ಬತ್ತ ಬೆಳಸಿದ ಒಂದು ಗದ್ದೆಯಿಂದ ಒಬ್ಬ ಕೃಷಿ ಇಲಾಖೆಯ ಅಧಿಕಾರಿಯು ಕೆಲವು ಕದಿರುಗಳನ್ನು ಒಡೆದು ತೋರಿಸಿದಾಗ ಅದರಲ್ಲಿ ನಾಲ್ಕೈದು ವಿಧದ ಅಕ್ಕಿ ಇದ್ದ ಹಾಗೆ ಕಂಡಿತು.

(೨) ತೆನೆಗಳು ಏಕಕಾಲದಲ್ಲಿ ಹಣ್ಣಾಗದಿರುವುದಕ್ಕೆ ಎರಡನೆ ಕಾರಣವಿದೆ. ದಕ್ಷಿಣಕನ್ನಡದಲ್ಲಿ ಬೀಜವನ್ನು ಬಿಟ್ಟು ಬರದ ಎತ್ತರ ಗದ್ದೆಯಲ್ಲಿ ಹಾಕುವ ವಾಡಿಕೆ ಇದೆ. ಹೀಗೆ ಬಿತ್ತಿದ ಬೀಜಗಳಲ್ಲಿ ಕೆಲವು ಮೊದಲೇ ಮೊಳೆಯುತ್ತವೆ; ಇನ್ನು ಕೆಲವು ಮೊದಲಿನ ಮಳೆ ಬಂದಾಗ ಮೊಳಕೆ ಹೊರಡಿಸುತ್ತವೆ. ಇವೆರಡು ಬಗೆಯ ಮೊಳಕೆ ಹುಟ್ಟಲಿಕ್ಕೆ ೩ಯೂ ೪ ವಾರಗಳ ಅಂತರವು ನಡುವೆ ಇರುತ್ತದೆ. ಇದನ್ನು ತಪ್ಪಿಸಬೇಕಾದರೆ ಈ ಬೀಜವು ಏಕಕಾಲದಲ್ಲಿಯೇ ಚಿಗುರುವಂತೆ ನೀರು ಹಾಯಿಸಬೇಕಾಗುತ್ತದೆ, ಮತ್ತು ಗದ್ದೆಯನ್ನು ಚೆನ್ನಾಗಿ ಉತ್ತು ನೆಲವು ಒಣಗುವಷ್ಟರಲ್ಲಿ ಬೀಜವನ್ನು ಬಿತ್ತಿಬಿಡಬೇಕು. ಈ ರೀತಿಯ ಅನುಕೂಲತೆ ಇಲ್ಲದಲ್ಲಿ ನೇಜಿಕರ ಮಾಡಿದರೆ ಈ ವಿವಿಧ ರೀತಿಯ ಮತ್ತು ಬೇರೆ ಬೇರೆ ಕಾಲದಲ್ಲಿ ಮೊಳೆಯುವ ಸಸಿಗಳು ಏಳುತ್ತವೆ. ಅಂಥಾ ಸಸಿಗಳಿಂದ ಹುಟ್ಟುವ ಬತ್ತವು ಏಕಕಾಲದಲ್ಲಿ ಹಣ್ಣಾಗುವುದಿಲ್ಲ.

ಅನೇಕ ಗದ್ದೆಗಳಲ್ಲಿ ಬತ್ತದ ಕಾಡುಸಸಿಗಳನ್ನು ಬೆಳೆಯಲಿಕ್ಕೆ ಬಿಡುವುದು ಮೂರನೆ ಕಾರಣ. ಈ ಕಾಡುಸಸಿಗಳ ಬತ್ತವು ಬೇಗನೆ ಹಣ್ಣಾಗಿ ಬೇಗನೇ ಉದುರುತ್ತದೆ. ಈ ಕಾಡುಸಸಿಯು ಪೈರು ಸ್ಥಿತಿಯನ್ನು ಹಾಳುಮಾಡುವುದರಿಂದ ಅದನ್ನು ಕಳೆ ಎಂದು ಭಾವಿಸಿ ಕಿತ್ತುಬಿಡಬೇಕು. ಹೀಗಿದ್ದರೂ ದಕ್ಷಿಣಕನ್ನಡದ ರೈತರು ಈ ವಿಷಯದಲ್ಲಿ ಗಮನ ಕೊಡುವುದಿಲ್ಲ. ಅದಕ್ಕೆ ಬದಲಾಗಿ ಈ ಕಾಡು ಬತ್ತವನ್ನು ಕೊಯ್ಲಿನ ಕಾಲದಲ್ಲಿ ಕೂಲಿಯಾಳುಗಳು ಕೊಂಡುಹೋಗಲಿಕ್ಕೆ ಬಿಡುತ್ತಾರೆ. ಹೀಗಾದ್ದರಿಂದ ಈ ಕೂಲಿಯಾಳುಗಳು ಈ ಬಗೆಯ ಸಸಿಗಳನ್ನು ಕೀಳದೆ ಬೆಳೆಯಗೊಡುತ್ತಾರೆ. ಇಂಥ ಕಳೆಯನ್ನು ಕಿತ್ತುಹಾಕಲಿಕ್ಕೆ ರೈತರು ಪ್ರಯತ್ನಿಸಬೇಕು. ಈ ಮಾತುಗಳನ್ನು ಚೆನ್ನಾಗಿ ಆಲೋಚಿಸಿ ಕನ್ನಡ ಜಿಲ್ಲೆಯ ರೈತರು ಇದಕ್ಕೆ ಏನು ಆಕ್ಷೇಪಗಳನ್ನು ಹೇಳಲಿಕ್ಕೆ ಇದ್ದಾರೆ ಎಂಬುದನ್ನು ತಿಳಿಯಲಿಕ್ಕೆ ಪಬ್ಲಿಸಿಟಿ ಬೋರ್ಡಿನ ಆಫೀಸರರು ತುಂಬಾ ಕುತೂಹಲವುಳ್ಳವರಾಗಿದ್ದಾರೆ.

ರೈತರಿಗೆ ಹಿತಸೂಚನೆಗಳು:

(೧) ಒದ್ದೆಯ ಕೈಗಳಿಂದ ಎಂದಿಗೂ ಹಾಲುಕರೆಯಕೂಡದು

(೨) ಒಳ್ಳೆಯ ಮೇವನ್ನು ಹಾಕಿದ್ದಲ್ಲಿ [illegible] ಹೆಚ್ಚು ಹಾಲನ್ನು ಕೊಡುವುದು.

(೩) ಗೊಬ್ಬರದ ತಿಪ್ಪೆಯನ್ನು ಜಾಗರೂಕತೆಯಿಂದ ನೋಡಿಕೊಳ್ಳಿ. ಅದರಿಂದ ಲಾಭವಿರುವುದು.

(೪) ಸಾಧ್ಯವಾದಲ್ಲಿ ಮರಿ ಹಾಕುವ ದನಗಳನ್ನು ಹುಲ್ಲಿನ ಮೇಲೆ ಬಿಡಬೇಕು.

[illegible]

ಪತ್ರವ್ಯವಹಾರ.

ಪಟೇಲರು.— ಇವರಿಗಿರುವ ಪ್ರತಿ ಒಂದು ಕೆಲಸವೂ ಜವಾಬ್ದಾರಿಕೆಯುಳ್ಳದ್ದು. ಪಟೇಲರ ಕರ್ತವ್ಯಕರ್ಮಗಳೆಂದು ಕೆಲವು ಮನ್ಯುಯಲುಗಳಲ್ಲಿ ವಿಧಾಯಕವಾಗಿದ್ದರೂ—ಎಷ್ಟೋ ಕೆಲಸಗಳು ಶ್ಯಾನುಭೋಗರಿಂದಲೇ ನಡಸಲ್ಪಡುತ್ತಿದ್ದವು. ಈಗಲಾದರೋ ಶ್ಯಾನುಭೋಗರಿಗೂ ಕೆಲಸ ಹೆಚ್ಚಾಗಿ ಬಂದದ್ದರಿಂದ, ಆ ಕಾರ್ಯಗಳೆಲ್ಲಾ ಪಟೇಲರೇ ಸ್ವತಂತ್ರರಾಗಿ ನಿರ್ವಹಿಸಬೇಕಾಗಿದೆ. ಮುಂಚೆ [illegible] ಎಪ್ರಿಲ್ ಮೇ ತಿಂಗಳಲ್ಲಿ ಆಗುವ ಕಂದಾಯ ವಸೂಲಿಯ ಕೆಲಸವೊಂದೇ (ಅದೂ ಶ್ಯಾನುಭೋಗರ ಪೂರ್ಣ ಸಹಾಯದಿಂದ ನಿರ್ವಹಿಸುವುದು) ಪಟೇಲರ ಮುಖ್ಯ ಕೆಲಸವಾದ್ದರಿಂದ ಮಿಕ್ಕ ೧೦ ತಿಂಗಳಲ್ಲಿ ಧಾರಾಳವಾದ ವಿರಾಮ ದೊರಕುತ್ತಿತ್ತು. ಈಗ ವರ್ಷದ ೧೨ ತಿಂಗಳೂ ವಿರಾಮವೆಲ್ಲಿ?

ಕ್ರಿಮಿನಾಲ್ ಬಾಬಿನ ಅಲ್ಪ ಮೊಕದ್ದಮೆಗಳ ವಿಚಾರಣೆ— ಸಿವಿಲ್ ಸಣ್ಣ ವ್ಯಾಜ್ಯಗಳ ತನಿಖೆ (ಇದಕ್ಕೆ ಬೇಕಾಗುವ ಸಾದಿಲವಾರವೂ ಸಂಬಳದಿಂದಲೇ ಭರಣವಾಗಬೇಕು) ಅದರ ಮೇಲಣ ಅಮಲ್ದಾರಿ, ಚರಸೊತ್ತು ಜಪ್ತಿ, ವಕ್ಕಲೇತರದ ಜೊತೆಗೆ ಅವರು ಗ್ರಾಮದಲ್ಲಿರುವಷ್ಟುಕಾಲ ಇದ್ದು ಸಂಚರಿಸಿ ದಾಖಲಾತಿ ತನಿಖೆ, ಜನನ ಮರಣ ಜಾನುವಾರು ಮರಣಗಳ ವಿಚಾರಣೆ, ಕೆ. ಡಿ. ಮ ಗುಮಾನಿ ಜನರ ಸಂಚರಣೆಯ ಕುರಿತು ರಿಪೋರ್ಟು ಮಾಡುವಿಕೆ, ರೆವಿನ್ಯೂ ಕಾಡುಗಳ ಪಾಲನೆ— ಫೋರೆಸ್ಟ್ ರಿಜರ್ವ್ ಕಾಡಿಗೆ ಬೆಂಕಿ ಬೀಳದಂತೆ, ಮ ಬಿದ್ದಾಗ ಜಾಗ್ರತೆಕೊಳ್ಳುವ ಮುಖ್ಯ ಜವಾಬ್ದಾರಿ, ಅಕಸ್ಮಾತ್ ಮರಣಗಳನ್ನು ಕುರಿತು ರಿಪೋರ್ಟು, ದೊಂಬಿ, ದರೋಡೆ, ಕೊಲೆ, ಕಳವು ಮುಂತಾದ ಭಾರೀ ತಪ್ಪಿತಗಳು ನಡೆಯದಂತೆ ಜವಾಬ್ದಾರಿಯಿಂದ ಲಕ್ಷ್ಯಕೊಡೋದು, ಮ ಅಂಥವುಗಳನ್ನು ಕುರಿತು ವರ್ತಮಾನ ಕೊಡೋದು, ಜನಜಾನುವಾರುಗಳ ಸಾಂಕ್ರಾಮಿಕ ಜಾಡ್ಯಗಳನ್ನು ಕುರಿತು ವರದಿ— ಆ ಸಂಬಂಧ ಬರುವ ವೈದ್ಯ ಉದ್ಯೋಗಸ್ಥರಿಗೆ ಸಹಾಯಮಾಡೋದು, ಇನ್ನು ರೆವಿನ್ಯೂ, ಫೋರೆಸ್ಟು, ವೈದ್ಯ, ವ್ಯವಸಾಯ, ಲ್ಯಾಂಡ್ ರೆಕಾರ್ಡ್ಸ, [illegible] ಅಬ್ಕಾರಿ ಮುಂತಾದ ಇತರ ಇಲಾಖಾಧಿಕಾರಿಗಳಿಗೂ ಮುಖ್ಯ ಜವಾಬ್ದಾರನಾಗಿದ್ದು, ಅವರಿಗೆ ಸಹಾಯ ಮ ಸರಬರಾಯಿ ಮಾಡೋದು (ಈ ಬಗ್ಗೆಯೇ ಈಗಿನ ತಲಬಿನ ಬಹುಭಾಗ ವಿನಿಯೋಗ) ಮುಂತಾದ ಕಾರ್ಯಭಾರವೆಲ್ಲಾ ಪಟೇಲರ ತಲೆಯ ಮೇಲೆ ಅತ್ಯಂತ ಜವಾಬ್ದಾರಿಕೆಯಿಂದ ಇರುವಾಗ ಎಷ್ಟೋ ಸಂದರ್ಭಗಳಲ್ಲಿ "ಒಂದು ಕಾಲು ಮನೆಯಲ್ಲಿ ಇನ್ನೊಂದು ಕಾಲು [illegible]" ಆಗುವದಿದೆ. ಹೀಗಿದ್ದರೂ ಇವರಿಗಿರುವ ತಲಬು ನೋಡಿದರೆ ತಿಂಗಳಿಗೆ ಬರೇ ೫—೬—೭ ರೂಪಾಯಿ.

"ಪಟೇಲಿಕೆಯು ಒಂದು ಗೌರವದ ಹುದ್ದೆ ಎಂಬ" ಕೆಲವರ ಅಭಿಪ್ರಾಯವಿದ್ದಿದೆ. ಅದು ಕೇವಲ ನಾಮಾವಶೇಷವಾಗಿರುವ ಬಾದರಾಯಣರ ಕಾಲದ ವಿಚಾರ. ಅಲ್ಲವಾದರೆ ಅಂಥಾ ಗೌರವಕ್ಕೋ ಕೆಲಸಮಾಡುವದಾಗಿದ್ದರೆ, [illegible] ಮೂರುಕಾಸಿನ "ಗ್ರಾಮಸಿಬಂದಿ ತಲಬು" ಆದರೂ ಏಕೆ ಬೇಕು? ಧರ್ಮವಾಗಿಯೇ ಕೆಲಸಮಾಡಬಹುದಲ್ಲ! ಕೆಲಸದಲ್ಲಿ ಸ್ವಲ್ಪ ತಪ್ಪುಗಳು ಬಂದರೂ "ಕಚೇರಿ ಬಾಗಿಲಿಗೆ ಗುರಿಯಾಗುವ" ಗೌರವ ಇಲ್ಲ, ಎಂಬ ಶಾಸನಗಳು ತೊಂದರೆಯಾಗಲೇ ಈ ಹುದ್ದೆಯ ಗೌರವಾಂಶವೆಲ್ಲ ವ್ಯಕ್ತವಾಗುವದಿಲ್ಲವೇ? "ಕೆಲಸಮಾಡುವಾಗ ಗುಲಾಮಗಿರಿ—ಹೆಸರಿಗೆ ಮಾತ್ರ ಗೌರವಗಿರಿ"ಯೇ? ಇದಾದರೋ ತಲಬು ಸಾಲದೆಂದಾಗ ಮಾತ್ರ ಉಪಯೋಗಿಸುವ ಮೋಸಬಾಣಿಕೆಯ ಮಾತಲ್ಲವೇ? ಆದ್ದರಿಂದ ಪಟೇಲರೂ ಸರಕಾರದ ಸರ್ವೆಂಟರಲ್ಲೊಬ್ಬರೆಂತ ಎಣಿಸಿ ನ್ಯಾಯಾನುಸಾರವಾಗಿ ಅವರಿಗೂ ತಲಬು ಜಾಸ್ತಿಮಾಡಲೇ ಬೇಕು.

ಪಟೇಲರ ತಲಬನ್ನು ಆಯಾ ಗ್ರಾಮಗಳಲ್ಲಿರುವ ಕೆಲಸಗಳ ತಾರತಮ್ಯಾನುಸಾರವಾಗಿ ರೂ. ೧೫ರಿಂದ ೩೦ರ ವರೆಗೆ ಏರಗೊಡಿಸಬೇಕು. ಬರೇ ತೀರ್ವೆಯ ಮಾನದಿಂದ ಗ್ರಾಮಸಿಬಂದಿಯ ತಲಬು ಎಣಿಸುವುದು ಸಮಯುಕ್ತವಲ್ಲ. ಯಾಕೆಂದರೆ ಪೂರ್ವಪ್ರಾಂತ್ಯ ಗ್ರಾಮಗಳಲ್ಲಿ ರೂ. ೫೦೦ ತೀರ್ವೆ ಇರುವ ೧ ಗ್ರಾಮಕ್ಕೆ ೧೦-೧೫ ಪಟ್ಟೆಗಳೂ ೧೦-೧೫ ಕುಳಗಳೂ ಇದ್ದರೆ, ಅಷ್ಟೇ ತೀರ್ವೆಯ ಕರಾವಳಿ ಗ್ರಾಮಗಳಲ್ಲಿ ೩೦೦-೪೦೦ ಪಟ್ಟೆಗಳೂ ೧೦೦-೨೦೦ ಕುಳಗಳೂ ಇರುತ್ತವೆ. ಹೀಗಿರುವಲ್ಲಿ ನಗದು ತೀರ್ವೆ ವಸೂಲಿಯ ಪ್ರಯತ್ನ ಇವುಗಳು ಅಲ್ಲಿ [illegible] ಹೆಚ್ಚು ಇರುತ್ತವೆ, ಸಿವಿಲ್, ಕ್ರಿಮಿನಲ್, ಅಬ್ಕಾರಿ ವಗೈರೆ ಬಾಬಿನ ಕೆಲಸಗಳೂ ಜನಸಂಖ್ಯೆ ಹೆಚ್ಚಿರುವ ಕರಾವಳಿ ಗ್ರಾಮಗಳಲ್ಲಿರುವಷ್ಟು ಮೂಡುಪ್ರಾಂತ್ಯ ಗ್ರಾಮಗಳಲ್ಲಿರುವುದಿಲ್ಲ. ಆಯಾ ಗ್ರಾಮದ ತೀರ್ವೆ, ಪಟ್ಟಾಸಂಖ್ಯೆ, ಕುಳವಾರು ಸಂಖ್ಯೆ, ಸಿವಿಲ್ ಕ್ರಿಮಿನಲ್ ಮುಂತಾದ ಇತರ ಕಾರ್ಯಗೌರವವನ್ನೆಲ್ಲಾ ಯೋಚಿಸಿಯೇ ತಲಬು ನಿಶ್ಚಯಿಸಲ್ಪಡಬೇಕು.

ಉತ್ತರ ಕನ್ನಡಾ ಜಿಲ್ಲೆಯಲ್ಲಿ ಪಟೇಲರಿಗೆ ತಲಬು ಸ್ವಲ್ಪ ಕಡಮೆ ಉಂಟಂತ. ಇರಬಹುದು. ಯಾಕೆಂದರೆ ಅಲ್ಲಿ ಪಟೇಲರಿಗೆ ಕೆಲಸವೂ ತೀರಾ ಕಡಿಮೆಯೇ ಇದೆ. ಸಿವಿಲ್ ಬಾಬಿನ ಅಧಿಕಾರವಿಲ್ಲ, ತೀರ್ವೆ ವಸೂಲಿಯಲ್ಲಿ ಮುಖ್ಯ ಜವಾಬ್ದಾರಿ ಇಲ್ಲ. ಇತರ ಎಲ್ಲಾ ಬಾಬಿನಲ್ಲಿ ಇಲ್ಲಿರುವಂತೆ ಅಮಿತ ಜವಾಬ್ದಾರಿಯು ಅಲ್ಲಿಲ್ಲವೇ ಇಲ್ಲ. ತೀರ್ವೆ ಜಮಾಬಂದಿ ಸಹಾ ಶ್ಯಾನುಭೋಗರೇ ದ್ವಿಪ್ರತಿಯಾಗಿ ತಯಾರಿಸುವ ಪದ್ಧತಿ ಅಲ್ಲಿದೆ. ಮುಖ್ಯವಾಗಿ ಉತ್ತರ ಕನ್ನಡದಲ್ಲಿ ಜವಾಬ್ದಾರಿ ಕೆಲಸವೆಲ್ಲಾ ಶ್ಯಾನುಭೋಗರ ಮೇಲೆಯೇ ಇರುವುದರಿಂದ ಪಟೇಲರ ತಲಬು ಕಡಿಮೆ ಇದ್ದುದು ಆಶ್ಚರ್ಯವಲ್ಲ. ಇಲ್ಲಿಯೂ ಅದರಂತೆ ವರ್ತಿಸುವುದು ನ್ಯಾಯವಾಗಲಾರದು, ಇನ್ನು ಮನೆತನದ ಹಕ್ಕು. ಇದು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಒಂದು ಪಕ್ಷ ಅದಿಲ್ಲದಿರುವುದೇ ದೇಶಕ್ಕೆ ಕ್ಷೇಮಕರವೆನ್ನಬಹುದು. ಯಾಕೆಂದರೆ, ಮನೆತನದ ಹಕ್ಕೆಂಬುದರಿಂದ ಅಲ್ಪಸ್ವಲ್ಪ ಬರಹ ತಿಳಿದ ಮೂರ್ಖನಾದರೂ ಕೆಲಸಕ್ಕೆ ಬರುತ್ತಾನೆ. ಇಂಥಾ ನ್ಯಾಯನೀತಿಯ ಜವಾಬ್ದಾರಿಕೆ ಇರುವ ಸ್ಥಾನಕ್ಕೆ ಅಂಥವರು ಬರುವುದು ಲೋಕಹಿತಕರವಲ್ಲ, ಮೇಲಾಗಿ ಅನರ್ಥಕರವೇ. ಆ ಹಕ್ಕನ್ನು ತೆಗೆದು ಇಂಥಾ ಪ್ರಾಥಮಿಕ ಶಿಕ್ಷಣವಾದರೂ ಕಲಿತವರಿಗೇ ಕೆಲಸ ಸಿಕ್ಕಬೇಕೆಂಬ ನಿರ್ಬಂಧವಿದ್ದರೆ, ಗ್ರಾಮದಲ್ಲಿ ಉಮೇದ್ವಾರಿಕೆಗಾಗಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಬೆಳೆದು, ತುಂಬಾ ಉಪಕಾರವಾಗಬಹುದು.

ಇನ್ನು ಶ್ಯಾನುಭೋಗರಿಗೆ ಸಮಾನವಾದ ವೇತನಕ್ಕೆ ಪಟೇಲರು ಅರ್ಹರೇ ಎಂಬ ವಿಷಯವು ಚರ್ಚಿಸತಕ್ಕದ್ದೇ ಇದೆ. ಈ ಬಾಬಿಗೆ ಸಾಮಾನ್ಯವಾಗಿ ಈಗ ಸರಕಾರವು ಅನುಸರಿಸುವ ರೀತಿಯನ್ನೇ ಪರಿಶೀಲಿಸುವಾ! ಕಾರ್ಯಕ್ರಮಗಳ

ವ ರೀತಿಯ ವ್ಯತ್ಯಾಸ ಕೆಲಸಗಳಿಗಿಂತಲೂ ದೊಡ್ಡ ಶಾಂತಕಾರಕ್ಷಕ, ಹಾಗೆ ಜವಾಬ್ದಾರಿ, ಈ ಬಗೆಯ ಕೆಲಸಗಳಿಗೇ ವಿಶೇಷ ತಲಬು ಕೊಡುವುದು ನ್ಯಾಯ ವಾಗಿದೆ. ಮುಖ್ಯವಾಗಿ ವೇತನಗಳು, ಬರೇ ಕಾರ್ಯಮಾಡಿದಿಂದ ವೃದ್ಧಿ ಗೊಳ್ಳದೆ ಜವಾಬ್ದಾರಿಯ ದೊಡ್ಡದರಿಂದ ವೃದ್ಧಿಯಾಗುತ್ತವೆ. ಅಂದಮೇಲೆ, ತ್ಯಾನು ಭಾಗದ ಕೆಲಸ ಸ್ವಲ್ಪ ಹೆಚ್ಚಿರಬಹುದಾದರೂ, ಜವಾಬ್ದಾರಿಯು ಮತ್ತುಗೆ ಬರೇ ಇರಬಹುದು ... ಕೆಲಸ ಸ್ವಲ್ಪ (...) ಕಡಿಮೆಯಾದರೂ ವಿವಿಧ ಬಾಬಿನ ಕಂದಾಯದ ಜವಾಬ್ದಾರಿಯೂ, ಗ್ರಾಮದ ಶಾಂತಕಾರಕ್ಷಣೆಯ ಜವಾಬ್ದಾರಿಯೂ ವಿಶೇಷವಿರುವುದರಿಂದ ನ್ಯಾಯಾನು ಸಾರವಾಗಿ ಪಟೇಲರೇ ಹೆಚ್ಚಿನ ವೇತನಾರ್ಹರು. ತ್ಯಾನುಭಾಗದಲ್ಲೇ ತಲಬು ಹೊಂದಲಿಕ್ಕೆ ಹೇಗೂ ಅರ್ಹರೇ! ಇದು ಹೀಗಾದರೆ, ಹೀಗಿರುವಲ್ಲಿ, ತ್ಯಾನುಭಾಗ ರಿಗಿಂತ ಪಟೇಲರ ತಲಬನ್ನು ಕಡಿಮೆ ಇಡುವುದು ನ್ಯಾಯವೆ ... ಎಂದು ಯುಕ್ತವಾಗಲಾರದಾದ್ದರಿಂದ—

ನಮ್ಮ ... ಸರಕಾರದ ... ಅರ್ಥ ಕರೆಸ್ಪರರು, ಕಮ್ಯೂಶನಿನ ಮುಂದೆ ಸಾಕ್ಷಿಕೊಡತಕ್ಕಿರುವ ಇತರ ಅಧಿಕಾರರೂ, ಜೋರಾಗ್ರಣಿ ಗಳೂ ಈ ಬಾಬಿನಲ್ಲಿ ಪಾಕ್ಷಿಕವಿಟ್ಟು ವಿಚಾರಮಾಡಿ, ಗ್ರಾಮಪಟೇಲರಿಗೆ ನ್ಯಾಯವೂ ಯುಕ್ತವೂ ಆದ ರೀತಿಯಿಂದ ತಲಬು ಜಾಸ್ತಿ ದೊರೆಯುವಂತೆ ಅನುಗ್ರಹವಿಟ್ಟು ಸಹಾಯಮಾಡಬೇಕೆಂದು ನಮ್ಮ ಪ್ರಾರ್ಥನೆ ಇದೆ. ಇತಿ

ಕುಂದಾಪುರ ತಾಲೂಕಿನವನೊಬ್ಬ ಸುವಿಚಾರಿ.

ಅಯ್ಯಾ

ತಮ್ಮ ಅಮೂಲ್ಯ ಪತ್ರಿಕೆಯು ಇದೇ ಕಳೆದ ತಾರೀಕು ೩ನೇ ಇನವರಿ ಸಂಚಿಕೆಯ ಬಾತಮಿ ಕಾಲಮಿನಲ್ಲಿ ಪಾಣೆಮಂಗಳೂರಿನ ಮಿಶನ್ ಶಾಲಾ ಹೆಡ್ಮಾಸ್ತರರು ಹುಡುಗಿಯರ ಶಾಲೆಯ ಹೆಡ್ಮಿಸ್ಟ್ರೆಸ್ಸೊಂದಿಗೆ ಫಲಾನಾ ಖುಸ್ಕಿನ ವಿಷಯವಾಗಿ ಜಟಾಪಟಿ ಮಾಡಿರುವುದಾಗಿ ಪ್ರಕಟವಾಗಿರುವದೆ. ಇದನ್ನು ನೋಡುವಾಗ ನಿಮ್ಮ ಬಾತಮಿದಾರರು ಹುಡುಗಿಯರ ಶಾಲೆಯ ಹೆಡ್ಮಿಸ್ಟ್ರೆಸ್ಸಿನ ಸಮೀಪಸ್ಥ ಯಾ ದೂರದ ಸಮ್ಬಂಧಿಯಾಗಲಿ, ಆಕೆಯ ಹಿತಚಿಂತಕ ಅಜ್ಞಾಧಾರಕನಾಗಲಿ, ಅಥವಾ ನನ್ನ ಮೇಲೆ ದ್ವೇಷಾಸೂಯೆಗಳನ್ನುಳ್ಳವನಾಗಲಿ ಆಗಿರಬೇಕು. ಒಟ್ಟಾರೆ ತಾನು ಬರೆಯು ವದೇನೆಂಬದರ ಜವಾಬ್ದಾರಿಯನ್ನರಿಯದವನೆಂಬದು ಸ್ವಯಂವ್ಯಕ್ತವು. ಯಾಕೆಂದರೆ ಈ ಬಾಬಿನಲ್ಲಿ ನಿಜವಾಗಿ ನಡೆದ ಸಂಗತಿಗಳು ಪ್ರತ್ಯೇಕವಿರುತ್ತಾ, ತಮ್ಮಂಥ ಪ್ರಸಿದ್ಧ ಸಾರ್ವಜನಿಕ ಪ್ರಯೋಜನದ ಪತ್ರಿಕೆಗೆ ಪಕ್ಷಪಾತದ ಅಸಂಬದ್ಧ ಬಾತಮಿಯನ್ನು ಕೊಡುವ ಅಗತ್ಯವು ಸತ್ಯಪ್ರಿಯರಾದ ಇತರರ್ಯಾರಿಗಾದರೂ ಇರಲಾರದು. ಅದ್ದರಿಂದ ತಮ್ಮ ವಾಚಕವೃಂದದ ಮನಸ್ಸಿನಲ್ಲಿ ಇಂಥ ಬರವಣಿಗೆಯಿಂದುಂಟಾಗ ಬಹುದಾದ ತಪ್ಪು ಭಾವನೆಯನ್ನು ತಿದ್ದಿ, ಕನಿಷ್ಠಪಕ್ಷ ನನ್ನ ನಿರಪರಾಧಿತ್ವವನ್ನು ನೆಲೆಗೊಳಿಸುವ ಸಲುವಾಗಿ ಇದನ್ನು ತಮ್ಮ ಪತ್ರವ್ಯವಹಾರಗಳಲ್ಲಿ, ಸಾಧ್ಯವಿರುವಷ್ಟು ಬೇಗನೇ ದಯಮಾಡಿ ಪ್ರಕಟಿಸುವಿರಾಗಿ ನಂಬಿಕೊಂಡಿರುವ,

ತಮ್ಮ ಅತ್ಯಂತ ವಿಧೇಯ.

ಮೊಕ್ಕಾಂ: ಪಾಣೆಮಂಗಳೂರು.
ತಾ. ೩ನೇ ಫೆಬ್ರವರಿ ೧೯೨೦

CH. BHAKTA,
ಹೆಡ್ಮಾಸ್ಟರ್ ಮಿಶನ್ ಶಾಲೆ, ಪಾಣೆ ಮಂಗಳೂರು.

ಮಾನ್ಯಪತ್ರಿಕಾಕರ್ತರೇ!

ಸ್ವದೇಶ ಭಾಷಾಭಿಮಾನಿಗಳಾದ ಸ್ಥಳೀಕ ಬಂಧುಗಳೊಡನೆ, ನಮ್ಮ ಚಿಕ್ಕದೊಂದು ವಿನಂತಿಗೆ, ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಸ್ವಲ್ಪ ಎಡೆಕೊಡುವಿರೆಂಬ ನಂಬಿಕೆ.

ಮಹನೀಯರೇ! ಎಲ್ಲೆಲ್ಲ ಕನ್ನಡಿಗರ ಸಂಖ್ಯೆಯು ಸ್ವಲ್ಪಕಿಲ್ಪ ಮಟ್ಟಿಗೆ ಇರುತ್ತದೆಯೋ ಅಲ್ಲಲ್ಲಿ ಒಂದೊಂದು ವಾಚನಾಭ್ಯಂತರವು ಅದ್ವೇ ಇರುತ್ತದೆ. ಮತ್ತು ಅದರ ಅವಶ್ಯಕತೆಯೂ ಇದೆ. ಆದರೆ ನಮ್ಮ ಮಂಗಳೂರಲ್ಲಿ ಕನ್ನಡಿಗರು ಹೆಚ್ಚು ಮಂದಿ ಇದ್ದರೂ ಒಂದು ತಕ್ಕ ವಾಚನಾಲಯವು—ಎಲ್ಲ ಸರ್ವಸಾಧಾರಣವಾದ ಕನ್ನಡ ಪತ್ರಿಕೆಗಳೂ, ಸಾಹಿತ್ಯ ಮೊದಲಾದ ವಿಷಯಕವಾದ ಗ್ರಂಥಗಳೂ, ಓದ ದೊರೆಯುತ್ತವೆಯೋ ಅಂಥಾ ವಾಚನಾಲಯವು ಇಲ್ಲದಿರುವುದು ಒಂದು ಕೊರತೆಯೇ ಸರಿ. ಆದರೆ ಇಂಥಾ ಕೊರತೆಯನ್ನು ಹೋಗಲಾಡಿಸಲು, ಒಬ್ಬಿಬ್ಬರಿಂದ ಸಾಧ್ಯವಾಗದು. ಅದಕ್ಕೆ ಮಹನೀಯರ ಪ್ರೋತ್ಸಾಹವೂ ಉತ್ಸಾಹಿಗಳಾದ ತರುಣರ ಕೈಲಾದ ಪ್ರಯತ್ನವೂ ಬೇಕಾಗಿದೆ. ಆದುದರಿಂದ ಈ ವಿಷಯವನ್ನು ಮಹನೀಯರು ವಿಚಾರಿಸಿ ಅಂಥ ಕೊರತೆಯನ್ನು ಹೋಗಲಾಡಿಸಬೇಕಾಗಿ ವಿನಂತಿ.

T. N. BHAT

ಫೀಸು ಇಲ್ಲ! ರೋಗಪರೀಕ್ಷೆಗೆ ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡುಬರುತ್ತದೆ. ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೇ ಅತ್ಯುತ್ತಮವಾದವುಗಳು."

ಡಾ. ಎಸ್. ಜೇ. ಸರದೇಸಾಯಿ,
ಎಮ್. ಡಿ. (ಲಂಡನ್).

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮ್ಮಾಯಿ ದೇವಾಲಯದ ಹೊರಗೆ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಚೂರ್ಣ್ಗಳನ್ನೂ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

ಇವರು ಹೊಸಬರಲ್ಲ! ಏಕೆಂದರೆ ಭಯಂಕರವಾದ ನ್ಯುಮೋನಿಯಾ, ಪ್ಲೇಗು, ಟೈಫಾಯಿಡ್, ಕಾಲರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಷ್ಟಸಾಧ್ಯವೂ ಗೂಢವೂ ಆದ ರೋಗಗಳನ್ನು ನಿತ್ಯ ಚಿಕಿತ್ಸೆಗಳ ಮೂಲಕ ಸ್ವಲ್ಪ ಕಾಲದಲ್ಲಿಯೇ ಗುಣಪಡಿಸಿ ಸುಪ್ರಸಿದ್ಧರಾಗಿರುವರು. ಒಂದು ಬಾರಿ ಪರೀಕ್ಷಿಸಿ ನೋಡಿ!

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. No. 210/1920.

ಪರಮೇಶ್ವರಾ—ವಾದಿ.

ಮತ್ತು

ಬಿ. ಚೆನ್ನಯ್ಯ ಕೂಡಾ—ಪ್ರತಿವಾದಿರು.

ಮೇಲೆ ಹೆಸರು ಕಾಣಿಸಿದ 1ನೇ ಪ್ರತಿವಾದಿ ಬಿ. ಚೆನ್ನಯ್ಯ ತಾ. 1-2-1917ಲ್ಲು ವಾದಿ ಕೂಡಾ 4 ಜನ ಮೊಕ್ತೇಸರರು ವ ಇದೇ ಕ್ಷೇತ್ರದಲ್ಲಿರುವ ಬೊಮ್ಮನ ವಾಲೆಕಾರ ಜಾತಿಯ ಹತ್ತು ಸಮಸ್ತರ ಹೆಸರಿಗೆ ರೂಪಾಯಿ 26—1—0ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ವಸೂಲು ಕೊಡದ್ದರಿಂದ ಸದರಿ ಐವೇಜು ವಸೂಲಾತಿ ಕುರಿತು ತನ್ನ ಜಾತಿಯ ಮೊಕ್ತೇಸರರು ವ ಹತ್ತು ಸಮಸ್ತರ ಕಡೆಯಿಂದ ವ ಅವರ್ಗೋಸ್ಕರ ಕೂಡಾ ತಾನೊಬ್ಬನೇ ಪ್ರತಿವಾದಿರ ಮೇಲೆ ದಾವೆ ಮುಂದರಿಸುವ ಹಾಗೆ ಪರ್ಮಿಶನ್ ಕೊಡಬೇಕಾಗಿ ಶೀ. ಪ್ರೊ. ಕೋಡಿನ 1ನೇ ಆರ್ಡರ 8ನೇ ರೂಲು ಮೇರೆಗೆ ಈ ಕೋರ್ಟಿಗೆ I. A. 48/1920ನೇ ಅರ್ಜಿ ಕೊಟ್ಟಿರುವದರಿಂದಲೂ ಸದರಿ ಅರ್ಜಿಯು ತನಿಖೆ ಬಗ್ಗೆ ಇದೇ ತಿಂಗಳ ತಾರೀಕು 17ಕ್ಕೆ ತನಿಖೆಗೆ ಇಟ್ಟಿರುವದರಿಂದ ಆ ಕುರಿತು ಸದರಿ ಬೊಮ್ಮನ ವಾಲೆಕಾರ ಜಾತಿಯ ಹತ್ತು ಸಮಸ್ತರಿಗೆ ಯಾ ಅವರ ಪೈಕಿ ಯಾರೊಬ್ಬರಿಗೂ ಆಕ್ಷೇಪಣೆ ಹೇಳುವದು ಇದ್ದರೆ ಸದರಿ ಅರ್ಜಿಯು ತಾ. 17ಕ್ಕೆ ಇಟ್ಟಿರುವದರಿಂದ ಆ ದಿವಸ ಹಗಲು ಘಂಟೆ 11ಕ್ಕೆ ಅವರು ಖುದ್ದು ಆಗಲೀ ಯಾ ಕ್ರಮದಂತೆ ಅಧಿಕಾರ ಹೊಂದಿದ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಿದ್ದು ಸದರಿ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂತಲೂ ಇದಕ್ಕೆ ತಪ್ಪಿದರೆ ವಾದಿಯ ಅಪೇಕ್ಷೆ ಮೇರೆಗೆ ಸದರಿ ದಾವೆ ಮುಂದರಿಸುವರೆ ವಾದಿಗೆ ಪರ್ಮಿಶನ್ ಕೊಡೋಣಾಗುವದೆಂತ ಈ ಮೂಲಕ ಸದರಿ ಬೊಮ್ಮನ ವಾಲೆಕಾರ ಜಾತಿಯ ಮೊಕ್ತೇಸರರು ಹತ್ತು ಸಮಸ್ತರು ವಗೈರೆ ಸರ್ವ ಜನರಿಗೆ ಕೋರ್ಟಿನ ಹುಕುಂ ಮೇರೆಗೆ ಈ ಮೂಲಕ ತಿಳಿಸಿರುತ್ತದೆ.

ಮಂಗಳೂರು,
9—2—1920.

M. SUBRAYA PAI.
Vakil for Plaintiff.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗವದು, ತಲೆವುರಿ, ಕಣ್ಣುವುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕಡಿಮೆಹೋಗುವದು ಇವುಗಳನ್ನೆಲ್ಲ ಬಿಂದಿತ ಗುಣವಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ಆಣೆ ೧೨; ಸಿಕ್ಕ್ರ ರೂ. ೬, ದೊಡ್ಡ ಸೀಸೆಗೆ ರೂ. ೧—೮—೦.

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿ ೧ರ ಕ್ರಯ ೧—೮—೦, ಬಾಟ್ಲಿ ೬ರ ಕ್ರಯ ೮—೦—೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳೀಪ್ರದರ (ಬಿಳೀ ಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨—೦—೦.

ಟಿನ್ ಚಿನ್ ಬಾಮ್. ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ, ತಕ್ಷಣ ಗುಣ. ಬೆಲೆ ಸುಲಭ, ಭರಣಿ ೧ಕ್ಕೆ ಆ. ೬, ಗಜಕರ್ಣಾದಿ ಮುಲಾಮು ಡಬ್ಬಿಗೆ ಆ. ೪.

ದಂತಶೋಧಿನಿಚೂರ್ಣ. ಇದು ಹಲ್ಲುಗಳನ್ನು ಚೊಕ್ಕಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುರು, ಬಾಯಿಹುಣ್ಣು, ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ೧ಕ್ಕೆ ಆಣೆ ೫.

ಲಂಗ್ಸ್‌ಟೋನು. ಕೆಮ್ಮು, ನೆಗಡಿ, ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಮಾಡಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿ ೧ಕ್ಕೆ ರೂ. ೨—೮—೦, ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರೆಯಿರಿ

ವಿಳಾಸ:— ಮನೋಲ್ಲಾಸಿನಿ ಕಂಪನಿ,
4. ಕಂಕನಾಡಿ ಪೋಸ್ಟು.

Manollasini Co.,
4. *Kankanady.*

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನಂ ಮಾಘ ಬ॥ ೧೦ ಶನಿವಾರದಿಂದ ಫಾಲ್ಗುಣ ಶು॥ ೧ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಫೆಬ್ರವರಿ ಮಾಹೆ)

ತಾರೀಖು	ವಾರ	ತಿಥಿ	ಘಟಿ	ನಕ್ಷತ್ರ	ಘಟಿ	ಚಂದ್ರ	ಸೂರ್ಯ ಉ.	ಸೂರ್ಯ ಅಸ್ತ.
						೨		
14	ಶನಿ	೧೦	[illegible]	[illegible]	[illegible]	೨	6·56	6·35
15	ರವಿ	೧೧	೪೩·೫೮	ಮೂಲಾ	೩೪·೫೦	೩	6·55	6·35
16	ಸೋಮ	೧೨	೪೮·೩೨	ಪೂ. ಷಾ.	೪೦·೧೬	೪	6·55	6·35
17	ಕುಜ	೧೩	೫೧·೫೦	ಉ. ಷಾ.	೪೪·೫೬	೫	6·55	6·36
18	ಬುಧ	೧೪	೫೩·೪೫	ಶ್ರವಣ	೪೮·೪೦	೬	6·54	6·36
19	ಗುರು	●	೫೪·೩೨	ಧನಿಷ್ಠಾ	೫೧·೧೦	೭	6·54	6·36
20	ಶುಕ್ರ	೧	೫೪·೫	ಶತಭಿಷಾ	೫೨·೧೪	೮	6·54	6·36

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಫೆಬ್ರವರಿ)

Date ತಾರೀಖು	Temperature ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall ಮಳೆ ದಿನದ ಮಳೆ	ಜನವರಿ ೧ರಿಂದ
6	88—3	71—2	—	...
7	87—9	71—4	—	...
8	87—8	71—6	—	...
9	89—6	72—2	—	...
10	88—9	72—4	—	...
11	88—3	72—8	—	—
12	90—2	74—1	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿ ಮುಡಿ ೧ಕ್ಕೆ	...	10—2	10—10
ಗುದ್ದು ,, ,,	...	9—6	9—12
ರಾಸಿ ಮುಡಿ ೧ಕ್ಕೆ	...	8—14	9—6
ಅನ್ವರ್ ಬೆಳ್ತಿಗೆ ,,	...	11—8	12—4
ಗುದ್ದು ಬೆಳ್ತಿಗೆ ,,	...	10—4	10—8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	16—0	16—0
ಗೋಧಿ ಗೋಣಿ ೧ಕ್ಕೆ	...	25—8	26—0
ಹುರುಳಿ ಗೋಣಿ ೧ಕ್ಕೆ	...	15—4	16—2
ಕಡಲೆ ಗೋಣಿ ೧ಕ್ಕೆ	...	22—8	23—0
ಕೊಣಬಿ ಗೋಣಿ ೧ಕ್ಕೆ	...	20—0	21—0
ತೊಗರಿಬೇಳೆ ಗೋಣಿ ೧ಕ್ಕೆ	...	26—0	31—0
ಉದ್ದು ಗೋಣಿ ೧ಕ್ಕೆ	...	22—8	23—0
ಹೆಸರು ಗೋಣಿ ೧ಕ್ಕೆ	...	22—8	23—0
ಊರು ಬೆಲ್ಲ ಖಂಡಿ ೧ಕ್ಕೆ	...	80—0	82—8
ಉಪ್ಪು ಗೋಣಿ ೧ಕ್ಕೆ	...	4—0	4—6
ಕೊಬ್ರಿ ಖಂಡಿ ೧ಕ್ಕೆ	...	140—0	150—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	36—8	37—0
ಎಳ್ಳಿಂಡಿ ಖಂಡಿ ೧ಕ್ಕೆ	...	60—0	61—4
ಕೊಬ್ರಿ ಎಣ್ಣೆ ಮಣ ೧ಕ್ಕೆ	...	11—2	11—8
ಎಳ್ಳೆಣ್ಣೆ ಮಣ ೧ಕ್ಕೆ	...	11—8	11—12
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—3	9—15
ಮೋರಿಸ ಸಕ್ಕರೆ ಮಣ ೧ಕ್ಕೆ	...	9—10	9—12
ಮೆಣಸಿನ ಕಾಯಿ ಮಣ ೧ಕ್ಕೆ	...	10—4	11—0
ಸಾಸಿವೆ ಮುಡಿ ೧ಕ್ಕೆ	...	14—8	15—0
ಕೊತ್ತುಂಬರಿ ಮುಡಿ ೧ಕ್ಕೆ	...	5—10	5—12
ಕಾಫಿ ಖಂಡಿ ೧ಕ್ಕೆ	...	295—0	315—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	...	110—0	120—0
ಹಳೆ ಬೆಳಗೋಟು	...	135—0	145—0
ಹಳೆ ಕಾಳುಮೆಣಸು ಖಂಡಿ ೧ಕ್ಕೆ	...	205—0	210—0
[illegible] ಮಣ ೧ಕ್ಕೆ	...	25—0	32—0
ಗೇರುಬೀಜ ಮುಡಿ ೧ಕ್ಕೆ	...	5—8	
ಕಬ್ಬಿಣ ಖಂಡಿ ೧ಕ್ಕೆ	...	100—0	120—0
ಕಾಂಚು ತಗಡು ಮಣ ೧ಕ್ಕೆ	...	28—4	29—0
ಕಾಂಚು ಪಾತ್ರೆಗಳು ಮಣ ೧ಕ್ಕೆ	...	40—0	42—0
ಚೀನ ಬೆಳ್ಳಿ ಸೀಸ ೧ಕ್ಕೆ	...	31—8	
ಹಿತ್ತಾಳೆ ತಗಡು ಮಣ ೧ಕ್ಕೆ	...	28—0	

ವೈದ್ಯಾಮೃತ ಮಂದಿರ

[illegible] ಆಯುರ್ವೇದ [illegible], ಎಲ್ಲಾ [illegible], [illegible], ದ್ರವ [illegible], [illegible], [illegible], [illegible] ಇತ್ಯಾದಿ [illegible] ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, [illegible] ಕರ್ಪೂರ, [illegible] ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರೆಯುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು [illegible]ವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನ [illegible] ಸಮೇತ ವಿ. ಪೆ. ಮೂಲಕ ಕಳುಹಿಸುವೆವು.

[illegible] ಕೆ. ಕೆ. [illegible] ಎಂಡ್ ಬ್್ರದರ್ಸ್,
ವೈದ್ಯಾಮೃತ ಮಂದಿರಂ,
[illegible], ದ. ಕನ್ನಡ.

ಅಲೋ! ಮೈಸೂರು

ಸುವಾಸನೆ! ಊದು ಬತ್ತಿಗಳು. ಮನೋರಂಜಕ!!

[illegible] ಬತ್ತಿ, ಸೇರಿಗೆ ರೂ. [illegible]		ಮಸುಗು ಬತ್ತಿ	ಸೇರು ರೂ.	[illegible]
[illegible] ,,	,, [illegible]	ಅರಗಜ ಹೂರೆ ಗಳ್ಳೆ	,,	[illegible]
[illegible] ಬತ್ತಿ ,,	,, [illegible]	ಗಂಧದ ಬಳ್ಳಿ	,, ,,	[illegible]
[illegible] ಬತ್ತಿ ,,	,, [illegible]			

ಅತ್ತರುಗಳು:— ಗುಲಾಬ್, [illegible], [illegible], [illegible] ,, [illegible]

ಸೆಂಟುಗಳು:— [illegible], ಗುಲಾಬಿ, ಮುಸ್ಕು, [illegible] (ವಿಲಾಯತಿ, ಅಮೇರಿಕ) [illegible] ತಯಾರಿಸಿದ್ದು ½ ಔನ್ಸ್ ಬಾಟ್ಲಿ ರೂ. [illegible]

ದಶಾಂಗ ಅಥವಾ ಸುಗಂಧ ದೂಪ, ಸುಗಂಧ ಅರಿಶಿ ಪುಡಿ, [illegible], [illegible] ಮುಂತಾದ [illegible].

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪಂಮುಳ ವ್ಯಾಪಾರಿಗಳು, [illegible]ರು ಸಿಟಿ.

ರೇಷ್ಮೆ ವಂಚ್ಕೆ, ಅಪೋನೋಹಿನಿ ಸೆಂಟ್.



ಈ ಚಿತ್ರದಲ್ಲಿ ಕಂಡ [illegible] ಬರೆಯುವ ಫೌಂಟನ್ ಪೇನಾ ಎರಡಕ್ಕೆ [illegible] ವಸ್ತು [illegible]. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತರಿಗ [illegible] ರೇಷ್ಮೆ ವಂಚ್ಕೆ, ಅಪೋನೋಹಿನಿ ಸೆಂಟ್ ಇನಾಮು ಸಹಿತ ರೂ. [illegible]

O. C. LINGAM & Co.,
No. 2. Ramanuja Iyer Street,
SAVCARPET, *Madras.*

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮ ಪಟ್ಟು ಕೆಲಸವಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖ್ಯಾತಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೊಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇಧಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬುಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಸ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ 2.

7. ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೋಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

[illegible] 11 [illegible] 18

ರಾಯಲ್ ಇಂಡಿಯನ್ ಬಾಂ.

ಇದೇ [illegible] ಬಾಟ್ಲಿ
ಗುರುತು [illegible] ಉದರ ಕ್ರಯ
ಲಕ್ಷದಲ್ಲಿ [illegible] ಆಣೆ [illegible]

[illegible] ಕೆಲವು [illegible] ವ್ಯಕ್ತಿಗಳಿಂದ [illegible] ಕೊಡಿರಿ, [illegible] ಬಿಡಿಸುವ ಮುಲಾಮು:— ಇದರ ಉಪಯೋಗದಿಂದ [illegible], [illegible], [illegible], ಗಂಟು ನೋವು, ಎದೆನೋವು, ಉಬ್ಬುಸ, ವಾತ, ಸಂಧಿವಾತ, ಅರ್ಧಾಂಗವಾಯು, [illegible], ಗಾಯ, ಹುಣ್ಣು, ಸೊಂಟದ ನೋವು, [illegible] ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಕೊಡುತ್ತದೆ. [illegible] ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. [illegible] 24 ಬಾಟ್ಲಿಗೆ ರೂ. [illegible] 50 ಬಾಟ್ಲಿಗೆ ರೂ. [illegible] ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ [illegible]; ದಂತಮಂಜನ [illegible] ಮುಲಾಮು ಆಣೆ [illegible] ಹೇರ್ ಆಯಿಲ್, [illegible] ಮತ್ತು ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು [illegible] ಔಷಧಗಳನ್ನೂ, ಇತರ ವಾಲ್ಲನ್ನೂ ಅದಷ್ಟು [illegible] ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ [illegible] ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬಿಲ್ಲೆ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್ ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಸೈನ್‌ಬಾಂ, ಪನ್ನೀರು, ವಿಲಾಯಿತಿ ಪನ್ನೀರು, ಕರ್ಪೂರ, ಅಗ್ನಿಂಗಡಕ್ಕೆ [illegible] ತೈಲ ಇವೇ ಮೊದಲಾದ [illegible] ವಿಧ ಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ಕಸಗನ್ನಡಿ, ಚೀನಾಪಾತ್ರೆ, ವಾರ್ನೀಸ್, ಸಿಮೆಂಟ್, ಕಾಗದ, ಪೆನ್ಸಿಲ್, ಬೆಂಕಿಕಡ್ಡಿ, ಮಂತ್ರಿ ಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ವಾರ್ನೀಸ್, ಕಾಪಿಂಗ್‌ಪ್ರೆಸ್, ಮತ್ತು ಯಂತ್ರ, ಲಿತೋಗ್ರಫಿಯಂತ್ರ, ಲಿತೋ ಪ್ರೆಸ್‌ಯಂತ್ರ, ಮತ್ತು ನಾನಾ ವಿಧ ಯಂತ್ರ, ಯಂತ್ರಪಾಡರು, ಕಾಗದಕ್ಕೆ ಮೆರುಗು, ಸ್ಟೇಟ್‌ಪೇಪರ್, ಫೋಟೋ ಮುಂತಾದ [illegible] ವಿಷಯಗಳು, ಒಬ್ಬರ ಸಹಾಯವಿಲ್ಲದೆ ತಿಳಿಯುವಹಾಗೆ ಈ ಪುಸ್ತಕದಲ್ಲಿ ಬರೆದಿದೆ. [illegible] ಅನುಭವಶಾಲಿಯಾದ ಬೋಧಕ ನಿದ್ದಂತೆಯೇ. ಬೆಲೆ ರೂ. [illegible]

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

ಉಚಿತ. [illegible] ಸೆಂಟ್ ಬಾಟ್ಲಿಗಳು. ಉಚಿತ.

ಮೇಲಾದ ಫೌಂಟನ್ ಪೆನ್.



ಈ ಚಿತ್ರದಲ್ಲಿ ಕಂಡ ಪೇನಾಗಳು ಹೀಗೆಯೇ ಫೌಂಟನ್ ಪೇನಾ ತಯಾರುಮಾಡಿದವರಲ್ಲಿ ಪ್ರಖ್ಯಾತಿಹೊಂದಿದ ಕಂಪನಿಯವರಿಂದ ತಯಾರಾಗಿ ಬಂದಿರುತ್ತೆ. ಇಂತ ಅತ್ಯುತ್ತಮ ಬಂದಿರುವ ಮುದ್ದಾದ ಕೈಸ್ಟೆಲ್ ಗೋಲ್ಡ್ ನಿಬ್, ಮತ್ತು ಹಾಕಿದ್ದು. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಪ್ರಾಡ್ಡಾಗಿ ಬರೆಯುವದು. ಈ ಪೇನಾಗಳು ಪ್ರತ್ಯೇಕ ಹೊಂದುವದಕ್ಕಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ 1 ಡಜನ್ ರೇಷ್ಮೆ ಸುಗಂಧ ದ್ರವ್ಯದ (Best Perfume) ಬಾಟ್ಲಿಗಳು ಬಾಕ್ಸು ಸಹಿತ ಬಹುಮಾನವಾಗಿ ಕೊಡಲ್ಪಡುತ್ತೆ. ಬಹುಮಾನ.

ಬಹುಮಾನ ಸಹಿತ ಕ್ರಯ ಪೇನಾ 1ಕ್ಕೆ ರೂ. [illegible]

ನಮ್ಮ ವಿಳಾಸ:— ಮಹಾರಾಷ್ಟ್ರ ಟ್ರೇಡಿಂಗ್ ಕಂಪೆನಿ,
[illegible] ತಿರುಪಳ್ಳಿ ಬೀದಿ, ಮದರಾಸ್.

ಯೂರೋಪಿಯನ್ ಡಾಕ್ಟರುಗಳಿಂದ ತಯಾರಿಸಲ್ಪಟ್ಟ

ಸಾಂಡೋ ಆಯಿಲ್ (ನರಗಳ ಶಕ್ತಿವರ್ಧಕ ತೈಲ.)

— ಅನೇಕರು ಬಾಲ್ಯದಲ್ಲಿ [illegible] ಅಭ್ಯಾಸಗಳಿಂದ ದೇಹವನ್ನು ಕೆಡಿಸಿಕೊಂಡು ಶಮುಗಳನ್ನು ವ್ಯಾಧಿಯನ್ನು ಡಾಕ್ಟರುಗಳಲ್ಲಿ ಹೇಳ ಸಂಕೋಚದಿಂದ ಔಷಧವನ್ನು ಪಡೆಯದೇ [illegible] [illegible] [illegible] ದೊರೆತ ಗುಣವಾಗಿ, ಕಳೆದುಹೋದ ಶಕ್ತಿಯನ್ನು ಕೊಡುವದು.

ದೇನ ಕೊಡುವದು. ಕ್ರಯ ಸಣ್ಣ ಬಾ. ರೂ. [illegible]

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ,
[illegible] ತಿರುಪಳ್ಳಿ ಬೀದಿ, ಮದರಾಸು.

[illegible] ಸರಕಾರದಿಂದ 1920ನೇ ವರ್ಷದ [illegible] ಮಂಜೂರಾದ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
[illegible] [illegible]	0	6	0	ಚಂದ್ರಹಾಸ	0	2	0
[illegible]	0	6	0	ಗುಣಾವತಿ [illegible]	0	6	0
[illegible]	0	12	0	[illegible] ಭಾಗ I	0	4	0
[illegible] ಭಾಗ I	0	8	0	,, ,, II	0	3	0
[illegible]	1	1	0	,, ,, III	0	4	6
[illegible]	1	0	0	ಹೊಸ ಪುಸ್ತಕಗಳು			
[illegible] ಭಾಗ I	0	8	6	[illegible]	0	6	0
[illegible]	0	6	0	ಸುಶೀಲ	0	1	6
				ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	6	0
ರಮಾನಂದ	0	10	0	[illegible] ರಕ್ಷಮಾಲೆ	2	0	0
ಸುವ್ರತ	0	13	0	[illegible]	0	12	0
ಪ್ರಬಂಧಮಂಜರಿ	0	14	0	[illegible] (ಬಾಲವ್ಯಾಕರಣ)	0	3	6
[illegible]	0	14	0	[illegible]	0	10	0
[illegible]	1	0	0	[illegible]	0	12	6
ಪ್ರಹ್ಲಾದ	0	2	0	[illegible]	0	8	0
ಧ್ರುವ	0	2	0	ವ [illegible] ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳು ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ [illegible] ಇಸವಿಯ [illegible]ನೇ ಆಕ್ಟಿನಂತೆ ರಿಜಿಸ್ಟರು ಮಾಡಲ್ಪಟ್ಟ

ಅರ್ಕೆಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕೆಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ [illegible] [illegible] ಇಸವಿಯಿಂದ [illegible] ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ [illegible] ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಪ್ರಬಲಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. [illegible] ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. [illegible] ಈ ಔಷಧವು ಎಷ್ಟು ಪ್ರಬಲವಾದ [illegible] ಯವರನ್ನು [illegible] ಪ್ರತಿಯೊಬ್ಬರು ತಮ್ಮ [illegible] ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರುತ್ತೀರಿ. [illegible] [illegible] [illegible] [illegible] ಸರ್ಟಿಫಿಕೇಟುಗಳು [illegible]. [illegible] ಕಾಗದವು ಸೇಲಮು. [illegible] ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬುತ್ತೇನೆ. [illegible] [illegible] ವೈದ್ಯರ [illegible] [illegible] ಈ ಆರೋಗ್ಯಬಿಂದುವಿನ ಮೇಲೆ [illegible] [illegible] ರೋಗ [illegible].

ರೋಗದ ನಾಮಗಳು.

ಕ್ಷಯರೋಗ, ಹೆಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾವಾಯು, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, [illegible], [illegible] ಮೊದಲಾದ ರೋಗವು, [illegible] ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಜೀರ್ಣ, [illegible], [illegible], ಹೊಟ್ಟೆನೋವು, [illegible], [illegible], [illegible], [illegible], [illegible], [illegible], [illegible], [illegible] ಸ್ತ್ರೀಯರ [illegible] [illegible] [illegible] [illegible], [illegible] ಈ ಆರೋಗ್ಯಬಿಂದುವಿನ ಕ್ರಯ [illegible].

[illegible] ಬಾಟಲಿ ಒಂದಕ್ಕೆ 2 ರೂಪಾಯಿ [illegible] ಆಣೆ. ಚಿಕ್ಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ [illegible]. [illegible] [illegible] [illegible] [illegible]. [illegible] [illegible] 3 ಬಾಟಲಿಗಳು [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible].

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕೆಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾವಿ).

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ... ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೀಸೆಗೆ ರೂ. 2—2—0 | ಕೋಲೇರಾ ಔಷಧದ ದೊಡ್ಡ ಸೀಸೆಗೆ ರೂ. 1—2—0

ಸಣ್ಣ „ „ 1—6—0 | „ ಸಣ್ಣ „ „ 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೀಸೆಗೆ ರೂ. 1—2—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,

55 ಆಚಾರಪ್ಪನ ಬೀದಿ,

ಜೋರ್ಜಟೌನ್, ಮದರಾಸ್.

ತಂತಿ ವಿಳಾಸ:— ಪಂಡಿತ್, ಮದರಾಸ್.

ಆತಂಕನಿಗ್ರಹ ಗುಳಿಗೆಗಳು.

ಈ ಗುಳಿಗೆಗಳು ಜೀರ್ಣಶಕ್ತಿಯನ್ನು ಕೊಡುತ್ತ, ರಕ್ತವನ್ನು ಶುದ್ಧಿ ಮಾಡಿ ಯೌವನವನ್ನು ಕಾಪಾಡುತ್ತ, ಸ್ಪರ್ಶೇಂದ್ರಿಯವನ್ನು ಸ್ಥಿರಪಡಿಸುತ್ತ, 32 ಗುಳಿಗೆಗಳಿಗೆ ರೂ. 1—0—0.

ಅಮೃತಪ್ರಾಶ ಅವಲೇಹ.

ಇದು ರಕ್ತವನ್ನು ಶುದ್ಧಿಮಾಡುತ್ತ, ಸ್ಪರ್ಶೇಂದ್ರಿಯ, ಧಾತುನಷ್ಟ ಮುಂತಾದವುಗಳನ್ನು ನಿಲ್ಲಿಸಿ ದೇಹಕ್ಕೆ ಕಾಂತಿಯನ್ನು, ಬಲವನ್ನು ಕೊಡುತ್ತ, ಶರೀರದಲ್ಲಿರುವ ಅಧಿಕವಾದ ಉಷ್ಣವನ್ನು ಕಡಿಮೆಮಾಡಿ ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತ, ಕ್ಷಯ ಅತಿಸಾರ ತಲೆನೋವು ಎದೆನೋವು ಮುಂತಾದುವನ್ನು ವಾಸಿಮಾಡುತ್ತ. 20 ತೊಲದ ಡಬ್ಬಿಗೆ ರೂ. 2—0—0.

"ಕಾಮಶಾಸ್ತ್ರ"

ದಲ್ಲಿ ಸಮಂಜಸವಾಗಿ ಶೇಖರಿಸಿದ್ದೇವೆ! ಆ ಪುಸ್ತಕವು ನಿಮಗುಚಿತ; ಬಹುಮಾನ;— ಪಾರಿತೋಷಕ!!!

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Local Agents: **Raphael & Co.,**

Brito Buildings,

Hampankatta, MANGALORE.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಹಿಂದೂದೇಶದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ವೈದ್ಯರು ದೊರೆಯದಿರುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 2—13—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ. ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ.

<u>ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)</u> ಒಳಕಂಡಿರುವ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು. ದಿನಜ್ವರ, ಮೂರರ ಒಂದೇ ಒಂದು ನೀಳ್ಗರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

<u>ಶ್ರೀನಿವಾಸತೈಲ</u>—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕ್ಕೆ ಒಂದು ಇನಾಮು.

<u>ವೈಶ್ವಾನರಾಸವ</u>—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

<u>ಬಾಲಸುಧೋದಯ</u>—ಮಕ್ಕಳಿಗೆ ಬಲಕರ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚತುರತೆ ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ"ದ ಸೇವನೆ ಯಿಂದ—ವೀರ್ಯವು ನೀರಿನಂತೆ ಇದ್ದರೂ, ಸ್ಪರ್ಶೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ,

ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೋಧಿಸುವುದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತದೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತ. 2-3 ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುತ್ತದೆ.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಬಾಂಗಿಯ ಚಾರ್ಜ ಹೆಚ್ಚಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಸ, ಜಗತ, ಉಳುಕು, ಗಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿಗೆ ಕ್ರಯ ೦—೬—೦; ಒಂದು ಡಜನು ಬಾಟ್ಲುಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಇಸಬು, ಹುಣ್ಣು, ದದ್ರು, ತುರಿಕಜ್ಜಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಬಂದರೆ ಸಾರಿ ಮಾಗಿಸುವವರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿಗೆ ೦—೪—೦, ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋತ್ಕರ್ಷದ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು ಬರುತ್ತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗರಿಗೂ ಯೋಗ್ಯ ಕಮಿಶನು ಕೊಡಲಾಗುವದು. ಕ್ಯಾಟಲಾಗಿಗೂ ಇತರ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮುಖೇನ.

ದಿ. ಮ್ಯಾನೇಜರ್—ಶ್ರೀ ದೇವೀಪ್ರಸಾದ ಕಂಪೆನಿ,

ಕೋಡ್ಯಾಲಬೈಲು, ದ. ಕನ್ನಡ.

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಬೇಗ ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವೇ ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಸೀಸೆಗಳಿಗೆ ಕ್ರಯ: ರೂ. 1—4—0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ಒಂದು ಡಜನ್ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಡತಕ್ಕದ್ದು.

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I	ಕ್ಲಾಸ್	0—10—0	ಒಂದು ಪೌಂಡಿಗೆ
II	ಕ್ಲಾಸ್	0—8—0	
III	ಕ್ಲಾಸ್	0—6—0	

ಹೋಟೇಲುಗಳಿಗೂ ಕ್ಲಬ್‌ಗಳಿಗೂ ಧಾರಾಳವಾಗಿ ವೈಲಪಾರ್ಸಲ ಮೇಲೆ ರವಾನಿಸಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.—

STANY BROTHERS, MANGALORE.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ



ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,

ಸಾಹುಕಾರಪೇಟೆ, ಮದ್ರಾಸ್.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲೆಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಪಾಣಿ ಕಂಪೆನಿ,

ಸಾಹುಕಾರಪೇಟೆ, ಮದರಾಸು.

NETRANAND SAREES.

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು!— ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಛಾಪಾಹೊಡೆದ "ನೇತ್ರಾನಂದ" ಕರೆಯುವ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡಲ್ಪಡುವದು.

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಡಿಮೆ ಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,

ಮಿಷನ್ ಕಂಪೌಂಡ್ ಎದುರು, ಹಂಪನಕಟ್ಟೆ, ಮಂಗಳೂರು.

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪ ಮತ್ತು ಸನ್ಸ್,

ಇವರಿಂದ ತಯಾರಿಸಲ್ಪಟ್ಟ ಸದೌಷಧಗಳು.

1. [illegible] ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, [illegible] ಬರುವ ಜ್ವರ, [illegible] ಹೃದಯದ ದುರ್ಬಲತೆ ಲಿಕ್ಹರ (ಶಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲಾ ತರದ ದುರ್ಬಲತೆಯು [illegible] ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬೆಳ್ಳುತ್ತಿರುವ [illegible] ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು. ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು.

೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟಿ. ಖ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲಹಸ್ತಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೩.

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ.

೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪ ಮತ್ತು ಸನ್ಸ್,
ಶೋರನುರ, (ಮಲೆಬಾರ).

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೬೨ ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೨—೦—೦. ಮಧ್ಯಮ ತರದ ಸೆಟ್ಟು ೧ಕ್ಕೆ ರೂ. ೩—೬—೦. ದೊಡ್ಡ ಸೆಟ್ಟು ಉತ್ತಮ ತರದ ೧ಕ್ಕೆ ರೂ. ೫—೪—೦.

[illegible] ಸಾಮಾನು ವಗೈರೆ ಕೆಟಲಾಗು ಬೇಕಾದವರಿಗೆ ಇನಾಮಾಗಿ ಕಳಿಸಲಾಗುತ್ತದೆ.
[illegible] ಪ್ಯಾಕಿಂಗ್ ಪ್ರತ್ಯೇಕ.

ADDRESS— Siromani Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ಅಪೂರ್ವ ಸಂದರ್ಭ.

ಅಲ್ಪ ಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದುಬಾರದವರಾದರೂ, [illegible] ಜೀವನ [illegible] ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು [illegible] ಕಲಿಯುವವರಿಗೆ ಅನುಕೂಲವಾದ ಸಮಯ ಮತ್ತು [illegible] ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುತ್ತದೆ. ಮಾಹಿತಿ ಪತ್ರಗಳನ್ನು ಬೇಕೆನ್ನುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪು ಸಮೇತ ನಮಗೆ ಬರೆದಲ್ಲಿ ಪುಕಟೆ ಕೊಡುವೆವು.

M. Anantha Prabhu,
The Tailoring House and
School of Scientific Tailor's Cutting,
MANGALORE, SOUTH KANARA.

ರಾಜವೈದ್ಯ ನಾರಾಯಣಜೀ ಕೇಶವಜೀ
ಇವರ

ವೈದ್ಯ ವಿದ್ಯ.

ವೈದ್ಯ ವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈದ್ಯ ವಿದ್ಯ

ವೈದ್ಯ ವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.
ವಿಳಾಸ:—
ರಾಜವೈದ್ಯ ನಾರಾಯಣಜೀ ಕೇಶವಜೀ,
೨೭. ಜೈನಾಬಜಾರು ರೋಡು, ಮದರಾಸು.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು. ಕಾಗದಗಳು ಕಾರಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮಟ್ಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ	110	ಅಕ್ಷರಗಳ ಪೆಟ್ಟಿ	ರೂ.	1—8—0
,,	170	,,	,,	1-14—0
,,	250	,,	,,	2—8—0
,,	350	,,	,,	3-12—0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.



ಈ ಗಡಿಯಾರವು [illegible] ಗಿರುವದು. [illegible] ವಂತೆ ಎರಡು ಕಡೆಯೂ [illegible] ಇರುವವು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು [illegible] ಕೆಲಸದಿಂದ ನಯವಾಗಿ ತಯಾರಿಸಿ [illegible] ಬಹುಮಾನಗಳ ವಿವರ:— [illegible] ೧, ಕನ್ನಡಿ ೧, ಗುಂಡಿ [illegible] ಟಿನ ರೋಜಾ ಹೂವು ೧, ಬೀಸಣಿಗೆ ೧, ಬ್ರೋಚ್ ೧, ಬಾಚಣಿಗೆ ೧, [illegible] ಬುದ್ದಿ ೧, ಜುಮ್ಕಾ ೧೧ ಬಹುಮಾನಗಳ ಸಹಿತ ರೂ. ೪—೮—೦.

ವಿಳಾಸ:— ರಾಸ್‌ವಾಚ್ ಎಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಛಾಪೆ.

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ ಮತ್ತು ಎಲ್ಲರಲ್ಲಿಯೂ ಬಳಕೆಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಮಟ್ಟುಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ ಶಾಸ್ತ್ರರೀತಿಯಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು, ಅಲಂಕಾರಗಳು, ಸ್ವರಜತಿಗಳು, ವರ್ಣಗಳು, ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ತೆಲುಗು ಕೀರ್ತನೆಗಳು ಸಹ ಸ್ವರಸಹಿತ ಕೊಟ್ಟಿರುತ್ತದೆ. ಈ ಛಾಪೆಯಲ್ಲಿ ಎರಡನೆ ಛಾಪೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳಿವೆ. ಪುಟಗಳು ೯೫. ಬೆಲೆ ೧೦ ಆಣೆ.

ರಾಮಾಯಣ ಸಂಗ್ರಹ ಬಾಲಕಾಂಡ ೦—೬—೦. ಸುಭದ್ರೆ ೦—೬—೦.

ವಿಳಾಸ:—
ಎಚ್. ಎಸ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪನಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 75 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ವಿಳಾಸ:— ಎ. ಪೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎವರ್ ರೆಡಿ ಸೇಫ್ಟಿ ರೇಜರು ಮತ್ತು ದಸ್ತೂರರ ಎಂಟಿಟೀಸ್ ಎಂಬುವ ಜ್ವರದ ವಿಶ್ವಾಸು ನಮ್ಮಲ್ಲಿ ದೊರಕುತ್ತದೆ. ಕ್ಷಿಪ್ರದಲ್ಲಿ ಬರೆಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.,
Jumnadas Building, Pitha Street,
FORT: BOMBAY.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು, ರಾ. ಆಲೇಮಾನ ವೆಂಕಟರಾವ್ ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

ಇದನ್ನು ಮದ್ರಾಸ ಸರಕಾರದವರು [illegible] ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಲು ಪ್ರತ್ಯೇಕ.
ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶಾಶ್ವತ ವಾದ

ದೇಹಶಕ್ತಿಯನ್ನು ದುರಭ್ಯಾಸಗಳಿಂದ [illegible] ನಲ್ಲಿಯೇ ಕಳೆದುಕೊಂಡು [illegible] ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಕಾಪು—ಅಪ್ಪಪ್ಪಾ! ಜುಗಾರಾಟವೆಂಥ ಪಿಶಾಚಿಯೇ! ಈ ಸಾರಿ ಇಲ್ಲಿಯ ಉತ್ಸವದ ಸಮಯ ಬಂದು ಇಲ್ಲಿ ನಿಂತುಬಿಟ್ಟಿದೆ! ಇದಕ್ಕೋಸ್ಕರ ಚಪ್ಪರ ಸಹ ಹಾಕಿಸಿಬಿಟ್ಟಿದ್ದಾರೆ. ಇಲ್ಲಿಯ ಜನರನ್ನು ಮಂಕುಗೊಳಿಸಿದ್ದು ಮಾತ್ರವಲ್ಲದೆ ಮೂಲ್ಕಿ ಮೂಡಬಿದ್ರೆ ಮುಂತಾದ ದೂರದೇಶಗಳಿಂದ ಅದು ಮಿತ್ರರನ್ನು ಸಹಾ ಕರಸಿಕೊಂಡಿರುತ್ತದೆ. ಜಿಲ್ಲಾ ಕಲೆಕ್ಟರರವರಿಗೂ ಪೋಲಿಸ್ ಸುಪರಿಂಟೆಂಡೆಂಟ್ ದೊರೆಗಳವರಿಗೂ ಕೂಡಾ ಇದರ ವಾರ್ತೆ ಎಕ್ಸ್‌ಪ್ರೆಸ್ ಮೂಲಕ ಹೋಗಿದೆಯಂತೆ! ಒಂದು ಕಡೆ ಗಿರಿಗಿರಿ ಆಟ! ಇನ್ನೊಂದು ಕಡೆ ಕೋಳಿ ಜೂಜಾಟವೆಂಬ ಸೈತಾನ! ಇದಕ್ಕೋಸ್ಕರ ವೃಥಾ ಹಣ ವ್ಯಯ ಮಾಡುವ ಜನರನ್ನು ಇಲ್ಲಿ ನೋಡಿದ್ದಾದರೆ ಬಲು ವ್ಯಸನವಾಗುತ್ತಿದೆ. ಬಂಟರ ಬಿಲ್ಲವರ ಜಾತಿಯವರಲ್ಲಿ ಅಲ್ಲಲ್ಲಿ ಮಹಾಸಭೆ, ಜಾತಿಯ ಏಳಿಗೆಗೆ ಆಗುವ ಈ ಕಾಲದಲ್ಲಿ ಜೂಜಾಟ ನಿಲ್ಲಿಸಲು ಯಾರಿಂದಲೂ ಆಗದಿದ್ದರೂ ಹತ್ತಾರು ಕಾಫಿ ಹೋಟೇಲುಗಳು ಸಾಬರೆ ಉದ್ಯೋಗವ ಒಂದಿದೆ ಬಂದಿವೆ!

ಕುಂದಾಪುರ ತಾಲೂಕು ಕೋಟೇಶ್ವರ ಮಾಗಣೆ ಕೋಟೇಶ್ವರ ಎಂಬ ಊರಿನ ನಿವಾಸಿ ಮ| ರಾ| ರಾ| ಹಲಸಿನಕಟ್ಟೆ ನಾಗಪ್ಪಯ್ಯ ಎಂಬವರು ದಾನಧರ್ಮದ ಒಂದು ಛತ್ರವನ್ನು ಕಟ್ಟಿಸಿರುವರಾಗಿಯೂ ಪ್ರಯಾಣಿಕರಾದ ಬೈರಾಗಿ ಸನ್ಯಾಸಿಯವರಿಗೆ ದಿನ ೧ಕ್ಕೆ ೧ ಸೇರು ಅಕ್ಕಿ ಪ್ರಕಾರ ದಾನಮಾಡುತ್ತಾರಾಗಿಯೂ ಈ ಸಂಬಂಧ ತಾನು ಸ್ವತಹಾ ಆರ್ಜಿಸಿದ ಆಸ್ತಿಯಲ್ಲಿ ಸ್ವಲ್ಪ ಆಸ್ತಿಯನ್ನು ತೆಗೆದಿಟ್ಟು ಉಳಿದದ್ದನ್ನು ತನ್ನ ಮಕ್ಕಳಿಗೆಲ್ಲಾ ಸರಿಯಾಗಿ ವಿಭಾಗಿಸಿ ವಿಲೀಲುನಾಮೆ ಮೂಲಕ ಬರೆದಿಟ್ಟಿರುವರಾಗಿಯೂ ಕೇಳುತ್ತೇವೆ. ಇವರಾದರೋ ತನ್ನ ಜೀವಮಾನದಲ್ಲಿಯೇ ಸುಮಾರು ೨೫ ಕೋರ್ಜಿ ಹುಟ್ಟುವಳಿ ಆಸ್ತಿ ಮತ್ತು ಸುಮಾರು ೨೫ ಸಾವಿರ ರೂಪಾಯಿ ಗಳಿಸಿಟ್ಟಿರುವರಾಗಿ ತಿಳಿದುಬರುತ್ತದೆ. ಇವರು ಈ ರೀತಿ ಧರ್ಮದ ಕಾರ್ಯಕ್ಕೆ ಮನಸ್ಸುಮಾಡಿದ ಪ್ರಯುಕ್ತ ಸರ್ವೇಪಿ ಜನರು ಸಂತೋಷಪಡುತ್ತಾರಲ್ಲದೆ ಇವರಿಗೂ ಇವರ ಮಕ್ಕಳಿಗೂ ಶ್ರೀ ಭಗವಂತನು ಒಳ್ಳೇದನ್ನು ಕೊಡಲಿ ಎಂದು ಹಾರೈಸುತ್ತೇನೆ.

ಉಪ್ಪಿನಂಗಡಿ:—ಕಳೆದ ತಾ. ೯ನೇ ಸೋಮವಾರ ಇಲ್ಲಿಯ ಕೆನರಾ ಎಜ್ಯುಕೇಶನ್ ಸೊಸೈಟಿಯ ಗಲ್ಸ್ ಹೈಸ್ಕೂಲಿನ ದೇವಿಮೋಲಿನ ಅನಾವರಣ ಸಮಾರಂಭವು ಇಲ್ಲಿಯ ಡಿಪ್ಯುಟಿ ಕಮಿಶನರ್ ಮಿ| ಮೊಂಟೆಗೋಮರಿ ಸಾಹೇಬರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಈ ಶಾಲೆಗೆ ಗೋವೆಯ ಶ್ರೀಮಂತ ವಿಷ್ಣು ಬಾಬ ಧೆಂಪೆಯವರು ಔದಾರ್ಯದಿಂದ ೩ ಸಾವಿರ ರೂಪಾಯಿಗಳ ಆರ್ಥಿಕ ಸಹಾಯ ಮಾಡಿದ್ದರಿಂದ ಅವರ ಹೆಸರಿನಿಂದಲೇ ಇದು ಕರೆಯೋಣಾಗುವದು.

ಅನುಕ್ರಮಣಿಕೆ

ಸ್ಪುಟವಿಚಾರಗಳು:—

[illegible]

ವರ್ತಮಾನ ಸಂಗ್ರಹಗಳು:—

ಸ್ವದೇಶ ವರ್ತಮಾನ

ಪರದೇಶ ವರ್ತಮಾನ

ದಕ್ಷಿಣ ಕನ್ನಡ:—

[illegible] ... ೫-೬

[illegible]

ಸಮಾಚಾರ.

ಉಡುಪಿಯಲ್ಲಿ ಆಹಾರಸಂಬಂಧ

ಕಾಸರಗೋಡು ಹಾಯ್ ಸ್ಕೂಲ್ ಫಂಡು ... ೯

ಸ್ವದೇಶಾಭಿಮಾನಿ.

ಶಕ ೧೮೪೧ ಫಲ್ಗುಣಶು|| ೭ ಶುಕ್ರವಾರ.

ಸ್ಫುಟವಿಚಾರಗಳು.

೧. ಮಹಾಸಮರದ ಮೂಲಕ ಬೆಳ್ಳಿಯ ನ್ಯೂನತೆಯುಂಟಾಗಿ ಹಿಂದೂಸ್ಥಾನದಲ್ಲಿ ಬೆಳ್ಳಿಯ ನಾಣ್ಯಗಳನ್ನು ತಯಾರಿಸುವುದು ಕಷ್ಟದ್ದಾಯಿತು. ಈ ಕಾರಣದಿಂದ ಹುಂಡಿಯ ದರವು ಏರಹತ್ತಿತು. ಆಗ ನಾಣ್ಯಗಳ ವಿಷಯವಾಗಿ ಹಿಂದೂಸ್ಥಾನ ಸರಕಾರದ ಧೋರಣವು ಹೇಗಿರಬೇಕೆಂಬುದರ ಬಗ್ಗೆ ಒಂದು ನಿರ್ಣಯವನ್ನು ಕೊಡುವುದಕ್ಕಾಗಿ ಮಿ. ಸ್ಮಿಥರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿತ್ತು. ಈ ಕಮಿಟಿಯು ತನ್ನ ವರದಿಯನ್ನು ಈಗ ಹೊರಪಡಿಸಿದೆ. ಇದರಲ್ಲಿ ಹಿಂದೂಸ್ಥಾನ ಸರಕಾರಕ್ಕೆ ಮಾಡಿದ ಅನೇಕ ಸೂಚನೆಗಳು ಜನತೆಯ ಹಿತದೃಷ್ಟಿಯಿಂದ ಬಹು ಉಪಯುಕ್ತವಾಗಿವೆ. ಹಿಂದೂಸ್ಥಾನದ ನಾಣ್ಯದ ಪ್ರಶ್ನೆಯು ಎಷ್ಟರಮಟ್ಟಿಗೆ ಸಿಕ್ಕಾಗಿದೆ ಎಂದರೆ ನಾಣ್ಯದ ದೃಷ್ಟಿಯಿಂದ ಹಿಂದೂಸ್ಥಾನಕ್ಕೂ ಇತರ ಜಗತ್ತಿಗೂ ವ್ಯವಹಾರವೇ ಅಸಾಧ್ಯವೆಂದು ಹೇಳಿದರೆ ಆ ಮಾತು ಅತಿಶಯೋಕ್ತಿ ಆಗಲಿಕ್ಕಿಲ್ಲ. ಇಲ್ಲಿ ಪ್ರಚಾರದಲ್ಲಿರುವ ನಾಣ್ಯಗಳು ಉದಾಹರಣಾರ್ಥವಾಗಿ ರೂಪಾಯಿಯಂಥ ಬೆಳ್ಳಿಯ ನಾಣ್ಯಗಳು ಅನ್ಯದೇಶದಲ್ಲಿ ಇಲ್ಲ. ಪವನದಂಥ ಚಿನ್ನದ ನಾಣ್ಯಗಳ ವಾಸ್ತವಿಕವಾದ ಬೆಲೆಯು ಒಂದು, ಮತ್ತು ಹಿಂದೂಸ್ಥಾನದೊಳಗಿನ ಅದರ ಪೇಟೆಯ ಧಾರಣೆಯು ಇನ್ನೊಂದು, ಸರಕಾರದವರ ದರಬಾರವಿಲ್ಲಂತೂ ಮೂರನೆಯದು. ಇಂಥ ವಿಚಿತ್ರಸಂಗತಿಗಳು ನಾಣ್ಯದ ವಿಷಯದಲ್ಲಿ ನಡೆಯುತ್ತಿದ್ದವು. ಈ ಅನವಸ್ಥಾದೋಷವನ್ನು ತಿಳಿದು ಮಿ. ಮೊಂಟೆಗ್ಯುಗಳು ಇದಕ್ಕೆ ಕೆಲವು ವರ್ಷಗಳ ಮಟ್ಟಿಗಾದರೂ ಒಂದು ನಿಶ್ಚಿತ ಸ್ವರೂಪವನ್ನು ಕೊಡಬೇಕೆಂದು ಒಂದು ಕಮಿಟಿಯನ್ನು ನೇಮಿಸಿದ್ದರು. ಸದರಿ ಕರೆನ್ಸಿ ಕಮಿಟಿಯು ಮಾಡಿದ ಶಿಫಾರಸುಗಳಲ್ಲಿ ಮುಖ್ಯ ಶಿಫಾರಸು ಯಾವುದೆಂದರೆ:—ಪವನದ ಕ್ರಯವನ್ನು ತಗ್ಗಿಸಬೇಕು, ಎಂದರೆ ಪವನಕ್ಕೆ ಸರಕಾರಿ ದರವು ಈಗ ಹಿಂದೂಸ್ಥಾನದಲ್ಲಿ ೧೫ ರೂಪಾಯಿ ಇದೆ, ಪರಂತು ವಿಲಾಯತಿಯಲ್ಲಿಯಾಗಲಿ ಇಲ್ಲವೆ ಅಮೇರಿಕದಲ್ಲಾಗಲಿ ಇದರ ಕ್ರಯವು ಬರೇ ಹತ್ತು ರೂಪಾಯಿ ಇರುವುದು, ಆದರೆ ಇನ್ನು ಮುಂದೆ ರೂಪಾಯಿಯು ಪವನದ ಹತ್ತನೆ ಒಂದಂಶವೆಂದು ತಿಳಿಯಬೇಕು, ಎಂದರೆ ವಿಲಾಯತಿಯಲ್ಲಿ ಇರುವಂತೆ ಪವನದ ಕ್ರಯವಿರಬೇಕು. ಕಮಿಟಿಯ ಈ ಸೂಚನೆಯನ್ನು ಕಂಬಹುನಾ ಶಿಫಾರಸನ್ನು ಸರಕಾರವು ಮೂರು ನಾಲ್ಕು ತಿಂಗಳೊಳಗೆ ಜಾರಿಯಲ್ಲಿ ತರುವುದೆಂದು ಪ್ರಕಟವಾಗಿದೆ, ಎಂದ ಮೇಲೆ ಆಗ ಹತ್ತು ರೂಪಾಯಿಗೆ ಪವನವು ದೊರಕುವುದೆಂಬುದಕ್ಕೆ ಸಂದೇಹವಿಲ್ಲ. ಮತ್ತು ಇದರ ಪ್ರತ್ಯಯವು ಈಗಲೇ ಬರಹತ್ತಿದೆ. ಪವನಕ್ಕೆ ೧೯-೨೦ ರೂಪಾಯಿ ಆದದ್ದು ಈಗ ೧೭ ರೂಪಾಯಿಗೆ ಬಂದು ನಿಂತಿದೆ.

೨. ಈ ಕರೆನ್ಸಿ ಕಮಿಟಿಯ ರಿಪೋರ್ಟಿನಲ್ಲಿ ಹಿಂದುಸ್ಥಾನದೊಳಗಿನ ಧಾರಣೆಯ ಏರಿನ ವಿಷಯದಲ್ಲಿ ಉಲ್ಲೇಖಿಸಿದ ಭಾಗವನ್ನು ವಾಚಕರ ಅವಗಾಹನಕ್ಕೆ ತಂದು ಕೊಡುವುದು ಒಳ್ಳೆಯದು. ೧೯೧೧ನೆಯ ಮಾನಸುಮಾರಿಯ ಮೇಲಿಂದ ೨೨.೭ ಕೋಟಿ ಜನರು ಕೃಷಿಯಿಂದ ಉಪಜೀವಿಕೆಯನ್ನು ಮಾಡಿಕೊಳ್ಳುವರೆಂದು ಗೊತ್ತಾಗುತ್ತದೆ. ಇವರಲ್ಲಿ ೧೭.೭ ಕೋಟಿ ಜನರು ತಮ್ಮ ಸ್ವಂತ ಇಲ್ಲವೆ ಇತರರ ಜಮೀನು ಸಾಗುವಳಿ ಮಾಡಿ ನಿರ್ವಾಹಮಾಡಿಕೊಳ್ಳುತ್ತಾರೆ. ಈ ಬೇಸಾಯಗಾರರಲ್ಲಿ ಯಾರ ಹತ್ತಿರ ಸ್ವಂತ ನಿರ್ವಾಹದ ನಾಸಿಕಳೆದು ಮಾರಲಿಕ್ಕೆ ಧಾನ್ಯವಿರುವುದೋ ಅವರಿಗೆ ಈಗಿನ ಧಾರಣೆಯ ಏರಿನಿಂದ [illegible] ... [illegible] ... ಬೇಕು ಅದಕ್ಕೆ ... [illegible] ... ಬೇಸಾಯಗಾರರಲ್ಲಿ ಅನೇಕರು ಕೃಷಿಯ ಕೆಲಸಕ್ಕಾಗಿ ಸಾಹುಕಾರರಿಂದ ರೊಕ್ಕವನ್ನು ಪಡಕೊಂಡು ಆ ರೊಕ್ಕದ ಬಗ್ಗೆ ಇಂತಿಷ್ಟು ಧಾನ್ಯವನ್ನು ಕೊಡುವ ಕರಾರುಮಾಡಿಕೊಂಡಿರುತ್ತಾರೆ. ಇಂಥವರಿಗೂ ಕೂಡ ಧಾರಣೆಯ ಏರಿನ ಪ್ರಯೋಜನವು ಸಿಗುವುದಿಲ್ಲ. ಈಗ ಬೇಸಾಯಗಾರರಲ್ಲಿ ಹೆಚ್ಚು ಧಾನ್ಯ ದವಸ ಬೆಳೆಸುವವರಿಗೆ ಮಾತ್ರ ಧಾರಣೆಯ ಏರಿನಿಂದ ನಾಲ್ಕು ದುಡ್ಡು ಹೆಚ್ಚು ಸಿಗುತ್ತದೆಂಬುದು ನಿಜ. ಆದರೆ ಅವರಿಗೆ ಬೇರೆ ಒಡವೆಗಳನ್ನು ಕ್ರಯಕ್ಕೆ ಪಡಕೊಳ್ಳಬೇಕಾಗುವ ಕಾರಣ ಅವುಗಳ ಕ್ರಯವು ಹೆಚ್ಚಿಗೆ ಕೊಡಬೇಕಾಗುತ್ತದೆ. ಸಾರಾಂಶ, ಧಾನ್ಯದ ಕ್ರಯವು ಏರಿದ್ದರಿಂದ ಯಾವ ಲಾಭವು ಸಿಗುತ್ತದೊ ಅದರ ಎಲ್ಲ ಅಂಶವನ್ನು ಬಟ್ಟೆ, ಸಕ್ಕರೆ, ಎಣ್ಣೆ ಮುಂತಾದ ಇತರ ಪದಾರ್ಥಗಳು ತಿಂದುಬಿಡುತ್ತವೆ! ಇದೊಂದು ಸಂಗತಿ. ಇನ್ನೊಂದು ಯಾವುದೆಂದರೆ ಕೃಷಿಯ ಮೇಲೆ ಜೀವನವಿಲ್ಲದೆ ಬೇರೆ ತರದ ಸ್ಥಿರ ಉತ್ಪನ್ನವಿರುವವರು ಎಂದರೆ ತಿಂಗಳ ಸಂಬಳದವರು, ಪೆನ್‍ಶನ್‍ದಾರರು, ಸಾಹುಕಾರರು, ಹಾಗು ಕೂಲಿಗಳು ಇವರಿಗೆ ಧಾರಣೆಯು ಏರಿ ಬಹಳ ತೊಂದರೆಯಾಗುತ್ತದೆ. ಈ ಎಲ್ಲ ವರ್ಗಕ್ಕೆ ಕ್ರಯವು ತಗ್ಗುವುದೇ ಹಿತಕರವಾದದ್ದು.

೩. ಕರೆನ್ಸಿ ಕಮಿಟಿಯು ಮೇಲಿನಂತೆ ಬೇಸಾಯಗಾರರ ಹಾಗು ಸಂಬಳದಾರರ ಮತ್ತು ಸಾವುಕಾರಾದಿಗಳ ವಿಷಯವಾಗಿ ಕ್ರಯದ ಏರಿನಿಂದ ಹೇಗೆ ಅಡಚಣಗಳು ಬರುತ್ತವೆಂಬುದನ್ನು ವಿವೇಚಿಸಿ ಗಿರಣಿಯ ಮಾಲಿಕರ ವಿಷಯದಲ್ಲಿ ಹೀಗೆ ಬರೆಯುತ್ತದೆ: ಏನೆಂದರೆ, "ಇವರಲ್ಲದೆ ಇನ್ನೊಂದು ಮಹತ್ವದ ವರ್ಗವಿದೆ. ಅದರ ಹಿತಸಂಬಂಧವನ್ನು ಆಲೋಚಿಸಬೇಕಾಗಿದೆ. ಪರದೇಶೀಯ ಒಡವೆಗಳು ದೇಶೀಯ ಮಾಲಿಗಿಂತ ಸುಲಭ ಕ್ರಯಕ್ಕೆ ದೊರಕಹತ್ತಿದಲ್ಲಿ ಗಿರಣಿಯ ಮಾಲಿಕರಿಗೆ ಹಾಗು ಇತರ ಕಾರಖಾನೆಯವರಿಗೆ ಇದು ಬಹಳ ನಷ್ಟ ಬರುವುದು. ಆದರೆ ಅವರಿಗೂ ಕೂಡ ಗಿರಣಿಯ ಯಂತ್ರಗಳು, ರಾಸಾಯನಿಕ ದ್ರವ್ಯಗಳು ಹಾಗು ಇತರ ಜೀನಸುಗಳು ಸುಲಭ ಕ್ರಯಕ್ಕೆ ಸಿಗಹತ್ತಿದರೆ ಮತ್ತು ಮಜೂರಿಯ ದರವು ಹೆಚ್ಚದೆ ಇದ್ದಲ್ಲಿ ಇಲ್ಲಿಯ ಗಿರಣಿಯ ಮತ್ತು ಕಾರಖಾನೆಗಳ ಮಾಲಿಕರಿಗೆ ಅನ್ಯದೇಶೀಯ ಕಾರಖಾನೆ ಮಾಲಕರೊಡನೆ ಸೋಂಟ ಕಟ್ಟಲು ಯಾವ ತೊಂದರೆಯೂ ಬರಲಿಕ್ಕಿಲ್ಲ. ಕ್ರಯದ ಏರಿನಿಂದ ಹಿಂದೀಮಾಲಿಗೆ ಪರದೇಶದ ಗಿರಾಕಿಗಳಿರಲಿಕ್ಕಿಲ್ಲವೆಂದು ನೆನಸುವುದು ನಿರಾಧಾರವಾಗಿದೆ. ಯಾಕೆಂದರೆ ಹತ್ತಿ, ಎಲುಬು, ಚರ್ಮ, ಧಾನ್ಯ ಸೆಣಬು ಇತ್ಯಾದಿ ಜೀನಸುಗಳನ್ನು ಯಾರಿಗಾದರೂ ಹಿಂದೂಸ್ಥಾನದಿಂದಲೇ ಕೊಂಡುಕೊಳ್ಳಬೇಕಾಗುತ್ತದೆ. ಹಿಂದೂಸ್ಥಾನವನ್ನು ಬಿಟ್ಟರೆ ಇವುಗಳನ್ನು ಸಾಕಷ್ಟು ಪೂರಯಿಸುವ ದೇಶವು ಇನ್ನೊಂದಿಲ್ಲ.

೪. ಇರಲಿ; ಕರೆನ್ಸಿ ಕಮಿಟಿಯು ಪವನದ ಕ್ರಯವನ್ನು ಅಮೇರಿಕಾ ಇಂಗ್ಲೆಂಡ ಇತ್ಯಾದಿ ಇತರ ದೇಶಗಳ ಪ್ರಮಾಣಕ್ಕೆ ಸರಿಬರುವಂತೆ ತಗ್ಗಿಸಿದ್ದು ಹಿಂದೂಸ್ಥಾನದ ಹಿತಸಂಬಂಧಕ್ಕೆ ಯೋಗ್ಯವೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅರ್ಥಶಾಸ್ತ್ರಜ್ಞರ ಅಭಿಪ್ರಾಯವು ಒಳ್ಳೆದಿದ್ದರೂ ವ್ಯವಹಾರದಲ್ಲಿ ಅದರ ಪ್ರಯೋಜನವು ಎಷ್ಟರ ಮಟ್ಟಿಗೆ ಬಂದೀತು, ಇದೊಂದು ಪ್ರಶ್ನೆ ಇದೆ ಎಂದು ಅನೇಕರು ಈಗಿನ ಧಾರಣೆಯನ್ನು ನೋಡಿ ಹೇಳಬಹುದು. ಪರಂತು ಕರೆನ್ಸಿ ಕಮಿಟಿಯ ರಿಪೋರ್ಟಿನ ಶಿಫಾರಸುಗಳು ಅಮಲಿನಲ್ಲಿ ಬಂದರೆ ಅದರ ಸುಪರಿಣಾಮಗಳು ಈಗಿನ ಉಗ್ರತರವಾದ ಧಾರಣೆಯ ಮೇಲೆ ಉಂಟಾಗದೆ ಇರಲಿಕ್ಕಿಲ್ಲ. ಧಾರಣೆಯು ಈಗ ಏರಿದ್ದು ಹೇಗೆ ಎಂಬ ಸಂಗತಿಯು ಪ್ರತ್ಯೇಕವು. ಪರಂತು ಅಕ್ಕಿಯ ಮೇಲೆ ಸರಕಾರವು ನಮ್ಮ ಸಂಸ್ಥಾನದಲ್ಲೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಹೋಗಲು ಯಾವ ಕಂಟ್ರೋಲನ್ನು ಇಟ್ಟಿತ್ತೊ ಅದನ್ನು ಈಗ ದೂರ ಮಾಡಿದೆ. ಈ ಕಾರಣದಿಂದ ಸಂಸ್ಥಾನದೊಳಗಿನ ಆಯತನಿರ್ಯಾತಗಳು ಸರಿಯಾಗಿ ನಡೆದು ಎಲ್ಲ ಕಡೆಯ ಉತ್ಪನ್ನಗಳೂ ಧಾರಣೆಗಳೂ ಸಮಪ್ರಮಾಣಕ್ಕೆ ಬಂದಾವೆಂದು ನೆನಸಬಹುದು. ಕೆಲವು ಜಿಲ್ಲೆಗಳ ಮೇಲೆ ಕಂಟ್ರೋಲಿಡೋಣ, ಇನ್ನು ಕೆಲವನ್ನು ಮುಕ್ತಕಂಟ್ರೋಲುಗಳನ್ನಾಗಿ ಮಾಡೋಣ ಇದರಿಂದ ಆಹಾರ ಜೀನಸುಗಳಲ್ಲಿ ವಿಷಮಸ್ಥಿತಿಯು ಬಂದು ನಿಲ್ಲುತ್ತದೆ. ಎಲ್ಲ ಕಡೆಗಳಿಂದ ಪ್ರತಿಬಂಧವನ್ನು ಎಬ್ಬಿಸಿ ಹಾಕುವುದರಿಂದ ಸಮಸ್ಥಿತಿಯು ಬರುತ್ತದೆ; ಇದು ಸಹಜವೆ ಸರಿ. ಹೇಗೆಂದರೆ, ಇದಕ್ಕಾಗಿ ಒಂದು ದೃಷ್ಟಾಂತವನ್ನು ಇಟ್ಟುಕೊಂಡು ನೋಡಬಹುದು. ಮಲಬಾರ ಜಿಲ್ಲೆಯು ಯಾವಾಗಲೂ ಅಕ್ಕಿಗಾಗಿ ಬಾಯಿ ತೆರೆದುಕೊಂಡು ಇರುತ್ತದಷ್ಟೆ. ರಂಗೂನು, ಕೃಷ್ಣಾ, ಗೋದಾವರಿ, ಮತ್ತು ದಕ್ಷಿಣ ಕನ್ನಡಾ ಇಷ್ಟು ಜಿಲ್ಲೆಗಳು ಮಲಬಾರಿಗೆ ಅಕ್ಕಿಯನ್ನು ಪೂರಯಿಸತಕ್ಕ ಉಗ್ರಾಣಗಳು. ಈ ಉಗ್ರಾಣಗಳ ಪೈಕಿ ರಂಗೂನು, ಕೃಷ್ಣಾ ಮೊದಲಾದ ಉಗ್ರಾಣಗಳಿಗೆ ಬಾಗಿಲು ಹಾಕಿತ್ತು; ಆಗ ಅರ್ಥಾತ ನೆರೆಯಲ್ಲಿರುವ ದಕ್ಷಿಣ ಕನ್ನಡಕ್ಕೆ ತನ್ನ ಸಹೋದರಿಯ ಹೊಟ್ಟೆಯ ಕಡೆಗೆ ನೋಡಬೇಕಾಗಿ ಬಂತು. ವಸ್ತುತಃ ಇದರ ಪರಿಣಾಮವೇನಾಯಿತು ಎಂದರೆ, ಕೃಷ್ಣಾದಲ್ಲಿ ಅಕ್ಕಿಯು ರಾಶಿಯಾಗಿ ಬೀಳಹತ್ತಿತು; ದ. ಕನ್ನಡಾ ಜಿಲ್ಲೆಯಲ್ಲಿ ಕಡಿಮೆಯಾಗಹತ್ತಿತು. ಕೃಷ್ಣಾದಲ್ಲಿ ದರವು ಕಡಿಮೆಯಾಯಿತು; ಮತ್ತು ದ. ಕನ್ನಡದಲ್ಲಿ ಹೆಚ್ಚಾಯಿತು; [illegible] ... ಯ ವಿಷಮಸ್ಥಿತಿಯು ಬಂದೊದಗಿತು. ಇದಲ್ಲದೆ, ಕಂಟ್ರೋಲಿನಿಂದ ಒಂದು ತರದ ಕೃತಕ ಅಕ್ಕಿಯುಂಟಾಗುತ್ತದೆಯಾದರೆ ಹಲವು ತರದ ಆಶಂಕೆಯೂ ಕೂಡ ಒದಗುತ್ತದೆ ಎಂದು ಸರಕಾರದ ಧ್ಯಾನದಲ್ಲಿ ಬಂದು ಈಗ ನಮ್ಮ ಸಂಸ್ಥಾನದ ಮೇಲಿನ ಅಕ್ಕಿ ಕಂಟ್ರೋಲನ್ನು ಸರಕಾರವು ಎತ್ತಿಸಿದೆ, ಇದು ಸಂತೋಷದ ಮಾತು.

[illegible] ಪರಂತು ಜನರಲ್ಲಿ ಹುಟ್ಟಿದ ಈ ಸಂತೋಷವು ಸಂಪೂರ್ಣವಾಗಿ ವಿಕಾಸ ಹೊಂದಬೇಕಾದರೆ, ಕಂಟ್ರೋಲು ಎಬ್ಬಿಸಿದ್ದರ ನಿಜವಾದ ಪ್ರಯೋಜನವು ದೇಶಕ್ಕೆ ಸಿಗಬೇಕು. ಎಂದರೆ ನಾವು ಮೇಲೆ ಹೇಳಿದ್ದಂತೆ ಸಂಸ್ಥಾನದೊಳಗಿನ ಎಲ್ಲ ಭಾಗಗಳಲ್ಲಿ ಹಿಂದಿನ ಸುಗ್ಗಿಯ ವರ್ಷಗಳಲ್ಲಿ ಹೇಗೊ ಹಾಗೆ ಆಹಾರ ಜೀನಸುಗಳು ಸಮಪ್ರಮಾಣದಿಂದ ಆಮದುರಫ್ತು ಆಗಬೇಕಾದವುಗಳು. ಮಲಬಾರಿಗೆ ಬರೆ ದಕ್ಷಿಣ ಕನ್ನಡದಿಂದ ಮಾತ್ರ ಅಕ್ಕಿಯು ಹೋಗುತಿದ್ದರೆ ಆಗಲಿಕ್ಕಿಲ್ಲ. ಆ ಮೂಲಕ ಇಲ್ಲಿ ಮಹಾ ಆಪತ್ತು ಬಂದು ಒದಗುತ್ತದೆಂಬುದು ಈಗ ಎಲ್ಲರಿಗೆ ವೇದ್ಯವಾದ ವಿಷಯವೆ ಆಗಿದೆ. ಆದ್ದರಿಂದ ಸರಕಾರವು ರಂಗೂನಿಂದಲೂ, ಕೃಷ್ಣಾ ಜಿಲ್ಲೆಯಿಂದಲೂ ಹಾಗು ಇತರ ಕಡೆಯಿಂದಲೂ ಅಕ್ಕಿಯ ಪುರವಠೆಯನ್ನು ಮಲಬಾರಿಗೆ ಮಾಡಬೇಕಲ್ಲದೆ ಈ ಜಿಲ್ಲೆಗೆ ಸಹ ರಂಗೂನ ಅಕ್ಕಿಯನ್ನು ತರಿಸಬೇಕು. ಇಲ್ಲಿಯ ಒಂದಲ್ಲ, ಎರಡಲ್ಲ, ಮೂರು ಬೆಳೆಗಳು ಕೂಡ ಒಳ್ಳೆಯದಾಗಿರುವಾಗ ಪುನಃ ರಂಗೂನಿನಿಂದ ಅಕ್ಕಿಯನ್ನು ಯಾಕೆ ತರಿಸಬೇಕೆಂದು ಕೆಲವರಿಗೆ ತೋರಬಹುದು. ಪರಂತು ಈ ಸಮಯದಲ್ಲಿ ಮುಡಿಯ ಕ್ರಯವು ೧೦ ರೂಪಾಯಿಗೂ ಯಾವಾಗ ಮಿಕ್ಕಿರುವದೊ ಆಗ ಅಕ್ಕಿಯು ಇಲ್ಲಿ ಯಥೇಷ್ಟ ಬೆಳೆದರೇನು ಬೆಳೆಯದೆ ಇದ್ದರೇನು? ಅಕ್ಕಿ ಕ್ರಯಕ್ಕೆ ಪಡಕೊಳ್ಳುವವರಿಗೆ ಅದೆಲ್ಲ ಒಂದೆ. ಮತ್ತು ಇಂಥವರ ಜನಸಂಖ್ಯೆಯೇ ಅಧಿಕವಾಗಿರುವುದು. ಆದ್ದರಿಂದ ರಂಗೂನಿನಿಂದ ಅಕ್ಕಿಯನ್ನು ತರಿಸಿದರೆ ಬಡಜನರು ಕಡಿಮೆ ಕ್ರಯವನ್ನು ಕೊಟ್ಟು ಅದನ್ನು ಉಪಯೋಗಿಸಬಹುದು. ಸಾಧ್ಯವಿರುವವರು ಇಲ್ಲಿಯ ದಿವ್ಯವಾದ ಅಕ್ಕಿಯನ್ನು ಹೆಚ್ಚು ಕ್ರಯ ಕೊಟ್ಟು ತೆಕೊಳ್ಳಬಹುದು. ಸಾರಾಂಶ, ಬಡವರ ಮೇಲೆ ಈಗಿನ ಕಠಿಣಕಾಲದಲ್ಲಿ ಆಪತ್ತು ಬರಬಾರದೆಂದು ಯೋಚಿಸುವುದಾದರೆ ರಂಗೂನಿನಿಂದ ಅಕ್ಕಿಯನ್ನು ತರಿಸುವ ವಿಲೆವಾರಿಯನ್ನು ಸರಕಾರವು ಮಾಡಬೇಕೆಂದು ನಾವು ಸೂಚಿಸುವೆವು. ನಮ್ಮ ಈ ಸೂಚನೆಯ ಕಡೆಗೆ ಕಲೆಕ್ಟರ ದೊರೆಗಳು ಅಗತ್ಯವಾಗಿ ಲಕ್ಷ್ಯಕೊಟ್ಟಾರೆಂದು ಸಂಪೂರ್ಣವಾಗಿ ನಂಬಿದ್ದೇವೆ.

೫. ಮುಂಬಯಿ ಪಟ್ಟಣದಲ್ಲಿ ಈ ತಿಂಗಳ ತಾ. ೧೫ರಲ್ಲಿ ಖಿಲಾಫತ ಕೊನ್ಫರೆನ್ಸು ಸೇರಿತ್ತು. ಖಿಲಾಫತಿನ ಪ್ರಶ್ನೆಯು ಮುಸಲ್ಮಾನರ ಧರ್ಮವಿಶ್ವಾಸಕ್ಕೆ ಸಮಾಧಾನಪಡಿಸುವ ರೀತಿಯಲ್ಲಿ ನಿರ್ಣಯಿಸಲ್ಪಡಬೇಕೆಂದು ಇತರ ಮುಸಲ್ಮಾನರು ಅಪೇಕ್ಷಿಸುವಂತೆ ನಮ್ಮ ಬಂಧುಗಳಾದ ಹಿಂದೀ ಮುಸಲ್ಮಾನರು ಸಹ ಹೇಳುತಿದ್ದಾರೆ. ಹಿಂದೀ ಮುಸಲ್ಮಾನರ ಪರವಾಗಿ, ವಿಲಾಯತಿಯ ಶಾಂತತಾಪರಿಷತ್ತಿಗೆ ಎರಡು ಡಪ್ಯುಟೇಶನುಗಳು ಹೋಗಲು ಹೊರಟಿದ್ದಾವೆ. ಇಲ್ಲಿಂದ ಡೆಪ್ಯುಟೇಷನುಗಳು ಹೊರಡುವಾಗ ಅವು ಶಾಂತತಾಪರಿಷತ್ತಿನ ಮುಂದೆ ತಮ್ಮ ಯಾವ ಅಂಬೋಣವನ್ನು ಇಡಲಿಕ್ಕಿದ್ದಾವೊ ಅವುಗಳಿಗೆ ಇಲ್ಲಿಯ ಲೋಕಮತದ ಬೆಂಬಲವು ಇರುವಂತೆ ಇಲ್ಲಿಯ 'ಖಿಲಾಫತ್ ಕೊನ್ಫರೆನ್ಸಿ'ನಲ್ಲಿ ಠರಾವುಗಳು ಪಾಸಾಗುವುದು ಸ್ವಾಭಾವಿಕವೆ ಸರಿ. ಈ ದೃಷ್ಟಿಯಿಂದ ಮುಂಬಯಿಯಲ್ಲಿ ಜರಗಿದ ಪರಿಷತ್ತಿನ ವೃತ್ತಾಂತವನ್ನು ನೋಡಲಾಗಿ ಸದರಿ ಪರಿಷತ್ತಿನ ಸ್ವಾಗತಮಂಡಲದ ಅಧ್ಯಕ್ಷರೂ ಪರಿಷತ್ತಿನ ಅಧ್ಯಕ್ಷರೂ ತಮ್ಮ ಭಾಷಣಗಳಲ್ಲಿ ವಿಶದಪಡಿಸಿದ ವಿಚಾರಸರಣಿಯು ಯುಕ್ತವಾಗಿದೆ ಎಂದು ಹೇಳಬೇಕಾಗುತ್ತದೆ. ಟರ್ಕಿಯ ಭವಿತವ್ಯತೆಯು ಈ ಹೊತ್ತು ಸಂಯುಕ್ತ ಮಿತ್ರಮಂಡಲಿಯ ಕೈಯಲ್ಲಿರುವುದರಿಂದ ಅವರು ಇಡೀ ಲೋಕಶಾಂತಿಯ ಪ್ರಶ್ನೆಯ ದೂರದೃಷ್ಟಿಯಿಂದ ವಿಚಾರ ಮಾಡುವುದು ಅಗತ್ಯದ್ದಾಗಿದೆ. ಪರಿಷತ್ತಿನ ಅಧ್ಯಕ್ಷರಾದ ನಾಮದಾರ ಮಿ|| ಭುರ್ಗ್ರಿ ಇವರು ಹಿಂದೀಮುಸಲ್ಮಾನರ ಅಂಬೋಣವನ್ನು ಮಿ|| ಮೊಂಟೆಗ್ಯುಗಳು ಪೆರಿಸ್ ಶಹರದಲ್ಲಿ ನೆರೆದ ಶಾಂತತಾ ಪರಿಷತ್ತಿನ ಮುಂದೆ ಇಟ್ಟದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು. ತಥಾಪಿ ಟರ್ಕಿಯ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಒಂದೆ ಗ್ರೇಟ್‍ಬ್ರಿಟನಿಗೆ ಸ್ವಾತಂತ್ರ್ಯವಿಲ್ಲ; ಸಂಯುಕ್ತ [illegible] ಮಂಡಳಿಯವರ ಇಚ್ಛೆಯಮೇಲೆ ಈ ಪ್ರಶ್ನೆಯು ಹೊಂದಿಕೊಂಡಿದೆ ಎಂಬದು ತಾತ್ವಿಕದೃಷ್ಟಿಯಿಂದ ನಿಜವಾದರೂ ಇಂಗ್ಲಂಡು ತೋರಿಸಿಕೊಟ್ಟ ಉಪಾಯವನ್ನು ಅಲ್ಲಗಳೆಯಲು ಈ ಹೊತ್ತು ಇತರ ಯಾವ ಜನಾಂಗಕ್ಕೂ ಸಾಧ್ಯವಿಲ್ಲ. ನಿಜವಾದ ಪರಿಸ್ಥಿತಿಯು ಹೀಗಿರುವುದರಿಂದ ಹಿಂದೀ ಮುಸಲ್ಮಾನರ ಮನಸ್ಸನ್ನು ಸಮಾಧಾನಪಡಿಸುವುದು ಒಂದೆ ಇಂಗ್ಲೆಂಡಿನ ಕರ್ತವ್ಯವಾಗಿದೆ ಎಂದು ಮಿ|| ಭುರ್ಗ್ರಿಗಳು ತಮ್ಮ ಭಾಷಣದಲ್ಲಿ ತೋರಿಸಿಕೊಟ್ಟಿದ್ದಾರೆ. ಪರಂತು ಪ್ರಧಾನ ಮಂತ್ರಿಗಳಾದ ಮಿ|| ಲೊಯ್ಡ್ ಜೋರ್ಜರ ಮನಸ್ಸು ಈ ವಿಷಯದಲ್ಲಿ ಹೇಗಿದೆ ಎಂಬುದು ತಿಳಕೊಳ್ಳುವುದೆ ದುಸ್ತರವಾಗಿದೆ. ಆದ್ದರಿಂದಲೆ ಇದರ ಕೊನೆಯ ತೀರ್ಮಾನವು ಹೀಗೆಯೆ ಆದೀತೆಂದು ಈ ಹೊತ್ತು ಯಾರಿಗೂ ಅಂದಾಜು ಕಟ್ಟುವುದು ಸಾಧ್ಯವಿಲ್ಲದಂತಾಗಿದೆ. ವಿಲಾಯತಿಯಿಂದ ಬಂದ ಇತ್ತಲಾಗಿನ ವರ್ತಮಾನವು ತಿಳಿಸುವುದೇನೆಂದರೆ, ಟರ್ಕಿ ಸುಲ್ತಾನರಿಗೆ ಕೊನ್‍ಸ್ಟಂಟಿನೋಪಲು ಬಿಟ್ಟುಕೊಟ್ಟು ಗೆಲಿಪೊಲಿ ಹಾಗು ಅದರ ಎದುರಿನ ತೀರಪ್ರದೇಶವು ಸಂಯುಕ್ತ ಸರಕಾರದ ಅಧಿಕಾರಕ್ಕೆ ಒಳಪಡುವುದು. ಸ್ಮರ್ನಾ ಪ್ರಾಂತವು ಗ್ರೀಸಿಗೆ ಕೊಡಲ್ಪಡುವುದು. ಆರ್ಮೇನಿಯವು ಮತ್ತು ಸ್ವತಂತ್ರವಾಗಿ ಇಡಲ್ಪಡುವದು. ಅದುವು

ಆದರ ಗಡಿಗಳು ಇಂಥಿಂಥವುಗಳೆ ಎಂಬುದು ಇನ್ನೂ ನಿರ್ಣಯವಾಗಿಲ್ಲ. ಪ್ರಾಂತಗಳನ್ನು ಈ ರೀತಿಯಿಂದ ಹಂಚಿಕೊಳ್ಳುವ ಹಂಚಿಕೆಗಳು ನಡೆಯುತ್ತವಾದರೂ ಯುರೋಪಿಯನ್ ಟರ್ಕರನ್ನು ಯಾರ ಅಧಿಕಾರಕ್ಕೆ ಸೇರಿಸಬೇಕೆಂಬ ವಿಷಯವು ಬಹು ನಾಜೂಕದ್ದಾಗಿದೆ. ಮತ್ತು ಇದೇ ಪ್ರಶ್ನೆಯು ಅಸ್ವಾಸ್ಥ್ಯವನ್ನು ಉಂಟುಮಾಡುತ್ತದೆ ಎಂದರೂ ಅಡ್ಡಿ ಇಲ್ಲ. ಅಲ್ಲದೆ ಯುರೋಪಿನ್ನ ಟರ್ಕರ ಮನಃಕ್ಷೋಭವನ್ನುಂಟುಮಾಡುವ ಸಂಗತಿಗಳು ಸಿರಿಯಾ, ಪೆಲೆಸ್ಟೈನ್ ಮತ್ತು ಅರೇಬಿಯಾ ಇವುಗಳ ವಿಷಯವಾಗಿದ್ದು, ಈ ಸಂಬಂಧದಿಂದ ಲಾರ್ಡ ಕರ್ಝನರು ಪ್ರದರ್ಶಿಸಿದ ವಿಚಾರಗಳಂತೂ ಆ ಜನರಿಗೆ ಬಹು ಅಸಮಾಧಾನಕರವಾಗಿ ಪರಿಣಮಿಸಿವೆ. ಇಂಥ ಪರಿಸ್ಥಿತಿಯಲ್ಲಿ ಮಿ| ಲೊಯ್ಡ ಜೋರ್ಜರಾದರೂ ಯಾರಿಗೂ ಯಾವ ನಿಶ್ಚಯವನ್ನು ಹೇಳಬಲ್ಲರು?

೭. ಪ್ರಧಾನ ಮಂತ್ರಿಗಳಾದ ಮಿ ಲೊಯ್ಡ ಜೋರ್ಜರು ಒಂದು ನಿಶ್ಚಿತವಾದ ನಿರ್ಣಯವನ್ನು ಹೇಳಬಹುದಿತ್ತೆನ್ನೋಣ ಪರಂತು ಅವರ ಪ್ರಧಾನಪದದ್ದೆ ನಿಶ್ಚಯವಿಲ್ಲ ಇಂಥ ಪರಿಸ್ಥಿತಿಯಲ್ಲಿ ಅವರು ಇನ್ನೊಬ್ಬರಿಗೆ ಯಾವ ನಿಶ್ಚಯವನ್ನು ಕೊಟ್ಟಾರು? ಮಿ ಲೊಯ್ಡ ಜೋರ್ಜರು ಸಮ್ಮಿಶ್ರಪಕ್ಷದ ಕರ್ಣಧಾರರಾಗಿ ತಮ್ಮ ಮಂತ್ರಿಪದದ ಹಡಗವನ್ನು ಹೇಗೊ ನಡಿಸಿಕೊಂಡಿದ್ದರು ಹೇಗೊ ನಡಿಸಿಕೊಂಡಿದ್ದದ್ದಲ್ಲ, ನಿಜವಾಗಿ ಯಶಸ್ವಿತನದಿಂದಲೆ ನಡಿಸಿಕೊಂಡಿದ್ದರು ಕಾರಣ, ಮಹಾಯುದ್ಧದ ಬಿರುಗಾಳಿಯಿಂದ ಸಾಮ್ರಾಜ್ಯವನ್ನು ಸಂರಕ್ಷಿಸಿ ಆ ಬಿರುಗಾಳಿಯನ್ನು ಕೂಡ ಅವರು ತಮಗ ಬೇಕಾದ ರೀತಿಯಲ್ಲಿ ತಿರುಗಿಸಿಕೊಂಡರು ಮಿ ಲೊಯ್ಡ ಜೋರ್ಜರು ತಮ್ಮ ಇಷ್ಟು ಬುದ್ಧಿಮತ್ತೆಯನ್ನು ಖರ್ಚುಮಾಡಿ ಸಾಮ್ರಾಜ್ಯದೊಳಗಿನ, ಯಾಕೆ ಇಡಿ ಜಗತ್ತಿನೊಳಗಿನ ವಟುತ್ಪದಿಗಳನ್ನು ತಲೆಯಲ್ಲಾಡಿಸುವಂತೆ ಮಾಡಿದಾಗ್ಯೂ ಇಂಗ್ಲಂಡಿನಲ್ಲಿ ಅವರ ವಿಷಯವಾಗಿ ಪಕ್ಷಭೇದಗಳು ಉಂಟೇ ಉಂಟು ಇಂಗ್ಲಂಡಿನಲ್ಲಿರುವ ಪಕ್ಷಬೇದಗಳು ಮಿ ಲೊಯ್ಡ ಜೋರ್ಜರ ವ್ಯಕ್ತಿಯ ಪರವಾಗಿ ಉಂಟು ಎಂದು ಹೇಳುವುದಕ್ಕಿಂತ ಅವರು ಈಗ ಯಾವ ಕೊಯಿಲೇಷನ್ ಪಾರ್ಟಿಯ ಎಂದರೆ ಸಮ್ಮಿಶ್ರಪಕ್ಷದ ನಾಯಕರಾಗಿದ್ದಾರೊ ಆ ಪಕ್ಷದ ವಿಷಯವಾಗಿಯೆ ಲಿಬರಲ್, ಯುನಿಯನಿಸ್ಟ ಲೇಬರ ಇತ್ಯಾದಿ ಇತರ ರಾಜಕೀಯ ಪಕ್ಷಗಳು ತಮ್ಮ ಮತಭೇದವನ್ನು ಕಲ್ಪಿಸಿಕೊಂಡಿದ್ದಾವೆಂದು ಹೇಳುವುದು ಸಮಂಜಸವಾಗಿದೆ ಮಿ ಲೊಯ್ಡ ಜೋರ್ಜರು ತಮ್ಮ ಬುದ್ಧಿಸರ್ವಸ್ವವನ್ನು ಖರ್ಚಮಾಡಿ ಇಂಗ್ಲಂಡಿನೊಳಗಿನ ರಾಜಕೀಯ ಪಕ್ಷಗಳನ್ನು ಸಮಾಧಾನಪಡಿಸಲು ಯತ್ನಿಸಿಕೊಂಡಿದ್ದಾಗ್ಯೂ ಅವರ ಯುಕ್ತಿವಾದವು ಇನ್ನು ಮುಂದೆ ಹೆಚ್ಚು ಸಮಯ ನಿಲ್ಲಲಿಕ್ಕಿಲ್ಲವೆಂದು ಹೇಳುತ್ತಾರೆ ಲಿಬರಲ್ ಪಾರ್ಟಿಯ ನಾಯಕತ್ವವನ್ನು ಪುನಃ ಕೈಕೊಂಡು ಮಿ ಎಸ್ಕ್ವಿಥರು ಜನತೆಯ ಮುಂದೆ ಹೇಗೆ ಬಂದಿದ್ದಾರೆಂಬುದನ್ನು ನಾವು ಕೆಲವು ದಿವಸಗಳ ಹಿಂದೆಯೇ ತಿಳಿಸಿದ್ದೇವಷ್ಟೆ. ಈಗ ಯುನಿಯನಿಸ್ಟ ಪಕ್ಷದವರು ಅಧಿಕಾರದ ಸಲುವಾಗಿ ಇಷ್ಟು ಸಮಯದ ವರೆಗೆ ಮಿ ಲೊಯ್ಡ ಜೋರ್ಜರನ್ನು ಎತ್ತಿ ಹಿಡಿದಿದ್ದರು ಪರಂತು ಅವರು ಕೂಡ ಈಗ ಇವರ ಪ್ರಮುಖತ್ವವನ್ನು ಕಳಚಿ ಬಿಟ್ಟಿದಾರೆಂದು ಪ್ರಕಟವಾಗಿದೆ ಲೇಬರ ಪಾರ್ಟಿಯಂತು ಈಗಿನ ಸಂಮಿಶ್ರ ಪಕ್ಷದ ತತ್ವಗಳಿಗೆ ಅನನುಕೂಲವೆ ಇದೆ ಅಂತರರಾಷ್ಟ್ರೀಯ ಸಂಬಂಧಗಳ ಅನಿಶ್ಚಯತೆ, ಸಾಮ್ರಾಜ್ಯಾಂತರ್ಗತವಾದ ಇಜಿಪ್ತಿನ ಭವಿತವ್ಯತೆ, ಕಾರಖಾನೆ, ಕಲ್ಲಿದ್ದಲಿಯ ಖಣಿ ಮುಂತಾದವುಗಳ ವೈಯಕ್ತಿಕ ಸಂಬಂಧವನ್ನು ತೆಗೆದು ಅವುಗಳನ್ನು ರಾಷ್ಟ್ರೀಯ ಸೂತ್ರಾಗಿ ಬಿಟ್ಟುಕೊಡಬೇಕೆಂದಿರುವ ಆಗ್ರಹ ಹಾಗು ಐರ್ಲಂಡಿನ ಸ್ವರಾಜ್ಯದ ಪ್ರಶ್ನೆ ಇತ್ಯಾದಿ ಅನೇಕ ಒಗಟುಗಳು ಇಂಗ್ಲಂಡಿನ ಲೇಬರ ಪಾರ್ಟಿಯ ವಾತಾವರಣದಲ್ಲಿ ಸಕೆಯನ್ನು ಹುಟ್ಟಿಸುವಾಗ ಯುರೋಪಿನೊಳಗಿನ ಸೋಶಾಲಿಝಮ್ ಮತ್ತು ಬೋಲ್ಶೇವಿಝಮಿನಿಂದ ಇನ್ನಷ್ಟು ಸಹಾಯವಾಗ ಹತ್ತಿದೆ ಯುದ್ಧ ಕಾಲದಲ್ಲಿ ಮತಭೇದಗಳಲ್ಲವು ಅಡಗಿಕೊಂಡಿದ್ದವು ಕಿಂಬಹುನಾ ಮುಂದಿನ ಭಯಂಕರ ಅಪಜಯದ ಭೀತಿಯಿಂದ ಆ ಮತಭೇದಗಳು ಹೂತು ಹೋಗಿದ್ದವೆನ್ನಬಹುದು ಈಗ ಅವು ಒಂದೊಂದಾಗಿಯೆ ಇಂಗ್ಲಂಡಿನ ರಾಜಕೀಯ ಕ್ಷಿತಿಜದ ಮೇಲೆ ಮತ ಭೇದದ ರೂಪದಿಂದ ಮೂಡಹತ್ತಿವೆ! ಇಂಥ ಇಕ್ಕಟ್ಟಿನ ಪ್ರಸಂಗದಲ್ಲಿ ಈಗ ಕಾರ್ಯವ್ಯಾಸಕ್ತವಾದ ಸಂಯುಕ್ತ ಪಾರ್ಲಿಮೆಂಟು ನಿಲ್ಲುತ್ತದೊ ಅಥವಾ ಈ ಪಕ್ಷಭೇದಗಳು ವಿಕೋಪಕ್ಕೆ ಹೋಗಿ ಪುನಶ್ಚ ಚುನಾವಣೆಯ ಪ್ರಸಂಗವು ಬಂದು ಬಿಡುತ್ತದೊ ಎಂಬುದೊಂದು ಪ್ರಶ್ನೆಯು ಬ್ರಿಟಿಷ್ ಸಾಮ್ರಾಜ್ಯದ ಮುಂದೆ ನಿಂತಿದೆ ಈ ಸಮಯದಲ್ಲಿ ವೃಥಾ ತರ್ಕವಿತರ್ಕಗಳನ್ನು ನಡಿಸುವ ಶ್ರಮವನ್ನು ಮಿದುಳಿಗೆ ಕೊಡುವುದಕ್ಕಿಂತ ಮೇಲಿನ ಪ್ರಶ್ನೆಯ ಭವಿತವ್ಯತೆಯು ಏನಾಗುತ್ತದೆ ಎಂಬುದನ್ನು ನಿರೀಕ್ಷಿಸುವ ತಾಳ್ಮೆಯನ್ನು ಧರಿಸುವುದೆ ಒಳ್ಳೆದೆಂದು ತೋರುತ್ತದೆ ಆದರೂ ವಿವಿಧ ಸ್ನೇಹಿತರ ಸಲುವಾಗಿ ವಿವಿಧ ತತ್ವಗಳಿಗನುಸಾರವಾಗಿ ವಿವಿಧ ಸಮಯದಲ್ಲಿ ವಿವಿಧ ಬಗೆಯಿಂದ ನಟಿಸಲುದ್ಯುಕ್ತರಾಗುವ ಮಿ ಜೋರ್ಜ ಪ್ರಧಾನರ ಸ್ಥಿತಿಯು ನಿಜವಾಗಿ ಅನುಕಂಪನೀಯವಾಗಿದೆ.

೮. ಈ ತಿಂಗಳ ಮದ್ರಾಸು ಪ್ರಾಂತಿಕ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ವಿದ್ಯಾಪ್ರಚಾರ ಮತ್ತು ಆರೋಗ್ಯರಕ್ಷಣೆಗೆ ಸಂಬಂಧಪಟ್ಟ ಠರಾವುಗಳೇ ವಿಶೇಷವಾಗಿದ್ದವು. ಚರ್ಚೆಗಳಲ್ಲಿ ಸರಕಾರಿ ಮೆಂಬರರು ಪ್ರಜಾಪ್ರತಿನಿಧಿಗಳ ಅಂಬೋಣಗಳನ್ನು ಶುಷ್ಕವಾದದಿಂದ ಖಂಡಿಸಿ ತಮ್ಮ ಪಾಂಡಿತ್ಯ ಮತ್ತು ವಿಶಿಷ್ಟ ಅನುಭವವನ್ನು ತೋರ್ಪಡಿಸಲು ಯತ್ನಿಸುವ ಬದಲಾಗಿ ಈ ಪ್ರತಿನಿಧಿಗಳ ಕೇಳಿಕೆಗಳನ್ನು ಜಾರಿಗೆ ತರುವ ವಿಷಯದಲ್ಲಿ ಈ ವೇದಿಕೆಯ ಏನು ಪದಾರ್ಥ ನಡೆದದ್ದು, ಅದನ್ನಾಗೆ ಜಾರಿಗೆ ತರಲು ಯಾವ ಅನನುಕೂಲತೆಗಳಿವೆ ಎಂಬುದನ್ನು ವ್ಯಕ್ತಗೊಳಿಸಲು ಶ್ರಮಪಟ್ಟಂತೆ ಕಾಣುವುದು. ಇಂಥ ಧೋರಣವು ಮುಂದೆ ಲೋಕನಿಯುಕ್ತ ಪ್ರತಿನಿಧಿಗಳೂ ಸರಕಾರದ ಕಡೆಯವರೂ ಪಕ್ಷಪರಪಕ್ಷವೆನ್ನದೆ ಅನನ್ಯಭಾವದಿಂದ ಸರಕಾರದ ರಥವನ್ನು ನೂಕಬೇಕಾಗಿದೆ ಎಂದು ವರಿಷ್ಠ ಕೌನ್ಸಿಲಿನಲ್ಲಿ ವೈಸರಾಯರು ಮಾಡಿದ ಭಾಷಣವನ್ನು ಅನುಕರಿಸುವಂತಿದೆ. ಮದ್ರಾಸು ಯೂನಿವರ್ಸಿಟಿಯು ಬರೆ ಪರೀಕ್ಷೆಯ ಭಾರವನ್ನು ಮಾತ್ರವೇ ವಹಿಸಿದರೆ ಸಾಲದು, ಅದರೊಂದಿಗೆ ಶಿಕ್ಷಣದ ಕರ್ತವ್ಯವನ್ನು ಕೂಡ ಕೈಕೊಳ್ಳಬೇಕು ಎಂದು ನಾಮದಾರ ವೆಂಕಟಪತಿರಾಜು ಇವರು ತಂದ ಠರಾವು ಹಿಂದೆ ನಾವು ಉಲ್ಲೇಖಿಸಿದ ಸೆಡ್ಲರ್ ಕಮ್ಮಿಷನ್‌ದವರ ಯೂನಿವರ್ಸಿಟಿ ವಿದ್ಯಾಭ್ಯಾಸದ ಸೂಚನೆಗಳನ್ನು ಅನುಕರಿಸುವುದರಿಂದ ಸರ್ವಸಮ್ಮತವಾಗಿಯೇ ಇರಬೇಕಾಗಿದೆ ಆದರೂ ನಾಮದಾರರು ಇದರೊಂದಿಗೆ ಆಂಧ್ರರಿಗೆ ಬೇರೆ ಒಂದು ಯೂನಿವರ್ಸಿಟಿಯನ್ನು ಏರ್ಪಡಿಸುವುದಕ್ಕೂ, ಈಗಿನ ಮದ್ರಾಸು ಯೂನಿವರ್ಸಿಟಿಯವರು ಶಿಕ್ಷಣದ ಜವಾಬದಾರಿಯನ್ನು ವಹಿಸಿಕೊಳ್ಳುವುದಕ್ಕೂ ಕೂಡಾ ೧೦ಲಕ್ಷ ರೂಪಾಯಿ ಹೆಚ್ಚಿಗೆ ವಿಂಗಡಿಸಿಡಬೇಕು ಎಂದು ಕೇಳುವಾಗ ಮದ್ರಾಸು ಯೂನಿವರ್ಸಿಟಿಯ ಪ್ರಶ್ನೆಗೆ ಒಂದು ಬಾಲವನ್ನು ಹಚ್ಚಿ ದೇಹಕ್ಕಿಂತಲೂ ಬಾಲದ ವರ್ಣನೆಯ ಕಡೆಗೆ ಮೆಂಬರರ ಮನಸ್ಸು ಸೆಳೆಯಲು ನೋಡಿದರು ದ್ರಾವಿಡ ಭಾಷೆಗಳು ಪಸರಿಸಿರುವ ಬೇರೆಬೇರೆ ಜಿಲ್ಲೆಗಳನ್ನು ಒಂದಾಗಿಸಿ, ತಮಿಳು ಕನ್ನಡ, ತೆಲುಗು, ಮಲೆಯಾಳ ಯೂನಿವರ್ಸಿಟಿಗಳನ್ನು ಮಾಡುವುದು ಯೋಗ್ಯವೆಂದು ನಮಗ ಕಂಡರೂ, ಈಗ ಇದ್ದ ಯೂನಿವರ್ಸಿಟಿಯಲ್ಲಿ ಅತಿ ಅಗತ್ಯವಾದ ಸುಧಾರಣೆಗಳಿಗೋಸ್ಕರ ಹಣ ತುಟ್ಟಿಯಾದಾಗ ದೇಹಕ್ಕಿಂತಲೂ ಬಾಲದ ವಿಸ್ತಾರ ಯಾಕೆ ಈಗ ಬೇಕಾಗಿದೆ ಎಂದು ಗೊತ್ತಾಗುವುದಿಲ್ಲ ಈಗ ಇದ್ದ ಯೂನಿವರ್ಸಿಟಿಯಲ್ಲ ಆಯಾಯ ದ್ರಾವಿಡ ಭಾಷೆಯನ್ನು ಪ್ರೋತ್ಸಾಹಗೊಳಿಸಲು ಉದ್ಯುಕ್ತರಾಗುವವರ ಸಂಖ್ಯೆಯನ್ನು ಏರಿಸಿ, ಬೇಕುಬೇಕಾದ ಉದ್ಗ್ರಂಥಗಳಿಗ ಕೈಕೊಟ್ಟು ಅನಂತರ ಭಾಷೆಗೊಂದು ಯೂನಿವರ್ಸಿಟಿಯನ್ನು ಮಾಡುವುದು ಸುಲಭವಲ್ಲವೆ!

೯ ಸೆಕಂಡರಿ ಸಾಲೆಗಳ ಕಟ್ಟಡಗಳನ್ನು ವಿಸ್ತರಿಸುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ೪ಲಕ್ಷ ರೂಪಾಯಿ ಸಹಾಯಧನವಾಗಿ ವಿಂಗಡಿಸಬೇಕೆಂದು ನಾಮದಾರ ಮಾಧವ ರಾಜರೂ, ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಬೆಜವಾಡ ಮತ್ತು ಗುಂಟೂರು ಜಿಲ್ಲೆಗಳಲ್ಲಿ ಸ್ಥಾಪಿಸಲಿಕ್ಕೆ ೩ಲಕ್ಷ ರೂಪಾಯಿ ವಿಂಗಡಿಸಬೇಕೆಂದು ನಾಮದಾರ ವೆಂಕಟಪ್ಪಯ್ಯನವರೂ ತಂದ ಠರಾವುಗಳನ್ನು ಅವರೇ ಹಿಂತೆಗೆದರು ಈ ಎರಡೂ ವಿಷಯಗಳಲ್ಲಿ ಸರಕಾರದವರು ವಿಚಾರ ನಡೆಸುತ್ತಿದ್ದಾರೆಂಬದು ತಿಳಿದುಬಂದದರಿಂದ ಠರಾವುಗಳು ಹಿಂತೆಗೆಯಲ್ಪಟ್ಟವು ಇದೇ ರೀತಿಯಲ್ಲಿ ಆಂಧ್ರ ಜಿಲ್ಲೆಗಳಲ್ಲಿ ಒಂದು ಎಗ್ರಿಕಲ್ಚರಲ್ ಕಾಲೇಜನ್ನೂ ಎಗ್ರಿಕಲ್ಚರಲ್ ಮಿಡ್ಲ್ ಸ್ಕೂಲುಗಳನ್ನೂ ತೆರೆಯಲಿಕ್ಕೂ ತಂದ ಠರಾವುಗಳ ಗತಿ ಇದೇ ಆಯಿತು ಈ ಬಗೆಯ ಸಾಲೆಗಳನ್ನು ತೆರೆಯುವುದಕ್ಕೆ ಸರಕಾರದವರು ಲಕ್ಷ್ಯ ಕೊಡಬೇಕಾದ್ದೇನೊ ವಾಸ್ತವವಾಗಿದೆ ಆದರೆ ಹಿಂದಿನ ಉಪವಾಸದಿಂದ ನ್ಯೆ ಸುಕ್ಕುವಿದ್ದಿದೆ ಎಂದು ಒಮ್ಮೆಲೆ ಪುಷ್ಟಿಯಾಗುವುದಕ್ಕೆ ಮಿತಿಮೀರಿ ತಿನ್ನಿಸಬೇಕೆಂದು ಆಸೆಪಡುವುದು ಕರ್ತವ್ಯದಕ್ಷತೆಯ ಸೂಚನೆಯಲ್ಲ. ಈಗಿನ ಎಗ್ರಿಕಲ್ಚರ್ ಕಾಲೇಜಿನಿಂದ ಹೊರಬಿದ್ದವರು ಸರಕಾರಿ ಹುದ್ದೆಗಳಗೋಸ್ಕರ ಹೋರಾಡುತ್ತಾರೆಯೇ ಅಲ್ಲದೆ ಕೃಷಿಕರಾಗಿ ತಮ್ಮ ಜ್ಞಾನದ ಫಲದಿಂದ ಕೃಷಿಸುಧಾರಣೆಯನ್ನು ತರಲು ಉದ್ಯುಕ್ತರಾಗಿಲ್ಲ ಕೈಗಾರಿಕ ಸಾಲೆಗಳ ಸ್ಥಿತಿಯಾದರೂ ಹೀಗೆಯೇ ಇದೆ ಪ್ರಾಥಮಿಕ ಶಿಕ್ಷಣದಲ್ಲಿ ಸರಿಯಾದ ಸುಧಾರಣ ಬಾರದೆ, ಮತ್ತು ಆ ಶಿಕ್ಷಣವು ಹಳ್ಳಿಪಳ್ಳಿಗಳಿಗೂ ಹಬ್ಬದೆ ಇನ್ನೂ ಹಿಂದೆ ಬಿದ್ದಿದೆ ಈಗಿನ ಶಿಕ್ಷಣವಂತೂ ತಮ್ಮತಮ್ಮ ಪಾರಂಪರ್ಯದ ವೃತ್ತಿಗಳ ಕಡಗ ತಾತ್ಸಾರವನ್ನು ಹುಟ್ಟಿಸಿ, ಕೃಷಿಕರಿಗೂ ಕೈಗಾರಿಕರಿಗೂ ಸರಕಾರ 'ಸರ್ವಿಸ್'ನ ಕಡಗೆ ಸೆಳೆಯುತ್ತಿದೆ ಅಂಥ ಧ್ಯೇಯವಿಘಟಕವಾದ ಶಿಕ್ಷಣವನ್ನು ಸರಿಗೊಳಿಸಿ ಅಲ್ಲಿಂದ ಬೇರೆಬೇರೆ ಬಗೆಯ ಶಿಲ್ಪಕಲಾಶಾಲೆಗಳೂ ಕೃಷಿಶಾಲೆಗಳೂ ಇವನ್ನು ಏರ್ಪಡಿಸಬೇಕಲ್ಲದೆ ಒಮ್ಮೆಲೆ ಕಾಲೇಜುಗಳನ್ನು ಏರ್ಪಡಿಸಿದರಿಂದ ಪುರುಷಾರ್ಥವೇನಾದೀತು ಎಂಬದನ್ನು ಮೆಂಬರರು ಪರ್ಯಾಲೋಚಿಸುವುದು ಯುಕ್ತವು ಇನ್ನೊಂದು ಮಾತೇನೆಂದರೆ ಇಂಥ ಕಲಾಶಾಲೆಗಳಲ್ಲಿ ಕಲಿಸುವ ಯೋಗ್ಯತೆಯ ಉಪಾಧ್ಯಾಯರನ್ನು ಸಂಪಾದಿಸುವುದೇ ಕಷ್ಟತರವಾಗಿದೆ ಅಂಥ ಕುಂದುಕವನ್ನು ಹೋಗಲಾಡಿಸುವುದಕ್ಕೆ ಈಗಿದ್ದ ಕಾಲೇಜುಗಳನ್ನೂ ಶಾಲೆಗಳನ್ನೂ ಉಪಯೋಗಿಸಿ ಅನಂತರ ಹೊಸ ಶಾಲೆಗಳಿಗೆ ಕೈಹಚ್ಚುವುದು ಯೋಗ್ಯ 'ಇದ್ದ ಮಕ್ಕಳಿಗೆ ಗಂಜಿ ಸಾಕಷ್ಟು ಇಲ್ಲದಿದ್ದಾಗ ಇನ್ನೂ ಕೊಡೆಂದು ಸದಾಶಿವನಿಗೆ ಮೊರೆ ಇಟ್ಟರೇನಾದೀತು'

ಮಂಗಳೂರು

ತಿದ್ದುಪಡಿಯ ಸೂಚನೆ.—ನಮ್ಮ ಫೆಬ್ರುವರಿ ೩ನೆ ತಾರೀಕಿನ ಸಂಚಿಕೆಯಲ್ಲಿ ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಕುಂಭಾಭಿಷೇಕ ವಿಷಯದಲ್ಲಿ ಪ್ರಕಟಿಸುವಾಗ "ಗೋವೆಯಿಂದ ಕನ್ಯಾಕುಮಾರಿ ವರೆಗೆ ಪಸರಿಸಿರುವ ಗೌಡ ಸಾರಸ್ವತ ಬ್ರಾಹ್ಮಣ ಜಾತಿ ವರ್ಗದವರ ಆರಾಧನೆಯ ವ ಅಧಿಕಾರದಲ್ಲಿರುವ ಪ್ರಸಿದ್ಧ ದೇವಾಲಯ" ಎಂಬಲ್ಲಿ "ಅಧಿಕಾರದಲ್ಲಿರುವ" ಎಂಬ ಮಾತು "ನ್ಯಾಯಕ್ಕೂ ಸತ್ಯಕ್ಕೂ ವಿರೋಧ" ಎಂದು ಸೂಚಿಸಿ ಮೇಲಿನ ತಪ್ಪನ್ನು ತಿದ್ದುಪಡಿಮಾಡಬೇಕೆಂತ ನಮಗೆ ಮ| ರಾ| ಮಂಜೇಶ್ವರ ಬಾಬ ಪೈಗಳ ಮಗ ಅನಂತರಾವ್ ಇವರು ಬರೆದಿರುವುದಲ್ಲದೆ ಆ ಆಕ್ಷೇಪವನ್ನು ಬಲಪಡಿಸುವುದಕ್ಕೆ ದಕ್ಷಿಣ ಕನ್ನಡಾ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಮೂಲನಂಬ್ರ ೩೯ನೆ ವ್ಯಾಜ್ಯದಲ್ಲಿ ಆದ ರಾಜಿಡಿಕ್ರಿಯ ಉತಾರನ್ನು ಪ್ರಕಟನೆಗೆ ನಮ್ಮ ಬಳಿಗೆ ಕಳುಹಿಸಿರುತ್ತಾರೆ.

ಕಳದ ಜನವರಿ ತಾರೀಕು ೨೮ರಲ್ಲಿ ಬಂಟರ ಯಾನೆ ನಾಡವರ ಸಭೆಯೊಂದು ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೂಡಿ ಬಂಟರ ಯಾನೆ ನಾಡವರ ಪರಸ್ಪರ ವ್ಯಾಪಾರ ಸಂಘ ಎಂಬ ಹೆಸರಿನ ಒಂದು ಸಂಘವು ಸ್ಥಾಪಿಸಬೇಕಾಗಿ ನಿಶ್ಚಯಿಸಿ ಸಂಘವನ್ನು ರಿಜಿಸ್ಟ್ರಿಮಾಡಿಸಬೇಕಾಗಿ ಕೊಟ್ಟ ಮನವಿ ಮೇರೆಗೆ ಇದು ರಿಜಿಸ್ಟ್ರಿಯಾಗಿರುತ್ತದೆ. ಸದರಿ ಸಂಘದ ಕೆಲಸವನ್ನು ಆರಂಭಿಸುವ ಬಗ್ಗೆ ಆಡಳಿತೆ ಕಮ್ಮಿಟಿಯನ್ನು ಆರಿಸಿ ಅಗತ್ಯವುಳ್ಳ ವಿಲೆವಾರಿಯನ್ನು ಮಾಡುವುದಕ್ಕೆ ಮತ್ತು ಇತರ ವಿಷಯಗಳ ಕುರಿತು ಮೇಲಿನ ಭವನದಲ್ಲಿ ಪುನಃ ಒಂದು ಸಭೆಯು ಈ ತಿಂಗಳ ತಾ|೨೯ನೇ ಆದಿತ್ಯವಾರ ೩ ಗಂಟೆಗೆ ಕೂಡಲಿಕ್ಕಿರುವುದು

ಶ್ರೀಕ್ಷೇತ್ರ ಗೋಕರ್ಣದಲ್ಲಿ ಬರುವ ಫಾಲ್ಗುಣ ಶುದ್ಧ ೧೦ಯು ರವಿವಾರ ದಿವಸ ಕೈವಲ್ಯ ಮಠದಲ್ಲಿ ಜಗತ್ಪಾವನವಾದ ಶ್ರೀ ಚಕ್ರವರ್ತೀಶ್ವರ ಶಿವಲಿಂಗದ ಪ್ರತಿಷ್ಠಾಪನ ವಿಧಿಯು ಆಗತಕ್ಕದ್ದಿದೆ ಈ ಅಪೂರ್ವ ಮಹೋತ್ಸವಕ್ಕೆ ಸಮಸ್ತ ಶಿಷ್ಯ ವೃಂದದವರಿಗೆ ಆಮಂತ್ರಣಾರ್ಥಕಸಪತ್ರವು ಶ್ರೀ ೧೦೮ ಗುರುಪಾದಗಳಿಂದ ಹೊರಟಿದೆ

ಮ ರಾ ರಾ ಬಿ ಆನಂದ ಬಾಳಿಗರು ಮುಲ್ಕಿಯ ಡಿಪ್ಯುಟಿ ತಹಶಿಲ್ದಾರರಾಗಿಯೂ ಮತ್ತು ಮ| ರಾ| ಕೋಟಿಕಾರ ಸುಬ್ಬರಾಯರು ಹಜೂರ್ ಹೆಡ್ ಎಕೌಂಟಾಂಟರಾಗಿಯೂ, ಮ| ರಾ| ಮುಲ್ಕಿ ಸುಬ್ಬರಾಯರು ಕುಂದಾಪುರ ತಾಲೂಕು ಹೆಡ್ ಎಕೌಂಟಾಂಟರಾಗಿಯೂ ನೇಮಿಸಲ್ಪಟ್ಟಿರುವರು

ಪೋಲೀಸ ಸಬ್ ಇನ್ಸ್‌ಪೆಕ್ಟರ ಮಿ ವಜೀರ ಖಾನಾರವರು ಶಂಕರನಾರಾಯಣದಿಂದ ಬೈಂದೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ ಮತ್ತು ಮ ರಾ ಆರೂರು ಸದಾಶಿವರಾಯರು ಶಂಕರನಾರಾಯಣಕ್ಕೆ ವರ್ಗಾಯಿಸಲ್ಪಟ್ಟಿರುತ್ತಾರ

ಇಲ್ಲಿಯ ಮಿಶನ್ ಹೈ ಸ್ಕೂಲಿನ ವರ್ಧಂತ್ಯುತ್ಸವವು ನಾಳೆ ನಾಯಂಕಾಲ ೬ 30 ಗಂಟೆಗೆ ರಾವ್‌ಬಹದ್ದೂರ್ ಸುಜೀರ ರಘುನಾಥಯ್ಯನವರ ಅಧ್ಯಕ್ಷತೆಯಲ್ಲಿ ಜರಗುವುದು

ಇಲ್ಲಿಯ ಮುನ್ಸಿಪಾಲಿಟಿಯವರು ಮೈದಾನಿನಲ್ಲಿ ಮಿಶನ್ ಕೋಪಿನ ಎದುರಿನ ಒಂದು ಭಾಗದಲ್ಲಿ ಕಟ್ಟಿಸಿದ ಟೆನಿಸ್ ಗ್ರೌಂಡಿನಲ್ಲಿ ಇದೇ ತಾರೀಕು ೧೬ರಿಂದ ಟೂರ್ನಮೆಂಟ್ ಟೆನಿಸ್ ಪಂದ್ಯಾಟಗಳು ಪ್ರಾರಂಭವಾಗಿವೆ ಈ ಪಂದ್ಯಾಟದಲ್ಲಿ ಈ ಜಿಲ್ಲೆಯವರೂ ಮಲಬಾರಿನವರೂ ಸ್ಪರ್ಧಿಸುವರು ಈ ಆಟಗಳು ಬರುವ ಮಾರ್ಚಿ ತಾರೀಕು ೩ರ ವರೇಗ ನಡಿಯುವವು. ಗೆದ್ದವರಿಗೆ ಬಹುಮಾನಕ್ಕಾಗಿ ಮೂರು ಬಟ್ಟಲುಗಳೂ ಮೆಡಲುಗಳೂ ತಯಾರಿಸಲ್ಪಟ್ಟಿರುವವಂತೆ

ಮೊಂಟಗ್ಯು ಚಮ್ಸಫರ್ಡ ಯೋಜನೆಯಂತೆ ಸದ್ಯದಲ್ಲೇ ಏರ್ಪಡಿಸಲಿಕ್ಕಿದ್ದ ಹೊಸ ನ್ಯಾಯವಿಧಾಯಕ ಸಭೆಯ ವೋಟರ ಪಟ್ಟಿಯನ್ನು ತಯಾರಿಸುವುದಕ್ಕೆ ಮೂರು ಮಂದಿ ಅಸಿಸ್ಟಾಂಟ ರಿಜಿಸ್ಟ್ರರೂ ಆರು ಮಂದಿ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರರೂ ನೇಮಕವಾಗಿದ್ದಾರೆ ಈ ಪೈಕಿ ಮ ರಾ ಬಿ ರಘುನಾಥಭಂಡಾರಿಗಳು ಕಾರ್ಕಳ ಕುಂದಾಪುರಕ್ಕೂ, ಮ ರಾ ಎಮ್ ಗಣೇಶರಾಯರು ಪುತ್ತೂರು ಕಾಸರಗೋಡಿಗೂ, ಮ ರಾ ಎನ್ ಕೃಷ್ಣಪ್ಪನವರು ಮಂಗಳೂರು ಉಡುಪಿಗೂ ಅಸಿಸ್ಟಾಂಟ ರಿಜಿಸ್ಟರರುಗಳಾಗಿರುವರು

ಪುತ್ತೂರು ತಾಲೂಕು ಬೋರ್ಡು ಮೆಂಬರರ ಸಭೆಯು ಇದೇ ಬರುವ ತಾರೀಕು ೨೮ನೇ ಶನಿವಾರ ಮಧ್ಯಾಹ್ನ ೧೨-೩೦ ಗಂಟೆಗ ಪುತ್ತೂರು ಡಿಪ್ಯುಟಿ ಕಲೆಕ್ಟರ ಆಫೀಸಿನಲ್ಲಿ ಕೂಡುವುದು.

ಇಲ್ಲಿಯ ರೋಮನ್ ಕೆಥೊಲಿಕರಿಂದ ಇತ್ತಲಾಗೆ ಸ್ಥಾಪಿಸಲ್ಪಟ್ಟಾದ ಕಥೋಲಿಕ ಕೋಒಪರೇಟಿವ್ ಯೂನಿಯನ್ನಿನ ವ್ಯಾಸಪ್ರೆಸಿಡೆಂಟರಾದ ಮಿ ಎಲ್. ಪಿ ಫೆರ್ನಾಂಡಿಸರು ಕೊಚನಾಡಕ್ಕೆ ಹೋಗಿ ಡಿರೆಕ್ಟರ್ ಅವ್ ಸಿವಿಲ್‌ಸಪ್ಲೆಯಸ್‌ರವರಿಂದ ೧೦೦೦ ಗೋಣಿ ಅಕ್ಕಿಯನ್ನು ಸದರಿ ಯೂನಿಯನ್ನಿನ ಬಗ್ಗೆ ಪಡೆದಿರುವರಾಗಿಯೂ ಈ ಅಕ್ಕಿಯು ಸದರಿ ಯೂನಿಯನ್ನಿನ ಮೆಂಬರರಿಗೆ ಮುಡಿಗೆ ರೂ ೮ರಂತೆ ಮಾರಲ್ಪಡುವುದಾಗಿಯೂ ತಿಳಿಯುತ್ತೇವೆ

ಕಳೆದ ತಾರೀಕು ೧೨ನೇ ಗುರುವಾರ ದಿನ ನಡೆದ ಕೋರ್ಟ ವಾರ್ಡ ಮುನ್ಸಿಪಲ್ ಕೌನ್ಸಿಲರ ಚುನಾವಣೆಯಲ್ಲಿ—ಮಿ ಪಾಸ್ಕಲ ಸೋಜರಿಗೆ ೨೫, ಮಿ ಯಮ್ ಆಲ್ವರಿಸರವರಿಗೆ ೧೪೧, ಮತ್ತು ಡಾಕ್ಟರ ಕೈಲಾಸರಿಗೆ ೧೧ ಈ ರೀತಿ ವೋಟುಗಳು ದೊರಕಿರುವವು.

ಮದ್ರಾಸು ಆದಿಪತ್ಯದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿಯನ್ನು ಸಾಗಿಸುವ ವಿಷಯದಲ್ಲಿ ಈ ವರೇಗೆ ಇದ್ದ ನಿರ್ಬಂಧಗಳೆಲ್ಲಾ ಇದೇ ಪೆಬ್ರವರಿ ತಾ. ೧೫ ರಿಂದ ತಪ್ಪಿಸಲ್ಪಟ್ಟು ಮದ್ರಾಸು ಆದಿಪತ್ಯದ ಯಾವ ಭಾಗದಿಂದಲೂ ಕೂಡಾ ಕೊಚ್ಚಿ ಮೈಸೂರು ಹೈದರಬಾದ್ ತಿರುವಾಂಕೂರು ಮೊದಲಾದ ಇತರ ಸ್ಥಳಗಳಿಗೆ ಅಕ್ಕಿ ಮತ್ತು ಇತರ ದಾನ್ಯಗಳನ್ನು ಸಾಗಿಸ ಕೊಡದೆಂಬ ನಿರ್ಬಂದವನ್ನು ಮದ್ರಾಸ ಸರಕಾರದವರು ಏರ್ಪಡಿಸಿದ್ದಾರಾಗಿ ತಿಳಿದುಬರುತ್ತದೆ.

ಕೆಲವು ಕಾಲದ ಹಿಂದೆ ಇಲ್ಲಿಯ ಡಿಪ್ಯುಟಿ ಕಲೆಕ್ಟರರಾಗಿದ್ದು ಈಗ ಪೆನ್ಶನ್ ಹೊಂದಿಕೊಂಡು ಮಲಬಾರಿನಲ್ಲಿದ್ದ ಖಾನ್ ಸಾಹೇಬ್ ಬಾಪು ಕುಂಞಾಯಿನ್‌ರವರು ಕಳದ ತಾ. ೧೧ನೇ ಬುಧವಾರ ಮೃತ್ಯುವಶರಾದರೆಂಬುದನ್ನು ತಿಳಿಸಲು ತುಂಬಾ ವಿಷಾದಪಡುತ್ತೇವೆ.

[illegible]

...ಅದರಿಂದ ದಯಾಳು ಪೋಲೀಸ್ ... ಈ ಬಗ್ಗೆ ... ನಂಬುತ್ತೇವೆ.

ಮದ್ರಾಸು ಪ್ರಾಂತಿಕ ಸರಕಾರದ ಜಮಾ ಖರ್ಚು.

೧೯೩೦—೩೧

(ಹಿಂದಿನ ಸಂಚಿಕೆಯಿಂದ ಮುಂದರಿಸಿದ್ದು)

ಲೋಕಲ್ ಬೋರ್ಡುಗಳು ಹೆದ್ದಾರಿಗಳನ್ನು ದುರುಸ್ತಾಗಿ ಇಡಲಿಕ್ಕೆ ಈ ವರೆಗೆ ವಹಿಸುತ್ತಿದ್ದ ಖರ್ಚು ಸಾಕಾಗಿಲ್ಲ, ಅದಕ್ಕೆ ಈ ಬೋರ್ಡುಗಳ ಬಳಿಯಲ್ಲಿ ಪ್ರವ್ಯಾಸ ಸಾಕಷ್ಟು ಇಲ್ಲ ಎಂಬ ಒಂದು ಪ್ರಶ್ನೆ ಸರಕಾರದ ದೃಷ್ಟಿಯ ಮುಂದೆ ಕೆಲವು ಕಾಲದಿಂದ ಇತ್ತು. ಕಳೆದ ಎರಡು ವರ್ಷಗಳಲ್ಲಿ ಸುಮಾರು ೩೬ ಲಕ್ಷ ರೂಪಾಯಿ ಸಹಾಯಧನವಾಗಿ ಪ್ರಾಂತಿಕ ಸರಕಾರದಿಂದ ಲೋಕಲ್ ಬೋರ್ಡುಗಳಿಗೆ ಕೊಡಲ್ಪಟ್ಟಿತು. ಆದರೂ ಈ ರೀತಿ ಅನಿಶ್ಚಯವಾದ ಸಹಾಯದಿಂದ ಹೆಚ್ಚಿನ ಉಪಕಾರವಿಲ್ಲ, ಅದಕ್ಕೆ ಬದಲಾಗಿ ಅಂಥಾ ಹೆದ್ದಾರಿಗಳನ್ನು ದುರುಸ್ತಾಗಿ ಇಡುವ ಖರ್ಚನ್ನು ತೀರಾ ಸರಕಾರದವರೇ ವಹಿಸಿಕೊಳ್ಳುವ ಉದ್ದೇಶದಿಂದ ಮುಂದಿನ ವರ್ಷಕ್ಕೆ ೩೬ ಲಕ್ಷ ರೂಪಾಯಿ ಬಿಂಗಡಿಸಿ ಇಟ್ಟಿರುವರು.

ನಿರಾಶ್ರಿತ ಜನಗಳಿಗೆ ಯಾವ ಬಗೆಯ ಸೌಕರ್ಯಗಳು ಬೇಕಾಗಿವೆ ಎಂದು ಗೊತ್ತು ಹಚ್ಚುವದಕ್ಕಾಗಿ ಮದ್ರಾಸು ಸರಕಾರದವರು ಹಂಗಾಮಿ ಒಂದು ಇಸಂ ಏರ್ಪಡಿಸಿ ಈ ನಿಬಂಧಿಯ ಮೂಲಕ ಸದರಿ ವಿಚಾರ ನಡಿಸುತ್ತಿದ್ದರು. ಆದರೆ ನಿರಾಶ್ರಿತ ಜನರು ಎಂಬ ಅರ್ಥವು ಬರೇ ಕಾಡು ನಿವಾಸಿಗಳು ಅಥವಾ ಪಂಚಮರು, ... ಎಂಬದಾಗಿಲ್ಲ. ಇದೇ ರೀತಿಯ ಆಶ್ರಯ ಬೇಕಾದ ಮಜೂರ ಜನರು ಕೆಲವರು ಇದ್ದಾರೆ, ಅಂಥವರು ಹೀನ ಸ್ಥಿತಿಯಲ್ಲಿರುವ ಕಾರಣ ಅವರನ್ನೂ ಉದ್ಧರಿಸುವ ನಿಮಿತ್ತ 'ಲೇಬರ್ ಕಮಿಶನರ್' ಎಂಬ ಹೊಸ ಇಸಂ ಈಗಲೇ ಸೃಷ್ಟಿಸಲ್ಪಟ್ಟಿದೆ. ಈ ಕಮಿಶನರು ಮಜೂರ ಜನರ ಸ್ಥಿತಿಯನ್ನು ಪರ್ಯಾಲೋಚಿಸಿ, ಅವರಿಗೆ ಸಹಕಾರ ಸಂಘ, ದಕ್ಷಿಣಾಸ್ತ್ರೀಗೆ ಸ್ಥಳ, ನಿವಾಸಕ್ಕೆ ಮನೆ, ದುಡಿತ, ಸೌಕರ್ಯ ಮುಂತಾದ್ದನ್ನು ಪೂರೈಸಿಕೊಡುವ ಉದ್ದೇಶದಿಂದ ನೇಮಿಸಲ್ಪಟ್ಟಿರುವದು. ಈ ಹೊಸ ಇಲಾಖೆಗೆ ರೆವಿನ್ಯೂ ಇಲಾಖೆಯಲ್ಲಿ ೫ ಲಕ್ಷ ರೂಪಾಯಿ, ಮತ್ತು ವಿದ್ಯಾ ಖಾತೆಯಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ೨ ಲಕ್ಷ ರೂಪಾಯಿ ಬಿಂಗಡಿಸಿ ಇಟ್ಟಿದೆ.

ವಿದ್ಯಾ ಇಲಾಖೆಯ ಅಂದಾಜು ಪಟ್ಟಿಯಲ್ಲಿ ಹಿಂದಿನ ವರ್ಷಗಳ ಖರ್ಚಿನ ಮುಖಾಬಿಲೆ ಇದೆ. ಅದನ್ನು ಓದಿದರೆ ವಿದ್ಯಾಖಾತೆಯ ಸಂಬಂಧ ೧೯೧೦—೧೧ ರಲ್ಲಿ ೧೫ ಲಕ್ಷ ೫೪ ಸಾವಿರ ಖರ್ಚು. ೧೯೨೧—೨೨ ರಲ್ಲಿ ೪೩ ಲಕ್ಷ ೪೯ ಸಾವಿರ, ೧೯೩೦—೩೧ ರಲ್ಲಿ ೧೫೪ ಲಕ್ಷ ೮೦ ಸಾವಿರ ರೂಪಾಯಿಗೆ ಏರಿದೆ ಎಂದು ಗೊತ್ತಾಗುವುದು. ಇಷ್ಟು ಸಮಯದಲ್ಲಿಯೂ ಇದರ ಸಂಬಂಧವಾದ ಪತ್ರವ್ಯವಹಾರ ನಡಿಸಲಿಕ್ಕೆ ಇಲಾಖೆಯ ಡಿರೆಕ್ಟರರಿಗೆ ಒಬ್ಬರೇ ಒಬ್ಬ ಡಿಪ್ಯೂಟಿ ಡೈರೆಕ್ಟರರು ಸಹಾಯಕರಾಗಿದ್ದು ಕೆಲಸದ ಧಾವತಿ ಹೆಚ್ಚಾಗಿ ಬಹಳ ತೊಡಕಾಯಿತು. ಇದಕ್ಕಾಗಿ ಸ್ತ್ರೀ ವಿದ್ಯಾಭ್ಯಾಸದ ಮೇಲ್ವಿಚಾರಣೆ ಬಗ್ಗೆ ಒಬ್ಬ ಡಿಪ್ಯೂಟಿ ಡೈರೆಕ್ಟ್ರೆಸ್, ಮತ್ತು ಇತರ ಕೆಲಸಗಳಿಗೋಸ್ಕರ ಒಬ್ಬ ಡಿಪ್ಯೂಟಿ ಡೈರೆಕ್ಟರ್ ಸಿಬಂದಿ ಹೆಚ್ಚಿಸುವ ಏರ್ಪಾಡಾಗಿದೆ.

ಹೊಸ ಟ್ರೈನಿಂಗ್ ಶಾಲೆಗಳನ್ನು ಏರ್ಪಡಿಸುವುದಕ್ಕೆ ೩ ಲಕ್ಷ ೬ ಸಾವಿರ ರೂಪಾಯಿ ಹೆಚ್ಚಿಗೆ ಬಿಂಗಡಿಸಿಟ್ಟಿದೆ. ಪ್ರಾಥಮಿಕ ಶಾಲೆಗಳ ಖರ್ಚು ೧೯೧೦—೧೧ ರಲ್ಲಿ ೩೬ ಲಕ್ಷ ೩ ಸಾವಿರ ಇದ್ದು ೧೯೩೦—೩೧ ರಲ್ಲಿ ೯೮ ಲಕ್ಷ ೧೩ ಸಾವಿರ ರೂಪಾಯಿಗೆ ಬಂದು ನಿಂತಿದೆ. ೧೯೩೦—೩೧ ರಲ್ಲಿ ಹೊಸ ಮಿಡ್ಲ್ ಸ್ಕೂಲುಗಳ ಬಗ್ಗೆ ೧½ ಲಕ್ಷ ರೂಪಾಯಿ ಹೆಚ್ಚಿಗೆ ಇಟ್ಟಿದೆ. ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಬಗ್ಗೆ ೩½ ಲಕ್ಷ ರೂಪಾಯಿ ಬಿಂಗಡಿಸಿದೆ.

ವೈದ್ಯ ಇಲಾಖೆಯಲ್ಲಿಯೂ ಖರ್ಚಿನ ಮಿತಿಯು ಏರುತ್ತಲೇ ಇದೆ ಎಂದು ನಾಮದಾರ ಟೊಡ್ಹಂಟರರು ಹೇಳುತ್ತಾರೆ. ೧೯೧೫—೧೬ನೆ ಇಸವಿಯಲ್ಲಿ ಈ ಇಲಾಖೆಯ ಖರ್ಚು ಬರೇ ೧೬ ಲಕ್ಷ ೭೭ ಸಾವಿರ ರೂಪಾಯಿ ಆಗಿತ್ತು, ೧೯೩೦—೩೧ನೆ ಇಸವಿಯಲ್ಲಿ ಅದು ೪೪ ಲಕ್ಷ ೫೪ ಸಾವಿರ ರೂಪಾಯಿ ಎಂಬಂತೆ ಅಜಮಾಯಿಷಿ ಮಾಡಲ್ಪಟ್ಟಿದೆ. ಇದಕ್ಕೆ ಮುಖ್ಯ ಕಾರಣಗಳು ಯಾವುವೆಂದರೆ, ಮದ್ರಾಸಿನ ರಾಯಪೇಟೆ ಆಸ್ಪತ್ರೆ ಮತ್ತು ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿರುವ ೩೦ ಆಸ್ಪತ್ರೆಗಳನ್ನು ಸರಕಾರದ ಕೈವಶಕ್ಕೆ ತೆಗೆದುಕೊಂಡು ಆಯಾ ಮುನ್ಸಿಪಾಲಿಟಿಗಳಿಗೆ ಈ ಮಟ್ಟಿನ ಖರ್ಚು ೩ ಲಕ್ಷ ರೂಪಾಯಿ ಉಳಿಸಿದಂತಾಯಿತು. ಇದಲ್ಲದೆ ಈ ಮೊದಲು ೧೯೧೫—೧೬ ರಲ್ಲಿ ೩ ಮೆಡಿಕಲ್ ಸ್ಕೂಲುಗಳು ಮಾತ್ರವೇ ಇದ್ದವು; ಅವುಗಳಲ್ಲಿ ೧೩೦ ಮಂದಿ ವಿದ್ಯಾರ್ಥಿಗಳು ಕಲಿಯುತಿದ್ದರು. ೧೯೧೯ ರಲ್ಲಿ ೫ ಶಾಲೆಗಳಲ್ಲಿ ೨೭೫ ಮಂದಿ ಕಲಿಯುತಿದ್ದರು. ಇನ್ನೂ ಗುಂಟೂರಿನಲ್ಲಿ ಒಂದು ಸ್ಕೂಲಿನ ಬಗ್ಗೆ ಕಟ್ಟಡದ ಏರ್ಪಾಡಾಗಿದೆ. ಈಗಿನ ಕ್ಷಯ ರೋಗಿಗಳಿಗೋಸ್ಕರ ಒಂದು ಆಸ್ಪತ್ರೆ ಮತ್ತು ಮದ್ರಾಸಿನ ಸ್ತ್ರೀಯರ ಆಸ್ಪತ್ರೆಯನ್ನು ಸರಕಾರದ ಆಡಳಿತೆಯೊಳಗೆ ತರುವ ಏರ್ಪಾಡುಗಳಿಗೋಸ್ಕರ ವಿಲೇವಾರಿ ನಡೆಯುತ್ತಿದೆ ಎಂದು ನಾವು ತಿಳಿಯುತ್ತೇವೆ.

ಆರೋಗ್ಯ ಇಲಾಖೆಯಲ್ಲಿ ಈ ಚಾಲ್ತಿ ವರ್ಷದ ತಿದ್ದುಪಡಿ ಅಂದಾಜು ಪಟ್ಟಿಯ ಮೇರೆಗೆ ೨೩ ಲಕ್ಷ ೧೯ ಸಾವಿರ ರೂಪಾಯಿ ಖರ್ಚು ಎಣಿಸಿದ್ದರೂ ಬರುವ ವರ್ಷಕ್ಕೆ ೩೪ ಲಕ್ಷ ೫೨ ಸಾವಿರ ರೂಪಾಯಿ ಈ ಬಗ್ಗೆ ಬಿಂಗಡಿಸಿಟ್ಟಿದೆ. ನೀರಿನ ಸರಬರಾಯಿ ಮುಂತಾದವುಗಳ ಬಗ್ಗೆ ಸ್ಥಾನಿಕ ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕಾಗಿಯೇ ಇದರ ಅಧಿಕಾಂಶವು ವಿನಿಯೋಗಿಸಲ್ಪಡುವುದು.

ಕೈಗಾರಿಕೆ ಇಲಾಖೆಯು ೧೯೧೪—೧೫ ರಲ್ಲಿಯೇ ಪ್ರತ್ಯೇಕವಾಗಿ ಏರ್ಪಟ್ಟಿತು. ಆ ಕಾಲದಲ್ಲಿ ಯುದ್ಧದ ಸಾಮಗ್ರಿಗಳ ಪೂರೈಕೆಗೋಸ್ಕರವೇ ಈ ಇಲಾಖೆಯು ಹೆಚ್ಚಿನ ಸಮಯವೂ ಸಾಮರ್ಥ್ಯವೂ ವ್ಯಯವಾದವು. ಆದರೂ ಆದರಿಂದ ನೂತನ ಕೈಗಾರಿಕೆಗಳು ತಲೆ ಎತ್ತುವಂತೆ ಆಸ್ಪದವಾಯಿತೆಂದು ಹೇಳಲು ಅಡ್ಡಿಯಿಲ್ಲ. ೧೯೧೬—೧೭ ರಲ್ಲಿ ಈ ಇಲಾಖೆಯ ವೆಚ್ಚವು ೩ ಲಕ್ಷ ೪೧ ಸಾವಿರ ರೂಪಾಯಿ; ೧೯೩೦—೩೧ ರಲ್ಲಿ ೮ ಲಕ್ಷ ೩೯ ಸಾವಿರ ರೂಪಾಯಿ ಈ ಇಲಾಖೆಗೋಸ್ಕರ ಬಿಂಗಡಿಸಿಟ್ಟಿದೆ.

ಸಹಕಾರಿ ಇಲಾಖೆಯ ಖರ್ಚು ಏರಿದಂತೆ ಸಂಘಗಳ ತಳ್ಕ ಪರಿಶೋಧನೆ ಮುಂತಾದುವುಗಳ ಖರ್ಚನ್ನು ಆಯಾ ಸಂಘಗಳ ಮೇಲೆಯೇ ಹಂಚಿ ಹಾಕಬೇಕೆಂಬ ಅಭಿಪ್ರಾಯವು ಸರಕಾರದವರಿಗೆ ಇದ್ದರೂ ಈಗಿನ ಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ, ಸಹಕಾರದ ಸಂಸ್ಥೆಗಳು ಇನ್ನೂ ಬಾಲ್ಯಾವಸ್ಥೆಯಲ್ಲಿ ಇದ್ದು ಅವುಗಳಿಗೆ ಆಗಾಗ ಸರಕಾರದ ಸಹಾಯವು ಅಗತ್ಯವಿದೆ, ಆ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುವಷ್ಟು ಆ ಸಂಘಗಳು ಶಕ್ತಿಯುತವಾಗಿಲ್ಲ ಎಂದು ರಿಜಿಸ್ಟ್ರಾರರು ಸರಕಾರದವರಿಗೆ ತೋರಿಸಿ...

[illegible]

...ಎಂದು ಸರಕಾರದವರು ತಿಳಿಸಿದ್ದಾರೆ ... ಇದನ್ನು ಶಾಶ್ವತವಾಗಿ ಪೂರೈಸುವುದಕ್ಕೆ ಸುಮಾರು ೭೦ ಲಕ್ಷ ರೂಪಾಯಿ ಬೇಕಾದೀತು, ಅದ್ದರಿಂದ ಪ್ರತಿ ವರ್ಷ ಈ ಬಗ್ಗೆ ಹಣವಿಡುವ ಅಗತ್ಯವಿದೆ, ಆ ವರೆಗೆ ಮನೆ ಬಾಡಿಗೆ ಕೊಡುವುದಕ್ಕೆ ಸಹ ಎಷ್ಟರ ಮಟ್ಟಿಗೆ ಅನುಕೂಲಿಸಬಹುದು ಎಂದು ಸರಕಾರವು ವಿಚಾರ ಮಾಡುತ್ತಿದೆ.

ನ್ಯಾಯವಿಚಾರದ ಖಾತೆಗೆ ೫ ಲಕ್ಷ ರೂಪಾಯಿ ಬರುವ ವರ್ಷಕ್ಕೆ ಹೆಚ್ಚಿಗೆ ಇಟ್ಟಿದ್ದರಲ್ಲಿ ಅಧಿಕಾಂಶವು ಸಂಬಳದ ದರಗಳನ್ನು ಏರಿಸುವುದರಲ್ಲಿ ವ್ಯಯವಾಗುವುದು ಮತ್ತು ತಂಜಾವೂರು, ಅನಂತಪುರ, ನೆಲ್ಲೂರು ಈ ಸ್ಥಳಗಳಲ್ಲಿ ಹೊಸ ಜಿಲ್ಲಾ ಕೋರ್ಟುಗಳನ್ನು ಸ್ಥಾಪಿಸಲಿಕ್ಕೆ ಸುಮಾರು ೧ ಲಕ್ಷ ರೂಪಾಯಿ ವೆಚ್ಚವಾದೀತು ಎಂದು ನಾಮದಾರರ ಅಭಿಪ್ರಾಯ.

ಆಡಳಿತೆಯ ಬದಲಾವಣೆಗಳು ಹೊಸ ಸುಧಾರಣೆ ಎಕ್ಟಿನ ಮೇರೆಗೆ ಆಗಲಿಕ್ಕಿರುವುದರಿಂದ ಆ ಬಗ್ಗೆ ಸುಮಾರು ೫ ಲಕ್ಷ ರೂಪಾಯಿ ಹೆಚ್ಚಿಗೆ ಬಿದ್ದೀತು ಎಂದು ಅಜಮಾಯಿಷಿ ಮಾಡಿದ್ದಾರೆ. ಅಗತ್ಯವಿರುವ ವಿಲೆವಾರಿಗಳನ್ನು ಮಾಡಲಿಕ್ಕೆ ಒಬ್ಬ ಸ್ಪೆಶಲ್ ಆಫೀಸರರನ್ನೂ ಸರಕಾರದವರು ನೇಮಕ ಮಾಡಿರುವರು.

ಹೀಗೆ ಬರುವ ವರ್ಷದ ಜಮೆ ಅಂದಾಜು ೧೬೭೩ ಲಕ್ಷ ೭೮ ಸಾವಿರ, ಖರ್ಚು ೧೭೨೮ ಲಕ್ಷ ೯ ಸಾವಿರ ರೂಪಾಯಿ, ಅಂದರೆ ವರ್ಷದ ಜಮೆಗಿಂತಲೂ ಖರ್ಚು ೧೧೫ ಲಕ್ಷ ೩೬ ಸಾವಿರ ರೂಪಾಯಿಗೆ ಹೆಚ್ಚಿದ ಕಾರಣ ಹಿಂದಿನ ಸಂಚಯದಿಂದ ಅದನ್ನು ಭರ್ತಿ ಮಾಡಿ ೧೯೩೦-೩೧ ವರ್ಷಾಂತ್ಯಕ್ಕೆ ೯೦ ಲಕ್ಷ ೬೩ ಸಾವಿರ ರೂಪಾಯಿ ಮಾತ್ರ ಶಿಲಕು ಉಳಿಯಬಹುದು ಎಂದು ತೋರುತ್ತದೆ. ಈ ವರೆಗೆ ಈ ಸಂಸ್ಥಾನದಲ್ಲಿ ಇಷ್ಟು ಜಾಸ್ತಿ ಖರ್ಚಿನ ಏರ್ಪಾಡನ್ನು ಮಾಡಿದ್ದಿಲ್ಲ, ಆದರೆ ಸಾಕಷ್ಟು ಸವಲತ್ತುಗಳನ್ನು ಕೊಡುವುದಕ್ಕೆ ಇನ್ನೂ ಹಣ ಬೇಕಾದೀತು ಎಂದು ನಾಮದಾರ ಟೊಡ್ಹಂಟರರು ಹೇಳಿ, ಇಷ್ಟಿದ್ದರೂ ಜನ ಸಂಖ್ಯೆಯ ದಾಮಾಶಯದಿಂದ ನೋಡಿದರೆ ವಿದ್ಯಾ ಇಲಾಖೆ, ವೈದ್ಯ ಇಲಾಖೆ ಮತ್ತು ಪೋಲೀಸ್ ಇಲಾಖೆಗಳಲ್ಲಿ ಮದ್ರಾಸು ಸರಕಾರವು ಮುಂಬಯಿಯ ಖರ್ಚಿನ ಅರ್ಧದಷ್ಟನ್ನು ಮಾಡಿಲ್ಲವೆಂದು ಹೇಳಿದರು. ದವಸಗಳ ಬೆಲೆ ಏರಿದ ಕಾರಣ ಸಂಬಳದ ದರಗಳನ್ನು ಏರಿಸುವ ಅಗತ್ಯವಿದೆ, ಆರೋಗ್ಯ ರಕ್ಷಣೆಗೋಸ್ಕರ ಇನ್ನೂ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ, ಜೈಲ ಕಮಿಟಿಯವರ ರಿಪೋರ್ಟು ಕೈಸೇರಿದೊಡನೆ ಜೈಲುಗಳ ಆಡಳಿತೆಯಲ್ಲಿ ಬದಲಾವಣೆಗಳನ್ನು ಮಾಡಬೇಕಾಗಬಹುದು, ಹಾಗೂ ಕೈಗಾರಿಕೆ, ಸಹಕಾರ, ಕೃಷಿ, ಮಜೂರ ಇಲಾಖೆ, ಫಿಶ್ಶರೀಸ್ ಮುಂತಾದ ಈಚೆಗೆ ಸ್ಥಾಪಿತವಾದ ಇಲಾಖೆಗಳಿಗೆ ಹಿಂದೆ ನಾವು ಕೈ ಹಿಂದೆಗೆದದ್ದನ್ನು ಭರ್ತಿ ಮಾಡುವುದಕ್ಕೆ ತುಂಬಾ ಹಣಬೇಕು, ಆದ್ದರಿಂದ ಸಂಸ್ಥಾನದ ಖರ್ಚು ಇನ್ನೂ ಏರಿಯೇ ಹೋಗುವುದು, ಆದಷ್ಟು ಜೋಕೆಯಿಂದಲೂ ಫಿನೆನ್ಸ್ ಕಮ್ಮಿಟಿಯ ಸಹಾಯದಿಂದಲೂ ಈಗಿನ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಅದೇ ಖರ್ಚಿನ ಉಚ್ಚಮಿತಿ ಅಥವಾ ಪರಮಾವಧಿ ಎಂದು ಭಾವಿಸಿದರೆ ಪ್ರಮಾದವಾದೀತು ಎಂದು ನಾಮದಾರ ಟೊಡ್ಹಂಟರ ಸಾಹೇಬರು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಸಹಕಾರ.

ಲೇಬರ್ ಯೂನಿಯನ್ನುಗಳು.

ಕಳೆದ ಡಿಸೆಂಬರ್ ೨೯ನೆ ತಾರೀಕಿಗೆ ಮದ್ರಾಸಿನಲ್ಲಿ ಜರಗಿದ ಪ್ರಾಂತಿಕ ಸಹಕಾರಿ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದ ಮದ್ರಾಸು ಹೈ ಕೋರ್ಟು ಜಡ್ಜ ನ್ಯಾಯಮೂರ್ತಿ ಟಿ. ವಿ. ಶೇಷಗಿರಿ ಅಯ್ಯರರು ಈ ಸಂಸ್ಥಾನದ ಮಜೂರರ ಪರವಾಗಿ ಈ ರೀತಿಯಾಗಿ ಹೇಳಿರುವರು.

"ಈ ಪ್ರದೇಶದ ಮಜೂರರು ತಂಡತಂಡವಾಗಿ ಅನ್ಯದೇಶಗಳಿಗೆ ಹೋಗಿ ಸೇರುವುದರಿಂದ ಇಲ್ಲಿ ಕೆಡುಕು ಬರುವುದೆಂದು ಈ ಸಂಸ್ಥಾನದ ಮಿರಾಸ್ ದಾರರು (ಜಮೀನುದಾರರು) ಸಂಶಯಚಿತ್ತರಾಗಿದ್ದಾರೆ. ವರ್ಷದಲ್ಲೆಲ್ಲಾ ಅಂಥ ಕೃಷಿ ಮಜೂರರಿಗೆ ದುಡಿತ ಸಿಕ್ಕುವುದಕ್ಕೆ ಏರ್ಪಾಡು ಇದ್ದರೆ ಅವರು ಆ ರೀತಿ ಅನ್ಯದೇಶಗಳಿಗೆ ಹೋಗದಂತೆ ತಡೆಯಬಹುದು ಸಾಧ್ಯವಿದೆ ಎಂದು ಇನ್ನೊಂದು ಕಡೆಯಲ್ಲಿ ನನ್ನ ಸೂಚನೆಯಿತ್ತು. ಕೃಷಿಕರ ಸಹಕಾರಿ ಸಂಘಗಳಲ್ಲಿ ಇಂಥ ಮಜೂರರನ್ನು ಮೆಂಬರರಾಗಿ ಮಾಡಿ ಗೌರವಾಸ್ಪದವಾದ ಮತ್ತು ಮನುಷ್ಯನಿಗೆ ಗುಲಾಮಗಿರಿಯ ರೀತಿಯ ದುಡಿತವನ್ನು ಅವರು ಮಾಡಿಕೊಳ್ಳುವಂತೆ ಉಪಕ್ರಮಿಸಿದರೆ ಅವರು ತಮ್ಮ ಹುಟ್ಟಿ ಬೆಳೆದ ದೇಶವನ್ನು ಬಿಟ್ಟು ಹೋಗಲಾರರು. ಇಂಥವರ ಗುಣನಡತೆಯನ್ನು ಆಧರಿಸಿ ಸಾಲಕೊಡಬೇಕು, ಮತ್ತು ಜೀನರಾದ ನಿರ್ದಯರಾದ ಧನಿಕರ ಕೈಯಿಂದ ಅವರನ್ನು ತಪ್ಪಿಸಬೇಕು. ಈ ವಿಷಯದಲ್ಲಿ ಮದ್ರಾಸು ಸೋಶಿಯಲ್ ಸರ್ವಿಸ್ ಲೀಗಿನವರು ಸ್ವಲ್ಪ ಸಾಹಸಮಾಡಿದ್ದಾರೆ. ಕೆಲವು ಕಡೆಗಳಲ್ಲಿ ನಿರಾಶ್ರಿತ ಜನರಿಗೆ ಗುಡಿಗುಡಿಸಲುಗಳನ್ನು ಕಟ್ಟಿಸಿಕೊಡುವುದಕ್ಕೂ ಒಳ್ಳೆ ಅಶನವಸನಾದಿಗಳನ್ನು ಒದಗಿಸಲಿಕ್ಕೂ ಸಾಧ್ಯವಾಗಿದೆ; ಅಷ್ಟೇ ಈ ಜನರು ಮನ್ನಣೆಗಳಿಂದ ಪಾರಾಗಲಿಕ್ಕೆ ಈ ಮೂಲಕ ಪ್ರಯತ್ನವೂ ನಡೆಯಿತು."

ಈ ಮಾತುಗಳಿಂದ ಮಜೂರರ ಉದ್ಧರಣ ಕಾರ್ಯವು ಈಗ ಅಲ್ಲಲ್ಲಿ ಪ್ರಜಾಮುಖಂಡರ ಲಕ್ಷ್ಯಕ್ಕೆ ಬಂದಿದೆ ಎಂದು ಗೊತ್ತಾಗುವದು. ಮುಂಬಯಿ ಶಹರಿನಲ್ಲಿ ಕೆಲವು ವರ್ಷಗಳಿಂದಲೂ ಗಿರಣಿ ಮಜೂರರ ಸಹಕಾರಿ ಸಂಘಗಳನ್ನು ಏರ್ಪಡಿಸುವುದಕ್ಕೆ "ಸರ್ವೆಂಟ್ಸ್ ಒಫ್ ಇಂಡಿಯಾ" ಸೊಸೈಟಿಯ ಮೆಂಬರರಾದ ಶ್ರೀಯುತ ಜಿ. ಕೆ. ದೇವಧರ ಎಂಬವರು ಯತ್ನಿಸುತ್ತಲಿದ್ದಾರೆ. ಮಜೂರರ ಸ್ಥಿತಿಯು ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲ, ಇತರ ದೇಶಗಳಲ್ಲಿಯೂ ಹೀನವಾಗಿದೆ ಎಂಬದು ಕಾಣುತ್ತಿದೆ. ಆದರೆ ಅನ್ಯ ದೇಶಗಳಲ್ಲಿ ಜನರೊಳಗೆ ವ್ಯವಸ್ಥೆಯ ಕ್ರಮದ ಜ್ಞಾನವು ಬಲವಾಗಿದ್ದು ಮಜೂರರೇ ತಮ್ಮ ಸುಧಾರಣೆಯ ಕೆಲಸಕ್ಕೋಸ್ಕರ ಜತೆಕೂಡಿ ಹೋರಾಡುತ್ತಿದ್ದಾರೆ. ಇಲ್ಲಿ ಅಂಥ ಸಂಸ್ಥೆಗಳು ಅಪರೂಪವಾಗಿ ದೊಡ್ಡ ಶಹರುಗಳಲ್ಲಿ ಎದ್ದಿವೆ. ಅಂತು ಹಳ್ಳಿಯ ಈ ಬಗೆಯ ಮಜೂರರ ಪರಿಸ್ಥಿತಿಯ ಸುಧಾರಣೆಯ ಕೆಲಸವು ಇನ್ನೂ ವ್ಯವಸ್ಥೆಗೆ ಬಂದಿಲ್ಲ. ಮದ್ರಾಸು ಪ್ರಾಂತಿಕ ಸರಕಾರದವರು ತಂಜಾವೂರು ಮೊದಲಾದ ಜಿಲ್ಲೆಗಳ ಕೃಷಿಮಜೂರರ — ಮುಖ್ಯವಾಗಿ ನಿರಾಶ್ರಿತ ಜನರ ಹಿತಕ್ಕೋಸ್ಕರ ಯಾವ ಸವಲತ್ತುಗಳನ್ನು ಕೊಡಬೇಕು ಎಂದು ಗೊತ್ತುಹಚ್ಚುವದಕ್ಕೋಸ್ಕರ ಒಬ್ಬ ಸ್ಪೆಶಲ್ ಆಫೀಸರರನ್ನು ನೇಮಿಸಿದ್ದಲ್ಲದೆ ಈ ಜನರಿಗೆ ಸರಕಾರಿ ಅಥವಾ ಖಾಸಗಿ ಸ್ಥಳಗಳಿಂದ ಗುಡಿಗುಡಿಸಲುಗಳಿಗೆ ಅನುಕೂಲವಾದ ಸ್ಥಳಗಳನ್ನು ಬಿಂಗಡಿಸಿ ಕೊಡವೇಕೆಂದು ಯತ್ನಿಸುತ್ತಿದ್ದಾರೆ. ಈ ದೇಶದಲ್ಲಿ ಈ ಬಡಜನಗಳಿಗೆ ಕೆಲಸವು ದೊರೆವ...

[illegible]

...ಆಸ್ಪತ್ರೆಗಳು ... ದಿವಸಗಳಲ್ಲಿಯೂ ಕೆಲಸ ಸರಾಗವಾಗಿ ಸಿಗದಿದ್ದರೆ ಈ ಜನಗಳ ಉಪಜೀವನ ಸಾಗದು. ಅದ್ದರಿಂದ ಅವರು ಸಾಲಕ್ಕೆ ಹೋಗಿ ಧನಿಕರ ಅಡಿಯಾಳಾಗುತ್ತಾರೆ.

(ಮುಂದೆ ಸಾಗುವುದು.)

ವಿಟ್ಲದಲ್ಲಿ ಜಮಾಬಂದಿ.

ಇದೇ ಕಳೆದ ಜನವರಿ ತಿಂಗಳ ತಾರೀಕು ೩೧ರಲ್ಲು ವಿಟ್ಲದಲ್ಲಿ ನಡೆದ ಜಮಾಬಂದಿ ಸಮಯ ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರ ದೊರೆಗಳವರ ಮುಂದೆ ರೈತ ಸಭೆಯಾದ ಕಚೇರಿಯನ್ನು ಕೂಡಿಸಲಾಗಿತ್ತು. ಈ ಸಭೆಯಲ್ಲಿ ಮ. ರಾ. ರಾ. ವಿಟ್ಲ ಅರಸರಾದ ನರಸಿಂಹರಾಜರು, ಮತ್ತು ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟು ಮ. ರಾ. ರಾ. ಬಿ. ರಾಮರಾಯರು, ಹಜೂರು ಶಿರಸ್ತೆದಾರ ಮ. ರಾ. ರಾ. ಯಂ. ಅಚ್ಚುತ್ಯಯ್ಯನವರೂ — ಉಪ್ಪಿನಂಗಡಿ ತಾಲೂಕು ತಹಸಿಲದಾರ ಮ. ರಾ. ರಾ. ಬಿ. ಕೃಷ್ಣಾಚಾರ್ಯರು, ದಕ್ಷಿಣಕನ್ನಡ ಜಿಲ್ಲಾ ವ್ಯವಸಾಯ ಇಲಾಖೆಯ ಡೆಮೊನ್ಸ್ಟ್ರೇಟರರು, ಮ. ರಾ. ಕೆ. ಟಿ. ಆಳ್ವರು, ವಿಟ್ಲ ಸಬ್ ರಿಜಿಸ್ಟ್ರಾರ ಮಿಸ್ಟರ ಯಫ್. ಸೋನ್ಸರು, ಮ. ರಾ. ರಾ. ವಿ. ರಾಜಲಕ್ಷ್ಮೀನಾಥ ಸ್ವಾಮಿಯವರು, ಇತರ ಕೆಲವು ಗೃಹಸ್ಥರು ವ ರೈತರು ಸಹಾ ಹಾಜರಿದ್ದರು, ಆಗ್ಯೆ ರೈತರು ಹೇಳಿಕೊಂಡ ಹಾಲಹವಾಲಿಗಳಿಗೆ ಈ ಕೆಳಗಿನ ಉತ್ತರಗಳು ದೊರಕಿದವು.

೧. ಪುತ್ತೂರು ಸ್ಟೇಶನಿನ ಕಾಯಮು ರಿಪೋರ್ಟುಗಳ ಪೈಕಿ ೩೦ರಲ್ಲಿ ೨ ಪಾಲು ವಿಟ್ಲ ಸರಹದ್ದಿನ ಗ್ರಾಮಗಳಲ್ಲಿ ಉಂಟಾಗುವ ತಕ್ರಾರುಗಳ ಬಾಬಿನಲ್ಲಿ ಆಗುವುದರಿಂದ ಸದರಿ ಗ್ರಾಮಗಳಿಂದ ಪುತ್ತೂರು ಸ್ಟೇಶನಿಗೆ ರಿಪೋರ್ಟು ರವಾನಿಸಿ, ಅಲ್ಲಿಂದ ಪೋಲಿಸಿನವರು ಬಂದು ತನಿಕೆ ನಡಿಸೂದಕ್ಕೆ ದೇರಿಯಾಗುವ ಕಾರಣದಿಂದ ವಿಟ್ಲದಲ್ಲಿ ಪ್ರತ್ಯೇಕ ಇರುವ ಔಟ ಪೋಸ್ಟಿನ ಬದಲಾಗಿ ಒಂದು ಪಕ್ಕಾ ಪೋಲಿಸ ಸ್ಟೇಶನ ಇಡಬೇಕಾಗಿ ಜ್ಯಾಹೀರುಮಾಡಿಕೊಂಡದ್ದಕ್ಕೆ, ಈ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪೋಲಿಸ ಸುಪರಿಂಟೆಂಡೆಂಟ ದೊರೆಗಳವರ ಕೂಡೆ ಆಲೋಚಿಸಿ ಹುಕುಂ ಮಾಡಲಾಗುವುದೆಂದು ಕಲೆಕ್ಟರ ದೊರೆಗಳವರು ಅಪ್ಪಣೆಕೊಟ್ಟರು.

೨. ವಿಟ್ಲದಲ್ಲಿರುವ ೩ ಸಹಕಾರಿ ಸಂಘಗಳ ವ ಇತರ ಜನರ ಇನ್ನು ಬೆನ್ನ — ಸೇವಿಂಗ್ ಬೇಂಕ ವಗೈರೆ ಲೇವಾದೇವಿಗಳ ಬಗ್ಗೆ ಸಬ್ ಪೋಸ್ಟಾಫೀಸು ಇಲ್ಲದೆ ಇರುವ ಕಾರಣದಿಂದ ಈಗ ಇರುವ ಬ್ರೇಂಚ್ ಪೋಸ್ಟಾಫೀಸನ್ನು ಸಬ್ ಪೋಸ್ಟಾಫೀಸಾಗಿ ಮಾಡಬೇಕಾಗಿಯೂ ಟಪ್ಪಾಲ ಬಟ್ವಾಡೆ ಟ್ರಂಕ್ ಟೌನ ದಿವಸ ಬಗ್ಗೆ ಒಬ್ಬ ಪೇದೆಯನ್ನು ಇಡಬೇಕಾಗಿಯೂ ಜ್ಯಾಹೀರು ಮಾಡಿಕೊಂಡದ್ದಕ್ಕೆ ಕೋ-ಓಪರೇಟಿವ್ ಸಂಘದವರು ಈ ಬಾಬಿನಲ್ಲಿ ಕೋ-ಓಪರೇಟಿವ್ ಅಸಿಸ್ಟೆಂಟ ರಿಜಿಸ್ಟ್ರಾರರ ಮುಖಾಂತ್ರ ಅರ್ಜಿ ಬರಕೊಂಡಲ್ಲಿ ಈ ವಿಷಯದಲ್ಲಿ ತಕ್ಕ ವಿಚಾರಣೆ ಮಾಡೋಣಾಗುವುದುಂಟೆಂದು ಉತ್ತರ ದೊರೆಯಿತು.

೩. ರಿಜರ್ವ ಕಾಡುಗಳಿಂದ ಸಪ್ಪು ಕಟ್ಟಿಗೆ ಸಾಗುವಳಿ ಉಪಯೋಗದ ಬಗ್ಗೆ ತೆಗೆಯಲಿಕ್ಕೆ ಬಿಡಬೇಕಾಗಿ ಹೇಳಿಕೊಂಡದ್ದಕ್ಕೆ ಗ್ರಾಮದ ಕೆಲವು ಮುಖ್ಯ ಗ್ರಾಮಸ್ಥರ ಜವಾಬ್ದಾರಿಗೆ ಒಳಪಟ್ಟು ತೆಗೆಯಬಹುದಾಗಿ ಸುಳ್ಯ ಕಾನ್ಫರೆನ್ಸಿನಲ್ಲಿ ನಿಷ್ಕರ್ಷೆಯಾದ ಸಂಗತಿ ತಿಳಿಸೋಣಾಯಿತು.

೪. ರಿಜರ್ವ ಕಾಡಿನಿಂದ ಮನೆ ಹುಲ್ಲು ತೆಗೆಯಬಹುದಾಗಿ ಹುಕುಂ ಇದ್ದರೂ ಕಾಡಿನ ಒಳಗೆ ಕತ್ತಿ ತೆಗೆದುಕೊಂಡು ಹೋಗುವುದು ತಕ್ರಾರಾಗುವುದರಿಂದ ಹುಲ್ಲು ಕೆಗಿಯಲಿಕ್ಕೆ ಕತ್ತಿಯಲ್ಲದೆ ಉಪಾಯವಿಲ್ಲದದರಿಂದ ಕತ್ತಿ ತೆಗೆದುಕೊಂಡು ಹೋಗಲಿಕ್ಕೆ ಬಿಡಬೇಕಾಗಿ ಜ್ಯಾಹೀರುಮಾಡಿಕೊಂಡದ್ದಕ್ಕೆ ಮನೆಹುಲ್ಲು ಕೆಗಿಯುವ ಹಲ್ಲು ಇರುವ ಕತ್ತಿಯನ್ನು ತೆಗೆದುಕೊಂಡು ಹೋಗುವಲ್ಲಿ ಯಾವ ಆತಂಕವಿಲ್ಲವೆಂತ ಕಲೆಕ್ಟರ ದೊರೆಗಳವರ ಅಪ್ಪಣೆಯಾಯಿತು.

೫. ರಿಜರ್ವ ಕಾಡಿನಲ್ಲಿರುವಂಥಾ ಕಾಡುಮೃಗಗಳ ಧೆಸೆಯಿಂದ ಪೈರು ನಾಶವಾಗುವ ಕಾರಣ ಆಗಾಗ್ಗೆ ಶಿಕಾರಿಗಳನ್ನು ಏರ್ಪಡಿಸಬೇಕಾಗಿ ಹೇಳಿಕೊಂಡದ್ದಕ್ಕೆ ತಿಂಗಳಿಗೆ ೨ ಸರ್ತಿ ಕಾಡು ಬಡಿದು ಕೊಲ್ಲಬಹುದಾದ ಮೃಗಗಳನ್ನು — ಫೋರೆಸ್ಟ್ ಗಾರ್ಡರನ್ನು ಇಟ್ಟುಕೊಂಡು ಶಿಕಾರಿ ಮಾಡಬಹುದೆಂತ ಈ ಮುಂಚೆ ಸುಳ್ಯ ಕಾನ್ಫರೆನ್ಸಿನಲ್ಲಿ ನಿಶ್ಚಯವಾದ ಸಂಗತಿಯನ್ನು ತಿಳಿಸೋಣಾಯಿತು.

೬. ರಿಜರ್ವ ಕಾಡಿನಿಂದ ನೀರು ಕಣಿಗಳಿಂದ ಹರಿದು ಬರುವ ಮನಮೂಲ್ ಸ್ಟ್ರೀಮಿನ ಧಾರೆಯನ್ನು ಸರಿಪಡಿಸಿ ನೀರು ಸರಿಯಾಗಿ ಗದ್ದೆಗಳಿಗೆ ಬರುವಂತೆ ನೀರು ಹಣಿಗಳನ್ನು ದುರುಸ್ತಿಮಾಡಿ ನೀರು ತಂದುಕೊಳ್ಳಲಿಕ್ಕೆ ಬೇಸಾಯಗಾರರಿಗೆ ಅಪ್ಪಣೆಕೊಡಬೇಕಾಗಿ ಹೇಳಿಕೊಂಡದ್ದಕ್ಕೆ ಈ ಬಾಬಿನಲ್ಲಿ ಸುಳ್ಯ ಕಾನ್ಫರೆನ್ಸಿನಲ್ಲಿ ಸ್ಥಿರ ಹಕ್ಕು ಬೇಕಾದ ಬೇಸಾಯಗಾರರು ಆ ಹಕ್ಕನ್ನು ವರ್ಷ ೧ಕ್ಕೆ ರೂಪಾಯಿ ಒಂದು ಯಾ ೧—೮—೦ಕ್ಕೆ ಗೇಣಿಗೆ ಪಡಕೊಂಡಲ್ಲಿ ಫೋರೆಸ್ಟ್ ಇಲಾಖೆಯವರು ಆಕ್ಷೇಪಿಸಲಿಕ್ಕಿಲ್ಲವೆಂದು ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರರು ಕೊಟ್ಟ ಉತ್ತರವನ್ನು ತಿಳಿಸೋಣಾಯಿತು.

೭. ರಿಜರ್ವ ಕಾಡಿನಲ್ಲಿ ಜಾನುವಾರುಗಳನ್ನು ಫೀಸುವಸೂಲಿಯಿಂದ ಮೇಯಿಸಲಿಕ್ಕೆ ಬಿಡಬೇಕಾಗಿ ಹೇಳಿಕೊಂಡದ್ದಕ್ಕೆ ಫಾರೆಸ್ಟ್ ಪಂಚಾಯ್ತಗಳನ್ನು ಜನರು ಏರ್ಪಡಿಸ ತಿಳಿಸಿದ್ದಲ್ಲಿ ಗೋಚರಾದಿಗೆ ವಸೂಲ ಮಾಡುವಂಥಾ ಫೀಸನ್ನು ಪಂಚಾಯತದಾರರ ಮೇಲ್ವಿಚಾರದಲ್ಲಿ ರಿಜರ್ವ ಕಾಡಿಗೆ ಬೆಂಕಿ ವಗೈರೆ ತಾಗದೆ ವ ಇತರ ಯಾವ ತಕ್ರಾರುಗಳು ನಡಿಯದೆ ಇದ್ದಲ್ಲಿ ಪರಿಶೀಲಿಸಿ ಮಾಡಲಾಗಿವೆಂದು ... ಗವರ್ನಮೆಂಟು ಹುಕುಮಿನ ಸಂಗತಿಯನ್ನು ತಿಳಿಸಲಾಯಿತು.

೮. ಬಡಕೊಳಿಯವರು ವ ಹೊಲೆಯರು ಕಾಡಿನಿಂದ ತರುವ ಕಟ್ಟಿಗೆ ಹೊರೆಗಳಿಗೆ ಹೊರೆ ಒಂದರ ೩ ಪೈ ಪ್ರಕಾರ ಸುಂಕವು ವಸೂಲು ಮಾಡುವುದರಿಂದ ಅವರು ಹೆಚ್ಚಿನ ಸಂಕಷ್ಟಗಳನ್ನು ಪಡೆಯುವುದರಿಂದ ಟ್ರಾನ್ಸ್ಪೋರ್ಟ ಕಂಟ್ರಾಕ್ಟನ್ನು ರದ್ದು ಪಡಿಸಬೇಕಾಗಿ ಜ್ಯಾಹೀರುಮಾಡಿಕೊಂಡದ್ದಕ್ಕೆ ಅದನ್ನು ರದ್ದುಮಾಡಿದಾಗ್ಯೂ ಕಟ್ಟಿಗೆ ಮಾರಾಟಕ್ಕೆ ತರುವಂಥಾ ಬಡಕೂಲಿ ಆಳುಗಳಿಗೆ ಅದರಿಂದ ಯಾವ ತರದ ಪ್ರಯೋಜನವು ಸಿಕ್ಕಲಿಕ್ಕಿಲ್ಲವೆಂಬ ಸಂಗತಿಯಿಂದ ಈ ಜ್ಯಾಹೀರಾತು ಅಂಗೀಕರಿಸೋಣಾಗಲಿಲ್ಲ.

೯. ವಿಟ್ಲದಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕಾಗಿ ಜ್ಯಾಹೀರು ಮಾಡಿದ್ದಕ್ಕೆ ತಾಲೂಕು ಬೋರ್ಡಿನವರಿಗೆ ಹಣದ ಅನಾನುಕೂಲತೆ ಸಂಬಂಧ ತತ್ಕಾಲ ಸಾಧ್ಯವಿರುವುದಿಲ್ಲದರಿಂದ ಗ್ರಾಮಸ್ಥರು ವಂತಿಗೆಯಿಂದ ಕಟ್ಟೋಣವನ್ನು ಕಟ್ಟಿಸಿ ಕೆಲವು ಹಣವನ್ನು ಸಹಾಯಾರ್ಥವಾಗಿ ಬೋರ್ಡಿನವರಿಗೆ ಒಪ್ಪಿಸಿ ಕೊಟ್ಟಲ್ಲಿ ನಂತರ ಮುಂದಿನ ಏರ್ಪಾಡನ್ನು ತಾಲೂಕುಬೋರ್ಡಿನವರು ಮಾಡುವರೆ ಆಲೋಚಿಸಬಹುದೆಂತ ತಾಲೂಕುಬೋರ್ಡ ಪ್ರೆಸಿಡೆಂಟರ ಮುಖಾಂತರ ಉತ್ತರವನ್ನು ಕೊಡಿಸೋಣಾಯಿತು.

೧೧. [illegible] ಹೇಳಿಕೊಂಡದ್ದಕ್ಕೆ [illegible] ಉತ್ತರ ದೊರೆಯಿತು.

೧೧. [illegible] ಹೇಳಿಕೊಂಡದ್ದಕ್ಕೆ [illegible] ತಾಲೂಕು ಬೋರ್ಡ್ ಪ್ರೆಸಿಡೆಂಟರ ಮುಖಾಂತರ ಉತ್ತರ ಕೊಡಿಸೋಣಾಯಿತು.

೧೩. ಪ್ರಕೃತ ಶಾಲೆಗಳಲ್ಲಿದ್ದ ಪ್ರತಿಯೊಂದು ಗ್ರಾಮಗಳಲ್ಲಿ ಬೋರ್ಡ್ ಶಾಲೆಗಳನ್ನು [illegible] ತಾಲೂಕು ಬೋರ್ಡ್ ಪ್ರೆಸಿಡೆಂಟರ ಮುಖಾಂತರ ಉತ್ತರವನ್ನು ದಯಪಾಲಿಸಿದರು.

೧೪. [illegible] ತಾಲೂಕು ಬೋರ್ಡ್ ಪ್ರೆಸಿಡೆಂಟರ ಮುಖಾಂತರ ಉತ್ತರ ದೊರೆಯಿತು.

೧೫. [illegible] ಹೇಳಿಕೊಂಡದ್ದಕ್ಕೆ [illegible] ತಿಳಿಸೋಣಾಯಿತು.

೧೬. [illegible] ಉತ್ತರವನ್ನು ಕೊಟ್ಟರು.

೧೭. [illegible] ಉತ್ತರ ಸಿಕ್ಕಿತು.

೧೮. [illegible] ವರದಿ [illegible] ನಂತರ ಸಭೆಯು ಮುಕ್ತಾಯವಾಯಿತು.

ಕಾಸರಗೋಡು ಹ್ಯಾಯ್ ಸ್ಕೂಲ್ ಫಂಡು.

ಕಾಸರಗೋಡು ತಾಲೂಕು [illegible] ಹ್ಯಾಯ್ ಸ್ಕೂಲ್ [illegible] ರಾವ್ ಬಹದ್ದೂರ್ [illegible] ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ [illegible] ವಕೀಲ ಕೆ. [illegible] ರೂ. ೨,೦೦೦ [illegible] ಹೈಸ್ಕೂಲ್ [illegible] ೧೦೦೦೦–೦–೦ [illegible]

ಕಾಸರಗೋಡು ಹೈಸ್ಕೂಲ್ ಫಂಡಿಗೆ ತಾ. ೧–೨–೧೯೨೦ನೇ ವರೆಗೆ ರೂಪಾಯಿ [illegible] ದಾತೃಗಳು—

ಮ. ರಾ. ರಾ. ವಕೀಲ್ ಕೆ. [illegible]	ರೂಪಾಯಿ	೫೦೦೦–೦–೦.
ಎಸ್. ಎಸ್. ರಾಮರಾವ್	,,	೨೦೦೦–೦–೦
ಎಸ್. ಲಕ್ಷ್ಮಣರಾವ್		
ಎಚ್. ಶ್ರೀನಿವಾಸ ಕಾಮತ್	,,	೨೦೦–೦–೦
ಕೆ. ಕಾಮತೆಟ್ಟಿ	,,	೨೦೦–೦–೦
ಪಿ. ಅನಂತರಾವ್	,,	೨೦೦–೦–೦
ಪಲ್ದರ ನಾರಾಯಣ ಶೆಟ್ಟಿ	,,	೧೦೦–೦–೦
ವಕೀಲ ಎಸ್. ವಿ. ರಾಮರಾವ್	,,	೧೦೦–೦–೦
ದಿವಾನ್ ಬಹದ್ದೂರ್ ವಿ. ವೆಂಕಟರಮಣ ಶೈ	,,	೨೦೦–೦–೦
ಮ. ರಾ. ರಾ. ವಕೀಲ್ ಕೆ. [illegible]	ರೂ.	೩೦೦–೦–೦
,, ಕೆ. ದಂಡಿನಾಥ ಕಾಮತ್	,,	೧೦೦–೦–೦
,, ಕೆ. ಶ್ರೀನಿವಾಸರಾವ್	,,	೧೦೦–೦–೦
,, ಕೆ. ನರಸಿಂಗರಾವ್	,,	೧೦೦–೦–೦
ಡಾಕ್ಟರ್ ಕೆ. ವಿಠಲ ಭಟ್	,,	೧೦೦–೦–೦
ಮ. ರಾ. ರಾ. ಸಿ. ಅಮಣ್ಣ	,,	೨೦೦–೦–೦
,, ಸಣ್ಣ ಅಬ್ಬಿಲ್ಲ ಕಾಫ್ರುಜ್ಜಿಂಗಳ ಮಗ	,,	
,, ಪೊಗ್ರಾಲ ಮಮ್ಮುಬ್ಯಾರಿ	,,	೫೦–೦–೦
,, ಎನ್. ವೈಕುಂಠಭಟ್	,,	೫೦–೦–೦
,, ಎನ್. ನಲ್ಲಯ್ಯ ಕ್ಯಾನಡೀಯರ್	,,	೫೦–೦–೦
,, ಎನ್. ಅನಂತ ಕೃಷ್ಣರಾವ್	,,	೫೦–೦–೦
,, ಕುಂಜಾವೈದ ಸುಂದರರಾವ್	,,	೧೦೦–೦–೦
,, ಬಿ. ಶ್ರೀನಿವಾಸ ನಾಯಕ್ (ಕುಂಬಳೆ)	,,	೧೦೦–೦–೦
,, ಪಿ. ಪಿ. ರಾಘ್, ಡಿಸ್ಟ್ರಿಕ್ಟ್ ಜಡ್ಜ್, ಕಲ್ಲಿಕೋಟೆ	,,	೨೫೦–೦–೦
(ಒಂದನೇ ಸಂದರ್ಭದಲ್ಲಿ ರೂ ೫೦೦–೦–೦)		
,, ಉದಿಯಾವರ ಭವಾನಿರಾವ್, ಕಲ್ಲಿಕೋಟೆ	,,	೧೦೦–೦–೦
,, ವಕೀಲ್ ಕೆ. ರಾಮವರ್ಮರಾಜಾ	,,	೧೦೦–೦–೦
,, ಅಮೆಯು ಮಹಾಲಿಂಗ ಭಂಡಾರಿ	,,	೧೦೦–೦–೦
,, ಕೊಡ್ಲಮ ರಾಮಪ್ಪ	,,	೧೦೦–೦–೦
,, ಬೇಕಲ್ ರಾಮಸಿಂಗ್	,,	೧೦೦–೦–೦
,, ಕೆ. ಪದ್ಮನಾಭ ಐತಾಳರಾಯ	,,	೧೦೦–೦–೦
,, ಬಾಡೂರು ಕುಂಞ್ಞಾಲಿಬ್ಯಾರಿ	,,	೧೦೦–೦–೦
,, ಪೊಗ್ರಾಲ ಪಟೇಲ ಎಂ. ಕೆ. ಮಹಮ್ಮದ್	,,	೧೦೦–೦–೦
,, ಕೆ. ದೇವಪ್ಪ ವಾಮನ ಶೆಣಯ	,,	೧೦೦–೦–೦
,, ಕೋಡಿಂಗಾರು ಶಂಕರ ಬಂಟ	,,	೧೦೦–೦–೦
,, ತಳಂಗರೆ ಕುಂಞ್ಞಾಮಯ ಕಟ್ಟಿಬ್ಯಾರಿ	,,	೧೦೦–೦–೦

ಕಾಸರಗೋಡು, ತಾ. ೫ – ೨ – ೧೯೨೦ } L. L. Rama Rao. ಕಾರ್ಯದರ್ಶಿ.

ಇದೇ ತಿಂಗಳ ತಾ. ೨೬ನೇ ಆದಿತ್ಯವಾರ ನಡೆವ ನಮ್ಮ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ವಾರ್ಷಿಕ ದಿವಸದ ಆಚರಣೆಗೆ ವಿದ್ಯಾರ್ಥಿಗಳ ರಕ್ಷಕರೂ ಭವನದ ಹಿತೈಷಿಗಳೂ [illegible] ದಯವಿಟ್ಟು ಬರಬೇಕಾಗಿ ಪ್ರಾರ್ಥಿಸುತ್ತೇವೆ.

ಈ ದಿನ ಬೆಳಗ್ಗೆ ಆಟಗಳು, ವರದಿಯನ್ನು ಓದುವುದು ಮತ್ತು ಭಾಷಣಗಳು, ಸಾಯಂಕಾಲ ೪ ಗಂಟೆಗೆ ಸ್ಪೋರ್ಟ್ ಪ್ರದರ್ಶನ, ಹಣ್ಣು ಫಲಾಹಾರ, ಟಿಕೈ ಹಂಚಿಕೆ ಮತ್ತು ಗಾಯನ ಇವು ನಡೆಯುವವು.

ಮಂಗಳೂರು, ತಾ. 18-2-'20. } ಬಿ. ಶಿವರಾಮ ಶೆಟ್ಟಿ, ಕಾರ್ಯದರ್ಶಿ.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗವದು, ತಲೆಪುರ, ಕಣ್ಣುಪುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಟ್ಟಿಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಆಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕಡವಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬಿಳಿ ಸೀಸೆ ಗಕ್ಕೆ ಆಣೆ ೧೨, ಚಿಕ್ಕ ರೂ. ೧, ದೊಡ್ಡ ಸೀಸೆಗೆ ರೂ. ೧–೮–೦.

ಚಂದನಾಸವ. ಮೂತ್ರಕೃಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿಗೆ ಕ್ರಯ ೧–೮–೦, ಬಾಟ್ಲಿ ೬ರ ಕ್ರಯ ೮–೦–೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳೀಪ್ರದರ (ಬಿಳೀ ಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨–೦–೦.

ಚಿನ್ ಚಿನ್ ಬಾಮ್. ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ, ತಕ್ಷಣ ಗುಣ. ಬೆಲೆ ಸುಲಭ. ಭರಣಿ ಗಕ್ಕೆ ಆ. ೬. ಗಜಕರ್ಣದ ಮುಲಾಮು ಡಬ್ಬಿಗೆ ಆ. ೪.

ದಂತಶೋಧಿನಿಚೂರ್ಣ. ಇದು ಹಲ್ಲುಗಳನ್ನು ಚೊಕ್ಕಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುರು, ಬಾಯಿಹುಣ್ಣು, ಹಲ್ಲುಗಳಿಂದ ರಕ್ತ, ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ಗಕ್ಕೆ ಆಣೆ ೫.

ಲಂಗ್ಸ್ ಟೋನು. ಕೆಮ್ಮು, ನೆಗಡಿ, ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಪಡಿಸಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿ ಗಕ್ಕೆ ರೂ. ೨–೮–೦, ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪನಿ, 4. ಕಂಕನಾಡಿ ಪೋಸ್ಟು.

Manollasini Co., 4, Kankanady.

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನಂ ಫಾಲ್ಗುಣ ಶು| ೨ ಶನಿವಾರದಿಂದ ಫಾಲ್ಗುಣ ಶು| ೮ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಫೆಬ್ರವರಿ ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರೀರಂಗಪಟ್ಟಣ	ಸೂರ್ಯ ಉ.	ಸೂರ್ಯ ಅಸ್ತ.
21	ಶನಿ	೨	[illegible]	ಪೂ. ಭಾ.	[illegible]	೯	6·53	6·37
22	ರವಿ	೩	[illegible]	ಉ. ಭಾ.	[illegible]	೧೦	6·53	6·37
23	ಸೋಮ	೪	[illegible]	ರೇವತೀ	[illegible]	೧೧	6·53	6·37
24	ಕುಜ	೫	[illegible]	ಅಶ್ವಿನೀ	[illegible]	[illegible]	6·52	6·37
25	ಬುಧ	೬	[illegible]	ಭರಣೀ	[illegible]	೧೩	6·52	6·38
26	ಗುರು	೭	[illegible]	ಕೃತ್ತಿಕಾ	[illegible]	೧೪	6·51	6·38
27	ಶುಕ್ರ	೮	[illegible]	ರೋಹಿಣೀ	[illegible]	೧೫	6·51	6·38

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಫೆಬ್ರವರಿ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ
13	89—1	75—1	—	...
14	90—9	74—2	—	...
15	90—1	71—3	—	...
16	88—5	71—6	—	...
17	89—3	70—0	—	...
18	88—9	72—8	—	—
19	90—2	75—1	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸೂರಿ ಅಕ್ಕಿಮುಡಿ ಗಕ್ಕೆ	...	9—12	10—6
ಗುಮ್ಮ ,, ,,	...	9—0	9—8
ರಾಶಿ ಮುಡಿ ಗಕ್ಕೆ	...	8—4	8—14
ಅಪ್ಪಲ್ ಬೆಳ್ತಿಗೆ ,,	...	11—4	11—12
ಗುಡ್ಡ ಬೆಳ್ತಿಗೆ ,,	...	10—0	10—6
ರಂಗೂನ್ ಬೆಳ್ತಿಗೆ ಗೋಣಿ ಗಕ್ಕೆ	...	15—0	16—0
ಗೋದಿ ಗೋಣಿ ಗಕ್ಕೆ	...	25—0	25—8
ಹುರುಳಿ ಗೋಣಿ ಗಕ್ಕೆ	...	15—4	16—2
ಕಡಲೆ ಗೋಣಿ ಗಕ್ಕೆ	...	22—4	23—0
ತೊಗರಿ ಗೋಣಿ ಗಕ್ಕೆ	...	24—0	25—0
ಕೊತ್ತಂಬರಿ ಗೋಣಿ ಗಕ್ಕೆ	...	26—0	32—0
ಉದ್ದು ಗೋಣಿ ಗಕ್ಕೆ	...	22—8	23—0
ಹೆಸರು ಗೋಣಿ ಗಕ್ಕೆ	...	22—8	23—0
ಊರು ಬೆಲ್ಲ ಖಂಡಿ ಗಕ್ಕೆ	...	80—0	82—8
ಉಪ್ಪು ಗೋಣಿ ಗಕ್ಕೆ	...	4—0	4—6
ಕೊಬ್ರಿ ಖಂಡಿ ಗಕ್ಕೆ	...	140—0	150—0
ಕೊಬ್ರಿ ಹಿಂಡಿ ಖಂಡಿ ಗಕ್ಕೆ	...	35—0	35—8
ಎಳ್ಳಿಂಡಿ ಖಂಡಿ ಗಕ್ಕೆ	...	57—0	60—0
ಕೊಬ್ರಿ ಎಣ್ಣೆ ಮಣ ಗಕ್ಕೆ	...	10—4	10—8
ಎಳ್ಳೆಣ್ಣೆ ಮಣ ಗಕ್ಕೆ	...	11—8	11—12
ಚಿಮಿಣಿಎಣ್ಣೆ ಪೆಟ್ಟಿಗೆ ಗಕ್ಕೆ	...	9—6	9—15
ಮಾರಿಷ ಸಕ್ಕರೆ ಮಣ ಗಕ್ಕೆ	...	9—12	9—14
ಮೆಣಸಿನ ಕಾಯಿ ಮಣ ಗಕ್ಕೆ	...	10—4	10—8
ಸಾಸಿವೆ ಮುಡಿ ಗಕ್ಕೆ	...	11—4	11—8
ಕೊತ್ತಂಬರಿ ಮುಡಿ ಗಕ್ಕೆ	...	5—6	5—10
ಕಾಫಿ ಖಂಡಿ ಗಕ್ಕೆ	...	295—0	315—0
ಬೇಗೋಟು ಅಡಿಕೆ ಖಂಡಿ ಗಕ್ಕೆ	...	110—0	120—0
ಹಳೆ ಬೇಗೋಟು	...	135—0	145—0
ಹಳೆ ಕಾಳುಮೆಣಸು ಖಂಡಿ ಗಕ್ಕೆ	...	205—0	210—0
ಯಾಲಕ್ಕಿ ಮಣ ಗಕ್ಕೆ	...	25—0	32—0
ಗೇರುಬೀಜ ಮುಡಿ ಗಕ್ಕೆ	...	5—8	—
ಕಬ್ಬಿಣ ಖಂಡಿ ಗಕ್ಕೆ	...	100—0	120—0
ತಾಂಬ್ರ ತಗಡು ಮಣ ಗಕ್ಕೆ	...	28—4	29—0
ತಾಂಬ್ರ ಪಾತ್ರಗಳು ಮಣ ಗಕ್ಕೆ	...	40—0	42—0
ಚೀನ ಬೆಳ್ಳಿ ಸೇರು ಗಕ್ಕೆ	...	31—8	
ಹಿತ್ತಾಳೆ ತಗಡು ಮಣ ಗಕ್ಕೆ	...	28—0	

[illegible]

...ಮುಂದಿನ ವರ್ಷಕ್ಕೆ [illegible] ಅದರಿಂದ ದಯಾಳು ಪೋಲೀಸ್ [illegible] ಈ ಬಗ್ಗೆ [illegible] ನಂಬುತ್ತೇವೆ.

ಮದ್ರಾಸು ಪ್ರಾಂತಿಕ ಸರಕಾರದ ಜಮಾ ಖರ್ಚು.

೧೯೩೧—೩೨

(ಹಿಂದಿನ ಸಂಚಿಕೆಯಿಂದ ಮುಂದರಿದದ್ದು)

ಲೋಕಲ್ ಬೋರ್ಡುಗಳ ಹೆದ್ದಾರಿಗಳನ್ನು ದುರುಸ್ತಾಗಿ ಇಡಲಿಕ್ಕೆ ಈ ವರೆಗೆ ವೆಚ್ಚಮಾಡುತ್ತಿದ್ದ ಖರ್ಚು ಸಾಕಾಗಿಲ್ಲ, ಅದಕ್ಕೆ ಈ ಬೋರ್ಡುಗಳ ಬಳಿಯಲ್ಲಿ ಪ್ರತ್ಯೇಕವಾಗಿ ಸಾಕಷ್ಟು ಇಲ್ಲ ಎಂಬ ಒಂದು ಪ್ರಶ್ನೆ ಸರಕಾರದ ದೃಷ್ಟಿಯ ಮುಂದೆ ಕೆಲವು ಕಾಲದಿಂದ ಇತ್ತು. ಕಳೆದ ಎರಡು ವರ್ಷಗಳಲ್ಲಿ ಸುಮಾರು ೫ ಲಕ್ಷ ರೂಪಾಯಿ ಸಹಾಯಧನವಾಗಿ ಪ್ರಾಂತಿಕ ಸರಕಾರದಿಂದ ಲೋಕಲ್ ಬೋರ್ಡುಗಳಿಗೆ ಕೊಡಲ್ಪಟ್ಟಿತ್ತು. ಆದರೂ ಈ ರೀತಿ ಅನಿಶ್ಚಯವಾದ ಸಹಾಯ ದಿಂದ ಹೆಚ್ಚಿನ ಉಪಕಾರವಿಲ್ಲ, ಅದಕ್ಕೆ ಬದಲಾಗಿ ಅಂಥಾ ಹೆದ್ದಾರಿಗಳನ್ನು ದುರುಸ್ತಾಗಿ ಇಡುವ ಖರ್ಚನ್ನು ತೀರಾ ಸರಕಾರದವರೇ ವಹಿಸಿಕೊಳ್ಳುವ ಉದ್ದೇಶದಿಂದ ಮುಂದಿನ ವರ್ಷಕ್ಕೆ ೨೬ ಲಕ್ಷ ರೂಪಾಯಿ ಬಿಂಗಡಿಸಿ ಇಟ್ಟಿರುವರು.

ನಿರಾಶ್ರಿತ ಜನಗಳಿಗೆ ಯಾವ ಬಗೆಯ ಸೌಕರ್ಯಗಳು ಬೇಕಾಗಿವೆ ಎಂದು ಗೊತ್ತು ಹಚ್ಚುವದಕ್ಕಾಗಿ ಮದ್ರಾಸು ಸರಕಾರದವರು ಹಂಗಾಮಿ ಒಂದು ಇಸಂ ಪಿರ್ಡಿಸಿ ಈ ಸಿಬಂದಿಯ ಮೂಲಕ ಸದರಿ ವಿಚಾರ ನಡಿಸುತ್ತಿದ್ದರು. ಆದರೆ ನಿರಾಶ್ರಿತ ಜನರು ಎಂಬ ಅರ್ಥವು ಬರೇ ಕಾಡು ನಿವಾಸಿಗಳು ಅಥವಾ ಪಂಚಮರು, ಹೊಲೆಯರು ಎಂಬದಾಗಿಲ್ಲ; ಇದೇ ರೀತಿಯ ಆಶ್ರಯ ಬೇಕಾದ ಮಜೂರ ಜನರು ಹಲವರು ಇದ್ದಾರೆ, ಅಂಥವರು ಹೀನ ಸ್ಥಿತಿಯಲ್ಲಿರುವ ಕಾರಣ ಅವರನ್ನೂ ಕೂಡಾ ಉದ್ಧರಿಸುವ ನಿಮಿತ್ತ 'ಲೇಬರ್ ಕಮಿಶನರ್' ಎಂಬ ಹೊಸ ಇಸಂ ಈಗಲೇ ಸೃಷ್ಟಿಯಾಗಿದೆ. ಈ ಕಮಿಶನರು ಮಜೂರ ಜನರ ಸ್ಥಿತಿಯನ್ನು ಪರ್ಯಾಲೋಚಿಸಿ, ಅವರಿಗೆ ಸಹಕಾರ ಸಂಘ, ದರ್ಖಾಸ್ತಿಗೆ ಸ್ಥಳ, ನಿವಾಸಕ್ಕೆ ಮನೆ, ದುಡಿತ, ಸೌಕರ್ಯ ಮುಂತಾದ್ದನ್ನು ಒದಗಿಸಿಕೊಡುವ ಉದ್ದೇಶದಿಂದ ನೇಮಿಸಲ್ಪಟ್ಟಿರುವರು. ಈ ಹೊಸ ಇಲಾಖೆಗೆ ರೆವಿನ್ಯೂ ಇಲಾಖೆಯಲ್ಲಿ ೫ ಲಕ್ಷ ರೂಪಾಯಿ, ಮತ್ತು ವಿದ್ಯಾ ಖಾತೆಯಲ್ಲಿ ಪ್ರಾಥಮಿಕ ಶಾಲೆಗಳ ಬಗ್ಗೆ ೨ ಲಕ್ಷ ರೂಪಾಯಿ ಬಿಂಗಡಿಸಿ ಇಟ್ಟಿದೆ.

ವಿದ್ಯಾ ಇಲಾಖೆಯ ಅಂದಾಜು ಪಟ್ಟಿಯಲ್ಲಿ ಹಿಂದಿನ ವರ್ಷಗಳ ಖರ್ಚಿನ ಮುಖ್ತಸರ್ ಇದೆ. ಅದನ್ನು ಓದಿದರೆ ವಿದ್ಯಾಖಾತೆಯ ಸಂಬಂಧ ೧೯೧೦—೧೧ ರಲ್ಲಿ ೧೫ ಲಕ್ಷ ೫೦ ಸಾವಿರ ಖರ್ಚು, ೧೯೨೦—೨೧ ರಲ್ಲಿ ೯೩ ಲಕ್ಷ ೮೯ ಸಾವಿರ, ೧೯೩೦—೩೧ ರಲ್ಲಿ ೧೫೫ ಲಕ್ಷ ೮೦ ಸಾವಿರ ರೂಪಾಯಿಗೆ ಏರಿದೆ ಎಂದು ಗೊತ್ತಾಗುವುದು. ಇಷ್ಟು ಸಮಯದಲ್ಲಿಯೂ ಇದರ ಸಂಬಂಧವಾದ ಪತ್ರವ್ಯವಹಾರ ನಡಿಸಲಿಕ್ಕೆ ಇಲಾಖೆಯ ಡೈರೆಕ್ಟರಿಗೆ ಒಬ್ಬರೇ ಒಬ್ಬ ಡೆಪ್ಯೂಟಿ ಡೈರೆಕ್ಟರು ಸಹಾಯಕರಾಗಿದ್ದು ಕೆಲಸದ ಭಾರವು ಹೆಚ್ಚಾಗಿ ಬಹಳ ತೊಡಕಾಯಿತು. ಇದಕ್ಕಾಗಿ ಸ್ತ್ರೀ ವಿದ್ಯಾಭ್ಯಾಸದ ಮೇಲ್ತನಿಖೆಯ ಬಗ್ಗೆ ಒಬ್ಬ ಡೆಪ್ಯೂಟಿ ಡೈರೆಕ್ಟ್ರೆಸ್, ಮತ್ತು ಇತರ ಕೆಲಸಗಳಿಗೋಸ್ಕರ ಒಬ್ಬ ಡೆಪ್ಯೂಟಿ ಡೈರೆಕ್ಟರ್ ಸಿಬಂದಿ ಹೆಚ್ಚಿಸುವ ಏರ್ಪಾಡಾಗಿದೆ.

ಹೊಸ ಟ್ರೈನಿಂಗ್ ಶಾಲೆಗಳನ್ನು ಏರ್ಪಡಿಸುವುದಕ್ಕೆ ೨ ಲಕ್ಷ ೬ ಸಾವಿರ ರೂಪಾಯಿ ಹೆಚ್ಚಿಗೆ ಬಿಂಗಡಿಸಿಟ್ಟಿದೆ. ಪ್ರಾಥಮಿಕ ಶಾಲೆಗಳ ಖರ್ಚು ೧೯೧೦—೧೧ ರಲ್ಲಿ ೨೬ ಲಕ್ಷ ೩ ಸಾವಿರ ಇದ್ದು ೧೯೩೦—೩೧ ರಲ್ಲಿ ೯೪ ಲಕ್ಷ ೧೩ ಸಾವಿರ ರೂಪಾಯಿಗೆ ಬಂದು ನಿಂತಿದೆ. ೧೯೩೧—೩೨ ರಲ್ಲಿ ಹೊಸ ಮಿಡ್ಲ್ ಸ್ಕೂಲುಗಳ ಬಗ್ಗೆ ೧೧ ಲಕ್ಷ ರೂಪಾಯಿ ಹೆಚ್ಚಿಗೆ ಇಟ್ಟಿದೆ. ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಬಗ್ಗೆ ೩೪ ಲಕ್ಷ ರೂಪಾಯಿ ಬಿಂಗಡಿಸಿದೆ.

ವೈದ್ಯ ಇಲಾಖೆಯಲ್ಲಿಯೂ ಖರ್ಚಿನ ಮಿತಿಯು ಏರುತ್ತಲೆ ಇದೆ ಎಂದು ನಾಮದಾರ ಟೊಡ್ಡಂಟರರು ಹೇಳುತ್ತಾರೆ. ೧೯೧೫—೧೬ನೆ ಇಸವಿಯಲ್ಲಿ ಈ ಇಲಾಖೆಯ ಖರ್ಚು ಬರೆ ೧೬ ಲಕ್ಷ ೬೬ ಸಾವಿರ ರೂಪಾಯಿ ಆಗಿತ್ತು, ೧೯೩೦—೩೧ನೆ ಇಸವಿಯಲ್ಲಿ ಅದು ೪೪ ಲಕ್ಷ ೫೪ ಸಾವಿರ ರೂಪಾಯಿ ಎಂಬಂತೆ ಅಜಮಾಯಿಷ ಮಾಡಲ್ಪಟ್ಟಿದೆ. ಇದಕ್ಕೆ ಮುಖ್ಯ ಕಾರಣಗಳು ಯಾವುವೆಂದರೆ, ಮದ್ರಾಸಿನ ರಾಯಪೇಟೆ ಆಸ್ಪತ್ರೆ, ಮತ್ತು ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿರುವ ೨೦ ಆಸ್ಪತ್ರೆಗಳನ್ನು ಸರಕಾರದ ಕೈವಶಕ್ಕೆ ತೆಗೆದುಕೊಂಡು ಆಯಾ ಮುನ್ಸಿಪಾಲಿಟಿಗಳಿಗೆ ಈ ವಾಟ್ನಿನ ಖರ್ಚು ೭ ಲಕ್ಷ ರೂಪಾಯಿ ಉಳಿಸಿದಂತಾಯಿತು. ಇದಲ್ಲದೆ ಈ ಮೊದಲು ೧೯೧೫—೧೬ ರಲ್ಲಿ ೩ ಮೆಡಿಕಲ್ ಸ್ಕೂಲುಗಳು ಮಾತ್ರವೇ ಇದ್ದವು; ಅವುಗಳಲ್ಲಿ ೧೨೦ ಮಂದಿ ವಿದ್ಯಾರ್ಥಿಗಳು ಕಲಿಯುತಿದ್ದರು. ೧೯೧೯ ರಲ್ಲಿ ೫ ಶಾಲೆಗಳಲ್ಲಿ ೨೬೭ ಮಂದಿ ಕಲಿಯುತಿದ್ದರು. ——ಇನ್ನೂ ಗುಂಟೂರಿನಲ್ಲಿ ಒಂದು ಸ್ಕೂಲಿನ ಬಗ್ಗೆ ಕಟ್ಟಡದ ಏರ್ಪಾಡಾಗಿದೆ. ಈಗಿನ ಕ್ಷಯ ರೋಗಿಗಳಿಗೋಸ್ಕರ ಒಂದು ಆಸ್ಪತ್ರೆ ಮತ್ತು ಮದ್ರಾಸಿನ ಸ್ತ್ರೀಯರ ಆಸ್ಪತ್ರೆಯನ್ನು ಸರಕಾರದ ಆಡಳಿತೆಯೊಳಗೆ ತರುವ ಏರ್ಪಾಡುಗಳಿಗೋಸ್ಕರ ವಿಲೇವಾರಿ ನಡೆಯುತ್ತಿದೆ ಎಂದು ನಾವು ತಿಳಿಯುತ್ತೇವೆ.

ಆರೋಗ್ಯ ಇಲಾಖೆಯಲ್ಲಿ ಈ ಚಾಲ್ತಿ ವರ್ಷದ ತಿದ್ದುಪಡಿ ಅಂದಾಜು ಪಟ್ಟಿಯ ಮೇರೆಗೆ ೨೩ ಲಕ್ಷ ೧೯ ಸಾವಿರ ರೂಪಾಯಿ ಖರ್ಚು ಎಣಿಸಿದ್ದರೂ ಬರುವ ವರ್ಷಕ್ಕೆ ೩೪ ಲಕ್ಷ ೫೩ ಸಾವಿರ ರೂಪಾಯಿ ಈ ಬಗ್ಗೆ ಬಿಂಗಡಿಸಿಟ್ಟಿದೆ— ನೀರಿನ ಸರಬರಾಯಿ ಮುಂತಾದವುಗಳ ಬಗ್ಗೆ ಸ್ಥಾನಿಕ ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕಾಗಿಯೇ ಇದರ ಅಧಿಕಾಂಶವು ವಿನಿಯೋಗಿಸಲ್ಪಡುವುದು.

ಕೈಗಾರಿಕೆ ಇಲಾಖೆಯು ೧೯೧೪—೧೮ ರಲ್ಲಿಯೇ ಪ್ರತ್ಯೇಕವಾಗಿ ಏರ್ಪಟ್ಟಿತು. ಆ ಕಾಲದಲ್ಲಿ ಯುದ್ಧದ ಸಾಮಗ್ರಿಗಳ ಪುರವಣೆಗೋಸ್ಕರವೇ ಈ ಇಲಾಖೆಯು ಹೆಚ್ಚಿನ ಸಮಯವೂ ಸಾಮರ್ಥ್ಯವೂ ವ್ಯಯವಾದವು. ಆದರೂ ಇದರಿಂದ ನೂತನ ಕೈಗಾರಿಕೆಗಳು ತಲೆ ಎತ್ತುವಂತೆ ಅಸ್ಪದವಾಯಿತೆಂದು ಹೇಳಲು ಅಡ್ಡಿ ಇಲ್ಲ. ೧೯೧೭—೧೮ ರಲ್ಲಿ ಈ ಇಲಾಖೆಯ ವೆಚ್ಚವು ೨ ಲಕ್ಷ ೪೧ ಸಾವಿರ ರೂಪಾಯಿ; ೧೯೩೦—೩೧ ರಲ್ಲಿ ೮ ಲಕ್ಷ ೩೯ ಸಾವಿರ ರೂಪಾಯಿ ಈ ಇಲಾಖೆಗೋಸ್ಕರ ಬಿಂಗಡಿಸಿಟ್ಟಿದೆ.

ಸಹಕಾರ ಇಲಾಖೆಯ ಖರ್ಚು ವಿಶಿಷ್ಟ ಸಂಘಗಳ ತಕ್ಕ ಪರಿಶೋಧನೆ ಮುಂತಾದುವುಗಳ ಖರ್ಚನ್ನು ಆಯಾ ಸಂಘಗಳ ಮೇಲೆಯೇ ಹಂಚಿ ಹಾಕಬೇಕೆಂಬ ಅಭಿಪ್ರಾಯವು ಸರಕಾರದವರಿಗೆ ಇದ್ದರೂ, ಈಗಿನ ಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ, ಸಹಕಾರದ ಸಂಸ್ಥೆಗಳು ಇನ್ನೂ ಬಾಲ್ಯಾವಸ್ಥೆಯಲ್ಲಿ ಇದ್ದು ಅವುಗಳಿಗೆ ಆಗಾಗ ಸರಕಾರದ ಸಹಾಯವು ಅಗತ್ಯವಿದೆ, ಆ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುವಷ್ಟು ಆ ಸಂಘಗಳು ಪುಷ್ಟಿಯಾಗಿಲ್ಲ ಎಂದು ರಿಜಿಸ್ಟ್ರಾರರು ಸರಕಾರದವರಿಗೆ ತೋರಿ...

[illegible]

...ಎಂದು [illegible]

[illegible] ಸುಮಾರು ಅರ್ಧಾಂಶದಷ್ಟು ಸಂಬಳದ ದರಗಳನ್ನು ಏರಿಸುವದಕ್ಕೆ ವಿನಿಯೋಗಿಸಲ್ಪಡುವುದು. ಎಂಜಿನಿಯರಿಂಗ ಇಲಾಖೆಯ [illegible] ಮುಂತಾದ [illegible] ಮನೆಗಳನ್ನು ಕಟ್ಟಿಕೊಡುವುದಕ್ಕೆ, ಉಳಿದ ಭಾಗವು ವೆಚ್ಚವಾಗಬಹುದು ಎಂಬುದಾಗಿಯೂ ಗೊತ್ತಾಗುತ್ತದೆ. ಈ ಸಂಬಂಧ ಈ ರೀತಿಯ ಸಾಹೇಬರನ್ನು [illegible] ಕೊಡುವುದಕ್ಕಾಗಿ ಸರಕಾರದವರು ಕಟ್ಟಿ ಮಾತು ಬೇಗನೆ ಸಲ್ಲಿಸುವ ಉದ್ದೇಶದಿಂದ ಇನ್ನೂ ವರ್ಷಂಪ್ರತಿ ಹಣ ವೆಚ್ಚ ಮಾಡಲಾಗುವುದು ಎಂದು ಸರಕಾರದವರು ತಿಳಿಸುತ್ತಾರೆ. ಇದನ್ನು ಸರಿಯಾಗಿ ಪೂರೈಸುವುದಕ್ಕೆ ಸುಮಾರು ೭೩ ಲಕ್ಷ ರೂಪಾಯಿ ಬೇಕಾದೀತು, ಆದ್ದರಿಂದ ಪ್ರತಿ ವರ್ಷವೂ ಈ ಬಗ್ಗೆ ಹಣವಿಡುವ ಅಗತ್ಯವಿದೆ, ಆ ವರೆಗೆ ಮನೆ ಬಾಡಿಗೆ ಕೊಡುವುದಕ್ಕೆ ಸಹ ಎಷ್ಟರ ಮಟ್ಟಿಗೆ ಅನುಕೂಲಿಸಬಹುದು ಎಂದು ಸರಕಾರವು ವಿಚಾರ ಮಾಡುತ್ತಿದೆ.

ನ್ಯಾಯವಿಚಾರದ ಖಾತೆಗೆ ೫ ಲಕ್ಷ ರೂಪಾಯಿ ಬರುವ ವರ್ಷಕ್ಕೆ ಹೆಚ್ಚಿಗೆ ಇಟ್ಟಿದ್ದರಲ್ಲಿ ಅಧಿಕಾಂಶವು ಸಂಬಳದ ದರಗಳನ್ನು ಏರಿಸುವುದರಲ್ಲಿ ವ್ಯಯವಾಗುವುದು ಮತ್ತು ತಂಜಾವೂರು, ಅನಂತಪುರ, ನೆಲ್ಲೂರು ಈ ಸ್ಥಳಗಳಲ್ಲಿ ಹೊಸ ಜಿಲ್ಲಾ ಕೋರ್ಟುಗಳನ್ನು ಸ್ಥಾಪಿಸಲಿಕ್ಕೆ ಸುಮಾರು ೧ ಲಕ್ಷ ರೂಪಾಯಿ ವೆಚ್ಚವಾದೀತು ಎಂದು ನಾಮದಾರರ ಅಭಿಪ್ರಾಯ.

ಆಡಳಿತೆಯ ಬದಲಾವಣೆಗಳು ಹೊಸ ಸುಧಾರಣೆ ಎಕ್ಟಿನ ಮೇರೆಗೆ ಆಗಲಿಕ್ಕಿರುವುದರಿಂದ ಆ ಬಗ್ಗೆ ಸುಮಾರು ೫ ಲಕ್ಷ ರೂಪಾಯಿ ಹೆಚ್ಚಿಗೆ ಬಿದ್ದೀತು ಎಂದು ಅಜಮಾಯಿಷ ಮಾಡಿದ್ದಾರೆ. ಅಗತ್ಯವಿರುವ ವಿಲೇವಾರಿಗಳನ್ನು ಮಾಡಲಿಕ್ಕೆ ಒಬ್ಬ ಸ್ಪೆಶಲ್ ಆಫೀಸರರನ್ನು ಸರಕಾರದವರು ನೇಮಕಮಾಡಿರುವರು.

ಹೀಗೆ ಬರುವ ವರ್ಷದ ಜಮೆ ಅಂದಾಜು ೯೭೩ ಲಕ್ಷ ೭೮ ಸಾವಿರ, ಖರ್ಚು ೧೦೮೯ ಲಕ್ಷ ೯ ಸಾವಿರ ರೂಪಾಯಿ, ಅಂದರೆ ವರ್ಷದ ಜಮೆಗಿಂತಲೂ ಖರ್ಚು ೧೧೫ ಲಕ್ಷ ೩೬ ಸಾವಿರ ರೂಪಾಯಿಗೆ ಹೆಚ್ಚಿದ ಕಾರಣ ಹಿಂದಿನ ಸಂಚಯದಿಂದ ಅದನ್ನು ಭರ್ತಿಮಾಡಿ ೧೯೩೦-೩೧ ವರ್ಷಾಂತ್ಯಕ್ಕೆ ೯೦ ಲಕ್ಷ ೭೩ ಸಾವಿರ ರೂಪಾಯಿ ಮಾತ್ರ ಶಿಲಕು ಉಳಿಯಬಹುದು ಎಂದು ತೋರುತ್ತದೆ. ಈ ವರೆಗೆ ಈ ಸಂಸ್ಥಾನದಲ್ಲಿ ಇಷ್ಟು ಜಾಸ್ತಿ ಖರ್ಚಿನ ಏರ್ಪಾಡನ್ನು ಮಾಡಿದ್ದಿಲ್ಲ, ಆದರೆ ಸಾಕಷ್ಟು ಸವಲತ್ತುಗಳನ್ನು ಕೊಡುವುದಕ್ಕೆ ಇನ್ನೂ ಹಣ ಬೇಕಾದೀತು ಎಂದು ನಾಮದಾರ ಟೊಡ್ಡಂಟರರು ಹೇಳಿ, ಇಷ್ಟಿದ್ದ ಜನ ಸಂಖ್ಯೆಯ ದಾಮಾಶಯದಿಂದ ನೋಡಿದರೆ ವಿದ್ಯಾ ಇಲಾಖೆ, ವೈದ್ಯ ಇಲಾಖೆ ಮತ್ತು ಪೋಲಿಸ್ ಇಲಾಖೆಗಳಲ್ಲಿ ಮದ್ರಾಸು ಸರಕಾರವು ಮುಂಬಯಿಯ ಖರ್ಚಿನ ಅರ್ಧದಷ್ಟನ್ನು ಮಾಡಿಲ್ಲವೆಂದು ಹೇಳಿದರು. ದಿವಸಗಳ ಬೆಲೆ ಏರಿದ ಕಾರಣ ಸಂಬಳದ ದರಗಳನ್ನು ಏರಿಸುವ ಅಗತ್ಯವಿದೆ, ಆರೋಗ್ಯ ರಕ್ಷಣೆಗೋಸ್ಕರ ಇನ್ನೂ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ, ಜೈಲ ಕಮಿಟಿಯವರ ರಿಪೋರ್ಟು ಕೈಸೇರಿದೊಡನೆ ಜೈಲುಗಳ ಆಡಳಿತೆಯಲ್ಲಿ ಬದಲಾವಣೆಗಳನ್ನು ಮಾಡಬೇಕಾಗಬಹುದು, ಹಾಗೂ ಕೈಗಾರಿಕೆ, ಸಹಕಾರ, ಕೃಷಿ, ಮಜೂರ ಇಲಾಖೆ, ಫಿಶ್ಶರೀಸ್ ಮುಂತಾದ ಈಚೆಗೆ ಸ್ಥಾಪಿತವಾದ ಇಲಾಖೆಗಳಿಗೆ ಹಿಂದೆ ನಾವು ಕೈ ಹಿಂದೆಗೆದದ್ದನ್ನು ಭರ್ತಿ ಮಾಡುವುದಕ್ಕೆ ತುಂಬಾ ಹಣಬೇಕು, ಆದ್ದರಿಂದ ಸಂಸ್ಥಾನದ ಖರ್ಚು ಇನ್ನೂ ಏರಿಯೇ ಹೋಗುವುದು, ಆದನ್ನು ಚೌಕಸಿಯಿಂದಲೂ ಫಿನಾನ್ಸ್ ಕಮಿಟಿಯ ಸಹಾಯದಿಂದಲೂ ಈಗಿನ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಅದೇ ಖರ್ಚಿನ ಉತ್ಕೃಷ್ಟ ಅಥವಾ ಪರಮಾವಧಿ ಎಂದು ಭಾವಿಸಿದರೆ ಪ್ರಮಾದವಾದೀತು ಎಂದು ನಾಮದಾರ ಟೊಡ್ಡಂಟರ ಸಾಹೇಬರು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಸಹಕಾರ.

ಲೇಬರ್ ಯೂನಿಯನ್ನುಗಳು.

ಕಳೆದ ಡಿಸೆಂಬರ್ ೨೯ನೆ ತಾರೀಕಿಗೆ ಮದ್ರಾಸಿನಲ್ಲಿ ಜರಗಿದ ಪ್ರಾಂತಿಕ ಸಹಕಾರ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದ ಮದ್ರಾಸು ಹೈ ಕೋರ್ಟು ಜಡ್ಜ ನ್ಯಾಯಮೂರ್ತಿ ಟಿ. ವಿ. ಶೇಷಗಿರಿ ಅಯ್ಯರರು ಈ ಸಂಸ್ಥಾನದ ಮಜೂರರ ವಿಷಯವಾಗಿ ಈ ರೀತಿಯಾಗಿ ಹೇಳಿರುವರು.

"ಈ ಪ್ರದೇಶದ ಮಜೂರರು ತಂಡತಂಡವಾಗಿ ಅನ್ಯದೇಶಗಳಿಗೆ ಹೋಗಿ ಸೇರುವುದರಿಂದ ಇಲ್ಲಿ ಕೆಡುಕು ಬರುವುದೆಂದು ಈ ಸಂಸ್ಥಾನದ ಮಿರಾಸ್ದಾರರು (ಜಮೀನುದಾರರು) ಸಂಶಯಚಿತ್ತರಾಗಿದ್ದಾರೆ. ವರ್ಷವಿಡೀ ಅಂಥ ಕೃಷಿ ಮಜೂರರಿಗೆ ದುಡಿತ ಸಿಕ್ಕುವುದಕ್ಕೆ ಏರ್ಪಾಡು ಇದ್ದರೆ ಅವರು ಆ ರೀತಿ ಅನ್ಯದೇಶಗಳಿಗೆ ಹೋಗದಂತೆ ತಡೆಹಾಕಲು ಸಾಧ್ಯವಿದೆ ಎಂಬ ಇನ್ನೊಂದು ಕಡೆಯಲ್ಲಿ ನನ್ನ ಸೂಚನೆಯಿತ್ತು. ಕೃಷಿಕರ ಸಹಕಾರ ಸಂಘಗಳಲ್ಲಿ ಇಂಥ ಮಜೂರರನ್ನು ಮೆಂಬರರಾಗಿ ಮಾಡಿ ಗೌರವಾಸ್ಪದವಾದ ಮತ್ತು ದುರ್ವ್ಯಸನಗಳ ಗುಲಾಮರಾಗದ ರೀತಿಯ ದುಡಿತವನ್ನು ಅವರು ಮಾಡಿಕೊಳ್ಳುವಂತೆ ಉಪಕ್ರಮಿಸಿದರೆ ಅವರು ತಮ್ಮ ಹುಟ್ಟಿ ಬೆಳೆದ ದೇಶವನ್ನು ಬಿಟ್ಟು ಹೋಗಲಾರರು. ಇಂಥವರ ಗುಣನಡತೆಯನ್ನು ಆಧರಿಸಿ ಸಾಲಕೊಡಬೇಕು, ಮತ್ತು ಜೀನರಾದ ನಿರ್ದಯರಾದ ಧನಿಕರ ಕೈಯಿಂದ ಅವರನ್ನು ತಪ್ಪಿಸಬೇಕು. ಈ ವಿಷಯದಲ್ಲಿ ಮದ್ರಾಸು ಸೋಸಿಯಲ್ ಸರ್ವಿಸ್ ಲೀಗಿನವರು ಸ್ವಲ್ಪ ಸಾಹಸಮಾಡಿದ್ದಾರೆ. ಕೆಲವು ಕಡೆಗಳಲ್ಲಿ ನಿರಾಶ್ರಿತ ಜನರಿಗೆ ಗುಡಿಗುಡಿಸಲುಗಳನ್ನು ಕಟ್ಟಿಸಿಕೊಡುವುದಕ್ಕೂ ಒಳ್ಳೆ ಅಶನವಸನಾದಿಗಳನ್ನು ಒದಗಿಸಲಿಕ್ಕೂ ಸಾಧ್ಯವಾಗಿದೆ; ಅಷ್ಟೇಕೆ, ಈ ಜನರು ದುರ್ವ್ಯಸನಗಳಿಂದ ಪಾರಾಗಲಿಕ್ಕೆ ಈ ಮೂಲಕ ಪ್ರಯತ್ನವೂ ನಡೆಯಿತು."

ಈ ಮಾತುಗಳಿಂದ ಮಜೂರರ ಉದ್ಧರಣ ಕಾರ್ಯವು ಈಗ ಅಲ್ಲಲ್ಲಿ ಪ್ರಜಾಮುಖಂಡರ ಲಕ್ಷ್ಯಕ್ಕೆ ಬಂದಿದೆ ಎಂದು ಗೊತ್ತಾಗುವದು. ಮುಂಬಯಿ ಶಹರಿನಲ್ಲಿ ಕೆಲವು ವರ್ಷಗಳಿಂದಲೂ ಗಿರಣಿ ಮಜೂರರ ಸಹಕಾರ ಸಂಘಗಳನ್ನು ಏರ್ಪಡಿಸುವುದಕ್ಕೆ "ಸರ್ವೆಂಟ್ಸ್ ಆಫ್ ಇಂಡಿಯಾ" ಸೊಸೈಟಿಯ ಮೆಂಬರರಾದ ಶ್ರೀಯುತ ಜಿ. ಕೆ. ದೇವಧರ ಎಂಬವರು ಯತ್ನಿಸುತ್ತಲಿದ್ದಾರೆ. ಮಜೂರರ ಸ್ಥಿತಿಯು ಹಿಂದುಸ್ಥಾನದಲ್ಲಿ ಮಾತ್ರವೇ ಅಲ್ಲ, ಇತರ ದೇಶಗಳಲ್ಲಿಯೂ ಹೀನವಾಗಿದೆ ಎಂಬುದು ಕಾಣುತ್ತದೆ. ಆದರೆ ಅನ್ಯ ದೇಶಗಳಲ್ಲಿ ಜನರೊಳಗೆ ವ್ಯವಸ್ಥೆಯ ಕ್ರಮದ ಜ್ಞಾನವು ಬಲವಾಗಿದ್ದು ಮಜೂರರೇ ತಮ್ಮ ಸುಧಾರಣೆಯ ಕೆಲಸಕ್ಕೋಸ್ಕರ ಚಳವಳಿ ನಡಿಸುತ್ತಿದ್ದಾರೆ. ಇಲ್ಲಿ ಅಂಥ ಸಂಸ್ಥೆಗಳು ಅಪರೂಪವಾಗಿ ದೊಡ್ಡ ಶಹರುಗಳಲ್ಲಿ ಎದ್ದಿವೆ. ಅಂತು ಹಳ್ಳಿಯ ಈ ಬಗೆಯ ಮಜೂರರ ಸ್ಥಿತಿಯ ಸುಧಾರಣೆಯ ಕೆಲಸವು ಇನ್ನೂ ವ್ಯವಸ್ಥೆಗೆ ಬಂದಿಲ್ಲ. ಮದ್ರಾಸು ಪ್ರಾಂತಿಕಸರಕಾರದವರು ತಂಜಾವೂರು ಮೊದಲಾದ ಜಿಲ್ಲೆಗಳ ಕೃಷಿಮಜೂರರ—ಮುಖ್ಯವಾಗಿ ನಿರಾಶ್ರಿತ ಜನರ—ಹಿತಕ್ಕೋಸ್ಕರ ಯಾವ ಸವಲತ್ತುಗಳನ್ನು ಕೊಡಬೇಕು ಎಂದು ಗೊತ್ತುಹಚ್ಚುವದಕ್ಕೋಸ್ಕರ ಒಬ್ಬ ಸ್ಪೆಶಲ್ ಆಫೀಸರರನ್ನು ನೇಮಿಸಿದ್ದಲ್ಲದೆ, ಈ ಜನರಿಗೆ ಸರಕಾರ ಅಥವಾ ಖಾಸಗಿ ಸ್ಥಳಗಳಿಂದ ಗುಡಿಗುಡಿಸಲುಗಳಿಗೆ ಅನುಕೂಲವಾದ ಸ್ಥಳಗಳನ್ನು ಬಿಂಗಡಿಸಿ ಕೊಡಬೇಕೆಂದು ಯತ್ನಿಸುತ್ತಿದ್ದಾರೆ. ಈ ದೇಶದಲ್ಲಿ ಈ ಬಡಜನರಿಗೆ ಕೂಲಿಯ ದರವು [illegible]

[illegible]

...ಅವರು ಹಾಲಕ್ಕೆ ಹೋಗಿ ಧನಿಕರ [illegible]

(ಮುಂದೆಸಾಗುವದು)

ವಿಟ್ಲದಲ್ಲಿ ಜಮಾಬಂದಿ.

ಇದೇ ಕಳೆದ ಜನವರಿ ತಿಂಗಳ ತಾರೀಕು ೩೧ರಲ್ಲು ವಿಟ್ಲದಲ್ಲಿ ನಡೆದ ಜಮಾಬಂದಿ ಸಮಯ ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರ ದೊರೆಗಳವರ ಮುಂದೆ ರೈತ ಸಭೆಯಾದ ಕೊಡಪತ್ರವನ್ನು ಕೊಡಲಾಗಿತ್ತು. ಈ ಸಭೆಯಲ್ಲಿ ಮ। ರಾ। ರಾ। ವಿಟ್ಲ ರವಿವರ್ಮ ನರಸಿಂಹರಾಜರು ಮತ್ತು ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟು ಮ। ರಾ। ರಾ। ಬಿ. ರಾಮರಾಯರು, ಹಜೂರು ಶಿರಸ್ತೇದಾರ ಮ। ರಾ। ರಾ। ಯಂ. ಅಚ್ಯುತಯ್ಯನವರು—ಉಪ್ಪಿನಂಗಡಿ ತಾಲೂಕು ತಹಸಿಲದಾರ ಮ। ರಾ। ರಾ। ಬಿ. ಕೃಷ್ಣಾಚಾರ್ಯರು, ದಕ್ಷಿಣಕನ್ನಡ ಜಿಲ್ಲಾ ವ್ಯವಸಾಯ ಇಲಾಖೆಯ ಡೆಮೊನ್‌ಸ್ಟ್ರೇಟರರು, ಮ। ರಾ। ಕೆ. ಟಿ. ಆಳ್ವರು, ವಿಟ್ಲ ಸಬ್ ರಿಜಿಸ್ಟ್ರಾರ ಮಿಸ್ಟರ ಯಫ್. ಸೋನ್ಸರು, ಮ। ರಾ। ರಾ। ವಿ. ರಾಮಲಿಂಗಕೃಷ್ಣನಾಥಸ್ವಾಮಿಯವರು, ಇತರ ಕೆಲವು ಗೃಹಸ್ಥರು ಮತ್ತು ರೈತರು ಸಹಾ ಹಾಜರಿದ್ದರು. ಆಗ್ಗೆ ರೈತರು ಹೇಳಿಕೊಂಡ ಹಾಲಹವಾಲೆಗಳಿಗೆ ಈ ಕೆಳಗಿನ ಉತ್ತರಗಳು ದೊರಕಿದವು.

೧. ಪುತ್ತೂರು ಸ್ಟೇಶನಿನ ಸಾಯಿಮಾ ರಿಪೋರ್ಟುಗಳ ಪೈಕಿ ೩ರಲ್ಲಿ ೨ ಪಾಲು ವಿಟ್ಲ ಸರಹದ್ದಿನ ಗ್ರಾಮಗಳಲ್ಲಿ ಉಂಟಾಗುವ ತಕ್ರಾರುಗಳ ಬಾಬಿನಲ್ಲಿ ಆಗುವುದರಿಂದ ಸದರಿ ಗ್ರಾಮಗಳಿಂದ ಪುತ್ತೂರು ಸ್ಟೇಶನಿಗೆ ರಿಪೋರ್ಟು ರವಾನಿಸಿ, ಅಲ್ಲಿಂದ ಪೋಲಿಸಿನವರು ಬಂದು ತನಿಖೆ ನಡಿಸುವಾಗ್ಗೆ ದೇರಿಯಾಗುವ ಕಾರಣದಿಂದ ವಿಟ್ಲದಲ್ಲಿ ಪ್ರಕೃತ ಇರುವ ಔಟ ಪೋಸ್ಟಿನ ಬದಲಾಗಿ ಒಂದು ಪಕ್ಕಾ ಪೋಲಿಸ ಸ್ಟೇಶನ ಇಡಬೇಕಾಗಿ ಜ್ಯಾಹೀರುಮಾಡಿಕೊಂಡದ್ದಕ್ಕೆ, ಈ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪೋಲಿಸ ಸುಪರಿಂಟೆಂಡೆಂಟ ದೊರೆಗಳವರ ಕೂಡೆ ಆಲೋಚಿಸಿ ಹುಕುಂ ಮಾಡಲಾಗುವುದೆಂದು ಕಲೆಕ್ಟರ ದೊರೆಗಳವರು ಅಪ್ಪಣೆಕೊಟ್ಟರು.

೨. ವಿಟ್ಲದಲ್ಲಿರುವ ೨ ಸಹಕಾರಿ ಸಂಘಗಳ ಮ ಇತರ ಊರಿನವರ ಇನ್ನು ರೆನ್ಸ—ಸೇವಿಂಗ್ಸ್ ಬೆಂಕ ವಗೈರೆ ಲೇವಾದೇವಿಗಳ ಬಗ್ಗೆ ಸಬ್ ಪೋಸ್ಟಾಫೀಸು ಇಲ್ಲದೆ ಇರುವ ಕಾರಣದಿಂದ ಈಗ ಇರುವ ಬ್ರೆಂಚ್ ಪೋಸ್ಟಾಫೀಸನ್ನು ಸಬ್ ಪೋಸ್ಟಾಫೀಸಾಗಿ ಮಾಡಬೇಕಾಗಿಯೂ ಟಪ್ಪಾಲ ಬಟವಾಡೆ ಬಗ್ಗೆ ಟೌನ ಡೆಲಿವರಿ ಬಗ್ಗೆ ಒಬ್ಬ ಪೇದೆಯನ್ನು ಇಡಬೇಕಾಗಿಯೂ ಜ್ಯಾಹೀರು ಮಾಡಿಕೊಂಡದ್ದಕ್ಕೆ ಕೊ-ಒಪರೇಟಿವ್ ಸಂಘದವರು ಈ ಬಾಬಿನಲ್ಲಿ ಕೊ-ಒಪರೇಟಿವ್ ಅಸಿಸ್ಟೆಂಟ ರಿಜಿಸ್ಟ್ರಾರರ ಮುಖಾಂತ್ರ ಅರ್ಜಿ ಬರಕೊಂಡಲ್ಲಿ ಈ ವಿಷಯದಲ್ಲಿ ತಕ್ಕ ಏರ್ಪಾಟು ಮಾಡೋಣಾಗುವದುಂಟೆಂದು ಉತ್ತರ ದೊರೆಯಿತು.

೩. ರಿಜರ್ವ ಕಾಡುಗಳಿಂದ ತಮ್ಮ ಕಟ್ಟಿಗೆ ಸಾಗುವಳಿ ಉಪಯೋಗದ ಬಗ್ಗೆ ತೆಗೆಯಲಿಕ್ಕೆ ಬಿಡಬೇಕಾಗಿ ಕೇಳಿಕೊಂಡದ್ದಕ್ಕೆ ಗ್ರಾಮದ ಕೆಲವು ಮುಖ್ಯ ಗ್ರಾಮಸ್ಥರ ಜವಾಬ್ದಾರಿಗೆ ಒಳಪಟ್ಟು ತೆಗೆಯಬಹುದಾಗಿ ಸುರ್ಕ್ಯ ಕಾನ್ಫರೆನ್ಸಿನಲ್ಲಿ ನಿಷ್ಕರ್ಷೆಯಾದ ಸಂಗತಿ ತಿಳಿಸೋಣಾಯಿತು.

೪. ರಿಜರ್ವ ಕಾಡಿನಿಂದ ಮುಳಿ ಹುಲ್ಲು ತೆಗೆಯಬಹುದಾಗಿ ಹುಕುಂ ಇದ್ದರೂ ಕಾಡಿನ ಒಳಗೆ ಕತ್ತಿ ತೆಗೆದುಕೊಂಡು ಹೋಗುವುದು ತಕ್ರಾರಾಗುವುದರಿಂದ ಹುಲ್ಲು ಕೆಗಿಯಲಿಕ್ಕೆ ಕತ್ತಿಯಿಲ್ಲದೆ ಉಪಾಯವಿಲ್ಲದರಿಂದ ಕತ್ತಿ ತೆಗೆದುಕೊಂಡು ಹೋಗಲಿಕ್ಕೆ ಬಿಡಬೇಕಾಗಿ ಜ್ಯಾಹೀರುಮಾಡಿಕೊಂಡದ್ದಕ್ಕೆ ಮುಳಿಹುಲ್ಲು ಕೆಗಿಯುವ ಹುಲ್ಲು ಇರುವ ಕತ್ತಿಯನ್ನು ತೆಗೆದುಕೊಂಡು ಹೋಗುವಲ್ಲಿ ಯಾವ ಆತಂಕವಿಲ್ಲವೆಂತ ಕಲೆಕ್ಟರ ದೊರೆಗಳವರ ಅಪ್ಪಣೆಯಾಯಿತು.

೫. ರಿಜರ್ವ ಕಾಡಿನಲ್ಲಿರುವಂಥಾ ಕಾಡುಮೃಗಗಳ ದೆಶೆಯಿಂದ ಪೈರು ನಾಶವಾಗುವ ಕಾರಣ ಆಗಾಗ್ಗೆ ಶಿಕಾರಿಗಳನ್ನು ಏರ್ಪಡಿಸಬೇಕಾಗಿ ಹೇಳಿಕೊಂಡದ್ದಕ್ಕೆ, ತಿಂಗಳಿಗೆ ೨ ಸರ್ತಿ ಕಾಡು ಬಡಿದು ಕೊಲ್ಲಬಹುದಾದ ಮೃಗಗಳನ್ನು—ಫೊರೆಸ್ಟ್ ಗಾರ್ಡರನ್ನು ಇಟ್ಟುಕೊಂಡು ಶಿಕಾರಿ ಮಾಡಬಹುದೆಂತ ಈ ಮುಂಚೆ ಸುರ್ಕ್ಯ ಕೊನ್ಫರೆನ್ಸಿನಲ್ಲಿ ನಿಶ್ಚಯಿಸಿದ ಸಂಗತಿಯನ್ನು ತಿಳಿಸೋಣಾಯಿತು.

೬. ರಿಜರ್ವ ಕಾಡಿನಿಂದ ನೀರು ಕಣಿಗಳಿಂದ ಹರಿದು ಬರುವ ಮಳೆಮಾಲ್ ನೀರಿನ ದಾರಿಯನ್ನು ಸರಿಪಡಿಸಿ ನೀರು ಸರಿಯಾಗಿ ಗದ್ದೆಗಳಿಗೆ ಬರುವಂತೆ ನೀರು ಖಣಿಗಳನ್ನು ದುರುಸ್ತಿಮಾಡಿ ನೀರು ತಡಲಿಕ್ಕೆ ಬೇಸಾಯಗಾರರಿಗೆ ಅಪ್ಪಣೆಕೊಡಬೇಕಾಗಿ ಹೇಳಿಕೊಂಡದ್ದಕ್ಕೆ ಈ ಬಾಬಿನಲ್ಲಿ ಸುರ್ಕ್ಯ ಕೊನ್ಫರೆನ್ಸಿನಲ್ಲಿ ನೀರಿನ ಹಕ್ಕು ಬೇಕಾದ ಬೇಸಾಯಗಾರರೂ ಆ ಹಕ್ಕನ್ನು ವರ್ಷ ೧ಕ್ಕೆ ರೂಪಾಯಿ ಒಂದು ಯಾ ೧—೮—೦ಕ್ಕೆ ಗೇಣಿಗೆ ಪಡಕೊಂಡಲ್ಲಿ ಫೊರೆಸ್ಟ್ ಇಲಾಖೆಯವರು ಆಕ್ಷೇಪಿಸಲಿಕ್ಕಿಲ್ಲವೆಂದು ಡಿಸ್ಟ್ರಿಕ್ಟ ಫೊರೆಸ್ಟ್ ಆಫೀಸರರು ಕೊಟ್ಟ ಉತ್ತರವನ್ನು ತಿಳಿಸೋಣಾಯಿತು.

ವೈದ್ಯವಿದ್ಯ | ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇವನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು. | ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.
ವಿಳಾಸ:—
ರಾಜವೈದ್ಯ ನಾರಾಯಣಜೀ ಕೇಶವಜೀ,
೩೭. ಛೈನಾಬಜಾರು ರೋಡು, ಮದರಾಸು.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎವ್ಹ್ರ ರೆಡಿ ಸೇಫ್ಟಿ ರೇಝರು ಮತ್ತು ದಸ್ತೂರರ ಎಂಟಿಟೀಪ್ ಎಂಬುವ ಜ್ವರದ ಮಿಶ್ರಣವು ನಮ್ಮಲ್ಲಿ ದೊರಕುತ್ತದೆ. ಶೀಘ್ರದಲ್ಲಿ ಬರೆಕೊಳ್ಳಿರಿ.

TEL. ADDRESS:
PARTSARTHI, Bombay.
BOMBAY CANARA TRADING CO.
Jamnadas Building, Pitha Street,
FORT: BOMBAY.

ಈಗಳೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲ್ಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು ರಾ. ಆಲೀವಾನ ವೆಂಕಟರಾವ್ ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

☞ ಇವನ್ನು ಮದ್ರಾಸ ಸರಕಾರದವರು ೧೯೧೬ನೇ ವರ್ಷದ ಇಂಟರ ಮೀಡಿಯಟ್ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಲು ಪ್ರತ್ಯೇಕ.
ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.
ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯತಿಯಲ್ಲಿ ತಯಾರಾದವು. ಕಾಗದಗಳು ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯು ಇದ್ದರೆ ರಬ್ಬರು ಮೊಹರು ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಯ	110	ಅಕ್ಷರಗಳ ಪೆಟ್ಟಿ	ರೂ.	1—8—0
,,	170	,,	,,	1-14—0
,,	250	,,	,,	2—8—0
,,	350	,,	,,	3-12—0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.



ಈ ಗಡಿಯಾರವು ಮಜಬೂತಾಗಿರುವದು. ಘಾಳಿ, ಧೂಳು ಸೇರದಂತೆ ಎರಡು ಕದಗಳೂ ಇರುವವು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನಯವಾಗಿ ತಯಾರಿಸಿದೆ. ಬಹುಮಾನಗಳ ವಿವರ:— ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಜ್ ಪುಷ್ಪ ೧, ಬೀಸಣಿಗೆ ೧, ಬ್ರೂಚ್ ೧, ಬಾಚಣಿಗೆ ೧, ಸೆಂಟ್ ಬುದ್ದಿ ೧, ಜುಮ್ಲಾ ೧೧ ಬಹುಮಾನಗಳ ಸಹಿತ ರೂ. ೪—೮—೦.

ವಿಳಾಸ:— ರಾಸ್‌ವಾಚ್ ಎಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಬಾಲ್ಯದಲ್ಲಿಯೇ ಕಳೆದುಕೊಂಡು ಈ ಮರಣಾಂತರವ್ಯ ದುಃಖಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಶ್ವಾಸ ಬರುವುದೂ, ತಲೆನೋವು ಇವುಗಳೆಲ್ಲವೂ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವುದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದೂ ಇಲ್ಲವು. ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು. ಕ್ರಯ 15 ತೊಲೆ ಡಬ್ಬಿ 1ಕ್ಕೆ ರೂ. 2—0—0.
ವಿಳಾಸ:— ಡಾ|| ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. B. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ | ಮಂಗಳೂರು, ತಾರೀಕು ೨೮ನೇ ಫೇಬ್ರುವರಿ ಶುಕ್ರವಾರ ೧೯೩೦. | ಸಂಚಿಕೆ ೯.

'ನೈಟ್ರೇಟ್ ಒಫ್ ಸೋಡಾ'.

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿದ್ದಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕು ... ಹಟ್ಟಿಗೊಬ್ಬರ ಒಂದು ... ಬುಟ್ಟಿ. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

Director, Chilean Nitrate Committee,
(INDIAN DELEGATION),
1, *Royal Exchange Place*, CALCUTTA.

ಕಾಲೇರಾ! (ವಾಂತಿಭೇದಿ)

ವಾಂತಿಭೇದಿಯಿಂದ ಉಂಟಾದ ಹಾವಳಿ ಎನ್ನೆಂಬುದು ಈ ಕಾಲದ ಸರ್ವರ ಸ್ಮರಣೆಯಲ್ಲಿರಬಹುದು.

ಬಡಜನರು ಹೊಸ ಅಕ್ಕಿ ಈಗಲೇ ಊಟಮಾಡುವುದರಿಂದ ಈ ವಾಂತಿಭೇದಿಯು ಇನ್ನೂ ಹಬ್ಬುವ ಸಂದೇಹ ಇದೆ. ಇಂಥ ಕಾಲದಲ್ಲಿ ಜೀವಕ್ಕೆ ... ನಾಕೆ ಅಪಾಯವನ್ನು ತಂದುಕೊಳ್ಳುವಿರಿ. ಕೂಡಲೆ ಈ ಕೆಳಗಿನ ಔಷಧಿಯನ್ನು ಸಂಗ್ರಹಿಸಿಕೊಳ್ಳಿರಿ.

'ಕೆಂಪೊರೀನ್'
CAMPHOREINE

ಎಂಬ ಲೋಕಪ್ರಸಿದ್ಧವಾದ ಈ ಪರಿಹಾರದ ಔಷಧವನ್ನು,

ದಿ. ಒರಿಯಂಟಲ್ ಸ್ಪೆಸಿಫಿಕ್ ಡಿಪೊ, ವೆಪರಿ, ಮದ್ರಾಸು

The Oriental Specific Depot,
Vepery, MADRAS.

ಈ ವಿಳಾಸಕ್ಕೆ ಬರೆದಲ್ಲಿ ಸಿಕ್ಕುವುದು.

ಬೆಲೆ ೧ ರೂಪಾಯಿ. ಇದರಲ್ಲಿ ಅಂಚೆಹಾಸಲು ಸೇರಿಲ್ಲ.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖ್ಯಾತಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಸಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಇದು ಎಲ್ಲೆಲ್ಲಿಯೂ ದೊರಕುವುದು.

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತವೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪ್ಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋಜಗ್ ಟೌನ್, ಮದ್ರಾಸು. | 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕಷಾಯ

U. B. DUTT & Co. CALICUT.

ಮಲಿಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರು ಗಳಿಂದನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇವಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಡಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲಿ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೊಲೆರಾ, ಕಾಮಿಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಮಶಂಕೆ, ಮೊದಲಾದವೆಲ್ಲಕ್ಕೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದುವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗಿಯ ವಸ್ತ್ರಗಳು, ಧೋತಿಗಳು, ಪಂಚೆಗಳು, ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

☞ ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕಾಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ

ಡಿಶೆಂಬರ—ಜನವರಿಗಳ ಸಂಚಿಕೆಯು ಪ್ರಕಟವಾಗುವುದು.

ಇವರಲ್ಲಿ ಬರುವ ಮುಖ್ಯ ವಿಷಯ:—ಭಕ್ತಿಯ ವಿಚಾರ, ಸಾಸ್ರ ... ಸ್ವಾಮಿ ಶ್ರದ್ಧಾನಂದರ ಸಂಕ್ಷಿಪ್ತ ಜೀವನಚರಿತ್ರೆ, ಮತ್ತು ಶ್ರೀಮನ್ಮಧ್ವಾಚಾರ್ಯರ ಜೀವನಚರಿತೆ (ಭಾವಚಿತ್ರಗಳ ಸಹಿತ); ಶ್ರೀಯುತ ಅರವಿಂದ ಘೋಷರು ... ಕೆಂಪರಿಗೆ ... ಪತ್ರಗಳು; ದೇಶೀಯ ವಿದ್ಯಾಭ್ಯಾಸ, ಚಾಣಕ್ಯನ ಧರ್ಮಶಾಸ್ತ್ರ, ಪ್ರಾಸಂಗಿಕ ಟಿಪ್ಪಣಿಗಳು, ಹಿಂದೀವಿಭಾಗ, ಇವೇ ಮುಂತಾದ ಅನೇಕ ವಿಷಯಗಳು, ... 'ಪ್ರತ್ಯಕ್ಷ' ... ಬರುವವು. ಇದು ... ದೊರೆಯುವುದಿಲ್ಲ. ಸಂದೇಶದ ಮೊದಲನೆಯ (ಆಷಾಢದ) ಸಂಚಿಕೆಗಳೆಲ್ಲ ಮುಗಿದಿವೆ.

ಇದರಿಂದ ಜಾಹೀರಾತುಗಾರರಿಗೆ ವಿಶೇಷ ಲಾಭವಿರುವುದು. ದರಕ್ಕೆ ಬರೆಯಬೇಕು. ಕುರ್ತಕೋಟಿ ಮಹಾಭಾಗವತರ ಜೀವನ ಚರಿತ್ರೆ (ಚಿತ್ರ ಸಹಿತ) ಕ್ರಯ ೪ ಆಣೆ. ಶ್ರೀ. ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ ಕ್ರಯ ೪ ಆಣೆ.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರೀ ಸಂಚಿಕೆಯ ಬೆಲೆ ಆ. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂ ರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೊಮ್ಯೊಪೆಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಯೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಯೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತವೆ.

ಟಿಶ್ಯೂ ರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ.	0—3—6
,, 4 ,,	,,	,,	0—6—0
,, 1 ಔನ್ಸಿನ	,,	,,	0—12—0
ಹೊಮಿಯೊಪೆಥಿಕ್ 2 ಡ್ರಾಮಿನ	,,	,,	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಭಾವಚಖಾನೆ)
ರಥಬೀದಿ, ಮಂಗಳೂರು.

The Canara Banking Corporation, Limited, Udipi

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

Authorised capital	1,00,000—0—0
Issued capital	50,000—0—0
Subscribed capital	40,200—0—0
Paid up capital	35,134—1—11
Deposits	61,239—12—9
Reserve and other Funds	8,258—9—6

Fixed deposits received for 3, 6, 9 months at 6½% for 1 year and above at 7% at the discretion of the Managing Committee. In the case of all deposits interest will be paid quarterly

Cummulative deposits are received repayable in 45 months at Rs. [illegible]—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the last year Shares are available.

Payments to the Corporation may be made to the credit of the Corporation at the Bank of Madras, and Canara Bank Mangalore

[illegible]	... 50,100—0—0
[illegible] ಮೂಲಧನ	... 40,200—0—0
ಸಲ್ಲಿಸಿದ ಮೂಲಧನ	... 35,134—1—11
ಠೇವಣಾತಿಗಳು...	... 61,239—12—9
ಕಾಯಮನಿಧಿ ಮತ್ತು ಇತರ ಫಂಡುಗಳು ...	... 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತ ಸಭೆಯವರ ಮನಸ್ಸಿಗೆ ಬಂದ[illegible] ಸಾಲಿಯಾನ್ ಶೇಕಡಾ [illegible] 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡಲಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲಾಗುವದು.

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡಲಾಗುವದು

ಚಾಲ್ತಿ ಠೇವಣಾತಿಗಳು ಸಂಘದ ಖರ್ಚಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳಲಾಗುವದು ಪ್ರತಿ ತಿಂಗಳ 4ನೇ ತಾರೀಕಿನಿಂದ ಅಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲಾಗುವದು

ಯೋಗ್ಯ ಜವಾಬ್ದಾರಿಯ ಮತ್ತು ಅಡವಿನ ಮೇಲೆ ಸಾಲಗಳು ಕೊಡಲಾಗುತ್ತವೆ

ಪಾಲುವಸೂಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡಲಾಗಿಯದೆ ಶೇರುಗಳು ಮಾರಾಟಕ್ಕೆ ತಯ್ಯಾರಿವೆ

ಸಂಘಕ್ಕೆ ಕೊಡಲಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

UDIPI,
1st February 1919

Naimpalli Ananda Rao,
Secretary

ಕೇಸರಿ ಕುಂಕ್ಷ [illegible] ತೈಲ.

[illegible] ಉತ್ತಮ [illegible] ಮುಖ್ಯವಾದ ಹಲವು [illegible] ಸುವಾಸನೆಯ [illegible] ತಂಪು [illegible]

[illegible] ಮತ್ತು [illegible]

[illegible] ಪರೀಕ್ಷೆ [illegible]

[illegible] ಮತ್ತು [illegible] ಹಿತಕರ [illegible] ವಾಗಿದ್ದು ಬಹುಮೂತ್ರ ಪೀಡೆ [illegible] ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು, ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

[illegible] ಸೀಸೆಗೆ ಕ್ರಯ ರೂ 1—4—0 ಮಾತ್ರ

ಡಾಯಬಿಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣವಾಗುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 2 ಮಾತ್ರ ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.,
Chemists & General Merchants,
New Court Road, MANGALORE

ಅಲ್ಲದೆ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ! ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರ್ಗಣಿ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟದೇವರು
ಸಿಗಡಿ ಯಾಕೆ ಬಾಗಲಿಲ್ಲ ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ 0—7—0
ವಿ ಪಿ ರೂ 0—8—0

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ ವಾಚನಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ — ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು

ಕರ್ನಾಟಕ ಮಹಾಶಯರೇ ಓದಿದಿರಾ'

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ, ಇಂಗ್ಲಿಷ [illegible] ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ. ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು, ವೀರ್ಯವೃದ್ಧಿ [illegible] ಕಾರಣಗಳು, ಗರ್ಭದ [illegible] ಉತ್ಪತ್ತಿ ವಿಧಿ, ಶಿಶು ಸಂರಕ್ಷಣೆ [illegible] ಸ್ತ್ರೀಧರ್ಮ [illegible] ಕಾಮಶಾಸ್ತ್ರ (ಗುಪ್ತವಿದ್ಯೆ) [illegible] ಸ್ತ್ರೀಪುರುಷರ [illegible] ರೋಗಗಳನ್ನು [illegible] ಚಿತ್ರಗಳ ಸಹಿತ [illegible] ಕ್ರಯ ಪ್ರತಿ [illegible]

ಇನೆಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ

ಕೋಲ (ಮೂಗ್ಗು) ಮತ್ತು ಪಾಕಶಾಸ್ತ್ರ

ಈ ಪುಸ್ತಕದಲ್ಲಿ ನವೀನರೀತಿಯಿಂದ ಕೋಲುಚಿತ್ರಗಳನ್ನು ಬಿಡಿಸಿ [illegible] ವಿಧ, [illegible] (Sweetmeats) [illegible] (Cakes) [illegible] (Biscuits) [illegible] (Syrup) [illegible] ಕ್ರಯ [illegible]

ವಿಳಾಸ — ಮಹಾರಾಜ ಪುಸ್ತಕಶಾಲೆ,
ಅರುಣಾಚಲ ಮೊದಲಿ ಬೀದಿ, ಸಾಹುಕಾರ್ ಪೇಟ್, ಮದರಾಸ್

ಮಲೇರಿಯ.
ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ [illegible]

[illegible]

ಕರ್ನಾಟಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent — The Woollen Mart, *Mangalore*

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ ವಿಲ್ಲಿಯಮ್ಸ್ ಡೆಂಟೋನ್ ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುದಿನ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೇಗ ಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿಯ ತಿನ್ನುವರೆ ಅನುಕೂಲವಾಗಿ ಕೊನೆ ಕಾಲ ಬದುಕಲಿಕ್ಕೆ ಅಸ್ತದ ಉಂಟಾಗುತ್ತದೆ

ಅನುಭವಕ್ಕೆ ಮುಖ್ಯ
ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!
ಕ್ರಯ ಆಣೆ 5 ಮತ್ತು ಆಣೆ 9

ನಮ್ಮ ದೂರುಗಳಲ್ಲಿ ಏಜಂಟರಾಗಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು,

ಹೆಡ್ ಏಜಂಟ್ — ಜಿ. ಎಸ್ ಸೋಜ ಮತ್ತು ಕಂಪೆನಿ,
ಶಂಕರಪುರ [illegible] ಮಂಗಳೂರು

ಹುಡುಗರು
ಸಶಕ್ತರೂ ನಿರೋಗಿಗಳೂ
ಆಗುವದಕ್ಕೆ
ಡೋಂಗರೆ
ಇವರ ಬಾಲಾಮೃತವನ್ನು
ಕೊಡುವದು

ಇದು ಒಂದೇ
ಉಪಾಯವಿರುತ್ತದೆ

ಒಂದು ಶೀಸೆಯ ಬೆಲೆ [illegible] ಆಣೆ,
ಟಪ್ಪಾಲು ಖರ್ಚು [illegible] ಆಣೆ

ಕೇ ಟೀ ಡೋಂಗರೆ ಕಂಪನಿ,
ಗಿರಿಗಾಂವ ಮುಂಬಯಿ

ಮಂಗಳೂರು ಏಜಂಟರು
ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್,

ಆರ್. ಮಾರ್ಟಿನ್ಸರ ಲಪ್ತಾ ಎಣ್ಣೆ.

ಇದರ ವಾಸನೆಯು (ಪರಿಮಳವು) ಬಹಳ ಆಂದವಾಗಿಯೂ [illegible] ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯ ನಿತ್ಯ ತಲೆಗೆ ಹಾಕಿಕೊಳ್ಳುವದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ ಆಗುವದಲ್ಲದೆ [illegible] ಇದನ್ನು ಪ್ರತಿದಿವಸವು ಉಪಯೋಗಿಸುವದರಿಂದ ಕೂದಲುಗಳು [illegible] ತಲೆಬುರುಡೆಯನ್ನು [illegible] ಮತ್ತು ಇದನ್ನು ಉಪಯೋಗಿಸಿದ [illegible] ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ಒಕ್ಕೆ ರೂಪಾಯಿ [illegible]

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲು, ಗೂರಲು, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು! ಒಂದೇ ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ ಅನಂತರ ಯಾವ ಔಷಧಕ್ಕೂ ಗಮನ ಕೊಡವರುಬಿಂ [illegible] ಎಲ್ಲಾ ವಿಧವಾದ ಕೆಮ್ಮುಗಳೂ [illegible] ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ [illegible]

[illegible]

ಆರ್ ಮಾರ್ಟಿನ್ಸರ ಗ್ಲಿಟೋಡಾಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಸೀಸೆಗಳ ಔಷಧವನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವ [illegible] ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ [illegible] ಬಿಳುಪು ಹೋಗುವುದು, [illegible] ಸಿಂಕುಹೋಗುವ [illegible] ಮೂತ್ರವ [illegible] ಸೀಸೆ ಒಂದಕ್ಕೆ ರೂ. 3—0—0

ವಿಳಾಸ — ಆರ್, ಡಿ. ಕಟ್ಲೆ ಮತ್ತು ಕಂಪನಿ
ನಂಬ್ರ 1 ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತರ, ಫೋರ್ಟ್, ಮುಂಬಯಿ

R. D. Kately & Co.
No. 1 Frere Road.
Near Wright & Co. Fort Bombay

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ರೋಗ ನಿವಾರಣಿ:—ಸ್ತ್ರೀಯರ ಗಾಗುವ ವಿವರಿಸಲಸದಳವಾದ ಯಾತನೆ ನಾಗಿ ಗುಣಪಡಿಸುವುದು.

ಕ್ರಯ ರೂ. 3. ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗೆದುಕೊಳ್ಳುವುದರಿಂದ ನಿರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ಚಟಕುಗಳನ್ನು ಸೇವಿಸುವುದರಿಂದ ಇನ್‍ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ವಳ್ಳಿ ಅಮ್ಮಾಳ್ ಅನ್ನಸರೀ ಕುರಿರಮ್,
ಆಯುರ್ವೇದ ಔಷಧಾಲಯ,
3 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ್, ಮದರಾಸ್.
9 ಬಂದರ್ ಸ್ಟ್ರೀಟ್,
ಜಾರ್ಜಟೌನ್, ಮದರಾಸ್.

ತಮ್ಮನ್ನು ... ಪ್ರಕ್ಯಾತರಾದ ಚಿಕಿತ್ಸಕರು ಇನ್‍ಫ್ಲುಯೆನ್ಸಾ ಜ್ವರಕ್ಕೆ ತಮ್ಮ ನಾಯಕರನ್ನು ಮತ್ತು ನಿರ್ಧಾರವಾದಿಕೊಂಡಿದ್ದಾರೆ ...

ಎಮ್ಕೊ

ಖಾತ್ರಿ ಚಿಕಿತ್ಸೆ!

ಇನ್‍ಫ್ಲುಯೆನ್ಸಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗ ತಾನೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬವಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‍ಫ್ಲುಯೆನ್ಸಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ತಟ್ಟದಂತೆ ತಡೆಗಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‍ಫ್ಲುಯೆನ್ಸಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಗಳ ಕೂಟದಿಂದ ಅತಿ ನಿರ್ದುಷ್ಟತೆಯಿಂದ ತಯಾರಿಸಿರುತ್ತದಾದ ಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜನರಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಅಲ್ಲದೆ ಇದು ಕೊಲೆರಾ ರೋಗಗಳನ್ನು ಗುಣಪಡಿಸುತ್ತದೆ.

ಕ್ರಯ ಸೀಸೆ 1ರ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಧಾನ ಏಜಂಟರು:— ದಿ ಇಕ್ವಿಟೀಸ್ ಏಜೆನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಿತರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir,
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ ಪೋಸ್ಟ್, ಸ. ಕ.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಬಂದು ನಾಳೆ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‍ಪೆನ್‍ಗಳೂ, ಥರಮಾಮೀಟರ್ ಎಂಬ ಅತ್ಯುತ್ಕೃಷ್ಟ ಉಷ್ಣತಾಮಾಪಕ ಯಂತ್ರಗಳೂ, ರಬ್ಬರಿನ ಫೌಂಟೇನ್ ಚೀಲಗಳೂ, ಐಸ್‍ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಪಿರಿಟ್ ವಸಂತಾದಷ್ಟಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು
ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಈ ಔಷಧಗಳನ್ನು ಉಪಯೋಗಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರುಂಟು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಳ್ಳೆ ಬೆಲೆ ನಗದು ವ್ಯಾಪಾರ! ರೋಗಿಗಳ ಗುಣವೇ ನಮ್ಮ ಉದ್ದೇಶ! ಬೇಗ ಇಲ್ಲಿ ಒಂದುಸಲ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಲ್ಪ ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣಯುಕ್ತವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ... ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯು ಪ್ರಖ್ಯಾತರಾದ ವೈದ್ಯರೂ ಆದ ದಾಮೋದರ ನಂಬೀಶನವರ ಅಧೀನದಲ್ಲಿ ನಡೆಯುತ್ತಿರುವುದರಿಂದ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೆ ಪರೀಕ್ಷಿಸಿ ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರೆಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರೆಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವುವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‍ಫ್ಲುಯೆಂಜಾ) ಒಳಪಟ್ಟಂತೆ ಪ್ರಾರಂಭದ ಜ್ವರಗಳ ಮೇಲೆ ರಾಮಬಾಣವಾಗಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತವಾಗಿರುವುದು. ೨೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮೊದಲು ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯು ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೨೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನಮದ್ಯುತಿ—ತಿಮಿರ, ಉರಿಗಣ್ಣು ನರ ಏಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇರುಳುಗಣ್ಣು, ಕೀವು ಬರುವುದು, ಇವು ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್,
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ.

ಎಲ್ಲರಿಗೂ ಬೇಕಾದ್ದು.

ನಮ್ಮ ಪರಿಶುದ್ಧ ಹಿತೈಷಿಯಾದ ತರತರವಾದ ಹೂವಿನ ಸಾರಗಳು, ೧೨ ಮುದ್ದು ಸೀಸೆಗಳಿಗೂ ಪೆಟ್ಟಿಗೆ ೧ಕ್ಕೆ ರೂ. ೩. (ರವಾನಿಸುವ ಖರ್ಚು ಅಡಕವಿದೆ) ನಿಮ್ಮ ಆರ್ಡರಿನ ಸಂಗಡ ೧ ರೂಪಾಯಿ ಕಳುಹಿಸಬೇಕು. ಬಾಕಿ ಮೊಬಲಗಿಗೆ ವಿ. ಪಿ. ಮಾಡುತ್ತೇವೆ.

ಎಸ್. ಟಿ. ಎ.
ಬೆಂಗಳೂರು ಸಿಟಿ.

ಕ್ರಯ ರೂ. 1—8—0. **ಪ್ರಶ್ನೋತ್ತರ** ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯಾದ ಒಕ್ಕಣೆಗಳಿವೆ. ಲೌಕಿಕ ವೈದಿಕ ಮರ್ಯಾದೆಗಳಿವೆ. ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲೆ, ಮರಣಶಾಸನ, ಪಾಲುಪಟ್ಟಿ, ಗುತ್ತಿಗೆ, ವಾಲುಗಾರಿಕೆ, ಹುಂಡಿ, ಚೆಕ್ಕು, ಇವುಗಳ ಮಾದರಿಗಳು, ರಶೀದಿಗಳು, ಸ್ಟ್ಯಾಂಪು, ರಿಜಿಸ್ಟ್ರೇಷನ್; ಸಿವಿಲ್ ಕೋರ್ಟ್ ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಜ್, ಒರಿಜಿನಲ್, ರಿವ್ಯೂ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ವಾಯಿದೆ, ಕೋರ್ಟ್ ಫೀ ಸ್ಟ್ಯಾಂಪು, ರೆವಿನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯ ಛಾಂಕ್ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಕೋರ್ಟ್ ವಿಧಾನ—ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನುಗಳೆಲ್ಲವೂ ಇದರಲ್ಲಿ ಅಡಗಿವೆ. ಕಾಗದದ ಬರದಿಂದ ಬಹು ಸ್ವಲ್ಪ ಪ್ರತಿಗಳೇ ಅಚ್ಚಾಗಿದೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾಯಿ. 1—8—0, ಅಂಚೆಯ ವೆಚ್ಚ ಬೇರೆ.

[87-19] ವಿಳಾಸ:— "ಸವಿನುಡಿ" ಆಫೀಸು,
122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಧಾತುವು ಹೋಗುತ್ತಿದ್ದರೂ, ಧಾತುವು ಕೆಟ್ಟುಹೋಗಿದ್ದರೂ ಬಹು ಬೇಗನೆ ಗುಣಪಡಿಸುವದು. ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು. ಕೈ ಕಾಲು, ಸೊಂಟದ ನೋವುಗಳನ್ನು ಕೂಡಲೆ ಬಿಡಿಸುವದು. ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು.

ಕ್ರಯ ೪೦ ಮಾತ್ರೆಗಳ ಡಬ್ಬಿ ೧ಕ್ಕೆ ೧—೦—೦

ವಿಳಾಸ:— ಮದನಮಂಜರಿ ಫಾರ್ಮಸಿ,
೬೭. ಬ್ರಾಡ್‍ವೇ ಬಜಾರು ರೋಡು, ಮದರಾಸು.

ಡಾಕ್ಟರ್ ವೈ. ನಿಶಿಮ್ಯೂರಾ ಎಂಬವರು ಮಂಗಳೂರು ಹಂಪನಕಟ್ಟೆ "ಪಿರೇರಾ ಬಿಲ್ಡಿಂಗ್ಸಿನ" ಮಾಳಿಗೆಯಲ್ಲಿ ತಮ್ಮ ಆಫೀಸು ಮಾಡಿರುವರು.

ಎಲ್ಲಾ ವಿಧದ ದಂತಚಿಕಿತ್ಸೆಗಳನ್ನೂ ಅತ್ಯಾಧುನಿಕ ರೀತಿಯಲ್ಲಿ ಮಾಡುವರು.

ಗಿರಾಕಿಗಳನ್ನು ಪರೀಕ್ಷಿಸಿ ಅಭಿಪ್ರಾಯಕೊಡುವುದಕ್ಕೆ ಫೀಸೇ ತೆಗೆದುಕೊಳ್ಳೋಣವಾಗುವುದಿಲ್ಲ.

Dr. Y. Nishimura.
Japanese Dentist.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಧರಿಸಿ ಹಾಕಿದರೆ ಕ್ರಿಮಿಯಿಂದ ಕ್ಷಾರವಾದಿಗಿ ಕೊಂಡಿದ್ದ ಕಶ್ಮಲವು ಚೆನ್ನಾಗಿ ಹೋಗುತ್ತದೆ. ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆಯಬಹುದು.

ನಮ್ಮ ದರ್ಬಾರ್ ಸೋಪು.

ಗಂದೆ, ಬೊಕ್ಕೆ, ತುರಿ, ಹುಳುಕಡ್ಡಿ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುತ್ತದೆ.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ ರೂ. 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ „ 1—10—0.
ವಿಲಾಯಿತಿ ರವಾನಿಸುವ ಖರ್ಚು . . . „ 0— 8—0.

ವಿಳಾಸ— ವೈರಂ ಅಂಡ್ ಕೊ,
ಇರುಳೆಪ್ಪನ ಬೀದಿ, ಮದರಾಸು.

---

೧೯ ಒಂದನೇ ಆಷಾಢದಿಂದ ಆರಂಭ } **ಸದ್ಬೋಧಕ ಗ್ರಂಥಮಾಲೆ.** { ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

(ತ್ರೈಮಾಸಿಕ ಪುಸ್ತಕ)

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧಗಳೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವು; ಬುದ್ಧಿ ವಿನೋದಕಾರಕ, ಸ್ವಾರಸ್ಯಕರ, ವಿನೋದ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುತ್ತದೆ. ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರುವುದರಿಂದ ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ಒಂದೇ ರೂಪಾಯಿ ಇಟ್ಟಿರುತ್ತೇವೆ. ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತ್ಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಯುಕ್ತವಾಗಿಯೂ ಪೂರ್ಣವಾಗಿ ಕೊಡಲ್ಪಟ್ಟ ಮೂಲಧನವು ರೂ. 300,000—0—0
Reserve and other sinking Funds „ 120306—11—0	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 120306—11—0

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ತೆಗೆದುಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರೆಯತಕ್ಕದ್ದು.

Canara Bank Ltd.,
Mangalore, 6th January 1920.

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ, ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜವಾದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ಸೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವೆಂಡರ್. ಶೀಸೆ 1ಕ್ಕೆ 1—4—0.

ವರ್ಷನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಒಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

New Discoveries of the Twentieth Century.

Substitute for Quinine!

Powder I. [illegible] ಮಲೇರಿಯಾ [illegible] ಜ್ವರಗಳಿಗೆ [illegible] ರೂ. [illegible]

Smallpox Preventive.

[illegible] No. II—2 and 3—7 [illegible] (ವ್ಯಾಕ್ಸಿನೇಶನ್) [illegible] ರೂ. 1—0—0.

Cholera Specific.

[illegible] No. I. ಕಾಲರಾ ಎಂಬ ವಾಂತಿಭೇದಿಯು ಎಷ್ಟು [illegible] ರೂ. 1—8—0.

Vishuchikanjan.

Pills No. II. ವಾಂತಿಭೇದಿಯು [illegible] ಕಾಲರಾ ಎಂಬ ವಾಂತಿಭೇದಿಯು ಹತ್ತಿರ ಬಾರದು [illegible]

24 ಮಾತ್ರೆಗಳಿಗೆ ರೂ. 1—0—0.

N. B. ಈ ಔಷಧಗಳ ವಿವರ ನಮ್ಮ ಪಟ್ಟಿಯಲ್ಲಿ ಎಲ್ಲಾ [illegible] ಸ್ತ್ರೀಯರ [illegible] ಕರಲ್ಲಿ ಸ್ತ್ರೀರೋಗಗಳಿಗೆ [illegible]

SRI BHAVANISHANKER AYURVEDIC DESPENSARY,
BRAHMAVAR, S. KANARA.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರ—

ಧಾತುರಂಜಿತ—ಪ್ರ

ಕಾರಿ.

ಅಕ್ರಮದಿಂದ ಬರುವ ಜ್ವರಗಳಿಗೆ [illegible] ನಂತಿರುವ [illegible] ಪತನವಾಗಿ [illegible] ಧಾತುಸ್ರಾವದಿಂದಲೂ [illegible] ಇವೇ ಮುಂತಾದ [illegible] ಗಳುಂಟಾಗುವ [illegible] ಗಳಲ್ಲಿ ಈ ವಿಧ [illegible] ಕಾರಣ, ಚಿಕಿತ್ಸಾ [illegible] ಮೂಲೇಂದ್ರಿಯ ರೋಗ ಅಧ್ಯಾಯ [illegible] ಕ್ರಮ, ನಪುಂಸಕತ್ವ-ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲ ಕರ್ತೃ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೆಯಲ್ಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ 1ಕ್ಕೆ ರೂ. ೧—೮—೦.

ನಮ್ಮ ವಿಳಾಸ:— **ಭಾರತಿ ಬುಕ್ ಡಿಪೋ,**
೪೭೧, ನಗರ್ತಪೇಟೆ, ಬೆಂಗಳೂರು ಸಿಟಿ.

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರೆ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಡ್ರಾಮಿನ ಶೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗೆ ಹಚ್ಚಿದರೆ ಬಹಳ ಉತ್ತಮ.

4 ಡ್ರಾಮಿನ ಶೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಶೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪರಂಪರೆ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರಿಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಲಾಗುವುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೋಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯಾ

ಕ್ರಯ

					ರೂ. ಆ. ಪೈ.
ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ	0—3—6
ನಾಲ್ಕು „	C	„	„	„	0—6—0
ಒಂದು ಔನ್ಸಿನ	A	„	„	„	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕಪೆಟ್ಟಿಗೆಗೆ					3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.					10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಟಿಕ್ಸ್ ಹೋಮಿಯೋಪೆತಿ ಡಿಸ್ಪೆನ್ಸರಿ, ಮಂಗಳೂರು.

ಫೀಸು ಇಲ್ಲ! ರೋಗಪರೀಕ್ಷೆಗೆ. ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೋ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡುಬರುತ್ತದೆ. ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೋ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು."

ಡಾ॥ ಎನ್. ಜೇ. ಸರದೇಸಾಯಿ,
ಎಮ್. ಡಿ. (ಲಂಡನ್).

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮ್ಮಾಯಿ ದೇವಾಲಯದ ಹಿಂದುಗಡೆ, ಮಂಗಳೂರು.

ಇಲ್ಲಿಗೆ ಬಂದು ನಿಮಗೆ ಬೇಕಾದಂತಹ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ, ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— **ಬಿ. ಆರ್. ಹರಿದಾಸ್, ಚಿಕಿತ್ಸಕರು.**

ಇವರು ಹೊಸಬರಲ್ಲ! ಏಕೆಂದರೆ ಭಯಂಕರವಾದ ನ್ಯುಮೋನಿಯಾ, ಪ್ಲೇಗು, ಟೈಫಾಯಿಡ್, ಕಾಲರಾ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ ಕಷ್ಟಸಾಧ್ಯವೂ ಗೂಢವೂ ಆದ ರೋಗಗಳನ್ನು ದಿವ್ಯ ವನಸ್ಪತಿಗಳ ಮೂಲಕ ಸ್ವಲ್ಪ ಕಾಲದಲ್ಲಿಯೂ ಗುಣಪಡಿಸಿ ಸುಪ್ರಸಿದ್ಧರಾಗಿರುವರು. ಬಂದು ಒಂದು ಸಾರಿ ಪರೀಕ್ಷಿಸಿ ನೋಡಿ!

ಡಾಕ್ಟರ್ ಎ. ಎಲ್. ನಾಯರ್‌ರವರ ಧನಸಹಾಯ.

ಈ ಮಹನೀಯರು ಕಾರ್ಕಳ ಸಭೆಗೆ ಕಳುಹಿಸಿದ ತಂತಿ ಪ್ರಕಾರ ರೂ. ೧೦೦೦, ಸಂಘಕ್ಕೆ ಕೊಟ್ಟಿರುವದಲ್ಲದೆ, ಈ ವರ್ಷ ಜನವರಿ ಲಾಗಾಯ್ತು ಪ್ರತಿ ತಿಂಗಳಿಗೆ ರೂಪಾಯಿ ೧೦೦ರಂತೆ ವಿದ್ಯಾರ್ಥಿವೇತನದ ಬಗ್ಗೆ ಸಹಾಯ ಧನ ಕೊಡುತ್ತೇವೆಂಬುದಾಗಿ ತಿಳಿಸಿರುತ್ತಾರೆ. ಉದಾರ ಚಿತ್ತರಾದ ಈ ಮಹಾನುಭಾವರಿಗೆ ಸಂಘದ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಿರುತ್ತೇವೆ.

ಮಂಗಳೂರು,
ತಾ. 25—2—20.

ಕೋಶಾಧಿಕಾರಿ,
ಬಂಟರ ಯಾನೆ ನಾಡವರ ಸಂಘ.

ಬಂಟರ ಯಾನೆ ನಾಡವರ ಪರಸ್ಪರ ಸಹಾಯಕ ಸಂಘ.

ಈ ಸಂಘವು ಕಳೆದ ತಾ. ೨೩ರಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ವರ್ತಕರಂಗಳಲ್ಲಿ ಮಂಗಳೂರು ಬಂದರದಲ್ಲಿ ಭಂಡಸಾಲೆಯನ್ನು ತೆರೆಯಬೇಕಾಗಿ ನಿಶ್ಚಯಿಸುತ್ತದೆ. ಸ್ವಜಾತಿ ಗೃಹಸ್ಥರೆಲ್ಲರೂ ಸಂಘಕ್ಕೆ ಸೇರಿ ಪ್ರೋತ್ಸಾಹಿಸಬೇಕಾಗಿ ವಿಜ್ಞಾಪನೆ.

ಶ್ರೀಸ್ವಾಮುಕೃಷ್ಣ ವಿದ್ಯಾರ್ಥಿಭವನ
ಕಾರ್ಕಳ. 25—1—1920.

ಕೆ. ರಾಮಯ ಹೆಗ್ಗಡೆ,
ಕಾರ್ಯದರ್ಶಿ.

ವಿದೇಶ ವರ್ತಮಾನ.

ಯುರೋಪಿನ ಪರಿಸ್ಥಿತಿ — ಜರ್ಮನ್ ಸುಲ್ತಾನರನ್ನು [illegible] ಮತ್ತು [illegible] ಜರ್ಮನಿಯ ಸುಲ್ತಾನರ [illegible] ಮಿತ್ರಪಕ್ಷದ ರಾಯಭಾರಿಗಳ [illegible] ಜರ್ಮನಿಯವರ [illegible] ಯಾರಿಗೆ [illegible] ಒಂದು [illegible] ಬಂದಿದೆ. [illegible] ಮತ್ತು [illegible] ಎಂಬುದಕ್ಕೆ ಈ ವರೆಗಿನ [illegible] ಅರ್ಥ [illegible] ಬರುತ್ತದೆ.

ಪ್ರೆಸಿಡೆಂಟ ವಿಲ್ಸನರು ಕೆಲವು ಕಾಲ ಅನಾರೋಗ್ಯದಿಂದಿದ್ದು [illegible] ಕೆಲ [illegible] ಬರೆಯದವರಾಗಿದ್ದರು. ಈಗ ಸ್ವಲ್ಪ ಸ್ವಸ್ಥರಾಗುತ್ತ ಬಂದಿದ್ದು ಪುನಃ [illegible] ತೊಡಗಿದ್ದಾರೆ. ಇವರು ಮಿತ್ರಪಕ್ಷದವರಿಗೆ ಬರೆದ ಪತ್ರದಲ್ಲಿ ಇಟಲಿಗೂ ಯುಗೊಸ್ಲೇವ ಜನಾಂಗದವರಿಗೂ ಪರಸ್ಪರ ಒಪ್ಪಂದ [illegible] ಆಲೋಚನೆಯಾದ ಶರ್ತಗಳಲ್ಲಿ ಆಕ್ಷೇಪ ಎತ್ತಿದ್ದಾರೆ. ಪ್ರೆಸಿಡೆಂಟ ವಿಲ್ಸನರು ಪ್ಯಾರಿಸಿನಲ್ಲಿ ಇದ್ದಾಗ ಈ ಯುಗೊಸ್ಲೇವ ಮುಂತಾದ [illegible] ಹಕ್ಕುಗಳನ್ನು ಕೊಡಬೇಕೆಂದು ಪ್ರತಿಪಾದಿಸಿದ್ದರು. ಆದರೆ ಅಡ್ರಿಯಾಟಿಕ ಕರಾವಳಿಯ ವಿಷಯವಾಗಿ ಈ ಯುಗೊಸ್ಲೇವರಿಗೂ ಇಟಲಿಗೂ ಚರ್ಚೆ ನಡೆಯುವ ಕಾಲದಲ್ಲಿ ಈ ಪ್ರೆಸಿಡೆಂಟರು ಅಸ್ವಸ್ಥದಲ್ಲಿ ಇದ್ದರು. ಯುಗೊಸ್ಲೇವರಿಗೆ ಕೆಲವು ಶರ್ತಗಳನ್ನು ಅವರು ಒಪ್ಪದಿದ್ದರೆ ಹಿಂದೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿಯವರೊಳಗೆ ಲಂಡನಿನಲ್ಲಿ ಯುದ್ಧ ಮಧ್ಯ ಕಾಲದಲ್ಲಿ ಆದ ಒಡಂಬಡಿಕೆಯ ಮೇರೆಗೆ ಅಡ್ರಿಯಾಟಿಕ ಕರಾವಳಿಯ ಪೂರ್ಣ ಹಕ್ಕನ್ನು ಇಟಲಿಯವರಿಗೆ ಬಿಟ್ಟು ಕೊಡಬೇಕಾದೀತು ಎಂದು ಎಣಿಸಿ ಯುಗೊಸ್ಲೇವರಿಗೆ ಪತ್ರ ಹೋಗಿತ್ತು. ಈ ಪತ್ರದಲ್ಲಿ ಬರೆದಂತೆ ಯುಗೊಸ್ಲೇವರಿಗೆ ಬಲಾತ್ಕರಿಸುವುದು ಸಂಧಿ ಪ್ರಸ್ತಾಪದ ಕಾಲದಲ್ಲಿ ಏರ್ಪಡಿಸಿದ ಆತ್ಮನಿರ್ಣಯದ ಸೂತ್ರಗಳಿಗೆ ಸರಿಹೋಗಲಾರದು ಎಂದು ಪ್ರೆಸಿಡೆಂಟ ವಿಲ್ಸನರ ಆಕ್ಷೇಪ. ಅನಂತರ ಚರ್ಚೆ ನಡೆಯುವ ಕಾಲದಲ್ಲಿ ಅಂದರೆ ಯುಗೊಸ್ಲೇವ ಮತ್ತು ಇಟಲಿಯವರ ಚರ್ಚೆ [illegible] ಕಾಲದಲ್ಲಿ ಅಮೇರಿಕದ ಪ್ರತಿನಿಧಿಗಳು ಯಾರೂ ಇಲ್ಲದೆ ಇದ್ದು ಈಗ ಈ ರೀತಿಯ ಆಕ್ಷೇಪಗಳನ್ನು ಎತ್ತುವುದು ಸರಿಯಲ್ಲವೆಂದು ಮಿತ್ರಪಕ್ಷದ ಕೌನ್ಸಿಲಿನವರು ಉತ್ತರ ಕೊಟ್ಟಿದ್ದಾರೆ. ತಮ್ಮ ಸೂತ್ರಗಳಿಗೆ ವಿರೋಧವಾದ ರೀತಿಯಲ್ಲಿ ಯುಗೊಸ್ಲೇವರಿಗೆ ಶರ್ತಗಳನ್ನು ಕೊಟ್ಟರೆ [illegible] ಒಪ್ಪಂದಕ್ಕೆ ಅಮೇರಿಕದ ಅನುಮತಿಯು ಸಿಗಲಾರದು ಎಂದು ಪ್ರೆಸಿಡೆಂಟ ವಿಲ್ಸನರು ಈ ದಿನದಲ್ಲೇ ಹೇಳುವುದರಿಂದ ಈಗ ಮಿತ್ರಪಕ್ಷದ ಕೌನ್ಸಿಲಿನವರು ಏನು ಉತ್ತರ ಕೊಡುತ್ತಾರೆಂದು ನೋಡಬೇಕಾಗಿದೆ.

ಜರ್ಮನರು ಯುದ್ಧದ ನಾಯಕರನ್ನು ಮಿತ್ರಪಕ್ಷದವರಿಗೆ ವಿಚಾರಣೆಗೆ ಒಪ್ಪಿಸಿ ಕೊಡುವ ಬದಲಾಗಿ ತಾವೇ [illegible] ಒಂದು ಕೋರ್ಟನ್ನು ಸ್ಥಾಪಿಸಿ ವಿಚಾರಣೆ ನಡಿಸಲಿಕ್ಕೆ ಅಣಿಮಾಡುತ್ತಿದ್ದಾರೆ. ಜರ್ಮನ ಯುವರಾಜನು ಈ ನಾಯಕರ ಬದಲಾಗಿ ತಾನೇ ಯುದ್ಧದ ಜವಾಬ್ದಾರಿಗೆ ತಲೆಕೊಡಲು ಸಿದ್ಧನಿದ್ದೇನೆ, ತನ್ನನ್ನು ಮಿತ್ರಪಕ್ಷದವರಿಗೆ ಒಪ್ಪಿಸಿಕೊಡುತ್ತೇನೆ ಎಂದು ಕೇಳಿದ್ದಕ್ಕೆ [illegible] ಮಿತ್ರಪಕ್ಷದವರು ಉತ್ತರ ಬೇಕಿಲ್ಲವೆಂದು ನಿರ್ಧರಿಸಿದರು. ಜರ್ಮನರು ಹೇಗಿದ್ದರೂ ತಮ್ಮ ನಾಯಕರನ್ನು ಮಿತ್ರಪಕ್ಷದವರಿಗೆ ವಿಚಾರಣೆ ಬಗ್ಗೆ ಒಪ್ಪಿಸಿಕೊಡಲಾರೆವೆಂದು ನಿರ್ಧಾರಮಾಡಿಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಈ ನಾಯಕರ ಮೇಲಣ ರುಜುವಾತುಗಳನ್ನು ಸಂಗ್ರಹಿಸಿದ್ದನ್ನು ಆ ಕೋರ್ಟಿನ ಮುಂದೆ ಹಾಜರುಪಡಿಸಲಿಕ್ಕೆ ಮಿತ್ರಪಕ್ಷದವರು ಹವಣಿಸುತ್ತಿದ್ದಾರೆ ಎನ್ನುವಾಗ ಆ ನೂತನ ಕೋರ್ಟಿನ ತೀರ್ಮಾನವು ತಮಗೆ ಸಿಂಧುವಾಗಲಾರದು ಎಂದು ಹೇಳುವವರು ಈಗೇನು ಮಾಡುವರು ಎಂದು ನೋಡಲಿಕ್ಕಿದೆ.

ಜರ್ಮನರು ಮಿತ್ರಪಕ್ಷಕ್ಕೆ ಒಪ್ಪಿಸಿಕೊಡಲಿಕ್ಕಿರುವ ಯುದ್ಧ ಹಡಗುಗಳನ್ನು ಬರಿದಾಗಿ ಮಾಡಿ ಅವು ಯುದ್ಧ ಕೆಲಸಕ್ಕೆ ನಿಷ್ಪ್ರಯೋಜಕವಾಗುವ ರೀತಿಯಲ್ಲಿ ಮಾಡಿದ್ದಾರೆ. ಅರ್ಮಿಸ್ಟೀಸಿನ ಶರ್ತದ ಮೇರೆಗೆ ತಾವು ಹೀಗೆ ಮಾಡಬೇಕಾಯಿತು ಎಂದು ಅವರು ಹೇಳುತ್ತಾರೆ.

ಬೊಲಶೆವಿಕರ ಬಲವು ದಕ್ಷಿಣ ರುಶ್ಯದಲ್ಲಿ ಅಂದರೆ ಕಪ್ಪು ಸಮುದ್ರದ ಕರಾವಳಿಯಲ್ಲಿ ನೆಲೆಗೊಂಡದ್ದಲ್ಲದೆ ಅವರು ಈಗ ಕ್ರಿಮಿಯ ಪರ್ಯಾಯದ್ವೀಪವನ್ನು ತೆಕ್ಕೊಳ್ಳುವರೆಂಬಂತೆ ಕಾಣುತ್ತದೆ. ಅವರು ಉತ್ತರದಲ್ಲಿ ಆರ್ಕೆಂಜಲವನ್ನು ಹಿಡಿದಂತೆ.

ಯುದ್ಧದ ಸಾಲ — ಗ್ರೇಟ ಬ್ರಿಟನ್ನಿನವರು ಯುದ್ಧಕಾಲದಲ್ಲಿ ರುಶ್ಯಕ್ಕೆ [illegible] ಮಿಲ್ಲಿಯ ಪೌಂಡನ್ನು, ಫ್ರಾನ್ಸಿಗೆ [illegible] ಮಿಲ್ಲಿಯ ಪೌಂಡನ್ನು, ಬೆಲ್ಜಿಯಮಿಗೆ [illegible] ಮಿಲ್ಲಿಯ ಪೌಂಡನ್ನು ಇತರ ಮಿತ್ರಪಕ್ಷದವರಿಗೆ [illegible] ಮಿಲ್ಲಿಯ ಪೌಂಡನ್ನು ಸಾಲವಾಗಿ ಕೊಟ್ಟಿದ್ದರೆಂದು ಮಿ. ಚೇಂಬರ್ಲೇನರು ಬ್ರಿಟಿಷಪಾರ್ಲಿಮೆಂಟಿನಲ್ಲಿ ಹೇಳಿದರು.

ಫೆಬ್ರುವರಿ ೧೫ನೆ ತಾರೀಕು ವರೆಗೆ ಬ್ರಿಟನ್ನಿಗೆ [illegible] ಮಿಲ್ಲಿಯ ಪೌಂಡು ಸಾಲವಿತ್ತು ಅಂದರೆ ಕಳೆದ ಡಿಸೆಂಬರ ೩೧ನೆ ತಾರೀಕಿನ ನಂತರ [illegible] ಮಿಲ್ಲಿಯ ಸಾಲ ಕಡಿಮೆಯಾಯಿತು ಎಂದೂ, ಈ ಪೈಕಿ ಅಮೇರಿಕಕ್ಕೆ [illegible] ಮಿಲ್ಲಿಯ, ಜಪಾನಿಗೂ ಇತರ ತಟಸ್ಥ ಸಂಸ್ಥಾನಗಳಿಗೂ [illegible] ಮಿಲ್ಲಿಯ ಪೌಂಡು ಸಲ್ಲತಕ್ಕದ್ದು ಇದೆ ಎಂದು ಗೊತ್ತಾಗುತ್ತದೆ.

ಸರ್ ಸಂಕರನ್ನಾಯರರು — ಇವರು ಫೆಬ್ರುವರಿ ೧೯ನೆ ತಾರೀಕಿಗೆ ಸಮ್ರಾಟ ಬಾದಶಹರ ಭೇಟಿ ತೆಕ್ಕೊಂಡು ತಮ್ಮ ರಾಜಭಕ್ತಿಯನ್ನು ಸಮರ್ಪಿಸಿದರು.

ದಕ್ಷಿಣ ಕನ್ನಡ

ಕೊಕ್ಕಡ: — ಈ ಗ್ರಾಮದ ಬಗ್ಗೆ ಕಲ್ಲಿಕೋಟೆ ಸೆಕ್ಷನ್ ಅಸಿಸ್ಟೆಂಟ್ ರಿಜಿಸ್ಟ್ರಾರರವರಿಂದ ಶಿಫಾರಸ್ಸು ಮಾಡಲ್ಪಟ್ಟ ಸಹಕಾರ ಸಂಘವನ್ನು ತೆರೆಯುವ ಬಗ್ಗೆ ತಾ. ೧೯-೨-೨೦ರಲ್ಲು ಕೊಕ್ಕಡ ಬೋರ್ಡುಶಾಲಾ ಕಟ್ಟಡದಲ್ಲಿ ಸಾಯಂಕಾಲ [illegible] ಗಂಟೆ ಹೊತ್ತಿಗೆ ಈ ಗ್ರಾಮದ ಮಾಜಿ ಪಟೇಲ್ [illegible] ನಾಯ್ಕರವರ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರ ಮಹಾಸಭೆಯು ಜರಗಿತು. ಈ ಸಭೆಗೆ ಪುತ್ತೂರು ಸರ್ಕಲ್ ಕೋ-ಒಪರೇಟಿವ್ ಸಂಘಗಳ ಇನ್ಸ್ಪೆಕ್ಟರ್ ಮ॥ ರಾ॥ ರಾ॥ [illegible] ಅವರು ಬಂದಿದ್ದರು. ಈ ಸಹಕಾರ ಸಂಘಕ್ಕೆ ಗ್ರಾಮಸ್ಥರಾದ [illegible] ಪ್ರೆಸಿಡೆಂಟರನ್ನಾಗಿಯೂ ಇಲ್ಲಿಯ ಬೋರ್ಡ ಸ್ಕೂಲ ಹೆಡ್ ಮಾಸ್ತರ್ ಎಸ್. ದಾಮೋದರ ಕಾಮತರನ್ನು ಕಾರ್ಯದರ್ಶಿಯನ್ನಾಗಿಯೂ, ಮಾಜಿ ಪಟೇಲ್ ಕೆ. ಪಿ. ರಾಮಣ್ಣ ನಾಯ್ಕರನ್ನು ಅಸಿಸ್ಟೆಂಟ್ ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು. ಮತ್ತು ಎಂಟು ಜನ ಪಂಚಾಯತ ಮೆಂಬರರನ್ನು ಆರಿಸಿ ಈ ದಿನ ಸಂಘ ತೆರೆಯಲಾಗಿರುತ್ತದೆ.

ಈ ಗ್ರಾಮಸ್ಥರಾದ [illegible] ಅಭಿವೃದ್ಧಿಗೋಸ್ಕರ ಮ॥ ರಾ॥ ಇನ್ಸ್ಪೆಕ್ಟರವರು [illegible] ಪ್ರಯತ್ನವನ್ನು ಈ ಸಂಘವನ್ನು ಸ್ಥಾಪಿಸಿದಕ್ಕೋಸ್ಕರ ಗ್ರಾಮಸ್ಥರೆಲ್ಲರೂ ಕೃತಜ್ಞರಾದವರಾಗಿ ಸಮರ್ಪಿಸುತ್ತಾರೆ.

ಈ ಸಂಘದಿಂದ [illegible] ಮಹಾಜನರ [illegible] ಕೆ. ಪಿ. ರಾಮಣ್ಣ ನಾಯ್ಕರನ್ನು [illegible] ರುತ್ತದೆ.

ಕಾರ್ಕಳ — [illegible] ಬಂದರು! ಹೋದರು! [illegible] ಕಟ್ಟೆಗೆ [illegible] ಆಟವಾಟಗಳು ಮಾಡಲಿಲ್ಲದೆ, [illegible] ನನ್ನೊಂದಿಗೂ ಬರಲಾರದು ಎಂದು ತಿಳಿಯಬೇಕು. ಈ ವರ್ಷದ ಉತ್ಸವವು ಬಲು ವಿಜೃಂಭಣೆಯಿಂದಲೇ ನಡೆದಿದೆ. ಸುಪರಿಂಟೆಂಡೆಂಟರವರು ಹಾಜರಾದ್ದರಿಂದ ಎಲ್ಲವೂ ಚೆಂದವಂತೆ ನೆರವೇರಿತು. ಮೊದಲು ನಾಯಕ [illegible] ಉತ್ಸವವಿಲ್ಲ. ಈಗಿನ ಅಧಿಕಾರಿಗಳು ಇದಕ್ಕೆ [illegible] ಕೊಡದೆ ನಾಯಕರಿಲ್ಲದೆ ಉತ್ಸವ ನೆರವೇರಿಸಿದ್ದು ತಿಳಿಸುವರೆ ಸಂತೋಷದ ಮಾತಲ್ಲವೇ!

ಪಡುಬಿದ್ರೆಯಲ್ಲಿ ಒಂದು ಬೋರ್ಡು ಶಾಲೆ ಇರುತ್ತಾ ಪಡುಬಿದ್ರೆಯಿಂದ ಸುಮಾರು ೩೦ ಹುಡುಗರು ಯರ್ಮಾಳ ಬೋರ್ಡು ಶಾಲೆಗೆ ಬರಲು ಕಾರಣವೇನಾಗಿರ ಬಹುದು? ಪಡುಬಿದ್ರೆಯ ನಿವಾಸಿಗಳೇ! ನಿಮ್ಮೂರ ಶಾಲೆಯ ಮೇಲಿನ ತಕ್ಕ ಅಭಿಮಾನ ಕಡಿಮೆಯಾಗಲು ಯಾರ ದೋಷ? ವೃಥಾ ದಣಿಸಿ ಪ್ರಯಾಸಪಡುವ ಊರ ಮಕ್ಕಳ ವಿಷಯವಾಗಿ ಗ್ರಾಮ ಪಟೇಲರೂ, ತಾಲೂಕು ಬೋರ್ಡು ಮೆಂಬರರೂ ಆದ ಮ॥ ರಾ॥ ರಾ॥ ಆದಿರಾಜ ಅರಸು [illegible] ಬಲ್ಲಾಳರವರು ತಮ್ಮ ಕರುಣಾದೃಷ್ಟಿಯನ್ನಿಟ್ಟು ಊರ ಶಾಲೆಗನೇ ಮಕ್ಕಳು ಬರುವಂತೆ ತಕ್ಕದಾದ ಏರ್ಪಾಡು ಮಾಡುವರು ಎಂದು ನಂಬುತ್ತೇನೆ.

[illegible] ಗುತ್ತೆಯಲ್ಲಿ ತಾ. ೩೦ನೇ ರಾತ್ರಿ ದೊಡ್ಡದೊಂದು ಬಿಲ್ಲವರ ಜಾತಿಯ ಮನೆಯು ಬೆಂಕಿಯಿಂದ ಭಸ್ಮೀಭೂತವಾಗಿ ಹೋಯಿತು. ಕಾರಣ ತಿಳಿಯದು. ಅಂತೂ ಈ ಕಾಲ ಬೆಂಕಿಯ ವಿಷಯ ಜನರು ಬಲು ಎಚ್ಚರಿಕೆಯಿಂದಿರುವುದು ಉತ್ತಮ.

ತೆಕ್ಕಿಲ: — ಕಾಸರಗೋಡು — ತೆಕ್ಕಿಲ ಮತ್ತು ಬೆಂಗಳ ಈ ಎರಡು ಗ್ರಾಮದವರಿಗೋಸ್ಕರ — ತೆಕ್ಕಿಲದಲ್ಲಿ ಒಂದು ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿದೆ. ಈ ಸಂಘಕ್ಕೆ ಪ್ರೆಸಿಡೆಂಟರು — ಮತ್ತು ಟ್ರೆಜರರೂ ಕೂಡಾ ತೆಕ್ಕಿಲಗೆ ಸುಮಾರು ಎಂಟು ಮೈಲು ದೂರದ ಕಾಸರಗೋಡು ಕಸಬೆಯಲ್ಲಿರುವ — ಮ॥ ರಾ॥ [illegible] — ಸೆಕ್ರೆಟರಿಗಳು ಇದೇ [illegible] ಟ್ರೈನಿಂಗಿಗೆ ಹೋಗುವರೆ ಹುಕುಂ ಪಡೆದವರಾಗಿರುತ್ತಾರೆ — ಸದ್ರಿ ಸಂಘದ ಮೆಂಬರರು ಹಣ ಪಡಕೊಳ್ಳಬೇಕಾದ ಪಕ್ಷಕ್ಕೆ ಸೆಕ್ರೆಟರಿಗಳಿಂದ ಹುಕುಂ ಪಡೆದು ಗ್ರಾಮಕ್ಕೆ ಸುಮಾರು ಎಂಟು ಮೈಲು ದೂರ ವಿರುವ ಟ್ರೆಜರರಿಗೆ ಹುಡುಕುವಾಗ ಅವರು ಅಲ್ಲಿಯೂ ಗೈರ ಹಾಜರಾಗುತ್ತಾರೆ — ಹೀಗಾದ ಪಕ್ಷಕ್ಕೆ ನಮ್ಮ ಈ ಸಂಘವು ಉನ್ನತ ಸ್ಥಿತಿಗೆ ಹ್ಯಾಗೆ ಬರುವದು. ಸಂಬಂಧಪಟ್ಟ ಉದ್ಯೋಗಸ್ಥರು ಇದಕ್ಕೆ ನಿಗಾ ಕೊಡುವರೆಂದು ಕೋರುತ್ತೇವೆ;

ಸಂಪಾಜೆ: — ಇಲ್ಲಿಯ ಮಡಿಕೇರಿ ರಸ್ತೆಯ [illegible]ನೇ ಮೈಲುಕಲ್ಲಿನ ಸಮೀಪ ಇರುವ ಸರಕಾರಿ ಬಾವಿಯ ನೀರು ಈಗ ಒಂದೆರಡು ವರ್ಷಗಳಿಂದ ಯಾರು ಉಪಯೋಗಿಸದೆಯೂ ಮಲೀನವಾಗಿ ಇರುವುದರಿಂದ ಆದಷ್ಟು ಬೇಗನೆ ಇದರ ನೀರು ಪೂರ್ತಿ ತೆಗೆದು ಶುಚಿಮಾಡಿ ಕೊಡುತ್ತಿದ್ದರೆ ಬಾವಿಯಿಂದ ನೀರಿನ ಪ್ರಯೋಜನ ಹೊಂದಬಹುದು.

ಅರಂತೋಡು: — ಈಗಲೆ ಊಟಕ್ಕೆ ಇಲ್ಲದೆ ಇದ್ದ [illegible] ಮಾಡಿಕೊಂಡು ಸಾಯುವ ಬಡಜನರ ಗೋಳು ನೋಡಿ ಶ್ರೀ ದೇವರೇ! ಇದೇ ರೀತಿ ಅಕ್ಕಿಗೆ ಕ್ರಯನೇರುತ್ತಾ ಬಂದರೆ ಮಳೆಗಾಲದ ಅವಸ್ಥೆಯು ಹೇಗೆಯೋ.

ಸುಳ್ಯ: — ಈ ಪ್ರಾಂತ್ಯದಲ್ಲಿ ಜಾನುವಾರುಗಳಿಗೆ ಇದ್ದ [illegible] ಸರ್ವ ಜನರೂ ಗೊತ್ತಿರುವ ಸಂಗತಿಯಷ್ಟೆ. ಒಂದು ಕಡೆಯಿಂದ ಹುಲಿಗಳ ಉಪದ್ರ, ಇನ್ನೊಂದು ಕಡೆಯಿಂದ ಮೇವಿನ ತಪ್ಪ ಈಗ ಇದರ ಮೇಲೆ ಕಾಲುಬಾಯಿ ರೋಗವು ಶುರುವಾದ ಸಂಗತಿ ತಿಳಿಸುವರೆ ತುಂಬಾ ವಿಷಾದಕರ.

ಮಂಗಲಪಾಡಿ: — ಅಲ್ಲಲ್ಲಿ ಜನಿಸಿದ ವಿಚಿತ್ರ ಜನನಗಳ ವರ್ತಮಾನವು ಪತ್ರದಲ್ಲಿ ಪ್ರಕಟವಾಗುತ್ತಿವೆ. ಅಂತೆಯೇ ಕೆಲವು ದಿನಗಳ ಹಿಂದೆ ಇಲ್ಲಿಯ ಅಂಬಾರು ಎಂಬಲ್ಲಿ [illegible] ಸಾಹೇಬರೆಂಬವರ ಮಗಳು ಸಹ ಒಂದು ನೂತನ ಹೆಣ್ಣು ಶಿಶುವನ್ನು ಹಡದಿರುತ್ತಾಳೆ. ಈ ಶಿಶುವಿಗೆ ಇತರ ಶಿಶುಗಳಿಗಿರುವಂತೆ ವಕ್ಷಸ್ಥಳದ ಎರಡು ಭಾಗಗಳಲ್ಲಿ ಎರಡು ಮೊಲೆಗಳ ಚಿಹ್ನೆಗಳು ಇರುವ ಬದಲಾಗಿ ಒಂದು ಪಾರ್ಶ್ವದಲ್ಲಿ ಮಾತ್ರ ಇದ್ದು ಇನ್ನೊಂದು ಸ್ತನದ ಭಾಗವು ಬರಿದಾಗಿದ್ದು, ಶಿಶುವಿಗೆ ಒಂದೇ ಮೊಲೆಯು ಮಾತ್ರ ಇರುವುದಾಗಿ ಸ್ಪಷ್ಟವಾಗುತ್ತದೆ.

ಪುತ್ತೂರು: — ಇಲ್ಲಿಯ ಡಿವಿಜನ ಡಿಸ್ಟ್ರಿಕ್ಟ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಿಖೆನಡೆಯುತ್ತಿದ್ದ ಇಲ್ಲಿಯ ಸಾಹುಕಾರ [illegible] ಬಾಳಪ್ಪ ವ್ಯಾಸಭಾಗ ಮತ್ತು ಮಗ ನರಸಿಂಹ ವ್ಯಾಸಭಾಗ ಕೂಡಾ ಇವರಿಗೆ ಕಳೆದ ೧೯೧೯ನೇ ಇಸವಿ ಜೂನ್ ತಾ. ೨ರಲ್ಲು [illegible] ಗ್ರಾಮದ ಅಂತೋಣಿ [illegible] ಚಾತುಮ ಗೌಡ ಕೂಡ ೩ ಜನರಿಗೆ ಲೈಸನ್ಸ್ ದರ ೦—೨—೬ಷ್ಟೆ ಇರುತ್ತಾ ಬಾಟ್ಲಿ [illegible] ೦—೩—೮ಷ್ಟೆ ದರದಲ್ಲಿ ಜಾಸ್ತಿ ದರದಲ್ಲಿ [illegible] ಬಾಟ್ಲಿ ಎಣ್ಣೆ ಮಾರಿದ ಕುರಿತು ಲೈಸನ್ಸ್ದಾರ [illegible] ಬಾಳಪ್ಪ ವ್ಯಾಸಭಾಗರಿಗೆ ರೂ. ೬೦ ಜುರುಮಾನೆ ವಿಧಿಸಿದ್ದರಲ್ಲದೆ ಆತನ [illegible]ಯನ್ನು [illegible] ಪಡಿಸಿದ್ದಾಗಿ ಇದೇ ತಾ. ೧೭ರಲ್ಲು ತೀರ್ಮಾನವಾಯಿತು. ಈ ರೀತಿ ಅನೇಕ ಜನ ಲೈಸನ್ಸುದಾರರು ಜಾಸ್ತಿ ದರದಿಂದ ಎಣ್ಣೆ ಮಾರಿದಾಗ್ಯೂ ತಪ್ಪೀಗೆ ಗುರಿಪಟ್ಟವರು ಇವರೊಬ್ಬರೆ.

ಇಲ್ಲಿಯ [illegible] ಮ॥ ರಾ॥ ಪಟ್ಟಾಜೆ ಶಿವರಾಯರು ತಯಾರಿಸಿದ [illegible] ಕೋಣಗಳ [illegible] ಪಂದ್ಯಾಟ ಇದೇ ತಿಂಗಳ ತಾ. [illegible]ಕ್ಕೆ ನಡೆಯುವುದು. ಗೆದ್ದವರಿಗೆ ಚಿನ್ನದ ಪದಕ ಕೊಡುವರೆ ನಿಶ್ಚಯಿಸಿರುವರಂತೆ.

ಕಾಸರಗೋಡು: — ಇಲ್ಲಿಯ, ಶ್ರೀ ವೆಂಕಟ್ರಮಣ ದೇವಸ್ಥಾನದ ಹತ್ತು ಜನಸಮಸ್ತರು ಯಥೇಷ್ಟ ಹಣ ಖರ್ಚುಮಾಡಿ, ದೇವಸ್ಥಾನದ [illegible] ಭಾಗದಲ್ಲಿ ಕೆರೆಯೊಂದನ್ನು ಕಟ್ಟಿಸಿದರು. ಈಗ, ಸುಮಾರು ನಾಲ್ಕಾರು ತಿಂಗಳುಗಳಿಂದೀಚೆಗೆ, ಸದ್ರಿ ಕೆರೆಯ ನೀರು ಕೆಟ್ಟು ಹೋಗಿ, ನಾರುತ್ತದೆ. ಆದರೂ ಒಬ್ಬರ ದೃಷ್ಟಿಯೂ, ಕೆರೆಯ ಕಡೆಗಿಲ್ಲ. ಇನ್ನಾದರೂ ಅದರ ನೀರನ್ನು ಪೂರ್ಣವಾಗಿ ಬತ್ತಿಸಿ, ಕೊಳೆಯನ್ನು ತೆಗೆದರೆ ಆಗುತ್ತಿತು.

ಹುಚ್ಚು ನಾಯಿಗಳ ಕಾಟವಂತೂ ಹೇಳಿ ಪೂರೈಸುವದಲ್ಲ. ಎಲ್ಲಿ ನೋಡಿದರೂ ಹುಚ್ಚು ನಾಯಿಗಳು, ಎಲ್ಲಿ ನೋಡಿದರೂ ಹುಚ್ಚು ನಾಯಿಗಳ ಆತಂಕದಿಂದ ಎಷ್ಟು ಧನಗಳ ನಾಶ. ಕೈಯಲ್ಲಿ, ದೊಣ್ಣೆಗಳಿಲ್ಲದೆ ಮಾರ್ಗಗಳಲ್ಲಿ ನಡೆವುದಂತೂ [illegible]. ಸಬ್, ಡಿವಿಜನಲ್ ಮೆಜಿಸ್ಟ್ರೇಟರವರ ಹುಕುಂ [illegible], ಎರಡು ತಿಂಗಳು ಕಳೆದು ಹೋದರೂ, ಹುಕುಂ ಹುಕುಮಿನ ಹಾಗೆ, ನಾಯಿಗಳು ಇನ್ನೂ ಜಾಸ್ತಿ. ಹೊಲೆಯರು ನಾಯಿಗಳನ್ನು ಕೊಲ್ಲುವುದು, ತಮ್ಮ ಶಾಸ್ತ್ರಕ್ಕೆ ವಿರುದ್ಧವೆಂತ ಹೇಳುತ್ತಾರೆ. ಹಾಗಾದರೆ, ಇನ್ನಾರು ಕೊಲ್ಲುವರು. ಜನರು ನಾಯಿಗಳನ್ನು ಕೊಲ್ಲುವವರ ಬದಲಾಗಿ, ನಾಯಿಗಳೇ ಜನರನ್ನು ಸಂಹರಿಸುವುದರಲ್ಲಿ ಸಂದೇಹವಿಲ್ಲ. ಇಲ್ಲಿಯ, ಲೋಕಲ್ ಫಂಡ್ ಆಸ್ಪತ್ರೆಯ, ವೈದ್ಯ ಉದ್ಯೋಗಸ್ಥರು ಈ ವಿಷಯದಲ್ಲಿ, ನಿಗಾ ತೆಕ್ಕೊಂಡು, ಊರ ಜನರನ್ನೂ, ಆಕಳುಗಳನ್ನೂ ಕಾಪಾಡುತ್ತಿದ್ದರೆ ಆಗುತ್ತಿತ್ತು.

ಅಕ್ಕಿಯು ಕ್ರಯದ ಇನ್ನೂ ತಗ್ಗಿಲ್ಲ; ತಗ್ಗುವ ಬದಲಾಗಿ ಏರುತ್ತ [illegible] ಸುಗ್ಗಿಯ ಬೆಳೆ ಕಡಿಮೆಯಾಗಿ ಹೊಸ ಅಕ್ಕಿಯು ತಯಾರಾಯಿತು. ಬೆಲೆ ಮಾತ್ರ ಎಂದಿಗಿಂತಲೂ ಜಾಸ್ತಿ. ಈಗಲೇ ಭತ್ತ ಮುಡಿ ೧ಕ್ಕೆ ೪—೧೪—೦, ೫—೦—೦, ಅಕ್ಕಿ ಮುಡಿ ೧ಕ್ಕೆ ೧೦—೯—೦, ೧೧—೯—೦, ಜನರೂ ಬದುಕುವುದೆ ಬಹಳ ಕಷ್ಟ. [illegible] ಬೆಲೆ ತಗ್ಗಿದ ಮೇಲೆಗೆ ಈಗ [illegible] ಮುಡಿ ೧ಕ್ಕೆ ೧೩—೦—೦. ಕಳೆದ ವರುಷ ಸರಕಾರದವರು, ಪರ ಜಿಲ್ಲೆಗಳಿಂದ ಅಕ್ಕಿ ತರಿಸಿ ಬಡ ಜನರನ್ನು ಕಾಪಾಡಿದರು. ಈ ವರುಷ ಅಕ್ಕಿಯ ವಿಷಯವಾಗಿ ಯಾರೂ ಆಲೋಚಿಸಿದ್ದು ಕಂಡು ಬರುವುದಿಲ್ಲ. ಆಹಾ, ನಮ್ಮ ಈ ಫಲಭರಿತವಾದ ಜಿಲ್ಲೆಗೆ, ಇಂಥಾ ಕ್ಷಾಮ ಬಂದಲ್ಲಿ ಇನ್ನು ಹೇಳುವುದೇನು. ಜಮೀನುದಾರರೂ, ವ್ಯಾಪಾರಸ್ಥರೂ ತಮ್ಮ ಹಾದಿಯನ್ನೇ ನೋಡುತ್ತಾರಲ್ಲದೆ, ದೇಶಬಾಂಧವರ, ಹಿತದ ಹಾದಿಯನ್ನು ಎಂದೂ ನೋಡುವುದಿಲ್ಲ.

ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗ್.

ದಕ್ಷಿಣಕನ್ನಡ ಡಿಸ್ಟ್ರಿಕ್ಟ ಬೋರ್ಡಿನ ಅಧಿವೇಶನವು ಇದೇ [illegible]ನೆ ತಾರೀಕಿಗೆ ಕಲೆಕ್ಟರ ಕಚೇರಿಯಲ್ಲಿ ಜರಗಿತು. ಅದರಲ್ಲಿ ಈ ಕೆಳಗಿನ ಅಂದಾಜುಪಟ್ಟಿಗಳು ಸೆಂಕ್ಷನಾದವು:—

ಡಿಸ್ಟ್ರಿಕ್ಟ ಬೋರ್ಡ ಎಂಜಿನಿಯರ್ ಆಫೀಸಿನ ಕಟ್ಟಡದ ಕೆಲವು ದುರುಸ್ತಿಗಳಿಗೆ ರೂ. ೩೦೦, ಬೆಳ್ತಂಗಡಿ ಆಸ್ಪತ್ರೆಯ ದುರುಸ್ತಿಗೆ ರೂ. [illegible] (ನಲ್ವತ್ತನೆ) ರಸ್ತೆಯ ೮ ಮತ್ತು ೯ ಮೈಲುಗಳಲ್ಲಿ [illegible]ವುದಕ್ಕೆ ರೂ. [illegible], ಪಡುಬಿದ್ರೆಯಿಂದ 'ಕಾರ್ಕಳ ಮತ್ತು ಕಾರ್ಕಳದಿಂದ ಉಡುಪಿಗೆ ಹೋಗುವ ರಸ್ತೆಯಲ್ಲಿ ಸಾಲುಮರಗಳನ್ನು ನೆಡುವುದಕ್ಕೆ ರೂ. [illegible], ರಸ್ತೆ ದುರುಸ್ತಿ [illegible] ಹತ್ಯಾರುಗಳನ್ನು ಕೊಂಡುಕೊಳ್ಳಲಿಕ್ಕೆ ರೂ. [illegible], ಹಳೆಯವುಗಳ ದುರುಸ್ತಿಗೆ ರೂ. [illegible], ಬೈಂದೂರು, ಮೂಡಬಿದ್ರೆ, ಬೆಳ್ತಂಗಡಿ, ಸುಳ್ಯ, ಉಪ್ಪಿನಂಗಡಿ ಆಸ್ಪತ್ರೆಗಳಲ್ಲಿ 'ಎಮರ್ಜನ್ಸಿ' ವಾರ್ಡು ಕಟ್ಟಿಸುವುದಕ್ಕೆ ರೂ. [illegible], [illegible], [illegible], [illegible], [illegible], ಸೆಂಕ್ಷನಾದವು. ಈ ಪೈಕಿ ಬೈಂದೂರು, ಬೆಳ್ತಂಗಡಿ, ಉಪ್ಪಿನಂಗಡಿ ಆಸ್ಪತ್ರೆಗಳ ಬಗ್ಗೆ ಸಹಾಯಧನವನ್ನು ಕೊಡುವಂತೆ ಪ್ರಾಂತಿಕಸರಕಾರದವರಿಗೆ ಬರೆಯಬೇಕಾಗಿ ನಿರ್ಣಯಿಸಲಾಯಿತು. ಕಾರ್ಕಳ ಇನ್ಸ್ಪೆಕ್ಷನ್ ಬಂಗ್ಲೆಯ ಮಾಡನ್ನು, ಮತ್ತು [illegible] ಬಂಗ್ಲೆಗೆ ಸಂಬಂಧಪಟ್ಟ ಅಡಿಗೆಕೋಣೆ ಮತ್ತು ಗಾಡಿಖಾನೆಯ ಮಾಡನ್ನು ದುರುಸ್ತಿಮಾಡುವುದಕ್ಕೆ ರೂ. [illegible], [illegible] ಕಡವಿನ ಜಂಗಾಲು ದುರುಸ್ತಿಗೆ ರೂ. [illegible], ಬೈರಾಡಿ ಕಡವಿಗೆ ಹೋಗುವ ರಸ್ತೆಯನ್ನು ಕಡಿಸಲಿಕ್ಕೆ ರೂ. [illegible], ಗುರುಪುರ ಸಂಕದ ಕೆಲಸಕ್ಕೆ ಹಂಗಾಮಿಯಾಗಿ ಸಂಬಳ ರೂ. [illegible] ಎಲೊವೆನ್ಸ್ [illegible] ಒಬ್ಬ ಅಸಿಸ್ಟೆಂಟ್ ಎಂಜಿನಿಯರ್, ರೂ. [illegible] ಒಬ್ಬ ಸಬ್ ಓವರ್ಸಿಯರ್, [illegible] ರೂಪಾಯಿ ತಲಬಿನ ಇಬ್ಬರು ಪೇದೆಗಳು ಇಷ್ಟು ಸಿಬ್ಬಂದಿ ಸೆಂಕ್ಷನ್ ಮಾಡಲಾಯಿತು. ತನ್ನ ತಿರುಮನೆಯ ಮೇಲೆ ಸಾಲುಮರಗಳಲ್ಲಿ ಒಂದು ಬಿದ್ದು ಸಂಭವಿಸಿದ ರೂ. [illegible] ನಷ್ಟವನ್ನು ತನಗೆ ಕೊಡಿಸಬೇಕಾಗಿ ಸಿದ್ಧಲಿಂಗಯ್ಯನು ಮಾಡಿದ ಅರ್ಜಿ ತಿರಸ್ಕರಿಸಲಾಯಿತು.

ಅಜ್ಜಾವರ ಮತ್ತು ಜಾಲ್ಸೂರು ಶಾಲೆಗಳಿಗೋಸ್ಕರ ಒಂದೊಂದಕ್ಕೆ [illegible] ರೂಪಾಯಿಯ ಕಟ್ಟಡಗಳ ಅಂದಾಜುಪಟ್ಟಿಯನ್ನು ಸೆಂಕ್ಷನ್ ಮಾಡಲಾಯಿತು.

ಡಿಸ್ಟ್ರಿಕ್ಟ್ ಬೋರ್ಡಿನವರು ಕಳೆದ ವರ್ಷ ಹಳ್ಳಿಗಳಿಗೆ ಒದಗಿಸುವುದಕ್ಕಾಗಿ ತರಿಸಿದ ಅಕ್ಕಿಯನ್ನು ದಾಸ್ತಾನುಮಾಡುವುದಕ್ಕೆ ಕಲೆಕ್ಟರ್ ಆಫೀಸಿನಿಂದ ಕೊಡಿಸಿದ ಕೋಣೆಗಳ ಬಗ್ಗೆ [illegible]ರಂತೆ ತಿಂಗಳಿಗೆ ಬಾಡಿಗೆ ಸೆಂಕ್ಷನ ಮಾಡಲಾಯಿತು. [illegible] ಸೆಕೆಂಡರಿ ಶಾಲಾ ಉಪಾಧ್ಯಾಯ ಮ॥ ರಾ॥ ಕೆ [illegible] ಅಪ್ಪಯ್ಯನವರಿಗೆ [illegible] ಮಾರ್ಚ [illegible]ನೆ ತಾರೀಕು ವರೆಗೆ ಮಾಹೆಯಾನಾ [illegible] ಪರ್ಸನಲ್ ಎಲೊವೆನ್ಸ್ ಕೊಡಬೇಕಾಗಿ ಮ॥ ರಾ॥ ಕುಂದಾಪುರ ತಾಲೂಕುಬೋರ್ಡ ಪ್ರೆಸಿಡೆಂಟರವರು ಬರೆದ ಪತ್ರದಲ್ಲಿಯ ಸೂಚನೆಯನ್ನು ಮಂಜೂರುಮಾಡಲಾಯಿತು.

ಮಂಗಳೂರಿನಿಂದ ಮಡಿಕೇರಿಗೆ ಹೋಗುವ ರಸ್ತೆಯಲ್ಲಿ ಪಾಣೆಮಂಗಳೂರಲ್ಲಿ ರಸ್ತೆ ಹಿರಿಗಿಸಲಿಕ್ಕೆ ಬೇಕಾದ ಭೂಸಂಪಾದನೆ 'ಅಂದಾಜುಪಟ್ಟಿಯನ್ನು ಮಂಜೂರು ಮಾಡಲಾಯಿತು.

ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳಿಗೆ ಬೇರೆ ಬೋರ್ಡುಗಳನ್ನು ಮಾಡುವ ಪುತ್ತೂರು ತಾಲೂಕುಬೋರ್ಡ ವಿಭಜನೆಯನ್ನು ಮಂಜೂರುಮಾಡಿ ಪುತ್ತೂರು ಬೋರ್ಡಿಗೆ ಬೀಳುವ ನಷ್ಟ ಭರ್ತಿಗೆ ರೂ. [illegible] ಮುಂದಿನ ವರ್ಷಕ್ಕೆ ಡಿಸ್ಟ್ರಿಕ್ಟ ಬೋರ್ಡಿನವರು ಕೊಡಬಹುದಾಗಿ ಠರಾವಾಯಿತು.

ಈಗ ಸನಿಟರಿ ಇನ್ಸ್ಪೆಕ್ಟರರು ಗ್ರಾಮಚಾವಡಿಗಳಲ್ಲಿ ಪ್ರಯಾಣಕಾಲದಲ್ಲಿ ತಂಗುವುದಾದರೆ ಅದರಿಂದ ಬಾಡಿಗೆ ವಸೂಲುಮಾಡುವುದಿಲ್ಲ, ಅದೇ ರೀತಿಯಲ್ಲಿ ಗೇಟು ಸುಂಕದಿಂದ ಅವರಿಗೆ ಮಾಫಿ ಇದೆ; ಈ ಬಗೆಯ ರಿಯಾಯಿತಿಯನ್ನು 'ಕೋಲೆರಾ ಪಾರ್ಟಿ'ಯವರಿಗೂ ಕೊಡಿಸಬೇಕಾಗಿ ಸನಿಟರಿ ಕಮಿಷನರು ಬರೆದ ಸೂಚನೆಯನ್ನು ಮಂಜೂರುಮಾಡಲಾಯಿತು.

ಮಂಗಳೂರಿನ ಪಶುಗಳ ಆಸ್ಪತ್ರೆಯನ್ನು ಮಧ್ಯಾಹ್ನ ತೆರೆದಿಡುವುದು ೩ರಿಂದ [illegible]ರವರೆಗೆ ಎಂತ ಇದ್ದರೆ ಒಳ್ಳೇದೆಂದು ವೆಟರ್ನರಿ ಸುಪರಿಂಟೆಂಡೆಂಟರು ಬರೆದ ಸೂಚನೆಯನ್ನು ಅಂಗೀಕರಿಸಲಾಯಿತು.

ಜಿಲ್ಲೆಯ ರಹದಾರಿಗಳನ್ನು ದುರುಸ್ತಿಯಲ್ಲಿ ಇರಗೊಡಿಸುವ ಖರ್ಚ ಸರಕಾರದವರು ವಹಿಸುವರಾಗಿ ಕಳೆದ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಸರಕಾರದ ಪರವಾಗಿ ಮಾತು ಬಂದಿತ್ತು. ಅದರಲ್ಲಿ ಕಾಣುವಂತೆ ಮಂಗಳೂರು ಮಡಿಕೇರಿ, ಬಂಟವಾಳ, ಚಾರ್ಮಾಡಿ, ಆಗುಂಬೆರಸ್ತೆ, [illegible] ಕೊಲ್ಲೂರುಘಾಟಿ, ಮಂಗಳೂರಿನಿಂದ ಉತ್ತರಕ್ಕಿರುವ ಕರಾವಳಿ ರಸ್ತೆ ಇವನ್ನು ಸರಕಾರ ಖರ್ಚಿನಿಂದ ದುರುಸ್ತಿಗೆ ಒಳಪಡಿಸಬಹುದಾಗಿ ಠರಾವಾಯಿತು.

[illegible] ಕಾಮಗಾರಿಗಳ [illegible] ನಿಬಂಧನೆಗಳಲ್ಲಿ ಕಾಮಗಾರಿಯಲ್ಲಿ ನಿಷ್ಪ್ರಯೋಜಕವಾಗಿ ಬಿದ್ದ ಹೊಲಸನ್ನು ಸಮುದ್ರದಲ್ಲಿ ಬಿಸಾಡಬೇಕೆಂದು ಬದಲಾವಣೆಮಾಡಿ ಈ ನಿಬಂಧನೆಗಳನ್ನು ಮಲಬಾರದಲ್ಲಿದ್ದ ಕ್ರಮಗಳಿಗೆ ಅನುಸಾರವಾಗಿ ಒಪ್ಪಿಕೊಳ್ಳಲಾಯಿತು.

ಕುಂದಾಪುರ ಲೋಕಲ್ ಫಂಡ ಓವರ್ಸಿಯರರ ಗುಮಾಸ್ತ ರಾ. ಶ್ರೀ. ವೆಂಕಟೇಶ ಶೆಣೈ ಇವರನ್ನು ಒಂದು ವರ್ಷಕ್ಕೆ ಕೆಲಸದಿಂದ ಪ್ರೆಸಿಡೆಂಟರು ಅಮಾನತು ಮಾಡಿದ ಹುಕುಮಿನ ಮೇಲೆ ಮಾಡಿದ ಅಪೀಲು ತಳ್ಳಿಹೋಯಿತು.

ಯರ್ಮಾಳ ಸಂಕದ ದಕ್ಷಿಣ ದಿಕ್ಕಿನ ರಸ್ತೆಯನ್ನು ಅಗಲಮಾಡಲಿಕ್ಕೆ ರೂ. [illegible], ಚಾರ್ಮಾಡಿ ರಸ್ತೆಯ ದುರುಸ್ತಿಗೆ ರೂ. [illegible], ಅದರಲ್ಲಿ [illegible] ಮೈಲುಗಳ ಬಳಿ ಹೊಸ ಜಲ್ಲಿಕಲ್ಲು ಹಾಸಲಿಕ್ಕೆ ರೂ. [illegible], ವೆಟರ್ನರಿ ಆಸ್ಪತ್ರೆಯಲ್ಲಿ ಡ್ರೆಸ್ಸಿಂಗ್ ಶಡ್ಡಿಗೆ ರೂ. [illegible], ಪಾಯಿಖಾನೆಗೆ ರೂ. [illegible], ಉಡುಪಿ ತಾಲೂಕಿನಲ್ಲಿ ಕರಾವಳಿ ರಸ್ತೆಯ [illegible]ನೆ ಮೈಲಿ ಕಲ್ಲಿನ ಸಮೀಪದ ಸಂಕವನ್ನು ಪುನಃ ಕಟ್ಟಲಿಕ್ಕೆ ರೂ. [illegible], ಡಿಸ್ಟ್ರಿಕ್ಟ ಬೋರ್ಡ ಎಂಜಿನಿಯರ ಆಫೀಸಿಗೆ ಒಂದು ಸ್ಟೋರ್ ಶಡ್ಡನ್ನು ಕಟ್ಟಿಸುವುದಕ್ಕೆ ರೂ. [illegible] ಸೆಂಕ್ಷನಾಯಿತು.

ನಿಕ್ಕಲ್ ರೂಪಾಯಿ ನಾಣ್ಯವನ್ನು ಸರಕಾರದವರು ಮಾಡುವುದಕ್ಕೆ ಇದ್ದಾರೆ ಎಂಬ ಸಮಾಚಾರವು ನಿಜವಲ್ಲವೆಂಬದು ಪ್ರಕಟಿಸಬೇಕಾಗಿ ಸರಕಾರದವರಿಂದ ಬಂದ ಪತ್ರ ಓದಿ ಫೈಲ್ ಮಾಡಲಾಯಿತು.

ಕುಂದಾಪುರ ತಾಲೂಕು ಬೋರ್ಡನ್ನು [illegible] ಡಿವಿಜನುಗಳಾಗಿ [illegible] ಗವರ್ನಮೆಂಟ ಹುಕುಮನ್ನು ಫೈಲ ಮಾಡಲಾಯಿತು. [illegible]

ಸ್ವದೇಶಾಭಿಮಾನಿ.

ಶಕ ೧೮೪೧ ಫಲ್ಗುಣ ಶು| ೮ ಶುಕ್ರವಾರ

ಸಮಾಜೋದ್ಧಾರದ ಮೂಲತತ್ವಗಳು.

ಲೇಖಾಂಕ ೩

ಸಂಘಟನೆಯೂ ಉತ್ಕ್ರಮಣವೂ

ಮಾನವಸಮಾಜವು ಬಾಲ್ಯಾವಸ್ಥೆಯಲ್ಲಿ ಎಷ್ಟು ಅಸಂಸ್ಕೃತವಾಗಿತ್ತು; ಪರಂತು ಬರಬರುತ್ತ ಪ್ರಕೃತಿಯ ಶಿಕ್ಷಣದಿಂದ ಅನುಭವಗಳನ್ನು ಸಂಗ್ರಹಿಸಿ ಅನುವಪತ್ತಿಗಳನ್ನು ಪರಿಹರಿಸಿ ಅದು ಉನ್ನತಿ ಸುಧಾರಣೆಗಳನ್ನು ಹೇಗೆ ಮಾಡತೊಡಗಿತು ಎಂಬೀ ಸಂಗತಿಯನ್ನು ನಾವು ವಾಚಕರ ಅವಗಾಹನಕ್ಕೆ ತಂದುಕೊಟ್ಟಿದ್ದೇವೆ. ನಿಜವಾಗಿ ನೋಡಿದರೆ ಬಾಲ್ಯದ ಆ ಅವಸ್ಥೆಯಲ್ಲಿ ಅದಕ್ಕೆ 'ಸಮಾಜ'ವೆಂಬ ಹೆಸರು ಇನ್ನೂ ಬಂದಿಲ್ಲ, ಎಂದರೆ ಅದರ ಅವ್ಯವಸ್ಥಿತವಾದ ಜೀವನಕ್ರಮದಿಂದಲೂ, ಅನಿಶ್ಚಿತಸ್ವರೂಪದ ವ್ಯವಹಾರದಿಂದಲೂ ಸಮಾಜವೆಂಬ ಹೆಸರು ಪಡೆಯುವ ಪಾತ್ರತೆಯು ಅದರಲ್ಲಿ ಬಂದಿಲ್ಲ. ಎಂದ ಮೇಲೆ ಸಮಾಜವೆಂದರೆ ಏನೆಂಬುದರ ಅರ್ಥವು ಇಲ್ಲಿ ವಿವಕ್ಷಿತವಲ್ಲವೆಂದು ಪುನಃ ಹೇಳಬೇಕಾದ ಅಗತ್ಯವಿಲ್ಲ. ಯಾಕೆಂದರೆ ವ್ಯವಸ್ಥಾಪಕನಾದ ಒಂದು ಬಂಧನೆಗೆ ಒಳಗಾಗಿ ನಡೆಯುವ ವ್ಯಕ್ತಿಸಮುದಾಯವು ಸಮಾಜವೆಂಬ ಹೆಸರನ್ನು ಧರಿಸಲು ಪಾತ್ರವಾಗಿರುತ್ತದೆ ಎಂದು ಸಮಾಜ ಶಾಸ್ತ್ರದಿಂದ ತಿಳಿದುಬರುತ್ತದೆ. ಈ ದೃಷ್ಟಿಯಿಂದ ವಿಚಾರಿಸುವಾಗ ಆದಿಕಾಲದ ಮಾನವರ ಗುಂಪಿನಲ್ಲಿ ಇದುವರೆಗೆ ಪರಸ್ಪರರನ್ನು ಕಟ್ಟುವ ಯಾವ ಬಂಧನಗಳೂ ಬಂದಿಲ್ಲ. ಆ ತಿಳಿವೇ ಹುಟ್ಟಿರಲಿಲ್ಲ. ೫-೬ ವರ್ಷದ ಕೆಲವು ಮಕ್ಕಳು ಒಟ್ಟಿಗೆ ಸೇರಿಕೊಂಡಿರುವಲ್ಲಿ ಆ ಗುಂಪಿಗೆ ಸಮಾಜವೆಂದು ಹೇಳಲಾಗದು. ಅಲ್ಲಿ ಯಾವ ವ್ಯವಸ್ಥೆಯೂ ಇರದು. ಮಕ್ಕಳು ಹಸಿವೆಯಾದಾಗ ಕೈಗೆ ಸಿಕ್ಕಿದ್ದನ್ನು ತಿಂದಾವು, ಮನಸ್ಸಿಗೆ ಬಂದಂತೆ ಕುಣಿದಾವು, ತಮ್ಮ ಹರ್ಷವಿಷಾದವನ್ನು ತೋರಿಸಿಯಾವು, ಪರಂತು ಈ ಯಾವ ವ್ಯವಹಾರದಲ್ಲೂ ವ್ಯವಸ್ಥೆಯಿರುವುದಿಲ್ಲ. ಆದಿಕಾಲದ ಮನುಷ್ಯರಾದರೂ, ಪ್ರಾಯದಲ್ಲಿ ಬೆಳೆದವರಾದರೂ, ವ್ಯವಹಾರದಲ್ಲಿ ಈ ಹೊತ್ತಿನ ಚಿಕ್ಕ ಮಕ್ಕಳಂತೆ ಇದ್ದರು. ಮತ್ತು ಇದೇ ಕಾರಣದಿಂದ ಅಂದಿನ ಪ್ರಾಥಮಿಕ ಸ್ಥಿತಿಯಲ್ಲಿದ್ದ ಜನರಿಗೆ ವ್ಯವಸ್ಥಿತ ಸ್ವರೂಪದ್ಯೋತಕವಾದ ಸಮಾಜವೆಂಬ ಹೆಸರನ್ನು ಸಮಾಜ ಶಾಸ್ತ್ರಜ್ಞರು ಕೊಡಲೊಪ್ಪಿಕೊಳ್ಳುವುದಿಲ್ಲ. ಈ ಪ್ರಾಥಮಿಕ ಕಕ್ಷೆಯನ್ನು ದಾಟಿದ ಬಳಿಕ ನಾವು ಹಿಂದೆ ಸೂಚಿಸಿದಂತೆ ಪ್ರಕೃತಿಯ ಅಧ್ಯಾಪಕತ್ವದ ಕೆಳಗೆ ಕೌಟುಂಬಿಕ ಬಂಧನ ಗೃಹಸಂಸ್ಥೆ ಇವುಗಳ ಕಲ್ಪನೆಯು ಮೂಡಿತು. ಈ ಎರಡು ಕಲ್ಪನೆಗಳು ಯಾವಾಗ ಉದಯಿಸಿದವೋ ಆಗ ಶ್ರಮವಿಭಾಗದ ತತ್ವವು ಪ್ರಕಟಿಸುವುದು ಸಹಜವೇ. ಶ್ರಮವಿಭಾಗದ ತತ್ವವು ಅಸ್ತಿತ್ವದಲ್ಲಿ ಬರುವುದಕ್ಕಿಂತ ಮುಂಚೆಯೇ 'ತನ್ನದು' ಎಂಬ ಮಮತಾ ಬುದ್ಧಿಯು ಇತರ ಪ್ರಾಣಿಗಳಲ್ಲಿರುವಂತೆ ಮನುಷ್ಯನಲ್ಲೂ ಇತ್ತೆಂಬುದು ನಿರ್ವಿವಾದದ ಮಾತಾಗಿದೆ. ಹುಲಿಯಂಥ ಕ್ರೂರ ಪ್ರಾಣಿಯಲ್ಲಿ ಕೂಡ ಅಪತ್ಯ ಸಂಗೋಪನದ ಬುದ್ಧಿಯು ಇರುತ್ತದೆ ಎಂದ ಮೇಲೆ ಮನುಷ್ಯ ವ್ಯಕ್ತಿಯಲ್ಲಿ ಅದು ಅನಂತರ ಬಂದದ್ದೆಂದು ಹೇಳಲಾಗುವುದಿಲ್ಲ. ಅಘ್ರಾಣಾವಕನಾದ್ದೆ ಸರಿ. ಮಾತ್ರವಲ್ಲ, ಮನುಷ್ಯನಲ್ಲಿ 'ಆತ್ಮೀಯ' ಎಂಬೀ ಭಾವನೆಯು ಸಾತ್ವಿಕ ರೂಪವನ್ನು ತಾಳಿ ಬೆಳೆದಾಗ ದೊಡ್ಡದಾಗ ತೋರತೊಡಗಿತು. ಆಗ ಗೃಹಸಂಸ್ಥೆಯೂ ಬಂತು, ಕೌಟುಂಬಿಕ ವ್ಯವಸ್ಥೆಯೂ ಉಂಟಾಯಿತು. ಶ್ರಮವಿಭಾಗದ ತತ್ವವೂ ಇದೇ ರೀತಿಯಿಂದ ಪ್ರಚುರವಾಗ ತೊಡಗಿತು. ಮತ್ತು ಇದೇ ಸಮಯದ ತತ್ವಗಳು ಅಸ್ತಿತ್ವಕ್ಕೆ ಬಂದವು. ನಾಟಕದ ರಂಗಭಾಗವನ್ನು ಸೂಚಿಸುವ ಅಂತವು ಪೂರ್ವರಂಗದಲ್ಲಿ ಹೇಗೆ ಬಂದು ಹೋಗುವುದೋ, ಕಂಬಳವನ್ನು ಇಂಥ ಸೂಚಕಾಂತವು ಇಲ್ಲವಾದರೆ ಮುಂದಿನ 'ವಸ್ತು'ವು 'ಸಾಮಾಜಿಕ'ರಿಗೆ ಅಪರಿಚಿತವಾಗಿ ವೈರಸ್ಯವನ್ನುಂಟುಮಾಡುತ್ತದಾದ ಕಾರಣ ಅದು ಹೇಗೆ ಮೊದಲೇ ಇರುತ್ತದೋ ಅಥವಾ ಬೀಜದಲ್ಲಿ ವೃಕ್ಷದ ಎಲ್ಲ ವೈಭವಗಳು ಹೇಗೆ ಅಡಗಿಕೊಂಡು ಮೊದಲೇ ಇರುತ್ತವೋ ಅದೇ ನ್ಯಾಯದಿಂದ ಸಮಾಜರಚನೆಗೆ ಅವಶ್ಯಕವಾದ ಮತ್ತು ಪೋಷಕವಾದ ತತ್ವಗಳು ಸಮಾಜವೆಂಬ ಹೆಸರನ್ನು ಹೊಂದುವಾಗಲೇ ಬಂದಿರುತ್ತವೆ. ಈ ಕಾರಣದಿಂದ ಸಮಾಜವು ಮೊದಲಿನ ಕಾಲದಲ್ಲಿ ಹೇಗೆ ಸಂಘಟಿತವೂ ಉತ್ಕ್ರಾಂತವೂ ಆಯಿತೆಂಬುದನ್ನು ಕೆಳಗೆ ನೋಡೋಣ.

ಗೃಹಸಂಸ್ಥೆಯಲ್ಲಿ ಜನ್ಮಕ್ಕೆ ಬಂದ ಶ್ರಮವಿಭಾಗದ ತತ್ವದಿಂದ ಕೆಲವು ಮನೆತನಗಳಾಗಲಿ ಅಥವಾ ಕುಟುಂಬಗಳಾಗಲಿ ತಂತಮ್ಮ ವೃತ್ತಿಯಿಂದ ಯಾವುದನ್ನು ಸಂಪಾದಿಸುತ್ತಿದ್ದವೋ ಅದರ ಸರಿಯಾದ ರಕ್ಷಣವನ್ನು ಮಾಡುವ ಈ ಪ್ರಶ್ನೆಯು ಆ ಕಾಲದಲ್ಲಿ ಮಹತ್ವವನ್ನು ಪಡೆಯಿತು. ಅಲ್ಲದೆ, ಹೆಂಗಸರು ಮಕ್ಕಳ ಸಂರಕ್ಷಣದ ವಿಷಯವು ಕೂಡ ಹಿಂದೆ ಹೇಳಿದಂತೆ ಮೊದಲಿನ ಮಾನವರ ಮುಂದೆ ಇದ್ದಿತ್ತು. ತಮ್ಮ ಹೆಂಗಸರು, ತಮ್ಮ ಮಕ್ಕಳು ಎಂದು ತಾವು ಪಾಲನೆ ಪೋಷಣೆ ಮಾಡೋಣ, ಪರಂತು ಸಬಲರಾದ ಅನ್ಯರು ಬಂದು ಅವರನ್ನು ಎತ್ತಿಕೊಂಡು ಹೋಗೋಣ ಅಥವಾ ಉಪದ್ರವಪಡಿಸೋಣ ಇವರ ಫಲಿತಾರ್ಥವೇನಾಗುತ್ತದೆ, ಎಂದರೆ, ಅವ್ಯವಸ್ಥೆಯ ಸಾಮ್ರಾಜ್ಯ ಹಬ್ಬಿದಂತಾಗುತ್ತದೆ. ಮತ್ತು ಇದೇ ಅವ್ಯವಸ್ಥೆಯ ಸಾಮ್ರಾಜ್ಯವು ಸಂಘಟನೆಯ ಪೂರ್ವದಲ್ಲಿ ಇತ್ತು. ಬಲವಂತನು ದುರ್ಬಲನನ್ನು ನುಂಗುವವನು, ಸಾಮರ್ಥ್ಯವುಳ್ಳವನು ಅಸಮರ್ಥನನ್ನು ತಗ್ಗಿಸುವವನು, ಈ ಕ್ರಮದಿಂದ ಅಸುಸ್ಥತೆಯು ಹಬ್ಬಿತು. ಆಗ ಕೆಲವು ಕೂಟಗಳಾದವು. ಈ ಕೂಟಗಳಲ್ಲಿ ದುರ್ಬಲರ ಕೂಟಗಳು ಆತ್ಮರಕ್ಷಣಕ್ಕಾಗಿ ಬಲವಂತರನ್ನು ತಪ್ಪಿಸಿಕೊಳ್ಳಲು ದೂರ ದೂರ ದೇಶಗಳಿಗೆ ಪ್ರಯಾಣ ಮಾಡಹತ್ತಿದವು. ಇದರೆ ಅಲ್ಲೂ ಕೂಡ ಪುನಃ ಅವರವರೊಳಗೆ ದುರ್ಬಲ ಸಬಲರ ಕಲ್ಲಾಟವು ನಡೆಯಹತ್ತಿತು. ಹೀಗೆ ಬಲವಂತನೆ ಆಳ್ವನು ಎಂಬ ತತ್ವವು ಸ್ಥಾಪಿತವಾದಂತಾಯಿತು, ಪ್ರಕೃತಿಯ ಉದ್ದೇಶವೇ ಇದು, ಪ್ರಕೃತಿಯ ಕಾನೂನೆ ಇದು ಎಂದು ಹೇಳಿದಂತಾಯಿತು. ದುರ್ಬಲರು ಬಲಿಷ್ಠರಿಗೆ ತುತ್ತಾಗುವ ಈ ನ್ಯಾಯವು ಮೊದಲು ಮಾತ್ರ ಅಸ್ತಿತ್ವದಲ್ಲಿತ್ತೆಂದಲ್ಲ, ಈಗಲೂ ಲೋಕದಲ್ಲಿ ಈ ನ್ಯಾಯವೆ ನಡೆಯುತ್ತಿದೆ. ಎಂದ ಮೇಲೆ ಇದು ಪ್ರಕೃತಿಯ ಸ್ವಭಾವವೆನ್ನಲು ಅಡ್ಡಿ ಇಲ್ಲ. ಪರಂತು ಈ ಲೋಕವು ಸಬಲರ ಉಪಭೋಗಕ್ಕೆ ಮಾತ್ರ ಇದ್ದದ್ದು ಎಂದಾದರೆ ಲೋಕದಲ್ಲಿ ದುರ್ಬಲ ಸುಧಾರಣೆಗೂ ಅವಕಾಶವಿರಲಿಕ್ಕಿಲ್ಲ. ಎಲ್ಲ ಅವ್ಯವಸ್ಥೆಯು, ಬಲಾತ್ಕಾರದ ಪ್ರಭುತನದ ಸಂಜ್ಞೆಯಾಗಿ ತೋರೀತು, ತೋರೀತು ಮಾತ್ರವಲ್ಲ, ಇಂಥ ಅವ್ಯವಸ್ಥೆಯು ಆದಿಕಾಲದಲ್ಲಿ ಎಂದಿತೋ ಇತ್ತು. ಆ ಅಪತ್ತನ್ನು ನಿವಾರಿಸುವುದಕ್ಕಾಗಿ ಯಾವ ಉಪಾಯಗಳನ್ನು ಕೈಕೊಳ್ಳಬೇಕು, ಸಬಲರು ಈ ಲೋಕದ ಉಪಭೋಗವನ್ನು ತೆಗೆದುಕೊಳ್ಳುವಂತೆ ದುರ್ಬಲರೂ ತೆಗೆದುಕೊಳ್ಳಬೇಕಾದರೆ ಮತ್ತು ಬಲಿಷ್ಠರು ಬೈ ಬಿಟ್ಟು ತಿರುಗಾಡುವಂತೆ ದುರ್ಬಲರಿಗೂ ಅವಕಾಶ ದೊರಕಬೇಕಾದರೆ ಏನು ಮಾಡಬೇಕು ಎಂಬದೊಂದು ಪ್ರಶ್ನೆಯು ದುರ್ಬಲರ ಮುಂದೆ ನಿಂತಿತು. ಪ್ರಕೃತಿಯಲ್ಲಿ ದುರ್ಬಲರನ್ನು ನಾಮಶೇಷಮಾಡುವ ಯಾವ ಗುಣವು ಕಂಡುಬರುತ್ತದೋ, ಕಂಡುಬಂದರೂ ಯಾವ ದೋಷವು ದೃಗ್ಗೋಚರವಾಗುತ್ತದೋ ಅದಕ್ಕೆ ಯಾವ ಔಷದವನ್ನು ತಯಾರಿಸಬೇಕೆಂಬುದೆ ಆಗಿನ ಕಾಲದ ದುರ್ಬಲರ ಮುಖ್ಯ ವಿಚಾರವಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಅವರು ಕೆಲವು ನೀತಿ ನಿಯಮಗಳನ್ನು ಕಲ್ಪಿಸಿದರು. ಲೋಕದೊಳಗಿನ ಸಕಲ ಮಾನವರ ವಿತ್ತ ಜೀವಿತಗಳು ಸುರಕ್ಷಿತವಾಗಿ ನಿಲ್ಲುವಂತೆ ಅವರು ಕೆಲವು ನೀತಿತತ್ವಗಳನ್ನು ಹೊರಡಿಸಿದರು. ಪ್ರಬಲರನ್ನು ಪರೋಪದ್ರವದ ಮಾರ್ಗದಿಂದ ಹಿಂತಿರುಗಿಸಲು ದುರ್ಬಲರಲ್ಲಿ ಅಂಗಸಾಮರ್ಥ್ಯವಂತೂ ಇಲ್ಲ, ಯಾಕೆಂದರೆ ಅವರು ಮೊದಲೇ ದುರ್ಬಲರು. ಆಗ ದುರ್ಬಲರಾದವರೂ ಎಲ್ಲರೂ ಏಕತ್ರ ಸೇರಿ ತಮ್ಮಲ್ಲಿ ಒಂದು ಸಂಘಶಕ್ತಿಯನ್ನು ಹುಟ್ಟಿಸಿಕೊಂಡು ಎದುರು ಪಕ್ಷದವರಿಗೆ ತಮ್ಮ ಮುಂದೆ ತಲೆ ಬಗ್ಗಿಸುವಂತೆ ಮಾಡಹತ್ತಿದರು. ಈ ರೀತಿಯಿಂದ ಈ ಎರಡೂ ಪಕ್ಷಗಳ ಹೋರಾಟವಾಗಿ ಯಾವಾಗ ಸಮಶಕ್ತಿಯುಂಟಾಯಿತೋ ಆಗ ನಾವು ಈಗಲೇ ಹೇಳಿದ ನೀತಿತತ್ವಗಳ ಕಲ್ಪನೆಗೆ ಅವಕಾಶ ದೊರೆಯಹತ್ತಿತು. ಎಲ್ಲ ಮೇಲಿನ ನೀತಿತತ್ವಗಳೆಂದರೆ ದುರ್ಬಲರು ಪ್ರಕೃತಿಯ ವಿರುದ್ಧ ಹೋರಾಡಲು ಕಲ್ಪಿಸಿಕೊಂಡ ಶಸ್ತ್ರಾಸ್ತ್ರಗಳು. ಈ ನೀತಿನಿಯಮಗಳಲ್ಲಿ ಈಶ್ವರಭಾವನೆ, ಧರ್ಮಕಲ್ಪನೆ ಇತ್ಯಾದಿಗಳ ಸಮಾವೇಶವುಂಟಾಗುತ್ತದೆ. ಪ್ರಬಲರಿಂದ ದುರ್ಬಲರು ಆತ್ಮರಕ್ಷಣೆಗಾಗಿ ನೀತಿನಿಯಮಗಳನ್ನು ಧರ್ಮತತ್ವಗಳನ್ನೂ ಕಲ್ಪಿಸಿಕೊಂಡರು ಎಂದು ನಾವು ವಿಧಿಸುವುದನ್ನು ಸಕಲ ಆಸ್ತಿಕಮಂಡಲದ ಶ್ರದ್ಧೆಗೆ ಆಘಾತವನ್ನು ಕೊಡುವಂತೆ ತೋರೀತು. ಪರಂತು ಧರ್ಮದ ಅಥವಾ ನೀತಿಯ ಇತಿಹಾಸವನ್ನು ನೋಡಿದಲ್ಲಿ ಇದು ಹೀಗೆಯೇ ಉತ್ಪನ್ನವಾಗಿದೆ ಎಂದು ಕಂಡುಬರುತ್ತದೆ. ... ಶ್ರಮವಿಭಾಗದ ತತ್ವವು ಅಗತ್ಯದ ಭಿನ್ನ ಭಿನ್ನ ಕಾರ್ಯಗಳು ಸಮ ಪ್ರಮಾಣದಿಂದ ಸಕಲರ ಉಪಯೋಗಕ್ಕೆ ಬೀಳಬೇಕೆಂದು ಮೊದಲಾಗಿ 'ಪರಸ್ವಾಪಹಾರವನ್ನು ಮಾಡಬಾರದು' ಎಂಬ ತತ್ವವು ಅವತರಿಸಿತು. ಬೇರೆಯವರನ್ನು ಉಪದ್ರವಿಸಬಾರದು, ಬೇರೆಯವರನ್ನು ತನ್ನಂತೆಯೇ ನೆನೆಸಬೇಕು, ಅಸತ್ಯ ನುಡಿಯಬಾರದು, ಮೋಸ ಮಾಡಬಾರದು ಇತ್ಯಾದಿ ಅನೇಕ ಸೂತ್ರಗಳು ಆಚಾರದಲ್ಲಿ ಬರಹತ್ತಿದವು. ಜನರು ಈ ನೀತಿಸೂತ್ರಗಳನ್ನು ಸರಿಯಾಗಿ ಮನ್ನಿಸುವಂತೆ ಇಲ್ಲಿ ವಂಶಮುಖ್ಯರಾಗಲಿ ಅಥವಾ ಅರಸರಾಗಲಿ ಹೇಗೆ ಅಸ್ತಿತ್ವದಲ್ಲಿ ಬಂದಿರುವರೋ ಹಾಗೆಯೆ ಎಲ್ಲ ಜನರಿಗೂ ಅರಸರಿಗೂ ಭಯ, ಆದರ, ಪೂಜ್ಯತೆ ಇವುಗಳ ಸ್ಥಾನವಾದ ಒಬ್ಬ ಈಶ್ವರನೂ ಕೂಡ ಕಲ್ಪಿಸಲ್ಪಟ್ಟನು. ಅರ್ಥಾತ್ ಈ ಕಲ್ಪನೆಯು ದೃಢವಾಗುವಂತೆ, ಇದಕ್ಕೆ ಪೋಷಕವಾಗುವಂತೆ ಇರುವ ಪುಣ್ಯ, ಇದು ಪಾಪ ಇತ್ಯಾದಿ ವ್ಯವಸ್ಥೆಯೂ ಕೂಡ ಮೆಲ್ಲಮೆಲ್ಲನೆ ಆಗಹತ್ತಿತು. ಸಾರಾಂಶ, ಬಳ್ಳಿಗೆ ಗೇಣು ಗೇಣಿಗೆ ಚಿಗುರುಗಳು ಒಡೆಯುವಂತೆ ನೀತಿಲತೆಗೆ ಅನೇಕ ಕೊಂಬೆಗಳು ಚಿಗುರಿದವು. ನೀತಿಯ ಮತ್ತು ಧರ್ಮದ ತತ್ವಗಳಿಂದ ಸಮಾಜದ ಸಂಘಟನೆಯಾಗಹತ್ತಿತು. ನೀತಿಬಂಧನಗಳು ಅನೇಕ ಅಥವಾ ವಿವಿಧವಾಗಿದ್ದರೂ ಅವುಗಳ ಮುಖ್ಯ ತತ್ವವು ಸರ್ವತ್ರ ಲೋಕದಲ್ಲಿ ಸಮ ದೃಷ್ಟಿಯು ಉಂಟಾಗಬೇಕು ಸಮಾಜವು ಅಥವಾ ರಾಷ್ಟ್ರವು ನಿರಾಬಾಧವಾಗಿ ನಡೆಯುವುದು. ಸಮಾಜದ್ದು ನೀತಿಬಂಧನಗಳಿಂದ ಸಂಘಟನೆಯು ಉಂಟಾಗಲು ಉತ್ಕ್ರಮಣವೂ ಕೂಡ ಆಗತೊಡಗುವುದು.

ಮೇಲಿನ ಉಪಪ್ಪಾದನದ ಮೇಲಿಂದ ಬಾಲ್ಯಾವಸ್ಥೆಯಲ್ಲಿರುವ ಸಮಾಜವು ಕ್ರಮಕ್ರಮವಾಗಿ ಉತ್ಕ್ರಾಂತವಾಗುವಾಗ ತನ್ನ ಸ್ವರೂಪವನ್ನು ಮತ್ತು ಸಂಘಟನೆ ಇವುಗಳನ್ನು ಕಾಪಾಡಿಕೊಳ್ಳಲು, ಎಂದರೆ ಒಂದೆ ಮಾತಿನಿಂದ ತನ್ನ ಹಿತಕ್ಕಾಗಿ ನೀತಿಶಾಸನವನ್ನೂ, ಧರ್ಮಶಾಸ್ತ್ರವನ್ನೂ ಕಲ್ಪಿಸಿಕೊಂಡಿತೆಂಬುದು ವಾಚಕರ ಗೋಚರಕ್ಕೆ ಬಂದೀತು. ನೀತಿಶಾಸ್ತ್ರವಾಗಲಿ ಧರ್ಮವಾಗಲಿ ಈ ಮೇರೆಗೆ ಸಮಾಜದ ಯೋಗಕ್ಷೇಮಕ್ಕಾಗಿ ಇದ್ದದ್ದು ನಿರ್ವಿವಾದವಾದರೂ ಈ ಎರಡು ಶಾಸ್ತ್ರಗಳಿಂದ ಮಾನವ ಬುದ್ಧಿಯು ಈ ಕಠೋರ ಪ್ರಕೃತಿಯ ನೈಸರ್ಗಿಕವಾದ ನಿಷ್ಠುರ ಪ್ರವೃತ್ತಿಯನ್ನು ಹಿಂದುಗಡೆ ಸರಿಸಲು ಎಷ್ಟು ಪ್ರಯತ್ನಪಟ್ಟಿದೆ ಮತ್ತು ಆ ಪ್ರಯತ್ನದಲ್ಲಿ ಎಷ್ಟು ಮಟ್ಟಿಗೆ ಯಶಸ್ಸನ್ನು ಸಂಪಾದಿಸಿದೆ ಇವನ್ನು ಮೇಲಿಂದ ಮೇಲೆ ಆಲೋಚಿಸಿದರೂ ಕೂಡ ಯಾರಿಗೂ ಬೆರಗಾಗದೆ ಇರದು. ಮಾನವಜೀವಿತವು ಸುಖವೂ ಶಾಂತಿಯುತವೂ ಆಗುವಂತೆ ನೀತಿಶಾಸ್ತ್ರ ಹಾಗು ಧರ್ಮಬೋಧ ಇವು ಹೇಗೆ ಅವತರಿಸಿದವೋ ಹಾಗೆಯೆ ಇನ್ನೂ ಅನೇಕ ಶಾಸ್ತ್ರಗಳು ಹುಟ್ಟಿದವು. ನೀತಿಶಾಸ್ತ್ರದ ಹಾಗು ಧರ್ಮದ ಅಧಿಕಾರವು ಮನಸ್ಸಿನ ಮೇಲೆ ಮಾತ್ರ ನಡೆಯುತ್ತದೆ. ಯಾರ ಮನಸ್ಸು ಪ್ರಗಲ್ಭವಾಗಿರುವುದಿಲ್ಲವೋ ಅವರಿಗೆ ನೀತಿಬೋಧೆಯೂ ತಿಳಿಯದು, ಧರ್ಮೋಪದೇಶವು ಹತ್ತದು. ಇಂಥವರನ್ನು ಆಳ್ವಿಕೆಯಲ್ಲಿಡಲು ಎಂದರೆ ಪರ್ಯಾಯದಿಂದ ಸಮಾಜದ ಯೋಗಕ್ಷೇಮವನ್ನು ಕಾಪಾಡಲು ರಾಜಕೀಯ ಸಂಸ್ಥೆಯು ಬಂತು. ಇದು ಲೌಕಿಕ ದೃಷ್ಟಿಯಿಂದ ಸಮಾಜದ ಸಂವರ್ಧನೆಗೂ, ಸಂಘಟನೆಗೂ ಮತ್ತು ಉತ್ಕ್ರಾಂತಿಗೂ ವಿಶೇಷವಾಗಿ ಕಾರಣವಾಗಿದೆ. ಸಮಾಜದ ಚರಿತ್ರದಲ್ಲಿ ರಾಜಕೀಯ ಸಂಸ್ಥೆಯು ಎಷ್ಟು ಮಹತ್ವದ ಸ್ಥಾನವನ್ನು ಆಕ್ರಮಿಸಿದೆ ಎಂದು ನೋಡಹೋದರೆ ನಿಜವಾಗಿ ಮನೋರಂಜಕವಾದ ವಿಷಯವು. ಪರಂತು ಈ ಹೊತ್ತಿನ ಲೇಖವು ಬೆಳೆದುಹೋದ ಕಾರಣ ಅದನ್ನು ಒಮ್ಮೆ ನಾರಿ ಪ್ರಸ್ತಾಪಿಸಬೇಕಾಗಿರುತ್ತದೆ.

ಅಂತು ಸಮಾಜೋದ್ಧಾರದ ಬಗ್ಗೆ ಇದುವರೆಗೆ ಹೇಳಿದ ಸಂಗತಿಗಳೆಂದರೆ ಶ್ರಮವಿಭಾಗ, ಸಮದೃಷ್ಟಿ, ಮತ್ತು ನೀತಿವರ್ತನ ಇವೆ ಆಗಿರುತ್ತದೆ.

ಸ್ಫುಟ ವಿಚಾರಗಳು

೧. ಮದ್ರಾಸ ಸರಕಾರದ ಕಾರ್ಯಕಾರಿ ಕೌನ್ಸಿಲ್ ಮೆಂಬರರಾದ ನಾಮದಾರ ಸರ್. ಸಿ. ರಾಜಗೋಪಾಲಾಚಾರ್ಯರು ಇದೇ ತಿಂಗಳ ೧೧ನೆ ತಾರೀಕಿಗೆ ತಿನ್ನವೆಲ್ಲಿ ಜಿಲ್ಲೆಯನ್ನು ಸಂದರ್ಶಿಸಿದಾಗ ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗಿಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ಸ್ಥಾನಿಕ ಸ್ವಾತಂತ್ರ್ಯದ ಕ್ರಮದಲ್ಲಿ ಕಂಡು ಬಂದ ಅಭಿವೃದ್ಧಿಯನ್ನೂ ದಿನ ಸರಕಾರ ಪ್ರೆಸಿಡೆಂಟರಲ್ಲಿ ಹಲವರು ಉತ್ಸಾಹಪೂರ್ವಕವಾಗಿ ಕೆಲಸ ನಡಸಿದ್ದನ್ನೂ ಕುರಿತು ಸಾಮಾನ್ಯವಾಗಿ ಅಲ್ಲಿ ನೆರೆದ ಸಭಿಕರಿಗೆ ತಿಳಿಸಿದರು. ಇವರಿಂದ ಈ ರೀತಿಯಾಗಿ

ಸರಕಾರವು ಪ್ರಜಾಜನರಿಗೆ ಸ್ವಾತಂತ್ರ್ಯ ಕೊಡುವ ಸೂತ್ರಗಳನ್ನು ಬೆಳೆಸಲು ಇನ್ನೂ ಬಾಧಕವೆಂದಿಲ್ಲ. ಅದಕ್ಕೆ ಆಧಾರವನ್ನು ತೋರಿಸುವವರಲ್ಲಿ ಅನೇಕರು ಕರ್ತವ್ಯದಕ್ಷತೆಯನ್ನು ತೋರದಿದ್ದರೆಂಬುದು ಸಂತೋಷವಲ್ಲ. ಮತ್ತು ಅದೇ ಸಂದರ್ಭದಲ್ಲಿ ಅವರು ಎಂದು ಪ್ರಶ್ನೆಗಳನ್ನೆತ್ತಿ ಬಿನಸರಕಾರಿ ಮೆಂಬರರ ಅಭಿಮತಗಳನ್ನು ಕೇಳಲು ಯತ್ನಿಸಿದರು. ಈಗ ತಾಲೂಕು ಬೋರ್ಡಿನ ವೋಟರಾಗಲಿಕ್ಕೆ ೧೦ ರೂಪಾಯಿ ವರ್ಷಾವಧಿಯಲ್ಲಿ ಭೂಕಂದಾಯ ಕೊಡುವವರೇ ಅರ್ಹರೆಂಬ ಮಿತಿ ತಪ್ಪು ಇದೆ. ಈ ಮಿತಿಯನ್ನು ತಗ್ಗಿಸುವುದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾದೀತು ಎಂದು ಮೆಂಬರರು ತಮ್ಮ ಅನುಭವದ ಮೇಲಿಂದ ತಿಳಿಸಬೇಕಾಗಿ ನಾಮದಾರರ ಸೂಚನೆಯಿತ್ತು. ಮಿತಿಯನ್ನು ತಗ್ಗಿಸಿ ದೊಡನೆ ವೋಟರರ ಸಂಖ್ಯೆ ಹೆಚ್ಚಾಗುವುದರಿಂದ ಮೆಂಬರರಾಗಲಿಕ್ಕಿರುವ ಉಮೇದ್ವಾರರಿಗೆ ಬಹಳ ಆಡಚಣೆಯುಂಟಾದೀತು ಎಂದು ಒಬ್ಬರು ಸೂಚಿಸಿದರು. ಪ್ರಾಂತಿಕ ಲೆಜಿಸ್ಲೇಟಿವ ಕೌನ್ಸಿಲಿಗೆ ವೋಟರರ ಸಂಖ್ಯೆಯನ್ನು ಏರಿಸುವ ಏರ್ಪಾಡು ಈ ಮೊದಲೇ ಆಗಿದ್ದು ಈಗ ಸರಕಾರ ಪ್ರತಿ ಜಿಲ್ಲೆಯ ವೋಟರರ ಪಟ್ಟಿಯನ್ನು ತಯಾರಿಸುವುದಕ್ಕಾಗಿ ಆಫೀಸರುಗಳನ್ನು ಅಲ್ಲಲ್ಲಿ ನೇಮಕಮಾಡಿದ್ದಾರೆ. ಹಾಗಿರುವಾಗ ಅದೇ ಮಾನದಿಂದ ತಾಲೂಕು ಬೋರ್ಡು ಚುನಾವಣೆಗೆ ಸಹ ವೋಟರರ ಸಂಖ್ಯೆ ಏರಿಸಬೇಕೆಂದು ಸರಕಾರದವರು ನಿಶ್ಚಯಿಸಿದ್ದರೆ ಅದು ನಿರಾಕ್ಷೇಪಕರವಾಗಿದೆ. ಈಗ ಮಿತಿಯನ್ನು ಬಹಳ ತಗ್ಗಿಸಿದರೆ, ಅಂದರೆ ೧ ರೂಪಾಯಿ ಬೇರೇಜು ಕೊಡುವ ಬೆಗ್ರು [illegible] ಕೂಲಿಕಾರರಿಗೂ ೮ ಆಣೆ ತೀರ್ವೆ ಕೊಡುವ ನಗ್ರಮಾಂಡರರ (ಪಂಚಮರಿಗೂ) ೧೦ ಸಾವಿರ ರೂಪಾಯಿ ತೀರ್ವೆ ಕೊಡುವ ಕೋಟಿ ಸೆಟ್ಟರಿಗೂ ೨ ಸಾವಿರ ರೂಪಾಯಿ ಕಂದಾಯ ಕೊಡುವ ಕುಂಡಲಗಿರಿ ಆಚಾರ್ಯರಿಗೂ ೫೦೦೦ ಇನ್ಕಂ ಟೇಕ್ಸ್ ಕೊಡುವ ಜಿಗಟ್ ಸೇಟರಿಗೂ ಒಂದೊಂದು ವೋಟು ಇದೆ ಎಂದು ಹೇಳಿದರೆ ಆ ವೋಟು ಸಂಗ್ರಹಗಳ ಕಲಹ ಕಷ್ಟತರವಾದೀತು ಎಂದು ಆ ಡಿಸ್ಟ್ರಿಕ್ಟ ಬೋರ್ಡು ಮೆಂಬರರ ಅಭಿಪ್ರಾಯವೆಂದು ತೋರುತ್ತದೆ. ನೂತನವಾದ ಯಾವುದೊಂದು ವಿಷಯವೂ ರೂಢಿಗೆ ಬರುವ ವರೆಗೆ ಅದು ಸ್ವಲ್ಪ ಮಟ್ಟಿಗೆ ಕುಟ್ಟಿದಂತಾಗುವುದು ಮನೋವೃತ್ತಿಯ ಒಂದು ಲಕ್ಷಣ. ಆ ಮಾತು ಹಾಗಿರಲಿ. ಆದರೆ ವೋಟರರ ಸಂಖ್ಯೆ ಹೆಚ್ಚಾಗುವುದರಿಂದ ಜನತೆಗೆ ಒಂದು ಬಗೆಯ ನಾಗರಿಕತನದ ಶಿಕ್ಷಣವಾಕ್ಕೆ ಏಡೆಯಾಗುತ್ತದೆ ಎಂಬುದು ಎಲ್ಲರೂ ಒಪ್ಪಬೇಕಾಗಿದೆ. ಮಾತ್ರವಲ್ಲದೆ ಬೂಗ್ರು ಮರಕಾಲಿಗಾಗಲಿ ನಗ್ರು ಮುಂಡಾಲರಿಗಾಗಲಿ ಅವನ ವೋಟಿನ ಜವಾಬ್ದಾರಿ ಗೊತ್ತಾಗಲಾರದೆಂದು ಎಂದು ಆಕ್ಷೇಪ ಹೇಳುವುದಾದರೆ ಈಗ ದೊಡ್ಡ ಶಹರಗಳಲ್ಲಿ—ಮುನಿಸಿಪಾಲಿಟಿಯ ಅಧಿಕಾರವು ಜನತೆಯ ಕೈಯಲ್ಲಿ ಇದ್ದೆಡೆಗಳಲ್ಲಿ—ವಿದ್ಯಾವಂತರಲ್ಲಿಯೂ ಶ್ರೀಮಂತರಲ್ಲಿಯೂ ಕೂಡಾ ತಮ್ಮ ಜವಾಬ್ದಾರಿಗಳ ಕಡೆಗೆ ಕಣ್ಣಿಟ್ಟು ಯೋಗ್ಯರಾದವರನ್ನೆ ಚುನಾಯಿಸಲು ಯತ್ನಿಸುತ್ತಾರೆ ಎಂದು ನಿರ್ಧಾರವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಹಾಗಿದ್ದರೆ ಈ ಆಕ್ಷೇಪಗಳನ್ನು ಕಡಿಮೆ ಕಂದಾಯ ತೆರುವವರ ಮೇಲೆ ಮಾತ್ರವೇ ಯಾಕೆ ಹೊರಿಸಬೇಕು? ವೋಟರರ ಸಂಖ್ಯೆ ಹೆಚ್ಚಾದೊಡನೆ ಸಾಹಸಿಗಳಾದವರು ಮಾತ್ರವೇ ಮೆಂಬರಿಕೆಗೆ ಉದ್ಯುಕ್ತರಾಗುತ್ತಾರೆ. ಆಫೀಸು ನಪ್ತೆಕರರ ಆಶ್ರಯವು ಅವರಿಗೆ ಬೇಕಾಗಿರುವುದಿಲ್ಲ. ಯಾವಾಗ ವೋಟರರನ್ನು ಹುಡುಕಿಕೊಂಡು ಹೋಗಬೇಕಾಗಿ ಬಂತೋ ಆಗ ವೋಟರರು "ನಮ್ಮ ಭಾಗಕ್ಕೆ ಪ್ರತಿಯಾಗಿ ಯಾವ ಸಲಹೆಗಳನ್ನು ಒದಗಿಸಿ ಕೊಟ್ಟೀರಿ" ಎಂದು ಸಹಜವಾಗಿ ಕೇಳಿಯೇ ಕೇಳುವರು. ಆಗ ಕೊಟ್ಟ ಮಾತುಗಳು ನೀರಿನ ಮೇಲೆ ಎಳೆದ ಗೀಟಾಗುವುದಾದರೆ ಮುಂದೆ ಕಾರ್ಯ ಉಮೇದ್ವಾರರ ಮೇಲೆ ಜನತೆಗೆ ವಿಶ್ವಾಸವು ತಪ್ಪುತ್ತದೆ. ಹೀಗಾಗಿ ಜನತೆಗೆ ಸಲಹೆಯನ್ನು ಒದಗಿಸಿಕೊಡುವ ಪ್ರಯತ್ನವು ಮೆಂಬರರಲ್ಲಿ ಹೆಚ್ಚಾಗಬೇಕಾಗುತ್ತದೆ. ಎಷ್ಟಂದಾರೆ ಪಟ್ಟಿಯನ್ನೂ ಕೂಡಾ ಓದದೆ ಸಭೆಯಲ್ಲಿ ಕಣ್ಣು ಕೂರುವವರು, ಅಥವಾ ಸರಕಾರಿ ಮೆಂಬರರ ದೃಷ್ಟಿಯನ್ನೆ ಹಾರೈಸಿಕೊಂಡು ಇರುವಂಥವರ ಸಂಖ್ಯೆಯು ಕಡಿಮೆಯಾಗುತ್ತದೆ. ಇದು ಜನತೆಗೆ ಪ್ರಯೋಜನವೇ ಅಲ್ಲವೆ?

೨. ನಾಮದಾರರು ಅಲ್ಲಿ ಎತ್ತಿದ ಇನ್ನೊಂದು ಪ್ರಶ್ನೆಯು ಪಂಚಮರ ವಿದ್ಯಾಭ್ಯಾಸವನ್ನು ಕುರಿತು. ಪಂಚಮರಿಗೋಸ್ಕರವೇ ಬೇರೆಯಾಗಿ ಶಾಲೆಗಳನ್ನು ಏರ್ಪಡಿಸಿರುವುದರಿಂದ ಸರಕಾರಿ ಹಣವು ಬಹಳ ವೆಚ್ಚವಾಗಬೇಕಾಗುತ್ತದೆ. ಈಗ ಇದ್ದ ಇತರ ಶಾಲೆಗಳಲ್ಲಿಯೇ ಈ ಪಂಚಮರನ್ನು ದಾಖಲು ಮಾಡಲು ಜನತೆಯ ಮುಖಂಡರು ಉತ್ಸಾಹ ತೋರಿಸಿದರೆ ಆ ರೀತಿಯಿಂದ ಉಳಿಯುವ ಹಣವನ್ನು ವಿದ್ಯಾಪ್ರಚಾರಕ್ಕೆ ಉಪಯೋಗಿಸಬಹುದು ಎಂದು ನಾಮದಾರರು ಹೇಳಿದರು. ಈಗ ೧೯೨೮-೨೯ರಲ್ಲಿ ೧೬,೫೦೦ ಮಂದಿ ಪಂಚಮ ಮಕ್ಕಳು ವಿದ್ಯಾಭ್ಯಾಸ ಹೊಂದುತ್ತಿದ್ದರು. ಅವರ ಬಗ್ಗೆ ಒಟ್ಟಿಗೆ ೯೮,೪೮೭ ರೂಪಾಯಿ ಖರ್ಚಿನಲ್ಲಿ ಸರಕಾರ ಮತ್ತು ಬೋರ್ಡ್ ಬೊಕ್ಕಸದಿಂದ ೫೧,೧೮೪ ರೂಪಾಯಿ ವೆಚ್ಚವಾಯಿತು ಎಂದು ತಿಳಿಯುತ್ತೇವೆ. ಹಲವು ಕಡೆಗಳಲ್ಲಿ ಪಂಚಮರಿಗೋಸ್ಕರ ಬೇರೆ ಶಾಲೆಗಳನ್ನು ಏರ್ಪಡಿಸಿದ್ದರಿಂದ ಅದಕ್ಕೆ ಯೋಗ್ಯ ಉಪಾಧ್ಯಾಯರು ಸಿಗುವುದೇ ದುರ್ಲಭವಾಗಿದೆ. ಕೆಲವು ಬರೆಹಗಳಿಗೆ ಮಾತ್ರ ಎಂಬಂತಿವೆ. ಆದರೆ ಈ ಮಕ್ಕಳನ್ನು ಇತರರ ಶಾಲೆಗಳಲ್ಲಿಯೇ ದಾಖಲು ಮಾಡುವುದಕ್ಕೆ ಪ್ರಯತ್ನಪಟ್ಟರೆ ಮೇಲಿನ ಖರ್ಚಿನಲ್ಲಿ ಅಧಿಕಾಂಶವನ್ನು ಉಳಿಸಬಹುದು. ಮಾತ್ರವಲ್ಲದೆ ಆ ಪಂಚಮರಿಗೆ ಯೋಗ್ಯತರದ ಶಿಕ್ಷಣ ಸಿಗಲಿಕ್ಕೆ ಅನುಕೂಲವಾಗುತ್ತದೆ. ಈಗ ಇರುವ ಬೋರ್ಡು ಮತ್ತು ಖಾಸಗಿ ಶಾಲೆಗಳಲ್ಲಿಯೇ ಫೀಸು ಮಾಫಿ ಮಾಡುವುದಾದರೆ ಆ ನಷ್ಟವನ್ನು ಭರ್ತಿಮಾಡಲಿಕ್ಕೆ ಸುಮಾರು ೮ ಲಕ್ಷ ರೂಪಾಯಿ ವಿಂಗಡಿಸಿ ಇಡಬೇಕಾದೀತು. ಕಡ್ಡಾಯದ ಮತ್ತು ಫೀಸು ಮಾಫಿಯ ಪ್ರಾಥಮಿಕ ಶಿಕ್ಷಣಕ್ಕೋಸ್ಕರ ಈಗ ಹಣದ ಅಭಾವದಿಂದ ಕಷ್ಟತರವಾಗಿದೆ ಎಂದು ತಿಳಿಯುವಾಗ ಈ ರೀತಿಯಾಗಿ ಬೇರೆ ಬೇರೆ ಜಾತಿಗಳಿಗೋಸ್ಕರ ಬೇರೆ ಬೇರೆ ಶಾಲೆಗಳನ್ನು ಏರ್ಪಡಿಸಿ ಒಂದಕ್ಕೆರಡು ಪಾಲು ಖರ್ಚು ಮಾಡುವುದಕ್ಕಿಂತ ಸರಕಾರದ ಮತ್ತು ಬಿನಸರಕಾರಿ ಮೆಂಬರರ ಕಮ್ಮಿಟಿಯೊಂದನ್ನು ಏರ್ಪಡಿಸಿ ಈ ಬಗೆಯ ಜಾತಿವಾರ್ ಶಾಲೆಗಳನ್ನು ಎಷ್ಟರ ಮಟ್ಟಿಗೆ ಕಡಿಮೆಮಾಡಬಹುದು, ಹಾಗೆ ಮಾಡುವುದರಿಂದ ಆ ಜಾತಿಗಳ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಅಡ್ಡಿಯಾಗದೆ ಎಷ್ಟು ಅಂಶವನ್ನು ವಿದ್ಯಾಇಲಾಖೆಯಲ್ಲಿ ಉಳಿಸಬಹುದು ಎಂಬದನ್ನು ಗೊತ್ತು ಹಚ್ಚಲಿಕ್ಕೆ ಒಂದು ಕಮ್ಮಿಶನ್ ಏರ್ಪಡಿಸಬೇಕಾಗಿ ಸರಕಾರದ ಮುಂದೆ ಠರಾವು ತರುವಂತೆ ನಾವು ನಮ್ಮ ಸಂಸ್ಥಾನದ ಮತ್ತು ಜಿಲ್ಲೆಯ ನಾಮದಾರ ಮೆಂಬರರಿಗೆ ಕೇಳಿಕೊಳ್ಳುತ್ತೇವೆ. ಹೊಸ ಕೌನ್ಸಿಲುಗಳು ಬರುವ ವರ್ಷ ಜಾರಿಗೆ ಬರುವ ಮುಂಚೆಯೇ ಈ ಬಗೆಯ ಅನುಭವವನ್ನು ಸಂಗ್ರಹಿಸಿ ತಯಾರಿಸಿದರೆ ಶಿಕ್ಷಣ ಇಲಾಖೆಯು ಪ್ರಜಾಪ್ರತಿನಿಧಿಗಳಾದ ಮಿನಿಸ್ಟರ್ ಮಂತ್ರಿಗಳ ವಶಕ್ಕೆ ಮುಂದಿನ ವರ್ಷ ಬಂದೊಡನೆ ಆದ್ಯಾಪ್ತವಾದ ವಿದ್ಯಾಭ್ಯಾಸಕ್ಕೆ ದಾರಿ ಸುಗಮವಾದೀತು. ಈ ಕಮ್ಮಿಶನವರು ಅಲ್ಲಲ್ಲಿ ಸಂಚರಿಸಿ ಅನುಭವ ಪಡೆದುಕೊಳ್ಳುವುದಲ್ಲದೆ ಪ್ರಜಾಮುಖಂಡರನ್ನೂ ಆಯಾ ಜಾತಿಯ ಮುಖಂಡರನ್ನು ಕಂಡು ಅವರ ಅಭಿಮತಗಳನ್ನು ಸಂಗ್ರಹಿಸುವುದು ಅಗತ್ಯ.

೩. ಮದ್ರಾಸು ನ್ಯಾಯವಿಧಾಯಕ ಸಭೆಯ ಈ ತಿಂಗಳ ಅಧಿವೇಶನದಲ್ಲಿ ಕಡ್ಡಾಯದ ಮತ್ತು ಮಾಫಿಯ ಪ್ರಾಥಮಿಕ ಶಿಕ್ಷಣವನ್ನು ಕೊಡಲಿಕ್ಕೆ ಹಣ ವಿಂಗಡಿಸಬೇಕೆಂದು ನಾಮದಾರ ನರಸಿಂಹ ಅಯ್ಯರು ಇನ್ನೊಂದು ಠರಾವನ್ನು ತಂದಿದ್ದರು. ಇದನ್ನು ವಿರೋಧಿಸುವಾಗ ನಾಮದಾರ ಮಿ| ಥೊಂಗರರು ಬಹು ವಿಚಿತ್ರವಾದ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಇದರಿಂದ ತಮ್ಮ ದುರುದ್ದೇಶವನ್ನು ಕೈಗೂಡಿಸಿ ಹಿಂದೀ ಜನಾಂಗದ ಸಲಹೆಗಳ ಗೋಣು ಒತ್ತಲಿಕ್ಕೆ ಯಾವ ಬಗೆಯ ಋಜುವಾತನ್ನೂ ವೇದವಾಕ್ಯದಂತೆ ನಮ್ಮ ಮುಂದಿಡುವ ಜನರು ಇನ್ನೂ ಇದ್ದಾರೆಂಬುದು ನಮ್ಮಲ್ಲಿ ಮುಂಜಾಗ್ರತೆ ಇರಬೇಕೆಂಬದನ್ನು ಇನ್ನೂ ಇನ್ನೂ ಒತ್ತಿ ಹೇಳುತ್ತಿದೆ. ಮಿ| ಥೊಂಗರರ ಅಭಿಪ್ರಾಯದಲ್ಲಿ ಈಗಿನ ಶಿಕ್ಷಣಕ್ರಮದಿಂದ ಪಂಚಮರು ಮುಂತಾದವರಲ್ಲಿಯೂ ಸರಕಾರ ಹುದ್ದೆಗಳ ಕಡೆಗೆ ಕಾಂಕ್ಷೆಯನ್ನು ಹುಟ್ಟಿಸುವುದರಿಂದ ಮುಂದೆ ಬೇಗನೆ ಬ್ರಾಹ್ಮಣರಿಂದ ಅವರು ಅಧಿಕಾರದ ಸೂತ್ರಗಳನ್ನು ಸೆಳೆದುಕೊಂಡು ಬ್ರಾಹ್ಮಣರ ಮೇಲೆ ಸವಾರಿ ಮಾಡಿಯಾರು ಎಂದು ತೋರುತ್ತದೆ. ಇಂಗ್ಲೆಂಡಿನಲ್ಲಿ ಈಗ ಮಜೂರರು ಸರಕಾರದ ಸೂತ್ರಗಳನ್ನು ಧನಿಕ ಮತ್ತು ಇತರ ಶಿಕ್ಷಿತ ವರ್ಗದವರಿಂದ ಕಿತ್ತುಕೊಳ್ಳಲು ಯತ್ನಿಸುವಂತೆ ಈ ಪಂಚಮರು ಅವರ ಸವರ್ಣೀಯರುಗಳಲ್ಲಿ ಶಿಕ್ಷಣದ ಪ್ರಭಾವವು ಕಾಣುಬರುವ ಮುಂಚೆಯೇ ಮಿಶನ್ ಶಾಲೆಗಳಲ್ಲಿನ ಧರ್ಮಬೋಧನದ ಬಲದಿಂದ ಅಧಿಕಾರ ಉನ್ಮತ್ತರಾದರೆ ಬ್ರಾಹ್ಮಣರೂ ಇತರ ಮೇಲುಜಾತಿಯವರೂ ಕಣ್ಣೆನಿಂದ ನೀರಿನ ಬದಲಾಗಿ ರಕ್ತವನ್ನು ಸ್ರವಿಸುವ ಸಮಯ ಬಂದೀತು, ಅದ್ದರಿಂದ ಈ ಪತಿತರ ಸವರ್ಣೀಯರುಗಳು ಶಿಕ್ಷಣದಿಂದ ಒಪ್ಪಿಗೊಂಡ ವಿನಾ ಅವರಿಗೆ ವಿಶೇಷ ತರದ ಓದುಬರಹ ಕೊಡಲು ಯತ್ನಿಸುವುದು ತಪ್ಪು ಎಂದು ಮಿ| ಥೊಂಗರ್ ಸಾಹೇಬರು ವಾದಿಸಿದ್ದಾರೆ. ಈ ಧೀಬುದ್ಧಿಯು ನಮ್ಮಲ್ಲಿ ಬೇಕಷ್ಟು ಇದೆ. ಇಲ್ಲವಾದರೆ ಈಗ ಮದ್ರಾಸು ಸಂಸ್ಥಾನದಲ್ಲಿ ಮಾತ್ರ ಹೊಸದಾಗಿ ಆಗತಕ್ಕ ಕೌನ್ಸಿಲಿಗೆ ಬ್ರಾಹ್ಮಣಬ್ರಾಹ್ಮಣೇತರ ಮೆಂಬರರ ಸಂಖ್ಯೆ ನಿಗದಿ ಮಾಡಲಿಕ್ಕೆ ಇತ್ತಂಡದ ಪ್ರತಿನಿಧಿಗಳೂ ಸ್ವತಃ ಲೊರ್ಡ ವಿಲ್ಲಿಂಗ್ಡನ್ನರೂ ಇಷ್ಟು ನಿಕಟ ಸಭೆಯು ನಿರರ್ಥಕವಾಗುತಿತ್ತೆ? ಹೀಗೆ ನಮ್ಮಲ್ಲಿ ಈ ದುರ್ನೀತಿಯು ಸಾಕಷ್ಟು ಬಲಿತು ಇದ್ದಾಗ ಮಿ| ಥೊಂಗರರಂಥವರು ಅದಕ್ಕೆ ಗೊಬ್ಬರವಿಡಲಿಕ್ಕೆ ಬೇಕೆ? ಈಗಿನ ಪ್ರಾಥಮಿಕ ಶಿಕ್ಷಣದಲ್ಲಿ ಕುಂದುಕೊರತೆಗಳಿವೆ. ಅವು ಮಾರ್ಪಟ್ಟು ಯಾಗಬೇಕು ಎಂಬದನ್ನು ನಾವು ಒಪ್ಪುತ್ತೇವೆ. ಮತ್ತು ಈ ಶಿಕ್ಷಣದಲ್ಲಿ ಓದುಬರಹದೊಂದಿಗೆ ಕೈಕೆಲಸದ ಕಡೆಗೆ ಲಕ್ಷ, ಗೌರವ, ಸೃಷ್ಟಿಯ ಕಡೆಗೆ ಪ್ರೇಮ ಇವು ಹುಟ್ಟಬೇಕೆಂಬುದು ವಾಸ್ತವವಾಗಿದೆ. ಬರುವ ವರ್ಷದಲ್ಲಿ ಹೊಸತಾಗಿ ಜನಿಯಿಸತಕ್ಕ ಕೌನ್ಸಿಲಿಗೆ ಈ ಜವಾಬ್ದಾರಿ ಬಿಟ್ಟುಕೊಡುವುದೇ ಒಳ್ಳೆಯದು, ಈಗಲೇ ಅವರ ಕೈಗಳನ್ನು ಕಟ್ಟುವುದು ಸರಿಯಲ್ಲ, ಯಾಕೆಂದರೆ ಇದು ವಿಚಾರಕ್ಕೆ ತಾಹೇತವಾದ ಉಪಾಧ್ಯಾಯರ ಸಂಖ್ಯೆ, ಸಾಹಿತ್ಯ ಸಾಮಗ್ರಿ, ಕಟ್ಟಡಗಳ ಪೂರೈಕೆ, ಮತ್ತು ಉಪಾಧ್ಯಾಯರ ಉಪಜೀವನಕ್ಕೆ ಸಾಕಷ್ಟು ಸಂಬಳ ಇವುಗಳನ್ನು ಆದಮಾಡದೆ ಈ ಕ್ರಮವನ್ನು ಈಗಲೇ ಜಾರಿಗೆ ತರಲು ಸಾಧ್ಯವಿಲ್ಲ, ಮಾತ್ರವಲ್ಲ, ಫೀಸು ಮಾಫಿಯಾಗಬೇಕು ಎಂದು ಮಾತ್ರವೇ ಹೇಳಿದರೂ ಈಗ ಸಿಕ್ಕುವ ಫೀಸು ನಷ್ಟವಾದ್ದನ್ನು ಭರ್ತಿ ಮಾಡಿ ಹಣ ಸಹಾಯ, ನಾಡಲಿಕ್ಕೆ ಸುಮಾರು ೮ ಲಕ್ಷ ರೂಪಾಯಿ ಬೇಕೆ ಬೇಕಾದೀತು, ಹಾಗಿರುವಾಗ ಹೊಸ ಶಾಲೆಗಳಿಗೆ ಹಣ ಎಲ್ಲಿ ಎಂಬ ಪ್ರಶ್ನೆಯು ಇದೆ, ಆದರೆ ಈ ಬಗ್ಗೆ ತಯಾರಾದ ಠರಾವಿನ ಮಸೂದೆಯು ಬೇಗನೆ ಪ್ರಕಟವಾಗುತ್ತದೆ, ಆಗ ಜನಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಾಧ್ಯವಿದೆ ಎಂದು ಸರಕಾರ ಕಡೆಯಿಂದ ಉತ್ತರ ಬಂದಿದ್ದರಿಂದ ಈ ಠರಾವು ಹಿಂತೆಗೆಯಲ್ಪಟ್ಟಿತು.

೪. ಹಿಂದೂಸ್ಥಾನದ ರಾಜಧಾನಿಯು ಕಾಲಭೇದಕ್ಕನುಗುಣವಾಗಿ ದಿಲ್ಲಿ, ಸಿಮ್ಲಾ ಈ ರೀತಿಯಿಂದ ಸ್ಥಾನಭೇದವನ್ನು ಹೊಂದುತ್ತದೆ, ಇದು ಯೋಗ್ಯವಲ್ಲ, ಯಾವುದಾದರೂ ಒಂದೇ ಪಟ್ಟಣದಲ್ಲಿ ರಾಜಧಾನಿಯು ಕಾಯಮಾಗಿ ಇರಬೇಕು, ಈಗ ದಿಲ್ಲಿಯು ಯೋಗ್ಯವಲ್ಲವಾದರೆ ಬೇರೆ ಇನ್ನೆಲ್ಲಾದರೂ ರಾಜಧಾನಿಯನ್ನು ಒಯ್ಯಬಹುದು ಎಂದು ನಾಮದಾರ ಶರ್ಮರು ಒಂದು ಠರಾವನ್ನು ತಂದರು. ಈ ಠರಾವಿನ ಮೇಲೆ ಅನೇಕ ಉಪಸೂಚನೆಗಳು ಬಂದವು. ಅನೇಕ ಲೋಕಪ್ರತಿನಿಧಿಗಳು ರಾಜಧಾನಿಗೆ ಅನುರೂಪವಾದ ಬೇರೆಬೇರೆ ಹೆಸರುಗಳನ್ನು ಸೂಚಿಸಿದರು. ಪರಂತು ಕೊನೆಗೆ ಪಟೇಲರ ಉಪಸೂಚನೆಯೂ, ಶರ್ಮರ ಮೂಲ ಠರಾವೂ ಇವು ಬಹುಮತದಿಂದ ಬಿದ್ದು ಹೋದವು. ಕೌನ್ಸಿಲಿನ ಮುಂದೆ ಬಂದ ಇನ್ನೊಂದು ಮಹತ್ವದ ಠರಾವು ಯಾವುದೆಂದರೆ, ಒರಿಯಾ ಭಾಷೆಯ ಜನರು ಕನ್ನಡಿಗರಂತೆಯೇ ಮದ್ರಾಸ, ಬಂಗಾಲ, ಮಧ್ಯಪ್ರಾಂತ ಈ ವಿವಿಧ ಸರಕಾರಗಳಿಂದ ಆಳಲ್ಪಡುತ್ತಿದ್ದಾರೆ; ಅವರಿಗೆ ಅವರದೇ ಒಂದು ಪ್ರಾಂತವನ್ನು ಮಾಡಬೇಕೆಂದು ನಾಮದಾರ ಸಿಂಹರು ಒಂದು ಠರಾವನ್ನು ತಂದರು. ಸರಕಾರವು ಈ ಪ್ರಶ್ನೆಯನ್ನು ಸಹಾನುಭೂತಿಯ ದೃಷ್ಟಿಯಿಂದ ವಿಚಾರದಲ್ಲಿ ತಕ್ಕೊಂಡೀತು, ಅಲ್ಲದೆ ಬರುವ ಸುಧಾರಿಸಿದ ಕೌನ್ಸಿಲುಗಳಲ್ಲಿ ಇಂಥ ಪ್ರಶ್ನೆಗಳು ತೀರ್ಮಾನಿಸಲ್ಪಡುವುದು ಯುಕ್ತವಾಗಿದೆ ಎಂದು ಸರಕಾರಿ ಮೆಂಬರು ಆಶ್ವಾಸನವನ್ನು ಕೊಟ್ಟದ್ದರಿಂದ ಸಿಂಹರಿಂದ ಠರಾವು ಹಿಂತೆಗೆಯಲ್ಪಟ್ಟಿತು.

೫. ಒರಿಯಾ ಭಾಷೆಯ ಜನರು ಮೇಲೆ ಹೇಳಿದಂತೆ ವಿವಿಧ ಸರಕಾರಗಳ ಅಧೀನಕ್ಕೆ ಒಳಪಟ್ಟಿದ್ದಾರೆ, ಮತ್ತು ಆ ಕಾರಣದಿಂದ ಅವರ ರಾಷ್ಟ್ರೀಯ ಪ್ರಗತಿಯು ಎಷ್ಟರ ಮಟ್ಟಿಗೆ ಕುಂಠಿತವಾಗಿದೆ ಎಂಬುದನ್ನು ಕನ್ನಡಿಗರು ಅನ್ಯಪ್ರಮಾಣಗಳಿಂದ ಆಲೋಚಿಸಬೇಕಾಗಿಲ್ಲ; ತಮ್ಮ ಕನ್ನಡ ದೇಶದ ವಿಭಜನದಿಂದಲೇ ಅವರಿಗೆ ಅದು ಗೊತ್ತಾಗುವಹಾಗಿದೆ. ಈ ವಿಷಯವನ್ನು ನಾವು ಕನ್ನಡಿಗರ ಮುಂದೆ ಮುಂಚೆಕ್ಕೆನಾಗಿಯೂ ಇಟ್ಟಿದ್ದೇವಲ್ಲದೆ ಅನೇಕ ಸಾರಿ ಚರ್ಚೆಯನ್ನು ಕೂಡ ನಡೆಸಿದ್ದೇವೆ. ಈ ವಿಷಯದ ಜಾಗೃತಿಯನ್ನು ಇಡೀ ಕರ್ನಾಟಕದಲ್ಲಿ ಹುಟ್ಟಿಸುವ ಸ್ಪಷ್ಟ ಉದ್ದೇಶದಿಂದ ಧಾರವಾಡದ ಕನ್ನಡ ವೃತ್ತಪತ್ರದ ಸಂಪಾದಕರಾದ ಡಾ. ಮುಧೋಳಕರರು ನಮ್ಮ ಜಿಲ್ಲೆಯಲ್ಲಿ ಬಂದು ಉಪನ್ಯಾಸಗಳನ್ನು ಕೊಡುತ್ತಿದ್ದಾರೆ. ಅಲ್ಲದೆ ಹೊಸ ಸುಧಾರಣೆಗಳಿಂದ ನಮ್ಮ ಮೇಲೆ ಬೀಳುವ ಯಾವ ಜವಾಬದಾರಿಯೋ ಅದನ್ನು ಎಂದರೆ ಮತದಾನ, ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕೊಡುವುದು ಇತ್ಯಾದಿ ಕೆಲಸವನ್ನು ಹೇಗೆ ಮಾಡಬೇಕು ಎಂಬ ಸೂಚನೆಯನ್ನು ಕೂಡ ರಾಷ್ಟ್ರೀಯ ಸಭೆಯ ಮಹಾಪ್ರಚಾರಕರಾದ ಡಾ. ಮುಧೋಳಕರರು ತಮ್ಮ ಉಪನ್ಯಾಸದಲ್ಲಿ ವಿವರಿಸುತ್ತಿದ್ದಾರೆ.

೬. ಲಾಲಾ ಲಜಪತರಾಯರು ಕಳೆದವಾರ ಮುಂಬಯಿಗೆ ಬಂದು ತಲುಪಿದರು. ಅವರಿಗೆ ಮುಂಬಯಿಯೊಳಗಿನ ನಾನಾ ಸಾರ್ವಜನಿಕ ಸಂಸ್ಥೆಗಳು ಸ್ವಾಗತವನ್ನು ಕೊಟ್ಟವು. ಅಲ್ಲಿಂದ ಅವರು ತಮ್ಮ ಪ್ರಾಂತಕ್ಕೆ ಎಂದರೆ ಪಂಜಾಬಿಗೆ ತೆರಳುವಾಗ ದಾರಿಯಲ್ಲಿ ದಿಲ್ಲಿಯ ನಗರವಾಸಿಗಳು ಕೂಡ ಲಾಲಾಜಿಯವರಿಗೆ ಮಾನಪತ್ರವನ್ನು ಕೊಟ್ಟರು. ಲಜಪತರಾಯರು ಮುಂಬಯಿಯಲ್ಲಿ ಮತ್ತು ದಿಲ್ಲಿಯಲ್ಲಿ ನಡೆದ ಭಾಷಣದಲ್ಲಿ ಅಮೇರಿಕನವರು ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯ ಬಗ್ಗೆ ಹೇಗೆ ಜಾಗ್ರತರಾಗಿದ್ದಾರೆ, ಎಷ್ಟು ಸಹಾನುಭೂತಿಯುಕ್ತರಾಗಿದ್ದಾರೆ ಎಂಬುದನ್ನು ತಿಳಿಸಿಕೊಟ್ಟರು.

ಮಂಗಳೂರು.

ಇದೇ ಜೂನ ನಾಯಂಕಾಲ ಕೊಡಿಯಾಲಬೈಲ್ ಕ್ಲಬ್ಬಿನಲ್ಲಿ ನಡೆದ ಡಿಸ್ಟ್ರಿಕ್ಟ್ ಎಸೋಸಿಯೇಶನ್ನಿನ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಪಾಸಾದವು. (೧) ಬರ್ಮಾ ಅಕ್ಕಿಯ ಆಮದು ದಸ್ತಿಗೆ ಯಾವ ತರಗೆ ನಿರ್ಬಂಧ ಇದೆಯೋ ಆ ತರಗೆ ಮದ್ರಾಸು ಸಂಸ್ಥಾನದ ಹೊರಗಿನ ಯಾವ ಸ್ಥಳಗಳಿಂದಲೂ ಈ ಜಿಲ್ಲೆಯಿಂದ ಅಕ್ಕಿಯನ್ನು ರಫ್ತು ಮಾಡಲಿಕ್ಕೆ ಸರಕಾರದವರು ನಿರ್ಬಂಧ ಹಾಕುವುದು ಅಗತ್ಯ. (೨) ಇಲ್ಲಿ ಈಗಲೂ ಅಕ್ಕಿಯ ಬೆಲೆಯು ಅಪೂರ್ವದವರಲ್ಲಿ ಏರಿಯುವುದರಿಂದ ಈ ಜಿಲ್ಲೆಗೋಸ್ಕರವೂ ಸರಕಾರದವರು ರಂಗೂನ ಅಕ್ಕಿಯ ಪೂರೈಕೆಯನ್ನು ಮಹಾಕಾಲಕ್ಕೋಸ್ಕರ ಮಾಡಬೇಕಾದ್ದು ಅಗತ್ಯವೆಂದು ನಾವು ಸರಕಾರದವರಿಗೆ ಕೇಳಿಕೊಳ್ಳುತ್ತೇವೆ. (೩) ಮೂಲಸೇನೆ ಕಾನೂನನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ನ್ಯಾಯಕಸೆ ಸರಕಾರದವರು ಜಾರಿಗೆ ತೆಕ್ಕೊಳ್ಳದೆ ಇರುವುದು ಬಹಳ ಪಶ್ಚಾತ್ತಾಪಕರ ಸಂಗತಿಯಾಗಿದೆ. ಅದ್ದರಿಂದ ಈ ವಿಷಯದಲ್ಲಿ ಬೇಗನೇ ಗಮನ ಕೊಡುವುದು ಅಗತ್ಯವೆಂದು ಸೂಚಿಸಲ್ಪಡಬೇಕಾಗುತ್ತದೆ. ಈಗಿನ ಸ್ಥಿತಿಯಲ್ಲಿ ಮೂಲಗಾರರು ಬಹಳ ಕಾಲದಿಂದ ನಷ್ಟಕ್ಕೆ ತಳಕೊಟ್ಟಿದ್ದಾರೆಂಬ ಸಂಗತಿಯನ್ನು ಸರಕಾರದ ಲಕ್ಷ್ಯಕ್ಕೆ ತರುವೆ. (೪) ಮೈಸೂರು ಮಹಾರಾಜರವರು ಸವಾರಿ ಸಮ್ಯಕ್ಕೆ ಹೆಚ್ಚಿನ, ಚಿತ್ತಯಿಸುವದರಿಂದ ಅವರ ಮುಂದೆ ಈ ಜಿಲ್ಲೆಯ ಮನೋಗತವನ್ನು ತಿಳಿಸಿ, ಆದಕಾರಣ ಮಂಗಳೂರು ರೈಲ್ವೆಯ ಪ್ರಶ್ನೆ ಮೈಸೂರು ಗಡಿ ವರೆಗಿನ ರೈಲ್ವೆಯನ್ನು ಬೇಗನೆ ಮೈಸೂರು ಸರಕಾರವು ಕೈಕೊಳ್ಳಬೇಕಾಗಿ ಕೇಳಿಕೊಳ್ಳುವಂತೆ ಈ ಜಿಲ್ಲೆಯ ಕಡೆಯಿಂದ ನಾಮದಾರ [illegible] [illegible] ಸಾಹುಕಾರರು [illegible] ಕೃಷ್ಣರಾಯರನ್ನು [illegible] [illegible] [illegible] ಸಾಹೇಬ [illegible] ಪ್ರತಿನಿಧಿಗಳಾಗಿ ನೇಮಕವಾದರಾಯಿತು.

ಇಲ್ಲಿಯ ಮಹಿಳಾಸಮಾಜದವರು ಇದೇ [illegible] ವಾರದ ಕೆಲಸಕ್ಕೆ ಇದೇ ಶನಿವಾರ ಸಾಯಂಕಾಲ ೪-೩೦ ಗಂಟೆಗೆ ಗವರ್ನ

[illegible]

ಸ್ವದೇಶಾಭಿಮಾನಿ.

ಶಕ ೧೮೪೧ ಫಾಲ್ಗುಣ ಶು॥ ೮ ಶುಕ್ರವಾರ.

ಸಮಾಜೋದ್ಧಾರದ ಮೂಲತತ್ವಗಳು.

ಲೇಖಾಂಕ ೩.

ಸಂಘಟನೆಯೂ ಉತ್ಕ್ರಮಣವೂ.

ಮಾನವಸಮಾಜವು ಬಾಲ್ಯಾವಸ್ಥೆಯಲ್ಲಿ ಎಷ್ಟು ಅಸಂಸ್ಕೃತವಾಗಿತ್ತು, ಪರಂತು ಬರಬರುತ್ತ ಪ್ರಕೃತಿಯ ಶಿಕ್ಷಣದಿಂದ ಅನುಭವಗಳನ್ನು ಸಂಗ್ರಹಿಸಿ, ಅನುಪಪತ್ತಿಗಳನ್ನು ಪರಿಹರಿಸಿ ಅದು ತನ್ನಲ್ಲಿ ಸುಧಾರಣೆಗಳನ್ನು ಹೇಗೆ ಮಾಡತೊಡಗಿತು ಎಂಬೀ ಸಂಗತಿಯನ್ನು ನಾವು ವಾಚಕರ ಅವಗಾಹನಕ್ಕೆ ತಂದುಕೊಟ್ಟಿದ್ದೇವೆ. ನಿಜವಾಗಿ ನೋಡಿದರೆ ಬಾಲ್ಯದ ಈ ಅವಸ್ಥೆಯಲ್ಲಿ ಅದಕ್ಕೆ 'ಸಮಾಜ'ವೆಂಬ ಹೆಸರು ಇನ್ನೂ ಬಂದಿಲ್ಲ. ಎಂದರೆ ಅದರ ಅವ್ಯವಸ್ಥಿತವಾದ ಜೀವನಕ್ರಮದಿಂದಲೂ, ಅನಿಶ್ಚಿತಸ್ವರೂಪದ ವ್ಯವಹಾರದಿಂದಲೂ ಸಮಾಜವೆಂಬ ಹೆಸರು ಪಡಕೊಳ್ಳುವ ಪಾತ್ರತೆಯು ಅವರಲ್ಲಿ ಬಂದಿಲ್ಲ. ಎಂದ ಮೇಲೆ ಸಮಾಜವೆಂದರೆ ಬರೆ ಗುಂಪು ಎಂಬ ಅರ್ಥವು ಇಲ್ಲಿ ವಿವಕ್ಷಿತವಲ್ಲವೆಂದು ಪುನಃ ಹೇಳಬೇಕಾದ ಅಗತ್ಯವಿಲ್ಲ. ಯಾಕೆಂದರೆ, ವ್ಯವಸ್ಥಾಪಕವಾದ ಒಂದು ಬಂಧನೆಗೆ ಒಳಗಾಗಿ ನಡಕೊಳ್ಳುವ ವ್ಯಕ್ತಿಸಮುದಾಯವು ಸಮಾಜವೆಂಬ ಹೆಸರನ್ನು ಧರಿಸಲು ಪಾತ್ರವಾಗಿರುತ್ತದೆ ಎಂದು ಸಮಾಜ ಶಾಸ್ತ್ರದಿಂದ ತಿಳಿದುಬರುತ್ತದೆ. ಈ ದೃಷ್ಟಿಯಿಂದ ವಿಚಾರಿಸುವಾಗ ಆದಿಕಾಲದ ಮಾನವರ ಗುಂಪಿನಲ್ಲಿ ಇದು ವರೆಗೆ ಪರಸ್ಪರರನ್ನು ಕಟ್ಟುವ ಯಾವ ಬಂಧನೆಗಳೂ ಬಂದಿಲ್ಲ. ಆ ತಿಳಿವೇ ಹುಟ್ಟಿರಲಿಲ್ಲ. ೫-೬ ವರ್ಷದ ಕೆಲವು ಮಕ್ಕಳು ಒಟ್ಟಿಗೆ ಸೇರಿಕೊಂಡಿರುವಲ್ಲಿ ಆ ಗುಂಪಿಗೆ ಸಮಾಜವೆಂದು ಹೇಳಲಾಗದು. ಅಲ್ಲಿ ಯಾವ ವ್ಯವಸ್ಥೆಯೂ ಇರದು. ಮಕ್ಕಳು ಹಸಿವೆಯಾದಾಗ ಕೈಗೆ ಸಿಕ್ಕಿದ್ದನ್ನು ತಿಂದಾವು, ಮನಸ್ಸಿಗೆ ಬಂದಂತೆ ಕುಣಿದಾವು, ತಮ್ಮ ಹರ್ಷವಿಷಾದವನ್ನು ತೋರಿಯಾವು. ಪರಂತು ಈ ಯಾವ ವ್ಯವಹಾರದಲ್ಲೂ ವ್ಯವಸ್ಥೆ ಇರಲಿಕ್ಕಿಲ್ಲ. ಆದಿಕಾಲದ ಮನುಷ್ಯರಾದರೂ, ಪ್ರಾಯದಲ್ಲಿ ಬೆಳೆದರೂ, ವ್ಯವಹಾರದಲ್ಲಿ ಈ ಹೊತ್ತಿನ ಚಿಕ್ಕ ಮಕ್ಕಳಂತೆ ಇದ್ದರು. ಮತ್ತು ಇದೇ ಕಾರಣದಿಂದ ಅಂದಿನ ಪ್ರಾಥಮಿಕ ಸ್ಥಿತಿಯಲ್ಲಿದ್ದ ಜನರಿಗೆ ವ್ಯವಸ್ಥಿತ ಸ್ವರೂಪದ್ಯೋತಕವಾದ ಸಮಾಜವೆಂಬ ಹೆಸರನ್ನು ಸಮಾಜ ಶಾಸ್ತ್ರಜ್ಞರು ಕೊಡಲೊಪ್ಪಿಕೊಳ್ಳುವುದಿಲ್ಲ. ಈ ಪ್ರಾಥಮಿಕ ಕಕ್ಷೆಯನ್ನು ದಾಟಿದ ಬಳಿಕ ನಾವು ಹಿಂದೆ ಸೂಚಿಸಿದಂತೆ ಪ್ರಕೃತಿಯ ಅಧ್ಯಾಪಕತ್ವದ ಕೆಳಗೆ ಕೌಟುಂಬಿಕ ಬಂಧನ, ಗೃಹಸಂಸ್ಥೆ ಇವುಗಳ ಕಲ್ಪನೆಯು ಮೂಡಿತು. ಈ ಎರಡು ಕಲ್ಪನೆಗಳು ಯಾವಾಗ ಉದಯಿಸಿದವೂ ಆಗ ಶ್ರಮವಿಭಾಗದ ತತ್ವವು ಪ್ರಕಟಿಸುವುದು ಸಹಜವೆ. ಶ್ರಮವಿಭಾಗದ ತತ್ವವು ಅಸ್ತಿತ್ವದಲ್ಲಿ ಬರುವುದಕ್ಕಿಂತ ಮುಂಚೆಯೆ 'ನಾನು' 'ತನ್ನದು' ಎಂಬ ಮಮತಾ ಬುದ್ಧಿಯು ಇತರ ಪ್ರಾಣಿಗಳಲ್ಲಿರುವಂತೆ ಮನುಷ್ಯನಲ್ಲೂ ಇತ್ತೆಂಬುದು ನಿರ್ವಿವಾದದ ಮಾತಾಗಿದೆ. ಹುಲಿಯಂಥ ಕ್ರೂರ ಪ್ರಾಣಿಯಲ್ಲಿ ಕೂಡ ಅಪತ್ಯ ಸಂಗೋಪನದ ಬುದ್ಧಿಯು ಇರುತ್ತದೆ. ಎಂದ ಮೇಲೆ ಮನುಷ್ಯ ವ್ಯಕ್ತಿಯಲ್ಲಿ ಅದು ಅನಂತರ ಬಂದದ್ದೆಂದು ಹೇಳಲಾಗುವುದಿಲ್ಲ. ಅದು ಸ್ವಾಭಾವಿಕವಾದದ್ದೆ ಸರಿ. ಮಾತ್ರವಲ್ಲ, ಮನುಷ್ಯನಲ್ಲಿ 'ಅತ್ಮೀಯ' ಎಂಬೀ ಭಾವನೆಯು ಸಾತ್ವಿಕ ರೂಪವನ್ನು ತಾಳುವಾಗ ದೊಡ್ಡದಾಗ ತೊಡಗಿತೊ ಆಗ ಗೃಹಸಂಸ್ಥೆಯೂ ಬಂತು. ಕೌಟುಂಬಿಕ ವ್ಯವಸ್ಥೆಯೂ ಉಂಟಾಯಿತು. ಶ್ರಮವಿಭಾಗದ ತತ್ವವೂ [illegible] ಬೀಜದಲ್ಲಿ ವೃಕ್ಷದ ಎಲ್ಲ ವೈಭವಗಳು ಹೇಗೆ ಅಡಗಿಕೊಂಡು ಮೊದಲೆ ಇರುತ್ತವೊ ಅದೇ ನ್ಯಾಯದಿಂದ ಸಮಾಜರಚನೆಗೆ ಆವಶ್ಯಕವಾದ ಮತ್ತು ಪೋಷಕವಾದ ತತ್ವಗಳು ಸಮಾಜವೆಂಬ ಹೆಸರನ್ನು ಹೊಂದುವಾಗಲೆ ಬಂದಿರುತ್ತವೆ. ಈ ಕಾರಣದಿಂದ ಸಮಾಜವು ಮೊದಲಿನ ಕಾಲದಲ್ಲಿ ಹೇಗೆ ಸಂಘಟಿತವೂ ಉತ್ಕ್ರಾಂತವೂ ಆಯಿತೆಂಬುದನ್ನು ಕೆಳಗೆ ನೋಡುವೋಣ.

ಗೃಹಸಂಸ್ಥೆಯಲ್ಲಿ ಜನ್ಮಕ್ಕೆ ಬಂದ ಶ್ರಮವಿಭಾಗದ ತತ್ವದಿಂದ ಕೆಲವು ಮನೆತನಗಳಾಗಲಿ ಅಥವಾ ಕುಟುಂಬಗಳಾಗಲಿ ತಂತಮ್ಮ ವೃತ್ತಿಯಿಂದ ಯಾವುದನ್ನು ಸಂಪಾದಿಸುತ್ತಿದ್ದವೋ ಅದರ ಸರಿಯಾದ ರಕ್ಷಣವನ್ನು ಮಾಡುವ ಈ ಪ್ರಶ್ನೆಯು ಆಕಾಲದಲ್ಲಿ ಮಹತ್ವವನ್ನು ಪಡೆಯಿತು. ಅಲ್ಲದೆ, ಹೆಂಗಸರು ಮಕ್ಕಳ ಸಂರಕ್ಷಣದ ವಿಷಯವು ಕೂಡ ಹಿಂದೆ ಹೇಳಿದಂತೆ ಮೊದಲಿನ ಮಾನವರ ಮುಂದೆ ಇದ್ದಿತ್ತು. ತಮ್ಮ ಹೆಂಗಸರು, ತಮ್ಮ ಮಕ್ಕಳು ಎಂದು ತಾವು ಪಾಲನೆ ಪೋಷಣೆ ಮಾಡೋಣ, ಪರಂತು ಸಬಲರಾದ ಅನ್ಯರು ಬಂದು ಅವರನ್ನು ಎತ್ತಿಕೊಂಡು ಹೋಗೋಣ ಅಥವಾ ಉಪದ್ರವಪಡಿಸೋಣ ಇವರ ಫಲಿತಾರ್ಥವೇನಾಗುತ್ತದೆ, ಎಂದರೆ, ಅವ್ಯವಸ್ಥೆಯ ಸಾಮ್ರಾಜ್ಯ ಹಬ್ಬಿದಂತಾಗುತ್ತದೆ. ಮತ್ತು ಇದೇ ಅವ್ಯವಸ್ಥೆಯ ಸಾಮ್ರಾಜ್ಯವು ಸಂಘಟನೆಯ ಪೂರ್ವದಲ್ಲಿ ಇತ್ತು. ಬಲವಂತನು ದುರ್ಬಲನನ್ನು ನುಂಗುವನು, ಸಾಮರ್ಥ್ಯವುಳ್ಳವನು ಅಸಮರ್ಥನನ್ನು ತಗ್ಗಿಸುವನು; ಈ ಕ್ರಮದಿಂದ ಅಸುಸ್ಥತೆಯು ಹಬ್ಬಿತು. ಆಗ ಕೆಲವು ಕೂಟಗಳಾದವು. ಈ ಕೂಟಗಳಲ್ಲಿ ದುರ್ಬಲರ ಕೂಟಗಳು ಆತ್ಮರಕ್ಷಣಕ್ಕಾಗಿ ಬಲವಂತರನ್ನು ತಪ್ಪಿಸಿಕೊಳ್ಳಲು ದೂರ ದೂರ ದೇಶಗಳಿಗೆ ಪ್ರಯಾಣ ಮಾಡಿಹತ್ತಿದವು. ಆದರೆ ಅಲ್ಲೂ ಕೂಡ ಪುನಃ ಅವರವರೊಳಗೆ ದುರ್ಬಲ ಸಬಲರ ಕಚ್ಚಾಟವು ನಡೆಯಹತ್ತಿತು. ಎಂತು ಬಲವಂತನೆ ಆಳ್ವನು ಎಂಬ ತತ್ವವು ಸ್ಥಾಪಿತವಾದಂತಾಯಿತು; ಪ್ರಕೃತಿಯ ಉದ್ದೇಶವೆ ಇದು, ಪ್ರಕೃತಿಯ ಕಾನೂನೆ ಇದು ಎಂದು ಹೇಳಿದಂತಾಯಿತು. ದುರ್ಬಲರು ಬಲಿಷ್ಠರಿಗೆ ತುತ್ತಾಗುವ ಈ ನ್ಯಾಯವು ಮೊದಲು ಮಾತ್ರ ಅಸ್ತಿತ್ವದಲ್ಲಿತ್ತೆಂದಲ್ಲ, ಈಗಲೂ ಲೋಕದಲ್ಲಿ ಈ ನ್ಯಾಯವೆ ನಡಕೊಂಡಿದೆ. ಎಂದಮೇಲೆ ಇದು ಪ್ರಕೃತಿಯ ಸ್ವಭಾವವೆನ್ನಲು ಅಡ್ಡಿ ಇಲ್ಲ. ಪರಂತು ಈ ಲೋಕವು ಸಬಲರ ಉಪಭೋಗಕ್ಕೆ ಮಾತ್ರ ಇದ್ದದ್ದು ಎಂದಾದರೆ ಲೋಕದಲ್ಲಿ ಯಾವ ಸುಧಾರಣೆಗೂ ಅವಕಾಶವಿರಲಿಕ್ಕಿಲ್ಲ. ಎಲ್ಲ ಅವ್ಯವಸ್ಥೆಯ, ಬಲಾತ್ಕಾರದ ಪುಂಡುತನದ ಸಂತೆಯಾಗಿ ಹೋದೀತು. ಹೋದೀತು ಮಾತ್ರವಲ್ಲ, ಇಂಥ ಅವ್ಯವಸ್ಥೆಯು ಆದಿಕಾಲದಲ್ಲಿ ಬಂದೆಹೋಯಿತು. ಈ ಆಪತ್ತನ್ನು ನಿವಾರಿಸುವುದಕ್ಕಾಗಿ ಯಾವ ಉಪಾಯಗಳನ್ನು ಕೈಕೊಳ್ಳಬೇಕು, ಸಬಲರು ಈ ಲೋಕದ ಉಪಭೋಗವನ್ನು ತೆಕ್ಕೊಳ್ಳುವಂತೆ ದುರ್ಬಲರೂ ತೆಕ್ಕೊಳ್ಳಬೇಕಾದರೆ ಮತ್ತು ಬಲಿಷ್ಠರು ಮೈ ಬಿಟ್ಟು ತಿರುಗಾಡುವಂತೆ ದುರ್ಬಲರಿಗೂ ಅವಕಾಶ ದೊರಕಬೇಕಾದರೆ ಏನು ಮಾಡಬೇಕು ಎಂಬದೊಂದು ಪ್ರಶ್ನೆಯು ದುರ್ಬಲರ ಮುಂದೆ ನಿಂತಿತು. ಪ್ರಕೃತಿಯಲ್ಲಿ ದುರ್ಬಲರನ್ನು ನಾಮಶೇಷಮಾಡುವ ಯಾವ ಗುಣವು ಕಂಡುಬರುತ್ತದೋ, ಕಿಂಬಹುನಾ ಯಾವ ದೋಷವು ದೃಗ್ಗೋಚರವಾಗುತ್ತದೋ ಅದಕ್ಕೆ ಯಾವ ಔಷಧವನ್ನು ತಯಾರಿಸಬೇಕೆಂಬುದೆ ಆಗಿನ ಕಾಲದ ದುರ್ಬಲರ ಮುಖ್ಯ ವಿಚಾರವಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ಅವರು ಕೆಲವು ನೀತಿ ನಿಯಮಗಳನ್ನು ಕಲ್ಪಿಸಿದರು. ಲೋಕದೊಳಗಿನ ಸಕಲ ಮಾನವರ ವಿತ್ತಜೀವಿತಗಳು ಸುರಕ್ಷಿತವಾಗಿ ನಿಲ್ಲುವಂತೆ ಅವರು ಕೆಲವು ನೀತಿತತ್ವಗಳನ್ನು ಹೊರಡಿಸಿದರು. ಪ್ರಬಲರನ್ನು ಪರೋಪದ್ರವದ ಮಾರ್ಗದಿಂದ ಹಿಂತಿರುಗಿಸಲು ದುರ್ಬಲರಲ್ಲಿ ಅಂಗಸಾಮರ್ಥ್ಯವಂತೂ ಇಲ್ಲ; ಯಾಕೆಂದರೆ ಅವರು ಮೊದಲೇ ದುರ್ಬಲರು. ಆಗ ದುರ್ಬಲರಾದರೂ ಎಲ್ಲರು ಏಕತ್ರ ಸೇರಿ ತಮ್ಮಲ್ಲಿ ಒಂದು ಸಂಘಶಕ್ತಿಯನ್ನು ಹುಟ್ಟಿಸಿಕೊಂಡು ಎದುರು ಪಕ್ಷದವರಿಗೆ ತಮ್ಮ ಮುಂದೆ ತಲೆ ಬಗ್ಗಿಸುವಂತೆ ಮಾಡಹತ್ತಿದರು. ಈ ರೀತಿಯಿಂದ ಈ ಎರಡೂ ಪಕ್ಷಗಳ ಹೋರಾಟವಾಗಿ ಯಾವಾಗ ಸಮಶಕ್ತಿಯುಂಟಾಯಿತೋ ಆಗ ನಾವು ಈಗಲೇ ಹೇಳಿದ ನೀತಿತತ್ವಗಳ ಕಲ್ಪನೆಗೆ ಅವಕಾಶ ದೊರೆಯಹತ್ತಿತು. ಎಂದ ಮೇಲೆ ನೀತಿತತ್ವಗಳೆಂದರೆ ದುರ್ಬಲರು ಪ್ರಕೃತಿಯ ವಿರುದ್ಧ ಹೋರಾಡಲು ಕಲ್ಪಿಸಿಕೊಂಡ ಶಸ್ತ್ರಾಸ್ತ್ರಗಳು. ಈ ನೀತಿನಿಯಮಗಳಲ್ಲೆ ಈಶ್ವರಭಾವನೆ, ಧರ್ಮಕಲ್ಪನೆ ಇತ್ಯಾದಿಗಳ ಸಮಾವೇಶವುಂಟಾಗುತ್ತದೆ. ಪ್ರಬಲರಿಂದ ದುರ್ಬಲರು ಆತ್ಮರಕ್ಷಣೆಗಾಗಿ ನೀತಿನಿಯಮಗಳನ್ನೂ ಧರ್ಮತತ್ವಗಳನ್ನೂ ಕಲ್ಪಿಸಿಕೊಂಡರು ಎಂದು ನಾವು ವಿಧಿಸಿದೊಡನೆ ಸಕಲ ಆಸ್ತಿಕಮಂಡಲದ ಶ್ರದ್ಧೆಗೆ ಆಘಾತವನ್ನು ಕೊಟ್ಟಂತೆ ಆದೀತು. ಪರಂತು ಧರ್ಮದ ಅಥವಾ ನೀತಿಯ ಇತಿಹಾಸವನ್ನಾಗಲಿ ಇಲ್ಲವೆ [illegible] ಶ್ರದ್ಧೆ [illegible] ಸಮಾಜದ ಸಂಘಟನಾ [illegible] ಮೂಲಕವಾಗಿ [illegible] ಎಂಬೀ ಸಂಗತಿಗಳನ್ನು [illegible]

ಶ್ರಮವಿಭಾಗದ ತತ್ವದಂತೆ [illegible] ಭಿನ್ನ ಭಿನ್ನ ಕಾರ್ಯಗಳು ಸಮ ಪ್ರಮಾಣದಿಂದ ಸಕಲರ ಉಪಯೋಗಕ್ಕೆ ಬೀಳಬೇಕೆಂದು ಮೊದಲಾಗಿ 'ಪರಸ್ವಾಪಹರಣವನ್ನು ಮಾಡಬಾರದು' ಎಂಬ ತತ್ವವು ಅವತರಿಸಿತು. ಬೇರೆಯವರನ್ನು ಉಪದ್ರವಿಸಬಾರದು, ಬೇರೆಯವರನ್ನೂ ತನ್ನಂತೆಯೆ ನೆನಸಬೇಕು, ಅಸತ್ಯ ನುಡಿಯಬಾರದು, ಮೋಸ ಮಾಡಬಾರದು ಇತ್ಯಾದಿ ಅನೇಕ ಸೂತ್ರಗಳು ಆಚಾರದಲ್ಲಿ ಬರಹತ್ತಿದವು. ಜನರು ಈ ನೀತಿಸೂತ್ರಗಳನ್ನು ಸರಿಯಾಗಿ ಮನ್ನಿಸುವಂತೆ ಇಲ್ಲಿ ಪಂಚಮರಾಗಲಿ ಅಥವಾ ಅರಸರಾಗಲಿ ಹೇಗೆ ಅಸ್ತಿತ್ವದಲ್ಲಿ ಬಂದಿರುವರೊ ಹಾಗೆಯೆ ಎಲ್ಲ ಜನರಿಗೂ ಅರಸರಿಗೂ ಭಯ, ಆದರ, ಪೂಜ್ಯತೆ ಇವುಗಳ ಸ್ಥಾನವಾದ ಒಬ್ಬ ಈಶ್ವರನೂ ಕೂಡ ಕಲ್ಪಿಸಲ್ಪಟ್ಟನು. ಅರ್ಥಾತ್ ಆ ಕಲ್ಪನೆಯು ದೃಢವಾಗುವಂತೆ, ಇದಕ್ಕೆ ಪೋಷಕವಾಗುವಂತೆ ಇದು ಪುಣ್ಯ, ಇದು ಪಾಪ ಇತ್ಯಾದಿ ವ್ಯವಸ್ಥೆಯೂ ಕೂಡ ಮೆಲ್ಲಮೆಲ್ಲನೆ ಆಗಹತ್ತಿತು. ಸಾರಾಂಶ, ಬಳ್ಳಿಗೆ ಗೇಣು ಗೇಣಿಗೆ ಚಿಗುರುಗಳು ಒಡೆಯುವಂತೆ ನೀತಿಲತೆಗೆ ಅನೇಕ ಕೊಂಬೆಗಳು ಚಿಗುರಿದವು. ನೀತಿಯ ಮತ್ತು ಧರ್ಮದ ತತ್ವಗಳಿಂದ ಸಮಾಜದ ಸಂಘಟನೆಯಾಗಹತ್ತಿತು. ನೀತಿಬಂಧನಗಳು ಅನೇಕ ಅಥವಾ ವಿವಿಧವಾಗಿದ್ದರೂ ಅವುಗಳ ಮುಖ್ಯ ತತ್ವವು ಸವ-ತಿ. ಲೋಕದಲ್ಲಿ ಸಮ ದೃಷ್ಟಿಯು ಉಂಟಾದ್ದಲ್ಲ ಸಮಾಜವು ಅಥವಾ ರಾಷ್ಟ್ರವು ನಿರಾಬಾಧವಾಗಿ ನಡೆಯುವುದು. ಸಮಾಜದಲ್ಲಿ ನೀತಿ ಬಂಧನೆಗಳಿಂದ ಸಂಘಟನೆಯು ಉಂಟಾಗಲು ಉತ್ಕ್ರಮಣವೂ ಕೂಡ ಆಗತೊಡಗುವುದು.

ಮೇಲಿನ ಉಪಪಾದನದ ಮೇಲಿಂದ ಬಾಲ್ಯಾವಸ್ಥೆಯಲ್ಲಿರುವ ಸಮಾಜವು ಕ್ರಮಶಃ ಉತ್ಕ್ರಾಂತವಾಗುವಾಗ ತನ್ನ ಸ್ಥಿರಸ್ವರೂಪ ಮತ್ತು ಸಂಘಟನೆ ಇವುಗಳನ್ನು ಕಾಪಾಡಿಕೊಳ್ಳಲು, ಎಂದರೆ ಒಂದೆ ಮಾತಿನಿಂದ ತನ್ನ ಹಿತಕ್ಕಾಗಿ ನೀತಿಶಾಸನವನ್ನೂ, ಧರ್ಮಶಾಸ್ತ್ರವನ್ನೂ ಕಲ್ಪಿಸಿಕೊಂಡಿತೆಂಬುದು ವಾಚಕರ ಗೋಚರಕ್ಕೆ ಬಂದೇ ಬಂದೀತು. ನೀತಿಶಾಸ್ತ್ರವಾಗಲಿ ಧರ್ಮವಾಗಲಿ ಈ ಮೇರೆಗೆ ಸಮಾಜದ ಯೋಗಕ್ಷೇಮಕ್ಕಾಗಿ ಇದ್ದದ್ದು ನಿರ್ವಿವಾದವಾದರೂ ಈ ಎರಡು ಶಾಸ್ತ್ರಗಳಿಂದ ಮಾನವ ಬುದ್ಧಿಯು ಈ ಕಠೋರ ಪ್ರಕೃತಿಯ ನೈಸರ್ಗಿಕವಾದ ನಿಷ್ಠುರ ಪ್ರವೃತ್ತಿಯನ್ನು ಕಿಂಬಹುನಾ ಪರಿಣಾಮವನ್ನು ಕುಂದಿಸಲು ಎಷ್ಟು ಪ್ರಯತ್ನಪಟ್ಟಿದೆ ಮತ್ತು ಆ ಪ್ರಯತ್ನದಲ್ಲಿ ಎಷ್ಟರ ಮಟ್ಟಿಗೆ ಯಶಸ್ಸನ್ನು ಸಂಪಾದಿಸಿದೆ ಇವನ್ನು ಬರೆ ಮೇಲಿಂದ ಮೇಲೆ ಆಲೋಚಿಸಿದರೂ ಕೂಡ ಯಾರಿಗೂ ಬೆರಗಾಗದೆ ಇರದು. ಮಾನವಜೀವಿತವು ಸುಖಮಯವಾಗುವಂತೆ ನೀತಿಶಾಸ್ತ್ರ ಹಾಗು ಧರ್ಮಬೋಧೆ ಇವು ಹೇಗೆ ಅವತರಿಸಿದವೊ ಹಾಗೆಯೆ ಇನ್ನೂ ಅನೇಕ ಶಾಸ್ತ್ರಗಳು ಹುಟ್ಟಿದವು. ನೀತಿಶಾಸ್ತ್ರದ ಹಾಗು ಧರ್ಮದ ಅಧಿಕಾರವು ಮನಸ್ಸಿನ ಮೇಲೆ ಮಾತ್ರ ನಡೆಯುತ್ತದೆ. ಯಾರ ಮನಸ್ಸು ಪ್ರಗಲ್ಭವಾಗಿರುವುದಿಲ್ಲವೊ ಅವರಿಗೆ ನೀತಿಬೋಧೆಯೂ ತಿಳಿಯದು, ಧರ್ಮೋಪದೇಶವು ಹತ್ತದು. ಇಂಥವರನ್ನು ಅಟೋಕೆಯಲ್ಲಿಡಲು ಎಂದರೆ ಪರ್ಯಾಯದಿಂದ ಸಮಾಜದ ಯೋಗಕ್ಷೇಮವನ್ನು ಕಾಪಾಡಲು ರಾಜಕೀಯ ಸಂಸ್ಥೆಯು ಬಂತು. ಇದು ಲೌಕಿಕ ದೃಷ್ಟಿಯಿಂದ ಸಮಾಜದ ಸಂವರ್ಧನೆಗೂ, ಸಂಘಟನೆಗೂ ಮತ್ತು ಉತ್ಕ್ರಾಂತಿಗೂ ವಿಶೇಷವಾಗಿ ಕಾರಣವಾಗಿದೆ. ಸಮಾಜದ ಚರಿತ್ರದಲ್ಲಿ ರಾಜಕೀಯ ಸಂಸ್ಥೆಯು ಎಷ್ಟು ಮಹತ್ವದ ಸ್ಥಾನವನ್ನು ಆಕ್ರಮಿಸಿದೆ ಎಂದು ನೋಡುವುದು ನಿಜವಾಗಿ ಮನೋರಂಜಕವಾದ ವಿಷಯವು. ಪರಂತು ಈ ಹೊತ್ತಿನ ಲೇಖವು ಬೆಳೆದುಹೋದ ಕಾರಣ ಅದನ್ನು ಬರುವ ಸಾರಿ ಪ್ರಸ್ತಾಪಿಸಬೇಕಾಗಿರುತ್ತದೆ.

ಅಂತು ಸಮಾಜೋದ್ಧಾರದ ಬಗ್ಗೆ ಇದು ವರೆಗೆ ಹೇಳಿದ ಸಂಗತಿಗಳೆಂದರೆ ಶ್ರಮವಿಭಾಗ, ಸಮದೃಷ್ಟಿ ಮತ್ತು ನೀತಿವರ್ತನ ಇವೆ ಆಗಿರುತ್ತದೆ.

ಸ್ಫುಟವಿಚಾರಗಳು.

೧. ಮದ್ರಾಸ ಸರಕಾರದ ಕಾರ್ಯಕಾರಿ ಕೌನ್ಸಿಲ್ ಮೆಂಬರರಾದ ನಾಮದಾರ ಸರ್ ಪಿ. ರಾಜಗೋಪಾಲಾಚಾರ್ಯರು ಇದೇ ತಿಂಗಳ ೧೧ನೆ ತಾರೀಕಿಗೆ ತಿನ್ನವೆಲ್ಲಿ ಜಿಲ್ಲೆಯನ್ನು ಸಂದರ್ಶಿಸಿದಾಗ ಅಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗಿಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ಸ್ಥಾನಿಕ ರಾಜ್ಯಭಾರದ ಕ್ರಮದಲ್ಲಿ ಕಂಡು ಬಂದ ಅಭಿವೃದ್ಧಿಯನ್ನೂ, ಬಿನ್‌ಸರಕಾರಿ ಪ್ರೆಸಿಡೆಂಟರಲ್ಲಿ ಹಲವರು ಉತ್ಸಾಹಪೂರ್ವಕವಾಗಿ ಕೆಲಸ ಮಾಡಿದ್ದನ್ನೂ ಕುರಿತು ನಾಮದಾರರು ಅಲ್ಲಿ ನೆರೆದ ಮೆಂಬರರಿಗೆ ತಿಳಿಸಿದರು. ಇದರಿಂದ ಈ ರೀತಿಯಾಗಿ

ಸರಕಾರವು ಪ್ರಜಾಜನಗಳಿಗೆ ಸ್ಥಾನಿಕ ರಾಜ್ಯಭಾರದ ಸೂತ್ರಗಳನ್ನು ಒಪ್ಪಿಸಿ ಕೊಟ್ಟದ್ದು ಜನತೆಗೆ ಬಾಧಕಕರವಾಗಲಿಲ್ಲ. ಅದಕ್ಕೆ ಅಂಥಾ ಭಾರವನ್ನು ವಹಿಸುವವರಲ್ಲಿ ಅನೇಕರು ಕರ್ತವ್ಯದಕ್ಷತೆಯನ್ನು ತೋರ್ಪಡಿಸಿದ್ದಾರೆಂಬುದು ಸಂತೋಷದ ಮಾತು. ಅದೇ ಸಂದರ್ಭದಲ್ಲಿ ಅವರು ಎರಡು ಪ್ರಶ್ನೆಗಳನ್ನೆತ್ತಿ ಬಿನಸರಕಾರಿ ಮೆಂಬರರ ಅಭಿಮತಗಳನ್ನು ಕೇಳಲು ಯತ್ನಿಸಿದರು. ಈಗ ತಾಲೂಕು ಬೋರ್ಡಿನ ವೋಟರಾಗಲಿಕ್ಕೆ ೫೦ ರೂಪಾಯಿ ವರ್ಷಾವಧಿಯಲ್ಲಿ ಭೂಕಂದಾಯ ಕೊಡುವವರೇ ಅರ್ಹರೆಂಬ ಮಿತಿ ಇಟ್ಟು ಇದೆ. ಈ ಮಿತಿಯನ್ನು ತಗ್ಗಿಸುವುದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾದೀತು ಎಂದು ಮೆಂಬರರು ತಮ್ಮ ಅನುಭವದ ಮೇಲಿಂದ ತಿಳಿಸಬೇಕಾಗಿ ನಾಮದಾರರ ಸೂಚನೆಯಿತ್ತು. ಮಿತಿಯನ್ನು ತಗ್ಗಿಸಿದೊಡನೆ ವೋಟರರ ಸಂಖ್ಯೆ ಹೆಚ್ಚಾಗುವುದರಿಂದ ಮೆಂಬರರಾಗಲಿಕ್ಕಿರುವ ಉಮೇದ್ವಾರರಿಗೆ ಬಹಳ ಅಡಚಣೆಯುಂಟಾದೀತು ಎಂದು ಒಬ್ಬರು ಸೂಚಿಸಿದರು. ಪ್ರಾಂತಿಕ 'ಲೆಜಿಸ್ಲೇಟಿವ ಎಸೆಂಬ್ಲಿ'ಗೆ ವೋಟರರ ಸಂಖ್ಯೆಯನ್ನು ಏರಿಸುವ ಏರ್ಪಾಡು ಈ ಮೊದಲೇ ಆಗಿದ್ದು ಈಗ ಅದರ ಪ್ರಕಾರ ಪ್ರತಿ ಜಿಲ್ಲೆಯ ವೋಟರರ ಪಟ್ಟಿಯನ್ನು ತಯಾರಿಸುವುದಕ್ಕಾಗಿ ಆಫೀಸರುಗಳು ಅಲ್ಲಲ್ಲಿ ನೇಮಕವಾಗಿದ್ದಾರೆ. ಹಾಗಿರುವಾಗ ಅದೇ ಮಾನದಿಂದ ತಾಲೂಕು ಬೋರ್ಡು ಚುನಾವಣೆಗೆ ಸಹ ವೋಟರರ ಸಂಖ್ಯೆ ಏರಿಸಬೇಕೆಂದು ಸರಕಾರದವರು ನಿಶ್ಚಯಿಸಿದ್ದರೆ ಅದು ನಿರಾಕ್ಷೇಪಕರವಾಗಿದ್ದೀತು. ಈಗ ಮಿತಿಯನ್ನು ಬಹಳ ತಗ್ಗಿಸಿದರೆ, ಅಂದರೆ ೧ ರೂಪಾಯಿ ಬೇರೀಜು ಕೊಡುವ ಬಡ ಒಕ್ಕಲಿಗನಿಗೂ ೮ ಆಣೆ ತೀರ್ವೆ ಕೊಡುವ ಸಕ್ರಮುಂಡಾಳಿ (ಪಂಚಮನಿಗೂ) ೧೦ ಸಾವಿರ ರೂಪಾಯಿ ತೀರ್ವೆ ಕೊಡುವ ಕೋಟಿ ಸೆಟ್ಟರಿಗೂ ೨ ಸಾವಿರ ರೂಪಾಯಿ ಕಂದಾಯ ಕೊಡುವ ಕುಂಡಲಗಿರಿ ಆಚಾರ್ಯರಿಗೂ ೫,೦೦೦ ಇನ್‌ಕಂ ಟ್ಯಾಕ್ಸ್ ಕೊಡುವ ಜಗಲ್ ಸೇಟರಿಗೂ ಒಂದೊಂದು ವೋಟು ಇದೆ ಎಂದು ಹೇಳಿದರೆ ಆ ವೋಟು ಸಂಗ್ರಹಗಳ ಕೆಲಸ ಕಷ್ಟತರವಾದೀತು ಎಂದು ಆ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಅಭಿಪ್ರಾಯವೆಂದು ತೋರುತ್ತದೆ. ನೂತನವಾದ ಯಾವುದೊಂದು ವಿಷಯವೂ ರೂಢಿಗೆ ಬರುವ ವರೆಗೆ ಅದು ಸ್ವಲ್ಪ ಮುಳ್ಳು ಚುಚ್ಚಿದಂತಾಗುವುದು ಮನೋವೃತ್ತಿಯ ಒಂದು ಲಕ್ಷಣ. ಆ ಮಾತು ಹಾಗಿರಲಿ. ಆದರೆ ವೋಟರರ ಸಂಖ್ಯೆ ಹೆಚ್ಚಾಗುವುದರಿಂದ ಜನತೆಗೆ ಒಂದು ಬಗೆಯ ನಾಗರಿಕತನದ ಶಿಕ್ಷಣವು ದೊರೆಯಹಾಗುತ್ತದೆ ಎಂಬುದು ಎಲ್ಲರೂ ಒಪ್ಪಬೇಕಾಗಿದೆ. ಮಾತ್ರ ಓದಲು ಬಾರದ ಒಕ್ಕಲಿಗನಾಗಲಿ ಸಕ್ರಮುಂಡಾಳಿಗಾಗಲಿ ಅವನ ವೋಟಿನ ಜವಾಬ್ದಾರಿ ಗೊತ್ತಾಗಲಾರದು ಎಂದು ಆಕ್ಷೇಪ ಹೇಳುವುದಾದರೆ ಈಗ ದೊಡ್ಡ ಶಹರುಗಳಲ್ಲಿ—ಮುನಿಸಿಪಾಲಿಟಿಯ ಅಧಿಕಾರವು ಜನತೆಯ ಕೈಯಲ್ಲಿ ಇದ್ದ ಶಹರಗಳಲ್ಲಿ—ವಿದ್ಯಾವಂತರಲ್ಲಿಯೂ ಶ್ರೀಮಂತರಲ್ಲಿಯೂ ಕೂಡಾ ತಮ್ಮ ಜವಾಬ್ದಾರಿಯ ಕಡೆಗೆ ಕಣ್ತೆರೆದು ಯೋಗ್ಯರಾದವರನ್ನೇ ಚುನಾಯಿಸಲು ಯತ್ನಿಸುತ್ತಾರೆ ಎಂದು ನಿರ್ಧಾರವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಹಾಗಿದ್ದರೆ ಈ ಆಕ್ಷೇಪಗಳನ್ನು ಕಡಿಮೆ ಕಂದಾಯ ತೆರುವವರ ಮೇಲೆ ಮಾತ್ರವೇ ಯಾಕೆ ಹೊರಿಸಬೇಕು? ವೋಟರರ ಸಂಖ್ಯೆ ಹೆಚ್ಚಾದೊಡನೆ ಸಾಹಸಿಗಳಾದವರು ಮಾತ್ರವೇ ಮೆಂಬರಿಕೆಗೆ ಉದ್ಯುಕ್ತರಾಗುತ್ತಾರೆ. ಅವಿಸು ಸರಕಾರದ ಆಶ್ರಯವು ಅವರಿಗೆ ಬೇಕಾಗಿರುವುದಿಲ್ಲ. ಯಾವಾಗ ವೋಟರರನ್ನು ಹುಡುಕಿಕೊಂಡು ಹೋಗಬೇಕಾಗಿ ಬಂತೋ ಆಗ ವೋಟರರು "ನಮ್ಮ ಭಾಗಕ್ಕೆ ಪ್ರತಿಯಾಗಿ ಯಾವ ಸಲಹೆಗಳನ್ನು ಒದಗಿಸಿ ಕೊಟ್ಟೀರಿ" ಎಂದು ಸಹಜವಾಗಿ ಕೇಳಿಯೇ ಕೇಳುವರು. ಆ ಕೊಟ್ಟ ಮಾತುಗಳು ನೀರಿನ ಮೇಲೆ ಎಳದ ಗೆರೆಯಾಗುವುದಾದರೆ ಮುಂದೆ ಅಂಥ ಉಮೇದ್ವಾರರ ಮೇಲೆ ಜನತೆಗೆ ವಿಶ್ವಾಸವು ತಪ್ಪುತ್ತದೆ. ಹೀಗಾಗಿ ಜನತೆಗೆ ಸಲಹೆಯನ್ನು ಒದಗಿಸಿಕೊಡುವ ಪ್ರಯತ್ನವು ಮೆಂಬರರಲ್ಲಿ ಹೆಚ್ಚಾಗಬೇಕಾಗುತ್ತದೆ. ಎಜೆಂಡಾ ಪಟ್ಟಿಯನ್ನೂ ಕೂಡಾ ಓದದೆ ಸಭೆಯಲ್ಲಿ ಕಣ್ಣು ಕೂರುವವರು ಅಥವಾ ಸರಕಾರ ಮೆಂಬರರ ದೃಷ್ಟಿಯನ್ನೇ ಹಾರೈಸಿಕೊಂಡು ಇರುವಂಥವರ ಸಂಖ್ಯೆಯು ಕಡಿಮೆಯಾಗುತ್ತದೆ. ಇದು ಜನತೆಗೆ ಪ್ರಯೋಜನವೇ ಅಲ್ಲವೇ?

೨ ನಾಮದಾರು ಎತ್ತಿದ ಇನ್ನೊಂದು ಪ್ರಶ್ನೆಯು ಪಂಚಮರ ವಿದ್ಯಾಭ್ಯಾಸವನ್ನು ಕುರಿತು. ಪಂಚಮರಿಗೋಸ್ಕರವೇ ಬೇರೆಯಾಗಿ ಸಾಲೆಗಳನ್ನು ಏರ್ಪಡಿಸಿರುವುದರಿಂದ ಸರಕಾರಿ ಹಣವು ಬಹಳ ವೆಚ್ಚವಾಗಬೇಕಾಗುತ್ತದೆ. ಈಗ ಇದ್ದ ಇತರ ಸಾಲೆಗಳಲ್ಲಿಯೇ ಈ ಪಂಚಮರನ್ನು ದಾಖಲು ಮಾಡಲು ಜನತೆಯ ಮುಖಂಡರು ಉತ್ಸಾಹ ತೋರಿಸಿದರೆ ಆ ರೀತಿಯಿಂದ ಉಳಿಯುವ ಹಣವನ್ನು ವಿದ್ಯಾಪ್ರಚಾರಕ್ಕೆ ಉಪಯೋಗಿಸಬಹುದು ಎಂದು ನಾಮದಾರರು ಹೇಳಿದರು. ಈಗ ೧೯೨೮ರಲ್ಲಿ ೧೫,೦೦೦ ಮಂದಿ ಪಂಚಮ ಮಕ್ಕಳು ವಿದ್ಯಾಭ್ಯಾಸ ಹೊಂದುತ್ತಿದ್ದರು. ಅವರ ಬಗ್ಗೆ ಒಟ್ಟಿಗೆ ೧,೪೦,೦೦೦ ರೂಪಾಯಿ ಖರ್ಚಾದ್ದಲ್ಲಿ ಸರಕಾರ ಮತ್ತು ಬೋರ್ಡ್ ಬೊಕ್ಕಸದಿಂದ ೫೨,೫೧೪ ರೂಪಾಯಿ ವೆಚ್ಚವಾಯಿತು ಎಂದು ತಿಳಿಯುತ್ತೇವೆ. ಹಲವು ಕಡೆಗಳಲ್ಲಿ ಪಂಚಮರಿಗೋಸ್ಕರ ಬೇರೆ ಸಾಲೆಗಳನ್ನು ಏರ್ಪಡಿಸಿದ್ದರಿಂದ ಅದಕ್ಕೆ ಯೋಗ್ಯ ಉಪಾಧ್ಯಾಯರು ಸಿಗುವುದೇ ದುರ್ಲಭವಾಗಿದೆ. ಕೆಲವು ಬರೇ ಹೆಸರಿಗೆ ಮಾತ್ರ ಎಂಬಂತಿವೆ. ಆದರೆ ಈ ಮಕ್ಕಳನ್ನು ಸಾಮಾನ್ಯ ಸಾಲೆಗಳಲ್ಲಿಯೇ ದಾಖಲು ಮಾಡುವುದಕ್ಕೆ ಪ್ರಯತ್ನಪಟ್ಟರೆ ಮೇಲಿನ ಖರ್ಚಿನಲ್ಲಿ ಅಧಿಕಾಂಶವನ್ನು ಉಳಿಸಬಹುದು. ಮಾತ್ರವಲ್ಲ, ಆ ಪಂಚಮರಿಗೆ ಯೋಗ್ಯತರದ ಶಿಕ್ಷಣ ಸಿಗಲಿಕ್ಕೂ ಎಡೆಯಾಗುತ್ತದೆ. ಈಗ ಇರುವ ಬೋರ್ಡು ಮತ್ತು ಖಾಸಗಿ ಸಾಲೆಗಳಲ್ಲಿಯೇ ಫೀಸು ಮಾಫಿ ಮಾಡುವುದಾದರೆ ಆ ನಷ್ಟವನ್ನು ಭರ್ತಿಮಾಡಲಿಕ್ಕೆ ಸುಮಾರು ೮ ಲಕ್ಷ ರೂಪಾಯಿ ವಿಂಗಡಿಸಿ ಇಡಬೇಕಾದೀತು. ಕಡ್ಡಾಯದ ಮತ್ತು ಫೀಸು ಮಾಫಿಯ ಪ್ರಾಥಮಿಕ ಶಿಕ್ಷಣಕ್ಕೋಸ್ಕರ ಈಗ ಹಣದ ಅಭಾವದಿಂದ ಕಷ್ಟತರವಾಗಿದೆ ಎಂದು ತಿಳಿಯುವಾಗ ಈ ರೀತಿಯಾಗಿ ಬೇರೆ ಬೇರೆ ಜಾತಿಗಳಿಗೋಸ್ಕರ ಬೇರೆ ಬೇರೆ ಸಾಲೆಗಳನ್ನು ಏರ್ಪಡಿಸಿ, ಒಂದಕ್ಕೆರಡು ಪಾಲು ಖರ್ಚು ಮಾಡುವುದಕ್ಕಿಂತ ಸರಕಾರದ ಮತ್ತು ಬಿನಸರಕಾರಿ ಮೆಂಬರರ ಕಮ್ಮಿಟಿಯೊಂದನ್ನು ಏರ್ಪಡಿಸಿ, ಈ ಬಗೆಯ ಜಾತಿವಾರ್ ಸಾಲೆಗಳನ್ನು ಎಷ್ಟರ ಮಟ್ಟಿಗೆ ಕಡಿಮೆಮಾಡಬಹುದು, ಹಾಗೆ ಮಾಡುವುದರಿಂದ ಆ ಜಾತಿಗಳ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಅಡ್ಡಿಯಾಗದೆ ಎಷ್ಟು ಅಂಶವನ್ನು ವಿದ್ಯಾಇಲಾಖೆಯಲ್ಲಿ ಉಳಿಸಬಹುದು ಎಂಬವನ್ನು ಗೊತ್ತು ಹಚ್ಚಲಿಕ್ಕೆ ಒಂದು ಕಮ್ಮಿಶನ್ ಏರ್ಪಡಿಸಬೇಕಾಗಿ ಸರಕಾರದ ಮುಂದೆ ಠರಾವು ತರುವಂತೆ ನಾವು ನಮ್ಮ ಸಂಸ್ಥಾನದ ಮತ್ತು ಜಿಲ್ಲೆಯ ನಾಮದಾರ ಮೆಂಬರರಿಗೆ ಕೇಳಿಕೊಳ್ಳುತ್ತೇವೆ. ಹೊಸ ಕೌನ್ಸಿಲುಗಳು ಬರುವ ವರ್ಷ ಜಾರಿಗೆ ಬರುವ ಮುಂಚೆಯೇ ಈ ಬಗೆಯ ಅನುಭವವನ್ನು ಸಂಗ್ರಹಿಸಿ ತಯಾರಿಸಿದರೆ ಶಿಕ್ಷಣ ಇಲಾಖೆಯು ಪ್ರಜಾಪ್ರತಿನಿಧಿಗಳಾದ 'ಮಿನಿಸ್ಟರ್' ಮಂತ್ರಿಗಳ ವಶಕ್ಕೆ ಮುಂದಿನ ವರ್ಷ ಬಂದೊಡನೆ ಕಡ್ಡಾಯದ ವಿದ್ಯಾಭ್ಯಾಸಕ್ಕೆ ದಾರಿ ಸುಗಮವಾದೀತು. ಈ ಕಮ್ಮಿಶನದವರು ಅಲ್ಲಲ್ಲಿ ಸಂಚರಿಸಿ ಅನುಭವ ಮಾಡಿಕೊಳ್ಳುವುದಲ್ಲದೆ ಪ್ರಜಾಮುಖಂಡರನ್ನೂ ಆಯಾ ಜಾತಿಯ ಮುಖಂಡರನ್ನೂ ಕಂಡು ಅವರ ಅಭಿಮತಗಳನ್ನು ಸಂಗ್ರಹಿಸುವುದು ಅಗತ್ಯ.

೩ ಮದ್ರಾಸು ನ್ಯಾಯವಿಧಾಯಕ ಸಭೆಯ ಈ ತಿಂಗಳ ಅಧಿವೇಶನದಲ್ಲಿ ಕಡ್ಡಾಯದ ಮತ್ತು ಮುಫತ್ ಪ್ರಾಥಮಿಕ ಶಿಕ್ಷಣವನ್ನು ಕೊಡಲಿಕ್ಕೆ ಹಣ ವಿಂಗಡಿಸಬೇಕೆಂದು ನಾಮದಾರ ನರಸಿಂಹ ಅಯ್ಯರು ಇನ್ನೊಂದು ಠರಾವನ್ನು ತಂದಿದ್ದರು. ಇದನ್ನು ವಿರೋಧಿಸುವಾಗ ನಾಮದಾರ ಮಿ। ಭೂರ್ಗನವರು ಬಹು ವಿಚಿತ್ರವಾದ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಇದರಿಂದ ತಮ್ಮ ದುರುದ್ದೇಶವನ್ನು ಕೈಗೂಡಿಸಿ ಹಿಂದೀ ಜನಾಂಗದ ಸಲಹೆಗಳ ಗೋಣು ಮುರಿಯಲಿಕ್ಕೆ ಯಾವ ಬಗೆಯ ಕುಜುವಾತನ್ನೂ ವೇದವಾಕ್ಯದಂತೆ ನಮ್ಮ ಮುಂದಿಡುವ ಜನರು ಇನ್ನೂ ಇದ್ದಾರೆಂಬುದು ನಮ್ಮಲ್ಲಿ ಮುಂಜಾಗರೂಕತೆ ಇರಬೇಕೆಂಬುದನ್ನು ಇನ್ನೂ ಇನ್ನೂ ಒತ್ತಿಹೇಳುತ್ತಿದೆ. ಮಿ। ಭೂರ್ಗರ ಅಭಿಪ್ರಾಯದಲ್ಲಿ ಈಗಿನ ಶಿಕ್ಷಣಕ್ರಮದಿಂದ ಪಂಚಮರು ಮುಂತಾದವರಲ್ಲಿಯೂ ಸರಕಾರ ಹುದ್ದೆಗಳ ಕಡೆಗೆ ಆಕಾಂಕ್ಷೆಯನ್ನು ಹುಟ್ಟಿಸುವುದರಿಂದ ಮುಂದೆ ಬ್ರಾಹ್ಮಣರಂತೆ ಅವರೂ ಅಧಿಕಾರಸೂತ್ರಗಳನ್ನು ಸೆಳೆದುಕೊಂಡು ಬ್ರಾಹ್ಮಣರ ಮೇಲೆ ಸವಾರಿ ಮಾಡಿಯಾರು ಎಂದು ತೋರುತ್ತದೆ. ಇಂಗ್ಲೆಂಡಿನಲ್ಲಿ ಈಗ ಮಜೂರರು ಸರಕಾರದ ಸೂತ್ರಗಳನ್ನು ಧನಿಕ ಮತ್ತು ಇತರ ಶಿಕ್ಷಿತ ವರ್ಗದವರಿಂದ ಕಿತ್ತುಕೊಳ್ಳಲು ಯತ್ನಿಸುವಂತೆ ಈ ಪಂಚಮರು ಅವರ ನಡತೆಶೀಲಗಳಲ್ಲಿ ಶಿಕ್ಷಣದ ಪ್ರಭಾವವು ಕಂಡುಬರುವ ಮುಂಚೆಯೇ ಒಮ್ಮೆ ಶಾಲೆಗಳಲ್ಲಿನ ಓದುಬರಹದ ಬಲದಿಂದ ಅಧಿಕಾರ ಉನ್ಮತ್ತರಾದರೆ ಬ್ರಾಹ್ಮಣರೂ ಇತರ ಮೇಲುಜಾತಿಯವರೂ ಕಣ್ಣಿನಿಂದ ನೀರಿನ ಬದಲಾಗಿ ರಕ್ತವನ್ನು ಸ್ರವಿಸುವ ಸಮಯ ಬಂದೀತು. ಆದ್ದರಿಂದ ಈ ಪತಿತರ ನಡತೆಶೀಲಗಳು ಶಿಕ್ಷಣದಿಂದ ಒಪ್ಪಗೊಂಡ ವಿನಾ ಅವರಿಗೆ ವಿಶೇಷ ತರದ ಓದುಬರಹ ಕೊಡಲು ಯತ್ನಿಸುವುದು ತಪ್ಪು ಎಂದು ಮಿ। ಭೂರ್ಗರ್ ಸಾಹೇಬರು ವಾದಿಸಿದ್ದಾರೆ. ಈ ಭೇದಬುದ್ಧಿಯು ನಮ್ಮಲ್ಲಿ ಬೇಕಷ್ಟು ಇದೆ. ಇಲ್ಲವಾದರೆ ಈಗ ಮದ್ರಾಸು ಸಂಸ್ಥಾನದಲ್ಲಿ ಮಾತ್ರ ಹೊಸತಾಗಿ ಆಗತಕ್ಕ ಕೌನ್ಸಿಲಿಗೆ ಬ್ರಾಹ್ಮಣಬ್ರಾಹ್ಮಣೇತರ ಮೆಂಬರರ ಸಂಖ್ಯೆ ನಿಗದಿ ಮಾಡಲಿಕ್ಕೆ ಇತ್ತಂಡದ ಪ್ರತಿನಿಧಿಗಳೂ ಸ್ವತಃ ಲಾರ್ಡ ವಿಲ್ಲಿಂಗ್ಡನ್ನರೂ ಇದ್ದು ನೆರೆದ ಸಭೆಯು ನಿರರ್ಥಕವಾಗುತಿತ್ತೇ? ಹೀಗೆ ನಮ್ಮಲ್ಲಿ ಈ ದುರ್ಬೀಜವು ಸಾಕಷ್ಟು ಬಲಿತು ಇದ್ದಾಗ ಮಿ। ಭೂರ್ಗರಂಥವರು ಅದಕ್ಕೆ ಗೊಬ್ಬರವಿಡಲಿಕ್ಕೆ ಬೇಕೆ? ಈಗಿನ ಪ್ರಾಥಮಿಕ ಶಿಕ್ಷಣದಲ್ಲಿ ಕುಂದುಕಗಳಿವೆ, ಅವು ದುರುಸ್ತಿಯಾಗಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಮತ್ತು ಈ ಮಕ್ಕಳಲ್ಲಿ ಓದುಬರಹದೊಂದಿಗೆ ಕೈಕೆಲಸದ ಕಡೆಗೆ ಲಾಲಸೆ, ಗೌರವ, ಸೃಷ್ಟಿಯ ಕಡೆಗೆ ಪ್ರೇಮ ಇವು ಹುಟ್ಟಬೇಕೆಂಬುದು ವಾಸ್ತವವಾಗಿದೆ. ಬರುವ ವರ್ಷದಲ್ಲಿ ಹೊಸತಾಗಿ ಜನಿಯಿಸತಕ್ಕ ಕೌನ್ಸಿಲಿಗೆ ಈ ಜವಾಬ್ದಾರಿ ಬಿಟ್ಟುಕೊಡುವುದು ಒಳ್ಳೆಯದು. ಈಗಲೇ ಅವರ ಕೈವಿಗಿಯುವುದು ಸರಿಯಲ್ಲ, ಯಾಕೆಂದರೆ ಇದರ ವಿಚಾರಕ್ಕೆ ತಂಬೇಕಾದ ಉಪಾಧ್ಯಾಯರ ಸಂಖ್ಯೆ, ಸಾಹಿತ್ಯ ಸಾಮಗ್ರಿ, ಕಟ್ಟಡಗಳ ಪೂರವರಿ, ಮತ್ತು ಉಪಾಧ್ಯಾಯರ ಉಪಜೀವನಕ್ಕೆ ಸಾಕಷ್ಟು ಸಂಬಳ ಇವುಗಳನ್ನು ಅಜಮಾಯಿಷ ಮಾಡುವಾಗ ಈ ಕ್ರಮವನ್ನು ಈಗಲೇ ಜಾರಿಗೆ ತರಲು ಸಾಧ್ಯವಿಲ್ಲ, ಮಾತ್ರವಲ್ಲ, ಫೀಸು ಮಾಫಿಯಾಗಬೇಕು ಎಂದು ಮಾತ್ರವೇ ಹೇಳಿದರೂ ಈಗ ಸಿಕ್ಕುವ ಫೀಸು ನಷ್ಟವಾದದ್ದನ್ನು ಭರ್ತಿ ಮಾಡಿ ಹಣ ಸಹಾಯ ಮಾಡಲಿಕ್ಕೆ ಸುಮಾರು ೮ ಲಕ್ಷ ರೂಪಾಯಿ ಬೇರೆ ಬೇಕಾದೀತು, ಹಾಗಾದರೆ ಹೊಸ ಸಾಲೆಗಳಿಗೆ ಹಣ ಎಲ್ಲಿ ಎಂಬ ಪ್ರಶ್ನೆಯು ಇದೆ. ಅಂತೂ ಈ ಬಗ್ಗೆ ತಯಾರಾದ ಕಾನೂನಿನ ಮಸೂದೆಯು ಬೇಗನೆ ಪ್ರಕಟವಾಗುವುದು, ಆಗ ಜನಗಳು ತಮ್ಮ ಅಭಿಪ್ರಾಯಗಳನ್ನು ಕೊಡಲು ಸಾಧ್ಯವಿದೆ ಎಂದು ಸರಕಾರದ ಕಡೆಯಿಂದ ಉತ್ತರ ಬಂದದ್ದರಿಂದ ಈ ಠರಾವು ಹಿಂತೆಗೆಯಲ್ಪಟ್ಟಿತು.

೪ ಹಿಂದೂಸ್ಥಾನದ ರಾಜಧಾನಿಯು ಕಾಲಭೇದಕ್ಕನುಗುಣವಾಗಿ ದಿಲ್ಲಿ, ಸಿಮ್ಲಾ ಈ ರೀತಿಯಿಂದ ಸ್ಥಾನಭೇದವನ್ನು ಹೊಂದುತ್ತದೆ, ಇದು ಯೋಗ್ಯವಲ್ಲ. ಯಾವುದಾದರೂ ಒಂದೇ ಪಟ್ಟಣದಲ್ಲಿ ರಾಜಧಾನಿಯು ಕಾಯಮಾಗಿ ಇರಬೇಕು. ಈಗ ದಿಲ್ಲಿಯು ಯೋಗ್ಯವಲ್ಲವಾದರೆ ಬೇರೆ ಇನ್ನೆಲ್ಲಾದರೂ ರಾಜಧಾನಿಯನ್ನು ಒಯ್ಯಬಹುದು ಎಂದು ನಾಮದಾರ ಶರ್ಮರು ಒಂದು ಠರಾವನ್ನು ತಂದರು. ಈ ಠರಾವಿನ ಮೇಲೆ ಅನೇಕ ಉಪಸೂಚನೆಗಳು ಬಂದವು. ಅನೇಕ ಲೋಕಪ್ರತಿನಿಧಿಗಳು ರಾಜಧಾನಿಗೆ ಅನುರೂಪವಾದ ಬೇರೆಬೇರೆ ಹೆಸರುಗಳನ್ನು ಸೂಚಿಸಿದರು. ಪರಂತು ಕೊನೆಗೆ ಪಟೇಲರ ಉಪಸೂಚನೆಯೂ, ಶರ್ಮರ ಮೂಲ ಠರಾವೂ ಇವು ಬಹುಮತದಿಂದ ಬಿದ್ದುಹೋದವು. ಕೌನ್ಸಿಲಿನ ಮುಂದೆ ಬಂದ ಇನ್ನೊಂದು ಮಹತ್ವದ ಠರಾವು ಯಾವುದೆಂದರೆ 'ಉರಿಯಾ ಭಾಷೆಯ ಜನರು ಕನ್ನಡಿಗರಂತೆಯೆ ಮದ್ರಾಸ, ಬಂಗಾಲ, ಮಧ್ಯಪ್ರಾಂತ ಈ ವಿವಿಧ ಸರಕಾರಗಳಿಂದ ಆಳಲ್ಪಡುತ್ತಿದ್ದಾರೆ, ಆದರೆ ಅವರದೇ ಒಂದು ಪ್ರಾಂತವನ್ನು ಮಾಡಬೇಕೆಂದು ನಾಮದಾರ ಸಿಂಹರು ಒಂದು ಠರಾವನ್ನು ತಂದರು. ಸರಕಾರವು ಈ ಪ್ರಶ್ನೆಯನ್ನು ಸಹಾನುಭೂತಿಯ ದೃಷ್ಟಿಯಿಂದ ವಿಚಾರದಲ್ಲಿ ತಕ್ಕೊಂಡೀತು, ಅಲ್ಲದೆ ಬರುವ ಸುಧಾರಿಸಿದ ಕೌನ್ಸಿಲುಗಳಲ್ಲಿ ಇಂಥ ಪ್ರಶ್ನೆಗಳು ತೀರ್ಮಾನಿಸಲ್ಪಡುವುದು ಯುಕ್ತವಾಗಿದೆ ಎಂದು ಸರಕಾರಿ ಮೆಂಬರು ಆಶ್ವಾಸನವನ್ನು ಕೊಟ್ಟದ್ದರಿಂದ ಸಿಂಹರಿಂದ ಠರಾವು ಹಿಂತೆಗೆಯಲ್ಪಟ್ಟಿತು.

೫ ಉರಿಯಾ ಭಾಷೆಯ ಜನರು ಮೇಲೆ ಹೇಳಿದಂತೆ ವಿವಿಧ ಸರಕಾರಗಳ ಆಧಿಪತ್ಯಕ್ಕೆ ಒಳಪಟ್ಟಿದ್ದಾರೆ, ಮತ್ತು ಆ ಕಾರಣದಿಂದ ಅವರ ರಾಷ್ಟ್ರೀಯ ಪ್ರಗತಿಯು ಎಷ್ಟರ ಮಟ್ಟಿಗೆ ಕುಂಠಿತವಾಗಿದೆ ಎಂಬುವನ್ನು ಕನ್ನಡಿಗರು ಅನ್ಯಪ್ರಮಾಣಗಳಿಂದ ಆಲೋಚಿಸಬೇಕಾದ್ದಿಲ್ಲ, ತಮ್ಮ ಕನ್ನಡ ದೇಶದ ವಿಭಜನದಿಂದಲೇ ಅವರಿಗೆ ಅದು ಗೊತ್ತಾಗುವಹಾಗಿದೆ. ಈ ವಿಷಯವನ್ನು ನಾವು ಕನ್ನಡಿಗರ ಮುಂದೆ ಮುಂಚಿತವಾಗಿಯೂ ಇಟ್ಟಿದ್ದೇವಲ್ಲದೆ ಅನೇಕ ಸಾರಿ ಚರ್ಚೆಯನ್ನು ಕೂಡ ನಡೆಸಿದ್ದೇವೆ. ಈ ಮಾಯಿ ಜಾಗ್ರತಿಯನ್ನು ಇಡೀ ಕರ್ನಾಟಕದಲ್ಲಿ ಹುಟ್ಟಿಸುವ ಸ್ತುತ್ಯ ಉದ್ದೇಶದಿಂದ ಧಾರವಾಡದ ಕನ್ನಡ ವೃತ್ತಪತ್ರದ ಸಂಪಾದಕರಾದ ರಾ ರಾ ಮುದವೇಡಕರರು ನಮ್ಮ ಜಿಲ್ಲೆಯಲ್ಲಿ ಒಂದು ಉಪನ್ಯಾಸವನ್ನು ಕೊಡುತ್ತಿದ್ದಾರೆ. ಅಲ್ಲದೆ ಹೊಸ ಸುಧಾರಣೆಯಿಂದ ನಮ್ಮ ಮೇಲೆ ಬೀಳುವ ಯಾವ ಜವಾಬ್ದಾರಿಯೊ ಅದನ್ನು ಎಂದರೆ ಮತದಾರರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕೊಡುವುದು ಇತ್ಯಾದಿ ಕೆಲಸವನ್ನು ಹೇಗೆ ಮಾಡಬೇಕು ಎಂಬ ಸಂಗತಿಯನ್ನು ಸಹ ರಾಷ್ಟ್ರೀಯ ಸದಭಿಮತಪ್ರಚಾರಕರಾದ ರಾ. ಮುಧವೇಡಕರರು ತಮ್ಮ ಉಪನ್ಯಾಸದಲ್ಲಿ ದಿಗ್ದರ್ಶಿಸುತ್ತಿದ್ದಾರೆ.

೬ ಲಾಲಾ ಲಜಪತರಾಯರು ಕಳೆದವಾರ ಮುಂಬಯಿಗೆ ಬಂದು ತಲಪಿದವರು ೬ನೆಯ ಮುಂಬಯಿಯೊಳಗಿನ ಸಾರ್ವಜನಿಕ ಸಂಸ್ಥೆಗಳು ಸ್ವಾಗತವನ್ನು ಕೊಟ್ಟರು. ಅಲ್ಲಿಂದ ಅವರು ತಮ್ಮ ಸ್ವಪ್ರಾಂತಕ್ಕೆ ಎಂದರೆ ಪಂಜಾಬಿಗೆ ತೆರಳುವಾಗ ದಾರಿಯಲ್ಲಿ ದಿಲ್ಲಿಯ ನಾಗರಿಕರು ಕೂಡ ಲಾಲಾಜಿಯವರಿಗೆ ಮಾನಪತ್ರವನ್ನು ಕೊಟ್ಟರು. ಲಜಪತರಾಯರು ಮುಂಬಯಿಯಲ್ಲಿ ಮತ್ತು ದಿಲ್ಲಿಯಲ್ಲಿ ಮಾಡಿದ ಭಾಷಣಗಳಲ್ಲಿ ಅಮೇರಿಕದವರು ಹಿಂದುಸ್ಥಾನದ ರಾಜಕೀಯ ಅಭ್ಯುನ್ನತಿಯ ಬಗ್ಗೆ ಹೇಗೆ ಉತ್ಸಾಹಪರರಾಗಿದ್ದಾರೆ, ಎಷ್ಟು ಸಹಾನುಭೂತಿಯುಳ್ಳವರಾಗಿದ್ದಾರೆ ಎಂಬುವನ್ನು ತಿಳಿಸಿಕೊಟ್ಟರು.

ಮಂಗಳೂರು

ಇದೇ ಹಿಂದಿನ ಸಾಯಂಕಾಲ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ನಡೆದ ಡಿಸ್ಟ್ರಿಕ್ಟ್ ಎಸೋಸಿಯೇಶನ್ನಿನ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಪಾಸಾದವು. (೧) ಬರ್ಮಾ ಅಕ್ಕಿಯ ಆಮದು ರಫ್ತಿಗೆ ಯಾವ ವರೆಗೆ ನಿರ್ಬಂಧ ಇದೆಯೊ ಆ ವರೆಗೆ ಮದ್ರಾಸು ಸಂಸ್ಥಾನದ ಹೊರಗಿನ ಯಾವ ಸ್ಥಳಕ್ಕಾದರೂ ಈ ಜಿಲ್ಲೆಯಿಂದ ಅಕ್ಕಿಯನ್ನು ರಫ್ತುಮಾಡಲಿಕ್ಕೆ ಸರಕಾರದವರು ನಿರ್ಬಂಧ ಹಾಕುವುದು ಅಗತ್ಯ. (೨) ಇಲ್ಲಿ ಈಗಲೂ ಅಕ್ಕಿಯ ಬೆಲೆಯು ಅಪೂರ್ವ ದರಗಳಲ್ಲಿ ಏರಿರುವುದರಿಂದ ಈ ಜಿಲ್ಲೆಗೋಸ್ಕರವೂ ಸರಕಾರದವರು ರಂಗೂನು ಅಕ್ಕಿಯ ಪೂರವರೆಯನ್ನು ಮಳೆಗಾಲಕ್ಕೋಸ್ಕರ ಮಾಡಬೇಕಾದ್ದು ಅಗತ್ಯವೆಂದು ನಾವು ಸರಕಾರದವರಿಗೆ ಕೇಳಿಕೊಳ್ಳುತ್ತೇವೆ. (೩) ಮೂಲಗೇಣಿ ಕಾನೂನನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಪ್ರಾಂತಿಕ ಸರಕಾರದವರು ಚರ್ಚೆಗೆ ತೆಕ್ಕೊಳ್ಳದೆ ಇರುವುದು ಬಹಳ ಪಶ್ಚಾತ್ತಾಪಕರ ಸಂಗತಿಯಾಗಿದೆ. ಆದ್ದರಿಂದ ಈ ವಿಷಯದಲ್ಲಿ ಬೇಗನೇ ನಿಗಾ ಕೊಡುವುದು ಅಗತ್ಯವೆಂದು ಸೂಚಿಸೋಣಾಗುತ್ತದೆ. ಈಗಿನ ಸ್ಥಿತಿಯಲ್ಲಿ ಮೂಲಗಾರರು ಬಹಳ ಕಾಲದಿಂದ ನಷ್ಟಕ್ಕೆ ತಲೆಕೊಟ್ಟಿದ್ದಾರೆಂಬ ಸಂಗತಿಯನ್ನು ಸರಕಾರದ ಸ್ಮರಣೆಗೆ ತಂದಿದೆ. (೪) ಮೈಸೂರು ಮಹಾರಾಜರವರ ಸವಾರಿ ಸಮ್ಮುಖಕ್ಕೆ ಬಟ್ಟಳಿಕ್ಕೆ ಚಿತ್ತಯಿಸುವುದರಿಂದ ಅವರ ಮುಂದೆ ಈ ಜಿಲ್ಲೆಯ ಮನೋಗತವನ್ನು ತಿಳಿಸಿ, ಅರಸಿಕೆರೆ ಮಂಗಳೂರ ರೈಲರಸ್ತೆಯ ಪೈಕಿ ಮೈಸೂರು ಗಡಿ ವರೆಗಿನ ರಸ್ತೆಯನ್ನು ಬೇಗನೇ ಮೈಸೂರು ಸರಕಾರವು ಕೈಕೊಳ್ಳಬೇಕಾಗಿ ಕೇಳಿಕೊಳ್ಳುವಂತೆ ಈ ಜಿಲ್ಲೆಯ ಕಡೆಯಿಂದ ನಾಮದಾರ ರಾವಬಹದ್ದೂರ ನೆಯಂಪಳ್ಳಿ ಸುಬ್ಬರಾಯರನ್ನೂ ನಾಮದಾರ ಖಾನಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ ಸಾಹೇಬ ಬಹದ್ದೂರರನ್ನು ಪ್ರತಿನಿಧಿಗಳಾಗಿ ನೇಮಕಮಾಡಲಾಯಿತು.

ಇಲ್ಲಿಯ ಮಹಿಳಾಸಭೆಯವರು ಇದೇ ಬರುವ ಮಾರ್ಚ ತಾರೀಕು ೬ನೇ ಶನಿವಾರ ಸಾಯಂಕಾಲ ೫-೩೦ ಗಂಟೆಗೆ ಗವರ್ನರ

[illegible]

ಅಂದರೆ ಮಾಡುತ್ತಲಿರುವರು. [illegible] ಸಹಾಯಾರ್ಥವಾಗಿ [illegible] ಈ ಟಿಕೀಟುಗಳು ಸದರಿ ಸಭೆಯ [illegible]ದಲ್ಲಿ ಮಾರಲ್ಪಡುತ್ತವೆ.

[illegible] ತಾರೀಕು [illegible] ಸಂಚಿಕೆಯಲ್ಲಿ ಇಲ್ಲಿಯ [illegible] ಈ ವರುಷಗಳ ಹುದ್ದೆಯ ಅವಧಿಯು ಮುಗಿದುದುದರಿಂದ, ಪ್ರಕಟಿಸಲ್ಪಟ್ಟಿತ್ತಷ್ಟೆ. ಈಗ ಈ [illegible] ಸ್ಥಳಕ್ಕೆ ಮ॥ ರಾ॥ ಸೂಬೇರ ನಾಗಪ್ಪನಾಯಕ ಮತ್ತು ಮಿ. ಯಮ್. [illegible] ಇವರಿಬ್ಬರ ಹೊರತು ಮಾತೆಯರು ಪುನಃ ನೇಮಿಸಲ್ಪಟ್ಟಿರುವವರಾಗಿಯೂ ಮ॥ ರಾ॥ ರಾ॥ [illegible] ಮತ್ತು ಮಿ. [illegible] ಇವರಿಬ್ಬರು ಹೊಸದಾಗಿ ನೇಮಿಸಲ್ಪಟ್ಟಿರುವವರಾಗಿಯೂ ತಿಳಿಯುತ್ತೇವೆ.

ಪಟ್ಟಣದ ಆಯಾಯ ಭಾಗಗಳಲ್ಲಿರುವ ಆಫೀಸುಗಳ ಮತ್ತು ಸಾರ್ವಜನಿಕ [illegible] ಸೌಕರ್ಯದ ಬಗ್ಗೆ ಟೆಲಿಫೋನಿನ ಉಪಯೋಗವನ್ನು ಪ್ರಚಾರಕ್ಕೆ ತರುವ ಆಲೋಚನೆಯು ನಡೆಯುತ್ತದೆ.

ಇದೇ ಬರುವ ತಾರೀಕು [illegible]ನೇ ಆದಿತ್ಯವಾರ ಪ್ರಾತಃಕಾಲ [illegible] ಗಂಟೆಗೆ ಇಲ್ಲಿಯ ಥಿಯೋಸೋಫಿಕಲ್ ಸೊಸೈಟಿಯಲ್ಲಿ ಮ॥ ರಾ॥ ರಾ॥ ಎಮ್॥ ಎಸ್॥ ಏಕಾಂಬರ [illegible]ರವರು ಧರ್ಮ ಮತ್ತು ವಿಜ್ಞಾನ ಎಂಬುದನ್ನು ಕುರಿತು ಭಾಷಣ ಮಾಡುವರು. ಇದಕ್ಕೆ ಸಕಲರಿಗೂ ಸುಸ್ವಾಗತವಿದೆ.

ಕಳೆದ ಬುಧವಾರ ಇಲ್ಲಿಯ ವರ್ತಕ ವಿಲಾಸದಲ್ಲಿ ಧಾರವಾಡದ ಕರ್ನಾಟಕವೃತ್ತದ ಸಂಪಾದಕರಾದ ಮ॥ ರಾ॥ ರಾ॥ ಕೃಷ್ಣರಾವ್ ಮುದವೇಡಕರ ಇವರು ಮುಂದಿನ ಸುಧಾರಣೆಗಳ ದೆಸೆಯಿಂದ ಹಿಂದೀ [illegible]ನರ ಮೇಲೆ ಬರುವ ಜವಾಬದಾರಿಗಳನ್ನೂ, ಮತದಾರರು ಈಗ ಮಾಡಬೇಕಾದ ಕರ್ತವ್ಯವನ್ನೂ, ಕರ್ನಾಟಕದ ಏಕೀಕರಣವನ್ನೂ ಕುರಿತು [illegible] ಗಂಟೆಯ ವರೆಗೆ ಚಲೋ ಉಪನ್ಯಾಸವನ್ನು ಕೊಟ್ಟರು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ॥ ರಾ॥ ಆಡಿಗೆ ಶ್ರೀನಿವಾಸರಾವ್ ವಕೀಲರವರು ವಹಿಸಿದ್ದರು.

ಸೇಂಟ್ ಅಲೋಸಿಯಸ್ ಕೋಲೇಜಿನಲ್ಲಿ ಮೊನ್ನೆ ನಡೆದ ಪ್ರ್ಯಾಜ್ [illegible]ನಲ್ಲಿ ಸದರಿ ಕೋಲೇಜಿನ ಬಿ. ಎ. ವಿದ್ಯಾರ್ಥಿಯಾದ ಎಲ್. ಯಸ್. ಪ್ರಭುಗಳಿಗೆ ಮೊದಲನೆ ಬಹುಮಾನ (ಚಿನ್ನದ ಪದಕ) ಮತ್ತು ಯಸ್. ಕೊಂಬ್ರಬೈಲ ಎಂಬ ವಿದ್ಯಾರ್ಥಿಗೆ ಎರಡನೆಯ ಬಹುಮಾನವೂ ಕೊಡಲ್ಪಡುವುದಾಗಿ ತಿಳಿಯುತ್ತೇವೆ.

[illegible]ನೇ ಪೇಜಿನಿಂದ ಮುಂದರಿಸಿದ್ದು

[illegible] ಇರುವ ಸೆಕೆಂಡರಿ ಶಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಆಡಳಿತೆಯಲ್ಲಿ ಇಟ್ಟುಕೊಳ್ಳಬೇಕಾಗಿ [illegible] ಪ್ರೆಸಿಡೆಂಟರವರು ಸೂಚನೆಮಾಡಿದ ಮೇರೆಗೆ ಬರುವ ಎಪ್ರಿಲ್ [illegible]ನೆ ತಾರೀಕಿನಿಂದ ಅವನ್ನು ತಾವಿವಾಹಿಸುವಂತೆ ನಿರ್ಣಯವಾಯಿತು.

[illegible] ಕಡವಿಗೂ [illegible] ಟೋಲ್‌ಗೇಟಿಗೂ ಏಲಂ ವೊಬಲಗು [illegible] ಕಡಮೆಯಾದ್ದರಿಂದ ಇನ್ನೊಮ್ಮೆ ಏಲಂಮಾಡಬೇಕಾಗಿ ನಿಶ್ಚಯಿಸಲಾಯಿತು. [illegible]

ಮದ್ರಾಸು ವಿದ್ಯಾ ಇಲಾಖೆಯ ವರದಿ [illegible]

[illegible]

ಇದೇ ಮದ್ರಾಸು ಸಂಸ್ಥಾನದಲ್ಲಿ [illegible] ಪ್ರಾಥಮಿಕ ಸಾಲೆಗಳು [illegible]ರಲ್ಲಿ ಇದ್ದವು, ಮತ್ತು ಅವುಗಳಲ್ಲಿ [illegible] ಮಕ್ಕಳು ಕಲಿಯುತಿದ್ದರೆಂದು ವರದಿಯಿಂದ ಗೊತ್ತಾಗುತ್ತದೆ. ಆದರೆ ಇಷ್ಟು ಮಕ್ಕಳು ಕಲಿಯುತ್ತಿದ್ದ ಎಂಬವರಿಂದ ವಿದ್ಯಾ ಪ್ರಚಾರವು ಎಷ್ಟರ ಮಟ್ಟಿಗೆ ಫಲಿತಕ್ಕೆ ಬಂದಿದೆ ಎಂದು ತಿಳಿಯಬೇಕಾದರೆ ಮಕ್ಕಳು ವಾಡಿಕೆಯಾಗಿ ಎಷ್ಟು ವರ್ಷ ಶಿಕ್ಷಣವನ್ನು ಹೊಂದುತ್ತಿದ್ದವೆ ಎಂಬದನ್ನು ನೋಡಿಕೊಳ್ಳಬೇಕು. ಅದನ್ನು ಈ ಕೆಳಗಿನ ಪಟ್ಟಿಯಿಂದ ಅವಲೋಕಿಸಬಹುದು.

ವರ್ಷ	ಮಕ್ಕಳ ಸಂಖ್ಯೆ.
೧ನೆ ವರ್ಷ	[illegible]
೨ನೆ „	[illegible]
೩ನೆ „	[illegible]
೪ನೆ „	[illegible]
೫ನೆ „	[illegible]
೬ನೆ „	[illegible]
೭ನೆ „	[illegible]
೮ನೆ „	[illegible]
	[illegible]

ಮೇಲಿನ ಸಂಖ್ಯೆಯಲ್ಲಿ ಎಲಿಮೆಂಟರಿ ಸಾಲೆಯ [illegible]ನೆ ದರ್ಜೆ [illegible] ಸೆಕೆಂಡರಿ ಸಾಲೆಯ III ಫೋರ್ಮು ವರೆಗಿನ ಸಂಖ್ಯೆಗಳು ಕೂಡಿಸಿದ್ದವೆ. [illegible]

ಪುತ್ತೂರು ಸೆಕೆಂಡರಿ ಶಾಲೆಯ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಭವನದ ಫಂಡು.

[illegible]

[illegible]

ಇಂತಿ ಹೊಟ್ಟೆಗಿನ್ನಿಲ್ಲದ್ದು ಕಷ್ಟಪಡುವ ವಿದ್ಯಾರ್ಥಿಗಳ ಹಿತಚಿಂತಕ.

ಚಪ್ಪರ ಬದನೆಯ ವ್ಯವಸಾಯ.

'ಟೊಮೆಟೊ' ಎಂದು ಕರೆಯಲ್ಪಡುವ ಚಪ್ಪರ ಬದನೆ ಕಾಯಿಗಳನ್ನು ಮಂಗಳೂರು [illegible] ಶಾಲೆಗಳಲ್ಲಿಯೂ ಕಳೆದ ವರ್ಷ ಬೆಳೆಯುವುದರಿಂದ ಅದರ ಫಲವು ಉತ್ತಮವಾದುದೆಂದು ಅನುಭವಕ್ಕೆ ಬಂದ [illegible] ಆ ಕಾಯಿಗಳನ್ನು ವ್ಯವಸಾಯಮಾಡಲು ಎಣಿಸಿರುವವರಿಗೆ ಕೆಲವು ಸೂಚನೆಗಳನ್ನು ಇಲ್ಲಿ ಬರೆಯುತ್ತೇವೆ. [illegible] ಈ ವ್ಯವಸಾಯವು ವಿಶೇಷತಃ ರೂಢಿಗೆ ಬಂದಿದೆ. ತೋಟಗಾರರಂತೂ ಅದನು ಬಲು ಚೆನ್ನಾಗಿ ಬೆಳೆಯುತ್ತಾರೆ. ಇದರಿಂದುಂಟಾಗುವ ಉತ್ಪತ್ತಿಯಾದರೂ ಕಡಮೆಯಾಗುವದಿಲ್ಲ. ಬೀಜಗಳನ್ನು ಪೆಟ್ಟಿಗೆಗಳಲ್ಲಿ ಮೊಳಯಿಸಿ, ಸುಮಾರು [illegible] ಇಂಚು ಎತ್ತರವಾದೊಡನೆ, ಬೇರೆ ಬೇರೆಯಾಗಿ ಒಂದೊಂದು ಮೊಳದ ದೂರಕ್ಕೆ ನೆಡುವುದು. ಅವನ್ನು ಎರಡು ಸಾಲು ನೆಡುವುದು ಉತ್ತಮವೆಂದು ಕೆಲವು ತೋಟಗಾರರ ಅಭಿಪ್ರಾಯವಿದೆ. ಇದಕ್ಕೆ ಎಷ್ಟು ಅನುಕೂಲವಾದ ಸಮಯ [illegible] ಎಂದು ಸಂದೇಹವಿದೆ. [illegible], ಹಾಗೆ ಮಾಡಿದರೆ ಬೆಳೆ [illegible].

ಗಿಡವನ್ನು [illegible] ಎತ್ತರದ, ಸಲಾಕೆಗೆ ಕಟ್ಟಬೇಕು; ಒಂದೊಂದು [illegible] ಒಂದೊಂದು ಕಟ್ಟನ್ನು [illegible] ಉತ್ತಮ. ಗಿಡಕ್ಕೆ ಬರುವ ಗೆಲ್ಲುಗಳು [illegible] ಮುಂತಾದವನ್ನು ತೆಗೆಯಬೇಕು. ಕ್ರಮವಾಗಿ ಒಂದನ್ನು ಬಿಟ್ಟು ಇನ್ನೊಂದು ಎಲೆ ಸಂಧಿನೊಳಗೆ ಒಂದೊಂದು ಹೂಬಿಡುವುದು; ಅಲ್ಲಿ [illegible] ಕಾಯಿಗಳೂ ಬೆಳೆವುವು. 'ಪೊಂಡೆರೋಸಾ' ಎನ್ನುವ ಮದರಾಸು ಜಾತಿಯ ಬದನೆ [illegible] ರೂಢಿಯಲ್ಲಿದೆ.

ಒಂದೊಂದು ಬಗೆಯ ಗಿಡಕ್ಕೆ ಅರ್ಧ ಔನ್ಸು ನೈಟ್ರೇಟ್ ಆಫ್ ಸೋಡಾ ಎನ್ನುವ ಸೌಳಪ್ಪನ್ನು [illegible] ಗಿಡಗಳು [illegible] ಬೇರು ಬಿಟ್ಟಾಗಲೆ ಉಪಯೋಗಿಸಬೇಕು. [illegible], ಕಾಯಿಗಳು ತೋರಿದಾಗ, ಎರಡು ಗೆಲನ್ ನೀರಿನಲ್ಲಿ ಎರಡು ಔನ್ಸು ಇದೆ ಸೌಳಪ್ಪನ್ನು ಬೆರಸಿ, ಪತ್ತುಕೊಮ್ಮೆ ಗಿಡಗಳ ಬುಡದಲ್ಲಿ ಸುರಿದರೆ (ಮತ್ತು ಮೂವತ್ತು ವಾರಗಳಲ್ಲಿ ಎರಡು ಗೆಲನಿಗೆ ಒಂದೇ ಔನ್ಸಿನಂತೆ ಬೆರಸಿ ಸುರಿದರೆ) ಉತ್ಕೃಷ್ಟವಾದ ಫಲ ಬೆಳೆವುದು ಎಂದು ಅನೇಕರ ಅನುಭವದಿಂದ ತಿಳಿದು ಬಂದಿದೆ.

ಪತ್ರವ್ಯವಹಾರ.

ಪತ್ರಕರ್ತರೇ,

[illegible] ಶ್ರೀ [illegible] ಅವರ ಜಾತ್ರೆಯು [illegible]ಕ್ಕೆ ಮುಗಿದಿದೆ, ಆ ಜಾತ್ರೆಯು ಒಂದು ಅಂಗವಾದ [illegible] ಇನ್ನೂ ಮುಗಿಯಲಿಲ್ಲ. — ಕಾರಣ [illegible] ಜಾತ್ರೆಬಂದೋಬಸ್ತಿಗೆ ಬಂದ ಅಧಿಕಾರಸ್ಥರಿಗೆ ಮಾತ್ರ ಗೊತ್ತು — ಇದರಿಂದ ನಮ್ಮ ಊರಿನ ಮಹಾನುಭಾವರಿಗೆ ಸ್ಥಳ [illegible] ಸಂಪಾದನೆ [illegible] ಉದ್ಯೋಗಸ್ಥರು ಈ ಬಾಬಿನಲ್ಲಿ ಯಾಕೆ ಲಕ್ಷ್ಯ ಕೊಡುವದಿಲ್ಲ.

ಇಲ್ಲಿಯ ಎಲಿಮೆಂಟರಿ ಶಾಲೆಯನ್ನು ಹೊಸ ಅಸಿಸ್ಟೆಂಟ ಇನ್ಸಪೆಕ್ಟರವರು [illegible]

[illegible]

ಗ್ರಾಮಸ್ಥ.

[illegible]

[illegible]

ಸಹಕಾರ.

ಲೇಬರ್ ಯೂನಿಯನ್ಸುಗಳು.

[illegible]

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಪರಿಷತ್ತು.

[illegible]

... (೧೦) ಎಲಿಮೆಂಟರಿ ... [illegible] ... (೧೧) ... [illegible] ... (೧೨) ... [illegible] ... (೧೩) ... [illegible] ... (೧೪) ... [illegible] ... (೧೫) ... [illegible] ... ಈ ಠರಾವುಗಳನ್ನು ಉದಾರ ಬುದ್ಧಿಯಿಂದ ಪರ್ಯಾಲೋಚಿಸಲಾಗುವುದು ಎಂದು ಅಲ್ಲಿ ಹಾಜರಿದ್ದ ಬೋರ್ಡ್ ಮೆಂಬರರು ತಾಲೂಕುಬೋರ್ಡಿನ ಪರವಾಗಿ ಉತ್ತರ ದಯಪಾಲಿಸಿದರು.

ನೋಟೀಸು.

ಕಾಸರಗೋಡು ತಾಲೂಕು ಕಳನಾಡು ಗ್ರಾಮದ ಚಂದ್ರಗಿರಿಯಲ್ಲಿ ಇರುವ ಜಮಾತ್ತವಳ್ಳಿ ಮುಕ್ರಿ ಮೊಯಿದುಂಕುಟ್ಟಿಬ್ಯಾರಿ ಮಗಳು ಮರಿಯುಮ್ಮಳು ಈಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ಮಂಜೇಶ್ವರ ತಾಲೂಕು ಕುಡುವ ಗ್ರಾಮದ ಮಹಮ್ಮದ ಮ್ಯೊಲಾರ ಮಗ ಹಾಮದ ಬ್ಯಾರಿ ಎಂಬವರಿಗೆ ನನ್ನನ್ನು ಕಾನತು ಮಾಡಿದ ತರುವಾಯ ಅವರು ಬುದ್ಧಿಸ್ವಾಸ್ಥ್ಯತೆ ಇಲ್ಲದೆ ತಿರುಗಾಡುತ್ತಿದ್ದು ಬುದ್ಧಿ ಸ್ವಾಸ್ಥತೆಯಾಗುವ ಸಂಭವ ತೋರುವದಿಲ್ಲಾದ ಪ್ರಯುಕ್ತ ಈ ದಾಂಪತ್ಯವನ್ನು ಊರ್ಜಿತವಿರಿಸಲು ನನಗೆ ಮನಸ್ಸಿಲ್ಲದ್ದರಿಂದ ನಾನು ನಮ್ಮ ಜಾತಿ ರಿವಾಜು ವ ಮಹಮ್ಮದಿ ಶರಾ ಪ್ರಕಾರ ತಾ. ೫೦—೬—೧೯೨೦ರಲ್ಲಿ ಕಡವತ್ತವಳ್ಳಿ ಹಾಮದ ಮ್ಯೊಲಾರ ಸಮಕ್ಷಮ ಈ ಕೆಳಗೆ ವಿವರಿಸಿದ ೩ ಸಾಕ್ಷಿಗಾರರ ಮುಂದಿಟ್ಟು ತಲಾಕು ಹೇಳಿ ಸದರಿ ದಾಂಪತ್ಯವನ್ನು ರದ್ದುಪಡಿಸುತ್ತೇನೆ.

ಈ ಮೂರು ಗೆರೆ ಸದರಿ ಮರಿಯುಮ್ಮಳ ರುಜು. ಈ ಸಂಗತಿ ಸಾಕ್ಷಿಗಳು......... ಈ ಅರಬಿ ಬರಹ ಮಹಮ್ಮದ ಮ್ಯೊಲಾರ ಮಗ ಕಳನಾಡು ಗ್ರಾಮದಲ್ಲಿ ಇರುವ ಹಾಮದ ಮ್ಯೊಲಾರನ ಸಾಕ್ಷ್ಯ. ....ಈ ಒಪ್ಪಿನ ಬರಹ ಕಳನಾಡು ಗ್ರಾಮದಲ್ಲಿ ಇರುವ ಕಾಕ್ಕೆ ಬ್ಯಾರಿ ಮಗ ಹಸೆಂಕುಟ್ಟಿ ಬ್ಯಾರಿ ಸಾಕ್ಷಿ. ....ಈ ಮಲಯಾಳಿ ಬರಹ ಕಳನಾಡು ಗ್ರಾಮದಲ್ಲಿ ಇರುವ ಇಸ್ಮಾಯಿಲಾಬ್ಯಾರಿ ಮಗ ಮಹಮ್ಮದಕುಂಞಾಲಿ ಸಾಕ್ಷಿ.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗುವದು, ತಲೆವುರಿ, ಕಣ್ಣುವುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಕಡಿಮೆಯಾಗುವದು ಇವುಗಳನ್ನೆಲ್ಲಾ ಶಾಂತಗೊಳಿಸುತ್ತದೆ. ಉದುರುವ ಕೂದಲುಗಳನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಬಿಳಿಯಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ಆಣೆ ೧೨, ಇಕ್ಕ ರೂ. ೨, ದೊಡ್ಡ ಸೀಸೆಗೆ ರೂ. ೧—೮—೦.

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು. ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿಗೆ ಕ್ರಯ ೧—೮—೦, ಬಾಟ್ಲಿ ೩ರ ಕ್ರಯ ೪—೦—೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳೀಪ್ರದರ (ಬಿಳೀ ಸೆರೆ) ಇನ್ನೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨—೦—೦.

ಚಿನ್ ಚಿನ್ ಬಾಮ್. ಎಲ್ಲಾ ತಂದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ್ತ ತಕ್ಷಣ ಗುಣ. ಬೆಲೆ ಸುಲಭ, ಭರಣಿಗೆ ೩. ೬, ಇಚಕಣ್ಣರ ಮುಚ್ಚಳದ ಡಬ್ಬಿಗೆ ೬. ೪.

ದಂತಶೋಧಿನಿಚೂರ್ಣ. ಇದು ಹಲ್ಲುಗಳನ್ನು ಹೊಕ್ಕುಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುದು, ಬಾಯಿಹುಣ್ಣು, ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿಗೆ ಆಣೆ ೫.

ಲಂಗ್ಸ್‌ಟೋನ. ಕೆಮ್ಮು, ನೆಗಡಿ, ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಮಾಡಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿಗೆ ರೂ. ೨—೮—೦, ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪನಿ,
4. ಕಂಕನಾಡಿ ಪೋಸ್ಟು.

Manollasini Co.,
4, Kankanady.

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂವತ್ಸರದ ದಕ್ಷಿಣಾಯನದ ಫಾಲ್ಗುಣ ಶು|| ೯ ಶನಿವಾರದಿಂದ ಫಾಲ್ಗುಣ ಶು|| ೮ (ದಕ್ಷಿಣಾಯನ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಫೆಬ್ರವರಿ ಮಾರ್ಚು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೯	[illegible]	ಮೃಗಶಿರಾ	[illegible]	[illegible]	6·50	6.38
29	ರವಿ	೧೦	[illegible]	ಆರ್ದ್ರಾ	[illegible]	[illegible]	6·50	6.38
1	ಸೋಮ	೧೧	[illegible]	ಪುನರ್ವಸು	[illegible]	[illegible]	6·50	6·38
2	ಕುಜ	೧೩	[illegible]	ಪುಷ್ಯ	[illegible]	[illegible]	6·49	6·38
3	ಬುಧ	೧೪	[illegible]	ಆಶ್ಲೇಷಾ	[illegible]	[illegible]	6·48	6·39
4	ಗುರು	○	[illegible]	ಮಘಾ	[illegible]	[illegible]	6·48	6·39
5	ಶುಕ್ರ	೧	[illegible]	ಪುಬ್ಬಾ	[illegible]	[illegible]	6·47	6·39

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಫೆಬ್ರವರಿ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಆಚವರಿಂದ
20	90—8	72—9	—	...
21	94—3	71—9	—	...
23	92—5	72—9	—	...
23	90—8	75—2	—	...
24	91—3	74—4	—	...
25	91—9	73—3	—	—
26	95—7	69—9	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಕ್ಕಿ ಅಕ್ಕಿ ಮುಡಿ ಗಳ್ಳ	...	9— 4	10— 0
ಗುಡ್ಡೆ ,, ,,	...	8—10	9— 4
ಚಾಳಿ ಮುಡಿ ಗಳ್ಳ	...	7—14	8—14
ಅನ್ವಲ್ ಬೆಲ್ಲಗೆ ,,	...	11— 0	11— 4
ಗುಡ್ಡೆ ಬೆಲ್ಲಗೆ ,,	...	10— 0	10— 6
ರಂಗೂನ ಬೆಲ್ಲಗೆ ಗೋಣಿ ಗಳ್ಳ	...	15— 0	16— 0
ಗೋದಿ ಗೋಣಿ ಗಳ್ಳ	...	25— 0	25— 8
ಹುರುಳಿ ಗೋಣಿ ಗಳ್ಳ	...	16— 4	16— 2
ಕಡಲೆ ಗೋಣಿ ಗಳ್ಳ	...	22— 4	23—0
ತೊಗರಿ ಗೋಣಿ ಗಳ್ಳ	...	20— 0	25— 0
ತೊಗರಿಬೇಳೆ ಗೋಣಿ ಗಳ್ಳ	...	26— 0	32— 0
ಉದ್ದು ಗೋಣಿ ಗಳ್ಳ	...	22— 8	25— 0
ಹೆಸರು ಗೋಣಿ ಗಳ್ಳ	...	22— 8	23— 0
ಊರು ಬೆಲ್ಲ ಖಂಡಿ ಗಳ್ಳ	...	75— 0	77— 8
ಉಪ್ಪು ಗೋಣಿ ಗಳ್ಳ	...	4— 0	4— 4
ಕೊಬ್ಬರಿ ಖಂಡಿ ಗಳ್ಳ	...	125— 0	130— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳ	...	35— 0	35— 8
ಎಳ್ಳಿಂಡಿ ಖಂಡಿ ಗಳ್ಳ	...	57— 0	60— 0
ಕೊಬ್ಬರಿ ಎಣ್ಣೆ ಮಣ ಗಳ್ಳ	...	10— 4	10— 8
ಎಳ್ಳೆಣ್ಣೆ ಮಣ ಗಳ್ಳ	...	11— 8	11—12
ಬಿಳಿ ಸಕ್ಕರೆ ಪಟ್ಟಿಗೆ ಗಳ್ಳ	...	9— 0	9—15
ನಾಡಿನ ಸಕ್ಕರೆ ಮಣ ಗಳ್ಳ	...	9—12	9—14
ಮಲಬಾರಿನ ಜಾಯಿ ಮಣ ಗಳ್ಳ	...	10— 0	10— 4
ಸಾಸಿವೆ ಮುಡಿ ಗಳ್ಳ	...	11— 4	11— 8
ಕೊತ್ತುಂಬರಿ ಮುಡಿ ಗಳ್ಳ	...	5— 6	5—10
ಕಾಫಿ ಖಂಡಿ ಗಳ್ಳ	...	255— 0	305— 0
ಬೀಗೋಟು ಅಡಿಕೆ ಖಂಡಿ ಗಳ್ಳ	...	100— 0	105— 0
ಹಳೆ ಬೀಗೋಟು	...	120— 0	125— 0
ಹಳೆ ಕಾಳುಮೆಣಸು ಖಂಡಿ ಗಳ್ಳ	...	140— 0	145— 0
ಮೆಣಸಿನಕಾಯಿ ಮಣ ಗಳ್ಳ	...	25— 0	32— 0
ಗೇರುಬೀಜ ಮುಡಿ ಗಳ್ಳ	...	5— 8	—
ಕೆಚ್ಚಿನ ಖಂಡಿ ಗಳ್ಳ	...	100— 0	120— 0
ಕಾಂಬ್ರ ತಗಡು ಮಣ ಗಳ್ಳ	...	28— 4	29— 0
ಕಾಂಬ್ರ ಪಾತ್ರೆಗಳು ಮಣ ಗಳ್ಳ	...	40— 0	42— 0
ಆನೆ ಬೆಳ್ಳಿ ಸೇರು ಗಳ್ಳ	...	31— 8	
ಹಿತ್ತಾಳೆ ತಗಡು ಮಣ ಗಳ್ಳ	...	38— 0	

ಒಂದು ಎಂದು ... ಶೋಭಿಸಲಿಕ್ಕಿರುವರು. ... ಸಭೆಯ ಫಂಡಿನ ಸಹಾಯಾರ್ಥವಾಗಿ ... ಇದರ ಟಿಕೇಟುಗಳು ಸದರಿ ಸಭೆಯ ... ಮಾಡಲ್ಪಡುತ್ತವೆ

ಕಳೆದ ಜನವರಿ ತಾರೀಕು ೧೬ನೇ ಸಂಚಿಕೆಯಲ್ಲಿ ಇಲ್ಲಿಯ ... ಮಂದಿ ... ವರುಷಗಳ ಹುದ್ದೆಯ ... ಮುಗಿದಿರುವದಾಗಿ ಪ್ರಕಟಿಸಲ್ಪಟ್ಟಿತ್ತಷ್ಟೆ, ಈಗ ಈ ... ಮ| ರಾ| ಸೂಜೇರ ನಾಗಪ್ಪನಾಯಕ ಮತ್ತು ವಿ. ಯಮ್. ಎಲೆಕ್ಸಾಂಡರ ಸಿಕೇರ ಇವರಿಬ್ಬರ ಹೊರತು ... ಮ| ರಾ| ರಾ| ... ಇವರಿಬ್ಬರು ಹೊಸದಾಗಿ ನೇಮಿಸಲ್ಪಟ್ಟವರಾಗಿಯೂ ತಿಳಿಯುತ್ತೇವೆ

ಪಟ್ಟಣದ ಆಯಾಯ ಭಾಗಗಳಲ್ಲಿರುವ ಆಫೀಸುಗಳ ಮತ್ತು ಕಾರ್ಖಾನೆ ಮುಂತಾದವುಗಳ ಸೌಕರ್ಯದ ಬಗ್ಗಾಗಿ ಟೆಲಿಫೋನಿನ ಉಪಯೋಗವನ್ನು ಪ್ರಚಾರಕ್ಕೆ ತರುವ ಆಲೋಚನೆಯು ನಡಿಯುತ್ತದೆ.

ಇದೇ ಬರುವ ತಾರೀಕು ೨೫ನೇ ಆದಿತ್ಯವಾರ ಪ್ರಾತಃಕಾಲ ... ಗಂಟೆಗೆ ಇಲ್ಲಿಯ ಥಿಯೋಸೋಫಿಕಲ್ ಸೊಸೈಟಿಯಲ್ಲಿ ಮ| ರಾ| ರಾ| ಏಮ್| ಎಸ್| ಏಕಾಂಬರ ರಾವ್‌ರವರು ಧರ್ಮ ಮತ್ತು ವಿಜ್ಞಾನ ಎಂಬುದನ್ನು ಕುರಿತು ಭಾಷಣ ಮಾಡುವರು ಇದಕ್ಕೆ ಸಕಲರಿಗೂ ಸುಸ್ವಾಗತವಿದೆ

ಕಳೆದ ಬುಧವಾರ ಇಲ್ಲಿಯ ವರ್ತಕ ವಿಲಾಸದಲ್ಲಿ ಧಾರವಾಡದ ಕರ್ನಾಟಕವೃತ್ತದ ಸಂಪಾದಕರಾದ ಮ| ರಾ| ರಾ| ಕೃಷ್ಣರಾವ್ ಮುಧವೇಡಕರ ಇವರು ಮುಂದಿನ ಸುಧಾರಣೆಗಳ ದೆಸೆಯಿಂದ ಹಿಂದೀಜನರ ಮೇಲೆ ಬರುವ ಜವಾಬದಾರಿಗಳನ್ನೂ ಮತದಾರರು ಈಗ ಮಾಡಬೇಕಾದ ಕರ್ತವ್ಯವನ್ನೂ, ಕರ್ನಾಟಕದ ಏಕೀ ಕರಣವನ್ನೂ ಕುರಿತು ೨ ಗಂಟೆಯ ವರೆಗೆ ಚಲೋ ಉಪನ್ಯಾಸವನ್ನು ಕೊಟ್ಟರು ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ| ರಾ| ಅಡಿಗೆ ಶ್ರೀನಿವಾಸರಾವ್ ವಕೀಲರವರು ವಹಿಸಿದ್ದರು

ಸೆಂಟ್ ಅಲ್ಲೊಸಿಯಸ್ ಕೊಲೇಜಿನಲ್ಲಿ ಮೊನ್ನೆ ನಡೆದ ಪ್ರ್ಯಾಕ್ಟೀಸಿನಲ್ಲಿ ಸದರಿ ಕೊಲೇಜಿನ ಬಿ ... ವಿದ್ಯಾರ್ಥಿಯಾದ ಎಲ್ ಯಸ್ ಪ್ರಭುಗಳಿಗೆ ಮೊದಲನೆ ಬಹುಮಾನ (ಚಿನ್ನದ ಪದಕ) ಮತ್ತು ಯುಸ್ ಕೊಂಬ್ರಬೈಲ ಎಂಬ ವಿದ್ಯಾರ್ಥಿಗೆ ಎರಡನೆಯ ಬಹುಮಾನವೂ ಕೊಡಲ್ಪಡುವುದಾಗಿ ತಿಳಿಯುತ್ತೇವೆ

೩ನೇ ಪೇಜಿನಿಂದ ಮುಂದರಿಸಿದ್ದು

ಬೋರ್ಡಿನ ಕೈಕೆಳಗೆ ಇರುವ ಸೆಕೆಂಡರಿ ಶಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಆಡಳಿತೆಯಲ್ಲಿ ಇಟ್ಟುಕೊಳ್ಳಬೇಕಾಗಿ ಕುಂದಾಪುರ ತಾಲೂಕುಬೋರ್ಡ ಪ್ರೆಸಿಡೆಂಟರವರು ಸೂಚನೆಮಾಡಿದ ಮೇರೆಗೆ ಬರುವ ಎಪ್ರಿಲ್ ೧ನೆ ತಾರೀಕಿನಿಂದ ಅವನ್ನು ಜಾರಿಮಾಡುವಂತೆ ನಿರ್ಧರಿಸಲಾಯಿತು

ಗಂಗೊಳ್ಳಿ ಕಡವಿಗೂ ಶಾಕಳ ಟೋಲ್‌ಗೇಟಿಗೂ ಏಲಂ ಮೊಬಲಗು ಬಹಳ ಕಡಿಮೆಯಾದ್ದರಿಂದ ಇನ್ನೊಮ್ಮೆ ಏಲಂಮಾಡಬೇಕಾಗಿ ನಿಶ್ಚಯ ಸಲಾಯಿತು ... ಬಳಿಯಲ್ಲಿ ಇರುವ ಕಡವನ್ನು ಸರಕಾರ ನಿಬಂಧನೆಗಳಿಗೆ ಒಳಪಟ್ಟದ್ದಾಗಿ ಮಾಡಲಾಯಿತು

ಮದ್ರಾಸು ವಿದ್ಯಾ ಇಲಾಖೆಯ ವರದಿ ೧೯೧೮—೧೯

ಈ ಇಲಾಖೆಯ ವರದಿಯು ಸಾಮಾನ್ಯವಾಗಿ ಇತರ ಕೆಲವು ಇಲಾಖೆಗಳ ವರದಿಗಳಂತೆಯೇ ಪ್ರಕಟವಾಗುವುದಕ್ಕೆ ಮುಂದಿನ ವರ್ಷದ ಸುಮಾರು ೧೦ ತಿಂಗಳು ಹಿಡಿಯುತ್ತದೆ ಇಂಥ ವರದಿಗಳು ಮರು ವರ್ಷದ ೫ ಯಾ ೬ ತಿಂಗಳೊಳಗಾಗಿಯೇ ಪ್ರಕಟವಾಗುವ ಹಾಗೆ ಮಾಡಿದರೆ ಎಷ್ಟೋ ಒಳ್ಳೆಯದಾಗುತ್ತಿತ್ತು ಮರು ವರ್ಷದ ಅಂತ್ಯದಾಗುವ ಕಾಲದಲ್ಲಿ ವರದಿ ಕೈಸಿಕ್ಕಿದರಿಂದ ಹಿಂದಿನ ವರ್ಷದ ವಹಿವಾಟುಗಳನ್ನು ಕುರಿತ ಜನತೆಯು ಅವಲೋಕನ ಮಾಡುವ ಸಂದರ್ಭ ತಪ್ಪಿಹೋಗುತ್ತದೆ. ಮದ್ರಾಸು ಪ್ರಾಂತಿಕ ಸರಕಾರದವರು ಈ ವರದಿಯನ್ನು ವಿಮರ್ಶಿಸುವಾಗ ಹೀಗೆಂದಿದ್ದಾರೆ — ಹಿಂದಿನ ವರ್ಷಗಳಲ್ಲಿ ಸಹಾಯಧನವಾಗಿ ಕೊಟ್ಟ ... ಲಕ್ಷ ... ಸಾವಿರ ರೂಪಾಯಿ ಹೊರತು ಬಾಕಿ ವರ್ಷದಲ್ಲಿ ... ಲಕ್ಷ ರೂಪಾಯಿ ... ಶಿಕ್ಷಣಕ್ಕೋಸ್ಕರ ಸಹಾಯ ಧನವಾಗಿ ವಿರಿಷ್ಟ ಸರಕಾರದವರು ಕೊಟ್ಟದ್ದರಿಂದ ಹೆಚ್ಚಿಗೆ ಬೋರ್ಡ ಸಾಲೆಗಳನ್ನು ತೆರೆಯುವಿಕ್ಕೆ ಬೋರ್ಡ ಮತ್ತು ಮ್ಯುನ್ಸಿಪಲ್ ಶಾಲಾ ಉಪಾಧ್ಯಾಯರ ಸಂಬಳವನ್ನು ಏರಿಸುವಿಕ್ಕೆ, ಇನ್ಸ್‌ಪೆಕ್ಟಿಂಗ್ ಆಫಿಸರುಗಳ ಸಿಬಂದಿ ಹೆಚ್ಚಿಸುವುದಕ್ಕೆ, ಖಾಸಗಿ ಶಾಲೆಗಳಿಗೆ ಕೊಡುವ ಗ್ರೆಂಟಿನ ದರಗಳನ್ನು ಏರಿಸುವುದಕ್ಕೆ ಉಪಯೋಗಿಸಲಾಯಿತು ಇದರಿಂದ ಆದ ಫಲಿತಾಂಶವನ್ನು ವರದಿಯ ಸಂಖ್ಯಾಮಾನದಿಂದ ಗೊತ್ತು ಹಚ್ಚೋಣ

ಸರಕಾರಿ, (...) ಮ್ಯುನ್ಸಿಪಲ್ (...) ಬೋರ್ಡ (...) ಮತ್ತು ಖಾಸಗಿ (...) ಆಗಿದ್ದ ಗ್ರೆಂಟು ಹೊಂದುವ ಶಾಲೆಗಳ ಸಂಖ್ಯೆ ಒಟ್ಟಿಗೆ ... ರಷ್ಟಕ್ಕೆ ಹೆಚ್ಚಿತು, ಆದರೆ ಸರಕಾರ ಸಹಾಯ ಹೊಂದ್ದದೆ ಸಾಲೆಗಳಲ್ಲಿ ... ಕಡಿಮೆಯಾದುವು ಹೀಗೆ ಈ ಸಣ್ಣ ಕಳೆದರೆ ನಿಜ ಹೆಚ್ಚಿದ ಸಂಖ್ಯೆ ... ಆಗಿದೆ ಗ್ರೆಂಟು ಹೊಂದದ ಶಾಲೆಗಳಲ್ಲಿ ಅನೇಕವು ಗ್ರೆಂಟಿಗೆ ಅರ್ಹವಾಗಿ ಅಥವಾ ಮುನ್ಸಿಪಲ್ ಮತ್ತು ಬೋರ್ಡ ಶಾಲೆಗಳಾಗಿ ಮಾರ್ಪಟ್ಟಿವೆ ಹೀಗೆ ಸಾಲೆಗಳ ಸಂಖ್ಯೆಯನ್ನು ಹೆಚ್ಚಿಸುವಾಗ ಬಡಕಲಾದವುಗಳನ್ನು ಬೋರ್ಡ ಅಥವಾ ಮ್ಯುನ್ಸಿಪಲ್ ಆಡಳಿತೆಯೊಳಗೆ ತಂದು ಬಲಪಡಿಸಲು ಪ್ರಯತ್ನಿಸಿದೆ ಎಂಬದು ಸಮಾಧಾನಕರವಾದ ಮಾತು ಆದರೆ ಅದೇ ಮಾನದಲ್ಲಿ ಮಕ್ಕಳ ಸಂಖ್ಯೆ ಏರ ದೆ ಬದಲಾಗಿ ಸುಮಾರು ... ಕಡಿಮೆ ನಿಂತಿತು ಇದು ವಿಶೇಷವಾಗಿ ಖಾಸಗಿ ಶಾಲೆಗಳಲ್ಲಿ ಆಯಿತೆಂತ ಕಂಡುಬಂದಿದೆ ಹೀಗಾದ್ದಕ್ಕೆ ಇಲಾಖೆಯವರು ಕೆಲವು ಕಾರಣಗಳನ್ನು ಕೊಡಲು ಯತ್ನಿಸಿದ್ದಾರೆ ಇನ್‌ಫ್ಲುಯೆಂಜದ ಹಾವಳಿ ಒಂದು, ಧವಸ ತುಟ್ಟಿಯಾದ್ದರಿಂದ ಸಣ್ಣ ಮಕ್ಕಳು ಜೀವನಕ್ಕೋಸ್ಕರ ದುಡಿಕದ ಪ್ರಯತ್ನ ಮಾಡುತಿದ್ದು ಸಾಲೆಯನ್ನು ಬಿಟ್ಟು ಹೋದದ್ದು ಸಹ ಹೀಗೆ ಖಾಸಗಿ ಸಾಲೆಗಳಲ್ಲಿ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣಗಳೆಂದು ತಾವು ಭಾವಿಸುತ್ತೇವೆ ಎಂದು ಇಲಾಖೆಯವರು ಹೇಳುತ್ತಾರೆ ಧವಸದ ತುಟ್ಟಿಯ ... ಖಾಸಗಿ ಶಾಲೆಗಳ ಉಪಾಧ್ಯಾಯರಿಗೂ ಗ್ರೆಂಟಿನಿಂದ ...

ದರ ಎಷ್ಟೋ ... ಈ ವಿಷಯವನ್ನು ಗತ ವರ್ಷದಲ್ಲಿ ಕೂಡಾ ನಾವು ಚರ್ಚಿಸಿದ್ದೇವೆ ಇದನ್ನು ... ನ್ಯಾಯ ... ಸಭೆಯಲ್ಲಿ ಚರ್ಚೆಗೆ ತರುವುದು ಒಳ್ಳೇದೆಂದು ನಮಗೆ ತೋರುತ್ತದೆ

ಸಂಬಳದ ದರಗಳನ್ನು ಬೋರ್ಡ ಮತ್ತು ಮ್ಯುನ್ಸಿಪಲ್ ಸಾಲೆಗಳಲ್ಲಿ ಏರಿಸಿ ಈ ಮೊದಲು ಇದ್ದಂತೆ ೪ನೆ ದರ್ಜೆ ಇರುವ ಸಾಲೆ ಮತ್ತು ೭ನೆ ದರ್ಜೆ ವರೆಗೆ ಮಾತ್ರ ಇರುವ ಸಾಲೆ ಎಂಬ ಭೇದಗಳನ್ನು ತೆಗೆದುಹಾಕಿ ಫೀಸಿನ ದರಗಳನ್ನು ಸರಕಾರದವರು ತಿದ್ದುಪಡಿ ಮಾಡಿದ್ದಾರೆ ಹೀಗೆ ಮಾಡುವಾಗ ಒಂದು ಕಡ್ಡಾಯ ಬಂದಿದೆ ೪ನೆ ದರ್ಜೆ ವರೆಗೆ ಇರುವ ಸಾಲೆಗಳಲ್ಲಿ ಫೀಸು ಹೆಡ್‌ಮಾಸ್ತರಂಗೆ ಸಿಗಬೆ ಕಾದ್ದಲ್ಲದೆ ಇದನ್ನು ಬೋರ್ಡಿನ ಖಜಾನೆಗೆ ವರ್ಗಾವಣೆ ಮಾಡುವ ಅಗತ್ಯವಿಲ್ಲ ಎಂಬದಾಗಿ ಇದ್ದ ಕ್ರಮದ ಆಶ್ರಯದಿಂದ ಅನೇಕರು ಫೀಸನ್ನು ವಸೂಲು ಮಾಡದೆ ಮಕ್ಕಳನ್ನು ದಾಖಲು ಮಾಡಿಕೊಳ್ಳುತಿದ್ದರು ಈಗ ಬಡ ಮಕ್ಕಳಿಗೆ ಇದ್ದ ಈ ಬಗೆಯ ಸಹಾಯ ನಿಂತುಹೋಯಿತು ಫೀಸು ವಸೂಲು ಮಾಡಿ ಖಜಾನೆಗೆ ಕಟ್ಟಬೇಕಾಗಿ ಬಂದುದರಿಂದ ಹಣಕಾಸಿಲ್ಲದ ಮಕ್ಕಳು ಸಾಲೆ ಬಿಟ್ಟು ಮನೆಯ ಕೆಲಸಕ್ಕೆ ಬಿದ್ದು ಬಿಟ್ಟವು ಹೀಗಾಗಿ ಮಕ್ಕಳನ್ನು ಬಯಸಿದ ಸ್ತ್ರೀ ... ಪೂಜೆ ಮಾಡಿದ ಫಲವು ಇಲ್ಲಿ ಸಿಕ್ಕಿದಂತಾಗುವುದು ಈ ವಿಷಯದಲ್ಲಿ ಸರಕಾರದವರು ನಿಗಾತಕ್ಕೊಳ್ಳುವುದು ಅಗತ್ಯ

ಇಡೀ ಮದ್ರಾಸು ಸಂಸ್ಥಾನದಲ್ಲಿ ... ಸಾಲೆಗಳು ೧೯೧೮ ... ರಲ್ಲಿ ಇದ್ದವು ಮತ್ತು ಅವುಗಳಲ್ಲಿ ... ಮಕ್ಕಳ ಕಲಿಯುತಿದ್ದವೆಂದು ವರದಿಯಿಂದ ಗೊತ್ತಾಗುತ್ತಿದೆ ಆದರೆ ಇಷ್ಟು ಮಕ್ಕಳು ಕಲಿಯುತ್ತಾರೆ ಎಂಬದರಿಂದ ವಿದ್ಯಾ ಪ್ರಚಾರವು ಎಷ್ಟರ ಮಟ್ಟಿಗೆ ಫಲಿತಕ್ಕೆ ಬಂದಿವೆ ಎಂದು ತಿಳಿಯಬೇಕಾದರೆ ಮಕ್ಕಳು ಮಾಡಿಕೆಯಾಗಿ ಎಷ್ಟು ವರ್ಷ ಶಿಕ್ಷಣವನ್ನು ಹೊಂದುತ್ತಾರೆ ಎಂಬದನ್ನು ನೋಡಿಕೊಳ್ಳಬೇಕು ಅದನ್ನು ಈ ಕೆಳಗಿನ ಪಟ್ಟಿಯಿಂದ ಅವಲೋಕನ ಮಾಡಬಹುದು

ವರ್ಷ	ಮಕ್ಕಳ ಸಂಖ್ಯೆ
೧ನೆ ವರ್ಷ	೬,೨೪,೯೧೨
೨ನೆ „	೩,೫೬,೮೩೬
೩ನೆ „	೧೯೦,೭೨೦
೪ನೆ „	೧೫೫,೬೦೯
೫ನೆ „	೬೧,೭೮೫
೬ನೆ „	೨೭,೩೩೦
೭ನೆ „	೨೦,೩೬೮
೮ನೆ „	೧೭,೬೩೩
	೧೩೫೯,೧೮೨

ಮೇಲಿನ ಸಂಖ್ಯೆಯಲ್ಲಿ ಎಲಿಮೆಂಟರಿ ಸಾಲೆಯ ೮ನೆ ದರ್ಜೆ ಮತ್ತು ಸೆಕೆಂಡರಿ ಸಾಲೆಯ III ಫೋರ್ಮ ವರೆಗಿನ ಸಂಖ್ಯೆಗಳು ಕೂಡಿಸಿದ್ದೇವೆ ಇದರಿಂದ ವರ್ಷಂಪ್ರತಿಯ ಸಂಖ್ಯಾ ವ್ಯತ್ಯಾಸ ಎಷ್ಟು ಎಂಬದು ವಿದಿತವಾಗ ವುದು

ಪುತ್ತೂರು ಸೆಕೆಂಡರಿ ಶಾಲೆಯ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಭವನ ಫಂಡು.

ಇದೇ ಕಳೆದ ಡಿಸೆಂಬರ ತಾರೀಕು ... ಶನಿವಾರ ಇಡೀ ಹಿಂದುಸ್ಥಾನದಲ್ಲಿ ಆಚರಿಸಲ್ಪಟ್ಟ ಶಾಂತಿಉತ್ಸವದ ಸಂದರ್ಭವನ್ನು ಎತ್ತಿಕೊಂಡು, ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಗೋಪುರದಲ್ಲಿ ಪುತ್ತೂರು ಸೆಕೆಂಡರಿ ಶಾಲೆಯಲ್ಲಿ ಕಲಿಯುವ ದ್ರಾವಿಡಬ್ರಾಹ್ಮಣ ವಿದ್ಯಾರ್ಥಿಗಳಿಗೆ ಒಂದು ವಿದ್ಯಾರ್ಥಿಭವನವನ್ನು ಕಟ್ಟಿಸುವುದಕ್ಕೆ ... ದ್ರಾವಿಡ ಬ್ರಾಹ್ಮಣರ ಒಂದು ಮಹಾಸಭೆ ...

... ರಾ| ... ಮಂಗೇಶರಾಯರೂ ತಮ್ಮ ತಮ್ಮ ದ್ರಾವಿಡಬ್ರಾಹ್ಮಣ ಶಕ್ತ್ಯಾನುಸಾರದಿಂದ ... ಹಾಕಿಸುತ್ತಿರುವರು ಈಗಿನ ಕಾಲದಲ್ಲಿ ಹೀಗೆ ತಮ್ಮ ಸಮಯವನ್ನು ... ಉಪಯೋಗಿಸುವ ಇವರನ್ನು ಎಷ್ಟು ಸ್ತುತಿಸಿದರೂ ಸಾಲದು.

ಭವನಕ್ಕೆ ಈಗ ಸಣ್ಣ ರೂಪಾಯಿ ೫೦೦೦—೦—೦ ಆದರೂ ಬೇಕಾಗಿದೆ. ಇಂತಿಗೆ ಪಟ್ಟಿಯಲ್ಲಿ ... ೧೧೦೦೦—೦—೦ ವಸೂಲುಮಾಡಿಸುತ್ತಾ ಬರುತ್ತಿದೆ ಎಂಬುದನ್ನು ತಿಳಿಸಲು ಸಂತೋಷಿಸುತ್ತೇನೆ. ವಿದ್ಯಾರ್ಥಿಗಳ ಹಿತಕ್ಕಾಗಿ ... ವಿದ್ಧರಾಗಿ ಪಂಕ್ತಿಯನ್ನೆತ್ತಲು ಹೊರಟಿರುವ ಅಧ್ಯಕ್ಷರಿಗೂ, ಕಾರ್ಯದರ್ಶಿಗಳಿಗೂ, ಎಲ್ಲಾ ಕಮ್ಮಿಟಿ ಮೆಂಬರರಿಗೂ ಈ ತಾಲೂಕಿನ ದ್ರಾವಿಡಬ್ರಾಹ್ಮಣ ಮಹನೀಯರುಗಳು ತಮ್ಮ ಶಕ್ತ್ಯನುಸಾರ ಸಹಾಯವನ್ನು ಮಾಡುವರೆಂದು ನಂಬುತ್ತೇನೆ

ಇಂತಿ ಹೊಟೆಲಿನಲ್ಲಿದ್ದು ಕಷ್ಟಪಡುವ ವಿದ್ಯಾರ್ಥಿಗಳ ಹಿತಚಿಂತಕ.

ಚಪ್ಪರ ಬದನೆಯ ವ್ಯವಸಾಯ.

'ಟೊಮೆ ಟೊ' ಎಂಬ ಕರೆಯಲ್ಪಡುವ ಚಪ್ಪರ ಬದನೆ ಕಾಯಿಗಳನ್ನು ಮಂಗಳೂರು ಟ್ರೈನಿಂಗ ಶಾಲಾ ತೋಟದಲ್ಲಿಯೂ, ಇತರ ಎಷ್ಟೋ ಶಾಲೆಗಳಲ್ಲಿಯೂ ಕಳೆದ ವರ್ಷ ಬೆಳೆಯಿಸಿದುದರಿಂದ ಅದರ ಫಲವು ಉತ್ತಮವಾದುದೆಂದು ಅನುಭವಕ್ಕೆ ಬಂದ ಕಾರಣ, ಹಾಗೆ ಆ ಕಾಯಿಗಳನ್ನು ವ್ಯವಸಾಯಮಾಡಲು ಎಣಿಸಿರುವವರಿಗೆ ಕೆಲವು ಸೂಚನೆಗಳನ್ನು ಇಲ್ಲಿ ಬರೆದಿರುತ್ತೇವೆ ಇದಿಗೆ, ಈ ವ್ಯವಸಾಯವು ವಿಶೇಷತಃ ರೂಢಿಗೆ ಬರದಿದೆ ತೋಟಗಾರರಂತೂ ಇದನು ಬಲು ಚೆನ್ನಾಗಿ ಬೆಳೆಯುತ್ತಾರೆ ಇದರಿಂದುಂಟಾಗುವ ಉತ್ಪತ್ತಿಯಾದರೂ ಕಡಿಮೆಯಾದುದಲ್ಲ ಬೀಜಗಳನ್ನು ಪೆಟ್ಟಿಗೆಗಳಲ್ಲಿ ಮೊಳೆಯಿಸಿ, ಸುಮಾರು ೪ ಇಂಚು ಎತ್ತರವಾದೊಡನೆ, ಬೇರೆ ಬೇರೆಯಾಗಿ ಒಂದೊಂದು ಮೊಳದ ದೂರಕ್ಕೆ ನೆಡುವುದು ಅವನ್ನು ಎರಡು ಬಾರಿ ನೆಡುವುದು ಉತ್ತಮವೆಂದು ಕೆಲವು ತೋಟಗಾರರ ಅಭಿಪ್ರಾಯವಿದೆ ಇದಕ್ಕೆ ತಕ್ಕಷ್ಟು ಅನುಕೂಲವಾದ ಸಮಯ ದೊರೆಯುವುದೊ ಎಂಬ ಸಂದೇಹವಿದೆ ಪರಂತು, ಹಾಗೆ ಮಾಡಿದರೆ ಬೆಳೆ ಸೊಗಸಾಗ ವುದು

ಗಿಡವನ್ನು ಆರು ಅಡಿ ಎತ್ತರದ ಸಲಿಕೆಗೆ ಕಟ್ಟಬೇಕು ಒಂದೊಂದು ಅಡಿಗೆ ಒಂದೊಂದು ಕಟ್ಟನ್ನು ಹಾಕಿದರೆ ಉತ್ತಮ. ಗಿಡಕ್ಕೆ ಬರುವ ಗೆಲ್ಲುಗಳು, ಇತರ ಸಂದು ಮೊಳಕೆಗಳು ಮುಂತಾದವನ್ನು ತೇಲಬೇಕು ಕ್ರಮವಾಗಿ ಒಂದನ್ನು ಬಿಟ್ಟು ಇನ್ನೊಂದು ಎಲೆ ಸಂದಿನೊಳಗೆ ಒಂದೊಂದು ಹೂಬಿಡುವುದು; ಅಲ್ಲಿ ೬ ಕಾ ಕಾಯಿ ಗಳೂ ಬೆಳೆವುವು 'ಪೊಂಡೆರೋಸಾ' ಎನ್ನುವ ಮಿಶ್ರಜಾತಿ ಜಾತಿಯು ಬದನೆ ಕ ... ರೂಢಿಯಲ್ಲಿದೆ

ಒಂದೊಂದು ಬದನೆ ಗಿಡಕ್ಕೆ ಅರ್ಧ ಔನ್ಸು ನೈಟ್ರೇಟ್ ಆಫ್ ಸೋಡಾ ಎನ್ನುವ ಗೊಬ್ಬರವನ್ನು ಕೊಟ್ಟರೆ ಗಿಡಗಳು ಹೊಸ ಬೇರು ಬಿಟ್ಟಾಗಲೆ ಉಪಯೋಗಿಸಬೇಕು ಮುಂದೆ, ಕಾಯಿ ಗಳು ತೋರಿದಾಗ, ಎರಡು ಗೆಲನ್ ನೀರಿನಲ್ಲಿ ಎರಡು ಔನ್ಸ್ ಇದೆ ಗೊಬ್ಬರವನ್ನು ಬೆರಸಿ, ಪಕ್ಷಕ್ಕೊಮ್ಮೆ ಗಿಡಗಳ ಬುಡದಲ್ಲಿ ಸುರಿದರೆ (ಮತ್ತು ಮಧ್ಯದ ವಾರಗಳಲ್ಲಿ ಎರಡು ಗೆಲನಿಗೆ ಒಂದೇ ಔನ್ಸ್‌ನಂತೆ ಬೆರಸಿ ಸುರಿದರೆ) ಉತ್ಕೃಷ್ಟವಾದ ಫಲ ಬೆಳೆವುದು ಎಂದು ಅನೇಕರ ಅನುಭವದಿಂದ ತಿಳಿದು ಬಂದಿದೆ

ಪತ್ರವ್ಯವಹಾರ

ಪತ್ರಕರ್ತರೇ

ಮಂಜೇಶ್ವರ ಶ್ರೀ ಮದನಂತೇಶ್ವರ ... ದೇವಳ ಜಾತ್ರೆಯು ತಾ ೧೭ಕ್ಕೆ ಮುಗಿದಿತ ಆ ಜಾತ್ರೆಯು ಒಂದು ... ಗಲಾಟೆ ಇಲ್ಲದೆ ಆಗಿಯ ಇಲ್ಲ — ಕಾರಣ ಏನೆಂಬುದು ಇತ್ತೀಚೆಗೆ ಬಂದ ಅಧಿಕಾರಿಗೆ ಮಾತ್ರ ಗೊತ್ತು — ಇದರಿಂದ ನಮ್ಮ ಊರಿನ ಮಹಾನುಭಾವರಿಗೆ ಸ್ಥಳ ಬಾಡಿಗೆಯೋ ಏನೋ ಸಂಪಾದನೆ ಉಂಟು ಮೇಲ್ ಉದ್ಯೋಗಸ್ಥರು ಈ ಬಾಬತ್ತಲ್ಲಿ ಯಾಕೆ ತಾತ್ಪರ್ಯ ಕೊಡುವದಿಲ್ಲ

ಇಲ್ಲಿಯ ಎಲಿಮೆಂಟರಿ ಶಾಲೆಯನ್ನು ಹೊಸ ಅಸಿಸ್ಟೆಂಟ ಇನ್ಸ್‌ಪೆಕ್ಟರವರು ಸಂದರ್ಶಿಸಿ ಸಂತೋಷಪಟ್ಟರು ಇಲ್ಲಿ ಬೋರ್ಡ ಶಾಲಾ ಉಪಾಧ್ಯಾಯ ವಾದ ವಿಟ್ಠಲ ಕಾಸಭಾಗರೂ ಬಂದಿದ್ದರು ಇವರು ಆಯುರ್ವೇದ ವೈದ್ಯರಾಗಿದು ಇವರು ಔಷಧ ಕೊಡುವ ಕೆಲವರು ಇವರನ್ನು ಸತ್ಕಾರದಿಂದ ಆದರಿಸಿದರು. ಇವರ ಔಷಧಗಳ ಬಹಳ ಪ್ರಚಾರವಲ್ಲಿವೆ. ಇವರು ಉಪಯೋಗಿಸುವ ಔಷಧ ಬೇರೆ ಭಸ್ಮ ಮತ್ತು ಬೇರೆ ಮಾತ್ರೆಗಳಂತೆ, ಇದೇ ಸಮಯ ಒಬ್ಬನಿಗೆ ಶುರು ಆದ ಜೋರಿನ ಹೊಟ್ಟೆನೋವು, ಒಂದೇ ಮಾತ್ರೆಯಿಂದ ಥಕ್ಕನೆ ತೀರಿತು ಎಂಥಾ ಚಮತ್ಕಾರ!

ಬೆಳವಣ್ಣೆನಿಂದ ಈ ಊರಿಗಾಗಿ ಹೋಗುವ ಹೊಸ ಮಾರ್ಗ ಪೂರಾ ಆದ ಕೂಡಲೆ ಈ ಊರು ಸಾಧಾರಣ ಪೇಟೆಯಾಗುವದು ಈಗ ತಮ ಪತ್ರ ಇಲ್ಲಿ ಮುಟ್ಟಲಿಕ್ಕೆ ೫ ದಿವಸಗಳಾಗುವದರಿಂದ ವರ್ತಮಾನ ಪತ್ರಗಳನ್ನು ಪ್ರತಿಯೊಬ್ಬ ತರಿಸದೆ ಒಬ್ಬರಿಂದ ಪತ್ರಗಳಿಂದ ಓದುತ್ತಾರೆ ಆದ್ದರಿಂದಲೇ ಒಂದು ಬ್ರಾಂಚ್ ಆಫೀಸು ಆಗಬೇಕೆಂದು ಕೆಲವರ ಆಲೋಚನೆ

ಗ್ರಾಮಸ್ಥ.

"ಒಬ್ಬ ಕೊನಿಸ್ಟೆಬಲರ ಸಾಹಸ"

ಅಯ್ಯಾ

ನವ ... ಬೆಳ್ತಂಗಡಿ IIನೇ ಕ್ಲಾಸ ಮೇಜಿಸ್ಟ್ರೇಟ ಕೋರ್ಟ C C ನಂಬ ... ನೇ ನೊಕದ್ದಮೆಯ ೩ ಜನ ಮುದ್ದೆಯಾಲಿನನ್ನು ಉಪಟ್ಟಿಗ್ರಾಮದ ಕೆಲವು ಸದ್‌ಗೃಹಸ್ಥರು ಸುಮಾರು ೬ ತಿಂಗಳ ಅಂತ್ಯಾಕು ಎದುರಿಗೆ ಬಾರದಂತೆ ತಮ್ಮ ಆಶ್ರಯದಲ್ಲಿಟ್ಟುಕೊಂಡು ಹಗಲೂ ರಾತ್ರಿ ಪ್ರತೀದಿನವೂ ... ಬರುಗಾಡಿಸುವ ... ನೋಡುವವರನ್ನು ಬೆಳ್ತಂಗಡಿ ಸ್ಟೇಷನ್ ಪೋಲೀಸರವರು ಕಂಡರೂ ಅವರು ತಮ್ಮ ಭೀತಿಗೆ ವಾರಂಟ ಮೇರೆಗೆ ಹಿಡಿಯುವುದೇ ಕಷ್ಟವಾಗುತ್ತಿದ್ದ ಸಂಗತಿ ನಂಬ್ರ ... ಕೊನಿಸ್ಟೆಬಲ್ ಅಮಾರ ಹುಸೇನರು ತಿಳಿದು (ಮತ್ತು ೩ ಜನ ಕೊನಿಸ್ಟೆಬಲರ ಸಮೇತ) ತನ್ನ ಜೀವದ ಆಶೆಯನ್ನು ಸಹಾ ಬಿಟ್ಟು ಉಪಟ್ಟಿಗ್ರಾಮದಲ್ಲಿರುವ ಅಬ್ದುಲ್ ಖಾದ್ರಿ ಎಂಬವನನ್ನು ಕಳದ ಡಿಸಂಬರ ತಾ. ... ವಾರಂಟ ಮೇರೆಗೆ ಹಿಡಿದ ಸಂಗತಿ ಬಹಳ ಸಾಹಸದ್ದಾಗಿರುತ್ತದೆ

ಆದ್ದರಿಂದ ಸದರಿ ಕೊನಿಸ್ಟೆಬಲರಿಗೆ, ನಾನು ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರ ಮುಖಾಂತರ ೨ ರೂಪಾಯಿಗಳು ಇನಾಮಾಗಿ ಎರವಾಗಿದ್ದಲ್ಲದೇ ಅವರ ಧೈರ್ಯ ಮ ಸಾಹಸ ಕೂಡಾ ಸರ್ವಜನರ ತಿಳುವಳಿಕೆ ಬಗ್ಗೆ ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ

ಸಹಕಾರ.

ಲೇಬರ್ ಯೂನಿಯನ್ನುಗಳು.

ನಮ್ಮ ಹಳ್ಳಿಯಲ್ಲಿ ಯಾ ಪಟ್ಟಣ ಗಟ್ಟದ ಮೇಲೆ ತೋಟಗಳಿಗೆ ಅವರು ಕಂಡಕಂಡಹಾಗೆ ಹೋಗುತ್ತಾರೆ. ಅಂಥವರಲ್ಲಿ ಹಲವರು ಸ್ವಂತ ಭೂಮಿ ಇದ್ದೂ ಉಂಟು. ಆಳದುಡಿದವರು ಅಲ್ಲಿಗೆ ಹೋಗಿ ಗಳಿಸುವಷ್ಟು ಸಂಪಾದನೆ ಸಾಮಾನ್ಯವಲ್ಲ. ಇಷ್ಟು ಹೇಳುವುದು ನ್ಯಾಯವಾದರೂ, ಘಟ್ಟದ ಮೇಲೆ ಹೋಗಿ ಈ ಜನರು ಕೆಲಸಮಾಡಿ ಅಲ್ಲಿಯ ಕೃಷಿಯ ಕೆಲಸ ಪ್ರಾರಂಭವಾದಾಗ ಮಾತ್ರ ಬರುತ್ತಾರೆ. ಅಂತವರಿಗೆ ಇಲ್ಲಿಂದ ಹೊರಡಬೇಕಾದರೆ ಹಣ ಮುಂಗಡವಾಗಿ ಸ್ವಲ್ಪ ಸಿಗುತ್ತದೆ. ಅದರಿಂದ ಅವರು ತಮ್ಮ ಹಳೇ ಸಾಲ ತೀರಿಸುತ್ತಾರೆ, ಅಥವಾ ತಾವು ಘಟ್ಟಕ್ಕೆ ಹೋದಾಗ ಇಲ್ಲಿಯ ಕುಟುಂಬದ ಖರ್ಚಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಇಡುತ್ತಾರೆ. ಕೆಲವು ಜನರನ್ನು ಹೊಸ ಊರಿಗೆ ಹೋಗಲಿಕ್ಕೆ ಅಗತ್ಯವಾದ ಕಾಣುವ ತಿಳುವಳಿಕೆಗಳ ಬಗ್ಗೆ [illegible]ತ್ತಾರೆ.

ಇವರಿಗೆ 'ಎಡ್ವಾನ್ಸ್' ಕೊಟ್ಟು ಜನರು ಅಂದರೆ ಕೂಲಿಮೇಸ್ತ್ರಿಗಳು ಇವರಿಂದ ಗ್ಯಾರಂಟಿದಾರರನ್ನು ಈ ಮುಂಗಡಕ್ಕೋಸ್ಕರ ಬರೆಸಿಕೊಳ್ಳುತ್ತಾರೆ. ಈ ಕಂಟ್ರಾಕ್ಟ್ ನಾಯಿದೆ ವರೆಗೆ ಅಲ್ಲಿ ಕೆಲಸಮಾಡಿ ಅಲ್ಲಿ ಗಳಿಸಿದ ಹಣವು ಇಲ್ಲಿಗೆ ಬರುವಷ್ಟರಲ್ಲಿ ದಾರಿಯಲ್ಲೆ ಖರ್ಚಾಗುತ್ತದೆ. ಅನೇಕ ಸಲ ಹಿಂದಿನ ಸಾಲ, ಅಥವಾ ಈ ಕರಾರಿನ ಸಾಲ ವಸೂಲಾದಕ್ಕೋಸ್ಕರ ವಾರಂಟುಗಳು ಇವರನ್ನು ಕಾಯುತ್ತಿವೆ. ಹೀಗೆ ಈ ಬಡಜನರು ಇಂಥ ಶ್ರಮೆಯಿಂದ ವಿಶೇಷ ಪ್ರಯೋಜನ ಹೊಂದಿದಂತೆ ತೋರುವುದಿಲ್ಲ. ಇಂಥ ಜನರು ಹೀಗೆ ತಮ್ಮ ಊರುಮನೆಯನ್ನು ಬಿಟ್ಟು ದ್ರವ್ಯಾಪೇಕ್ಷೆಯಿಂದ ಬೇರೆಕಡೆಗೆ ಹೋಗಿ ಬಳಲುವದಕ್ಕಿಂತ ಇಲ್ಲಿಯೇ ಅವರಿಗೆ ಸಾರ್ವದಾ ದುಡಿತಕ್ಕೆ ಅನುಕೂಲ ಮಾಡಿಕೊಡುವುದು ಒಳ್ಳೇಯದು. ಇದಕ್ಕೆ ಸಹಕಾರಿ ಸಂಘಗಳೆ ಉಪಕಾರಿಯಾಗಬೇಕು.

ಈ ಜನರು ತಮ್ಮ ಹಳೇ ಸಾಲವನ್ನು ತೀರ್ಸುವದಕ್ಕೂ ಜೀವನೋಪಾಯಕ್ಕೆ ಬೇಕಾದ ಚಿಲ್ಲರೆ ಕೈಗಾರಿಕೆಗಳನ್ನು ಕೈಕೊಳ್ಳಲಿಕ್ಕೂ ಸಹಕಾರಿ ಸಂಘವು ಸಹಾಯಕವಾಗಬಹುದು. ಎರಡು ವರ್ಷಗಳ ಹಿಂದೆ ಪುತ್ತೂರು ಪಂಚಮರ ಸಂಘವು ತಾಲೂಕುಬೋರ್ಡಿನವರ ಕೈಕೆಳಗಿನ ಪುತ್ತೂರ ಬೇಟೆಯ ರಸ್ತೆ ದುರುಸ್ತಿಯನ್ನು ವಹಿಸಿಕೊಂಡಿತು. ಇತರ ಕೂಲಿಕೆಲಸ ಸಿಗದ ಮಳೆಗಾಲದಲ್ಲಿ ಈ ಕೆಲಸವನ್ನು ಆ ಮೆಂಬರರು ಮಾಡಿದ್ದರಿಂದ ಅವರ ಉದರಭರಣದ ಕೆಲಸವು ತಕ್ಕಮಟ್ಟಿಗೆ ನೆರವೇರಿತು. ಈ ಕ್ರಮದಿಂದ ಧೈರ್ಯಗೊಂಡು ಇಂಥ ಕೂಲಿಜನರನ್ನು ಒಳಕೊಂಡ ಹಳ್ಳಿ ಸಂಘಗಳು ಪುತ್ತೂರಿಂದ ಕಾವು ವರೆಗೆ ರಸ್ತೆಯ ಕಂಟ್ರಾಕ್ಟುಗಳನ್ನು ವಹಿಸಿಕೊಂಡಿವೆ. ಇದೇ ರೀತಿಯಲ್ಲಿ ಬೇರೆ ಕಡೆಗಳಲ್ಲಿಯೂ ಹಳ್ಳಿಸಂಘಗಳು ತಮ್ಮ ಮೆಂಬರರಿಗೆ ಮಳೆಗಾಲದಲ್ಲಿ ಬೇರೆ ಕೂಲಿಕೆಲಸ ಸಿಕ್ಕದಾಗ ಇಂಥ ಕೆಲಸವನ್ನು ಒದಗಿಸಬಹುದು. ಇನ್ನು ಕಲ್ಲುಕಡಿಯುವುದು, ಬಡಗಿಕೆಲಸ, ಕುಂಬಾರವೃತ್ತಿ, ಹಗ್ಗ ಹೊಸೆಯುವುದು ಇವುಗಳಲ್ಲಿಯೂ ಹಳ್ಳಿಯಲ್ಲಿ ಜೀವನಮಾಡುತ್ತಿರುವ ಇತರ ಜನರ ವೃತ್ತಿಗಳಲ್ಲಿಯೂ ಈ ಸಹಕಾರಿ ಸಂಘಗಳ ಮೂಲಕ ಸುಧಾರಣೆಯಾಗಲಿಕ್ಕೆ ಅವಕಾಶವಿದೆ.

ಹಳ್ಳಿ ಸಂಘಗಳು ಮೆಂಬರರಾಗಿರುವ ಮಜೂರರನ್ನು ಒಂದುವೇಳೆ ಘಟ್ಟಗಳ ಮೇಲೆ ಕೆಲಸಕ್ಕೆ ಹಂಗಾಮಿಯಾಗಿ ಕಳುಹಿಸಿದರೂ [illegible]ಗಳನ್ನು ಸಂಘಗಳು ತಾವೇ ಪಡೆದು ಅದರ ವಿನಿಯೋಗವು ಆಯಾ ಮೆಂಬರರ ಕುಟುಂಬಕ್ಕೆ ಸಿಗುವಂತೆ ಮಾಡಿದರೆ, ಈ ಬಡ ಕುಟುಂಬಗಳ ಯಜಮಾನರು ಶ್ರಮೆಯ ನಿಮಿತ್ತ ಪರವೂರಿಗೆ ಹೋದಾಗ ತಮ್ಮ ಕುಟುಂಬ ಸಂರಕ್ಷಣೆಯ ಚಿಂತೆಯು ಅವರಿಗೆ ಕಡಿಮೆಯಾಗುವುದು. ಅವರು ದುಡಿಯುವ ಕಾಲದಲ್ಲಿ ಅಗತ್ಯವಿದ್ದಷ್ಟು ಅಲ್ಲಿ ಪಡೆದು ತೋಟದ ಮಾಲಿಕರ ಬಳಿಯಲ್ಲಿ ಉಳಿಯುವ ಹಣವು ನೇರಾ ಈ ಸಂಘಗಳಿಗೆ ಸಿಗುವಂತೆ ಮಾಡಿದರೆ ಅಲ್ಲಿ ತೀವ್ರವಾಗಿಯೂ ಉಳಿಯುವುದು. ಆಗ ಇಂಥ ಸಂಘಗಳು ಈ ಮೆಂಬರರ ನಡತೆಗಳಿಗೂ ಜವಾಬ್ದಾರರಾಗಿ ಅವರ ಒಳ್ಳೆತನಕ್ಕೆ [illegible] ತೋಟದ ಮಾಲಿಕರಿಗೂ ಮಜೂರರಿಗೂ ಮಧ್ಯಸ್ಥರಾಗಿ ಪಕ್ಷಪಾತವಿಲ್ಲದ ಉಪಕಾರಿಗಳೂ ಆಗಲಾರರು. ತೋಟದ ಮಾಲಿಕರಿಗೆ ವಿಶ್ವಾಸವುಳ್ಳ ಜನ ಮಜೂರರು ಸಿಗುವಂತೆ ಆಗುವುದು. ಮಜೂರರು ಮೇಸ್ತ್ರಿಗಳ ಬಳಿಗೆ ಸಿಗುವ ಬದಲಾಗಿ ನೆಟ್ಟಗೆ ಈ ಸಂಘಗಳ ಮೂಲಕವೇ ತೋಟಗಳ ಮಾಲಿಕರೊಡನೆ ಪತ್ರವ್ಯವಹಾರ ನಡೆಸುವುದರಿಂದ ಈ ಬಡ ಮಜೂರರು ದುಡಿದ ಹಣವು ಅನಾವಶ್ಯಕವಾಗದೆ ಅವರ ಕುಟುಂಬದ ಪ್ರಯೋಜನಾರ್ಥವಾಗಿಯೆ ಸಿಗುವುದು.

ಹಳ್ಳಿಯ ಸಂಘಗಳು ಒಂದಾಗಿ ತಮ್ಮ ಮಜೂರ ಮೆಂಬರರನ್ನು ಎಲ್ಲಿ ಯಾವದೂ ಕೆಲಸಕ್ಕೆ ಒದಗಿಸಿಕೊಡುವವಷ್ಟರಂತೆ ಹಲವು ಸಂಘಗಳು ಕೂಡಿ ಒಂದು 'ಲೇಬರ್ ಯೂನಿಯನ್' ಮಾಡಿ ತನ್ಮೂಲಕ ಈ ಕೂಲಿಯಾಳುಗಳನ್ನು ಯೋಗ್ಯರಾದ ಮಾಲಿಕರ ಬಳಿಗೆ ಕೆಲಸಕ್ಕೆ ಕಳುಹುವದಕ್ಕಾಗಲಿ ಅಥವಾ ಬೇರೆ ವಿಧದ ಚಿಲ್ಲರೆ ಕಂಟ್ರಾಕ್ಟುಗಳನ್ನು ವಹಿಸಿಕೊಳ್ಳುವುದಕ್ಕಾಗಲಿ ಏರ್ಪಾಡು ಮಾಡಿದರೆ ಒಳ್ಳೇದು. ಇಂಥದ್ದೇ ಒಂದು 'ಲೇಬರ್ ಯೂನಿಯನ್' ಈಗ ಪುತ್ತೂರು ತಾಲೂಕಿಗೆ ಏರ್ಪಡಾಗಿದೆ, ಬೇರೆ ತಾಲೂಕುಗಳೂ ಈ ವಿಷಯದಲ್ಲಿ ಗಮನಕೊಡುವವೆಂದು ನಂಬುತ್ತೇವೆ.

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಪರಿಷತ್ತು.

ಇದೇ ತಿಂಗಳ ತಾರೀಕಿಗೆ ಮಂಗಳೂರಿನಲ್ಲಿ ಎಂಬಲ್ಲಿ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಪರಿಷತ್ತಿನ ಅಧಿವೇಶನವು ಜರಗಿತು. ಇದಕ್ಕೆ ಮದ್ರಾಸಿನ 'ಸ್ವದೇಶಮಿತ್ರನ್' ಎಂಬ ತಮಿಳು ದೈನಿಕ ಪತ್ರಿಕೆಯ ಸಂಪಾದಕರಾದ ಮಿ॥ ಎ. ರಂಗಸ್ವಾಮಿ ಅಯ್ಯಂಗಾರರು ಅಧ್ಯಕ್ಷರಾಗಿದ್ದರು. ಇವರ ಭಾಷಣದ ಸಾರಾಂಶವನ್ನು ಸಾಧ್ಯವಿದ್ದರೆ ಮುಂದಿನ ಸಂಚಿಕೆಯಲ್ಲಿ ಕೊಡುವೆವು. ಆತಿಕೆ ತಾರೀಕಿಗೆ ಮುಂದರಿಸಿದ ಈ ಸಭೆಯಲ್ಲಿ ಈ ಕೆಳಗಿನ ಠರಾವುಗಳು ಮಂಜೂರಾದವು. (೧) ಕಡ್ಡಾಯದ ಮತ್ತು ಮಾಫಿ ವಿದ್ಯಾಭ್ಯಾಸವನ್ನು ಬೇಗನೆ ಜಾರಿಗೆ ತರಬೇಕು. (೨) ಸ್ತ್ರೀಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕೆ ವಿಶೇಷ ಸಗಾಕೊಟ್ಟು ಸಾಧ್ಯವಿದ್ದಮಟ್ಟಿಗೆ ಬಾಲಿಕಾ ಪಾಠಶಾಲೆಗಳಲ್ಲಿ ಉಪಾಧ್ಯಾಯಿನಿಯರನ್ನೆ ನೇಮಿಸಬೇಕು. (೩) ಪ್ರಥಮ ವರ್ಷದ ದರ್ಜೆಯಲ್ಲಿ ಜನವರಿ ಮತ್ತು ಜುಲೈ ತಿಂಗಳಲ್ಲಿ ಮಾತ್ರ ದಾಖಲು ಮಾಡಬೇಕಲ್ಲದೆ ವರ್ಷದ ಉಳಿದ ಕಾಲದಲ್ಲಿ ದಾಖಲುಮಾಡಬಹುದೆಂಬ ಈಗಿನ ಕ್ರಮವನ್ನು ರದ್ದುಪಡಿಸಬೇಕು. (೪) ಹಳೆ 'ಸ್ಕೂಲ ಲೀವಿಂಗ ಸರ್ಟಿಫಿಕೇಟ್' ಕ್ರಮವನ್ನು ಪ್ರಾಥಮಿಕ ಶಾಲೆಗಳಲ್ಲಿ ಪುನಃ ಜಾರಿಗೆ ತರುವುದಲ್ಲದೆ ಹಿಂದಿನಂತೆ ಪ್ರೈಮರಿ ಪರೀಕ್ಷೆಯನ್ನು ಸರಕಾರ ಪರೀಕ್ಷೆಯಾಗಿ ಇರಗೊಡಿಸಬೇಕು. (೫) ಚಿಲ್ಲರೆ ಸಾಧಿಲವಾರು ಇದರೊಂದಿಗೆ ಕಾಗದಪೆನ್ಸಿಲು, ಮಸಿ, ಟಪ್ಪಾಲುಟಿಕೇಟು ಮುಂತಾದ್ದನ್ನು ಒದಗಿಸಿಕೊಡಬೇಕು. ಉಪಾಧ್ಯಾಯರ ಕೃತಿಗಳಿಗೆ ವರ್ಷಂಪ್ರತಿ ಗ್ರಾಂಟುಕೊಟ್ಟು ಪ್ರೋತ್ಸಾಹಿಸಬೇಕು. (೬) ಕೆಪಿಟೇಶನ್ ಎಲೋವೆನ್ಸನ್ನು ನಿಲ್ಲಿಸಿಬಿಟ್ಟದ್ದರಿಂದ ಅದಕ್ಕೆ ಬದಲಾಗಿ ತಿಂಗಳಿಗೆ ೬ ರೂಪಾಯಿ ಬೇರೆ ಎಲೋವೆನ್ಸ್ ಕೊಡುವಂತಾಗಬೇಕು. (೭) ಕೆಳಗಿನ ಕ್ಲಾಸುಗಳಲ್ಲಿ ಅಂದರೆ ಮೇಲಿನ ದರ್ಜೆಗಳಲ್ಲಿ ತಿಂಗಳು ಮತ್ತು ಒಂದು ಪ್ರಾಥಮಿಕ ಶಾಲೆಯ ಕ್ಲಾಸುಗಳಲ್ಲಿ ಮಕ್ಕಳನ್ನು ಇಡಗೊಡಿಸಬಾರದೆಂದು ಕಟ್ಟುಮಾಡಬೇಕು. (೮) ಒಂದು ತಾಲೂಕುಬೋರ್ಡಿನಿಂದ ಇನ್ನೊಂದು ಬೋರ್ಡಿಗೆ ವರ್ಗಾಯಿಸಲ್ಪಟ್ಟವರಿಗೆ ಅವರ ಪ್ರಾವಿಡೆಂಟ ಫಂಡಿನ ಠೇವಣಾತಿಗಳನ್ನು ವರ್ಗಾಯಿಸಲಿಕ್ಕೆ ಅನುಕೂಲತೆ ಇರಬೇಕು. ತತ್ಸ ಹಣವನ್ನು ೫ ವರ್ಷದ ನಂತರ ವಾಪಸು ಪಡಕೊಳ್ಳುವದಾದರೆ ದಾಮೂಶಾಯಿಯಿಂದ ಬೋನಸು ಸಮೇತ ಕೊಡಿಸುವಂತೆ ಏರ್ಪಾಡು ಇರಬೇಕು. (೯) ಪ್ರಾಥಮಿಕ ಶಾಲೆಗಳ ಉಪಾಧ್ಯಾಯರು ಮುಂತಾದವರ ಸಂಬಳಕ್ಕೆ ಹೋಗುವುದಾದರೆ ಅವರು ವೇತನದ ಸ್ಥಿರತೆಯಾಗಿ ಪಾಠಶಾಲೆಗಳ ಸಹಾಯಕ್ಕೆ [illegible] ಹೊಂದಬೇಕು. (೧೦) ಎಲಿಮೆಂಟರಿ ಲೋವರ್ ಗ್ರೇಡಿನವರಿಗೆ ೩೦ರಿಂದ ವರ್ಷಕ್ಕೆ ೩ ರೂಪಾಯಿ ಬಡ್ತಿ ಕೊಟ್ಟು, ರೂ. ೪೦ರ ವರೆಗೂ, ಹಾಯರ್ ಗ್ರೇಡಿನವರಿಗೆ ೪೦ರಿಂದ ಇದೇ ರೀತಿ ೭೦ರ ವರೆಗೂ ಸೆಕೆಂಡರಿ ಗ್ರೇಡಿನವರಿಗೆ ೫೦ರಿಂದ ೭೦ರ [illegible] ಬಡ್ತಿಯ ಏರ್ಪಾಡು ಇರಬೇಕು. (೧೧) ಪ್ರಾಥಮಿಕ ಶಾಲೆಗಳಲ್ಲಿ ಬೇರೆ [illegible] ಗ್ರೇಡಿನ ಇತರರುಗಳನ್ನು ಇರುವ ಬದಲಾಗಿ ಮೇಲಿನಂತೆ ನ್ಯಾಯವಾದ ಸಂಬಳಗಳನ್ನಿಟ್ಟು ಅವರ ಪೈಕಿ ಹೆಡ್ ಮಾಸ್ತರರಾದವರಿಗೆ ಎಲಿಮೆಂಟರಿ ಲೋವರ್ ಗ್ರೇಡಿನವರಾದರೆ ರೂ. ೫, ಹಾಯರ್ ಗ್ರೇಡಿನವರಿಗೆ ರೂ. ೧೦, ಸೆಕೆಂಡರಿ ಗ್ರೇಡಿನವರಿಗೆ ರೂ. ೧೫ ಸ್ಪೆಶಲ್ ಎಲೋವೆನ್ಸ್ ಕೊಡುವಂತೆ ಏರ್ಪಾಡು ಇರಬೇಕು. (೧೨) ಟೀಚರ್ಸ್ ಕಾಲೇಜಿನಲ್ಲಿ ಆಗಾಗ ಆಗುವ ವೆಕೇಶನ್ ಕ್ಲಾಸುಗಳಿಗೆ ಸೇರಲಿಕ್ಕೆ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಎಡೆ ಸಿಗಬೇಕು. (೧೩) ೫ ಮೈಲಿಗಳೊಳಗಿನ ಶಾಲೆಗಳಿಗೊಬ್ಬ ಡ್ರಾಯಿಂಗ್ ಮಾಸ್ತರರು ಡ್ರಿಲ್ ಇನ್ಸ್ಟ್ರಕ್ಟರರು ಸಿಗಬೇಕು. (೧೪) ಸೆಕೆಂಡರಿ ಗ್ರೇಡಿನವರಿಗೆ ೨ ವರ್ಷಗಳ ಟ್ರೈನಿಂಗ್ ಅವಧಿಯನ್ನು ಒಂದೇ ವರ್ಷಕ್ಕೆ ತಗ್ಗಿಸಬೇಕು; ಇಲ್ಲವಾದರೆ ಈ ಉಮೇದ್ವಾರರನ್ನು ಹೈಸ್ಕೂಲುಗಳ ಹೆಡ್ ಮಾಸ್ತರರ ಕೈಕೆಳಗೆ ಅನುಭವಹೊಂದುವಂತೆ ಇರಗೊಡಿಸಬೇಕು. ಈ ಠರಾವುಗಳನ್ನು ಉದಾರಬುದ್ಧಿಯಿಂದ ಪರ್ಯಾಲೋಚಿಸಲಾಗುವುದು ಎಂದು ಅಲ್ಲಿ ಹಾಜರಿದ್ದ ಬೋರ್ಡ್ ಮೆಂಬರರು ತಾಲೂಕುಬೋರ್ಡಿನ ಪರವಾಗಿ ಉತ್ತರ ದಯಪಾಲಿಸಿದರು.

ನೋಟೀಸು.

ಕಾಸರಗೋಡು ತಾಲೂಕು ಕಳನಾಡು ಗ್ರಾಮದ ಚಂದ್ರಗಿರಿಯಲ್ಲಿ ಇರುವ ಜಮಾತ್ತಪಳ್ಳಿ ಮುಕ್ರಿ ಮೊಯಿದುಂಕುಟ್ಟಿಬ್ಯಾರಿ ಮಗಳು ಮರಿಯಮ್ಮಳು ಈಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ಮಂಜೇಶ್ವರು ತಾಲೂಕು ಉದುಮ ಗ್ರಾಮದ ಮಹಮ್ಮದ ಮ್ಯೊಲಾರ ಮಗ ಹಾಮದ ಬ್ಯಾರಿ ಎಂಬವರಿಗೆ ನನ್ನನ್ನು ಕಾನತು ಮಾಡಿದ ತರುವಾಯ ಅವರು ಬುದ್ಧಿಸ್ವಾಸ್ಥತೆ ಇಲ್ಲದೆ ತಿರುಗಾಡುತ್ತಿದ್ದು ಬುದ್ಧಿಸ್ವಾಸ್ಥತೆಯಾಗುವ ಸಂಭವ ತೋರುವದಿಲ್ಲಾದ ಪ್ರಯುಕ್ತ ಈ ದಾಂಪತ್ಯವನ್ನು ಊರ್ಜಿತವಿರಿಸಲು ನನಗೆ ಮನಸ್ಸಿಲ್ಲದ್ದರಿಂದ ನಾನು ನಮ್ಮ ಜಾತಿ ರಿವಾಜು ವ ಮುಹಮ್ಮದಿ ಶರಾ ಪ್ರಕಾರ ತಾ. ೨೦—೨—೧೯೨೦ಲ್ಲು ಕಡವಕ್ಕಪಳ್ಳಿ ಹಾಮದ ಮ್ಯೊಲಾರ ಸಮಕ್ಷಮ ಈ ಕೆಳಗೆ ವಿವರಿಸಿದ ೨ ಸಾಕ್ಷಿಗಾರರ ಮುಂದಿಟ್ಟು ತಲಾಕು ಹೇಳಿ ಸದರಿ ದಾಂಪತ್ಯವನ್ನು ರದ್ದುಪಡಿಸುತ್ತೇನೆ. ॥ ಈ ಮೂರು ಗೆರೆ ಸದರಿ ಮರಿಯಮ್ಮಳ ರುಜು. ಈ ಬಗ್ಗೆ ಸಾಕ್ಷಿಗಳು......... ಈ ಅದಪಿ ಬರಹ ಮಹಮ್ಮದ ಮ್ಯೊಲಾರ ಮಗ ಕಳನಾಡು ಗ್ರಾಮದಲ್ಲಿ ಇರುವ ಹಾಮದ ಮ್ಯೊಲಾರನ ಸಾಕ್ಷಿ. ....ಈ ಒಪ್ಪಬರಹ ಕಳನಾಡು ಗ್ರಾಮದಲ್ಲಿ ಇರುವ ಶಾಕ್ಕಿ ಬ್ಯಾರಿ ಮಗ ಹಸೆಂಕುಟ್ಟಿ ಬ್ಯಾರಿ ಸಾಕ್ಷಿ. ....ಈ ಮಲಯಾಳ ಬರಹ ಕಳನಾಡು ಗ್ರಾಮದಲ್ಲಿ ಇರುವ ಇಸ್ಮಾಯಿಲಾಜ್ಯಾರ ಮಗ ಮಹಮ್ಮದಕುಂಞಿ ಸಾಕ್ಷಿ.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗವದು, ತಲೆಸುತ್ತು, ಕಣ್ಣುಸ್ತರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆ ಗಳಿಗೆ ಆಣೆ ೧೨, ಚಿಕ್ಕ ರೂ. ೫, ದೊಡ್ಡ ಸೀಸೆಗೆ ರೂ. ೧—೮—೦.

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿಗೆ ಕ್ರಯ ೧—೮—೦, ಬಾಟ್ಲಿ ೩ರ ಕ್ರಯ ೪—೦—೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ತಾಂದ, ಶ್ವೇತಪ್ರದರ (ಬಿಳೀ ಸೆರಗು) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨—೦—೦.

ಚಿನ್ ಚಿನ್ ಬಾಮ್. ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ, ತಕ್ಷಣ ಗುಣ. ಬೆಲೆ ಸುಲಭ, ಭರಣಿ ಗಕ್ಕೆ ಆ. ೬, ಗಜಕರ್ಣದ ಮುಲಾಮು ಡಬ್ಬಿಗೆ ಆ. ೪.

ದಂತಶೋಧಿನಿಚೂರ್ಣ. ಇದು ಹಲ್ಲುಗಳನ್ನು ಚೊಕ್ಕಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುರು, ಬಾಯಿಹುಣ್ಣು, ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ಗಕ್ಕೆ ಆಣೆ ೫.

ಲಂಗ್ಸ್‌ಟೋನು. ಕೆಮ್ಮು, ನೆಗಡಿ, ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಮಾಡಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿ ಗಕ್ಕೆ ರೂ. ೨—೮—೦; ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರಿಯಿರಿ.

ವಿಳಾಸ— ಮನೋಲ್ಲಾಸಿನಿ ಕಂಪನಿ, ೪. ಕಂಕನಾಡಿ ಪೋಸ್ಟ್.

Manollasini Co.,
4. Kankanady.

ಶಾಲಿವಾಹನಶಕ ೧೮೪೧ನೆಯ ಸಿದ್ಧಾರ್ಥಿ ಸಂ॥ರದ ದಕ್ಷಿಣಾಯನಂ ಫಾಲ್ಗುಣ ಶು॥ ೯ ಶನಿವಾರದಿಂದ ಫಾಲ್ಗುಣ ಶು॥ ೮ (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಫೆಬ್ರವರಿ ಮಾರ್ಚ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ತಿ.	ಸೂರ್ಯ ಉ.	ಸೂರ್ಯ ಅಸ್ತ.
28	ಶನಿ	೯	೧೮.೪೬	ಮೃಗಶಿರಾ	೩೧.೧೪	೧೬	6·50	6.38
29	ರವಿ	೧೦	೧೩.೫೫	ಆರ್ದ್ರಾ	೨೬.೨೫	೧೭	6·50	6.38
1	ಸೋಮ	೧೧	೭.೫೦	ಪುನರ್ವಸೂ	೨೩.೫	೧೮	6·50	6·38
2	ಕುಜ	೧೨	೨.೪೫	ಪುಷ್ಯಾ	೨೦.೫	೧೯	6·49	6·38
3	ಬುಧ	೧೪	೫೫.೩೧	ಆಶ್ಲೇಷಾ	೧೮.೫	೨೦	6·48	6·39
4	ಗುರು	○	೫೩.೩೨	ಮಘಾ	೧೬.೪೬	೨೧	6·48	6·39
5	ಶುಕ್ರ	೧	೫೨.೨೮	ಹುಬ್ಬಾ	೧೬.೪	೨೨	6·47	6·39

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಫೆಬ್ರವರಿ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದ	Temperature. ಉಷ್ಣ (ಕಾವು) Minimum ಕಡಿಮೆ	Rainfall. ಮಳೆ ದಿನದ ಮಳೆ	Rainfall. ಮಳೆ ಜನವರಿ ೧ರಿಂದ
20	90—8	72—9	—	...
21	94—3	71—9	—	...
22	92—5	72—9	—	...
23	90—8	75—2	—	...
24	91—3	74—4	—	...
25	91—9	73—3	—	—
26	95—7	69—9	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಣ್ಣಿ ಅಕ್ಕಿಮುಡಿ ೧ಕ್ಕೆ	...	9—4	10—0
ಗುಡ್ಡ ,, ,,	...	8—10	9—4
ದಾಳಿ ಮುಡಿ ೧ಕ್ಕೆ	...	7—14	8—14
ಅವ್ವಲ್ ಬೆಳ್ತಿಗೆ ,,	...	11—0	11—4
ಗುಡ್ಡ ಬೆಳ್ತಿಗೆ ,,	...	10—0	10—6
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	15—0	16—0
ಗೋದಿ ಗೋಣಿ ೧ಕ್ಕೆ	...	25—0	25—8
ಹುರುಳಿ ಗೋಣಿ ೧ಕ್ಕೆ	...	15—4	16—2
ಕಡಲೆ ಗೋಣಿ ೧ಕ್ಕೆ	...	22—4	23—0
ತೊಗರಿ ಗೋಣಿ ೧ಕ್ಕೆ	...	20—0	25—0
ತೊಗರಿಬೇಳೆ ಗೋಣಿ ೧ಕ್ಕೆ	...	26—0	32—0
ಉದ್ದು ಗೋಣಿ ೧ಕ್ಕೆ	...	22—8	23—0
ಹೆಸರು ಗೋಣಿ ೧ಕ್ಕೆ	...	22—8	23—0
ಊರು ಬೆಲ್ಲ ಖಂಡಿ ೧ಕ್ಕೆ	...	75—0	77—8
ಉಪ್ಪು ಗೋಣಿ ೧ಕ್ಕೆ	...	4—0	4—4
ಕೊಬ್ಬರಿ ಖಂಡಿ ೧ಕ್ಕೆ	...	125—0	130—0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	...	35—0	35—8
ಎಳ್ಳಿಂಡಿ ಖಂಡಿ ೧ಕ್ಕೆ	...	57—0	60—0
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	...	10—4	10—8
ಎಳ್ಳೆಣ್ಣೆ ಮುಡಿ ೧ಕ್ಕೆ	...	11—8	11—12
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—6	9—15
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	9—12	9—14
ಮುಂಡಿನ ಕಾಯಿ ಮುಡಿ ೧ಕ್ಕೆ	...	10—0	10—4
ಸಾಸಿವೆ ಮುಡಿ ೧ಕ್ಕೆ	...	11—4	11—8
ಕೊತ್ತಂಬರಿ ಮುಡಿ ೧ಕ್ಕೆ	...	5—6	5—10
ಕಾಫಿ ಖಂಡಿ ೧ಕ್ಕೆ	...	255—0	305—0
ಬೀಗೋಟು ಅಡಿಕೆ ಖಂಡಿ ೧ಕ್ಕೆ	...	100—0	105—0
ಹಳೆ ಬೀಗೋಟು	...	120—0	125—0
ಹಳೆ ಕಾಳುಮೆಣಸು ಖಂಡಿ ೧ಕ್ಕೆ	...	140—0	145—0
ಯಾಲಕ್ಕಿ ಮುಡಿ ೧ಕ್ಕೆ	...	25—0	32—0
ಗೇರುಬೀಜ ಮುಡಿ ೧ಕ್ಕೆ	...	5—8	
ಕಬ್ಬಿಣ ಖಂಡಿ ೧ಕ್ಕೆ	...	100—0	120—0
ಕಾಂಚ್ಯ ತಗಡು ಮುಡಿ ೧ಕ್ಕೆ	...	28—4	29—0
ಕಾಂಚ್ಯ ಪಾತ್ರಗಳು ಮುಡಿ ೧ಕ್ಕೆ	...	40—0	42—0
ಚೀನ ಬೆಳ್ಳಿ ಸೇರು ೧ಕ್ಕೆ	...	31—8	
ಹಿತ್ತಾಳೆ ತಗಡು ಮುಡಿ ೧ಕ್ಕೆ	...	28—0	

"ವೈದ್ಯಾಮೃತ ಸುಂದಿರಂ"

[illegible]

ವಿಳಾಸ:— ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಸುಂದಿರಂ,
ನೀಲೇಶ್ವರ, ದಕ್ಷಿಣಕನ್ನಡ.

ಜಿಲ್ಲೋ ಮೈಸೂರು
ಊದು ಬತ್ತಿಗಳು. ಮಹೋತ್ತೇಜಕ!!

[illegible]

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಲೈಸ್ಲೆ ಪಂಚೆ, ಆಟೋಮೋಹಿನಿ ಸೆಂಟ್.

[illegible]

O. O. LINGAM & Co.,
No. 2, Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂರ್ತಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮ ಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಫಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ್ಲ ವಾಂತಿಭೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಖಾಸಕುಠಾರ ಗುಟಿಕೆ:—ಇದು ಖಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮುನಿತ್ರಹೋಗುವಾಗ್ಗೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವನು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚಾಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೋಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ದೃಢವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧ ವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ವಿಳಾಸ:— ಮೂರ್ತಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಯೂನಿಟ್ ಇಂಡಿಯನ್ ಬಾಂ.

ಇದೇ ... ಬಾಟ್ಲಿ
ಗಳುತ್ತನ್ನು ಒಂದರ ಕ್ರಯ
ಲಕ್ಷವಲ್ಲಿ ಡಿರಿ. ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಕ ಮುಲಾಮು:—ಇದರ ಉಪಯೋಗದಿಂದ ತಲೆನೋವು, ಚಳಿ, ಶಿರೋಭಾರ, ಗಂಟು, ಗಂಟ್ಲು ನೋವು, ಎದೆಶೂಲೆ, ಎದೆ ನೋವು, ಉಬ್ಬುವದು, ವಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಘಾಯ, ಚುಚುವು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮಯಕ್ಕೆ ಪ್ರಯಾಣ, ಪೈಲ್ಸ್ ಮುಖಾಂತ್ರ ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. ೫—೦—೦; 24 ಬಾಟ್ಲಿಗೆ ರೂ. ೯—೮—೦; 50 ಬಾಟ್ಲಿಗೆ ರೂ ೨೦—೦—೦ ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪; ದಂತಮಂಜನ ಕಜ್ಜಿಮುಲಾಮು ಆಣೆ ೨; ಹೇಯರ್ ಆಯಿಲ್, ಬೇಲು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು ಮುಂಬಯಿಂದ ರವಾನಿಸತಕ್ಕ ವಿಲಾಯತಿಯಿಂದ ಬಂದ ಪೇಟೆಂಟ ಔಷಧಗಳನ್ನೂ ಇತರ ಮಾಲನ್ನೂ ಆವಶ್ಯ ಮಿಟ್ಟಿನ ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ೨೦ ವಿಧ ಊದುಬತ್ತಿ, ಅನೇಕ ವಿಧ ಗಂಧದ ಬತ್ತಿ, [illegible] ... ತೈಲ ಇವೇ ಮೊದಲಾದ [illegible] ...

ವಿಳಾಸ:— ಕೆ. ಪುಟ್ಟಪ್ಪ, ಕರ್ನಾಟಕಸಾಹಿತ್ಯ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ.

ಸಾಂಡಾ ಆಯಿಲ್.

(ನಪುಂಸಕತ್ವಹಾರಿ ತೈಲವು)

[illegible]

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ,
16, ತಿರುಪಳ್ಳಿ ಬೀದಿ, ಮದರಾಸು.

The City Watch Co.,
16 Tirupally Street, MADRAS.

Gold gilt Voddyanum.

ಬಂಗಾರು ಗಿಲೀಟಿನ ಒಡ್ಯಾಣ.

[illegible]

ವಿಳಾಸ:— ಟಿ. ರಾಮಚಂದ್ರರಾವ್ ಅಂಡ್ ಕೋ.,
ಸಾಹುಕಾರ್ ಪೇಟೆ, ಮದ್ರಾಸ್.

ಕನ್ನಡ ಪಾಠಪುಸ್ತಕಗಳು.

[illegible]

ಇತ್ಯಾದಿ, ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೦ನೇ ಇಸವಿಯ ೨ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂಕೆಯಾಗಿ ಕಾ. ... ನೇ ಇಸವಿಯಿಂದ ತಾ. ... ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಇಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಇದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ... ಒಂದು ಬಾಟ್ಲಿ ... ಅಮೃತವೇ ಎಂದು ... ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ... ಯಾವತ್ತು ರೋಗಕ್ಕೆ ಉಪಯೋಗ ... ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ. ಅವು ಬರೆಯುಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ... ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ... [illegible]

ರೋಗದ ನಾಮಗಳು.

ಕ್ಷಯರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ... ಇನ್ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ... [illegible]

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
33 ಹೆಡ್ ... ಶಹಾಪುರ, (ಬೆಳಗಾಂವ).

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಿಗಳನ್ನು ದೂರವಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸಟ್ಟಿಗೆ ರೂ. 2—2—0 ಕೊಲೇರಾ ಔಷಧದ ದೊಡ್ಡ ಸಟ್ಟಿಗೆ ರೂ. 1—2—0

„ ಸಣ್ಣ „ „ 1—6—0 „ ಸಣ್ಣ „ „ 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸಟ್ಟಿಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜೋರ್ಜಟೌನ್, ಮದರಾಸ್.

ತಂತಿ ವಿಳಾಸ:—
ಪಂಡಿತ್, ಮದರಾಸ್.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ತಕ್ಕ ಬರೆಯುವಲ್ಲಿ ಅಂಚೆಯ ಹಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಧಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡುತ್ತಾ ಇರುವುದಕ್ಕೆ ಕ್ರಯ ರೂ. 1. ಹೆಚ್ಚಾಗಿಯೆಂದು ಮರೆಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದ್ರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಹಿಂದುಸ್ಥಾನದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಸೋವಿತ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿದ್ದಾರೆ.

ಮಹಾಭಾಗ! ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಳೆ ವರೆಗೂ ವೈದ್ಯರ ಸಮಯವನ್ನು ಕಾದು ಕೂಡಿಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರ್ ಆದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು. ವಿಷಜ್ವರ, ಮಲೇರಿಯ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂದುಗಳ ನೋವು ಸೀದಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗಿ ತಪ್ಪುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಹಲ್ಲುಹುಟ್ಟುವಾಗ ಉಂಟಾಗುವ ಮಂದ, ನೀಲುಬದ್ಧ, ಅಜೀರ್ಣದ ಭೇದಿ, ಕೃಶತ್ವ, ಜ್ವರ, ವಾಂತಿ ವಸ್ತ್ರವಾಗುವುದ, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ತಿಂದುಂಡು ಪುಷ್ಟಿಯುಳ್ಳವರಾಗುತ್ತಾರೆ. ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಉಚಿತ.

ವಿಳಾಸ— ಶ್ರೀ ವೆಂಕಟರಾಘವ ವೈದ್ಯಶಾಲೆ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಡಬ್ಬಿಯನ್ನು ತೆಗೆದುಕೊಳ್ಳುವಾಗ ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವುದನ್ನು ನೋಡಿ ತೆಗೆದುಕೊಳ್ಳಿರಿ.

ಈ ಸಾಲಾಮಿಸ್ರಿ ಮುರಬ್ಬಾ ವಿನ ಸೇವನೆ ಯಿಂದ — ದೀರ್ಘ ಸಂಪತ್ತಿ ಇದ್ದರೂ ಸ್ವಸ್ವೇಂದ್ರಿಯ ಯಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೆಡಿಸುವುದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ, ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಇವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ಸಂತ ಹಾಗೆ ಕೇಳಿದ ನ್ಯಾಯಾಲಯದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ಎರಡು ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರ ವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಛಾಂಗಿಯು ಜಾಹಿರ್ ಹೊರಡುವುದರಿಂದ ಕೆಲವು ದಿವಸಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ; 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ ಸುಪ್ರಸಿದ್ಧವಾದ ಮಹೌಷಧಗಳು.



"ಧನ್ವಂತರೀ ಬಾಮ್."

ಪರಿಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗತ, ಉಳುಕು, ಥಾಮೆ, ತಲೆನೋವು, ಸೊಂಟನೋವು, ನರನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸುಲಭವಾಗಿ ಗುಣ ಹೊಂದುವವು. ಬಾಟ್ಲಿಗೆ ಕಿಮ್ಮತ್ತು ೦—೭—೦; ಒಂದು ಡಜನು ಬಾಟ್ಲಿಗಳಿಗೆ ರೂ. ೫—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಇಸುಬು, ಖಜ್ಜಿ, ದದ್ದು, ತುರಿಕೆ, ನಂಜು ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಚ್ಚುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿಗೆ ೦—೫—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಪ್ರಶಂಸಾ ಪತ್ರಗಳು, ಪದಕಗಳು ದೊರೆತಿರುವವು. ಇನ್ನು ಮುಖ್ಯವಾಗಿ ಕೊಂಡುಕೊಳ್ಳತಕ್ಕವರೂ ವ್ಯಾಪಾರಿಗಳಿಗೆ ಯೋಗ್ಯ ಕಮಿಶನು ಕೊಡಲಾಗುವುದು; ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮಾಡಿರಿ.

ದಿ ಮ್ಯಾನೇಜರ್ — ಶ್ರೀ ದೇವೀಪ್ರಸಾದ ಕಂಪೆನಿ,
ಪೋಸ್ಟು ಬಾಕ್ಸ್ ನಂ., ದ. ಕನ್ನಡ.

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಇವು ಇನ್ನಾದಿ ಸಂಬಂಧವಾಗಿ ಗುಣವಾಗುತ್ತವೆ. ಕೊರೆಯುವಿಕೆ ಮತ್ತು ಆಗಾಗ ಹಲ್ಲುಗಳಿಂದ ಕಡಿಯುವ ನೋವು ಬಾಧಿಸದಂತೆ ಇದು ಒಂದು ವಿಧ. ಔಷಧ. ಇದು ನೋವನ್ನು ತಾಂತಕಾಲಿಕ ಹಲ್ಲುಗಳ ದೀರ್ಘಕಾಲವನ್ನು ಬಲಪಡಿಸುವ ಬದಲಿಂದ ಹಲ್ಲುಗಳನ್ನು ಶಕ್ತಿ ತಗಿಸುವ ಅನ್ವಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ನಿಲ್ಲಿರಿಗೂ ತಿಳಿಸಿರಿ.

ಸೀಸೆ ಒಂದಕ್ಕೆ ಕ್ರಯ: ರೂ. 1—4—0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವ್ಯಾಪಾರಿಗಳಿಗೆ ಒಮ್ಮೆಯೇ ೧೨ ಸೀಸೆ ತರಿಸಿಕೊಂಡರೆ ೧೨ ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಟ್ಟಿ ಸಿಕ್ಕುತ್ತದೆ.

STANY BROTHERS, MANGALORE.

ಸೊಗಸಾದ ಅಗರುಬತ್ತಿ.

I	ಕ್ಲಾಸ್	0—10—0	ಒಂದು ಪೆಟ್ಟಿಗೆಗೆ
II	ಕ್ಲಾಸ್	0— 8—0	
III	ಕ್ಲಾಸ್	0— 6—0	

ಹೋಟೇಲುಗಳಿಗೂ ಅಂಗಡಿಗಳಿಗೂ ಧಾರಾಳವಾಗಿ ವ್ಯಾಪಾರಿಗಳು ಮೇಲೆ ರಿಯಾಯಿತಿಗಳ ವರು. ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಟ್ಟಿದೆ ಸಿಕ್ಕುತ್ತದೆ.

STANY BROTHERS, MANGALORE.

ಜರ್ಮನ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದೆ. ಈಗಲೇ ಖರೀದಿಸುವವರು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು.

ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯ ಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಬಂಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.

ನಮ್ಮ ವಿಳಾಸ:— ವಿ. ಎ. ಎಸ್. ಪಾಡಿ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಕೊತ್ತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಪಾಡಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETRANAND SAREES.

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! — ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಳಥಳಿಸುವ "ನೇತ್ರಾನಂದ" ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡುವೆವು.

ನಾವೀನ ಕೆಂಪು (Congo Red) ಹೆಚ್ಚು ಮತ್ತು ಇತರ ಬಣ್ಣಗಳು ಕಮ್ಮಿ ಕ್ರಯದಲ್ಲಿ ದೊರಕುತ್ತವೆ.

ವಿಶೇಷ ವರ್ತಮಾನಕ್ಕಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಸೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿಸ್ ಇಗರ್ಜಿ ಎದುರು, ಹಂಪನಕಟ್ಟ, ಮಂಗಳೂರು.

[illegible] ಸಾಮಾನುಗಳು.

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. **ಕಾಮಧೇನುಮೂಲಿಕೆಯ ಸತ್ವವು.** ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿವ್ಹರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ರೋಗಗಳೂ ನಾಶಹೊಂದಿ ,ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ಮಕ್ಕಳಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು. ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾಸನಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟ. ಖ. ವಗೈರೆ ಬೇರೆ.

2. **ವಿಜಯಸಂಜೀವಿನಿ ತೈಲ.** ಕಾಲುತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಬಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. **ಕೋಲೇರಾ ಗುಳಿಗೆಗಳು.** ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. **ವಾತಾಂತಕ.** ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶೋರನೂರ, (ಮಲಿಬಾರ).

ಈ ಸಾಮಾನುಗಳು ಹಿತ್ತಾಳೆ ಮತ್ತು ತಾಮ್ರದಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥ ೩೨ ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೩—೦—೦. ಮಧ್ಯಮ ತರದ ಸೆಟ್ಟು ೧ಕ್ಕೆ ರೂ. ೪—೮—೦. ದೊಡ್ಡ ಸೆಟ್ಟು ಉತ್ತಮ ತರದ ೧ಕ್ಕೆ ರೂ. ೫—೦—೦.

ರೇಷ್ಮೆ ಸಾಮಾನು ವಗೈರೆ ಕಟಲಾಗು ಬೇಕಾದವರಿಗೆ ಧರ್ಮವಾಗಿ ಕಳಿಸಲಾದೀತು.

ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS— Siromani Narayanacharya,
Chaukamba, BENARES CITY.

ವಿಳಾಸ— ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ.

ಅಪೂರ್ವ ಸಂದರ್ಭ.

ಬಹುಕಾಲದ ಅಭ್ಯಾಸದಿಂದ ವಿಶೇಷ ಮೂಲಧನವಿಲ್ಲದೇನೇ ಓದುಬಾರದವರಾದರೂ ಕೂಡಾ ಹೆಚ್ಚಿಗೆ ಲಾಭವಾದರೂ ಸಹ್ಯವಾಗಿರುವರೂ ಚಲೋ ಜೀವನ ದುಡಿಯಲಿಕ್ಕೆ ಅನುಕೂಲವಾಗುವ ಹೊಲಿಗೆ ವೃತ್ತಿಯ ಎಲ್ಲಾ ತರದ ಶಿಕ್ಷಣವನ್ನು ಅತ್ಯಾಧುನಿಕ ಶಾಸ್ತ್ರೀಯರೀತ್ಯಾ ಕಲಿಯುವವರಿಗೆ ಅನುಕೂಲವಾದ ಸಮಯ ವ ಸ್ಥಳಗಳಲ್ಲಿ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮಲ್ಲಿರುವುದು. ಮಾಹಿತಿ ಪತ್ರಗಳನ್ನ ಕೇಳ್ಕೊಳ್ಳುವವರು ನಮ್ಮಲ್ಲಿ ವಿಚಾರಿಸಿದಲ್ಲಿ ಅಥವಾ ಅರ್ಧಾಣೆ ಸ್ಟಾಂಪ ಸಮೇತ ಪತ್ರ ಬರೆದಲ್ಲಿ ಫುಕಟ ಕೊಡುವೆವು.

M. Anantha Prabhu,
The Tailoring House and
School of Scientific Tailor's Cutting,
MANGALORE, SOUTH KANARA.

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧಗಳು ಗೊತ್ತಾಗುವವು.	ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ವಿಳಾಸ:—

ರಾಜವೈದ್ಯ ನಾರಾಯಣಜೀ ಕೇಶವಜೀ,
೫೬. ಜೈನಾಬಜಾರು ರೋಡು, ಮದರಾಸು.

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು. ಕಾಗದಗಳು, ಕಾರ್ಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು. ಈ ಪೆಟ್ಟಿಗೆಯೊಂದು ಇದ್ದರೆ ಕಚ್ಚಿದ ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮುಟ, ಇಂಕ್‌ಬಾಟಲ್ ಸಹಿತ ಸೇರಿದೆ.

ಕ್ರಾಂ	110	ಅಕ್ಷರಗಳ ಪೆಟ್ಟಿ	ರೂ.	1—8—0
"	170	" "	"	1—14—0
"	250	" "	"	2—8—0
"	350	" "	"	3—12—0

ಹಾರ್ಮೋನಿಯಂ ಸ್ವಯಂಬೋಧಿನೀ

ಮೂರನೆಯ ಛಾಪೆ.

ಈ ಪುಸ್ತಕದಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಅದನ್ನು ಬೋಧಕರ ಸಹಾಯವಿಲ್ಲದೆ ಉಪಯೋಗಿಸುವ ವಿಧಾನವೂ ಮತ್ತು ಎಲ್ಲರಲ್ಲಿಯೂ ಬಳಕೆಯಲ್ಲಿರುವ ಪುರಂದರದಾಸರ ಕೀರ್ತನೆಗಳೂ, ಸುಲಭವಾದ ನಾಟಕದ ಪದ್ಯಗಳಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ದೇವರ ನಾಮಗಳೂ ಸ್ವರಸಹಿತ ಕೊಟ್ಟಿರುತ್ತದೆ. ಇದಲ್ಲದೆ ಶಾಸ್ತ್ರರೀತಿಯಾಗಿ ಸಂಗೀತ ಕಲಿಯುವವರಿಗೆ ಅನುಕೂಲವಾಗುವಂತೆ ಸರಳೆ, ಜಂಟಿ ವರಸೆಗಳು, ಅಲಂಕಾರಗಳು, ಸ್ವರಜತಿಗಳು, ವರ್ಣಗಳು, ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್ ಇವರುಗಳಿಂದ ರಚಿತವಾದ ತೆಲುಗು ಕೀರ್ತನೆಗಳು ಸಹ ಸ್ವರಸಹಿತ ಕೊಟ್ಟಿರುತ್ತದೆ. ಈ ಛಾಪೆಯಲ್ಲಿ ಎರಡನೆ ಛಾಪೆಗಿಂತ ಹೆಚ್ಚಾಗಿ ಕೆಲವು ಕೀರ್ತನೆಗಳಿವೆ. ಪುಟಗಳು ೯೫. ಬೆಲೆ ೧೦ ಆಣೆ.

ರಾಮಾಯಣ ಸಂಗ್ರಹ ಬಾಲಕಾಂಡ ೦—೬—೦. ಸುಭದ್ರೆ ೦—೬—೦.

ವಿಳಾಸ:—

ಎಚ್. ಎಸ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:— ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರೆದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎವ್‌ರ್ ರೆಡಿ ಸೇಫ್ಟಿ ರೇಜರು ಮತ್ತು ದಪ್ತರದ ಎಂಟಿಜೇಬ್ ಎಂಬುವ ಜ್ವರದ ವಿಶ್ವಾಸ ನಮ್ಮಲ್ಲಿ ದೊರೆಯುತ್ತದೆ. ಶೀಘ್ರದಲ್ಲಿ ಬರೆಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.,
Jumnadas Building, Pitha Street,
FORT: BOMBAY.

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ. ೪—೮—೦.

ಈ ಗಡಿಯಾರವು ಮಜಬೂತಾಗಿರುವುದು. ಛಾಳಿ, ಧೂಳು ಸೇರದಂತೆ ಎರಡು ಕದಮೂ ಡಬ್ಬಿಯೂ ಇರುವದು. ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ. ಇದನ್ನು ತರಿಸಿ ನೋಡಿದರೆ ಗೊತ್ತಾಗುವದು. ಇದನ್ನು ಲೀವರ್ ಕೆಲಸದಿಂದ ನವೀನವಾಗಿ ತಯಾರಿಸಿದೆ. ಬಹುಮಾನಗಳ ವಿವರ:— ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಜಾ ಹೂವು ೧, ಬೀಸಣಿಗೆ ೧, ಚಿಮ್ಮಟ್ ೧, ಬಾಚಣಿಗೆ ೧, ಸೆಂಟ್ ಬುಡ್ಡಿ ೧, ಜುಮ್ಕಾ ೧—೧೧ ಬಹುಮಾನಗಳ ಸಹಿತ ರೂ. ೪—೮—೦.

ವಿಳಾಸ:— ರಾಸ್ ವಾಚ್ ಎಂಡ್ ಕೋ,
ಇರುಳಪ್ಪನ್ ಬೀದಿ, ಮದ್ರಾಸು.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಹೂಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹಸಮ್ಬಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ ೫ ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,
—ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

ಈಗಲೇ ಅಚ್ಚಾಗಿ ವಿಕ್ರಿತಕ್ಕೆ ತಯಾರಾಗಿದೆ!

ಚಂದ್ರಗುಪ್ತ ಚಕ್ರವರ್ತಿ.

ಇದು ಆಂಧ್ರಭಾಷೆಯಲ್ಲಿ ವಿಜ್ಞಾನಚಂದ್ರಿಕಾ ಗ್ರಂಥಮಾಲೆಗಾಗಿ ಶ್ರೀ ಸ್ವಾಮಿ ವಿದ್ಯಾನಂದ ಪರಮಹಂಸ ಬಿ. ಎ. ಇವರಿಂದ ರಚಿಸಲ್ಪಟ್ಟು—ರಾ. ಆಲೀವಾಣ ವೆಂಕಟರಾವ್ ಬಿ. ಎ. ಎಲ್. ಟಿ. ಇವರಿಂದ ಕನ್ನಡಭಾಷೆಗೆ ಪರಿವರ್ತಿಸಲಾಯಿತು.

☞ ಇದನ್ನು ಮದ್ರಾಸ ಸರಕಾರದವರು ೧೯೩೦ನೇ ವರ್ಷದ ಸಂಚಿಕ ಪಠ್ಯಪುಸ್ತಕ ಪರೀಕ್ಷೆಗೆ ಪಾಠಪುಸ್ತಕವಾಗಿ ನೇಮಿಸಿರುವರು.

ಕ್ರಯ ಪ್ರತಿ ಒಂದಕ್ಕೆ ರೂ. 1—0—0 ಅಂಚೆ ಹಾಸಿಲು ಪ್ರತ್ಯೇಕ. ಅಪೇಕ್ಷಕರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ, ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ನಮರಹಾಂತರವನ್ನು ಅನುಭವಿಸುವಿರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಈ ಔಷಧದ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ಪಾತವೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕೈಕಾಲುಗಳು ಮತ್ತು ಮುಖ ಬತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೈಯು ಬ್ಯಾಸರವಾದರೂ, ತಲೆನೋವು ಇವುಗಳೆಲ್ಲಾ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ, ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವುದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದೂ ಇಲ್ಲವು. ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು. ಕ್ರಯ 15 ತೊಲೆ ಡಬ್ಬಿ 1ಕ್ಕೆ ರೂ. 2—0—0.

ವಿಳಾಸ:— ಡಾ|| ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. S. Kamath at the Mangalore Trading Association's Sharada Press, Mangalore.

ವಾರ್ಷಿಕ ಚಂದಾ 1-8-0

ಅಂಚೆ ಹಾಸಲು ಸಹ 2-5-0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸ್ವಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ಣುವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರದ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೮ ಮಂಗಳೂರು, ತಾರೀಖು ೫ನೇ ಮಾರ್ಚಿ ಶುಕ್ರವಾರ ೧೯೨೦. ಸಂಚಿಕೆ ೧೦

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಭತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, *Royal Exchange Place*, CALCUTTA.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಇದು ಎಲ್ಲೆಲ್ಲಿಯೂ ದೊರಕುವುದು.

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಕೊಲೇರಾ! (ವಾಂತಿಭೇದಿ)

ವಾಂತಿಭೇದಿಯಿಂದ ಉಂಟಾದ ಹಾವಳಿ ಏನೆಂಬುದು ಈ ಕಾಲದಲ್ಲಿ ಸರ್ವರ ಸ್ಮರಣೆಯಲ್ಲಿರಬಹುದು.

ಬಡಜನರು ಹೊಸ ಅಕ್ಕಿ ಈಗಲೇ ಊಟಮಾಡುವುದರಿಂದ ಈ ವಾಂತಿಭೇದಿಯು ಇನ್ನೂ ಹಬ್ಬುವ ಸಂದೇಹ ಇದೆ. ಇಂಥ ಕಾಲದಲ್ಲಿ ಜೀವಕ್ಕೆ ಯಾಕೆ ಅಪಾಯವನ್ನು ತಂದುಕೊಳ್ಳುವಿರಿ. ಕೂಡಲೆ ಈ ಕೆಳಗಿನ ಔಷಧಿಯನ್ನು ಸಂಗ್ರಹಿಸಿಕೊಳ್ಳಿರಿ.

'ಕೆಂಫೊರೀನ್'

CAMPHOREINE

ಎಂಬ ಲೋಕಪ್ರಸಿದ್ಧವಾದ ಈ ಪರಿಹಾರದ ಔಷಧವನ್ನು,

ದಿ. ಒರಿಯೆಂಟಲ್ ಸ್ಪೆಸಿಫಿಕ್ ಡಿಪೊ, ವೆಪರಿ, ಮದ್ರಾಸು

The Oriental Specific Depot,
Vepery, MADRAS.

ಈ ವಿಳಾಸಕ್ಕೆ ಬರದಲ್ಲಿ ಸಿಕ್ಕುವುದು.

ಬೆಲೆ ೧ ರೂಪಾಯಿ. ಇದರಲ್ಲಿ ಅಂಚೆಹಾಸಲು ಸೇರಿಲ್ಲ.

ವಾತಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಪಡೆದಿದ ಪ್ರದೇಶವು. ಅಲ್ಲಿನ ಋತುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರುಗಳಿಂದನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್"ಗಳೂ ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಡಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೊಲೆರಾ, ಕಾಮಾಲೆ, ಉಬ್ಬಸ, ಕೆಮ್ಮು ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅಪಸ್ಮಾರ, ಮೊದಲಾದವುಗಳಿಗೆಲ್ಲ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದುವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸ್ಥಳೀಯ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲಾಗುತ್ತದೆ.

ಪಿ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಸಚಿತ್ರ ಮಾಸಪತ್ರಿಕೆ. ಸಚಿತ್ರ ಮಾಸಪತ್ರಿಕೆ.

ಭಕ್ತಿಸಂದೇಶ.

ಡಿಶಂಬರ — ಜನವರಿಗಳ ಸಂಚಿಕೆಯು ಪ್ರಕಟವಾಗುವುದು.

ಇದರಲ್ಲಿ ಬರುವ ಮುಖ್ಯ ವಿಷಯ:— ಭಕ್ತಿಯ ವಿಚಾರ, ಪಾಶ್ಚಾತ್ಯ ಸ್ವಾಮಿ ಶ್ರದ್ಧಾನಂದರ ಸಂಕ್ಷಿಪ್ತ ಜೀವನಚರಿತ್ರೆ, ಮತ್ತು ಶ್ರೀಮನ್ಮಧ್ವಾಚಾರ್ಯರ ಜೀವನಚರಿತ (ಭಾವಚಿತ್ರಗಳ ಸಹಿತ); ಶ್ರೀಯುತ [illegible] ಹಿಂದಿನ ಸಂಚಿಕೆಗೆ ಬರೆದ ಪತ್ರಗಳು; ವೇದದ ವಿದ್ಯಾಭ್ಯಾಸ, ಪಾತಂಜಲ ಧರ್ಮಶಾಸ್ತ್ರ, ವ್ಯಾಕರಣ [illegible], ಹಿಂದೀಭಾಗ, ಇದೇ ಮುಂತಾದ ಅನೇಕ ವಿಷಯಗಳು, ಪುರವಣಿ (ಸಪ್ಲಿಮೆಂಟ್)ಯಲ್ಲಿ "ಅಮೃತಶರ" ಪಟ್ಟಣದ ವರದಿಯೂ ಬರುವವು. ಇದು ಚಂದಾದಾರ (ವರ್ಗಣೆದಾರ)ರಿಗೆ ವಿನಾ ಇತರರಿಗೆ ದೊರೆಯುವುದಿಲ್ಲ. ಸಂದೇಶದ ಮೊದಲನೆಯ (ಆಷಾಢದ) ಸಂಚಿಕೆಗಳೆಲ್ಲ ಮುಗಿದಿವೆ.

ಇದರಿಂದ ಚಂದಾದಾರರಿಗೆ ವಿಶೇಷ ಲಾಭವಾಗುವುದು. ದಯವಿಟ್ಟು ಬೇಕು. [illegible] ಮಹಾಭಾಗವತರ ಜೀವನ ಚರಿತ್ರೆ (ಚಿತ್ರ ಸಹಿತ) ಕ್ರಯ ೪ ಆಣೆ.

ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ ಕ್ರಯ ೪ ಆಣೆ.

ವಾರ್ಷಿಕ ವರ್ಗಣಿ ರೂ. ೩-೦-೦. ಮಾದರಿ ಸಂಚಿಕೆಯ ಬೆಲೆ ಆ. ೬.

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ,
ಭಕ್ತಿಸಂದೇಶ ಆಫೀಸು, ಮಂಗಳೂರು, ದ. ಕ.

ಟಿಶ್ಯೂರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೋಮಿಯೊಪೆಥಿಕ್ ಔಷಧಗಳು.

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಗೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರಲಾಗುತ್ತವೆ.

ಟಿಶ್ಯೂರೆಮಿಡಿಸ್ 2 ಡ್ರಾಮಿನ ಸೀಸೆ 1ಕ್ಕೆ	ರೂ.	0—3—6
„ 4 „	„	„	0—6—0
„ 1 ಔನ್ಸಿನ	„	„	0—12—0
ಹೋಮಿಯೊಪೆಥಿಕ್ 2 ಡ್ರಾಮಿನ	„	„	0—3—6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಭಾಂಡಾರ)
ರಥಬೀದಿ, ಮಂಗಳೂರು.

The Canara Banking Corporation, Udipi, (Limited).

ದಿ ಕೆನರಾ ಬೆಂಕಿಂಗ್ ಕೋರ್ಪೋರೇಶನ, ಉಡ್ಪಿ, ಲಿಮಿಟೆಡ್.

Authorised capital	3,20,000—0—0
Issued capital	50,000—0—0
Subscribed capital	40,200—0—0
Paid up capital	35,134—1—11
Deposits	61,239—12—9
Reserve and other Funds	8,258—9—6

Fixed deposits received for 3, 6, 9 months at 6½% for 1 year and above at 7% at the discretion of the Managing Committee. In the case of all deposits interest will be paid quarterly

Cummulative deposits are received repayable in 45 months at Rs 50/—per each rupee deposited monthly.

Current a/c deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges

A dividend of 8% has been declared for the last year. Shares are available

Payments to the Corporation may be made to the credit of the Corporation at the Bank of Madras, and Canara Bank Mangalore

ಅಧಿಕಾರಿಗಳಿಂದ ಸಲ್ಪಟ್ಟ ಮೂಲಧನ	ರೂ 3,20,000—0—0
ಚಂದಾದಾರರಿಗೆ ಅರ್ಪಿಸಿದ ಮೂಲಧನ	„ 50,000—0—0
ಚಂದಾ ಹಾಕಿ ಎತ್ತಿದ ಮೂಲಧನ	„ 40,200—0—0
ಮೌಲ್ಯ ತೆತ್ತ ಮೂಲಧನ	„ 35,134—1—11
ಠೇವಣಾತಿಗಳು	„ 61,239—12—9
ಕ್ಷೇಮನಿಧಿ ಮತ್ತು ಇತರ ಫಂಡುಗಳು	„ 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9ರ ಅವಧಿಗಳಿಗೆ ಆಡಳಿತೆ ಸಭೆಯವರ ಮುನಾಸಬು ಪ್ರಕಾರ ಸಾಲಿಯಾನ್ ಶೇಕಡಾ 6½% 1 ವರ್ಷಕ್ಕೆ ಮಿಕ್ಕಿದ ಬಾಬಿನಲ್ಲಿ ಶೇಕಡಾ 7% ದರದಲ್ಲಿ ಬಡ್ಡಿ ಕೊಡೋಣಾಗುವದು ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡೋಣಾಗುವದು

ಪ್ರತಿ ತಿಂಗಳಿಗೆ ರೂ 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ 1ಕ್ಕೆ ರೂ 50/ರಂತೆ ವಾಪಸು ಕೊಡೋಣಾಗುವದು

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳೋಣಾಗುವವು ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವದಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡೋಣಾಗುವದು

ಯೋಗ್ಯ ಜವಾಬ್ದಾರಿಯ ಮತ್ತು ಆಡಿನ ಮೇಲೆ ಸಾಲಗಳು ಕೊಡೋಣಾಗುತವೆ

ಪಾಲುವಾಲಿಕರಿಗೆ ಕಳೆದ ವರ್ಷ ಶೇಕಡಾ 8% ದರದ ಬಡ್ಡಿ ಕೊಡೋಣಾಗಿಯದೆ ಶೇರುಗಳು ಮಾರಾಟಕ್ಕೆ ತಯ್ಯಾರಿವೆ.

ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು

UDIPI,
1st February 1919

Naimpalli Ananda Rao,
Secretary

ಕೇಸರಿ ಕುಂತಳ ತೈಲ

ತಲೆಯ ಕೂದಲು ಬೆಳೆಯುವದಕ್ಕೆ ಅತ್ಯುತ್ತಮವಾದ ತೈಲ. ವೈದ್ಯಶಾಸ್ತ್ರದಲ್ಲಿ ಮುಖ್ಯರಾದ ಹಲವರು ಇದನ್ನು ಪರಿಶೋಧಿಸಿ ಶಿಫಾರಸು ಬರೆದಿದ್ದಾರೆ—ಇದಕ್ಕೆ ಸುವಾಸನೆಯೂ ಇದೆ. ಸ್ಮರಣಾ ಶಕ್ತಿಯನ್ನು ವರ್ಧಿಸುತ್ತದೆ. ಮಿದುಳನ್ನು ತಂಪಾಗಿಡುತ್ತದೆ.

ಸೀಸೆಗೆ ಬೆಲೆ ೧-ರೂಪಾಯಿ.

ಬಿ. ಸಿ. ಪಾಲಾ ಮತ್ತು ಕಂಪೆನಿ,
ಚೀನಾಬಜಾರ್, ಮದ್ರಾಸ್.

ಲೂಯಿಸರ ಎಲಿಕ್ಸರ್ ಫೋರ್ ಹೆಲ್ತ್

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

8 ಔನ್ಸಿನ ಸೀಸೆಗೆ ಕ್ರಯ ರೂ 1—4—0 ಮಾತ್ರ

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣಮಾಡುತ್ತದೆ ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ 2 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.,
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು

ಕನ್ನಡ ಮಾತನ್ನು

ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು

ಹೇನು ಸತ್ತು ಕಾಗೆ ಬಡವಾಯಿತು

ಮೆಣಸಿನ ಕಾಳಪ್ಪ

ಅರ್ಗಣಿ ಮುದ್ದೆ

ಇಲಿಗಳ ಧಕ್ಕ ಥ್ಯ

ಅಂಗಳ ಡುಗ್ಗ

ಗುಡುಗುಡು ಗುಮ್ಮಟದೇವರು

ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆಹಾಸಲು ಸೇರಿ ರೂ 0—7—0

ವಿ ಪಿ ರೂ 0—8—0

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ಕಲಿಕೊಳ್ಳಬಹುದು ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳದುಬರಬೇಕಾಗಿರುವ

ವಾಚನಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು

ವಿಳಾಸ — ಮ್ಯಾನೇಜರ್
ಶಾರದಾ ಛಾಪಖಾನ, ಮಂಗಳೂರು

ಕರ್ನಾಟಕ ಮಹಾಶಯರೇ ಓದಿದಿರಾ?

ಮಾನವ ಜಾತಿಯವರ ಶರೀರದ ಮರ್ಮಗಳನ್ನು ಬೋಧಿಸುವ

ಕಾಮಶಾಸ್ತ್ರ ಎನ್ನುವ ಶರೀರ ಮರ್ಮಶಾಸ್ತ್ರ

ಇಲ್ಲದಿದ್ದರೆ, ಮರುಟಪ್ಪಾಲಿಗೇನೇ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ಈ ಶಾಸ್ತ್ರವು ಫ್ರೆಂಚ ಇಂಗ್ಲಿಷ ಅಮೇರಿಕನ ಮೊದಲಾದ ಶಾಸ್ತ್ರಗಳಿಂದ ಕನ್ನಡಕ್ಕೆ ಭಾಷಾಂತರ ಮಾಡಲ್ಪಟ್ಟಿದೆ ಮಾನವ ವರ್ಗದವರಿಗೆ ಬೇಕಾದ ಎಲ್ಲಾ ರಹಸ್ಯಗಳು ವೀರ್ಯವೃದ್ಧಿಸುವದಕ್ಕೆ ಕಾರಣಗಳು, ಗರ್ಭಿಣಿ ಅನುಸರಿಸುವ ವಿಧವೂ ಗರ್ಭಿಣಿಗೆ ಬೇಕಾದ ಮರ್ಮಗಳು ನವಮಾಸದ ಪಿಂಡದ ವಿವರಗಳ ಶಿಶು ಉತ್ಪತ್ತಿ ವಿಧಿ ಶಿಶು ಸಂರಕ್ಷಣೆ ಮಾಡುವ ವಿಧ ಸ್ತ್ರೀಧರ್ಮನೀತಿಗಳು ಮಾಸಋತುದೋಷಗಳು ಧಾತುರೋಗ ಶಾಸ್ತ್ರ (ಗುಪ್ತವೈದ್ಯ) ಪ್ರತಿಯೊಂದು ಕುಟುಂಬದಲ್ಲಿಯೂ ಸಂಭವಿಸಬಹುದಾದ ಸ್ತ್ರೀಪುರುಷರ ಮರ್ಮರೋಗಗಳ ಗರ್ಭಿಣಿಯಾದ ಸ್ತ್ರೀಯರಿಗುಂಟಾಗುವ ರೋಗಗಳನ್ನು ಪರಿಹರಿಸಿ ಗರ್ಭಾಶಯಕ್ಕೆ ಶಕ್ತಿಯನ್ನುಂಟು ಮಾಡುವ ಔಷಧಗಳೂ ಇನ್ನೂ ಶರೀರದ ಭಾಗಗಳ ೩೦ ಚಿತ್ರಗಳ ಸಹಿತ ಗ್ಲೇಜ ಕಾಗದದಲ್ಲಿ ಪ್ರಿಂಟ ಆಗಿ ಮಾರಾಟಕ್ಕೆ ತಯಾರಾಗಿದೆ ಕ್ರಯ ಪ್ರತಿಗಳ್ಕೆ 1—ಆಣೆ

೩ನೆಯ ಪ್ರತಿಯಲ್ಲಿ ಇನ್ನು ಕೆಲವು ಪ್ರತಿಗಳು ಮಾತ್ರ ಉಳಿದಿದೆ

ಕೋಲ (ಮೊಗ್ಗು) ಮತ್ತು ಪಾಕಶಾಸ್ತ್ರ

ಈ ಪುಸ್ತಕದಲ್ಲಿ ನವೀನ ೧೦೦ ಕೋಲಚಿತ್ರಗಳೂ ಅಡಿಗೆ ಮಾಡುವ ವಿಧ ಪದಾರ್ಥಗಳೂ ಮತ್ತು ವಿಧಾಯ ದಿನುಸಗಳೂ (Sweetmeats) ಪ್ರ ವಗಳೂ ಕೇಕ ಉ (Cakes) ಬಿಸ್ಕಿಟ್ ಗಳೂ (Biscuits) ಪರಬತ್ (Syrup) ಉಪ್ಪಿನಕಾಯಿಗಳ ವಿಧಾನಗಳ ಮೊದಲಾದ ದಿನುಸುಗಳನ್ನು ಮಾಡುವ ವಿಧಗಳ ಇದರಲ್ಲಿ ಅಡಗಿವೆ ಪತಿವ್ರತಾ ಸ್ತ್ರೀಗೂ ಅವಶ್ಯವಾಗಿ ಬೇಕಾದ ಪುಸ್ತಕ ಕ್ರಯ ಆಣೆ ೬

ವಿಳಾಸ — ಮಹಾರಾಜ ಪುಸ್ತಕಶಾಲೆ,
೧೨ ಅರುಣಾಚಲ ಮೊದಲಿ ವೀದಿ ಸಾಹುಕಾರ್ ಪೇಟೆ ಮದರಾಸ್

ಮಲೆಜ್ವರ.

ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ ೧೨ ಆಣೆ

ವಿಷಮಯವಾದ| ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ

ಹಿಂದುಸ್ಥಾನ, ಬ್ರಹ್ಮದೇಶ ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ಒದಗಿಬಂದಿವೆ

ಪುಣೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ| ಮೆಕ್‍ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ — ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಶೀಘ್ರದಲ್ಲಿ ಗುಣಾಂಶವಿಕ್ಕಿತು "

ನಮ್ಮ ಏಜಂಟರು ಈ ವೊದಲೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent — The Woollen Mart, *Mangalore*

ಆರ್. ಮಾರ್ಟಿನ್ಸರ

ಸುರಸಪರಿಲ್ಲಾ

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ನೈಯಿಲಾಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ ಸಪ್ರಯೋಗಿಕ ಸಂಬಂಧದಿ ಉಂಟಾದ ಎಲ್ಲಾ ತರಹದ ತುರಿಕೆ ಉಬ್ಬುವುದ ನರಗಳಲ್ಲಿರುವ ನೋವು ವಾತ ಸಂಧಿವಾತ ಮೊಣಸಾರ ಕೆಮ್ಮು ಫರಂಗಿ ಹುಣ್ಣು ಕಜ್ಜಿ ಮತ್ತು ಚರ್ಮದ ರೋಗಗಳು ಇವುಗಳಿಂದ ಉಂಟಾದ ವ್ಯಾಧಿ ನೆಗಳಿಸಿ ಇವೇ ಮೊದಲಾದವುಗಳನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಅಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ನಮ್ಮನ್ನು ಯಾವಾಗಲೂ ಆರೋಗ್ಯದಲ್ಲಿಡುತದೆ ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದಾಗಿರುತ್ತದೆ. ಬಾಟ್ಲಿ ಗಳ್ಕೆ ಕ್ರಯ ರೂ ೧-೧೨-೦

ಆರ್ ಮಾರ್ಟಿನ್ಸರ ಎಗ್ಯೂ ಮಿಕ್ಸಚರ

ಇದು ಜ್ವರ, ಶೀತಜ್ವರ, ಮಲೇರಿಯಾ ಪಾಳಿಜ್ವರ ಸನ್ನಿಪಾತ, ಪಿತ್ತ ವಾಯು ವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ ಸನ್ನು ಶೀಘ್ರದಲೇ ನಾಶಮಾಡುತ್ತದೆ ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದೆ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ ಬಾಟ್ಲಿ 1ಕ್ಕೆ ರೂ ೦—೧೪—೦

ಆರ್ ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಷ್ಣ ಹೋಯ್ಯುವಿಕೆ, ಮರ್ಮಸ್ಥಾನದಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಅಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದು ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ ಬಾಟ್ಲಿ ೧ಕ್ಕೆ ರೂ. ೧—೮—೦

ವಿಳಾಸ.— ಆರ್ ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ್ ೧ ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co,
No 1 Frere Road,
Near Wright & Co Fort Bombay.

ವಿಲ್ಲಿಯಮ್ಸ್ ಡೆಂಟೋನ್

ಅನುಭವಸಿದ್ಧ ಅದ್ವಿತೀಯ ಔಷಧ

— ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುದಿನ್ನ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು

ಹೋಲ್ ಏಜಂಟ್, — ಜೆ ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು



ಹುಡುಗರು

ಸಶಕ್ತರೂ ನಿರೋಗಿಗಳೂ ಆಗುವದಕ್ಕೆ

ಡೋಂಗರೆ

ಇವರ ಬಾಲಾಮೃತವನ್ನು ಕೊಡುವದು

ಇದು ಒಂದೇ ಉಪಾಯವಿರುತ್ತದೆ

ಒಂದು ಶೀಸೆಯ ಬೆಲೆ ೧೨ ಆಣೆ
ಟಪ್ಪಾಲು ಖರ್ಚು ೬ ಆಣೆ

ಕೇ. ಟೀ. ಡೋಂಗರೆ ಕಂಪನಿ,
ಗಿರಗಾಂವ, ಮುಂಬಯಿ

ಮಂಗಳೂರು ಏಜಂಟರು
ಉಲ್ಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ:— ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ಏವಂಸಲಸದೃಶವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:— ಇದನ್ನು ತೆಗೆದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:— ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೇಸರೀ ಕುಠೀರಂ,
ಆಯುರ್ವೇದ ಔಷಧಾಲಯ,
33 ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್ಮೋರ್, ಮದರಾಸ್.

ಬ್ರಾಂಚ್ ಆಫೀಸು:— 9 ಬಂದರ್ ಸ್ಟ್ರೀಟ್,
ಜಾರ್ಜಟೌನ್, ಮದರಾಸ್.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೭ ಘಂಟೆಯಿಂದ ೧೦ ಘಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ಶೀಘ್ರ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ, ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ, ಅರಿಷ್ಟ, ದ್ರಾವಕ ಮೊದಲಾದವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರುಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರಲು ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದುಬರುವುದು.

ವೈದ್ಯಶಾಲೆಯ ವ್ಯಾಪಾರಕ್ಕೂ ಮೇನೇಜರ್ರೂ ಆದ ದಾಮೋದರ ನಂಬೀಶನವರು ಅದಿಕ್ಯವಾದ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದನೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚೈಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ— ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣವೆನಿಸುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ— ಇದು ಸ್ವಪ್ನಸ್ಖಲನ ನಿದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತವೆನಿಸುವುದು. ೩೦ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ— ಇದು ಫಿರಂಗವ್ಯಾಧಿ (ಸಿಫ್‌ಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೩೦ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ— ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತುಹೋಗುವುದು. ೩೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನಮ್ಯುತಿ— ತಿಮಿರ, ಉರಿಗಣ್ಣು, ಸರಿ ಎಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ— ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಕಣ್ಣುಗಳು ಗಣ್ಣು, ಕೀವು ಬರುವುದು, ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನೂ ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಕ್ರಯ ರೂ. 1—8—0. ಅಂಚೆ ವೆಚ್ಚ ಬೇರೆ.

7ನೇ ಮುದ್ರಣ: ಅನೇಕ ಉಪಯೋಗ ಸಂಗ್ರಹ.

ಕ್ಷೇಮ ಸಮಾಚಾರದ ಕಾಗದಗಳು:— ಬಗೆಬಗೆಯ ... ಗಳಿವೆ. ಶಾಸ್ತ್ರೀಯ ವೈದಿಕ ಮುಹೂರ್ತಗಳಿವೆ. ಪತ್ರಗಳು ಬರೆಯುವ ..., ಕ್ರಯ, ದಾನ, ವಿಲ್ಲು, ಮರಣಶಾಸನ, ಪಾಲುಪತ್ರ, ಗುತ್ತಿಗೆ, ಪಾಲುಗಾರಿಕೆ, ಹುಂಡಿ, ಚೆಕ್ಕು, ಇವುಗಳ ಮಾದರಿಗಳು, ವಿಧಗಳು, ಸ್ಟಾಂಪು, ರೆಜಿಸ್ಟ್ರೇಷನ್, ಸಿವಿಲ್ ಕೋರ್ಟು ವಿಧಾನ— ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್‌ಕಾಜ್, ಒರಿಜನಲ್, ರಿವ್ಯೂ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ವಾಯಿದೆ, ಕೋರ್ಟು ಫೀ ಸ್ಟಾಂಪು, ರೆವಿನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯಭಾರಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು, ಕ್ರಿಮಿನಲ್ ಕೋರ್ಟು ವಿಧಾನ— ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನುಗಳೆಲ್ಲವೂ ಇದರಲ್ಲಿ ಅಡಗಿವೆ. ಕಾಗದದ ಬರದಿಂದ ಬಹು ಸ್ವಲ್ಪ ಪ್ರತಿಗಳೇ ಅಚ್ಚಾಗಿವೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾಯಿ. 1—8—0; ಅಂಚೆಯ ವೆಚ್ಚ ಬೇರೆ.

[8ᵑ-19]. ವಿಳಾಸ:— "ಸವಿನುಡಿ" ಆಫೀಸು,
122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ದಾತುವು ಹೋಗುತ್ತಿದ್ದರೂ, ದಾತುವು ಕೆಟ್ಟುಹೋಗಿದ್ದರೂ ಬಹು ಬೇಗನೆ ಗುಣಮಾಡುವುದು. ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು. ಕೈ ಕಾಲು, ಸೊಂಟದ ನೋವುಗಳನ್ನು ಕೂಡಲೆ ನಿಲ್ಲಿಸುವದು. ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು.

ಕ್ರಯ ೪೦ ಮಾತ್ರೆಗಳ ಡಬ್ಬಿ ೧ಕ್ಕೆ ೧—೦—೦

ವಿಳಾಸ:— ಮದನಮಂಜರಿ ಫಾರ್ಮಸಿ,
೩೭. ಚೈನಾಬಜಾರು ರೋಡು, ಮದರಾಸು.

ಡಾಕ್ಟರ್ ವೈ. ನಿಶಿಮ್ಯೂರಾ ಎಂಬವರು ಮಂಗಳೂರು ಹಂಪನಕಟ್ಟೆ "ಪೆರೇರಾ ಬಿಲ್ಡಿಂಗ್ಸಿನ" ಮಾಳಿಗೆಯಲ್ಲಿ ತಮ್ಮ ಆಫೀಸು ಮಾಡಿರುವರು.

ಎಲ್ಲಾ ವಿಧದ ದಂತಚಿಕಿತ್ಸೆಗಳನ್ನೂ ಅತ್ಯಾಧುನಿಕ ರೀತಿಯಲ್ಲಿ ಮಾಡುವರು.

ಗಿರಾಕಿಗಳನ್ನು ಪರೀಕ್ಷಿಸಿ ಅಭಿಪ್ರಾಯಕೊಡುವುದಕ್ಕೆ ಫೀಸೇ ತೆಗೆದುಕೊಳ್ಳಲಾಗುವುದಿಲ್ಲ.

Dr. Y. Nishimura,
Japanese Dentist.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಸಾರಿ ಹಚ್ಚಿದರೆ ಶಕ್ತಿಯಿಂದ ಕ್ಷೌರಮಾಡಿ ಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು.

ಗಂಡೆ, ಮೊಡವೆ, ಬಿಚ್ಚು, ತುರಿ, ನವೆ ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ.	0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	,,	1—10—0.
ವಿಲಾಯಿತಿ ರೋಮನಾಶಿಕ ಬುಕ್ಕಿ . . .	,,	0—8—0.

ವಿಳಾಸ— ವೈರಂ ಆಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೇನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಜಾಡ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಲೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಜಾಡ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬುದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಇದರಿಂದಾಗಿ ಇತರ ಸೋಂಕು ರೋಗಗಳು ಹತ್ತದಂತೆ ತಡೆಹಿಟ್ಟು ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಈಚೆಗೆ ಇದು ಕಾಲೇರಾ ರೋಗಿಗಳನ್ನೂ ಗುಣಪಡಿಸಿರುತ್ತದೆ.

ಕ್ರಯ ಸೀಸೆ ೧ರ ರೂ. ೦—೧೪—೦ ಮಾತ್ರ. ವಿ. ಪಿ. ಬೇರೆ.

ಪ್ರಮುಖ್ಯ ಏಜಂಟರು:— ದಿ ಇಕ್ವಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಿನ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandu.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ, ಪೋಸ್ಟ್, ದ. ಕ.

ಎಲ್ಲರಿಗೂ ಬೇಕಾದ್ದು.

ನಮ್ಮ ಪರಮ ಹಿತೈಷಿಯಾದ ತರತರವಾದಿ ಹೂವಿನ ಸಾರಗಳು, ೧೨ ಮಾದರಿ ಸೀಸೆಗಳಿಗೂ ಪೆಟ್ಟಿಗೆ ೧ಕ್ಕೆ ರೂ. ೫ (ರವಾನಿಸುವ ಖರ್ಚು ಅಲ್ಲದಾ). ನಿಮ್ಮ ಆರ್ಡರಿನ ಸಂಗಡ ೨ ರೂಪಾಯಿ ಕಳುಹಿಸಬೇಕು. ಬಾಕಿ ಮೊಬಲಗಿಗೆ ವಿ. ಪಿ. ಮಾಡುತ್ತೇವೆ.

ವಿಳಾಸ— ಎಸ್. ಟಿ. ವಿ.
ಬೆಂಗಳೂರು ಸಿಟಿ.

೧೯೨೦ನೇ ಜನವರಿಯಿಂದ ಆರಂಭ. } ಸದ್ಬೋಧಕ ಗ್ರಂಥಮಾಲೆ. (ತ್ರೈಮಾಸಿಕ ಪುಸ್ತಕ). { ವಾರ್ಷಿಕ ಚಂದಾ ಅಂಚೆ ಸಹಿತ ರೂ. ೧ ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ, ಉತ್ತೇಜನ, ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು. ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚ ದೊಡನೆ ಒಂದೇ ರೂಪಾಯಿ ಇಟ್ಟಿರುವೆವು. ಈ ನಮ್ಮ ಹೊಸ ಕೆಲಸವನ್ನು ತಿಳಿದು, ವರ್ಗಣೆದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros,
General Merchants, SURATKAL, S. K.

The Canara Bank Limited, Mangalore.

ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

[illegible] and fully paid up Capital Rs. 300,000—0—0 | ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0

Reserve and other sinking Funds „ 120306—11—0 | ಕ್ಷೇಮನಿಧಿ ಮತ್ತು ಇತರ ಫಂಡುಗಳು „ 120306—11—0

THE BANK RECEIVES FIXED, CURRENT ACCOUNT, & SAVINGS BANK DEPOSITS.
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ತಕ್ಕೊಳ್ಳಲ್ಪಡುತ್ತವೆ.

For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 6th January 1920.

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜವಾದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

New Discoveries of the Twentieth Century.

Substitute for Quinine!

Powder I. [illegible] ಮಲೇರಿಯಾ ಎಂಬ [illegible] ಕೂಲಿ ಗಳ್ಗೆ ರೂ. [illegible]

Smallpox Preventive.

Powder No. II. [illegible] 3—2 [illegible] (ಅಂಟುರೋಗವು) [illegible] ಕೂಲಿ 1ಕ್ಕೆ ರೂ. 1—0—0.

Cholera Specific.

Pills No. I. ಕಾಲರಾ ಎಂಬ ವಾಂತಿಭೇದಿಯು ಎಷ್ಟು [illegible] ಈ ಔಷಧವನ್ನು ಒಂದೇ ಸಲ ಸೇವಿಸುವದರಿಂದ ಕಟ್ಟಿ ನಿಲ್ಲುವದು. 48 ಮಾತ್ರೆ ರೂ. 1—8—0.

Vishuchikanjan.

Pills No. II. ವಾಂತಿಭೇದಿಯು ಕಠಿಣವಾಗಿ ಸ್ಮೃತಿ ತಪ್ಪಿದರೆ ಈ ಮಾತ್ರೆಗಳ ಅಂಜನದಿಂದ ಸ್ಮೃತಿ ತರಿಸುವದು. ಮತ್ತು ಕಾಲರಾ ಎಂಬ ವಾಂತಿಭೇದಿಯು ತಕ್ಷಣವೇ ನಿಲ್ಲುವದು. 24 ಮಾತ್ರೆಗಳಿಗೆ ರೂ. 1—0—0

N. B. ಈ ಔಷಧಗಳ ವಿನಾ ನಮ್ಮ ದಿಸ್ಪೆನ್ಸರಿಯಲ್ಲಿ ಎಲ್ಲಾ ತರದ ರೋಗಗಳಿಗೆ ಸಿದ್ಧ ಮಾಡಲ್ಪಟ್ಟಿರುವ ಔಷಧಗಳ ಸ್ಟೋಕ ತುಂಬಾ ಇರುವದು. ನಮ್ಮ ಕ್ರಯಪಟ್ಟಿಯ ಕೆಟಲಾಗನ್ನು ಕಾಗದ ಬರೆದು ತರಿಸಿ, [illegible] ತರಲ್ಲಿ ಪ್ರಚಾರಗೊಳಿಸಿರಿ.

SRI BHAVANISHANKER AYURVEDIC DESPENSARY.
BRAHMAVAR, S. KANARA.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ – ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿ ನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮೊದಲಾದ ಬಹು ರೋಗ ಗಳುಂಟಾಗುವವು. ಇದರಲ್ಲಿ ೫ ಭಾಗ ಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟ ಕ್ರಮ, ನಪುಂಸಕತ್ವ ಭೇದ, ವಂಧ್ಯಾ ರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಸವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ:— **ಭಾರತಿ ಬುಕ್ ಡಿಪ್ಪೊ,**
[illegible], ನಗರ್ತರಪೇಟೆ, ಬೆಂಗಳೂರು ಸಿಟಿ.

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರಕ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.
4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ ಕನ್ನಡ.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೌರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಶಿಯಾ

ಕ್ರಯ

					ರೂ. ಆ. ಪೈ.
ಎರಡು ಡ್ರಾಮಿನ	D ಸೈಜ್	ಸೀಸೆ	ಒಂದರ		0—3—6
ನಾಲ್ಕು „	C	„	„	„	0—6—0
ಒಂದು ಔನ್ಸಿನ	A	„	„	„	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ					3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.					10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ, ಎಲ್ಲಾ ಕಾಹಿಲೆ ಆಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲಿಕ್ಸ್ ಹೋಮಿಯೋಪತಿ ದಿಸ್ಪೆನ್ಸರಿ, ಮಂಗಳೂರು.

ಡಾಕ್ಟರ್ ಎ. ಎಲ್. ನಾಯರ್ ರವರ ಧನಸಹಾಯ.

ಈ ಮಹನೀಯರು ಕಾರ್ಕಳ ಸಭೆಗೆ ಕಳುಹಿಸಿದ ತಂತಿ ಪ್ರಕಾರ ರೂ. 1000, ಸಂಘಕ್ಕೆ ಕೊಟ್ಟಿರುವದಲ್ಲದೆ, ಈ ವರ್ಷ ಜನವರಿ ಲಾಗಾಯ್ತು ಪ್ರತಿ ತಿಂಗಳಿಗೆ ರೂಪಾಯಿ ೧೦ರಂತೆ ವಿದ್ಯಾರ್ಥಿವೇತನದ ಬಗ್ಗೆ ಸಹಾಯ ಧನ ಕೊಡುವೆನೆಂದು ತಿಳಿಸಿದ್ದಾರೆ. ಉದಾರ ಚಿತ್ತರಾದ ಈ ಮಹಾನ-ಭಾವರಿಗೆ ಸಂಘದ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಮಂಗಳೂರು,
ತಾ. 26—2—20. } ಕೋಶಾಧಿಕಾರಿ.
ಬಂಟರ ಯಾನೆ ನಾಡವರ ಸಂಘ.

ಬಂಟರ ಯಾನೆ ನಾಡವರ ಪರಸ್ಪರ ಸಹಾಯಕ ಸಂಘ.

ಈ ಸಂಘವು ಕಳೆದ ತಾ. [illegible] ಸ್ಥಾಪಿಸಲ್ಪಟ್ಟಿರುತ್ತದೆ. [illegible] ಮಂಗಳೂರು ಬಂದರದಲ್ಲಿ ಧಂಡಶಾಲೆಯನ್ನು ತೆರಯಬೇಕಾಗಿ [illegible] ಸ್ವಜಾತಿ ಗೃಹಸ್ಥರೆಲ್ಲರೂ ಸಂಘಕ್ಕೆ ಸೇರಿ ಪ್ರೋತ್ಸಾಹಿಸಬೇಕಾಗಿ [illegible]ವೆ.

ರಾಮಕೃಷ್ಣ ವಿದ್ಯಾರ್ಥಿ [illegible]
ತಾ. 25—1—1920. } ಕೆ. ರಾಮಯ್ಯ ಹೆಗ್ಡೆ,
ಕಾರ್ಯದರ್ಶಿ.

ಫೀಸು ಇಲ್ಲ! ರೋಗಪರೀಕ್ಷೆಗೆ. ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅವನ್ನು ಗುಣಪಡಿಸುತ್ತದೆಂದು ಕಂಡು ಬರುತ್ತದೆ. ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತ್ತವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು."

ಡೊ. ಎನ್. ಜೀ. ಸರದೇಸಾಯಿ,
[illegible] (ಲಂಡನ್).

ಇನ್ನು ಭಯಪಡದೇ.

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

[illegible] ದೇವಾಲಯದ ಮಾರ್ಗ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ, ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಳಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ವಿ. ಆರ್. ಹರಿದಾಸ್, ಚಿಕಿತ್ಸಕರು.

[illegible] ನ್ಯುಮೋನಿಯಾ, [illegible] ಕಾಲರಾ, [illegible] ಮುಂತಾದ ಅನೇಕ ಕಷ್ಟಸಾಧ್ಯ [illegible] ರೋಗಗಳನ್ನು [illegible] ಸ್ವಲ್ಪ ಕಾಲದಲ್ಲಿಯೇ [illegible]

ಪರದೇಶ ವರ್ತಮಾನ.

ಖಿಲಾಫತ್ ಪ್ರಶ್ನೆ. [illegible] ಮುಂದೆ [illegible] ಮುಖ್ಯವಾಗಿ [illegible] ಸಂಧಿ [illegible] ಹಿಂದೀ ಮುಸಲ್ಮಾನ [illegible] ಮುಖಂಡರು ಮುಸಲ್ಮಾನ ಮುಖಂಡರೊಡನೆ [illegible] ಶ್ರೀಮಂತ ಆಗಾ [illegible] ದಲ್ಲಿ ಈ ಸಭೆಯ ಮುಂದೆ ನಿವೇದಿಸಿದರು. [illegible] ಆ ಕಾಲ ವಿಷಯದಲ್ಲಿ [illegible] ಧೋರಣವುಳ್ಳವರಾಗಿದ್ದಾರೆ ಎಂದಿಳಿದವರು ತುರ್ಕಿಯ ತುರ್ಕೀಯೊಡನೆ [illegible] ಶರ್ತಗಳು [illegible] ಬರೆಯುವ ಮೊದಲು ಸಭೆಯವರು [illegible] ಅಮೇರಿಕನ್ ಸಂಧಿಯನ್ನೊಂದು ಈ [illegible] ಸೀಲ್ಸ್ನ ರಚನೆಯನ್ನು ಮುಂಚೂರು ನಡೆಯುವುದಕ್ಕೆ ಅಮೇರಿಕನ್ [illegible] ಮಾಡಿದ್ದರಿಂದ [illegible] ಅವರ ಸಮಯ [illegible] ಮುಖ್ಯ [illegible] ಮುಖಂಡ ರಾಜ್ಯಗಳು ಈ ತುರ್ಕಿಯ [illegible] ಒಪ್ಪಂದದ ಠರಾವನೆಯನ್ನು ತಯಾರಿಸ ತೊಡಗಿದರು. ತುರ್ಕಿಯು ರಾಜ್ಯದ ಮಾಡುವುದೊಂದು [illegible] ಅದರ [illegible] ಯಿಂದ ಕೀಳಬೇಕಾದು, ಮತ್ತು ತುರ್ಕಿಯ ಸುಲ್ತಾನರಿಗೆ ಇಡೀ ಮುಸಲ್ಮಾನ ಜನಾಂಗದ ಮೇಲೆ ಇದ್ದ ಧರ್ಮಗುರುತ್ವವನ್ನು ಮನ್ನಿಸುವುದಲ್ಲದೆ ಅದಕ್ಕೆ ಅನು ಕೂಲವಾಗಿ ಮುಸಲ್ಮಾನರ ಪುಣ್ಯಕ್ಷೇತ್ರಗಳ ಮೇಲಣ ಅಧಿಕಾರವನ್ನು ತುರ್ಕಿಯ ಸುಲ್ತಾನರಿಗೆ ಇರಗೊಡಿಸಬೇಕು ಎಂಬದು ಮುಸಲ್ಮಾನರ ಮುಖ್ಯವಾಗಿ ಹಿಂದೀ ಮುಸಲ್ಮಾನರ ಮತ್ತು ಅವರ ಅಭಿಮತವನ್ನು ಅನುಕರಿಸುವವರ ವಾದ. ಪ್ರೆಸಿಡೆಂಟ ವಿಲ್ಸನರ ಸಂಧಿ ನಿರ್ಧಾರವನ್ನು ಅನುಸರಿಸುವುದಾದರೆ ಮುಸಲ್ಮಾನರಲ್ಲದ ಯೆಹೂ ದ್ಯರಿಗೆ ಪೆಲೆಸ್ತೈನದಲ್ಲಿಯೂ, ಅರ್ಮೇನಿಯನರಿಗೆ ಕೊಕೆಸಿಯ ಮತ್ತು ಕಪ್ಪು ಸಮು ದ್ರದ ಪ್ರಾಂತದಲ್ಲಿಯೂ, ಮುಸಲ್ಮಾನರಾಗಿದ್ದ ಸ್ವಾತಂತ್ರ್ಯ ಕಾಂಕ್ಷಿತರಾದ ಅರೇ ಬಿಯದವರಿಗೆ ಅರೇಬಿಯದಲ್ಲಿಯೂ ಇಗಿಪ್ತರಿಗೆ ಇಜಿಪ್ತದಲ್ಲಿಯೂ ಆತ್ಮನಿರ್ಣಯದ ಅಧಿಕಾರ ದೊರೆಯಬೇಕಾಗುತ್ತದೆ. ಆಗ ಮಕ್ಕಾ, ಮದೀನ, ಪೆಲೆಸ್ತೈನ ಮುಂತಾದ ಪವಿತ್ರ ಸ್ಥಳಗಳ ಮೇಲಣ ಅಧಿಕಾರವು ತುರ್ಕಿಯ ಸುಲ್ತಾನರಿಗೆ ತಪ್ಪಿದಂತಾಗುತ್ತದೆ. ಅದೇ ರೀತಿ ಕೊನಸ್ಟಂಟಿನೋಪಲದ ಸುತ್ತಲಿರುವ ಪ್ರದೇಶದಲ್ಲಿಯೂ, ಸ್ಮಿರ್ನಾ [illegible] ದಲ್ಲಿಯೂ ಗ್ರೀಕರ ಪ್ರಾಬಲ್ಯಕ್ಕೆ ಎಡೆ ಕೊಟ್ಟರೆ, ಮತ್ತು ಮೆಸೊಪೊಟೆಮಿಯ ವನ್ನು ಬ್ರಿಟಿಷರು ಹಿಡಿದ ಕಾರಣ ಅದನ್ನು ಅವರಿಗೆ ಭೋಗ್ಯಾದಿ ಅದವು ಮಾಡಿ ದರೆ, ಮತ್ತು ಪೆಲೆಸ್ತೈನದ ಪಶ್ಚಿಮ ಕರಾವಳಿಯಲ್ಲಿ ಫ್ರೇಂಚರು ಒಂದು ಕಾಲದಲ್ಲಿ ಅಧಿಕಾರ ನಡಿಸ ಯತ್ನಿಸಿದ್ದರು ಆದು ಅಲ್ಲಿಯ ಜನರಿಗೆ ಸಂಪೂರ್ಣ ವ [illegible] ಯಾಗಿತ್ತು ಎಂಬ ಕಾರಣದಿಂದ ಆ ಭಾಗವನ್ನು ಫ್ರೆಂಚರ ಆಡಳಿತೆಯಲ್ಲಿ ಇರಿಸಿದರೆ ಇಜಿಪ್ತವಂತು ಬ್ರಿಟಿಷರ ಬೆಂಬಲದಿಂದ ಹೊಸ ವಿಧದ ಸ್ವಾತಂತ್ರ್ಯ ಕ್ರಮವನ್ನು ಬಿಗಿದುಕೊಂಡರೆ ("ನೋಳ) ಸಾಟ್, ಆದಾ ಗಯಾ ಸಾಟ್, ದಸ್ [illegible] ದಸ್ [illegible], ಟಾಡ್ ದಸ್ [illegible]" ಎಂಬ ತುರ್ಕರ ಗಾದೆಯು ತುರ್ಕಿಯ ಸಾಮ್ರಾಜ್ಯದ ವಿಸ್ತಾರವನ್ನು ಬಣ್ಣಿಸಿದ ಹಾಗಾಗುವುದು ಎಂದು ಮುಸ ಲ್ಮಾನರ ಅಭಿಪ್ರಾಯ. ಪ್ರೆ ವಿಲ್ಸನರಾಗಲಿ ಅಮೇರಿಕದವರಾಗಲಿ ತಮ್ಮ ಮನೋ ಗತವನ್ನು ಈ ಠರಾವಿನ ಕಾಲದಲ್ಲಿ ಟೀಕೆ ಬರೆಯದೆ ಇದ್ದುದರಿಂದ ಲಂಡನನಲ್ಲಿ ಸೇರಿದ ಮಿತ್ರಪಕ್ಷದ ಮುತ್ಸದ್ದಿಗಳು ಕೊನಸ್ಟಂಟಿನೋಪಲವನ್ನು ತುರ್ಕರಿಗೆ ಬಿಟ್ಟು ಬಿಡಬೇಕೆಂತಲೂ ತುರ್ಕಿಯ ಸುಲ್ತಾನರನ್ನು ಅಲ್ಲಿಂದ ಹೊರಡಿಸಬಾರ ದೆಂತಲೂ ಒಂದು ಮುಖ್ಯ ಸೂಚನೆಯನ್ನು ಮುಂಚೂರು ಮಾಡಿ ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ಈಗ ಬ್ರಿಟಿಷ ಪಾರ್ಲಿಮೆಂಟಿನಲ್ಲಿಯೂ ಈಗ ಎರಡು ಪಕ್ಷಗಳಾಗಿವೆ.

ಒಂದು ತಂಡವು ಲೋರ್ಡ ಕರ್ಝನ್, ಲಾರ್ಡ ರೋಬರ್ಟ ಸಿಸಿಲ್ ಇವರ ಅಧಿನಾಯಕತ್ವದಲ್ಲಿದ್ದು ತುರ್ಕರನ್ನು ಯುರೋಪದ ತುರ್ಕಿಯ ಿಂದ ಹೊರಪಡಿಸಬೇ ಕೆಂದು ಸಾಧಿಸುತ್ತಿದ್ದಾರೆ. ಅರ್ಮೇನಿಯನರನ್ನು ತುರ್ಕರು ಕೊಲೆಮಾಡುತ್ತಿ ದ್ದಾರೆಂದು ವರ್ತಮಾನ ಪತ್ರಿಕೆಗಳು ಘೋಷಿಸುತ್ತಿದ್ದುವು. ಇದು ನಿಜವಾದ ಸಮಾಚಾರವೊ ಎಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಶ್ನಿಸಿದ್ದಕ್ಕೆ ಅದು ನಿಜವೆಂದು ಹೇಳಲು ಸಾಕಷ್ಟು ವಿಶ್ವಾಸಕ್ಕೆ ಪಾತ್ರವಾದ ಸಮಾಚಾರ ಬಂದಿಲ್ಲವೆಂದು ಉತ್ತರ ಬಂದಿತ್ತು. ಆರ್ಚಬಿಶಪ್ ಒಫ್ ಕೆಂಟರ್‌ಬರಿ, ಮತ್ತು ಇತರ ಅನೇಕ ಕ್ರೈಸ್ತ ಪಾದ್ರಿಗಳು ಈ ತಂಡವನ್ನು ಆಧರಿಸಿ ಮೇಲಣ ರಾಗವನ್ನು ಹೊರಡಿಸಿ ದ್ದಾರೆ. ಆದರೆ ಇನ್ನೊಂದು ಪಕ್ಷವು ಮಿ! ಲೋಯಡ್ ಜೋರ್ಜರನ್ನು ಅನುಕರಿಸಿ ಅವರು ಹಿಂದೀ ಮುಸಲ್ಮಾನರಿಗೆ ಕೊಟ್ಟ ವಚನವನ್ನು ಸಲ್ಲಿಸುವಂತೆ ಅವರಿಗೆ ಸಹಾಯಕರಾಗಿದ್ದಾರೆ. ಸಮ್ಮ ಮುತ್ಸದ್ದಿಗಳಾದ ಮಿ! ಮೊಂಟೆಗರು ಈ ಸಂದರ್ಭ ದಲ್ಲಿ ಬರೆದಿರುವ ಬ್ರಿಟಿಷ ಪತ್ರಿಕೆಗಳ ಪ್ರತಿನಿಧಿಗಳೊಡನೆ ಆಡಿದ ಮಾತುಗಳ ಸಾರಾಂಶ ವು ಪ್ರಕಟವಾಗಿದೆ. 'ಯುದ್ಧದ ಪರಿಣಾಮವು ತುರ್ಕರಿಂದ ಕೊನಸ್ಟಂಟಿ ನೋಪಲವನ್ನು ಕಿತ್ತುಕೊಳ್ಳುವಷ್ಟಕ್ಕೆ ಬರುವುದಿದ್ದರೆ ಹಿಂದುಸ್ಥಾನದಿಂದ [illegible] ತುರ್ಕಿಗೆ ಎದುರಾಗಿ ಯುದ್ಧಕ್ಕೆ ಹೊರುವಂತೆ ನಾವು ಮಾಡಲೇ ಬಾರದಿತ್ತು ಎಂದು ಸಂಧಿ ಪರಿಷತ್ತಿಗೆ ಹಿಂದೀ ಡೆಲಿಗೇಶನಿನ ಅಧ್ಯಕ್ಷನಾಗಿ ನಾನು ಹೇಳುತ್ತೇನೆ. ಹಿಂದುಸ್ಥಾನವು ಈ ಯುದ್ಧದಲ್ಲಿ ನಮಗೆ ಸಹಾಯ ಮಾಡಿದ್ದು ನಮ್ಮ ಇಂಗ್ಲೆಂಡಿಗೆ ಹೊಲದರ ಹಿಂದುಸ್ಥಾನದವರ ಅಭಿಲಾಷೆಯನ್ನು ಪೂರೈಸುವುದು ನಮ್ಮ ಕರ್ತವ್ಯವೇ ಆಗಿದೆ. ಹಿಂದುಸ್ಥಾನವು ಈ ಪ್ರಶ್ನೆಯಲ್ಲಿ ತನ್ನ ಅಭಿಮತವನ್ನು ನಿರ್ದಾಕ್ಷಿಣ್ಯ ದಿಂದ ದುಃಖ್ಖಪುರಯಲ್ಲದೆ ಪ್ರಕಟಗೊಳಿಸಿದೆ. ಅರ್ಮೇನಿಯಕ್ಕೆ ಸ್ವಾತಂತ್ರ್ಯ ಕೊಡುವುದಾಗಲೀ, ಮೆಸೊಪೊಟೇಮಿಯ, ಸಾಯ್ರಿಯ, ಅರೇಬಿಯ ಪೆಲೆಸ್ತೈನ ಇವುಗಳಲ್ಲಿರುವ ಅರಬ್ಬಿಯರ ಸ್ವಾತಂತ್ರ್ಯಕ್ಕಾಗಿ ಹಿಂದೀ ಡೆಲಿಗೇಶನಿನವರು ಆಕ್ಷೇ ಪಿಸಲಿಲ್ಲ. ಆದರೆ ಕೊನಸ್ಟಂಟಿನೋಪಲದಲ್ಲಿ ತುರ್ಕರ ಸಂಖ್ಯೆಯೇ ಅಧಿಕ ವಾಗಿರುತ್ತಾ ಆ ಸ್ಥಳವನ್ನು ಲೀಗ್ ಒಫ್ ನೇಶನ್ಸಿನ ಸ್ವಾಧೀನಕ್ಕೆ ಒಪ್ಪಿಸುವುದು ಯುಕ್ತವಾಗಲಾರದು. ತುರ್ಕಿಯ ಸತ್ತೆಯನ್ನು ಯುರೋಪದಲ್ಲಿ ತೀರಾ ಮುರಿದು ತುರ್ಕರನ್ನು ಏಶ್ಯಾಖಂಡಕ್ಕೆ ಹಿಂದಟ್ಟಬೇಕೆಂದು ಆಲೋಚನೆ ಇದೆ ಎಂಬ ಮಾತು ಹಬ್ಬಿದ್ದು ಅರ್ಮೇನಿಯರ ನಾಶಕ್ಕೆ ಕಾರಣವಾಗಿರಬೇಕು. ತುರ್ಕಿಯ ಸುಲ್ತಾನರು ಯುರೋಪದಲ್ಲಿರುವಾಗ ಯುರೋಪಿನ ಇತರ ಸರಕಾರಗಳು ತಮ್ಮ ದಿವಾಂಗಗಳ ಕಡೆಗೆ ತುರ್ಕರ ಉತ್ಕಟ ವರ್ತನದಲ್ಲಿ ಕೈ ಹಾಕಲು ಸುಲಭವಾಗುವಂತೆ ತುರ್ಕ ರನ್ನು ಏಶ್ಯಾಖಂಡಕ್ಕೆ ಹಿಂದಟ್ಟಿದರೆ ಸಾಧ್ಯವಾಗಲಾರದು. ಈಗ ಲೋರ್ಡ ರೋಬರ್ಟ ಸಿಸಿಲ್ ಮುಂತಾದವರು ಮಾಡುವ ಚಳವಳವು ಸಾಮ್ರಾಜ್ಯದಲ್ಲಿ ಭೇದಬುದ್ಧಿಯು ಬೆಳೆದು ಬಂದು ಮಾಡುವುದಕ್ಕಾದೀತು ಅಲ್ಲದೆ ಬೇರೇನೂ ಪ್ರಯೋಜನ ಸಿಗ ಲಾರದು.'' ಮಿ! ಮೊಂಟೆಗರು ಇಷ್ಟು ಬಹಿರಂಗ ರೀತಿಯಲ್ಲಿ ತನ್ನ ಅಭಿಮತ ವನ್ನು ಹೇಳಿದ್ದಲ್ಲದೆ ಈ ವಿಷಯದಲ್ಲಿ ನಮ್ಮ ವೈಸರಾಯಿಗಳು ಅದೇ ಧೋರಣ ವನ್ನು ಕೈಕೊಂಡಿದ್ದಾರೆಂಬುದು ತುಂಬಾ ಸಂತೋಷದ ಮಾತು. ಆದರೆ ಈ ಚಳ ವಳವು ಇಂಗ್ಲೆಂಡಿನಲ್ಲಿ ಈ ಬ್ರಿಟಿಷ ಮಂತ್ರಿತ್ವದ ಲಗಾಮನ್ನು ಮಿ! ಲೋಯಡ ಜೋರ್ಜರ ಕೈಯಿಂದ ಕಿತ್ತುಕೊಳ್ಳುವುದಕ್ಕೆ ಮಾಡಿದ ಕುಹಕವೊ, ಅಥವಾ ತುರ್ಕರ ಮೇಲೆ ಇರುವ ಪಾದ್ರಿಗಳ [illegible] ಭಾವನೆಯೊ, ಮತ್ತು ಈ ಚಳವಳದ ಪರಿಣಾಮವೇನಾದೀತು ಎಂದು ನೋಡಲಿಕ್ಕೆ ಇದೆ. ಮಿ! ಲೋಯಡ ಜೋರ್ಜ ರನ್ನು ಮಂತ್ರಿತ್ವದಿಂದ ತಪ್ಪಿ ಹಾಕಲಿಕ್ಕಾಗಿ [illegible] ನಡಿಸಿದ ತಂತ್ರವಾದರೆ ಯುದ್ಧದ ಸಂಧಿಕಾಲದ [illegible] ನಡೆಸುವುದರಲ್ಲಿ ಮಹಾಮುಂದಾಳಾಗಿದ್ದ ನಾಲ್ವ ರಲ್ಲಿಯೂ [illegible] ಒಬ್ಬೊಬ್ಬರಾಗಿ [illegible] ಆಯಿತು. ಈ ಸಂಧಿ ಕೂಟದಲ್ಲಿ ಸೇರಿದ ರಾಷ್ಟ್ರಗಳ ಪ್ರತಿನಿಧಿಗಳಲ್ಲಿ, ಇಂಗ್ಲೆಂಡಿನ ಮಿ! ಲೋಯಡ ಜೋರ್ಜರು, ಅಮೇರಿ ಕದ ಪ್ರೆ! ವಿಲ್ಸನರು, ಫ್ರಾನ್ಸಿನ ಮಿ! ಕ್ಲೆಮೆನ್ಸೊ, ಇಟಲಿಯ ಮಿ! ಒರ್ಲಾಂಡೊ ಈ ನಾಲ್ವರು [illegible] ನಾಲ್ವರ [illegible]

[illegible]

[illegible] ಒರಲೆಂದೂ [illegible] ಮುಖ್ಯ [illegible] ಮುಖ್ಯ ಸಂಧಿ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅವರಿಗೆ ಅವರ ಸ್ವಂತ ರಾಷ್ಟ್ರದ ಪ್ರೆಸಿಡೆಂಟರಾಗಲಿಕ್ಕೆ ಪೂರೈಸಿಗದೆ ಅವರು ಎಲ್ಲಕ್ಕೂ [illegible] ಕೊಟ್ಟು ನೀಲನದಿಯ ಆಂದ ಚಂದವನ್ನೂ ಅದರ ಸುತ್ತಲಿನ ಪ್ರದೇಶಗಳ ಸೊಬ ಗನ್ನೂ ನೋಡಲಿಕ್ಕೆ ಹೋಗಿರುವರು. ಪ್ರೆಸಿಡೆಂಟ ವಿಲ್ಸನರು ತಮ್ಮ ತಯಾರಾದ ಸಂಧಿ ಶರ್ತಗಳಿಗೆ ಅಮೇರಿಕದ ಪಾರ್ಲಿಮೆಂಟಿನವರ ಸಮ್ಮತಿ ಇನ್ನೂ ಸಿಗಲಿಲ್ಲ. ಅವರು ಒಂದೊಂದೇ ಚರ್ಚೆ ಎತ್ತಿ ಸಂಧಿಯಲ್ಲಿ ಅಮೇರಿಕಕ್ಕೆ ಹಚ್ಚಿದ ಜವಾಬ್ದಾ ರಿಗಳನ್ನು ಕಡಿದು ಹಾಕುತ್ತಿದ್ದಾರೆ. ಇದಲ್ಲದೆ ಪ್ರೆ! ವಿಲ್ಸನರ ಅಧಿಕಾರದ ಅವ ಧಿಯು ಅಂತ್ಯವಾಗುವುದಕ್ಕೆ ಸಮೀಪಿಸಿತು. ಅವರೇ ಪುನಃ ಆ ಪದವಿಗೆ ಬರು ವರೊ ಎಂಬದು ನೋಡಲಿಕ್ಕೆ ಇದೆ. ಈಗ ಲೋಯಡ ಜೋರ್ಜರ ಮೇಲೆ ಹಲವು ತರಂಗಗಳು ಬಂದೇ ಬಂದವು. ಅವನ್ನು ಅವರು ಸುಧಾರಿಸಿಕೊಂಡು ಬಂದಿರುತ್ತಾ ಈ ವರೆಗೆ ನಿಂತಿದ್ದಾರೆ. ಆದರೆ ಈ ಪ್ರಶ್ನೆಯೂ, ಇದರೊಂದಿಗೆ ಐರ್ಲಂಡದ ಅಸ ಮಾಧಾನ, ಇಜಿಪ್ತದ ಚಳವಳ, ಮಜೂರು ಪಕ್ಷದವರಿಗೆ ಈಗಿನ ಆಡಳಿತೆಯಿಂದ ಯನ್ನು ನಿರಾಶೆ ಇವುಗಳ ಗಾಳಿ ಮಳೆ ಬಿಸಿಲಿನ ಹಾಗೆ ಕೂಡಿಕೊಂಡು ಈ ಬಂಡೆ [illegible] ಬಿಡುವವೊ ಎಂದು ನೋಡಲಿಕ್ಕೆ ಇದೆ.

ಐರ್ಲೆಂಡಿಗೆ [illegible] ಹೋಮ್‌ರೂಲ್—ಈಗಿನ ಬ್ರಿಟಿಷ ಮಂತ್ರಿಕೂಟದವರಿಂದ ಹೊಸದಾಗಿ ತಯಾರಾದ ಐರ್ಲಂಡಿನ ಹೋಮ್‌ರೂಲ್ ಬಿಲ್ಲು ಈಗ ಪಾರ್ಲಿ ಮೆಂಟಿನವರ ಮುಂದೆ ಚರ್ಚೆಗೆ ಬಂದಿದೆ.

ಒಳದೇಶ ವರ್ತಮಾನ.

ಸಲರಿ ಕಮ್ಮಿಟಿಯ ರಿಪೋರ್ಟು—ಸರಕಾರ [illegible] ಕರರ ಸಂಬಳದ ದರ ಗಳನ್ನು ತುಲನೆಮಾಡ ತಿದ್ದ ಈ ಕಮ್ಮಿಟಿಯವರು ತಮ್ಮ [illegible] ರ್ಟಿನ ಒಂದ ಗೋಪ್ಯಪ್ರತಿಯನ್ನು ಮದ್ರಾಸು ಪ್ರಾಂತಿಕ ಸರಕಾರದವರಿಗೆ ಒಪ್ಪಿಸಿ [illegible] ಅದರ ಮೇರೆಗೆ ಇಂಡಿಯಾ ಸರಕಾರದ ಮಂಜೂರಾತಿಗೆ ಒಳಪಟ್ಟು ೩೦ ರೂಪಾ [illegible] ಸಂಬ ಳದ ಕಡಿಮೆ ತಲಬಿನ ಗುಮಾಸ್ತರಿಗೆ ಮದ್ರಾಸು ಶಹರಿನಲ್ಲಿ ರೂಪಾಯಿ [illegible] ಇತರ ಜಿಲ್ಲೆಗಳಲ್ಲಿ ೨೦ ರಷ್ಟು ಸಿಗುವ ಹಾಗೆ ಈ ವರೆಗೆ ಸಿಗುತ್ತಿದ್ದ ಎಲೌನ್ಸನ್ನು ಹೆಚ್ಚಿಸಲಾಗುವುದು. ಪೇದೆಗಳಿಗೆ ಮದ್ರಾಸು ಶಹರಿನಲ್ಲಿ ೧೫ ಮತ್ತು ಇತರ ಊರುಗಳಲ್ಲಿ ೧೨ ರೂಪಾಯಿ ಸಿಗುವುದು. ಈ ಏರ್ಪಾಡು ಇದೇ ಕಳೆದ ಫೆಬ್ರ ವರಿ ೧ನೇ ತಾರೀಕಿನಿಂದ ಜಾರಿಗೆ ಬರಬೇಕಾಗಿ ಸರಕಾರದವರು ನಿರ್ಣಯಿಸಿರುವರು.

ಸೇಲಂ ಮ್ಯೂನ್ಸಿಪಾಲಿಟಿಯ [illegible]—ಇವರು ಪರಸ್ಪರ ಒಬ್ಬರ ನೊಬ್ಬರು ಸಹಾಯಮಾಡಿ ತಮ್ಮ ಸಾಮಾಜಿಕ ಮತ್ತು ಸಾಂಪತ್ತಿಕ ಸುಧಾ ರಣೆಯನ್ನು ಹೊಂದುವ ನಿಮಿತ್ತದಿಂದ ಒಂದು ಸಂಘವನ್ನು ಏರ್ಪಡಿಸಿರುವರು. ಇದಕ್ಕೆ ಮ್ಯೂನಿಸಿಪಾಲಿಟಿಯ ಕೀಳು ನೌಕರರಲ್ಲದೆ ಇತರರು ಮೆಂಬರರಾಗಿ ತಮ್ಮ ಸಂಬಳದ ಪ್ರತಿ ೧ ರೂಪಾಯಿಯಲ್ಲಿ ೧ ಪೈ ಮಾಸಿಕ ಚಂದಾ ಕೊಡಬೇಕೆಂದ ನಿರ್ಣಯ ಮಾಡಿಕೊಂಡಿರುವರು.

ತಾಂಬ್ರದ ನಾಣ್ಯಗಳ ಗನಿಮಜೂರರ ಮುಷ್ಕರ—ಟಾಟಾ ಕಂಪೆನಿ ಯವರ ತಾಂಬ್ರದ ಗನಿಗಳು ಸೆಂಟ್ರಲ್ ಪ್ರೊವಿನ್ಸ್ ಪ್ರಾಂತದಲ್ಲಿ ಬಹಳ ಹೆಸರವಾಸಿ ಯಾಗಿವೆ. ಕಳೆದ ಯುದ್ಧದ ಕಾಲದಲ್ಲಿ ಸರಕಾರದವರಿಗೋಸ್ಕರ ಅನೇಕ ಯುದ್ಧ ಸಾಮಗ್ರಿಗಳು ಅಲ್ಲಿ ತಯಾರಾಗುತ್ತಿದ್ದವು. ಅಲ್ಲಿಯ ಮಜೂರರು ತಮಗೆ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಗಲಾಟೆ ಎಬ್ಬಿಸಿ ಮುಷ್ಕರ ಹಿಡಿದಿದ್ದರು. ಅದು ಇನ್ನೂ ನಿವಾರಣೆಯಾಗಲಿಲ್ಲ.

ಸುಧಾರಿಸಿದ ಎಲ್ಕ್ಷನ ಚಾರ್ಜು—ಈ ಎಲ್ಕ್ಷನ ವೆಚ್ಚಕ್ಕೆ ವರಿಷ್ಠ ಸರಕಾರದ ಮತ್ತು ಪ್ರಾಂತಿಕ ಸರಕಾರಗಳೊಳಗೆ ಕೊಡುವ ಪಾಲನ್ನು ನಿಗದಿಮಾಡುವ ಬಗ್ಗೆ ಏರ್ಪಟ್ಟ ಕಮ್ಮಿಟಿಯು ಈಗ ಮದ್ರಾಸಿಗೆ ಬಂದು ಆ ತಂಟೆಯನ್ನು ಕುರಿತು ವಿಚಾರ ನಡೆಸುತ್ತಿದೆ.

ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನ—ಈ ತಿಂಗಳ ಅಧಿವೇಶನವು ಇದೇ ೧೦ನೇ ತಾರೀಕಿಗೆ ಮದ್ರಾಸಿನಲ್ಲಿ ಜರಗಲ್ಪಡುವುದು. ಇದರಲ್ಲಿ ಡಿಸ್ಟ್ರಿಕ್ಟ ಮ್ಯುನಿಸಿಪಾಲಿಟಿಗಳ ಎಲ್ಕ್ಷನ ಏರ್ಪಾಡಿನ ಮಸೂದೆಯನ್ನು ಕುರಿತ ವಿಚಾರಣೆ ನಡೆಸುತ್ತಿದ್ದ ಕಮ್ಮಿಟಿಯವರ ರಿಪೋರ್ಟು ಚರ್ಚೆಗೆ ಬರಲಿಕ್ಕಿದೆ.

ಪಟೇಲರ ಕಾಯಿದೆ ಮಸೂದೆ—ಭಿನ್ನಜಾತಿಯವರೊಳಗೆ ಆಗುವ ವಿವಾಹಗಳು ಕಾನೂನು ಸಮ್ಮತವಾಗುವಂತೆ ನಾಮದಾರ ಪಟೇಲರು ತಂದ ಬಿಲ್ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಥಮ ಸಲ ಚರ್ಚೆಗೆ ಬಂದು ಅದರ ನಿಬಂಧನೆಗಳನ್ನು ಪರಿಶೀಲಿಸಲಿಕ್ಕೆ ಒಂದು ಸಬ್‌ಕಮಿಟಿಯು ನೇಮಕವಾಯಿತು. ಇದರಲ್ಲಿ ಎಲ್ಲಾ ಬಿನಸರಕಾರಿ ಮೆಂಬರರೂ ಮತ್ತು ಲೋರ್ಡ ಮೆಂಬರ್ ಸರ್ ಜೋರ್ಜ ಲೌಂಡ್ಸ್ ಇವರೂ ಇದ್ದಾರೆ.

ಸೆಕೆಂಡರಿ ಶಾಲೆಗಳಿಗೆ ಗ್ರಾಂಟು—ಮದ್ರಾಸು ಪ್ರಾಂತಿಕ ಸರಕಾರದವರು ಖಾಸಗಿ ಆಡಳಿತೆಯೊಳಗುಳ್ಳ ಸೆಕೆಂಡರಿ ಶಾಲೆಗಳಲ್ಲಿ ಉಪಕರಣಗಳನ್ನು ಒದಗಿಸಿ ಕೊಳ್ಳುವ ಬಗ್ಗೆ ೧ ಲಕ್ಷ ರೂಪಾಯಿ ಗ್ರಾಂಟು ಕೊಟ್ಟಿರುವರು. ಇದನ್ನು ೧೯೨೦ನೇ ಮಾರ್ಚ ೩೧ನೇ ತಾರೀಕಿನೊಳಗೆ ಸದರಿ ಶಾಲೆಗಳು ವಿನಿಯೋಗಿಸಲು ಸಾಧ್ಯವಿಲ್ಲದ್ದ ರಿಂದ ಸದರಿ ಶಾಲೆಗಳ ಆಡಳಿತೆಯವರು ತಮಗೆ ಬೇಕಾಗಿರುವ ವಸ್ತುಗಳ ಪಟ್ಟಿಯನ್ನು ಆಯಾ ಸರ್ಕಲ್ ಇನ್ಸ್‌ಪೆಕ್ಟರಗಳಿಂದ ಈ ವರ್ಷದ ಆಖೈರೊಳಗೆ ಮಂಜೂರು ಮಾಡಿಸಿ, ಹಣವನ್ನು ಪಡೆದು ಆ ಸಾಮಗ್ರಿಗಳನ್ನು ಆ ಮೇಲೆ ತರಿಸಿಕೊಳ್ಳಬಹುದೆಂದು, ಸಾಮಗ್ರಿಗಳ ಬಿಲ್ಲುಗಳನ್ನು ಅನಂತರ ಇನ್ಸ್‌ಪೆಕ್ಟಿಂಗ್ ಅಧಿಕಾರಿಗಳ ಪರಿಶೋಧನೆಗೆ ಒಪ್ಪಿಸಬೇಕೆಂದು ಸರಕಾರದ ಹುಕುಂ ಆಗಿದೆ.

ಶಿಕ್ಷಣ ಪರಿಷತ್ತಿನ ಪ್ರದರ್ಶನ—ಗುಜರಾತದ ಡಿಂಗಾ ಎಂಬಲ್ಲಿ ಸರ್ವ ಜನ ವಿದ್ಯಾಪರಿಷತ್ತಿನ ೧೦ನೇ ಅಧಿವೇಶನವು ಇದೇ ಎಪ್ರಿಲ್ ೨, ೩ ನೇ ತಾರೀಕುಗಳಲ್ಲಿ ಜರಗುವುದು.

ಭಟ್ಕಳಕ್ಕೆ ಮೈಸೂರು ಮಹಾರಾಜರವರ ಸವಾರಿ—ಶ್ರೀಮನ್ ಮೈಸೂರು ಮಹಾರಾಜರವರು ಕಳೆದ ಫೆಬ್ರವರಿ ೨೮ನೆ ತಾರೀಕಿಗೆ ಭಟ್ಕಳಕ್ಕೆ ಚಿತ್ತೈಸಿದಾಗ ಅವರನ್ನು ಎದುರುಗಾಣಲಿಕ್ಕೆ ಅಲ್ಲಿಯ ಮುಖಂಡರಾದ ಮಿ! ಮೊಹಿಸಿನ್ ಬೂರಾ ಸಾಹೇಬ ಶಹಾ ಬಂದ್ರಿ, ಮಿ! ಹಾಜಿ ಬಾದಶಾ ಸಾಹೇಬ ಮುಂತಾದವರು ವಿಶೇಷ ರೀತಿಯಲ್ಲಿ ಚಪ್ಪರ ತೋರಣಗಳನ್ನು ಹಾಕಿ ಸಿದ್ಧರಾಗಿದ್ದರು. ಮಹಾರಾಜರ ಸವಾರಿ ಬಂದೊಡನೆ ಊರವರೆಲ್ಲ ಅವರಿಗೆ ಸುಸ್ವಾಗತವಿತ್ತು ಮಿ! ಹಾಜಿ ಬಾದಶಾಸಾಹೇಬರ ಸ್ಥಳದಲ್ಲಿ ಹಾಕಿದ ದೊಡ್ಡ ಮಂಟಪದಲ್ಲಿ ಅವರನ್ನು ಕರಕೊಂಡು ಹೋಗಿ ತಕ್ಕ ರೀತಿಯಿಂದ ಸತ್ಕರಿಸಿದರು. [illegible] ಪೋಷಾಕನ್ನು ಧರಿಸಿದ ನ್ಯಾಟಿವರು [illegible] ಕಾರ್ಯಕ್ರಮವು ತುಂಬಾ [illegible] ವಾಗಿತ್ತು. ಮಹಾರಾಜರವರು ಆಸನವನ್ನು ಅಲಂಕರಿಸಿದನಂತರ ಅಲ್ಲಿಯ [illegible] ಮೈಸೂರು ಸರಕಾರವು [illegible] ಸಹಾಯ [illegible]

[illegible]

ವಿಶೇಷ ರೀತಿಯಿಂದ [illegible] ಸತ್ಕರಿಸಿದರು [illegible] ಸಕಲ [illegible] ವಂದನೆಯನ್ನಿತ್ತರು. [illegible] ಬರೆದ ಅಡ್ರೆಸ್ಸನ್ನು ಈ [illegible] ಸಂತೋಷಚಿತ್ತರಾಗಿ ಮಹಾರಾಜರ ಅಪ್ಪಣೆ ಪಡೆದು ಹಿಂತೆರಳಿದರು. ಅನಂತರ ಮೈಸೂರು ಮಹಾರಾಜರ ಸವಾರಿಯು ಬಂದರದ ಭಾಗವನ್ನೆಲ್ಲ ನೋಡಿ, ಸ್ವಲ್ಪ ಫಲಾ ಹಾರ ವಗೈರೆ ಮಾಡಿದನಂತರ ಅವರ ಮೋಟರ್ ಕಲ್ಲೂರ ಕಡೆಗೆ ಹಿಂತೆರಳಿತು.

ದಕ್ಷಿಣ ಕನ್ನಡ.

ಬಂಟ್ವಾಳ:—ಇಲ್ಲಿಯ ವರ್ಷಾವಧಿ ಜಾತ್ರೆಯಲ್ಲಿ ಶ್ರೀ ಕಾಶಿ ಮಠದ ಗುರುಸ್ವಾಮಿಗಳಾದ ಸುಕೃತೀಂದ್ರ ತೀರ್ಥ ಪಾದಂಗಳವರ ಸಮಕ್ಷಮದಲ್ಲಿ ಎಲ್ಲಾ ಉತ್ಸವಗಳು ಬಹಳ ವಿಜೃಂಭಣೆಯಿಂದ ಜರಗಿದವು. ಬಂಟ್ವಾಳ ಟವನಿನ ಉತ್ತರ ಪೂರ್ವ ಬಸ್ತಿ ಪಟ್ಟ ಎಂಬಲ್ಲಿ ತಾ ೨೯ಕ್ಕೆ ಮಧ್ಯಾಹ್ನ ೧ ಗಂಟೆ ಸಮಯದಲ್ಲಿ ಮಾಳಿಹುಲ್ಲಿನ ಮನೆಗೆ ಬೆಂಕಿ ಹತ್ತಿ ಉರಿಯಲಾರಂಭಿಸಿದಾಗ ನಂಬ್ರ ೬೬ನೇ ಆಪ್ಪಯ್ಯಹೆಗ್ಗಡೆ ಎಂಬವರು ತನ್ನ ಪ್ರಾಣದ ಆಸೆ ತೊರೆದು ಮಾಡಕ್ಕೆ ಹತ್ತಿ ಅಲ್ಲಿಂದ ನೀರು ಹಾರಿಸಿ ನೊಂದಿಸಿದ್ದರಿಂದ ಆಸ್ಪಾಸಿನಲ್ಲಿರುವ ಮನೆಗಳು ಸುರಕ್ಷಿತವಾದವು. ಇವರ ಪ್ರಯತ್ನವು ಸರಕಾರದಿಂದ ಮನ್ನಿಸಲ್ಪಡಲಿ. ಮತ್ತು ಇಲ್ಲಿಂದ ಸುಮಾರು ೭ ಮೈಲು ದೂರದಲ್ಲಿ ಪೊಮದ ಪದವು ಎಂಬಲ್ಲಿ ತಾ ೨೬ಕ್ಕೆ ಮಧ್ಯಾಹ್ನಕ್ಕೆ ಏನೊ ಕಾರಣ ದಿಂದ ಬೆಂಕಿಬಿದ್ದು ಕಾಲು ಗಂಟೆಯೊಳಗೆ ಅಲ್ಲಿದ್ದ ಸುಮಾರು ಹನ್ನೆರಡು ಮನೆಗಳೂ ಒಂದು ಬೋರ್ಡ ಶಾಲೆಯೂ ಉರಿದು ಭಸ್ಮವಾದ್ದರಿಂದ ಪೊಮದ ಪದವು ಹೋಗಿ ಹೋಮದ ಪದವು ಆಗಿ ಹೋಯಿತು. ಆದರೆ ಶಾಲೆಯ ಯಾವತ್ತು ಸಾಮಾನುಗಳು ಉಪಾಧ್ಯಾಯರ ಸಹಾಯದಿಂದ ಉಳಿದವು. ಇದೆ ಬೆಂಕಿ ಗುಡ್ಡೆಯಿಂದಲೇ ಐದಾರು ಮೈಲು ಮುಂದರಿಸಿದ್ದ ದೆ. ಕಾರಣ ಆ ದಿನ ಗಡುಸಾದ ಗಾಳಿಯ ಪ್ರತಾಪ ಇತ್ತು. ಈ ಕಾಲದಲ್ಲಿ ಅಕ್ಕಿಯ ದಳೆ ಏರಿದ್ದರಿಂದ ಅಗ್ನಿದೇವತೆಗೆ ಕೂಡಾ ಹೊಟ್ಟೆಗೆ ಉರಿ ಎದ್ದದೋ ಏನೋ!

ಪುತ್ತೂರು.—ಇದೇ ಫೆಬ್ರವರಿ ೨೮ ನೇ ತಾರೀಕಿನಲ್ಲಿ ಇಲ್ಲಿಯ ಜಮೀನದಾರ ಮ! ರಾ! ರಾ! ನಟ್ಟೋಜ ಶಿವರಾಯರವರು ಬಪ್ಪಳಿಗೆ ಎಂಬಲ್ಲಿ ನಡಿಸಿದ ಕಂಬಳಕ್ಕೆ ಗೊಂಪ್ರಾಂತ್ಯದ ಕೋಣಗಳು (ಓಟಕ್ಕೆ) ತರಲ್ಪಟ್ಟಿದ್ದವು. ಈ ಕಂಬಳಕ್ಕೆ ಸುಮಾರು ೩ ಸಾವಿರ ಜನ ನೆರೆದಿದ್ದರು. ಕೋಣಗಳ ಓಟದಲ್ಲಿ ಮಂಗ [illegible] ತಾಲೂಕು ಬೆಳ್ತಂಗಡಿ ಗ್ರಾಮದ ಮಾಗಿನಕ್ಕಡಿ ಕೃಷ್ಣಮೂರ್ತಿರ ಕೋಣಗಳು ಇದರಲ್ಲಿ ಎಲ್ಲಕ್ಕಿಂತಲೂ ಮುಂದಕ್ಕೆ ಬರುವ (Goal) ನಿಶಾನಿಗೆ ಮುಟ್ಟಿದವು. ಸಭೆಯಲ್ಲಿ ಮ! ರಾ! ರಾ! ಇಲ್ಲಿಯ ಸಾಹುಕಾರ ಹಾಜೀ ಹಾದಿ [illegible], ಮಿ! ಅಟ್ಟೂರು ಬಾಳೆಕ್ಕರು ಇಲ್ಲಿಯ ಸ್ಟೇಶನ ಸಬ್ ಇನ್ಸ್‌ಪೆಕ್ಟರ ಎಸ್. ಅಮೃತರಾವ್, ಎಡ್ವರ್ಡ್ ಬೇರ್ಬಂಡಾರಿ, ಎಸ್. ಎಸ್. ಶಿವರಾವ್‌ರವರು ನಿಶ್ಚಯಿಸಿದ ಮೇರೆಗೆ ಇವರ ಹಸ್ತದಿಂದ ಒಂದು ಸರ್ಟಿಫಿಕೇಟು ಮತ್ತು ಚಿನ್ನದ ಪದಕವನ್ನು ರಾ! ಕೃಷ್ಣಮೂರ್ತಿಯವರಿಗೆ ಕೊಡಲ್ಪಟ್ಟಿತು.

ಕಳೆದ ತಾ ೨೨ರಲ್ಲಿ ಇಲ್ಲಿಯ ದೇವಟಕ್ಕೆ ಗ್ರಾಮದ ಊಕ್ರಕೆಸ ಎಂಬ ಗುಡ್ಡೆಯಲ್ಲಿ ಒಂದು ಸಾಹಸಕಾರ್ಯವು ನಡೆಯಿತು. ಈ ಗ್ರಾಮದ ದೇರಪ್ಪ ಗೌಡನ ಮಗ ಸುಮಾರು ೩೦ ವರುಷದ ತಿಮ್ಮಪ್ಪ ಗೌಡನು ದನವನ್ನು ಮೇಯಿಸಲಿಕ್ಕೆ ಹೋಗಿದ್ದನು. ದೈವವಶಾತ್ ಒಂದು ಹುಲಿಯು ಬಂದು ಇವನ ರಟ್ಟೆಗೆ ಹಿಡಿದು ಎಳೆಯಲಾರಂಭಿಸಿತು. ಆದರೆ ಈ ತರುಣನು ಎದೆಗುಂದದೆ ತನ್ನ ಕೈಯಲ್ಲಿದ್ದ ಕತ್ತಿಯಿಂದ ಈ ಕ್ರೂರ ಮೃಗವನ್ನು ಕಡಿದುಹಾಕಿದನು. ಈ ಸಂದರ್ಭದಲ್ಲಿ ಈ ದುಷ್ಟಮೃಗವು ತನ್ನ ಮೊನಚಾದ ಉಗುರುಗಳಿಂದ ಈತನ ಎರಡೂ ಕೈಗಳಿಗೂ ಗಾಯ ಪಡಿಸಿದ್ದರಿಂದ ಇಲ್ಲಿಯ ಆಸ್ಪತ್ರೆಯಲ್ಲಿ ಈತನಿಗೆ ಚಿಕಿತ್ಸೆಯು ನಡೆಯುತ್ತಿದೆ.

ಇದೇ ತಾ ೧೯ರಲ್ಲಿ ಇಲ್ಲಿ ಒಂದು ಅಪಮರಣ ಸಂಭವಿಸಿತು. ಇಲ್ಲಿಯ ರಾ! ಮುಜೂರಿ ಶ್ರೀನಿವಾಸ ಭಂಡಾರಿಗಳ ಗಂಡು ಮಗುವು ಬೆಂಕಿಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದು ಆಡುತ್ತಾ ಇದ್ದು ಅದರೊಳಗಿನ ಕಡ್ಡಿಯನ್ನು ಉರಿಸಿದಾಗ ಅದ ಈ ಮಗುವು ಧರಿಸಿಕೊಂಡಿದ್ದ ಅಂಗಿಗೆ ತಾಗಿ ಮಗುವಿನ ಮೈಯನ್ನು ವಿಪರೀತವಾಗಿ ಸುಟ್ಟಿತು. ಎಷ್ಟು ಚಿಕಿತ್ಸೆಯನ್ನು ನಡಿಸಿದಾಗ್ಯೂ ಪ್ರಯೋಜನವಾಗದೆ ಮಗುವನ್ನು ಬದುಕಿಸಲಾಗಲಿಲ್ಲ.

ಇದೇ ಮಾರ್ಚ ತಾ ೭ನೆ ರವಿವಾರ ರಾತ್ರಿ ಚಿತ್ರಾ ಚಂದ್ರಗ್ರಹಣವಾಗು ತ್ತದೆ. ಎಂದರೆ ಸ್ಟಾಂಡರ್ಡ ಸಮಯದ ರಾತ್ರಿ ಘಂಟೆ ೧೧ ಕಳೆದ ಬಳಿಕ ಘಂಟೆ ೦ [illegible] ವರೆಗೆ ಚಿತ್ರಾನಕ್ಷತ್ರವು ಚಂದ್ರಬಿಂಬದಿಂದ ಮುಚ್ಚಲ್ಪಟ್ಟು ಕಾಣದೆ ಹೋಗು ವುದು. ಈ ಗಣಿತವು ಸುಪ್ರಸಿದ್ಧ ಜ್ಯೋತಿಷಿಗಳಾದ ರಾ! ವೆಂಕಟೇಶ ಬಾಪೂಜಿ ಕೇತಕರ ಮಹಾಶಯರಿಂದ ರಚಿಸಲ್ಪಟ್ಟ ನೂತನ ಕರಣಗ್ರಂಥದಿಂದ ಗುಣಿಸಿದ್ದಾ ಗಿದೆ. ರಾ! ಕೇತಕರರ ಗಣಿತದ ಸೂಕ್ಷ್ಮತೆಯನ್ನು ತಿಳಿಯಲಪೇಕ್ಷಿಸುವ ಕನ್ನ ಡಿಗರು ಈ ದಿನ ರಾತ್ರಿ ಪರೀಕ್ಷಿಸಬೇಕಾಗಿ ಅಪೇಕ್ಷಿಸುವ. ಇತಿ

ವೈಜಯಂತೀ ಪಂಚಾಂಗ ಸಂಪಾದಕರು, ಪುತ್ತೂರು.

ಕೆದಿಲ.—ಇಲ್ಲಿ ಮ! ರಾ! ರಾ! ಬಡೆಕ್ಕಿಲ ಸುಬ್ಬಣ್ಣ ಭಟ್ಟರ ಮಗ ಈಶ್ವರ ಭಟ್ಟ ಹಿಂದೂವೈದ್ಯ ಇವರು ಸಂಸ್ಕೃತ ಶಾಲೆಯೊಂದನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಪುತ್ತೂರು ಸೀಮೆಯ ಮಾನ್ಯಗೃಹಸ್ಥರಿಂದ ಸುಮಾರು ೫೦೦ ರೂಪಾಯಿ ಗಳನ್ನು ವಂತಿಗೆರೂಪವಾಗಿ ವಸೂಲು ಮಾಡಿದ್ದಲ್ಲದೆ ಸುಮಾರು ೭೫೦ ರೂಪಾಯಿ ಗಳನ್ನು ತಮ್ಮ ಕೈಯಿಂದ ಕೂಡಿಸಿ ಪುತ್ತೂರು ಸೀಮೆಯ ಎಲ್ಲ ಮಕ್ಕಳಿಗೆ ಸಂಸ್ಕೃತ ಭಾಷಾಭ್ಯಾಸಕ್ಕೆ ಅನುಕೂಲವಾಗುವಂತೆ ಸೀಮೆಯ ಮಧ್ಯಸ್ಥಳವಾದ ಕೆದಿಲಗ್ರಾಮದ 'ವನದ್ಕ' ಎಂಬಲ್ಲಿ ಹೊಸ ಶಾಲೆಯೊಂದನ್ನು ಕಟ್ಟಿಸಿರುವರು. ಈ ಸತ್ಕಾರ್ಯದ ಕಾರ್ಯದಲ್ಲಿ ಸದರಿ ಈಶ್ವರ ಭಟ್ಟರಿಗೆ ರಾ! ಕೃಂತಜೆ ತಿಮ್ಮಣ್ಣಭಟ್ಟ, ರಾ! ಬಡೆಕ್ಕಿಲ ವೆಂಕಟರಮಣ ಭಟ್ಟ, ಮಂಗಳೂರು ಬಂ ಸಾಹುಕಾರ, ರಾ! ಕುಕ್ಕಜೆ ಕೃಷ್ಣಭಟ್ಟ, ರಾ! ಬಡೆಕ್ಕಿಲ ಗೋವಿಂದ ಭಟ್ಟ ಈ ನಾಲ್ಕು ಜನರು ಹೆಚ್ಚಿಗೆ ಸಹಾಯಕರಾಗಿರುವರು. ಈ ಗ್ರಾಮದ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲವಾದ ಕಟ್ಟಡವಿಲ್ಲದ್ದರಿಂದ ಅದಕ್ಕಾಗಿ ಸಂಸ್ಕೃತ ಶಾಲೆಯೊಂದಿಗೆ ಬೇರೊಂದು ಕಟ್ಟಡವು ಜೊತೆಯಾಗಿ ಕಟ್ಟಲ್ಪಟ್ಟಿದೆ. ಹೀಗೆ ಸಂಸ್ಕೃತ ಹಾಗು ಕನ್ನಡ ಭಾಷೆಗಳ ಅಧ್ಯಯನಕ್ಕಾಗಿ ಕಟ್ಟಿಸಿದ ಈ ಉಭಯ ಶಾಲೆಗಳ ಪ್ರವೇಶ ಸಮಾರಂಭವು ಕಳೆದ ಫೆಬ್ರವರಿ ತಾ. ೧೯ ಶನಿವಾರ ರಾತ್ರಿ ನಡೆಯಿತು. ರವಿವಾರ ಪ್ರಾತಃಕಾಲ ಘಂಟೆ ೮ರ ಸಮಯಕ್ಕೆ ಕೂಡಿದ ಜನರು ಚಿಕ್ಕದೊಂದು ಮೀಟಿಂಗನ್ನು ರಾ! ಕೃಂತಜೆ ಭೀಮ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿದರು. ಮೊದಲು ಬಾಲಕರು ರಾಷ್ಟ್ರಗೀತವನ್ನು ಹಾಡಿ ರಾ! ಭೀಮಭಟ್ಟರು ಸರ್ವಾನುಮತದಿಂದ ಅಧ್ಯಕ್ಷಸ್ಥಾನವನ್ನಲಂಕರಿಸಿದ ಮೇಲೆ ಸದರಿ ಕನ್ನಡ ಶಾಲಾ ಪ್ರಧಾನೋಪಾಧ್ಯಾಯರಾದ ರಾ! ನಟ್ಟ ರಾಮಕೃಷ್ಣಯ್ಯ ನವರು ತಮ್ಮ ದೀರ್ಘ ಭಾಷಣದಲ್ಲಿ ಇದೇ ಸೀಮೆಯಲ್ಲಿ ಕಳೆದ ೩೦ ವರ್ಷ ಗಳೊಳಗಿನ ತಮ್ಮ ಅಧ್ಯಾಪಕತ್ವವನ್ನು ವಿವರಿಸಿ ಪ್ರಕೃತ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಶಿಕ್ಷಣಕ್ಕೆ ಯೋಗ್ಯ ಕಟ್ಟೋಣಮಾಡಿದ್ದನ್ನು ಅಭಿನಂದಿಸಿ ಧನಸಹಾಯ ಮಾಡಿದವರನ್ನು [illegible] ಈ ಕಾರ್ಯವನ್ನು ನೆರವೇರಿಸಿದ ರಾ! ಬಡೆಕ್ಕಿಲ ಈಶ್ವರ ಭಟ್ಟರ ಕುಟುಂಬಕ್ಕೆ ಭಗವಂತನು ಕಲ್ಯಾಣ ಪ್ರದನಾಗಲೆಂದು ಪ್ರಾರ್ಥಿಸಿ ತಮ್ಮ ಮಾತನ್ನು ಮುಗಿಸಿದರು. ಆ ಮೇಲೆ ಸಂಸ್ಕೃತಾಧ್ಯಾಪಕರಾದ ವೇ! ಮಿತ್ತೂರು ನಾರಾಯಣ ಭಟ್ಟರು ತಾವು ಒಂಬತ್ತು ವರ್ಷಪರ್ಯಂತ ನಡಿಸಿದ ಸಂಸ್ಕೃತ ಶಾಲೆಯ ವೃತ್ತಾಂತವನ್ನು ಹೇಳಿ ಈ ಶಾಲೆಯು [illegible] ಮಹಾಜನರ ಸಹಾಯದಿಂದ [illegible]

[illegible]

[illegible]

ಸ್ವದೇಶಾಭಿಮಾನಿ.

ಶಕ ೧೮೪೧ ಫಲ್ಗುಣ ಬ ೧ ಶುಕ್ರವಾರ.

ನೋಕರಶಾಹಿಯ ಅನುದಾರತೆ.

ಈ ಹೊತ್ತಿನ ಅಗ್ರಲೇಖದ ಶಿರೋಲೇಖವನ್ನು ನೋಡಿ ನಮ್ಮ ವಾಚಕರಲ್ಲಿ ಅನೇಕರಿಗೆ ಸೋಜಿಗವಾಗದೆ ಇರದು; ಕಡಿಮೆ ಪಕ್ಷದಲ್ಲಿ ನೋಕರ ಪಕ್ಷಪಾತಿಗಳಾದವರಿಗಾದರೂ ನಮ್ಮ ಶಿರೋಲೇಖವು ಶಿರೋವೇದನೆಯ ಉಂಟುಮಾಡದೆ ಇರಲಿಕ್ಕಿಲ್ಲ. ಮತ್ತು ಒಂದು ದೃಷ್ಟಿಯಿಂದ ಅವರಿಗೆ ಹಾಗಾಗುವದು ಉಚಿತವೆ ಎನ್ನೋಣ. ಯಾಕೆಂದರೆ ಮಹಾಯುದ್ಧವು ಮುಗಿದ ಮೇಲೆ ಬ್ರಿಟಿಷ್ ಪಾರ್ಲಿಮೆಂಟಿನವರು ಹಿಂದುಸ್ಥಾನಕ್ಕೆ ಮಹತ್ವಾದ ಸುಧಾರಣೆಗಳನ್ನು ಕೊಡಲು ಕಾಯದೆ ಪಾಸುಮಾಡಿದ್ದಾರೆ; ಶಿಕ್ಷಣಖಾತೆಯಲ್ಲಿ ಪ್ರಗತಿಪರವಾದ ಅನೇಕ ಸುಧಾರಣೆಗಳು ತಲೆದೋರಹತ್ತಿವೆ. ಔದ್ಯೋಗಿಕ ಇಲಾಖೆಯನ್ನು ಸ್ವತಂತ್ರವಾಗಿ ತೆರೆದು ಹಿಂದುಸ್ಥಾನದ ಕೈಗಾರಿಕೆಗಳಿಗೆ ಉತ್ತೇಜನಕೊಡಲು ಸರಕಾರದ ಮತ್ತು ಅಧಿಕಾರಿಗಳ ಅವ್ಯಾಹತ ಪ್ರಯತ್ನಗಳು ನಡೆದಿವೆ; ಇದೇ ರೀತಿಯಿಂದ ಇತರ ಇಲಾಖೆಗಳಲ್ಲೂ ಜನಗಳ ಕೋರಿಕೆಯ ಮೇರೆಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಸರಕಾರವು ಕೊಡುತ್ತಿದೆ. ಇದು ನಾಳೆ ಬರುವ ಸುಧಾರಣಾ ಸೂರ್ಯೋದಯದ ಗುರುತು. ಎಂದರೆ, ಈ ಹೊತ್ತಿನ ಈ ಎಲ್ಲ ಒಳ್ಳೇ ಸಂಗತಿಗಳು ಅರುಣೋದಯದ ಪಾಲಿಗೆ ಸೇರಿದವುಗಳು. ಎಂದಮೇಲೆ ಅರುಣೋದಯದ ಈ ಸುಪ್ರಭಾತ ಮತ್ತು ಪ್ರಸನ್ನವಾದ ಕಾಲದಲ್ಲಿ 'ನೋಕರಶಾಹಿಯ ಅನುದಾರತೆ' ಎಂಬ ಭಾಷೆಯನ್ನು ಉಪಯೋಗಿಸುವುದು ಸಮಂಜಸವಾದೀತೆ? ನಾಳೆಯ ಸುಧಾರಣೆಗಳನ್ನು ಪಾರ್ಲಿಮೆಂಟಿನ ಸಂಸ್ಥೆಯು ಕೈ ಎತ್ತಿಕೊಟ್ಟದೆಯಷ್ಟೆ. ಅವುಗಳನ್ನು ಮಹೋದಾರಧಿಗಳಾದ ಬಾದಶಹರವರು ಸಂತುಷ್ಟಚಿತ್ತದಿಂದ ಒಪ್ಪಿಕೊಂಡಿದ್ದಾರೆ. ಜನಗಳೂ ಮತ್ತು ಅಧಿಕಾರಿಗಳೂ ಪರಸ್ಪರ ಸಹಕಾರಿತೆಯಿಂದ ರಾಜ್ಯರಥವನ್ನು ನಡಿಸಬೇಕೆಂದು ಬಾದಶಹರವರು ತಮ್ಮ ಸದಿಚ್ಛೆಯನ್ನು ವ್ಯಕ್ತಗೊಳಿಸಿದ್ದಾರೆ. ಈ ಮೇರೆಗೆ ನೂತನ ಸುಧಾರಣೆಗಳ ಅವತಾರ, ಬಾದಶಹರವರ ಸದ್‌ವಿಚಾರ, ಅಧಿಕಾರಿಗಳ ಸಹಕಾರ ಇತ್ಯಾದಿ ಮಹತ್ವದ ಸಮಾಚಾರಗಳು ಹಿಂದುಸ್ಥಾನದ ರಾಜಕೀಯ ವಾತಾವರಣವನ್ನು ಸೇರಿಕೊಂಡಿರುವಾಗ ಪುನಃ 'ನೋಕರಶಾಹಿಯ ಅನುದಾರತೆ' ಎಂಬ ಭಾಷೆಯು ಸಮಂಜಸವಾದೀತೆ? ಎಂದು ನೋಕರಶಾಹಿಯ ಪಕ್ಷಪಾತಿಗಳು ಒಂದುವೇಳೆ ಕೇಳಿಯಾರು. ಮೇಲಿನ ಭಾಷೆಯು ಅವರ ಮತದಂತೆ ಸಮಂಜಸವಲ್ಲವಾದರೂ ಯಥಾರ್ಥವಾಗಿದೆ ಎಂಬುದು ಮಾತ್ರ ನಿರ್ವಿವಾದವಾಗಿದೆ.

ಮೇಲಿನ ಆಕ್ಷೇಪದಲ್ಲಿ ತೋರಿಸಿದಂತೆ ನೋಕರಶಾಹಿಯು ಅನೇಕ ಸಂಗತಿಗಳಲ್ಲಿ ಲೋಕಮತದ ಮಹತ್ವವನ್ನು ಅರಿತು ಆ ಮೇರೆಗೆ ಎಷ್ಟೋ ಪ್ರತಿಕೂಲತೆಗಳನ್ನು ತೆಗೆದುಹಾಕಿದೆ ಎಂಬುದನ್ನು ನಾವು ಕೂಡ ಬಹು ಪ್ರಾಂಜಲತನದಿಂದ ಒಪ್ಪಿಕೊಳ್ಳುತ್ತೇವೆ. ನಮ್ಮಿಂದ ಈ ಮಾತನ್ನು ಒಪ್ಪಿಸಲು ನೋಕರಶಾಹಿಯಾಗಲಿ ಅಥವಾ ತತ್ಪಕ್ಷೀಯರಾಗಲಿ ನಮಗೆ ಯಾವ ಸೂಚನೆಯೂ ಕೊಡಬೇಕಾದ ಅಗತ್ಯವಿಲ್ಲ. ಕಾರಣ, ಮೇಲಿನ ಆಕ್ಷೇಪದ ಭಾಗದಲ್ಲಿ ನಾವೇ ಬೇಕಾದರೆ, ಇನ್ನೂ ಅನೇಕ ಉದಾಹರಣೆಗಳನ್ನು ಭರತಿಗೆ ತುಂಬಿಸಬಹುದು. ಬಾದಶಹರು ಅಧಿಕಾರಿ ಹಾಗು ಪ್ರಜೆಗಳಲ್ಲಿರುವ ಹಿಂದಿನ ವೈಮನಸ್ಯವು ನಷ್ಟವಾಗುವಂತೆ ರಾಜಕೀಯ ಕೈದಿಗಳನ್ನು ವಿಮೋಚನೆಪಡಿಸಬೇಕೆಂದು ಯಾವ ಸಂದೇಶವನ್ನು ಕಳುಹಿಸಿಕೊಟ್ಟಿರುವರೊ ಅದರಂತೆ ಹಿಂದುಸ್ಥಾನದೊಳಗಿನ ಅಧಿಕಾರಿಗಳು ಎಲ್ಲರನ್ನು ಅಲ್ಲವಾದರೂ ಅನೇಕ ರಾಜಕೀಯ ಕೈದಿಗಳನ್ನು ಬಿಡುಗಡೆ ಪಡಿಸಿದ್ದಾರೆ. ಬಾದಶಹರು ಈ ಮಾಫಿಯ ಪೆಟ್ಟಿಗೆಯನ್ನು ಅಧಿಕಾರಿಗಳ [illegible] ಖಣಗಳನ್ನು ತೆರೆಯುವುದನ್ನು [illegible] ಮಾಫಿ ಪೆಟ್ಟಿಗೆಯ [illegible] ಖಣಗಳನ್ನು ಮಾತ್ರ ತೆರೆಯುತ್ತಾರೆ. [illegible] ಪ್ರಾಂತದ ಅಧಿಪತಿಗಳು ತಮ್ಮ ಕೈಗೆ ಬಂದ ಪೆಟ್ಟಿಗೆಯ ಎಲ್ಲ ಖಣಗಳನ್ನು ತೆರೆದು ಅದರೊಳಗಿಂದ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಬಿಟ್ಟರು. ಪೆಟ್ಟಿಗೆಯ ಇನ್ನೊಂದು ಬಾಗಿಲು ತೆರೆದು ಅದರಲ್ಲಿ ಇಟ್ಟಿರುವ ಮುದ್ರಣದ ಜಾಮೀನುರಕಮುಗಳನ್ನು ಹಿಂದಕ್ಕೆ ಕೊಟ್ಟರು. ಬಿಹಾರ ಪ್ರಾಂತದ ಗವರ್ನರರು ಇದೆ ಖಣವನ್ನು ತೆರೆದು ಅಲ್ಲಿಯ 'ಸರ್ಚಲಾಯಿಟ್' ಮುಂತಾದ ಪತ್ರಿಕೆಗಳ ರಕಮುಗಳನ್ನು ಬಿಡಿಸಿ ಕೊಟ್ಟರು. ನಮ್ಮ ಮದ್ರಾಸ ಸರಕಾರವಾದರೂ ಈ ಪೆಟ್ಟಿಗೆಯ ಉಪಯೋಗವನ್ನು ಕಡಿಮೆಪಡಕೊಂಡಿದಲ್ಲ. ಎಷ್ಟೋ ರಾಜಕೀಯ ಕೈದಿಗಳನ್ನು ಬಿಟ್ಟಂತೆಯೆ ಅದು ಪ್ರೆಸ್ ಎಕ್ಟಿನ ಜಾಮೀನು [illegible] ರದ್ದು ಮಾಡಿದೆ. ಮುಂಬಯಿ ಸರಕಾರವಾದರೂ ಈ [illegible] ಜಾಮೀನು [illegible] ದಲ್ಲಿ ಕ್ರಿಯಾಶೂನ್ಯವಾಗಿದೆಯೆ? ಇಲ್ಲ. ಪ್ರೆಸ್ ಎ[illegible] ಸರಕಾರವು ತನ್ನ [illegible] ಗಳನ್ನು ರದ್ದು ಪಡಿಸಬೇಕೆಂದು ಮುಂಬ[illegible] [illegible]ಡನ್‌ಹೆಮ್ ದೊರೆಗಳ ಔದಾರ್ಯವನ್ನು ವ್ಯಕ್ತಗೊಳಿಸಿದೆ. [illegible] ಕಾಲದಿಂದ ದೇಶದೊಳಗಿನ ಉ[illegible]ತೆಯ ಅನೇಕ ವಾಙ್ಮಯವನ್ನು ಮುಂಬಯಿ ಸರಕಾರವು [illegible] ಖಾತೆಗೆ ಜಮೆಮಾಡಿತ್ತು; ಅದನ್ನು ಕೂಡ ಈಗ ಪರೀಕ್ಷ[illegible]ರೆ ಒಳ್ಳೆಯದಾಗುತಿತ್ತು. ಇರಲಿ. ಈ ಮೇರೆಗೆ ಬ್ರಹ್ಮ[illegible]ದಿಂದ ಮುಂಬಯಿಯ ವರೆಗಿನ ಹಾಗು ಮದ್ರಾಸಿನಿಂದ ಬ[illegible]ದ ತನಕ ಎಲ್ಲ ಅಧಿಕಾರಿಗಳು ಮಾಫಿ ಪೆಟ್ಟಿಗೆಯ ಬಾಗಿ[illegible] ತೆರೆದು ಅದರ ಪ್ರಯೋಜನವನ್ನು ಹಲವು ವಿಧದಿಂದ [illegible]ಡುತಿದ್ದಾರೆ. ಈ ಮಾತನ್ನು ನಾವು ಎಂದೂ ಅಲ್ಲಗಳೆಯುವುದಿಲ್ಲ. "ನಭೂತೋ ನ ಭವಿಷ್ಯತಿ" ಎಂಬೀ ತರದ ಸಹಕಾರಿತೆಯನ್ನು—ಔದಾರ್ಯವನ್ನು ತಾವು ತೋರಿಸುತ್ತಿದ್ದೇವೆಂದು ಅಧಿಕಾರಿಗಳು ಬೇಕಷ್ಟುಹೇಳಲಿ ಇಲ್ಲವೆ ಮನಸ್ಸಿನಲ್ಲಿ ನಿಜವಾಗಿ ಹಾಗೆ ನೆನಸಿಕೊಳ್ಳಲಿ. ತಥಾಪಿ ಅವರು ಅಂಗೀಕರಿಸಿರುವ ಸಹಕಾರಿತೆಯು ಏಕದೇಶೀಯವಾಗಿದೆ, ಬಹು ಸಂಕುಚಿತವಾಗಿದೆ, ಆದರಲ್ಲಿ ಅನೇಕ ಪಕ್ಷಪಾತಗಳು ನಡೆಯುತ್ತವೆ ಎಂದು ಹೇಳಬಹುದು.

ಇದಕ್ಕೆ ಒಂದೇ ದೃಷ್ಟಾಂತವನ್ನು ಕೊಡಬಹುದು. ಸುಧಾರಣೆಗಳ ನವಯುಗವು ಪ್ರಾರಂಭವಾಗಲಿಕ್ಕಿರುವ ಈ ಕಾಲದಲ್ಲಿ ಅಧಿಕಾರಿಗಳಿಗೆ ಹಿಂದಿ ಜನತೆಯ ಸಹಕಾರಿತ್ವವು ಬೇಕಷ್ಟೆ. ಈ ಕಾರ್ಯದಲ್ಲಿ ಜನಗಳ ಎಲ್ಲ ತರದ ಅಭಿಪ್ರಾಯಗಳನ್ನೂ ಸಂಗ್ರಹಿಸಿ ಅವರಿಂದ ಕೆಲಸತೆಗೆದುಕೊಳ್ಳುವುದೇ ನಿಜವಾದ ಸಹಕಾರಿತೆಯು. ಈಗ ದೇಶದಲ್ಲಿ ಪಕ್ಷಗಳಿರಬಾರದು, ವಿಭಿನ್ನಮತಗಳಿರಬಾರದು, ಒಡಕಿರಬಾರದು, ಎಲ್ಲರೂ ಒಂದೇ ಧ್ಯೇಯಕ್ಕಾಗಿ, ಒಂದೆ ಮಾರ್ಗದಿಂದ ಮತ್ತು ಒಂದೇ ಪ್ರಯತ್ನದಿಂದ ಮುಂದರಿಸಬೇಕೆಂಬುದು ಸರ್ವಸಮ್ಮತವಾದ ಮಾತು. ಈ ಸಿದ್ಧಾಂತಕ್ಕೆ ಯಾವ ವೇದದಲ್ಲಾಗಲಿ, ಯಾವ ಧರ್ಮಗ್ರಂಥದಲ್ಲಾಗಲಿ, ಯಾವ ನೀತಿ ಶಾಸ್ತ್ರದಲ್ಲಾಗಲಿ ಇಲ್ಲವೆ ಯಾವ ಕಾಯಿದೆ ಪುಸ್ತಕದಲ್ಲಾಗಲಿ ಎದುರುವಾದವು ಇರಲಿಕ್ಕಿಲ್ಲ. ಅಷ್ಟು ನಿರ್ದೋಷವಾದ ಸಿದ್ಧಾಂತವಿದು. ಪರಂತು ಕೆಲವು ಸಿದ್ಧಾಂತಗಳು ಗ್ರಂಥಗಳಲ್ಲಿ ಇರುವ ವಾಡಿಕೆಯಲ್ಲಿದೆ ವ್ಯವಹಾರದಲ್ಲಿ ಅವುಗಳಿಗೆ ಹೆಚ್ಚಿನ ಅವಕಾಶವು ಇರುವುದಿಲ್ಲ; ಇದು ಶೋಚನೀಯವಾಗಿದೆ. ಅಂತೆಯೆ ದೇಶದಲ್ಲಿ ಪಕ್ಷಭೇದಗಳಿರಬಾರದೆಂಬ ಸಿದ್ಧಾಂತದ ಅವಸ್ಥೆಯಾದರೂ ಒಂದು ತೀಯಬೇಕು. ಕಾರಣ, ಹಿಂದುಸ್ಥಾನವಲ್ಲ, ಇಂಗ್ಲಂಡದಂಥ ಸ್ವತಂತ್ರ ರಾಷ್ಟ್ರಗಳಲ್ಲಿ ಕೂಡ ರಾಜಕೀಯ ವಿಷಯವನ್ನು ಕುರಿತು ನೂರಾರು ಪಕ್ಷಗಳಿವೆ; ಅಮೇರಿಕೆಯಲ್ಲಿವೆ; ಫ್ರಾನ್ಸಿನಲ್ಲಿವೆ; ಎಲ್ಲ ಕಡೆಗಳಲ್ಲೂ ಇವೆ. ಎಂದ ಮೇಲೆ ಹಿಂದುಸ್ಥಾನದಂಥ ಪತಿತ ರಾಷ್ಟ್ರದಲ್ಲಿ ಪಕ್ಷಭೇದಗಳು ಕಂಡು ಬರುವುದು ಆಶ್ಚರ್ಯವಲ್ಲ. ಪರಂತು ಆಶ್ಚರ್ಯದ ಸಂಗತಿ ಯಾವುದೆಂದರೆ, ಪಕ್ಷ ಭೇದಗಳು ತುಂಬಿರುವಲ್ಲಿ ದೇಶದಲ್ಲಿ ಸಮುದೃಷ್ಟಿಯ ಅಭಿಮಾನದ ಕಟ್ಟನ್ನು ತಲೆಯ ಮೇಲೆ ಹೊತ್ತುಕೊಂಡ ನೋಕರಶಾಹಿಯು ಎಲ್ಲ ಪಕ್ಷಗಳನ್ನು ತನ್ನ ಆಲೋಚನಾಮಂಡಲದಲ್ಲಿ ತೆಕ್ಕೊಂಡು ಕಾರ್ಯವನ್ನು ನಿರ್ವಹಿಸುವ ಬದಲಾಗಿ ಇಷ್ಟರನ್ನು ಮಾತ್ರ ತನ್ನ ಪ್ರಭಾವಳಿಯಲ್ಲಿ (ಆಪ್ತೆಯಲ್ಲಿ) ಕೂಡ್ರಿಸಿಕೊಳ್ಳ ಹತ್ತಿದೆ. ರಿಫೋರ್ಮ ಎಕ್ಟಿನಂತೆ ಮುಂದಿನ ಕಾರ್ಯಕ್ರಮವನ್ನು ಪ್ರಾರಂಭಿಸ ಬೇಕಾದುದಕ್ಕೆ ಅದಕ್ಕೆ ಬೇಕಾದ ಪೂರ್ವಾನುಭವನ್ನು ಸಂಗ್ರಹಿಸಲು ಹಾಗು ಮಂತ್ರಿ ಮಂಡಲದ, ಮತದಾರತನದ ನಿಯಮುಗಳನ್ನು ರಚಿಸಲು ಹಿಂದುಸ್ಥಾನ ಸರಕಾರವು ಒಂದು ಕಮಿಟಿಯನ್ನು ನೇಮಿಸಿದೆ. ಹಾಗು ಮದ್ರಾಸು ಸರಕಾರವು ಕೂಡ ತನ್ನ ಪ್ರಾಂತ್ಯದ ಮಟ್ಟಿಗೆ ರಿಫೋರ್ಮ ಕಮಿಟಿಯನ್ನು ನೇಮಿಸಿದೆ. ದೃಷ್ಟಾಂತಕ್ಕೆ ಈ ಎರಡೇ ಉದಾಹರಣೆಗಳು ಸಾಕು. ಈ ಎರಡು ಸರಕಾರಗಳು ಮೇಲಿನ ಯಾವ ಕಮಿಟಿಗಳನ್ನು ನೇಮಿಸಿವೆಯೊ ಅವುಗಳಲ್ಲಿ ರಾಷ್ಟ್ರೀಯ ಪಕ್ಷದವರನ್ನು ಸೇರಿಸಿಕೊಂಡಿರಲಿಲ್ಲ. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳು ಈ ಕಾರ್ಯದಲ್ಲಿ ಅಸ್ಪೃಶ್ಯರಂತೆ ಹೊರಕ್ಕೆ ನೂಕಲ್ಪಟ್ಟಿದ್ದಾರೆ. ಈಗಿನ ಇಪ್ಪತ್ತನೆ ಶತಮಾನದ ಸುಧಾರಿಸಿದ ಸರಕಾರಕ್ಕೆ ಭೇದದೃಷ್ಟಿ ಇಲ್ಲ. ಮೊದಲಾದರೆ ಬ್ರಾಹ್ಮಣರು ಹೊಲೆಯರನ್ನು ಅಸ್ಪೃಶ್ಯರೆಂದು ದೂರಕ್ಕೆ ಇಡುತಿದ್ದರು. ಪರಂತು ಗ್ರಾಮಪಂಚಾಯತಿನ ಇತಿಹಾಸವನ್ನು ನೋಡಿದರೆ ಅಸ್ಪೃಶ್ಯನಿಗೂ ದೇಶದ ಎಂದರೆ ಗ್ರಾಮದ ಕಾರ್ಯದಲ್ಲಿ ಸ್ಥಾನವು ಸಿಗುತಿತ್ತು ಎಂದು [illegible] ಬಂ[illegible]ರು ಸ್ಪಷ್ಟ[illegible] [illegible] ಯನ್ನು ಹಾಕಿ [illegible] ಮತ್ತು ಪಾಪಾತ್ಮ [illegible] ಕೊಡದಿಯಲ್ಲ? [illegible] ಜವಾಬದಾರಿಯ ರಾಜಕೀಯ ನ್ಯಾಯ[illegible] ಸ್ವಯಂ ನಿರ್ಣಯದ ಮೊದಲನೆ ಕಂತು ಪದ್ಧತಿಯಿಂದ [illegible] ಮತ್ತು ಕೃತಿಯಲ್ಲಿ ಮಾತ್ರ ತಮ್ಮ ಎಂದು [illegible] ಪ್ರಿಯರಾಗಿರುವವರನ್ನು ದೂರದಲ್ಲಿಡೋಣ. ಇದು ಯಾವ ದೃಷ್ಟಿ, ಯಾವ ನ್ಯಾಯ? ಮದುವೆಮುಂಗಲದ ಕಾಲದಲ್ಲಿ ಅವರು ಇಷ್ಟಮಿತ್ರರನ್ನು ಒಡಗೂಡಿ ಔತಣವನ್ನು ಹೊಂದಿಸುವದು ಅಥವಾ ಉಡುಗೊರೆಗಳನ್ನು ಕೊಡುವುದು ಉಚಿತವಾದರೂ ಇಡೀ ದೇಶದ ಹಿತಕ್ಕೆ ಸಂಬಂಧಪಟ್ಟ ಈ ರಾಜಕೀಯ ಕಾರ್ಯದಲ್ಲಿ ಪ್ರಿಯರು, ಅಪ್ರಿಯರು, ಇಷ್ಟರು, ಅನಿಷ್ಟರು ಎಲ್ಲರು ಇರಬೇಕಾದ್ದ ಉಚಿತವು. ಪರಂತು ನೋಕರಶಾಹಿಯು ದಬ್ಬಿಟ್ಟಲ್ಲಿ ಮೊದರೇಟರು ಮಾತ್ರ ಕಾಣುತ್ತಾರೆ. ರಾಷ್ಟ್ರೀಯರು ಕಾಣುವುದಿಲ್ಲ. ಇದರ ಅರ್ಥವೇನು? ವರಿಷ್ಠ ಕೌನ್ಸಿಲಿನಲ್ಲಿ ರಾಷ್ಟ್ರೀಯ ಸಭೆಯ ಅನುಯಾಯಿಗಳನ್ನು ಕಮಿಟಿಯಲ್ಲಿ ಯಾಕೆ ಸಮಾವೇಶವಿಲ್ಲವೆಂದು ಕೇಳಿದಕ್ಕೆ ಸರಕಾರದ ಕಡೆಯಿಂದ ಯಾವ ಜವಾಬು ಕೊಡೋಣವಾಗಿದೆಯೋ ಅದರ ಮೇಲಿಂದ ಅಧಿಕಾರಿಗಳಿಗೆ ರಾಷ್ಟ್ರೀಯ ಸಭೆಯ ಗುರುತೇ ಇಲ್ಲವೆಂದು ಹೇಳಬೇಕಾಗುತ್ತದೆ. ಈಗ ೩೦-೩೫ ವರ್ಷಗಳಿಂದ ಹಿಂದೀ ಲೋಕಮತವನ್ನು ಪ್ರತಿಪಾದಿಸುವ ರಾಷ್ಟ್ರೀಯ ಸಭೆಯಂಥ ಸರ್ವಮಾನ್ಯ ಸಂಸ್ಥೆಯ ಪರಿಚಯವು ಅಥವಾ ನೆನಪು ಅಧಿಕಾರಿಗಳಿಗೆ ಆಗಲಿಲ್ಲವೆಂದಾದರೆ ಅವರು ಸರ್ವಜ್ಞರೆಂಬುವುದು ಹೇಗೆ? ಮತ್ತು ಅವರು ಇದನ್ನು ಆಳುವದೆಂಬುದಾದರೂ ಹೇಗೆ? ಇಲ್ಲ. ಅವರಿಗೆ ಸಂಪೂರ್ಣ ಸಂಗತಿ ಗೊತ್ತುಂಟು. ಅವರು ಸರ್ವಜ್ಞರು; ಮತ್ತು ಇದೆಲ್ಲ ನಿಜ. ಪರಂತು ಒಂದು ಬೆರಳಿನ ಉಗುರು ಇನ್ನೊಂದು ಬೆರಳಿಗೆ ಹಚ್ಚುವ ಚಾತುರ್ಯವು ಅವರಲ್ಲಿರುವುದರಿಂದ ಅವರು ಮೇಲಿನಂಥ ಸಮಯ ಜಾರಿಸುವ ಉತ್ತರವನ್ನು ಕೊಡುತ್ತಾರೆ. ರಾಷ್ಟ್ರೀಯರನ್ನು ಬಿಟ್ಟು ಕೆಲಸ ಮಾಡಬೇಕೆಂದು ಅಪೇಕ್ಷೆ ಅವರಲ್ಲಿದೆ ಎಂದು ನಾವೇ ಅಲ್ಲ, ಯಾರೂ ಆಣೆಕೊಟ್ಟು ಹೇಳಲಿಕ್ಕಿಲ್ಲ. ಇದು ಹೌದು. ಕಾರ್ಯದಿಂದ ಮಾತ್ರ ಮೇಲಿನ ಅಪವಾದದ ಮಾಳಿಯನ್ನು ನೋಕರಶಾಹಿಯು ತನ್ನ ಕುತ್ತಿಗೆಗೆ ಹಾಕಿಕೊಳ್ಳುತ್ತದೆ. ಇದು ತುಂಬಾ ಶೋಚನೀಯವು. ಈಗ ಒಂದು ವೇಳೆ ಈ ಗೋಪ್ಯ ಸ್ಫೋಟನವನ್ನು ಮಾಡುವ ಉದ್ದೇಶದಿಂದ ಪ್ರಶ್ನೆ ಕೇಳಿದರೆ ಸರಕಾರವು ಮೇಲಿನಂತೆ ಚಾತುರ್ಯದ ಜವಾಬನ್ನು ಕೊಡುತ್ತದೆ. ಇದರಿಂದ ನೋಕರಶಾಹಿಯ ಚಾತುರ್ಯವು ವ್ಯಕ್ತವಾದಂತೆ ಅನುದಾರತೆಯು ಕೂಡ ಬಹಿರಂಗಕ್ಕೆ ಬಂದು ಹೋಗುತ್ತದೆ. ಇನ್ನು ಮುಂದಾದರೂ ಇಂಥ ಸಂಗತಿಗಳು ಬಹಿರಂಗವಾಗದ ರೀತಿಯಲ್ಲಿ ನೋಕರಶಾಹಿಯು ನಡಕೊಳ್ಳುವುದು ಯೋಗ್ಯವಾಗಿದೆ.

ಸ್ಫುಟವಿಚಾರಗಳು

೧. ಮದ್ರಾಸಿನಲ್ಲಿ ಸುಧಾರಣಾ ಎಕ್ಟಿಗೆ ಅನುಗುಣವಾಗಿ ಆಗ ತಕ್ಕ ಚುನಾವಣೆ ಮೆಂಬರರ ಸಂಖ್ಯೆಯಲ್ಲಿ ಬ್ರಾಹ್ಮಣರಿಗೆ ಎಷ್ಟು ಸ್ಥಾನಗಳಿರಬೇಕು, ಬ್ರಾಹ್ಮಣೇತರರಿಗೆ ಎಷ್ಟು ಇರಬೇಕು ಎಂಬುದನ್ನು ಗೊತ್ತುಹಚ್ಚುವುದಕ್ಕಾಗಿ ಸ್ವತಃ ಲೊರ್ಡವಿಲಿಂಗಡನ್ನರು ಪ್ರಾಜಿಸಿದ್ದು, ಇತ್ತಂಡದ ಪ್ರತಿನಿಧಿಗಳ ಸಭೆ ಸೇರಿದಾಗ, ಯಾವುದೊಂದು ಇತ್ಯರ್ಥಕ್ಕೆ ಬಾರದೆ, ಕಡೆಗೆ ಇಂಡಿಯಾ ಸರಕಾರದವರ ಸೂಚನೆ ಮೇರೆಗೆ ಲೊರ್ಡ ಮೆಸ್ಟನರು ಇದನ್ನು ತೀರ್ಮಾನಿಸುವುದಕ್ಕೆ ಪಂಚಾಯಿತರಾಗಿ ನೇಮಿಸಲ್ಪಟ್ಟಿದ್ದಾರೆ. ವಿಲಾಯಿತಿಯಲ್ಲಿ ಜೊಯಿಂಟ್ ಕಮಿಟಿಯವರು ಮಾಡಿದ ರಿಪೋರ್ಟಿನ ಮೇರೆಗೆ ಅಬ್ರಾಹ್ಮಣರಿಗೆ ಮದ್ರಾಸು ಮತ್ತು ಮುಂಬಾಯಿ ಪ್ರಾಂತಗಳಲ್ಲಿ ಅವರ ಜನಸಂಖ್ಯೆಯ ಮಿತಿಯಿಂದ ಸಾಕಷ್ಟು ಪ್ರತಿನಿಧಿಗಳು ಸಿಗುವ ರೀತಿಯಲ್ಲಿ ಚುನಾವಣೆ ಮೆಂಬರರ ಮಿತಿ ಇಡಬೇಕೆಂದಿತ್ತು. ಇದನ್ನು ಇತ್ತಂಡದವರು ತಮಗೆ ಬೇಕಾದ ರೀತಿಯಲ್ಲಿ ಪರಿವರ್ತಿಸಿ ಟೀಕಿಸ ತೊಡಗಿದ್ದಾರೆ. ಮದ್ರಾಸಿನಲ್ಲಿ ಸಂಖ್ಯಾಮಾನದಿಂದ ನೋಡುವುದಾದರೆ ಬ್ರಾಹ್ಮಣಪಕ್ಷದ ಒಬ್ಬ ಮೆಂಬರನಿದ್ದರೆ ಅಬ್ರಾಹ್ಮಣರ ಕಡೆಯಿಂದ ೮ ಮೆಂಬರರು ಬರಬೇಕು. ಅಂದರೆ ಈಗ ಚುನಾವಣೆಗೆ ಎಂಗಡಿಸಿದ ೬೬ ಮೆಂಬರಿಕೆಗಳಲ್ಲಿ ೬ ಅಥವಾ ೭ ಮಂದಿ ಬ್ರಾಹ್ಮಣರು ಮಾತ್ರ ಚುನಾವಣೆಯಾಗಲಿಕ್ಕೆ ಎಡೆ ಇದೆ. ಆದರೆ ಅಬ್ರಾಹ್ಮಣರು ಆ ದಾಮಾಶಾಯದಿಂದ ತಮಗೆ 'ಸೀಟು' ಸಿಗಬೇಕೆಂದು ಹೇಳುವುದಿಲ್ಲ. ೬೬ರಲ್ಲಿ ತಮಗೆ ೪೨ 'ಸೀಟು' ಬೇಕು ಎಂದು ಅವರ ಆಗ್ರಹವಿದೆ. ಬ್ರಾಹ್ಮಣರ ಅಭಿಮತದಲ್ಲಿ ಪ್ರತಿಯೊಂದು ಜಿಲ್ಹೆಗೆ ಒಬ್ಬ ಅಬ್ರಾಹ್ಮಣ ಪ್ರತಿನಿಧಿ ಮತ್ತು ಮದ್ರಾಸು ಶಹರಿಗೆ ಇನ್ನೂ ಎರಡು ಮಂದಿ ಹೆಚ್ಚಿಗೆ ಕೊಟ್ಟು, ಅಂದರೆ ೬೬ರಲ್ಲಿ ೨೫ ಅಥವಾ ೨೭ 'ಸೀಟು'ಗಳನ್ನು ಅಬ್ರಾಹ್ಮಣರಿಗೋಸ್ಕರ ಎಂಗಡಿಸಿಟ್ಟು, ಉಳಿದ ಸೀಟುಗಳಿಗೆ ಬ್ರಾಹ್ಮಣರೂ ಅಬ್ರಾಹ್ಮಣರೂ ಉಮೇದ್ವಾರರಾಗಿ ನಿಲ್ಲುವಂತೆ ಮಾಡುವುದು ಒಳ್ಳೇದೆಂದು ಸೂಚನೆಯಿದೆ. ಅಬ್ರಾಹ್ಮಣರಲ್ಲಿ ಎರಡು ಪಕ್ಷಗಳು ಇವೆ. ಒಂದು ಪಕ್ಷವು ಜಾತಿವಾರ ಪ್ರತಿನಿಧಿತ್ವ [illegible] ಆದರೆ ಅಬ್ರಾಹ್ಮಣರಿಗೆ [illegible]

[illegible] ...ಗೆದಿಯಾಗಿ ಇಷ್ಟು ಸೀಟುಗಳು ಇರಬೇಕು ಎಂದು ಏರ್ಪಡಿಸದಿದ್ದರೆ ಬ್ರಾಹ್ಮಣರಲ್ಲಿ ವಕೀಲರೂ ದೊಡ್ಡ ಹುದ್ದೆದಾರರೂ ಹೆಚ್ಚಿಗೆ ಇರುವುದರಿಂದ ಅವರ ಬಲದಿಂದ ಬ್ರಾಹ್ಮಣ ಪ್ರತಿನಿಧಿಗಳ ಸಂಖ್ಯೆಯೇ ಹೆಚ್ಚಾಗಿ ಅಬ್ರಾಹ್ಮಣರನ್ನು ಮೂಲೆಗೆ ತಳ್ಳೀತು ಎಂದು ವಾದಿಸುತ್ತಾರೆ. ಈ ಪಕ್ಷದ ಮುಖಂಡರು ಮ॥ ರಾ॥ ರಾ॥ ದಿವಾನ ಬಹದ್ದೂರ ಕೇಶವ ಪಿಳ್ಳೆಯವರು. ಇನ್ನೊಂದು ಪಕ್ಷದವರು ಮೊದಲಿಂದಲೂ ಜಾತಿವಾರ ಪ್ರತಿನಿಧಿತ್ವವನ್ನೇ ಪ್ರತಿಪಾದಿಸುತ್ತಿದ್ದರು. ಗತಿಸಿದ ಡಾ॥ ಟಿ. ಎಮ್. ನಾಯರರೂ, ಮ॥ ರಾ॥ ದಿವಾನ ಬಹದ್ದೂರ ತ್ಯಾಗರಾಯ ಚೆಟ್ಟಿಯವರು ಈ ತಂಡದ ದಳವಾಯಿಗಳು. ಅವರೆ ಈಗ ರಾ॥ ತ್ಯಾಗರಾಯ ಚೆಟ್ಟಿಯವರು ರಾ॥ ಕೇಶವ ಪಿಳ್ಳೆಯವರ ಮತಕ್ಕೆ ನಿರ್ವಾಹವಿಲ್ಲದೆ ಸೈಗುಟ್ಟಿದ್ದಾರೆ. ಬ್ರಾಹ್ಮಣ ವೃಂದದವರ ಹೇಳಿಕೆಯಲ್ಲಿ ಜಾತಿವಾರು ಪ್ರತಿನಿಧಿತ್ವವು ಅಯೋಗ್ಯ. ಬ್ರಾಹ್ಮಣರ ಸಂಖ್ಯೆ ಕಡಿಮೆ ಇದ್ದಕಾರಣ ಅವರಿಗಾಗಿ ಸಂಖ್ಯಾಮಿತಿಯನ್ನು ಇರಗೊಡಿಸದಿದ್ದರೆ ಬ್ರಾಹ್ಮಣರಿಗೆ 'ಸೀಟು'ಗಳೇ ಸಿಗಲಾರವು ಎಂದು ಹೆದರುವುದಿದ್ದರೂ ಆ ಬಗೆಯ ಸಂದೇಹವನ್ನು ಮನಸ್ಸಿಗೆ ತಾರದೆ ೫೫ ಯಾ ೬೭ ಸೀಟುಗಳನ್ನು ಅಬ್ರಾಹ್ಮಣರಿಗೋಸ್ಕರವೇ ಏರ್ಪಡಿಸಿಟ್ಟು ಉಳಿದ ಸೀಟುಗಳಿಗೋಸ್ಕರ ಬ್ರಾಹ್ಮಣರು ಅಬ್ರಾಹ್ಮಣರು ಎಂಬ ಭೇದವಿಡದೆ ಉಮೇದ್ವಾರರಾಗಬೇಕು ಎಂದು ವಾದಿಸುತ್ತಿದ್ದಾರೆ. ಹೀಗೆ ಮಾಡಿದರೆ ಈ ೬೭ ಸೀಟುಗಳಲ್ಲಿ ಕನಿಷ್ಠಪಕ್ಷಕ್ಕೆ ೩ನೆ ಅಂಶ ಅಥವಾ ಅರ್ಧಾಂಶಕ್ಕೆ ಮಿಕ್ಕಿದ ಮೆಂಬರಿಕೆಯು ಬ್ರಾಹ್ಮಣರ ಪಾಲಿಗೆ ಬಂದೀತೆಂದು ಅಬ್ರಾಹ್ಮಣರ ಪ್ರತಿವಾದವಿದೆ. ಗತವರ್ಷದಲ್ಲಿ ಆದ ಚುನಾವಣೆಯಲ್ಲಿ ಅಬ್ರಾಹ್ಮಣರ ಸಂಖ್ಯೆಯು ಏರಿದ್ದರಿಂದ ಇಂಥ ಗಾಬರಿಯನ್ನು ಅಬ್ರಾಹ್ಮಣರು ತಳೆಯುವುದಕ್ಕೆ ಆಧಾರವೇನೂ ಇಲ್ಲವೆಂದು ಬ್ರಾಹ್ಮಣರ ಅಂಬೋಣವಿದೆ. ಚರ್ಚೆಯ ಪುರುಷಾರ್ಥವೇನು? ಹೊಸಸುಧಾರಣೆ ಎಕ್ಸ್ ಜಾರಿಗೆ ಬರುವಾಗ ಹೃತ್ಪೂರ್ವಕವಾಗಿ ನಮ್ಮ ಶ್ರದ್ಧೆಯನ್ನು ತೋರಿಸುತ್ತೇವೆ ಎಂದು ನಮ್ಮ ಪ್ರತಿನಿಧಿಗಳು—ಬ್ರಾಹ್ಮಣ ಅಬ್ರಾಹ್ಮಣರು— ವಿಲಾಯತಿಯಲ್ಲಿಯೂ ಇಲ್ಲಿಯೂ ವಚನ ಕೊಟ್ಟ ಮೇಲೆ ಇತ್ತಂಡದ ಮುಖಂಡರು ಸರಕಾರದ ಕಡೆಯ ಪಂಚಾಯತರಿಲ್ಲದೆ ಈ ಚಿಲ್ಲರೆ ಪ್ರಶ್ನೆಯನ್ನು ಇತ್ಯರ್ಥಿಸಲಾರರೆಂದರೆ ನಮ್ಮಲ್ಲಿ ಪಾಶ್ಚಾತ್ಯರಿಗೆ ಯಾವ ಬಗೆಯ ಗೌರವ ಉಂಟಾದೀತು, ಯಾವ ಬಗೆಯ ವಿಶ್ವಾಸ ಬಂದೀತು? ಇದನ್ನು ಇತ್ತಂಡದವರೂ ಆಲೋಚಿಸಿದ್ದರೇ? ಪಂಚಾಯತರಾದ ಲೋರ್ಡ ಮೆಸ್ಟನರೂ ಕೂಡೆ ಈ ಪ್ರತಿನಿಧಿಗಳ ಹೇಳಿಕೆಗಳನ್ನು ಪಡಕೊಳ್ಳುವ ಮುಂಚೆ ಮಾಡಿದ ಪ್ರಸ್ತಾವನಾ ಭಾಷಣದಲ್ಲಿ 'ಇನ್ನೊಮ್ಮೆ ನೀವೆ ಸೇರಿ ಇದನ್ನು ಇತ್ಯರ್ಥಮಾಡಿರಿ, ಇದನ್ನು ನೀವೇ ತೀರಿಸುವುದು ಎಷ್ಟೊ ಚಂದ, ಇತ್ತಂಡವರೂ 'ತಮ್ಮ ಕೋಳಿಗೆ ಮೂರೇ ಕಾಲು' ಎಂದು ವಾದಿಸುವ ಬದಲಾಗಿ ಒಬ್ಬರು ಇನ್ನೊಬ್ಬರಿಗೆ ಕೈಕೊಟ್ಟು ರಾಜ್ಯ ರಥವನ್ನು ಮುಂದೆ ನೂಕಲು ಯತ್ನಿಸಬೇಕು' ಎಂದು ಹೇಳಿಕೊಂಡ ಮೇಲೂ ಇವರೊಳಗೆ ಒಮ್ಮತವಾಗದಿದ್ದರೆ ವಿಲಾಯತಿಯಲ್ಲಿ ಸಿಡೆನಹೇಮ್ ಮುಂತಾದವರು ಬ್ರಾಹ್ಮಣರ ಮೇಲೆ ಸ್ವಾರ್ಥಪರರೆಂದು ಕೆಸರು ಎರಚಲು ಮಾಡಿದ ಪ್ರಯತ್ನಕ್ಕೆ ಬ್ರಾಹ್ಮಣರು ಇನ್ನೂ ಇನ್ನೂ ಮೈಯೊಡ್ಡಿದಂತಾಗಲಿಲ್ಲವೆ? ಒಂದು ವೇಳೆ ಅಬ್ರಾಹ್ಮಣರು ತಮ್ಮ ಪಟ್ಟು ಹಿಡಿದು ಸಾಧಿಸುವುದಾದರೆ ಮುಂದಿನ ಹತ್ತು ವರ್ಷಗಳ ವರೆಗಾದರೂ ಆಗುವ ಪರಿಣಾಮವನ್ನು ನೋಡುವಷ್ಟು ತಾಳ್ಮೆ ಬ್ರಾಹ್ಮಣರಿಂದ ತೊಲಗಿಹೋಯಿತೆ? ಅಬ್ರಾಹ್ಮಣ ಮೆಂಬರರ ಸಂಖ್ಯೆ ಹೆಚ್ಚಾದುದರಿಂದಲೇ ಪ್ರಳಯಕಾಲವು ಬಂದೀತು ಎಂದು ಬ್ರಾಹ್ಮಣರು ನಂಬಿದರೇ? ಒಂದು ವೇಳೆ ಕರ್ತವ್ಯದಕ್ಷರಾದ ೧೦ ಯಾ ೧೨ ಮೆಂಬರರು ಸ್ವಾರ್ಥ ಬಿಟ್ಟು ದೇಶವಾತ್ಸಲ್ಯದಿಂದ ಜನತೆಗೆ ಈ ರಾಜ್ಯಕಾರ್ಯ ಕ್ರಮದ ಬೋಧನೆಯನ್ನು ಮಾಡುತ್ತಲೆ ಬಂದರೆ ಅವರ ಮಾತಿಗೆ ಅಸಂಖ್ಯಾತರಾದ ಬ್ರಾಹ್ಮಣೇತರರಾಗಲಿ ಇತರ ಮೆಂಬರುಗಳಾಗಲಿ ತಲೆ ಬಗ್ಗಿಸುವ ಕಾಲವು ಬರಲಾರದೆಂದು ತಿಳಿದರೆ? ಕೀರ್ತಿಶೇಷ ಗೋಖಲೆಯವರು ಒಂಟಿಯಾಗಿ ಸರಕಾರದ ಮುಂದೆ ತನ್ನ ವಾಕ್‌ಲಹರಿ, ತನ್ನ ಅನುಭವ, ತನ್ನ ರಾಜಕೀಯ ತತ್ವ ವಿಚಾರ, ಇವುಗಳನ್ನು ನ್ಯಾಯ ವಿಧಾಯಕ ಸಭೆಯ ಮುಂದೆ ತರುವಾಗ ಎಷ್ಟೊ ಸರಕಾರಿ ಮೆಂಬರರ ಎದೆಯು ತಲ್ಲಣಿಸುತ್ತಿರಲಿಲ್ಲವೇ? ನಮ್ಮಲ್ಲಿ ಬ್ರಾಹ್ಮಣ ಕುಲಕ್ಕೆ ಬೇಕಾದ ನಿಷ್ಕಲಂಕವಾದ ಅಸ್ವಾರ್ಥತೆ, ಕಾರ್ಯತತ್ಪರಾಯಣತೆ ಇದ್ದರೆ ಅಬ್ರಾಹ್ಮಣರನ್ನೂ ನಮ್ಮ ಪಕ್ಷಕ್ಕೆ ಕಟ್ಟಿಕೊಳ್ಳುವುದು ಕಷ್ಟಸಾಧ್ಯವಾದೀತೇ? ಹಿಂದೂ ಸಮಾಜಕ್ಕೆ ಎಷ್ಟೊ ಕಷ್ಟ ತರಂಗಗಳು ಬಂದಿದ್ದರೂ ಸಮಾಜವು ಆ ತೆರೆಗಳಿಂದ ನೆಲಕ್ಕೆ ಅಪ್ಪಳಿಸಲ್ಪಡದೆ ಪುನಃ ನೀರೊಳಗಿಂದ ತಲೆ ಎತ್ತಲು ಕಾರಣವಾದ ಈ ಸಹಿಷ್ಣುತೆ ಈಗ ಯಾಕೆ ಬರುವುದಿಲ್ಲ? ಒಂದು ಕಾಲದಲ್ಲಿ ಈಚೆಗೆ ಮುಸಲ್ಮಾನರು ಇದೇ ರೀತಿ ಹಿಂದೂಗಳಿಂದ ತಾವು ದೂರವಾದರೆ ತಮಗೆ ಸರಕಾರ ಸಹಾಯವು ಹೆಚ್ಚಿಗೆ ಆದೀತು ಎಂದು ಕನಸು ಕಂಡಿಲ್ಲವೆ? ಕಡೆಗೆ ಅದು ತೀರಾ ಕನಸು. ನಮ್ಮಲ್ಲಿ ಯೋಗ್ಯತೆ ಇದ್ದರೆ ನಮ್ಮ ಸುಧಾರಣೆಯ ಕೋಶೆಯ ಬೀಗದ ಕೈ ನಮ್ಮ ಕೈಯಲ್ಲಿಯೇ ಇದೆ ಎಂದು ಅವರು ಮಾಯೆ ತಿಳಿಯಲಿಲ್ಲವೆ? ಹೀಗೆ ಆಗಲಾದರೂ ಪರೀಕ್ಷಾರ್ಥವಾಗಿ ಅಬ್ರಾಹ್ಮಣರು ಕೇಳುವಷ್ಟು 'ಸೀಟು'ಗಳನ್ನು ಅವರು ಕೇಳುವಾಗ ಅವರಿಗೆ ಒಪ್ಪಿಸಿಕೊಟ್ಟು ಅವರೊಡನೆ ಸಖ್ಯ ಬೆಳೆಸುವ ಬದಲಾಗಿ ಅಸಹನೆಯನ್ನು ತೋರ್ಪಡಿಸುವುದು ಎಂದೆಂದಿಗೂ ಶ್ರೇಯಸ್ಕರವಲ್ಲ. ಹಿಂದೀ ಮಾತೆಯು ನಮ್ಮ ವರ್ತನವನ್ನು ಎಂದೆಂದಿಗೂ ಮೆಚ್ಚದು ಎಂದು ನಾವು ಖಂಡಿತವಾಗಿ ಹೇಳುತ್ತೇವೆ.

೨. ೧೯೧೮–೧೯೧೯ರಲ್ಲಿ ತೊರೆಷ್ಟು ಪಂಚಾಯತ್ತುಗಳ ಕಾರ್ಯಕ್ರಮವನ್ನು ವಿಮರ್ಶಿಸಿ ಮದ್ರಾಸಿನ ರೆವಿನ್ಯು ಬೋರ್ಡಿನವರು ಬರೆದ ರಿಪೋರ್ಟಿನಿಂದ ಇಂಥ ಪಂಚಾಯತ್ತುಗಳ ಸಂಖ್ಯೆ ಆ ವರ್ಷದಲ್ಲಿ ೩೯ರಿಂದ ೩೭೬ಕ್ಕೂ, ಅವುಗಳ ಆಡಳಿತೆಯಲ್ಲಿರುವ ಕಾಡುಗಳ ವಿಸ್ತೀರ್ಣವು ೪೭೬ರಿಂದ ೫೩೪ ಚದರ ಮೈಲುಗಳಿಗೂ ಏರಿತೆಂತಲೂ, ಈ ಪೈಕಿ ೬೮ ಪಂಚಾಯತ್ತುಗಳ ಕಾರ್ಯಕ್ರಮವು ತೀರಾ ಅಸಮಾಧಾನಕರವಾಗಿತ್ತು ಎಂತಲೂ ತಿಳಿಯುತ್ತೇವೆ. ಗುಂಟೂರಲ್ಲಿ ಒಂದನ್ನು ಚೆಂಗಲ್ಪಟ್ಟಿನಲ್ಲಿ ಒಂದನ್ನು ರದ್ದು ಮಾಡಬೇಕಾಗಿ ಬಂತಂತೆ. ಕಡಪೆ, ಬಳ್ಳಾರಿ, ತಿರುಚಿನಾಪಳ್ಳಿ ಇವುಗಳಲ್ಲಿ ಒಂದೊಂದು ಪಂಚಾಯತ್ತಿನ ಹಳೆ ಮೆಂಬರರ ಬದಲಾಗಿ ಬೇರೆ ಹೊಸ ಮೆಂಬರರನ್ನು ನೇಮಕ ಮಾಡಲಾಯಿತು ಎಂತಲೂ ಈ ವಿಮರ್ಶೆಯಿಂದ ಕಾಣುತ್ತದೆ. ಚಿತ್ತೂರು ಜಿಲ್ಲೆಯಲ್ಲಿದ್ದ ೯ರಲ್ಲಿ ೧೫ ಪಂಚಾಯತ್ತುಗಳ ಅಧಿಕಾರವನ್ನು, ಅವರ ಕೆಲಸವು ಏನೇನೂ ಸಾಗದ್ದರಿಂದ, ತೆಗೆದು ಬಿಡಬೇಕಾಯಿತಂತೆ. ಒಳ್ಳೆ ಪಂಚಾಯತ್ತು ಗಳ ದೃಷ್ಟಾಂತಗಳೂ ಈ ವಿಮರ್ಶೆಯಲ್ಲಿ ಇವೆ. ಈ ಪೈಕಿ ನೆಲ್ಲೂರಿನ ಕರೆಡು ಎಂಬಲ್ಲಿಯ ಪಂಚಾಯತು ತಮ್ಮ ಆಡಳಿತೆಯಿಂದ ಸ್ವಲ್ಪ ಹಣವನ್ನು ಶೇಖರಿಸಿಟ್ಟು, ರೂಪಾಯಿ ೨೫೦ನ್ನು ಅಲ್ಲಿಯ ಜನೋಪಕಾರಿಯಾದ ಒಂದು ದೊಡ್ಡ ಕೆರೆಯ ದುರುಸ್ತಿಗೋಸ್ಕರ ಕೊಟ್ಟಿತು. ನಮ್ಮ ಜಿಲ್ಲೆಯ ಕಾರ್ಕಳದ ರಾಮಸಮುದ್ರ ಕಾಡಿನ ಪಂಚಾಯತ್ತಿನ ವಿಷಯವಾದ ಶಿಫಾರಸಿನಲ್ಲಿ ಅಲ್ಲಿ ಬೀಜದ ಹೋರಿಯೊಂದನ್ನು ಸಹ ಸಾಕಿದ್ದಾರೆ ಎಂದು ಬರೆದಿದೆ. ನಮ್ಮ ಈ ಊರಿಗೆ ಸಮೀಪವಿರುವ ಉಳ್ಳಾಲದ ಕಾಡಿನ ವಿಷಯವಾಗಿ ವಿಮೊಂದು ವಿಮರ್ಶೆ ಇಲ್ಲ. ಅಲ್ಲಿಯ ಜನಗಳು ಈಚೆಗೆ ಸಹಕಾರಸಂಘದ ಮಹಾಸಭೆಯಲ್ಲಿ ಈ ಪಂಚಾಯತ್ತಿನ ಆಡಳಿತೆಯಿಂದ ಅನೇಕರಿಗೆ ಸರಿಯಾಗಿ ಸೊಪ್ಪು ಕಟ್ಟಿಗೆ ಸಿಗುವುದಿಲ್ಲ, ಮೇಲು ವಿಚಾರಣೆಯು ಸಡಿಲವಾಗಿದೆ, ಆದ್ದರಿಂದ ಪರೀಕ್ಷಾರ್ಥವಾಗಿ ಈ ಕಾಡಿನ ಆಡಳಿತೆಯನ್ನು ಇಲ್ಲಿಯ ಸಹಕಾರ ಸಂಘದ ಪಂಚಾಯತ ಮೆಂಬರರಿಗೆ ವಹಿಸಿ ಕೊಡಬಹುದೆಂದು ಒಂದು ಠರಾವು ಮಾಡಿ, ಅದನ್ನು ಸಹಕಾರಿ ಇಲಾಖೆಯ ಮೂಲಕ ಕಲ್ಲೆಕ್ಟರ ಸಾಹೇಬರ ಬಳಿಗೆ ರವಾನಿಸಿದ್ದಾರೆಂದು ನಾವು ಕೇಳುತ್ತೇವೆ. ಒಂದು ಪಂಚಾಯತ್ತು ಸಭೆಯವರು ಕೆಲವು ಕಾಲದಿಂದಲೂ ಇಂಥ ಮೇಲು ವಿಚಾರದ ಜವಾಬ್ದಾರಿಯನ್ನು ಸರಿಯಾಗಿ ಕೈಕೊಳ್ಳದೆ ಕಾಡಿನ ಸ್ಥಿತಿಯು ಹೀನವಾಗುವುದಾದರೆ ಪರೀಕ್ಷಾರ್ಥವಾಗಿ ಈ ಸಂಘದ ಪಂಚಾಯತರಿಗಾದರೂ ಈ ಮೇಲು ವಿಚಾರವನ್ನು ಒಪ್ಪಿಸಿಕೊಡುವುದು ಯೋಗ್ಯವಲ್ಲವೆ? ಸರಕಾರದ ಹುಕುಮಿನಲ್ಲಿ ಈ ಪಂಚಾಯತ್ತುಗಳ ಸಂಖ್ಯೆಯನ್ನು ವೃದ್ಧಿಗೊಳಿಸಬೇಕು ಎಂದು ಇದೆ. ಅದಲ್ಲದೆ ಈಗಿನ ಸ್ಥಿತಿಯಲ್ಲಿ ಅಂಥಾ ಪಂಚಾಯತ್ತುಗಳು ಹಾಳು ಸ್ಥಿತಿಗೆ ಯಾಕೆ ಬರುತ್ತಿವೆ ಎಂಬುದನ್ನು ವಿಚಾರಿಸಿಕೊಳ್ಳಲಿಕ್ಕೆ ಒಬ್ಬ ಸ್ಪೆಶಲ್ ಆಫಿಸರರನ್ನೂ ನೇಮಕ ಮಾಡಿರುವರು. ಈ ಪಂಚಾಯತ್ತುಗಳ ಕಾರ್ಯಕ್ರಮವು ಸಡಿಲತೆಗೆ ಬರುವುದಕ್ಕೆ ನಮಗೆ ತೋರುವ ಕಾರಣ ಒಂದೇ. ಕೆಲವು ಸಲ ಪ್ರಜಾಮುಖಂಡರೆನ್ನಿಸಿಕೊಳ್ಳುವವರ ಕೈಗೆ ಎಷ್ಟು ಕೆಲಸಗಳು ಅಂಟಿವೆ ಎಂದು ವಿಚಾರಿಸಿಕೊಳ್ಳದೆ ಅಂಥವರಿಗೆ ಈ ಕೆಲಸಗಳಲ್ಲಿ ಪಟ್ಟಕಟ್ಟಿದರೆ ಕಾರ್ಯಕ್ರಮವು ಅವರ ಕೈಯಿಂದ ಅವರ ಅಡಿಯಾಳುಗಳಾದ ಸ್ತುತಿಪಾಠಕರ ಕೈ ಸೇರುತ್ತದೆ. ಈ ಮುಖಂಡರ ಮರೆಯಲ್ಲಿದ್ದು ಈ ಹೊಗಳು ಭಟ್ಟರು ಮಾಡುವ ಉದ್ಧಟತನಕ್ಕೆ ಎದುರಿಸಲಾರದೆ ಸಾಮಾನ್ಯ ಜನರು ನಿರಾಶರಾಗಿ ಅಶ್ರದ್ಧೆ ತೋರಿಸುತ್ತಾರೆ. ಆದ್ದರಿಂದ ಪಂಚಾಯತ್ತುಗಳ ಚುನಾವಣೆ ಮಾಡುವಾಗ ಬಹಳ ವಿಚಾರ ನಡಿಸಿ ಬಡವರಾದರೂ ಉತ್ಸಾಹವುಳ್ಳವರು,' ಇತರರ ಕಷ್ಟಸಂಕಷ್ಟಗಳನ್ನು ಅರಿಯುವವರು ಇಂಥವರಿಗೆನೇ ಈ ಪಂಚಾಯತ್ತುಗಳ ವಿಚಾರವನ್ನು ಬಿಟ್ಟುಕೊಡುವುದು ಯೋಗ್ಯ.

೩. ಕಳೆದ ತಿಂಗಳ ವರಿಷ್ಠ ಕೌನ್ಸಿಲಿನ ಅಧಿವೇಶನದಲ್ಲಿ ಬಂದ ಠರಾವುಗಳಲ್ಲಿ ಸಾಮ್ರಾಜ್ಯದ ಅಭಿರುಚಿಗೆ ಅನುಗಾಮಿಯಾದ ವ್ಯಾಪಾರದ ತತ್ವವು ಹಿಂದೂಸ್ಥಾದ ವ್ಯಾಪಾರಕ್ಕೆ ಹಚ್ಚಬಹುದೊ ಹೇಗೆ, ಹಿಂದುಸ್ಥಾನದೊಳಗಿನ ಸುಂಕದ ವ್ಯವಸ್ಥೆ, ವ್ಯಾಪಾರಸ್ಥಿತಿ ಇತ್ಯಾದಿ ವಿಷಯಗಳನ್ನು ಪರಿಶೋಧಿಸಿ ವರಿಷ್ಠ ಸರಕಾರಕ್ಕೆ ತಿಳಿಸುವಂತೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಸರ್. ಜೋರ್ಜ ಬಾರ್ನಸರು ಒಂದು ಠರಾವನ್ನು ತಂದರು. ಸಂರಕ್ಷಿತ ವ್ಯಾಪಾರದ ತತ್ವವು ಬ್ರಿಟಿಷ್ ಸರಕಾರಕ್ಕೆ ಹೇಗೆ ಮಾನ್ಯವಾಗಿರುವುದೊ ಹಾಗೆಯೆ ಹಿಂದುಸ್ಥಾನ ಸರಕಾರಕ್ಕೂ ಅದರ ವ್ಯಾಪಾರದ ಮಟ್ಟಿಗೆ ಮಾನ್ಯವಾಗಿರಬೇಕಾದ ಸಂದರ್ಭದಲ್ಲಿ ಸಾಮ್ರಾಜ್ಯಾಭಿರುಚಿಯ ಛತ್ರವನ್ನು ಹಿಂದುಸ್ಥಾನದ ವ್ಯಾಪಾರದ ಮೇಲೆ ಹಿಡಿಯುವುದು ಹಿಂದುಸ್ಥಾನಕ್ಕೆ ಹಿತಾವಹವಾಗಲಾರದು ಎಂಬೀ ಕಾರಣದಿಂದ ನಾಮದಾರ ಪಟೇಲ, ಖಾಪರ್ಡೆ ಮುಂತಾದ ಸಭಾಸದರು ಠರಾವನ್ನು ವಿರೋಧಿಸಿದಾಗ್ಯೂ ವಿರೋಧವು ನಿಲ್ಲಲಿಲ್ಲ. ಮತ್ತು ಕ್ರಮ್ ಸಾಹೇಬರ ಉಪಸೂಚನೆಯಿಂದ ಅಲಂಕರಿಸಿದ ಸದರಿ ಠರಾವು ಪಾಸಾಯಿತು.

೪. ಮದ್ರಾಸಿನಲ್ಲಿ ಇತ್ತಲಾಗೆ ಹೊಸದಾಗಿ ಸ್ಥಾಪಿತವಾದ ನೇಶನಲ್ ಹೋಮ್‌ರೂಲ್ ಲೀಗಿನ ಕಡೆಯಿಂದ ಒಂದು ವಿನಂತಿ ಪತ್ರವು ನಮ್ಮ ಕೈಗೆ ಬಂದಿರುವುದು. ಬರುವ ಈಸ್ಟರು ರಜೆಯಲ್ಲಿ ಮುಂಬಯಿ ಪಟ್ಟಣದಲ್ಲಿ ಅವರ ಒಂದು ಅಧಿವೇಶನವು ಜರಗಲಿಕ್ಕಿದೆ. ಆ ಸಮಯದಲ್ಲಿ ಡಿಸ್ಟ್ರಿಕ್ಟ ಬೋರ್ಡು, ಪಂಚಾಯತ ಸಂಘ [illegible]ಲಾದ ಸಂಸ್ಥೆಗಳ ಮತದಾತೃತ್ವದ ವಿಷಯದಲ್ಲಿ ಯಾವ ಧೋರಣೆಯನ್ನು ಕೈಕೊಳ್ಳಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯವರು ನೆನಸುತ್ತಾರೊ, ಆ ವಿಷಯವನ್ನು ಸದರಿ ಲೀಗಿನ ಉಪಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಸದರಿ ವಿನಂತಿಯಲ್ಲಿ ನಿರ್ದಿಷ್ಟವಾಗಿದೆ.

ಮಂಗಳೂರು.

ಕಳೆದ ತಿಂಗಳ ತಾ. ೧೭ರಿಂದ ನಡೆದ ಟೂರ್ನಮೆಂಟ ಪಂದ್ಯದ ಟೆನಿಸ ಆಟವು ನಿನ್ನೆ ದಿನ ಕೊನೆಗೊಂಡಿತು. ಸಿಂಗಲ್ಸ್ ಮತ್ತು ಡಬ್ಬಲ್ಸ್ ಈ ಎರಡು ಆಟಗಳಲ್ಲೂ ಮಲಬಾರಿನ ಕುಟ್ಟಿ ಬ್ರದರ್ಸ (ಹಾಮದ್ ಕುಟ್ಟಿ ಮತ್ತು ಮುಹಮದ್ ಕುಟ್ಟಿ) ಈ ಅಣ್ಣತಮ್ಮಂದಿರೇ ಜಯಪ್ರದರಾದರು. ಇವರ ಪೈಕಿ ಕಿರಿಯವರಾದ ಮಹಮದ್ ಕುಟ್ಟಿಯವರು ಸಿಂಗಲ್ಸ್ ಆಟದಲ್ಲಿ ಗೆದ್ದು ಬೆಳ್ಳಿಯ ಬಟ್ಟಲನ್ನೂ ಪದಕವನ್ನೂ ಹೊಂದಿದರು. ಇವರು ಇದನ್ನು ಇದು ಎರಡನೇ ವರ್ಷ ಪಡೆದದ್ದಾಗಿರುತ್ತದೆ. ಡಬ್ಬಲ್ಸ್ ಆಟದಲ್ಲಿ ಈ ಅಣ್ಣತಮ್ಮಂದಿರೇ ಜಯಹೊಂದಿ ಎರಡು ಬಟ್ಟಲುಗಳನ್ನೂ ಪದಕಗಳನ್ನೂ ಪಡೆದರು. ಕಳೆದ ಎರಡು ವರ್ಷ ಮತ್ತು ಈ ವರ್ಷ ಹೀಗೆ ಮೂರು ವರ್ಷಗಳಲ್ಲಿ ಎಡೆಬಿಡದೇ ಪ್ರತಿವರ್ಷವೂ ಈ ಬಟ್ಟಲು ಇವರಿಗೆನೇ ದೊರಕಿರುವುದರಿಂದ ಈ ಬಟ್ಟಲಿನ ಉಚಿತವು ಶಾಶ್ವತವಾಗಿ ಇವರಿಗೆ ದೊರೆಯುವದಾಯಿತು. ಈ ಆಟದಲ್ಲಿ ಸ್ಪರ್ಧಿಸಿದ ಇಲ್ಲಿರುವರ ಪೈಕಿ ಮ॥ ರಾ॥ ನಾರ್ಣಪ್ಪ ಸುವರ್ಣರಿಗೂ ಮ॥ ರಾ॥ ಯು. ವಾಸುದೇವ ನಾಯ್ಕರಿಗೂ ಸಹ ಪದಕಗಳ ಬಹುಮಾನವು ದೊರಕಿರುವುದು. ಈ ದಿನ ಸಾಯಂಕಾಲವೇ ಮನೋಹರ ವಿಲಾಸದ ಟೆನಿಸ್ ಕ್ಲಬ್ಬಿನ ಮೆಂಬರರಿಂದ ಈ ಆಟದ ಸ್ಪರ್ಧಿಕರೆಲ್ಲರಿಗೂ 'ಎಟ್‌ಹೋಮ್' ಎಂಬ ಸತ್ಕಾರವೂ ಮಾಡಲ್ಪಟ್ಟಿತು. ಈ ಸಂದರ್ಭದಲ್ಲಿ ಈ ಸಾರಿ ಮದ್ರಾಸು ಯುನೈಟೆಡ್ ಕ್ಲಬ್ಬಿನಲ್ಲಿ ನಡೆದ ಸಿಂಗಲ್ಸ್ ಹಾಗು ಡಬ್ಬಲ್ಸ್ ಟೆನಿಸ್ ಪಂದ್ಯಾಟದಲ್ಲಿ ಇಲ್ಲಿಯವರಾದ ಮ॥ ರಾ॥ ಕೆ. ಪಿ. ಲಕ್ಷ್ಮಣರಾವ್‌ರವರು ಗೆದ್ದಿರುವರೆಂಬುದನ್ನು ತಿಳಿಸಲು ತುಂಬಾ ಸಂತೋಷವಾಗುತ್ತದೆ.

ಇಲ್ಲಿಯ ಪ್ರಮುಖ ಮಹಿಳೆಯರ ಪೈಕಿ ಮಿಸೆಸ್ ಯುನ್. ಸುಬ್ಬರಾವ್ ಮಿಸೆಸ್ ಸಿ. ಎಚ್. ಮೊರ್ಗನ್, ಮಿಸೆಸ್ ಕೆ. ಅಪ್ಪಾಜಿರಾವ್, ಮಿಸೆಸ್ ಎ. ಜೆ. ಲೋಬೊ, ಮಿಸೆಸ್ ಫೆನಕನ್, ಮಿಸೆಸ್ ಯುಂ. ಶಿವರಾವ್, ಮಿಸೆಸ್ ಯಚ್. ಚಟ್ಟೋಪಾಧ್ಯಾಯ, ಮಿಸೆಸ್ ಯನ್. ವೆಂಕಟರಾವ್ ಮತ್ತು ಮಿಸೆಸ್ ಕಝಿನ್ಸ್‌ರವರು ಇದೇ ಬರುವ ತಾರೀಕು ೮ನೇ ಸೋಮವಾರ ಸಾಯಂಕಾಲ ೫-೩೦ ಗಂಟೆಗೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಸಂತ ಮಂದಿರದ ಸಭಾಸದನದಲ್ಲಿ ಒಂದು ಸಭೆಯನ್ನು ಕೂಡಿಸುವವರಿದ್ದಾರೆ—ಪುಣೆಯ ನಗರದಲ್ಲಿ ಅಲ್ಲಿಯ ಮಹಿಳೆಯರು ತಮ್ಮ ಮುನಿಸಿಪಾಲಿಟಿಯಿಂದ ಬಾಲಕಿಯರಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿ ದೊರಕುವಂತೆ ಬಲು ಸಾಹಸದಿಂದ ಪ್ರಯತ್ನಿಸುವ ಕಾರ್ಯದಲ್ಲಿ ನಮ್ಮ ಪಟ್ಟಣದ ಮಹಿಳೆಯರ ಸಹಾನುಭೂತಿಯನ್ನು ವ್ಯಕ್ತಗೊಳಿಸುವುದೇ ಇವರ ಮುಖ್ಯ ಉದ್ದೇಶವಾಗಿದೆ. ಬಾಲಕಿಯರಿಗೂ ಕಡ್ಡಾಯದ ಶಿಕ್ಷಣವು ಸಿಗಬೇಕೆಂಬ ಈ ಸ್ತುತ್ಯಕಾರ್ಯವನ್ನು ಪ್ರಾರಂಭಿಸಿದ್ದು ಬ್ರಿಟಿಷ ಹಿಂದುಸ್ಥಾನದಲ್ಲಿ ಇದು ಮೊದಲನೆಯದ್ದಾಗಿದೆ. ಮತ್ತು ಆಯಾಯ ಪಟ್ಟಣಗಳಲ್ಲಿಯ ಮಹಿಳೆಯರ ಸಹಾನುಭೂತಿಯ ಠರಾವುಗಳು ಅತೀ ಅಗತ್ಯದ್ದಾಗಿದ್ದು ಈ ಕಾರ್ಯವು ಜಯವಾಗಲು ಬಹಳ ಸಹಾಯವಾಗುವುದು.

ಬರುವ ಆದಿತ್ಯವಾರ ಪ್ರಾತಃಕಾಲ ೮ ಗಂಟೆಗೆ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಶ್ರೀಯುತ ಮೈಸೂರಿನ ನರಹರಿ ಶಾಸ್ತ್ರಿಯವರು ಇಲ್ಲಿಯ ಥಿಯೋಸೋಫಿಕಲ್ ಸೊಸೈಟಿಯ ಪರವಾಗಿ "ನಮ್ಮ ದರ್ಶನಾತೀತರಾದ ಸಹಾಯಕರು" (Our invisible helpers) ಎಂಬುದನ್ನು ಕುರಿತು ಭಾಷಣ ಮಾಡುವರು. ಮತ್ತು ಸಾಯಂಕಾಲ ೫.೩೦ ಗಂಟೆಗೆ ಚಂದ್ರಹಾಸನೆಂಬ ಹರಿಕೀರ್ತನೆಯನ್ನು ಸಹಾ ಮಾಡುವರು. ಹರಿಕೀರ್ತನೆಗೆ ರೂ. ೨, ರೂ. ೧, ಆಣೆ ೮, ಆಣೆ ೪, ಈ ರೀತಿ ಟಿಕೇಟು ಇಟ್ಟಿರುತ್ತದೆ. ಇದರ ಉತ್ಪನ್ನವು ಹೊಸದಾಗಿ ಕಟ್ಟಿಸುವ ಬ್ರಹ್ಮಜ್ಞಾನ ಮಂದಿರಕ್ಕೆ ವಿನಿಯೋಗಿಸಲಾಗುವುದು.

ಪಟ್ಟಣದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ೧೧೭ ಜನನಗಳೂ, ೧೧೦ ಮರಣಗಳೂ ಇದ್ದವು. ಕಳೆದ ವರ್ಷ ಇದೇ ತಿಂಗಳಲ್ಲಿ ೧೩೨ ಜನನಗಳು ಮತ್ತು ೭೬ ಮರಣಗಳಿದ್ದವು.

ಪಟ್ಟಣದಲ್ಲಿ ದಡಾರ ಯಾನೆ ಚಿಕ್ಕಮ್ಮ (measles) ಈ ರೋಗವು ತಲೆ ಎತ್ತಿದೆ.

ಮಿ॥ ಬಿ. ವಿ. ಸಾಲ್ಡಾನ್ಹಾರು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಗವರ್ನಮೆಂಟ್ ಹ್ಯಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಇದೇ ಬರುವ ತಾರೀಕು ೧೩ನೇ ಶನಿವಾರ ಸಾಯಂಕಾಲ ೫-೩೦ ಗಂಟೆಗೆ ನಡಿಯುವುದು.

ಪುತ್ತೂರು ರೆವಿನ್ಯು ಡಿವಿಜನಲ್ ಆಫೀಸರರ ಸರ್ಕೀಟು:— ತಾ. ೪ ಮಂಗಳೂರು, ತಾ. ೫ಕ್ಕೆ ಕಾಸರಗೋಡಿಗೆ ಹೋಗಿ ತಾ. ೧೦ ವರೆಗೆ ಇಲ್ಲಿ ಇರುವರು.

ಇಲ್ಲಿಯ ಕೆಥೋಲಿಕ ಮಹಿಳೆಯರ ಕ್ಲಬ್ಬು ಬಾವಟೆಗುಡ್ಡೆಯಲ್ಲಿದ್ದ ಮಳಿಯಾಳಿ ಕ್ಲಬ್ಬಿನ ಕಟ್ಟೋಣದಲ್ಲಿ ನಾಳೆ ತೆರೆಯಲ್ಪಡುವದು.

ಪ್ರಖ್ಯಾತಿಪಟ್ಟ ಪಟವರ್ಧನ್ ಸರ್ಕಸ್ ಕಂಪೆನಿಯು ಬರುವ ಆದಿತ್ಯವಾರ ಇಲ್ಲಿಗೆ ಬಂದು ತಲ್ಪುವದು.

ಸ್ವೀಕಾರ.

ಉಪ್ಪಿನಂಗಡಿ ತಾಲೂಕಿನ ವ್ಯಾನುಭಾಗರ ಪರಿಷತ್ತಿನಲ್ಲಿ ಶ್ಯಾನುಭಾಗರ ಏಸೋಸಿಯೇಶನಿನ ಕಾರ್ಯದರ್ಶಿಯವರು ಮಾಡಿದ ಭಾಷಣವು ಪ್ರಕಟನೆಗೆ ನಮ್ಮ ಬಳಿಗೆ ಬಂದದೆ. ಸ್ಥಳ ಸಂಕೋಚವಿದ್ದರೂ ಈ ಬಡ ನವುಕರರ ಸೌಕರ್ಯಕ್ಕೋಸ್ಕರ ನಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರ್ಪಡಿಸುವುದಕ್ಕಾಗಿ ಸ್ಥಳ ಸಿಕ್ಕಿದ ಹಾಗೆ ಅದನ್ನು ಪ್ರಕಟಿಸುವೆವು.

[illegible]

ಮೂಲ್ಕಿ:— ಇಲ್ಲಿಯ ಕೆ. ಆ. ವಿಲ್ಸನ್ ಹಾರಾ ವರ್ಷಾವಧಿ ಗ್ರಾಂಟ್ ಪರೀಕ್ಷೆಯು ಗತ ತಿಂಗಳು ೨ನೇ ಶುಕ್ರವಾರ ಮಧ್ಯಾಹ್ನ ವೇಳೆ ಮ| ರಾ| ರಾ| ಡಿಪ್ಯುಟೀ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾಗಿರುವ ಬಿ. ನರಸಿಂಗ ರಾಯರಿಂದ ನಡೆಸಲ್ಪಟ್ಟಿತು. ದಯಾಳು ರಾಯರು ಹಲವು ಸೂಚನೆಗಳನ್ನು [illegible] ಅಂದೇ ಸಾಯಂಕಾಲ ಅಲ್ಲಿಂದ ಹೋಗಿ ಸೋಮವಾರ ೨ರಿಂದ [illegible] — [illegible] ಈ ಕಡೆಗಳಿಗೆ ತನ್ನ ಸರ್ಕೀಟನ್ನು ಬೆಳಸುವರೆಂದು ವರ್ತಮಾನ. [illegible] ಆದಿತ್ಯವಾರ ದಿನ ಇಲ್ಲಿಯ ಪ್ರೊಮ್ಯಾನೆಂಟ್ ಹೆಸ್ಸಯ [illegible] ಬಹು ವಿಜೃಂಭಣೆಯಿಂದ ರಾತ್ರಿಪೂಜೆ ಎಂಬ ಒಂದು ಶುಭಕಾರ್ಯವನ್ನು ನಡಿಸಿ ಸುಮಾರು ೨೦೦೦ ಜನರಿಗೆ (ಇವರಲ್ಲಿ ೧೦೦೦ ಬ್ರಾಹ್ಮಣರಿಗೆನೇ) ಅನ್ನದಾನ ಮಾಡಿದ್ದನ್ನು ಕೇಳಿ ತುಂಬಾ ಸಂತೋಷ ಪಡುತ್ತೇವೆ. ಇವರಿಗೂ ಇವರ ಕುಟುಂಬಕ್ಕೂ ಶ್ರೀ ಸ್ವಾಮಿ ಆಯುರಾರೋಗ್ಯವನ್ನೂ ಧನಸಂಪತ್ತನ್ನೂ ದಯಪಾಲಿಸಲಿ.

ಕಾಪು:— ನಮ್ಮೂರ ಜಾತ್ರೆ ಸಮಯ ಒಂದೆರಡು ಕಳವು ಆಗಿವೆ ಎಂದು ಸುದ್ದಿ ಹುಟ್ಟಿದೆ. "ಗುಟ್ಟಂ ಬಿಟ್ಟಂ ಕೆಟ್ಟಂ ಎಂಬಂತೆ ಮೌನದಲ್ಲಿರಲು ಕಾರಣವೇನೋ?

ಈ ವರ್ಷ ಉಚ್ಚಿಲ ದೇವಸ್ಥಾನದ ಉತ್ಸವವನ್ನು ಎಲ್ಲಾ ಹಂಕೆಯಿಂದಲೇ ಬಲು ವಿಜೃಂಭಣೆಯಿಂದ ರಾ| ಶಿವರಾಮ ಸಾನದರವರು ನಡಿಸಿರುವರು. [illegible] ಅಲ್ಲದೆ ವರ್ಷಂಪ್ರತಿಯೂ ವಿಶೇಷ ತರದಲ್ಲಿ ಉತ್ಸವ ನಡೆಯುವ ದೇವಸ್ಥಾನ ಇತ್ತಕಡೆ ಇದೇ ಸರಿ. ಈ ವರ್ಷ ಉತ್ಸವದ ಸಮಯ ಬೆಳಪು ಗ್ರಾಮದ ಬಂಟರ ಜಾತಿಯವರಿಗೂ ಮೊಗವೀರರ ಜಾತಿಯರಿಗೂ ಘಟಾಘಟಿ ಹೊಡೆಯಿತು. ಪೆಟ್ಟೇಪೆಟ್ಟು. ಗುದ್ದಾಟ. ಈ ಸಂದರ್ಭದಲ್ಲಿ ಒಬ್ಬನ ಪೋದಂಡಸ್ಥಿತಿಯಲ್ಲಿ ಛಿದ್ರನು; ಉಳಿದ ಮೊಗವೀರರು ಬಂಟರ ಪೆಟ್ಟಿನ ಹೊಡೆತವನ್ನು ತಾಳಲಾರದೆ ಪಲಾಯನಗೈದರು. ಮೊಗವೀರರೆಲ್ಲ ಒಗ್ಗಟ್ಟಿನಿಂದ ಕೆಲಿಕ್ಟರರಲ್ಲಿ ೧೦ಜನ ಬಂಟರ ಮೇಲೆ ಫಿರ್ಯಾದಿ ದಾಖಲ್ಲು ಮಾಡಿರುವರು. ಪೋದಂಡಸ್ಥಿತಿಯು ಮನುಷ್ಯನಿಗೆ ಡಾಕ್ಟರರು ಸರ್ಟಿಫಿಕೇಟು ಕೊಟ್ಟಿರುವರಾಗಿ ತಿಳಿಯುತ್ತೇನೆ. ಈ ನವೀನ ಸುಧಾರಣೆಯ ಕಾಲದಲ್ಲಿ ಜಾತಿಯಲ್ಲಿ ಹಿಂದುಳಿದವರಾದ ಮೊಗವೀರರ ಮೇಲೆ ಈ ರೀತಿ ಅತ್ಯಾಚಾರ ನಡಿಸಿದ್ದು ಸರಿಯೇ ಹ್ಯಾಗೆ? ಇದರ ಫಲವನ್ನು ನೋಡಬೇಕೆಂದು ಎಲ್ಲರೂ ಹಾರೈಸುತ್ತಿರುವರು.

ಸ್ವಾಮಿ! ಕಳೆದವಾರ ಬೀಡಿಯ ಒಂದು ಕಿಡಿಯಿಂದ ಮಂಚಕಲ್ಲು ಸಂತೆ ಸುಟ್ಟು ಭಸ್ಮವಾಯಿತಲ್ಲಾ. ಅನ್ಯಾಯೀ ನಮ್ಮೂರ ಜಾತ್ರೆ ಸಮಯ ಬೀಡಿಯನ್ನು ಸೇದುತ್ತಿರುವ ಮನುಷ್ಯನ ಕೊಡೆಯೊಳಗೆ ಕಿಡಿ ಬಿದ್ದು ಸುಟ್ಟುಹೋಯಿತಲ್ಲಾ!

ಪ್ರಾಥಮಿಕ ಶಿಕ್ಷಣದ ಪ್ರಚಾರ.

1918—'19.

ಮದ್ರಾಸು ಪ್ರಾಂತಿಕ ಸರಕಾರವು ಹೇರಳ ಹಣ ವಯಿಸಿ, ಪ್ರಾಥಮಿಕ ಶಾಲೆಗಳನ್ನು ಬೋರ್ಡುಗಳ, ಮುನ್ಸಿಪಾಲಿಟಿಗಳು, ಮತ್ತು ಖಾಸಗಿ ಮೆನೇಜರರು ಮುಂತಾದವರ ಕೈಕೆಳಗೆ ಒಳಗೊಳಿಸಿ ಅವನ್ನು ವೃದ್ಧಿಗೆ ತರಲಿಕ್ಕೆ ಮಾಡುವ ಪ್ರಯತ್ನಗಳಲ್ಲಿ—ಎಷ್ಟರಮಟ್ಟಿನ—ಕೂಡಕೂಗಿರುವ ಎಂಬುದನ್ನು ಹಿಂದಿನ ಸಂಚಿಕೆಗಳಲ್ಲಿ ಸೂಚಿಸಿದೆವು. ಈ ಶಾಲೆಗಳ ಶಿಕ್ಷಣವು ಸುಧಾರಣೆಗೆ ಬರಬೇಕಾದರೆ ತರಬೇತು ಹೊಂದಿದ ಉಪಾಧ್ಯಾಯರ ಸಂಖ್ಯೆ ಏರಬೇಕು. ಈ ವಿಷಯದಲ್ಲಿ ಸರಕಾರವು ಜಾಗರೂಕವಾಗಿಯೇ ಇದೆ; ಆದರೂ ಇನ್ನು ಮಾಡತಕ್ಕ ಕೆಲಸ ಎಷ್ಟು ಬಾಕಿ ಉಳಿದಿದೆ ಎಂಬುದು ಈ ಕೆಳಗಿನ ಸಂಖ್ಯಾಪ್ರಮಾಣದಿಂದ ಗೊತ್ತಾಗಬಹುದು.

ಉಪಾಧ್ಯಾಯರ ಟ್ರೈನಿಂಗ್ ಶಾಲೆಗಳ ಸಂಖ್ಯೆಯು [illegible] ಏರಿದ್ದರೂ ತರಬೇತು ಹೊಂದುವ ಉಪಾಧ್ಯಾಯರ ಸಂಖ್ಯೆಯು [illegible] ಏರಿತು, ಆದರೆ ಸಂಸ್ಥಾನದ [illegible] ಜಿಲ್ಲೆಗಳಲ್ಲಿ ಇರುವ [illegible] ಮಂದಿ ಪ್ರಾಥಮಿಕ ಶಾಲಾ ಉಪಾಧ್ಯಾಯರಲ್ಲಿ [illegible] ಮಂದಿ ಮಾತ್ರವೇ ತರಬೇತಾದವರು, ಅಂದರೆ ನೂರಕ್ಕೆ [illegible] ಮಂದಿ ಮಾತ್ರವೇ ತರಬೇತಾಗಿದ್ದಾರೆ; ಉಳಿದ [illegible] ಮಂದಿ ತರಬೇತಾಗ ಬೇಕಾದರೆ ಈ ವರದಿಯ ಸಂಖ್ಯಾಪ್ರಮಾಣದಿಂದ ನೋಡಿದಾಗ ಇನ್ನೂ ೮ ವರ್ಷಗಳ ಕಾಲ ಹಿಡಿಯಬೇಕಾದೀತು. ಹೀಗಿರುವಾಗ ಈ ಉಪಾಧ್ಯಾಯರ ಸಂಖ್ಯೆಯಲ್ಲಿ ವೃದ್ಧಿ, [illegible] ಅಥವಾ ಬೇರೆ ಉದ್ಯೋಗಗಳ [illegible] ಇವನ್ನು ನಾವು ಎಣಿಸಲೇ ಇಲ್ಲ. ಎಷ್ಟು ಮಂದಿ [illegible] ಬೇರೆ ವೃತ್ತಿಯನ್ನು ಅವಲಂಬಿಸುತ್ತಿರುವುದು ಸರ್ವವಿದಿತವಾಗಿದೆ. ಆಗ ಇಷ್ಟು ಹೊಸ ಪ್ರಾಥಮಿಕ ಶಾಲೆಗಳನ್ನು ಏರ್ಪಡಿಸುವುದಾದರೆ [illegible]

[illegible]

ಜನಾಂಗದ ಅಂದರೆ ವಿಶೇಷವಾಗಿ ಹಳ್ಳಿಹಳ್ಳಿಯ ಜನರ ಸಾಧಾರಣೆಗೆ [illegible] ಬೇಕಾದವರ ವೇತನ ಮತ್ತು ಸಂಬಳದ ದರಗಳು ಬತ್ತ ಪೇಟೆಗಳ ಅಥವಾ ಗ್ರಾಮದ ಉಗ್ರಾಣಗಳ ಸಂಬಳಕ್ಕೆ ಸಮತುಲ್ಯವಾಗಿ ಇರಬಾರದು. ಈಗಿನ ಸ್ಥಿತಿಯಲ್ಲಿ ತಿಂಗಳಿಗೆ ರೂಪಾಯಿ ೧೨ಕ್ಕೆ ಕಡಿಮೆಯಾದ ವೇತನ ಸಿಕ್ಕಿದರೆ ಪ್ರಯೋಜನವೇ ಇಲ್ಲ.

ಈ ವೇತನಗಳೊಂದಿಗೆ ಉಪಾಧ್ಯಾಯರ ಸಂಬಳದ ದರವೂ ಗ್ರಾಂಟಿನ ದರವೂ ಬದಲಾಯಿಸಬೇಕಾದೀತು ಎಂಬುದು ಇನ್ನೊಂದು ವಿಚಾರಾರ್ಹವಾದ ಸಂಗತಿ. ಗ್ರಾಂಟಿನ ಉದಾರತ್ವವನ್ನು ಕುರಿತು ಹಿಂದೆ ಪ್ರಸ್ತಾಪಿಸಿದ್ದೇವೆ. ಆದರೆ ದರಗಳನ್ನು ನಿರ್ಣಯಿಸುವುದು ಸರಕಾರದ ಕೆಲಸ. ಈಗ ಸರಕಾರದ ಪ್ರೋತ್ಸಾಹಗಳ ಉತ್ಸಾಹವನ್ನು ತುಲನೆಮಾಡುವುದೂ ನಮಗೆ ಆಗತ್ಯವಾಗುತ್ತದೆ. ೧೯೧೮-'೧೯ನೆ ವರ್ಷಾಂತ್ಯದಲ್ಲಿ ಇದ್ದ [illegible] ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯನ ಮೆನೇಜ್‌ಮೆಂಟಿನಲ್ಲಿಯೇ ಇದ್ದ ಶಾಲೆಗಳ ಸಂಖ್ಯೆ [illegible] ಅಂದರೆ ಸಾಧಾರಣವಾಗಿ ೩ನೆ ಅಂಶಕ್ಕೆ ಸ್ವಲ್ಪ ಕಡಿಮೆಯಾಗಬಹುದು. ಈ [illegible] ಶಾಲೆಗಳಲ್ಲಿ [illegible] ಮಂದಿ ಮಾತ್ರವೇ ಟ್ರೈನಾದ ಉಪಾಧ್ಯಾಯರು. ಈ ಬಗೆಯ ಶಾಲೆಗಳಲ್ಲಿ ತರಬೇತಾದ ಉಪಾಧ್ಯಾಯರ ಸಂಖ್ಯೆ ಕಡಿಮೆ ಇರುವುದು ಆಶ್ಚರ್ಯವಲ್ಲ. ತರಬೇತಾದವರಿಗೆ ಬೋರ್ಡು, ಅಥವಾ ಮ್ಯುನ್ಸಿಪಲ್ ಶಾಲೆಗಳಲ್ಲಿ ಕೆಲಸ ಸಿಗುತ್ತಿರುವಾಗ, ಈ ಖಾಸಗಿ ಶಾಲಾ ಮೆನೇಜರರು ಅಂಥ ಶಾಲೆಗಳಲ್ಲಿ ತರಬೇತಾದವರನ್ನು ಹೇಗೆ ಇಡಬಲ್ಲರು? ಆದರೂ ನಮ್ಮ ಜಿಲ್ಲೆಯ ಸ್ಥಿತಿಯನ್ನು ನೋಡಿದರೆ [illegible] ಶಾಲೆಗಳ ಪೈಕಿ ೧೯ ಶಾಲೆಗಳಿಗೆ ಮಾತ್ರ ಹೆಚ್ಚಿಗೆ ಹಣಸಿಕ್ಕಿತು, ಅಂದರೆ ನೂರಕ್ಕೆ [illegible] ಕೂಡಾ ಇಲ್ಲ. ಹಾಗಾದರೆ ಎಂಥ ಊಹನೆಗಳು ನಮ್ಮ ಸ್ಮರಣೆಗೆ ಬರುತ್ತವೆ. ಜಿಲ್ಲೆಯ ಶಾಲೆಗಳು ಇತರ ಹಲವು ಜಿಲ್ಲೆಗಳಿಗಿಂತ ಬಹಳ ಹೀನ ಸ್ಥಿತಿಯಲ್ಲಿರುವುದರಿಂದ ಅವುಗಳಿಗೆ ಗ್ರಾಂಟಿನ ಉತ್ತೇಜನ ಕೊಡಲಿಕ್ಕೆ ಬರುವುದಿಲ್ಲ; ಅಥವಾ ನಮ್ಮ ಅಧಿಕಾರರ ದೃಷ್ಟಿಯೇ ಸಂಕುಚಿತವಾಗಿದ್ದು ಗ್ರಾಂಟು ಹೆಚ್ಚು ಕೊಡಲಿಕ್ಕೆ ಹಿಂದೆಗೆಯುತ್ತಾರೆ. ಇದರಲ್ಲಿ ನಿಜವಾದ ಕಾರಣವು ಯಾವುದು ಎಂಬುದನ್ನು ತಿಳಿಯುವರೆ ಕಂಡುಹಿಡಿಯಬಹುದಲ್ಲದೆ ನಾವು ಥಟ್ಟನೆ ಹೇಳಲಾರೆವು. ಆದರೂ ಈ ವಿಷಯದಲ್ಲಿ ಈ ವರ್ಷಾವಧಿ ರಿಪೋರ್ಟುಗಳನ್ನು ಈ ಆಫೀಸಿನ ಚೆನ್ನಾಗಿ ಓದಿ ಇತರ ಜಿಲ್ಲೆಗಳ ಅನುಭವವನ್ನು ಸ್ವಲ್ಪ ಪಡೆದುಕೊಳ್ಳುವುದು ಅಗತ್ಯವೆಂದು ತೋರುತ್ತದೆ. ಇದೇ ರೀತಿಯಲ್ಲಿ ಸೇಕಡಾ ದರಗಳನ್ನು ತಗ್ಗಿಸಿದ ಶಾಲೆಗಳ ಸಂಖ್ಯೆಯು ಬೇರೆ ಬೇರೆ ಜಿಲ್ಲೆಗಳಲ್ಲಿ ತುಂಬಾ ವ್ಯತ್ಯಾಸವಾಗಿದೆ. ಇದರಿಂದ ಈ ಖಾಸಗಿ ಶಾಲೆಗಳಿಗೆ ವಿಶೇಷ ಉತ್ತೇಜನ ಕೊಟ್ಟಂತೆ ತೋರುವುದಿಲ್ಲ ಎಂದೇ ದೃಷ್ಟಿಯನ್ನು ಇನ್ಸ್‌ಪೆಕ್ಟಿಂಗ್ ಆಫೀಸರುಗಳು ಸರಿಯಾಗಿ ಉತ್ತರ ಕೊಟ್ಟು ಜನತೆಗೆ ಸಮಾಧಾನವಾದೀತು. ಜಿಲ್ಲೆಯಲ್ಲಿ ಸೇಕಡಾ [illegible] ಗ್ರಾಂಟು ಹೊಂದಲು ಅರ್ಹವಾದ ಶಾಲೆಗಳು ಇಲ್ಲವೆ, ಇಲ್ಲವಾದರೆ ಯಾಕೆ ಸಾಧ್ಯವಾಗುವುದಿಲ್ಲ ಅಷ್ಟು ಗ್ರಾಂಟು ಸಿಗಬೇಕಾದರೆ ಎಷ್ಟು ರೀತಿಯ ಅಭಿವೃದ್ಧಿಯನ್ನು ತೋರಿಸಬೇಕು, ಅಂಥಾ ಬೋರ್ಡು ಅಥವಾ ಮ್ಯುನ್ಸಿಪಲ್ ಶಾಲೆಯಾದರೂ ಉಂಟೆ, ಅದನ್ನು ಮಾದರಿಯಾಗಿ ತೋರಿಸಬಹುದೇ, ಇಲ್ಲವಾದರೆ ಯಾಕೆ ಇಲ್ಲ, ಈ ಪ್ರಶ್ನೆಗಳನ್ನು ಜನತೆಯು ತಿಳಿದುಕೊಳ್ಳುವುದು ಅಗತ್ಯ. ಅಂಥಾ ಅಭಿವೃದ್ಧಿಯುಳ್ಳ ಶಾಲೆಗೆ ಸೇಕಡಾ [illegible] ಗ್ರಾಂಟು ಕೊಡಬೇಕಾದರೆ ಇನ್ಸ್‌ಪೆಕ್ಟಿಂಗ್ ಆಫೀಸರುಗಳು ಅವಕ್ಕೆ ಸಹಾಯಕವಾಗಿ ರಿಪೋರ್ಟು ಕಳುಹಿಸಬೇಕಾಗುತ್ತದೆ. ಅದು ಹೊಂದವರಿಯ ಸಂಗತಿ ಎಂಬ ವಿಧದ ಅಂಜಿಕೆಯು ಇವರಲ್ಲಿ ಬರುತ್ತವಾದರೆ ಈ ಬಡ ಉಪಾಧ್ಯಾಯರಿಗೆ ಬಹಳ ಅನ್ಯಾಯವಾದೀತು. ಹಾಗಲ್ಲದೆ ಈ ಖಾಸಗಿ ಶಾಲೆಗಳು ಎಂದೆಂದಿಗೂ ವೃದ್ಧಿಹೊಂದುವಂಥವುಗಳೇ ಅಲ್ಲವೆಂತಾದರೆ ವರ್ಷಕೊಮ್ಮೆ ಪರೀಕ್ಷೆಯ ಒಂದೆರಡು ತಿಂಗಳ ಮೊದಲು ಮಾತ್ರ ಕೆಲಸಮಾಡುವ ಶಾಲೆಗಳಿದ್ದರೆ ಅವನ್ನು ಬೇಗನೇ ಮುಚ್ಚಿಸಿ ಆ ಹಣದಿಂದ ಒಳ್ಳೆ ಶಾಲೆಗಳಿಗಾದರೂ ಉತ್ತೇಜನ ಕೊಡಬಹುದಲ್ಲವೆ?

ಉಪ್ಪಿನಂಗಡಿ ತಾಲೂಕಿನ ಶ್ಯಾನಭೋಗರ ಪರಿಷತ್ತಿನಲ್ಲಿ ಶ್ಯಾನಭೋಗರ ಎಸೋಸಿಯೇಶನಿನ ಕಾರ್ಯದರ್ಶಿಯು ಮಾಡಿದ ಭಾಷಣ.

ಈ ದಿವಸ ನಿಮ್ಮೆಲ್ಲರ ಮಹಾಸಭೆಯನ್ನು ಕೂಡಿಸುವುದಕ್ಕೆ ನಿಮ್ಮನ್ನು ಎಲ್ಲಿಯಿಂದ ಬರಮಾಡಿಕೊಂಡು ಈಗ ನೆರೆದುದರ ಉದ್ದೇಶವನ್ನು ನಾನು ಸವಿಸ್ತಾರವಾಗಿ ಹೇಳಬೇಕೆಂದಿಲ್ಲವೆಂತ ನೆನಸುತ್ತೇನೆ. ಈಗಿನ ಕಾಲದಲ್ಲಿ ಸಭೆಗಳು, ಮಹಾ ಸಭೆಗಳು, ಸಮ್ಮೇಲನಗಳು ವ ಪರಿಷತ್ತುಗಳು ಪ್ರತಿಯೊಂದು ಕಸಬಿನವರಲ್ಲಿಯೂ ಜಾತಿಯವರಲ್ಲಿಯೂ ಎಲ್ಲಾ ಕಡೆಗಳಲ್ಲಿ ಕೂಡುತ್ತಿರುವುದನ್ನು ಬಹು ಚೆನ್ನಾಗಿ ಅರಿತ ನಾವು ವರ್ತಮಾನ ಪತ್ರಿಕೆಗಳಲ್ಲಿ ಆಗಾಗ್ಯೆ ಓದುತ್ತಲೇ ಇದ್ದೇವೆ. ಸರಕಾರಿ ನೌಕರರು [illegible] ಕೆಲಸಗಳನ್ನು ಮಾಡುವವರು ಯಾವುದೊಂದು [illegible] ಸಂಯುಕ್ತವಾದ ರೀತಿಯಲ್ಲಿ ನಡಿಸತಕ್ಕದೆಂದು ಒಂದು ಕ್ರಮ [illegible] ಮನ್ನಿಸಲ್ಪಟ್ಟ ಒಂದು ಬಗೆಯ ಭಾವನೆಯು [illegible]

[illegible]

ಹೆಡ್ ಕ್ವಾರ್ಟರಿಗೆ ಕರಸಿಕೊಳ್ಳುವಾಗ ಕೂಡಾ ಎಲ್ಲವರಿಗೂ ಒಂದೇ ತಡವೆಗೆ ಬರಮಾಡಿಕೊಳ್ಳುವದರ ಬದಲಾಗಿ ಹಲವು ಬೇರೆ ಬೇರೆ ಮಾಡಿ ಒಂದೊಂದು ಬೇಟಿಯವರಿಗೆ ಒಮ್ಮೆ ಕರೆಯಿಸಿಕೊಳ್ಳುವ ಸಂಪ್ರದಾಯವಿದೆ. ಆದುದರಿಂದ ಎಸೋಸಿಯೇಶನ್ ಸ್ಥಾಪನೆ ಆದ ವೇಳೆ ಅದರ ಎಲ್ಲವರನ್ನು ಒಂದೇ ಕಡೆಯಲ್ಲಿ ಸೇರಿಸುವ ಅಗತ್ಯವು ತೋರಿಬಂದುದರಿಂದ ಈ ಹೊತ್ತಿನ ಮಹಾಸಭೆಯನ್ನು ಕೂಡಿಸಲಿಕ್ಕೆ ಕಾರಣವಾಯಿತು.

೩. ಇಂಥಾ ಪರಿಷತ್ತುಗಳು ವೇಳೆ ಬಂದು ಕೂಡಿದವರಿಗೆಲ್ಲಾ ಪಂಚಾಯತ ಅಧಿಕಾರಿಗಳ ಕಡೆಯಿಂದ ಸ್ವಾಗತವನ್ನು ಮಾಡಿಕೆಯೊಂದು ಉಂಟು. ಮತ್ತು ಇಂಥಾ ಸಭೆಗಳಿಗೆ ಬರುವವರಿಗೋಸ್ಕರ ಊಟ ಉಪಚಾರಕ್ಕೆ ಇದ್ದು ಕೊಳ್ಳುವುದಕ್ಕೆ ಬಿಡಾರದ ವಗೈರೆಯ ಅನುಕೂಲತೆಗಳು ಸಹ ಪಂಚಾಯತ ಅಧಿಕಾರಿಗಳು ಮಾಡಿಸುವ ಕ್ರಮವೂ ಒಂದುಂಟು. ಆದರೆ ಈ ಪರಿಷತ್ತು ತಾಲೂಕಿನ ಹೆಡ್ ಕ್ವಾರ್ಟರಿನಲ್ಲೇ ಕೂಡಿಸಿದುದರಿಂದಲೂ, ತಾಲೂಕಿನ ಹೆಡ್ ಕ್ವಾರ್ಟರಿಗೆ ಬಂದು, ಕಾದು, ಹೋಗುವ ಸಂದರ್ಭಗಳು ಶ್ಯಾನಭೋಗರಿಗೆಲ್ಲಾ ಕೇವಲ ಸಾಮಾನ್ಯವಾದ ಅನುಭವವಾಗಿದ್ದುದರಿಂದಲೂ ಈ ಸಭೆಗೆ ಬರುವವರಿಗೆ ಇದರಿಂದ ಅನುಕೂಲತೆಯನ್ನು ಒದಗಿಸಿಕೊಡುವುದು ಕೇವಲ ಅನಾವಶ್ಯಕವೆಂದು ತಿಳಿದುಕೊಳ್ಳಬೇಕಾಯಿತು. ಈ ಕಾರಣದಿಂದ ನೇರವಾಗಿ ಸಭೆ ಕೂಡುವುದಕ್ಕೆ ಮಾತ್ರ ಅಗತ್ಯವಿರುವ ಏರ್ಪಾಡುಗಳನ್ನು ಮಾಡಿಕೊಂಡಿದ್ದೇವೆ. ಶ್ಯಾನುಭೋಗರ ಎಸೋಸಿಯೇಶನ ಪರವಾಗಿ ಏರ್ಪಡಿಸಿದ ಈ ಮಹಾಸಭೆಗೆ ಬರುವುದು ಪ್ರತಿ ಒಬ್ಬ ಶ್ಯಾನಭಾಗನ ಕರ್ತವ್ಯವಾದುದರಿಂದ ಬಂದವರಿಗೆ ಪ್ರತ್ಯೇಕವಾಗಿ ಸ್ವಾಗತವನ್ನುವದು ಕೂಡಾ ಅಗತ್ಯ ಕಾಣುವುದಿಲ್ಲ. ಆದರೂ ಈ ಹೊತ್ತಿಗೆ ತಂತಮ್ಮ ಖಾಸಗಿ ಕೆಲಸಗಳನ್ನು ವ ಅಡಚಣೆಗಳನ್ನು ಸ್ವಲ್ಪಮಟ್ಟಿಗಾದರೂ ಮರೆತು ಇಲ್ಲಿಗೆ ದಯಮಾಡಿ ಸಭೆಯ ಕೆಲಸವನ್ನು ಸಫಲಗೊಳಿಸುವುದಕ್ಕೆ ಉದ್ಯುಕ್ತರಾದುದಕ್ಕೆ ಈ ಪರಿಷತ್ತಿನ ಅಧಿಕಾರಿಗಳು ನಿಮಗೆಲ್ಲರಿಗೆ ತುಂಬಾ ಕೃತಜ್ಞರಾಗಿದ್ದಾರೆ.

೪. ಇಷ್ಟರಮಟ್ಟಿನ ಈ ಪೀಠಿಕೆ ಆದ ಮೇಲೆ ನಮ್ಮ ಇಂದಿನ ಸ್ಥಿತಿ ಏನು ಮುಂದಿನ ಗತಿ ಏನು, ಎಂಬ ಎಲ್ಲಾ ವಿಷಯಗಳನ್ನು ಕುರಿತು ಪ್ರಸ್ತಾಪಿಸುವುದು ಅತ್ಯಗತ್ಯವಾಗಿದೆ. ಆದುದರಿಂದ ನಮ್ಮ ಅವಸ್ಥೆಯ ವಿಷಯವಾಗಿ ನನ್ನ ಬುದ್ಧಿಗೆ ತೋರಿಬರುವ ಕೆಲವು ಆಲೋಚನೆಗಳನ್ನು ವ ಸೂಚನೆಗಳನ್ನು ನಿಮ್ಮ ಮುಂದೆ ಇಡಲಿ ಪರಿಷತ್ತಿನ ಕಾರ್ಯವನ್ನು ಮುಂದರಿಸಲು ನಿಮ್ಮನ್ನು ಕೇಳಿಕೊಳ್ಳಬೇಕೆಂದಿದ್ದೇನೆ.

೫. ಗ್ರಾಮಕಿಬಂಧಿಯ ಹೊಸ ಏರ್ಪಾಡಿನಲ್ಲಿ ಈ ತಾಲೂಕಿಗೆ ನೇಮಕವಾದ ಶ್ಯಾನಭೋಗರ ಸಂಖ್ಯೆ ವ ಅವರ ಸಂಬಳದ ವಿವರ ಈ ರೀತಿಯಾಗಿರುತ್ತದೆ.

ಸಂಬಳದ ದರ.	ಬ್ವರದ ಭತ್ಯೆಯಿದ್ದಲ್ಲಿ ಆದು.	ಒಟ್ಟು ಸಿಕ್ಕುವ ಸಂಬಳ.	ಶ್ಯಾನಭೋಗರ ಸಂಖ್ಯೆ.
೮—೦—೦	೩—೦—೦	೧೧—೦—೦	[illegible]
೧೦—೦—೦	೦—೦—೦	೧೦—೦—೦	೩೦
೧೦—೦—೦	೩—೦—೦	೧೩—೦—೦	೧೧
೧೩—೦—೦	೦—೦—೦	೧೩—೦—೦	೧೯
೧೨—೦—೦	೩—೦—೦	೧೫—೦—೦	[illegible]
			[illegible]

ಈ ರೀತಿ [illegible] ಮಂದಿ ಶ್ಯಾನಭೋಗರಿರುತ್ತಾರೆ.

(ಮುಂದರಿಯುವುದು.)

ಪದ್ಯರಿಗಳು!

[ಹೊಸ ಪದದ ಮಟ್ಟು].

ದೇಹವಿದು ಏತಕ್ಕೆ? ಎಲೆ, ನರನೆ, ನಿನ್ನ! |
ಶ್ರೀಹರಿಯ ಭಜನೆಯನು ಮಾಡೋ ನೀವುನ್ನ. ॥ ಪ ॥
ನುಡು, ಸುಡೋ ನಿನ್ನ ಆಶಾಪಾಶಗಳನು! |
ಬಿಡು, ಬಿಡೋ ಕಡು ದುಃಖಕೊಡುವ ಲೋಭವನು ॥
ಅದರಿ ಧ್ಯಾನವ ಮಾಡು, ಧನವೇಕೆ ನಿನಗೆ? |
ಗಡಣಬರೆ ನೀ ಅದ್ದು ಬೀಳು ಶ್ರೀಹರಿಗೆ! ॥ [illegible]
ಕೋಪವೆಂಬಾ ದುರ್ಜನನ ಸಂಗವೇಕೆ? |
ಪಾಪವೆಂಬಾ ದುರುಳತನದ ಹೊರೆ ಬೇಕೆ? ॥
ಕೋಪಗೊಂಡರೆ ನಿನ್ನ ಕಾರ್ಯವಾಗುವುದೆ? |
ಶ್ರೀ ಪದ್ಮನಾಭನನು ಭಜಿಸಯ್ಯ ಬಿಡದೆ! ॥ [illegible]
ಮದ, ಮತ್ಸರಗಳ [illegible] ನೋಡು! |
ಮುದದಿ [illegible] |
[illegible]
[illegible]

ಪ್ರಕಟನೆ.

[illegible]

[illegible] (District Political Conference) [illegible] ಕೂಡಿಸಲು [illegible] ಜಿಲ್ಲೆಗಳ [illegible] ಸಾಧ್ಯವಿಲ್ಲದ್ದರಿಂದ [illegible] ಸಂಘಟಿತ [illegible] ಪ್ರಕಟನೆ [illegible] ತಮಗೆ [illegible] ಆ ಕಾರ್ಯದ ಅವಶ್ಯಕ [illegible] ಹೊಂದಿಲ್ಲ.

[illegible] ರಾಷ್ಟ್ರೀಯ [illegible] ಕಾರ್ಯವು ಹೀನವಾಗಿರುವ ಮೂಲಕ [illegible] ಕರ್ನಾಟಕ [illegible] ಜಿಲ್ಲೆಗಳಲ್ಲಿ [illegible] ಅಭಿಪ್ರಾಯವನ್ನು ಒಟ್ಟುಮಾಡುವದರ ಸಲುವಾಗಿ ಮತ್ತು ಮಾಡತಕ್ಕ ಕಾರ್ಯದಲ್ಲಿ [illegible] ಅನುಸರಿಸಿ ನಡೆಸುವದರ ಸಲುವಾಗಿ ಮೇಲೆ ಹೇಳಿದ ಮಾದರಿಯ ಪರಿಷತ್ತನ್ನು ಕರೆಯುವದು ಅತ್ಯಾವಶ್ಯಕವಾಗಿರುವದೆಂದು ಧಾರವಾಡದ [illegible] ಅಭಿಪ್ರಾಯವಿದೆ. ಆದಕಾರಣ ಇಲ್ಲಿ ಸಾರ್ವಜನಿಕ ಸಭೆಯು [illegible] ಕೆಳಗೆ ಕಂಡ ನಿರ್ಣಯವು ಸರ್ವಾನುಮತದಿಂದ ತೀರ್ಮಾನ ಹೊಂದಿರುವದು:—

ಕರ್ನಾಟಕದಲ್ಲಿರುವ ಬುದ್ಧಿ ಸಂಬಂಧವಾದ ನೈತಿಕ, ಆರ್ಥಿಕ ಮತ್ತು ಔದ್ಯೋಗಿಕ ಸಾಧನಗಳನ್ನು ಏಕೀಕರಿಸಿ ಪ್ರಗತಿಯನ್ನುಂಟುಮಾಡಿ ಕರ್ನಾಟಕದ ರಾಜಕೀಯ ಪುನರುಜ್ಜೀವನ ಮಾಡುವದರ ಸಲುವಾಗಿಯೂ ರಾಷ್ಟ್ರೀಯ ಐಕ್ಯವನ್ನು ಬೆಳೆಸುವದರ ಸಲುವಾಗಿಯೂ ಸಾರ್ವಜನಿಕ ಕಾರ್ಯಾಭಿರುಚಿಯನ್ನು ಹೆಚ್ಚಿಸುವದರ ಸಲುವಾಗಿಯೂ ರಾಷ್ಟ್ರೀಯ ಸಭೆಯವರು ತೋರಿಸಿದ ಮಾರ್ಗ ಮತ್ತು ಧೋರಣಗಳಿಗೆ ಅನುಸರಿಸಿ ಕಾರ್ಯವನ್ನು ಮಾಡುವದರ ಸಲುವಾಗಿಯೂ ಕೇವಲ ಕರ್ನಾಟಕಕ್ಕೆ ಸಂಬಂಧವುಳ್ಳ ವಿಶಿಷ್ಟ ವಿಷಯಗಳ ಸಂಬಂಧವಾಗಿ ಕರ್ನಾಟಕದ ಅಭಿಪ್ರಾಯವನ್ನು ವ್ಯಕ್ತಪಡಿಸುವದರ ಸಲುವಾಗಿಯೂ ಕರ್ನಾಟಕ ಜಿಲ್ಲೆಗಳ "ಕರ್ನಾಟಕ ರಾಜಕೀಯ ಪರಿಷತ್ತಿಂ"ಬ ಸಮ್ಮೇಲನವನ್ನು ಕೂಡಿಸುವದು ಅತ್ಯಾವಶ್ಯಕವೆಂದೂ ತಪ್ಪವೆಂದೂ ಈ ಧಾರವಾಡದ ನಾಗರಿಕರ ಸಾರ್ವಜನಿಕ ಸಭೆಯ ಅಭಿಪ್ರಾಯವಿರುವದು. ಮತ್ತು ಈ ವಿಷಯದಲ್ಲಿ ಮುಂದೆ ಉಪಾಯಗಳನ್ನು ಯೋಜಿಸಲಿಕ್ಕೂ ಮತ್ತು ಕರ್ನಾಟಕ ಜಿಲ್ಲೆಗಳೊಳಗಿನ ಪ್ರಮುಖ ಜನರ ಅಭಿಪ್ರಾಯಗಳನ್ನು ತಿಳುಕೊಳ್ಳಲಿಕ್ಕೂ ಮತ್ತು ತೀವ್ರವಾಗಿ ಈ ವಿಷಯದಲ್ಲಿ ನಿರ್ದಿಷ್ಟವಾದ ಸೂಚನೆಗಳನ್ನು ಸಾರ್ವಜನಿಕ ಸಭೆಯ ಮುಂದೆ ತರಲಿಕ್ಕೂ ಕೆಳಗೆ ತೋರಿಸಿದ ಗೃಹಸ್ಥರ ಒಂದು ತಾತ್ಕಾಲಿಕ ಮಂಡಲವನ್ನು ಈ ಸಭೆಯು ನಿಯಮಿಸುತ್ತದೆ. ಈ ಮಂಡಲದವರಿಗೆ ತಮ್ಮ ಸಂಖ್ಯೆಯನ್ನು ಅವಶ್ಯಕಂಡಲ್ಲಿ ಹೆಚ್ಚಿಸಲಿಕ್ಕೆ ಅಧಿಕಾರವಿದೆ.

ತಾತ್ಕಾಲಿಕ ಮಂಡಲದ ಸಭಾಸದರು.

೧. ರಾ. ಬಾ. ವಿನಾಯಕರಾವ್ ಜೋಶಿ ಬಿ. ಎ. [ಅಧ್ಯಕ್ಷರು]
೨. ಶ್ರೀ. ನಾರಾಯಣರಾವ್ ಕರಿಗುದರಿ ಬಿ. ಎ., ಎಲ್. ಎಲ್. ಬಿ.
೩. ,, ವಿಶ್ವನಾಥರಾವ್ ಜೋಗ ಬಿ. ಎ., ಎಲ್ ಎಲ್ ಬಿ.
೪. ,, ಕೃಷ್ಣರಾವ್ ದೀಕ್ಷಿತ, ವಕೀಲ.
೫. ,, ಗದಿಗೆಯ್ಯ ಹೊಸ್ಮಾನೂರ ಮಠ, ವಕೀಲ.
೬. ,, ವಿಟ್ಠಲರಾವ್ ಜೋಶಿ, ವಕೀಲ.
೭. ,, ತ್ರಿಯಂಬಕರಾವ್ ಚಿತ್ರೆ, ಬಿ. ಎ., ಎಲ್ ಎಲ್. ಬಿ.
೮. ,, ಸುಬ್ಬರಾವ್ ಕುಲಕರ್ಣಿ, ಬಿ. ಎ., ಎಲ್ ಎಲ್. ಬಿ.
೯. ,, ಡಾ. ಕೇಶವರಾವ್ ಹುಯಿಲಗೋಳ, ಎಮ್. ಬಿ., ಬಿ. ಎಸ್.
೧೦ ,, ಶ್ರೀ. ಅನಂತರಾವ್ ಯಾದಗಿರಿ, ಬಿ. ಎ., ಎಲ್ ಎಲ್. ಬಿ.
೧೧. ,, ಮಧ್ವರಾವ್ ಕಬ್ಬೂರ, ಎಸ್. ಎ., ಎಲ್ ಎಲ್ ಬಿ.
೧೨. ,, ವೆಂಕಟರಾವ್ ಆಲೂರ, ಬಿ. ಎ., ಎಲ್ ಎಲ್. ಬಿ.
೧೩. ,, ಕೃಷ್ಣರಾವ್ ಮುದವೇಡಕರ, "ಕರ್ನಾಟಕ ವೃತ್ತ" ಕರ್ತರು.
೧೪. ,, ರಾಘವೇಂದ್ರರಾವ್ ಕಿರಪಾ ಬಿ. ಎ ವಕೀಲ.

(ಕಾರ್ಯದರ್ಶಿಗಳು.)

೧. ಶ್ರೀ. ರಾಮರಾವ್ ನರಗುಂದಕರ, ಬಿ. ಎ., ಎಲ್ ಎಲ್. ಬಿ.
೨. ಡಾ. ರಾಘವೇಂದ್ರರಾವ್ ಶಿರಹಟ್ಟಿ ಎಲ್. ಎಮ್. ಎಸ್.
೩. ಶ್ರೀ. ಕೃಷ್ಣರಾವ್ ಅಂಕಲಿಗಿ, ವಕೀಲ.
೪. ,, ಬಾಲಕೃಷ್ಣರಾವ್ ಕುಲಕರ್ಣಿ ಬಿ. ಎ., ಎಲ್ ಎಲ್. ಬಿ.

ಕೋಶಾಧೀಶರು (ಟ್ರೆಝರರ್.)

೧. ಶ್ರೀ ಲಕ್ಷ್ಮಣರಾವ್ ಮುತಾಲಿಕ ದೇಸಾಯಿ ಬಿ. ಎ., ಎಲ್ ಎಲ್. ಬಿ.

ಹೀಗಿದ್ದು ಈ ಕಾರ್ಯಕ್ಕೆ ತಮ್ಮ ಸಹಾನುಭೂತಿ ಇರುವದೆಂದೂ ತಾವು ನಮ್ಮ ಯತ್ನಗಳಲ್ಲಿ ಸಹಾಯ ಮಾಡುವಿರೆಂಧೂ ನಾವು ನಂಬಿರುವೆವು.

ಅದ್ದರಿಂದ ಬರುವ ೨೯ನೇ ಫೆಬ್ರುವರಿ ರವಿವಾರ ದಿವಸ ಸಂಜೆ ೬ ಘಂಟೆ [illegible] ವಿಕ್ಟೋರಿಯಾ ನಾಟಕ ಗೃಹದಲ್ಲಿ ಈ ವಿಷಯದಲ್ಲಿ ನಿರ್ದಿಷ್ಟವಾದ ಸೂಚನೆಗಳನ್ನು ನಿಶ್ಚಯಿಸಲಿಕ್ಕೆ ಒಂದು ಸಾರ್ವಜನಿಕ ಸಭೆಯನ್ನು ಕೂಡಿಸುವದು ಗೊತ್ತಾಗಿದೆ. ಆ ಸಭೆಗೆ ತಾವು ಬರಬೇಕೆಂದು ನಮ್ಮ ವಿನಯದ ಪ್ರಾರ್ಥನೆಯಿದೆ. ತಮಗೆ ಈ ಸಭೆಗೆ ಬರಲಿಕ್ಕೆ ಅನುಕೂಲವಾಗದಿದ್ದ ಪಕ್ಷದಲ್ಲಿ— ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇನಿದ್ದದ್ದು ತೀವ್ರವಾಗಿ ತಿಳಿಸಬೇಕೆಂದು ಅಪೇಕ್ಷಿಸುವೆವು.

ತಮ್ಮ

ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಆಫೀಸ, ಯಾದಗಿರಿ ವಕೀಲರ ಮನೆಯಲ್ಲಿ ಧಾರವಾಡ, ತಾ. 7-2-1920.	ರಾಮರಾವ್ ನರಗುಂದಕರ. ರಾಘವೇಂದ್ರರಾವ್ ಶಿರಹಟ್ಟಿ. ಕೃಷ್ಣರಾವ್ ಅಂಕಲಿಗಿ. ಬಾಲಕೃಷ್ಣರಾವ್ ಕುಲಕರ್ಣಿ.

ತ್ವರೆ ಮಾಡಿರಿ!! ಬೇಗನೇ ಬರೆಯಿರಿ!!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ರೌದ್ರಿ ಸಂವತ್ಸರದ ಪಂಚಾಂಗವು.

ಬೆಲೆ ಪ್ರತಿ ಒಂದಕ್ಕೆ 3 ಆಣೆ. 25 ಪ್ರತಿಗಳಿಗೆ ರೂ. 3-12-0

50 ಪ್ರತಿಗಳಿಗೆ ರೂ. 7-0-0. 100 ಪ್ರತಿಗಳಿಗೆ ರೂ. 13-8-0.

ಪ್ರತಿಗಳು ಸಿಗುವ ವಿಳಾಸ:—

ಮ್ಯಾನೇಜರ್,

ಶಾರದಾ ಛಾಪಖಾನೆ, ಮಂಗಳೂರು.

ನೋಟೀಸು.

ಮಂಗಳೂರು ತಾಲೂಕು ನಂಬ್ರ 10ನೆ ತೋಕೂರು ಗ್ರಾಮದಲ್ಲಿರುವ ಬಾಯೇರಿ ಸಂಕಪ್ಪಯ್ಯನವರ ವಿಧವೆ ಲಕ್ಷ್ಮಮ್ಮನು ಕೊಡುವ ನೋಟೀಸು—ನನ್ನ ಮಗ ಟ. ಲಕ್ಷ್ಮೀನಾರಾಯಣನು ಇತ್ತಲಾಗೆ ಕೆಟ್ಟ ಜನರ ಸಹವಾಸಕ್ಕೆ ಒಳಪಟ್ಟು ಬುದ್ಧಿ ಕೆಟ್ಟು ಜುಗಾರು ವಗೈರೆ ದುರ್ಗುಣಗಳಿಂದ ತುಂಬಿದವನಾಗಿ ಮನೆಯಲ್ಲಿ ಇಲ್ಲದೆ, ದುರ್ವ್ಯಯಕ್ಕೆ ಒಳಪಟ್ಟು ಮನೆಮನೆ ಸಾಲಮಾಡಲಿಕ್ಕೆ ಉದ್ಯುಕ್ತನಾಗಿರುವದಾಗಿಯೂ ಕೆಲವು ಊಹನೆ ಸಾಲಮಾಡುವದಾಗಿಯೂ ನಾನು ವರ್ತಮಾನ ತಿಳಿಯುವದರಿಂದ ಅವನಿಗೆ ಯಾರಾದರೂ ಸಾಲ ಕೊಟ್ಟರೆ ಅವನ ದೇಹಜವಾಬ್ದಾರಿ ಮೇಲೆ ವಸೂಲುಮಾಡಬೇಕಲ್ಲದೆ, ಅಂಥಾ ಸಾಲಗಳಿಗೆ ನನ್ನ ಹೆಸರ ಪಟ್ಟೆಯ ಆಸ್ತಿಗಳು ಜವಾಬ್ದಾರಿ ಆಗಲಿಕ್ಕಿಲ್ಲ. ಮತ್ತು ಹೊಣೆಯೂ ಆಗುವದಿಲ್ಲ ಎಂತ ಇದ್ದರಿಂದ ಪ್ರಕಟಪಡಿಸಿದ್ದೇನೆ. ಇದಕ್ಕೆ ವಿರೋಧವಾಗಿ ಸಾಲಕೊಟ್ಟವರು ತಾವೇ ನಷ್ಟಕ್ಕೆ ಬದ್ಧರು. ತಾರೀಕು 27ನೆ ಫೆಬ್ರವರಿ 1920ನೆ ಇಸವಿ.

!!! ಸ್ಟಾಗಿರಿ ವ ಎಡಕ್ಕೆಯ ಹೆಬ್ಬೆಟ್ಟು ಮುದ್ರೆ ಸಹ ಲಕ್ಷ್ಮಮ್ಮನ ರುಜು. ಶಾಲೆ ತೋಕೂರು ಗ್ರಾಮಕ್ಕೆ ಬಂದಿರುವ ಸದರಿ ಲಕ್ಷ್ಮಮ್ಮನ ಕಾಸ ತಮ್ಮ ಪೇಜಾವರ್ತ ರಾಮಚಂದ್ರ ಭಟ್ಟರ ಮಗ ವೆಂಕಟ್ರಮಣಯ್ಯನ ಸಾಕ್ಷಿ.

ಪ್ರಕಟಣೆ.

॥ ಶ್ರೀ ರಾಮರ ಸತ್ಕಾರ್ಯದ ಸುವಾರ್ತೆ ॥

ನಿಜಾಮ ಸರಕಾರ ಆಲಿ ಮಾನ್ವಿತಾ ಪೈಕಿ ಮಾಜಿ ಇರಕಲ್ಲು ಕುಲಕರ್ಣಿ ಕೂರ್ಮಣ್ಣನವರ ಮಗನಾದ ಎ. ಕೆ. ಚಂದ್ರರಾವ ಎಂಬಾತನು ಶ್ರೀ ಪ್ರೇರಣೆಯಿಂದ ಒಂದು ಕೋಟಿ ಶ್ರೀರಾಮ ಬರಿಯಬೇಕೆಂತಲೂ, ಮತ್ತು ಒಂದು ಅಕ್ಷಕೆಸ್ತುಂದು ದಂಪತಿಪೂಜಾ (ಧೋತ್ರ) ಜೋಡು ಶೀರೆ ಕುಪ್ಪಸ ಕೊಡಬೇಕೆಂದು ಸಂಕಲ್ಪಿಸಿದರಲ್ಲಿ ೮೮ ಪೂಜೆಗಳು ಆಗಿವೆ. ಇನ್ನು ೨೦ ಬಾಕಿ ಉಳಿದವೆ.

ಆ ಕಾರ್ಯಕ್ಕೆ ಸಕಲ ಶುಕ್ಲ ಯಜುರ್ವೇದ ಕಾಣ್ವ ಶಾಖೆ ವೈಷವ ವೈದೀಕ ಬ್ರಾಹ್ಮಣರಿಗೆ ವಿಜ್ಞಾಪನೆ. ಯಾರಾದರೂ ಪ್ರೀತಿಪೂರ್ವಕ ಶ್ರೀ ರಾಮರ ಸೇವಾ ಸ್ವೀಕರಿಸಬಿಚ್ಛಿಸುವವರು ಮೊದಲು ತಿಳಿಸಿದ್ದಲ್ಲಿ ವ್ಯವಸ್ಥೆ ಮಾಡುವದರಲ್ಲಿ ಬಂದೀತು.

ವ್ಯವಸ್ಥಾಪಕ,

ಅಸಿಸ್ಟಂಟ

ಎನ್. ಜಿ. ರಾಮರಾವ, ಪೋಸ್ಟು ಹಟ್ಟಿ.	ಎ. ಕೆ. ರಂಗನಾಥರಾವ್, ಹಟ್ಟಿ ಗೋಲ್ಡ ಮಾಯಿನ್ಸ ಪೋಸ್ಟು ಹಟ್ಟಿ, ರಾಯಚೂರ ಮಾರ್ಗ.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗುವದು, ತಲೆಪ್ರತಿ, ಕಣ್ಣುಪ್ರತಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು, ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ೧ಕ್ಕೆ ಆಣೆ ೧೨, ೩ಕ್ಕೆ ರೂ. ೨, ದೊಡ್ಡ ಸೀಸೆಗೆ ರೂ. ೧—೮—೦.

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿ ೧ರ ಕ್ರಯ ೧—೮—೦, ಬಾಟ್ಲಿ ೩ರ ಕ್ರಯ ೪—೦—೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳೀಪ್ರದರ (ಬಿಳೀ ಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨—೦—೦.

ಚಿನ್ ಚಿನ್ ಬಾಮ್.— ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ, ತಕ್ಷಣ ಗುಣ. ಬೆಲೆ ಸುಲಭ, ಭರಣಿ ೧ಕ್ಕೆ ಆ. ೬. ಗಜಕರ್ಣದ ಮುಲಾಮು ಡಬ್ಬಿಗೆ ಆ. ೪.

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.
Kalyanakaraka Bishagmandir,
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ, ಪೋಸ್ಟ್ ದ. ಕ.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್ ಪೆನ್‌ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಈ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೩೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದು ವ್ಯಾಪಾರ! ರೋಗಿಗಳ ಗಮನಾರ್ಹವೂ ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಳಿಗೆಗಳು ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ತಯಾರು ಇರುತ್ತವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ವ್ಯಾಲಿಕರೂ ಮನೇಜರೂ, ಆದ ದಾಮೋದರ ನಂಬೀಶನವರು ಅಧಿಕವಾಗಿ ಹೊರತು ವಿಶ್ವ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಇದರ ಎಲ್ಲಾ ಔಷಧಗಳು ಇದರ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುತ್ತದೆ. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ— ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಪ್ಪಟ್ಟ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ರ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ— ಇದು ಸ್ವಪ್ನೇಂದ್ರಿಯದಿಂದ ನಂಟುಕ್ಕಿರುವ ಮನುಷ್ಯರಿಗೆ ಅಮೃತವಂತಿರುವುದು. ೩೪ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧

೩. ನವನೀತಮಧುಸ್ನುಹಿ— ಇದು ಫಿರಂಗವ್ಯಾಧಿ (ಸಿಫಲಿಸ) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೩೪ ತೊಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ— ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯ ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೩೪ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

೫. ನಯನದ್ಯುತಿ— ತಿಮಿರ, ಉರಿಗಣ್ಣು, ನರ ಎಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ— ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಪಿಸುರು ಗಣ್ಣು, ಕೀವು ಬರುವುದು. ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡಾ.

ಎಲ್ಲರಿಗೂ ಬೇಕಾದ್ದು.

ನಮ್ಮ ಪರಮ ಹಿತ್ತೈಷಿಯಾದ ತರತರವಾದ ಹೂವಿನ ಸಾರಗಳು, ೧೨ ಮುದ್ದಿ ಸೀಸೆಗಳಿಗೂ ಪೆಟ್ಟಿಗೆ ೧ಕ್ಕೆ ರೂ. ೩. (ರವಾನಿಸುವ ಖರ್ಚು ಅಲಾಯಿದಾ) ನಿಮ್ಮ ಆರ್ಡರಿನ ಸಂಗಡ ೧ ರೂಪಾಯಿ ಕಳುಹಿಸಬೇಕು. ಬಾಕಿ ಮೊಬಲಗಿಗೆ ವಿ. ಪಿ. ಮಾಡುತ್ತೇವೆ.

ವಿಳಾಸ— ಎಸ್. ಟಿ. ವಿ.
ಬೆಂಗಳೂರು ಸಿಟಿ.

ಕ್ರಯ ರೂ. 1—8—0.

ಪ್ರಶ್ನೋತ್ತರ

ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:— ಬಗೆಬಗೆಯಾದ ಒಕ್ಕಣಿಗಳಿವೆ. ಲೌಕಿಕ ವೈದಿಕ ಮರ್ಯಾದೆಗಳಿವೆ, ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲು, ಮರಣಶಾಸನ, ಪಾರೀಖತ್ತು; ಗುತ್ತಿಗೆ, ಪಾಲುಗಾರಿಕೆ, ಹುಂಡಿ, ಚೆಕ್ಕು, ಇವುಗಳ ಮಾದರಿಗಳು, ವಿಧಗಳು, ಸ್ಟ್ಯಾಂಪು, ರಿಜಿಸ್ಟ್ರೇಶನ್; ಸಿವಿಲ್ ಕೋರ್ಟು ವಿಧಾನ— ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಟ್ಯಾಂಪ್ ಚಾರ್ಜ್, ಒರಿಜನಲ್, ರವ್ಯೂ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವವುಗಳಿಗೆ ಕಾಯಿದೆ, ಕೋರ್ಟು ಫೀ ಸ್ಟ್ಯಾಂಪು ರೇಟನ್ನೂ, ಮುಂತಾದ ಪ್ರಾಮುಖ್ಯವಾದ ರಾಜ್ಯಭಾರಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಕೋರ್ಟು ವಿಧಾನ— ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನುಗಳೆಲ್ಲವೂ ಇದರಲ್ಲಿ ಅಡಗಿವೆ. ಕಾಗದದ ಖರದಿಂದ ಬಹು ಸ್ವಲ್ಪ ಪ್ರತಿಗಳೇ ಅಚ್ಚಾಗಿದೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾ. 1—8—0; ಅಂಚೆಯ ವೆಚ್ಚ ಬೇರೆ.

[80-19] ವಿಳಾಸ:— "ಸವಿನುಡಿ" ಆಫೀಸು,
122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಮದನಮಂಜರಿ ಮಾತ್ರೆ.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಧಾತುವು ಹೋಗುತ್ತಿದ್ದರೂ, ಧಾತುವು ಕೆಟ್ಟುಹೋಗಿದ್ದರೂ ಬಹು ಬೇಗನೆ ಗುಣವಾಗುವದು. ರಕ್ತವನ್ನು ಶುದ್ಧಿಮಾಡಿ, ನರಗಳಿಗೆ ಬಲವನ್ನು ಕೊಟ್ಟು, ಹಸಿವನ್ನು ಹೆಚ್ಚಿಸುವದು. ಕೈಕಾಲು, ಸೊಂಟದ ನೋವುಗಳನ್ನು ಕೂಡಲೆ ಖಂಡಿಸುವದು. ಹಳೆಯ ತಲೆನೋವುಗಳನ್ನು ಸಹ ಬೇಗನೆ ನಿವಾರಣೆ ಮಾಡುವದು.

ಕ್ರಯ ೪೦ ಮಾತ್ರೆಗಳ ಡಬ್ಬಿ ೧ಕ್ಕೆ ೧—೦—೦

ವಿಳಾಸ:— ಮದನಮಂಜರಿ ಫಾರ್ಮಸಿ,
೨೭, ಪೈಕ್ರಾಫ್ಟ್ಸ ಬಜಾರು ರೋಡು, ಮದರಾಸು.

ಡಾಕ್ಟರ್ ವೈ. ನಿಶಿಮ್ಯೂರಾ ಎಂಬವರು ಮಂಗಳೂರು ಹಂಪನಕಟ್ಟೆ "ಪಿರೇರಾ ಬಿಲ್ಡಿಂಗ್ಸಿನ" ಮಾಳಿಗೆಯಲ್ಲಿ ತಮ್ಮ ಆಫೀಸು ಮಾಡಿರುವರು.

ಎಲ್ಲಾ ವಿಧದ ದಂತಚಿಕಿತ್ಸೆಗಳನ್ನೂ ಅತ್ಯಾಧುನಿಕ ರೀತಿಯಲ್ಲಿ ಮಾಡುವರು.

ಗಿರಾಕಿಗಳನ್ನು ಪರೀಕ್ಷಿಸಿ ಅಭಿಪ್ರಾಯಕೊಡುವುದಕ್ಕೆ ಫೀಸೇ ತೆಗೆದುಕೊಳ್ಳಲಾಗುವುದಿಲ್ಲ.

Dr. Y. Nishimura,
Japanese Dentist.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಭಿಸಿನ ಹಾಕಿದರೆ ಶಕ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದುಬಿಡುವದು.

ನಮ್ಮ ದರ್ಬಾರ್ ಸೋಪು.

ಗಂಡೆ, ಮೊಡವೆ, ಖಜ್ಜಿ, ತುರಿ, ಇಸಬು, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ.	0—14—0.
ಒಂದೇ ಸಲ 2 ಪೆಟ್ಟಿಗೆ ತಾಗಿಕೊಂಡರೆ	,,	1—10—0.
ವಿಲಾಯತಿ ರೋಮನಾಶಿಕ ಬತ್ತಿ	,,	0— 8—0.

ವಿಳಾಸ— ವೈರಂ ಅಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

೧೯೨೦ನೇ ಜನವರಿಯಿಂದ ಆರಂಭ.

ಸದ್ಬೋಧಕ ಗ್ರಂಥಮಾಲೆ.

(ತ್ರೈಮಾಸಿಕ ಪುಸ್ತಕ).

ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ, ಜುಜ್ಜೀಕರಣ, ವಿನೋದಲಹರಿ, ಸ್ವಾರಸ್ಯ ವಾರ್ತೆ, ವಿಚಾರ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುತ್ತವೆ. ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ತಕ್ಕದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚ ಜೊತೆಗೆ ಒಂದೇ ರೂಪಾಯಿ ಇಟ್ಟಿರುವೆವು. ಕೂಡಲೇ ತಮ್ಮ ಹೆಸರನ್ನು ತಿಳಿಸಿ, ಚಂದಾದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು
Authorised and fully paid up Capital Rs 300,000—0—0	ಅಧಿಕಾರಗೊಳಿಸಲ್ಪಟ್ಟ, ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 188781—9—2	ಕ್ಷೇಮನಿಧಿ, ಮತ್ತು ಇತರ ಫಂಡುಗಳು „ 188,781—9—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd.,
Mangalore, 1st March 1920

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2 8 0, 1 0-0

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ 3, 2, 1

ಬಾಲಗ್ರಹಧೂಪ ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ, ಟಿನ್ 1ಕ್ಕೆ 8 ಆಣೆ

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ

ಲೆವೆಂಡರ್. ಶೀಸೆ 1ಕ್ಕೆ 1—4—0

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು

ಭೃಂಗರಾಜ ತೈಲ

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳ ಗುಣವಾಗುತ್ತವೆ ಮತ್ತು ನರತ ಕೂದಲು ಕಪ್ಪಾಗುತ್ತವೆ ಕೇಶಗಳ ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ 0—12—0

ತ್ರಿಫಲಾದಿ ತೈಲ—ಪಿತ್ತ ಪಿತ್ತ, ಶ್ಲೇಷ್ಮ ಈ ಮೂರ ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲ ಇದರಿಂದ ಪರಿಹಾರವಾಗುತ್ತವೆ ಸ್ನಾನ ಮಾಡುವ ಮೊದಲು ಇದನ್ನು ತಲೆಗಚ್ಚಿದರೆ ಬಹಳ ಉತ್ತಮ
4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ 1—0—0

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಶೇರಿಗೆ ರೂ 1—4—0

ಈ ಮೇಲೆ ಬರೆದ ಔಷಧಗಳು ಪಾದಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳಹಿಸಬಹುದು

ವಿಳಾಸ —ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ ದ ಕನ್ನಡ

ನೋಟೀಸು

ಮಂಗಳೂರು ತಾಲೂಕು ನಂಬ್ರ 10ನೆ ತೋಕೂರು ಗ್ರಾಮದಲ್ಲಿರುವ ಬಾಯೇರಿ ಸಂಕಪ್ಪಯ್ಯನವರ ವಿಧವೆ ಲಕ್ಷ್ಮಮ್ಮನು ಕೊಡುವ ನೋಟೀಸು—ನನ್ನ ಮಗ ಬಿ. ಲಕ್ಷ್ಮೀನಾರಾಯಣನು ಇತ್ತಲಾಗೆ ಕೆಟ್ಟ ಜನರ ಸಹವಾಸಕ್ಕೆ ಒಳಪಟ್ಟು ಬುದ್ಧಿಗೆಟ್ಟು ಜುಗಾರು ವಗೈರೆ ದುರ್ಗುಣಗಳಿಂದ ತುಂಬಿದವನಾಗಿ ಮನೆಯಲ್ಲಿ ಇಲದೆ, ದುವ್ಯಸನಕ್ಕೆ ಒಳಪಟ್ಟು ಮನಮನಸ ಸಾಲಮಾಡಲಿಕ್ಕೆ ಉದ್ಯುಕ್ತನಾಗಿರುವದಾಗಿಯೂ ಕೆಲವು ಊಹನೆ ಸಾಲಮಾಡುವದಾಗಿಯೂ ನಾನು ವರ್ತಮಾನ ತಿಳಿಯುವದರಿಂದ ಅವನಿಗೆ ಯಾರಾದರೂ ಸಾಲ ಕೊಟ್ಟರೆ ಅವನ ದೇಹಜವಾಬ್ದಾರಿ ಮೇಲೆ ವಸೂಲುಮಾಡಬೇಕಲ್ಲದೆ, ಅಂಥಾ ಸಾಲಗಳಿಗೆ ನನ್ನ ಹೆಸರ ಪಟ್ಟೆಯ ಆಸ್ತಿಗಳು ಜವಾಬ್ದಾರಿ ಆಗಲಿಕ್ಕಿಲ್ಲ. ಮತ್ತು ಹೊಣೆಯೂ ಆಗುವದಿಲ್ಲ ಅಂತ ಇದರಿಂದ ಪ್ರಕಟಪಡಿಸಿದ್ದೇನೆ ಇದಕ್ಕೆ ವಿರೋಧವಾಗಿ ಸಾಲಕೊಟ್ಟವರು ಹಾನೀ ನಷ್ಟಕ್ಕೆ ಬದ್ಧರು ತಾರೀಖು 27ನೆ ಫೆಬ್ರುವರಿ 1920ನೆ ಇಸವಿ

ಈ ಗೆರೆ ವ ಎಡಕ್ಕೆಯ್ಯ ಹೆಬ್ಬೆಟ್ಟು ಮುದ್ರೆ, ಸಹ ಲಕ್ಷ್ಮಮ್ಮನ [illegible] ತೋಕೂರು ಗ್ರಾಮಕ್ಕೆ ಬಂಧಿರುವ ಸದಂ ಲಕ್ಷ್ಮಮ್ಮನ [illegible] ಪೇಜಾವರ ರಾಮಚಂದ್ರ ಭಟ್ಟರ ಮಗ [illegible] ಸಾಕ್ಷಿ

' ಟಿಶ್ಯು ರೆಮಿಡಿಸ

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯಾ

ಕ್ರಯ	ರೂ ಆ ಪೈ
ಎರಡು ಡ್ರಾಮಿನ 1 ಸೈಜ್ ಸೀಸೆ ಒಂದರ	0—3—6
ನಾಲ್ಕು „ „ „	0—6—0
ಒಂದು ಔನ್ಸಿನ „ „	0 12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯ ಶಾಸ್ತ್ರ ಪುಸ್ತಕ ಸಮೇತ	10 0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇನೆ ಕ್ರಯ 12 ಆಣೆ ಮಾತ್ರ.

ಬೇಕಾದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು

New Discoveries of the Twentieth Century.

Substitute for Quinine!

Powder I. [illegible] ಸೇವನೆಯಿಂದ, ಮಲೇರಿಯಾ ಎಂಬ ಚಳಿಜ್ವರ [illegible] ಕಡಿಮೆಯಾಗುತ್ತಿದ್ದರಿಂದ ವಾತೇ ರಮಾ [illegible] ಕರಗಿಹೋಗುತ್ತವೆ. ಇದು ಕ್ವಿನೈನಿನ ಹಾಗೆ ಅಪಾಯಕರವಲ್ಲ. ಪಾಕೆಟ್ಟಿನ ತೊಲೆ ಒಕ್ಕೆ ರೂ ೧.

Smallpox Preventive

Powder No II ಇದರ 3—7 ದಿವಸ ಸೇವನೆಯಿಂದ ಭಯಂಕರವಾದ ಸಿಡುಬು ಎಂಬ ಕಾಯಿಲೆ (ಅಂಟುರೋಗವು) ತಗಲುವದಿಲ್ಲ. ಜ್ವರವು ಶುರುವಾದ ಕೂಡಲೇ ಕೊಟ್ಟರೆ ಕೂಡಲೇ ಜ್ವರವು ಶಾಂತವಾಗುವದು. ಒಂದು ವೇಳೆ ಚಿಕ್ಕೆಗಳು ಕಂಡುಬಂದರೂ ಸ್ವಲ್ಪದಲ್ಲಿಯೇ ಬಿದ್ದುಹೋಗಿ ಅಪಾಯವಿಲ್ಲದೆ ದುಸ್ಸಾರು ಆಗುವರು. ತೊಲೆ 1ಕ್ಕೆ ರೂ 1—0—0.

Cholera Specific

Pills No. I. ಕಾಲರಾ ಎಂಬ ವಾಂತಿಭೇದಿಯು ಎಷ್ಟು ಕಠಿಣವಾದರೂ ಈ ಔಷಧವನ್ನು ಒಂದೇ ಸರ ಸೇವಿಸುವದರಿಂದ ಕೂಡಲೇ ನಿಲ್ಲುವದು 48 ಮಾತ್ರೆ ರೂ. 1—8—0.

Vishuchikanjan

Pills No II ವಾಂತಿಭೇದಿಯು ಕಠಿಣವಾಗಿ ಸ್ಮೃತಿ ತಪ್ಪಿದರೆ ಈ ಮಾತ್ರೆಗಳ ಅಂಜನದಿಂದ ಸ್ಮೃತಿ ತರಿಸುವದು ಮತ್ತು ಕಾಲರಾ ಎಂಬ ವಾಂತಿಭೇದಿಯು ತಕ್ಷಣವೇ ನಿಲ್ಲುವದು.

24 ಮಾತ್ರೆಗಳಿಗೆ ರೂ 1—0—0

N B ಈ ಔಷಧಗಳ ಹೊರತು ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ತರದ ರೋಗಗಳಿಗೆ ಸಿದ್ಧ ಮಾಡಿಟ್ಟಿರುವ ಔಷಧಗಳ ಸ್ಟೋಕ ತುಂಬಾ ಇರುವದು ನಮ್ಮ ಕ್ರಯಪಟ್ಟಿಯ ಕೆಟಲಾಗನ್ನು ಕೂಡಲೆ ತರಿಸಿ ಸ್ವೀಕರಿಸಲ್ಲಿ ಪ್ರಚಾರಗೊಳಿಸಿರಿ

SRI BHAVANISHANKER AYURVEDIC DESPENSARY,
BRAHMAVAR, S KANARA

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ – ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇಲಿ ನಂತಿರುವ, ವೀರ್ಯ ಕಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ ಮೂಲೇಂದ್ರಿಯ ರಚನೆ, ವೀರ್ಯ ನಷ್ಟ ಕ್ರಮ, ನಪುಂಸಕತ್ವ ಭೇದ, ಪಂಥ್ಯಾ ರೋಗ ವೇಗ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ಮೂಲಿಕೆಯುಳ್ಳ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ ಇವೆಲ್ಲದರಲ್ಲಿ ರಾಜಮೃಗಾಂಕಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ = ಟಿಂಕ್ಚರ್ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು ಕ್ರಯ ಪುಸ್ತಕ ೧ಕ್ಕೆ ರೂ ೧—೮—೦

ನಮ್ಮ ವಿಳಾಸ — ಭಾರತಿ ಬುಕ್ ಡಿಪೋ,
೪೯೧ ನಗರ್ತಪೇಟೆ, ಬೆಂಗಳೂರು ಸಿಟಿ

ಫೀಸು ಇಲ್ಲ! ರೋಗಪರೀಕ್ಷೆಗೆ ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡುಬರುತ್ತದೆ ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು"

ಡಾ. ಎಸ್. ಜೇ ಸರದೇಸಾಯಿ,
ಎಮ್ ಬಿ (ಲಂಡನ್).

ಇನ್ನು ಬಿಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,
ಮಹಾಮಾಯಿ ದೇವಾಲಯದ ಮಾರ್ಗ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ವಟಿಕೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು — ಬಿ. ಆರ್. ಹರಿದಾಸ, ಚಿಕಿತ್ಸಕರು

ಇವರು ಹೊಸತರಲ್ಲಿ [illegible] ಭಯಂಕರವಾದ ನಿಮೋನಿಯಾ [illegible] ಕ್ಷಯ, ಗ್ಲೋಕೋಮ, ಡಿಸೆಂಟ್ರಿ (ಆಮಶಂಕೆ) ಮುಂತಾದ ಅನೇಕ [illegible] ಗುಣಪಡಿಸಿ [illegible] ರೋಗಿಗಳನ್ನು ಪಿಷ್ಟ [illegible] ಸ್ವಲ್ಪ ಕಾಲದಲ್ಲಿಯೇ ಗುಣಪಡಿಸಿ [illegible] ಬಂದು [illegible] ಸೇರಿರಿ.

ವಿದೇಶ ವರ್ತಮಾನ

[illegible] ಯುರೋಪಿನ ಶಾಂತಿ [illegible] ... [illegible] ಒಂದು [illegible] ... [illegible] ಕತ್ತಲೆಯನ್ನು [illegible] ಎಂಬುದನ್ನು [illegible] ಇನ್ನೂ ಕಂಡು [illegible] ಬುದ್ಧಿವನ್ನು [illegible] ಈ [illegible] ಪಾರ್ಲಿಮೆಂಟ್, [illegible] ಸ್ಥಾನ [illegible] ಎಂಬುದು ಸ್ಪಷ್ಟವಾಗುವದಿಲ್ಲ, [illegible] ಈಗ ರುಷ್ಯದಲ್ಲಿ ತನ್ನ [illegible] ಈಗ [illegible] ಮುಂತಾದ್ದನ್ನು ಬಗ್ಗಿಸಲು [illegible] ತನ್ನ [illegible] ಪಾರ್ಲಿಮೆಂಟಿನ [illegible] ತರಿಗೆ ತಿದ್ದುಗಿಸುವ ಪ್ರಶ್ನೆಯು, ಯುದ್ಧ [illegible] ಚರ್ಚಿಸುತ್ತಲಿದ್ದರು ಎಂಬಂತೆ ವರ್ತಮಾನ ಪತ್ರಿಕೆಗಳು ಪ್ರಕಟಿಸುತ್ತವೆ. ಅದಲ್ಲ ಹಿಂದಿನಿಂದ ಎಷ್ಟರ ಮಟ್ಟಿಗೆ ಜರ್ಮನ ಪೆಳ ಸಂಘ ಬೆಂಬಲಿಸಿದೆ ಎಂಬುದು ಇನ್ನೂ ಪರದೆಯೊಳಗಿಂದ ಹೊರಗೆ ಬರಲಿಲ್ಲ [illegible] ಈ ರೀತಿಯಲ್ಲಿ ಈ ಒಳಸಂಚು ಫಲಿತಕ್ಕೆ ಬರುವಂತಿದ್ದರೆ ಸಂಧಿ [illegible] ಶರ್ತಗಳನ್ನು ನಿರ್ವಾಹವಿಲ್ಲದೆ ಒಪ್ಪಿಕೊಂಡು ಉಪಾಯಾಂತರದಿಂದ ಅವನ್ನು ತಿಲ್ಲಗಳೆಯ ಬೇಕೆಂದಿರುವ ಸಂದರ್ಭವನ್ನು ಈ ಜರ್ಮನರು ಬಿಡಲಾರರು ಯಾಕೆಂದರೆ ಅವರ ಎದೆಯಲ್ಲಿ ಉಂಟಾದ ಗಾಯವು ಮಾಯಲಿಲ್ಲ. ಮನಸ್ಸಿನ ಸಿಟ್ಟು ಇನ್ನೂ ತಣಿಯಲಿಲ್ಲ. ಸಂಧಿಶರ್ತಗಳಿಗೆ ಸಹಿಕೊಟ್ಟಿದ್ದರೂ ಈಗ ಅವರು ತೋರಿಸುವ ವರ್ತನವು ಈ ಮಾತನ್ನು ಸಮರ್ಥಿಸುತ್ತದೆ. ಸಂಧಿಕರಾರಿನ ಮೇರೆಗೆ ಯುದ್ಧದ ನಾಯಕರನ್ನು ವಿಚಾರಣೆಗೆ ಮಿತ್ರಪಕ್ಷದವರಿಗೆ ಅವರು ಒಪ್ಪಿಸಿ ಕೊಡಬೇಕೆಂದು ಇತ್ತು. ಅದಕ್ಕೆ ಬದಲಾಗಿ ಅವರನ್ನು ತಾವಾಗಿಯೇ ವಿಚಾರಣೆ ನಡೆಸುತ್ತೇವೆಂದು ಅವರು ಮಿತ್ರಪಕ್ಷದ ಮುಖ್ಯಸ್ಥರಿಗೆ ತಿಳಿಸಿದ್ದಲ್ಲದೆ, ಈ ವಿಚಾರವನ್ನು ಮಂಜೂರು ಮಾಡುವ ಶರ್ತವಿಟ್ಟುಕೊಂಡು ಮಿತ್ರಪಕ್ಷದವರು ಜರ್ಮನರ ಈ ಹಂಚಿಕೆಯನ್ನು ಒಪ್ಪಿಕೊಂಡರು.

ಶಾಂತಿಗೆ ಸಹಾಯಕರಾಗ ಬೇಕಾದ ಅಮೇರಿಕದವರಂತೂ ಸಂಧಿಕರಾರಿಗೆ ಒಪ್ಪಿಗೆ ಕೊಡುವ ವಿಷಯದಲ್ಲಿ ಇನ್ನೂ ಕೈಹಿಂದೆಳೆಯುತ್ತಾರೆ. ಪ್ರಥಮ ಸಲ ಈ ಸಂಧಿಪತ್ರದ ಶರ್ತಗಳು ಅಮೇರಿಕದ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ ಲೀಗ್ ಒಫ್ ನೇಶನ್ಸಿನ ಏರ್ಪಾಡಿನಿಂದ ಮುಂದೆ ಹೆಚ್ಚಾಗಬಹುದಾದ ಜವಾಬ್ದಾರಿಗೆ ತಾವು ತಲೆಕೊಡುವುದು ಸರಿಯಲ್ಲ, ಇದಲ್ಲದೆ ಈ ಲೀಗಿನಲ್ಲಿ ಬ್ರಿಟನ್ನಿಗೂ ಅದರ ವಸಾಹತುಗಳಿಗೂ ಕೂಡಿ ಸಿಗುವ ವೋಟುಗಳ ಸಂಖ್ಯೆ ಬೇರೆ ಯಾವುದೊಂದೂ ರಾಜ್ಯಕ್ಕೆ ಇಲ್ಲದಿರುವುದು ಸರಿಯಲ್ಲ ಎಂಬ ಎರಡು ಆಕ್ಷೇಪಗಳನ್ನು ಎತ್ತಿ ಚರ್ಚಿಸಿದ್ದರು. ಈಗಲೂ ಆ ಚರ್ಚೆಯು ಮುಗಿಯಲಿಲ್ಲ. ಅಮೇರಿಕವು ಈ ಕರಾರನ್ನು ಒಪ್ಪಿಕೊಳ್ಳಲಿಲ್ಲವಾದರೆ ಈ ಸಂಧಿಕರಾರಿನ ಬೆಲೆ ಎಷ್ಟರ ಮಟ್ಟಿಗೆ ನಿಂತೀತು ಎಂಬುದು ಹೇಳಲು ಬರುವುದಿಲ್ಲ. ಯಾಕೆಂದರೆ ಜಯಲಕ್ಷ್ಮಿಯು ಮಿತ್ರಪಕ್ಷದ ಕಡೆಗೆ ಓವಾಲಿಕ್ಕೆ ಬಹಳ ಮಟ್ಟಿಗೆ ಅಮೇರಿಕದವರು ಮಿತ್ರಪಕ್ಷದವರ ಬೆಂಬಲಕ್ಕೆ ನಿಂತದ್ದೇ ಬಲವಾದ ಒಂದು ಕಾರಣವಾಗಿದೆ. ಈಗ ಅದೇ ಅಮೇರಿಕವು ಕಾಲು ಹಿಂತೆಗೆದು, ವಿಲಾಯತಿಯ ವಿಚಾರಗಳಲ್ಲಿ ತಾವು ಪ್ರವೇಶ ಮಾಡಬೇಕೋ ಬೇಡವೋ ಎಂಬದನ್ನು ತಮ್ಮ ಪಾರ್ಲಿಮೆಂಟಿನವರೇ ನಿಶ್ಚಯಿಸಬೇಕಲ್ಲದೆ ಈ ಸಂಧಿಯು (ಕರಾರು) ತಮ್ಮ ಕೈ ಕಟ್ಟಿಬಿಗಿಯಬಾರದು—ಎಂದು ಅಮೇರಿಕದವರು ಪಟ್ಟು ಹಿಡಿದರೆ ಇದರಿಂದ ಕರಾರಿಗೆ ಪ್ರೆಸಿಡೆಂಟ ವಿಲ್ಸನರು ಒಪ್ಪಿಕೊಂಡದ್ದು ಏನೇನೂ ಪ್ರಯೋಜನವಾಗಲಾರದು. ವಹಾತ್ರವಲ್ಲ, ಅವರು 'ಆತ್ಮನಿರ್ಣಯ' ವೆಂಬ ಮೂಲ ಮಂತ್ರವನ್ನು ಉಪದೇಶಿಸಿದ್ದು ಇನ್ನೂ ಬಾಧಕಕರವಾಗಿಯೇ ಪರಿಣಮಿಸೀತು ಎಂಬಂತೆ ತೋರುತ್ತದೆ. ಅರ್ಥಾತ್ ಆ ಮೇರೆಗೆ ಯುರೋಪದ ಹಲವು ಚಿಕ್ಕ ದೊಡ್ಡ ಜನಾಂಗಗಳು ಮೊದಲಿನ ಸಂಕೋಲೆಗಳನ್ನು ಬಿಡಿಸಿಕೊಂಡು ಸ್ವಾತಂತ್ರ್ಯದ ಧ್ವಜವನ್ನು ಸ್ಥಾಪಿಸಬೇಕೆಂದಿದ್ದುದು ಇನ್ನೂ ಶಾಂತಿಗೆ ಬಾಧಕಕರವಾಗುವದಲ್ಲದೆ ಇವುಗಳೊಳಗಿನ ಜಗಳದ ಕಿಚ್ಚು ಇಡೀ ಲೋಕಕ್ಕೆ ಪಸರಿಸಬಹುದು.

ಈ ಪರಿಯಾಗಿ ನಾವು ಪದೇಪದೇ ಈ ವಿಷಯವನ್ನು ಎತ್ತುತ್ತಲೇ ಇರುವುದಕ್ಕೆ ಕಾರಣವೇನು ಎಂಬ ಸಂದೇಹವು ನಮ್ಮ ವಾಚಕರಿಗೆ ಬರುವುದಾದರೆ ಈಗ ಬ್ರಿಟಿಷ ಸಾಮ್ರಾಜ್ಯದ ಇತರ ವಸಾಹತುಗಳ ಸಮಗದ್ದಿಗೆಯು ನಮಗೆ ಈ ಯುದ್ಧದ ಶರ್ತಗಳಿಂದ ಬಂದಿದೆ, ನಾವು ಒಂದು ಕಾಲದಲ್ಲಿ ಬ್ರಿಟನರ ಆಶ್ರಯದೊಳಗಿದ್ದು ಆ ಛತ್ರದ ಮರೆಯಲ್ಲಿ ಸುಸ್ಥರಾಗಿದ್ದಾಗ ಎಲ್ಲಿ ಕಿಚ್ಚು ಬಿದ್ದರೂ, ಎಲ್ಲಿ ಕಡಲು ಬಿದ್ದರೂ ನಮಗೆ ಅದರ ಗೊಡವೆಯೇ ಇರುತ್ತಿದ್ದಿಲ್ಲ. ಈಗ ಈ ಪೀಠವು ಸಿಕ್ಕಿದ್ದರಿಂದ ಯುರೋಪದ ಅಪ್ಪೇಕೆ—ಲೋಕದ ಶಾಂತಿಯನ್ನು ಕಾಪಾಡುವುದಕ್ಕೆ ಏರ್ಪಡಿಸಲಿಕ್ಕಿದ್ದ 'ಲೀಗ್ ಒಫ್ ನೇಶನ್ಸ'ನಲ್ಲಿಯೂ ನಮಗೆ ಸರಿ ಸ್ಥಾನ ದೊರಕಿದ್ದರಿಂದ ಅದರ ರರಾವುಗಳು ನಮಗೆ ಸಹ ಸಾಧಕ ಅಥವಾ ಬಾಧಕಕರವಾಗಲಿಕ್ಕೆ ಸಾಕು. ಇದು ಇನ್ನು ಸಾರ್ವದಾ ನಮ್ಮ ಕಣ್ಣ ಮುಂದೆ ತೂಗೆಯು ತಕ್ಕದ್ದಾಗಿದೆ. ಬ್ರಿಟಿಷ ಧ್ವಜವು ಎಲ್ಲಿ ಹಾರುತ್ತದೋ ಅಲ್ಲಿ ಅದಕ್ಕೆ ಯಾವುದೊಂದು ಬಗೆಯ ತೊಂದರೆಯು ಬಂದರೆ ನಾವು ಕೂಡಲೆ ಬ್ರಿಟನ್ನಿನ ಪರವಾಗಿ ಸಾಧಿಸಬೇಕಾಗುತ್ತದೆ. ಬ್ರಿಟನ್ನಿಗೆ ಅನ್ಯರಾಜಗಳೊಡನೆ ಬರಬಹುದಾದ ಯಾವುದೊಂದು ಚರ್ಚೆಯ ವಿಚಾರವನ್ನು ನಾವು ಸಹ ತಲೆಗೆ ಹಚ್ಚಿಕೊಳ್ಳಬೇಕಾಗುತ್ತದೆ.

'ನಾವು' ಎನ್ನುವಾಗ ಹಿಂದುಸ್ಥಾನದ ವಿವಿಧ ಜಾತಿ ಮತಗಳು ಸಹ [illegible] ಎಂಬದನ್ನು ಬ್ರಿಟಿಷ ಮುತ್ಸದಿಗಳು ತಿಳಿದುಕೊಂಡದ್ದರಿಂದ ತುರ್ಕಿ ಬಾದಶಹ ಕರಾರನ್ನು ರಚಿಸುವಾಗ ಹಿಂದೀ ಮುಸಲ್ಮಾನರ ಮನಸ್ಸನ್ನು ನೋಯಿಸಬಾರದಾಗಿ ಅವರು ಬಹಿರಂಗವಾಗಿ ಹೇಳಿದ್ದಾರೆ. ಮತ್ತು ಹಿಂದೀ ಮುಸಲ್ಮಾನರಾದರೂ ತಮ್ಮ ಅಭಿಪ್ರಾಯವನ್ನು ಸಾಕಷ್ಟು ಸ್ಪಷ್ಟಗೊಳಿಸಿದ್ದಲ್ಲದೆ ಈ ವಿಷಯವನ್ನು ಬ್ರಿಟಿಷ ಮಂತ್ರಿಕೂಟದವರೊಡನೆಯೂ, ಸಾಧ್ಯವಿದ್ದರೆ ಮಿತ್ರಪಕ್ಷದ ಮುತ್ಸದಿಗಳೊಡನೆಯೂ ವ್ಯವಹರಿಸಬೇಕೆಂದು ಇಲ್ಲಿಂದ ತಮ್ಮ ಪ್ರತಿನಿಧಿಗಳನ್ನು ಕಳುಹಿದ್ದಾರೆ. ಈ ಪ್ರತಿನಿಧಿಗಳು ಇಂಗ್ಲೆಂಡಿಗೆ ತಲುಪಿ, ಈ ವಿಷಯದಲ್ಲಿ ನಡೆದ ಚರ್ಚೆಯ ಸಮಯದಲ್ಲಿ ಪಾರ್ಲಿಮೆಂಟ ಸಭೆಯಲ್ಲಿ ಹಾಜರಿದ್ದರು ಎಂಬಂತೆ ತಿಳಿಯುತ್ತೇವೆ. ಪ್ರಧಾನಿಯಾಗಿ [illegible] ಮಾಂಟೆಗು ಇವರಂತೆಯೇ ಮಿ ಲೊಯ್ಡ ಜೋರ್ಜರು ತುರ್ಕಿಯ ಸುಲ್ತಾನರನ್ನು ಕೊನಸ್ಟಂಟಿನೋಪಲದಿಂದ ಹೊರಡಿಸುವುದಿಲ್ಲವಾಗಿ ಹೇಳಿದ್ದಾರೆ. ಅದರೆ ಮಿ ಲೊಯ್ಡ ಜೋರ್ಜರು ಈ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಹೇಳಿದ ಒಂದು ಮಂತ್ರಿಮಂಡಳಿಯ ಅಭಿಪ್ರಾಯವನ್ನು ಇನ್ನೂ ಸ್ಪಷ್ಟವಾಗಿ ಹೇಳಲಾರೆವು. ತುರ್ಕಿಗೆ ನಾವು ಕೊಡತಕ್ಕ ಶರ್ತಗಳಲ್ಲಿ ಕೊನಸ್ಟಂಟಿನೋಪಲದ ಮೇಲಣ ಅಧಿಕಾರವು ಹೋಗಿದ್ದರೂ ತುರ್ಕಿಯ ಬಾಧೆಗಳನ್ನು ಸಾಕಷ್ಟು ಮೊಂಡಾಗ ಮಾಡಲಿಕ್ಕಿದ್ದೇವೆ ಎಂದು ಗೂಢಾರ್ಥದಲ್ಲಿ ಹೇಳಿದ್ದಾರೆ. ಆದರಿಂದ ನಮ್ಮ ಮುಸಲ್ಮಾನ ಬಂಧುಗಳ ಮನಸ್ಸಿಗೆ ತೃಪ್ತಿಯಾದೀತ ಎಂಬುದು ಈ ಶರ್ತಗಳ ಬಯಲಿಗೆ ಇಳಿದಾಗ ಗೊತ್ತಾಗುವುದು. ಆದ್ದರಿಂದ ಈ ಪ್ರಶ್ನೆಯು ತಮ್ಮ ಬಂಧುಗಳಿಗೂ ಸಮಾಧಾನ ಕೊಡುವ ರೀತಿಯಲ್ಲಿ ಇತ್ಯರ್ಥವಾದ್ದರೆ ಲೋಕಕ್ಕೆ ಈ ಯುದ್ಧದ ನಂತರ ಶಾಂತಿ [illegible] ಎಂದು ನಾವು ಬಯಸುವ ಮಾತು ಬರಿದಾಗುವುದು.

ಸ್ವದೇಶ ವರ್ತಮಾನ

ಶಾಲೆಗಳಿಗೆ ಗ್ರಾಂಟು:— ಈ ಮೊದಲು ಸೇರಿದ ಶಾಲೆಗಳೂ ಕಾಲೇಜುಗಳೂ ತರಿಸುವ ಶಾಲಾಶಾಸ್ತ್ರಕರಣಗಳ ಬೆಲೆಯಲ್ಲಿ ಅರ್ಧಾಂಶವನ್ನು ಸರಕಾರದವರು 'ಗ್ರಾಂಟು' ಕೊಡುತ್ತಿದ್ದರು ಈಗ ತ್ರಿನೆ ಅಂಶವನ್ನು ಮದ್ರಾಸು ಸರಕಾರದವರು ಕೊಡುವುದಾಗಿ ನಿರ್ಣಯಿಸಿದ್ದಾರೆ.

ಮಿ| ಅರುಂಡೇಲರು.— ಮಿ ಅರುಂಡೇಲರು ಮದ್ರಾಸಿನ ಬ್ರಾಹ್ಮಣ ಕನ್ನಿಕೆಯೊಬ್ಬಳನ್ನು ವಿವಾಹ ಮಾಡಿಕೊಳ್ಳುವುದಾಗಿ ನಿಶ್ಚಯಿಸಿದ್ದರಿಂದಲೂ ಈ ಚಂಚಲಯಿಂದ ವಿದ್ಯಾತ್ರಸಾರ ಮುಂತಾಗಿ ತಾನು ಹಿಂದುಸಮಾಜದ ಸೇವೆಗೋಸ್ಕರ ಕೈಕೊಂಡ ಹಲವು ಪ್ರಯತ್ನಗಳಿಗೆ ಭಂಗ ಬರುವುದಾಗಿ ತಾನೂ ತಿಳಿದದ್ದಲ್ಲದೆ ತನ್ನ ಆಪ್ತ ಮಿತ್ರರು ಅದೇ ರೀತಿ ಹೇಳಿದ್ದರಿಂದ ಈ ವಿವಾಹದ ಆಲೋಚನೆಯನ್ನು ಬಿಟ್ಟು ಬಿಟ್ಟಿರೆಂದು ಮದ್ರಾಸಿನ ಪತ್ರಿಕೆಗಳಿಗೆ ಬರೆದಿರುತ್ತಾರೆ. ಇದೀಗ ಧೀರತನ.

ಮಡಿಕೇರಿ:— ದಕ್ಷಿಣ ಕೊಡಗಿನ ಹಳ್ಳಿಗಳಲ್ಲಿ ಇನ್‌ಫ್ಲುಯೆಂಜಾ ಹಾವಳಿ ಹಬ್ಬಲು ತೊಡಗಿದೆ. ಕೆಲವೆಡೆಗಳಲ್ಲಿ ಕುಟುಂಬಗಳು ತೀರಾ ಅಳಿದು ಹೋಗಿವೆ. ಇದು ಕೊಡಗಿನಲ್ಲಿ ಈ ರೋಗದ ಮೂರನೆ ತರಂಗ. ಚಳಿ ಹೆಚ್ಚಾಗಿದೆ, ಗಾಳಿ ಬಹಳ ರಭಸದಿಂದ ಬೀಸ ತೊಡಗಿದೆ. ಇದರಿಂದ ಈ ರೋಗವು ಹಳ್ಳಿಮೂಲೆಗಳಲ್ಲಿ ಪಸರಿಸಲಿಕ್ಕೆ ಕಾರಣವಾಗಿದೆ.

ಆಹಾರ ಸಾಮಗ್ರಿಗಳ ಬೆಲೆ ವಿಶೇಷ ಏರಿದ್ದು ಸರಕಾರ ನವುಕರರು ತಮ್ಮ ಕಡಿಮೆ ಸಂಬಳದಿಂದ ಉದರ ನಿರ್ವಾಹವು ಕಷ್ಟತರವಾಗುವುದನ್ನು ಸಹಿಸಲಾರದೆ ತಮ್ಮ ಸಂಬಳದ ಮಿತಿಯನ್ನು ಸೇಕಡಾ ೫೦ರಷ್ಟು ಏರಿಸಬೇಕೆಂದು ಸರಕಾರದವರಿಗೆ ಬರಕೊಂಡಿದ್ದಾರೆ.

ಇಲ್ಲಿ ಲಿಂಗಾಯತ ಮತಸ್ಥರಿಗೆ ವಿದ್ಯಾಭ್ಯಾಸಕ್ಕೆ ಬಂದಾಗ ತಂಗುವುದಕ್ಕೆ ಒಂದು ನಿವಾಸಗೃಹವನ್ನು ಏರ್ಪಡಿಸಬೇಕೆಂದು ಈ ಜಾತಿಯ ಕೆಲವು ಮುಖಂಡರು ಆಲೋಚಿಸುತ್ತಿದ್ದಾರೆ. ಈ ಮಹತ್ಕಾರ್ಯದಲ್ಲಿ ಇವರ ಸಾಹಸವು ಸಫಲವಾಗಲೆಂದು ಕೋರಿಕೆ ಇದೆ.

ದಕ್ಷಿಣ ಕನ್ನಡ.

ಪಡುಬಿದ್ರೆ:— ಈ ವರ್ಷದ ಜಮಾಬಂದಿ ಬಗ್ಗೆ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರು ತಾ ೨೫—೩—೨೦ಲ್ಲಿ ಮಂಗಳೂರಿಂದ ಪಡುಬಿದ್ರೆಗೆ ಚಿತ್ತೈಸಿದವರು ತಾ ೧—೪—೨೦ರ ವರೇಗೆ ಪಡುಬಿದ್ರೆ ಮೊಕ್ಕಾಮಿನಲ್ಲಿ ಇದ್ದು ಆ ಮಧ್ಯೆ ತಾ ೨೭—೩—೨೦ರಲ್ಲಿ ಪಡುಬಿದ್ರೆ ಅರಮನೆ(ಬೀಡು)ಗೆ ಸವಾರಿ ಬೆಳಸಿ ಪುರಾತನದ ಸದ್ರಿ ಅರಮನೆಯ ಸಂಗತಿಯಾನುಸಾರಗಳನ್ನು ಕೇಳಿ ತಿಳಕೊಂಡು ಬಹಳ ಸಂತೋಷಪಟ್ಟಿರುವದಲ್ಲದೆ, ಸದ್ರಿ ಅರಮನೆಯಲ್ಲಿರುವ ಓಟಿನ ಕೋಣೆಗಳನ್ನು ಸಹಾ ತೆರಿಸಿ ನೋಡಿ, ಆನಂದಭರಿತರಾಗಿದ್ದಾರೆ. ನಂತರ ತಾ ೧ ೪ ೨೦ಲ್ಲಿ ಉಡುಪಿಗೆ ಹೋಗಿ ಅಲ್ಲಿಂದ ವಾಪಾಸು ಬಂದು ತಾ ೨-೪-೨೦ಕ್ಕೆ ತಿರಿಗಿ ಮಂಗಳೂರಿಗೆ ದಯಮಾಡಿರುತ್ತಾರೆ.

" ಪಡುಬಿದ್ರೆ ಶ್ರೀ ಮಹಾ ಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಾವಧಿ ಮಾಮೂಲು ಪ್ರಕಾರ ಆಗುವ ಜಾತ್ರೆಯು ತಾ ೧೩—೪—೨೦ನೆ ಶನಿವಾರ ದಿವಸ ಧ್ವಜಾರೋಹಣವಾಗಿ ತಾ ೨೧—೪—೨೦ನೇ ಶನಿವಾರ ದಿವಸ ರಥ ಉತ್ಸವವೂ ತಾ ೨೧—೪—೨೦ನೇ ಆದಿತ್ಯವಾರ ದಿವಸ ಚೆಂಡು ಉತ್ಸವವೂ ನಡಿಯುತ್ತದೆ."

ಕಾಪು:—(೧) ಉಡುಪಿ ತಾಲೂಕು ಬೋರ್ಡು ಮೆಂಬರರ ಸ್ಥಾನಕ್ಕೆ ಕಾಪು ಫಿರ್ಕಾದಿಂದ ನಾಲ್ವರು ಉಮೇದ್ವಾರರು ನಿಂತಿರುವರು. ಆ ಪೈಕಿ ಇಬ್ಬರು ಮಾತ್ರ ಚುನಾಯಿಸಲ್ಪಡುವರು. ಬರುವ ತಿಂಗಳ ತಾ ೧೭ನೇ ದಿನ ಇಲ್ಲಿಯ ಬಂಗ್ಲೆಯಲ್ಲಿ ಸದರಿ ಚುನಾವಣೆ ನಡೆಯುವದಾಗಿ ಕೇಳುತ್ತೇವೆ. ೩೦ ವರುಷ ಮೇಲೆ ತೀರ್ವೆ ಕೊಡುವ ಪ್ರತಿ ಒಬ್ಬನು ಇವರಿಗೆ ಓಟು ಕೊಡಲು ಅರ್ಹನು. ಆದ್ದರಿಂದ ಎಲ್ಲರೂ ಬಲು ಜಾಗರೂಕತೆಯಿಂದ ನೀತಿಯುತರಾಗಿಯೂ, ಜನೋಪಕಾರಿಯಾಗಿಯೂ ಉತ್ತಾರಬುದ್ಧಿಯುಳ್ಳವರಾಗಿಯೂ ಕಾರ್ಯಸಕ್ತರಾಗಿಯೂ ಇರುವಂಥವರು ಯಾರೆಂದು ತಿಳಿದು ತಮ್ಮ ಓಟನ್ನು ಕೊಡುವುದು ಉತ್ತಮವಾಗಿದೆ. ಈ ಸಂದರ್ಭದಲ್ಲಿ ಜಾತಿಮತಸಮ್ಮತವನ್ನು ಮೂಲೆಗೆ ಒತ್ತಟ್ಟು ದೇಶದ ಏಳಿಗೆಯ ಅಭಿವೃದ್ಧಿಗೋಸ್ಕರ ಕೆಲಸ ಕೈಕೊಂಡಲ್ಲಿ ಸಾರ್ಥಕವಲ್ಲವೇ?

ಉಚ್ಚಿಲ ಖಾಸಗಿ ಹಿಂದೂಸ್ತಾನೀ ಶಾಲೆಯನ್ನು ಬೋರ್ಡಿನವರು ಬೋರ್ಡು ಶಾಲೆಯಾಗಿ ಬರುವ ಎಪ್ರಿಲ್ ೧ನೇ ತಾರೀಕಿನಿಂದ ಜಾರಿಗೆ ತರುವರೆಂಬ ಸಂಗತಿ ಕೇಳಿ ಎಲ್ಲರೂ ಸಂತೋಷಪಡುವರಲ್ಲದೆ ಉಚ್ಚಿಲ ನಿವಾಸಿಕರು ಕೃತಜ್ಞತಾಪೂರ್ವಕ ವಂದನೆಯನ್ನು ಬೋರ್ಡಿನವರಿಗೆ ಅರ್ಪಿಸುತ್ತಾರೆ.

(೨) ಇಲ್ಲಿಯೇ ಸಮೀಪ ಮಲ್ಲಾರು ಬೋರ್ಡು ಹಿಂದೂಸ್ಥಾನೀ ಶಾಲೆ ಇದೆ. ಆ ಶಾಲೆಯಲ್ಲಿ ೫ ಜನ ಮಾಸ್ತರಿರುವರು. ಹೆಡ್‌ಮಾಸ್ತರ ಲಿಂಗ್ವಾತು ಎಲ್ಲರಿಗೂ ಏಕಪ್ರಕಾರ ರೂ ೧೨ ಸಂಬಳ ಇರುವುದು. ಶಾಲೆಯನ್ನು ಇಷ್ಟರ ಅಭಿವೃದ್ಧಿ ಸ್ಥಿತಿಗೆ ತಂದು ಯೋಗ್ಯ ಉಪಾಧ್ಯಾಯರಾಗಿ ದೀರ್ಘಕಾಲ ಬೋರ್ಡಿನ ಕೈಕೆಳಗೆ ಕೆಲಸ ನಡಿಸಿಕೊಂಡು ಬಂದ ಹೆಡ್‌ಮಾಸ್ತರ ಕಡೆಗೆ ಯಾರ ದೃಷ್ಟಿಯು ಬಾರದೆ ಇದ್ದದ್ದು ಉಪಾಧ್ಯಾಯರ ದುರ್ದಶೆ ಎಂದು ತಿಳಿಯಬೇಕಾಗಿದೆ. ಉಪಾಧ್ಯಾಯರ ಸಂಬಳದ ದರವು ಈ ಕ್ಷಾಮಕಾಲದಲ್ಲಿಯಾದರೂ ಹೆಚ್ಚಿಸಲು ತಕ್ಕುದಾದ ಬುದ್ಧಿಯನ್ನು ಭಗವಂತನು ಇಲಾಖಾಧಿಕಾರಿಗಳಿಗೆ ಕೊಡಲಿ ಎಂದು ಹಾರೈಸುತ್ತೇನೆ.

ಸುಳ್ಯ — ಮಡಿಕೇರಿ ರಸ್ತೆಯನ್ನು ಲೋಕಲುಫಂಡು ಇಲಾಖೆಯವರಿಂದ ಅಲ್ಲಲ್ಲಿ ಅಗಲಮಾಡಿಕೊಂಡು ಬಂದಿರುವುದರಿಂದ ಭಂಡಿಗಳ ಆಮದು ರಫ್ತಿಗೆ ತೊಂದರೆಯಾಗದೆ ಇತ್ತು. ಈಗ ಕಂಟ್ರಾಕ್ಟದಾರರ ಕಡೆಯ ಕೂಲಿಕೆಲಸದವರು ಕೆಲವು ಕಡೆ ಮಾರ್ಗದ ಒಂದೊಂದು ಬದಿಗಳಲ್ಲಿಯೂ ಕೆಲವು ಕಡೆ ಮಾರ್ಗದ ಇಕ್ಕೆಡೆಗಳಲ್ಲಿಯೂ ಜಲ್ಲಿಕಲ್ಲುಗಳ ರಾಶಿ ಹೂಡಿರುವುದರಿಂದ ಬಂಡಿ ಎಳೆಯುವ ಮೂಕಪ್ರಾಣಿಗಳಿಗೆ ಬಹಳ ಕಷ್ಟವಾಗಿಯದೆ. ಆದ್ದರಿಂದ ಈಗ ಬಹು ಕಷ್ಟವಾಗಿರುವ ಪರಿಸಾರಶಾನ, ಬೊಳ್ಳಬೈಲು ಮತ್ತು ಬೈತಡ್ಕ ಚಡಾವುಗಳಲ್ಲಿ ಮಾರ್ಗದ ಇಕ್ಕೆಡೆಗಳಲ್ಲಿಯೂ ಹಾಕಿಸಿದ ಜಲ್ಲಿಕಲ್ಲುಗಳ ರಾಶಿಯನ್ನು ತಗಿಸದೆ ಇದ್ದರೆ ಮೂಕ ಪ್ರಾಣಿಗಳಿಗೆ ಬಹಳ ಕಷ್ಟವೂ ಪ್ರಾಣಕ್ಕೆ ಹಾನಿಯೂ ಬರುವುದೇ ಸರಿ.

ರಿಜರ್ವ ಕಾಡುಗಳಲ್ಲಿ ಬೇಟೆಗಾರರಿಗೆ ತಿಳಿಸಿ ಶಿಕಾರಿ ಮಾಡಿಸಬೇಕೆಂತ ಗ್ರಾಮದ ಪಟೇಲರಿಗೆ ಹುಕುಮುಗಳು ಕಳಿಸಿದಾಗ್ಯೂ ಗಾರ್ಡರಿಗೆ ಈ ವರೆಗೆ ಶಿಕಾರಿ ಸಮಯ ಹಾಜರ ಇರಬೇಕೆಂಬ ಹುಕುಮುಗಳು ತಲ್ಪದೇ ಇರುವುದು ವಿಷಾದಕರ.

ಮೂಡಬಿದ್ರೆ:— ಈ ಮಾಗಣೆಗೆ ಸೇರಿದ [illegible] ಗ್ರಾಮದ ಬಗ್ಗೆ ಒಂದು ಕೋ-ಒಪರೇಟಿವ್ ಸೊಸೈಟಿಯನ್ನು ತೆರೆಯುವದೆ ಸದರಿ ಸೊಸೈಟಿಯ ಉಡುಪಿ ಸರ್ಕಲ್ ಇನ್ಸ್‌ಪೆಕ್ಟರವರಾಗಿರುವ ವೆ| ರಾ| ರಾ| ಎಸ್. ನರಸಿಂಹ ಆಚಾರ್ಯರು ಇದೇ ತಿಂಗಳ ತಾ ೨—೪—೨೦ರಲ್ಲು ಅಲ್ಲಿಯ ಸಾಹುಕಾರ ಮೂಡೂರು ಅನಂತ ಶೆಟ್ಟಿಗಳವರ ಬಂಡಸಾಲೆಗೆ ೩ ಗಂಟೆಗೆ ಬಂದು ಈ ಮೊದಲು ಮನವಿಮಾಡಿಕೊಂಡ ೧೯ ಜನರ ಪೈಕಿ ೧೩ ಜನರ ಸಭೆಯನ್ನು ಕೂಡಿಸಿ ಸೊಸೈಟಿಯ ಉಪನಿಬಂಧನೆಗಳನ್ನು ವಿವರಿಸಿ, ಮುಂದಿನ ಕಾರ್ಯಕ್ರಮವನ್ನು ಜಾರಿಗೆ ತಂದರು. ಅಂದಿನ ಸಭೆಗೆ ಮಾತ್ರ ಸದರಿ ಗ್ರಾಮದ ಪಟೇಲ ರಾ| ಶೀನಪ್ಪ ಹೆಗ್ಡೆಯವರನ್ನು ಪ್ರೆಸಿಡೆಂಟರನ್ನಾಗಿ ಆರಿಸಿ, ಅದೇ ದಿನ ಹೊಸ ಮೆಂಬರರಾಗಲಿಕ್ಕೆ ಅಪೇಕ್ಷೆಯುಳ್ಳ ಮಂದಿಯನ್ನು ದಾಖಲ್ ಮಾಡಿಕೊಂಡು ರಾ| ಕಾಸಿಂಗ ಸುಬ್ಬಯ್ಯ ಹೆಗ್ಡೆಯವರನ್ನು ಪ್ರೆಸಿಡೆಂಟರನ್ನಾಗಿಯೂ, ರಾ| ಜೆ. ಲೋಕಯ್ಯ ಹೆಗ್ಡೆಯವರನ್ನು, ಇಲ್ಲಿಯ ಶಾಲಾ ರಾ| ಡಿ. ಡಿ ಅಪ್ಪಾಜಿ ಮಾಸ್ತರವರನ್ನು ಅಸಿಸ್ಟಂಟ ಸೆಕ್ರೆಟರಿಗಳನ್ನಾಗಿಯೂ ಸರ್ವ ಸಮ್ಮತಿಯಿಂದ ನೇಮಿಸಲಾಯಿತು. ಅವರ ಸಂಘಕ್ಕೆ ಇನ್ನಿಬ್ಬರನ್ನು ಪಂಚಾಯಿತಿದಾರರನ್ನಾಗಿ ಆರಿಸಿ ಸದರಿ ದಿನ ಸಂಘ ತೆರೆಯಲಾಯಿತು. ಈ ಸಂಘವನ್ನು ಉಡುಪಿ ಯೂನಿಯನ್ನಿಗೆ ಸಂಯೋಗಿಸ ಬೇಕಾಗಿಯೂ ಆ ಸಂಘಕ್ಕೆ ರಾ| ಜೆ ಲೋಕಯ್ಯ ಹೆಗ್ಡೆಯವರನ್ನು ಪ್ರತಿನಿಧಿಗಳಾಗಿಯೂ ಚುನಾಯಿಸಲಾಯಿತು. ಈ ಗ್ರಾಮಸ್ಥರಾದ ಬಡವರ ಹಿತತ್ರಯಗಳನ್ನು ಲಕ್ಷ್ಯಕರಿಸಿ ಸಂಘವನ್ನು ಸ್ಥಾಪಿಸುವುದರಲ್ಲಿ ಭಗೀರಥ ಪ್ರಯತ್ನ ತಕ್ಕೊಂಡ ರಾ| ಜೆ ಲೋಕಯ್ಯ ಹೆಗ್ಡೆಯವರಿಗೂ ರಾ| ಇನ್ಸ್‌ಪೆಕ್ಟರವರಿಗೂ ಗ್ರಾಮಸ್ಥರೆಲ್ಲರೂ ತುಂಬಾ ಆಭಾರಿಗಳಾಗಿದ್ದಾರೆ.

ಮಂಗಳೂರು ಮಹಿಳೆಯರ ಕ್ಲಬ್ಬು.

ಕಳೆದ ಮಂಗಳವಾರ ಸಾಯಂಕಾಲ ೫ ೩೦ ಗಂಟೆಗೆ ಬಾವುಟಗುಡ್ಡೆಯಲ್ಲಿ ಈ ಮುಂಚೆ ಮಹಿಳೆಯರ ಕ್ಲಬ್ಬು ಇದ್ದ ಕಟ್ಟೋಣದಲ್ಲಿ ಹೆಚ್ಚಿನ ಸಂಭ್ರಮದಿಂದ ಕಲೆಕ್ಟರ ದೊರೆಗಳವರಿಂದ ಇದರ ದ್ವಾರವು ತೆರದು ಈ ಕ್ಲಬ್ಬಿನ ಪ್ರವೇಶವಾಯಿತು. ಈ ಸಂದರ್ಭದಲ್ಲಿ ಈ ಕ್ಲಬ್ಬಿನ ಸೆಕ್ರೆಟರಿಯಾದ ಮಿಸೆಸ್ ಎಮ್ ಎಸ್ ಕ್ರೇಷ್ಠರು ಇದರ ವರದಿಯನ್ನು ಓದಿದರು. ಇದರ ಮೇರೆಗೆ ಇದು ಕಳೆದ ನವಂಬರ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದ್ದು. ಈಗ ಇದಕ್ಕೆ ೭೭ ಮಂದಿ ಆಯಾಯ ಜಾತಿಯ ಸ್ತ್ರೀಯರು ಮೆಂಬರರಾಗಿರುವರಾಗಿಯೂ, ಮಿಸೆಸ್ ಎ ಜೆ ಲೋಬರವರು ಇದರ ಪ್ರೆಸಿಡೆಂಟರಾಗಿಯೂ, ಮಿಸೆಸ್ ಎಮ್ ಎಸ್ ಕ್ರೇಷ್ಠರು ಸೆಕ್ರೆಟರಿಯವರಾಗಿಯೂ, ಮಿಸೆಸ್ ಟಿ ಭವಾನಿರಾಯರು ಟ್ರೆಜರರರಾಗಿಯೂ ಇದಕ್ಕೆ ಒಂದು ಕಾರ್ಯಕಾರಿ ಕೌನ್ಸಿಲು ಇರುವುದಾಗಿಯೂ ತಿಳಿದು ಬರುತ್ತದೆ. ಸೆಕ್ರೆಟರಿಯ ಭಾಷಣದ ನಂತರ ಕ್ಲಬ್ಬಿನ ಪ್ರೆಸಿಡೆಂಟಳಾದ ಮಿ| ಎ ಜೆ ಲೋಬರ ಪತ್ನಿಯರ ಭಾಷಣವಾಯಿತು. ಬಳಿಕ ಅಂದಿನ ಅಧ್ಯಕ್ಷರಿಂದ ಕಲೆಕ್ಟರ ದೊರೆಗಳು ಸಮಯೋಚಿತವಾದ ಭಾಷಣವನ್ನು ಮಾಡಿ ಈ ಕ್ಲಬ್ಬಿನಿಂದ ಪಟ್ಟಣದೊಳಗಿನ ಆಯಾಯ ವರ್ಗದ ಸ್ತ್ರೀಯರೊಳಗೆ ಐಕ್ಯಮತ್ಯವು ಉಂಟಾಗುವುದು ಎಂಬುದನ್ನು ವಿವರಿಸಿದರು. ಕೊನೆಗೆ ಅಧ್ಯಕ್ಷರ ಕೊರಳಿಗೆ ಮಿ ಟರ್ನ ಸಾಲ್ದಾಂಞ ಹುಡುಗಿಯಿಂದ ಒಂದು ಹೂಮಾಲೆಯೂ ಹಾಕಿಸಲಾಗಿ, ಅಧ್ಯಕ್ಷರಿಗೂ ಸಭಿಕರಿಗೂ ವಂದನೆಗಳನ್ನು ಅರ್ಪಿಸಿ ಈ ಸಮಾರಂಭವು ಕೊನೆಗೊಂಡಿತು.

ಸಭೆಗೆ ಅನೇಕ ವರ್ಗದ ಬಹುಮಂದಿ ಸ್ತ್ರೀಯರು ಬಿತ್ತಯಿಸಿದುದಲ್ಲದೆ, ಡಿಸ್ಟ್ರಿಕ್ಟ ಜಡ್ಜರೂ, ಡಿಸ್ಟ್ರಿಕ್ಟ ಸರ್ಜನರೂ ಅಸಿಸ್ಟಂಟ ಸರ್ಜನರೂ, ರಾವ್ ಬಹದೂರ ಸುಜೀರ ರಘುನಾಥಯ್ಯ, ಮ ರಾ ರಾ ಕಾರ್ನಾಡ ಸದಾಶಿವ ರಾವ್ ಬಿ ಎ, ಬಿ ಎಲ್, ಮ ರಾ ಅಮ್ಮೆಂಬಳ ಶ್ರೀನಿವಾಸ ಪೈ ಬಿ ಎ ಬಿ ಎಲ್ ಮಿ| ಮ ಹಮ್ಮದ್ ಪುತ್ತು ಸಾಹೇಬ, ಮ ರಾ ಪಿ ಎನ್ ಭಂಡಾರಕಾರ ಹಜೂರ ಶಿರಸ್ತೆದಾರರು. ಮ| ರಾ| ಬಿ ಮಹಾಬಲ ಹೆಗ್ಗಡೆ ಬಿ ಎ ಬಿ ಎ ಎಲ್ ಮ ರಾ ರಾ ವಕೀಲ ಯನ್ ಯನ್ ಸುವರ್ಣ, ಮ ರಾ ವಕೀಲ ಮಾಧವ ಮೆನೋನ್ ಮ ರಾ ಪದ್ಮನಾಭ ಮೆನೋನ್ ಮ ಕರುಣಾಕರನ್ ಬಿ ಎ ಎ ಬಿ ಎಲ್ ಮತ್ತು ಗವರ್ನಮೆಂಟ ವಕೀಲ ಎ ಜೆ ಲೋಬೋ ಮೈ ಸಬ್ಬಾ ಮ ಯಸ್ ಯಲ್ ಮಧ್ಯಾಯನ್ ಮ ಯನ್ ಯಸ್ ಕ್ರೇಷ್ಠ ಮ ಜೋಕೆಮ ವ್ಯಿಯಸ್ ಮ ಟಿ.ವ್ ಪಾಯಸ್ ಮ ಆಟ್ಟಿನ್ ಮ ಸ್ವರೆಂಞಾಸ್ ಮುಂತಾದ ಅನೇಕ ಗೃಹಸ್ಥರು ನೆರೆದಿದ್ದರು. ಈ ಸಮಾರಂಭದ ಮೊದಲು ಮಿಸೆಸ್ ಹೆಮಿಲ್‌ಟನ್ ಮತ್ತು ಮಿಸೆಸ್ ಟಿ ಭವಾನಿರಾಯರವರಿಂದ ಒಂದು ಉಪಹಾರ ಸತ್ಕಾರವೂ ನಡೆಯಿತು. ಮತ್ತು ಒಂದು ಫೋಟೋಗ್ರಾಫ್ ಸಹಾ ತೆಗೆಯಲಾಯಿತು.

ಈ ಕ್ಲಬ್ಬು ಜಾತಿಭೇದವೆಣಿಸದೆ ಎಲ್ಲಾ ಜಾತಿಯವರೊಳಗೂ ಪರಸ್ಪರ ಅನುರಾಗವೂ ಐಕ್ಯಮತ್ಯವು ಉಂಟಾಗುವ ಧ್ಯೆಯದಿಂದ ಸ್ಥಾಪಿಸಲ್ಪಟ್ಟಿದ್ದುದರಿಂದ ಎಲ್ಲಾ ವರ್ಗದ ಸಭ್ಯ ಸ್ತ್ರೀಯರು ಕೂಡಾ ಮೆಂಬರರಾಗಬಹುದು.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್ ಲಿಮಿಟೆಡ್

ಸರ್ಕಲಾರು ನಂಬ್ರ ೫.

ಸೆಂಟ್ರಲ್ ಕೋ-ಒಪರೇಟಿವ್ ಬೇಂಕಿನ ಡಿರೆಕ್ಟರುಗಳು, ಯೂನಿಯನ್ನುಗಳ ಪ್ರೆಸಿಡೆಂಟರು ಸೆಕ್ರೆಟರಿಗಳು, ಇಲಾಖಾ ಇನ್ಸ್‌ಪೆಕ್ಟರುಗಳು ಸುಪರ್‌ವೈಜರುಗಳು ಇವರಿಂದ ಕೂಡಿದ ಒಂದು ಕಾರ್ಯನಿರ್ವಾಹ ಸಮ್ಮೇಲನವು ಇದೇ ಎಪ್ರಿಲ್ ತಿಂಗಳ ಈಸ್ಟರ್ ರಜೆಯಲ್ಲಿ ಜರಗಲಿಕ್ಕಿದೆ. ಕಳೆದ ಸಪ್ಟಂಬರ್ ತಿಂಗಳಲ್ಲಿ ಜರಗಿದ ಇದೇ ಬಗೆಯ ಒಂದು ಸಮ್ಮೇಲನದಲ್ಲಿ ಅತ್ಯವಶ್ಯವಾದ ಕೆಲವು ವಿಷಯಗಳು ಪುನಃ ಜಿಲ್ಲಾ ಪರಿಷತ್ತಿನ ಅಧಿವೇಶನದಲ್ಲಿ ಚರ್ಚೆಗೆ ಬಂದುದರಿಂದ ಆ ಠರಾವುಗಳನ್ನು ಆಧರಿಸಿ ಅದೇ ಪ್ರಶ್ನೆಗಳ ಪುನರ್ ವಿಮರ್ಶೆಯಾಗಬೇಕಾಗಿ ಬಂದಿದೆ. ಇದಲ್ಲದೆ ಸದರಿ ಪರಿಷತ್ತಿನ ಠರಾವುಗಳ ಜಾರಿ ನಡೆಸುವುದಕ್ಕೆ ಆವಶ್ಯವಾದ ಏರ್ಪಾಡು ಮಾಡಬೇಕಾಗಿದೆ. ಜಿಲ್ಲಾ ಪರಿಷತ್ತಿನ ಅಧಿವೇಶನಗಳನ್ನು ವರ್ಷಂಪ್ರತಿ ನಡಿಸುವುದಕ್ಕೆ ಬೇಕಾದ ದ್ರವ್ಯಾನುಕೂಲವನ್ನು ಒದಗಿಸುವ ವಿಷಯವೂ ಈ ಸಮ್ಮೇಲನದಲ್ಲಿ ಚರ್ಚೆಗೆ ಬರಲಿಕ್ಕಿರುವುದು.

ಜನವು ಮಸ್ಸೂರ ರೀತಿಯಿಂದ ಪರಾಧೀನ ಮಾಡಿದ ಜಿಸ್ತಿಗಳನ್ನು ಸುಲಭ ಕಂತುಗಳಿಂದ ಮೂಲಗಾರರು ಬಿಡಿಸಿಕೊಳ್ಳುವುದಕ್ಕೆ ಸಹಾಯಕವಾಗುವ ಲೇಂಡ್ ಮೋರ್ಗೇಜ ಬೇಂಕು ಒಂದನ್ನು ಸಹ ಏರ್ಪಡಿಸುವ ವಿಷಯವೂ ಈ ಸಮ್ಮೇಲನದಲ್ಲಿ ಚರ್ಚೆಗೆ ಬರುವುದು. ದಕ್ಷಿಣ ಕನ್ನಡ ಅಸಿಸ್ಟಂಟ ರಿಜಿಸ್ಟ್ರಾರರೂ ಈ ಸಮ್ಮೇಲನಕ್ಕೆ ಬರಲು ಆಮಂತ್ರಿಸಲ್ಪಡುವರು. ಈ ಸಮ್ಮೇಲನದಲ್ಲಿ ಚರ್ಚೆಗೆ ಇಡತಕ್ಕ ವಿಷಯಗಳೇನಾದರೂ ಇದ್ದರೆ ಯೂನಿಯನ್ನುಗಳ ಆಡಳಿತ ಸಭೆಯವರು ಆ ಕುರಿತು ಬರಕೊಳಬಹುದು.

ವರ್ತಮಾನ ಸಂಗ್ರಹಗಳು:—
ವಿದೇಶ ವರ್ತಮಾನ ೫
ಒಳದೇಶ ವರ್ತಮಾನ ೬
ದಕ್ಷಿಣ ಕನ್ನಡ:—
ಪತುಪೆತ್ತಿ, ಶಾಸ್ತ್ರ, ಸ್ವಶ್ನ, ಮುಡಿಕೇರಿ ಮುವೂರು ೫-೮
ದಕ್ಷಿಣಕನ್ನಡ ಸೆಂಟ್ರಲ್ ಕೋ-ಓಪರೇಟಿವ್ ಬೇಂಕ್ ಲಿಮಿಟೆಡ್ . . ,,
ಶ್ರೀ ಗೋಕರ್ಣದಲ್ಲಿನ ಶಿವಲಿಂಗ ಪ್ರತಿಷ್ಠೆ . . . . . . ,,
ಉಡುಪಿಯಂಗಡಿ ತಾಲೂಕಿನ ಶಿಕ್ಷಣಭಾಗದ ಪರಿಷತ್ತಿನಲ್ಲಿ ಜ್ಞಾನಭಾಗದ
ಎಸಿಸ್ಟೆಂಟ್ ಇನ್ಸ್‌ಪೆಕ್ಟರನ ಕಾರ್ಯದರ್ಶಿಯು ಮಾಡಿದ ಭಾಷಣ . . ೯

ಸ್ವದೇಶಾಭಿಮಾನಿ.

ಶಕೆ ೧೮೪೧ ಫಲ್ಗುಣ ಬ| ೮ ಶುಕ್ರವಾರ.

ಸಮಾಜೋದ್ಧಾರದ ಮೂಲತತ್ವಗಳು.

(೪)

(ರಾಜಕೀಯ ಉತ್ಕ್ರಾಂತಿ)

ಸಮಾಜದ ಸುಸ್ಥಿತಿಯ ಬಗ್ಗೆ ಮುಖ್ಯವಾಗಿ ಧರ್ಮ, ನೀತಿ ಈ ಎರಡು ಶಾಸ್ತ್ರಗಳು ಅವತರಿಸಿ ಹೇಗೆ ಇಷ್ಟ ಪರಿಣಾಮವನ್ನು ಮಾಡ ತೊಡಗಿದವು ಎಂಬುದನ್ನು ನಾವು ಈ ವರೆಗೆ ನೋಡಿಯಾಯಿತು. ಮತ್ತು ಶ್ರಮವಿಭಾಗದ ತತ್ವ, ನಿಃಸ್ವಾರ್ಥತೆ ಸರ್ವತ್ರ ಸಮದೃಷ್ಟಿ ಮೊದಲಾದವು ಸಮಾಜದ ಬಾಲ್ಯಾವಸ್ಥೆಯಲ್ಲಿ ಹೇಗೆ ಮೆಲ್ಲಮೆಲ್ಲನೆ ಜನ್ಮಕ್ಕೆ ಬಂದವು ಎಂಬೀ ವಿಷಯವನ್ನು ಕೂಡ ಈತನಕ ಪ್ರಸ್ತಾಪಿಸಿದ್ದಾಯಿತು. ಇನ್ನು ಕಳೆದ ಲೇಖಾಂಕದಲ್ಲಿ ಸೂಚಿಸಿದ್ದಂತೆ ಮಾನವ ಸಮಾಜದಲ್ಲಿ ರಾಜಕೀಯ ಸಂಸ್ಥೆಯು ಹೇಗೆ ಅಸ್ತಿತ್ವವನ್ನು ಪಡೆಯಿತು, ಮತ್ತು ಉತ್ಕ್ರಾಂತವಾಗ ಹತ್ತಿತು ಎಂಬುದನ್ನು ಈ ಹೊತ್ತು ವಿವರಿಸಬೇಕಾಗಿದೆ.

ರಾಜಸಂಸ್ಥೆಗೆ ಮೂಲಕಾರಣವು ಗೃಹಸಂಸ್ಥೆಯು ಸರಿ. ಎಂದರೆ ರಾಜಸಂಸ್ಥೆಯ ಮೂಲವನ್ನು ಹುಡುಕಹತ್ತಿದರೆ ಅದು ಕೌಟುಂಬಿಕ ವ್ಯವಸ್ಥೆಯಲ್ಲಿ ಸಿಗುವುದು. ಒಂದು ಕುಟುಂಬದಲ್ಲಿ ಒಬ್ಬನು ಯಜಮಾನನಾಗಿದ್ದು ಮಿಕ್ಕ ಪರಿವಾರಗಳ ಯೋಗಕ್ಷೇಮವನ್ನು ಹೇಗೆ ಅವನು ನೋಡುವನೋ ಹಾಗೆಯೇ ಕೊಂಚ ವ್ಯಾಪಕಪ್ರಮಾಣದಿಂದ ಒಂದು ಊರಿಗೆ ಅಥವಾ ದೇಶಕ್ಕೆ ರಾಜನೆಂಬ ಹೆಸರಿನಿಂದ ಒಬ್ಬನು ಯಜಮಾನನಾಗಿ ನಿಂತುಕೊಂಡು ಇತರರು ಅವನ ಆಜ್ಞಾವರ್ತಿಗಳಾಗಿ ನಿಲ್ಲುವರು. ಅವನ ಆಜ್ಞೆಯು ಭಂಗವಾಗದಂತೆ ಅವನ ವಶದಲ್ಲಿ ಸೈನ್ಯ, ಆ ಸೈನ್ಯದ ಪೋಷಣೆಗೆ ಬೇಕಾದ ದ್ರವ್ಯ ಇತ್ಯಾದಿ ಶಿಬಂದಿಯನ್ನು ಇತರರೇ ಅವನಿಗೆ ಒದಗಿಸಿ ಕೊಡುವರು. ಇದೆ ಸೇವ್ಯಸೇವಕಭಾವ ಅಥವಾ ಸ್ವಾಮಿಕಿಂಕರತೆ ಎನಿಸಲ್ಪಡುವುದು. ರಾಜಸಂಸ್ಥೆಯ ಸ್ವರೂಪವನ್ನು ಮೇಲಿನಂತೆ ಸಂಕೋಚದಿಂದ ಹೇಳತೋರಿಸಬಹುದಾದರೂ ಅದರ ಸಂಪೂರ್ಣ ಮರ್ಮವು ಅದರಿಂದ ಗೊತ್ತಾಗುವ ಹಾಗಿಲ್ಲ. ಯಾಕೆಂದರೆ, ಮಾನವ ಸಮಾಜವು ಪ್ರಥಮದಲ್ಲಿ ಸೃಷ್ಟ್ಯುಪಭೋಗದ ದೃಷ್ಟಿಯಿಂದ ಸಮಾನಾಕಾರದ್ದಾಗಿರುತ್ತ ಮಧ್ಯದಲ್ಲಿ ಸೇವ್ಯಸೇವಕಭಾವದ ವೈಷಮ್ಯವು ಹೇಗೆ ಉಪಸ್ಥಿತವಾಯಿತು, ಕುಟುಂಬದಲ್ಲಿ ಒಬ್ಬನು ಯಜಮಾನನೂ ಇತರರು ಪರಿವಾರಗಳೂ ಇರುತ್ತಾರಾದರೆ ಸಮಾಜದಲ್ಲಿ ಈ ನ್ಯಾಯವು ಯಾಕೆ ಬಂತು, ಕುಟುಂಬದೊಳಗಿನವನು ರಕ್ತಸಂಬಂಧದಿಂದ ಪರಿವಾರಗಳಿಗೆ ನಿಕಟಿತನಾಗಿರುವಂತೆ ರಾಜನೆನಿಸಿಕೊಳ್ಳುವವನು ಇರುವನೆ, ಹಾಗಿಲ್ಲವಾದರೆ ಈ ಕೃತ್ರಿಮ ಸ್ವಾಮಿಸೇವಕತೆಯು ಸ್ಥಿರವಾಗಿ ನಿಲ್ಲಬಹುದೋ ಇತ್ಯಾದಿ ಅನೇಕ ಪ್ರಶ್ನೆಗಳು ಮೇಲಿನ ಸ್ಥೂಲವಾದದ ಉಪದೇಶದ ಮೇಲೆ ಬರುತ್ತವೆ. ಮತ್ತು ಅವುಗಳ ಸರಿಯಾದ ಸ್ಪಷ್ಟೀಕರಣ ಕೊಂಬಹುದಾ ವಿಮರ್ಶೆಯಾವ ತೆರೆದು ರಾಜಸಂಸ್ಥೆಯ ಉತ್ಕ್ರಾಂತಿಯು ಸ್ಪಷ್ಟವಾದ ಕಲ್ಪನೆಯು ವಾಚಕರ ಮುಂದೆ ನಿಲ್ಲಲಾರದು. ಅದಕ್ಕಾಗಿ ಮೇಲಿನ ಸೂತ್ರಪ್ರಾಯವಾದ ಮಾತುಗಳನ್ನೆ ಪುನಃ ವಿವರಿಸಲು ಯತ್ನಿಸೋಣ.

ಸಮಾಜದ ಪ್ರಾಥಮಿಕ ಸ್ಥಿತಿಯಲ್ಲಿ ಅಪ್ರತಿಬದ್ಧವಾದ—ಹೀಗೆಂದು ಹೇಳುವುದಕ್ಕಿಂತ ನೈಸರ್ಗಿಕವಾದ—ವ್ಯಕ್ತಿಸ್ವಾತಂತ್ರ್ಯವು ಸರ್ವತ್ರ ಪಸರಿಸಿಕೊಂಡಿರುವಾಗ ಆ ಸಮಾಜದ ಮೇಲೆ ಒಂದು ದೃಷ್ಟಿಯಿಂದ ಎಷ್ಟು ಸುಖಪರಿಣಾಮ ಉಂಟಾಗುತ್ತಿತ್ತೊ ಅಷ್ಟಲ್ಲ, ಕೊಂಚವಾದರೂ ಇನ್ನೊಂದು ದೃಷ್ಟಿಯಿಂದ [illegible]

[illegible] ಆ ಕಾಲದಲ್ಲಿ ಅವನ ಮನಸ್ಸು ಸ್ವಲ್ಪ ಮಾತ್ರವೂ ತಡೆಯದೆ ಎಷ್ಟು ಮೇಲಕ್ಕೆ ಹಾರುತ್ತಿತ್ತು; ಕಲ್ಪನಾ ಸಮುದ್ರದಲ್ಲಿ ಎಷ್ಟು ನವ್ಯಪ್ರದೇಶಗಳಲ್ಲಿ ಮುಳುಗಿ ಮುಳುಗಿ ಬರುತ್ತಿತ್ತು. ವ್ಯಕ್ತಿಸ್ವಾತಂತ್ರ್ಯದ ಕಾಲದಲ್ಲಿ ಮನಸ್ಸು ಈ ರೀತಿಯಿಂದ ಅನಿರುದ್ಧ ಸಂಚಾರವಮಾಡುತ್ತಿತ್ತು ಎಂಬುದಕ್ಕೆ ಪ್ರತಿಯೊಂದು ವಾಙ್ಮಯದೊಳಗಿನ ಪ್ರಾಥಮಿಕ ಕಾವ್ಯಗಳು ದೃಷ್ಟಾಂತಗಳಾಗಿವೆ. ಪರಸ್ಪರ ಕಾರ್ಯಕಾರಣಭಾವವು ಗೊತ್ತಾಗದೆ ಇದ್ದದರಿಂದ ಮಳೆ, ಗಾಳಿ, ನೀರು, ಮಿಂಚು, ಗುಡುಗು ಇತ್ಯಾದಿ ಆಶ್ಚರ್ಯಕರ ದೇಖಾವೆಗಳನ್ನು ಕಂಡು ಆ ಪ್ರಾಥಮಿಕಕಾಲದ ಮನುಷ್ಯನು ಬಹು ಆಶ್ಚರ್ಯದಿಂದ, ಅತಿ ಆನಂದದಿಂದ ಕಣ್ಣು ತುಂಬಾ ನೋಡಿ, ಹೊಟ್ಟೆ ತುಂಬಾ ತೃಪ್ತಿ ಪಟ್ಟು 'ಓಮ್' ಎಂಬ ಸ್ವರವನ್ನು ಹೊರಡಿಸಿದನು! ಮತ್ತು ಈ ಒಂದೇ ಸ್ವರದಲ್ಲಿ ಅವನ ಆಶ್ಚರ್ಯ, ಅವನ ಆನಂದ, ಅವನ ಕುತೂಹಲ ಮತ್ತು ಅವನ ಸಂತೃಪ್ತಿ ಇವೆಲ್ಲ ತುಂಬಿಕೊಂಡಿವೆ ಎಂದು ಹೇಳುತ್ತಾರೆ. ಅನಿರುದ್ಧವಾದ ಮಾನಸಿಕ ಸಂಚಾರದ ಕಾಲದಲ್ಲಿ ಮಾನವನು ಅಮೃತ ಪ್ರಾಯವಾದ ಎಷ್ಟು ಆಸ್ವಾದ್ಯ ಕಾವ್ಯಗಳನ್ನು ರಚಿಸಿದನು; ಎಷ್ಟು ಶಾಸ್ತ್ರಗಳ ಮೂಲ ತತ್ವಗಳನ್ನು ಶೋಧಿಸಿದನು! ಇದನ್ನೆಲ್ಲ ಪ್ರಾಚೀನ ವಾಙ್ಮಯ ಶೋಧಕರು ಈಗ ಲೋಕದ ಬೆಳಕಿಗೆ ಸರಿಯಾಗಿ ತಂದು ಕೊಟ್ಟಿದ್ದಾರೆ. ಇರಲಿ, ವ್ಯಕ್ತಿ ಸ್ವಾತಂತ್ರ್ಯವು ಒಂದು ಕಡೆಯಿಂದ ಈ ರೀತಿ ಸುಪರಿಣಾಮವನ್ನು ಉಂಟುಮಾಡುವ ಕಾಲದಲ್ಲಿ ಇನ್ನೊಂದು ಕಡೆಯಿಂದ ತನ್ನ ಸುತ್ತುಮುತ್ತಲು ಪರತಂತ್ರತೆಯ ಕೋಟೆಯನ್ನು ಕಟ್ಟ ಹತ್ತಿತು. ವ್ಯಕ್ತಿಸ್ವಾತಂತ್ರ್ಯವು ಬುದ್ಧಿಯನ್ನು ಪ್ರವೇಶಿಸಿ ಹೇಗೆ ಅನೇಕ ಸುಖಗಳನ್ನು ಅನುಭವಿಸ ಹತ್ತಿತೊ ಹಾಗೆಯೆ ಸಾರ್ವಜನಿಕ ಸುಖಕ್ಕೆ ಭಂಗ ಪಡಿಸಲುದ್ಯುಕ್ತವಾದ ಸ್ವಾರ್ಥಭಾವನೆಯನ್ನು ಪರವಶತೆಯ ಸೇಣಿನಿಂದ ಬಿಗಿಯ ಹತ್ತಿತು. ವ್ಯಕ್ತಿಸ್ವಾತಂತ್ರ್ಯವು ಹೆಚ್ಚಾದ ಮೇಲೆ ಪರರೋಪದ್ರವವು ಪ್ರಾರಂಭವಾಗುತ್ತದೆ. ಆಗ ಗೃಹಸಂಸ್ಥೆಯ ತತ್ವಗಳನ್ನು ವಿಸ್ತರಿಸಬೇಕಾಗುತ್ತದೆ. ಮನೆಯಲ್ಲಿ ಯಜಮಾನನಾದರ ಊರಲ್ಲಿ ಅರಸನಾಗುವನು. ಮನೆಯಲ್ಲಿ ಶ್ರಮವಿಭಾಗದ ತತ್ವವು ಬಂದಂತೆ ಸಮಷ್ಟಿರೂಪವಾದ ರಾಜ್ಯದಲ್ಲೂ ಬಂದು ಹೋಗುವುದು. ಬಲಿಷ್ಠರಾದವರು ದುರ್ಬಲರ ಮೇಲೆ ವ್ಯಕ್ತಿಸ್ವಾತಂತ್ರ್ಯದ ಹೆಸರಿನಿಂದ ಸ್ವೇಚ್ಛಾಚಾರಗಳನ್ನು ನಡಿಸ ಹತ್ತಲು ದುರ್ಬಲರಿಗೆ ಸ್ವಸಂರಕ್ಷಣಾರ್ಥವಾಗಿ ದೇಶವನ್ನು ನಿಯಮಿಸುವ ಒಬ್ಬನನ್ನು ನೇಮಿಸಿ ಅವನ ವ್ಯವಸ್ಥೆಗೆ ಬೇಕಾದ ಎಲ್ಲ ಸಂಗತಿಗಳನ್ನು ಒದಗಿಸಿಕೊಡಬೇಕಾಯಿತು. ಕೆಲವರ ಅಭಿಪ್ರಾಯದಂತೆ ಬಲಿಷ್ಠರಾದವರು ತಮ್ಮ ಸಾಮರ್ಥ್ಯದಿಂದ ಇತರರನ್ನು ಕೈವಶ ಮಾಡಿ ತಮ್ಮ ಸುಖಸಮೃದ್ಧಿಯನ್ನು ಬೇಡಹತ್ತಿದರು. ಇವರ ಈ ಸುಖಸಮೃದ್ಧಿಯು ಸರ್ವದಾ ನಡೆಯುವಂತೆ, ಹಾಗು ದುರ್ಬಲ ವರ್ಗಕ್ಕೆ ಒಂದು ವಿವಕ್ಷಿತ ಮರ್ಯಾದೆಗಿಂತ ಹೆಚ್ಚು ತೊಂದರೆಯುಂಟಾಗದಂತೆ ಅವರಲ್ಲಿ ಪರಸ್ಪರ ಕೆಲವು ಶರ್ತಗಳು ಆದವು. ಇದೇ ಸೇವ್ಯಸೇವಕ ಭಾವದ ಮೂಲಸ್ವರೂಪವು. ಸೇವ್ಯಸೇವಕತೆಯನ್ನು ಬಲಿಷ್ಠರು ಹುಟ್ಟಿಸಿದ್ದರಲ್ಲಿ, ಅಥವಾ ಅವ್ಯವಸ್ಥೆಯ ನಿವಾರಣಾರ್ಥವಾಗಿ ಜನರೇ ಆತ್ಮ ನಿರ್ಣಯದಿಂದ ಈ ಸಂಸ್ಥೆಯನ್ನು ಸ್ಥಾಪಿಸಿದ್ದರಲ್ಲಿ, ಅದು ಹೇಗಿದ್ದರೂ ಪ್ರಬಲವಾದ ವ್ಯಕ್ತಿಸ್ವಾತಂತ್ರ್ಯವನ್ನು ರಾಜಸಂಸ್ಥೆಯು ಸಂಪುಟದಲ್ಲಿ ಬರುವಂತೆ ಮಾಡಿತು. ಅಂತು ರಾಜಸಂಸ್ಥೆಯ ಉದ್ಗಮವು ಸಮಾಜದ ಉದ್ಧಾರವೆಂಬ ಉಚ್ಚ ಪರ್ವತದ ಶಿಖರದ ಮೇಲೆ ಉಂಟಾಯಿತು. ಆದರೆ ನದಿಯು ಉದ್ಗಮ ಸ್ಥಾನದಲ್ಲಿ ನಿರ್ಮಲವಾಗಿದ್ದರೂ ಕೆಳಕೆಳಗೆ ಇಳಿದ ಹಾಗೆ ಹೇಗೆ ವಿರೂಪ ಸ್ಥಿತಿಯನ್ನು ಹೊಂದುತ್ತ ಬರುತ್ತದೊ ಹಾಗೆಯೆ ರಾಜ ಸಂಸ್ಥೆಯ ಸ್ವರೂಪವಾಯಿತು. ಸಮಾಜದ ಉದ್ಧಾರಕ್ಕಾಗಿ, ದುರ್ಬಲರ ರಕ್ಷಣೆಕ್ಕಾಗಿ ಪ್ರವೃತ್ತವಾದ ರಾಜಸಂಸ್ಥೆಯು ದುರ್ಬಲರ ಕಷ್ಟಕ್ಕೆ ಕಾರಣವಾಯಿತು. ಈ ಸಂಗತಿಯು ಈ ವರೆಗಿನ ಇತಿಹಾಸದ ಮೇಲಿಂದ ಸರ್ವಶ್ರುತವಾಗಿಯೆ ಇದೆ. ಆದ್ದರಿಂದ ಆ ವಿಷಯವನ್ನು ಹೆಚ್ಚಿನ ಮಟ್ಟಿಗೆ ವಿಸ್ತರಿಸುವ ಅವಶ್ಯಕತೆ ಕಾಣದು.

ಇದು ರಾಜಸಂಸ್ಥೆಯ ನಿಜವಾದ ಉತ್ಕ್ರಮಣವಲ್ಲ. ಇದು ಅದರ ದುರ್ದಶೆಯು. ಮತ್ತು ಒಂದು ವಸ್ತುವಿನ ದುರ್ದಶೆಯಾದ ಹೊರತು ಅದರಲ್ಲಿ ಉತ್ಕ್ರಮಣವಾಗುವುದಿಲ್ಲ. ಬೌದ್ಧ ಶಾಸ್ತ್ರದ ಒಂದು ಸಿದ್ಧಾಂತವಿದೆ ಏನೆಂದರೆ, ಶರೀರವು ಹೊಸದಾಗಬೇಕಾದರೆ ಅದರ ಮೊದಲಿನ ಪರಮಾಣುಗಳು ವಿಸ್ಕಲಿತವಾಗಿ ಹೋಗಬೇಕು. ಅದೇ ರೀತಿಯಿಂದ ರಾಜಸಂಸ್ಥೆಯಲ್ಲಿ ಸುಧಾರಣೆಯು ಬರಬೇಕಾದರೆ ಅದು ದುರ್ದಶೆಗೆ ಬಂದು ತಲಪಬೇಕು. ಈ ರೀತಿಯಿಂದ ಅದು ಪ್ರಬಲ ವ್ಯಕ್ತಿಗಳ ಸ್ವಾಧೀನವಾಗಿ ಹೀನತೆಯನ್ನು ಹೊಂದಿದ ಬಳಿಕ, ಸಮಾಜೋದ್ಧಾರದ ಮೂಲಹೇತುವನ್ನು ಕಳಕೊಂಡ ಬಳಿಕ ಅದರಲ್ಲಿ ಪುನಃ ಉತ್ಕ್ರಾಂತಿಯಾಯಿತು. ದೇಶವನ್ನಾಳಲು ಒಂದೇ ವ್ಯಕ್ತಿಯು ಅಧಿಕೃತವಾಗಿರಕೂಡದು. ಎಲ್ಲ ಜನತೆಯ ಮತವು ಪ್ರತಿಬಿಂಬಿತವಾಗುವಂತೆ ಒಂದು ಮಂಡಲವು ಇರಬೇಕು. ರಾಜಕೀಯ ಕಾರ್ಯಗಳು ಲೋಕಮತಾವಲಂಬಿಗಳಾಗಿರಬೇಕು. ಇತ್ಯಾದಿ ತತ್ವಗಳು ರಾಜಕೀಯ ಸಂಸ್ಥೆಯ [illegible]

[illegible] ಜಗತ್ತಿನ ಆದಿಯಲ್ಲಿ [illegible] ವ್ಯಕ್ತಿಸ್ವಾತಂತ್ರ್ಯವು [illegible] ಹಾಗೆಯೆ ಅದೇ ಸ್ಥಿತಿಯನ್ನು ಹೊಂದುವುದು ಎಂದು ಕೆಲವರು ಅನುಮಾನಿಸುತ್ತಾರೆ. [illegible] ನವು ಕೇವಲ ನಿರಾಧಾರವೆಂದು [illegible] ಇದ್ದರೆ ಈ ಮಾನವ ಸಮಾಜವು ಅಂಥ ನಿರ್ಮಲ ವ್ಯಕ್ತಿ ಸ್ವಾತಂತ್ರ್ಯವನ್ನು ಅನುಭವಿಸುವುದಾದರೆ ಅದರಲ್ಲಿ ಆಶ್ಚರ್ಯವೂ ಕೂಡ ಇಲ್ಲ. ಕಾರಣ, ಈ ಭೂಮಿಯು ವರ್ತುಲಾಕಾರವಾಗಿದ್ದು ಅದರ ಮಾರ್ಗವೂ ಕೂಡ ವರ್ತುಲವಾಯುವಾಗಿರುವುದರಿಂದ ಕಾಲಕ್ರಮೇಣ [illegible] ಸ್ಥಳಕ್ಕೆ ಬರುವುದು ಸಾಹಜಿಕವಾಗಿದೆ.

ಇರಲಿ; ಒಟ್ಟಿನ ಮೇಲೆ, ಸಮಾಜೋದ್ಧಾರದಲ್ಲಿ [illegible] ಮೂಲತತ್ವಗಳನ್ನು ಹೇಳಹೊರಟಾಗ ಹಿಂದೆ ಶ್ರಮವಿಭಾಗ, ಸಮತೆ ಮುಂತಾದವುಗಳನ್ನು ಹೇಗೆ ತೋರಿಸಿದೆವೊ ಹಾಗೆಯೆ ಈ ಹೊತ್ತಿನ ಲೇಖದಲ್ಲಿ ಪ್ರಾತಿನಿಧಿಕ ಸತ್ತೆಯ ತತ್ವವನ್ನು ವಾಚಕರ ಮುಂದಿಟ್ಟಿದ್ದೇವೆ. ಈ ಪ್ರಾತಿನಿಧಿಕ ಸತ್ತೆ ಕಿಂಬಹುನಾ ಲೋಕಸತ್ತೆಯ ವಿಷಯವನ್ನು ಸರಿಯಾಗಿ ಮನನಮಾಡಿ ನೋಡಿದರೆ ಶ್ರಮವಿಭಾಗ ಮತ್ತು ಸರ್ವತ್ರ ಸಮಭಾವನೆ ಇವುಗಳ ಮರ್ಮವು ಇನ್ನಷ್ಟು ವ್ಯಕ್ತವಾಗುತ್ತದೆ. ಸಮಾಜೋದ್ಧಾರದಲ್ಲಿ ಕೆಲವು ಸಾಮಾಜಿಕ ವಿಚಾರಗಳು ಪ್ರವಿಷ್ಟವಾಗುತ್ತವೆ. ಅವುಗಳ ಪ್ರತಿಪಾದನವನ್ನು ಮುಂದೆ ಮಾಡೋಣ.

ಸ್ಫುಟ ವಿಚಾರಗಳು.

೧. ಒರಬರುತ್ತ ಮಿ. ಲಾಯ್ಡ್ ಜೋರ್ಜರ ಪಕ್ಷವು ತನ್ನಷ್ಟಕ್ಕೆ ಕಡಿಮೆಯಾಗುತ್ತ ಬಂದಂತೆ ತೋರುತ್ತದೆ. ಈಗಿರುವ ಸಮ್ಮಿಶ್ರ ಪಕ್ಷದ ಮಂತ್ರಿಮಂಡಲವು ಮುರಿದುಹೋಗುವ ಸಂಭವವು ತೋರುತ್ತಿದೆ. ಮಿ. ಲೊಯ್ಡ್ ಜೋರ್ಜರು ಯುದ್ಧವನ್ನು ಗೆದ್ದು ಶಾಂತತೆಯನ್ನುಂಟುಮಾಡಿದ್ದಾದರೂ ಹಾಗು ವಿಶಾಯತಿಯಲ್ಲಿ ಈಚೆಗೆ ತಾನೆ ಉದ್ಭವಿಸಿದ ರೈಲ್ವೆಯವರ ಮುಷ್ಕರವನ್ನು ಶಾಂತಪಡಿಸಿದ್ದಾದರೂ ಮಿ. ಎಸ್ಕ್ವಿಥರ ಲಿಬರಲ್ ಪಾರ್ಟಿಯು ಬೇಗನೆ ಮೇಲಕ್ಕೆ ತಲೆಯೆತ್ತುವುದೊ ಎಂದು ತೋರಹತ್ತಿದೆ. ಹಾಗೆ ಅದು ತನ್ನ ತಲೆಯನ್ನು ಮೇಲಕ್ಕೆ ಎತ್ತಿ ಮಂತ್ರಿಮಂಡಲವನ್ನು ಸ್ವಾಧೀನಪಡಿಸಿಕೊಂಡಿದ್ದರೆ ಮಿ. ಲೊಯ್ಡ್ ಜೋರ್ಜರು ಹೊರಗಿನ ಯುದ್ಧವನ್ನು ಗೆದ್ದವರಾದರೂ ಮನೆಯೊಳಗಿನ ಜನರ ಸಮಾಧಾನಮಾಡಲು ಅವರಿಂದಾಗಲಿಲ್ಲವೆಂದು ಹೇಳಬೇಕಾದೀತು. ಐರಿಶ್ ಹೋಮ್‌ರೂಲಿನ ಪ್ರಶ್ನೆ, ರುಶ್ಯದೊಡನೆ ಇಡುವ ಸಂಬಂಧದ ವಿಚಾರ, ಹಾಗು ಕಾರಖಾನೆ, ಗಣಿ ಮುಂತಾದವುಗಳನ್ನು ರಾಷ್ಟ್ರದ ಸೊತ್ತುಗಳನ್ನಾಗಿ ಮಾಡಬೇಕೆಂದಿರುವ ಚಳವಳಿ ಈ ಮೂರು ಸಂಗತಿಗಳು ಮಿ. ಲೊಯ್ಡ್ ಜೋರ್ಜರ ಮಾರ್ಗದಲ್ಲಿ ದೊಡ್ಡ ಅಡಚಣೆಗಳಾಗಿ ಕುಳಿತಿವೆ. ಅವರ ಪ್ರತಿಸ್ಪರ್ಧಿಗಳಾದ ಮಿ. ಎಸ್ಕ್ವಿಥರ ಪಕ್ಷಕ್ಕೆ ಲೊರ್ಡ ರೊಬರ್ಟ ಸೆಸಿಲ್ ಎಂಬುವರು ಬಂದು ಸೇರಿದ್ದಾರೆ. ಹಾಗು ಮಿ. ಮೊಂಟೆಗ್ಯೂಗಳು ಕೂಡ ಅವರ ಹತ್ತಿರ ಒರಹತ್ತಿದ್ದಾರೆ. ಮಿ. ಮೊಂಟೆಗ್ಯೂಗಳು ಸಮ್ಮಿಶ್ರ ಪಕ್ಷದ ಮಂತ್ರಿಮಂಡಲದಲ್ಲಿ ಸೇರಿದವರಾಗಿದ್ದಾರೆ. ಪರಂತು ಅವರು ಎಸ್ಕ್ವಿಥರ ಪಂಗಡಕ್ಕೆ ಸೇರಿದ ಬಳಿಕ ತಮ್ಮ ಭಾರತ ಮಂತ್ರಿತ್ವದ ಸ್ಥಾನಕ್ಕೆ ರಾಜೆಯನ್ನು ಇಷ್ಟರೊಳಗೆ ಕೊಟ್ಟರಬೇಕೆಂದು ಅನೇಕರು ಶಂಕಿಸುತ್ತಾರೆ. ಮಿ. ಮೊಂಟೆಗ್ಯೂಗಳು ಹಿಂದುಸ್ಥಾನದ ಮಂತ್ರಿಗಳಾದದ್ದಕ್ಕೆ ಹಿಂದೀ ಸುಧಾರಣೆಯ ಕಾನೂನಿನ ಮೇಲೆ ಪಾರ್ಲಿಮೆಂಟಿನ ಮೊಹರು ಬಿತ್ತೆಂಬುದು ನಿಜ. ಮತ್ತು ಈ ಕಾರ್ಯವು ಸಾಧ್ಯವಾದ ಕಾರಣ ಮಿ. ಮೊಂಟೆಗ್ಯೂಗಳು ತಾವು ಕೃತಾರ್ಥರಾದೆವೆಂದು ಎಣಿಸಹತ್ತಿದ್ದಾರೆ. ಹಾಗು ಅವರು ಈಗ ಸಮ್ಮಿಶ್ರ ಪಕ್ಷದ ಅಷ್ಟೊಂದು ಪರ್ವವನ್ನು ಹಿಡಿಯುವರಿಲ್ಲ. ಇರಲಿ. ಈ ಪ್ರಕಾರ ಮಂತ್ರಿಮಂಡಲದಲ್ಲಿ ಬೇಗನೆ [illegible] ಲಾವಣೆ ಆಗಲಿಕ್ಕಿದೆ. ಎಂದು ಬೇರೆ ಬೇರೆ ಚಿಹ್ನೆಗಳು ತೋರಹತ್ತಿವೆ. ತಥಾಪಿ ಮಿ. ಲೊಯ್ಡ್ ಜೋರ್ಜರು ತಮ್ಮ ಬುದ್ಧಿವೈಭವವನ್ನು ವೆಚ್ಚಮಾಡಿ ಇಲ್ಲಲ್ಲಿ ವಾಗ್ಜಾಲವನ್ನು ಬೀಸುತ್ತಿದ್ದಾರೆ.

೨. ಈ ವರ್ಷದ ನಮ್ಮ ಸಂಸ್ಥಾನದ ಬೆಳೆಯು ಪ್ರಸಿದ್ಧವಾದ ಸರಕಾರಿ ರಿಪೋರ್ಟನ್ನು ನೋಡುವಾಗ ಕಳೆದ ಹಲವು ವರ್ಷಗಳದಕ್ಕಿಂತಲೂ ಒಳ್ಳೆಯದಾಗಿದೆ ಎಂದು ತೋರುತ್ತದೆ. ೧೯೧೮ರಲ್ಲಿ ಎಷ್ಟು ಎಕರ ಜಮೀನು ಸಾಗಾಗಿತ್ತೊ ಅದಕ್ಕಿಂತಲೂ ಹೆಚ್ಚು ೧೯೧೯ರಲ್ಲಿ ಸಾಗಾಗಿದೆ. ಬೆಳೆಯ ಉತ್ಪನ್ನವನ್ನು ಹೇಳುವುದಾದರೆ ಅಕ್ಕಿಯು ಹಿಂದಿನ ವರ್ಷ [illegible] ಚಿಲ್ಲರೆ ಟನ್ನು ಮಿಲ್ಲಿಯ ಬೆಳೆದಿತ್ತು; ಈ ವರ್ಷ [illegible] ಚಿಲ್ಲರೆ ಟನ್ನು ಮಿಲಿಯ ಬೆಳೆದಿದೆ ಎಂದರೆ ಸಾಧಾರಣವಾಗಿ ನೇಕಡಾ [illegible]ರಷ್ಟು ಅಕ್ಕಿಯ ಬೆಳೆಯು ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ ಎನ್ನಲು ಅಡ್ಡಿ ಇಲ್ಲ. ದೇಶದಲ್ಲಿ ಬೆಳೆಯು ತಕ್ಕಮಟ್ಟಿನ ಸಮೃದ್ಧಿಯುಂಟೆಂಬುದಕ್ಕೆ ಸರಕಾರಿ ರಿಪೋರ್ಟು ಬೇಕೆಂಬುದಿಲ್ಲ. ದಾಟಿದ ವರ್ಷದ ಮಳೆಯ ಸ್ಥಿತಿ [illegible]

[illegible] ಬಂದಿದ್ದ [illegible] ಸ್ವಾರ್ಥ [illegible] ಅಕ್ಕಿಯ [illegible] ಯಾಗಲಿಲ್ಲ; ಆಗುವುದೂ ಇಲ್ಲ. [illegible] ಇದಕ್ಕೆ ಕಾರಣವಾದ [illegible] ಕಂಟ್ರೋಲಿನ ದೊಡ್ಡ ಅಡಚಣೆಯೆ ಮುಖ್ಯವಾದ ಕಾರಣವಾಗಿದೆ. [illegible] ಅದು ಸ್ಥಾನಪಲ್ಲಟಗಳಿಗೆ ಅಡ್ಡವಾಗುತ್ತದೆ. ಹೊರತು ಅದಕ್ಕೆ ಮಧ್ಯಮಧ್ಯದಲ್ಲಿ ಕಟ್ಟುಗಳನ್ನು ಹಾಕುವುದರಿಂದ ಕಟ್ಟುಹೋಗುತ್ತದೆ. ಇದೇ ದೃಷ್ಟಿಯಿಂದ ಆಹಾರ ಜೀನಸುಗಳ ವ್ಯಾಪಾರದ ಕಡೆಗೆ ನೋಡಲಾಗಿ ಕಂಟ್ರೋಲಿನ ದೆಸೆಯಿಂದ ಒಟ್ಟಿನ ಮೇಲೆ ಆಹಾರಸಾಮಗ್ರಿಯ ವ್ಯಾಪಾರವೇ ಕೆಟ್ಟುಹೋಗಿದೆ. ಈ ವ್ಯಾಪಾರವು ಕೊಂಡುಕೊಳ್ಳುವ ಗಿರಾಕಿಗಳ ದೃಷ್ಟಿಯಿಂದ ಮಾತ್ರ ಕೆಟ್ಟುಹೋಗಿದೆ ಎಂದಲ್ಲ; ವ್ಯಾಪಾರಿಗಳ ದೃಷ್ಟಿಯಿಂದಲೂ ಅತ್ಯಂತ ಹಾನಿಕರವಾಗಿದೆ. ಮತ್ತು ಈ ಕಾರಣದಿಂದ ಪ್ರಾಂತಿಕ ಕಂಟ್ರೋಲನ್ನು ಕೂಡ ತೆಗೆದುಹಾಕಿರಿ ಎಂದು ಜನತೆಯು ಈಗ ಎಷ್ಟೋ ಸಮಯದಿಂದ ಹೇಳಿಕೊಂಡಿದೆ.

೩. ಕಂಟ್ರೋಲನ್ನು ಎಬ್ಬಿಸುವ ಪ್ರಸ್ತಾಪವು ಜನರಲ್ಲಿ ಮಾತ್ರ ಹುಟ್ಟಿಕೊಂಡುಂಟು ಎಂದಲ್ಲ; ಮೊದಲು ಒಂದೆರಡು ಸಾರಿ ಬಂದಂತೆ ವರಿಷ್ಠ ಕೌನ್ಸಿಲಿನಲ್ಲಿ ಈ ಸಂಗತಿಯು ಮೊನ್ನೆಯೂ ಬಂದು ಹೋಗಿದೆ. ವರಿಷ್ಠ ಕೌನ್ಸಿಲಿನಲ್ಲಿ ನಾಮದಾರ ಶರ್ಮರು ಪ್ರಾಂತಪ್ರಾಂತಗಳೊಳಗಿನ ಹಾಗು ಜಿಲ್ಲೆಜಿಲ್ಲೆಗಳೊಳಗಿನ ಕಂಟ್ರೋಲನ್ನು ಎಬ್ಬಿಸಬೇಕೆಂದು ಒಂದು ಠರಾವನ್ನು ತಂದರು. ಈ ಠರಾವನ್ನು ತಂದಾಗ ಅವರು ಕಂಟ್ರೋಲಿನಿಂದ ಉಂಟಾಗುವ ಅನೇಕ ಅನರ್ಥಗಳನ್ನೂ, ವಿಸಂಗತತೆಯನ್ನೂ, ಜನರ ಅನುಪಪತ್ತಿಗಳನ್ನೂ ವರ್ಣಿಸಿ ತೋರಿಸಿದರು. ಈ ಕಂಟ್ರೋಲಿನ ಮಾಹಾತ್ಮ್ಯದಿಂದ ಅಕ್ಕಿಯು ಒಂದು ಕಡೆಯಲ್ಲಿ ರೂಪಾಯಿಗೆ ೧೫ ಸೇರು ಸಿಗುವುದಾದರೆ ಬೇರೊಂದು ಕಡೆಯಲ್ಲಿ ಬರೆ ೩ ಸೇರು ಸಿಗುತ್ತದೆ, ಇದರಿಂದ ಕೆಲವರಿಗೆ ಲಾಭವಾಗುತ್ತದಾದರೂ ಅನೇಕರಿಗೆ ಕಷ್ಟಗಳು ಬಂದೊದಗುತ್ತವೆ, ಕಂಟ್ರೋಲಿನಿಂದ ಕೈಯಲ್ಲಿ ೪ ಕಾಸು ದುಡಿದವರು ಈ ಕಂಟ್ರೋಲು ಹಾಗೆಯೆ ಮುಂದರಿಸುವಂತೆ ಬಹಿರಂಗವಾಗಿ ಅಥವಾ ಗುಪ್ತವಾಗಿ ಪ್ರಯತ್ನಮಾಡುತ್ತಾರೆ, ಇತ್ಯಾದಿ ಎಲ್ಲ ವಿಷಯಗಳನ್ನು ನಾಮದಾರ ಶರ್ಮರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಶರ್ಮರ ಠರಾವನ್ನು ಇತರ ಹಲವು ನಾಮದಾರರು ಅನುಮೋದಿಸಿದರು. ಆ ಬಳಿಕ ಆದಷ್ಟು ಬೇಗನೆ ಈ ಕಂಟ್ರೋಲನ್ನು ಎಬ್ಬಿಸಬಹುದೆಂದು ಸರಕಾರದ ಕಡೆಯಿಂದ ಆಶ್ವಾಸನವು ಕೊಡಲ್ಪಟ್ಟಿತು. ಪರಂತು ಬರೆ ವಾಚನಿಕ ಆಶ್ವಾಸನಕ್ಕಿಂತಲೂ ಈ ವಿಷಯದಲ್ಲಿ ಜನಗಳಿಗೆ ಕ್ರಿಯಾತ್ಮಕವಾದ ಉದ್ಯೋಗವೇ ಸರಕಾರದ ಕಡೆಯಿಂದ ಅಪೇಕ್ಷಿತವಾಗಿದೆ, ಎಂದು ಹೇಳುವರೆ ಅದರಲ್ಲಿ ಯಾವ ಅಂಶವೂ ಅಯಥಾರ್ಥವಾಗಲಿಕ್ಕಿಲ್ಲ. ಮೊದಲು ಇದೇ ಹಿಂದುಸ್ಥಾನದಲ್ಲಿ ಇದಕ್ಕಿಂತಲೂ ಎಷ್ಟೋ ಭಯಂಕರವಾದ ಬರಗಾಲಗಳು ಬಂದುಹೋಗಿವೆ. ಆಗ ಕೂಡ ಇಂಥ ಕಂಟ್ರೋಲಿನ ತೊಂದರೆಯು ಇದ್ದಿಲ್ಲ. ಮತ್ತು ಅದ್ದರಿಂದಲೆ ಆಗ ಜನಗಳ ವ್ಯವಹಾರಗಳು ಸುಸೂತ್ರವಾಗಿ ನಡೆದವು. ಅಂತು ಕಂಟ್ರೋಲಿನ ದೆಸೆಯಿಂದ ಜನರು ಅನುಭವಿಸುವ ಕಷ್ಟಗಳನ್ನು ಮನಸ್ಸಿನಲ್ಲಿ ತಂದು ಹಿಂದುಸ್ಥಾನ ಸರಕಾರವು ಕಂಟ್ರೋಲನ್ನು ಎಬ್ಬಿಸಿ ಜನರು ಹೇಳುವ ಮಾತನ್ನು ಕಂಠಶೋಷವನ್ನಾಗಿ ಮಾಡಲು ಬಿಡಲಿಕ್ಕಿಲ್ಲವೆಂದು ನಂಬಿದ್ದೇವೆ.

೪. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರೆಸ್ ಏಕ್ಟಿನ ವಿಷಯವು ಕೂಡಾ ಚರ್ಚೆಗೆ ಬಂತು. ಅಧಿಕಾರಿಗಳ ವಕ್ರಧೋರಣದಿಂದ ಹಿಂದೂಸ್ಥಾನದೊಳಗಿನ ಎಲ್ಲ ಭಾಗಗಳಲ್ಲಿಯ ಪ್ರೆಸ್ಸುಗಳಿಂದಲೂ, ವರ್ತಮಾನ ಪತ್ರಿಕೆಗಳಿಂದಲೂ, ಘಡಕೊಂಡ ಜಾಮೀನಿನ ರಕಮುಗಳನ್ನು ಬೇರೆ ಬೇರೆ ಪ್ರಾಂತಾಧಿಪರು ಹಿಂದಕ್ಕೆ ಕೊಡುವ ಸ್ತುತ್ಯ ಉದ್ಯೋಗವನ್ನು ಮಾಡ ಹತ್ತಿದ್ದಾರಾದರೂ ಆ ಪ್ರೆಸ್ ಏಕ್ಟಾದರೂ ಯಾಕೆ ಇರಬೇಕೆಂಬುದು ಪ್ರಶ್ನೆಯು ಬಂದೇ ಬರುತ್ತದೆ. ಕಾರಣ, [illegible]ವನ್ನು ಚೀಲದಲ್ಲಿ ಹಾಕಿಡುವುದು ಸುತ್ತುಮುತ್ತಲಿನ ಜನತೆ ಹಿತದೃಷ್ಟಿಯಿಂದ ಯೋಗ್ಯವಾದರೂ ಒಮ್ಮೆ ಶಸ್ತ್ರಧಾರಿಗೆ ಅಪರಿಯು ಬಂದು [illegible]ರೆ ಅದನ್ನು ಚೀಲದಿಂದ ಹೊರತೆಗೆಯುವ ಬುದ್ಧಿಯು ಬಂದು ಬಿಡುತ್ತದೆ. ಮತ್ತು ಆಗ ಒಂದೆರಡಾದರೂ ಘಾತ ವಿಘಾತಗಳಾಗದಿರುವುದು ಅನಿವಾರ್ಯವಾಗಿರುತ್ತದೆ. ಇಂಥ ಅನಿಷ್ಟ ಪ್ರಸಂಗಗಳನ್ನು ತಪ್ಪಿಸುವದಕ್ಕಾಗಿ ಅಂಥವರ ಕೈಯಲ್ಲಿ ಶಸ್ತ್ರಗಳನ್ನು ಕೊಡದಿರುವುದೇ ಉತ್ತಮವೆಂದು ವಿಚಾರವಂತರು ಅಭಿಪ್ರಾಯ ಪಡುತ್ತಾರೆ. ಹಾಗೆಯೆ ಪ್ರೆಸ್ ಏಕ್ಟನ್ನು ಕಾಯಿದೆ ಪುಸ್ತಕದಿಂದ ತೆಗೆದುಹಾಕುವದೇ ಪ್ರಶಸ್ತವೆಂದು ಮುದ್ರಣ ಸ್ವಾತಂತ್ರ್ಯ ಪ್ರಿಯರಾದವರು ಯಾರೂ ಹೇಳಬಲ್ಲರು. ಪರಂತು ಕಾಯಿದೆ ಕೌನ್ಸಿಲಿನಲ್ಲಿ ಈ ವಿಷಯದ ಚರ್ಚೆಯು ಬಂದಾಗ ಸರಕಾರದ ಕಡೆಯಿಂದ ವ್ಯಕ್ತಪಡಿಸಿದ ಖುಲಾಸೆಯನ್ನು ನೋಡಿದ್ದಲ್ಲಿ ಸರಕಾರಕ್ಕೆ ಇನ್ನೂ ಆ ಕಾನೂನಿನ ಆವಶ್ಯಕತೆ ಇದ್ದಂತೆ ತೋರುತ್ತದೆ. ಸರಕಾರವು ಹೊಸ ಸುಧಾರಣೆಗೆ ಜನ್ಮ ಕೊಟ್ಟಿದೆ. ಆ ಮಗುವನ್ನು ಜನತೆಯು ಬಹು ಅಕ್ಕರೆಯಿಂದ ಹಾಗು ಸಹಕಾರಿತೆಯಿಂದ ಮುದ್ದಾಡಿಸುತ್ತಿದೆ. ಇಂಥಾ ಸುಸಮಯದಲ್ಲಿ ಸರಕಾರ[illegible] [illegible] ಯಾಕೆ—ಪ್ರೆಸ್ [illegible] [illegible] ತೋರಬೇಕು! [illegible] ಕಾನೂನಿನಲ್ಲಿ [illegible] ವಾಚಕರವರು ಕೆಲವು ತಿದ್ದುಪಾಟುಗಳನ್ನು ಸೂಚಿಸಿದ್ದಾರೆ. ಅವುಗಳನ್ನು ಸರಕಾರವು ಅಂಗೀಕರಿಸುವುದಿಲ್ಲ ಎಂದು ಸರಕಾರಿ ಸಭಾಸದರು ಸೂಚಿಸಿದರು. ಆದರೆ ಸರ್ ಶಿವಸ್ವಾಮಿಗಳ ತಿದ್ದುಪಾಟಿನ ಸೂಚನೆಗಳು ಜನಹಿತದ ದೃಷ್ಟಿಯಿಂದ ಅಥವಾ ಮುದ್ರಣ ಸ್ವಾತಂತ್ರ್ಯದ ದೃಷ್ಟಿಯಿಂದ ಇನ್ನೂ ಎಷ್ಟು ಕೆಳಗಿವೆ ಇದನ್ನು ನೋಡಬೇಕಾದರೆ ರಾಜಕೀಯ ವಿಷಯದಲ್ಲಿ ಅದೇ ಸರ್ ಸ್ವಾಮಿಗಳ ತಂಡದವರಾದ ಸರ್ ನಾರಾಯಣರಾವ ಚಂದಾವರಕರರ ಅಭಿಪ್ರಾಯವನ್ನು ನೋಡಿದ್ದಲ್ಲಿ ವ್ಯಕ್ತವಾಗುತ್ತದೆ. ಮುಂಬಯಿಯಲ್ಲಿ ಇಂಡಿಯನ್ ಪ್ರೆಸ್ ಎಸೋಸಿಯೇಷನಿನ ಒಂದು ಸಭೆಯು ಸರ್ ನಾರಾಯಣರಾವ ಚಂದಾವರಕರರ ಅಧ್ಯಕ್ಷತೆಯಲ್ಲಿ ಮೊನ್ನೆ ಸೇರಿತು. ಆಗ ಅವರು ಈ ಕಾನೂನನ್ನು ಈಗಿನ ಸಮಯದಲ್ಲಿಡುವದು ಉಚಿತವಲ್ಲ; ಅದನ್ನು ರದ್ದು ಪಡಿಸಬೇಕು, ಮಾತ್ರವಲ್ಲ, ಮಿ। ಬಿ. ಜಿ. ಹೊರ್ನಿಮನರನ್ನು ವಿಲಾಯತಿಯಿಂದ ಈ ದೇಶಕ್ಕೆ ಹಿಂತಿರುಗಿಬರುವಂತೆ ಅಪ್ಪಣೆಯನ್ನು ಕೊಡಬೇಕು ಎಂದು ತಮ್ಮ ಆಲೋಚನೆಗಳನ್ನು ಸ್ಪಷ್ಟ ಶಬ್ದಗಳಿಂದ ಸಭೆಯ ಮುಂದಿಟ್ಟರು. ಸಭೆಯಲ್ಲಿ ಮಹಾತ್ಮಾಗಾಂಧಿಗಳು ಇದೇ ಆಶಯದ ಠರಾವನ್ನು ತಂದರು. ಸಾರಾಂಶ ಸರ ಚಂದಾವರಕರರಂಥ ಶಾಂತಪಕ್ಷೀಯರ ಧುರೀಣರಿಗೂ ಕೂಡ ಈಗಿನ ಕಾಲಕ್ಕೆ ಈ ಕಾನೂನು ಇರಬಾರದೆಂದು ತೋರಹತ್ತಿದೆ. ಆದರೆ ಸರಕಾರವು ಅದರ ಕಡೆಗೆ ಕಿವಿಗೊಟ್ಟೀತೆ?

೫. ವರಿಷ್ಠ ಕೌನ್ಸಿಲಿನಲ್ಲಿ ನಾಮದಾರ ಶರ್ಮರು ಇನ್ನೊಂದು ಮಹತ್ವದ ಠರಾವನ್ನು ತಂದರು. ಸರಕಾರವು ಕರೆನ್ಸಿಕಮಿಟಿಯ ವರದಿಯನ್ನು ಹೊರಗೆಡವಿ ಸಾಧಾರಣ ಒಂದು ತಿಂಗಳು ದಾಟಿಹೋದರೂ ವಿಲಾಯತಿಯಿಂದ ಇಲ್ಲಿ ಚಿನ್ನವನ್ನು ತರಿಸುವ ವಿಷಯದಲ್ಲಿ ಇನ್ನೂ ಪ್ರತಿಬಂಧ ಇಟ್ಟಿದೆ; ಇದು ನ್ಯಾಯವಲ್ಲ, ಸರಕಾರವು ಅಲ್ಲಿ ೧೦ ರೂಪಾಯಿಗೆ ಪವನು ಪಡಕೊಂಡು ಇಲ್ಲಿ ೧೫ರಂತೆ ಮಾರುತ್ತದೆ—ಈ ರೀತಿ ಲಾಭವನ್ನು ಪಡಕೊಳ್ಳುವುದು ಸಹ ಉಚಿತವಲ್ಲ; ಇಂಥ ಪ್ರತಿಬಂಧವನ್ನು ಇಟ್ಟಿರುವುದರಿಂದ ಕಳ್ಳಾಟಿಕೆಯಿಂದ ಜನರು ಪವನುಗಳನ್ನು ತರಿಸುತ್ತಾರೆ; ಇಂಥ ಒಂದೆರಡು ಉದಾಹರಣೆಗಳು ಕೂಡಾ ಸಂಭವಿಸಿಪ್ಪಾವೆ; ಆದಕಾರಣ ಈ ಪ್ರತಿಬಂಧವನ್ನು ಕೂಡಲೆ ಕಿತ್ತು ಹಾಕಬೇಕೆಂದು ನಾಮದಾರ ಶರ್ಮರು ಠರಾವನ್ನು ತಂದರು. ಪರಂತು ಸರಕಾರಿ ಸಭಾಸದರಾದ ಮಿ. ಹೆಲಿ ಇವರು 'ಈ ಪ್ರತಿಬಂಧವನ್ನು ತೆಗೆದರೆ ಬೇಕಷ್ಟು ಚಿನ್ನ ಕೊಂಡು ಕೊಳ್ಳಲು ಹಿಂದುಸ್ಥಾನದಲ್ಲಿ ಸಾಮರ್ಥ್ಯವಿಲ್ಲದೆ? ಹೀಗಿರಲು ಪ್ರತಿಬಂಧವಿದ್ದರೆ ನಿಮಗೇನು ತೊಂದರೆ?' ಎಂದು ಸವಾಲು ಮಾಡಿದರು. ಈ ಸವಾಲಿಗೆ ಶರ್ಮರು 'ಹಾಗಾದ ಮೇಲೆ ಪ್ರತಿಬಂಧವನ್ನು ಕಳೆದಿದ್ದಲ್ಲಿ ಲೋಕದೊಳಗಿನ ಎಲ್ಲ ಚಿನ್ನವು ಹಿಂದುಸ್ಥಾನದಲ್ಲಿ ಬಂದು ತುಂಬಿತೆಂದು ನೀವು ತಿಳಿಯುವುದು ನಿರಾಧಾರವಲ್ಲವೆ? ಮತ್ತು ಆಗ ಪ್ರತಿಬಂಧವಾದರೂ ಯಾಕೆ?' ಎಂದು ಸಮರ್ಪಕವಾದ ಉತ್ತರವನ್ನು ಕೊಟ್ಟರು. ನಾಮದಾರ ಶರ್ಮರ ಕೋಟಿಕ್ರಮಕ್ಕೆ ಸರಿಯಾದ ಉತ್ತರವನ್ನಾಗಲಿ ಸಮಾಧಾನವನ್ನಾಗಲಿ ಕೊಡಲು ಅಸಾಧ್ಯವಾಗಿ ಕೊನೆಗೆ ಸದರಿ ಠರಾವಿನಲ್ಲಿ 'ಪ್ರತಿಬಂಧವನ್ನು ತೆಗೆದುಹಾಕಬೇಕು,' ಎಂಬೀ ಮಾತಿಗೆ 'ಆದಷ್ಟು ಬೇಗನೆ,' ಎಂಬುವನ್ನು ಕೂಡಿಸಬೇಕೆಂದು ಸರಕಾರದ ಕಡೆಯಿಂದ ಸೂಚನೋಕ್ತಿಯಾಯಿತು. 'ಆಗ ಆದಷ್ಟು ಬೇಗನೆ,' ಎಂಬುದರಿಂದ ಎಷ್ಟು ಕಾಲವನ್ನು ತಕೊಳ್ಳಬಹುದಾದ ಕಾರಣ, ಮತ್ತು ಇಂತಿಷ್ಟೆ ಎಂದು ಸಶ್ಚಿತ ಸಮಯದ ನಿರ್ದೇಶವಿಲ್ಲದಿರುವ ಕಾರಣ ಆ ಪ್ರಕಾರ ಮೇಲಿನ ಶಬ್ದವನ್ನು ಕೂಡಿಸಲು ಶರ್ಮರು ಒಪ್ಪಿಕೊಳ್ಳಲಿಲ್ಲ. ಅರ್ಥಾತ್ ಠರಾವಿನ ಮೇಲೆ ಮತಗಳನ್ನು ತಕೊಳ್ಳಬೇಕಾಗಿ ಬಂದು ಸರಕಾರದ ಕಡೆಯ ಬಹುಮತದಿಂದ ಸದರಿ ಠರಾವು ಯಶಸ್ವಿಯಾಗಲಿಲ್ಲ! ಇದು ತುಂಬಾ ಖೇದಜನಕವಾಗದೆ ಬರೆ ಸಾಂಪತ್ತಿಕ ವಿಚಾರದಲ್ಲೂ ಔದ್ಯೋಗಿಕ ವಿಚಾರದಲ್ಲೂ ಕೂಡಾ ವರಿಷ್ಠ ಕೌನ್ಸಿಲಿನ ಬಹುಮತವು ಜನತೆಯ ಕಡೆಗೆ ನಿಲ್ಲುವದಿಲ್ಲವೆಂದಾದರೆಮೋಲೆ ಮೋರ್ಲೆ-ಮಿಂಟೋ ಕೌನ್ಸಿಲಿನ ರಚನೆಯು ಎಷ್ಟರ ಮಟ್ಟಿಗೆ ಬಳ್ಳಲುದಿದೆ ಇದನ್ನು ವಾಚಕರೆ ತಿಳಕೊಳ್ಳಲಿ.

ಪಂಚಮರ ಹಾಡು.

ಉಳ್ಳಯ್ಯ—ನಯ—ಗೌಳ್ಳಯ್ಯ ।
ದಪ್ಪಿ ದಿಕ್ಕು ಮಾರಿ ಮುಂಡ ಮುಂಡಾಳ ।
ಹುಟ್ಟು ಹೊಲೆಯ! ಪ್ರೋಪ್ರೋ ಚಂಡ ಚಂಡಾಳ ।
ಬೊಟ್ಟು ಕೊಗರೆ ಎಂದು ಹೆಸರೆತ್ತಿ ಕೂಗಿ ।
ಮುಟ್ಟಲಂಜುತ ನಿಲ್ಲೆ ದೂರಕೆ ಹೋಗಿ ॥ ೧ ॥

ಕಣ್ಣು ಮೂಗು ಕಿವಿ ಕೈ ಕಾಲುಗಂಟು ।
ಅಣ್ಣ ನಿಮ್ಮಂತೆಯೆ ನನಗೆಲ್ಲ ಉಂಟು ।
ಬಣ್ಣ ಕಪ್ಪೆಂದು ನೀಂ ಬಿಡುವರೆ ನಂಟು ।
ಎಣ್ಣೆಯೋಲ್ ಹಿಡಿವುದೆ ನಮ್ಮ ಮೈ ಅಂಟು ॥ ೨ ॥

ಹಾಸಿಗೆ ತಗಣೆ ಮುದ್ದಿಪ ನಿಮ್ಮ ಕೈಗೆ ।
ಹೇಸಿಗೆ ಅಹುದೆ ಮುಟ್ಟಲು ನಮ್ಮ ಮೈಗೆ ।
ಪಾಪಕ್ಕೆ ನಮಗೂರ ಹೊರಗೊಂದು ಎಡೆಯೆ ।
ಆ ಶುದ್ಧ [illegible] ನಾಯಿಗಳಿಗಿಲ್ಲ [illegible]! ॥ ೩ ॥

[illegible] ಅಟ್ಟಿಸಿಬಿಡು ಮನೆ [illegible] ।
[illegible] [illegible]! [illegible] ನಮಗಿಲ್ಲ [illegible] ।
ಕುಳಿತುದು ಮೊಂಡಿ [illegible] ನಿನ್ನ [illegible]
ಆಳುವ ತಮ್ಮಗೆ ಸೆರೆ ಮನೆಯನ್ನು ಇಳಿಸ್ಕು
ಮಾರಿ ಹೊಲೆಯ! ಧಾವಿ ಕೆರೆ ಸೋಕಲಾರೆ! ।
ಊರ ಸಾಲೆಗಳಂತೆ ನಮಗೊಂದು ಬೇರೆ! ।
'ದೂರಕ್ಕೆ ಪೋಪೋ' ಎಂಬ ಹೂವಡೀ ನ್ಯಾಯ ।
ಹಾರುವ ಮಾಡಿದುಣ್ಣುತಿ ಮಹಾರಾಯ ॥
ಅರಕೆ ಕಾಲಡಿಯು ಕುಂಬಳಕೆ ಕತ್ತಲ್ಲ ।
ಪರದೇಶ ಕಾಯಿಲೆ ಸಾಸಿವೆಗೆ ಮೈಕೈ ।
ಹಿರಿದು ಹಬ್ಬಿಸುವ ಕೊಬ್ಬೆಯದೇಕೆ ಹೇಳು ।
ಹೊರದೊಬ್ಬ ಮೊದಲು ನಿನ್ನಂಗಳ ದೂಳು
ನೋಡು ಸ್ವರಾಜ್ಯಕ್ಕೆ ನಾವೊರುಗೋಲು! ।
ನೀಡಣ್ಣ ದಮ್ಮಯ್ಯ ನೀಡೆಮ್ಮಪಾಲು ।
ಬೇಡಿದಾಗಲೆ-ಕೊಟ್ಟು ಬಿಡುವುದೆ ಮೇಲು ।
ಬೇಡ ನಾಂ ಸೈಲದು ಕೊಂಬೆವು ಸರಿಸಾಲು. ॥
ನಂದಿಸು ಕಿಡಿಯಲ್ಲೆ ಹೊಲೆಯನ ಹಗೆಯು ।
ಬಂಧಿಸು ಕೈಗೆ ಕೈ ನಂಟಿನ ನಗೆಯು ।
ಒಂದಿಸು! ಸಂಧಿಸು ನಮ್ಮ ನಲುಗೆಯು
ಹಿಂದು ದೇವಿ ಘುಟ್ಟೆಂಬಳು ಕಾಲಂದುಗೆಯು

ಮಂಗಳೂರು.

ಡಿಸ್ಟ್ರಿಕ್ಟಬೋರ್ಡ ಮೆಂಬರರ ಸಭೆಯು ಈ ತಿಂಗಳ ತಾರೀಕು ೩೦ನೇ ಮಂಗಳವಾರ ಮಧ್ಯಾಹ್ನ ೨-೩೦ ಗಂಟೆಗೆ ಕಲೆಕ್ಟರ ಬೋರ್ಡಿನ ಆಫೀಸಿನಲ್ಲಿ ಕೂಡುವದು.

ನಮ್ಮ ಜಿಲ್ಲೆಯವರಾದ ಮ। ರಾ। ರಾ। ಮೂಲ್ಕಿ ನರಸಿಂಗರಾವ್ ಎಮ್. ಎಲ್‌ರವರು ಕಲ್ಲಿಕೋಟೆಯ ಸಬ್‌ಜಡ್ಜರಾಗಿಯೂ ಮ। ರಾ। ರಾ। ಅಮ್ಮೆಂಬಳ ಉಪೇಂದ್ರ ಪೈಗಳು ಚಿತ್ತೂರು ಜಿಲ್ಲೆಯ ಕಲೆಕ್ಟರರಾಗಿಯೂ ನೇಮಕಪಟ್ಟಿರುವುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಬರುವ ೧೮ನೇ ತಾರೀಕು ಭಾನುವಾರ ಬೆಳಿಗ್ಗೆ ಇಲ್ಲಿನ ಥಿಯೊಸೋಫಿಕಲ್ ಸೊಸೈಟಿಯಲ್ಲಿ ಮಿಸೆಸ್ ಎಮ್. ಇ. ಕಜಿನ್ಸ್ ಬಿ. ಮ್ಯೂಜಿಕ್, ರವರು "ಬೈಬಲಿನ ಬೋಧನೆಗಳು" ಎಂಬ ವಿಚಾರವಾಗಿ ಇಂಗ್ಲಿಷಿನಲ್ಲಿ ಉಪನ್ಯಾಸ ಮಾಡುವರು. ಎಲ್ಲರಿಗೂ ಸ್ವಾಗತವಿದೆ.

ಕಳೆದ ವಾರ ನಾವು ತಿಳಿಸಿದ್ದಂತೆ ಇಲ್ಲಿನ ದೇಶೀಯ ಬಾಲಿಕಾ ಪಾಠಶಾಲೆಯಲ್ಲಿ ಮಂಗಳೂರ ಮಹಿಳೆಯರ ಸಭೆಯು ನೆರೆದಿತ್ತು. ಅಂದು ಮಿಸೆಸ್ ಎನ್. ಸುಬ್ಬರಾಯರವರು ಅಧ್ಯಕ್ಷಣೆಯರಾಗಿದ್ದರು. ಆದಿನ ಕೆಲವು ಮಹಿಳೆಯರ ಭಾಷಣವಾದ ನಂತರ 'ಪೂನಾ ಮುನಿಸಿಪಾಲಿಟಿಯಲ್ಲಿ ಆಚರಣೆಗೆ ತರಲಿಕ್ಕಿರುವ ಪ್ರಾಥಮಿಕ ಕಡ್ಡಾಯ (ಕಂಪಲ್ಸರಿ) ಶಿಕ್ಷಣಕ್ರಮವನ್ನು ಬಾಲಕರಂತೆ ಬಾಲಕಿಯರಿಗೂ ಕೂಡ ಆಚರಣೆಯಲ್ಲಿ ತರಬೇಕೆಂದು ವಿಶೇಷ ಪ್ರಯತ್ನಗಳನ್ನು ಮಾಡುತ್ತಿರುವ ಮಿಸೆಸ್‌ಗಳಾದ ರಾನಡೆ, ದೇಶಪಾಂಡೆ, ಡಾ। ಕರ್ವೆ ಮತ್ತು ಇತರ ಪೂನಾಮಹಿಳೆಯರ ಪ್ರಯತ್ನಗಳಿಗೆ ಮಂಗಳೂರಿನ ಮಹಿಳೆಯರೆಲ್ಲರೂ ಈ ಮೂಲಕ ತಂತಮ್ಮ ಸಹಾನುಭೂತಿಯನ್ನು ತೋರುವರಲ್ಲದೆ ಈ ವಿಚಾರದಲ್ಲಿ ಸಾಧ್ಯವಾದ ಮಟ್ಟಿಗೆ ಅವರಿಗೆ ಸಹಾಯ ಮಾಡುವುದಕ್ಕೆ ಸಿದ್ಧರಾಗಿರುವರೆಂಬುದನ್ನು ಪೂನಾ ಮುನಿಸಿಪಾಲಿಟಿಯ ಅಧ್ಯಕ್ಷರಿಗೂ, ಡಾ। ಕರ್ವೆಯರಿಗೂ, ಮಿಸೆಸ್ ರಾನಡೆಯವರಿಗೂ ತಿಳಿಸಬೇಕೆಂಬ ನಿರ್ಣಯವು ಪಾಸಾಯಿತು.

ಮಂಗಳೂರು ತಾಲೂಕು ಬೋರ್ಡಿಗೆ ಗುರುಪುರ ಇಲೆಕ್ಟೋರಲ್ ಸರ್ಕಲಿನಿಂದ ಮೆಂಬರರಾದ ರಾವ್ ಬಹದೂರ ಯನ್. ಸುಬ್ಬರಾವ್‌ರವರ ಮೆಂಬರಿಕೆಯ ಅವಧಿಯು ಬರುವ ತಿಂಗಳಲ್ಲಿ ಮುಗಿಯುವದು. ಇದರ ಹೊಸ ಚುನಾವಣೆಯು ಎಪ್ರಿಲ್ ತಿಂಗಳ ತಾರೀಕು ೩೦ಕ್ಕೆ ನಡಿಯುವುದು.

ಇಲ್ಲಿಯ ಥಿಯೋಸೋಫಿಕಲ ಸೊಸೈಟಿಯ ಪರವಾಗಿ ಮೈಸೂರಿನ ನರಹರಿ ಶಾಸ್ತ್ರಿಗಳವರಿಂದ ಕಳೆದ ಆದಿತ್ಯವಾರ ನಡೆಯಲಿಕ್ಕಿದ್ದ ಭಾಷಣ ಮತ್ತು ಹರಿಕೀರ್ತನೆಯು ಪೈಕಿ ಶ್ರೀಯುತ ಶಾಸ್ತ್ರಿಗಳಿಗೆ ಇಲ್ಲಿಗೆ ಬರುವಾಗ್ಗೆ ಪೊದನೂರಿನಲ್ಲಿ ರೈಲ್ವೆ ಗಾಡಿಯು ತಪ್ಪಿದ್ದರಿಂದ ಸಕಾಲದಲ್ಲಿ ಇಲ್ಲಿಗೆ ಬರಲಾಗದೇ ಇದ್ದುದರಿಂದ ಬೆಳಗ್ಗಿನ ಭಾಷಣವು ಇವರ ಬದಲಾಗಿ ಸದರಿ ಸೊಸೈಟಿಯ ಕಾರ್ಯದರ್ಶಿಯವರಾದ ಸೆಂಟ್ ಅಲೋಶಿಯಸ್ ಕೊಲೇಜಿನ ಅಧ್ಯಾಪಕ ಪಂಡಿತ ನಿಡ್ಲೆ ಅನಂತ ಉಪಾಧ್ಯಾಯರು ದರ್ಶನಾತೀತರಾದ ಸಹಾಯಕರು ಎಂಬ ವಿಷಯದ ಬದಲಾಗಿ ಹಿಂದುಗಳು ಮತ್ತು ಅವರ ಸಾಮಾನ್ಯ ಧರ್ಮಗಳು ಎಂಬುವನ್ನು ಎತ್ತಿ ಭಾಷಣ ಮಾಡಿದರು. ನಂತರ ಶಾಸ್ತ್ರಿಗಳು ಬಂದು ತಲ್ಪಲಾಗಿ ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿಸಿದಂತೆ ಸಾಯಂಕಾಲ ಹರಿಕೀರ್ತನೆಯೂ ನಡೆಯಿತು. ಕೀರ್ತನೆಗೆ ಬಹು ಜನರು ನೆರೆದಿದ್ದರು. ಮರುದಿನ ಇವರು ಕಾರ್ಕಳಕ್ಕೆ ತೆರಳಿದರು. ಇವರು ನಮ್ಮ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಈ ರೀತಿಯ ಹರಿಕೀರ್ತನೆಯನ್ನು ಮಾಡುತ್ತ ಅಲ್ಲಲ್ಲಿ ಸಿಕ್ಕಿದ ಧನವನ್ನೆಲ್ಲಾ ಇಲ್ಲಿಯ ಥಿಯೋಸೋಫಿಕಲ ಸೊಸೈಟಿಯ ಕಟ್ಟಡಕ್ಕಾಗಿ ಕೊಡುವವರಾಗಿರುವರು.

ಬಂಟರ ಯಾನೆ ನಾಡವರ ಪರಸ್ಪರ ಸಹಾಯಕ ಸಂಘದ ಬಂಡಸಾಲೆಯು ಬಂದರದಲ್ಲಿ ಶ್ರೀ ಕೃಷ್ಣ ಮಿಲ್ಲಿನ ಎದುರಾಗಿರುವ ಚಾವಡಿಯಲ್ಲಿ ಇದೇ ತಿಂಗಳ ೫. [illegible]

[illegible] ಮತ್ತು [illegible] ಮನಸ್ಸನ್ನು ಸ್ವಾಧೀನ ಮಾಡಿ [illegible] ಮೂಲಕ ದೇವರನ್ನು ಕಾಣುವದು" [illegible] ವಾದದಿಂದ ಇಲ್ಲಿನ ಗಣಪತಿ ಸೆಕೆಂಡರಿ [illegible] ರುತ್ತಾರೆ. ಈ ಮೂರು ದಿನಗಳಲ್ಲೂ ಎಲ್ಲ [illegible]

[illegible] ದಿಂದ ಬಂದ ಟಿ. [illegible] ಎಂಬ ಗೃಹಸ್ಥ [illegible] ಸಾಯಂಕಾಲ ಮೊಗವೀರರ ಶ್ರೀ ಜ್ಞಾನೋದಯ [illegible] ಸಂದರ್ಶಿಸಿ ಅಲ್ಲಿ ನಡೆಯುವ ಕಾರ್ಯಗಳನ್ನೆಲ್ಲಾ [illegible] ಸಂತೋಷಪಟ್ಟು ಸಮಾಜದ ಫಂಡಿಗೆ ರೂಪಾಯಿ ಐದು ದಾನ ಕೊಟ್ಟಿರುವದಲ್ಲದೆ, ಮಂದಿರದ ಭಾವ ಚಿತ್ರವನ್ನು ತಾನೇ ತೆಗೆದು [illegible] ಹೋಗಿರುವರು

ಕೆಲವು ಕಾಲದ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿದ್ದ ಜಿಲ್ಲೆಯ ಕೃಷಿಯ ಮತ್ತು ಕೈಗಾರಿಕೆಯ ಪ್ರರೋಭಿವೃದ್ಧಿಯ ಸಂಘ (ಡಿಸ್ಟ್ರಿಕ್ಟ ಅಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಎಡ್ವಾನ್ಸ್‌ಮೆಂಟ ಎಸೋಸಿಯೇಶನು) ಮತ್ತು ಈ ವಾರದಲ್ಲಿ ಇಲ್ಲಿಗೆ ಬಂದಿದ್ದ ಸಕ್ಕರೆಯ ಕಮ್ಮಿಟಿಯವರಿಂದ ಕೂಡಿದ ಒಂದು ಸಭೆಯು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಕೂಡಿತು. ಈ ಪಟ್ಟಣದಲ್ಲಿ ೬ ಲಕ್ಷ ರೂಪಾಯಿಯ ಬಂಡವಾಳದಿಂದ ಸಕ್ಕರೆಯನ್ನು ಮಾಡುವ ಒಂದು ಯಂತ್ರವನ್ನು ತಂದು, ಒಂದು ಕಾರ್ಖಾನೆಯನ್ನು ತೆರೆಯಬಹುದು. ಈ ಕಾರ್ಖಾನೆಗೆ ಸದಾಕಾಲ ಕೆಲಸ ದೊರೆಯುವಂತೆ ಪಟ್ಟಣದ ೫ ಮೈಲುಗಳ ವಿಸ್ತೀರ್ಣದೊಳಗಿನ ಕಬ್ಬನ್ನು ಸಕಾಲದಲ್ಲಿ ಬಂದು ತಲ್ಪುವ ಏರ್ಪಾಡು ಮಾಡಿಕೊಳ್ಳಬಹುದು, ಮತ್ತು ಇದರಿಂದ ಸಕ್ಕರೆಯನ್ನು ಮಾಡಿ ಅನ್ಯದೇಶಕ್ಕೆ ಕಳುಹಿಸಿ ಹೆಚ್ಚಿನ ಲಾಭವನ್ನು ಪಡೆಯಬಹುದು ಎಂದು ಮುಂತಾದ ಸೂಚನೆಗಳು ಈ ಸಕ್ಕರೆಯ ಕಮ್ಮಿಟಿಯಿಂದ ಸೂಚಿಸಲಾದವು. ಸಭೆಯಲ್ಲಿ ಈ ಕಾರ್ಖಾನೆಯನ್ನು ಯಾವತರದಲ್ಲಿ ಸ್ಥಾಪಿಸಬಹುದು, ಇದಕ್ಕೆ ಸರಕಾರದ ಸಹಾಯವು ಹೇಗೆ ದೊರಕುವದು, ಇದರ ಉತ್ಪನ್ನವು ಯಾವರೀತಿಯಲ್ಲಿರುವುದು ಎಂಬಿವೇ ಮೊದಲಾದ ಪ್ರಶ್ನೆಗಳು ನಡೆದು ಕೊನೆಗೆ ಇಲ್ಲಿ ಕಬ್ಬಿನ ಬೆಳೆಯು ಎಷ್ಟಾಗುತ್ತಿದೆ ಎಂಬುದನ್ನು ಚೌಕಸಿ ಮಾಡಬೇಕಾಗಿಯೂ ಮತ್ತು ಬಂಡವಾಳವನ್ನು ಹೇಗೆ ಎತ್ತಬಹುದೆಂಬ ವಿಚಾರವನ್ನು ಬೇಗನೇ ಮಾಡತಕ್ಕದೆಂಬ ನಿರ್ಧಾರಗಳಾಗಿ ಸಭೆಯು ಬರಖಾಸ್ತು ಆಯಿತಾಗಿ ತಿಳಿಯುತ್ತೇವೆ

ಇಲ್ಲಿಯ ಮಹಿಳಾಸಭೆಯ ಫಂಡಿನ ಸಹಾಯಾರ್ಥವಾಗಿ ಸದರಿ ಸಭೆಯವರಿಂದ ಕಳೆದ ಶನಿವಾರ ತೋರಿಸೋಣಾದ ವಿವಿಧ [illegible]ವಳಿಯಲ್ಲಿ ಸುಮಾರು ರೂ ೭೦೦ ಜಮೆಯಾಗಿದೆಯಾಗಿಯೂ, ಈ ಹಣದಿಂದ ಸಭೆಯ ಸ್ತ್ರೀಯರುಗಳಿಂದ ತಯಾರಿಸೋಣಾಗುವ ಮನೆಯ ಕೈಗಾರಿಕೆಯ ಸಾಮಾನು ಮೊದಲಾದುವನ್ನು ಇಟ್ಟು ಇಂಥಾ ಕೈಗಾರಿಕೆಯನ್ನು ಇತರರಿಗೆ ಕಲಿಸುವಾಗ ಪ್ರದರ್ಶಿಸಲಿಕ್ಕೂ ಸಹಾಯವಾಗುವಂತೆ ಒಂದು ಮೊಡೆಲ್ ಇಂಡಿಯನ್ ರೂಮ್ ಶಾಪ್ ಇಂಡಸ್ಟ್ರಿಯಲ್ ಸೆಕ್ಷನ್ ಎಂಬದನ್ನು ತೆರೆಯಲಿಕ್ಕೆ ವಿನಿಯೋಗಿಸಲಿಕ್ಕಿರುವರಾಗಿ ತಿಳಿದುಬರುತ್ತದೆ

ಕನ್ನಡ ಭಾಷೆಯಲ್ಲಿ ಅಪೂರ್ವ ಗ್ರಂಥ

ಹಿಂದೂ ವ್ರತವಿವೇಕ.

ಲೇಖಕ: ಸಂಸ್ಕೃತಾಧ್ಯಾಪಕ ಆತ್ಮಾರಾಮ ಶಾಸ್ತ್ರೀ ಓಡ್ಲವನೆ

"ಈಗಲೆ ಸಿದ್ಧವಾಗಿರುವದು" ಈಗಲೆ ಸಿದ್ಧವಾಗಿರುವದು"

ಕ್ರಯ ಆಣೆ ೧೦

ಹಿಂದೂ ಜನರ ಆಚರಣದಲ್ಲಿರುವ ವ್ರತ ಹಬ್ಬ, ಜಯಂತಿ— ಇವುಗಳ ಉತ್ಪತ್ತಿ, ಆಚರಿಸುವ ಕ್ರಮ ಮತ್ತು ಚರಿತ್ರೆ— ಇವೆಲ್ಲವು ಈ ಗ್ರಂಥದಲ್ಲಿ ಚಂದವಾಗಿ ಕೊಡೋಣಾಗಿವೆ

ಹಿಂದೂ ವ್ರತಗಳ, ಹಬ್ಬಗಳ, ಜಯಂತಿಗಳ ಇತಿಹಾಸವೇನು?

ಎಂಬದನ್ನು ಕನ್ನಡದಲ್ಲಿ ತಿಳಕೊಳ್ಳಲು ಬೇಕಾದ ಸಾಧನಗ್ರಂಥವು ಇದೇಯಾಗಿರುವದು

ಗ್ರಂಥದ ವಿಷಯಾನುಕ್ರಮಣಿಕೆ

ಪ್ರಸ್ತಾವನೆ ಚೈತ್ರಮಾಸ—ಯುಗಾದಿ ಮತ್ತು ದೋಲೋತ್ಸವಗಳು, ಶ್ರೀ ರಾಮನವಮಿ, ಹನುಮಜ್ಜಯಂತಿ ವೈಶಾಖಮಾಸ—ಅಕ್ಷಯ್ಯ ತೃತೀಯೆ, ಪರಶುರಾಮಜಯಂತಿ, ನೃಸಿಂಹಜಯಂತಿ ಜ್ಯೇಷ್ಠಮಾಸ— ದಶಹರಾವ್ರತ, ವಟಸಾವಿತ್ರಿ, ಪೂರ್ಣಿಮೆ ಆಷಾಢಮಾಸ—ಮಹಾ ಏಕಾದಶಿ ಮತ್ತು ಚತುರ್ಮಾಸ ವ್ರತ ಶ್ರಾವಣಮಾಸ—ನಾಗಪಂಚಮಿ, ಮಂಗಳಗೌರಿ [illegible], ಶ್ರೀ ಕೃಷ್ಣಜನ್ಮಾಷ್ಟಮಿ ಪಿಠೋರಿ ವ್ರತ ಭಾದ್ರಪದಮಾಸ— [illegible] ಗಣೇಶಚತುರ್ಥಿ ಋಷಿಪಂಚಮಿ ಜ್ಯೇಷ್ಠಾಗೌರಿ [illegible] ಅನಂತಚತುರ್ದಶಿ, ಮಹಾಲಯಪಕ್ಷ ಆಶ್ವಿನಮಾಸ— [illegible] ಮಹೋತ್ಸವ ಕಾರ್ತಿಕಮಾಸ—ದೀಪಾವಳಿಯು [illegible], ವೈಕುಂಠ ಚತುರ್ದಶಿ, ತ್ರಿಪುರೀ ಪೌರ್ಣಿಮ ಮಾರ್ಗಶೀರ್ಷಮಾಸ— [illegible], ದತ್ತಾತ್ರೇಯ ಜಯಂತಿ ಪೌಷಮಾಸ—ಮಕರಸಂಕ್ರಮಣ ಮಾಘಮಾಸ—ರಥಸಪ್ತಮಿ, ಮಹಾಶಿವರಾತ್ರಿ ಫಾಲ್ಗುನಮಾಸ—ಹೋಳಿ [illegible] ಪರಿಶಿಷ್ಟ—ಶಂಕರಜಯಂತಿ ರಾಮಾನುಜ ಜಯಂತಿ ಮಧ್ವ ಜಯಂತಿ, ವಲ್ಲಭಜಯಂತಿ

ಗ್ರಂಥಪ್ರತಿಗಳನ್ನು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು

ಎಂ. ಎಸ್. ರಾವ್ ಕಂಪೆನಿ,
[illegible] ಬೆಂಗಳೂರು ಸಿಟಿ, ಇವರಲ್ಲೂ ದೊರೆಯುತ್ತದೆ.

[illegible] ವಿಜೃಂಭಣೆಯಿಂದ ನೆರವೇರಿತು.

ಈ ಶಿವಲಿಂಗವು ಸುಮಾರು ೪೦ ವರ್ಷಗಳ ಹಿಂದೆ ಅಮೇರಿಕಾ ದೇಶದ ಫಿಲಡೆಲ್ಫಿಯಾ ಎಂಬಲ್ಲಿ ನಡೆದ ವಸ್ತುಪ್ರದರ್ಶನಕ್ಕೆ ಬಂಗಾಳದಿಂದ ಕಳುಹಿಸಲ್ಪಟ್ಟಿತು. ನಂತರ ೧೮೮೬ರಲ್ಲಿ ಲಂಡನ ನಗರದಲ್ಲಿ ನಡೆದ ಪ್ರದರ್ಶನಕ್ಕೂ ಸಾಗಿಸಲ್ಪಟ್ಟಿತು. ಈ ಎರಡು ಮುಖ್ಯ ದೇಶಗಳಲ್ಲಿ ಈ ಲಿಂಗಕ್ಕೆ ಯೋಗ್ಯ ಪ್ರಾಶಸ್ತ್ಯವನ್ನು ಕೊಡದೆ ಒಂದು ಮೂಲೆಕಡೆಗೆ ಹಾಕಲ್ಪಟ್ಟಿತು. ಕಾಲವಶಾತ್ ಸರ್ ಜಾರ್ಜ ಬರ್ಡವುಡ್ ಎಂಬ ಆಂಗ್ಲ ಮಹಾಶಯರಿಂದ ಈ ಲಿಂಗವು ಆ ಕಾಲದಲ್ಲಿ ಇಂಗ್ಲೆಂಡಿನಲ್ಲಿದ್ದ ಮುಂಬಯಿಯ ಹೈಕೋರ್ಟ ವಕೀಲ ಕೀರ್ತಿಶೇಷರಾದ ಧನಂಜಯ ನೀಲಕಂಠ ನಾಡಕರ್ಣಿಯವರಿಗೆ ಒಪ್ಪಿಸಲಾಯಿತು. ಬಳಿಕ ರಾ। ನಾಡಕರ್ಣಿಯವರು ಈ ಲಿಂಗವನ್ನು ತಮ್ಮ ಗುರುಗಳಾದ ಶ್ರೀ ಮದಾತ್ಮಾನಂದ ಸರಸ್ವತಿಯವರ ಬಳಿಗೆ ೧೮೯೭ನೇ ಇಸವಿಯಲ್ಲಿ ರವಾನಿಸಲಾಯಿತು. ಅಂತೂ ಈ ಲಿಂಗವು ಈ ಪ್ರತಿಷ್ಠಾಪನೆಯ ಮೊದಲು ಭೂಪ್ರದಕ್ಷಿಣೆಯನ್ನು ಮಾಡಿದ್ದಾಯಿತು

ಈ ಲಿಂಗವು ಅತೀ ಉತ್ತಮವಾದ ಶಿಲೆಯದಾಗಿದ್ದು ೯೦೦ ರಾತ್ಲ ಭಾರವೂ ३೦ ಇಂಚು ಉದ್ದವೂ ಇರುವುದು, ಇದರಲ್ಲಿ ನಾಲ್ಕು ಸರ್ಪಗಳು ಅಂದವಾಗಿ ಕೆತ್ತಲ್ಪಟ್ಟಿವೆ. ಈ ಲಿಂಗದ ಮೇಲೆ ಹೇಗೆ ನೀರು ಹೊಯಿದರೂ ಮೇಲಿನ ನಾಲ್ಕು ಸರ್ಪಗಳನ್ನು ಕ್ರಮವಾಗಿ ಆವರಿಸಿ ಸೋಮಸೂತ್ರದಿಂದ ಕೆಳಗಿಳಿಯುವುದು ಬಹಳ ವಿಚಿತ್ರವಾಗಿದೆ

ಈ ಪ್ರತಿಷ್ಠಾ ಸಮಾರಂಭಕ್ಕೆ ದಕ್ಷಿಣ ಕನ್ನಡದಿಂದಲೂ, ಉತ್ತರ ಕನ್ನಡದೊಳಗಿನ ಬಹುತರ ಎಲ್ಲ ತಾಲೂಕುಗಳಿಂದಲೂ ಸುಮಾರು ३೫೦೦ ಗೌಡ ಸಾರಸ್ವತ ಬ್ರಾಹ್ಮಣ ವೃಂದವು ನೆರೆದಿತ್ತು. ಅನೇಕ ಪ್ರಾಂತ್ಯಗಳಿಂದ ಬಂದಿದ್ದ ಶಾಸ್ತ್ರಜ್ಞ ವೈದಿಕರಿಂದ ಶಾಸ್ತ್ರೋಕ್ತವಿಧಿಗಳೂ ಸಂಸ್ಕಾರಗಳೂ ನಡೆದ ನಂತರ ಪ್ರತಿಷ್ಠೆಯಾಯಿತು. ಈ ಸಮಾರಂಭವು ನಾಲ್ಕು ದಿವಸಗಳ ಪರಿಯಂತರ ನಡೆದಿತ್ತು. ಪ್ರತಿನಿತ್ಯವೂ ಬ್ರಾಹ್ಮಣ ಸಂತರ್ಪಣೆಯಿತ್ತು. ಪವಿತ್ರವಾದ ಸಂತರ್ಪಣೆಯು ಮುಗಿದ ನಂತರ ಶಿಷ್ಯಾಯಿಗಳು ನೆರೆದ ಗೃಹಸ್ಥರಿಗೆಲ್ಲ ಫಲಮಂತ್ರಾಕ್ಷತೆಗಳನ್ನು ಅನುಗ್ರಹಿಸಿದ ಮೇಲೆ ಸಮಾರಂಭವು ವಿಸರ್ಜನೆಯಾಯಿತು

ಶ್ರೀ ಬ್ರಹ್ಮಾನಂದ ಗುರುಭ್ಯೋನಮಃ

ಕಾರ್ಕಳ ತಾಲೂಕು ಬಡಗ ಮಿಜಾರು ಗ್ರಾಮದ ದೇಶಸ್ಥ ಬ್ರಾಹ್ಮಣರ ಅಶ್ವತ್ಥಪುರ ಶ್ರೀರಾಮ ಚಂದ್ರ ದೇವಸ್ಥಾನದಲ್ಲಿ ವರುಷಂಪ್ರತಿ ಆಗತಕ್ಕ ಶ್ರೀರಾಮನವಮಿ ಉತ್ಸವವು ಇದೇ ಬರುವ ರೌದ್ರಿ ಸಂ। ಚೈತ್ರ ಶು। ೧೯ ರವಿವಾರ (ತಾ ೨೮ ೩ ೧೯೨೦)ರ ಆರಾಭ್ಯ ಇದೇ ಶು। ೧೦ಯು ಚಂದ್ರವಾರ (ತಾ ೨೯ ३ ३೦)ರ ವರೆಗೆ ಜರಗುವದರಿಂದ ಸದ್ರಿ ಉತ್ಸವಕ್ಕೆ ಶ್ರೀ ಶೃಂಗೇರೀ ಮೈಸೂರು ಬೆಂಗಳೂರು ಧಾರವಾಡ ಬೆಳಗಾಂ ವಗೈರೆ ಎಲ್ಲಾ ಊರುಗಳಲ್ಲಿರತಕ್ಕ ಸ್ವಜಾತಿ ಗ್ರಹಸ್ಥರು ವ ಶ್ರೀರಾಮ ದೇವರ ಮೇಲೆ ಭಕ್ತಿ ವಿಶ್ವಾಸವುಳ್ಳ ಮಹನೀಯರುಗಳು ಸದ್ರಿ ಉತ್ಸವಕ್ಕೆ ಬಂದು ಯಥಾನುಶಕ್ತಿ ಶ್ರೀದೇವರ ಸೇವೆ ನಡಿಸಿ ತೀರ್ಥ ಪ್ರಸಾದಾದಿಗಳನ್ನು ಪಡಕೊಂಡು ಸಂತರ್ಪಣಾದಿ ಸತ್ಕಾರಗಳನ್ನು ಸ್ವೀಕರಿಸಿ ಹೋಗಬೇಕಾಗಿ ಅಪೇಕ್ಷಿಸವ

N Subbanna Bhat
for Mokteshwar of Shr Ram Temple
ASHWATHAPUR

ಪತ್ರ ವ್ಯವಹಾರ

ಅಯ್ಯಾ ಸ್ವದೇಶಾಭಿಮಾನಿ ಪತ್ರಕರ್ತರೇ!

ಮಂಗಳೂರ ರಥಬೀದಿ (Car Street) ಎಂಬ ಸ್ಥಳದಿಂದ ೯ ೨ ೨೦ ತಾ ೨೬ಕ್ಕೆ ಬರೆದು ಟಪ್ಪಾಲಿಗೆ ಹಾಕಿದ ಕಾಗದವು ಕೊಡಗು ಸಿದ್ಧಾಪುರಕ್ಕೆ (Sidapur Coorg) ಬಂದು ಮುಟ್ಟುವರೆ ೧೨ ದಿವಸಗಳು ಹಿಡಿಯುತ್ತದೆಂದು ಕೇಳುವರೆ ಆಶ್ಚರ್ಯವೇ ಸರಿ

ಇಂಗ್ಲಾಂಡಿಗೆ ಕೂಡ ೧೫-೧೬ ದಿವಸದೊಳಗೆ ಟಪ್ಪಾಲು ಮುಟ್ಟುತ್ತದೆ ಕೊಡಗ ಸಿದ್ಧಾಪುರಕ್ಕೆ ಬರುವರೆ ೧೨ ದಿವಸಗಳ ತಾಗತ್ತದೆ ಇದ ಆಶ್ಚರ್ಯವಾದ ಸಂಗತಿಯಲ್ಲವೇ? ಆಗ್ಗೆ ಇಂಗ್ಲಾಂಡಿಗೂ ಕೊಡಗು ಸಿದ್ಧಾಪುರಕ್ಕೂ ೩ ೪ ದಿವಸಗಳ ವ್ಯಯದಾಕ್ಕೆ ಮಾತ್ರ ಹೆಚ್ಚು ಕಮ್ಮಿ ಆಯಿತಲ್ಲವೇ? ಕಾಗದವು ಮುಟ್ಟುವರೆ ಇಷ್ಟು ದಿವಸ ಹ್ಯಾಗೆ ಆಯಿತೆಂದ ನಾನು ಕಾಗದದ ಎ ಡ ಸುತ್ತಲೂ ಬೇರೆ ಪೋಸ್ಟ ಆಫೀಸಿನ ಸೀಲುಗಳು ಉಂಟೋ ಎಂದ ನೋಡಿದಲ್ಲಿ ಬೇರೆ ಪೋಸ್ಟ ಆಫೀಸಿನ ಸೀಲುಗಳು ಒಂದಾದರೂ ಕಾಣುವದಿಲ್ಲ ೨ ಬರೇ ಸಿಟಿ (City) ಎಂಬ ನಾಲ್ಕು ಅಕ್ಷರಗಳು ಮಾತ್ರ ಕಾರ್ಡಿಗೆ ಹಚ್ಚಿದ ಸ್ಟಾಂಪು (Stamp) ಮೇಲೆ ಕಾಣುತ್ತೆ ಅಲ್ಲದೆ ಬೇರೆಇಲ್ಲ ಇದ ಇರಲಿ ತಮ್ಮ ಪತ್ರವದ ತಾ ೨೦ನೆಯ ಸ್ವದೇಶಾಭಿಮಾನಿಯೂ ತಾ ೨೦ಕ್ಕೆ ಟಪ್ಪಾಲಿಗೆ ಹಾಕಿದ್ದರು ಕೂಡ ಮಾರ್ಚ ತಾ ೫ಕ್ಕೆ ಇಲ್ಲಿಗೆ ಬಂದ ಕೈಸೇರಿದೆ ಹೀಗೆ ಟಪ್ಪಾಲು ಕಾಗದಗಳು ಡಿಲೈ ಆದಲ್ಲಿ ಮಂಗಳೂರಿನಿಂದ ಮ ಇತರ ಕಡೆಯಿಂದ ಸಿದ್ಧಾಪುರಕ್ಕೆ ಹೋದ ಬಡವರ ಗತಿಯೇನ್ನೋ? ತಿಳಿಯದು

Sidapur Coorg
9th March 1920

ಅಯ್ಯಾ ಎಡಿಟರವರೇ

ಬಡ ನೌಕರನ ಸಣ್ಣ ಅರಿಕೆಯನ್ನು ನಿಮ್ಮ ಕಸಬಿನ ಬಂಧುವರ್ಗದವರಾದ ಉಪಾಧ್ಯಾಯರುಗಳಿಗೆ ತಮ್ಮ ದಿವ್ಯ ಪತ್ರಮುಖೇನ ತಿಳಿಯಪಡಿಸಬೇಕಾಗಿ ಬೇಡುತ್ತೇನೆ

ಪ್ರಿಯ ಉಪಾಧ್ಯಾಯರುಗಳಾದ ಬಾಂಧವರೇ ಈಗ ನಮ್ಮ ಜಿಲ್ಲೆಯಲ್ಲಿ ಸರಕಾರದ ನೌಕರರಲ್ಲಿ ನಮಗಿಂತ ಕೆಳನೌಕರರೂ ಸಂಬಳದಲ್ಲಿ ಕಡಿಮೆ ಸಂಬಳದವರೂ ಬೇರೆ ಯಾರೂ ಇಲ್ಲ ಈಗ ಸುಮಾರು ವರ್ಷಗಳಿಂದ ಜೀವನದುಬಾರಿ ಏರುವುದರಿಂದಲೂ ನಮ್ಮ ಸಂಬಳ ನಮ್ಮ ಜೀವನಕ್ಕೆ ಸಾಕಾಗದೆ ಇರುವುದರಿಂದಲೂ ನಮ್ಮ ಮಾತಾ ಸಮಾನರಾದ ಸರಕಾರದವರಿಗೆ ಸೆಲಂಕಮಿಟಿ ಮುಖಾಂತರ ಇದೇ ತಿಂಗಳ ತಾ ೧೯ಕ್ಕೆ ಇಲ್ಲಿ ಒಂದು ಪರಿಷತ್ತು ನಡಿಸಿ ಬಿನ್ನವತ್ತಲೆಯನ್ನು ರವಾನಿಸಬೇಕೆಂದಿದ್ದೇವೆ ಅದೇ ಮೇರೆಗೆ ನಮ್ಮ ಜಿಲ್ಲೆಯ ಮುಖ್ಯ ಮುಖ್ಯ ಭಾಗಗಳಲ್ಲಿ ಆ ಫಿರ್ಕಿಯ ಉಪಾಧ್ಯಾಯರುಗಳು ಒಟ್ಟಿಗೆ ಕೂಡಿ ಪರಿಷತ್ತು ನಡಿಸಿ ನಿಮ್ಮ ಬಿನ್ನಹಗಳನ್ನು ಸೆಲಂ ಕಮಿಟಿಯವರಿಗೆ ರವಾನಿಸಿದರೆ ಬಹಳ ಉಪಕಾರವಾಯಿತು ತಾಯಿ ತೊಟ್ಟಿಲ ತೂಗಬೇಕಾದರೆ ಮಗು ಅಳಬೇಕೆಂಬುದು ನಿಜವಲ್ಲವೇ

ಬಂಟ್ವಾಳ,
ತಾ 8 3-'20

ಬಿ ವಿಠಪ್ಪ ಪುರುಷ,
ಕಸಬಾ ಉಪಾಧ್ಯಾಯ

[illegible] ಪ್ರಸಿದ್ಧವಾಯಿತು!!

[illegible] ಯವರಿಂದ

[illegible] ಪಡಿಸಲ್ಪಟ್ಟ

ರೌದ್ರಿಸಂವತ್ಸರದ ಪಂಚಾಂಗವು

ಬೆಲೆ ಪ್ರತಿ ಒಂದಕ್ಕೆ 3 ಆಣೆ. 25 ಪ್ರತಿಗಳಿಗೆ ರೂ. 3-12-0
50 ಪ್ರತಿಗಳಿಗೆ ರೂ. 7-0-0. 100 ಪ್ರತಿಗಳಿಗೆ ರೂ. 13-8-0.

ಪ್ರತಿಗಳು ಸಿಗುವ ವಿಳಾಸ—

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು

ಪ್ರಕಟಣೆ

N. B. ಈ ಔಷಧಗಳ ವಿನಹಾ ನಮ್ಮ ಔಷಧಾಲಯದಲ್ಲಿ ಎಲ್ಲಾ ತರದ ರೋಗಗಳಿಗೆ ಸಿದ್ಧ ಮಾಡಿಟ್ಟಿರುವ ಔಷಧಗಳ ಸ್ಟೋಕ್ ತುಂಬಾ ಇರುವದು. ನಮ್ಮ ಕ್ರಯಪಟ್ಟಿಯ [illegible] ತರಿಸಿ ಕೊಂಡರೆ [illegible] ಪ್ರಕಾರಗೊಳಿಸಿ.

SRI BHAVANISHANKER AYURVEDIC DESPENSARY.
BRAHMAVAR, S. KANARA.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ — ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರಿನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಸವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್‌ಡಿಪೊ,
೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

ಫೀಸು ಇಲ್ಲ! ರೋಗಪರೀಕ್ಷೆಗೆ. ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡು ಬರುತ್ತದೆ. ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು."

ಡಾ. ಎನ್. ಜೀ. ಸರದೇಸಾಯಿ,
ಎಮ್. ಬಿ. (ಲಂಡನ್).

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,
ಮಹಾಮ್ಮಾಯಿ ದೇವಾಲಯದ ಮೂಲೆ, ಮಂಗಳೂರು.

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

[illegible]

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರತ ಕೂದಲು ಕಪ್ಪಾಗುತ್ತವೆ. ರೋಗಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.

4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪಾದಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೊಮಿಯೊಪತಿಕ್
ಧರ್ಮ ವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

WANTED.

An young, energetic and qualified compounder who can write a neat and clean hand.

Applications must be written in their own hand and must be accompanied by testimonials of conduct etc.

The starting salary will be Rs. 20 per mensem. For further particulars apply personally to the undersigned.

P. M. Kamath,
Proprietor,
P. M. Kamath & Co.,
Chemists, MANGALORE.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಸಿಯಾ

ಕ್ರಯ	ರೂ. ಆ. ಪೈ.
ಎರಡು ಡ್ರಾಮಿನ D ಸೈಜ್ ಸೀಸೆ ಒಂದರ	0—3—6
ನಾಲ್ಕು ,, C ,, ,, ,,	0—6—0
ಒಂದು ಔನ್ಸಿನ A ,, ,, ,,	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ,	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.	10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲ್ಲೋ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ವಿದೇಶ ವರ್ತಮಾನ.

ಯುರೋಪಿನ ಪರಿಸ್ಥಿತಿ:—ಹೊಲೆಂಡ್, ಸ್ವಿಜರ್‌ಲೆಂಡ್, ನೋರ್ವೆ, ಸ್ವೀಡನ್, ಈ ರಾಜ್ಯಗಳ ಪಾರ್ಲಿಮೆಂಟುಗಳಲ್ಲಿ ಲೀಗ್ ಒಫ್ ನೇಶನ್ಸ್ ಈ ಸಂಸ್ಥೆಗೆ ಸೇರುವದಕ್ಕೆ ಠರಾವುಗಳು ಮಂಜೂರಾಗಿವೆ.

ತುರ್ಕಿಯೊಡನೆ ಸಂಧಿಯ ಶರ್ತಗಳು ಒಂದೊಂದಾಗಿ ಪ್ರಕಟವಾಗುತ್ತವೆ, ಆದರೆ ಎಷ್ಟರ ಮಟ್ಟಿಗೆ ಅವು ವಿಶ್ವಾಸಕ್ಕೆ ಪಾತ್ರವಾಗಿವೆ ಎಂದು ಹೇಳಲು ಬರುವದಿಲ್ಲ. ಕೊನಸ್ಟಂಟಿನೋಪಲದ ಸುತ್ತಲಿರುವ ಅಲ್ಪಸ್ವಲ್ಪ ಪ್ರದೇಶವನ್ನು ಮಾತ್ರ ಸುಲ್ತಾನರ ವಶಕ್ಕೆ ಇರಗೊಡಿಸಿ, ಡಾರ್ಡನೆಲ್ಸ್ ಮತ್ತು ಬೊಸ್ಪರಸ್ ಈ ಜಲಸಂಧಿಗಳ ಬೀಗದ ಕೈಯನ್ನು 'ಲೀಗ್ ಒಫ್ ನೇಶನ್ಸ್'ಗೆ ಒಪ್ಪಿಸಿಕೊಡಬೇಕಾಗಿಯೂ, ತುರ್ಕಿಗೆ ಕಪ್ಪು ಸಮುದ್ರದಲ್ಲಿ ನೌಕಾಪಡೆ ಇಲ್ಲದ ಹಾಗೆ ಮಾಡಬೇಕಾಗಿಯೂ ನಿಶ್ಚಯ ಆಗಿದೆಯೆಂದು ವರ್ತಮಾನ ಪತ್ರಿಕೆಗಳು ಸಾರುತ್ತಿವೆ.

ಎನಟೋಲಿಯ ಅಥವಾ ಏಶಿಯ ತುರ್ಕಿಯಲ್ಲಿ ಜನಗಳು ಒಂದು ಮಹಾಸಭೆಯನ್ನು ಏರ್ಪಡಿಸಿಕೊಂಡಿದ್ದಾರೆಂದೂ, ಇದರಲ್ಲಿ ಅವರ ಧೈಲರಿಗೆ ಆ ಪ್ರಾಂತದ ಅರಸೊತ್ತಿಗೆ ಮಾಡಬೇಕೆಂದು ಈ ಮಹಾಸಭೆಯ ಉದ್ದೇಶವೆಂದೂ ಇನ್ನೊಂದು ವದಂತಿ ಇದೆ.

ಆರ್ಮೇನಿಯರಲ್ಲಿ ಸುಮಾರು ೧೫,೦೦೦ ಮಂದಿ ತುರ್ಕಿ ಸಿಪಾಯಿಯರ ಕತ್ತಿಗೆ ... ರೆಂದೂ ಈ ವಿಷಯದಲ್ಲಿ ತುರ್ಕಿಯ ಮಂತ್ರಾಲೋಚನೆ ಸಭೆಯವರು ... ಸಮಾಧಾನಕರವಾದ ಉತ್ತರವನ್ನು ಕೊಡದೆ ತಟಸ್ಥರಾಗಿರುವದರಿಂದ ಮಿತ್ರಪಕ್ಷದವರು ಕೊನಸ್ಟಂಟಿನೋಪಲವನ್ನು ತತ್ಕಾಲಕ್ಕೆ ಪ್ರವೇಶಮಾಡುವಂತೆ ನಿರ್ಣಯಿಸಿರುವರೆಂದು ತಿಳಿಯುತ್ತದೆ. ಆರ್ಮೇನಿಯರ ಕೊಲೆಗೆ ಕೈಹಾಕಿದ ತುರ್ಕಿಗೆ ಎಚ್ಚರಗೊಳಿಸುವದೇ ಕೊನಸ್ಟಂಟಿನೋಪಲವನ್ನು ಮಿತ್ರಪಕ್ಷದವರು ಕೈವಶಮಾಡಿಕೊಳ್ಳುವ ಉದ್ದೇಶವಂತೆ.

ವಿಲಾಯತಿಗೆ ಹೋದ ಖಿಲಾಫತ್ ಡೆಪ್ಯುಟೇಶನಿನವರು ಮಿ। ಲೊಯ್ಡ್ ಜೋರ್ಜರಿಗೆ ಬರೆದ ಪತ್ರದಲ್ಲಿ ಆರ್ಮೇನಿಯದಲ್ಲಿ ನಡೆದದ್ದೆಂಬ ಕೊಲೆಯ ವಿಚಾರವನ್ನು ನಡಿಸುವದಕ್ಕೆ ಮಿತ್ರಪಕ್ಷದವರು ಒಂದು ಕಮೀಶನ ಏರ್ಪಡಿಸಬೇಕೆಂದೂ ಇದರಲ್ಲಿ ಓಲ್ ಇಂಡಿಯಾ ಖಿಲಾಫತ್ ಪಂಚಾಯತಿನ ಒಬ್ಬಿಬ್ಬರು ಪ್ರತಿನಿಧಿಗಳು ಇರಬೇಕೆಂದು ಹೇಳಿದ್ದಲ್ಲದೆ ಬ್ರಿಟಿಷ ನೌಕಾಪಡೆಯವರೂ ಭೂಸೈನ್ಯದವರೂ ಕೊನಸ್ಟಂಟಿನೋಪಲವನ್ನು ಈ ಕೊಲೆಯ ನಿಮಿತ್ತ ಹಿಡಿದುಕೊಂಡಲ್ಲಿ ಅನಾಹತಗಳಿಗೆ ಕಾರಣವಾದೀತು ಎಂಬದಾಗಿ ಭಕ್ತಿಪೂರ್ವಕವಾಗಿ ಎಚ್ಚರ ಕೊಟ್ಟಿರುವರು.

ಪ್ರೆಸಿಡೆಂಟ ವಿಲ್ಸನರು ಆರ್ಮೇನಿಯದ ಸ್ಥಿತಿಯನ್ನು ಕೇಳಿ ಕೊನಸ್ಟಂಟಿನೋಪಲದಲ್ಲಿ ಸುಲ್ತಾನರನ್ನು ಇರಗೊಡಿಸುವ ವಿಷಯದಲ್ಲಿ ಆಕ್ಷೇಪ ಎತ್ತಲಿಕ್ಕಿದ್ದಾರೆಂದು ಲಂಡನ್ ಟಾಯಿಮ್ಸ್ ಪತ್ರಿಕೆಗೆ ಅಮೇರಿಕದ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ತುರ್ಕಿಯ ವಿಷಯವಾಗಿ ಬ್ರಿಟನ್ನಿನ ಹೌಸ್ ಒಫ್ ಲೊರ್ಡ್ಸ್ ಸಭೆಯಲ್ಲಿ ಪ್ರಸ್ತಾಪ ಬಂದಾಗ ಪರರಾಜ್ಯಗಳ ಮಂತ್ರಿಯಾಗಿರುವ ಲೊರ್ಡ ಕರ್ಝನರು ಆರ್ಮೇನಿಯರ ವಿಷಯವಾಗಿ ಹೇಳಿದ ಮಾತಿನಲ್ಲಿ ಆರ್ಮೇನಿಯರು ತುರ್ಕಿಯ ಕತ್ತಿಗೆ ತಲೆಕೊಡುವುದಕ್ಕೆ ಏನೂ ತಿಳಿಯದ ಕುರಿಮರಿಗಳಾಗಿಲ್ಲ, ಅವರೂ ತುರ್ಕಿಯ ಸೈನ್ಯದೊಡನೆ ವಿಶೇಷ ಸಾಹಸದಿಂದ ಕಾದಾಡಿದ್ದಾರೆ, ಅಲ್ಲಿ ಶಾಂತತೆಯನ್ನು ಉಂಟುಮಾಡುವುದಕ್ಕೆ ಬ್ರಿಟಿಷರು ವಿಶೇಷ ಸೈನ್ಯವನ್ನು ಕಳುಹಿಸಲು ಸಾಧ್ಯವಿಲ್ಲ, ಆರ್ಮೇನಿಯರಿಗೆ ಮಿತ್ರಪಕ್ಷದವರು ಸಾಕಷ್ಟು ಯುದ್ಧ ಸಾಮಗ್ರಿಗಳನ್ನು ಒದಗಿಸಿ ಕೊಟ್ಟರೆ ಅವರು ಆತ್ಮರಕ್ಷಣೆ ಮಾಡಿಕೊಳ್ಳಲು ಸಾಧ್ಯವಿದೆ, ಸುಲ್ತಾನರು ಅಖಿಲ ಮುಸಲ್ಮಾನ ಜನಕ್ಕೆ ಧರ್ಮಗುರುವೂ ರಾಜರೂ ಆಗಿರುವುದರಿಂದ ಅವರನ್ನು ಕೊನಸ್ಟಂಟಿನೋಪಲದಿಂದ ಹೊರಡಿಸುವುದು ಲೋಕದ ಮುಸಲ್ಮಾನರಿಗೆ ಬಹಳ ವಿಷಾದ ಹುಟ್ಟಿಸುವುದಕ್ಕೆ ಕಾರಣವಾದೀತು, ತುರ್ಕಿಯೊಡನೆ ಒಪ್ಪಂದದ ಶರ್ತಗಳು ಇದೇ ತಿಂಗಳ ೩೧ನೆ ತಾರೀಕಿನೊಳಗೆ ತಯಾರಾಗುವುವು ಎಂದು ತಿಳಿಸಿದ್ದಾರೆ.

ಜರ್ಮನಿ ಮತ್ತು ಒಸ್ಟ್ರಿಯದೊಡನೆ ಆದ ಸಂಧಿಯ ಶರ್ತಗಳಿಗೆ ಇನ್ನೂ ಅಮೇರಿಕದ ಪಾರ್ಲಿಮೆಂಟಿನವರ ಸಮ್ಮತಿ ದೊರಕಲಿಲ್ಲ. ಪ್ರೆಸಿಡೆಂಟ ವಿಲ್ಸನರ ಅಭಿಪ್ರಾಯವು ಪಾರ್ಲಿಮೆಂಟಿನ ಮೆಂಬರರಿಗೆ ತೀರಾ ಮೆಚ್ಚಿಕೆಯಾಗಿಲ್ಲವಾದ್ದರಿಂದ ಈ ಪಾರ್ಲಿಮೆಂಟಿನವರು ಸಂಧಿಕರಾರನ್ನು ಒಪ್ಪಿಕೊಳ್ಳದಿದ್ದರೆ ಅಮೇರಿಕದ ಮಟ್ಟಿಗಾದರೂ ಈ ಕರಾರಿನ ಪ್ರಯೋಜನವು ಏನೇನೂ ಇಲ್ಲ. ಆ ದಿನ ಮುಂದೆ ಜರ್ಮನಿಯವರು ಕರಾರಿನ ಶರ್ತಗಳನ್ನು ಉಲ್ಲಂಘಿಸಿದರೆ ಜರ್ಮನರ ಮೇಲೆ ಕೈ ಎತ್ತುವುದಕ್ಕೆ ಅಮೇರಿಕದವರು ಕರಾರಿನ ಶರ್ತಗಳ ಮೇರೆಗೆ ಮುಂದೆ ಬಂದಾರು ಎಂಬ ಭರವಸೆ ಇಲ್ಲದಾಗುವದು. ಆಗ ಶರ್ತಗಳನ್ನು ಜಾರಿಗೆ ತರುವುದಕ್ಕೆ ಒತ್ತಾಯ ಪಡಿಸುವ ಜವಾಬ್ದಾರಿ ತೀರಾ ಯುರೋಪದ ಮಿತ್ರಪಕ್ಷದವರ ಮೇಲೆ ಬಿದ್ದಂತಾಗುವುದು.

ಒಳದೇಶ ವರ್ತಮಾನ

ಖಿಲಾಫತ್ ಹರ್ತಾಲ್—ಇದೇ ತಿಂಗಳ ೧೯ನೆ ತಾರೀಕಿಗೆ ಹರತಾಳವನ್ನು ಕೈಕೊಂಡು ಹಿಂದೂ ಮುಸಲ್ಮಾನರು ತಮಗೆ ಈ ಪ್ರಶ್ನೆಯನ್ನು ಕುರಿತು ಇರುವ ಆಸ್ಥೆಯನ್ನು ತೋರ್ಪಡಿಸಬೇಕಾಗಿ ಓಲ್ ಇಂಡಿಯಾ ಖಿಲಾಫತ್ ಪರಿಷತ್ತಿನವರ ಠರಾವು ಇರುವದರಿಂದ ಆ ದಿನ ಮುಸಲ್ಮಾನರೂ ಅವರಿಗೆ ಸಹಾನುಭೂತಿಯನ್ನು ತೋರ್ಪಡಿಸಲಿಕ್ಕಿದ್ದ ಇತರ ಜನಗಳೂ ಹಿಂದೂಸ್ಥಾನದಲ್ಲೆಲ್ಲ ಈ ವ್ರತವನ್ನು ಆಚರಿಸಲಿಕ್ಕಿರುವರು. ಈ ವಿಷಯವಾಗಿ ಮಹಾತ್ಮಗಾಂಧಿಯವರು ಕೊಟ್ಟ ಸೂಚನೆಯಲ್ಲಿ ಜನರು ಯಾವುದೊಂದು ಬಗೆಯ ದೌರ್ಜನ್ಯವನ್ನು ಅತ್ಯಾಚಾರವನ್ನು ಕೈಕೊಳ್ಳಬಾರದೆಂದು ತಿಳಿಸಿರುವರು.

ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಬಿಲ್—ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬರಲಿಕ್ಕಿರುವ ಈ ಬಿಲ್ಲಿನ ಮಸೂದೆಯು ಪ್ರಕಟವಾಗಿದೆ. ಇದರ ಮೇರೆಗೆ ಪ್ರತಿಯೊಂದು ಜಿಲ್ಲೆಗೂ ಒಂದು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲು ಏರ್ಪಟ್ಟು ಸರಕಾರದಿಂದ ಪ್ರಾಥಮಿಕ ಶಿಕ್ಷಣಕ್ಕೆ ವಿನಿಯೋಗಿಸಲ್ಪಡುವ ಹಣದ ವಹಿವಾಟು ಈ ಕೌನ್ಸಿಲಿನವರು ವಹಿಸಬೇಕಾಗಿದೆ. ಇದಕ್ಕೆ ಆಯಾ ಜಿಲ್ಲೆಯ ಕಲೆಕ್ಟರರೇ ತತ್ಕಾಲಕ್ಕೆ ಅಧ್ಯಕ್ಷರಾಗಿದ್ದು, ಆಯಾ ತಾಲೂಕು ಬೋರ್ಡು, ಮ್ಯುನಿಸಿಪಾಲಿಟಿ, ಖಾಸಗಿ ಶಾಲೆಗಳು ಮುಂತಾದವುಗಳ ಪ್ರತಿನಿಧಿಗಳು ಈ ಕೌನ್ಸಿಲಿನ ಮೆಂಬರರಾಗುವರು. ಇದರ ವಿಮರ್ಶೆಯನ್ನು ಮುಂದಿನ ಸಂಚಿಕೆಗಳಲ್ಲಿ ಮಾಡಲಿಕ್ಕಿರುವೆವು.

ಖಿಲಾಫತ್ ಪ್ರಶ್ನೆಯೂ ಶ್ರೀಮಂತ ಆಗಾಖಾನರೂ—ಶ್ರೀಮಂತ ಆಗಾಖಾನರು ಮುಂಬಯಿಗೆ ಬಂದು. ಇತ್ತೀಚೆಗೆ ಅವರಿಗೆ ಸೆಂಟ್ರಲ್ ಖಿಲಾಫತ್ ಕಮಿಟಿಯವರು ಅರ್ಪಿಸಿದ ಸ್ವಾಗತಪತ್ರಕ್ಕೆ ಪ್ರತ್ಯುತ್ತರವಾಗಿ ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದಿಂದ ವಿಲಾಯತಿಗೆ ಹೋಗಿದ್ದ ಅನೇಕ ಮುಸಲ್ಮಾನ ಮುಖಂಡರು ಮುಸಲ್ಮಾನರ ಗೌರವವನ್ನು ಕಾಪಾಡುವ ಉದ್ದೇಶದಿಂದ ಮಾಡಿದ ಪ್ರಯತ್ನಗಳನ್ನು ಕೊಂಡಾಡಿದ್ದಲ್ಲದೆ, ಬಿಕಾನೇರದ ಮಹಾರಾಜರು ಮತ್ತು ಸರ್ ಕೃಷ್ಣಗುಪ್ತರ ಉಪಕಾರಸ್ಮರಣೆ ಮಾಡಿದರು. ನ್ಯಾಯಾಧಾರ ಮೊಂಟೆಗರೂ ಅನೇಕ ಪ್ರಸ್ತುತಿಗಳನ್ನು ಎದುರಿಸಿ ಮುಸಲ್ಮಾನರ ಈ ಗಹನಪ್ರಶ್ನೆಯು ಬಗೆಹರಿದರೆ ಸಾಧಾರಣವಾದ ಸ್ಥಾನಮಾನವನ್ನು ಶ್ರೀಮಂತರು ಸ್ಪಷ್ಟ ಶಬ್ದಗಳಿಂದ ವಿವರಿಸಿದರು. ಈ ಪ್ರಶ್ನೆಯು ಬರೇ ಮುಸಲ್ಮಾನರಿಗೆ ಮಾತ್ರ ಸಂಬಂಧಪಟ್ಟಿಲ್ಲ, ಇದರ ಅನುಲೋಚನವು ಹಿಂದೂಗಳಿಗೂ ಎಂಗ್ಲೊ ಇಂಡಿಯನ್ ಮತ್ತು ಯುರೋಪಿಯನ್ ನಿವಾಸಿಗಳಿಗೂ ಇದ್ದೇ ಇದೆ, ಆದ್ದರಿಂದ ಈ ವಿಷಯದಲ್ಲಿ ತಮ್ಮ ಮತ್ತು ಮಿ। ಮೊಂಟೆಗ್ಯುರವರ ಅಭಿಪ್ರಾಯವನ್ನು ಜಾತಿಭೇದವಿಲ್ಲದೆ ಖಾಸಗಿಯಿಂದ ಕೇಳಿ ಚರ್ಚಿಸುವ ಬಗ್ಗೆ ಹಿಂದೀ ಜನತೆಯ ಮುಖಂಡರ ಒಂದು ಅಧಿವೇಶನವನ್ನು ಮುಂಬಯಿಯಲ್ಲಿ ಬೇಗನೆ ಜರಗಿಸಬೇಕೆಂದು ಶ್ರೀಮಂತ ಆಗಾಖಾನರು ಸೂಚಿಸಿದರು. ತುರ್ಕಿ ಮತ್ತು ಅರಬಿಸ್ಥಾನಗಳೊಳಗೆ ಇನ್ನೂ ಜಗಳಹತ್ತಿ ರಕ್ತಪಾತವಾಗದಂತೆಯೂ ತುರ್ಕಿ ಜನಾಂಗದ ಅಳಿವು ಬಾರದಂತೆಯೂ ಸುಲ್ತಾನರಿಗೆ ಜಜಿರತ್ ಅಲ್ ಅರಬ್ ಪ್ರದೇಶದ ಮೇಲಣ ಅಧಿಕಾರವೂ ಸಂಬಂಧವೂ ಕಳಚಿಹೋಗದಂತೆಯೂ ಪ್ರಯತ್ನಗಳು ನಡೆಯಬೇಕೆಂದೂ ಅವರ ಮಾತಿನ ಅಭಿಪ್ರಾಯವಾಗಿತ್ತು. ಇದಕ್ಕಾಗಿ ಒಂದು ಕಾಯಂ ಕಮಿಟಿಯನ್ನು ಏರ್ಪಡಿಸಬೇಕೆಂದು ಹೇಳಿ ಹಣ ಸಂಗ್ರಹದ ಸೂಚನೆ ತಂದಾಗ ೩॥ ಲಕ್ಷ ರೂಪಾಯಿ ಧನಸಹಾಯ ಅಲ್ಲಿಯೇ ವಾಗ್ದತ್ತವಾಯಿತು.

ಪ್ರಿನ್ಸ್ ಒಫ್ ವೇಲ್ಸರವರ ಆಗಮನ—ರಾಜಕುಮಾರ ಪ್ರಿನ್ಸ್ ಒಫ್ ವೇಲ್ಸರವರು ಇದೇ ವರ್ಷದ ಅಂತ್ಯದಲ್ಲಿ ಹಿಂದೂಸ್ಥಾನವನ್ನು ಸಂದರ್ಶಿಸಲಿಕ್ಕಿರುವುದರಿಂದ ಅಗತ್ಯವಿರುವ ಏರ್ಪಾಡುಗಳನ್ನು ನಿರ್ಣಯಿಸುವದಕ್ಕಾಗಿ ಒಂದು ಕಮಿಟಿಯು ವೈಸರಾಯಿಗಳಿಂದ ನೇಮಕಪಟ್ಟಿರುವುದು. ಗ್ವಾಲಿಯರದ ಮಹಾರಾಜರು, ಬಿಕಾನೇರದ ಮಹಾರಾಜರು, ಪಾಟಿಯಾಲದ ಮಹಾರಾಜರು, ನಾಮಧಾರಕರಾದ ಸುರೇಂದ್ರನಾಥ ಬೆನರ್ಜಿ, ಸರ್ ದಿನಶಾ ವಾಛಾ, ಮೇಜರ ಜನರಲ್ ಸರ್ ಉಮರ್ ಹಯಾತ್ ಖಾನ್ ಟಿವಾನಾ, ನಾಮಧಾರ ಮೇಜರ್ ಜನರಲ್ ಸರ್ ನಿಲ್ಸ್ ಕ್ರುಕಶೆಂಕ್, ಮೇಜರ್ ಜನರಲ್ ರಿಚಾರ್ಡ್ಸನ್, ಬ್ರಿಗೆಡಿಯರ್ ಜನರಲ್ ಎಚ್. ಎ. ಹೊಸ್ಕಿಜ್, ಬ್ರಿಗೆಡಿಯರ್ ಜನರಲ್ ವಾಗ್ಸ್ಟಾಫ್, ನಾಮಧಾರ ಬೆರನ್ ಮಿ। ಎಚ್ ಟಿ ಕೀಲಿಂಗ್, ಮಿ। ಜೆ ಇ ಜಿಕ್ಕರ್ಸ್, ಲೆಫ್ಟಿನೆಂಟ್ ಕರ್ನಲ್ ವಾರ್ಡೆ, ಮೇಜರ್ ಜೆ ಮೆಕೆಂಜಿ, ಬ್ರಿಗೆಡಿಯರ್ ಜನರಲ್ ಕೆ ವಿಗ್ರಾಮ್, ಇವರ ಮೆಂಬರರಾಗಿಯೂ ಮಿ। ಮೊಂಟ್ ಮೊರೆನ್ಸಿಯವರು ಸೆಕ್ರೆಟರಿಯಾಗಿಯೂ ಈ ಕಮಿಟಿಯು ರಚಿತವಾಗಿರವುದು.

ಕಲ್ಕತ್ತೆಯಲ್ಲಿ ಮನೆಗಳ ಬಾಡಿಗೆ—ಇಲ್ಲಿ ಮನೆಗಳ ಬಾಡಿಗೆ ವಿಶೇಷ ಏರಿರುವದರಿಂದ ನಿವಾಸಿಕರಿಗೆ ಆಗುವ ತೊಂದರೆ ಅಡಚಣೆಗಳನ್ನು ಚರ್ಚಿಸುವದಕ್ಕಾಗಿ ನಿವಾಸಿಕರ ಒಂದು ದೊಡ್ಡ ಸಭೆಯು ಇದೇ ೧೩ನೆ ತಾರೀಕಿಗೆ ಕಲ್ಕತ್ತೆಯಲ್ಲಿ ಜರಗಿತು. ಯುರೋಪಿಯನ್ ಎಂಗ್ಲೊ ಇಂಡಿಯನ್ ಹಿಂದೂ ಮುಸಲ್ಮಾನ ಎಂಬ ಭೇದವಿಲ್ಲದೆ ಎಲ್ಲರೂ ಬಂದು ಸೇರಿದ್ದರು. ಮನೆಬಾಡಿಗೆಗೆ ಮಿತಿಕಟ್ಟುವದಕ್ಕೆ ಸರಕಾರದವರು ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ತರಲಿಕ್ಕಿರುವ ಬಿಲನ್ನು ಅನುಮೋದಿಸಿ ಈ ಮಹಾಜನ ಸಭೆಯು ಠರಾವುಮಾಡಿದ್ದಲ್ಲದೆ ಒಂದು ವೇಳೆ ನ್ಯಾಯ ವಿಧಾಯಕ ಸಭೆಯಲ್ಲಿ ಈ ಬಿಲ ಬಿದ್ದುಹೋದರೆ ಜನರು ಬಾಡಿಗೆ ಕೊಡದೆ ಮುಷ್ಕರ ಹಿಡಿಯಬೇಕೆಂದೂ ಕಟ್ಟೋಣಗಳ ಸಹಕಾರ ಸಂಘಗಳ ಮೂಲಕ ಜನಗಳು ತಮಗೆ ಬೇಕಾದ ಕಟ್ಟೋಣಗಳನ್ನು ಒದಗಿಸಿಕೊಳ್ಳಲು ಯತ್ನಿಸಬೇಕೆಂದೂ ಠರಾವುಗಳು ಆದವು.

ಮದ್ರಾಸು ಪೋಲೀಸಿನವರ ಯೂನಿಯನ್—ಇದೇ ೧೩ನೆ ತಾರೀಕಿಗೆ ಮದ್ರಾಸು ಶಹರಿನ ಪೋಲೀಸಿನವರ ಒಂದು ಯೂನಿಯನ್ ಹಿಂದೂ ಪತ್ರಿಕಾಕರ್ತ ಮಿ। ರಾ। ಕಸ್ತೂರಿ ರಂಗ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ ಕೊನ್‌ಸ್ಟೇಬಲರ ತಿಂಗಳಿಗೆ ೪ ಆಣೆ ಮೇರೆಗೂ ಕೊನ್‌ಸ್ಟೇಬಲರ ತಿಂಗಳಿಗೆ ೩ ಆಣೆ ಮೇರೆಗೂ ವಂತಿಗೆ ಕೊಡಬೇಕೆಂತಲೂ ಈ ಯೂನಿಯನ್ ಮದ್ರಾಸ ಶಹರಿನ ಪೋಲೀಸ್ ನೌಕರರ ಶ್ರೇಯೋಭಿವೃದ್ಧಿಗೋಸ್ಕರ ಏರ್ಪಡಬೇಕೆಂತಲೂ ಅವರ ಅಹವಾಲೆಗಳನ್ನು ಆಗಾಗ ಮೇಲ್ ಅಧಿಕಾರಿಗೆ ಅರ್ಪಿಸುವುದೂ ತಮ್ಮ ಪೋಲೀಸ್ ಕಾರ್ಯನಿರ್ವಾಹದಲ್ಲಿ ಉತ್ಸಾಹವನ್ನು ಹುಟ್ಟಿಸುವುದು ಇದೇ ಈ ಯೂನಿಯನ್ನಿನ ಮುಖ್ಯ ಉದ್ದೇಶಗಳು. ಮಿ। ಕಸ್ತೂರಿ ರಂಗ ಅಯ್ಯಂಗಾರರು ೧೦೦ ರೂಪಾಯಿ ಈ ಯೂನಿಯನ್ನಿಗೆ ಸಹಾಯಧನವನ್ನು ಇತ್ತರು.

ಪೋರ್ಟ ಒಸ್ಟ್ ಲೇಬರ್ ಯೂನಿಯನ್—ಮದ್ರಾಸ ಬಂದರಿನ ವರ್ಕಶೋಪ್ ಮತ್ತು ಇತರ ಠಾವುಗಳಲ್ಲಿ ಕೆಲಸಮಾಡುವ ಮಜೂರ ಜನರ ಒಂದು ಯೂನಿಯನ್ ಸಹ ಸ್ಥಾಪಿಸಲ್ಪಟ್ಟಿದೆ.

ಸೌತ್ ಇಂಡಿಯನ್ ಮೆಡಿಕಲ್ ಯೂನಿಯನ್—ಮದ್ರಾಸು ಶಹರಿನ ಹಲವು ಎಲೊಪೆತಿಕ್ ಡಾಕ್ಟರರ ಸಭೆ ಸೇರಿ ಈ ಹೆಸರಿನ ಒಂದು ಯೂನಿಯನ್ ಸ್ಥಾಪನೆಮಾಡಬೇಕೆಂತಲೂ ಶೀಘ್ರದಲ್ಲಿಯೇ ವೈದ್ಯರ ಅನ್ನುಕೂಲಕ್ಕಾಗಿ ಒಂದು ಆಸ್ಪತ್ರೆಯನ್ನು ಏರ್ಪಡಿಸಬೇಕೆಂತಲೂ ಠರಾಯಿಸಿದರು. ಈ ಯೂನಿಯನ್ನಿಗೆ ಡಾ। ಸಿ ಬಿ ರಾಮರಾಯರು ಅಧ್ಯಕ್ಷರು. ರಾವ್ ಸಾಹೆಬ ಯು ರಾಮರಾಯರು ಕಮಿಟಿಯ ಮೆಂಬರರಲ್ಲಿ ಒಬ್ಬರಾಗಿರುವರು.

ಮಿಟನ್ ಸ್ಕಿ ಮತ್ತು ರಾಯಲ್ ವೆಲ್ಫೇರ್ ವಂತಿಗೆ—ಲೇಡಿ ಚೆಮ್ಸ್‌ಫೋರ್ಡರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಸ್ತ್ರೀಯರ ಮತ್ತು ಮಕ್ಕಳ ಆರೈಕೆಯ ಸಂಸ್ಥೆಗೋಸ್ಕರ ಈ ಕೆಳಗಿನ ಚಂದಾ ವಾಗ್ದತ್ತವಾಗಿದೆ.

ಭೋಪಾಲದ ಬೇಗಂ ಸಾಹೇಬಾ	ರೂಪಾಯಿ	೫೦,೦೦೦
ತಿರುವಾಂಕೂರಿನ ಮಹಾರಾಜರ		೩೦,೦೦೦
ಮೈಸೂರಿನ ಮಹಾರಾಜರು		೧೫,೦೦೦
ಬಿಕಾನೇರದ ಮಹಾರಾಜರ		೧೦,೫೦೦
ಕೋಟಾದ ಮಹಾರಾಜರು		೧೦,೦೦೦
ಸರ್ ಸ್ವರೂಪ ಚಂದ್ ಹುಕುಂ ಚಂದ್ (ಇಂದೋರ್)		೫,೦೦೦
ದರ್ಭಾಂಗದ ಮಹಾರಾಜರು		೫,೦೦೦
ಬೂಂದಿ ಮಹಾರಾಜರು		೫,೦೦೦
ಮುರಶಿದಾಬಾದದ ನವಾಬರ		೫,೦೦೦
ಕಚ್ಛ ಮಹಾರಾಜರ		೨೫,೦೦೦

ಜಿಂದ್ ಮಹಾರಾಜರ ಔದಾರ್ಯ—ಯುದ್ಧಕಾಲದಲ್ಲಿ ಜಿಂದ್ ಸರಕಾರದವರು ಬ್ರಿಟಿಷರ ಬಗೆ ಖರ್ಚುಮಾಡಿದ ರೂ ೪,೮೯,೬೧೦-೮-೫ ಬ್ರಿಟಿಷ ಸರಕಾರದವರಿಗೆ ತಾನು ಉಚಿತವಾಗಿ ಬಿಟ್ಟಿರುವೆನೆಂದು ಜಿಂದ್ ಸಂಸ್ಥಾನದ ಮಹಾರಾಜರು ತಿಳಿಸಿದ್ದಾರೆ.

ಟಪ್ಪಾಲುಪೇದೆಗಳ ಸಂಬಳ—ತಮ್ಮ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಮದ್ರಾಸು ಟಪ್ಪಾಲು ಪೇದೆಗಳ ಯೂನಿಯನ್ನಿನವರು ಅಲ್ಲಿಯ ಪ್ರೆಸಿಡೆನ್ಸಿ ಪೋಸ್ಟ್‌ಮಾಸ್ತರರಿಗೆ ಮನವಿ ಬರೆಕೊಂಡಿರುತ್ತಾರೆ. ಸರಾಸರಿ ತಮ್ಮ ಕುಟುಂಬ ಸಂರಕ್ಷಣೆಯ ಖರ್ಚು ೫ ಜನರಿರುವ ಒಂದು ಕುಟುಂಬಕ್ಕೆ ತಿಂಗಳಿಗೆ ರೂ ೪೯—೧೩—೩ ತಗಲುತ್ತದೆಂದು ಅಂದಾಜು ಪಟ್ಟಿಯನ್ನು ಕಾಣಿಸಿ ಈ ಕೆಳಗಿನ ಸಲಹೆಗಳನ್ನು ಅವರು ಕೇಳುತ್ತಾರೆ—(೧) ರೂಪಾಯಿ ೨೫ರಿಂದ ಆರಂಭಿಸಿ ೨೦ ವರ್ಷಗಳಲ್ಲಿ ರೂಪಾಯಿ ೫೫ಕ್ಕೆ ನಿಲ್ಲುವಂತೆ ವರ್ಷಂಪ್ರತಿ ೧॥ ರೂಪಾಯಿ ಮೇರೆಗೆ ಸಂಬಳ ಏರಿಸಬೇಕು. ಈ ಬಡ್ತಿಯನ್ನು ಈಗ ಹಾಲಿ ಇದ್ದ ಪೇದೆಗಳಿಗೆ ಅವರ ಸರ್ವೀಸಿನ ಆಧಾರದಿಂದ ಈಗಲೆ ಕೊಡಿಸಬೇಕು. (೨) ಮನೆಗಳ ಎಲೊವೆನ್ಸ್ ಆಗಿ ಅವರವರ ಸಂಬಳದ ಸೇಕಡಾ ೨೦ರಷ್ಟು ಪ್ರತಿಯೊಬ್ಬ ಪೇದೆಗೂ ಕೊಡಿಸಬೇಕು. (೩) ಈಗ ದಿನಕ್ಕೆ ೨೦ ಮೈಲುಗಳಿಗಿಂತ ಈ ಪೇದೆಗಳು ಹೆಚ್ಚಾಗಿ ಸುತ್ತಾಡಬೇಕಾದ್ದರಿಂದ ಹೆಚ್ಚಿಗೆ ಜನರನ್ನು ಇನ್ನೂ ನೇಮಿಸಬೇಕು. (೪) ಸಂದಿಮೇರೆಗೆ ಅವರು ಟಪ್ಪಾಲು ಆಫೀಸಿನಲ್ಲಿ ಮಲಗಬೇಕು ಎಂಬ ಕ್ರಮವನ್ನು ತೆಗೆದುಹಾಕಬೇಕು. (೫) ಬಟವಾಡೆ ಸರ್ತಿಗಳು ಹೆಚ್ಚಿದರೆ ಅಂಥಾ ದಿನದ ಪ್ರತಿ ಹೆಚ್ಚಿನ ಸರ್ತಿಗೆ ೮ ಆಣೆ ಮೇರೆಗೆ ಹೆಚ್ಚಿಗೆ ಹಣಕೊಡಿಸಬೇಕು.

ಖಿಲಾಫತ್ ಪ್ರಶ್ನೆಯೂ ಕಲ್ಕತ್ತೆಯ ಮುಸಲ್ಮಾನ ಸಾಹುಕಾರರೂ—ಈ ಪ್ರಶ್ನೆಯು ಇತ್ಯರ್ಥವು ಸಮರ್ಪಕವಾಗಿ ಆಗುವ ವರೆಗೆ ಬ್ರಿಟಿಷ ಕೈಗಾರಿಕೆಯ ಸಾಮಾನವನ್ನು ತರಿಸುವುದನ್ನು ಮನ್ನಾ ಇರಿಸಿದ್ದೇವೆಂದು ಕಲ್ಕತ್ತೆಯ ಮುಸಲ್ಮಾನ ವರ್ತಕರು ತಿಳಿಸಿದ್ದಾರೆ.

ಮದ್ರಾಸಿನಿಂದ ಇಂಡಿಯಾ ಸೆಕ್ರೆಟರಿಗಳಿಗೆ ತಂತಿ—ಯುರೋಪದಲ್ಲಿಯೂ ಏಶ್ಯದಲ್ಲಿಯೂ ತುರ್ಕಿಯ ವಸಾಹತುಗಳ ಸ್ವಾತಂತ್ರ್ಯವನ್ನು ಸುರಕ್ಷಿತಪಡಿಸಿ, ಅರೇಬಿಯಾ ಪೆಲೆಸ್ತಿನ, ಸಾಯ್ರಿಯಾ ಮೆಸೊಪೊಟೆಮಿಯ ಇವುಗಳ ಮೇಲೆ ತುರ್ಕಿಯ ಸುಲ್ತಾನರ ಅಧಿಕಾರವನ್ನು ಕಾಪಾಡಿ, ಸುಲ್ತಾನರಿಗೆ ಮುಸಲ್ಮಾನರ ಪರಿಶುದ್ಧ ಸ್ಥಳಗಳ ಮೇಲಣ ಅಧಿಕಾರವನ್ನು ಇರಗೊಡಿಸದಿದ್ದರೆ ಅಂಥಾ ಶರ್ತಗಳು ಹಿಂದೂಸ್ಥಾನದ ಜನರಿಗೆ ಸಮ್ಮತಿಯಾಗಲಾರವು ಎಂದು ನನ್ನ ಅಧ್ಯಕ್ಷತೆಯಲ್ಲಿ ಇಲ್ಲಿ ಜರಗಿದ ಮಹಾಸಭೆಯವರು ಅಭಿಪ್ರಾಯ ಪಡುತ್ತಾರೆ.

ಕೆಂಟರಬರಿ ಮತ್ತು ಯೋರ್ಕ ಪಟ್ಟಣಗಳ ಆರ್ಚ ಬಿಶಪರು ಕ್ರೈಸ್ತರಿಗೆ ಮುಸಲ್ಮಾನರ ವಿರೋಧವಾಗಿ ಹುರಿದುಂಬಿಸುತ್ತಿರುವುದು ಬಹಳ ವಿಷಾದಕ್ಕೂ ಕ್ರೋಧಕ್ಕೂ ಕಾರಣವಾಗಿದೆ. ಮುಸಲ್ಮಾನರ ಮನಸ್ಸು ನೋಯಿಸುವಂಥ ರೀತಿಯಲ್ಲಿ ಲೋರ್ಡ ರೊಬರ್ಟ ಸಿಸಿಲ್, ಲೋರ್ಡ ಬ್ರಾಯ್ಸ್, ಲೋರ್ಡ ಕರ್ಝನ ಮುಂತಾದ ಪ್ರಭೃತಿಗಳು ಸಂಧಿಕರಾರಿನ ಶರ್ತಗಳನ್ನು ಮಾರ್ಪಡಿಸುವುದಕ್ಕೆ ತೋರಿಸುವ ಸಾಹಸವನ್ನು ಕುರಿತು ಈ ಮಹಾಸಭೆಯವರು ತುಂಬಾ ಆಕ್ಷೇಪಿಸುತ್ತಾರೆ.

ಮುಸಲ್ಮಾನ ಜನಾಂಗದ ವಿರೋಧವಾಗಿ ಈ ಮಹತ್ ಪ್ರಶ್ನೆಯನ್ನು ಇತ್ಯರ್ಥಮಾಡಿದ್ದಲ್ಲಿ ಸಾಮ್ರಾಜ್ಯದ ಅಷ್ಟೇಕೆ ಲೋಕದ ಶಾಂತಿಗೆ ಭಂಗವುಂಟಾದೀತು ಎಂಬ ಅಭಿಪ್ರಾಯವನ್ನು ಅಧ್ಯಕ್ಷರಾಗಿದ್ದ ನಾಮಧಾರ ಯಾಕೂಬ ಹಸನರವರು ಇಂಡಿಯಾ ಸೆಕ್ರೆಟರಿಗಳಿಗೆ ತಂತಿಮೂಲಕ ತಿಳಿಸಿದ್ದಾರೆ.

ನಿರೋಡಿ ಭವಾನಿಶಂಕರರಾವ್ ಬಿ. ಎ.—ಇವರು ಮದ್ರಾಸು ಗವರ್ನ್‌ಮೆಂಟ ಟ್ರನ್ಸ್‌ಲೇಟರ ಆಫೀಸಿನಲ್ಲಿ ೧೫೦ ರೂಪಾಯಿ ಸಂಬಳದ ಮೇಲೆ ಇದ್ದರು. ಇವರು ಉದ್ಯಾನ ಶಾಸ್ತ್ರಾಭ್ಯಾಸಂಗ ಮಾಡುತ್ತಿದ್ದು ಒಂದೆರಡು ಒಳ್ಳೆ ಗ್ರಂಥಗಳನ್ನು ಬರೆದಿರುತ್ತಾರೆ. ಈಗ ಕಾಕಿನಾಡದ ಸತ್ಯಲಿಂಗ ನಾಯ್ಕರ್ ಟ್ರಸ್ಟಿಯವರು (ಈ ಸಂಸ್ಥೆಯ ಮೊತ್ತೇಸರರು) ಮಿ। ಭವಾನಿರಾಯರಿಗೆ ಇಂಗ್ಲೆಂಡು, ಅಮೇರಿಕಾ ಅಥವಾ ಜಪಾನದಲ್ಲಿ ಕೃಷಿಶಾಸ್ತ್ರವನ್ನು ಕಲಿಯಲಿಕ್ಕೆ ವೇತನವನ್ನು ಕೊಟ್ಟಿರುವರು. ಇವರು ಬೇಗನೇ ಅಮೇರಿಕಕ್ಕೆ ಪ್ರಯಾಣ ಬೆಳಸಲಿಕ್ಕಿರುವರು.

ಮಿ। ಅರುಂಡೇಲರ ವಿವಾಹ—ಕಳೆದ ಸಂಚಿಕೆಯಲ್ಲಿ ಹೇಳಿದ ಹಾಗೆ ಮಿ। ಅರುಂಡೇಲರು ಈ ವಿವಾಹದ ಹಂಚಿಕೆಯನ್ನು ರದ್ದುಪಡಿಸಿಲ್ಲ, ಮುಂದರಿಸಿದ್ದಾರೆ ಎಂಬದಾಗಿ ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿದವರ.

ಮದ್ರಾಸಿ ಮನೆಕಟ್ಟಡಗಳ ಸಹಕಾರಿ ಸಂಘ—ಮದ್ರಾಸಿನ ಬಡಜನ ಮತ್ತು ಸಾಧಾರಣದವರ ಬಗೆ ಮನೆಮಾರು ಕಟ್ಟಿಸಿಕೊಡುವದಕ್ಕೆ ಒಂದು ಸಂಘವು ಮದ್ರಾಸಿನಲ್ಲಿ ಏರ್ಪಡಲಿಕ್ಕಿದೆ. ಅದರ ಬಂಡವಾಳ ತತ್ಕಾಲಕ್ಕೆ ಪಾಲಿಗೆ ೧೦ ರೂಪಾಯಿಯ ೧೫,೦೦೦ ಪಾಲುಗಳು ೧,೫೦,೦೦೦. ಇದರಲ್ಲಿ ... ತರಗತಿಗಳಿರುವವು. ... ಕ್ಲಾಸಿನ ಮೆಂಬರರು ಈ ಮನೆಗಳಲ್ಲಿ ವಾಸಮಾಡುವವರು ... ಸಂಘದ ಕೆಲಸ ಅವರೇ ನಡಿಸತಕ್ಕವರು. ಇವರಿಗೆ ಸೇಕಡಾ ... ಬಡ್ಡಿ ಸಿಗಲಾರದು. B ಕ್ಲಾಸಿನವರು ಈ ಮನೆಗಳಲ್ಲಿ ವಾಸಮಾಡತಕ್ಕವರು. C ಕ್ಲಾಸಿನವರು ಬೇರೆ ಕೆಲಸದವರು ... ಕ್ಲಾಸಿನವರಿಗೋಸ್ಕರ ಮೇಲಿನ ಬಂಡವಾಳದಲ್ಲಿ ೧೦,೦೦೦ ಪಾಲುಗಳನ್ನು ವಿಂಗಡಿಸಿದ್ದಾರೆ. ... ಪಾಲುಗಳನ್ನು B ಮತ್ತು C ಕ್ಲಾಸಿನವರಿಗೆ ಹಂಚಲಾಗುವುದು. B ಮತ್ತು C ಕ್ಲಾಸಿನ ಮೆಂಬರರಿಗೆ ಕೊಡುವ ... (ಕಟ್ಟೋಣದ ಸಾಲಗಳು) ಸೇಕಡಾ ೬ರಂತೆ ಬಡ್ಡಿ. ಸಂಘದಲ್ಲಿ ... ಸೇಕಡಾ ... ಬಡ್ಡಿಯ ದರವಿದೆ. ಜಸ್ಟಿಸ್ ಟಿ ವಿ ಶೇಷಗಿರಿ ಅಯ್ಯರ್ ಮತ್ತು ಮದ್ರಾಸಿನ ಸರ್ವೆಂಟ್ ಒಫ್ ಇಂಡಿಯಾ ಸೊಸೈಟಿಯ ಮೆಂಬರರಾದ ರಾ। ವಿ ವೆಂಕಟಸುಬ್ಬಯ್ಯನವರು ಈ ಮಹತ್ಕಾರ್ಯದಲ್ಲಿ ಪ್ರವರ್ತಿಸಿರುವರು.

ಮದ್ರಾಸ ಕೌನ್ಸಿಲಿನ ಹೊಸ ಮಸೂದೆಗಳು—ಸುಧಾರಣಾ ಆಕ್ಟಿನ ಮೇರೆಗೆ ಚುನಾಯಿತರಾದ ಕೌನ್ಸಿಲರ ಜನರಿಗೆ ಬರುವ ವರೆಗೆ ಈ ಕೆಳಗಿನ ಬಿಲ್‌ಗಳು ಈಗಿನ ಕೌನ್ಸಿಲಿನ ಮುಂದೆ ಚರ್ಚೆಗೆ ಇಡೋಣಾಗುವುವು ಎಂದು ಸರಕಾರದ ಕಡೆಯಿಂದ ಉತ್ತರ ಸಿಕ್ಕಿದೆ. (೧) ಮದ್ರಾಸ್ ಟವನ್ ಪ್ಲೇನಿಂಗ್ ಬಿಲ್ (೨) ಮದ್ರಾಸು ಪ್ರಾಥಮಿಕ ಶಿಕ್ಷಣದ ಬಿಲ್ (೩) ಮದ್ರಾಸು ಲೋಕಲ್‌ಬೋರ್ಡುಗಳ ಸುಧಾರಣಾ ಬಿಲ್, (೪) ಮದ್ರಾಸ ಗ್ರಾಮಪಂಚಾಯತುಗಳ ಬಿಲ್ (೫) ಮಾಲಗೇಜ್ ಕಾನೂನು (೬) ಮದ್ರಾಸು ಸರ್ವೇಕಲ್ಲುಗಳ ಮತ್ತು ಗಡಿಗಳ ಬಿಲ್ ಇವು ಮುಖ್ಯವಾದವು.

ಮದ್ರಾಸಿನ ನ್ಯಾಯವಿಧಾಯಕ ಸಭೆ—ಇದೇ ೧೦ನೆ ತಾರೀಕಿನ ಅಧಿವೇಶನದಲ್ಲಿ ನಡೆದ ಪ್ರಶ್ನೋತ್ತರಗಳ ಮೂಲಕ ಈ ಕೆಳಗಿನ ಸಮಾಚಾರವು ಗೊತ್ತಾಗುತ್ತದೆ. ಪೋಲಿಸ್ ಸಬ್ ಇನ್ಸ್‌ಪೆಕ್ಟರಗಳಿಗೆ ಬಾಡಿಗೆ ಇಲ್ಲದ ಮನೆಗಳನ್ನು ಕೊಡಬೇಕೆಂಬ ನಿಬಂಧನೆಯಿದ್ದರೂ ಮನೆಗಳೇ ಸರಿಯಾಗಿ ಸಿಗದ ಎಡೆಗಳಲ್ಲಿ ಅವರಿಗೆ ಸರಕಾರದವರು ಮನೆ ಕಟ್ಟಿಸಿ ಕೊಟ್ಟಿದ್ದಾರೆ. ಅಗತ್ಯವಿದ್ದಲ್ಲಿ ಅವರಿಗೆ ಮತ್ತಿನ ಮನೆಗಳನ್ನು ಮಾಡಿಸಿಕೊಡುವ ಏರ್ಪಾಡು ನಡೆಯುತ್ತಿದೆ ಎಂದು ತಿಳಿದುಬರುತ್ತದೆ. ಗ್ರಾಮ ಉದ್ಯೋಗಸ್ಥರ ಕಾನೂನು ತಿದ್ದಿಕೆ ಮಾಡುವ ವಿಚಾರವು ಸರಿಯಾಗಿ ಸಿದ್ಧವಾದರೂ ಅದಕ್ಕೆ ಸಂಬಂಧಪಡುವ ಬಿಲ್ಲು ಈ ವರ್ಷ ಚರ್ಚೆಗೆ ಬರಲಾರದು ಎಂದು ತಿಳಿಯುತ್ತದೆ. ಸೆಕೆಂಡರಿ ಶಾಲಾಮಕ್ಕಳ ಆರೋಗ್ಯಪರೀಕ್ಷೆಗೋಸ್ಕರ ನಡೆದ ಏರ್ಪಾಡು ಸಮಾಧಾನಕರವಾಗಿ ಕಂಡುಬಂದ ಕಾರಣ ಅಂಥಾ ಆರೋಗ್ಯ ವಿಚಾರಕ್ಕೆ ಆಯಾ ಶಾಲೆಗೆ ತಗಲುವ ಖರ್ಚಿನ ಬಗ್ಗೆ ಸರಕಾರದವರು ಗ್ರಾಂಟು ಕೊಡಲಿಕ್ಕೆ ನಿಶ್ಚಯಿಸಿದ್ದಾರೆ. ಗವರ್ನಮೆಂಟು ಪೆನ್ಶನುದಾರರಿಗೆ ಟಪಾಲು ದ್ವಾರಾ ಪೆನ್ಶನ್ ಹಣ ರವಾನೆಮಾಡುವ ವಿಚಾರವು ಸರಕಾರದವರ ಮನಸ್ಸಿಗೆ ಬಂದಿದ್ದು ಆ ವಿಷಯದಲ್ಲಿ ಟಪಾಲು ಇಲಾಖೆಯವರ ಅಭಿಪ್ರಾಯ ಕೇಳಿದ್ದಾರಂತೆ. ವಿದ್ಯಾ ಇಲಾಖೆಯಲ್ಲಿ ಇಂಡಿಯನ್ ಮತ್ತು ಪ್ರೊವಿನ್‌ಶಲ್ ಸರ್ವಿಸಿನವರ ಬತ್ತಿಗಳ ಬಗ್ಗೆ ಇಂಡಿಯಾ ಸರಕಾರದ ಮತ್ತು ಸ್ಟೇಟ ಸೆಕ್ರೆಟರಿಗಳ ಹುಕುಂ ಬಂದಿದೆಯಂತೆ. ಸಬೋರ್ಡಿನೇಟ ಸರ್ವಿಸಿನವರು 'ಸೆಲರಿ ಕಮಿಟಿ'ಯವರ ರಿಪೋರ್ಟನ್ನು ಹಾರೈಸಿ ಜಾತಕಪಕ್ಷಿಗಳಂತೆ ಧ್ಯಾನಮಾಡುತ್ತಿರಬೇಕಾಗಿದೆ. ಈ ಸೆಲರಿಕಮಿಟಿಯವರ ಸೂಚನೆಗಳನ್ನು ಅನುಸರಿಸಿ ಲೋಕಲ್‌ಬೋರ್ಡುಗಳು ಸಂಬಳ ಸುಧಾರಣೆ ಮಾಡಬೇಕಾಗಿದೆ ಎಂದು ತಿಳಿಯುತ್ತದೆ.

[illegible]

ಸ್ವದೇಶಾಭಿಮಾನಿ.

ಶಕ ೧೮೫೧ ಫಾಲ್ಗುಣ ಬ॥ ೧೪ ಶುಕ್ರವಾರ.

ಸ್ಫುಟ ವಿಚಾರಗಳು.

೧. ಕಳೆದ ಶನಿವಾರ ಇಲ್ಲಿಯ ಗವರ್ನಮೆಂಟ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಾರ್ಷಿಕ ಮಹೋತ್ಸವವು ಶ್ಲಾಘ್ಯವಾದ ರೀತಿಯಲ್ಲಿ ನಡೆಯಿತು. ಟ್ರೈನಿಂಗ್ ಶಾಲೆಯಲ್ಲಿ ದೊಡ್ಡ ಪ್ರಮಾಣದಿಂದ ವರ್ಧಂತಿ ಉತ್ಸವವೂ ಈ ವರ್ಷವೇ ಪ್ರಾರಂಭವಾದ್ದಾದರೂ ಉತ್ಸವ ಕಾಲದಲ್ಲಿ ನೆರೆತ, ಪ್ರಮುಖ ನಾಗರಿಕರ ಸಂಖ್ಯೆ ಹಾಗು ಉತ್ಸವದ ಅಂಗಭೂತವಾದ ಬೇರೆ ಬೇರೆ ಕಾರ್ಯಗಳು ಇವುಗಳನ್ನು ನೋಡುವಾಗ ಟ್ರೈನಿಂಗ್ ಶಾಲೆಯ ಅಧ್ಯಾಪಕವರ್ಗದವರೂ—ವಿಶೇಷತಃ ಮುಖ್ಯ ಉಪಾಧ್ಯಾಯರಾದ ಮ| ರಾ| ರಾ| ಪ. ಮಂಗೇಶರಾವ, ಬಿ. ಎ. ಎಲ್. ಟಿ. ಯವರು ಪಟ್ಟ ಪರಿಶ್ರಮವು ಸಾರ್ಥಕವಾಯಿತೆಂದು ಹೇಳಬೇಕಾಗುತ್ತದೆ. ಮ. ರಾ. ಪ. ಮಂಗೇಶರಾಯರು ಸ್ವತಃ ಮಾರ್ಮಿಕ ವಿದ್ವಾಂಸರೂ, ಪ್ರಾಸಾದಿಕ ಕವಿಗಳೂ ಆಗಿದ್ದು ಇದು ವರೆಗೆ ತಮ್ಮ ಆಯುಷ್ಯಾಲವನ್ನು ವಿದ್ಯಾದಾನದಲ್ಲಿಯೆ ಕಳೆದುದ್ದರಿಂದ ಅವರು ದೂರ ದೂರದ ಹಳ್ಳಿಗಳಿಂದ ಬಂದಿರುವ ಬೆಳೆದ ಯುವಕರಿಂದ ರಂಗಭೂಮಿಯ ಮೇಲಿನ ಮಾರ್ಮಿಕವಾದ ಅಭಿನಯದ ಕೆಲಸವನ್ನು ಮಾಡಿಸಿ ತೋರಿಸಿದ್ದಾಗಲಿ ಪಾಣಿಪತದ ಮೂರನೆಯ ಯುದ್ಧಕ್ಕೆ ಐತಿಹಾಸಿಕ ಪ್ರಸಂಗಕ್ಕೆ—ದಕ್ಷಿಣಕನ್ನಡದಲ್ಲಿ ಲೋಕಪ್ರಿಯವಾದ ತಾಳಮದ್ದಳೆಯ ಸ್ವರೂಪವನ್ನು ಕೊಟ್ಟು ಆ ಮೂಲಕ ಐತಿಹಾಸಿಕ ಸ್ಮೃತಿಯನ್ನು ಜಾಗರಿಸಿದ್ದಾಗಲಿ ಸ್ವಾಭಾವಿಕವಾಗಿದ್ದರೂ ಅವು ಪ್ರೇಕ್ಷಕರ ಆನಂದವೃತ್ತಿಯನ್ನು ಉಕ್ಕಿಸಲಿಕ್ಕೂ, ಧನ್ಯವಾದಕ್ಕೂ ಪಾತ್ರವಾಗಿದ್ದವು. ತಾಳಮದ್ದಳೆಯಲ್ಲಿ ಇದು ವರೆಗೆ ಬರಿ ಪೌರಾಣಿಕ ಕಥೆಗಳು ಸಮಾವಿಷ್ಟವಾಗುತಿದ್ದವು; ಮಾತ್ರವಲ್ಲ, ಈ ಕಾರಣದಿಂದ ಅವಕ್ಕೆ 'ದಶಾವತಾರ'ದ ಪ್ರಸಂಗವೆಂದು ಅನ್ವರ್ಥವಾದ ಹೆಸರು ಬಂದಿರುವುದು. ಈ ಪ್ರದೇಶದಲ್ಲಿ ಪಂಡಿತ ಪಾಮರರಿಗೆ ಪ್ರಿಯವಾಗಿರುವ ಈ ತಾಳಮದ್ದಳೆಯ ಸಂಸ್ಥೆಯಲ್ಲಿ ಐತಿಹಾಸಿಕ ಪ್ರಸಂಗವನ್ನು ಸೇರಿಸಿದ್ದರಿಂದ ಮತ್ತು ಇದೇ ಮೇರೆಗೆ ಹಲವು ಸಾಮಾಜಿಕ ವಿಷಯಗಳನ್ನು ಸೇರಿಸುವದರಿಂದ ತಾಳಮದ್ದಳೆಯ ಜೀರ್ಣವಾದ ಸಂಸ್ಥೆಯಲ್ಲಿ ಹೊಸ ಜೀವನವು ಬಂದು ಅದು ಲೋಕ ಶಿಕ್ಷಣದ ಒಂದು ಉತ್ತಮವಾದ ಸಂಸ್ಥೆಯಾದೀತೆಂಬುದಕ್ಕೆ ಸಂದೇಹವಿಲ್ಲ— ಮತ್ತು ಈ ಕಾರಣದಿಂದಲೆ ನಾವು ಶ್ರೀಯುತ ಮಂಗೇಶರಾಯರನ್ನು ಈ ಬಗ್ಗೆ ಅಭಿನಂದಿಸುವೆವು.

೨. ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಮಹೋತ್ಸವದಲ್ಲಿ ಶ್ರೀಯುತ ಪ. ಮಂಗೇಶರಾಯರು ಮಾಡಿದ ಸ್ವಾಗತಪರ ಭಾಷಣದಲ್ಲಿ ಈ ಜಿಲ್ಲೆಯೊಳಗಿನ ಪ್ರಾಥಮಿಕ ಶಿಕ್ಷಣದ ಅವಸ್ಥೆಯನ್ನು ಕುರಿತು ಅವರು ಯಾವ ಮಾಹಿತಿಯನ್ನು ಕೊಟ್ಟಿರುವರೊ ಅದನ್ನು ಪ್ರಾಥಮಿಕ ಶಿಕ್ಷಣಾಭಿಮಾನಿಗಳು ಅಗತ್ಯವಾಗಿ ಮನನಿಸುವುದು ಉಚಿತವಾಗಿದೆ. ನಮ್ಮ ಜಿಲ್ಲೆಯಲ್ಲಿ ಪ್ರಕೃತ ೫೮೩ ಪ್ರಾಥಮಿಕ ಶಾಲೆಗಳಿದ್ದು ಅವುಗಳಲ್ಲಿ ೧ ಸರಕಾರಿ (!);೯ ಮುನ್ಸಿಪಾಲಿಟಿಯವು ೩೪೦ ಬೋರ್ಡಿನ ಆಡಳಿತೆಗೆ ಒಳಪಟ್ಟವು ಹಾಗು ೬೧೩ ಖಾಸಗಿಯಾಗಿರುತ್ತವೆ. ದಕ್ಷಿಣಕನ್ನಡದಂಥ ಇಷ್ಟು ದೊಡ್ಡ ಜಿಲ್ಲೆಯಲ್ಲಿ ಬರೆ ೫೮೩ ಪ್ರಾಥಮಿಕ ಶಾಲೆಗಳಿರುವದು ತುಂಬಾ ಶೋಚನೀಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಇನ್ನೂ ಶಾಲೆಯ ಗಂಧವು ಕೂಡ ಇಲ್ಲದ ಅನೇಕ ಹಳ್ಳಿಗಳಿದ್ದಾವೆ. ದಕ್ಷಿಣಕನ್ನಡದಲ್ಲಿ ೧ ಸಾವಿರಕ್ಕೆ ಮಿಕ್ಕ ೨ ಸಾವಿರದೊಳಗಿನ ಜನಸಂಖ್ಯೆ ಇರುವ ಹಳ್ಳಿಗಳು [illegible] ಇದ್ದಾವೆ. ಅವುಗಳಲ್ಲಿ [illegible] ಹಳ್ಳಿಗಳು ಮಾತ್ರ ಶಾಲೆಗಳ ಸೌಭಾಗ್ಯ

[illegible] ಮತ್ತು ಅದರ ಪ್ರಾಮಾಣಿಕ [illegible] ಮತ್ತು ಈ ಶಿಕ್ಷಕರ ತರಬೇತಿನ ವಿಷಯವು ವಿವಾದನೀಯವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ೧,೬೮೫ ಉಪಾಧ್ಯಾಯರಿದ್ದು ಅವರಲ್ಲಿ ೭೮೫ ಜನರು ತರಬೇತು ಹೊಂದಿದವರಿದ್ದಾರೆ. ಎಂದರೆ ಹೆಚ್ಚು ಕಡಿಮೆ ಇನ್ನೂ ಅಷ್ಟೆ ಜನರು ಬಿನ್ ತರಬೇತಿನವರಿದ್ದಾರೆ. ವರ್ಷಕ್ಕೆ ೮೦ ಜನರ ತರಬೇತಿಗೆ ಅನುಮೋದನೆಯನ್ನು ಕೊಟ್ಟಿರುವ ಸರಕಾರ ಹುಕುಮಿನಂತೆ ಉಳಿದ ೮೦೦ ಚಿಲ್ಲರೆ ಶಿಕ್ಷಕರು ತರಬೇತು ಹೊಂದಬೇಕಾದರೆ ಕನಿಷ್ಠಪಕ್ಷಕ್ಕೆ ೧೦ ವರ್ಷಗಳ ಅವಧಿಯು ಬೇಕಾಗಿರುವುದು! ಪರಂತು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯನ ಮಾಡಬೇಕೆಂದಿರುವ ಈ ಕಾಲದಲ್ಲಿ ಮೇಲಿನ ತರಬೇತಿನ ಪ್ರಮಾಣವೂ, ಮತ್ತು ಆ ಮೂಲಕ ಒದಗುವ ದೀರ್ಘಕಾಲವೂ, ಇವೆರಡು ಲೋಕಹಿತದ ದೃಷ್ಟಿಯಿಂದ ಅನುಚಿತವಾದ ವಿಷಯಗಳು. ಶ್ರೀಯುತ ಪ. ಮಂಗೇಶರಾಯರೂ ಈ ದುಃಸ್ಥಿತಿಯನ್ನು ಹೋಗಲಾಡಿಸಲು ಜಿಲ್ಲೆಯೊಳಗಿನ ಪ್ರತಿಯೊಂದು ತಾಲೂಕಿನಲ್ಲಿ ಟ್ರೈನಿಂಗ್ ಶಾಲೆಗಳನ್ನು ತೆರೆಯುವುದು ಒಳ್ಳೇದೆಂದು ಯಾವ ಸೂಚನೆಯನ್ನು ಮಾಡಿರುವರೊ ಅದರ ಕಡೆಗೆ ವಿದ್ಯಾ ಇಲಾಖೆಯ ಲಕ್ಷ್ಯವು ಹೋದೀತೆಂದು ನಾವು ನಂಬಿದ್ದೇವೆ. ಇಷ್ಟೆ ಅಲ್ಲ, ಬರುವ ವರ್ಷದಿಂದ ಶಿಕ್ಷಣದ ಖಾತೆಯು ವಿಧಕ್ತವಾಗಿ ಕಾಯಿದೆ ಕೌನ್ಸಿಲಿನ ಮಂತ್ರಿಗಳ ವಶಕ್ಕೆ ಬಂದ ತರುವಾಯ ಪ್ರಾಥಮಿಕ ಶಿಕ್ಷಣಕ್ಕೆ ಯಾವ ಮಹತ್ವವು ಪ್ರಾಪ್ತವಾಗಲಿಕ್ಕಿದೆಯೊ ಆಗ ಪ್ರಾಥಮಿಕ ಶಾಲೆಗಳ ಹಾಗು ಉಪಾಧ್ಯಾಯರ ತರಬೇತಿನ ಶಾಲೆಗಳ ನ್ಯೂನತೆಯು ಇನ್ನಷ್ಟು ಕಂಡುಬಂದೀತು. ಆ ಸಮಯದಲ್ಲಂತೂ ಮೇಲಿನ ಸೂಚನೆಗೆ ಮೂರ್ತಸ್ವರೂಪವನ್ನು ಕೊಡದೆ ನಿರ್ವಾಹವೆ ಆಗಲಿಕ್ಕಿಲ್ಲ. ಆದ್ದರಿಂದ ಶಿಕ್ಷಣ ಇಲಾಖೆಯವರೂ ಪ್ರಾಥಮಿಕ ಶಿಕ್ಷಣಾಭಿಮಾನಿಗಳೂ ಈ ಪ್ರಶ್ನೆಯನ್ನು ಕೈಕೊಂಡು ಮೇಲಿನ ಅಡಚಣೆಗಳು ದೂರವಾಗುವಂತೆ ಯೋಗ್ಯ ಉಪಾಯಗಳನ್ನು ಸದ್ಯದಲ್ಲೆ ನಡೆಸಿದರೆ ಪ್ರಾಥಮಿಕ ಶಿಕ್ಷಣದೊಳಗಿನ ಒಂದು ಇಕ್ಕಟ್ಟಿನ ಪ್ರಶ್ನೆಯನ್ನು ತೀರ್ಮಾನಿಸಿದಂತಾದೀತು.

೩. ರಾಜ್ಯಕರ್ತರೊಡನೆ ಸ್ವರಾಜ್ಯವನ್ನು ಕೇಳುವುದರಲ್ಲಿ ಹಿಂದೀ ಜನರ ಒಂದು ಮುಖ್ಯ ಉದ್ದೇಶವು ಯಾವದೆಂದರೆ, ಈಗಿನ ರಾಜ್ಯಕಾರಭಾರದ ಪದ್ಧತಿಯು ಹೆಚ್ಚು ಖರ್ಚಿನದ್ದಾಗಿದೆ. ಜಗತ್ತಿನೊಳಗಿನ ಸುಧಾರಿಸಿದ ಯಾವ ರಾಜ್ಯದಲ್ಲೂ ಹಿಂದೀ ರಾಜ್ಯಪದ್ಧತಿಯ ಸಂಬಂಧ ದ್ರವ್ಯ ವ್ಯಯವಾಗುವಷ್ಟು ಖಂಡಿತವಾಗಿ ಆಗುವುದಿಲ್ಲ. ಆದಷ್ಟು ಖರ್ಚನ್ನು ಕಡಿಮೆ ಮಾಡಿ ಆಡಂಬರವನ್ನು ತಗ್ಗಿಸುವುದು, ಸಿವಿಲ್ ಸರ್ವಂಟರ ಖಂಡಿಗಟ್ಟಳೆ ಸಂಬಳವನ್ನು ಸಂಕೋಚಪಡಿಸಿ ಅಭಿವೃದ್ಧಿಯ ಇತರ ಸಾಧನಗಳನ್ನು ಬೆಳಸುವುದು ಸ್ವರಾಜ್ಯದ ಮುಖ್ಯ ಕಾರ್ಯವಾಗಿತ್ತು. ಇದೇ ಉದ್ದೇಶದಿಂದ ಹಿಂದುಸ್ಥಾನವು ಸ್ವರಾಜ್ಯವನ್ನು ಕೇಳುತ್ತಿತ್ತು. ಪರಂತು ಸ್ವರಾಜ್ಯ ಬಂದವು ಮೂಡಲಿಕ್ಕಿರುವ ಈ ಸಮಯದಲ್ಲಿ ಸರಕಾರವು ಮತ್ತು ಭಾರತ ಮಂತ್ರಿಗಳು ಕಾರಭಾರದ ಯಂತ್ರಕ್ಕೆ ಯಾವ ಎಣ್ಣೆಯನ್ನು ಸುರಿಸ ಹತ್ತಿದ್ದಾರೊ ಅದರ ಪ್ರಮಾಣವು, ಶುಕ್ಲಪಕ್ಷದ ಚಂದ್ರ ಕಲಿಕೆಯಂತೆ ಅಥವಾ ಭರತದ ನೀರಿನಂತೆ ಏರುತ್ತಲೆ ಇದೆ ಎಂದು ವರಿಷ್ಠ ಕೌನ್ಸಿಲಿನಲ್ಲಿ ನಡೆದ ಪ್ರಶ್ನೋತ್ತರಗಳ ಮೇಲಿಂದ ಹೇಳಬೇಕಾಗುತ್ತದೆ. ವರಿಷ್ಠ ಅಧಿಕಾರಿಗಳ ಸಂಬಳ ಎಷ್ಟೆಷ್ಟು ಹೆಚ್ಚಾಗಿವೆ ಎಂದು ನಾಮದಾರ ಶರ್ಮರು ಒಂದು ಪ್ರಶ್ನೆಯನ್ನು ಕೇಳಿದರು. ಈ ಪ್ರಶ್ನೆಗೆ ಸರಕಾರದ ಕಡೆಯಿಂದ ಉತ್ತರವನ್ನು ಕೊಡೋಣಾಯಿತೇನೆಂದರೆ, ಈಗಿನ ಹೊಸ ಸ್ಕೇಲಿನಲ್ಲಿ ಏರಿಸಿದ ಸಂಬಳದಂತೆ ಸಿವಿಲ್ ಸರ್ವಿಸಿನವರಿಗೆ ೬೭ ಲಕ್ಷ, ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿಗೆ ೩೫ ಲಕ್ಷ, ಮೆಡಿಕಲ್ ಸರ್ವಿಸಿಗೆ ೨೫ ಲಕ್ಷ, ಪೋಲಿಸ ಖಾತೆಗೆ ೧೪ ಲಕ್ಷ, ಪಬ್ಲಿಕ ವರ್ಕ್ಸ್‌ಗೆ ೫೫ ಲಕ್ಷ, ಎಜ್ಯುಕೇಶನ್ ಸರ್ವಿಸಿಗೆ ೧೭ ಲಕ್ಷ, ಫೋರೆಷ್ಟ ಇಲಾಖೆಗೆ ೪॥ ಲಕ್ಷ ಮತ್ತು ಬೇರೆ ಚಿಲ್ಲರೆ ೨ ಲಕ್ಷ, ಈ ಪ್ರಕಾರ ಒಂದು ಕೋಟಿ ೨೮ ಲಕ್ಷ ರೂಪಾಯಿಯು ಆಯಾ ಖಾತೆಗಳಲ್ಲಿ ಮೇಲಿನ ತರಗತಿಯವರಿಗೆ ಕೊಡೋಣಾಗಿದೆ. ಅಲ್ಲದೆ ಬಡತಿ ಹೊಂದ ತಕ್ಕ ಇನ್ನೂ ಹಲವು ಖಾತೆಗಳಿದ್ದಾವೆ. ಅವುಗಳ ಸಂಬಳವನ್ನು ಏರಿಸಿದ ಮೇಲೆ ಇನ್ನು ಮುಂದೆ ವರಿಷ್ಠ ತರಗತಿಯ ಸಂಬಳದ ಈ ಏರು ವರ್ಷಕ್ಕೆ ಸರಾಸರಿ ೧॥ ಕೋಟಿಗಿಂತ ಕಡಿಮೆ ನಿಲ್ಲಲಿಕ್ಕಿಲ್ಲವೆಂದು ಅಂದಾಜು ಮಾಡೋಣಾಗಿದೆ. ಈಗಿನ ಬರಗಾಲದ ಅಥವಾ ತುಟ್ಟಿ ಧಾರಣೆಯ ಬಾಧೆಯು ನಿಜವಾಗಿ ಕೆಳಗಿನ ತರಗತಿಯ ನೌಕರರಿಗೆ ಉಂಟಾಗುತ್ತದಲ್ಲದೆ ಮೇಲಿನವರಿಗಷ್ಟು ಸಂಭವಿಸುವುದಿಲ್ಲ. ಆದ್ದರಿಂದಲೆ ಪ್ರತಿಯೊಂದು ಖಾತೆಯಲ್ಲಿ ಕೆಳಗಿನ ನೌಕರರು ತಂತಮ್ಮ ಸಂಬಳದ ಏರಿನ ಬಗ್ಗೆ ವಿಜ್ಞಾಪನೆಯನ್ನು ಮಾಡುತ್ತಲಿದ್ದಾರೆ. ಪರಂತು ಅದರ ಕಡೆಗೆ ಸರಕಾರದ ಲಕ್ಷ್ಯವು ವೇಧಿಸುವುದಿಲ್ಲ. ವರಿಷ್ಠ ಅಮ್ಮಲದಾರರ ಸಂಬಳವನ್ನು ಏರಿಸುವ ತರಾತುರಿಯು ಮಾತ್ರ ನಡಕೊಂಡೇ ಇದೆ. ಇದು ಗಂಜಿಯ ತಿಳಿಯನ್ನು ಕುಡಿದು ಕೊಂಡಿರುವವರನ್ನು ಬಿಟ್ಟು ಕ್ಷೀರಾನ್ನ ಭೋಜಿಗಳಿಗೆ ಅನ್ನದಾನಮಾಡುವಂತೆಯೆ ವಿಷಮಾಲಂಕಾರದ ಒಂದು ನಿದರ್ಶನವಾಗಿದೆ! ಪಬ್ಲಿಕ ಸರ್ವಿಸ ಕಮಿಷನು ತನ್ನ ಶಿಫಾರಸಿನ ಪತ್ರಕದಲ್ಲಿ ಎಲ್ಲ ಖಾತೆಗಳ ಸಂಬಳದ ಸಂಬಂಧ ವಿಚಾರಮಾಡಿ ಕೊನೆಗೆ ೪೨ ಲಕ್ಷ ರೂ. ವರನ್ನು [illegible] ನ್ಯಾಯ [illegible]

[illegible] ಹಿಂದುಸ್ಥಾನದ ದುರ್ದೈವವೆ ಸರಿ!

೪. ಶ್ರೀಯುತ ಲಾಲಾ ಲಜಪತರಾಯರ ಹಿಂದೀ ಸುಧಾರಣಾ ಕಾನೂನಿನ ವಿಷಯದ ಮತಗಳು 'ಟ್ರಿಬ್ಯೂನ್' ಪತ್ರದಲ್ಲಿ ಪ್ರಕಟವಾಗಿವೆ. ಇದಲ್ಲದೆ, ಲಾಹೋರಿನಲ್ಲಿ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಲಾಲಾಜಿಯವರ ಅಧ್ಯಕ್ಷತೆಯಲ್ಲಿ ಒಂದು ಉಪನ್ಯಾಸವನ್ನು ಕೊಟ್ಟಿದ್ದರು. ಆ ಸಮಯದಲ್ಲಿಯೂ ಲಜಪತರಾಯರು ತಮ್ಮ ಮತಗಳನ್ನು ಸ್ಪಷ್ಟಪಡಿಸಿದ್ದಾರೆ. ಅವರ ಮತಗಳ ಸಾರವೇನೆಂದರೆ, ಹಿಂದುಸ್ಥಾನಕ್ಕೆ ಸದ್ಯಃ ಸಿಕ್ಕಿದ ಸುಧಾರಣೆಗಳನ್ನು ನಾವು ಅವಶ್ಯವಾಗಿ ಸ್ವೀಕರಿಸಬೇಕು. ಆದರೆ ಇಷ್ಟರಿಂದಲೆ ತೃಪ್ತಿಪಡದೆ ಇನ್ನು ಮುಂದಿನ ಕಂತನ್ನು ಹೊಂದುವುದಕ್ಕಾಗಿ ಅವಿಶ್ರಾಂತ ಶ್ರಮವನ್ನು ಮಾಡಬೇಕು. ಮತ್ತು ಹೀಗಾದಲ್ಲೆ ಹಿಂದುಸ್ಥಾನದ ಭಾಗ್ಯೋದಯವಾಗುವುದು. ಮಿ. ಮೊಂಟೆಗ್ಯು ದೊರೆಗಳು ಈಗ ಯಾವ ಅಲ್ಪಸ್ವಲ್ಪ ಹಕ್ಕುಗಳನ್ನು ದಯಪಾಲಿಸಿರುವರೂ ಅವುಗಳ ಲಾಭಗಳನ್ನು ಉಪಭೋಗಿಸಲು ನೌಕರಶಾಹಿಯು ಬಿಡಲಿಕ್ಕಿಲ್ಲವೆಂದು ಈ ವರೆಗಿನ ೧೫೦ ವರ್ಷಗಳ ಇತಿಹಾಸವು ಹೇಳುತ್ತದೆ; ಆದ್ದರಿಂದ ಹಿಂದಿಗಳು ಹಿಂದೂಸ್ಥಾನದಲ್ಲೂ, ಇತರ ಕಡೆಗಳಲ್ಲೂ ಮುಂದಿನ ಕಂತನ್ನು ಸಂಪಾದಿಸಲು ಅಹರ್ನಿಶ ಯತ್ನಿಸಬೇಕೆಂದು ಲಾಲಾಜಿಯವರು ಉಪದೇಶಿಸಿದ್ದಾರೆ. ಅಲ್ಲದೆ ಅಮೃತಸರಿನ ರಾಷ್ಟ್ರೀಯ ಸಭೆಯ ಸುಧಾರಣಾ ವಿಷಯಕವಾದ ಠರಾವು ಲಾಲಾಜಿಯವರ ಸಮ್ಮತಿಗೆ ಪಾತ್ರವಾಗಿದೆ ಎಂದು ಅವರು ಹೊರಪಡಿಸಿದ ಉದ್ಗಾರಗಳ ಮೇಲಿಂದ ಸ್ಪಷ್ಟವಾಗುತ್ತದೆ.

೫. ಹಿಂದುಸ್ಥಾನದ ಚಿಕ್ಕಚಿಕ್ಕ ಮಕ್ಕಳ ಮೃತ್ಯು ಸಂಖ್ಯೆ ಎಷ್ಟು ಭಯಂಕರವಾಗಿದ್ದೆಂಬುದನ್ನು ನಾವು ಹಿಂದೊಮ್ಮೆ ಎಂದರೆ ಸುಮಾರು ತಿಂಗಳ ಹಿಂದೆ ತೋರಿಸಿದ್ದೇವೆ. ಹಿಂದುಸ್ಥಾನದೊಳಗಿನ ಶಿಶುಮರಣದ ಪ್ರಮಾಣವು ಇತರ ಕಡೆಗಳಲ್ಲಿಯದಕ್ಕಿಂತ ಬಹಳ ದೊಡ್ಡದಿದೆ. ಇಂಗ್ಲಂಡಿನೊಳಗಿನ ಮುಖ್ಯಮುಖ್ಯ ಶಹರುಗಳಲ್ಲಿಯ ಶಿಶುಗಳ ವಾರ್ಷಿಕಮೃತ್ಯು ಸಂಖ್ಯೆಯು ಸಾಮಾನ್ಯವಾಗಿ ೧೦೦ಕ್ಕೆ ಮಿಕ್ಕಿಲ್ಲ; ಪರಂತು ಹಿಂದುಸ್ಥಾನದೊಳಗಿನ ಮುಂಬಯಿ, ಮದ್ರಾಸ, ಕಲಕತ್ತಾದಂಥ ಪಟ್ಟಣಗಳಲ್ಲಿಯ ಮೃತ್ಯು ಸಂಖ್ಯೆಯು ೩೦೦ರಿಂದ ೩೫೦ ವರೆಗಿದೆ ಎಂದ ಮೇಲೆ ಇದರ ಹೃದಯದ್ರಾವಕತೆಯನ್ನು ಇನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಆದರೆ ಕೊಂಚ ಸುದೈವದ. ಮತ್ತು ಸಮಾಧಾನದ ಮಾತೇನೆಂದರೆ, ವೈಸರಾಯರ ಹಾಗು ಮುಂಬಯಿ ಗವರ್ನರ ದೊರೆಗಳ ಪತ್ನಿಯವರು ಈ ವಿಷಯದಲ್ಲಿ ಅನುತಾಪ ಪಡುವವರಾಗಿ ಬಹಳ ಜಾಗ್ರತೆಯನ್ನು ತಕ್ಕೊಳ್ಳಹತ್ತಿದ್ದಾರೆ. ಶಿಶುಸಂಗೋಪನದ ಮಹತ್ವವು ಗೊತ್ತಾಗಿ ಅದರ ಶಿಕ್ಷಣವು ಹಿಂದಿ ಸ್ತ್ರೀಯರಿಗೆ ದೊರಕುವಂತೆ ಕಲಕತ್ತಾ ಮತ್ತು ಮುಂಬಯಿಯಲ್ಲಿ ಈ ವಿಷಯದ ಪ್ರದರ್ಶನಗಳನ್ನು ಮೇಲ್ಕಂಡ ಲೇಡಿಯವರು ಕೂಡಿಸಿದರು. ಶಿಶು ಸಂಗೋಪನದ ಪ್ರಶ್ನವನ್ನು ಸರಕಾರದವರಂತೆ ಇತರ ಸಾರ್ವಜನಿಕ ಸಂಸ್ಥೆಯವರು ಕೂಡ ಆಲೋಚಿಸಿ ಶುದ್ಧವಾದ ಹಾಲಿನ ಪುರವಠೆ, ಮನೆಮಾರುಗಳಲ್ಲಿಯ ನಿರ್ಮಲತೆ ಮುಂತಾದ ಅನುಕೂಲತೆಗಳು ಒದಗುವಂತೆ ಯತ್ನಿಸಬೇಕಾಗಿದೆ.

೬. ನಮ್ಮ ಸಂಸ್ಥಾನದಲ್ಲಿ ಮೂಲನಿವಾಸಿಗಳೂ ಅಪರಾಧಿಗಳೂ (Criminal tribes), ಅಸ್ಪೃಶ್ಯರೂ ಎಂದು ಮೂರು ವಿಧವಾಗಿ ಡಿಪ್ರೆಸ್ಡ ಕ್ಲಾಸಿನವರಿದ್ದಾರೆ. ಇವರ ಹಿತಸಂರಕ್ಷಣೆಗಾಗಿ 'ಕಮಿಶನ ಒಫ್ ಲೇಬರ' ಎಂಬ ಹೆಸರಿನಿಂದ ಒಬ್ಬ ಅಧಿಕಾರಿಯನ್ನು ಸರಕಾರವು ನೇಮಿಸಿದೆ. ಈ ಅಧಿಕಾರಿಯ ಕೈಕೆಳಗೆ ಒಂದು ದೊಡ್ಡ ಸಿಬಂದಿಯನ್ನು ಇಟ್ಟು ಅದರ ಕೈವಶದಲ್ಲಿ ನೀರಿನ ಪುರವಠೆ, ಶಿಕ್ಷಣದ ಅಭಿವೃದ್ಧಿ, ಸಹಕಾರ ಸಂಘಗಳ ಸಂಸ್ಥೆ, ಮನೆಮಾರುಗಳಿಗೆ ಬೇಕಾಗಿರುವ ಆರೋಗ್ಯಕರವಾದ ಸ್ಥಳವನ್ನು ಒದಗಿಸಿಕೊಳ್ಳುವುದು ಇತ್ಯಾದಿ ಕೆಲಸಗಳು ಕೊಡಲ್ಪಟ್ಟಿವೆ. ಇವಲ್ಲದೆ ಅಸ್ಪೃಶ್ಯವರ್ಗದ ಉದ್ಧರಣೆಗಾಗಿ ಇನ್ನೂ ಅವಶ್ಯಕವಿರುವ ಇತರ ಕಾರ್ಯಗಳು ಕೂಡ ಮೇಲಿನ ಸಿಬಂದಿಯಲ್ಲಿ ಸಮಾವಿಷ್ಟವಾಗುವುವು. ಸರಕಾರದ ಈ ಉಪಕ್ರಮವು ಈಚೆಗೆ ಹೊರಟ ಸರಕಾರಿ ಜಾಹೀರ ಪತ್ರಕದಲ್ಲಿ ನಮೂದಿಸಲ್ಪಟ್ಟಿದೆ.

೭. ಮದ್ರಾಸಿನ ನ್ಯಾಯವಿಧಾಯಕ ಸಭೆಯ ಈ ತಿಂಗಳ ಅಧಿವೇಶನವು ಇದೇ ತಿಂಗಳ ೧೦ನೆ ತಾರೀಕಿನಲ್ಲಿ ಪ್ರಾರಂಭವಾಯಿತು. ಮೆಂಬರರ ಪ್ರಶ್ನೆಗಳಿಗೆ ಸರಕಾರದ ಕಡೆಯಿಂದ ಹೊರಟ ಕೆಲವು ಉತ್ತರಗಳು ಬಾಬುಶಹರ ಜಾಹೀರನಾಮೆಯಲ್ಲಿ ಸೂಚಿಸಿದಂತೆ ನೌಕರಶಾಹಿಯವರಿಗೂ ಜನರಿಗೂ ಪರಸ್ಪರ ಅನ್ಯೋನ್ಯಭಾವವು ಅಗತ್ಯವಿದೆ ಎಂಬುದನ್ನು ನೌಕರಶಾಹಿಯವರು ಇನ್ನು [illegible] ಮಾಡಿಕೊಳ್ಳಲಿಲ್ಲವೆಂದು ತೋರಿಸುತ್ತದೆ. [illegible]

ಸೋಲರಾದಾಗ, ತಾನು ಎಂದೂ ಏನನ್ನೂ ಹೇಳುವುದಿಲ್ಲ, ತಾನು ಮಾಡಿದ್ದೇ ನ್ಯಾಯ ಎಂಬುದು ಸಹಜಗುಣವಾಗಿ ಬೆಳೆದಿದೆ. ಈ ಅಭಿಪ್ರಾಯಕ್ಕೆ ಹೊಂದಿಕೊಳ್ಳುವ ಬಗೆಯ ಪ್ರಶ್ನೆಯು ಬಂತೆಂದರೆ ಸರಕಾರವು ಆ ವಿಷಯದಲ್ಲಿ ತನಗೆ ಸಮಾಚಾರ ಇಲ್ಲ, ಅದನ್ನು ವಿವರಿಸಿ ಹೇಳುವುದು [illegible] ವ್ಯವಹಾರಕ್ಕೆ ಸಮ್ಮತವಾಗಿಲ್ಲ ಎಂದು ಮುಂತಾಗಿ ಉಡಾಫೆ ಉತ್ತರಗಳನ್ನು ಕೊಡಲು ಯತ್ನಿಸುತ್ತದೆ. ಇಂಥ ಉತ್ತರಗಳು ಈಚೀಚೆಗೆ ಬಹಳ ಕಡಿಮೆಯಾಗಿವೆ ಆದರೂ ಅವುಗಳ ಕೆಲುಬು ಇನ್ನೂ ಹೋಗಿಲ್ಲವೆಂಬಂತೆ ತೋರುತ್ತದೆ.

೮. ಲೆಫ್ಟಿನೆಂಟ ಕ್ಲೆಮೆಂಟ್ಸ್ ಮತ್ತು ಸಾರ್ಜಂಟ್ ಮೇಜರ್ ಗ್ರೀನ್‌ವುಡ್ ಈ ಇಬ್ಬರನ್ನು ಜೈಲ ಇಲಾಖೆಯಲ್ಲಿ ಸರ್ವೀಸುಳ್ಳ ಇತರರ ಕ್ಕಿಂತ ಒಮ್ಮೆಲೆ ಹೆಚ್ಚಿನ ಸಂಬಳಕ್ಕೆ ನೇಮಿಸಿದ ಸಂದರ್ಭವನ್ನು ಕುರಿತು ನಾಮದಾರ ರಿಚಮಂಡ್ (ಎಂಗ್ಲೊ ಇಂಡಿಯನರ ಪ್ರತಿನಿಧಿ) ಪ್ರಶ್ನಿಸಿದಾಗ ಈ ಇಬ್ಬರು ಯುದ್ಧರಂಗದಲ್ಲಿ ಸಾಹಸ ಮಾಡಿದ್ದಕ್ಕಾಗಿ ಈ ದೊಡ್ಡ ಹುದ್ದೆಗಳಿಗೆ -(ಅಂದರೆ ೬೦೦ರಿಂದ [illegible]ಕ್ಕೆ ೫೦ ರೂಪಾಯಿ ಮೇಲೆಗೆ ಹೆಚ್ಚಿಸಿ ೧೦೦೦ಕ್ಕೆ ನಿಲ್ಲುವ ತಲಬು) ನೇಮಿಸಲ್ಪಟ್ಟರು ಎಂದು ಸರಕಾರದ ಕಡೆಯಿಂದ ಉತ್ತರ ಬಂತು. ಈ ಇಲಾಖೆಯಿಂದ ಯುದ್ಧಕ್ಕೆ ಹೋದ ಇತರ ವ್ಯಕ್ತಿಗಳೂ ಇದ್ದಂತೆಯೂ ಅವರಿಗಿಂತಲೂ ಈ ಇಬ್ಬರನ್ನು ಮೇಲಣ ತರಗತಿಗೆ ಹಚ್ಚಿದರೆಂದು ಸರಕಾರದ ಉತ್ತರದ ಅಭಿಪ್ರಾಯವಾಗುತ್ತದೆ. ಹಾಗೆ ಜೈಲ ಇಲಾಖೆಯಲ್ಲಿ ಯುದ್ಧಕ್ಕೆ ಹೋದವರೂ ಕೂಡಾ ಇದ್ದರೆ ಈ ಎರಡು ವ್ಯಕ್ತಿಗಳಿಗೆ ಮಾತ್ರ ಈ ವಿಶೇಷ ಬಡ್ತಿ ಸಿಗುವುದು ಸರಿಯೇ ಎಂಬುದೆ ನಾಮದಾರ ರಿಚಮಂಡ ಸವಾಲಿನ ಸೂಚನೆ. ನಾಮದಾರರು ಈ ಸಂದರ್ಭದಲ್ಲಿ ಮಿ| ಕ್ಲೆಮೆಂಟ್ಸರು ಯುದ್ಧಕ್ಕೆ ಮೊದಲು ಎಲ್ಲಿ ಸರ್ವೀಸು ಮಾಡಿದ್ದರು ಎಂದು ಕೇಳಿದ್ದಕ್ಕೆ ಮಿ| ಕ್ಲೆಮೆಂಟ್ಸರು ಕಲಕತ್ತೆಯ ಸುಂಕದ ಇಲಾಖೆಯಲ್ಲಿದ್ದರೆಂತ ಸರಕಾರವು ಹೇಳುವರು. ಮಿ| ಕ್ಲೆಮೆಂಟ್ಸರಿಗೆ ಆಗ ಸಂಬಳ ಎಷ್ಟಿತ್ತು ಅವರ ಗ್ರೇಡ್ ಯಾವದಾಗಿತ್ತು ಎಂಬ ಸಮಾಚಾರವು ಅವರಿಗೆ ಗೊತ್ತಿಲ್ಲವಂತೆ! ಅದರೊಂದಿಗೆ ಅಬ್ರಾಹ್ಮಣ ನಾಮದಾರರೊಬ್ಬರು ಸಿವಿಲ್ ಜ್ಯುಡಿಶಿಯಲ್ ಇಲಾಖೆಯಲ್ಲಿ ಜಾತಿವಾರ ಸಂಖ್ಯೆಯನ್ನು ಕೇಳಿದ್ದಕ್ಕೆ ಹಾಲಿ ಇರುವ ೪ ಡಿಸ್ಟ್ರಿಕ್ಟ್ ಜಡ್ಜರು ತೀರಾ ಬ್ರಾಹ್ಮಣರೆಂತಲೂ ೪೮ ಸಬ್ ಜಡ್ಜರಲ್ಲಿ ಬ್ರಾಹ್ಮಣರು ೩೧, ಅಬ್ರಾಹ್ಮಣರು ೧೩, ಕ್ರೈಸ್ತರು ೩, ಮುಸಲ್ಮಾನರು ೧, ಡಿಸ್ಟ್ರಿಕ್ಟ ಮುನ್ಸೀಫರು ೧೬೫ರ ಪೈಕಿ ಬ್ರಾಹ್ಮಣರು ೧೨೪, ಅಬ್ರಾಹ್ಮಣರು ೩೪, ಕ್ರೈಸ್ತರು ೩, ಮುಸಲ್ಮಾನರು ೪ ಎಂದು ಲೆಕ್ಕ ಕೊಟ್ಟಿದ್ದಾರೆ. ಇಷ್ಟು ಸ್ಪಷ್ಟವಾಗಿ ಈ ಲೆಕ್ಕವನ್ನು ತೋರಿಸುವವರಿಗೆ ಮಿ| ಕ್ಲೆಮಂಟ್ಸರ ಸಂಬಳ (ಕಲಕತ್ತೆಯಲ್ಲಿ) ಮತ್ತು ಗ್ರೇಡನ್ನು ತಿಳಿಸಲು ಅಸಾಧ್ಯವಿತ್ತೇ!

೯ ಇನ್ನೊಂದು ಪ್ರಶ್ನೆ. ತಿನ್ನವೆಲ್ಲಿಯ ಶಿವಗಿರಿ ಎಂಬಲ್ಲಿ ಮುಸಲ್ಮಾನರಿಗೆ ತಮ್ಮ ಜಾತಿಯವರ ಹೆಣಗಳನ್ನು ಸಮಾಧಿ ಕೊಡಲಿಕ್ಕೂ ಪ್ರಾರ್ಥನೆ ಹೇಳಲಿಕ್ಕೂ ಹಿಂದುಗಳು ಆತಂಕಿಸಿದ್ದರ ಕುರಿತು ೧೯೨೦ನೆ ಎಪ್ರಿಲ್ ೩ನೆ ತಾರೀಕಿನ ಅಧಿವೇಶನದಲ್ಲಿ ನಾಮದಾರ ಅಹಮ್ಮದ್ ತಂಬಿ ಮರಿಕಾಯರ್ ಸಾಹೇಬರು ಮಾಡಿದ ಪ್ರಶ್ನೆಗೆ ಕೊಟ್ಟ ಉತ್ತರದ ವಿಷಯದಲ್ಲಿ ಸದರಿಯವರು ಈ ಸಲವೂ ಒಂದು ಪ್ರಶ್ನೆಯನ್ನು ಕೇಳಿದ್ದರು. ಇದರಲ್ಲಿ ತಿನ್ನವೆಲ್ಲಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ತೀರ್ಮಾನವನ್ನು ಪ್ರಕಟಿಸಬಹುದೇ ಎಂದು ಪ್ರಶ್ನೆ ಇತ್ತು. ಅದಕ್ಕೆ ಸರಕಾರದವರು ಆ ವಿಷಯದಲ್ಲಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಂದ ರಿಪೋರ್ಟು ತರಿಸಲಿಲ್ಲವಾದ್ದರಿಂದ ಆ ಮೆಜಿಸ್ಟ್ರೇಟರ ತೀರ್ಮಾನವೇನಿತ್ತು ಎಂದು ಸರಕಾರದವರಿಗೆ ಗೊತ್ತಿಲ್ಲವಂತೆ. ಇಂಥ ಮಹಮ್ಮದಿ ಮತ್ತು ಹಿಂದು ಮತಸ್ಥರೊಳಗಿನ ಜಗಳ [illegible] ನ್ಯಾಯಪರಿಪಾಲನೆ ಮಾಡಿ ಇತ್ಯರ್ಥಪಡಿಸುವುದು [illegible] ದೇಶ ಶಾಂತಿಗೆ ಅತೀ ಅಗತ್ಯ. ಅದಕ್ಕಲ್ಲಿಯೂ ಒಂದು ವರ್ಷದ ಹಿಂದೆ ಆ ಕುರಿತು ಮುಸಲ್ಮಾನರ ಮೆಂಬರರೊಬ್ಬರು ಹಿಂದು [illegible] ಮೇಲಿನ ಆರೋಪದ ವಿಷಯದಲ್ಲಿ ಪ್ರಶ್ನೆ ಕೇಳಿದ್ದಾಗ ಆ ವಿಷಯದಲ್ಲಿ ಸರಕಾರದವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಇತ್ಯರ್ಥದ ಸಮಾಚಾರವು ತಮಗೆ ಗೊತ್ತಾಗಲಿಲ್ಲವೆನ್ನುವುದು ಜೋದ್ಯ!

೧೦. ಇದೇ ರೀತಿಯಲ್ಲಿ ಪಂಚಮರ ಪರವಾಗಿ ನೇಮಿಸಲ್ಪಟ್ಟ ನಾಮಧಾರ ಮಿ| ರಾಜರು ಹಿಂದು ಉಪದೇಶಕರೊಬ್ಬರ ಮೇಲಣ ಒಂದು ಆರೋಪದ ವಿಷಯವಾಗಿ ಒಂದು ಪ್ರಶ್ನೆ ಕೇಳಿದ್ದರು. ಗುಂಟೂರು ಜಿಲ್ಲೆಯ ಮಜ್ಜಿಯರ್ ಎಂಬ ಹಳ್ಳಿಯಲ್ಲಿ ಕ್ರೈಸ್ತ ಮತಾವಲಂಬಿಗಳಾದ ಮಾದಿಗರೂ ಮಾಲರೂ ತಮ್ಮ ಮತವನ್ನು ಬಿಟ್ಟು ಪುನಃ ಹಿಂದುಗಳಾಗುವ ವರೆಗೆ ಅವರಿಗೆ ಆಹಾರ ಸಾಮಗ್ರಿಗಳನ್ನು ಜನಗಳು ವಿಕ್ರಯಿಸಬಾರದೆಂದು ಈ ಹಿಂದು ಉಪದೇಶಕರು (ಪಂಡಿತ ಉಮಾಮಹೇಶ್ವರ) ಬೋಧಿಸಿದರು ಎಂಬ ಆರೋಪವು ನಿಜವೇ ಎಂಬುದು ನಾಮದಾರ ರಾಜರ ಸವಾಲು. ಈ ವಿಷಯದಲ್ಲಿ ಸರಕಾರದವರಿಗೆ ಏನು ಸಮಾಚಾರ ಬಂದಿಲ್ಲವಂತೆ. ಈ ಪ್ರಶ್ನೆಯು ಚಿಲ್ಲರೆಯಲ್ಲ, ಮತಾಂತರ ಹೊಂದಿದ ಬಗ್ಗೆ ಪೀಡಿಸುವರು ಎಂಬ ಆರೋಪವು ಸಾಮಾನ್ಯವಲ್ಲ. ಅದನ್ನು ವಿಚಾರಿಸಿ ತಿಳಿಸುವಷ್ಟು ಸರಕಾರಕ್ಕೆ ವಿರಾಮವಿಲ್ಲವೆ? ಅಸಂಖ್ಯಾತ ಸಿ. ಐ. ಡಿ. ಮೆಂಬರರು ಇದ್ದೇನು ಫಲ?

೧೧ [illegible] ಜಮೀನುದಾರ [illegible] ಡಿರೆಕ್ಟರರು ಇನ್ನೊಂದು ಪ್ರಶ್ನೆ ಕೇಳಿದ್ದರು. ಮದ್ರಾಸಿನಲ್ಲಿ ಡಿರೆಕ್ಟರರ ಆಫೀಸು ತೆರೆದಂದಿನಿಂದ [illegible] ವ್ಯಕ್ತಿಗಳು [illegible] ತೆಲುಗು ಜನರಿಗೆ ಆ ಆಫೀಸಿನಲ್ಲಿ ಆಶ್ರಯ ದೊರೆಯಲಿಲ್ಲ ಹೆಂಬದು ಹೌದೋ ಎಂಬ ಪ್ರಶ್ನೆಗೆ ಸರಕಾರಕ್ಕೆ ಆ ವಿಷಯದಲ್ಲಿ ಏನೂ ಗೊತ್ತಿಲ್ಲವೆಂದು ತಿಳಿಯಿತು. ಆಫಿಸರುಗಳ ಪಟ್ಟಿಯನ್ನು ತೆಗೆದು ನೋಡಿದರೆ ಈ ಆಫೀಸು ಅಥವ ಇಲಾಖೆಯು ಕೂಡ ಎಷ್ಟರ ಮಟ್ಟಿಗೆ ಅಯ್ಯರುಗಳ ಮಯವಾಗಿದೆ ಎಂಬುದು ತಿಳಿದೀತು. ಆದರೆ ಸಿವಿಲ್ ಜ್ಯುಡಿಶಿಯಲ್ ಇಲಾಖೆಯಲ್ಲಿ ಎಷ್ಟು ಮಂದಿ ಬ್ರಾಹ್ಮಣರು ಅಬ್ರಾಹ್ಮಣರು ಇದ್ದಾರೆಂದು ಎತ್ತಿ ಹೇಳುವವರಿಗೆ ಇದನ್ನು ಹೇಳುವುದು ಒಂದು ಕಷ್ಟವೆ? ಇಷ್ಟು ಹೇಳಬೇಕಾಗಿದೆ. ಡಿರೆಕ್ಟರರ ಆಫಿಸಿನಲ್ಲಿ ಇನ್ನೂ ತಮಿಳು ಬ್ರಾಹ್ಮಣರ ಸತ್ತೆಯು ಹೋಗಿಲ್ಲ. ಇತರರಿಗೆ ಒತ್ತಿಗೆಯೂ ಇಲ್ಲ, ಸರಕಾರವು ಈ ವಿಷಯದಲ್ಲಿ ಕಣ್ಣು ತೆರೆದು ನೋಡುವುದೂ ಇಲ್ಲ. ವರ್ಷಕ್ಕೆ ನಾಲ್ಕಾವರ್ತಿ ಪ್ರಕಟಿಸುವ ಈ ವಿದ್ಯಾ ಇಲಾಖೆಯ ಪಟ್ಟಿಯನ್ನು ಸರಕಾರದವರು ಪರಾಂಬರಿಸುವುದು ಒಳ್ಳೆಯದು.

೧೨ ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಪಂಚಮರ ಪರವಾಗಿ ನೇಮಕವಾದ ನಾಮದಾರ ಎಮ್. ಸಿ. ರಾಜರು ಒಂದು ವಿಚಿತ್ರ ಠರಾವನ್ನು ತಂದಿದ್ದರು. ಗ್ರಾಂಟು ಸಿಗುವ ಖಾಸಗಿ ಪ್ರಾಥಮಿಕ ಶಾಲೆಗಳವರು ಪಂಚಮರ ಮಕ್ಕಳನ್ನು ದಾಖಲು ಮಾಡಿಕೊಳ್ಳದಿದ್ದರೆ ಅಂಥ ಶಾಲೆಗಳಿಗೆ ಗ್ರಾಂಟು ಕೊಡಕೂಡದೆಂದು ಆ ಮಹನೀಯರ ಠರಾವು ಇತ್ತು. ಇದನ್ನು ನಾಮದಾರ ಸುಬ್ಬರಾಯರು ಅನುಮೋದಿಸಿದರು. ಸರಕಾರದ ಕಡೆಯಿಂದ ಡಿರೆಕ್ಟರ್ ಸಾಹೇಬರು ಪ್ರತ್ಯುತ್ತರ ಕೊಟ್ಟಾಗ ಈ ಠರಾವನ್ನು ಮುಂದೂಡುವ ಮಾಡುವುದರಿಂದ ಈ ವರೆಗೆ ಒಳ್ಳೆ ಸ್ಥಿತಿಯಲ್ಲಿ ಕೆಲಸ ಮಾಡುತ ಜನೋಪಕಾರಿಗಳಾಗಿದ್ದ ಹಲವು ಶಾಲಾ ಮನೇಜರುಗಳ ಸಿಕ್ಷೇಪ ಒದಗಬಹುದು. ಸಮಾಜ ಉದ್ಧಾರಣೆಗೆ ಸಂಬಂಧಪಟ್ಟ ವಿಷಯಗಳನ್ನು ಒಳಪಡಿಸುವ ಕಾಯಿದೆಗಳ ಶಾಲೆಗಳನ್ನು ವ್ಯವಹಾರ ಕ್ಷೇತ್ರಗಳಾಗಿ ಮಾಡುವ ಕ್ರಮವು ಸರಿಯಲ್ಲವೆಂದು ಹೇಳಿದರು. ಈ ಠರಾವನ್ನು ತಂದವರೂ ಅದನ್ನು ಅನುಮೋದಿಸಿದವರೂ ಅಲ್ಲದೆ ಉಳಿದವರು ಯಾರೂ ಪುಷ್ಟೀಕರಿಸದ್ದರಿಂದ ಈ ಠರಾವು ಬಿದ್ದುಹೋಯಿತು. ನಾಮದಾರ ರಾಜರು ತನ್ನ ಮಂತ್ರ ಕೋಲಿನಿಂದ ಒಂದೇ ಏಟಿಗೆ ಪಂಚಮರ ಉದ್ಧಾರಣೆಯನ್ನು ಮಾಡಬೇಕೆಂದು ಕಲ್ಪಿಸಿದರೆ ಇದೂ ಜಾಣ್ಮೆ ಆಟವಲ್ಲ. ಇದಕ್ಕೆ ಮೊದಲು ಬೇಕು ಹಳ್ಳಿಹಳ್ಳಿಯ ಜನತೆಗೆ ಪಂಚಮರ ಸದ್ಭಾವನೆ ವಿಷಯವು ಬೋಧಿಯಾಗಬೇಕು ಎಂಬುದು ಮಿ| ರಾಜರು ತಿಳಿಯುವುದು ಒಳ್ಳೆಯದು. ಅವರ ಉತ್ಸಾಹವು ಶ್ಲಾಘನೀಯವಾಗಿದೆ. ಆದರೆ ವಿಚಾರವಿಲ್ಲದೆ ದುಡುಕುವುದರಿಂದ— (ಸರಕಾರವು ತನ್ನ ಬಲವುಳ್ಳದೆ ಎಂಬ ಧೈರ್ಯದಿಂದ)—ಕಾರ್ಯವು ಕೆಟ್ಟುಹೋದೀತು, ಹಳ್ಳಿಹಳ್ಳಿಗಳಲ್ಲಿ ಪಂಚಮರ ಮೇಲೆ ಈಗ ಅಲ್ಪಸ್ವಲ್ಪ ಇದ್ದ ದಯೆ ದುರ್ಭಾವದ ಬಲವಾಗಿ ಅವಹೇಳನವು ಹುಟ್ಟೀತು ಎಂದು ನಾವು ಎಚ್ಚರಿಸುವೆವು. ಪಂಚಮರ ಶಿಕ್ಷಣಕ್ಕೆ ಬೇರೆ ಶಾಲೆಗಳನ್ನು [illegible] ಈಗ ಬೇರೆ ವೆಚ್ಚವಾಗುವ ಅಧಿಕಾಂಶವನ್ನು ಉಳಿಸಿ ನಾವು ಇನ್ನೂ ಶಾಲೆಗಳನ್ನು ಹೆಚ್ಚಿಸು[illegible] ಇದ್ದ ಶಾಲೆಗಳನ್ನೇ ಒಳಪಡಿಸುವುದಕ್ಕೂ [illegible] ಪಂಚಮರನ್ನು ನಾವು ಈಗ ಇದ್ದ ರೀತಿಯಲ್ಲಿ ದೀನಸ್ಥಿತಿಯಲ್ಲಿ [illegible] ವುದು ನ್ಯಾಯನೀತಿ ಸಮ್ಮತವಲ್ಲ [illegible] ವಿಚಾರವನ್ನು ಜನತೆಯಲ್ಲಿ [illegible] ಸುವುದು ನಮ್ಮ ಪ್ರಥಮ ಕರ್ತವ್ಯ. [illegible] ಮೇಲೆ ಪಂಚಮರನ್ನು ಬೇರೆ ಶಾಲೆಗಳಲ್ಲಿ ದಾಖಲು ಮಾಡುವುದು [illegible]. ನಾಮದಾರ ಸುಬ್ಬರಾಯರು ಪರೀಕ್ಷಾರ್ಥವಾಗಿ ತಮ್ಮ ಕೆಳಗಿನ ಶಾಲೆಗಳಲ್ಲಿ ಪಂಚಮರ ಮಕ್ಕಳನ್ನು ದಾಖಲು ಮಾಡಿ ಜನರಲ್ಲಿ ಈ ವಿಷಯದಲ್ಲಿ ಸ್ಫೂರ್ತಿ ಹುಟ್ಟಿಸುವುದು ಪ್ರಥಮ ಕರ್ತವ್ಯ.

ಮಂಗಳೂರು

ಕಳೆದ ೧೪ನೆ ತಾರೀಕು ಆದಿತ್ಯವಾರ ದಕ್ಷಿಣಕನ್ನಡ ಪೋಸ್ಟಲ್ ಮತ್ತು ರೈಲ್ವೆ ಮೈಲ್ ಸರ್ವಿಸಿನ ಒಂದು ಯೂನಿಯನ್ನು ಮ|| ರಾ|| ಎಸ್ ಎನ್ ಸುವರ್ಣ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು. ಈ ಎರಡು ಇಲಾಖೆಗಳ ಸಿಬ್ಬಂದಿಯ ಕ್ಷೇಮ ಲಾಭಕ್ಕೋಸ್ಕರ ಮತ್ತು ಅವರಿಗೆ ಇರುವ ಅಡಚಣೆಗಳನ್ನು ಹೋಗಲಾಡಿಸುವುದಕ್ಕೋಸ್ಕರ ತಕ್ಕ ಹಂಚಿಕೆಯನ್ನು ಆಲೋಚಿಸುವುದೇ ಈ ಸಂಘದ ಉದ್ದೇಶ. ಈ ಯೂನಿಯನ್ನಿಗೆ ಮ|| ರಾ|| ಎಸ್. ಎನ. ಸುವರ್ಣ ಇವರು ಅಧ್ಯಕ್ಷರಾಗಿಯೂ ಮ|| ರಾ|| ಪಿ. ಎನ್. ಗುಂಡುರಾಯರು ಸೆಕ್ರೆಟರಿ ಮತ್ತು ಖಜಾನಜೀಯಾಗಿಯೂ ಮ|| ರಾ|| ಗಳಾದ ಪಿ. ಶ್ರೀನಿವಾಸ ಬಾಳಿಗ, ಎ. ಡಿ. ಐಸನ್ ಡಿ. ಎ. ಪಿ. ಲೋಬೊ, ಜಿ. ಎ. ಆಬ್ರೆಸ್ಸೊ, ಕೆ. ಭವಾನಿಭಟ್ಟ, ಎ. ಅನಂತರಾವ ಯೂ. ಶಿವರಾವ ಎಚ್. ಶಿವರಾವ, ಶಂಕರ ಅಯ್ಯರ್, [illegible] ವಿಠಲರಾವ, ಎನ. ಡಿ. ಸೋಜ, ಪದ್ಮನಾಭವೆಸನ್, ಜಿ. ಎಮ್. ಪಿಂಟೊ ಇವರು ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ಏರ್ಪಟ್ಟರು. ಈ ಯೂನಿಯನ್ನಿಗೆ ಸೇರುವ ಮೆಂಬರರು ಪ್ರವೇಶ ಶುಲ್ಕ ೧ ರೂಪಾಯಿ ಗುಮಾಸ್ತ ಮೊದಲಾದವರಿಗೆ ಇತರ ಚಿಲ್ಲರೆ ನೌಕರರಿಗೆ ೮ ಆಣೆ, ಇದಲ್ಲದೆ ೪೦ ರೂಪಾಯಿಗೆ ಕಡಿಮೆಯಾದ ಸಂಬಳವಿದ್ದವರು ಆಣೆ ೪, ರೂಪಾಯಿಗೆ ೪೦ರಿಂದ ೧೦೦ರ ವರೆಗೆ ಆಣೆ ೮, ೧೦೦ ರೂಪಾಯಿ ಮಿಕ್ಕಿದ ಸಂಬಳ ಇರುವವರು ೧ ರೂಪಾಯಿ ಮೇರೆಗೆ ಚಂದಾಹಣ ಕೊಡಬೇಕಾಗಿರುವುದು. ಸಂಬಳಗಳ ಸುಧಾರಣೆಯಾಗುವವರೆಗೆ ರೂ ೩೦೦ ವರೆಗೆ ಸಂಬಳ ಇರುವ ಸಿಬ್ಬಂದಿಗೆ ಸೇಕಡಾ [illegible]ರಂತೆ ಸಂಬಳ ದರವನ್ನು ಹೆಚ್ಚಿಗೆ ಕೊಡಿಸಬೇಕು, ೧೯೨೦ನೆ ಜನವರಿ ೧ರಿಂದ ಇದನ್ನು ಕೊಡಬೇಕು, ಇದಲ್ಲದೆ ಕುಟುಂಬಸ್ಥರಿಗೆ ಸೇಕಡಾ [illegible] ಅವಿವಾಹಿತರಿಗೆ ಸೇಕಡಾ [illegible]ರಂತೆಯೂ ಮನೆ ಬಾಡಿಗೆ ಮುಖ್ಯ ಶಹರುಗಳಲ್ಲಿ ಸೇಕಡಾ ೭೫ ಮತ್ತು ೩೦ರಂತೆ ಸಾಮಾನ್ಯ ಊರುಗಳಲ್ಲಿ ಕೊಡಿಸಬೇಕು ಎಂದು ಡಿರೆಕ್ಟರ್ ಜನರಲ್ಲರವರಿಗೆ ಮನವಿಮಾಡುವುದಾಗಿ ನಿರ್ಣಯವಾಯಿತು.

ಪುತ್ತೂರು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಸಭೆಯು ಕಾಸರಗೋಡು ಎಲಿಮೆಂಟರಿ ಶಾಲೆಯಲ್ಲಿ ಬರುವ ತಾರೀಕು ೨೯ನೇ ಮಧ್ಯಾಹ್ನ ೧ ಗಂಟೆಗೆ ನೆರೆಯುವದು.

ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರರ ಸರ್ಕೀಟು ಈ ತಿಂಗಳು ತಾ ೧೯ರಿಂದ ೨೧ರ ವರೇಗೆ ಹೊಸದುರ್ಗ; ತಾ ೨೨ರಿಂದ ೨೪ರ ವರೇಗೆ ಮಂಜೇಶ್ವರ ತಾ. ೨೫ರಿಂದ ೨೮ರ ವರೇಗೆ ಕಾಸರಗೋಡು, ತಾ. ೩೦ ಮಂಗಳೂರು ತಾ ೩೧ ಕಾಸರಗೋಡು; ಎಪ್ರಿಲ್ ತಾ. ೧ರಿಂದ ೬ರ ವರೇಗ ಮಂಗಳೂರು, ತಾ. ೭, ೮, ೯, ಬೆಳ್ತಂಗಡಿ ತಾ ೧೦ ಪುತ್ತೂರು.

ಇಲ್ಲಿ ಹಲವು ದಿವಸಗಳಿಂದ ತಮ್ಮ ಚೇಷ್ಟಾವೆಗಳನ್ನು ತೋರಿಸುತ್ತಿದ್ದ ಬೇಬಿಸ್ ಇಲೆಕ್ಟ್ರಿಕ್ ಬಾಯಸ್ಕೋಪ್ ಕಂಪೆನಿಯವರು ಕಳೆದ ಸೋಮವಾರ ಇಲ್ಲಿಯ ಲೇಡಿಸ್ ಕ್ಲಬ್ಬಿನ ಫಂಡಿನ ಸಹಾಯಾರ್ಥವಾಗಿ ಒಂದು ಪ್ರದರ್ಶನವನ್ನು ತೋರಿಸಿದರು. ಇಂದಿನ ರಾತ್ರೆ ೯-೩೦ ಗಂಟೆಗೆ ಪಟವರ್ಧನ ಸರ್ಕಸಿನವರೂ ಸಹ ಮೇಲಿನ ಕ್ಲಬ್ಬಿನ ಫಂಡಿನ ಸಹಾಯಾರ್ಥವಾಗಿ ಮೈದಾನು ಆಟ ಒಂದನ್ನು ಆಡಲಿಕ್ಕಿರುವರು. ಈ ಸರ್ಕಸ ಕಂಪೆನಿಯವರು ಸರ್ಕಸ ಆಟದ ಪ್ರಯೋಜನವೆಂಬುದನ್ನು ಕುರಿತು ಕನ್ನಡಭಾಷೆಯಲ್ಲಿ ಉತ್ತಮವಾದ ಉಪನ್ಯಾಸವನ್ನು ಬರೆದವರಿಗೆ ಬಹುಮಾನವನ್ನು ಕೊಡಲಿಕ್ಕಿರುವರು— ಈ ಪೈಕಿ ಉತ್ತಮವಾದ ಉಪನ್ಯಾಸಕ್ಕೆ ರೂ ೧೦, ಎರಡನೇದಕ್ಕೆ ರೂ ೫ ಮೂರನೇದಕ್ಕೆ ರೂ ೪ ಹೀಗೆ ಕೊಡುವರು. ಈ ಉಪನ್ಯಾಸಗಳನ್ನು ಈ ದಿನ ತುಲನೆಮಾಡಿ ಬಹುಮಾನಗಳು ಕೊಡಲಾಗುವವು.

ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಶಾಲೆಯ ೪ನೇ ವರ್ಧಂತ್ಯೋತ್ಸವವು ನಾಳೆ ಸಾಯಂಕಾಲ ೬.೩೦ ಗಂಟೆಗೆ ಗಣಪತಿ ಸೆಕೆಂಡರಿ ಶಾಲೆಯಲ್ಲಿ ರಾವ ಬಹದ್ದೂರ್ ಡಾಕ್ಟರ ವರ್ಗಿಸರವರ ಅಧ್ಯಕ್ಷತೆಯಲ್ಲಿ ಜರುಗುವದು.

ಓಲ್ ಇಂಡಿಯಾ ಖಿಲಾಫತ್ ಪರಿಷತ್ತಿನ ಠರಾವಿನ ಮೇರೆಗೆ ಈ ದಿನ ಹಿಂದುಸ್ಥಾನದ ಆಯಾಯ ಭಾಗಗಳಲ್ಲಿ ಹಿಂದೂ ಮುಸಲ್ಮಾನರ ಐಕ್ಯದಿಂದ ಖಿಲಾಫತ್ ಹರ್ತಾಲವ್ರತವನ್ನು ಕೈಕೊಂಡು ಖಿಲಾಫತ್ ಪ್ರಶ್ನೆಯ [illegible] ಕಡೆಗೆ ಇರುವ ಆಗ್ರಹವನ್ನು ತೋರಿಸಲಿಕ್ಕಿರುವರು. ಅಂತೆಯೇ ಈ ದಿನ ಇಲ್ಲಿಯ ಇಸ್ಲಾಮಿಯ ಕ್ಲಬ್ಬಿನಲ್ಲಿ ಸಾಯಂಕಾಲ ೬.೩೦ ಗಂಟೆಗೆ ಈ ಕುರಿತು ಪಟ್ಟಣಿಗರ ಒಂದು ಸಭೆಯು ನೆರೆಯುವದು. ಸಕಲರೂ ಈ ಸಭೆಗೆ ದಯವಿಟ್ಟು ಚಿತ್ತಯಿಸಬೇಕಾಗಿ ಕೋರಿದೆ. ಅಲ್ಲದೆ ಖಾನ್ ಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ್ ಬಹದೂರರವರ ಆಶ್ರಯದಲ್ಲಿ ಉಡುಪಿಯಲ್ಲಿ ಈ ಕುರಿತು ಈ ದಿನ ಒಂದು ಸಭೆಯು ನೆರೆಯುವದು.

ಮಂಗಳೂರು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಅಧಿವೇಶನವು ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಈ ತಿಂಗಳ ತಾರೀಕು ೩೧ನೇ ಬುಧವಾರ ಮಧ್ಯಾಹ್ನ ೩ ಗಂಟೆಗೆ ಕೂಡುವದು.

ನಮ್ಮ ಪಟ್ಟಣದ ಇಸ್ಲಾಮಿಯ ಕ್ಲಬ್ಬಿನ ವರ್ಧಂತ್ಯೋತ್ಸವವು ತಾರೀಕು ೨೧ನೇ ಸಾಯಂಕಾಲ ಜರಗುವುದು.

ಬರುವ ತಾ. ೨೭ನೇ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ಥಿಯೊಸೋಫಿಕಲ್ ಸೊಸೈಟಿಯಲ್ಲಿ ಕುರಾನಿನ ಬೋಧನೆಗಳು ಎಂಬುದನ್ನು ಕುರಿತು ಮಿ| ಮಹಮುದ್ ಪುತ್ತೂರು ಸಾಹೇಬರವರು ಇಂಗ್ಲಿಷ್ ಭಾಷೆಯಲ್ಲಿ ಒಂದು ಭಾಷಣಮಾಡುವರು. ಇದಕ್ಕೆ ಸಕಲರಿಗೂ ಸುಸ್ವಾಗತವಿದೆ.

ನವಸುಧಾರಣೆಯಂತೆ ಸ್ಥಾಪಿಸಲ್ಪಡುವ ನ್ಯಾಯವಿಧಾಯಕ ಸಭೆಗೆ ಮತವನ್ನು (ಓಟು) ಕೊಡಲು ಅರ್ಹತೆಯುಳ್ಳವರ ಪಟ್ಟಿಯು ತಯಾರಾಗುತ್ತಲಿದೆ. ಈ ಪಟ್ಟಿಯಲ್ಲಿ ತಮ್ಮತಮ್ಮ ಹೆಸರುಗಳನ್ನು ದಾಖಲು ಮಾಡಿಕೊಳ್ಳಬೇಕಾಗಿರುವವರು ಯಾರೆಂದರೆ —ಪ್ರತಿಯೊಂದು ಅವಿಭಕ್ತಕುಟುಂಬದಿಂದ ಅದರ ಪ್ರತಿನಿಧಿಯೊಬ್ಬರು ಅಥವಾ ಪಟ್ಟಿನಪಾಲು ಮಾಲಿಕಯಲ್ಲಿರುವವರಿಂದ ಒಬ್ಬರು (೨) ಸರಕಾರಕ್ಕೆ [illegible]ಕ್ಕಿಂತ ಹೆಚ್ಚಿನ ರೀತಿಯಲ್ಲಿ ತೆರಿಗೆಯನ್ನು ಸಲ್ಲಿಸುವವರು (೩) ವಕ್ಕಲುಗಳು (೪) ಪಿನಶನ್ ಹೊಂದಿದ ಮಿಲಿಟರಿ ಆಫೀಸರುಗಳು. ಪುತ್ತೂರು ಮತ್ತು ಉಪ್ಪಿನಂಗಡಿ ತಾಲೂಕುಗಳಿಂದ ಈ ರಿಜಿಸ್ಟ್ರಿಗೆ ಹೆಸರುಗಳನ್ನು ದಾಖಲುಮಾಡಿಕೊಳ್ಳಬೇಕೆಂದಿರುವವರು ಇದೇ ಬರುವ ಎಪ್ರಿಲ್ ತಾರೀಕು ೧೫ರ ಒಳಗೆ ಈ ಬಗ್ಗೆ ಆ ತಾಲೂಕುಗಳ ಅಸಿಸ್ಟಾಂಟ ರಿಜಿಸ್ಟ್ರಾರರಾದ ಮಿ. ಎಮ್ ಎಸ್ ಪಾಯಸರ ಬಳಿಯಲ್ಲೂ, ಇತರ ತಾಲೂಕುಗಳಲ್ಲಿ ಆಯಾಯ ತಾಲೂಕುಗಳ ಸ್ಕೂಲ ಇನ್ಸ್‌ಪೆಕ್ಟರರ ಬಳಿಯಲ್ಲೂ ದಾಖಲು ಮಾಡಿಕೊಳ್ಳತಕ್ಕದ್ದಾಗಿ ಸಂಬಂಧಪಟ್ಟವರ ಪ್ರಕಟಣೆಯು ಹೊರಟಿದೆ.

ಕಳೆದ ಶನಿವಾರ ಮಂಗಳೂರು ಗವರ್ನಮೆಂಟು ಹೈಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವದ ಸಮಾರಂಭಕ್ಕೆ ಪಟ್ಟಣದ ಆಯಾ ವಿದ್ಯಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ವಿದ್ಯಾ ವಿಚಾರದಲ್ಲಿ ಪ್ರಯತ್ನಗಳನ್ನು ನಡಿಸುತ್ತಿರುವ ಮಹನೀಯರು ಸಭೆಗೆ ದಯಮಾಡಿ ಬಂದಿದ್ದರು. ಮ|| ರಾ|| ರಾವ್ ಬಹದೂರ್ ಎ. ರಾಮಯ್ಯ ಪೂಂಜ, ಮ|| ರಾ|| ತಾಲೂಕು ಬೋರ್ಡಪ್ರೆಸಿಡೆಂಟ ಸುಜೀರ ರಘುನಾಥಯ್ಯ ಮ|| ರಾ|| ಕೆ. ದೇವಪ್ಪಪೂಂಜ ಮ|| ರಾ|| ಅಡಿಗೆ ಪದ್ಮನಾಭಯ್ಯ ಮ|| ರಾ|| ಕರ್ನಾಡ ಸದಾಶಿವರಾವ್ ಮ|| ರಾ|| ಅಮ್ಮೆಂಬಳ ವಾಮನಪೈ ಮ|| ರಾ|| ರಾ ಎ. ರಾಘವೇಂದ್ರರಾವ್, ಮ|| ರಾ|| ಟಿ ಮಂಗೇಶರಾವ್ ಮ|| ರಾ|| ಪಂಡಿತ ಯಂ. ಎ. ಶಾಸ್ತ್ರಿ ಮ|| ರಾ|| ಸಂದಳ್ಳ ದೇವರಾವ ಇವೇ ಮೊದಲಾದವರು ಸಭೆ

ನೌಕರರಾಗಿ ತಾನು ಎಂದೂ ಎಡವಿ ಬೀಳುವದಿಲ್ಲ, ತಾನು ಮಾಡಿದ್ದೆ ನ್ಯಾಯ್ಯ ಎಂಬದು ಸಹಜಗುಣವಾಗಿ ಬೆಳೆದಿದೆ. ಈ ಅಭಿಪ್ರಾಯಕ್ಕೆ ತಕ್ಕ ಶೇರಿಯುವ ಬಗೆಯ ಪ್ರಶ್ನೆಯು ಬಂತೆಂದರೆ ಸರಕಾರವು ಆ ವಿಷಯದಲ್ಲಿ ತನಗೆ ಸಮಾಚಾರ ಇಲ್ಲ, ಅಥವಾ ಅದನ್ನು ವಿವರಿಸಿ ಹೇಳುವುದು ರಾಜಕೀಯ ವ್ಯವಹಾರಕ್ಕೆ ಸಮ್ಮತ ವಾಗಿಲ್ಲ ಎಂದು ಮುಂತಾಗಿ ಉಡಾಫೆ ಉತ್ತರಗಳನ್ನು ಕೊಡಲು ಯತ್ನಿಸುತ್ತಿದೆ. ಇಂಥ ಉತ್ತರಗಳು ಈಚೀಚೆಗೆ ಬಹಳ ಕಡಿಮೆ ಯಾಗಿವೆ ಆದರೂ ಅವುಗಳ ಕಲುಬು ಇನ್ನೂ ಹೋಗಿಲ್ಲವೆಂಬಂತೆ ಕಾಣುತ್ತದೆ.

೮. ಅಸಿಸ್ಟೆಂಟ ಕ್ಲೆಮೆಂಟ್ಸ್ ಮತ್ತು ಸಾರ್ಜೆಂಟ್ ಮೇಜರ್ ಗ್ರೀನವೂಡ್ ಈ ಇಬ್ಬರನ್ನು ಜೈಲ ಇಲಾಖೆಯಲ್ಲಿ ಸರ್ವಿಸುಳ್ಳ ಇತರರ ಮೇಲೆ ಬಡ್ತಿ ಹೆಚ್ಚಿನ ಸಂಬಳಕ್ಕೆ ನೇಮಿಸಿದ ಸಂದರ್ಭ ವನ್ನು ಕುರಿತು ನಾಮದಾರ ರಿಚಮಂಡ್ (ಎಂಗ್ಲೊ ಇಂಡಿಯನರ ಪ್ರತಿನಿಧಿ) ಪ್ರಶ್ನಿಸಿದಾಗ ಈ ಇಬ್ಬರು ಯುದ್ಧರಂಗದಲ್ಲಿ ಸಾಹಸ ಮಾಡಿದ್ದಕ್ಕಾಗಿ ಈ ದೊಡ್ಡ ಹುದ್ದೆಗಳಿಗೆ (ಅಂದರೆ ೬೦೦ರಿಂದ ಪ್ರಾರಂಭಕ್ಕೆ ೫೦ ರೂಪಾಯಿ ಮೇರೆಗೆ ಹೆಚ್ಚಿಸಿ ೧೨೦೦ಕ್ಕೆ ನಿಲ್ಲುವ ತಲಬು) ನೇಮಿಸಲ್ಪಟ್ಟರು ಎಂದು ಸರಕಾರದ ಕಡೆಯಿಂದ ಉತ್ತರ ಬಂತು. ಈ ಇಲಾಖೆಯಿಂದ ಯುದ್ಧಕ್ಕೆ ಹೋದ ಇತರ ವ್ಯಕ್ತಿ ಗಳೂ ಇದ್ದಂತೆಯೂ ಅವರಿಗಿಂತಲೂ ಈ ಇಬ್ಬರನ್ನು ಮೇಲಣ ತರಗತಿಗೆ ಹಚ್ಚಿದರೆಂದು ಸರಕಾರದ ಉತ್ತರದ ಅಭಿಪ್ರಾಯವಾಗು ತ್ತಿದೆ. ಹಾಗೆ ಜೈಲ ಇಲಾಖೆಯಲ್ಲಿ ಯುದ್ಧಕ್ಕೆ ಹೋದವರೂ ಕೂಡಾ ಇದ್ದರೆ ಈ ಎರಡು ವ್ಯಕ್ತಿಗಳಿಗೆ ಮಾತ್ರ ಈ ವಿಶೇಷ ಬಡ್ತಿ ಸಿಗುವುದು ಸರಿಯೇ ಎಂಬದೆ ನಾಮದಾರ ರಿಚಮಂಡ ಸವಾಲಿನ ಸೂಚನೆ. ನಾಮಧಾರರು ಈ ಸಂದರ್ಭದಲ್ಲಿ ಮಿ। ಕ್ಲೆಮೆಂಟ್ಸರು ಯುದ್ಧಕ್ಕೆ ಮೊದಲು ಎಲ್ಲಿ ಸರ್ವಿಸು ಮಾಡಿದ್ದರು ಎಂದು ಕೇಳಿದ್ದಕ್ಕೆ ಮಿ। ಕ್ಲೆಮೆಂಟ್ಸರು ಕಲಕತ್ತೆಯ ಸುಂಕದ ಇಲಾಖೆಯಲ್ಲಿದ್ದರೆಂತ ಸರಕಾರವು ಹೇಳುವಾಗ ಮಿ। ಕ್ಲೆಮೆಂಟ್ಸ ರಿಗೆ ಆಗ ಸಂಬಳ ಎಷ್ಟಿತ್ತು ಅವರ ಗ್ರೇಡ್ ಯಾವದಾಗಿತ್ತು ಎಂಬ ಸಮಾಚಾರವು ಅವರಿಗೆ ಗೊತ್ತಿಲ್ಲವಂತೆ! ಅದರೊಂದಿಗೆ ಅಬ್ರಾಹ್ಮಣ ನಾಮದಾರರೊಬ್ಬರು ಸಿವಿಲ್ ಜ್ಯುಡಿಶಿಯಲ್ ಇಲಾಖೆಯಲ್ಲಿ ಜಾತಿ ವಾರ ಸಂಖ್ಯೆಯನ್ನು ಕೇಳಿದ್ದಕ್ಕೆ ಹಾಲಿ ಇರುವ ೪೮ ಡಿಸ್ಟ್ರಿಕ್ಟ್ ಜಡ್ಜರು ತೀರಾ ಬ್ರಾಹ್ಮಣರೆಂತಲೂ ೪೮ ಸಬ್ ಜಡ್ಜರಲ್ಲಿ ಬ್ರಾಹ್ಮಣರು ೩೧, ಅಬ್ರಾಹ್ಮಣರು ೧೩, ಕ್ರೈಸ್ತರು ೩, ಮುಸಲ್ಮಾನರು ೧, ಡಿಸ್ಟ್ರಿಕ್ಟ ಮುನ್ಸಿಫರು ೧೬೭ರ ಪೈಕಿ ಬ್ರಾಹ್ಮಣರು ೧೨೪, ಅಬ್ರಾಹ್ಮಣರು ೩೪, ಕ್ರೈಸ್ತರು ೩, ಮುಸಲ್ಮಾನರು ೪ ಎಂದು ಲೆಕ್ಕ ಕೊಟ್ಟಿದ್ದಾರೆ ಇಷ್ಟು ಸ್ಪಷ್ಟವಾಗಿ ಈ ಲೆಕ್ಕವನ್ನು ತೋರಿಸುವವರಿಗೆ ಮಿ। ಕ್ಲೆಮೆಂಟ್ಸರ ಸಂಬಳ (ಕಲಕತ್ತೆಯಲ್ಲಿ) ಮತ್ತು ಗ್ರೇಡನ್ನು ತಿಳಿಸಲು ಅಸಾಧ್ಯವಿತ್ತೇ!

೯. ಇನ್ನೊಂದು ಪ್ರಶ್ನೆ. ತಿನ್ನವೆಲ್ಲಿಯ ಶಿವಗಿರಿ ಎಂಬಲ್ಲಿ ಮುಸಲ್ಮಾನರಿಗೆ ತಮ್ಮ ಜಾತಿಯವರ ಹೆಣಗಳನ್ನು ಸಮಾಧಿ ಕೊಡ ಲಿಕ್ಕೂ ಪ್ರಾರ್ಥನೆ ಹೇಳಲಿಕ್ಕೂ ಹಿಂದುಗಳು ಆತಂಕಿಸಿದ್ದೆಂಬುದನ್ನು ಕುರಿತು ೧೯೧೯ನೇ ಎಪ್ರಿಲ್ ೩ನೆ ತಾರೀಕಿನ ಅಧಿವೇಶನದಲ್ಲಿ ನಾಮ ದಾರ ಅಹಮ್ಮದ್ ತಂಬಿ ಮರಿಕಾಯರ್ ಸಾಹೇಬರು ಮಾಡಿದ ಪ್ರಶ್ನೆಗೆ ಕೊಟ್ಟ ಉತ್ತರದ ವಿಷಯದಲ್ಲಿ ಸದರಿಯವರು ಈ ಸಲವೂ ಒಂದು ಪ್ರಶ್ನೆಯನ್ನು ಕೇಳಿದ್ದರು. ಇದರಲ್ಲಿ ತಿನ್ನವೆಲ್ಲಿಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ತೀರ್ಮಾನವನ್ನು ಪ್ರಕಟಿಸಬಹುದೇ ಎಂದು ಪ್ರಶ್ನೆ ಇತ್ತು. ಅದಕ್ಕೆ ಸರಕಾರದವರು ಆ ವಿಷಯದಲ್ಲಿ ಡಿಸ್ಟ್ರಿಕ್ಟ ಮೆಜಿ ಸ್ಟ್ರೇಟರಿಂದ ರಿಪೋರ್ಟು ತರಿಸಲಿಲ್ಲವಾದ್ದರಿಂದ ಆ ಮೆಜಿಸ್ಟ್ರೇಟರ ತೀರ್ಮಾನವೇನಿತ್ತು ಎಂದು ಸರಕಾರದವರಿಗೆ ಗೊತ್ತಿಲ್ಲವಂತೆ! ಇದು ಮುಹಮ್ಮದಿ ಮತ್ತು ಹಿಂದು ಮತಸ್ಥರೊಳಗಿನ ಚರ್ಚೆ. ಇದರಲ್ಲಿ ನ್ಯಾಯಪರಿಪಾಲನೆ ಮಾಡಿ ಇತ್ತಂಡದವರಿಗೂ ಸಮಾಧಾನಪಡಿಸುವುದು ದೇಶ ಶಾಂತಿಗೆ ಅತೀ ಅಗತ್ಯ. ಆದ್ದರಲ್ಲಿಯೂ ಒಂದು ವರ್ಷದ ಹಿಂದೆ ಆ ಕುರಿತು ಮುಸಲ್ಮಾನರ ಮೆಂಬರರೊಬ್ಬರು ಹಿಂದುಗಳ ಮೇಲಿನ ಆರೋಪದ ವಿಷಯದಲ್ಲಿ ಪ್ರಶ್ನೆ ಕೇಳಿದ್ದಾಗ ಆ ವಿಷಯ ದಲ್ಲಿ ಸರಕಾರದವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಇತ್ಯರ್ಥದ ಸಮಾ ಚಾರವು ತಮಗೆ ಗೊತ್ತಾಗಲಿಲ್ಲವೆನ್ನುವುದು ಚೋದ್ಯ!

೧೦. ಇದೇ ರೀತಿಯಲ್ಲಿ ಪಂಚಮರ ಪರವಾಗಿ ನೇಮಿಸಲ್ಪಟ್ಟ ನಾಮಧಾರ ಮಿ। ರಾಜರು ಹಿಂದು ಉಪದೇಶಕರಲ್ಲೊಬ್ಬರ ಮೇಲಣ ಒಂದು ಆರೋಪದ ವಿಷಯವಾಗಿ ಒಂದು ಪ್ರಶ್ನೆ ಕೇಳಿದ್ದರು. ಗುಂಟೂರು ಜಿಲ್ಲೆಯ ಮಚೆರ್ಲ ಎಂಬ ಹಳ್ಳಿಯಲ್ಲಿ ಕ್ರೈಸ್ತ ಮತಾ ವಲಂಬಿಗಳಾದ ಮಾದಿಗರೂ ಮಾಲರೂ ತಮ್ಮ ಮತವನ್ನು ಬಿಟ್ಟು ಪುನಃ ಹಿಂದುಗಳಾಗುವ ವರೆಗೆ ಅವರಿಗೆ ಆಹಾರ ಸಾಮಾಗ್ರಿಗಳನ್ನು ಜನಗಳು ವಿಕ್ರಯಿಸ ಬಾರದೆಂದು ಈ ಹಿಂದು ಉಪದೇಶಕರು (ಪಂಡಿತ ಉಮಾಮಹೇಶ್ವರ) ಬೋಧಿಸಿದರು ಎಂಬ ಆರೋಪವು ನಿಜವೇ ಎಂಬದು ನಾಮದಾರ ರಾಜರ ಸವಾಲು. ಈ ವಿಷಯ ದಲ್ಲಿ ಸರಕಾರದವರಿಗೆ ಏನು ಸಮಾಚಾರ ಬಂದಿಲ್ಲವಂತೆ. ಈ ಪ್ರಶ್ನೆಯು ಚಿಲ್ಲರೆಯಲ್ಲ. ಮತಾಂತರ ಹೊಂದಿದ ಬಗ್ಗೆ ಪೀಡಿ ಸುವರು ಎಂಬ ಆರೋಪವು ಸಾಮಾನ್ಯವಲ್ಲ. ಅದನ್ನು ವಿಚಾರಿಸಿ ತಿಳಿಸುವಷ್ಟು ಸರಕಾರಕ್ಕೆ ವಿರಾಮವಿಲ್ಲವೆ? ಅಸಂಖ್ಯಾತ ಸಿ. ಐ. ಡಿ. ಮೆಂಬರರು ಇದ್ದೇನು ಫಲ?

೧೧. ಸರ್ವಾರ್ಕಿಮಿಡಿಯ ಜಮೀನುದಾರ ಡಿರೆಕ್ಟರರು ಇನ್ನೊಂದು ಪ್ರಶ್ನೆ ಕೇಳಿದ್ದರು. ಮದ್ರಾಸಿನಲ್ಲಿ ಡಿರೆಕ್ಟರರ ಆಫೀಸು ತೆರೆದಂದಿನಿಂದ ಒಬ್ಬರೆಂದು ವ್ಯಕ್ತಿಗಳು ವಿನಾ ಇತರ ತೆಲುಗು ಜನರಿಗೆ ಆ ಆಫೀಸಿ ನಲ್ಲಿ ಆಶ್ರಯ ದೊರೆಯಲಿಲ್ಲ ವೆಂಬದು ಹೌದೊ ಎಂಬ ಪ್ರಶ್ನೆಗೆ ಸರಕಾರಕ್ಕೆ ಆ ವಿಷಯದಲ್ಲಿ ಏನೂ ಗೊತ್ತಿಲ್ಲವೆಂದು ತಿಳಿಯಿತು. ಆಫಿಸರುಗಳ ಪಟ್ಟಿಯನ್ನು ತೆಗೆದು ನೋಡಿದರೆ ಈ ಆಫೀಸು ಅಥವ ಇಲಾಖೆಯು ಕೂಡ ಎಷ್ಟರ ಮಟ್ಟಿಗೆ ಅಯ್ಯರುಗಳ ಮಯವಾಗಿದೆ ಎಂಬುದು ತಿಳಿದೀತು. ಆದರೆ ಸಿವಿಲ್ ಜ್ಯುಡಿಶಿಯಲ್ ಇಲಾಖೆ ಯಲ್ಲಿ ಎಷ್ಟು ಮಂದಿ ಬ್ರಾಹ್ಮಣರು ಅಬ್ರಾಹ್ಮಣರು ಇದ್ದಾರೆಂದು ಎತ್ತಿ ಹೇಳುವವರಿಗೆ ಇದನ್ನು ಹೇಳುವುದು ಏನು ಕಷ್ಟವೆ? ಇಷ್ಟು ಹೇಳಬೇಕಾಗಿದೆ. ಡಿರೆಕ್ಟರರ ಆಫಿಸಿನಲ್ಲಿ ಇನ್ನೂ ತಮಿಳು ಬ್ರಾಹ್ಮ ಣರ ಸತ್ತೆಯು ಹೋಗಿಲ್ಲ, ಇತರರಿಗೆ ಬಡ್ತಿಗಳೂ ಇಲ್ಲ, ಸರಕಾರವು ಈ ವಿಷಯದಲ್ಲಿ ಕಣ್ಣು ತೆರೆದು ನೋಡುವುದೂ ಇಲ್ಲ. ವರ್ಷಕ್ಕೆ ನಾಲ್ಕಾವರ್ತಿ ಪ್ರಕಟಿಸುವ ಈ ವಿದ್ಯಾ ಇಲಾಖೆಯ ಪಟ್ಟಿಯನ್ನು ಸರಕಾರದವರು ಪರಾಂಬರಿಸುವುದು ಒಳ್ಳೆಯದು.

೧೨. ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಪಂಚಮರ ಪರವಾಗಿ ನೇಮಕವಾದ ನಾಮದಾರ ಎಮ್. ಸಿ. ರಾಜರು ಒಂದು ವಿಚಿತ್ರ ಠರಾವನ್ನು ತಂದಿದ್ದರು. ಗ್ರೆಂಟು ಸಿಗುವ ಖಾಸಗಿ ಪ್ರಾಥ ಮಿಕ ಸಾಲೆಗಳವರು ಪಂಚಮರ ಮಕ್ಕಳನ್ನು ದಾಖಲು ಮಾಡಿ ಕೊಳ್ಳದಿದ್ದರೆ ಅಂಥ ಸಾಲೆಗಳಿಗೆ ಗ್ರೆಂಟು ಕೊಡಿಸಬಾರದೆಂದು ಈ ಮಹನೀಯರ ಠರಾವು ಇತ್ತು. ಇದನ್ನು ನಾಮದಾರ ಸುಬ್ಬರಾಯರು ಅನುಮೋದಿಸಿದರು. ಸರಕಾರದ ಕಡೆಯಿಂದ ಡಿರೆಕ್ಟರ್ ಸಾಹೇ ಬರು ಪ್ರತ್ಯುತ್ತರ ಕೊಡುವಾಗ ಈ ಠರಾವನ್ನು ಮಂಜೂರುಮಾಡು ವುದರಿಂದ ಈ ವರೆಗೆ ಒಳ್ಳೆ ಸ್ಥಿತಿಯಲ್ಲಿ ಕೆಲಸ ಮಾಡಿ ಜನೋಪ ಕಾರಿಗಳಾಗಿದ್ದ ಹಲವು ಶಾಲಾ ಮನೇಜರುಗಳ ಆಕ್ಷೇಪ ಬರಬಹುದು. ಸಮಾಜ ಉದ್ಧರಣೆಗೆ ಸಂಬಂಧಪಟ್ಟ ವಿಷಯಗಳನ್ನು ಬಲಪಡಿಸುವ ಕಾರ್ಯದೆಗಳಿಗೆ ಶಾಲೆಗಳನ್ನು ವ್ಯವಹಾರ ಕ್ಷೇತ್ರಗಳಾಗಿ ಮಾಡುವ ಕ್ರಮವು ಸರಿಯಲ್ಲವೆಂದು ಹೇಳಿದರು. ಈ ಠರಾವನ್ನು ತಂದವರೂ ಅದನ್ನು ಅನುಮೋದಿಸಿದವರೂ ಅಲ್ಲದೆ ಉಳಿದವರು ಯಾರೂ ಪುಷ್ಟೀಕರಿಸದ್ದರಿಂದ ಈ ಠರಾವು ಬಿದ್ದು ಹೋಯಿತು. ನಾಮದಾರ ರಾಜರು ತನ್ನ ಮಂತ್ರ ಕೋಲಿನಿಂದ ಒಂದೇ ಏಟಿಗೆ ಪಂಚಮರ ಉದ್ಧರಣೆಯನ್ನು ಮಾಡುವೆನೆಂದು ಕಲ್ಪಿಸಿದರೆ ಇದೂ ಜಾದೂ ಆಟವಲ್ಲ, ಇದಕ್ಕೆ ಸಮಯ ಬೇಕು ಹಳ್ಳಿಹಳ್ಳಿಯ ಜನತೆಗೆ ಪಂಚ ಮರ ಸುಧಾರಣೆ ವಿಷಯವು ಬೋಧೆಯಾಗಬೇಕು ಎಂಬದು ಮಿ। ರಾಜರು ತಿಳಿಯುವುದು ಒಳ್ಳೆಯದು. ಇವರ ಉತ್ಸಾಹವು ಶ್ಲಾಘ ನೀಯವಾಗಿದೆ. ಆದರೆ ವಿಚಾರವಿಲ್ಲದೆ ದುಡುಕುವುದರಿಂದ—(ಸರಕಾರವು ತನ್ನ ಬೆಂಬಲಕ್ಕಿದೆ ಎಂಬ ಧೈರ್ಯದಿಂದ)—ಕಾರ್ಯವು ಕೆಟ್ಟು ಹೋದೀತು, ಹಳ್ಳಿಹಳ್ಳಿಗಳಲ್ಲಿ ಪಂಚಮರ ಮೇಲೆ ಈಗ ಅಲ್ಪ ಸ್ವಲ್ಪ ಇದ್ದ ದಯಾಪ್ರಭಾವದ ಬದಲಾಗಿ ಅವಕೃಪೆಯು ಹುಟ್ಟೀತು ಎಂದು ನಾವು ಎಚ್ಚರಿಸುವೆವು. ಪಂಚಮರ ಶಿಕ್ಷಣಕ್ಕೆ ಬೇರೆ ಸಾಲೆಗಳನ್ನು ನಿರ್ಮಿಸುವುದರಿಂದ ಈಗ ಬೇರೆ ವೆಚ್ಚವಾಗುವ ಅಧಿಕಾಂಶವನ್ನು ಉಳಿಸಿ ನಾವು ಇನ್ನೂ ಸಾಲೆಗಳನ್ನು ಹೆಚ್ಚಿಸು ವುದಕ್ಕೂ, ಅಥವಾ ಇದ್ದ ಸಾಲೆಗಳನ್ನೆ ಬಲಪಡಿಸುವುದಕ್ಕೂ ಉಪ ಯೋಗಿಸಬಹುದು. ಪಂಚಮರನ್ನು ನಾವು ಈಗ ಇದ್ದ ರೀತಿಯಲ್ಲಿ ದೀನಸ್ಥಿತಿಯಲ್ಲಿರಗೊಡಿಸುವುದು ನ್ಯಾಯನೀತಿ ಸಮ್ಮತವಲ್ಲ, ಎಂಬ ವಿಚಾರವನ್ನು ಜನತೆಯಲ್ಲಿ ತುಂಬಾ ತುಂಬಿಸುವುದು ನಮ್ಮ ಪ್ರಥಮ ಕರ್ತವ್ಯ. ಆ ಮೇಲೆ ಪಂಚಮರನ್ನು ಬೇರೆ ಸಾಲೆಗಳಲ್ಲಿ ದಾಖಲು ಮಾಡುವುದು ಅತಿ ಸುಲಭವಾದೀತು. ನಾಮದಾರ ಸುಬ್ಬರಾಯರು ಪರೀಕ್ಷಾರ್ಥವಾಗಿ ತಮ್ಮ ಕೆಳಗಿನ ಸಾಲೆಗಳಲ್ಲಿ ಪಂಚಮರ ಮಕ್ಕ ಳನ್ನು ದಾಖಲು ಮಾಡಿ ಜನರಲ್ಲಿ ಈ ವಿಷಯದಲ್ಲಿ ಸ್ಫೂರ್ತಿ ಉಂಟುಮಾಡುವುದು ಪ್ರಥಮ ಕರ್ತವ್ಯ.

ಮಂಗಳೂರು.

ಕಳೆದ ೧೪ನೆ ತಾರೀಕು ಆದಿತ್ಯವಾರ ದಕ್ಷಿಣಕನ್ನಡ ಟಪ್ಪಾಲು ಮತ್ತು ರೈಲ್ವೆ ಮೈಲ್ ಸರ್ವಿಸಿನ ಒಂದು ಯೂನಿಯನ್ನು ಮ. ರಾ. ಎಸ್. ಎನ್. ಸುವರ್ಣ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು. ಈ ಎರಡು ಇಲಾಖೆಗಳ ಸಿಬಂದಿಯ ಕ್ಷೇಮ ಲಾಭಕ್ಕೋಸ್ಕರ ಮತ್ತು ಅವರಿಗೆ ಇರುವ ಅಡಚಣೆಗಳನ್ನು ಹೋಗ ಲಾಡಿಸುವುದಕ್ಕೋಸ್ಕರ ತಕ್ಕ ಹಂಚಿಕೆಯನ್ನು ಆಲೋಚಿಸುವುದೆ ಈ ಸಂಘದ ಉದ್ದೇಶ. ಈ ಯೂನಿಯನ್ನಿಗೆ ಮ। ರಾ। ಎಸ್. ಎನ್. ಸುವರ್ಣ ಇವರು ಅಧ್ಯಕ್ಷರಾಗಿಯೂ ಮ। ರಾ। ಪಿ. ಎಸ್. ಗುಂಡ್ಮ ರಾಯರು ಸೆಕ್ರೆಟರಿ ಮತ್ತು ಖಜಾನಜೀಯಾಗಿಯೂ. ಮ। ರಾ। ಗಳಾದ ಬಿ. ಶ್ರೀನಿವಾಸ ಬಾಳಿಗ, ಟಿ. ವಿ ಐರನ್, ಡಿ. ಎ. ಪಿ. ಲೋಬೊ, ಜೆ. ಸಿ. ಅಬ್ರೆವೂ, ಕೆ. ಭವಾನಿಭಟ್ಟ, ಎ. ಅನಂತರಾವ, ಯೂ. ಶಿವರಾವ, ಎಚ್. ಶಿವರಾವ, ಶಂಕರ ಅಯ್ಯರ್, ಎಚ್. ವಿಠಲರಾವ, ಎಸ್. ಡಿ. ಸೋಜ, ಪದ್ಮನಾಭಮೆನನ್, ಜೆ. ಎಮ್. ಪಿಂಟೊ. ಇವರು ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ನಿರ್ವಹಿಸಿದರು. ಈ ಯೂನಿಯನ್ನಿಗೆ ಸೇರಿದ ಮೆಂಬರರು ಪ್ರವೇಶ ಕಾಸಲು ೧ ರೂಪಾಯಿ ಗುಮಾಸ್ತ ಮೊದಲಾದವರಿಗೆ, ಇತರ ಚಿಲ್ಲರೆ ನವುಕರರಿಗೆ ೮ ಆಣೆ, ಇದಲ್ಲದೆ ೪೦ ರೂಪಾಯಿಗೆ ಕಡಿಮೆಯಾದ ಸಂಬಳದವರು ಆಣೆ ೪, ರೂಪಾಯಿಗೆ ೪೦ರಿಂದ ೧೦೦ರ ವರೆಗೆ ಆಣೆ ೮, ೧೦೦ ರೂಪಾಯಿ ಮಿಕ್ಕಿದ ಸಂಬಳ ಇರುವವರು ೧ ರೂಪಾಯಿ ಮೇರೆಗೆ ಚಂದಾಹಣ ತೆರಬೇಕಾಗಿರುವುದು. ಸಂಬಳಗಳ ಸುಧಾರಣೆ ಯಾಗುವತನಕ ರೂ. ೩೦೦ ವರೆಗೆ ಸಂಬಳ ಇರುವ ಸಿಬಂದಿಗೆ ಸೇಕಡಾ ೩೦ರಂತೆ ಸಂಬಳ ದರವನ್ನು ಹೆಚ್ಚಿಗೆ ಕೊಡಿಸಬೇಕು, ೧೯೧೯ನೆ ಜನವರಿ ೧ರಿಂದ ಇದನ್ನು ಕೊಡಬೇಕು, ಇದಲ್ಲದೆ ಕುಟುಂಬಸ್ಥರಿಗೆ ಸೇಕಡಾ [illegible] ರಂತೆಯೂ ಅವಿವಾಹಿತರಿಗೆ ಸೇಕಡಾ [illegible] ರಂತೆಯೂ ಮನೆ ಬಾಡಿಗೆ ಮತ್ತು ಭತ್ಯ ಕಸಬುಗಳಲ್ಲಿ ಸೇಕಡಾ ೭½ ಮತ್ತು ೫ರಂತೆ ಸಾಮಾನ್ಯ ಊರುಗಳಲ್ಲಿ ಕೊಡಿಸಬೇಕು ಎಂದು ಡಿರೆಕ್ಟರ್ ಜನರಲ ರವರಿಗೆ ಮನವಿಮಾಡುವುದಾಗಿ ನಿರ್ಣಯವಾಯಿತು.

ಪುತ್ತೂರು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಸಭೆಯು ಕಾಸರಗೋಡು ಎಲಿಮೆಂಟರಿ ಶಾಲೆಯಲ್ಲಿ ಬರುವ ತಾರೀಕು ೨೨ನೇ ಮಧ್ಯಾಹ್ನ ೧ ಗಂಟೆಗೆ ನೆರೆಯುವದು.

ಪುತ್ತೂರು ರೆವೆನ್ಯೂ ಡಿವಿಜನಲ್ ಆಫಿಸರರ ಸರ್ಕೀಟು ಈ ತಿಂಗಳ ತಾ. ೧೯ರಿಂದ ೨೦ರ ವರೇಗೆ ಹೊಸದುರ್ಗ; ತಾ. ೨೧ರಿಂದ ೨೩ರ ವರೇಗೆ ಮಂಜೇಶ್ವರ ತಾ. ೨೪ರಿಂದ ೨೭ರ ವರೇಗೆ ಕಾಸರಗೋಡು; ತಾ. ೩೦ ಮಂಗಳೂರು ತಾ. ೩೧ ಕಾಸರಗೋಡು; ಎಪ್ರಿಲ್ ತಾ. ೧ರಿಂದ ೬ರ ವರೇಗೆ ಮಂಗಳೂರು; ತಾ. ೭, ೮, ೯, ಬೆಳ್ತಂಗಡಿ ತಾ. ೧೦ ಪುತ್ತೂರು.

ಇಲ್ಲಿ ಹಲವು ದಿವಸಗಳಿಂದ ತಮ್ಮ ಚೇಷ್ಟಾವೆಗಳನ್ನು ತೋರಿಸು ತ್ತಿದ್ದ ಬೇದಿಸ್ ಇಲೆಕ್ಟ್ರಿಕ್ ಬಾಯಸ್ಕೋಪ್ ಕಂಪೆನಿಯವರು ಕಳೆದ ಸೋಮವಾರ ಇಲ್ಲಿಯ ಲೇಡಿಸ್ ಕ್ಲಬ್ಬಿನ ಫಂಡಿನ ಸಹಾಯಾರ್ಥವಾಗಿ ಒಂದು ಪ್ರದರ್ಶನವನ್ನು ತೋರಿಸಿದರು. ಇಂದಿನ ರಾತ್ರೆ ೯-೩೦ ಗಂಟೆಗೆ ಪಟವರ್ಧನ ಸರ್ಕಸಿನವರೂ ಸಹ ಮೇಲಿನ ಕ್ಲಬ್ಬಿನ ಫಂಡಿನ ಸಹಾಯಾರ್ಥವಾಗಿ ಮುದ್ದಾಮು ಆಟ ಒಂದನ್ನು ಆಡಲಿಕ್ಕಿದ್ದವರು. ಈ ಸರ್ಕಸ ಕಂಪೆನಿಯವರು ಸರ್ಕಸ ಆಟದ ಪ್ರಯೋಜನವೆಂಬುದನ್ನು ಕುರಿತು ಕನ್ನಡಭಾಷೆಯಲ್ಲಿ ಉತ್ತಮವಾದ ಉಪನ್ಯಾಸವನ್ನು ಬರೆದವರಿಗೆ ಬಹುಮಾನವನ್ನು ಕೊಡಲಿಕ್ಕಿರುವರು. ಈ ಪೈಕಿ ಉತ್ತಮವಾದ ಉಪನ್ಯಾಸಕ್ಕೆ ರೂ. ೧೦, ಎರಡನೇದಕ್ಕೆ ರೂ. ೫, ೩ನೇದಕ್ಕೆ ರೂ. ೪ ಹೀಗೆ ಕೊಡುವರು. ಈ ಉಪನ್ಯಾಸ ಗಳನ್ನು ಈ ದಿನ ತುಲನೆಮಾಡಿ ಬಹುಮಾನಗಳು ಕೊಡಲಾಗುವವು.

ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ ೪ನೇ ವರ್ಧಂ ತ್ಯೋತ್ಸವವು ನಾಳೆ ಸಾಯಂಕಾಲ ೬-೩೦ ಗಂಟೆಗೆ ಗಣಪತಿ ಸೆಕೆಂಡರಿ ಶಾಲೆಯಲ್ಲಿ ರಾವ ಬಹದ್ದೂರ್ ಡಾಕ್ಟರ ವರ್ಗಿಸರವರ ಅಧ್ಯಕ್ಷತೆಯಲ್ಲಿ ಜರಗುವುದು.

ಓಲ್ ಇಂಡಿಯಾ ಖಿಲಾಫತ್ ಪರಿಷತ್ತಿನ ಠರಾವಿನ ಮೇರೆಗೆ ಈ ದಿನ ಹಿಂದುಸ್ತಾನದ ಆಯಾಯ ಭಾಗಗಳಲ್ಲಿ ಹಿಂದೂ ಮುಸಲ್ಮಾನರು ಐಕ್ಯದಿಂದ ಖಿಲಾಫತ್ ಹರ್ತಾಲವ್ರತವನ್ನು ಕೈಕೊಂಡು ಖಿಲಾಫತ್ ಪ್ರಶ್ನೆಯ ಗಹನವಿಚಾರದ ಕಡೆಗೆ ತಮಗಿರುವ ಆಗ್ರಹವನ್ನು ತೋರಿಸಲಿಕ್ಕಿರುವರು. ಅಂತೆಯೇ ಈ ದಿನ ಇಲ್ಲಿಯ ಇಸ್ಲಾಮಿಯ ಕ್ಲಬ್ಬಿನಲ್ಲಿ ಸಾಯಂಕಾಲ ೬-೩೦ ಗಂಟೆಗೆ ಈ ಕುರಿತು ಪಟ್ಟಣಿಗರ ಒಂದು ಸಭೆಯು ನೆರೆಯುವದು. ಸಕಲರೂ ಈ ಸಭೆಗೆ ದಯವಿಟ್ಟು ಚಿತ್ತೈಯಿಸಬೇಕಾಗಿ ಕೋರಿದೆ. ಅಲ್ಲದೆ ಖಾನ್ ಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ್ ಬಹದೂರವರ ಆಶ್ರಯದಲ್ಲಿ ಉಡುಪಿಯಲ್ಲೂ ಈ ಕುರಿತು ಈ ದಿನ ಒಂದು ಸಭೆಯು ನೆರೆಯುವದು.

ಮಂಗಳೂರು ತಾಲೂಕು ಬೋರ್ಡ ಮೆಂಬರರ ಈ ತಿಂಗಳ ಅಧಿವೇಶನವು ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಈ ತಿಂಗಳ ತಾರೀಕು ೨೪ನೇ ಬುಧವಾರ ಮಧ್ಯಾಹ್ನ ೩ ಗಂಟೆಗೆ ಕೂಡುವದು.

ನಮ್ಮ ಪಟ್ಟಣದ ಇಸ್ಲಾಮಿಯ ಕ್ಲಬ್ಬಿನ ವರ್ಧಂತ್ಯೋತ್ಸವವು ತಾರೀಕು ೨೧ನೇ ಸಾಯಂಕಾಲ ಜರಗುವುದು.

ಬರುವ ತಾ. ೨೦ನೇ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ಥಿಯೋ ಸೊಫಿಕಲ್ ಸೊಸೈಟಿಯಲ್ಲಿ ಖುರಾನಿನ ಬೋಧನೆಗಳು ಎಂಬುದನ್ನು ಕುರಿತು ಮಿ. ಮಹಮದ್ ಪುತ್ತೂರು ಸಾಹೇಬರವರು ಇಂಗ್ಲಿಷ್ ಭಾಷೆಯಲ್ಲಿ ಒಂದು ಭಾಷಣಮಾಡುವರು. ಇದಕ್ಕೆ ಸಕಲರಿಗೂ ಸುಸ್ವಾಗತವಿದೆ.

ನವಸುಧಾರಣೆಯಂತೆ ಸ್ಥಾಪಿಸಲ್ಪಡುವ ನ್ಯಾಯವಿಧಾಯಕ ಸಭೆಗೆ ಮತವನ್ನು (ಓಟು) ಕೊಡಲು ಅರ್ಹತೆಯುಳ್ಳವರ ಪಟ್ಟಿಯು ತಯಾರಾಗುತ್ತಲಿದೆ. ಈ ಪಟ್ಟಿಯಲ್ಲಿ ತಮ್ಮತಮ್ಮ ಹೆಸರುಗಳನ್ನು ದಾಖಲು ಮಾಡಿಕೊಳ್ಳಬೇಕಾಗಿರುವವರು ಯಾರೆಂದರೆ:—ಪ್ರತಿ ಯೊಂದು ಅವಿಭಕ್ತಕುಟುಂಬದಿಂದ ಅದರ ಪ್ರತಿನಿಧಿಯೊಬ್ಬರು ಅಥವಾ ಒಟ್ಟಿನಪಾಲು ಮಾಲಿಕೆಯಲ್ಲಿರುವಲ್ಲಿ ಒಬ್ಬರು. (೨) ಸರಕಾರಕ್ಕೆ ಐವತ್ತಕ್ಕಿಂತ ಹೆಚ್ಚಿನ ರೀತಿಯಲ್ಲಿ ತೆರಿಗೆಯನ್ನು ಸಲ್ಲಿಸುವವರು. (೩) ವಕ್ಕಲುಗಳು. (೪) ಪೆನಶನ್ ಹೊಂದಿದ ಮಿಲಿಟರಿ ಆಫೀಸರು ಗಳು. ಪುತ್ತೂರು ಮತ್ತು ಉಪ್ಪಿನಂಗಡಿ ತಾಲೂಕುಗಳಿಂದ ಈ ರಜಿಸ್ಟ್ರಿಗೆ ಹೆಸರುಗಳನ್ನು ದಾಖಲುಮಾಡಿಕೊಳ್ಳಬೇಕೆಂದಿರುವವರು ಇದೇ ಬರುವ ಎಪ್ರಿಲ್ ತಾರೀಕು ಒಂದರ ಒಳಗೆ ಈ ಬಗ್ಗೆ ಆ ತಾಲೂಕುಗಳ ಅಸಿಸ್ಟೆಂಟ ರಿಜಿಸ್ಟ್ರಾರರಾದ ಮೆ। ಎಮ್. ಎಸ್. ಪಾಯಸರ ಬಳಿಯಲ್ಲೂ, ಇತರ ತಾಲೂಕುಗಳಲ್ಲಿ ಆಯಾಯ ತಾಲೂಕುಗಳ ಸ್ಪೆಶಲ್ ರೆವೆನ್ಯೂ ಇನ್ಸ್‌ಪೆಕ್ಟರರ ಬಳಿಯಲ್ಲೂ ದಾಖಲು ಮಾಡಿಕೊಳ್ಳತಕ್ಕದ್ದಾಗಿ ಸರಕಾರದವರ ಪ್ರಕಟಣೆಯು ಹೊರಟಿದೆ.

ಕಳೆದ ಶನಿವಾರ ಮಂಗಳೂರು ಗವರ್ನಮೆಂಟು ಹೈಯರ್ ಎಲಿ ಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವದ ಸಮಾರಂಭಕ್ಕೆ ಪಟ್ಟಣದ ಆಯಾ ವಿದ್ಯಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ವಿದ್ಯಾ ವಿಚಾರದಲ್ಲಿ ಪ್ರಯತ್ನಗಳನ್ನು ನಡೆಸುತ್ತಿರುವ ಮಹನೀಯರು ಸಭೆಗೆ ದಯಮಾಡಿ ಬಂದಿದ್ದರು. ಮ. ರಾ. ರಾವ್ ಬಹದ್ದೂರ್ ಎ. ರಾಮ ಯ್ಯಪೂಂಜ, ಮ. ರಾ. ತಾಲೂಕು ಬೋರ್ಡಪ್ರೆಸಿಡೆಂಟ ಸುಜೀರ ರಘುನಾಥಯ್ಯ ಮ. ರಾ. ಆ. ದೇವಪ್ಪಪೂಂಜ ಮ. ರಾ. ಅಡಿಗೆ ಪದ್ಮನಾಭಯ್ಯ ಮ. ರಾ. ಕಾರ್ನಾಡ ಸದಾಶಿವರಾವ್ ಮ. ರಾ. ಅಮ್ಮೆಂಬಳ ವಾಮನಪೈ ಮ. ರಾ. ರಾ. ಬಿ. ದಾಸಪ್ಪರಾವ್, ಮ. ರಾ. ರಾ. ಟಿ. ಮಂಗೇಶರಾವ್ ಮ. ರಾ. ರಾ. ಪಂಡಿತ ಯಂ. ಎ. ಶಾಸ್ತ್ರಿ ಮ. ರಾ. ನಂದಳಿಕೆ ದೇವರಾವ್ ಈ ಮೊದಲಾದವರು ಸಭೆ

[illegible] ಸನ್ಮಾನ ಪತ್ರವನ್ನು [illegible] ಪ್ರಾರ್ಥನೆಯಾದ ನಂತರ [illegible] ಶಾಲಾವಿದ್ಯಾರ್ಥಿಗಳು ಅಭಿ [illegible] ನಂತರ ನಮ್ಮ ಕಳೆದ ಸಂಚಿಕೆಯಲ್ಲಿ ಪ್ರಕ ಟಿಸಲ್ಪಟ್ಟ [illegible] ಎಂಬ ಗೀತವು ಪಂಚಮ ವಿದ್ಯಾರ್ಥಿ [illegible] ಬಹಳ ಮನೋರಂಜಕವಾಗಿ ಹಾಡಲ್ಪಟ್ಟಿತು. ಈ ಕಾ [illegible] ಅಧ್ಯಕ್ಷರಿಂದ ಇನಾಮು ವಿದ್ಯಾರ್ಥಿಗಳಿಗೆ ಹಂಚ [illegible] ನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಮ.ರಾ. [illegible] ಮಂಗೇಶರಾಯರ ಚಿಕ್ಕ ಭಾಷಣವಿತ್ತು. ಪ್ರಾಥಮಿಕಶಿಕ್ಷಣದ [illegible] ಸ್ಥಿತಿಯನ್ನು ಮಂಗೇಶರಾಯರು ಸಂಕೋಚವಾಗಿ ಸೂಚಿಸಿದ್ದ [illegible] ಈ ವಿದ್ಯಾಭ್ಯಾಸದ ಪ್ರಸರಣದ ಕಡೆ ಪ್ರಜಾ ಮುಂದಾಳುಗಳ ಲಕ್ಷ್ಯವು ಇರಬೇಕಾದಂತೆ ಇಲ್ಲ. ಈ ಜಿಲ್ಲೆಯಲ್ಲಿ ಬೇಕಾದಷ್ಟು [illegible] ಇರುವದಿಲ್ಲ. ಅಲ್ಲದೆ ಈಗಿರುವ ಹೆಚ್ಚಿನ ಶಾಲೆಗಳಲ್ಲಿ [illegible] ಇರುವಂಥಾ ಉಪಾಧ್ಯಾಯರಲ್ಲಿ ಬಹಳಮಂದಿ ತರಬೇತಿಹೊಂದಿದಂಥ ವರಲ್ಲ. ಪ್ರಕೃತ ಇರುವ ಉಪಾಧ್ಯಾಯರ ತರಬೇತಿಯು ಹತ್ತು ವರ್ಷಗಳ ಕಾಲದಲ್ಲಾದರೂ ನೆರವೇರಬೇಕಾದರೂ ಪ್ರತಿ ಒಂದು ತಾಲೂಕು ಮುಖ್ಯ ಪಟ್ಟಣಗಳಲ್ಲಿ ಟ್ರೈನಿಂಗ್ ಶಾಲೆಗಳನ್ನು ಏರ್ಪಡಿ ಸುವುದು ಹೇಗೆ ಅಗತ್ಯವಾದ್ದು ಮತ್ತು ಉಪಾಧ್ಯಾಯರನ್ನು ಸಂಗ್ರಹಿಸುವುದರಲ್ಲಿಯೂ ಇರುವಂಥಾ ಕಷ್ಟಗಳೇನು, ತರಬೇತಿಹೊಂದಿ ದವರು ಸಹ ತಮ್ಮ ವೃತ್ತಿಯಲ್ಲಿ ತೃಪ್ತಿಕರವಾದಂಥಾ ಪ್ರತಿಫಲವು ದೊರೆಯಲಿಕ್ಕೆ ಅಸ್ಪದವಿಲ್ಲದೆ ಉಪಾಧ್ಯಾಯ ವೃತ್ತಿಯನ್ನೆ ಬಿಟ್ಟು ಬೆಂಬ್ಯಾಯತ್ತ ಕಡೆ ಹೇಗೆ ಜೀವನದ ಬಗ್ಯೆ ಹೋಗುತ್ತಿರುವವರು ಎಂಬೀ ವಿಷಯಗಳನ್ನು ಸಭಿಕರಿಗೆ ವಿವರಿಸಿ ಹೇಳಿ ಇಂಥಾ ಕೊರತೆ ಗಳನ್ನು ಕಿತ್ತು ಪ್ರಾಥಮಿಕ ವಿದ್ಯಾಪ್ರಸರಣದಲ್ಲಿ ಸರ್ವರ ಲಕ್ಷ್ಯವೂ ಅಗತ್ಯವಾಗಿ ಬೇಕಾಗಿದೆಂಬುದನ್ನು ಬಹಳ ಮಂದಟ್ಟಾಗಿ ಹೇಳಿದರು

ಮಕ್ಕಳ ಆಟ—ಯುಗಾದಿಯೆಂಬ ನಟನೆಯನ್ನು ಆ ಶಾಲೆಯ ಮಾದರಿಶಾಲೆಯಲ್ಲಿ ಶಿಕ್ಷಣ ಹೊಂದಿರುವ ಇಬ್ಬರು ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳು ಆಡಿ ತೋರಿಸಿದರು ಶಾಲೆಯಲ್ಲಿ ಇಂಗ್ಲಿಷ ಭಾಷೆ ಯನ್ನು ಮಕ್ಕಳಿಗೆ ಹೇಗೆ ಕಲಿಸಬೇಕು, ಮತ್ತು ಐದಾರು ತಿಂಗಳ ಕಾಲದಲ್ಲಿಯೇ ಈ ಅನ್ಯ ಭಾಷೆಯನ್ನು ಯೋಗ್ಯ ವಿಧಾನದಿಂದ ಕಲಿಸಿದ್ದಲ್ಲಿ ಹೇಗೆ ಬೇಗನೆ ತಿಳಿಯುವುದು, ಎಂಬುದು ಈ ಚಿಕ್ಕ ಬಾಲಕರ ಸಂಭಾಷಣದಿಂದ ಸ್ಪಷ್ಟವಾಗುತ್ತದೆ ಒಳಿಕ ಭಾರತಮಾತೆಯ ಚಿತ್ರಪದರ್ಶನವನ್ನು ತೋರಿಸಿ, ದೇಶಭಕ್ತಿಪೂರಿತವಾದ "ತಾಯೇ ನಿಡಿಸೆನ್ನ" ಎಂಬ ಗೀತದ ಮೂಲಕ ದೇಶಮಾತೆಯ ಸ್ತುತಿಯು ಮಾಡ ಲಾಯಿತು ಇದರ ನಂತರ ಹಿಂದೂಸ್ಥಾನದ ಚರಿತ್ರೆಯಲ್ಲಿ ಒಂದು ಆದರ್ಶಪಾರಯೆಂಬ ಕಾಳಮದ್ದಳೆಯ ಚಲೋ ಯಕ್ಷಗಾನ ಪ್ರಸಂಗವು ನಡೆಯಿತು ಇವುಗಳಾದನಂತರ ಅಧ್ಯಕ್ಷ [illegible] ಶಾಲೆಯು ಕಳೆದ [illegible] ಇಸವಿಯಲ್ಲಿ ಯಾವ ಸ್ಥಿತಿಯಲ್ಲಿ ಇತ್ತು, ಈಗ ರಾ ಮಂಗೇಶ ರಾಯರ ಮತ್ತು ಇವರ ಸಹಾಯಾರ್ಥಿಗಳಾದ ಸಮರ್ಥ ಉಪಾಧ್ಯಾ ಯರ ಆಡಳಿತೆಯಿಂದ ಹೇಗೆ ಉಚ್ಚಾಯಸ್ಥಿತಿಯನ್ನು ಹೊಂದಿದೆ ಎಂಬು ದನ್ನು ವಿವರಿಸಿ, ಪ್ರಾಥಮಿಕಶಿಕ್ಷಣದ ಪ್ರಸರಣೆಯು ಜನಾಂಗದ ಅಭಿವೃ ದ್ಧಿಗ ಹೇಗೆ ಮುಖ್ಯವಾಗಿದೆ-ಅದುಸ್ಥಿತಿಯು ಈಗ ಯಾವತರದಲ್ಲಿರುತ್ತದ ಅದರ ಉನ್ನತಿಯ ಬಗ್ಯೆ ಜನರು ಎಷ್ಟರಮಟ್ಟಿನ ಪ್ರಯತ್ನಗಳನ್ನು ಮಾಡತಕ್ಕದ್ದು, ಉಪಾಧ್ಯಾಯ ವರ್ಗದವರ ಸಂಬಳವು ಯಾವ ಅಪೂ ರ್ಣವಾದ ರೀತಿಯಲ್ಲಿರುತ್ತದೆ ಎಂಬೀ ಮೊದಲಾದ ವಿಷಯಗಳನ್ನು ಕುರಿತು ಯೋಗ್ಯವಾದ ದೀರ್ಘ ಭಾಷಣವನ್ನು ಮಾಡಿದರು ಕೊನೆಗೆ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿದಮೇಲೆ ಅಬ್ಬೆಗ ಮದುವೆಯ ಚಿಂತೆ ಎಂಬ ಕನ್ನಡ ಪ್ರಹಸನವನ್ನು ಅಭಿನಯಿಸಿ ರಾಜ ಗೀತವನ್ನು ಹಾಡಿ ಅಂದಿನ ಸಮಾರಂಭವು ಕೊನೆಗೊಂಡಿತು ಶಿಕ್ಷಣವು ರಾಜಭಕ್ತಿಗೂ, ದೇಶಭಕ್ತಿಗೂ, ಭಾಷಾಸೇವೆಗೂ ತಕ್ಕದ್ದಾದ ರೀತಿ ಯಲ್ಲಿ ಆಗಬೇಕೆಂಬದನ್ನು ಕಾರ್ಯರೂಪದಲ್ಲಿ ತಂದಿರುವುದು ಮೇಲಿನ ದೇಖಾವೆಗಳಿಂದಲೇ ಸ್ಪಷ್ಟವಾಗುತ್ತದೆ ಈ ಪ್ರದರ್ಶನ ಗಳು ಎಲ್ಲರೂ ನೋಡುವಂತಿದ್ದರೂ ಹೆಚ್ಚಿನ ಜನರಿಗೆ ಆಮಂ ತ್ರಣವನ್ನು ಕೊಡಲು ಬಹುಶಃ ಸ್ಥಳಸಂಕೋಚವೆ ಕಾರಣವಾಗಿ ರಬೇಕು

ಆಹಾರದ ಪುರವರೆ

ಆಹಾರ ಸಾಮಗ್ರಿಗಳನ್ನು ಮದ್ರಾಸು ಸರಕಾರದವರು ಇದೇ ಮಾರ್ಚ [illegible] ತಾರೀಕಿನಲ್ಲಿ ಒಂದು ಪ್ರಕಟನೆಯನ್ನು ಹೊರಡಿಸಿರುವರು ಅದರ ಮೇರೆಗೆ ಒಂದು ಜಿಲ್ಲೆಯಿಂದ ಮದ್ರಾಸು ಸಂಸ್ಥಾನದೊಳಗೆ ಇನ್ನೊಂದು ಜಿಲ್ಲೆಗೆ ಆಹಾರ ಸಾಮಗ್ರಿಯನ್ನು ಸಾಗಿಸುವುದಕ್ಕೆ ನಿರ್ಬಂಧವಿಲ್ಲ ಉಳಿದ ನಿಬಂಧನೆಗಳು ಈ ರೀತಿಯಾಗಿವೆ —

೧. ಬರ್ಮಾ ಅಥವಾ ಬಂಗಾಳದಿಂದ ತರಿಸುವ ಅಕ್ಕಿಗೆ ನಿರ್ಬಂಧವಿದೆ

೨. ರಖಂ ಆಗಿ ಬರ್ಮಾ ಅಥವಾ ಬಂಗಾಳದ ಅಕ್ಕಿ ತರಿಸುವವರಿಗೆ [illegible] ಒಂದು ಗೋಣಿಯ ಮೇಲೆ ೪ ಆಣೆಗೆ ಮೀರದ ಮುನಾಫೆ ಅಥವಾ ಚಿಲ್ಲರೆಯಾಗಿ ಮಾರುವುದಾದರೆ ೮ ಆಣೆಗೆ ಮೀರದ ಮುನಾಫೆ ಇಟ್ಟು ಮಾರುವುದಕ್ಕೆ ಸನದು ಇದೆ

೩. ಹೀಗೆ ರಖಂ ಆಗಿ ತರಿಸುವವರು ಮದ್ರಾಸು ಶಹರಿನಲ್ಲಿಯೂ ಬೇರೆ ಜಿಲ್ಲೆಗಳಲ್ಲಿಯೂ ಪ್ರಮುಖರಾದ ಯಾವ ವರ್ತಕರಿಗೆ ಅಥವಾ ಸಂಸ್ಥೆಗಳಿಗೆ ಮಾತ್ರ ಈ 'ಕಂಟ್ರೋಲ್' ಅಕ್ಕಿ ಒದಗಿಸಿಕೊಡಬಹುದು ಎಂಬ ಪಟ್ಟಿಯನ್ನು ಆಯಾಯ ಜಿಲ್ಲೆಯ ಕಲೆಕ್ಟರುಗಳು ಒದಗಿಸಲಿಕ್ಕಿರುವರು ಈ ವರ್ತಕರೂ ಸಂಸ್ಥೆಗಳೂ ಈ ಅಕ್ಕಿ ಯನ್ನು ಚಿಲ್ಲರೆಯಾಗಿ ಮಾತ್ರವಾಗಿ ಒಂದೇ ಬೆಲೆಕ್ಕೆ ೮ ಆಣೆ ಮುನಾಫೆ ಹೊರತು ವಿಕ್ರಯಿಸಬಹುದು ಇಂಥ ವರ್ತಕರಿಗೂ ಇತರ ಸಂಸ್ಥೆಗಳಿಗೂ ಯಾವ ಜಿಲ್ಲೆ ಯಲ್ಲಿ ಎಷ್ಟು ಅಕ್ಕಿ ಬೇಕಾಗಿದೆ ಎಂಬ ಪಟ್ಟಿಯನ್ನು ತಯಾರಿಸಿ ಆಯಾ ಕಲೆಕ್ಟರರು ಈ ರಖಂ ವ್ಯಾಪಾರಿಗಳ ಬಳಿಗೆ ಕಳುಹಿಸುವುದಲ್ಲದೆ ತಮ್ಮ ಮೂಲಕ ಹೋಗದ [illegible] ಇಂಡೆಂಟುಗಳನ್ನು ಈ ರಖಂ ವ್ಯಾಪಾರಿಗಳು ಅಂಗೀಕರಿಸಬಾರದೆಂದು ಕಲೆಕ್ಟರು

[illegible] ರಖಂ ವ್ಯಾಪಾರಿಗಳ ಬಳಿಗೆ ಕಳುಹಿಸಬೇಕು.

೫ ಈ ರಖಂ ವ್ಯಾಪಾರಿಗಳು ಈ ಪಟ್ಟಿಗಳನ್ನು ಸೇರಿಸಿ ಒಟ್ಟಿಗೆ ಪ್ರತಿ ತಿಂಗಳಿಗೆ ಎಷ್ಟು ಅಕ್ಕಿ ಬೇಕಾಗುತ್ತದೆ ಎಂಬ ರಖಂ ಪಟ್ಟಿಯನ್ನು 'ಡಿರೆಕ್ಟರ ಒಫ್ ಸಿವಿಲ್ ಸಪ್ಲೈಸ್' ಇವರ ಬಳಿಗೆ ಹಿಂದಿನ ತಿಂಗಳ ೨೦ನೆ ತಾರೀಕಿನೊಳಗೆ ಕಳುಹಿಸಬೇಕು.

೬ ಈ ಪಟ್ಟಿಯ ಮೇರೆಗೆ ಅಕ್ಕಿ ಒದಗಿಸಲಿಕ್ಕೆ ಸಾಧ್ಯವಿದೆ ಎಂಬ ಪ್ರತ್ಯುತ್ತರವು ಈ ರಖಂ ವ್ಯಾಪಾರಿಗೆ ಸಿಕ್ಕಿದೊಡನೆ ಅದನ್ನು ಒಪ್ಪಿಸಿಕೊಳ್ಳಲಿಕ್ಕೆ ರಖಂ ವ್ಯಾಪಾರಿಯು ಮಾಡತಕ್ಕದ್ದು

೮ ರಖಂ ವ್ಯಾಪಾರಿಗಳು ಆಯಾ ಜಿಲ್ಲೆಯ ಕಲೆಕ್ಟರರ ಹೆಸರಿಗೆ ಅಕ್ಕಿಯ ನ್ನು ಕಳುಹಿಸುವಾಗ ಅದರ ಭಾರ, ಬೆಲೆ, ಲಾಗವಡು ಮುಂತಾದ್ದನ್ನು ಕಾಣಿಸುವ ಪಟ್ಟಿ ಯನ್ನೂ ಕಳುಹಿಸಿಕೊಡಬೇಕು

೯ ಈ ಪಟ್ಟಿಯನ್ನು ಆಧರಿಸಿ ಆಯಾ ಜಿಲ್ಲೆಯ ಕಲೆಕ್ಟರರು ಈ ಅಕ್ಕಿ ಯನ್ನು ಚಿಲ್ಲರೆ ವಿಕ್ರಯಿಸುವ ಸರಾಸರಿ ಬೆಲೆಯನ್ನು ನಿರ್ಧರಿಸುವರು

೧೦ ಚಿಲ್ಲರೆ ಮಾರುವ ವರ್ತಕನು ಈ ಸನದಿ ಧಾರಣೆಯನ್ನು ತೋರಿಸುವ ಒಂದು ಪಟ್ಟಿಯನ್ನು ತನ್ನ ಅಂಗಡಿಯ ಬಹಿರಂಗವಾದ ಭಾಗದಲ್ಲಿ ತೂಗಿಸತಕ್ಕದ್ದು ಈ ಪಟ್ಟಿಯನ್ನು ಕಪ್ಪಾದ ಹಲಗೆಯ ಮೇಲೆ ಬಿಳಿ ದೊಡ್ಡ ಅಕ್ಷರಗಳನ್ನು ಚಿತ್ರಿಸಿ ತಯಾರಿಸಬೇಕು

ಶ್ರಮವಿಭಾಗದ ತತ್ವವು ಗೃಹಸಂಸ್ಥೆಯಲ್ಲೂ, ಕುಟುಂಬ ರಚನೆಯಲ್ಲೂ, ಸಮಾಜ ಮಂಡಲದಲ್ಲೂ, ಹಾಗು ರಾಜಕೀಯ ಕಾರ್ಯದಲ್ಲೂ ತಪ್ಪದೆ ಇದ್ದೇ ಇರುತ್ತದೆ ಎಂಬುದನ್ನು ನಾವು ಈ ವರೆಗೆ ಪ್ರತಿಯೊಂದು ಸಂದರ್ಭದಲ್ಲಿ ತೋರಿಸಿದೆವು. ಸರ್ವತ್ರ ಸಮಭಾವವಾದರೂ ಇದರಂತೆಯೆ ಸರ್ವವ್ಯಾಪಕವಾಗಿದೆ ಎಂಬ ಸಂಗತಿಯೆಲ್ಲಾ ಹಿಂದೆಯೆ ಬಂದುಹೋಗಿದೆ. ಪರಂತು ಇಲ್ಲಿ ಒಂದು ತೊಂದರೆಯು ಬರುವುದು. ಶ್ರಮವಿಭಾಗದ ತತ್ವಕ್ಕೂ ಸರ್ವತ್ರ ಸಮಭಾವಕ್ಕೂ ಪರಸ್ಪರ ಏಕವಾಕ್ಯತೆಯು ಆಗಲೊಲ್ಲದು. ಅವುಗಳಲ್ಲಿ ಅನ್ಯೋನ್ಯ ಸಾಮರಸ್ಯವು ಇರಲೊಲ್ಲದು. ಶ್ರಮವಿಭಾಗವು ಇರಬೇಕೆಂದಾದಮೇಲೆ ಕರ್ತವ್ಯ ಕ್ಷೇತ್ರಗಳು ಭಿನ್ನವಾಗುವವು, ಸಾಧನಮಾರ್ಗಗಳು ಭಿನ್ನವಾಗುವವು, ಮತ್ತು ಆಯಾ ಫಲಗಳೂ ಕೂಡ ಭಿನ್ನವಾಗುವವು. ಇಂಥ ಪರಿಸ್ಥಿತಿಯಲ್ಲಿ ಸಮಭಾವವಿರುವುದೆಂದರೆ ಹೇಗೆ? ಸಮಾಜಸ್ಥಿತಿಯನ್ನು ನೋಡುವಾಗ ಲೋಕದೊಳಗಿನ ಸಮಾಜಗಳಲ್ಲಿ ಪರಸ್ಪರ ಉಚ್ಚನೀಚ ಭಾವವು ನೆಲೆಗೊಂಡದ್ದು ಕಂಡು ಬರುತ್ತದೆ. ಮಾನವ ಸಮಾಜದಲ್ಲಿ ಎಲ್ಲ ಕಡೆಗಳಲ್ಲಿ ಈ ಭಾವನೆಯು ಒಂದಿಲ್ಲವಾದರೆ ಇನ್ನೊಂದು ರೂಪದಿಂದ ಹರಡಿಕೊಂಡಿದೆ. ಆಗ ಸಮಭಾವನೆಯು ಇರಬೇಕೆಂದರೆ ಅದು ಹೇಗೆ ಸಾಧ್ಯವಾದೀತು? ಬೇರೆ ಬೇರೆ ಉನ್ನತತೆಯ ಪಟಗಳನ್ನು ತಂದು ಪ್ರದರ್ಶನ ಗೃಹದಲ್ಲಿ ಏಕಾಕಾರತೆಯಿಂದ ಇಡಬೇಕೆಂದರೆ ಅದು ಹೇಗೆ ಸಾಧ್ಯವಾದೀತು? ದ್ವಿಪಾದ್ಯ ಚತುಷ್ಪಾದ ಪ್ರಾಣಿಗಳನ್ನು ಒಟ್ಟಿಗೆ ಸೇರಿಸಿ ಎಲ್ಲರೂ ಒಂದು ತಂತಿಯ ಮೇಲೆ ಒಂದೆ ಸವನೆ ನಡಿಯಬೇಕೆಂದರೆ ಅದನ್ನು ಸಾಧ್ಯ ಕೋಟಿಯಲ್ಲಿ ತಂದು ತೋರಿಸಲು ಯಾವ ಸರಕಸ್ಸಿನವರಿಗಾದರೂ ಸಾಧ್ಯವೆ? ಆದ್ದರಿಂದ ಅನೇಕ ಸಂಗತಿಗಳಲ್ಲಿ ಭೇದವಿರುವುದರಿಂದ ಹಾಗು ಉಚ್ಚನೀಚಭಾವದ ಕಲ್ಪನೆಯು ಮುಸುಕಿಕೊಂಡಿರುವುದರಿಂದ ಸಮಭಾವನೆಯ ಶಬ್ದವು ಕರ್ಣಮಧುರವಾಗಿದ್ದರೂ, ಹಾಗು ಉಚ್ಚ ಕಲ್ಪನೆಯ ವಾತಾವರಣದಲ್ಲಿ ತೇಲಿಕೊಂಡಿರುವ ಮನಸ್ಸಿಗೆ ಆನಂದಕರವಾಗಿದ್ದರೂ ವ್ಯವಹಾರ ಭೂಮಿಯಲ್ಲಿ ಸಮಭಾವನೆಯು ಅಸಾಧ್ಯವು. ಇದೊಂದು ತೊಂದರೆಯು ಈ ಸಂದರ್ಭದಲ್ಲಿ ಬರುತ್ತದೆ. ಇದಕ್ಕೆ ಸರಿಯಾದ ನಿವೃತ್ತಿಯನ್ನು ಹೇಳದೆ ಮುಂದರಿಸುವುದು ಯುಕ್ತವಾಗಲಾರದು. ಆದ್ದರಿಂದ ಈ ವಿಷಯವನ್ನು ಕೊಂಚಮಟ್ಟಿಗೆ ವಿವರಿಸೋಣ.

ಮಾನವ ಸಮಾಜದಲ್ಲಿ ರೂಢವಾಗಿರುವ ಉಚ್ಚನೀಚತೆಯ ಕಲ್ಪನೆಯು ಕೇವಲ ಕೃತ್ರಿಮವೆಂದು ಹೇಳಹೊರಟರೆ, ಪ್ರಕೃತಿಯ ವಸ್ತುಸ್ಥಿತಿಯು ಕಡೆಗೆ ಕಣ್ಮುಚ್ಚಿದಂತಾಗುತ್ತದೆ. ಕಾರಣ, ಉಚ್ಚನೀಚತ್ವದ ಭಾವನೆಯಲ್ಲಿ ಕೆಲವುಮಟ್ಟಿಗೆ ಕೃತ್ರಿಮತೆಯೂ, ಅತಿರೇಕವೂ ಮತ್ತು ಉಚ್ಛೃಂಖಲತೆಯೂ ಬಂದಿರುವವುಗಳಾದರೂ ಲೋಕದಲ್ಲಿ ಉಚ್ಚನೀಚತ್ವವು ವಸ್ತು ಸ್ವರೂಪದಿಂದ ಇದ್ದೇ ಇದೆ. ದೃಷ್ಟಾಂತಕ್ಕೆ ಭೂಮಿಯ ಭಾಗದಂಥಾ ಜಡವಸ್ತುವನ್ನು ಇಟ್ಟುಕೊಂಡು ನೋಡೋಣ. ನಮ್ಮ [illegible] ಒಂದೇ [illegible]ದಿಂದ ರಚಿತವಾಗಿದ್ದರೂ ಅದರ

[illegible] ಕಂಡುಬರುತ್ತವೆ. [illegible] ಸ್ವರೂಪದ [illegible] ಭಾಗವು ಎಲ್ಲ ಕಡೆಗಳಲ್ಲಿ ಏಕರೂಪವಾದರು ಬಾಹ್ಯಪ್ರಕೃತಿಯ ಪರಿಣಾಮದಿಂದ ಅದರಲ್ಲಿ ವಿವಿಧತ್ವವೆ ಹುಟ್ಟುತ್ತದೆ. ಅಥವಾ ಹಾಗೆ ಅದು ಹುಟ್ಟುವದು ಅಪರಿಹಾರ್ಯವಾಗಿರುತ್ತದೆ. ಈ ವಿವಿಧತೆಗೆ ಲೌಕಿಕ ಭಾಷೆಯಲ್ಲಿ ಉಚ್ಚನೀಚತೆ ಎಂದು ಹೆಸರು ಕೊಡೋಣವಾಗಿದೆ. ಎಂದ ಮೇಲೆ ಭೂಮಿಯಂಥ ಜಡ ವಸ್ತು ವಿನಲ್ಲೂ ಉಚ್ಚನೀಚತೆಯು ಕಂಡುಬರುತ್ತದೆನ್ನುವಾಗ ಮಾನವ ಸಮಾಜದಂಥ ಸಜೀವ ಭಾಗದಲ್ಲಿ ಉಚ್ಚನೀಚತೆಯು ತೋರಿಬರುವುದು ಆಶ್ಚರ್ಯವೆ? ಮಾನವ ವಂಶವು ಮೂಲದಲ್ಲಿ ಏಕರೂಪ ಮತ್ತು ಏಕಾವಯವವಾಗಿದ್ದರೂ, ಬುದ್ಧಿತತ್ವದ ಹಾಗು ಇತರ ಪರಿಸ್ಥಿತಿಯ ಪರಿಣಾಮವು ಅದರ ಮೇಲುಂಟಾಗಿ ಅದರಲ್ಲಿ ಧಾರಾಳವಾದ ವಿವಿಧತ್ವವು—ಉಚ್ಚನೀಚತೆಯು ಬೆಳೆದಿದೆ. ಈ ವಿಷಯವನ್ನು ಪ್ರಕೃತಿ ಶಾಸ್ತ್ರಜ್ಞರು ಸೋಪಪತ್ತಿಕವಾಗಿಯೂ ಸೋದಾಹರಣವಾಗಿಯೂ ವಿವೇಚಿಸಿರುವುದರಿಂದ ನಾವು ಇಲ್ಲಿ ಅದನ್ನು ನಿರ್ವಿವಾದದ ಕೋಟಿಯಲ್ಲಿ ಇಟ್ಟುಕೊಂಡು ಮುಂದರಿಸುವೆವು. ಸ್ವಾಭಾವಿಕವಾಗಿಯೆ ಬೀಜರೂಪದಲ್ಲಿರುವ ವಿವಿಧತ್ವವು ಮಾನವ ಸಮಾಜದಲ್ಲಿ ಬುದ್ಧಿಶಕ್ತಿಯ ಸಹಾಯದಿಂದ ಹಾಗು ದೇಹದ ಸಾಮರ್ಥ್ಯದಿಂದ ಉಚ್ಚನೀಚತೆಯಲ್ಲಿ ಪರ್ಯವಸಾನವನ್ನು, ಸಮಾಜದಲ್ಲಿ ತುಂಬಾ ಕೇಡನ್ನುಂಟುಮಾಡಿದೆಂಬುದನ್ನು ತೀವ್ರಸಂಪ್ರದಾಯವಾದಿಯಾದರೂ ಅಲ್ಲಗಳೆಯಲಿಕ್ಕಿಲ್ಲ. ಸಂಪ್ರದಾಯವಾದಿಯು ಈ ರೀತಿಯಿಂದ ತನ್ನ ಬುದ್ಧಿ ಸಮತೆಯನ್ನು ತೋರಿಸುವಾಗ ಲೋಕದಲ್ಲಿ ನೆಲೆಗೊಂಡಿರುವ ನೈಸರ್ಗಿಕ ವಿವಿಧತೆಯ ವಿಷಯದಲ್ಲಿ ಉಚ್ಚನೀಚತೆಯ ಬಗ್ಗೆ—ಅದು ಇಲ್ಲವೆಂದು ತಿಳಿಯುವ ತನ್ನ ದುರಾಗ್ರಹವನ್ನು ಸಾಮಾಜಿಕ ಸಮತಾವಾದಿಯು ಬಿಟ್ಟುಬಿಡುವುದು ಲೇಸು. ಈ ಬಗೆಯಿಂದ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವದ ನಿವಾಸಿಗಳು ಮಧ್ಯದಲ್ಲಿ ಬಂದ ಮೇಲೆ ಆ ಮಧ್ಯವರ್ತಿಗಳಲ್ಲಿ ಏಕವಾಕ್ಯತೆಯುಂಟಾಗುವುದು ಕಷ್ಟವಲ್ಲ. ಉಚ್ಚನೀಚತೆಯು ಸ್ವಾಭಾವಿಕವಾದರೂ ಅದಕ್ಕೆ ವಿವಿಧ ಪ್ರಯತ್ನಗಳಿಂದ ಬಣ್ಣ ಹಾಕಿ ಅದರ ಸ್ವರೂಪವನ್ನು ಭೀಕರವಾಗಿಯೂ, ಭೀಭತ್ಸಾತ್ಮಕವಾಗಿಯೂ, ಪುರೋಭಿವೃದ್ಧಿಗೆ ಪ್ರತಿಬಂಧಕವಾಗಿಯೂ ತೋರಿಸುವುದು ಮಾನವ ಸಮಾಜದ ಹಿತಕ್ಕೆ ಶ್ರೇಯಸ್ಕರವಲ್ಲ. ಇಷ್ಟೇ ಇಲ್ಲ, ಇದರಿಂದ ತಮ್ಮ ಕಾಲಿಗೆ ತಾವೆ ಕಲ್ಲು ಹೊಡಕೊಳ್ಳುವಂತೆ ಆತ್ಮಘಾತಕತೆಯ ದೃಷ್ಟಾಂತವಾಗುತ್ತದೆ.

ಇದೇ ಸಂಗತಿಯನ್ನು ಮೇಲಿನ ಆಲಂಕಾರಿಕ ಭಾಷೆ ಬಿಟ್ಟು ಸ್ಪಷ್ಟಶಬ್ದಗಳಲ್ಲಿ ತಂದುಕೊಡುವುದಾದರೆ ಉಚ್ಚನೀಚತೆಯು ಸ್ವಾಭಾವಿಕವೆ; ಆದರೆ ಆ ಬಗ್ಗೆ ನಿತ್ಯನೈಮಿತ್ತಿಕ ವ್ಯವಹಾರಗಳಲ್ಲಿ ಕಲ್ಪಿಸಿಕೊಳ್ಳುವ ಭಾವನೆಯು, ಆ ಭಾವನೆಗೆ ಮೂರ್ತಸ್ವರೂಪವನ್ನು ಕೊಡುವ ಉದ್ದೇಶದಿಂದ ಆಚರಿಸಲ್ಪಡುವ ನಡತೆಯು, ಹಾಗು ಆ ನಡತೆಗೆ ಬರುವ ಫಲವು ಇವೆಲ್ಲ ಅಸ್ವಾಭಾವಿಕವಾದವುಗಳು. ಈ ಅಸ್ವಾಭಾವಿಕವಾದ ಸಂಗತಿಗಳನ್ನು ತೆಗೆದುಹಾಕುವುದೆ ಸಮಾಜಸುಧಾರಣೆಯ ಮುಖ್ಯಸೂತ್ರವು. ಈ ಸೂತ್ರವು ಕಾರ್ಯರೂಪದಲ್ಲಿ ಬರುವಾಗ ನಾವು ಹಿಂದೆ ಹೇಳಿದ ಶ್ರಮವಿಭಾಗದ ತತ್ವಕ್ಕೆ ಇಂಬು ದೊರಕಿತು. ಈ ತತ್ವವು, ಸಮತೋಲವಾದ ತಕ್ಕಡಿಯ ಮುಳ್ಳಿನಂತೆ ಸರಿಯಾಗಿ ನಿಂತಲ್ಲಿ ವೈಷಮ್ಯಕ್ಕೆ ಅವಕಾಶವಿರುವುದಿಲ್ಲ. ಈ ಸಂಗತಿಯನ್ನು ಆಲೋಚಿಸಿ ಪ್ರಾಚೀನ ಕಾಲದ ಸಮಾಜಸುಧಾರಕರು ಚಾತುರ್ವರ್ಣ್ಯದ ಸಂಸ್ಥೆಗೆ ಅಸ್ತಿತ್ವವನ್ನು ಕೊಟ್ಟರು. ಅದರಲ್ಲಿ ವೈಷಮ್ಯವು ಆವತರಿಸಬಾರದು, ಮಾನವಸಮಾಜದ ಹಿತವು ಅವಿರಹಿತವಾಗಿ ನಡೆಯಬೇಕು ಎಂದು ಮುಂತಾದ ಭಾವನೆಯಿಂದ ಸರ್ವತ್ರಸಮಭಾವದ ತತ್ವವನ್ನು ಆ ಪ್ರಾಚೀನ ಸಮಾಜಸುಧಾರಕರು ಜಗತ್ತಿಗೆ ಕೊಟ್ಟರು. ಈ ಶ್ರಮವಿಭಾಗದ ಮತ್ತು ಸಮಭಾವದ ಮರ್ಮವನ್ನರಿಯದೆ ಸಮಾಜದಲ್ಲಿ ಸ್ವೇಚ್ಛಾಪ್ರವೃತ್ತಿಯುಂಟಾಗ ತೊಡಗಿದ ಮೇಲೆ ಮೇಲಿನ ಭೀಕರ ಸ್ವರೂಪವು ತೋರಹತ್ತಿದೆ.

ಮಾನವಸಮಾಜದ ಸಾಮಾಜಿಕ ಇತಿಹಾಸದ ಮೂಲಸ್ವರೂಪವು ಈ ರೀತಿ ಇರುವಾಗ ಅದರ ಉದ್ಧರಣವನ್ನು ಮಾಡಬೇಕೆಂದು ಪ್ರಯತ್ನಪಡುವ ಈಗಿನ ಕಾಲದ ಸಮಾಜಸುಧಾರಕರು ವಿಶೇಷತಃ ಹಿಂದೀ ಸಮಾಜಸುಧಾರಕರು ಯಾವ ಕರ್ತವ್ಯವನ್ನು ಕೈಕೊಳ್ಳಬೇಕೆಂದರೆ, ಶ್ರಮವಿಭಾಗ ಮತ್ತು ಸಮಭಾವ ಈ ಎರಡು ಮೂಲ ಸಿದ್ಧಾಂತಗಳನ್ನು ಆದರ್ಶವಾಗಿಟ್ಟುಕೊಂಡು ಸುಧಾರಣಾ ರಥವನ್ನು ಮುಂದರಿಸಬೇಕು. ಶ್ರಮವಿಭಾಗದ ತತ್ವವು ಕೇವಲ ಲೌಕಿಕ ಮತ್ತು ಸಮಭಾವದ ತತ್ವವು ವೇದಾಂತದ್ದು. ಈ ಎರಡು ತತ್ವಗಳನ್ನು ಏಕೀಕರಿಸಿಕೊಂಡು ಕೆಲಸಮಾಡ ಹೊರಟರೆ ಸಮಾಜದ ಐಹಿಕ ಉನ್ನತಿಯೂ ಪಾರತ್ರಿಕ ಸುಖವೂ ಉಂಟಾಗುತ್ತವೆ. ಇರಲಿ. ಈ ವಿಷಯವನ್ನು ಒದಗಿಸಿಕೊಳ್ಳುವುದು ಹೇಗೆ ಎಂಬೀ ಸಂಗತಿಯನ್ನು ಮುಂದೆ ದಿಗ್ದರ್ಶಿಸಿ ಈ ಲೇಖಮಾಲೆಯನ್ನು ನಾವು ಮುಗಿಸುವವರಿದ್ದೇವೆ. ಆದರೂ ಒಂದು ಮಾತನ್ನು ಇಲ್ಲಿ ವಾಚಕರ ಮುಂದಿಡುವದು ನಮ್ಮ ಕರ್ತವ್ಯವಾಗಿದೆ. ಅವಿಕೃತವಾದ ಮಾನವ ಸಮಾಜದಲ್ಲಿ ಏಕರೂಪತೆ ಇರುವಾಗ, ಹಿಂದೂಸ್ಥಾನದಲ್ಲಿ ಮಾತ್ರ [illegible] ಹೇಗೆ ಬಂದ

[illegible]

ಸ್ಫುಟವಿಚಾರಗಳು.

೧. [illegible] ಅನೇಕ ಭಾಗಗಳಲ್ಲಿ ಹಾಳಿಯಾದ ಯುರೋಪಿನ [illegible] ಬಗ್ಗೆ ಮಿತ್ರಸಂಘದ ಮುಖ್ಯವಾದ ಕೌನ್ಸಿಲು ಯಾವ ನಿರ್ಣಯಗಳನ್ನು ಕೊಟ್ಟರುತ್ತದೊ ಅದನ್ನು ಮಿತ್ರಸಂಘದವರು ಕೈಗೂಡಿಸುವರೆ ಯುಕ್ತಿಸುವರೆಂದು ಅನೇಕರು ಆಶಿಸುತ್ತಿದ್ದಾರೆ. ಜರ್ಮನಿಯ ಅವಸ್ಥೆಯು ಕೂಡಾ ತೀರಾ ನಿಕೃಷ್ಟವಾಗಿದೆ. ದೇಶವೆಲ್ಲ ಹಾಳಾದದ್ದು; ಹಾಗು ದೇಶದಲ್ಲಿ ದುಡ್ಡು ಇಲ್ಲ. ಆದ್ದರಿಂದ ಜರ್ಮನಿಯು ತನ್ನ ಸುಧಾರಣೆಗಾಗಿ, ತನ್ನ ವ್ಯವಸ್ಥೆಗಾಗಿ ಹೊರಗೆ ಸಾಲತೆಗೆಯಬೇಕಾಗಿದೆ. ಈ ಸಾಲವನ್ನು ತೆಗೆಯಲು ಜರ್ಮನಿಗೆ ಅಡ್ಡಮಾಡಬಾರದೆಂದು ಮಿತ್ರಸಂಘದವರ ಮುಖ್ಯ ಕೌನ್ಸಿಲು ತನ್ನ ಅಭಿಪ್ರಾಯವನ್ನು ಕೊಟ್ಟಿತು; ಆದರೆ ಫ್ರಾನ್ಸಿಗೆ ಇದು ಒಪ್ಪಿಗೆಯಿಲ್ಲ. ಫ್ರಾನ್ಸಿನ ಅಭಿಪ್ರಾಯವೇನೆಂದರೆ, ಜರ್ಮನಿಯನ್ನು ನಂಬಿ ಯಾರಾದರೂ ಅದಕ್ಕೆ ಸಾಲಕೊಡುತ್ತಾರೆಂದಿದ್ದರೆ, ಜರ್ಮನಿಯು ಆ ಸಾಲವನ್ನು ತನ್ನ ಸ್ವಂತ ಮನೆಯ ದುರುಸ್ತಿಯ ಬಗ್ಗೆ ಉಪಯೋಗಿಸದೆ ಜರ್ಮನಿಯು ಯುದ್ಧದಲ್ಲಿ ಹಾಳುಮಾಡಿದ ಫ್ರಾನ್ಸಿನ ಭಾಗವನ್ನು ಸರಿಗೊಳಿಸಲು ವಿನಿಯೋಗಿಸಬೇಕು. ಎಂದರೆ ಜರ್ಮನಿಯು ಸಾಲತೆಗೆದು ಫ್ರಾನ್ಸಿನ ಹಾಳಾದ ಭಾಗವನ್ನು ದುರುಸ್ತಿಪಡಿಸಬೇಕು, ಮತ್ತು ಈ ರಕಮನ್ನು ಜರ್ಮನಿಯು ಕೊಡತಕ್ಕ ಖಂಡಣಿಯಲ್ಲಿ ಮುಂದೆ ವಜಾ ತೆಗೆಯಬಹುದು, ಇದು ಫ್ರಾನ್ಸಿನ ಅಭಿಪ್ರಾಯ. ಪರಂತು ಜರ್ಮನಿಯು ಇದನ್ನು ಒಪ್ಪಿಕೊಳ್ಳುವುದಿಲ್ಲ. ಪರದೇಶದಲ್ಲಿ ಸಾಲತೆಗೆದು ಪರದೇಶದ ಮಂತ್ರಿಯನ್ನು ಮಾತಲು ಸಾಧ್ಯವಿಲ್ಲ. ಮಾತ್ರವಲ್ಲ, ಸೈಲೇಶಿಯಾ ಪ್ರಾಂತವನ್ನು ಪೋಲಂಡಿಗೆ ಕೂಡಲು ನಿಶ್ಚಯಿಸಿದ್ದಾದರೆ ಅಲ್ಲಿಯ ಎಕ್ಕೆಯ ಖನಿಯು ಜರ್ಮನಿಯ ಕೈತಪ್ಪುವುದು; ಮತ್ತು ಈ ಕಾರಣದಿಂದ ಫ್ರಾನ್ಸಿಗೆ ಕೊಡಬೇಕಾದ ಇದ್ದಿಲಿಯನ್ನು ಜರ್ಮನಿಯಿಂದ ಪೂರಯಿಸಲಾಗದು ಎಂದು ಅದು ಹೇಳುತ್ತಿದೆ. ಇದರ ತಾತ್ಪರ್ಯವೇನೆಂದರೆ, ಮೊದಲು ಫ್ರಾನ್ಸಿನಲ್ಲಿ ಆದ ಒಪ್ಪಂದದ ಶರ್ತುಗಳನ್ನು ಬದಲಾಯಿಸದೆ ಹಾಗೆ ಇಟ್ಟಿದ್ದಾದರೆ ಜರ್ಮನಿಯು ಟೋಪಿ ತಿರುಗಿಸಿ ದಿವಾಳಿಯ ಅರ್ಜಿಯನ್ನು ಕೊಡಲು ಹಿಂಜರಿಯಲಿಕ್ಕಿಲ್ಲ. ಇಷ್ಟೇ ಅಲ್ಲ, ಒಪ್ಪಂದದ ಶರ್ತುಗಳನ್ನು ಸೌಮ್ಯಪಡಿಸಿರಿ, ಇಲ್ಲವಾದರೆ ದಿವಾಳಿಯದ್ದು ತೆಗೆಯುವೆನು ಎಂದು ಜರ್ಮನಿಯು ಹೇಳಲು ಪ್ರಾರಂಭ ಮಾಡಿಯೆಬಿಟ್ಟಿದೆ. ಜರ್ಮನಿಯು ದಿವಾಳಿಯನ್ನು ತೆಗೆಯುದೆಂಬುದರ ಅರ್ಥವು ಬೊಲ್‌ಶೇವಿಕರ ಪಾಲಿಗೆ ಸೇರುವದೆಂದಿರುತ್ತದೆ ಎಂದರೆ ಜರ್ಮನಿಯು ಬೊಲ್‌ಶೇವಿಝಮನ್ನು ಸ್ವೀಕರಿಸಿದ್ದಲ್ಲಿ ಸ್ವಂತ ಜರ್ಮನ್ ಸಾವುಕಾರರಿಗೆ ಕೆಲವು ಮಟ್ಟಿನ ಹಾನಿಯು ಸಂಭವಿಸಿದ್ದಾದರೂ ಅದರ ನೆರೆಯಲ್ಲಿರುವ ಫ್ರಾನ್ಸಿಗೂ ಇದರ ಸೋಂಕು ತಗಲದೆ ಇರದೆಂದು ಹೇಳುತ್ತಾರೆ. ಜರ್ಮನಿಯು ಈಗಿನಿಂದಲೆ ರುಶ್ಯದೊಳಗಿನ ಬೊಲ್‌ಶೇವಿಕರಿಗೆ ಸೈನ್ಯ, ಹಣ, ಯಂತ್ರ ಇತ್ಯಾದಿ ಅನೇಕ ಬಗೆಯ ಮದತು ಕೊಡಹತ್ತಿದೆ. ಇದರ ಪರ್ಯವಸಾನವು ಮೇಲಿನ ಅನುಮಾನದಲ್ಲಿ ಸಂಭವಿಸಿದರೆ ಅದೊಂದು ದೊಡ್ಡ ಅನರ್ಥ ಒದಗಿದಂತಾಗುವುದು.

೩. ನಮ್ಮ ಮದ್ರಾಸು ಸಂಸ್ಥಾನದೊಳಗಿನ ಜಿಲ್ಲಾ ಬೋರ್ಡುಗಳ ಪ್ರಕಟವಾದ ವಾರ್ಷಿಕ ವರದಿಯಿಂದ ತಿಳಿದು ಬರುವ ಒಂದೆರಡು ಮುಖ್ಯಸಂಗತಿಗಳನ್ನು ನಮ್ಮ ವಾಚಕರಿಗಾಗಿ ನಮೂದಿಸುವೆವು. ಜಿಲ್ಲಾ ಬೋರ್ಡುಗಳು ವಿದ್ಯಾ ವಿಷಯದಲ್ಲಿ ತಮ್ಮ ಹೆಜ್ಜೆಗಳನ್ನು ದಿನೇದಿನೇ ಮುಂದಿಡುತ್ತವೊ ಹಿಂತೆಗೆಯುತ್ತವೊ ಇದನ್ನು ನೋಡಿದರೆ ಶೀಘ್ರವು ಮಟ್ಟಿನ ಪ್ರಗತಿಯು ಅವುಗಳಲ್ಲಿ ಉಂಟಾಗಿದೆ ಎಂದು ಕಂಡುಬರುತ್ತದೆ. ಲೋಕಲ್ ಬೋರ್ಡುಗಳು ಕಳೆದ ವರ್ಷ ೪೨ ಸೆಕೆಂಡರಿ ಸಾಲೆಗಳನ್ನು ಹೆಚ್ಚಿಸಿವೆ. ಹಾಗು ಎಲಿಮೆಂಟರಿ ತರಗತಿಯಲ್ಲಿರುವ ೮ ಸಾಲೆಗಳನ್ನು ಸೆಕೆಂಡರಿಗಳನ್ನಾಗಿ ಮಾಡಿವೆ. ಬೋರ್ಡುಗಳ ಅಡಳಿತೆಯಲ್ಲಿ ಎಲಿಮೆಂಟರಿ ಸಾಲೆಗಳ ಸಂಖ್ಯೆಯು ಸಹ ಹೆಚ್ಚಿದೆ; ೧೯೧೯-೨೦ನೆ ವರ್ಷ ಎಲಿಮೆಂಟರಿ ಸಾಲೆಗಳು ೭೩೮೫ ಇದ್ದವು. ಅವು ಕಳೆದ ವರ್ಷ ೮೧೧೫ ಆಗಿವೆ. ಎಂದರೆ ಮೊದಲಿದ್ದಕ್ಕಿಂತ ೭೩೦ ಹೆಚ್ಚಾಗಿವೆ. ಈ ಪ್ರಾಥಮಿಕ ಸಾಲೆಗಳ ವಿಷಯವಾಗಿ ಇನ್ನೊಂದು ವಿಶೇಷ ಸಂಗತಿಯು ಯಾವದೆಂದರೆ, ೬೮,೯೩೬ ಹುಡುಗರ ಸಮಾವೇಶವಾಗುವಂತೆ ೧,೮೬೩ ಸಾಲೆಗಳು ಹಿಂದುಳಿದವರ ಉಪಯೋಗಾರ್ಥವಾಗಿ ಇಡಲ್ಪಟ್ಟಿವೆ. ಪ್ರಾಥಮಿಕ ಸಾಲೆಗಳಲ್ಲಿ ಲೇಖನ, ವಾಚನ, ಗಣಿತ ಈ ಮೂರು ಸಂಗತಿಗಳನ್ನು ಕಲಿಸಿ ಆ ಮೂಲಕ ವಿದ್ಯಾರ್ಥಿಗಳನ್ನು ಮುಂದಿನ ವ್ಯವಹಾರದಲ್ಲಿ ಸಮರ್ಥರನ್ನಾಗಿ ಮಾಡುವದು ಪ್ರಾಥಮಿಕ ಶಿಕ್ಷಣದ ಧ್ಯೇಯಗಳಲ್ಲಿ ಇದು ಒಂದಾಗಿದೆ. ಮತ್ತು ಈಗಿನ ಬೋರ್ಡುಗಳು ತಮ್ಮ ಪ್ರಾಥಮಿಕ ಸಾಲೆಗಳ ಪ್ರಸಾರದಿಂದ [illegible] ಸಾಧಿಸುತ್ತವೆ ಎಂಬುದಕ್ಕೆ ಸಂದೇಹವಿಲ್ಲ.

ಸಂಸ್ಥೆ ಲೇಖನ ವಾಚನಾದಿ ವಾಠ್ಯಯತ ಶಿಕ್ಷಣವು ಮುಂದಿನ ಸ್ಥಾವ ಹಾಯ್ಕ ... ಅನುಕೂಲ ಉಪ ಔದ್ಯೋಗಿಕ ಶಿಕ್ಷಣವೂ ಅವಶ್ಯಕವಾಗಿದೆ. ಆದರೆ ಬೇರೆ ದೃಷ್ಟಿಯಿಂದ ನೋಡಿದರೆ ಔದ್ಯೋಗಿಕ ಇಲ್ಲವೆ ... ಯ ಚಿಕಿತ್ಸಕ ಕೈಗಾರಿಕೆಗಳ ಶಿಕ್ಷಣವನ್ನು ಕೊಡುವ ಸಾಲೆಗಳು ಬೋರ್ಡುಗಳಿಂದ ತೆರೆಯಲ್ಪಟ್ಟಿಲ್ಲ. ಇಲ್ಲವೆ ಲೇಖನ ವಾಚನಾದಿ ಕಲಿಸುವ ಸಾಲೆಗಳಲ್ಲಿ ಔದ್ಯೋಗಿಕ ವಿಷಯದ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಏರ್ಪಾಡನ್ನಾದರೂ ವಾಡೋಣಾಗಲಿಲ್ಲ. ಔದ್ಯೋಗಿಕ ಶಿಕ್ಷಣಕ್ಕೆ ಪ್ರತ್ಯೇಕವಾದ ಸಾಲೆಗಳನ್ನು ತೆರೆಯುವುದು ಪ್ರಾರಂಭದಲ್ಲಿ ಕಷ್ಟಸಾಧ್ಯವಾದ್ದಾಗಿ ಕಂಡುಬರುತ್ತದಾದರೆ, ಇರುವ ಸಾಲೆಗಳಲ್ಲಿ ಅಂಥ ಶಿಕ್ಷಣದ ಕೆಲವು ಮಟ್ಟಿಗಾದರೂ ವ್ಯವಸ್ಥೆಯನ್ನು ಮಾಡಬಹುದಿತ್ತು. ಆದರೆ ಬೋರ್ಡುಗಳ ಆಡಳಿತೆಯ ವೃತ್ತಾಂತವನ್ನು ನೋಡುವಾಗ ಇಂಥಾ ಅನುಕೂಲತೆಯನ್ನು ಒದಗಿಸುವಷ್ಟು ಕಂಡುಬರುವುದಿಲ್ಲ. ಇರಲಿ, ಈಗ ಲೋಕಲ್ ಬೋರ್ಡು ಗಳೆಡೆಯೆ ಶಿಕ್ಷಣದ ಇಲಾಖೆಯು ಜನತೆಯ ಮಂತ್ರಿಮಂಡಲದ ಕೈಕ್ಕೆ ಬರುವುದಿದೆ. ಈಗಲಾದರೂ ಈ ಕೊರತೆಗಳು ಹೋಗಲಾಡಿಸಬೇಕೆಂದು ನೆನಸಿದರೆ ಅದು ಪ್ರಮತಿಯೊ ಆಶಾವಾದಿತ್ವದ ಲಕ್ಷಣವಾಗಲಿಕ್ಕಿಲ್ಲ.

೩. ಲೋಕಲ್ ಬೋರ್ಡು ಸಂಸ್ಥೆಗಳು ಸಾಲೆಗಳ ಸಂಖ್ಯೆಯನ್ನು ಹೆಚ್ಚಿಸಿದಂತೆ ಆಸ್ಪತ್ರೆಗಳ ಹಾಗು ಡಿಸ್ಪೆನಸರಿಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾವೆ. ಇದು ಸಮಾಧಾನದ ಮಾತಾಗಿದೆ. ಇವುಗಳ ಸಂಖ್ಯೆಯು ಮೊದಲು ೪೦೭ ಇತ್ತು; ಈ ವರದಿಯ ವರ್ಷದಲ್ಲಿ ಅದು ೪೧೪ ಆಗಿದೆ. ಇವುಗಳಲ್ಲಿ ಸ್ತ್ರೀಯರಿಗಾಗಿಯೂ ಶಿಶುಗಳಿಗಾಗಿಯೂ ೫ ಆಸ್ಪತ್ರೆಗಳೂ, ೩ ಡಿಸ್ಪೆನ್ಸರಿಗಳೂ ಇರುತ್ತವೆ. ಮಲಬಾರ ನೆಲ್ಲೂರ ಮುಂತಾದ ಜಿಲ್ಲೆಗಳಲ್ಲಿ ಮಲೇರಿಯಾ ಜ್ವರದ ಪ್ರತಿಕಾರಾರ್ಥವಾಗಿ ಅಲ್ಲಲ್ಲಿಯ ಆಸ್ಪತ್ರೆಗಳು ವಿಶೇಷ ತರದ ವ್ಯವಸ್ಥೆಯಿಂದ ಕೆಲಸವನ್ನು ಮಾಡುತ್ತಿದ್ದವು. ಆದರೆ ಕೆಲವೆಡೆಗಳಲ್ಲಿ ಯುದ್ಧಮೂಲಕ ಸಾಕಷ್ಟು ಸಿಬಂದಿ ಇಲ್ಲದಿದ್ದ ಕಾರಣ ಕೆಲವು ಆಸ್ಪತ್ರೆಗಳನ್ನು ಬೋರ್ಡುಗಳಿಗೆ ಮುಚ್ಚಬೇಕಾಗಿ ಬಂತು. ಆಸ್ಪತ್ರೆಗಳ ವಿಷಯವಾಗಿ ಬೋರ್ಡುಗಳು ತಮ್ಮ ಸುಧಾರಣೆಯನ್ನು ಈ ಮೇರೆಗೆ ವ್ಯಕ್ತಗೊಳಿಸಿದ್ದವಾದರೂ ಸೆನಿಟೇಶನಿನ ವಿಷಯದಲ್ಲಿ ಆರೋಗ್ಯದ ಕುರಿತು ಅವು ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದು ಕಂಡುಬರುವುದಿಲ್ಲ. ಬೋರ್ಡುಗಳ ಆಡಳಿತೆಯಲ್ಲಿ ಶಿಕ್ಷಣ, ಆರೋಗ್ಯ, ರಹದಾರಿಯ ಸೌಕರ್ಯ ಇತ್ಯಾದಿ ವಿಷಯಗಳು ಸೇರುತ್ತವೆ. ಇವುಗಳನ್ನು ಅವು ಇನ್ನು ಸರ್ವಸ್ವಾತಂತ್ರ್ಯದಿಂದ ಮಾಡಬಹುದು. ಸ್ಥಾನಿಕಸ್ವರಾಜ್ಯದ ಅಧಿಕಾರವು ವಸ್ತುತಃ ಲೊ. ರಿಪನ್ ದೊರೆಗಳ ಕಾಲದಿಂದಲೆ ಹಿಂದೀ ಜನತೆಗೆ ದಯಪಾಲಿಸಲ್ಪಟ್ಟಿದ್ದಾದರೂ ಅದು ಕೇವಲ ಉದಾಸೀನ ಸ್ಥಿತಿಯಲ್ಲಿತ್ತು. ಈಚೀಚೆಗೆ ಅದರಲ್ಲಿ ಇಷ್ಟದಿಕ್ಕಿನಿಂದ ಕೆಲವು ಮಹತ್ವದ ಬದಲಾವಣೆಗಳು ಆಗುತ್ತ ಬಂದಿದ್ದಾವೆ. ಈಗಲಾದರೊ ಜನತೆಗೆ ಒಪ್ಪಿಸಿಕೊಡುವ ಖಾತೆಗಳಲ್ಲಿ ಇದೊಂದು ಮುಖ್ಯಸ್ಥಾನವನ್ನು ಹೊಂದುವುದೆಂದು ಎಲ್ಲರ ನಿರೀಕ್ಷಣೆ ಇರುವುದರಿಂದ ಇನ್ನುಮುಂದೆ ಈ ಸ್ಥಾನಿಕ ಸರಕಾರದ ಅಧಿಕಾರವು ನಿಜವಾಗಿ ಜನರ ಕೈಗೆ ಬಂದೀತೆಂದು ಹೇಳಬಹುದು. ಆಗ ತಾನೆ ಇದು ಯಾವ ಯಾವ ಲೋಕಹಿತವನ್ನು ಸಾಧಿಸುತ್ತದೆ ಎಂಬುದನ್ನು ನೋಡಬೇಕು.

೪. ಹೊಸ ಸುಧಾರಣಾ ಎಕ್ಟಿನ ಪ್ರಕಾರ ಹೊಸ ಕೌನ್ಸಿಲು ಆಗತಕ್ಕದಿದೆಯಷ್ಟೆ. ಆ ಕೌನ್ಸಿಲಿಗೆ ಪ್ರತಿನಿಧಿಗಳನ್ನು ಯಾವ ತತ್ತ್ವಕ್ಕನುಸಾರವಾಗಿ ಚುನಾಯಿಸಬೇಕೆಂಬುದರ ಬಗ್ಗೆ ಈಗ ೨ ವರ್ಷಗಳಿಂದ ಜನರಲ್ಲಿ ಚರ್ಚೆಯು ನಡಕೊಂಡಿತ್ತು. ಬ್ರಾಹ್ಮಣ, ಬ್ರಾಹ್ಮಣೇತರ, ಅಸ್ಪೃಶ್ಯವರ್ಗ, ಮುಸಲ್ಮಾನ್ ನೇಟಿವ್ ಕ್ರಿಶ್ಚನ್ ಎಂಗ್ಲೊ ಇಂಡಿಯನ್ ಯುರೋಪಿಯನ್ ವ್ಯಾಪಾರಿ ಹಾಗು ತೋಟಿಗರ ವರ್ಗ ಇತ್ಯಾದಿ ಬೇರೆಬೇರೆ ಜನಸಮುದಾಯದ ಕಡೆಯಿಂದ ತಂತಮ್ಮ ವರ್ಗದ ಹಿತಸಂರಕ್ಷಣೆಗಾಗಿ ಕೌನ್ಸಿಲಿನಲ್ಲಿ ಪ್ರತಿನಿಧಿಗಳಿರಬೇಕು, ಹೆಸರಿಗೆ ತಕ್ಕ ಪ್ರತಿನಿಧಿಗಳಲ್ಲ, ಅವರೆ ತಂತಮ್ಮ ವರ್ಗದ ಪ್ರತಿನಿಧಿಗಳ ಸಂಖ್ಯೆಯೆ ಹೆಚ್ಚಿರಬೇಕು, ಬಹುಮತದ ಮುಳ್ಳು ತಮ್ಮ ಕಡೆಗೆನೆ ಇರಬೇಕು, ಎಂದು ಈಗ ಎರಡು ವರ್ಷಗಳಿಂದ ನಮ್ಮ ಮದ್ರಾಸಿನ ಮಹಾಜನರು ಯತ್ನಿಸಿಕೊಂಡಿದ್ದರು. ಜನರು ಪ್ರತಿನಿಧಿಗಳ ವಿಷಯದಲ್ಲಿ ಆಗ್ರಹಕ್ಕೆ ಹೊರಟರು. ಅದರಲ್ಲಿ ಏಕವಾಕ್ಯತೆಯು ಆಗದೆ ಹೋಯಿತು. ಪಾರ್ಲಿಮೆಂಟಿನ ಸಂಯುಕ್ತ ಕಮಿಟಿಯ ಮುಂದೆ ಕೊಟ್ಟ ಸಾಕ್ಷಿಗಳ ಮೇಲಿಂದ ಹಾಗು ಇಲ್ಲಿ ನಡಕೊಂಡಿರುವ ಆಯಾ ಸಮುದಾಯದವರ ಚಳವಳದಿಂದ ಇವರಲ್ಲಿ ಏಕವಾಕ್ಯತೆಯಾಗುವುದು ಕಂಡುಬರುವುದಿಲ್ಲವೆಂದು ಗ್ರಹಿಸಿ ಸದರಿ ಕಮಿಟಿಯು ಸೂಚಿಸಿದ ಮೇರೆಗೆ ಮದ್ರಾಸ ಮತ್ತು ಮುಂಬಯಿಗಳಲ್ಲಿಯ ಪ್ರತಿನಿಧಿಗಳ ಸಮುದಾಯವಾರ ಸಂಖ್ಯೆಯನ್ನು ನಿರ್ಣಯಿಸುವುದಕ್ಕಾಗಿ ಲೊ. ಮೆಸ್ಟನ್ ದೊರೆಗಳು ನೇಮಕಪಟ್ಟು ಮದ್ರಾಸಿಗೆ ಬಂದರು. ಹಾಗು ಇಲ್ಲಿಯ ವಿವಿಧ ಅಂಬೋಣಗಳನ್ನು ಕೇಳಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವರು. ಅದರ ಮೇರೆಗೆ ಮದ್ರಾಸ ಸರಕಾರವು ಯಾವಯಾವ ಜಿಲ್ಲೆಗಳಲ್ಲಿ ವರ್ಗವಾರಿಯಾಗಿ ಎಷ್ಟೆಷ್ಟು ಪ್ರತಿನಿಧಿಗಳಿರಬೇಕೆಂಬುದನ್ನು ಹಿಂದುಸ್ಥಾನ ಸರಕಾರದ ಆಲೋಚನೆಯ ಬಗ್ಗೆ ತಯಾರಿಸಿದೆ.

೫. ಹೊಸ ಕೌನ್ಸಿಲಿನಲ್ಲಿ ಬರುವ ಪ್ರತಿನಿಧಿತ್ವದ ಪ್ರಶ್ನೆಯು ಈ ಪೂರ್ವ ಪೀಠಿಕೆಯನ್ನು ನೋಡಿದ್ದಲ್ಲಿ ನಮ್ಮ ಜಿಲ್ಲೆಯಲ್ಲಿ ಯಾವ ಯಾವ ಸಮುದಾಯದ ಕಡೆಯಿಂದ ಎಷ್ಟು ಪ್ರತಿನಿಧಿಗಳು ಚುನಾಯಿಸಿ ಬಂದಾರೆಂಬುದೊಂದು ಜಿಜ್ಞಾಸೆಯು ವಾಚಕರಲ್ಲಿ ಹುಟ್ಟುವದು ಸಹಜ. ಆ ಜಿಜ್ಞಾಸೆಯ ಸಮನಾರ್ಥವಾಗಿ ಸರಕಾರವು ಇಡಿ ಸಂಸ್ಥಾನದೊಳಗಿನ ಪ್ರತಿನಿಧಿಗಳ ವಿವರಣವನ್ನು ಪ್ರಕಟಿಸಿದೆ. ಅದರಲ್ಲಿ ದಕ್ಷಿಣಕನ್ನಡದ ವಿಷಯವನ್ನು ಮಾತ್ರ ನೋಡೋಣ. ಬ್ರಾಹ್ಮಣ, ಬ್ರಾಹ್ಮಣೇತರ, ಮುಸಲ್ಮಾನ ಇವರ ಕಡೆಯಿಂದ ಒಬ್ಬೊಬ್ಬ ಪ್ರತಿನಿಧಿ ಕೂಡಿ ಮೂವರು, ಹಿಂದಿ ಕ್ರೈಸ್ತರ ಪರವಾಗಿ ಸೇಲಂ, ಕೊಯಮುತ್ತೂರು, ನೀಲಗಿರಿ, ಮಲಬಾರ ಮತ್ತು ದಕ್ಷಿಣಕನ್ನಡ ಈ ಜಿಲ್ಲೆಗಳಿಗೆ ಒಬ್ಬ ಪ್ರತಿನಿಧಿ. ಜಮೀನದಾರರ ಪರವಾಗಿ ಮಲಬಾರ, ನೀಲಗಿರಿ ಮತ್ತು ದಕ್ಷಿಣಕನ್ನಡ ಇವುಗಳಿಗೆ ಕೂಡಿ ಒಬ್ಬ ಪ್ರತಿನಿಧಿ. ಅಸ್ಪೃಶ್ಯವರ್ಗದ ಪರವಾಗಿ ಇತರ ಜಿಲ್ಲೆಗಳ ಸಂಗಡ ಸರಕಾರದಿಂದ ನೇಮಕಹೊಂದುವ ಪ್ರತಿನಿಧಿ ಒಬ್ಬನು. ಮುಸಲ್ಮಾನ, ಕ್ರೈಸ್ತ ಮೊದಲಾದ ಒಂದೆರಡು ಬಾಬಿನಲ್ಲಿ ಇಲ್ಲಿಯ ಪ್ರತಿನಿಧ್ಯವು ಇತರ ಜಿಲ್ಲೆಗಳೊಡನೆ ಸೇರಿಕೊಂಡಿದ್ದರೂ ಒಟ್ಟಿನ ಮೇಲೆ ನಮ್ಮ ಜಿಲ್ಲೆಗೆ ೭ ಪ್ರತಿನಿಧಿಗಳ ಅನುಕೂಲತೆಯಿದೆ ಎಂದು ಸಾಧಾರಣವಾಗಿ ತಿಳಿಯಲು ಅಡ್ಡಿ ಇಲ್ಲ. ಇದೇ ಮೇರೆಗೆ ಒಂದೊಂದು ಜಿಲ್ಲೆಯಲ್ಲಿ ಸಾಧಾರಣವಾಗಿ ೫-೭ ಪ್ರತಿನಿಧಿಗಳ ಸಂಖ್ಯೆಯು ಬೀಳುವುದರಿಂದ ಆ ಹೊಸ ಕೌನ್ಸಿಲಿನ ಎಲ್ಲ ಬಗೆಯ (ಸರಕಾರ ನಿಯುಕ್ತ, ಲೋಕ ನಿಯುಕ್ತ, ಮುಂತಾಗಿ ಎಲ್ಲ ತರದ) ಪ್ರತಿನಿಧಿಗಳ ಸಂಖ್ಯೆಯು ೧೩೭ರ ವರೆಗೆ ಬಂದು ನಿಲ್ಲುವುದು. ಇದೇ ಈಗ ಬರುವ ಕೌನ್ಸಿಲಿನ ಸಾಮಾನ್ಯರೂಪವು. ಇರಲಿ, ಮದ್ರಾಸಿನ ಭಾವಿ ಪರಿಷ್ಕೃತ ಕೌನ್ಸಿಲಿನಲ್ಲಿ ಆಯಾ ಜಾತಿಯ ಪಕ್ಷ ಪರಪಕ್ಷಗಳನ್ನು ಹೇಳುವವರು ಬಂದು ಜಾತಿಸಾಮ್ಯ ವೈಷಮ್ಯಗಳ ಒಂದು ಪ್ರದರ್ಶನಮಂದಿರವಾಗುವುದು. ನಿಜವಾಗಿ ನೋಡಿದರೆ ಅದು ಹಾಗಾಗದೆ ಕಾರಖಾನೆಯವರು, ಕೂಲಿಗಳು, ಜಮೀನುದಾರರು ಇತ್ಯಾದಿ ಬಗೆಯ ಉಪಾಧಿಗಳಿಂದ ಪ್ರತಿನಿಧಿಗಳು ಚುನಾಯಿಸಿ ಬಂದಿದ್ದರೆ ಆಯಾ ಉದ್ಯೋಗಗಳು ಅಭಿವೃದ್ಧಿಯಾಗಬಹುದಿತ್ತು. ಪರಂತು ದೇಶದಲ್ಲಿ ಜಾತಿ, ಜ್ಞಾತಿಗಳನ್ನೆ ದೃಢಗೊಳಿಸಬೇಕೆಂಬ ಪ್ರಬಲವಾದ ಆಕಾಂಕ್ಷೆಯು ಇದ್ದರೆ ಅದನ್ನು ಯಾರು ತಡೆಸುವರು, ಮಾತ್ರವಲ್ಲ, ಅದಕ್ಕೆ ಗಾಳಿಹಾಕುವವರೆ ಹೆಚ್ಚು !!

೬. ಕಳೆದ ಶುಕ್ರವಾರ ಖಿಲಾಫತದ ಎರಡನೆ ವರ್ಷದ ದಿನಾಚರಣೆಯು ಹಿಂದುಸ್ಥಾನದೊಳಗಿನ ಎಲ್ಲ ಪ್ರಮುಖ ಶಹರುಗಳಲ್ಲಿ ಆಚರಿಸಲ್ಪಟ್ಟಿತು. ಎಲ್ಲ ಕಡೆಯಲ್ಲಿಯ ಈ ಆಚರಣೆಯಲ್ಲಿ ಹಿಂದೂ ಮುಸಲ್ಮಾನರು ಏಕತ್ರ ಸೇರಿದ್ದರು. ಅಂಗಡಿಗಳನ್ನು ಮುಚ್ಚಿ, ಸಭೆಗೂಡಿಸಿ ದೇವರ ಪ್ರಾರ್ಥನೆಯನ್ನು ಮಾಡುವುದು ಅಂದಿನ ಕಾರ್ಯಕ್ರಮವಾಗಿತ್ತು. ಮಹಾತ್ಮಾಗಾಂಧಿಗಳ ಸಂದೇಶದ ಪ್ರಕಾರ ಈ ಸತ್ಯಾಗ್ರಹದ ಆಚರಣದಲ್ಲಿ ಯಾವೂ ಅನಿಷ್ಟ ಪ್ರಕಾರಗಳನ್ನು ಮಾಡಬಾರದು, ಬೇಕಾಯಿದೆಶೀರ ನಡತೆಗಳನ್ನು ಆಚರಿಸಬಾರದು, ಅತ್ಯಾಚಾರದಲ್ಲಿ ಪ್ರವರ್ತಿಸಬಾರದು ಎಂದು ಗಾಂಧಿಗಳು ಸುಸ್ಪಷ್ಟವಾಗಿ ಮಹಾ ಜನಗಳಿಗೆ ತಿಳಿಸಿದ್ದರು. ಆ ಪ್ರಕಾರ ಕಲಕತ್ತಾ, ಅಲಹಾಬಾದ, ಡಿಲ್ಲಿ, ಆಗ್ರಾ, ಮುಂಬಯಿ, ಪೂನಾ, ಮದ್ರಾಸು, ರಂಗೂನು ಇತ್ಯಾದಿ ಹಿಂದುಸ್ಥಾನದೊಳಗಿನ ಎಲ್ಲ ಭಾಗದಲ್ಲಿ ಖಿಲಾಫತಿನ ವ್ರತಾಚರಣವು ಸಾಂಗವಾಗಿ ನಡೆಯಿತು. ಈ ವರೆಗೆ ಪ್ರಕಟವಾದ ಅಲ್ಲಲ್ಲಿಯ ವೃತ್ತಾಂತಗಳ ಮೇಲಿಂದ ಎಲ್ಲಿಯೂ ಗದ್ದಲಗಳು ಉಂಟಾಗಲಿಲ್ಲವೆಂದು ಹೇಳಬಹುದಾಗಿದೆ. ಇತರ ಕಡೆಗಳಲ್ಲಿ ನಡೆದಂತೆಯೆ ನಮ್ಮ ಮಂಗಳೂರಿನಲ್ಲೂ ಈ ಆಚರಣವು ನಡೆಯಿತು.

ಮಂಗಳೂರು.

ಇದೇ ಬರುವ ಎಪ್ರಿಲ್ ತಾರೀಕು ೧ನೇ ಗುರುವಾರ ದಿನ ಸಾಯಂಕಾಲ ೫ ಗಂಟೆಗೆ ಸ್ತ್ರೀಯರ ಮಹಾಸಭೆಯೊಂದು ಮಂಗಳೂರಲ್ಲಿ ನೆರೆಯುವುದು. ಕಳೆದ ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿ ಸ್ತ್ರೀಯರು ಮುನ್ಸಿಪಲ್ ಕೌನ್ಸಿಲ ಮೆಂಬರರಾಗಲಿಕ್ಕೆ ಅರ್ಹರಲ್ಲವೆಂತ ಮಾಡಿದುದರಿಂದ ಈ ಅಭಿಪ್ರಾಯವನ್ನು ಖಂಡಿಸಿ ಸ್ತ್ರೀಯರಿಗೂ ಸಹಾ ಮುನ್ಸಿಪಲ್ ಕೌನ್ಸಿಲರುಗಳಾಗುವ ಹಕ್ಕನ್ನು ಇರಗೊಡಿಸಬೇಕೆಂಬ ಮಸೂದೆಯನ್ನು ಪುನಃ ಕೌನ್ಸಿಲಿನ ಮುಂದೆ ಇಡಬೇಕೆಂದು ಕೌನ್ಸಿಲಿನ ಮೆಂಬರರುಗಳಿಗೆ ವಿನಂತಿಯನ್ನು ಮಾಡಿಕೊಳ್ಳಬೇಕೆಂಬುದೇ ಈ ಸಭೆಯ ಉದ್ದೇಶವಾಗಿದೆ. ಎಲ್ಲಾ ಜಾತಿ ಸ್ತ್ರೀಯರು ಈ ಸಭೆಗೆ ಬರಬೇಕಾಗಿ ಆಮಂತ್ರಣವಿದೆ. ಸಭೆ ಕೂಡುವ ಸ್ಥಳವು ನಮಗೆ ಬಂದು ತಲ್ಪಿದ ಪತ್ರದಲ್ಲಿಲ್ಲ, ಸಭಾನೋಟೀಸುಗಳಲ್ಲಿ ಸೂಚಿಸೋಣಾಗಬಹುದು.

ಬರುವ ೨೮ನೆಯ ತಾರೀಕು ಭಾನುವಾರ ಇಲ್ಲಿನ ಥಿಯೋಸೋಫಿಕಲ್ ಸೊಸೈಟಿಯ ಮಂದಿರದಲ್ಲಿ ಮೈಸೂರಿನ ಮ| ರಾ| ಕೆ. ನರಹರಿ ಶಾಸ್ತ್ರಿಗಳು "ಲೋಕಸೇವೆ" ಎಂಬ ವಿಚಾರವಾಗಿ ಇಂಗ್ಲೀಷಿನಲ್ಲಿ ಉಪನ್ಯಾಸಕೊಡುತ್ತಾರೆ. ಅದೇ ದಿನ ಸಾಯಂಕಾಲ ೪ ಗಂಟೆಗೆ ಅವರು ಇಲ್ಲಿನ ದೇಶೀಯ ಬಾಲಿಕಾ ಪಾಠಶಾಲೆಯಲ್ಲಿ "ಪ್ರಹ್ಲಾದ" ಎಂಬ ವಿಷಯವನ್ನೆತ್ತಿ ಕನ್ನಡದಲ್ಲಿ ಹರಿಕೀರ್ತನೆ ಮಾಡುತ್ತಾರೆ. ಇವುಗಳಿಗೆ ಸರ್ವರೂ ಬರಬೇಕಾಗಿ ಆಮಂತ್ರಿಸಿದ್ದಾರೆ.

ಮದರಾಸು ಬೇಂಕಿನ ಹೆಡ್‌ಶ್ರಾಫರಾದ ಮೆ. ಅಬ್ರಾಹಾಮ್ ಸಾಲ್ಡಾಂಞಾರು ಕೆಲಸದಿಂದ ನಿವೃತ್ತಿಹೊಂದುವುದರಿಂದ ಅವರ ಹುದ್ದೆಯಲ್ಲಿ ಮ| ರಾ| ರಾ| ಯು. ಬಾಬುರಾಯರವರು ನೇಮಕಪಟ್ಟಿರುವರು.

ಇಲ್ಲಿಗೆ ಬಂದಿರುವ ಬೇಬಿಸ್ ಇಲೆಕ್ಟ್ರಿಕ್ ಸಿನೆಮಾ ಕಂಪೆನಿಯವರು ಇಲ್ಲಿಯ ದ್ರಾವಿಡಬ್ರಾಹ್ಮಣ ವಿದ್ಯಾರ್ಥಿಭವನದ ಫಂಡಿನ ಸಹಾಯಾರ್ಥವಾಗಿ ನಾಳೆ ತಮ್ಮ ಪ್ರದರ್ಶನವೊಂದನ್ನು ತೋರಿಸಲಿಕ್ಕಿರುವರು.

ಜಿಲ್ಲಾ ಕಲೆಕ್ಟರ ದೊರೆಗಳವರು ಸರ್ಕೀಟಿನಿಂದ ಬರುವ ಎಪ್ರಿಲ್ ತಾರೀಕು ೭ರಲ್ಲು ಮಂಗಳೂರಿಗೆ ತಲ್ಪುವರು.

ಕಳೆದ ಶುಕ್ರವಾರ ಹಿಂದುಸ್ಥಾನದ ಆಯಾಯ ಕಡೆಗಳಲ್ಲಿ ಖಿಲಾಫತ್ ದಿವಸದ ಆಚರಣೆಯು ಜರಗಿದಂತೆ ನಮ್ಮ ಪಟ್ಟಣದಲ್ಲೂ ಯೋಗ್ಯವಾಗಿ ನಡೆಯಿತು. ಈ ದಿನ ಸಾಯಂಕಾಲ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಹಿಂದೂ ಮುಸಲ್ಮಾನರಿಂದ ಸುಮಾರು ೨೦೦೦ ಜನರ ಒಂದು ಸಭೆಯು ನೆರೆಯಿತು. ಸಭೆಯ ಅಧ್ಯಕ್ಷಸ್ಥಾನವನ್ನು ಮ| ರಾ| ರಾ| ಕಾರ್ನಾಡ ಸದಾಶಿವರಾವ್ ಬಿ. ಎ. ಬಿ. ಎಲ್ ಇವರು ವಹಿಸಿದ್ದರು. ಸಭೆಯಲ್ಲಿ ಮ| ರಾ| ರಾ| ಕೃಪಾಶಂಕರ ಜೆನಾಬಾಯಿಯವರೂ, ಮ| ರಾ| ರಾ| ಯಂ. ಮಾಧವರಾವ್ ಬಿ. ಎ. ಬಿ. ಎಲ್ ಇವರು ಚಲೋದಾದ ಭಾಷಣವನ್ನು ಮಾಡಿದರು. ನಂತರ ಅಧ್ಯಕ್ಷರ ಭಾಷಣವೂ ನಡೆಯಿತು. ಕೊನೆಗೆ ಟರ್ಕಿಯ ಸ್ವಾತಂತ್ರ್ಯಕ್ಕೂ, ಪವಿತ್ರತೆಗೂ, ಕಾಲಿಫೆಟಿಗೂ ಯಾವ ತರದ ಭಂಗವೂ ಬಾರದಂತೆ ಸುರಕ್ಷಿತಪಡಿಸಬೇಕು ಎಂದು ಮುಂತಾದ ಠರಾವಣೆಗಳಾಗಿ, ಸಭೆಯ ಈ ಮನೋಗತವನ್ನು ವೈಸರಾಯರ ಮೂಲಕ ಸಂಧಿ ಪರಿಷತ್ತಿಗೂ, ಬ್ರಿಟಿಷ ಸಾರ್ವಭೌಮರಿಗೂ ತಿಳಿಸುವಂತೆ ತಂತಿಯನ್ನು ವೈಸರಾಯರಿಗೆ ಬಿಡಬೇಕೆಂಬ ನಿರ್ಧಾರಗಳಾಗಿ ಸಭೆಯು ಮುಕ್ತಾಯವಾಯಿತು.

ಈ ದಿನ ಬಂದರದ ಅನೇಕ ಮಳಿಗೆಗಳು ಮುಚ್ಚಲ್ಪಟ್ಟಿದ್ದವಲ್ಲದೆ ಅಂದು ಬಂದರವನ್ನು ಸೇರಿದ್ದ ಹಡಗಿನ ಸರಕುಗಳನ್ನು ಇಳಿಸಲಿಕ್ಕೂ, ಇಲ್ಲಿಯ ಸಾಮಾನನ್ನು ಹಡಗಕ್ಕೆ ಸಾಗಿಸಲಿಕ್ಕೂ ಆಗದೆ ಹಡಗದ ಅಂದಿನ ಪಯಣವು ಮರುದಿನಕ್ಕೆ ಮುಂದರಿಸಲಾಯಿತು. ಕಳೆದ ಒಕ್ಟೋಬರ ತಿಂಗಳಲ್ಲಿ ನಡೆದ ಖಿಲಾಫತ್ ದಿವಸಕ್ಕೆ ಸೇರಿದ್ದ ಜನರಿಗಿಂತಲೂ ಕಳೆದ ಶುಕ್ರವಾರ ಸೇರಿದ್ದ ಜನಸ್ತೋಮವು ಅಧಿಕವಾಗಿದ್ದು ಹಿಂದೂ ಮುಸಲ್ಮಾನರ ಐಕ್ಯವು ಇಲ್ಲೂ ಅಧಿಕವಾಗಿ ಬೆಳೆಯುವುದು ಕಾಣುತ್ತದೆ.

ಎಪ್ರಿಲ್ ತಾರೀಕು ೪ರಿಂದ ೧೧ರವರೇಗೆ ನಡೆಯುವ ದೇಶೀಯ ಸಪ್ತಾಹವಾರದ ಕಾರ್ಯಕ್ರಮಪಟ್ಟಿಯು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದೆ.

ಇಲ್ಲಿಗೆ ಬಂದಿರುವ ಪಟ್‌ವರ್ಧನ ಸರ್ಕಸ್ ಕಂಪೆನಿಯವರು ಇಲ್ಲಿಯ ದೇಶಭಾಷೆಯಾದ ಕನ್ನಡದಲ್ಲಿ ಸರ್ಕಸು ಮತ್ತು ಅದರ ಪ್ರಯೋಜನವೆಂಬುದನ್ನು ಕುರಿತು ಉಪನ್ಯಾಸ ಬರೆದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವವಾಗಿ ಪ್ರಕಟಿಸಿದ್ದರು. ಅನೇಕ ವಿದ್ಯಾರ್ಥಿಗಳು ಸ್ಪರ್ಧಿಸಿ ಉಪನ್ಯಾಸಗಳನ್ನು ಬರೆದಿದ್ದರು. ಕಳೆದ ಶುಕ್ರವಾರ ಈ ಉಪನ್ಯಾಸಗಳ ತುಲನೆಯಾಗಿ ಇಲ್ಲಿಯ ಡಿಪ್ಯುಟಿ ಕಲೆಕ್ಟರರವರಿಂದ ಬಹುಮಾನಗಳು ಹಂಚಲಾದವು. ಈ ಪೈಕಿ ಮೊದಲನೇ ಬಹುಮಾನವಾದ ರೂ. ೧೦ ಸಂಟ್ ಆಲ್ಲೋಸಿಯಸ್ ಕಾಲೇಜಿನಲ್ಲಿ ಇಂಟರ್ಮೀಡಿಯೇಟ್ ಕ್ಲಾಸಿನಲ್ಲಿ ಕಲಿಯುವ ಸಂಜೀವರಾವ್ ಎಂಬವಿದ್ಯಾರ್ಥಿಗೂ ಎರಡನೇ ಬಹುಮಾನ ರೂ. ೭ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯಾದ ಸುಶೀಲಾಬಾಯಿ ಎಂಬವಳಿಗೂ, ಮೂರನೇ ಬಹುಮಾನವು ರೂ. ೫ ಕೆನರಾ ಹೈಸ್ಕೂಲಿನ ಐದನೇ ಫೋರ್ಮಿನಲ್ಲಿ ಕಲಿಯುವ ಶಂಕರಭಟ್ಟ ಎಂಬ ವಿದ್ಯಾರ್ಥಿಗೂ ಕೊಡೋಣಾಯಿತು. ಈ ಸಮಯದಲ್ಲಿ ಪಂಡಿತ ಆತ್ಮಾರಾಮ ಶಾಸ್ತ್ರಿಗಳು ಈ ಸರ್ಕಸ್ ಕಂಪೆನಿಯವರು ಅಲ್ಲಲ್ಲಿ ದೇಶಭಾಷಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿಯ ಬಗ್ಗೆ ಹೇಗೆ ಸಹಾಯವನ್ನು ಮಾಡುತ್ತಿರುವರೆಂಬುದನ್ನು ಸೂಚಿಸಿ ಚಿಕ್ಕ ಭಾಷಣವನ್ನು ಮಾಡಿದರು. ಈ ಕಂಪೆನಿಯವರು ಕಳೆದ ಶನಿವಾರ ಕಡೆಯ ದೇಖಾವೆಯನ್ನು ತೀರಿಸಿ ಆದಿತ್ಯವಾರ ಇಲ್ಲಿಂದ ತೆರಳಿದರು.

ರಿಫೋರ್ಮು ಆಕ್ಟು ಪ್ರಕಾರ ಉಂಟಾಗುವ ನ್ಯಾಯವಿಧಾಯಕ ಸಭೆಗೆ ವೋಟುಕೊಡುವವರ ಪಟ್ಟಿಯನ್ನು ತಯಾರಿಸಲು ಈ ಮುಂಚೆ ನೇಮಿಸಲ್ಪಟ್ಟ ಅಸಿಸ್ಟಾಂಟ ರಿಜಿಸ್ಟ್ರಾರರೂ, ಇನ್ಸ್‌ಪೆಕ್ಟರರೂ ಅಲ್ಲದೆ ಇನ್ನೂ ೬ ಮಂದಿ ಹೆಚ್ಚು ಇನ್ಸ್‌ಪೆಕ್ಟರರು ನೇಮಕವಾಗಿದ್ದಾರೆ.

ಇಲ್ಲಿಯ ಇಸ್ಲಾಮಿಯಾ ಕ್ಲಬ್ಬಿನ ವರ್ಧಂತ್ಯೋತ್ಸವವು ಕಳೆದ ಆದಿತ್ಯವಾರ ಸಾಯಂಕಾಲ ರಾವ್‌ಬಹದ್ದೂರ್ ನಯಂಪಳ್ಳಿ ಸುಬ್ಬರಾವರವರ ಅಧ್ಯಕ್ಷತೆಯಲ್ಲಿ ಜರಗಿತು. ನೆರೆದ ಗೃಹಸ್ಥರಿಗೆ ಉಪಹಾರ ಸತ್ಕಾರವು ಇತ್ತು. ಸಂಗೀತ ಬ್ಯಾಂಡ್‌ವಾದ್ಯ ಮೊದಲಾದ ವಿನೋದಗಳೂ ಸಹ ಇದ್ದವು. ಕ್ಲಬ್ಬಿನ ಸೆಕ್ರೆಟರಿಯವರಿಂದ ಗತವರ್ಷದ ವರದಿಯು ಓದಿ ಆದ ಮೇಲೆ, ಅಧ್ಯಕ್ಷರಿಗೆ ಧನ್ಯವಾದವನ್ನಿತ್ತು ರಾಜಗೀತವನ್ನು ಹಾಡಿ ಈ ಸಂಭ್ರಮವು ಕೊನೆಗೊಂಡಿತು.

ಸ್ವೀಕಾರ.

ರಾ| ಯಮ್. ವೆಂಕಟಾದ್ರಿ ಶಾಸ್ತ್ರಿಗಳಿಂದ ವಿರಚಿತವಾದ 'ಮುತ್ತಿನ ಸರ' ಎಂಬ ಮಾಲೆ ಕಾದಂಬರಿ ಮತ್ತು ರಾ| ಯಜ್. ಚಿದಂಬರಯ್ಯನವರಿಂದ ಬರೆಯಲ್ಪಟ್ಟ "ರಾಮನ ಮತ್ತು ರಾಮ ನಾಮದ ಮಹಿಮೆ" ಎಂಬ ಗ್ರಂಥಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿರುವೆವು. ಮೊದಲನೆ ಗ್ರಂಥಕ್ಕೆ ಬೆಲೆ ೧೦ ಆಣೆ. ಬೆಂಗಳೂರಿನ ಕೆ. ಮಾಣಿಕಂ ಕಂಪೆನಿಯವರಿಗೆ ಬರೆದು ತರಿಸಬಹುದು. ಇನ್ನೊಂದು ಗ್ರಂಥವು ರಾಮಾಯಣದ ರಾಮನ ಗುಣ ಕಥನದ ವಿಮರ್ಶವಾಗಿದೆ. ಭಕ್ತಿರಸದಿಂದ ಕೂಡಿದ ಜನರಿಗೆ ತುಂಬಾ ಸುಖದಾಯಕವಾದ ಗ್ರಂಥವಾಗಿದೆ.

[illegible]

ಬರ್ಮಾ ಅಕ್ಕಿಗೆ ಸರಕಾರದ ನಿರ್ಬಂಧ.

(ಪಬ್ಲಿಸಿಟಿ ಬಿರೋದವರ ಪತ್ರದ ಸಾರಾಂಶ)

ಬರ್ಮಾ ಅಕ್ಕಿಗೆ ಸರಕಾರದವರು ಕಂಟ್ರೋಲ್ ಹಾಕಿದ್ದರಿಂದ ಕಳೆದ ವರ್ಷ [illegible] ಕೋಟಿ ರೂಪಾಯಿ ಆದಾಯವು ಸರಕಾರದವರಿಗೆ ಉಳಿಯಿತು ಎಂಬ ಒಂದು ತಪ್ಪು ಗ್ರಹಿಕೆಯು ಹುಟ್ಟಿದೆ, ಇದರಲ್ಲಿ ನಿಜವಿಲ್ಲವೆಂದು ಈ ಬಿರೋದವರು ತಿಳಿಸುತ್ತಾರೆ. 'ಫುಡ್ ಸ್ಟಫ್ ಕಮಿಶನರ ವಹಿವಾಟಿನ ರಿಪೋರ್ಟು' ಎಂಬ ವರದಿಯಲ್ಲಿ ಈ ನಿರ್ಬಂಧದಿಂದ ಹಿಂದುಸ್ಥಾನಕ್ಕೆ ೫ ಕೋಟಿ ರೂಪಾಯಿಗಿಂತ ಹೆಚ್ಚಿಗೆ ಹಣ ಉಳಿಯಿತು ಎಂಬ ಒಂದು ಮಾತು ಇದೆ. ಈ ಮಾತಿನ ನಿಜವಾದ ಅಭಿಪ್ರಾಯವು ಸರಕಾರದವರಿಗೆ ಮುನಾಫೆ ಉಳಿಯಿತು ಎಂದಲ್ಲ. ಬರ್ಮಾದಲ್ಲಿ ಯಥೇಷ್ಟ ಅಕ್ಕಿ ಇತ್ತು. ಅಕ್ಕಿಗೆ ಹಿಂದುಸ್ಥಾನದ ಹೊರ ಪ್ರದೇಶಗಳಲ್ಲಿ ಇಲ್ಲಿಯ ೨ ಯಾ ೩ ಪಾಲಷ್ಟು ಬೆಲೆ ಹೆಚ್ಚಿತ್ತು. ಆದ್ದರಿಂದ ಬರ್ಮಾದ ಸಾಹುಕಾರರೂ ರೈತರೂ ತಮ್ಮ ಅಕ್ಕಿಯನ್ನು ಪರ ಬಂದರುಗಳಿಗೆ ಕಳುಹಿಸಬೇಕೆಂಬ ಲವಲವಿಕೆಯಿಂದ ಇದ್ದರು. ಹಾಗೆ ಕಳುಹಿಸಲು ಅವರಿಗೆ ಬಿಟ್ಟಿದ್ದರೆ ಹಿಂದುಸ್ಥಾನದ ವರ್ತಕರೂ ಇಲ್ಲಿಗೆ ಅಕ್ಕಿ ತರಿಸಲಿಕ್ಕೆ ಅದೇ ರೀತಿ ೨ ಯಾ ಮೂರು ಪಾಲಷ್ಟು ಹೆಚ್ಚು ಬೆಲೆಯನ್ನು ತೆರಬೇಕಾಗುತ್ತಿತ್ತು. ಆದರೆ ಸರಕಾರವು ಬರ್ಮಾದಿಂದ ಅಕ್ಕಿ ರಫ್ತಾಗುವದಕ್ಕೆ ನಿರ್ಬಂಧ ಹಾಕಿ ಅದನ್ನು ತಾವೇ ಬೆಲೆ ನಿಶ್ಚಯಿಸಿ ಹಿಂದುಸ್ಥಾನದ ಸಾಹುಕಾರರಿಗೆ ಕೊಟ್ಟದ್ದರಿಂದ ಬೆಲೆಯು ಮಿತಿಮೀರಿ ಏರಲಿಕ್ಕೆ ಸಾಧ್ಯವಾಗಲಿಲ್ಲ. ನಿರ್ಬಂಧ ಹಾಕದಿದ್ದರೆ ಈಗಿನದಕ್ಕಿಂತಲೂ ೪೦ ರೂಪಾಯಿ ಪ್ರತಿಯೊಂದು ಟನ್ನಿಗೆ ಹೆಚ್ಚಿಗೆ ಬೆಲೆ ಕೊಡುವ ಅಗತ್ಯಬೀಳುತ್ತಿತ್ತು. ೧,೭೦೦,೦೦೦ ಟನ್ ಬರ್ಮಾ ಅಕ್ಕಿಯನ್ನು ಹಿಂದುಸ್ಥಾನಕ್ಕೆ ಗತವರ್ಷದಲ್ಲಿ ತರಿಸಿದ್ದಾರೆ. ಹಾಗೆನ್ನುವಾಗ ಹಿಂದುಸ್ಥಾನದ ವರ್ತಕರು ಕೊಟ್ಟ ಬೆಲೆಗಿಂತಲೂ ಸುಮಾರು ೫ ಕೋಟಿ ರೂಪಾಯಿಗೆ ಮಿಕ್ಕಿ ಹೆಚ್ಚು ಬೆಲೆ ಕೊಡಬೇಕಾಗುತ್ತಿತ್ತು. ನಿರ್ಬಂಧ ಹಾಕಿದ್ದರಿಂದ ಈ ಅಂಶವು ಹಿಂದುಸ್ಥಾನದ ಜನರಿಗೆ ಉಳಿಯಿತು ಎಂದು ಆ ರಿಪೋರ್ಟಿನಲ್ಲಿರುವ ವಾಕ್ಯದ ನಿಜವಾದ ಟೀಕೆಯೆಂದು ಪಬ್ಲಿಸಿಟಿ ಬಿರೋದವರು ತಿಳಿಸಿದ್ದನ್ನು ನಮ್ಮ ಕಲೆಕ್ಟರ್ ದೊರೆಗಳು ಎಲ್ಲರ ತಿಳುವಳಿಕೆಗೆ ತಂದಿರುವರು.

ಮೊದಲನೆಯ ಕರ್ನಾಟಕ ಪರಿಷತ್ತು.

ಪ್ರಾರ್ಥನೆ.

ಕರ್ನಾಟಕ ಬಂಧುಗಳೇ—

ಅನಾದಿಕಾಲದಿಂದಲೂ ಇತಿಹಾಸದಲ್ಲಿ ಹೆಸರುವಾಸಿಯಾಗಿರುವ ಭರತಭೂಮಿಯ ಅಂತರ್ಗತವಾದ ನಮ್ಮ ಪ್ರಿಯ ಕರ್ನಾಟಕ ದೇಶವು, ಆದರೊಡನೆಯೇ ಅನೇಕಾನೇಕ ವಿಪತ್ತುಗಳಿಗೆ ಈಡಾಗಿ ತನ್ನ ಪೂರ್ವಸಂಸ್ಕೃತಿಯನ್ನೂ ಪೂರ್ವವೈಭವವನ್ನೂ ಮರೆತು, ಇನ್ನೂ ಏನು ದುರವಸ್ಥೆಯಲ್ಲಿರುವಾಗಲೇ ಬ್ರಿಟಿಷ್ ಆಡಳಿತೆಯ ಪ್ರಾರಂಭದ ಸುಮಾರಕ್ಕೆ ಅದು ಛಿನ್ನಭಿನ್ನವಾಗಿ ಹೋಯಿತು. ಆಗಿನಿಂದಂತೂ ಕರ್ನಾಟಕದ ಚೈತನ್ಯವೇ ನಷ್ಟವಾಗಿ ಹೋಗಿ, ಅದರ ಅಂಗಾಂಗಗಳು ದಿನದಿನಕ್ಕೆ ಶಿಥಿಲಗೊಳ್ಳುತ್ತ ನಡೆದಿವೆ. ಆದದರಿಂದ ಈ ನಮ್ಮ ಕರ್ನಾಟಕವು ರಾಜಕೀಯ ಸಾಮಾಜಿಕ ಔದ್ಯೋಗಿಕ ಮುಂತಾದ ವಿಷಯಗಳಲ್ಲಿ ಈ ಭರತ ಭೂಮಿಯೊಳಗಿನ ಮುಖ್ಯ ಪ್ರಾಂತಗಳಿಗಿಂತ ಬಹಳ ಮಟ್ಟಿಗೆ ಹಿಂದುಳಿದು ಇಡೀ ರಾಷ್ಟ್ರದ ಪ್ರಗತಿಯ ಮಾರ್ಗದಲ್ಲಿ [illegible] ಕುಳಿತಿರುವದು. ಇಂಥ ದುರವಸ್ಥೆಯನ್ನು ಕರ್ನಾಟಕಸ್ಥರು [illegible]

[illegible]

[illegible] ಯಾವದೊಂದು ಮಧ್ಯವರ್ತಿಯಾದ ಪರಿಷತ್ತನ್ನು ಸ್ಥಾಪಿಸುವದು ಆವಶ್ಯಕವೆಂಬ ವಿಚಾರವು ಕರ್ನಾಟಕದ ಮುಖಂಡರ ಅಂತರಂಗದಲ್ಲಿ ಈಗ ಹಲವು ವರ್ಷಗಳಿಂದ ಉದ್ಭವಿಸಿರುತ್ತದೆ. ಮತ್ತು ಈ ವಿಚಾರಕ್ಕೆ ಮೂರ್ತಸ್ವರೂಪವನ್ನು ಕೊಡುವ ಕಾರ್ಯವನ್ನು ಧಾರವಾಡ ಜಿಲ್ಲೆಯವರು ಕೈಕೊಳ್ಳಬೇಕೆಂಬದಾಗಿ ಅನೇಕ ಜನ ಕರ್ನಾಟಕ ಭಕ್ತರಿಂದ ಸೂಚನೆಗಳೂ ಬಂದಿರುತ್ತವೆ. ಹೀಗೆ ಸ್ಪಷ್ಟವಾಗಿ ವ್ಯಕ್ತವಾಗಿರುವ ಅಭಿಪ್ರಾಯವೇ ಕರ್ನಾಟಕ ಜನಾಂಗದ ಮಹದಾಜ್ಞೆಯೆಂದು ತಿಳಿದು, ಬರುವ ಮೇ ತಿಂಗಳ ಆದಿಭಾಗದಲ್ಲಿ ಮೊದಲನೆಯ ಕರ್ನಾಟಕ ಪರಿಷತ್ತನ್ನು ಧಾರವಾಡದಲ್ಲಿ ಕೂಡಿಸುವ ಕಾರ್ಯವು ಧಾರವಾಡ ಜಿಲ್ಲೆಯವರಿಂದ ಅಂಗೀಕರಿಸಲ್ಪಟ್ಟಿದೆ.

ಈ ಪರಿಷತ್ತಿನ ಮುಖ್ಯ ಉದ್ದೇಶಗಳೆಂದರೆ:—

(೧). ಜನರಲ್ಲಿ ಲೋಕಹಿತ ಬುದ್ಧಿಯನ್ನು ಜಾಗೃತಗೊಳಿಸಿ, ದೇಶದ ಮಾನಸಿಕ ಹಾಗು ನೈತಿಕ ಶಕ್ತಿಗಳನ್ನೂ ಆರ್ಥಿಕ ಹಾಗೂ ಔದ್ಯೋಗಿಕ ಸಾಧನಗಳನ್ನೂ ವೃದ್ಧಿಗೊಳಿಸಿ ಮತ್ತು ಏಕೀಕರಿಸಿ, ಕರ್ನಾಟಕದ ಪುನರುಜ್ಜೀವನ ಮಾಡಲು ಪ್ರಯತ್ನಿಸುವದು, ಮತ್ತು ತದ್ದ್ವಾರಾ ಇಡೀ ಹಿಂದೀರಾಷ್ಟ್ರದ ಐಕ್ಯವನ್ನು ಅಭಿವೃದ್ಧಿಗೊಳಿಸುವದು.

(೨) ರಾಷ್ಟ್ರೀಯ ಸಭೆಯ ಧ್ಯೇಯಕ್ಕೆ ಅನುಸಾರವಾಗಿ ರಾಷ್ಟ್ರೀಯ ಸಭೆಯವರು ಹಾಕಿಕೊಟ್ಟ ಮಾರ್ಗದಿಂದ ಕರ್ನಾಟಕದಲ್ಲಿ ಲೋಕಜಾಗೃತಿಯನ್ನುಂಟು ಮಾಡುವದು.

(೩) ಕರ್ನಾಟಕಕ್ಕೆ ಸಂಬಂಧಿಸಿದ್ದ ವಿಶಿಷ್ಟ ಸಂಗತಿಗಳ ಸಂಬಂಧವಾಗಿ ಕರ್ನಾಟಕದ ಅಭಿಪ್ರಾಯವನ್ನು ವ್ಯಕ್ತಪಡಿಸುವದು.

ಮೇಲ್ಕಾಣಿಸಿದ ಉದ್ದೇಶಗಳು ಸಫಲವಾಗುವಂತೆ ಕರ್ನಾಟಕ ಪರಿಷತ್ತಿನ ಕಾರ್ಯವು ಯಶಸ್ವಿಯಾಗಬೇಕಾದರೆ ಇವರು ಬ್ರಾಹ್ಮಣರು, ಇವರು ಬ್ರಾಹ್ಮಣೇತರರು, ಇವರು ವೀರಪಕ್ಷದವರು, ಇವರು ಮಂದಪಕ್ಷದವರು, ಇವರು ಕನ್ನಡಿಗರು, ಇವರು ಮರಾಠಿಗರು ಎಂಬಿವೇ ಮೊದಲಾದ ಜಾತಿಭೇದ, ಪಕ್ಷಭೇದ, ಭಾಷಾಭೇದ ಮೊದಲಾದುವುಗಳನ್ನು ಎಳ್ಳಷ್ಟಾದರೂ ಮನಸ್ಸಿನಲ್ಲಿ ತಾರದೆ, "ಕರ್ನಾಟಕದ ಹಿತವೇ ನಮ್ಮ ಹಿತವು" ಎಂಬ ಶುದ್ಧವೂ ಪವಿತ್ರವೂ ಆದ ಭಾವನೆಯಿಂದ ಪ್ರೇರಿತರಾಗಿ ಎಲ್ಲ ಕರ್ನಾಟಕಸ್ಥರು ಈ ಕಾರ್ಯಕ್ಕೆ ತಲೆಕೊಡಬೇಕಾದದ್ದು ಅತ್ಯಂತ ಆವಶ್ಯಕವಾಗಿದೆ. ಆದ್ದರಿಂದಲೇ, ಕರ್ನಾಟಕ ಬಂಧುಗಳೇ, ಧಾರವಾಡ ಜಿಲ್ಲೆಯವರು ಕೈಕೊಂಡಿರುವ ಈ ಪ್ರಚಂಡಕಾರ್ಯವು ಯಶಸ್ವಿಯಾಗುವ ಭಾರವು ನಿಮ್ಮೆಲ್ಲರನ್ನೂ ಕೂಡಿದೆ. ಆದದರಿಂದ ಶಕ್ಯವಾದಷ್ಟು ಹೆಚ್ಚು ಜನ ಕರ್ನಾಟಕದ ಪ್ರತಿನಿಧಿಗಳು ಈ ಸಾರೆಯ ಪರಿಷತ್ತಿಗೆ ಬಂದು ಕರ್ನಾಟಕದ ಉದ್ಧರಣಕಾರ್ಯಕ್ಕೆ ಎಲ್ಲ ರೀತಿಯಿಂದಲೂ ಅಗತ್ಯವಾಗಿ ಸಹಾಯಕರಾಗಬೇಕೆಂದು ಬೇಡಿಕೊಳ್ಳುತ್ತೇವೆ.

ಕರ್ನಾಟಕದ ನಮ್ರ—ಸೇವಕರಾದ

ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ, ವಕೀಲ.
ರಾಮರಾವ ಶೇಷಗಿರಿರಾವ ನರಗುಂದಕರ, ಬಿ. ಎ. ಎಲ್‌. ಬಿ. ವಕೀಲ.
ತ್ರಿವಿಕ್ರಮ ಕಾಶೀನಾಥ ಪಿತ್ರೆ, ಬಿ. ಎ. ಎಲ್. ಬಿ., ವಕೀಲ.
ವಿಠ್ಠಲ ವೆಂಕಟೇಶ ಜೋಶಿ, ವಕೀಲ.
ಅನಂತ ಸುಬ್ಬರಾವ ಯಾತಗಿರಿ, ಬಿ. ಎ. ಎಲ್. ಬಿ., ವಕೀಲ.
ಬಾಳಕೃಷ್ಣ ಗೋವಿಂದ ಕುಲಕರ್ಣಿ, ಬಿ. ಎ. ಎಲ್. ಬಿ., ವಕೀಲ.
ಕಾರ್ಯದರ್ಶಿಗಳು.

ವಿನಾಯಕ ಬಾಬಾಜಿ ಜೋಶಿ, ಬಿ. ಎ. (ರಾವಬಹದ್ದೂರು) ರಿಟಾಯರ್ಡ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ.
ಅಧ್ಯಕ್ಷರು

ನಾರಾಯಣ ಗುರುನಾಥ ಕರಿಕುದರಿ ಬಿ. ಎ. ಎಲ್. ಬಿ., ವಕೀಲ
ಉಪಾಧ್ಯಕ್ಷರು.

ವಿಶ್ವನಾಥ ನಾರಾಯಣ ಜೋಗ, ಬಿ. ಎ. ಎಲ್. ಬಿ., ವಕೀಲ.
ಚೇರಮನ.

ತಾತ್ಪೂರ್ತಿಕ ಸ್ವಾಯಿಕಮಂಡಲದ ಕಾರ್ಯಕಾರಿ ಅಧಿಕಾರಿಗಳು.

ಪತ್ರವ್ಯವಹಾರ.

ರೈಲ್ವೆ.

ಇದೇ ಕಳೆದ ಜನವರಿ ಮಾಹೆ ತಾರೀಕು ೨೪ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋ. [illegible]

[illegible]

ದಕ್ಷಿಣ ಕನ್ನಡದ [illegible]

[illegible]

[illegible] ಸುವವರು ಒಂದು ಹುಲ್ಲಿಯ ಪಕ್ಕೆಯಾಗಬಹುದು; ಅಂದರೆ ೧ ಕಾಲುವಡೆಗೆ 1½ ಎಕ್ರೆಯಷ್ಟು ಸ್ಥಳವನ್ನು ಖಚಿತವಾಗಿ ಮಾಡಬಹುದು. ಹೀಗಿದ್ದರೆ ಈ ಜಿಲ್ಲೆಯ ಕಾಲುವಡೆಗಳಿಗೆ ಸಾಕಷ್ಟು ಬೀಳಿನ ಸ್ಥಳವಿಲ್ಲವೇ ಎಂಬದನ್ನು ನನಗಿಂತ ಅನುಭವಶಾಲಿಗಳಾದವರೇ ಹೇಳಬೇಕು. ನನ್ನ ಮನಸ್ಸಿಗೆ ಅದು ಬಹಳ ಕಡಿಮೆ ಎಂದು ಭಾವನೆಯಾಗುತ್ತಿದೆ. ಈ ಜಾನುವಾರುಗಳು ಸುಖವಾಗಿ ಬೆಳೆದರವೆ ಇಲ್ಲಿ ಕೃಷಿಕರ ಕ್ಷೇಮವುಂಟಾಗುವದು.

ಇದಲ್ಲದೆ [illegible] ಎಕ್ರೆ ಸಾಗುವಳಿಗೆ ಯಥೇಷ್ಟವಾಗಿ ಸೊಪ್ಪು ಗೊಬ್ಬರ ಬೇಕಾಗಿದೆ; ಅದು ಸಿಗದಿದ್ದರ ಫಸಲು ಸರಿಯಾಗಿ ಸಿಗಲಾರದು. ಪೂರ್ವ ಕಾಲದಲ್ಲಿ ಕಾಡುಗುಡ್ಡಗಳಿಂದ ಒಣಗಿದ ಎಲೆಗಳನ್ನು ಜನರು ತಂದು ದನಗಳು ತಮ್ಮ ಜಾನುವಾರು ಮಲಗುವ ಹಟ್ಟಿಗಳಲ್ಲಿ ಹಾಸುತ್ತಿದ್ದರು. ಈ ಎಲೆಯೊಂದಿಗೆ ಬೆರೆತ ಸೆಗಣಿ ಮೂತ್ರ ಇವು ಬೆಳೆಗೆ ಒಳ್ಳೆ ಗೊಬ್ಬರವಾಗುತ್ತಿದ್ದವು. ಈ ಬಗೆಯ ಸೊಪ್ಪು ಗೊಬ್ಬರ ಸಿಗಬೇಕಾಗಿರುವ ಗೋಚರಾದಿಗೆ ಆವಶ್ಯವಿದ್ದ [illegible] ಗುಡ್ಡಗಳನ್ನು ಈಚೆಗೆ ಸರಕಾರದವರು ಧರಕಾಸ್ತಿಗೆ ಕೊಡಲಾರಂಭಿಸಿದ್ದರಿಂದ ಮೇವಿನ ಸ್ಥಳ ಮತ್ತು ಸೊಪ್ಪುಗೊಬ್ಬರದ ಕುಟ್ಟಿಯುಂಟಾಗಿದೆ. ಸರ್ವೆ ಮತ್ತು ಸೆಟ್ಲಮೆಂಟನ್ನು ಮಾಡಿದ ಅಧಿಕಾರಿಗಳ ಮನಸ್ಸಿಗೆ ಗೋಚರಾದಿನ ಮತ್ತು ಸೊಪ್ಪುಗೊಬ್ಬರದ ಅನುಕೂಲತೆಯ ವಿಷಯವು ಗೋಚರಕ್ಕೆ ಬಾರದೆ ಇದ್ದುದು ತುಂಬಾ ಶೋಚನೀಯ. ಈಗಿನ ಸ್ಥಿತಿಗೆ ಬೇಕಾಗಿರುವ ಸಲಹೆಗಳನ್ನು ಮಾಡಿಕೊಡುವುದಕ್ಕೂ ರೆವಿನ್ಯೂ ಇಲಾಖೆಯವರು ಮನಸ್ಸುಮಾಡದೆ ಇರುವುದೂ ಬಲು ಚೋದ್ಯವಾಗಿದೆ.

ಈ ಜಾನುವಾರಗಳ ಮತ್ತು ಅಂತೆಯೇ ಕೃಷಿಕರ ಪರವಾಗಿ ಸರಕಾರವು ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ಕೃಷಿಕರ ಈ ಅಡಚಣೆಗಳನ್ನು ಹೋಗಲಾಡಿಸುವಂತೆ ಸಾಕಷ್ಟು ಬೀಳಿನ ಸ್ಥಳವನ್ನೂ ಸೊಪ್ಪುಗೊಬ್ಬರದ ಅನುಕೂಲತೆಯನ್ನೂ ಮಾಡಿಸಿಕೊಡಬೇಕಾಗಿ ಸರಕಾರಕ್ಕೆ ನನ್ನ ವಿನಂತಿ ಇದೆ.

ಯು. ರಾಮರಾವ್.

(ಮದ್ರಾಸಿನಲ್ಲಿರುವ ರಾವ್ ಸಾಹೇಬ ಡಾ। ಯು. ರಾಮರಾಯರು ದಕ್ಷಿಣ ಕನ್ನಡದ ಕೃಷಿಕರ ಪರವಾಗಿ ಬರೆದ ಈ ಪತ್ರವನ್ನು ಇಲ್ಲಿ ಪ್ರಕಟಿಸಿದ್ದೇವೆ:— ಪತ್ರಕರ್ತ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{91}{1920}$.

ಹಾಜಿಬ್ಯಾರಿ ವಗೈರೆ—11 ಜನರು ... ... ವಾದಿರು.

ಮತ್ತು

ಕುಂಞಾಕಾರೆಬ್ಯಾರಿ— ... ... ಪ್ರತಿವಾದಿ.

ಬಬಿಲ್ ಮಾಪಿಳೆಯರ ಎಲಿಮೆಂಟರಿ ಬೋರ್ಡುಶಾಲಾ ಕಟ್ಟೋಣವನ್ನು ಮೊಹಿದ್ದಿನ್ ಪಳ್ಳಿಯ ಜಮಾತ್ತಿನವರು ಕಟ್ಟಿಸಿದ್ದಂತಲೂ ಸದರಿ ಕಟ್ಟೋಣದ ಬಾಡಿಗೆಯನ್ನು ಸದರಿ ಜಮಾತಿನವರೇ ವಸೂಲು ಮಾಡಿಕೊಳ್ಳುವರೆ ಅರ್ಹರೆಂತಲೂ ವಾಗರೂಪ ಡಿಕ್ರಿ ಅಪೇಕ್ಷಿಸಿ ವಾದಿರು ದಾಕಲುಮಾಡಿದ ಮೇಲ್ಕಂಡ ದಾವೆಯು, ವಾದೀರು ಸದರಿ ಜಮಾತರ ಕಡೆಯಿಂದ ವ್ಯವಹರಿಸುವಂತೆ ಕೋರ್ಟಿನವರ ಅನುಮತಿ ಹೊಂದುವ ಬಗ್ಯೆ ದಾಖಲುಮಾಡಿದ I. A. No. $\frac{270}{1920}$ ನೇ ಅರ್ಜಿಯು ಇದೇ ಬರುವ ಎಪ್ರಿಲ್ ತಾ. 10ಕ್ಕೆ ತನಖಿಗೆ ಇಟ್ಟಿರುತ್ತದೆ. ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಯನ್ನು ಸದರಿ ತಾ. 10ನೇ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ता. 23—3—'20.

B. Venkatrao Baliga.
Pleader for Plaintiffs.

ನೋಟೀಸು.

ಪಡುಪಣಂಬೂರು ಗ್ರಾಮದ ಪಟೇಲ ದುಗ್ಗಪ್ಪಯ್ಯನು ತನ್ನ ಎಲ್ಲಾ ಮೂಲಗೇಣಿ ವ ಚಾಲಗೇಣಿ ಒಕ್ಕಲುಗಳಿಗೆ ತಿಳಿಸುವುದೇನಂದರೆ—

ನನ್ನ ವಕ್ಕಲುಗಳು ನನ್ನ ರಶೀದಿಗಳೆಂದು ಪೋರ್ಜರಿ ಮಾಡಲಿಕ್ಕೆ ಶುರುಮಾಡಿದ್ದರಿಂದ ಇನ್ನು ಮುಂದೆ ತಂಬ್ ಇಂಪ್ರೆಷನ್ ವ ಸಾಕ್ಷಿ ಇಲ್ಲದ ರಶೀದಿಗಳು ಮಂಜೂರು ಅಲ್ಲ, ನಾನು ಒಪ್ಪತಕ್ಕದ್ದು ಅಲ್ಲ ಆದದರಿಂದ ನನ್ನ ರಶೀದಿ ಪಡಕೊಳ್ಳುವ ವಕ್ಕಲುಗಳು ಇನ್ನು ಮುಂದೆ ಮೇಲಿನ ಕ್ರಮಪ್ರಕಾರ ರಶೀದಿ ಪಡಕೊಳ್ಳಬೇಕು, ತಿಳಿದಿರುವದು.

ತಾ. 15-3-'20.

ರುಜು—ದುಗ್ಗಪ್ಪಯ್ಯ ಪಡುಪಣಂಬೂರು ವಗೈರ ಪಟೇಲ.

ಈ ಕೆಳಗಿನ ಸದರಿ ಜನರಿಗೆ ತಿಳಿಯ ಪಡಿಸುವುದೇನೆಂದರೆ—

ಮಂಜೇಶ್ವರ ಶ್ರೀ [illegible] ಈ ಕೆಳಗೆ ಹೆಸರು ಸಮೂದಿಸಿರುವ [illegible] ಬಡ್ಡಿ [illegible] ರುವ ಅನ್ನ ಚಕ್ರಗಳ ದಾಖ್ಲು ಮಾಡಲು [illegible] ಏಪ್ರಿಲ್ ತಾರೀಖು [illegible] ನೇ ಸೋಮವಾರ ದಿವಸ [illegible] ಶ್ರೀ ದೇವಸ್ಥಾನದ ಧರ್ಮ ಅಗ್ರಹಾರದ ಮಂಗಳ [illegible] ಹುಟ್ಟುವಂಥ ಖರ್ಚಿನಿಂದ [illegible] ಭಂಡಾರಕ್ಕೆ [illegible] ಆ ಮೇಲೆ [illegible] ವಾರೀಸುದಾರರಿಗೆ [illegible] ಈ ಮೂಲಕ ತಿಳಿಯಪಡಿಸಿರುತ್ತದೆ. [illegible] ವಿವರವನ್ನು ಶ್ರೀ ದೇವಸ್ಥಾನದ ಧರ್ಮ ಅಗ್ರಹಾರದಲ್ಲಿ [illegible] ತಿಳಿಯಬಹುದು.

ಇಸ್ತಿಹಾರ ನಂಬ್ರ.	ಚೀಟು ತಾರೀಖು.	ಚೀಟು ಅಸಾಮಿಗಳ ಹೆಸರು.
52	16- 9-1903	ಮಂಜೇಶ್ವರ ಸರ್ವೋತ್ತಮಾಚಾರ್ಯರ ಮಗ ನರಸಿಂಹಾಚಾರ್ಯ.
48	21-12-1905	ಮಂಗಳೂರ ಕಂದಲ್ಪ ನಾರಾಯಣ ಕಮ್ತಿರ ದತ್ತದ ಮಗ ರಾಮಕೃಷ್ಣ ಕಮ್ತಿ.
42	7-10-1908	ಮಳೆಯಾಳ ಟಿಲ್ಲ ಜಾಮಬೆಲ್ಲ ಉಪಾಸನೆ ಅಳಿಯ ಹೊಯ್ಯಕಂಡ ತಿಮ್ಮಪ್ಪ ಬೆಳಚಪ್ಪಾಡಾ
40	11-10-1908	ಹೊಯ್ಯಕಂಡ ತಿಮ್ಮಪ್ಪ ಬೆಳಚಪ್ಪಾಡಾ.
2	14- 7-1909	ಕಡಂಬಾರ ವೈದಿಂಕುಟ್ಟಿಬ್ಯಾರಿ ಮಗ ಪಕ್ರಬ್ಯಾರಿ.
39	26- 9-1909	ಇನವಳ್ಳಿ ರಾಮರಾಯರ ಮಗ ಭೀಮರಾಯ
49	7-10-1909	ಮಂಜೇಶ್ವರ ರಾಮಕೃಷ್ಣ ಬಟ್ಟರ ಮಗ ಶ್ರೀನಿವಾಸ ಭಟ್ಟ.
36	23-12-1909	ಬೋಳ್ಕಾರ ಬೋಮು ಹೆಂಗಸಿನ ಮಗ ಬೇರಲ್ಯಾಯಾನ ಕೊರಗಾಳ್ವ.
45	12- 4-1911	ಬೆಳ್ವದ ಗುತ್ತನಲ್ಲಿರುವ ಅಪ್ಪಯ್ಯಭಂಡಾರಿ ಅಳಿಯ ಚಿಕ್ಕಭಂಡಾರಿ.
82	24- 9-1912	ಪಚ್ಚಿನ ಅಬ್ಬಾಸಕುಟ್ಟಿ ಬ್ಯಾರಿ ಮಗ ಮಹಮ್ಮದ ಬ್ಯಾರಿ.
43	29- 9-1912	ಕುಂಬಾರ ತಿಮ್ಮಂಚಮೂಲ್ಯನ ಅಳಿಯ ಐತ ಮೂಲ್ಯ.
47	14- 4-1913	ನರಸಿಮ್ಹ ಕಮ್ತಿರ ಮಗ ವಂಕಟೇಶ ಕಮ್ತಿ.
50	4- 7-1913	ಸುಬ್ರಾಯ ಶ್ಯಾನಭಾಗರ ಮಗ ಗಣಪತಿ ಶ್ಯಾನಭಾಗ.
8	6- 7-1913	ವೈದಿಂಕುಟ್ಟಿ ಮುಕ್ರಿಬ್ಯಾರಿ ಮಗ ಅಬ್ದುಲ್ಲ ಕಾದ್ರಿ ಬ್ಯಾರಿ.
12	15-12-1913	ಮಮ್ಮಿಬ್ಯಾರಿಗಳ ಮಗ ಅಮದಬ್ಯಾರಿ.
4	20- 2-1914	ಪುದಿಸ್ತಾಮ ವೈದಿಂಕುಂಞ ಮಗ ಹಸೈನ.
6	17- 6-1914	ಕೋಯಂ ಕೋಯಬ್ಯಾರಿಗಳ ಮಗ ಕೋಯಂಞಾಕೋಯ.
1	30- 8-1914	ಪಳಿಂಗಡಿ ಮಾಮು ಬ್ಯಾರಿ ಮಗ ಮಮ್ಮದಬ್ಯಾರಿ
9	10- 9-1914	ಅಬ್ದುಲ ರಹಿಮಾನ ಬ್ಯಾರಿ ಮಗ ಮಮ್ಮದಬ್ಯಾರಿ
38	26- 9-1914	ದೇಯತ್ತಿ ಮೂಲ್ಲರುವ ಆರಿಗ ಸೋಮು ಹೆಂಗಸಿನ ಮಗ ಐತಪ್ಪಶೆಟ್ಟಿ.
16	12- 7-1916	ನೆತ್ತಿಲ ನಾಂಕುಶೆಟ್ಟಿ ಅಳಿಯ ಐತಪ್ಪ.
59	10-10-1916	ಉಮರ ಕಾದ್ರಿಬ್ಯಾರಿ ಮಗ ಕುಟ್ಯಾಮಬ್ಯಾರಿ.
31	22-10-1916	ಸಯ್ಯದ್ ಹುಸೇನಗುರುಗಳ ಮಗ ಯಂ, ಮುತ್ತುಕೋಯ ಗುರು.
77	7-10-1916	ಉಮರ ಕುಟ್ಟಿಯಾಮಬ್ಯಾರಿ ಮಗ ಕಾದ್ರಿಬ್ಯಾರಿ

ಮಂಗಳೂರು,
ತಾ. 18-3-'20 } ಮೊಕ್ತೇಸರ ಪದ್ಮನಾಭಭಟ್ಟನ ರುಜು.

ದೇಶೀಯ ಬಾಲಿಕಾ ಪಾಠಶಾಲಾ ಸಪ್ತಾಹವು ೧೯೨೦.

ಏಪ್ರಿಲ್ 4ರಿಂದ 11ರವರೆಗೆ.

ಬಾಲಿಕಾ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡುವದಕ್ಕೆ ಈ ಸಮಯವನ್ನು ಕಳೆದುಕೊಳ್ಳಬೇಡಿರಿ! ಈ ಸಮಯದಲ್ಲಿ ಬಂದು ದೇಖಾವೆಗಳನ್ನು ನೋಡಿ ಪ್ರೋತ್ಸಾಹಿಸಿರಿ!!

ದೇಖಾವೆಗಳು

ಲಕ್ಷ್ಮಿಯ ಪರೀಕ್ಷೆ—(ಇಂಗ್ಲೀಷ ನಾಟಕ) ಡಾಕ್ಟರ್ ರವೀಂದ್ರನಾಥರಿಂದ ರಚಿತವಾದ ನೂತನ ನಾಟಕವು. ಇದು ಇನ್ನೂ ಪುಸ್ತಕರೂಪದಲ್ಲಿ ಹೊರಬಿದ್ದಿಲ್ಲ. ಅಲ್ಲದೆ ದಕ್ಷಿಣ ಹಿಂದುಸ್ಥಾನದಲ್ಲಿ ಈ ನಾಟಕವನ್ನು ಅಭಿನಯಿಸುವದಕ್ಕೆ ಇದೇ ಮೊದಲು. ಆದ್ದರಿಂದ ಇದನ್ನು ನೋಡದಿರಬೇಡಿರಿ!

ನಳದಮಯಂತೀ—(ಮರಾಠಿ ನಾಟಕ) ಬಹು ಹೃದಯದ್ರಾವಕವಾದ ದೃಶ್ಯ!

ಆತ್ಮಬಲ—(ಇಂಗ್ಲೀಷ ನಾಟಕ) ಡಾಕ್ಟರ ರವೀಂದ್ರನಾಥರಿಂದ ರಚಿಸಲ್ಪಟ್ಟದ್ದು. ಬಾಲಚಮೂ (ಬಾಯ್‌ಸ್ಕೌಟ್ಸ್)ಗಳಿಂದ ಅಭಿನಯಿಸಲ್ಪಡುವದು.

ಇವಲ್ಲದೆ

ದೇಶೀಯ ಸಾಮಾನುಗಳ ಅಂಗಡಿ, ಪಾಠಶಾಲೆಯ ಬಾಲಿಕೆಯರ ಸಂಗೀತ ಕಲಾ ಪ್ರದರ್ಶನ, ಗರ್ಲ್‌ಗಾಯಿಡ್ಸ್ (ಸಿಸ್ಟರ್ ಸ್ಕೌಟ್ಸ್)ರ ವಿವಿಧ ಆಟಪಾಟಗಳು ಇನ್ನೂ ಅನೇಕ ವಿಧವಾದ ದೇಖಾವೆಗಳನ್ನು ಬಂದು ನೋಡಿರಿ! ದೇಶೀಯ ಶಿಕ್ಷಣಕ್ಕೆ ಪ್ರೋತ್ಸಾಹವನ್ನೀಯಿರಿ!!

ಎಲ್ಲಾ ದೇಖಾವೆಗಳನ್ನು ನೋಡುವದಕ್ಕೆ ಸೀಜನ್ ಟಿಕೇಟು ದರ:— ರೂ. [illegible] ಮತ್ತು ರೂ. [illegible]. ಒಂದೊಂದೇ ದೇಖಾವೆಗೆ ದರ ರೂ. [illegible], ಆಣೆ ೮ ಮತ್ತು ೪.

ವಿಶೇಷ ಸೂಚನೆ:—ಪ್ರತಿಯೊಂದು ದೇಖಾವೆಯ ವಿವರವಾದ ಪತ್ರಿಕೆಯು ಪ್ರತ್ಯೇಕವಾಗಿ ಹೊರಬೀಳುವದು.

WANTED.

An young, energetic and qualified compounder who can write a neat and clean hand.

Applications must be written in their own hand and must be accompanied by testimonials of conduct etc.

The starting salary will be Rs. 20 per mensem. For further particulars apply personally to the undersigned.

P. M. Kamath,
Proprietor.
P. M. Kamath & Co.,
Chemists, MANGALORE.

ಮಂಗಳೂರು ತಾಲೂಕಿನ ಎಲ್ಲಾ ಉದ್ಯೋಗಸ್ಥರಿಗೆ—

ಮದ್ರಾಸ ಸಂಸ್ಥಾನದ ಬೇರೆಬೇರೆ ಜಿಲ್ಲೆಗಳಲ್ಲಿ ಇತ್ತಲಾಗೆ ಸ್ಥಾಪಿಸಲ್ಪಟ್ಟ ಗ್ರಾಮಉದ್ಯೋಗಸ್ಥರ ಸಂಘಗಳಂತೆ ನಮ್ಮ ತಾಲೂಕಿನಲ್ಲಿ ಸಹ ಒಂದು ಗ್ರಾಮಉದ್ಯೋಗಸ್ಥರ ಸಂಘ ಸ್ಥಾಪಿಸುವ ಉದ್ದೇಶ ವ ತಮ್ಮ ಇತರ ಹಾಲಹವಾಲೆಗಳನ್ನು ಗವರ್ನಮೆಂಟಿನರಿಗೆ ನಾವು ಎಲ್ಲರೂ ಒಟ್ಟಟ್ಟಾಗಿ ಏಕ ಕಂಠದಿಂದ ಹೇಳಿಕೊಳ್ಳುವ ಸಂಬಂಧ ಇದೇ ಬರುವ ಏಪ್ರಿಲ್ ತಿಂಗಳ ತಾರೀಖು ೪ನೇ ಆದಿತ್ಯವಾರ ಮಧ್ಯಾಹ್ನ ೧೨ ಗಂಟೆ ಸಮಯ ಮಂಗಳೂರಲ್ಲಿರುವ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ಮ॥ ರಾ॥ ರಾ॥ ವಕೀಲ ಎಮ್. ಮಾಧವರಾವ್ ಬಿ. ಎ. ಬಿ. ಎಲ್ ಯವರ ಅಧ್ಯಕ್ಷತೆಯಲ್ಲಿ ಸಭೆಕೂಡಬೇಕಾಗಿ ನಿಶ್ಚಯಿಸಿರುವುದರಿಂದ ಎಲ್ಲಾ ಗ್ರಾಮಗಳ ಪಟೇಲ ಶ್ಯಾನುಭಾಗರು ಆ ದಿವಸ ದಯಮಾಡಿ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಗ್ರಾಮಉದ್ಯೋಗಸ್ಥರ ವ ಇತರ ಸರಕಾರಿ ನೌಕರರ ಸಂಘಗಳಿಗೆ ಮೇಲುದ್ಯೋಗಸ್ಥರು ಪೂರ್ಣ ಸಹಾಯಮಾಡಬೇಕಾಗಿ ಗವರ್ನಮೆಂಟಿನವರ ಸರ್ಕಾರ ಹುಕುಂ ಇರುವುದರಿಂದ ಎಲ್ಲಾ ಗ್ರಾಮ ಉದ್ಯೋಗಸ್ಥರು ನಿರ್ಭಯವಾಗಿ ಹಾಜರಾಗಬಹುದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಬಂಟವಾಳ
25—3—20. } ಬಿ. ವೆಂಕಟ್ರಾಯ ಪ್ರಭು.
ಬಂಟವಾಳ ಕಸಬಾ ಪಟೇಲ.

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗವದು, ತಲೆವುರಿ, ಕಣ್ಣುವುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ಆಣೆ ೧೨, ಪಕ್ಕೆ ರೂ. ೨, ದೊಡ್ಡ ಸೀಸೆಗೆ ರೂ. ೧—೮—೦.

ಚಂದನಾಸವ. ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು, ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಮಾಡುತ್ತದೆ. ಬಾಟ್ಲಿಗರ ಕ್ರಯ ೧—೮—೦, ಬಾಟ್ಲಿ ೩ರ ಕ್ರಯ ೪—೦—೦.

ನಾರೀಸಖಿ. ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಶ್ವೇತಪ್ರದರ (ಬಿಳೀ ಸೆರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ. ಬಾಟ್ಲಿಗೆ ರೂ. ೨—೦—೦.

ಚಿನ್ ಚಿನ್ ಬಾಮ್. ಎಲ್ಲಾ ತರದ ನೋವು, ತಲೆನೋವು, ಜಖಂ, ಘಾಯ, ಚೇಳುಕಡಿತ, ತಕ್ಷಣ ಗುಣ. ಬೆಲೆ ಸುಲಭ, ಭರಣಿ ೧ಕ್ಕೆ ಆ. ೬, ಗಜಕರ್ಣದ ಮುಲಾಮು ಡಬ್ಬಿಗೆ ಆ. ೪.

ದಂತಶೋಧಿನಿಚೂರ್ಣ, ಇದು ಹಲ್ಲುಗಳನ್ನು ಚೊಕ್ಕಟವಾಗಿರಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುರು, ಬಾಯಿಹುಣ್ಣು, ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ೧ಕ್ಕೆ ಆಣೆ ೫.

ಲಂಗ್ಸ್‌ಟೋನು. ಕೆಮ್ಮು, ನೆಗಡಿ, ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಮಾಡಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿ ೧ಕ್ಕೆ ರೂ. ೨—೫—೦, ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರಿಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
Manollasini Co., 4. ಕಂಕನಾಡಿ ಪೋಸ್ಟು
4. Kankanady.

ಶಾಲಿವಾಹನಶಕ ೧೮೪೨ನೆಯ ರೌದ್ರಿ ಸಂ॥ದ ದಕ್ಷಿಣಾಯನೆ ಚೈತ್ರ ಶು॥ ೮ ಶನಿವಾರದಿಂದ ರೌದ್ರಿ ಸಂ॥ ಚೈತ್ರ ಶು॥ ೧೪ (ದಕ್ಷಿಣಾಯನೆ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ ನೆಯ ಮಾರ್ಚ. ಮೀನ ಮ.)

ತಾರೀಖು.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಯೋಗ.	ಸೂರ್ಯ ಉ.	ಅಸ್ತ.
27	ಶನಿ	೮	೪೮.೫೩	ಆರ್ದ್ರಾ.	೪೭.೯	೧೪	6·34	6·41
28	ರವಿ	೯	೪೩.೧೪	ಪುನರ್ವಸು	೪೩.೨೮	೧೫	6·33	6·41
29	ಸೋಮ	೧೦	೩೮.೨೩	ಪುಷ್ಯ	೪೦.೩೩	೧೬	6·33	6·41
30	ಕುಜ	೧೧	೩೪.೧೬	ಆಶ್ಲೇಷಾ	೩೮.೧೪	೧೭	6·32	6·42
31	ಬುಧ	೧೨	೩೧.೦	ಮಘಾ	೩೬.೫	೧೮	6·31	6·42
1	ಗುರು	೧೩	೨೯.೫	ಹುಬ್ಬಾ	೩೬.೨೮	೧೯	6·30	6·42
2	ಶುಕ್ರ	೧೪	೨೭.೩೩	ಉತ್ತರಾ	೩೬.೫೯	೨೦	6·29	6·42

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಮಾರ್ಚ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜನವರಿ ೧ರಿಂದ
19	93—1	77—5	—	...
20	93—2	76—8	—	...
21	92—5	76—3	—	...
22	93—3	76—8	—	...
23	93—1	77—8	—	...
24	93—1	78—0	—	—
25	94—1	78—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಸಿಕ ಅಕ್ಕಿಮುಡಿ ೧ಕ್ಕೆ	...	8—14	9—14
ಗುಡ್ಡು ,, ,,	...	8— 4	9— 0
ರಾಜಮುಡಿ ೧ಕ್ಕೆ	...	8— 0	8— 8
ಆವ್ವಲ್ ಬೆಳ್ತಿಗೆ ,,	...	10—12	11— 0
ಗುಡ್ಡು ಬೆಳ್ತಿಗೆ ,,	...	10— 0	10— 6
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	15— 0	16— 0
ಗೋಧಿ ಗೋಣಿ ೧ಕ್ಕೆ	...	22— 0	22— 8
ಹುರುಳಿ ಗೋಣಿ ೧ಕ್ಕೆ	...	14— 0	14— 8
ಕಡಲೆ ಗೋಣಿ ೧ಕ್ಕೆ	...	20— 0	—
ತೊಗರಿ ಗೋಣಿ ೧ಕ್ಕೆ	...	25— 0	25— 8
ತೊಗರಿಬೇಳೆ ಗೋಣಿ ೧ಕ್ಕೆ	...	26— 0	34— 0
ಉದ್ದು ಗೋಣಿ ೧ಕ್ಕೆ	...	20— 0	21— 0
ಹೆಸರು ಗೋಣಿ ೧ಕ್ಕೆ	...	21— 8	22— 0
ಊರು ಬೆಲ್ಲ ಖಂಡಿ ೧ಕ್ಕೆ	...	65— 0	67— 8
ಉಪ್ಪು ಗೋಣಿ ೧ಕ್ಕೆ	...	4— 2	4— 8
ಕೊಬ್ರಿ ಖಂಡಿ ೧ಕ್ಕೆ	...	125— 0	130— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	34— 0	—
ಎಳ್ಳಿಂಡಿ ಖಂಡಿ ೧ಕ್ಕೆ	...	56— 4	57— 8
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	...	10— 0	10— 8
ಎಳ್ಳೆಣ್ಣೆ ಮುಡಿ ೧ಕ್ಕೆ	...	11— 0	11— 4
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9— 4	9— 6
ಮೋರಿಸ ಸಕ್ಕರೆ ಮುಡಿ ೧ಕ್ಕೆ	...	9— 6	9—10
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	8— 0	8— 8
ಸಾಸಿವೆ ಮುಡಿ ೧ಕ್ಕೆ	...	11— 0	11— 4
ಕೊತ್ತುಂಬರಿ ಮುಡಿ ೧ಕ್ಕೆ	...	5— 0	5— 4
ಕಾಫಿ ಖಂಡಿ ೧ಕ್ಕೆ	...	275— 0	305— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	...	100— 0	105— 0
ಹಳೆ ಬೆಳಗೋಟು	...	100— 0	105— 0
ಹಳೆ ಕಾಳುಮೆಣಸು ಖಂಡಿ ೧ಕ್ಕೆ	...	140— 0	145— 0
ಯಾಲಕ್ಕಿ ಮಣ ೧ಕ್ಕೆ	...	25— 0	32— 0
ಗೇರುಬೀಜ ಮುಡಿ ೧ಕ್ಕೆ	...	5— 8	—
ಕಬ್ಬಿಣ ಖಂಡಿ ೧ಕ್ಕೆ	...	100— 0	120— 0
ಹಿತ್ತಾಳೆ ತಗಡು ಮಣ ೧ಕ್ಕೆ	...	23— 4	24— 0
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	40— 0	42— 0
ಚೀನಾ ಬೆಳ್ಳಿ ಸೇರು ೧ಕ್ಕೆ	...	31— 8	—
ಹಿತ್ತಾಳೆ ತಗಡು ಮಣ ೧ಕ್ಕೆ	...	24— 0	25— 0

...ವರ್ಷ ೧೯೨೦ರ... ಬಂದ ಪುಸ್ತಕಗಳು

...ಶುದ್ಧವಾಗಿ ತಯಾರಿಸಿದ ... ಲೇಹ್ಯಗಳು, ಕಷಾಯಗಳು, ದ್ರವ ... ಚೂರ್ಣಗಳು, ಮಾತ್ರೆಗಳು ಇತ್ಯಾದಿ ... ನೇಪಾಲ ದೇಶದಿಂದ ತರಿಸಿದ ಕಸ್ತೂರಿ ... ಸುಲಭವಾದ ... ರೋಗದ ಪ್ರಕೃತಿಯನ್ನು ... ಔಷಧಿಗಳನ್ನು ಅನುಪಾನ ... ವಿ. ಪಿ. ಮೂಲಕ ಕಳುಹಿಸುವೆವು.

ಕೆ. ಜಿ. ನಾಯರ್ಸ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ ಕನ್ನಡ

ರಾಯಲ್ ಇಂಡಿಯನ್ ಬಾಂ

ಇದೇ ... ಬಾಟ್ಲಿ

ಗುರುತನ್ನು ... ಒಂದರಕ್ಕಾಯು ಲಕ್ಷದಲ್ಲಿಡಿರಿ ...

ಹಿಂದುಸ್ಥಾನದಲ್ಲಿ ... ಉತ್ಕೃಷ್ಟವಾದ ... ತಲೆನೋವು, ಶೀತ, ಶಿರೋಭಾರ, ಗಂಟು, ಗಂಟು ನೋವು, ಎದೆನೋವು ... ಸಂಧಿವಾತ, ಅರ್ಧಾಂಗವಾಯು ... ಇದರ ಉಪಯೋಗದಿಂದ ಗುಣಹೊಂದುವವು ... ಒಂದು ಬಾಟ್ಲಿಗೆ ರೂ ... 24 ಬಾಟ್ಲಿಗೆ ರೂ ... ವಿ ಪಿ ಖರ್ಚು ಪ್ರತ್ಯೇಕ

"ಗಜಕರ್ಣದ ಮುಲಾಮು" ... ಇದರಂತೆ ... ಹೇರ್ ಆಯಿಲ್ ... ತಯಾರಿಸಿದ್ದೇವೆ ...

ಸೂಚನೆ — ... ಇತರ ... ಏರ್ಪಾಟನ್ನು ಇಟ್ಟಿರುತ್ತೇವೆ

Manora & Co
Hill Road, P O Bandra
BOMBAY

...				...	೦ 2 0	
...	0 6 0			...	0 6 0	
...				...ಭಾಗ I	0 4 0	
...	0 12 0			II	0 3 0	
...ಭಾಗ I	0 8 0			III	0 4 6	
...	1 1 0			ಹೊಸ ಪುಸ್ತಕಗಳು		
...	1 0 0			...	0 6 0	
... I	0 8 6			...	0 1 6	
...	0 6 0			...	0 8 0	
ಸಾವಿತ್ರಿ ಚರಿತ್ರೆ	0 2 3			...	0 6 0	
ರಾಮಾನಂದ	0 10 0			...	2 0 0	
ಸುಭದ್ರ	0 13 0			...	0 12 0	
...	0 14 0			... (ಬಾಲ್ಯಾವ್ಯಾಕರಣ)	0 3 6	
...	0 14 0			...	0 ... 0	
...	1 0 0			...	0 12 6	
...	0 2 0			...	0 8 0	
...	0 2 0			...	0 12 0	

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪೆನಿ
... ಊದು ಬತ್ತಿಗಳು. ಮನೋರಂಜಕ!!

... ಅತ್ತರುಗಳು — ಗುಲಾಬ್, ಅಂಬರ್, ಹೀನಾ, ಕೇವಡಿ ...

... ಮಲ್ಲಿಗೆ, ಗುಲಾಬಿ, ಮತ್ತು ನಾರಂಗ (ವಿಲಾಯತಿ ...) ...

... ಸುಗಂಧ ರೂಪ ...

ವಿಳಾಸ — ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪೆನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ

ರೇಖಾ ಪಂಚೆ, ಆಟೋಮೋಹಿನಿ ಸೆಂಟ್,



ಈ ... ಫೌಂಟನ್ ಪೆನ್ನು ... ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು ... ರೇಖಾ ಪಂಚೆ, ಆಟೋಮೋಹಿನಿ ಸೆಂಟ್ ಇನಾಂ ಸಹಿತ ರೂ ೧-೯-೦

O. C. LINGAM & Co,
No 2, Ramanuja Iyer Street
SAVCARPET, *Madras*

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು

1 ಮಹಾಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2 ಮಹಾಜ್ವರಾಂಕುಶ (ಖಾತ್ರಿ ಗುಣ) — ಇನ್ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 8

3 ಬಾಲಗ್ರಹಗುಟಿಕೆ — ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10

4 ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ — ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೆ ಗುಣ ಬರಿ ಅತಿಸಾರ ರಕ್ತಾತಿಸಾರ ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲಿ 1ಕ್ಕೆ ಆಣೆ 8

5 ಖಾಸಕುಠಾರ ಗುಟಿಕೆ — ಇದು ಖಾಸಕ್ಕೆ ಸಿದ್ಧ ಔಷಧಿ ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ ಡಜನಿಗೆ ಆಣೆ 10

6 ಮೇಹಕುಠಾರ — ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ ಕ್ರಯ ರೂ 2.

7 ಇಚ್ಛಾಭೇದಿ. — ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1ಕ್ಕೆ ಆಣೆ 12

8. ಭೃಂಗರಾಜತೈಲ — ತಲೆ ಉರಿ, ಕಣ್ಣು ಉರಿ, ಕಣ್ಣುನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9 ದಂತಮಂಜನ — (ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತಬರುವುದು, ಮೊಂಡಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಸುಗಂಧ ಕಲಾನಿಧಿ

ಅಲ್ಪವಾದ ಬೆಲೆ! ಮಹತ್ವಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ... ಅನೇಕ ವಿಧ ಗಂಧದ ಬತ್ತಿ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ ... ಅನೇಕ ಬಗೆ ಸುವಾಸನೆ ಎಣ್ಣೆ, ಪೊಮೇಟಂ, ಪನ್ನೀರು ವಿಲಾಯತಿ ... ಕರ್ಪೂರ, ... ಇವೇ ಮೊದಲಾದ ... ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ... ಬೂಟ್ಪಾಲಿಷ್, ವಾರ್ನೀಸ್, ಸಿಮೆಂಟ್, ಕಾಗದ ಪೆನ್ಸಿಲ್ ... ದಂತಕೆಲಸ, ... ಕಾಪಿಂಗ್ ಪ್ರೆಸ್, ಮತ್ತು ... ಸ್ಲೇಟ್ ಬೋರ್ಡು, ಫೋಟೋ ... ಈ ಪುಸ್ತಕವು ... ಬೆಲೆ ರೂ ೧-೯-೦

ವಿಳಾಸ — ಕೆ ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ
ನಂ 12 ಜ್ಯಾಂಕ್ ರೋಡು,
ಬೆಂಗಳೂರು-ಸಿಟಿ

ನಾಂಡಾ ಆಯಿಲ್.

(ನಪುಂಸಕತ್ವಹಾರಿ ತೈಲವು)

... ಧಾತುವಿನಿಂದಲೇ ... ಗರ್ಭಾಶಯಗಳಿರುವು ...

... ವ್ಯಾಯಾಮ ... ದೇಹದ ... ನಪುಂಸಕತ್ವವನ್ನು ... ಇದರ ... ದಿನಗಳು ... ಕ್ರಯ ಸೀಸೆ ಒಂದಕ್ಕೆ ರೂ ೧-೦-೦

ನವ ವಿಳಾಸ — ಸಿಟಿ ವಾಚ್ ಕಂಪೆನಿ
16-ತಿರುಪಳ್ಳಿ ಬೀದಿ, ಮದರಾಸು

The City Watch Co,
16 Tirupalli Street MADRAS

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜೀವಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧ ಔಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co,
Kalyanakaraka Bishagmandir.
POLALLI POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ ಪೋಸ್ಟ್, ದ. ಕ.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರ-ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ... ಇಸವಿಯಿಂದ ... ಇಸವಿಯವರೆಗೆ ಮೂವತ್ತ ಸಾವಿರ ಬಾಟಲಿಗಳು ಖರ್ಚಾದವು ಮತ್ತು ... ಇಸವಿ ಅಕ್ಟೋಬರ ತಿಂಗಳಲ್ಲಿ ಇನ್ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು ... ಈ ಔಷಧವು ಎಷ್ಟು ... ಸ್ವೀಕಾರಮಾಡುತ್ತಲೇ ... ಈ ಆರೋಗ್ಯಬಿಂದು ... ಕರ್ನಾಟಕ ದೇಶಕ್ಕೆಲ್ಲಾ ... ಈ ಅರ್ಕುಶಫಾದಿಂದಲೇ ಗುಣಹೊಂದಿದ ... ಸರ್ಟಿಫಿಕೇಟುಗಳೂ ಸಹ ದೊರೆತಿರುತ್ತವೆ ... ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ... ಈ ಆರೋಗ್ಯಬಿಂದುವಿನ ಮೇಲೆ ದ ಲೇಬಲ್ಲಿನ ... ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗ ಮಾಡಿ ...

ರೋಗದ ನಾಮಗಳು.

ಕ್ಷಯರೋಗ, ಪಡಸರೋಗ, ವಾಂತಿರೋಗ, ಗುಲ್ಮರೋಗ, ಮಲರೋಗ, ವ ... (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂರ್ಛೆರೋಗ ... ಮೊದಲಾದ ರೋಗಗಳು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಕ್ಷಯ, ಅಜೀರ್ಣ, ಇದ್ದಲಿ, ಅತಿಸಾರ, ಹೊಟ್ಟೆಶೂಲಿ, ಮೈಶೂಲಿ, ಅಂಗದಶೂಲಿ, ಸಂದುಶೂಲಿ, ವಾತಶೂಲಿ, ... ಗುದ್ವನ್ವ, ... ಕಡ್ಡ, ... ಇಸಬು, ... ಮೂಲವ್ಯಾಧಿ ... ಹಲ್ಲು ... ಹೊಟ್ಟೆ ... ಮತ್ತು ... ಅನೇಕ ರೋಗಗಳು, ... ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ... ಒಂದು ಬಾಟಲಿಗೆ ... ರೂಪಾಯಿ, ನಮೂನೆ ... ಒಂದು ಡಜನ್ ಬಾಟ್ಲಿ ... ಕಮಿಷನ್ ಕೊಡುತ್ತೇವೆ ... ನಮ್ಮ ಔಷಧವು ... ಅನುಭವ ... ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ... ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಿಳಾಸ ಸ್ಪಷ್ಟವಾಗಿ ಬರೆಯಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ)

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡೆಸಲ್ಪಡುತ್ತದೆ

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೀಸೆಗೆ ರೂ 2—2—0	ಕೊಲೇರಾ ಔಷಧದ ದೊಡ್ಡ ಸೀಸೆಗೆ ರೂ 1—2—0
„ ಸಣ್ಣ „ „ 1—6—0	„ ಸಣ್ಣ „ „ 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೀಸೆಗೆ ರೂ 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಿಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ— ಮೇನೇಜರ್, ಆಯುರ್ವೇದಾಶ್ರಮ,
5೦ ಆಚಾರಪ್ಪನ ಬೀದಿ,
ಜೋರ್ಜಟೌನ್, ಮದರಾಸ್

ತಂತಿ ವಿಳಾಸ— ಪಂಡಿತ್, ಮದರಾಸ್

ಕಾಮಶಾಸ್ತ್ರ

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ತಕ್ಕ ಬರಿಯುವದರಲ್ಲಿ ಅಂಚೆಯ ಹಸಲು ಸಹಾ ನೀಡಿಕ್ಕಿಸದೇ ಕಳುಹಿಸುವೆವು

ಮತ್ತು

ಪ್ರಸಿದ್ಧವಾದ ಅತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡುತ್ತಾ ಇರುವುದಕ್ಕೆ ಕ್ರಯ ರೂ 1 ಹೆಚ್ಚಿಗೆಯಿಂದ ಮರಿಯಬಾರದು.

ವಿಳಾಸ—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ ಮದರಾಸು

Local Agents **Raphael & Co,**
Brito Buildings,
Hampankatta, MANGALORE

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ

ಎಲ್ಲಾ ದೇಶದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾಯು ಹೊರೆಯುವುದು ನಿಜವಾಗಿಯೂ ತಪ್ಪುವುದು

ಕಫ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ನುಲಬದ್ಧ, ಕೆಮ್ಮು, ಗಸಿಬೇನೆ ಎಲಬೇನೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವು, ಜ್ವರ ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧ ಅತ್ಯಗಾಮಿಯಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರಿಕೆ ಪ್ರತಿ ಸೀಸೆಯೊಡನೆಯೂ ಇರುವುದು, 260 ಮಾತ್ರೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆಯುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಪ್ರತಿ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ೧ಕ್ಕೆ ಒಂದು ಇನಾಮು

ಶ್ರೀನಿವಾಸತೈಲ— ಪ್ಲೇಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ ಸೀಸೆಗೆ 8 ಆಣೆ ೧ಕ್ಕೆ ಒಂದು ಇನಾಮು

ವೈಶ್ವಾನರಾನವ— ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ ಅಜೀರ್ಣದ ಭೇದಿಗಳ ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ೧ಕ್ಕೆ ಒಂದು ಇನಾಮು

ಬಾಲಸುಧೋದಯ— ಮಕ್ಕಳಿಗೆ ಬಾಲಗ್ರಹ, ಸಿಹಿಮೂರಿಗುತ್ತದೆ ಮಂದ, ಬಲಹೀನ ಅಜೀರ್ಣ ಭೇದಿ ಕ್ರಿಮಿ ಹೊಟ್ಟೆ ದಪ್ಪವಾಗಿರುವುದು ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚುರುಕಾಗಿ ಪುಷ್ಟಿಯುಳ್ಳವರಾಗುತ್ತಾರೆ ಸೀಸೆಗೆ ಆಣೆ 12 ೧ಕ್ಕೆ ಒಂದು ಇನಾಮು
ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ನಮ್ಮಿಂದ ಈ ಹೆಸರಿನ ಭಾಂಗಿಯನ್ನು ತೆಗೆದುಕೊಳ್ಳುವಾಗ ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು ಎಂದು ಬರೆದಿರುವ ಲೇಬಲು ಇದರಲ್ಲಿ ನೋಡಿ ತೆಗೆದುಕೊಳ್ಳಿರಿ. ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ— ವೀರ್ಯವು ನೀರಿನಂತೆ

ಇದ್ದರೂ ಸ್ವಪ್ನದೋಷವಾದರೂ, ಮೂತ್ರದಿಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ ಹಸಿವು ಇಲ್ಲದಿದ್ದರೂ ಮಲಬದ್ಧವಿದ್ದರೂ ಸರಿಯಾಗಿ ಆಗದಿದ್ದರೂ, ಶರೀರದಲಿ ಶಕ್ತಿ ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು. ಧಾತುವನ್ನು ಶೀಘ್ರಿಸುವುದು. ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರಿ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್ ಸಿಂಗಾಪುರ್ ಆಫ್ರಿಕ ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪಾತ್ರಗಳು ಬಂದಿವೆ. ಔಷಧಕ್ಕೆ ಗುಣವಿಲ್ಲವೆಂದು ಹೇಳುವವರು ಅರ್ಧಾಗ ಸ್ವಾಂದಿನ ಕೆಲಸ ಅವರ ಪ್ರಯತ್ನವನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರೂಪಿಸಿದರೆ ಅವರಿಗೆ ಕಂಡ ಮೊತ್ತವನ್ನು ಕೊಡಲ್ಪಡುತ್ತದೆ. ನಾವು ಹಾಗೆ ಕೊಡದ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬಾವನ್ನು 6 ದಿನಗಳ ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. ಹೆಚ್ಚು ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರ ದವರೆಗೂ ಗುಣ ಕೊಡುತ್ತದೆ. ಉಪಯೋಗಿಸುವ ವಿಧಾನ ಪಟ್ಟಿಯ ಜತೆಯಲ್ಲಿರುವುದು ಕ್ರಯ ಒಂದು ಡಬ್ಬಿಗೆ ರೂಪಾಯಿ 2

ಈಗ ಭಾಂಗಿಯ ಚಾಜು ಹೆಚ್ಚಿರುವುದರಿಂದ ಕೆಲವು ದಿನಗಳ ಪರ್ಯಂತ ಟಪ್ಪಾಲ ಖರ್ಚು 1 ಡಬ್ಬಿಗೆ 8 ಆಣೆ ಮೂರು ಡಬ್ಬಿಗಳಿಗೆ 12 ಆಣೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪ್ಪೋ, ಬೆಂಗಳೂರು ಸಿಟಿ

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗತ, ಉಳುಕು, ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ಆರ ಕಿಮ್ಮತ್ತು ೦—[illegible]—೦, ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಬಿಡ್ಡೆ, ದದ್ರು, ಹುಳುಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಚ್ಚುವುದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಗಿಕ್ಕೆ ೦—೫—೦, ಒಂದು ಡಜನಿಗೆ ರೂ ೩—೬—೦

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವವು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮಾಡಬೇಕು

ಡಿ. ಮ್ಯಾನೇಜರ್ — ಶ್ರೀ ದೇವೀಪ್ರಸಾದ ಕಂಪೆನಿ,
[illegible]

The Indian Tooth-ache Specific

ಹಲ್ಲುನೋವಿಗೆ ಖಾತ್ರಿಯಾದ ಔಷಧ

ಇದನ್ನು ಒಂದು ಸಾರಿ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳು, ವಸಡಿನ ರೋಗಗಳು ಅಂದರೆ ವಸಡಿನ ಶಿಥಿಲತೆ, ಬಾವು, ವಸಡಿನಿಂದ ನೀರು ಇತ್ಯಾದಿ ಮಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಹಲ್ಲು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ

ಸೀಸೆ ಗಿಕ್ಕೆ ಕ್ರಯ ರೂ 1—4—0. ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ಆರು ಸೀಸೆ ತರಿಸಿಕೊಂಡರೆ ರೂ 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS MANGALORE.

ಸುಗಸಾದ ಕಾಫಿಹುಡಿ

I	ಕ್ಲಾಸ್	0—10—0
II	ಕ್ಲಾಸ್	0— 8—0
III	ಕ್ಲಾಸ್	0— 6 0

ಹೋಟೇಲುಗಳಿಗೂ ವರ್ತಕರಿಗೂ ಧಾರಾಳವಾಗಿ ಮೈಲಪಾಸಲು ಮೇಲೆ ರವಾನಿಸಲಾಗುವುದು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE

ಜರ್ಮನ್ ಬಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಎಷ್ಟು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು ಇದರಲ್ಲಿ ಯಾರೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು, ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು

ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ 5—8—0

ನಮ್ಮ ವಿಳಾಸ— ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್

ಕುತೂಹಲ ಬರುವ

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೩ ಆಣೆಯ ಟಪ್ಪಾಲು ಸ್ಟಾಂಪನು ಕಳುಹಿಸಿರಿ

ವಿಳಾಸ —

ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು

NETRANAND SAREES.

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಳಥಳಿಸುವ "ನೇತ್ರಾನಂದ" ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿ ಕ್ರಯದಲ್ಲಿ ದೊರಕುವವು

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಸೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿಸ್ ಇಗರ್ಜಿ ಎದುರು, ಹಂಪನಕಟ್ಟೆ, ಮಂಗಳೂರು.

ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ... ಮುಂತಾದವುಗಳೂ ಸುಲಭವಾದ ... ಕಾಗದ ಬರೆದವರು ರೋಗದ ಪ್ರಕೃತಿಯನ್ನು ... ಅಗತ್ಯವಿರುವ ಔಷಧಗಳನ್ನು ಅನುಪಾನ ... ವಿ. ಪಿ. ಮೂಲಕ ಕಳುಹಿಸುವೆವು.

... ಕೆ. ಕೆ. ನಾಯರ್ ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
... ದ. ಕನ್ನಡ.

ಕಲ್ಪ ... ಸ್ಟೋರು.

... ಊದು ಬತ್ತಿಗಳು. ಮನೋರಂಜಕ!!

... ರೂ.	ಘಮಘಮ ಬತ್ತಿ ಸೇರು ರೂ. ...
...	ಅರಗಜಾ ಕೊಳ ಗಳ್ಳ ,, ...
...	ಗಂಧದ ಬಿಲ್ಲೆ ,, ,, ೧

ಅತ್ತರುಗಳು:—ಗುಲಾಬ್, ಅಂಬರ್, ಹೀನಾ, ಕೊಳ ,, ,, 4

ಸೆಂಟುಗಳು:—ಮಲ್ಲಿಗೆ, ಗುಲಾಬಿ, ಮಸ್ಕ್, ನಾರಸಸ್ (ವಿಲಾಯತಿ, ಅಮೇರಿಕ, ...) ತಯಾರಿಸಿದ್ದು ½ ಔನ್ಸ್ ಬಾಟ್ಲಿ ರೂ. ೪.

... ಸುಗಂಧ ರಾಶ, ಸುಗಂಧ ಅಡಿಕೆ ಪುಡಿ, ಬಾಲುಪುಡಿ, ... ಗಳ್ಳ ರೂ. ೧.

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ.

ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್.



ಈ ನಕ್ಷೆಯಲ್ಲಿ ಕಂಡ ಇಂಕಿ ಅದ್ದದೆ ಬರೆಯುವ ಫೌಂಟನ್ ಪೇನಾ ಇದಕ್ಕೆ ... ಬಂಗಾರದ ಮುಳ್ಳು ಹಾಕಿಯದೆ. ಇದರಿಂದ ಬರೆಯುವದರಿಂದ ಅಕ್ಷರಗಳು ಮುತ್ತುಗಳ ಹಾಗೆ ಬರೆಯುವದು. ಈ ತಿಂಗಳ ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಚೆ, ಆಟೋಮೋಹಿನಿ ಸೆಂಟ್ ಇನಾಂ ಸಹಿತ ರೂ. ೧—೪—೦.

O. O. LINGAM & Co,
No. 2, Ramanuja Iyer Street,
SAVCARPET, *Madras.*

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಬೇಧಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇಧಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿತ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ರೋಯಲ್ ಇಂಡಿಯನ್ ಬಾಂ.
(ರಿಜಿಸ್ಟರ್ಡ್)

ಇದೇ ಬಾಟ್ಲಿ ಗುರುತನ್ನು ಒಂದರ ಕ್ರಯ ಲಕ್ಷ್ಯದಲ್ಲಿಡಿರಿ. ಆಣೆ ೮.

ROYAL INDIAN BALM — TRADE MARK — MANORA & Co. BOMBAY

ಹಿಂದುಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು:— ಇದರ ಉಪಯೋಗದಿಂದ ತಲೆನೋವು, ಶಿಡಿಕ, ಶಿರೋಭಾರ, ಗಂಟು, ಗಂಟಿನ ನೋವು, ಎದೆಶೀತ, ಎದೆನೋವು, ಉಬ್ಬಸ, ದಾತ, ಸಂಧಿವಾತ, ಅರ್ಧಾಂಗವಾಯು, ಉಳುಕು, ಹಾವು, ಚೇಳು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ. ಸಮುದ್ರ ಪ್ರಯಾಣ, ಪೃಥ್ವಿ ಮುಖಾಂತ್ರ ಯಾ ಹಳ್ಳಿಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ. ಒಂದು ಡಜನಿಗೆ ರೂ. ೫—೦—೦; 24 ಬಾಟ್ಲಿಗೆ ರೂ. ೯—೮—೦; 50 ಬಾಟ್ಲಿಗೆ ರೂ. ೨೦—೦—೦ ವಿ. ಪಿ. ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪; ದಂತಮಂಜನ ಕಜ್ಜಿ ಮುಲಾಮು ಆಣೆ ೩; ಹೆಯರ್ ಆಯಿಲ್, ಬೇರು ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು ಮುಂಬಯಿಂದ ರಫ್ತಾಗತಕ್ಕ ವಿಲಾಯಿತಿಯಿಂದ ಬಂದ ಪೇಟೆಂಟ ಔಷಧಗಳನ್ನೂ, ಇತರ ಮಾಲ್ಗಳನ್ನೂ ಆದಷ್ಟು ಮಟ್ಟಿನ ಕಮ್ಮಿ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ಈ ಪುಸ್ತಕದಲ್ಲಿ ಅಪೂರ್ವವಾದ ೩೦ ವಿಧ ಊದಕಡ್ಡಿ, ಅನೇಕ ವಿಧ ಗಂಧದ ಬಿಲ್ಲೆ, ಸ್ನಾನಚೂರ್ಣಗಳು, ಅಂಬರ್, ದಂತಮಂಜನ, ಅಬೀರ್ ಪುಡಿ, ಅನೇಕ ಬಗೆ ಸುವಾಸನೆ ಎಣ್ಣೆ, ಪೊಮೆಟಂ, ಪನ್ನೀರು, ವಿಲಾಯತಿ ಪನ್ನೀರು, ಕರ್ಪೂರ, ಅಭ್ಯಂಗನಕ್ಕನುಕೂಲವಾದ ತೈಲ ಇವೇ ಮೊದಲಾದ ೧೦೬ ವಿಷಯಗಳು, ಮೊದಲನೆ ಭಾಗದಲ್ಲಿಯೂ, ಎರಡನೆ ಭಾಗದಲ್ಲಿ ಗಾಜು, ರಸಗನ್ನಡಿ, ಚೀನಾಪಾತ್ರ, ವಾರ್ನೀಸ್, ಸಿಮೆಂಟ್, ಕಾಗದ, ಪೆನಸಿಲ್, ಬೆಂಕಿಕಡ್ಡಿ, ದಂತಕೆಲಸ, ದಂತಕ್ಕೆ ಅನೇಕ ವಿಧ ಬಣ್ಣಕೊಡುವಿಕೆ, ಪಾಲೀಸ್, ಕಾಪಿಂಗ್‌ಪ್ರೆಸ್, ಮಸ್ಸು, ಯಿಂಕಿ, ಲಿತೋಗ್ರಾಫಿಯಿಂಕಿ, ಲಿತೋ ಪ್ರೆಸ್‌ಯಿಂಕಿ, ಮತ್ತು ನಾನಾವಿಧ ಯಿಂಕಿ, ಯಿಂಕಿಪೌಡರು, ಕಾಗದಕ್ಕೆ ಮೇಣ, ಸ್ಲೇಟುಬೋರ್ಡು, ಫೋಟೋ ಮುಂತಾದ ೬೦ ವಿಷಯಗಳು. ಒಬ್ಬರ ಸಹಾಯವಿಲ್ಲದೆ ತಿಳಿಯಬಹುದು. ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಒಬ್ಬ ಅನುಭವಶಾಲಿಯಾದ ಬೋಧಕನಿದ್ದಂತೆಯೇ. ಬೆಲೆ ರೂ. ೧—೪—೦.

ವಿಳಾಸ:— ಕೆ. ಪುಟ್ಟಪ್ಪ, ಕಲಾಪ್ರಸಾರಕ ಕಾರ್ಯಾಲಯ,
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು-ಸಿಟಿ.

ಸಾಂಡಾ ಆಯಿಲ್.
(ನಪುಂಸಕತ್ವಹಾರಿ ತೈಲವು)

ಮನುಷ್ಯನಲ್ಲಿ ಪುರುಷಾರ್ಥವು ಧಾತುವಿನಿಂದಲೇ ಇರುವುದು. ಮನುಷ್ಯನ ಪಾಪಿಕ ವಿಚಾರ ಗರ್ಭಶಾರೀರಾದಿಗಳೂ ... ಅತ್ಯಂತ ಮೈಥುನದಿಂದಲೂ

ವ್ಯಾಯಾಮ (ಕಸರತ್)ದಿಂದಲೂ, ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ ಹಸ್ತಪ್ರಯೋಗಾದಿಗಳಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು, ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ, ತಮಗಿರುವ ಕೊರತೆಯನ್ನು ಬಚ್ಚಿಟ್ಟು ಕೊಂಡು ಪ್ರಾಯಸ್ಥರಾದಾಗ ಏನೂ ಶಕ್ತಿಯಿಲ್ಲದೆ ಉತ್ಸಾಹವಿಲ್ಲದೆ ಅಶಾಂತಿಯಿಂದ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ೭ ದಿನಗಳು ಸತತ ... ಗುಣವಾಗುವದು ಮತ್ತು ಬಲಹೀನವಾಗಿದ್ದರೂ ಸಾಧಿಸುವುದು.

ಕ್ರಯ ಸೀಸೆ ಒಂದಕ್ಕೆ ರೂ. ೧—೦—೦

ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ,
16-ತಿರುಪಳ್ಳಿ ಬೀದಿ, ಮದರಾಸು.
The City Watch Co.,
16 Tirupally Street, MADRAS.

ಪ್ರಾರಂಭಕ್ಕೆ ಈ ಊರಲ್ಲಿ ಕರ್ನಾಟಕ ಪರಿಷತ್ತು ... ನಮಗೆಲ್ಲರಿಗೂ ವಿದಿತವೇ ಇರುವದು. ಈ ಪರಿ... ವಿಷಯಗಳನ್ನು ನಿರ್ಣಯಿಸುವದು ಅತ್ಯಂತ ಮಹ... ಯಾಕೆಂದರೆ, ಕರ್ನಾಟಕದ ದೃಷ್ಟಿಯಿಂದ ಕರ್ನಾ... ಚರ್ಚೆಮಾಡುವ ಪ್ರಸಂಗವು ಇದೇ ಮೊದಲನೆಯದು. ... ಸುವುದೇನಂದರೆ, ಕರ್ನಾಟಕಕ್ಕೆ ವಿಶ್ವವಿದ್ಯಾಲಯದ ... ಕೊರತೆ, ಇದ್ದ ರೈಲ್ವೇಗಳ ವ್ಯವಸ್ಥೆ, ಕರ್ನಾಟಕ ... ಕೊರತೆ, ಕರ್ನಾಟಕದ ರಾಷ್ಟ್ರೀಯ ಏಕೀಕರಣದ ... ಕರ್ನಾಟಕಕ್ಕೆ ಸಂಬಂಧಿಸಿದ ವಿಶಿಷ್ಟ ವಿಷಯಗಳ ... ರದ ದೃಷ್ಟಿಯಿಂದ ಮಾಡಿ ಕರ್ನಾಟಕಕ್ಕೆ ಯಾವ ... ತಮಗಿರುವದೆಂಬದನ್ನು ಆ ಕೊರತೆಗಳನ್ನು ದೂರ ... ಯಲ್ಲಿ ಪರಿಷತ್ತಿನಲ್ಲಿ ಯಾವ ಬಗೆಯ ಠರಾವು ... ಬದನ್ನು ದಯ ಮಾಡಿ ಬರೆದು ತಿಳಿಸಬೇಕು. ... ಕಳಿಸಿದ್ದಕ್ಕೆ ಪರಿಷತ್ತಿನ ಮುಂದೆ ತರಲು ...

... ನೀಡಿದ ವಿಶಿಷ್ಟ ವಿಷಯಗಳಲ್ಲದೆ, ಸ್ವರಾಜ್ಯ, ಮಾಂಟೆಗ್ಯು ... ಸುಧಾರಣೆ ಮುಂತಾದ ... ಧದಿಂದ ಯಾವ ಯಾವ ಠರಾವುಗಳು ಪರಿಷತ್ತಿನಲ್ಲಿ ... ಇಟ್ಟಿಯ ನಿರ್ಣಯವಾಗಬೇಕೆಂಬದನ್ನು ತಿಳಿಸಬೇಕು. ...

ತರ್ಕ ಕಾರಣವಿಲ್ಲದೆ ಒಂದರ ಮೆನ್ಸಗೆ ... ದಾದರೆ ಅವನ ಮೆಂಬರತನವನ್ನು ಸರಕಾರವು ರದ್ದು ಪಡಿಸಬಹುದು. ...

ದಕ್ಷಿಣಕನ್ನಡ ೨, ಕೃಷ್ಣಾ (ಪೂರ್ವ), ಕೃಷ್ಣಾ (ಪಶ್ಚಿಮ) ೨, ಕರ್ನೂಲು ೨, ಮಧುರೆ (ಮಧುರೆ ಮ್ಯುನಿಸಿಪಾಲಿಟಿ ಹೊರತು) ೩, ಮಲಬಾರ ಮತ್ತು ಅಂಜೆಂಗೋ ೫, ನೆಲ್ಲೂರು ೨, ನೀಲಗಿರಿ ೧, ರಾಮನಾಡು ೨, ಸೇಲಂ ೨, ತಂಜಾವೂರು ೩, ತಿನ್ನವೆಲ್ಲಿ ... (ತಿರುಚಿ ನಾಪಳ್ಳಿ ಮತ್ತು ಶ್ರೀರಂಗ ಮ್ಯುನಿಸಿಪಾಲಿಟಿ ಹೊರತು) ೨, ವಿಶಾಖಪಟ್ಟ ... ೩ = ೫೮.

ಮಹಮ್ಮದೀಯ ಪ್ರತಿನಿಧಿಗಳನ್ನು ಚುನಾಯಿಸುವ ... ಗಂಜಾಂ, ವಿಶಾಖಪಟ್ಟ, ಗೋದಾವರಿ, ಕೃಷ್ಣಾ (ಪೂರ್ವ), ಕೃಷ್ಣಾ (ಪಶ್ಚಿಮ) ... ಗುಂಟೂರು, ನೆಲ್ಲೂರು, ಚಿತ್ತೂರು ... ಕಡಪ, ಕರ್ನೂಲು, ಬಳ್ಳಾರಿ, ಅನಂತಪುರ ... ಉತ್ತರ ಆರ್ಕಾಡು, ಚೆಂಗಲ್ಪಟ್ಟು ... ಸೇಲಂ, ಕೊಯಮುತ್ತೂರು, ನೀಲಗಿರಿ, ದಕ್ಷಿಣ ಆರ್ಕಾಡು ...

... ಪ್ರತಿಬಂಧವಾಗುವದು ... ಹಾಗೆ ಮಾಡಲು ಮಂಡಲಕ್ಕೆ ಅಧಿಕಾರವು ಇಲ್ಲ. ಆದರೆ, ಪರಿಷತ್ತಿನ ಮುಂದೆ ... ಚರ್ಚಿಸುವ ವಿಷಯಗಳನ್ನು ಚೆನ್ನಾಗಿ ಅಭ್ಯಾಸಮಾಡಿ ... ಕೊಂಡು ಬಂದವರು ಪ್ರಸಂಗ ಬಂದರೆ ಯಾವ ವಿಷಯಗಳ ಮೇಲೆ ಭಾಷಣ ಮಾಡಬೇಕಾಗುವದೆಂದು ಮೊದಲೇ ... ಕರ್ನಾಟಕಕ್ಕೆ ಸಂಬಂಧಪಟ್ಟ ... ಕರ್ನಾಟಕದವರು ... ಮೇಲೆ ... ಅವರಿಗಾಗಿ ... ಮುಂಗಡವಾಗಿ ತಿಳಿಸಿದರೆ ಉಪಯೋಗವಾಗುವದು.

ಧಾರವಾಡ, ವೆಂಕಟೇಶ ಭೀಮರಾವ್ ಆಲೂರ, ... ನಿಮಂತ್ರಣಕಾರಕ ... ಕಾರ್ಯದರ್ಶಿ.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0

ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0

Reserve and other sinking Funds „ 138781—9—2

ರಿಜರ್ವ್ ಮತ್ತು ಇತರ ಫಂಡುಗಳು „ 188,781—9—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಠರಾಯಿ ಮತ್ತು ಚಾಲ್ತಿ ಲೇವಾದೇವಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪರಿಗ್ರಹಿಸಲ್ಪಡುತ್ತವೆ.

For further particulars apply to the ...

Canara Bank Ltd.,

Mangalore, 1st March 19..

New Discoveries of the Twentieth Century.

Substitute for Quinine!

Powder I.

Smallpox Preventive.

Powder No. II.

ಕಷ್ಟನಷ್ಟಗಳು, ಇವರ ಸಮಯವಾಗಿ ಜನನವಾಗುವದಕ್ಕೆ ವರಾಡುವಕ್ರಮ. ಘಡಿಯಾರಗಳು ಇಲ್ಲದಸಮಯದಲ್ಲಿ ಹಸ್ತಲು ಘಂಟೆಯನ್ನು ನೋಡಿಕೊಳ್ಳುವದಕ್ಕೆ ಸೂರ್ಯನ ನೆರಳಿನ ಅದ್ಭುತ ಘಡಿಯಾರವನ್ನು ಮಾಡಿ, ಘಂಟೆಯನ್ನು ನೋಡುವಕ್ರಮ ಘಡಿಯಾರಕ್ಕೂ ಇದಕ್ಕೂ ಹೆಚ್ಚು ಕಡಿಮೆಯಾಗುವದಿಲ್ಲ. ಕಾಲರಾ, ಪ್ಲೇಗು, ಇನ್ಫ್ಲೂಯಂಜಾ ರೋಗಗಳು ಸುತರಾಂ ತಗಲದಂತೆ ಮಾಡಿಕೊಳ್ಳುವ ಅಗದಿ ಸುಲಭಕ್ರಮ. ... ಬೀಳದಂತೆ ಮಾಡುವಕ್ರಮ. ಬದ್ಧ ಮನೆಗಳನ್ನು ತೋರಿಯತಕ್ಕ ಯೋಗ್ಯ ಮಾಡುವಕ್ರಮ. ಯಾವ ಯಾವ ನಕ್ಷತ್ರ ಎಷ್ಟನೇ ಪಾದದಲ್ಲಿ ಜನನವಾದರೆ ಯಾರ್ಯಾರಿಗೆ ದೋಷವು ಆ ದೋಷಕ್ಕೆ ಏನು ದಾನ ಕೊಡಬೇಕು—ಅದನ್ನು ಚನ್ನಾಗಿ ಬರೆದಿರುವದು. ಬಟ್ಟೆಗಳನ್ನು ತೊಳೆಯುವದಕ್ಕೆ ಸುಲಭವಾದ ಸಾಬೂನು ಮಾಡಿಕೊಳ್ಳುವಕ್ರಮ. ಹಸನಾದ ವಾರ್ನಿಷ್ ಮಾಡುವಕ್ರಮ. ನೂತನವಾದ ಕಾಪಿಂಗ್ ಪ್ರೆಸ್ಸು ಇದಕ್ಕೆ ಉಪಯೋಗಿಸುವ ಇಂಕಿಯನ್ನು ತಾವೇ ಸ್ವತಃ ಮಾಡಿಕೊಂಡು ತಮಗೆ ಬೇಕಾದಷ್ಟು ಕಾಪಿಗಳನ್ನು ಹಾಕಿಕೊಳ್ಳಬಹುದು. ಇದು ದಲ್ಲಾಳಿ ಅಂಗಡಿಯವರಿಗೂ ಕಂಪೆನಿಯವರಿಗೂ ಬಹಳ ಅನುಕೂಲ. ದುಡ್ಡು ಕೊಟ್ಟು ತರಿಸಿಕೊಳ್ಳುವ ಅವಶ್ಯಕವಿಲ್ಲ. ಮಳೆ ನಕ್ಷತ್ರಗಳು ಬೀಜಗಳ್ಳುವದರಿಂದ ಮುಂದೆ ಆಗುವ ವಿಷಯವನ್ನು ಯಾವ ಮಳೆಗಳು ಎಷ್ಟು ಹರುದಾರಿಗಳ ದೂರದವರಿಗೂ ಮಳೆ ಆಗುವ ವಿಷಯವನ್ನು ಯಾವ ಮಳೆಯಲ್ಲಿ ಗುಡುಗು ಸಿಡಿಲು ಅನೇಕಲ್ಲು ಉಂಟಾಗುವ ವಿಷಯವನ್ನು ತಿಳಿಯುವಕ್ರಮ. ಪ್ರತಿಪಟ್ಟರು ಮಾಡತಕ್ಕ ವ್ಯಾಪಾರ ವ್ಯವಹಾರ ನೂತನ ಉದ್ಯೋಗ ರಾಜಸಂಧಾನ ಅಧಿಕಾರಸ್ಥರ ಭೇಟಿ ಪ್ರಯಾಣ ಪಂಚಾಯಿತಿ ತೀರ್ಮಾನ ಅಧಿಕಾರದ ಚಾರ್ಜು ತೆಗೆದುಕೊಳ್ಳುವದು, ಹೊಸ ಅಂಗಡಿಯನ್ನು ಸ್ಥಾಪಿಸುವದು, ಪಾಲಿನವ್ಯಾಪಾರಮಾಡುವದು, ಗೃಹಪ್ರವೇಶ, ಧಾನ್ಯ ಮೊದಲಾದ ಧಾನ್ಯಗಳನ್ನು ದಾಸ್ತಾನುಮಾಡುವದು, ಸಾಲವನ್ನು ಕೊಡುವದು, ತೆಗೆದುಕೊಳ್ಳುವದು, ಕಂಪನಿಗಳನ್ನು ಸ್ಥಾಪಿಸುವದು,—ಇವೇ ಮೊದಲಾದ ಯಾವತ್ತು ಕಾರ್ಯಗಳು ಸುಖವಾಗಿ ಜರುಗುವದಕ್ಕೆ ನೋಡತಕ್ಕ ಒಳ್ಳೇ ಕಾಲನಿರ್ಣಯಗಳನ್ನು ಮಾಡಿ ಚನ್ನಾಗಿ ಹಾಕಿರುತ್ತ, ಈಗ ಆಕಸ್ಮಾತ್ ಏನಾದರೂ ನಷ್ಟವಾಗಲಿ ಲಾಭವಾಗಲಿ ಆದರೆ ವೈದ್ಯಸಂಬಂಧವೆಂದು ಹೇಳುತ್ತಾರಷ್ಟೆ! ಅಂಥಾ ವೈಷ್ಯವನ್ನು ಶೋಧಿಸಿ ಹಾಕಿರುತ್ತೆ. ರಾಹುಕಾಲ ಗುಳಿಕಕಾಲವನ್ನು ಸ್ಮಾರ್ತವೈಷ್ಣವೇಕಾದಶಿ ನಿರ್ಣಯವನ್ನು ಮುಸಲ್ಮಾನ ಶೀದಿಗಳನ್ನು ಇನ್ನೂ ಅನೇಕ ಅಪೂರ್ವವಿಷಯಗಳನ್ನು ಸರ್ವರಿಗೂ ಕೂಡ ಇತರರ ಸಹಾಯ ಬೇಕಿಲ್ಲದ ಸ್ವಲ್ಪವಾದರೂ ಮನೋವಿಡದೆ ಅರಿಯದವರಿಗೂ ಸಹಾ ಚನ್ನಾಗಿ ತಿಳಿಯುವಂತೆ ಬರೆದು ಇರುತ್ತೇವೆ. ಈ ವರುಷದ ಪಂಚಾಂಗಕ್ಕೆ ಎಷ್ಟು ಕ್ರಯವಿಟ್ಟರೂ ಸ್ವಲ್ಪವೇ. ಈ ಪಂಚಾಂಗ ಹತ್ತಿರವಿದ್ದಬಳಿಕ ಹತ್ತಿರ ಚಿಂತಾಮಣಿ ಇದ್ದಹಾಗೆ ಆಗುತ್ತೆ. ಈ ವರುಷ ಹೋದ ವರುಷಕ್ಕೆ ಕಾಗದದ ಬೆಲೆಯು ಬಹಳ ಹೆಚ್ಚಾಗಿ ಇದ್ದರಿಂದ ಈ ವರುಷ ಪಂಚಾಂಗದ ಕ್ರಯವನ್ನು ಹೆಚ್ಚಿಸಬೇಕಾಗಿತ್ತು. ನಮ್ಮ ಪಂಚಾಂಗದ ಅಭಿಮಾನಿಗಳ ದೆಸೆಯಿಂದ ನಮಗೆ ಲಾಭ ಕಡಿಮೆಯಾದರೂ ಚಿಂತೆಯಿಲ್ಲ. ಹೋದ ವರುಷದ ಕ್ರಯವನ್ನೇ ಇಟ್ಟಿರುತ್ತೇವೆ. ಪಂಚಾಂಗ ಒಂದಕ್ಕೆ ಕ್ರಯ ರೂ. 0—3—6. ಮೂರಾಣೆ ಆರು ಪೈ.

ಸಮಸ್ತರಿಗೂ ವಿನಂತಿ:—ಇದುವರಿಗೇ ಪಂಚಾಂಗದ ವಿ. ಪಿ. ಗಳನ್ನು ಅನ್‌ರಿಜಿಸ್ಟರ್ಡ್ ಪಾರ್ಸಲು ಮೂಲಕ ರವಾನೆಮಾಡುತ್ತಾ ಇದ್ದೇವಷ್ಟೆ! ಈ ಸಾರಿ ಪೋಸ್ಟು ಇಲಾಖೆಯವರು ಪ್ರತಿಒಂದು ವಿ. ಪಿ. ಯನ್ನು ರಿಜಿಸ್ಟರ್ಡ್ ವಿ. ಪಿ. ಮೂಲಕ ಕಳುಹಿಸಬೇಕೆಂತಲೂ ಪ್ರತಿ ಒಂದು ವಿ. ಪಿ. ಗೂ ಹೆಚ್ಚಾಗಿ ೨ ಆಣೆ ಸ್ಟಾಂಪು ಹಚ್ಚಬೇಕೆಂದು ರೂಲ್ಸು ಮಾಡಿರುವದರಿಂದ ಕಾರಣ ಈ ಸಾರಿ ಪಂಚಾಂಗದ ವಿ. ಪಿ. ಗಳಿಗೆ ಸ್ಟಾಂಪು ಖರ್ಚು ಹೆಚ್ಚು ಬೀಳುತ್ತದೆ. ಈ ಸಾರಿ ಪ್ರತಿ ೧ ವಿ. ಪಿ. ಮೊಬಲಗಿನಲ್ಲಿ ೨ ಆಣೆ ಜಾಸ್ತಿ ಬೀಳುವದು. ಕಾರಣ ಈ ವಿಷಯವನ್ನು ಪ್ರತಿಪಟ್ಟರು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಪ್ರತಿ ವರುಷವೂ ತರಿಸತಕ್ಕ ನಮ್ಮ ಪಂಚಾಂಗದ ಅಭಿಮಾನಿಕರಲಿಗಳೆಲ್ಲರೂ ಪಂಚಾಂಗದ ವಿ. ಪಿ. ಗಳನ್ನು ಮಾತ್ರ ವಾಪಸ್ಸು ಮಾಡದೆ, ದಯಮಾಡಿ ತೆಗೆದುಕೊಳ್ಳಬೇಕು. ವಾಪಸ್ಸು ಬಿಟ್ಟರೆ ನಮಗೆ ಬಹಳ ನಷ್ಟವಾಗುತ್ತದೆ. ಕಾರಣ ಹಾಗೆ ವಾಪಸ್ಸು ಬಿಡಬಾರದೆಂದು ಬಹಳವಾಗಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಬಹುಮಾನಗಳು:—ಈ ಪಂಚಾಂಗಗಳನ್ನು ಪ್ರತಿ ೧ಕ್ಕೆ ೫ ಆಣೆ ಪ್ರಕಾರ ತರಿಸಿಕೊಂಡವರಿಗೆ ಜಾತಕಪತ್ರಿಕೆಯನ್ನು ತಯಾರು ಮಾಡಿ ಕಳುಹಿಸುತ್ತೇವೆ. ೧೦ ಪಂಚಾಂಗಗಳನ್ನು ತರಿಸಿಕೊಂಡವರಿಗೆ ಜನ್ಮಪತ್ರಿಕೆಯನ್ನು ಉಚಿತವಾಗಿ ತಯಾರುಮಾಡಿ ಕಳುಹಿಸುತ್ತೇವೆ. ೬ ಪಂಚಾಂಗಗಳನ್ನು ತರಿಸಿಕೊಂಡವರಿಗೆ ೧ ಬಾಲಗ್ರಹ ನಿವಾರಣೆಯಂತ್ರವನ್ನು ಕಳುಹಿಸುತ್ತೇವೆ. ೫ ಪಂಚಾಂಗಗಳಿಗಿಂತಲೂ ಕಡಿಮೆಯಾಗಿ ಕಳುಹಿಸುವದಕ್ಕಾಗುವದಿಲ್ಲ. ದರ ವರುಷ ೫೦೦, ೧೦೦, ೫೦ ಪಂಚಾಂಗಗಳನ್ನು ತರಿಸಿಕೊಳ್ಳತಕ್ಕವರಿಗೆ ಮಾತ್ರ ೧೦೦ಕ್ಕೆ ೧೫ ರಿಯಾಯಿತಿಗಳಪ್ರಕಾರ ಕಳುಹಿಸಿಕೊಡುತ್ತೇವೆ. ಇದಕ್ಕಿಂತಲೂ ಕಡಿಮೆ ದರಕ್ಕೆ ಕಳುಹಿಸುವದಿಲ್ಲ. ಸರ್ವರೂ ಪ್ರತಿವರುಷವು ತರಿಸಿಕೊಂಡಂತೆ ದಯವಿಟ್ಟು ಈ ಸಾರಿಯೂ ತರಿಸಿಕೊಳ್ಳಬೇಕು. ಅನೇಕರು ಜನನಕಾಲವನ್ನು ಬರೆಯದೆ ಜನನ ಟಿಪ್ಪಣಿಗಳನ್ನು ಕಳುಹಿಸುವದರಿಂದ ಜಾತಕಪತ್ರಿಕೆ ವಗೈರೆ ಬರೆದುಕಳುಹಿಸುವದಕ್ಕೆ ನಮಗೆ ತೊಂದರೆ ಆಗುತ್ತೆ ಕಾರಣ ಜನನಕಾಲವನ್ನು ಸರಿಯಾಗಿ ಬರೆದು ಕಳುಹಿಸಬೇಕು. ಈ ಪಂಚಾಂಗದಿಂದ ಬಂದ ಹಣವನ್ನು ಮದ್ರಾಸು ಕಾಲೇಜುಗಳಲ್ಲಿ ಎಫ್. ಎ. ಬಿ. ಎ. ಕ್ಲಾಸುಗಳಲ್ಲಿ ಅಭ್ಯಾಸಮಾಡತಕ್ಕ ನಮ್ಮ ಬಾಲಕರ ಇಂಗ್ಲೀಷು ವಿದ್ಯಾಭ್ಯಾಸಕ್ಕೆ ಉಪಯೋಗಿಸುವ ಏರ್ಪಾಟುಮಾಡಿರುತ್ತೇವೆ. ಕಾರಣ ತಾವು ದಯಮಾಡಿ ಪ್ರತಿ ವರುಷ ತರಿಸಿಕೊಂಡಂತೆ ಈಸಾರಿ ತರಿಸಿಕೊಂಡು, ಈ ಘನಕಾರ್ಯಕ್ಕೆ ಸಹಾಯಮಾಡಬೇಕೆಂದು ಬೇಡುತ್ತೇನೆ. ಪಂಚಾಂಗದ ವಿ. ಪಿ. ಗಳಮೇಲೆ ನಮ್ಮ ಕನ್ನಡ ಸಂಪೂರ್ಣ ವಿಳಾಸವನ್ನು ನೋಡಿ ವಿ. ಪಿ. ಯನ್ನು ತೆಗೆದುಕೊಳ್ಳಬೇಕು.

ಕ್ರಯ ಪ್ರತಿ ೧ಕ್ಕೆ 0—3—6.

ನಮ್ಮ ಸಂಪೂರ್ಣ ವಿಳಾಸ:—

ತೆಲಗಿ ಹರಪನಹಳ್ಳಿ ಮಠದ ಬ್ರಂ॥ ಶ್ರೀ॥ ಸಿದ್ಧಾಂತಿ ಹೊಳೆಬಸವಶಾಸ್ತ್ರಿಗಳು,

ಹರಪನಹಳ್ಳಿ (ಜಿಲ್ಲಾ ಬ...)

ಪ್ರಸಂಗದಲ್ಲಿ ಪ್ರಸಿದ್ಧವಾ...

ಸುಗಂಧ ದ್ರವ್ಯಗಳಿಗೆ ದೇಶಾಭಿವ...

ಊದುಬತ್ತಿಗಳ...

ಅರಗಜ ಮತ್ತು...

ಬಾಲಗ್ರಹ ಧೂಪ...

ಜರದ. ...

ರಾಯಲ್ ಸುಗಂ...

ಲೇವೆಂಡರ್. ...

ಭೃಂಗರಾಜ ತೈಲ...

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ... 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0...

ತ್ರಿಫಲಾದಿ ತೈಲ:—ವಾತ, ಪಿತ್ತ, ಶ್ಲೇಷ್ಮ ... 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1

ಪಂಚಸಾರ ಲೇಹ:—ಅಜೀರ್ಣ, ಪಿತ್ತ, ... ಕ್ರಯ ರೂ. 1—4—0.

ವಿಳಾಸ:—ಆಯುರ್ವೇದಿಕ್ ಮತ್ತು ಹೊ...

ಧರ್ಮವೈದ್ಯಶಾಲಾ, ಧ...

ಕ್ರಯ ರೂ. 1—8—0.

ಪ್ರಶ್ನೋತ್ತರ...

ಲೋಕಬೋಧಿ...

7ನೇ ಮುದ್ರಣ: ಅನೇಕ ಉಪಯೋಗಿ...

... ಕ್ರಯ ರೂ. 1—8—0;

[89-19] ವಿಳಾಸ:—"ನವನಿಧಿ" ಆಫೀಸು, 122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು.

ಇದು ಮೇಲೆ ಹೇಳಿದ ಚಿಕ್ಕು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ.

ಎ. ಫೆರ್ನಾಂಡಿಸ್,

ಎಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ಶ್ರೀ ... ಆಯುರ್ವೇದೀಯ ಔಷಧಾಲಯ,

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿ ಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೇ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

ಪ್ರಾಥಮಿಕ ಶಿಕ್ಷಣದ ಬಿಲ್.

ಈ ತಿಂಗಳ ೨೬ನೆ ತಾರೀಖಿನಿಂದ ಪ್ರಾರಂಭಿಸುವ ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಪ್ರಕೃತ ಸಲ ಚರ್ಚೆಗೆ ಬರಲಿಕ್ಕಿರುವ ಪ್ರಾಥಮಿಕ ಶಿಕ್ಷಣದ ಈಮೊದಿನ ಮಸೂದೆಯು ಇತರ ಅವಗಾಹನೆ ಬಗ್ಗೆ ಪ್ರಕಟವಾಗಿದೆ. ಇದರಲ್ಲಿ ಒಟ್ಟಿಗೆ ೭ ಅಧ್ಯಾಯಗಳು. ಪ್ರಥಮ ಅಧ್ಯಾಯದಲ್ಲಿ ಈ ಬಿಲಿನಲ್ಲಿ ಬರತಕ್ಕ ಕೆಲವು ಸಾಂಕೇತಿಕ ಶಬ್ದಗಳ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿದೆ. ಪ್ರಾಥಮಿಕ ಶಿಕ್ಷಣವನ್ನು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲುಗಳ ವಶಕ್ಕೆ ಒಪ್ಪಿಸಬೇಕೆಂಬುದೇ ಈ ಬಿಲಿನ ಮುಖ್ಯ ತಾತ್ಪರ್ಯ. ಈ ಕೌನ್ಸಿಲುಗಳ ರಚನಾಕ್ರಮವು ಬಿಲಿನ ೨ನೆ ಅಧ್ಯಾಯದಲ್ಲಿ ವಿವರಿಸಿದೆ.

ಈ ಕೌನ್ಸಿಲುಗಳಲ್ಲಿ ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಮತ್ತು ಕೆಲವು ಮೆಂಬರರು ಇರುವರು. ಪ್ರಥಮ ಅವಸ್ಥೆಯಲ್ಲಿ ಜಿಲ್ಲಾ ಕಲೆಕ್ಟರರೇ ಈ ಕೌನ್ಸಿಲಿನ ಅಧ್ಯಕ್ಷರಾಗುವರು. ಆದರೆ ಕಾಲಕ್ರಮದಲ್ಲಿ ಈ ಸಭೆಯ ಮೆಂಬರರೊಳಗೊಬ್ಬನನ್ನು ಆಲೋಚನೆ ಸಭಾಯುಕ್ತ ಗವರ್ನರರು ಅಧ್ಯಕ್ಷರಾಗಿ ನೇಮಿಸಲೂ ಬಹುದು. ಅಥವಾ ಅಧ್ಯಕ್ಷರನ್ನು ಆರಿಸುವುದನ್ನು ಆ ಮೆಂಬರರಿಗೆನೆ ಬಿಟ್ಟುಕೊಡಲೂ ಬಹುದು. ಹೀಗೆ ಆರಿಸಿದ ಅಧ್ಯಕ್ಷನ ನೇಮಕವು ಕೌನ್ಸಿಲಯುಕ್ತರಾದ ಗವರ್ನರ ದೊರೆಗಳ ಮಂಜೂರಾತಿಗೆ ಒಳಪಟ್ಟಿರುವುದು. ಈ ರೀತಿಯಾಗಿ ಅಧ್ಯಕ್ಷನನ್ನು ಚುನಾಯಿಸುವ ಅಧಿಕಾರವನ್ನು ಅವರಿಗೆ ಒಪ್ಪಿಸಿಕೊಟ್ಟ ಕ್ಯ ಈ ಕೌನ್ಸಿಲಿನ ಆಕ್ಷೇಪಗಳನ್ನು ಕೇಳಿಕೊಂಡು ಅವು ಸಮಾಧಾನಕರವಲ್ಲವಾದರೆ ಅದನ್ನು ಹಿಂತೆಗೆಯಬಹುದು. ಆದರೆ ಈ ಬಗೆಯ ಘೋರಣೆಕ್ಕೆ ಸಭಾಯುಕ್ತ ಗವರ್ನರರು ಕಾರಣಗಳನ್ನು ಈ ಕೌನ್ಸಿಲಿನವರಿಗೆ ತಿಳಿಸಬೇಕು ಎಂಬದಾಗಿ ಕ್ರಮವನ್ನೆ ಈ ಬಿಲಿನಲ್ಲಿ ತೋರಿಸಿದೆ. ಸಾಮಾನ್ಯವಾಗಿ ಒಂದು ಜಿಲ್ಲೆಯು ಈ ಕೌನ್ಸಿಲಿನ ವ್ಯವಹಾರ ಕ್ಷೇತ್ರವಿರಬೇಕಿದ್ದರೂ ಕೆಲವು ಸಂದರ್ಭಗಳಲ್ಲಿ ಒಂದು ಜಿಲ್ಲೆಯ ಅಂಶ ಅಥವಾ ಒಂದೆರಡು ಜಿಲ್ಲೆಗಳು ಜತೆಗೂಡಿ ಒಂದು ಕೌನ್ಸಿಲಿನ ವ್ಯವಹಾರ ಕ್ಷೇತ್ರವಾಗಲೂ ಬಹುದು. ಆಗ ಕಲೆಕ್ಟರರ ಬದಲಾಗಿ ಯಾವ ಅಧಿಕಾರಿಯು ಈ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂಬುದನ್ನು ಕೌನ್ಸಿಲ್‌ಯುಕ್ತ ಗವರ್ನರರೇ ನಿರ್ಣಯಿಸುವರು.

ಈ ಸಭೆಗೆ ಸರ್ಕಲ್ ಇನ್ಸ್‌ಪೆಕ್ಟರರೂ, ಆಯಾ ಜಿಲ್ಲೆಯ ಅಸಿಸ್ಟೆಂಟ್ ಇನ್ಸ್‌ಪೆಕ್ಟರರೂ ಹುದ್ದೆದಾರಿ ಮೆಂಬರರಾಗಿರುವರು. ಒಂದು ಜಿಲ್ಲೆಯಲ್ಲಿ ಬಿನ್ ಸರಕಾರಿ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರು ಇದ್ದರೆ ಅವರೂ ತಮ್ಮ ಹುದ್ದೆಯ ಆಧಾರದಿಂದ ಈ ಕೌನ್ಸಿಲಿನ ಮೆಂಬರರಾಗುವರು. ಬಿನ್‌ಸರಕಾರಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಇದ್ದೆಡೆಗಳಲ್ಲಿ ಅವರ ವಿನಾ ಇನ್ನೊಬ್ಬರು ಡಿಸ್ಟ್ರಿಕ್ಟ್ ಬೋರ್ಡ್ ಕಡೆಯಿಂದ ಈ ಕೌನ್ಸಿಲಿನಲ್ಲಿ ಇರುವರು. ಸರಕಾರಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿದ್ದಲ್ಲಿ ಅವರ ಹೊರತು ಇನ್ನೂ ಇಬ್ಬರು ಪ್ರತಿನಿಧಿಗಳು ಡಿಸ್ಟ್ರಿಕ್ಟ್ ಬೋರ್ಡಿನಿಂದ ಈ ಕೌನ್ಸಿಲಿಗೆ ಬರಬೇಕಾಗಿದೆ.

ಜಿಲ್ಲೆಯಲ್ಲಿರುವ ಪ್ರತಿ ತಾಲೂಕು ಬೋರ್ಡು, ಅಥವಾ ಮ್ಯುನ್ಸಿಪಾಲಿಟಿಯಿಂದ ಮುಂದೆ ನಿರ್ಣಯಿಸತಕ್ಕಷ್ಟು ಮಂದಿ ಪ್ರತಿನಿಧಿಗಳು ಈ ಡಿಸ್ಟ್ರಿಕ್ಟ್ ಕೌನ್ಸಿಲಿಗೆ ಆರಿಸಲ್ಪಡುವರು. ಕೌನ್ಸಿಲಿನ ಇತರ ಮೆಂಬರರು ಕೌನ್ಸಿಲ್‌ಯುಕ್ತ ಗವರ್ನರ ಸಾಹೇಬರಿಂದ ನೇಮಕವಾಗುವರು. ಅದಕ್ಕೆ ಬದಲಾಗಿ ಖಾಸಗಿ ಯಾವದೊಂದು ಶಾಲಾ ಮ್ಯಾನೇಜಮೆಂಟಿನವರನ್ನು ಅಥವಾ ಖಾಸಗಿ ಶಾಲಾ ಉಪಾಧ್ಯಾಯರ ಸಂಘಗಳಿದ್ದರೆ ಅಂಥಾ ಸಂಘಗಳಿಂದ ಪ್ರತಿನಿಧಿಗಳನ್ನು ಆರಿಸಿಕೊಳ್ಳುವದಕ್ಕೆ ಸ್ವಾತಂತ್ರ್ಯವನ್ನು ಕೊಡುವ ಅಧಿಕಾರವು ಸಭಾಯುಕ್ತ ಗವರ್ನರ್ ಸಾಹೇಬರಿಗೆ ಇದ್ದೇ ಇರುವುದು.

ಹುದ್ದೆದಾರ ಮೆಂಬರರು ಮತ್ತು ಖಾಸಗಿ ಶಾಲಾ ಮ್ಯಾನೇಜಮೆಂಟುಗಳ ಪ್ರತಿನಿಧಿಗಳು ಹೊರತು ಇತರ ಸರಕಾರ ನಿಯುಕ್ತ ಮೆಂಬರರು ಇಡೀ ಸಭೆಯ ಕಾಲು ಅಂಶಕ್ಕೆ ಮಿಕ್ಕಿ ಇರಕೂಡದೆಂದು ಈ ಮಸೂದೆಯಲ್ಲಿ ಕ್ರಮವಿದೆ.

ವೈಸಪ್ರೆಸಿಡೆಂಟ ಅಥವಾ ಉಪಾಧ್ಯಕ್ಷನು ಸರಕಾರದಿಂದ ನೇಮಿಸಲ್ಪಡಲೂ ಬಹುದು, ಅಥವಾ ಸರಕಾರದ ಅನುಮತಿಯಿಂದ ಸದರಿ ಕೌನ್ಸಿಲಿನ ಮೆಂಬರರು ತಮ್ಮೊಳಗಿಂದ ಒಬ್ಬನನ್ನು ಉಪಾಧ್ಯಕ್ಷನನ್ನಾಗಿ ಆರಿಸಲೂ ಬಹುದು.

ಈ ಸಭೆಯ ಪ್ರತಿಯೊಬ್ಬ ಮೆಂಬರನ ಸ್ಥಾನದ ಅವಧಿಯು ಫೋರ್ಟ್ ಸೆಂಟ್ ಜಾರ್ಜ್ ಗಜೇಟಿನಲ್ಲಿ ಪ್ರಕಟವಾದಂದಿನಿಂದ ೩ ವರ್ಷಗಳ ವರೆಗೆ ಜಾರಿಯಲ್ಲಿ ಇರುವುದು. ಆದರೆ ಆ ನಡುವೆ ಅಂಥಾ ಮೆಂಬರನು ತಾಲೂಕು ಬೋರ್ಡ್ ಅಥವಾ ಡಿಸ್ಟ್ರಿಕ್ಟ್‌ಬೋರ್ಡ್, ಅಥವಾ ಮ್ಯುನ್ಸಿಪಾಲಿಟಿಯ ಪ್ರತಿನಿಧಿಯಾಗಿದ್ದು ಅವನ ಸದರಿ ಮೆಂಬರುತನದ ಅವಧಿಯು ಅಂತ್ಯವಾದರೆ ಆಗಲೇ ಈ ಕೌನ್ಸಿಲಿನ ಮೆಂಬರುತನವೂ ಕೂಡಾ ಅಂದೇ ಕೊನೆಯಾಗುವುದು. ಈ ಕೌನ್ಸಿಲಿನ ವೈಸಪ್ರೆಸಿಡೆಂಟನಾಗಿರುವವನ ಮೆಂಬರುತನದ ಅವಧಿಯು ಕಾಲದಾಟಿದರೆ ಆ ಹುದ್ದೆಯ ಅವಧಿಯೂ ಕಳೆದುಹೋಗುವುದು.

ಸರಕಾರ ನಿಯುಕ್ತ ಅಥವಾ ಚುನಾಯಿಸಲ್ಪಟ್ಟ ಪ್ರೆಸಿಡೆಂಟ, ವೈಸಪ್ರೆಸಿಡೆಂಟ ಅಥವಾ ಯಾವನೊಬ್ಬ ಮೆಂಬರನಾದರೂ ತನ್ನ ಸ್ಥಾನಕ್ಕೆ ರಾಜಿನಾಮೆಯನ್ನು ಜಿಲ್ಲಾ ಕಲೆಕ್ಟರರಿಗೆ ಬರೆದುಹಾಕಿ ಅದನ್ನು ಸದರಿ ಆಫೀಸರರು ಸ್ವೀಕರಿಸಿ ಉತ್ತರ ಬಂದೊಡನೆ ಆ ಸ್ಥಾನವು ಖಾಲಿಯಾಗುವುದು.

ಹುದ್ದೆದಾರ ಮೆಂಬರರಾದವರು ಈ ಕೌನ್ಸಿಲಿನ ಸರಹದ್ದನ್ನು ಬಿಟ್ಟು ಮೂರು ತಿಂಗಳಿಗೆ ಮಿಗುವಷ್ಟು ಕಾಲ ಹೊರಗೆ ಹೋಗಿದ್ದರೆ ಅಥವಾ ತಮ್ಮ ಸರಕಾರಿ ಕೆಲಸಕ್ಕೆ ರಾಜಿನಾಮೆ ಕೊಟ್ಟಲ್ಲಿ, ಅಥವಾ ಅಮಾನತು, ಕೆಲಸದಿಂದ ಬಿಡಗಡೆ, ಪೆನ್ಶನ್ ಮುಂತಾದ ರೀತಿಯಿಂದ ನಿವೃತ್ತರಾದರೆ ಅವನ ಮೆಂಬರುತನದ ಅವಧಿಯು ಆಗಲೆ ಮುಗಿಯುವದು.

ಈ ಕೌನ್ಸಿಲಿನ ಪ್ರೆಸಿಡೆಂಟ, ವೈಸಪ್ರೆಸಿಡೆಂಟ, ಅಥವಾ ಯಾವನೊಬ್ಬ ಮೆಂಬರನು ಕೌನ್ಸಿಲಿನ ಸರಹದ್ದಿನ ಹೊರಗೆ ಮೂರು ತಿಂಗಳಿಗೆ ಮಿಕ್ಕಿದ ಕಾಲ ಇದ್ದರೆ ಅಥವಾ ತನ್ನ ಕೆಲಸವನ್ನು ಮಾಡಲಿಕ್ಕೆ ತಿರಸ್ಕರಿಸಿದರೆ, ಅದನ್ನು ನಿರ್ವಹಿಸಲು ಅಯೋಗ್ಯನಾದರೆ, ಅಥವಾ ದಿವಾಳಿಯಾದರೆ, ಅಥವಾ ದುರ್ನಡತೆಯ ಸಂಬಂಧವಾಗಿ ಕ್ರಿಮಿನಲ್ ಕೋರ್ಟಿನ ಶಿಕ್ಷೆಗೆ ಗುರಿಯಾದರೆ ಅಂಥವನ ಮೆಂಬರುತನವನ್ನು ರದ್ದುಮಾಡಿ ಆ ಕುರಿತು ಪ್ರಕಟಿಸುವ ಅಧಿಕಾರವು ಸಭಾಯುಕ್ತ ಗವರ್ನರ ದೊರೆಗಳಿಗೆ ಇರುವುದು.

ತಕ್ಕ ಕಾರಣವಿಲ್ಲದೆ ಒಂದರ ಬೆನ್ನಿಗೆ ಇನ್ನೊಂದು ಮೀಟಿಂಗಿಗೆ ಗೈರಹಾಜರಾದರೆ ಅವನ ಮೆಂಬರುತನವನ್ನು ಸರಕಾರವು ರದ್ದುಪಡಿಸಬಹುದು. ಹಾಗೆ ತೆಗೆದುಹಾಕಲ್ಪಟ್ಟವನು ಪುನಃ ಇನ್ನೆಷ್ಟು ಕಾಲದ ವರೆಗೆ ಮೆಂಬರನಾಗಲು ಅರ್ಹನಲ್ಲವೆಂದು ಸರಕಾರದವರು ಮಿತಿಕಟ್ಟಬಹುದು.

ಈ ಡಿಸ್ಟ್ರಿಕ್ಟ್ ಕೌನ್ಸಿಲಿನ ಮೆಂಬರುತನದ ಬಗ್ಗೆ ಬೇರೆ ಸಂಬಳ ಸಿಗಲಾರದು. ಡಿಸ್ಟ್ರಿಕ್ಟ್ ಕೌನ್ಸಿಲಿನವರು ಪ್ರೆಸಿಡೆಂಟರ ಅಥವಾ ವೈಸಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಸಭೆಸೇರಬಹುದು. ಕನಿಷ್ಠ ಪಕ್ಷಕ್ಕೆ ೨ ತಿಂಗಳಿಗೊಮ್ಮೆಯಾದರೂ ಸೇರಲೇ ಬೇಕು. ಇದಲ್ಲದೆ ಕೌನ್ಸಿಲಿನ ಮೆಂಬರರ ಪೈಕಿ ಒಂದು ಮೂರನೇ ಅಂಶ ಕಡಿಮೆಯಾಗದಷ್ಟು ಮಂದಿ ಸಹಿಹಾಕಿ ಮೀಟಿಂಗು ಕರೆಯಬೇಕೆಂದು ಪತ್ರ ಬರೆದಲ್ಲಿ ಪ್ರೆಸಿಡೆಂಟರಾಗಲಿ ವೈಸಪ್ರೆಸಿಡೆಂಟರಾಗಲಿ ತಮ್ಮ ಸಭೆ ಸೇರಿಸಲೇ ಬೇಕು. ಇಂಥ ಮೀಟಿಂಗುಗಳ ಬಗ್ಗೆ ನಿರ್ಣಯಿಸಿದ ೬ ದಿನಗಳ ಮುಂಚಿತವಾಗಿ ಮೀಟಿಂಗಿನ ನೋಟೀಸು ಹೊರಡಬೇಕಾಗಿದೆ. ಪ್ರೆಸಿಡೆಂಟರೂ ವೈಸಪ್ರೆಸಿಡೆಂಟರೂ [illegible] ಇಲ್ಲದಿದ್ದಲ್ಲಿ [illegible] ಮೆಂಬರರು [illegible] ಅಂದಿನ ಸಭೆಗೆ ಅಧ್ಯಕ್ಷರಾಗಿ ಆರಿಸಬಹುದು. ಈ ಕೌನ್ಸಿಲಿನ ಅಧಿವೇಶನಗಳು ಬಹಿರಂಗವಾಗಿಯೇ ಜರಗಬೇಕಾಗಿದ್ದರೂ ಆ ಸಮಯದಲ್ಲಿ ಸರದಿ ಸಭೆಯಲ್ಲಿದವರನ್ನು ಅಲ್ಲಿ ನಿಲ್ಲದ ಹಾಗೆ ಅಟ್ಟಿಬಿಡಲಿಕ್ಕೆ ಅಂದಿನ ಪ್ರೆಸಿಡೆಂಟರಿಗೆ ಅಧಿಕಾರವಿದೆ.

ಒಂದು 'ಕೋರಂ' ಅಂಶಕ್ಕೆ ಕಡಿಮೆಯಾಗದ ಸಂಖ್ಯೆ ಮೀಟಿಂಗುಗಳಲ್ಲಿ ಹಾಜರಿಲ್ಲದಿದ್ದರೆ ಅಂದಿನ ಮೀಟಿಂಗು ನಿಯಮದಂತಲ್ಲವಾದ್ದರಿಂದ ಆ ದಿನ ಯಾವದೊಂದು ಠರಾವನ್ನು ಮಾಡಿದರೂ ಫಲವಿಲ್ಲ. ಮೀಟಿಂಗಿಗೆ ನಿಶ್ಚಯಿಸಿದ ಕಾಲದಾಟಿ ಅರ್ಧ ತಾಸಿನ ನಂತರವೂ ಕನಿಷ್ಠ ಮಿತಿಯ ಸಂಖ್ಯೆ ಮೆಂಬರರು ಹಾಜರಿಲ್ಲವಾದರೆ ಸಭಾಕಾರ್ಯವನ್ನು ಮುಂದೂಡಬೇಕಾಗುವುದು. ಬಹುಮತದ ಠರಾವೇ ಮಂಜೂರಾಗುವುದು. ಯಾವನೊಬ್ಬ ಮೆಂಬರನೂ ತನಗೇನೇ ಸಂಬಂಧಪಟ್ಟ ವಿಷಯವು ಸಭೆಯಲ್ಲಿ ಚರ್ಚೆಗೆ ಬಂದಾಗ ತನ್ನ ವೋಟನ್ನು ಉಪಯೋಗಿಸಬಾರದು. ಒಂದು ಅಧಿವೇಶನದಲ್ಲಿ ಒಮ್ಮೆ ಆದ ಠರಾವನ್ನು ಅಂದಿನಿಂದ ಮೂರು ತಿಂಗಳ ಮುಂಚೆ ರದ್ದುಪಡಿಸಬೇಕಾದರೆ ಅದಕ್ಕಾಗಿಯೇ ವಿಶೇಷ ಸಭೆಯನ್ನು ಜರಗಿಸಿ ಅದರಲ್ಲಿ ಕೌನ್ಸಿಲಿನ ಮೆಂಬರರಲ್ಲಿ ಅರ್ಧಾಂಶಕ್ಕೆ ಕಡಿಮೆಯಾಗದ ಮೆಂಬರರು ಆ ಠರಾವನ್ನು ರದ್ದುಮಾಡುವ ಸೂಚನೆಗೆ ಅನುಮೋದಿಸುವವರಾಗಬೇಕು. ಕೌನ್ಸಿಲಿನ ಠರಾವುಗಳನ್ನು ಅದರ ಸರಹದ್ದಿನೊಳಗಿರುವ ಯಾರೊಬ್ಬನು ಸಕಾಲದಲ್ಲಿ ನೋಡಲಪೇಕ್ಷಿಸಿದರೆ ಅದನ್ನು ಅವನಿಗೆ ಕಾಣಿಸಲೇ ಬೇಕು. ಇದಕ್ಕೆ ಅವನು ಬೇರೆ ಫೀಸು ಕಟ್ಟುವ ಅಗತ್ಯವಿಲ್ಲ. ಅಧಿವೇಶನದ ನಂತರ ಮೂರು ದಿನಗಳೊಳಗೆ ಅಂದಿನ ಠರಾವುಗಳನ್ನು ಇಂಗ್ಲಿಷಿನಲ್ಲಿಯೂ ದೇಶಭಾಷೆಯಲ್ಲಿಯೂ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸುವ ಬಗ್ಗೆ ಕಲೆಕ್ಟರರ ಬಳಿಗೆ ರವಾನಿಸಲಾಗುವುದು. ೭ ದಿನಗಳೊಳಗೆ ಎಲ್ಲಾ ಮೆಂಬರರಿಗೂ ಡಿಸ್ಟ್ರಿಕ್ಟ್ ಮತ್ತು ತಾಲೂಕುಬೋರ್ಡ್ ಪ್ರೆಸಿಡೆಂಟರುಗಳಿಗೂ ಮ್ಯುನಿಸಿಪಲ್ ಚೆಯರ್‌ಮನರಿಗೂ ಈ ಠರಾವುಗಳ ಪ್ರತಿಗಳನ್ನು ಕಳುಹಿಸಲಾಗುವುದು. ಮತ್ತು ಕೌನ್ಸಿಲಿನ ಠರಾವುಗಳನ್ನು ಜಾರಿನಡಿಸುವುದೂ ಕೌನ್ಸಿಲಿನ ಪ್ರೆಸಿಡೆಂಟರ ಕರ್ತವ್ಯ. ಕೌನ್ಸಿಲಿಗೆನೆ ಒಪ್ಪಿದ ಅಧಿಕಾರವನ್ನು ಪ್ರೆಸಿಡೆಂಟರು ಅವರ ಅನುಮತಿ ಇಲ್ಲದೆ ತಾನು ಜಾರಿನಡಿಸಕೂಡದು.

ತನ್ನ ಕೆಲಸದ ಕೆಲವಂಶವನ್ನು ವೈಸಪ್ರೆಸಿಡೆಂಟರಿಗೆ ವಹಿಸಿಕೊಡುವ ಸ್ವಾತಂತ್ರ್ಯವು ಪ್ರೆಸಿಡೆಂಟರಿಗೆ ಇದೆ. ಹಾಗೆ ವಹಿಸಿದ ಅಧಿಕಾರವನ್ನು ಮೊದಲು ಬರಹ ಮೂಲಕ ಒಪ್ಪಿಸಿಕೊಟ್ಟಂತೆಯೆ ಬರಹ ಮೂಲಕವಾಗಿ ಹಿಂದಕ್ಕೆ ತೆಗೆದುಕೊಂಡು ಹಿಂದಿನ ಕ್ರಮವನ್ನು ರದ್ದುಮಾಡಬಹುದು. ವೈಸಪ್ರೆಸಿಡೆಂಟರಿಗೆ ವಹಿಸಿಕೊಟ್ಟ ಯಾವುದೊಂದು ಕೆಲಸಕ್ಕೂ ಪ್ರೆಸಿಡೆಂಟರ ಜವಾಬ್ದಾರಿ ಇದ್ದೇ ಇದೆ.

(ಮುಂದರಿಸಲಾಗುವುದು)

ಮದ್ರಾಸಿನ ನೂತನ ನ್ಯಾಯವಿಧಾಯಕ ಸಭೆ

ಇದೇ ವರ್ಷದ ಅಕ್ಟೋಬರಿಗೆ ಸುಧಾರಣಾ ಏಕ್ಟಿನ ಮೇರೆಗೆ ಮದ್ರಾಸಿನಲ್ಲಿ ಏರ್ಪಡತಕ್ಕ ನ್ಯಾಯವಿಧಾಯಕ ಸಭೆಗೆ ಇರಬೇಕಾದ ಮೆಂಬರರ ಸಂಖ್ಯೆ ಈ ಕೆಳಗಿನಂತಿರಬಹುದು ಎಂದು ಮದ್ರಾಸ ಸರಕಾರದವರು ಇಂಡಿಯಾ ಸರಕಾರದವರಿಗೆ ಬರೆದುಕೊಂಡು ಅವರ ಮಂಜೂರಾತಿಯನ್ನು ಪಡೆದಿರುವರು.

ಹುದ್ದೆದಾರಿ ಮೆಂಬರರು—(ಅಂದರೆ ಎಕ್ಸಿಕ್ಯೂಟಿವ್ ಕೌನ್ಸಿಲಿನ ಈಗ ಇರುವಂತೆ ಇಬ್ಬರ ಮತ್ತು ಲೋಕನಿಯುಕ್ತ ಮಂತ್ರಿಗಳು ಇಬ್ಬರು) ೪

ಸರಕಾರ ನಿಯುಕ್ತರು— (ಸರಕಾರದಿಂದ ನೇಮಕವಾಗುವವರು)

ಅಸ್ಪೃಶ್ಯ ಮತ್ತು ನಿಂಕೃಷ್ಟ ಜನಗಳ ಪ್ರತಿನಿಧಿಗಳು	೫
ಸಂಸ್ಥಾನದ ರೂಲ್ಸುಗಳಿಗೆ ವಿನಾಯತಿ ಪಡಿಸಿದ ಪ್ರದೇಶಗಳು	೧
ಇತರ ಸರಕಾರಿ ಮತ್ತು ಬಿನ್‌ಸರಕಾರಿ ಮೆಂಬರರು	೧೯
	೨೫

ಲೋಕನಿಯುಕ್ತರು—

ಪದವೀಧರ ವೃಂದ	೫
ಮದ್ರಾಸಿನ ಚೇಂಬರ್ ಒಫ್ ಕೊಮರ್ಸ್ ಮತ್ತು ಅದಕ್ಕೆ ಸೇರಿದ ಇತರ ಚೇಂಬರಗಳು	೨
ಮದ್ರಾಸಿನ ಟ್ರೇಡ್ಸ್ ಎಸೊಸಿಯೇಶನ್	೧
ಸೌತ್ ಇಂಡಿಯನ್ ಚೇಂಬರ್ ಒಫ್ ಕೊಮರ್ಸ್	೧
ನಾಟುಕೋಟೆ ನಗರದಾರರ ಸಂಘ	೧
ಪ್ಲಾಂಟರ್ಸ್ (ತೋಟಕೃಷಿಕರು)	೧
ವರ್ಗದಾರರು	೬
ಜಮೀನದಾರರು	೫
ಜಮ್ಮಿಗಳು (ಮಲಬಾರದ ಜಮೀನದಾರರು)	೧
ಯುರೋಪಿಯನರು	೧
ಎಂಗ್ಲೊಇಂಡಿಯನರು	೧
ದೇಶೀಯ ಕ್ರೈಸ್ತರು	೫
ಯುನಿವರ್ಸಿಟಿ	೧
ಮುಸಲ್ಮಾನ ಶಹರುಗಳಿಗೆ (ಮ್ಯುನಿಸಿಪಾಲಿಟಿ)	೨
ಜಿಲ್ಲೆಗಳಿಗೆ	೧೧
ಇತರರು (ಮ್ಯುನಿಸಿಪಾಲಿಟಿಗಳಿಗೆ)	೯
ಜಿಲ್ಲೆಗಳಿಗೆ	೫೬
	೯೮

ಹೀಗೆ ಒಟ್ಟಿಗೆ ೧೨೭ ಮಂದಿ ಹುದ್ದೆದಾರಿ ಲೋಕನಿಯುಕ್ತ ಮತ್ತು ಸರಕಾರನಿಯುಕ್ತ ಮೆಂಬರುಗಳು ಇರುವರು.

ಮೇಲೆ ಹೇಳಿದ ಇತರರು ಎಂಬ ಸಂಖ್ಯೆಯನ್ನು ಮದ್ರಾಸು ಮ್ಯುನಿಸಿಪಾಲಿಟಿಗೆ ೪, ಮಧುರೆ ೧ ತಿರುಚಿನಾಪಳ್ಳಿ ಮತ್ತು ಶ್ರೀರಂಗಂ ೧ ತಿನ್ನವೆಲ್ಲಿ ಪಾಳಯಂಕೋಟೆ ೧, ಕಾಕಿನಾಡ ೧ ವಿಶಾಖಪಟ್ಟ ೧ ಈ ರೀತಿಯಾಗಿ ಹಂಚಿಹಾಕಿರುವರು.

ಜಿಲ್ಲೆವಾರ ಮೆಂಬರರ ಚುನಾವಣೆ ಹಂಚಿಕೆ ಈ ರೀತಿಯಾಗಿ ಇರುವುದು — ಅನಂತಪುರ ೨ ದಕ್ಷಿಣ ಆರ್ಕಾಡು ೩, ಉತ್ತರ ಆರ್ಕಾಡು ೩ ಬಳ್ಳಾರಿ ೨ ಚೆಂಗಲ್ಪಟ್ಟು ೨ ಚಿತ್ತೂರು ೨ ಕೊಯಮುತ್ತೂರು ೩ ಕಡಪೆ ೨, ಗಂಜಾಂ ೩, ಗೋದಾವರಿ (ಕಾಕಿನಾಡ ಮ್ಯುನಿಸಿಪಾಲಿಟಿ ಹೊರತು) ೨, ಗುಂಟೂರು ೩ ದಕ್ಷಿಣಕನ್ನಡ ೨ ಕೃಷ್ಣಾ (ಪೂರ್ವ), ಕೃಷ್ಣಾ (ಪಶ್ಚಿಮ) ೨ ಕರ್ನೂಲು ೨, ಮಧುರೆ (ಮಧುರೆ ಮ್ಯುನಿಸಿಪಾಲಿಟಿ ವಿರಹಿತ) ೩ ಮಲಬಾರ ಮತ್ತು ಅಂಜೆಂಗಾಂ ೨ ನೆಲ್ಲೂರು ೨, ನೀಲಗಿರಿ ೧ ರಾಮನಾಡು ೨ ಸೇಲಂ ೨, ತಂಜಾವೂರು ೩ ತಿನ್ನವೆಲ್ಲಿ (ತಿನ್ನವೆಲ್ಲಿ ಮತ್ತು ಪಾಳಯಂಕೋಟೆ ಮ್ಯುನಿಸಿಪಾಲಿಟಿ ವಿರಹಿತ) ತಿರುಚಿನಾಪಳ್ಳಿ (ತಿರುಚಿನಾಪಳ್ಳಿ ಮತ್ತು ಶ್ರೀರಂಗ ಮ್ಯುನಿಸಿಪಾಲಿಟಿ ವಿರಹಿತ) ೨, ವಿಶಾಖಪಟ್ಟ (ವಿಶಾಖಪಟ್ಟ ಮ್ಯುನಿಸಿಪಾಲಿಟಿ ವಿರಹಿತ) ೨ = ೫೬

ಮಹಮ್ಮದಿ ಪ್ರತಿನಿಧಿಗಳನ್ನು ಜಿಲ್ಲೆವಾರ ಈ ರೀತಿಯಾಗಿ ಹಂಚಿಹಾಕಿರುವರು

ಗಂಜಾಂ, ವಿಶಾಖಪಟ್ಟ, ಗೋದಾವರಿ, ಕೃಷ್ಣಾ (ಪೂರ್ವ) ಕೃಷ್ಣಾ (ಪಶ್ಚಿಮ)	೧
ಗುಂಟೂರು, ನೆಲ್ಲೂರು, ಚಿತ್ತೂರು,	೧
ಕಡಪೆ, ಕರ್ನೂಲು, ಬಳ್ಳಾರಿ, ಅನಂತಪುರ	೧
ಉತ್ತರ ಆರ್ಕಾಡು, ಚೆಂಗಲ್ಪಟ್ಟು	೧
ಸೇಲಂ, ಕೊಯಮುತ್ತೂರು, ನೀಲಗಿರಿ, ದಕ್ಷಿಣ ಆರ್ಕಾಡು	೧
ತಂಜಾವೂರು [illegible]	೧
ಮಧುರೆ (ಮ್ಯುನಿಸಿಪಾಲಿಟಿ ವಿರಹಿತ) ತಿರುಚಿನಾಪಳ್ಳಿ (ಮ್ಯುನಿಸಿಪಾಲಿಟಿ ವಿರಹಿತ)	
ರಾಮನಾಡು, ತಿನ್ನವೆಲ್ಲಿ	
ಮಲಬಾರು, ಅಂಜೆಗಾಂ	
ದಕ್ಷಿಣ ಕನ್ನಡ	

ದೇಶೀಯ ಕ್ರೈಸ್ತರ 'ಸೀಟು'ಗಳನ್ನು ಈ ರೀತಿಯಾಗಿ ಹಂಚಿಹಾಕಿರುವರು—

ಗಂಜಾಂ, ವಿಶಾಖಪಟ್ಟ, ಗೋದಾವರಿ, ಕೃಷ್ಣಾ, ಕೃಷ್ಣಾ (ಪೂರ್ವ), ಕೃಷ್ಣಾ (ಪಶ್ಚಿಮ), ಗುಂಟೂರು, ನೆಲ್ಲೂರುಗಳಿಗೆ	೧
ಕಡಪಾ, ಕರ್ನೂಲು, ಅನಂತಪುರ, ಬಳ್ಳಾರಿ, ಚಿತ್ತೂರು, ಚೆಂಗಲ್ಪಟ್ಟು, ಮದ್ರಾಸು, ದಕ್ಷಿಣ ಆರ್ಕಾಡು, ಉತ್ತರ ಆರ್ಕಾಡುಗಳಿಗೆ	೧
ಸೇಲಂ, ಕೊಯಮುತ್ತೂರು ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ	೧
ತಂಜಾವೂರು, ತಿರುಚಿನಾಪಳ್ಳಿ ಮಧುರೆ, ರಾಮನಾಡು, ತಿನ್ನವೆಲ್ಲಿ	೨

ವರ್ಗದಾರ ಮೆಂಬರರ ಹಂಚಿಕೆ —

ಗಂಜಾಂ, ವಿಶಾಖಪಟ್ಟ	೧
ಗೋದಾವರಿ ಕೃಷ್ಣಾ (ಪೂರ್ವ) ಕೃಷ್ಣಾ (ಪಶ್ಚಿಮ), ಗುಂಟೂರು	೧
ಚಿತ್ತೂರು ಕಡಪಾ, ಕರ್ನೂಲು, ಬಳ್ಳಾರಿ, ಅನಂತಪುರ, ನೆಲ್ಲೂರು, ಮದ್ರಾಸು, ಚೆಂಗಲ್ಪಟ್ಟು	೧
ಸೇಲಂ, ಕೊಯಮುತ್ತೂರು ಉತ್ತರ ಆರ್ಕಾಡು, ದಕ್ಷಿಣ ಆರ್ಕಾಡು	೧
ತಂಜಾವೂರು ತಿರುಚಿನಾಪಳ್ಳಿ, ಮಧುರೆ, ರಾಮನಾಡು, ತಿನ್ನವೆಲ್ಲಿ	೧
ಮಲಬಾರು ದಕ್ಷಿಣ ಕನ್ನಡ ನೀಲಗಿರಿ	೧

ಮೆಂಬರರನ್ನು ಚುನಾಯಿಸುವ ವೋಟರುಗಳ ಯೋಗ್ಯತೆಯನ್ನು ಈ ರೀತಿಯಾಗಿ ನಿರ್ಣಯಿಸಿದ್ದಾರೆ —

ಹೆಂಗಸರಿಗೆ ವೋಟಿಲ್ಲ. ೨೧ ವರ್ಷ ಪ್ರಾಯಕ್ಕಿಂತ ಚಿಕ್ಕವರೂ, ಬ್ರಿಟಿಷ ಪ್ರಜೆಗಳಲ್ಲದವರೂ, ಹುಚ್ಚರೆಂದು ಕೋರ್ಟು ಮೂಲಕ ನಿರ್ಣಯಿಸಲ್ಪಟ್ಟವರೂ, ಇವರೆಲ್ಲ ವೋಟ್ ಕೊಡಲಿಕ್ಕೆ ಅಯೋಗ್ಯರು. ಆಶ್ರಿತ ಸಂಸ್ಥಾನಗಳ ರಾಜರಾಗಲಿ, ಅವರ ಕೆಳಗಿನ ಪ್ರಜೆಗಳಾಗಲಿ ಬ್ರಿಟಿಷ ಸಂಸ್ಥಾನದ ಪ್ರಜೆಗಳಲ್ಲವೆಂಬ ಒಂದೇ ಕಾರಣದಿಂದ ವೋಟ್ ಕೊಡುವದಕ್ಕೆ ಅನರ್ಹರಾಗುವುದಿಲ್ಲ. ಆದರೆ ಅಂಥವರಿಗೆ ಕೆಲವು [illegible]ಗಳಿಗೆ ಒಳಪಟ್ಟು ವೋಟಿನ ಅಧಿಕಾರವನ್ನು ಪ್ರಾಂತಿಕ ಸರಕಾರದವರು ಕೊಡಬಹುದು. ಸ್ತ್ರೀಯರು ಈಗಿನ ಸ್ಥಿತಿಗೆ ವೋಟ್ ಕೊಡಲಿಕ್ಕೆ ಅನರ್ಹರೆಂದಾದರೂ [illegible] ಸ್ತ್ರೀಯರೆಲ್ಲ ಅಥವಾ ಅವರ ಪೈಕಿ ಆಗ ನಿಶ್ಚಯಿಸುವ ಯೋಗ್ಯತೆಯುಳ್ಳವರು ವೋಟರುಗಳಾಗಬಹುದೆಂದು ಈ ನೂತನ ನ್ಯಾಯವಿಧಾಯಕ ಸಭೆಯಲ್ಲಿ [illegible] ನಿಬಂಧನೆಗಳನ್ನು ಮಾಡಿ [illegible]

ಯುರೋಪಿಯನ್ ಎಂಗ್ಲೊ ಇಂಡಿಯನ್ ದೇಶೀಯ ಕ್ರೈಸ್ತ, ಮುಸಲ್ಮಾನ ಈ ವರ್ಗಗಳಿಗೆ ಸೇರದೆ ಇದ್ದು ೧೯೧೯ರ ವರ್ಷದಲ್ಲಿ ಯಾವುದೊಂದು ಫಿರ್ಕಾಯಲ್ಲಿ ೧೨೦ ದಿನ ನಿವಾಸ ಮಾಡಿದ್ದರೆ ಆ ಫಿರ್ಕಾಯಲ್ಲಿ ವೋಟ್ ಕೊಡಲಿಕ್ಕೆ ಒಬ್ಬ ವೋಟರನಿಗೆ ಹಕ್ಕು ಬರುವದು. ಆದರೆ ಅವನು ವೋಟರನಾಗಬೇಕಾದರೆ ರೈತವಾರಿ ಪಟ್ಟಾದಾರ ಅಥವಾ ಇನಾಮದಾರನಾಗಿ ಅಥವಾ ಅಂಥವರಿಗೆ ರಿಜಿಸ್ಟರ್ ಗೇಣಿದಾರನಾಗಿ [illegible] ಬರಕೊಟ್ಟವನಾಗಿ [illegible] ಅಥವಾ [illegible] ಮದ್ರಾಸ ಎಸ್ಟೇಟ್ ಲ್ಯಾಂಡ್ ಏಕ್ಟಿನ ಮೇರೆಗೆ ವರ್ಗದಾರ [illegible] ಎಂದು ನಿರ್ಣಯಿಸಲ್ಪಟ್ಟವನು ಅಥವಾ ಅದೇ ಏಕ್ಟಿನ ೧೫ ಕಲಂಧನೆ ಮೇರೆಗೆ ಮತ್ತು ೧೦ [illegible] ಲೋಕಲ್‌ಬೋರ್ಡುಗಳ ಏಕ್ಟಿನ ನಿರ್ಣಯದ ಮೇರೆಗೆ ೧೦ ರೂಪಾಯಿಗೆ ಕಡಿಮೆಯಾಗದಷ್ಟು [illegible] ಕೊಡುವ ಒಕ್ಕಲು ಆಗಿರಬೇಕು. ಮ್ಯುನಿಸಿಪಾಲಿಟಿಯೊಳಗಾದರೆ ಭೂತೆರಿಗೆ ಕಂಪನಿಗಳ ತೆರಿಗೆ ವ್ಯಕ್ತಿ ತೆರಿಗೆ, ೩ ರೂಪಾಯಿಗೆ ಕಡಿಮೆಯಾಗದಷ್ಟು ತೆರಬಲಗನ್ನು ಚುನಾವಣಕಾಲದ ಹಿಂದಿನ ವರ್ಷದಲ್ಲಿ ತೆತ್ತವರು ವೋಟ್ ಕೊಡಲಿಕ್ಕೆ ಅರ್ಹರು. ಇನ್‌ಕಂಟ್ಯಾಕ್ಸ್ ಕೊಡುವವರೂ ಲಶ್ಕರಿನಲ್ಲಿ ಕಮಿಶನ್ ಹೊಂದಿದ ಅಥವಾ ಕಮಿಶನ್ ಇಲ್ಲದ ಅಧಿಕಾರಿಗಳಾಗಿದ್ದು ಪೆನ್ಶನ್ ಹೊಂದಿದವರೂ ವೋಟರರು.

ಮೂಡಲಸೀಮೆಯ ಕರ್ನಾಟಕ ಪರಿಷತ್ತು, ಧಾರವಾಡ

ವಿಷಯ ನಿರ್ಧಾರ ಮಂಡಲದ ಪ್ರಾರ್ಥನೆ.

ಕರ್ನಾಟಕ ಬಂಧುಗಳೇ,

ಬರುವ ಮೇ ತಿಂಗಳ ಪ್ರಾರಂಭಕ್ಕೆ ಈ ಊರಲ್ಲಿ ಕರ್ನಾಟಕ ಪರಿಷತ್ತು ಕೂಡತಕ್ಕದ್ದಿರುವದೆಂಬದು ತಮಗೆಲ್ಲರಿಗೂ ವಿದಿತವೇ ಇರುವದು. ಈ ಪರಿಷತ್ತಿನಲ್ಲಿ ಚರ್ಚೆಗೆ ತರತಕ್ಕ ವಿಷಯಗಳನ್ನು ನಿರ್ಣಯಿಸುವದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಯಾಕೆಂದರೆ, ಕರ್ನಾಟಕದ ದೃಷ್ಟಿಯಿಂದ ಕರ್ನಾಟಕದ ಕೊರತೆಗಳನ್ನು ವಿಚಾರಮಾಡುವ ಪ್ರಸಂಗವು ಇದೇ ಮೊದಲನೆಯದು. ಅದರಿಂದ ಎಲ್ಲರಿಗೂ ವಿಧಿತವಾಗುವುದೇನಂದರೆ ಕರ್ನಾಟಕಕ್ಕೆ ವಿಶ್ವವಿದ್ಯಾಲಯದ, ಕರ್ನಾಟಕದಲ್ಲಿ ರೈಲ್ವೇಗಳ ಕುರಿತ ಇದ್ದ ರೈಲ್ವೇಗಳ ವ್ಯವಸ್ಥೆ, ಕರ್ನಾಟಕದಲ್ಲಿ ನೀರಿನ ಕಾಲುವೆಗಳ ಕುರಿತ, ಕರ್ನಾಟಕದ ರಾಜಕೀಯ ಏಕೀಕರಣದ ಸಾಧ್ಯಾಸಾಧ್ಯತೆ ಮುಂತಾದ ಕರ್ನಾಟಕಕ್ಕೆ ಸಂಬಂಧಿಸಿದ ವಿಶಿಷ್ಟ ವಿಷಯಗಳ ವಿಚಾರವನ್ನು ಕರ್ನಾಟಕದ ಹಿತದ ದೃಷ್ಟಿಯಿಂದ ಮಾಡಿ ಕರ್ನಾಟಕಕ್ಕೆ ಯಾವ ಯಾವ ಮಾತುಗಳ ಕೊರತೆಯಿರುವದೆಂಬದನ್ನು, ಆ ಕೊರತೆಗಳನ್ನು ದೂರ ಮಾಡುವದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಪರಿಷತ್ತಿನಲ್ಲಿ ಯಾವ ಬಗೆಯ ಠರಾವುಗಳನ್ನು ವಿಚಾರಕ್ಕೆ ತರಬೇಕೆಂಬದನ್ನು ದಯ ಮಾಡಿ ಬೇಗನೆ ತಿಳಿಸಬೇಕು. ಅಂದರೆ ಆ ವಿಷಯಗಳನ್ನು ಶಕ್ಯವಿದ್ದಷ್ಟರಮಟ್ಟಿಗೆ ಪರಿಷತ್ತಿನ ಮುಂದೆ ತರಲು ಪ್ರಯತ್ನಿಸುವೆವು.

ಕರ್ನಾಟಕಕ್ಕೆ ಸಂಬಂಧಿಸಿದ ವಿಶಿಷ್ಟ ವಿಷಯಗಳಲ್ಲದೆ, ಸ್ವರಾಜ್ಯ, ಮಾಂಟೆಗೂ ಸುಧಾರಣೆ, ಪ್ರೆಸ್ ಆಕ್ಟ್, ಫಾರೆಸ್ಟ್ ಲಾ, ಆರ್ಮ್ಸ್ ಆಕ್ಟ್ ಇವೇ ಮುಂತಾದ ಅನೇಕ ವಿಷಯಗಳ ಸಂಬಂಧದಿಂದ ಯಾವ ಯಾವ ಠರಾವುಗಳು ಪರಿಷತ್ತಿನಲ್ಲಿ ಚರ್ಚಿಸಲ್ಪಡಬೇಕೆಂದು ತಮ್ಮ ಇಚ್ಛೆಯಿರುತ್ತದೆಂಬುದನ್ನೂ ತಿಳಿಸಬೇಕು.

ಸಾಧ್ಯವಿದ್ದಮಟ್ಟಿಗೆ ಪರಿಷತ್ತಿನ ಭಾಷಣಮಾಡುವವರನ್ನು ಮೊದಲಿನಿಂದಲೇ ಗೊತ್ತುಪಡಿಸಲಿಕ್ಕೆ ಯತ್ನಿಸಬೇಕೆಂದು ಕಾರ್ಯಕಾರಿ ಮಂಡಲದವರ ವಿಚಾರವಿರುವದು. ಯಾರಿಗೂ ಮಾತಾಡಲಿಕ್ಕೆ ಪ್ರತಿಬಂಧಮಾಡುವದು ಮಂಡಲದ ಉದ್ದೇಶವೂ ಇಲ್ಲ, ಹಾಗೆ ಮಾಡಲು ಮಂಡಲಕ್ಕೆ ಅಧಿಕಾರವೂ ಇಲ್ಲ. ಆದರೆ, ಪರಿಷತ್ತಿನ ಮುಂದೆ ವಿಚಾರಕ್ಕೆ ಬರುವ ವಿಷಯಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಅವುಗಳ ಸಾಧಕಬಾಧಕ ಮಂಡನವು ಸಮರ್ಪಕವಾಗುವಂತೆ ಭಾಷಣಗಳನ್ನು ಸಿದ್ಧಪಡಿಸಿಕೊಂಡು ಬಂದವರು ಪ್ರಸಂಗ ಬಂದರೆ ಯಾವ ವಿಷಯಗಳ ಮೇಲೆ ಭಾಷಣ ಮಾಡಬೇಕಾಗುವದೆಂದು ಮೊದಲೇ ವಿಜ್ಞಾಪಿಸಿದರೆ, ಪರಿಷತ್ತಿನಲ್ಲಿಯ ಭಾಷಣಗಳು ಹೆಚ್ಚು ಉತ್ಕೃಷ್ಟವಾಗಿ ಪರಿಷತ್ತಿನ ಕಾರ್ಯವು ಹೆಚ್ಚು ವ್ಯವಸ್ಥಿತವೂ ಪರಿಣಾಮಕಾರಿಯೂ ಆಗುವ ಸಂಭವವುಂಟು. ಆದದರಿಂದ ಯಾವದೊಂದು ವಿಷಯದಲ್ಲಿ ವಿಶಿಷ್ಟ ಜ್ಞಾನವುಳ್ಳ ಕರ್ನಾಟಕಸ್ಥರು ತಾವು ಯಾವ ವಿಷಯಗಳ ಮೇಲೆ ಭಾಷಣ ಮಾಡಲಿಚ್ಛಿಸುವರೆಂಬದನ್ನು ಅವರಾಗಲಿ ಅವರ ಮಿತ್ರರಾಗಲಿ ಮುಂಗಡವಾಗಿ ತಿಳಿಸಿದರೆ ಉಪಯುಕ್ತವಾಗುವದು.

ಧಾರವಾಡ, ೧೮—೩—೨೦

ವೆಂಕಟೇಶ ಭೀಮರಾವ್ ಆಲೂರ,
ವಿಷಯನಿರ್ಧಾರಕ ಉಪಸಮಿತಿ ಕಾರ್ಯದರ್ಶಿ.

[illegible]

[illegible] ಕಾಂಗ್ರೆಸ್ [illegible]
[illegible] ಬಗ್ಗೆ ಸೇತುವಾದ [illegible] ... ೭
[illegible] ಹಿಂದುಸ್ಥಾನದಲ್ಲಿ ಆಯುರ್ವೇದದ ಪುನರುಜ್ಜೀವನ. ... „
[illegible] ... „
[illegible] ... ೩
[illegible] ನ್ಯಾಯಾಧಿಪತಿಯ [illegible] ... „
[illegible] ಧಾರವಾಡ ... „
[illegible] ದೀಪಾವಳಿ ಫಂಡಿನ ವರದಿ ... ೮
[illegible] ಕನ್ನಡ:—
[illegible], ಕಾಪು, ಕರೋಪಾಡಿ, ಉಡುಪಿ ... „
ಪತ್ರವ್ಯವಹಾರ ೧, ೨. ... „

ಸ್ವದೇಶಾಭಿಮಾನಿ.

ಶಕ ೧೮೪೧ ಚೈತ್ರ ಶು| ೩೦ ಶುಕ್ರವಾರ.

ಇನ್ನು ಅಸಡ್ಡೆ ಬೇಡ.

ಹಿಂದುಸ್ಥಾನವು ಮುಖ್ಯವಾಗಿ ಕೃಷಿಯಮೇಲೆ ಜೀವಿಸಿಕೊಂಡಿದೆ ಎಂಬುದು ನಿರ್ವಿವಾದದ ಸಂಗತಿಯು. ಕೆಲವು ಶತಮಾನಗಳ ಹಿಂದೆ ಇತರ ಕೈಗಾರಿಕೆಗಳು ಉಚ್ಚಸ್ಥಿತಿಯಲ್ಲಿ ಇದ್ದವಾದರೂ ಈಗ ಅವೆಲ್ಲ ಲುಪ್ತವಾಗಿ ಕೃಷಿ ಎಂಬದೊಂದು ದೇಶದ ಜೀವನ ಸಾಧನವಾಗಿದೆ. ಹಿಂದುಸ್ಥಾನದಲ್ಲಿ ಈಗ ಸಾಮಾನ್ಯ ಸೇಕಡಾ ೮೦ ಜನರು ಕೃಷಿಜೀವಿಗಳಿದ್ದಾರೆಂದು ತಿಳಿದುಬರುತ್ತದೆ. ಎಂದ ಮೇಲೆ ಹಿಂದಿಗಳಿಗೆ ಕೃಷಿಯು ಎಷ್ಟು ಮಹತ್ವದ್ದೆಂಬುದು ಗೊತ್ತಾಗುವದು.

ಹಿಂದುಸ್ಥಾನದೊಳಗಿನ ಕೃಷಿಯು ಇತರ ದೇಶಗಳೊಳಗಿನ ಕೃಷಿಯಂತೆ ಯಾಂತ್ರಿಕ ಸಾಧನದಿಂದ ನಡಕೊಂಡಿಲ್ಲ; ಇಲ್ಲವೆ, ಸುಧಾರಿಸಿದ ನೇಗಿಲು ಮುಂತಾದವುಗಳ ಸಹಾಯದಿಂದಲೂ ನಡಕೊಂಡಿಲ್ಲ. ಆದರೆ ಪ್ರಾಚೀನಕಾಲದಿಂದ ಎತ್ತುಗಳನ್ನು ನೇಗಿಲಿಗೆ ಕಟ್ಟಿ ಉತ್ತು ಇಲ್ಲಿಯ ಕೃಷಿಯು ಸಾಗುತ್ತಿದೆ. ಮತ್ತು ಗೊಬ್ಬರವಾದರೂ ದನಕರುಗಳ ಸೆಗಣಿ ಮುಂತಾದ್ದರಿಂದ ತಯಾರಾಗುತ್ತದೆ. ಅರ್ಥಾತ್ ಇಲ್ಲಿಯ ಕೃಷಿಯು ಕೇವಲ ದನಕರುಗಳ ಮೇಲೆ ಹೇಗೆ ಅವಲಂಬಿಸಿಕೊಂಡಿದೆ ಎಂಬುದು ಗೊತ್ತಾಗುವುದು. ಒಬ್ಬ ಬೇಸಾಯಗಾರನೊಂದಿಗೆ ಎತ್ತಿನ ಜೋಡೆಂದು, ಕರೆಯುವ ದನ ಒಂದು ಇಷ್ಟು ಇಲ್ಲಾದರೆ ಅವನಿಂದ ಗದ್ದೆ ಬೇಸಾಯ ಕೆಲಸವು ಸರ್ವಥಾ ಸಾಗಲಾರದು. ಗದ್ದೆ ಉಳುವಾಗ ಎತ್ತು (ಇಲ್ಲವೆ ಕೋಣ) ಬೇಕು; ಮತ್ತು ಗೊಬ್ಬರಕ್ಕೆ ದನಕರುಗಳು ಬೇಕು. ಆಗ ಅವುಗಳ ಅಭಾವದಲ್ಲಿ ಅವನ ಕೃಷಿ ವ್ಯವಸಾಯವು ಹೇಗೆ ಮುಂದರಿಸಬೇಕಾಯಿತು! ಸಾರಾಂಶ, ಕೃಷಿವೃತ್ತಿಗೆ ದನಕರುಗಳು ಪ್ರಧಾನವಾದದ್ದೆಂಬುದು ಸ್ಪಷ್ಟವಾಗುತ್ತದೆ. ನಿಜವಾಗಿ ನೋಡಿದರೆ ದನಕರುಗಳ ಮಹತ್ವವು ಬರೆ ಕೃಷಿ ದೃಷ್ಟಿಯಿಂದ ಮಾತ್ರವಲ್ಲ, ಚಿಕ್ಕ ಮಕ್ಕಳ ಜೀವನದ ದೃಷ್ಟಿಯಿಂದಲೂ ಅದು ಕಂಡುಬರುತ್ತದೆ. ಹಾಲಿನ ಪುರವಠೆಯು ಮಕ್ಕಳಿಗೆ ಅವಶ್ಯವಾದ್ದು. ಅಲ್ಲದೆ, ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ಮಕ್ಕಳಿಗೆ ತಾಜಾ ಬೆಣ್ಣೆಯನ್ನು ಊಟದಲ್ಲಿ ಕೊಡುವ ಪದ್ಧತಿಯುಂಟು. ಈ ಮೇರೆಗೆ ಹಾಲು, ಬೆಣ್ಣೆ ಇವುಗಳ ಯಥೇಷ್ಟ ಪುರವಠೆಯು ದನಕರುಗಳಿಂದಲೆ ಆಗಬೇಕಾದ್ದು. ಹಿಂದುಸ್ಥಾನದೊಳಗಿನ ಶಿಶುಮೃತ್ಯುವಿನ ಸಂಖ್ಯೆಯು ಬರಬರುತ್ತ ಹೆಚ್ಚುತ್ತ ಬರುವ ಕಾರಣಗಳಲ್ಲಿ ದನಕರುಗಳ ಹಾಲಿನ ಪುರವಠೆಯ ಅಭಾವವು ಒಂದಾಗಿದೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಒಟ್ಟಾರೆ ದೇಶದ ಜೀವನಕ್ಕೆ ಮುಖ್ಯ ಸಾಧನವಾದ ಕೃಷಿಗೂ, ಮಕ್ಕಳಿಗೆ ಬೇಕಾಗುವ ಹಾಲಿನ ಪುರವಠೆಗೂ ಅತ್ಯಾವಶ್ಯಕವಾದ ದನಕರುಗಳು ಹಿಂದೂಸ್ಥಾನದಲ್ಲಿ ಸಮೃದ್ಧಿ ಹೊಂದಬೇಕೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ.

ಆದರೆ ವಿಷಾದದ ಮಾತೇನೆಂದರೆ, ಹಿಂದುಸ್ಥಾನದಲ್ಲಿ ದನಕರುಗಳ ಸಮೃದ್ಧಿಯಾಗುವುದರ ಬದಲು ದಿನೇದಿನೇ ಕ್ಷೀಣತೆಯು ಉಂಟಾಗಹತ್ತಿದೆ. ಈ ಕ್ಷೀಣತೆಯು ಇಲ್ಲಿ ದನಗಳನ್ನು ಕಡಿಯುವುದರಿಂದಲೂ, ಅನ್ಯ ಖಂಡಗಳಿಗೆ ಕಳುಹಿಸಿಕೊಡುವುದರಿಂದಲೂ ಉಂಟಾಗ[illegible] [illegible]ಗಳನ್ನು, ವಿಶೇಷತಃ [illegible] [illegible] ಮುಸಲ್ಮಾನರು [illegible] [illegible] ಲಕ್ಷದಲ್ಲಿ ಗೋವುಗಳನ್ನು ಕಡಿಯಬಾರದೆಂದು [illegible] ತಮ್ಮ ದೂರದರ್ಶಿತೆಯನ್ನು ವ್ಯಕ್ತಗೊಳಿಸಿದ್ದಾರೆ. ಈ ಹೊತ್ತು, ನಾಳೆಯಲ್ಲ, ಇನ್ನು ಕೆಲವು ಸಮಯದ ನಂತರವಾದರೂ ಮುಸಲ್ಮಾನರ ಗೋವಧದ ಪ್ರವೃತ್ತಿಯು ನಿಂತೀತೆಂದು ನಂಬಲು ಸಬಲವಾದ ಕಾರಣಗಳಿವೆ. ಅಂತು ಮೇಲಿನ ಎರಡು ಬಗೆಯ ಕ್ಷೀಣತೆಗಳಲ್ಲಿ ಒಂದು ಈ ರೀತಿಯಾಗಿ ಹೋಗಹತ್ತಿದರೂ ಇಲ್ಲಿಂದ ಅನ್ಯ ಖಂಡಗಳಿಗೆ ದನಕರುಗಳನ್ನು ಕಳುಹಿಸಿಕೊಡುವ ಇನ್ನೊಂದು ಯಾವ ಆಪತ್ತಿದೆಯೊ ಅದರ ನಿವಾರಣೆಯು ಹೇಗಾಗಬೇಕೆಂಬುದೆ ಒಂದು ದೊಡ್ಡ ಪ್ರಶ್ನೆಯು. ಪರದೇಶಗಳತ್ತ ಇಲ್ಲಿಂದ ದನಕರುಗಳನ್ನು ರಫ್ತು ಮಾಡಬಾರದೆಂದು ಈಗ ಎಷ್ಟೊ ಸಮಯದಿಂದ ಹಿಂದೀಜನರ ಪ್ರಯತ್ನವು ನಡಕೊಂಡೇ ಉಂಟು. ಇಂಥ ಪ್ರಯತ್ನಗಳಲ್ಲಿ ಈಚೇಗಿನ ಒಂದು ಪ್ರಯತ್ನವು ಯಾವುದೆಂದರೆ, ಮಿ. ಎಮ್. ಡಿ. ಲವಂಬಿಯಾ ಎಂಬವರು ಸರಕಾರಕ್ಕೆ ಈ ವಿಷಯವಾಗಿ ಒಂದು ವಿಜ್ಞಾಪನೆಯನ್ನು ಮಾಡಿಕೊಂಡಿದ್ದರು. ಮೇಲ್ಕಂಡ ಗೃಹಸ್ಥರು ವೈಸರಾಯರಿಗೆ ಹಾಲು ಕರೆಯುವ ಮತ್ತು ಕೃಷಿಗೆ ಉಪಯುಕ್ತವಾದ ಜಾನುವಾರುಗಳನ್ನು ಕೊಲ್ಲುವುದಾಗಲಿ ಹೊರಗೆ ಕಳುಹಿಸುವುದಾಗಲಿ ಇನ್ನುಮುಂದೆ ನಿಲ್ಲಿಸಬೇಕೆಂದು ಮಾಡಿಕೊಂಡ ವಿಜ್ಞಾಪನೆಗೆ ಸರಕಾರದಿಂದ ಸಹಾನುಭೂತಿ ಪೂರ್ವಕವಾಗಿಯೂ ಯೋಗ್ಯರೀತಿಯಿಂದಲೂ ಈ ಪ್ರಶ್ನೆಯು ವಿಚಾರದಲ್ಲಿ ತೆಕ್ಕೊಳ್ಳಲ್ಪಡುವುದೆಂದು ಉತ್ತರವು ದೊರಕಿದೆ. ಮಾತ್ರವಲ್ಲ, ನಾಮ. ಖಾಪರ್ಡೆಯವರು ಈ ವಿಷಯವಾಗಿ ಕೌನ್ಸಿಲಿನಲ್ಲಿ ಒಂದು ಠರಾವನ್ನು ಕೂಡ ತರಲು ತಮ್ಮ ಮನಸ್ಸನ್ನು ವ್ಯಕ್ತಗೊಳಿಸಿದ್ದಾರೆ. ಅದೇ ಮೇರೆಗೆ ಈ ಕಾಯಿದೆ ಕೌನ್ಸಿಲುಗಳಲ್ಲೂ ಈ ವಿಷಯದಲ್ಲಿ ಬೀಲು ಬರುವುದು ಅವಶ್ಯಕವಾಗಿದೆ. ಹಾಗು ಕೊಂಗ್ರೆಸಿನ ಕಡೆಯಿಂದಲೂ ಚಳವಳವು ಅಗತ್ಯವಾಗಿ ನಡೆಯಬೇಕಾಗಿದೆ. ಯಾಕೆಂದರೆ ಇನ್ನುಮುಂದೆ ಈ ವಿಷಯದಲ್ಲಿ ಅಸಡ್ಡೆ ಮಾಡಿದರೆ ದೇಶದ ಮುಖ್ಯ ಜೀವನ ಸಾಧನವಾದ ಕೃಷಿಯು ಹಿಂದುಸ್ಥಾನದಲ್ಲಿ ದುರವಸ್ಥೆಗೆ ಬರುವುದು.

ಸ್ಫುಟ ವಿಚಾರಗಳು.

೧. ಕಳೆದ ವರ್ಷ ಇದೇ ಸಮಯದಲ್ಲಿ ಪಂಜಾಬಿನಲ್ಲಿ ರೊವಲೆಟ್ ಕಾನೂನಿನ ಮೂಲಕವಾಗಿಯೂ ಸರ್. ಮಾಯ್ಕಲ ಓಡ್ವಾಯರ ದೊರೆಗಳ ನಿರಂಕುಶವಾದ ಆಡಳಿತೆಯ ಮೂಲಕವಾಗಿಯೂ ಯಾವ ಘಾತಪಾತಗಳು, ಯಾವ ಅನರ್ಥಗಳು ಒದಗಿದವೊ ಅವುಗಳ ತನಖಿ ಮಾಡಿ ನ್ಯಾಯಾನ್ಯಾಯವನ್ನು ಜನತೆಯ ಮತ್ತು ಸರಕಾರದ ಮುಂದಿಡುವುದಕ್ಕಾಗಿ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಕಮಿಷನನ್ನು ನೇಮಿಸಿತ್ತಷ್ಟೆ; ಸರಕಾರದ ಕಡೆಯಿಂದಲೂ ಇಂಥದೊಂದು ಕಮಿಷನು 'ಗಲಾಟೆ ಕಮಿಷನು' ಅಥವಾ 'ಹಂಟರ್ ಕಮಿಷನು' ಎಂಬೀ ಹೆಸರಿನಿಂದ ನೇಮಕವಾದ್ದು ನಮ್ಮ ವಾಚಕರಿಗೆ ಗೊತ್ತೇ ಇದೆ. ಈ ಗಲಾಟೆ ಕಮಿಷನಿನ ತನಖಿಯ ಕೆಲಸವು ಯಾವಾಗಲೆ ಮುಗಿದದ್ದಾದರೂ ಅದರ ವರದಿಯು ಇನ್ನೂ ಹೊರಗೆ ಬರಲಿಲ್ಲ. ಆದರೆ ಕೊಂಗ್ರೆಸಿನ ಕಡೆಯಿಂದ ನೇಮಕವಾದ ಕಮಿಷನಿನ ರಿಪೋರ್ಟು ಕಳೆದ ವಾರ ಪ್ರಕಟವಾಗಿದೆ. ಸರಕಾರಿ ಕಮಿಟಿಯ ರಿಪೋರ್ಟು ಕೂಡಾ ಬೇಗನೆ ಪ್ರಸಿದ್ಧವಾದೀತೆಂದು ಹೇಳುತ್ತಾರೆ. ಈ ಎರಡು ವರದಿಗಳು ಜಗತ್ತಿನಲ್ಲಿ ಮುಂದೆ ಬಂದು ನಾಳೆ ಎಂಥೆಂಥಾ ಸಂಗತಿಗಳನ್ನು ಪ್ರಕಾಶಗೊಳಿಸಲಿಕ್ಕಿದ್ದರೂ ರೊಲೆಟ್ ಕಾನೂನು ಪಾಸಾದ ಬಳಿಕ ಪಂಜಾಬಿನ ಅಧಿಕಾರಿಗಳ ವಿವೇಕ ಶಕ್ತಿಯು ನಷ್ಟವಾಗಿ ಆ ಮೂಲಕ ಅಲ್ಲಿಯ ನಿರಾಪರಾಧಿಯಾದ ಜನತೆಯು ಭಯಂಕರ ಆಪತ್ತಿಗೆ ತಲೆಕೊಡಬೇಕಾಯಿತೆಂಬುದನ್ನು ಯಾರೂ ಅಲ್ಲಗಳೆಯಲಿಕ್ಕಿಲ್ಲ. ಹಾಗು ಸರ್. ಓಡ್ವಾಯರ ರೌದ್ರಲೀಲೆಯ ಅಥವಾ ಭಯಂಕರವಾದ ತಾಂಡವನೃತ್ಯದ ದುಷ್ಪರಿಣಾಮವನ್ನು ಹಲವು ಸಮಯದ ವರೆಗೆ ಪಂಜಾಬಿಗಳು ಅನುಭವಿಸಿದ ಕಾರಣ ಅವರ ಬಗ್ಗೆ ಅನುಕಂಪೆಯೂ, ಅಧಿಕಾರಿಗಳ ಅವಿವೇಕದ ಬಗ್ಗೆ ಸಂತಾಪವೂ ಯಾರಲ್ಲೂ ಉಂಟಾಗದೆ ಇರಲಿಕ್ಕಿಲ್ಲವೆಂದು ಮರೆಮೋಸವಿಲ್ಲದೆ ಹೇಳಬಹುದು, ಮತ್ತು ಇದೇ ಸಂಗತಿಯು ಕೊಂಗ್ರೆಸ್ ಕಮಿಟಿಯ ವರದಿಯಿಂದ ಸ್ಪಷ್ಟವಾಗುತ್ತದೆ.

೨. ಆ ಕೊಂಗ್ರೆಸ್ ಕಮಿಟಿಯು ವರದಿಯಲ್ಲಿರುವ ಮುಖ್ಯಮುಖ್ಯವಾದ ಸಂಗತಿಗಳನ್ನು—ವಿಶೇಷತಃ ಅದರ ಅಭಿಪ್ರಾಯಗಳನ್ನು ವಾಚಕರು ತಿಳುವಿನ ಬಗ್ಗೆ ನಾವು ಇಲ್ಲಿ ಪ್ರಸ್ತಾಪಿಸುವೆವು. ಕೊಂಗ್ರೆಸ್ ಕಮಿಷನ್ ರಿಪೋರ್ಟಿನ ಅಭಿಪ್ರಾಯವನ್ನ ಕೊಟ್ಟರೆ ಸಾಕಾಗಿದೆಯಲ್ಲದೆ ಅದರ ಮೇಲೆ ಅನುಕೂಲ ಪ್ರತಿಕೂಲ ಟೀಕೆಯು ಅಗತ್ಯವಿಲ್ಲ. ಈ ಕಮಿಷನಿನ ಮುಂದೆ ೧೭೦೦ ಸಾಕ್ಷಿಗಳು ಆದವು. ಆದರೆ ಈ ಸಂಶೋಧಕ ಕಮಿಟಿಯು ೬೫೦ ಸಾಕ್ಷಿಗಳನ್ನು ಮಾತ್ರ ತನ್ನ ರಿಪೋರ್ಟಿನಲ್ಲಿ ಪ್ರಕಟಿಸಿದೆ. ಈ ರಿಪೋರ್ಟಿನ ಒಂದು ವಿಶೇಷ ಗುಣವು ಯಾವುದೆಂದರೆ, ಯಾವುದೇ ಒಂದು ಸಂಗತಿಯನ್ನು ಸಮರ್ಥಿಸದೇ ಕಾದರೆ, ಅದನ್ನು "ಕ್ರಾಸ್" ಅಥವಾ ವಿಚಾರಣೆಯ ಪ್ರತಿ ಸವಾಲುಗಳನ್ನು ಕೇಳಿ ಅದರಿಂದ [illegible] ತೋರಿಸಿ [illegible] ಸತ್ಯವನ್ನು ಸಮರ್ಥಿ[illegible] [illegible] [illegible] [illegible] ನಡೆದಿತ್ತು. ಈ ವರದಿಯಲ್ಲಿ [illegible] ಅನೇಕ ಸಂದರ್ಭಗಳಲ್ಲಿ ಉಲ್ಲೇಖಿಸಿದ ಮಾತುಗಳನ್ನು [illegible] ಕೊಟ್ಟು ಅದರಿಂದ ಹೊರಡುವ ಅವರ [illegible] ತೋರಿಸಿದೆ. "ಒಟ್ಟಾರೆ ದೊರೆಗಳು ಜನರನ್ನು [illegible] ಅವರಲ್ಲಿ ಕ್ಷೋಭವನ್ನುಂಟು ಮಾಡಿದರು. ಪಂಜಾಬಿನಲ್ಲಿ ದಂಗೆ ಅಥವಾ ಯುದ್ಧದ ಸಂಭವವಿತ್ತೆಂದು ಯಾವ ಶಂಕೆಯನ್ನು ಎಬ್ಬಿಸಿದ್ದರೊ ಅದು ಕೇವಲ ನಿರಾಧಾರವಾದ್ದು, ಅದಕ್ಕೆ ಆಸ್ಪದಕೊಡುವ ಯಾವ ಪ್ರಮಾಣವೂ ಈ ಕಮಿಷನಿನ ಮುಂದೆಯಾಗಲಿ, ಸರಕಾರಿ ಗಲಾಟೆಯ ಕಮಿಟಿಯ ಮುಂದೆಯಾಗಲಿ ಬರಲಿಲ್ಲ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಲಷ್ಕರಕಾನೂನಿನ ಹೆಸರಿನಿಂದ ನಡೆದ ಸಂಗತಿಗಳು ಸುಧಾರಿಸಿದ ಯಾವ ಸರಕಾರಕ್ಕೂ ಒಪ್ಪುವವುಗಳಾಗಿದ್ದಿಲ್ಲ. ಜಲಿಯನ್ ವಾಲಾ ಬಾಗಿನಲ್ಲಿ ನಡೆದ ನಿರಪರಾಧಿಗಳ ಕೊಲೆಗಳು ಮಾರ್ಶಲ್ ಲೋದ ಕಟ್ಟೋಣಕ್ಕೆ ಕಲಶವನ್ನು ಕೂಡ್ರಿಸಿದಂತಾಗಿದೆ. ಜನರಲ್ ಡಾಯೆರರ ಎರಡು ತಿಂಗಳ ತನಕ ನಡೆದ ಭೀಷಣ ಕೃತ್ಯಗಳಿಗೆ ಸರ್. ಓಡ್ವಾಯರರ ಸಮ್ಮತಿಯು ಇತ್ತು. ರಿಪೋರ್ಟಿನಲ್ಲಿ ಕಮಿಷನರುಗಳು ಬರೆಯುವುದೇನೆಂದರೆ, 'ನಮ್ಮ ಸಂಖ್ಯೆಯು ಸರಿಯಾದ್ದಾದರೆ—ಮತ್ತು ಅದು ಸರಿಯಾಗಿಯೇ ಇದೆ—ಹೆಚ್ಚುಕಡಿಮೆ ೧,೨೦೦ ಜನರು ಗತಪ್ರಾಣರಾದರು, ಕಡಿಮೆ ಪಕ್ಷದಲ್ಲಿ ೩,೬೦೦ ಜನರು ಗಾಯ ಹೊಂದಿದ್ದಾರೆ, ಹಾಗು ಇನ್ನು ಕೆಲವರು ಕಾಯಮಾಗಿ ನಿರುಪಯೋಗಿಗಳಾಗಿದ್ದಾರೆ.

೩. ಕೊಂಗ್ರೆಸ್ ಕಮಿಟಿಯ ವರದಿಯಲ್ಲಿ ಇನ್ನೂ ಅನೇಕ ಅನ್ಯಾಯಗಳನ್ನು ತೋರಿಸಿ ಇಂಥ ಅನ್ಯಾಯಗಳನ್ನು ಯಾರು ಮಾಡಿರುವರೂ ಅವರ ವಿಷಯದಲ್ಲಿ ಸರಿಯಾದ ನ್ಯಾಯವಾಗುವುದು ಯೋಗ್ಯವೆಂದು ಹೇಳಿದೆ. ಅಧಿಕಾರಿಗಳ ಕೈಯಿಂದ ಯಾವ ತಪ್ಪುಗಳು, ಅನ್ಯಾಯಗಳು, ಅನರ್ಥಗಳು, ಹಾಗು ಘಾತಪಾತಗಳು ನಡದಿವೆಯೊ ಅವುಗಳ ಪರಿಮಾರ್ಜನವನ್ನು ಅವಶ್ಯವಾಗಿ ಮಾಡಬೇಕೆಂದು ಕಮಿಷನರುಗಳು ಶಿಫಾರಸುಮಾಡಿ ಮುಂದೆ ಹೇಳುವುದೇನೆಂದರೆ "ಈ ಪರಿಮಾರ್ಜನವನ್ನು ಪ್ರತಿಕಾರಕ್ಕಾಗಿ ಮಾಡಬೇಕಾದ್ದಲ್ಲ, ನ್ಯಾಯನೀತಿಗಳ ಸಂರಕ್ಷಣಕ್ಕಾಗಿ ಮಾಡಬೇಕು." ಇದೇ ಮೇರೆಗೆ ಅನೇಕ ಸಂಗತಿಗಳನ್ನು ಚರ್ಚಿಸಿ ವೈಸರಾಯ ದೊರೆಗಳ ವಿಷಯವಾಗಿ ಬರೆಯುವಾಗ ಕೊಂಗ್ರೆಸ್ ಕಮಿಟಿಯವರು ಹೇಳುವದೇನಂದರೆ:—"ಪರಮ ಪೂಜ್ಯರಾದ ಬಾದಶಹರು ಯಾವ ನಂಬಿಕೆಯಿಂದಲೂ ಚೆಮ್ಸಫರ್ಡ ದೊರೆಗಳನ್ನು ಕಳುಹಿಸಿದರೊ ಆ ನಂಬಿಕೆಯನ್ನು ಇವರು ಕಾಪಾಡಿಕೊಳ್ಳಲಿಲ್ಲ. ತಮ್ಮ ಮೇಲೆ ಇರುವ ಜವಾಬ್ದಾರಿಯನ್ನು ಇವರು ಅರಿತುಕೊಳ್ಳಲಿಲ್ಲ, ಅನರ್ಥಕ್ಕೂ ಘಾತಪಾತಕಕ್ಕೂ ಒಳಗಾದ ಪಂಜಾಬಿನ ಭಾಗಗಳನ್ನು ಸ್ವತಃ ಹೋಗಿ ನೋಡುವ ಶ್ರಮವನ್ನು ಈ ವೈಸರಾಯರು ತೆಕ್ಕೊಳ್ಳಲಿಲ್ಲ. ಕಷ್ಟಪಟ್ಟ ಜನರ ಕಡೆಗೆ ಎಳ್ಳಷ್ಟು ಸಹಾನುಭೂತಿಯನ್ನು ಇವರು ತೋರಿಸಲಿಲ್ಲ. ಸಾರಾಂಶ, ಲೊರ್ಡ ಚೆಮ್ಸಫರ್ಡ ದೊರೆಗಳು ರಾಜಪ್ರತಿನಿಧಿತ್ವದ ಪದವಿಗೆ ತಾವು ಅರ್ಹರಲ್ಲವೆಂಬ ಸಂಗತಿಯನ್ನು ತಮ್ಮ ಕೃತಿಯಿಂದಲೇ ತೋರಿಸಿಕೊಟ್ಟಂತೆ ಮಾಡಿದರು..........!" ಈ ವಿಧವಾಗಿ ವೈಸರಾಯರನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟು ಓಡ್ವಾಯರ, ಡಾಯರ, ಜೂನ್ಸನ್, ಒಬ್ರಾಯನ್, ಬೋಸ್ವರ್ಥ, ಸ್ಮಿಥ, ಶ್ರೀರಾಮಸೂದ ಮತ್ತು ಮಲಿಕ ಸಾಹೇಬಖಾನ ಈ ಅಷ್ಟ ಗಜಗಳಿಗೆ ಬ್ರಿಟಿಷ ಸಾಮ್ರಾಜ್ಯದಲ್ಲಿ ಬಹುಮಾನದ ಯಾವ ಕೆಲಸವನ್ನು ಕೊಡಬಾರದು, ಅವರನ್ನು ನೌಕರಿಯ ಮೇಲೆ ನೇಮಿಸಬಾರದು ಎಂದು ಕಮಿಷನರುಗಳು ಬರೆದಿದ್ದಾರೆ. ಮೇಲಿನ ಈ ಮಾಲಿಕೆಯಲ್ಲಿ ಸುರಿದ ಈ ಎಂಟು ರತ್ನಗಳನ್ನು ಪಾರ್ಲಿಮೆಂಟಿನ ಮುಖಾಂತ್ರ ತನಖಿಗೆ ಗುರಿಮಾಡುವುದು ವಿಹಿತವಿದ್ದರೂ ಇಂಥವರನ್ನು ಕ್ಷಮಿಸುವುದೆ ಯೋಗ್ಯವೆಂದು ಕಮಿಷನು ಅಭಿಪ್ರಾಯಪಟ್ಟಿದೆ. ಹಿಂದುಸ್ಥಾನವು ತನ್ನನ್ಯಾಯದ ಹಕ್ಕನ್ನು ಬಿಡುವುದರಿಂದ ಯಶಸ್ವಿಯಾಗುವುದು ಎಂದು ಕಮಿಷನರುಗಳು ನಂಬಿಕೆಯನ್ನಿಟ್ಟಿದ್ದಾರೆ.

೪. ಸುಧಾರಣೆಯ ಕಾನೂನು ಜಾರಿಯಲ್ಲಿ ಬರುವಾಗ ಅದಕ್ಕೆ ಬೇಕಾದ ನಿಯಮಗಳನ್ನು ತಯಾರಿಸುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಈ ಕಮಿಟಿಯಲ್ಲಿ ರಾಷ್ಟ್ರೀಯ ಪಕ್ಷದವರನ್ನು ತೆಕ್ಕೊಂಡಿಲ್ಲ. ಹಾಗು ಹಂಟರ ಕಮಿಟಿಯಲ್ಲಿ ಸಹ ರಾಷ್ಟ್ರೀಯ ಪಕ್ಷದವರಿಲ್ಲ. ರಾಷ್ಟ್ರೀಯ ಪಕ್ಷದವರನ್ನು ಈ ರೀತಿಯಿಂದ ಬಹಿಷ್ಕರಿಸಿದ್ದು ಯಾಕೆ ಎಂದು ಪಾರ್ಲಿಮೆಂಟಿನ 'ಕೊಮನ್ಸ' ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಮಿ. ಫಿಶರರು ಕೊಟ್ಟ ಉತ್ತರವು ಸಮರ್ಪಕ ಅಥವಾ ಸಯುಕ್ತಿಕವಿದ್ದಿಲ್ಲವಾದರೂ ಸರಕಾರಿ ಧೋರಣದ ನಿದರ್ಶಕವಾಗಿತ್ತೆಂಬುದು ನಿಜ. ರಿಫೋರ್ಮ್ ಕಮಿಟಿಯಲ್ಲಿ ರಾಷ್ಟ್ರೀಯರನ್ನು ನೇಮಿಸದೆ ಇದ್ದದ್ದಕ್ಕೆ ಫಿಶರ ದೊರೆಗಳು ಕೊಟ್ಟ ಕಾರಣವೇನೆಂದರೆ, ಸುಧಾರಣೆಗಳನ್ನು ಅಂಗೀಕರಿಸಿ ಅವುಗಳ ಯಶಸ್ವಿತೆಯ ಬಗ್ಗೆ ಸಂಪೂರ್ಣ ಸಹಕಾರಿತೆಯನ್ನು ಕೊಡುವವರನ್ನೆ ಕಮಿಟಿಯಲ್ಲಿ ನೇಮಿಸಬೇಕಲ್ಲದೆ 'ಸುಧಾರಣೆಗಳು ನಿರಾಶಾಜನಕವಾಗಿರುತ್ತವೆ; ಅವು ಯಶಸ್ವಿಯಾಗಲಿಕ್ಕಿಲ್ಲ'ವೆಂದು ವಾದಿಸುವವರನ್ನು ನೇಮಿಸಿ ಫಲವೇನು? ಮಿ. ಫಿಶರ್ ಸಾಹೇಬರ ಈ ಸವಾಲು ಬಹಳ ಯೋಗ್ಯವೆಂದು ತೋರುತ್ತದೆ. ವರಂತು ನಿಜವಾಗಿ ವಿಚಾರಮಾಡಿ[illegible]

ವದೆಂದು ಹೇಳಬೇಕಾಗುತ್ತದೆ. ಪ್ರಾತಿನಿಧಿಕ ರಾಜ್ಯಪದ್ಧತಿಯಲ್ಲಿ ದೇಶದೊಳಗಿನ ಎಲ್ಲ ತರದ ರಾಜಕೀಯ ಮತಗಳ ಅಂತರ್ಭಾವ ವಿರಬೇಕು. ನಿಮಗೆ ಬೇಕಾದವರನ್ನು ಮಾತ್ರ ಆರಿಸಿಕೊಂಡು ಕಾರಭಾರ ನಡೆಸಹೊರಟರೆ ಅದು ಪ್ರಾತಿನಿಧಿಕವಾಗಲಿಕ್ಕಿಲ್ಲ; ಜವಾಬ ದಾರಿಯದ್ದೂ ಆಗಲಿಕ್ಕಿಲ್ಲ ಇಲ್ಲವೆ ಸ್ವಯಂನಿರ್ಣಯದ್ದೂ ಆಗಲಿಕ್ಕಿಲ್ಲ. ಇದರಲ್ಲಿ ವಿಚಾರಣೀಯವಾದ ಇನ್ನೊಂದು ಸಂಗತಿಯು ಯಾವುದೆಂದರೆ ರಾಷ್ಟ್ರೀಯ ಪಕ್ಷವನ್ನು ಬಹಿಷ್ಕರಿಸುವುದೆಂದರೆ ಅದರ ಅನುಯಾಯಿ ಯಾದ ಬಹು ಜನ ಸಮಾಜದ ಮತವನ್ನು ಅಮಾನ್ಯಮಾಡಿದಂತಾಗು ತ್ತದೆ. ಯಾಕೆಂದರೆ, ದೇಶದೊಳಗಿನ ಹಿಂದೂ, ಮುಸಲ್ಮಾನ ಮತ್ತು ಸುಶಿಕ್ಷಿತ—ಅಶಿಕ್ಷಿತ ಈ ಎಲ್ಲರು ರಾಷ್ಟ್ರೀಯ ಸಭೆಯ ಅನುಯಾಯಿ ಗಳು. ಅಂಥ ದೊಡ್ಡ ಲೋಕಮತವನ್ನು ಬಹಿಷ್ಕರಿಸಿ, ತಮಗೆ ಬೇಕಾದ ತತ್ತ್ವೇತ್ತರನ್ನು ಕರೆಯಿಸಿ ಅವರನ್ನು ಸಂತೋಷಗೊಳಿಸುವುದರಿಂದ ಅದು ಪ್ರಾತಿನಿಧಿಕ ಸ್ವರಾಜ್ಯವಾಗಬಹುದೆ? ಎಂದೂ ಆಗಲಾರದು. ಯಾವ ಒಂದು ರಾಜಕಾರ್ಯದಲ್ಲಿ ಎಲ್ಲ ಮತಗಳು ಪ್ರತಿಫಲಿಸುವವೋ ಅದೇ ಪ್ರಾತಿನಿಧಿಕ ಸ್ವರಾಜ್ಯವು. ಈ ತತ್ವವು ಮಿ. ಫಿಶರ ಧೊರೆಗಳಿ ಗಾಗಲಿ, ಭಾರತಮಂತ್ರಿಗಳಿಗಾಗಲಿ, ಹಿಂದೂಸ್ಥಾನ ಅಥವಾ ಪ್ರಾಂತಿಕ ಸರಕಾರಗಳಿಗಾಗಲಿ ನವೀನವಾದ್ದಲ್ಲ; ಅವರೆಲ್ಲರಿಗೆ ಅದು ಸರಿಯಾಗಿ ಗೊತ್ತಿದೆ, ಮತ್ತು ಅವರಿಗಾದರೂ ತಮ್ಮ ದೋಷವು ಗೊತ್ತಾಗುತ್ತದೆ ಇದಕ್ಕೆ ಸಂದೇಹವಿಲ್ಲ. ಪರಂತು—ಪರಂತು ಏನು? ರಾಜನೀತಿಯ ಕೆರೆಯ ಆಳವು ಯಾರಿಗೂ ಗೊತ್ತಾಗುವುದಿಲ್ಲ!

೩. ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಉಂಟಾದ ಹಲವು ವಿಧದ ಜಾಗೃತಿಗಳಲ್ಲಿ ದೇಶೀಯವಿದ್ಯೆ, ದೇಶೀಯ ಕಲಾಕೌಶಲ್ಯ, ದೇಶೀಯ ಉದ್ಯೋಗ ಇತ್ಯಾದಿಗಳನ್ನು ಊರ್ಜಿತಾವಸ್ಥೆಗೆ ತರಬೇಕೆಂದು ಉಂಟಾದ ಭಾವನೆಯು ಒಂದಾಗಿದೆ. ಆಯುರ್ವೇದವು ವಿದ್ಯೆ ಮತ್ತು ಉದ್ಯೋಗ ಈ ಎರಡು ಶಾಖೆಗಳಲ್ಲಿ ಅಂತರ್ಭವಿಸುತ್ತವಾದ ಕಾರಣ ಒಂದು ಆಯುರ್ವೇದವನ್ನು ಪುನರುಜ್ಜೀವನಕ್ಕೆ ತರುವುದೆಂದರೆ ವಿದ್ಯೆಗೂ ಔದ್ಯೋಗಿಕ ವ್ಯವಸಾಯಕ್ಕೂ ಉತ್ತೇಜನವನ್ನು ಕೊಟ್ಟಂ ತಾಗುತ್ತದೆ. ಮತ್ತು ಇದೇ ಕಾರಣದಿಂದ ಈಗ ದೇಶಹಿತೈಷಿಗಳಾದವರು ಆಯುರ್ವೇದದ ಪುನರುಜ್ಜೀವನಕ್ಕಾಗಿ, ಪ್ರೋತ್ಸಾಹನಕ್ಕಾಗಿ ಮನಃ ಪೂರ್ವಕವಾದ ಪರಿಶ್ರಮವನ್ನು ತೆಕ್ಕೊಳ್ಳುತ್ತಿದ್ದಾರೆ! ಇದು ಬರೆ ಸಂತೋಷದ ಮಾತೇ ಅಲ್ಲ, ಒಂದು ಪ್ರಾಚೀನ ವಿದ್ಯೆಯ ಭಾಗ್ಯೋ ದಯದ ಸುಚಿಹ್ನವೆ ಸರಿ. ಆಯುರ್ವೇದದ ಮೇಲೆ ದುರಾಗ್ರಹದ ಆಕ್ಷೇಪವನ್ನು ಮಾಡಿದಾಗ್ಯೂ ಆ ಆಸ್ತ್ರಗಳನ್ನು ಮೆಲ್ಲ ಮೆಲ್ಲನೆ ಸಂಪೂರ್ಣವಾಗಿ ಛೇದಿಸುವ ಸಾಮರ್ಥ್ಯವು ಅದರಲ್ಲಿದೆ ಎಂದು ಹಿಂದುಸ್ಥಾನದೊಳಗಿನ ಆಯುರ್ವೇದದ ದಿನೇ ದಿನೇ ಉಂಟಾಗುವ ಪ್ರಗತಿಯಿಂದ ಸ್ಪಷ್ಟವಾಗುತ್ತದೆ. ನಮ್ಮ ಈ ವಿಧಾನಕ್ಕೆ ಇತ್ತಲಾಗಿನ ಒಂದು ದೃಷ್ಟಾಂತವನ್ನು ಕೊಡುವುದಾದರೆ, ಆಲ್ ಇಂಡಿಯಾ ಆಯುರ್ವೇದಿಕ್ ಕೊಲೇಜಿನ ಸೆಕ್ರೆಟರಿಗಳಾದ ಕವಿರಾಜ ಮಹಾಮಹೋಪಾಧ್ಯಾಯ ಗಣನಾಥಸೇನ, ಎಮ್. ಎ. ಎಲ್. ಎಮ್. ಎಸ್. ಮತ್ತು ಆಯುರ್ವೇದ ಪಂಚಾನನ ಜಗನ್ನಾಥ ಪ್ರಸಾದಶುಕ್ಲ ಹೊರಡಿಸಿದ ವಿಜ್ಞಾಪನಾ ಪತ್ರಕವನ್ನು ನೋಡಬಹುದು. ಈ ಪತ್ರಕವನ್ನು ಹೊರಡಿಸುವುದರಲ್ಲಿ ಅವರ ಮುಖ್ಯ ಉದ್ದೇಶವೇನೆಂದರೆ ಎಲ್ಲ ಹಿಂದುಸ್ಥಾನಕ್ಕೆ ಮಧ್ಯವರ್ತಿಯಾದ ಒಂದು ಆಯುರ್ವೇದೀಯ ಕೊಲೇಜನ್ನೂ ಒಂದು ಔಷಧಾಲಯವನ್ನೂ ತೆರೆಯಬೇಕು. ಈ ಕಾರ್ಯಕ್ಕೆ ೧೭-೧೮ ಲಕ್ಷ ರೂಪಾಯಿಯ ನಿಧಿಯು ಆವಶ್ಯಕವಾಗಿದೆ. ರೇವಾ ಮತ್ತು ಅಲವಾರ ಸಂಸ್ಥಾನಗಳ ಮಹಾರಾಜರು ತಮ್ಮ ಉದಾರಾಶ್ರಯವನ್ನು ಕೊಡಲು ಒಪ್ಪಿಕೊಂಡಿದ್ದಾರೆಂದು ಸದರಿ ಸೆಕ್ರೆಟರಿಗಳು ವಿಜ್ಞಾಪನಾ ಪತ್ರಕದಲ್ಲಿ ತಿಳಿಸಿರುವರು. ಇಂಥದೊಂದು ಆಯುರ್ವೇದೀಯ ಸಂಸ್ಥೆಯು ಅವಶ್ಯಕವೆಂಬುದರಲ್ಲಿ ಸಂಶಯವಿಲ್ಲ. ಬನಾರಸ ಹಿಂದು ಯುನಿವರ್ಸಿಟಿಯ ಪರವಾಗಿಯೆ ಈ ಚಳವಳವು ಮುಂದೆ ಬಂದಿದ್ದಾದರೆ ಇದಕ್ಕೆ ಧನಸಹಾಯ್ಯವು ಜನತೆಯ ಕಡೆಯಿಂದ ಬೇಗನೆ ಬರಬಹುದಿತ್ತೆಂದು ತೋರುತ್ತದೆ. ಅಲ್ಲದೆ, ಪಂಡಿತ ಮದನ ಮೋಹನ ಮಾಲವೀಯರು ಕಳೆದ ವರ್ಷ ಜಾಹೀರುಗೊಳಿಸಿದಂತೆ ಆಯುರ್ವೇದೀಯ ವನಸ್ಪತಿಗಳ ತೋಟವನ್ನು ಹಿಂದು ಯೂನಿವರ್ಸಿ ಟಿಯ ಪಕ್ಕದಲ್ಲಿ ತಯಾರಿಸುವುದುಂಟು. ಹೀಗಿರುವಾಗ ಈ ಹೊಸ ಸಂಸ್ಥೆಯನ್ನು ಕೂಡ ಅದರಲ್ಲಿ ಅಂತರ್ಭವಿಸಿದ್ದಾದರೆ ಬಹಳ ಒಳ್ಳೆಯ ದಾಗುತಿತ್ತು. ಆದರೂ ಆಯುರ್ವೇದಕ್ಕೆ ಜನತೆಯ ಕಡೆಯಿಂದ ಪ್ರೋತ್ಸಾಹವು ಸಿಕ್ಕೀತೆಂದು ನೆನಸಿದರೆ ಅದು ತಪ್ಪಾಗಲಿಕ್ಕಿಲ್ಲ.

೪. ಆಯುರ್ವೇದದ ಚಿಕಿತ್ಸೆಗೆ ಜನತೆಯ ಕಡೆಯಿಂದ ದಿನೇದಿನೇ ಹೆಚ್ಚು ಹೆಚ್ಚು ಪ್ರೋತ್ಸಾಹವೂ ಉತ್ತೇಜನವೂ ದೊರಕಹತ್ತಿದ ಕಾರಣ ಅದು ಬೇಗನೆ ಸಂಪನ್ನಸ್ಥಿತಿಗೆ ಬಂದೀತೆಂದು ನಂಬಲು ಕಾರಣವಾಗಿದೆ. ಈ ಮಾತು ಇಲ್ಲಿಯ "ಆಯುರ್ವೇದ ಭೂಷಣರಾದ ಶ್ರೀಯುತ ಎಮ್. ವಿ. ಶಾಸ್ತ್ರಿಗಳವರ ಔಷಧಾಲಯದ ನಮ್ಮ ಕೈಗೆ ಸೇರಿದ ವಾರ್ಷಿಕ ವರದಿಯಿಂದ ಸಿದ್ಧವಾಗುತ್ತದೆ. ಶ್ರೀಯುತ ಶಾಸ್ತ್ರಿಗಳ ವರ ಔಷಧಾಲಯದಲ್ಲಿ ಚಿಕಿತ್ಸೆಗಾಗಿ ಬಂದ ರೋಗಿಗಳ ಸಂಖ್ಯೆಯು ೧೪,೯೭೧ ಇರುತ್ತದೆ. ಈ ಸಂಖ್ಯೆಯು ಕಳೆದ ವರ್ಷಕ್ಕಿಂತ ಅಧಿಕ ವಾಗಿದೆ. ವಸ್ತುತಃ ವಿಚಾರಿಸಿದ್ದಲ್ಲಿ ಈ ವರ್ಷದ ಹವಾಮಾನವು ಕಳೆದ ವರ್ಷಕ್ಕಿಂತಲೂ ಆರೋಗ್ಯಕರವಾದ್ದರಿಂದ ರೋಗಗಳು ಸ್ವಲ್ಪ ರಾದ ಶಾಸ್ತ್ರಿಗಳಿಂದ ಚಿಕಿತ್ಸೆಯನ್ನು ಹೊಂದಿದ ಮೇಲಿನ ಸಂಖ್ಯೆ ಯನ್ನು ನೋಡುವಾಗ ಶಾಸ್ತ್ರಿಗಳ ಪರಿಶ್ರಮದಿಂದ ಆಯುರ್ವೇದವು ಲೋಕಪ್ರಿಯವೂ, ಸುಶಿಕ್ಷಿತರ ಆದರಕ್ಕೆ ಪಾತ್ರವೂ ಆಗಹತ್ತಿದೆ ಎಂದು ಹೇಳಬೇಕಾಗುತ್ತದೆ. ಇವರ ಔಷಧಾಲಯದಲ್ಲಿ ಇನ್ ಫ್ಲುಎಂಝಾ, ಕೊಲೆರಾ ಇತ್ಯಾದಿ ವಿಧದ ಎಲ್ಲ ತರದ ಸಾಂಕ್ರಾ ಮಿಕ ರೋಗಿಗಳು ಚಿಕಿತ್ಸೆಯನ್ನು ಹೊಂದಿದ್ದಾರಲ್ಲದೆ ಇತರ ಸ್ವಭಾ ವದ ಸಾವಿರಾರು ರೋಗಿಗಳು ಇವರಿಂದ ಔಷಧವನ್ನು ಸೇವಿಸಿ ಗುಣಹೊಂದಿದ್ದಾರೆಂದು ಗೊತ್ತಾಗುತ್ತದೆ. ಅಲ್ಲದೆ, ವಿದೇಶೀಯ ಔಷಧಗಳಿಗಿಂತ ಆಯುರ್ವೇದೀಯ ಔಷಧಗಳು ಏತದ್ದೇಶೀಯರ ಪ್ರಕೃ ತಿಗೆ ಒಪ್ಪುವವುಗಳೂ, ಕ್ರಯದಲ್ಲಿ ಸುಲಭವಾದವುಗಳೂ ಆಗಿರುವ ದರಿಂದ ಆಯುರ್ವೇದದಲ್ಲಿ ಬರಬರುತ್ತ ಹೆಚ್ಚಿನ ಆಕರ್ಷಕತೆ ಯುಂಟಾದ್ದರಲ್ಲಿ ಆಶ್ಚರ್ಯವಿಲ್ಲ. ಇರಲಿ, ಶ್ರೀಯುತ ವೆಂಕಟೇಶ್ವರ ಶಾಸ್ತ್ರಿಗಳ ದೀರ್ಘಪರಿಶ್ರಮದಿಂದ ಹಾಗು ಆಯುರ್ವೇದದ ಶಾಸ್ತ್ರೀಯ ಜ್ಞಾನದಿಂದ ಮತ್ತು ದಿನೇದಿನೇ ಪ್ರಾಪ್ತವಾಗುವ ಅನುಭವದಿಂದ ನಮ್ಮ ಮಂಗಳೂರ ಪಟ್ಟಣದಲ್ಲಿ ನಡೆಯುತ್ತಿರುವ ಆಯುರ್ವೇ ದೀಯ ಔಷಧಾಲಯವು ಚಿರಕಾಲ ಬಾಳಲೆಂದು ನಾವು ಹಾರಯಿ ಸುವೆವು. ಹಾಗು ಅಶಿಕ್ಷಿತರ ಕೈಯಲ್ಲಿ ಬಿದ್ದು ಯಥ್ವಾತದ್ವಾ ಆಗಿಹೋಗುವ ಒಂದು ಪ್ರಾಚೀನ ಆರ್ಷಶಾಸ್ತ್ರವನ್ನು ಲೋಕಾದ ರಕ್ಕೆ ತಂದುಕೊಟ್ಟ ಬಗ್ಗೆ ಶಾಸ್ತ್ರಿಗಳನ್ನು ಅಭಿನಂದಿಸುವೆವು.

ಮಂಗಳೂರು.

ಕಳೆದ ಶುಕ್ರವಾರ ರಾತ್ರೆ ೮ ಗಂಟೆ ಸಮಯದಲ್ಲಿ ಇಲ್ಲಿಯ ಗೌಡ ಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಗುರುವರ್ಯರಾದ ಶ್ರೀ ಸುಕೃತೀಂದ್ರ ತೀರ್ಥಸ್ವಾಮಿಯವರ ಸನ್ನಿಧಿ ಯಲ್ಲಿ ಮಂಗಳೂರಿನ ಗೌಡಸಾರಸ್ವತ ಬ್ರಾಹ್ಮಣರ ಸಭೆಯು ಕೂಡಿತ್ತು. ಸಭೆಯ ಉದ್ದೇಶವು ಶ್ರೀ ಮಠಕ್ಕೆ ಸಂಬಂಧಪಟ್ಟ ಲೌಕಿಕ ವಿಷಯ ಗಳಲ್ಲಿ ಕೆಲವನ್ನು ಅವುಗಳ ಆಡಳಿತೆಯ ಬಗ್ಗೆ ಶಿಷ್ಯವೃಂದದವರಿಗೆ ಪವರ್ ಆಫ್ ಎಟೋರ್ನಿ ಮೂಲಕ ವಹಿಸಿ ಕೊಡುವಂಥದಾಗಿತ್ತು. ಇಂಥ ಆಡಳಿತೆಯ ಬಗ್ಗೆ ಬೇಕಾದ ಅನುಭವ ಮತ್ತು ಅಭಿಪ್ರಾಯ ಗಳನ್ನು ಕೊಡುವರೆ ಶ್ರೀ ಸ್ವಾಮಿಯವರು ಮ| ರಾ| ನಗರ ದಾಮೋದರ ಶ್ಯಾನಭಾಗ, ಮ| ರಾ| ಉಳ್ಳಾಲ ವಾಸುದೇವ ಮಲ್ಯ, ಮ| ರಾ| ಮಣೇಲ ಅಣ್ಣಪ್ಪನಾಯಕ್ ಮೊದಲಾದ ಸದ್ಗೃಹಸ್ಥರು ಒಂದು ಕೌನ್ಸಿಲನ್ನು ಏರ್ಪಡಿಸಿರುತ್ತಾರೆ ಮತ್ತು ಕಾರ್ಯನಿರ್ವಾ ಹದ ಬಗ್ಗೆ ಮ| ರಾ| ಸಾಹುಕಾರ ಗಣೇಶ ಶ್ರೀನಿವಾಸ ಪೈ ಮತ್ತು ಮ| ರಾ| ಉಳ್ಳಾಲ ವೆಂಕಟ್ರಾಯ ಕಿಣಿಯವರಿಗೆ ಪವರ್ ಒಫ್ ಎಟೋರ್ನಿಯನ್ನು ಕೊಟ್ಟಿರುತ್ತಾರೆ. ಸಭೆಯ ಪ್ರಾರಂಭದಲ್ಲಿ ಶ್ರೀ ಗುರು ದೇವರ ಪ್ರಾರ್ಥನೆಯು ಆದ ಬಳಿಕ ಪವರ್ ಒಫ್ ಎಟೋ ರ್ನಿಯನ್ನು ಕೊಟ್ಟ ರಾಯಸ ಪತ್ರವು ಓದೋಣಾಗಿ ತಮ್ಮ ಆಶೀ ರ್ವಾದ ಪೂರ್ವಕ ರಾಯಸ ಪತ್ರವನ್ನು ಸಭಿಕರಿಗೂ ತಮ್ಮ ಶಿಷ್ಯ ವೃಂದದ ಪರವಾಗಿ ಪವರ್ ಒಫ್ ಎಟೋರ್ನಿಯನ್ನು ರಾ| ಗಣೇಶ ಶ್ರೀನಿವಾಸ ಪೈ ಮತ್ತು ರಾ| ಉಳ್ಳಾಲ ವೆಂಕಟ್ರಾಯ ಕಿಣಿಯವರಿಗೂ ಶ್ರೀ ಸ್ವಾಮಿಯವರು ದಯಪಾಲಿಸಿದರು. ತಾವು ವಹಿಸಿಕೊಂಡಂಥಾ ವಿಶೇಷ ಜವಾಬ್ದಾರಿಯ, ಈ ಕಾರ್ಯಗಳಲ್ಲಿ ಜಾತಿ ವರ್ಗದವರ ಸಂಪೂರ್ಣ ಮತ್ತು ಮನಃಪೂರ್ವಕವಾದ ಸಹಕಾರ ಸಹಾನು ಭೂತಿಗಳು ಬೇಕಾಗಿವೆ, ಇವುಗಳು ತಮ್ಮ ಬೆಂಬಲಕ್ಕಿವೆ ಎಂಬ ಕೋರಿಕೆಯಿಂದಲೂ ಶ್ರೀ ಸ್ವಾಮಿಯವರ ಆಶೀರ್ವಾದ ಬಲದಿಂದಲೂ ಶ್ರೀ ಮಠದ ಈ ಕಾರ್ಯವನ್ನು ಜಾತಿ ಬಾಂಧವರ ಪರವಾಗಿ ತಾವು ಕೈಕೊಂಡಿರುವೆವೆಂತ ರಾ| ಗಣೇಶ ಶ್ರೀನಿವಾಸ ಪೈಗಳೂ, ರಾ| ಉಳ್ಳಾಲ ವೆಂಕಟ್ರಾಯಕಿಣಿಯವರೂ ವಿನಂತಿ ಪೂರ್ವಕ ಹೇಳಿ ಕೊಂಡರು. ನಂತರ ಸಭಿಕರ ಅಪೇಕ್ಷೆ ಮೇರೆಗೆ ರಾ| ಎ. ಶ್ರೀನಿವಾಸ ಕಾಮತರವರು ಶ್ರೀ ಪಾದಂಗಳವರನ್ನು ಪವರ್ ಒಫ್ ಎಟೋರ್ನಿಯನ್ನು ಪಡೆದ ಗೃಹಸ್ಥರನ್ನೂ ಚಿಕ್ಕದೊಂದು ಭಾಷಣ ಮೂಲಕ ವಂದಿಸಿದರು. ಶಿಷ್ಯ ವರ್ಗದವರ ಕರ್ತವ್ಯ, ಅವರು ವಹಿಸಿಕೊಳ್ಳೋಣಾಗುವ ಕಾರ್ಯ ಗಳ ಜವಾಬ್ದಾರಿ, ಮತ್ತು ಇವುಗಳ ಯಥಾರ್ಥವಾದ ಸಾಧನಾ ಮಾರ್ಗದಲ್ಲಿ ಪ್ರಾಪ್ತವಾಗುವಂಥ ಅಧಿಕಾರ, ಇವುಗಳೊಳಗಣ ಪರ ಸ್ಪರ ಸಂಬಂಧವನ್ನು ಕುರಿತು ಕಾಮತರವರು ಮಾತಾಡಿ ಬರೇ ಅಧಿಕಾರ ಮೋಹದಿಂದ ಮಾತ್ರ ತಪ್ಪು ಗ್ರಹಿಕೆಗೂ ಅಭಿಪ್ರಾಯ ಗಳಿಗೂ ಪರಸ್ಪರ ವಿರೋಧಕ್ಕೂ ಆಸ್ಪದವು ದೊರಕಿ ಐಕ್ಯ ಇರಬೇಕಾ ದ್ದಲ್ಲಿ ಅನೈಕ್ಯವು ಹೇಗೆ ಪ್ರಾಪ್ತವಾಗುತ್ತದೆಂಬುದನ್ನು ವಿವರಿಸಿ ಶ್ರೀ ಗುರುಗಳವರಿಗೆ ಸಾಷ್ಟಾಂಗವೆರಗಿ ತಮ್ಮ ಭಾಷಣವನ್ನು ಮುಗಿ ಸಿದರು. ನಂತರ ಶ್ರೀ. ಸ್ವಾಮಿಯವರು ಫಲಮಂತ್ರಾಕ್ಷತೆಗಳನ್ನು ನೆರೆದವರಿಗೆ ದಯಪಾಲಿಸಿ ಸಭೆಯು ಮುಕ್ತಾಯವಾಯಿತು. ಶ್ರೀ ಸಂಸ್ಥಾನಕ್ಕೆ ಸಂಬಂಧಪಟ್ಟ ಕಟ್ಟಡಗಳ ದುರುಸ್ತಿ ಇತ್ಯಾದಿಗಳ ಬಗ್ಗೆ ಈ ಪಟ್ಟಣದಲ್ಲಿಯೇ ರೂ. 10,000 ಮಿಕ್ಕಿ ಚಂದಾ

ಕಾಶೀ ಮಠದ ಶ್ರೀಪಾದಂಗಳವರು ಮುಲ್ಕಿ ಶ್ರೀ ವೆಂಕಟ ರಮಣ ದೇವಸ್ಥಾನದಲ್ಲಿ ನಡೆದ ಶ್ರೀ ರಾಮನವಮಿ ಉತ್ಸವದ ಬಗ್ಗೆ ಮುಲ್ಕಿಗೆ ಹೋಗಿರುತ್ತಾರೆ.

ಇತ್ತಲಾಗೆ ಕೊಯಮುತ್ತೂರು ಕೃಷಿ ಕೊಲೇಜಿನಲ್ಲಿ ಆದ ಪರೀಕ್ಷೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಮ| ರಾ| ರಾ| ಅತ್ತಾವರ ದೇವಪ್ಪ ಪೂಂಜರ ಮಗ ಮ| ರಾ| ವಿಟ್ಠಲ ಪೂಂಜರು ಪ್ರಥಮ ಸ್ಥಾನವನ್ನು ಹೊಂದಿ ರೊಬರ್ಟ್ಸನ್ ಮೆಡಲನ್ನು ಹೊಂದಿರುತ್ತಾರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಈ ತಿಂಗಳ ತಾ. ೪ರಿಂದ ತಾ. ೧೧ರವರೇಗೆ ಇಲ್ಲಿಯ ದೇಶೀಯ ಬಾಲಿಕಾ ಪಾಠಶಾಲೆಯಲ್ಲಿ ನಡೆಯತಕ್ಕ ದೇಶೀಯ ಬಾಲಿಕಾ ಪಾಠ ಶಾಲೆಯ ಸಪ್ತಾಹದ ಕಾರ್ಯಕ್ರಮ ಪಟ್ಟಿಯು ಕೆಳಗೆ ಕೊಟ್ಟಿರುತ್ತದೆ. ತಾ. ೪ನೇ ಆದಿತ್ಯವಾರ ಬೆಳಗ್ಗೆ ೮-೩೦ ಗಂಟೆಗೆ ರಾಯಸಾಹೇಬ ಕುದ್ಮುಲ ರಂಗರಾಯರಿಂದ ಸಂತೆ ತೆರೆಯೋಣಾಗುವದು. ಸಾಯಂ ಕಾಲ ೫-೩೦ ಗಂಟೆಗೆ 'ಲಕ್ಷ್ಮಿಯ ಪರೀಕ್ಷೆ' ಎಂಬ ಇಂಗ್ಲಿಷ ನಾಟಕವು ಶಾಲಾ ವಿದ್ಯಾರ್ಥಿನಿಯರಿಂದ ಆಡಲ್ಪಡುವುದು. ತಾ. ೫ನೇ ಸೋಮ ವಾರ ಮಧ್ಯಾಹ್ನ ೩-೩೦ ಗಂಟೆಗೆ ಮಹಿಳೆಯರ ಸಭೆ ಕೂಡುವುದು ಸಾಯಂಕಾಲ ೫-೩೦ ಗಂಟೆಗೆ ಪಟ್ಟಣದಲ್ಲಿ ಮೆರವಣಿಗೆ ಹೊರಡುವುದು. ತಾ. ೬ನೇ ಮಂಗಳವಾರ ಸಾಯಂಕಾಲ ೫-೩೦ ಗಂಟೆಗೆ ಶಾಲಾ ವಿದ್ಯಾರ್ಥಿನಿಯರಿಂದ 'ನಳದಮಯಂತಿ'ಯೆಂಬ ನಾಟಕವು ಅಭಿನಯಿಸಿ ತೋರಿಸಲಾಗುವುದು. ತಾ. ೮ನೇ ಗುರುವಾರ ಶಾಲಾ ವಿದ್ಯಾರ್ಥಿನಿ ಯರ ಸಂಗೀತ ಸಮಾಜ ಮತ್ತು ಸ್ಕೌಟ ಬಾಲಕಿಯರ ಪ್ರದರ್ಶನ ನಡಿ ಯುವುದು. ತಾ. ೧೦ನೇ ಶನಿವಾರ ಸಾಯಂಕಾಲ ೬-೩೦ ಗಂಟೆಗೆ ರವೀಂದ್ರನಾಥ ಠಾಕೂರರಿಂದ ರಚಿತವಾದ 'ಆತ್ಮಬಲ' ಎಂಬ ಇಂಗ್ಲಿಷ ನಾಟಕವೂ ಮತ್ತು ಪ್ರೊಫೆಸ್ಸರ್ ಎಸ್. ಎಸ್. ರಾವ್ ಇವರ ಇಂದ್ರ ಜಾಲ ಇತ್ಯಾದಿ ಪ್ರದರ್ಶನಗಳು ತೋರಿಸಲಾಗುವವು. ಎಲ್ಲಾ ದೇಖಾವೆ ಗಳನ್ನೂ ನೋಡುವುದಕ್ಕೆ ಸೀಜನ್ ಟಿಕೇಟು ದರ ರೂಪಾಯಿ ೫ ಮತ್ತು ೨—೮—೦ ಒಂದೊಂದೇ ದೇಖಾವೆಗೆ ದರ ರೂ. ೨, ೧ ಆಣೆ ೮ ಮತ್ತು ೪ ಹೀಗೆ ಇಟ್ಟಿರುತ್ತೇವೆ.

ಕಲೆಕ್ಟರ ದೊರೆಗಳವರು ಈ ತಿಂಗಳ ತಾ. ೨ ಮತ್ತು ೩ ಕುಂದಾಪುರ, ತಾ. ೪ಕ್ಕೆ ಕುಂದಾಪುರದಿಂದ ಕೋಟ ತಾ. ೪, ೫ ಕೋಟ ಮತ್ತು ಉಡುಪಿ ಈ ರೀತಿ ಸರ್ಕೀಟು ಬೆಳಸುವರು.

ಗುರುಪುರ ಸಂಕವನ್ನು ಕಟ್ಟಿಸುವ ಬಗ್ಗೆ ಸುಮಾರು ೪ ಲಕ್ಷ ರೂಪಾಯಿ ಸೆಂಕ್ಷನ್ ಆಗಿರುವುದು. ಈ ಸಂಕವನ್ನು ಕಟ್ಟಿಸುವ ಕೆಲ ಸವು ತ್ವರ್ಯದಲ್ಲಿ ಪ್ರಾರಂಭವಾಗುವುದಾಗಿ ಕೇಳುತ್ತೇವೆ.

ಈ ತಿಂಗಳ ತಾ. ೩೦ಕ್ಕೆ ಗುರುಪುರ ಇಲೆಕ್ಟೋರಲ್ ಸರ್ಕಲಿನಿಂದ ಮಂಗಳೂರ ತಾಲೂಕುಬೋರ್ಡಿಗೆ ಚುನಾವಣೆಯಾಗತಕ್ಕ ಮೆಂಬರಿಕೆಗೆ ರಾಯಬಹದ್ದೂರ ಸಯಂಪಳ್ಳಿ ಸುಬ್ಬರಾಯರ ವಿನಹಾ ಯಾರೂ ಉಮೇದ್ವಾರರಾಗಿ ನಿಲ್ಲದೆ ಇರುವುದರಿಂದ ಪುನಃ ಅವರೇ ಈ ಸ್ಥಾನಕ್ಕೆ ಬರುವರು.

ಬಂಟರ ಯಾನೆ ನಾಡವರ ಪರಸ್ಪರ ಸಹಾಯಕ ಸಂಘದ ಬಂಡಸಾಲೆಯ ಮುಹೂರ್ತವು ಕಳೆದ ತಾರೀಕು ೨೮ನೇ ಅಭಿಜಿನ್ ಮುಹೂರ್ತದಲ್ಲಿ ಸಾಂಗವಾಗಿ ನೆರವೇರಿತು. ಬಂದರದ ಸಾವು ಕಾರರ ಪೈಕಿ ಮ| ರಾ| । ಎನ್. ಪುರುಷೋತ್ತಮ ಸೇಟ್, ಮ| ರಾ| ರಾ| ಉಳ್ಳಾಲ ಸರ್ವೋತ್ತಮ ಕಿಣಿ, ರಾ| ಸಾಕೂರು ಸೇಟ್, ಮ| ರಾ| ರಾ| ಜಾರ್ಗೆಬೈಲ್ ಸುಬ್ರಾಯ ಕಾಮತ್, ಮ| ರಾ| ರಾ| ಸುಜೀರ ನಾಗಪ್ಪ ನ್ಯಾಕ್ ಮೊದಲಾದವರೂ ಸಂಘದ ಕಡೆಯಿಂದ ಮ| ರಾ| ರಾ| ಅತ್ತಾವರ ರಾವ್‌ಬಹದ್ದೂರ್ ರಾಮಯ ಪೂಂಜರು ಮ| ರಾ| ರಾ| ಬೆಳ್ಳಿ ಸುಬ್ಬಯ ಸೆಟ್ರು ಮ| ರಾ| ರಾ| ಕೊಡಿಯಾಲಗುತ್ತು ರಾಮಯ್ಯ ಹೆಗ್ಗಡೇರು, ಮ| ರಾ| ರಾ| ಎಕ್ಕಾರ ಅಣ್ಣಪ್ಪ ಹೆಗ್ಗಡೇರು, ಮ| ರಾ| ರಾ| ಅತ್ತಾವರ ಬಾಲಕೃಷ್ಣ ಶೆಟ್ರು, ಮ| ರಾ| ರಾ| ಬಡಿಲ ದೂಮಪ್ಪೈಗಳವರು, ಸಂಘಗಳ ಚೀಫ್ ಇನ್ಸ್ ಪೆಕ್ಟರರಾದ ಮ| ರಾ| ರಾ| ಕಣ್ಣನ್‌ನಂಬಿಯರರು ಮತ್ತು ಮಂಗ ಳೂರು ಲೋಕಲ್ ಯುನಿಯನಿನ ಪ್ರೆಸಿಡೆಂಟರೂ ಕಾರ್ಯದರ್ಶಿಗಳೂ ಹಾಜರಿದ್ದರು. ಪ್ರಾರಂಭದಲ್ಲಿ ಗಣಪತಿ ಪೂಜೆಯೂ ಪ್ರಾರ್ಥನೆಯೂ ಮಾಡೋಣಾಗಿ ಮೆಂಬರರಿಂದ ಸಂಘಕ್ಕೆ ಬಂದ ಅಕ್ಕಿ ಮುಡಿಗಳನ್ನು ಒಳಗೆ ತುಂಬಿಟ್ಟರು. ನಂತರ ಕೂಡಿದ ಗೃಹಸ್ಥರೆಲ್ಲರಿಗೂ ತಾಂಬೂ ಲಾದಿಗಳನ್ನು ಕೊಟ್ಟು ಸಂಘದ ಆಮಂತ್ರಣವನ್ನು ಸ್ವೀಕರಿಸಿ ಸಭೆಗೆ ದಯಪಾಲಿಸಿದ ಗೃಹಸ್ಥರನ್ನು ವಂದಿಸಿದ ನಂತರ ಸಭೆಯು ಮುಕ್ತಾ ಯಗೊಂಡಿತು.

ನಮ್ಮ ಮಂಗಳೂರ ಪಟ್ಟಣದ ಸಂಟಪನ್ಸ್ ಹೈಸ್ಕೂಲನಲ್ಲಿ ಬರುವ ಜೂನ್ ತಿಂಗಳಿನಿಂದ ಇಂಟರ್ ಮಿಡಿಯೇಟ್ ಕ್ಲಾಸು ತೆರೆಯೋಣಾಗು ವುದು. ಈ ಶಾಲೆಯು ಸ್ಥಾಪಿತವಾಗಿ ೭೦ ವರುಷಗಳಾಗಿದ್ದು, ಇದರ ಜುಬ್ಲಿ ಸಮಾರಂಭವು ಬರುವ ನವಂಬರ ತಿಂಗಳಲ್ಲಿ ನಡಿಯಲಿಕ್ಕಿರು ವುದಾಗಿ ತಿಳಿಯುತ್ತದೆ.

[illegible]

... ವಿದ್ಯಾರ್ಥಿಗಳಿಗೆ ಚಿನ್ನದ ಕೆಲವು ಮಹನೀಯರು ... ರೂಪಾಯಿ ೨೦೩/- ಎರಡನೆಯ ವರುಷ ... ಮೂರನೆಯ ವರುಷ ರೂಪಾಯಿ ೨೬೦/- ನಾಲ್ಕನೆಯ ... ರೂಪಾಯಿ ... ಒಟ್ಟಿಗೆ ರೂಪಾಯಿ ೧೧೯೧/- ಆದಾಯವಾಗಿದ್ದು ...

... ವರುಷ ಸ್ಥಾಪನೆಯ ಪ್ರಾರಂಭದಿಂದ ಆಕರಿರಿ ಹೆಡ್‌ಮಾಸ್ತರಾಗಿದ್ದು ... ಅನಾರೋಗ್ಯದ ದೆಸೆಯಿಂದ ಬಿಟ್ಟು, ಹೋದ ರಾಯ ಬಹ ... ರಘುನಾಥರಾಯರ ಹೆಸರಿಗೆ ಒಂದು ಸಂಪೂರ್ಣ ವಿದ್ಯಾರ್ಥಿ ವೇತನವನ್ನು ... ಕಳೆದ ವರುಷ ಪಟ್ಟಣದಲ್ಲಿ ಸುತ್ತುಮುತ್ತಲಿನ ಹಳ್ಳಿ ... ಮುಂಡಾಡಿ, ಬಂಟವಾಳ, ಉಪ್ಪಿನಂಗಡಿ, ಮುಂತಾದ ... ಬೇರೆ ಬೇರೆ ಪಂಗಡಗಳಾಗಿ ಹೋಗಿ ನಾಲ್ಕಾರು ದಿನ ತಿರುಗಿದುದರಿಂದ, ಕಳೆದ ಮೂರು ವರುಷಗಳಿಗಿಂತಲೂ ಹೆಚ್ಚು ಹಣವನ್ನು ಕೂಡಿಸಲಾಯಿತು ಈ ನಾಲ್ಕು ವರುಷಗಳಲ್ಲಿ ಧನಸಹಾಯ ಮಾಡಿದ ಮಹನೀಯರುಗಳಿಗೆ ಬಡ ವಿದ್ಯಾರ್ಥಿಗಳ ಪರವಾಗಿ ನಾವು ಸವಿನಯ ವಂದಿಸುವುದಲ್ಲದೆ, ಇನ್ನು ಮುಂದೆಯೂ ಹೀಗೆಯೇ ಸಹಾಯ ಮಾಡುವಂತೆ ಅವರಿಗೆ ಸಂಪತ್ಸಮೃದ್ಧಿಯಾಗಲೆಂದು ದೇವರೊ ... ಬೇಡಿಕೊಳ್ಳುತ್ತೇವೆ.

ಕಳೆದ ದೀಪಾವಳಿಗೆ ಹಣಕೊಟ್ಟ ಮಹಾ ಜನರುಗಳ ಹೆಸರುಗಳನ್ನೂ ಅವರು ಕೊಟ್ಟ ಮೊಬಲಗನ್ನೂ ಈ ಕೆಳಗಣ ಪಟ್ಟಿಯಲ್ಲಿ ಕಾಣಿಸಿದೆ ಸ್ಥಳ ಸಂಕೋಚದಿಂದ ಒಂದು ರೂಪಾಯಿಗಿಂತ ಕಡಮೆಯಾದ ಮೊಬಲಗುಗಳನ್ನು ಇಲ್ಲಿ ಕಾಣಿಸಲಿಲ್ಲ

ಸವೂರ ಶಿವರಾವ್,

ಪುತ್ತೂರು ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ

ಕಳೆದ ದೀಪಾವಳಿಗೆ ಹಣಕೊಟ್ಟ ಮಹಾಜನರ ಹೆಸರುಗಳು

ಮಂಕುಡೆ ಪದ್ಮನಾಭಾಚಾರ್ಯರ ವಿಧವೆಯರು ಕಾವೇರಮ್ಮ ಮತ್ತು ಚೆನ್ನಮ್ಮರವರುಗಳು ರೂ ೫೦ ರಾ| ಗಳಾದ ಬೆಳ್ಳಿಪಾಡಿ ದಾಸಯ್ಯಗಳು ರೂ ೧೫ ನರಸಿಂಹ ರಾಮರಾಯರು ರೂ ೧೫ ಕುಂಡಡ್ಕ ನಾರಾಯಣ ಹೆಗ್ಗಡೆಗಳು ರೂ ೧೦ ಕುಂಡಕ್ಕೋಡಿ ಉಕ್ಕಣ್ಣ ಗೌಡರು ರೂ ೧೦ ನೂಜಿಬೈಲು ಶಂಕರ ಭಟ್ಟರು ರೂ ೮ ಆನಂತಾಡಿ ಪಟೇಲರು ರಾಮಣ್ಣಯ್ಯಗಳು ರೂ ೮, ಕೈಂತಜೆ ತಿಮ್ಮಣ್ಣ ಭಟ್ಟರು ರೂ. ೮, ವಕೀಲ ಯು ಪಿ ಕೃಷ್ಣಭಟ್ಟರ ಮಗ ರೂ ೬ ನಾರ್ಶದ ಆನಂದ ಬಲ್ಲಾಳ್ತಿರಾಯರು ರೂ ೬, ಬಂಟವಾಳ ಕೊಂಟ್ರಾಕ್ಟು ಕೃಷ್ಣರಾಯರು ರೂ ೬ ಕೊಡಿಂಬಾಡಿ ಮಂಜಪ್ಪ ಶೆಟ್ಟರು ರೂ ೫—೫—೦ ವಿಟ್ಲದ ಪವರ್ಮ ನರಸಿಂಹರಾಜರು ರೂ ೫ ಉರಿಮಜಲು ಕಬ್ಬಿನ ಹಿತ್ಲು ಕೃಷ್ಣಭಟ್ಟರು ರೂ. ೫, ಬೋಳಂತೂರು ವೆಂಕಪ್ಪ ಅಡ್ಯಂತಾಯರು ರೂ ೫ ಸವೂರು ನಾರಾಯಣ ರಾಯರು ರೂ ೫, ವಕೀಲ ಬೆಳ್ಳೆ ವೆಂಕಟ ಕೃಷ್ಣರಾಯರು ರೂ ೫ ವಕೀಲ ಕುಂಡಾಜೆ ರಘುನಾಥರಾಯರು ರೂ ೫ ಮಾಜಿ ವಕೀಲ ನೈಂಪಳ್ಳಿ ವೆಂಕಟನಾಥರಾಯರ ವಿಧವೆ ಸಾಂತಮ್ಮ ಯಾನೆ ದುರ್ಗಮ್ಮನವರು ರೂ ೫ ... ವೆಂಕಟ್ರಮಣಯ್ಯನವರು ರೂ ೫ ಅನಾಜೆ ನಾರಾಯಣ ಹೆಬ್ಬಾರರು ರೂ ೫, ಆರಿಗಲ್ಲು ಅಮ್ಮು ಪಡಿವಾಳರು ರೂ ೫ ಬಂಟವಾಳ ಡಾಕ್ಟರ್ ಇಡ್ಯ ವೆಂಕಟರಾಯರು ರೂ. ೫ (ಮುಂದರಿಸಲಾಗುವುದು)

ದಕ್ಷಿಣ ಕನ್ನಡ

ತಿಮ್ಮವಡಿ—ಕಳೆದ ಸಂಚಿಕೆಯ ಮಂಗಳೂರು ಸಮಾಚಾರದಲ್ಲಿ ಸರ್ಕಸ್ ಮತ್ತು ಅದರ ಪ್ರಯೋಜನವೆಂಬುದನ್ನು ಕುರಿತು ಪ್ರಬಂಧವನ್ನು ಬರೆದು ಮೊದಲನೇ ಬಹುಮಾನವನ್ನು ಪಡೆದ ವಿದ್ಯಾರ್ಥಿಯು ಸಂಜೀವರಾವ್ ಎಂಬ ಬದಲಿಗೆ ಕೊಟ್ಟಿಕಾರ ಸಂಜೀವಪ್ಪ ಎಂದು ತಿದ್ದಿಕೊಳ್ಳುವುದು

ಕಾಸರಗೋಡು:—ಇಲ್ಲಿಯ, ತಾಲೂಕು ಕಚೇರಿ, ಮುನ್ಸಿಫ್ ಕೋರ್ಟ ಮುಂತಾದ, ಗವರ್ನಮೆಂಟ್ ಆಫೀಸುಗಳ ಕ್ಲಾರ್ಕರುಗಳು ಒಟ್ಟು ಗೂಡಿ ಕಾಸರಗೋಡ ಕ್ಲಾರ್ಕ್ಸ್ ಎಸೋಸಿಯೇಶನ್ ಎಂಬ ಸಮಾಜವನ್ನು ಸ್ಥಾಪಿಸಿ ಪ್ರತಿ ಆದಿತ್ಯವಾರವಲ್ಲಿಯೂ ಸಭೆ ಕೂಡಿ, ಎಲ್ಲಾ ಕ್ಲಾರ್ಕರುಗಳಿಗೂ ಮತ್ತು ಇತರ ಕೀಳು ತರಗತಿಯ ಸರಕಾರಿ ನೌಕರರಿಗೂ, ಸಹಾಯವಾಗುವಂತಹ ರೀತಿ ನೀತಿಗಳನ್ನೂ, ಚರ್ಚಿಸಿ, ಈಗಿನ ಜೀನಸುಗಳ, ಅತಿರೇಕ ಧಾರಣೆಗಳ ಪ್ರಯುಕ್ತವಾಗಿ, ತಮ್ಮ ಸಂಬಳವನ್ನೂ ಸೀಳಡಾ, ನೂರರಂತೆ, ಹೆಚ್ಚಿಸಬೇಕಾಗಿಯೂ, ಮತ್ತು ವರ್ಷಂಪ್ರತಿ ಬಡ್ತಿ, ವಗೈರೆಗಳನ್ನು ನಿಯಮಿಸಬೇಕಾಗಿಯೂ, ಈ ಮುಂಚೆ ಒಂದೆರಡು ಸಲ ಮದ್ರಾಸು ಗವರ್ನಮೆಂಟಿನವರಿಗೆ ತಂತಿ ಮೂಲಕ ಪ್ರತಿಭಟಿಸಿರುತ್ತಾರೆ — ಅದಲ್ಲದೆ ಇನ್ನೂ ವಿಶ್ಯಾಲದ ಸೌಕರ್ಯಗಳಿಗಾಗಿಯೂ ತಮ್ಮ ಹಿತಕ್ಕಾಗಿಯೂ, ಅಗತ್ಯವಿರುವ ಸಂಗತಿಗಳನ್ನು ಚರ್ಚಿಸುವುದಕ್ಕಾಗಿ ಇನ್ನು ಅನೇಕ ಸಲ ಸಭೆ ಕೂಡುವರೆಂದು ಗೊತ್ತು ಮಾಡಿರುತ್ತಾರೆ ಆದರೆ ಈ ಸಮಾಜದವರು ಇಲ್ಲಿಯ ಇತರ ಸಮಾಜದ ವರಂತೆ ಮಾಡದೆ ಈ ವಿಷಯದಲ್ಲಿ ಹೆಚ್ಚು ಲಕ್ಷ್ಯವಿಟ್ಟು ಸಮಾಜವನ್ನು ವೃದ್ಧಿಗೊಳಿಸಿ, ಸಮಸ್ತರ ಹಿತಕ್ಕೋಸ್ಕರ, ಅವಶ್ಯವಿರುವ ಸುಧಾರಣೆಗಳನ್ನು ಒದಗಿಸುವರಾಗಿ ನಂಬುತ್ತೇವೆ ಈ ಎಸೋಸಿಯೇಶನಿಗೆ, ಮುನ್ಸಿಫ್ ಕೋರ್ಟು ಹೆಡ್ ಕ್ಲಾರ್ಕರಾದ, ಮ| ರಾ| ರಾ| ಲೋಬೋರವರನ್ನು ಪ್ರೆಸಿಡೆಂಟರಾಗಿಯೂ, ಕಾಸರಗೋಡು ಕಸ್ಬಮ್ಮ ಕಲೆಕ್ಟರರವರಾದ ಮ| ರಾ| ರಾ| ಬಳ್ಳಂಜೆ ಸುಬ್ಬರಾವರನ್ನು ವೈಸ್ ಪ್ರೆಸಿಡೆಂಟರವರಾಗಿಯೂ, ತಾಲೂಕು ಕಚೇರಿಯ ಆಕ್ಟಿಂಗ್ ಹೆಡ್ ಕ್ಲಾರ್ಕರಾದ, ಮ| ರಾ| ರಾ| ಕೆ ಬಿ ವಿಟ್ಠಲರಾವರನ್ನು ಸೆಕ್ರೆಟರಿಗಳಾಗಿಯೂ, ಮತ್ತು, ಕಾಸರಗೋಡು ಸಬ್ ರಿಜಿಸ್ಟ್ರಾರವರ ಆಫೀಸಿನ IIನೇ ಕ್ಲಾರ್ಕ, ಮ| ರಾ| ರಾ| ಬಿ ವೆಂಕಟ್ರಮಣಯ್ಯರವರನ್ನು ಟ್ರೆಜರರ್ ಗಳಾಗಿಯೂ, ನೇಮಿಸಿದುದಕ್ಕಾಗಿ ಬಹಳ ಸಂತೋಷಪಡುತ್ತೇವೆ

ಕಳೆದ ವಾರದ ತನಕ ಇಲ್ಲಿಯೇ ಇದ್ದು ಶ್ರೀಮಲ್ಲಿಕಾರ್ಜುನ ದೇವಸ್ಥಾನದ ಬಳಿಯಲ್ಲಿ ಹಾಕಿದ ಡೇರೆಯಲ್ಲಿ ತಮ್ಮ ಚಲೋ ಕಸ್ರತ್ ಆಟಗಳನ್ನು ಪ್ರದರ್ಶಿಸುತ್ತಿದ್ದ ಪ್ರೊಫೆಸರ್ ಶೇಷಪ್ಪನವರ, ಡಿ. ನ್ಯೂ ಕೆನರಾ ಸರ್ಕಸಿನವರು, ಇಲ್ಲಿಂದ ಹೊಸದುರ್ಗಕ್ಕೆ ಚಲಿಸಿರುತ್ತಾರೆ. ಇವರ, ಮ, ಇವರೊಡನಿರುವ ಮಕ್ಕಳದ ಕಸ್ರತ್ ದಾರರ ಅತಿಶಯವಾದ ಶಕ್ತಿ ಮತ್ತು ಯುಕ್ತಿ ಪ್ರಯುಕ್ತವಾದ ಸಾಹಸಗಳಿಗೆ ಮೆಚ್ಚಿ ಇಲ್ಲಿಯ ಕೆಲವು ಮಹಾ ಗ್ರಹಸ್ಥರೂ ಇನ್ನೂ ಮಕ್ಕಳಿದ ಸಾಮಾನ್ಯರೂ ಕೂಡಿ, ಇಲ್ಲಿಯ ತಮ್ಮ ಚಿರಸ್ಮರಣಾರ್ಥವಾಗೀ ಮೆಡಲುಗಳನ್ನೂ, ಶೇಷಪ್ಪನವರಿಗೂ ಇತರ ಕಸ್ರತಿನವರಿಗೂ ಪಾರಿತೋಷಕವಾಗಿ ಕೊಟ್ಟಿರುತ್ತಾರೆ

ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ವರ್ಷಂಪ್ರತಿ ನೆರವೇರುವ ಜಾತ್ರೆಯು ಈ ವರ್ಷವೂ ಇದೇ ಮಾರ್ಚಿ ತಾ ೧೮ನೆಯ ಗುರುವಾರ, ಪ್ರಾರಂಭಿಸಿ ಇದೇ ತಾ. ... ಬೆಂದ್ರವಾರ ... ಯೋಗ್ಯವಾಗಿ ಬಹು ವಿಜೃಂಭಣೆಯಿಂದ ಮುಗಿಯಿತು

[illegible]

... — ... ಆಸ್ಪತ್ರೆಯ ... ಬೋರ್ಡು ಹ್ಯಾಯರ್ ಎಲಿಮೆಂಟರಿ ಶಾಲೆ ... ಮಕ್ಕಳ ... ಬಹು ಸಂತೋಷಪಟ್ಟವರಾಗಿ ...

ತಾ. ೨೭—೩—೧೯೨೦ರಲ್ಲಿ ಇಲ್ಲಿಯ ಹ್ಯಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಪಾಧ್ಯಾಯರ ಕೂಟ ಮತ್ತು, ಹಾಜರಿ ನಡೆದ ವಿಷಯ ಗಳನ್ನು ಹೇಳುವರೆ ಬಲು ನಗೆಗೇಡು. ಮೇಲಾಫೀಸರರಿಲ್ಲದೆ ಇದೇ ರೀತಿ ೪ ೫ ಕೂಟಗಳು ನಡೆದವೆ— ಈ ರೀತಿಯ ಕೂಟದ ಲಾಭವ್ಯಾರಿಗೋ? ಮೇಲಾಫೀಸರಿಲ್ಲದೆ ಕೂಟ ನಡಿಸುವುದು ಯೋಗ್ಯವೋ? ಇವನ್ನೆಲ್ಲಾ ಕೇಳುವವರು ಯಾರು? ನೋಡುವವರು ಯಾರು?

ಇಲ್ಲಿಯ ಪೇಟೆಯಲ್ಲಿ ಅನೇಕ ಅಕ್ರಮಗಳು ಇವೆಯಾಗಿ ಕೇಳುತ್ತೇನೆ ಸಂಬಂಧಪಟ್ಟವರು ಈ ವಿಷಯ ಬೇಗ ತಕ್ಕೊಳ್ಳುವುದು ವಿಹಿತವಾಗಿದೆ

ಬಾಲುಪೂಜಾರಿ ಎಂಬವನ ಮನೆಯಿಂದ ಸುಮಾರು ೧೫೦ ರೂಪಾಯಿಗಳ ವಸ್ತುಗಳು ಕಳವು ಆಗಿವೆಯಾಗಿ ಕೇಳುತ್ತೇನೆ ಈ ಊರಲ್ಲಿ ಪೋಲೀಸಿನವರು ಆಗಾಗ್ಗೆ ಬಂದು ವಿಚಾರಿಸುವುದು ಮುಖ್ಯವಾದದ್ದು ಆಗಿದೆ

ಇಲ್ಲಿಯ ಹೊಸ ಮಾರಿಗುಡಿಯ ಅವಸ್ಥೆ ಹಿಂದೆ ಒಮ್ಮೆ ಸೂಚಿಸಿರುತ್ತೇವಷ್ಟೆ ಕಳೆದವಾರ ಸುಗ್ಗಿ ಮಾರಿಪೂಜೆ ಸಾವಿರಾರು ಜನರು ನೆರೆದು ಸಾವಿರಾರು ಕೋಳಿ, ಕುರಿಗಳನ್ನು ಬಲಿಯಾಗಿ ಅರ್ಪಿಸಿರುವರು ಅಂದಿನ ವಾದಿಯರ ಕಡೆಯಿಂದ ರಿಸೀವರರಾಗಿ ಮ| ರಾ| ಭೀಡೆ ಕೇಶಭಟ್ಟರು ಬಿ ಎ ಬಿ ಎಲ್ ಮಂಗಳೂರು ವಕೀಲರು ಬಂದಿದ್ದರು ದೊಂಬಿ ಆಗುವ ಸಂಭವ ಇದೆ ಎಂದ ಪೋಲೀಸು ಇನ್ಸ್‌ಪೆಕ್ಟರರೂ ತಾಲೂಕು ಮೇಜಿಸ್ಟ್ರೇಟರೂ ಬಂದಿದ್ದರು ಒಂದು ಕಡೆ ರಾ| ಸಂಕಪ್ಪ ಸೆಟ್ಟರವರ ರಿಸೀವರತನದ ಬಿಡುಗಡೆ—ಇನ್ನೊಂದು ಕಡೆ ವಾದಿಯರ ಕಡೆಯಿಂದ ರಾ ಸಂಕಪ್ಪ ಸೆಟ್ಟರವರ ಮೇಲೆ ವಾರಾಂಟು— ಅಂತೂ ಇಂತೂ ಹೊಸ ಮಾರಿಗುಡಿಯ ಈ ಅವಸ್ಥೆಯಿಂದ ಹಳೆ ಮಾರಿಗುಡಿಗೆ ಬುಧನ ದೆಶ ಬಂದಂತಾಯಿತು

ಬರುವ ತಿಂಗಳ ತಾ ೧೭ನೇ ದಿನವೇ ಎಲ್ಲೂರಲ್ಲಿ ವರ್ಷಾವಧಿ ನಡೆಯುವ 'ಮಹೋತ್ಸವ' ಅಂದಿನ ಮಧ್ಯಾಹ್ನ ಬ್ರಾಹ್ಮಣರಿಗೆ ಭಾರಿ ಊಟ ೮೦ನೇ ನಮ್ಮೂರ ಬಸ್ತಿಯಲ್ಲಿ ತಾಲೂಕು ಬೋರ್ಡು ಮೆಂಬರರ ಚುನಾವಣೆ. ೩೦೦ ಓಟು ಈ ಓಟಕ್ಕೆ ನಾಲ್ವರು ನಾಲ್ಕು ಜಾತಿಯವರು ಉಮೇದ್ವಾರರು ನಿಂತಿರುವರು ೧ ಮ| ರಾ| ಯರ್ಮಾಳ ಕುಮಾರ ಅರಸು ಮಾರಂ ಹೆಗ್ಗಡೆಯರು ೨ ಮ| ರಾ ಡಕ್ಟರ್ ಯು ರಾಮಚಂದ್ರರಾವ್ ೩ ಮ| ರಾ| ಕಟ್ಟಪಾಡಿ ಶ್ರೀನಿವಾಸನಾಯ್ಕರವರು ೪ ಮ| ರಾ| ಪೊರ್ವಾಡಿ ಮಂಜಯ ಹೆಗ್ಗಡೆಯರ ಇವರೊಳಗೆ ಸ್ಪರ್ಧಾಸ್ಪರ್ಧೆ ಪೋಟಾಪೋಟಿ ನಡೆಯಲು ಪ್ರಾರಂಭಿಸಿದೆ ಇದರಿಂದ ತಾಲೂಕು ಬೋರ್ಡು ಅಂದರೇನು? ವೋಟರರಿಗೂ ಬೋರ್ಡಿನವರಿಗೂ ಇರುವ ಪರಸ್ಪರ ಸಂಬಂಧ, ವೋಟರರ ಕರ್ತವ್ಯ ಇತ್ಯಾದಿ ಸರ್ವರಿಗೂ ತಿಳಿದಂತಾಯಿತು ಇದೇ ಸ್ಪರ್ಧೆಯ ಪ್ರಥಮ ಸೋಪಾನ ಪ್ರತಿ ಒಬ್ಬ ವೋಟರನೂ ತಲೆ ತೂಗಾಡಿಸಲು ಪ್ರಾರಂಭಿಸಿರುತ್ತಾನೆ ನಾಳಿನ ರಣರಂಗದಲ್ಲಿ ಜಯ ಲಕ್ಷ್ಮಿಯನ್ನು ಒಲಿಸಿಕೊಂಡು ಜಯಭೇರಿ ಹೊಡೆಸಿಕೊಂಡು ಯಾರೂ ಹೋಗುವರೋ ಎಂದು ಎಲ್ಲರೂ ಆಲೋಚಿಸುತ್ತಿದ್ದಾರೆ ಆದರೆ ಈ ಸಂದರ್ಭ ಪ್ರತಿ ಒಬ್ಬ ವೋಟರನು ತಾನು ಕೊಡುವ ವೋಟು ಸಾರ್ಥಕಕ್ಕೆ ಬೀಳುವಂತೆ ನೋಡಬೇಕಾದುದು ಮುಖ್ಯ ಕರ್ತವ್ಯವು.

ಕರೋಪಾಡಿ—ಈ ಗ್ರಾಮದ ಸಹಕಾರಿ ಸಂಘದ ಬಾಬತು ಒಂದು ಮಹಾಸಭೆಯು ಇದೇ ಕಳೆದ ತಾ ೧೫ರಲ್ಲು ಮಿತ್ತನಡ್ಕ ಶಾಲೆಯಲ್ಲಿ ಜರಗಿತು ಸಂಘದ ಮೆಂಬರರು ಅರ್ಧಾಂಶಮಟ್ಟಿಗೆ ಹಾಜರಿದ್ದರು ಪುತ್ತೂರು ಸಹಕಾರಿ ಯೂನಿಯನ್ ಸೆಕ್ರೆಟರಿಗಳಾದ ಮ| ರಾ| ಮೊಳಹಳ್ಳಿ ಶಿವರಾಯರು ಸಭೆಗೆ ದಯಮಾಡಿದ್ದರು

ಸಭೆಯಲ್ಲಿ ಕಳೆದ ೧೯೧೮ ೧೯ನೇ ವರ್ಷದ ಆಡಿಟ ರಿಪೋರ್ಟ ಓದಿ ಮಂಜೂರು ಮಾಡಿದ್ದಾಯಿತು ನಂತರ ಚಾಲ್ತಿ ವರ್ಷಕ್ಕೆ ಮೊದಲಿನವರನ್ನೆ ಪಂಚಾಯಿತರನ್ನಾಗಿ ಆರಿಸಲಾಯಿತು

ಈ ಸಂಘವು ಹೊರಗಿನಿಂದ ಸಾಲಪಡೆಕೊಳ್ಳುವ ಮಿತಿ ರೂ ೫೦೦೦ಕ್ಕೆ ಇದ್ದದ್ದನ್ನು ರೂ ೮೦೦೦ಕ್ಕೆ ಏರಿಸಲಾಯಿತು ಬಂದ ವರ್ಷಕ್ಕೆ ಬೇಕಾದ ಸಾಲವ ಏತಿ ಮೆಂಬರರಿಂದ ಒಂದು ಪಟ್ಟಿ ಕೂಡಲೆ ತರಿಕೊಳ್ಳುವಂತೆ ನಿರ್ಣಯ ಮಾಡಲಾಯಿತು

ನಂತರ ಕಳೆದ ಮಳೆಗಾಲದ ಬರಗಾಲದ ಸಂಬಂಧ ತರಿಸಿದ ರಂಗೂನು ಅಕ್ಕಿಯಲ್ಲಿ ಉಂಟಾದ ನಷ್ಟದ ಕುರಿತು ಸಭೆ ಮುಂದೆ ಇಡಲಾಗಿ ಅಧ್ಯಕ್ಷರಿಂದ ರಾ| ವೇ| ಮುಗಳಿ ರಾಮಕೃಷ್ಣ ಭಟ್ಟರು ಒಪ್ಪಿಕೊಂಡು ಸಂಘಕ್ಕೆ ಇದ್ದ ನಷ್ಟ ಭರ್ತಿಮಾಡಿದ್ದಾಯಿತು ನಂತರ ಈ ವರೆಗೆ ನಡಿಸಿದ ವ್ಯವಹಾರ ಸರಿಯಾಗಿದ್ದಂತೆ ರಾ| ಶಿವರಾಯರು ಸಭೆಯ ಮುಂದೆ ವಿವರಿಸಿ ಹೇಳಿ, ಇನ್ನುಮುಂದೆ ನಡಿಸಬೇಕಾದ ಸಹಕಾರಿ ತತ್ವಗಳನ್ನು ಸಭೆಯವರಿಗೆ ಹೇಳಿದ್ದಲ್ಲಿ ಸಭೆ ಮುಕ್ತಾಯವಾಯಿತು

ಉಡುಪಿ:—ಮಂಗಳೂರಿಗೆ ಮದ್ರಾಸಿನಿಂದ ಮುಂಚಿನ ದಿನ ಸಾಯಂಕಾಲಕ್ಕೆ ಬರುವ ಟಪ್ಪಾಲು ಮಾರಣೆ ದಿನ ಬೆಳಿಗ್ಗೆ ಹೊರಟು ಮಧ್ಯಾಹ್ನ ೨ ಗಂಟೆಗೆ ಇಲ್ಲಿಗೆ ಮುಟ್ಟಿ ಆ ದಿನ ಸಾಯಂಕಾಲದ ಒಳಗೆ ಬಟ್ವಾಡೆಯಾಗುತ್ತದೆ ಈ ಸಂಬಂಧ ವಿಳಂಬವಾಗುವ ಕಾರಣ ಮಂಗಳೂರಿಗೆ ಟಪ್ಪಾಲು ಮುಟ್ಟುತ್ತಲೇ ಅದೇ ರಾತ್ರಿ ಬಿಟ್ಟು ಬೆಳಿಗ್ಗೆ ಮಾರಣೆ ದಿನ ಇಲ್ಲಿ ಸಿಕ್ಕುವ ರೀತಿ, ಅಗತ್ಯವುಳ್ಳ ವಿಲೆವಾರಿ ಮಾಡುವಂತೆ ಪೋಸ್ಟುಮಾಸ್ಟರ ಜನರಲ್ ಮದ್ರಾಸ್ ಇವರಿಗೆ ಈ ಪಟ್ಟಣಿಗರು ಸುಮಾರು ೧ ತಿಂಗಳ ಮುಂಚೆ ಮಾಡಿದ ಅರ್ಜಿಯ ಫಲಿತಾಂಶ ಈ ವರೆಗೂ ತಿಳಿಯಲಿಲ್ಲ. ಬೇಗನೆ ಈ ಹೊಸ ವಿಲೆವಾರಿ ಮಾಡಿದ್ದಾದರೆ ಬಹು ಉಪಕಾರವಾಗುತ್ತಿತ್ತು

ಈ ಪಟ್ಟಣದ ಭಂಡಾರಮೋಣೆಯಲ್ಲಿರುವ ಹಿರಿಯಡ್ಕ ಚಂದುನಾಯಕ್ ಸಾನರ ಮನೆಯಿಂದ ಅಗಸಾಲಿ ವೆಂಕಪ್ಪಾಚಾರಿ ಎಂಬವನು ಅರ್ಧ ಪವನು ಸರವನ್ನು ವೈದು ವಿಶ್ವಾಸಘಾತಕ ಮಾಡಿದ ಕ್ಕಾಗಿ ಕೊಟ್ಟ ಪಿಯಾರ್ಧಿ ತನಿಖಿ ನಡದು ಮುದ್ದಾಯಿಗೆ ೯ ತಿಂಗಳ ಸಜೆ ಮಮ್ಮ ಡಿಪ್ಯುಟಿ ಕಲೆಕ್ಟರರು ಕೊಟ್ಟರು

ಇಲ್ಲಿಯ ಕಾಯಂ ಡಿಪ್ಟಿಕ್ಟ ಮುನ್ಸಿಫರಾದ ರಾಜೇಶ್ರಿ ಮುಂಡ್ಕೂರು ಮಂಜುನಾಥರಾಯರು ದೇಹಾಲಸ್ಯದಗೋಸ್ಕರ ೩ ತಿಂಗಳ ರಜೆಮೇಲಿದ್ದವರೆ ತಾ ೨—೪—'೨೦ರಲ್ಲು ಅಕ್ಟಿಂಗ ಮುನ್ಸೀಫರಾದ ರಾಜೇಶ್ರೀ ಎಮ್ ಆರ್ ಚಂದ್ರರಿಂದ ಚಾರ್ಜ ವಹಿಸಿಕೊಳ್ಳುತ್ತಾರಂತೆ

ನಮ್ಮ ಅಷ್ಟಮಠದ ಶ್ರೀ ಪಾದಂಗಳವರಲ್ಲೊಬ್ಬರಾದ ಸೋದೆ ಶ್ರೀ ಪಾದಂಗಳವರ ಮೇಲೆ ಪೂನೆಯಲ್ಲಿ ಪಂದ್ರ ಸಿವಿಲ್ ವ್ಯಾಜ್ಯ ನಡಿಯುತ್ತಿತ್ತು ಆ ಬಗ್ಗೆ ಶ್ರೀ ಪಾದಂಗಳು ಪೂನೆಗೆ ಸ್ವತಹಾ ಹೋದವರು ಇಲ್ಲಿಗೆ ವಾಪಾಸು ಬಂದು ಮುಟ್ಟಿರುತ್ತಾರೆ ನಂಬ್ರವು ಶ್ರೀಪಾದಂಗಳಿಗೆ ಗುಣವಾಯಿತಂತೆ

ಶ್ರೀ ... ವೆಂಕಟ್ರಾಮ ... ನೋಡಿದರು ...

[illegible]

... ಮತ್ತು ತಾ. ... ೨೦ರಲ್ಲು ಮುಂದಾಗಿ ... ಇದರಿಂದ ಬಾಧಕವಾಯಿತೆಂತಲೂ ವಗೈರೆ ... ನಾರಾಯಣರಾಯರು ವಾದಿರಾಗಿ ... ಆಫೀಸರು ವಗೈರರ ... ತಾ. ... ೨೦ರಲ್ಲು ದಾವೆ ದಾಖಲಾಗಿಯದೆ.

ಪತ್ರವ್ಯವಹಾರ.

ಅಯ್ಯಾ,

ನಮ್ಮ ಬೆಳ್ಮಣ್ಣು ಟಪ್ಪಾಲು ಕಟ್ಟೆಯು ಇನ್ನೂ ಇಲ್ಲಿಯ ರೋಮನ್ ಕೆಥೋಲಿಕ್ ಇಗರ್ಜಿಯ ಕಟ್ಟೋಣದಲ್ಲಿ ಇರುವುದು ತುಂಬಾ ಕೋಚನೀಯವಾದ ಸಂಗತಿಯಾಗಿದೆ. ... ಕಡೆಯ ನೆರೆಕರೆಯ ... ಯಿಂದ ಗಟ್ಟಿಗಳಿಗೆ ಹೋದ ಕೂಲಿಯಾಳುಗಳು, ಇತರರು ಕಳುಹಿಸುವ ಕಾಗದಗಳೂ ಮನಿಯಾರ್ಡರುಗಳನ್ನೂ ... ಟಪ್ಪಾಲ ಕಟ್ಟೆಯಿಂದಲೇ ಬಟವಾಡೆಯಾಗತಕ್ಕವುಗಳು ಹಾ, ಅದೃಷ್ಟ ... ಟಪ್ಪಾಲ ಕಟ್ಟೆಗೆ ಬಟವಾಡೆ ಪೇದೆ ಇಲ್ಲದೆ ಆಗತಕ್ಕ ಸಂಕಷ್ಟಗಳನ್ನು ಏನೆಂದು ವರ್ಣಿಸಲಿ! ಟಪ್ಪಾಲು ಉಪಾಧ್ಯಾಯರಿಗೆ ಪೇದೆ ಕೆಲಸವು ಮಾಡಲು ಸಾಧ್ಯವೇ! ವಾರಕ್ಕೊಂದಾವರ್ತಿ ಇಗರ್ಜಿಗೆ ಹೋಗುವವರ ಕೈಯಲ್ಲಿ ಬಟವಾಡೆ ಒಗ್ಗೆ ಕಾಗದಗಳನ್ನು ಕೊಡುವ ಪದ್ಧತಿ ವಿಳಾಸದಾರರು ಇಂಥವರ ಕೈಗೆ ದುರ್ಗೆ ಸಿಕ್ಕಿದರೂ ಜ್ಞಾಪಕವಿಲ್ಲದೆ, ಹಲವು ಸಾರಿ ಕಸದ ಬುಟ್ಟಿಗಳನ್ನು ಸೇರಿ ಬಿಡುವವು ಎಂತೂ, ವಿಳಾಸದಾರಗೆ ಕಾಗದಗಳು ಸಿಕ್ಕಿದರೆ ಅತನ ಭಾಗ್ಯೋದಯವೆಂತಲೇ ಹೇಳಬೇಕು ಕೆಲವು ಕಾಗದಗಳು ಇಲ್ಲಿಂದ ೧೨ ಮೈಲು ದೂರದಲ್ಲಿರುವ ಪಡುಬಿದ್ರೆ ಟಪ್ಪಾಲಾಫೀಸಿನಿಂದ ಬಟವಾಡೆಯಾಗುವ ಪದ್ಧತಿ ವಾರಕ್ಕೊಂದಾವರ್ತಿ ಪಡುಬಿದ್ರೆಯಿಂದ ಬೆಳಗ್ಗೆ ಹೊರಟ ಪೇದೆಯು ಮಧ್ಯಾಹ್ನದ ಹೊತ್ತಿಗೆ ಗ್ರಾಮವನ್ನು ಸೇರಿ ಒಂದೆರಡು ಕಾಗದಗಳನ್ನು ಬಟವಾಡೆ ಮಾಡಿ ಇತರ ಕಾಗದಗಳನ್ನು ಯಾವದಾದರೂ ಅಂಗಡಿಯಲ್ಲಿ ಇಟ್ಟು ಸಂಜೆಹೊತ್ತಿಗೆ ತನ್ನ ಮನೆಯನ್ನು ಸೇರುವ ಪದ್ಧತಿ ವಾರಕ್ಕೆರಡಾವರ್ತಿ ಪಡುಬಿದ್ರೆಯಿಂದ ಹೊರಟ ಪೇದೆಯು ಈ ರೀತಿಯಲ್ಲಿ ಇಟ್ಟ ಕಾಗದಗಳು ಅನೇಕಾವರ್ತಿ ಚಿಲ್ಲರೆ ಜೀನಸುಗಳನ್ನು ಕಟ್ಟಿ ಕೊಡಲಿಕ್ಕೆ ಉಪಯೋಗಿಸಲ್ಪಡುತ್ತವೆಂದರೆ ಅತಿಶಯೋಕ್ತಿಯಾಗಲಾರದು ಮನಿಯಾರ್ಡರುಗಳು ಬಂದ ಸಂಗತಿ ತಿಳಕೊಂಡು ಪಡುಬಿದ್ರೆಗೆ ಹೋಗಿ ಅವುಗಳನ್ನು ಹಿಂದಕ್ಕೆ ಕಳುಹಿಸಲ್ಪಟ್ಟಿರುತ್ತದಂತಾ ಕೇಳಿ ಕೆಲವು ವೇಳೆ ಕಣ್ಣೀರಿನ ಕೈಯನ್ನಿಟ್ಟು ಹಿಂದಕ್ಕೆ ಬರಬೇಕಾಗಿರುತ್ತದೆ ಇದು ಬಹಳ ಚೋದ್ಯ

ಐದು ಮೈಲುಗಳ ದೂರ ಇರುವ ಬೆಳ್ಮಣ್ಣು ಆಫೀಸಿನಿಂದಾಗಲಿ, ೭ ಮೈಲುಗಳ ದೂರ ಇರುವ ಕಾರ್ಕಳ ಆಫೀಸಿನಿಂದಾಗಲಿ ಬಟವಾಡೆಯಾಗದೆ, ೧೨ ಮೈಲುಗಳ ದೂರ ಇರುವ ಪಡುಬಿದ್ರೆಯಿಂದ ಬಟವಾಡೆಯಾಗುವದೆಂದರೇನು? ಇದು ಯಾವ ನ್ಯಾಯ? ಹಳ್ಳಿಯವರ ದುರಾದೃಷ್ಟವಲ್ಲವೇ?

ಅಯ್ಯಾ, ಮಧ್ಯಸ್ಥಳವಾದ ಈ ಬೆಳ್ಮಣ್ಣು ಆಫೀಸಿನಲ್ಲಿ ಒಬ್ಬ ಪೇದೆ ಇದ್ದ ಪಕ್ಷಕ್ಕೆ ಎಷ್ಟೆಲ್ಲಾ ಸಂಕಷ್ಟಗಳು ನಿವಾರಣೆಯಾಗುತ್ತಿದ್ದವು ಇಲಾಖೆಯವರು ತ್ವರ್ಯದಲ್ಲಿ ಇನ್ನೊಬ್ಬ ಒಬ್ಬ ಪೇದೆಯನ್ನು ಈ ಆಫೀಸಿಗೆ ಕೊಟ್ಟರೆ ತಂಬಾ ಕೃತಜ್ಞರಾಗುವೆವು

ಬೆಳ್ಮಣ್ಣು ಗ್ರಾಮಸ್ಥ

ಪತ್ರಕರ್ತ ಮಹಾಶಯರೇ,

ಆಹಾರ ಜೀನಸುಗಳಿಗೆ ಕ್ರಯವೇರಿ ಬಡ ನೌಕರರ ಸಂಕಷ್ಟ ಹೇಳತೀರದು ಎಲ್ಲಿ ಕೇಳಿದರೂ ಯೂನಿಯನ್, ಎಸೋಸಿಯೇಶನ್, ಕಾನಫರೆನ್ಸ್ ಅಲ್ಪ ವೇತನದ ನೌಕರರ ಲಾಗಾಯಿತು ಹೆಚ್ಚು ವೇತನದ ನೌಕರರು ಸಹಾ ತಮ್ಮ ಕಷ್ಟಗಳನ್ನು ಸರಕಾರದವರಿಗೆ ತಿಳಿಸಿ, ಸಂಬಳದ ದರವನ್ನು ಏರಿಸಬೇಕಾಗಿ ವಿಜ್ಞಾಪಿಸುತ್ತಿರುವರು ಸೆಲೆಕ್ಟಕಮಿಟಿಯವರ ತತ್ಕಾಲಿಕ ಸಂಬಳದ ದರವನ್ನು ಸೂಚಿಸಲ್ಪಟ್ಟ ಒಂದು ರಿಪೋರ್ಟು ಸರಕಾರದವರಿಂದ ಮಂಜೂರುಮಾಡಲ್ಪಟ್ಟಿದೆ ಪೂರ್ಣವಾದ ಸೆಲೆಕ್ಟಕಮಿಟಿ ರಿಪೋರ್ಟು ಈ ತಿಂಗಳ ಅಖೈರಿಗೆ ಸರಕಾರದವರ ಹಸ್ತಗತವಾಗಲಿಕ್ಕಿದೆಯಂತೆ ಸೆಲೆಕ್ಟಕಮಿಟಿಯ ರಿಪೋರ್ಟು ಪ್ರಕಾರ ಕಂಪೌಂಡರರ ತತ್ಕಾಲಿಕ ಸಂಬಳದ ದರ ಪ್ರೆಸಿಡೆನ್ಸಿ ಟೌನಿನಲ್ಲಿ ರೂಪಾಯಿ ೨೫ ಬಾಕಿ ಕಡೆಗಳಲ್ಲಿ ರೂಪಾಯಿ ೨೨ ಇಂತಹ ಭಯಂಕರವಾದ ಕ್ಷಾಮಕಾಲದಲ್ಲಿ ಈ ದರವು ಬರೇ ಅಲ್ಪವೆಂದರೆ ಅತಿಶಯೋಕ್ತಿಯಾಗಲಾರದು ಈ ಅಲ್ಪ ಸಂಬಳದ ದರ ಕೊಡಲಿಕ್ಕೆ ಸಹಾ ನಮ್ಮ ಬೋರ್ಡಿನವರಿಗೆ ಹಣವಿಲ್ಲವಂತೆ ಎಲ್ಲಾ ನೌಕರರಿಗೆ ಯುದ್ಧ ಬತ್ತ ಸೆಂಕ್ಷನ್ ಆದಾಗ ಕಂಪೌಂಡರರಿಗೆ ಮಾತ್ರ ಈ ಭತ್ತ ಕೊಡಲಿಕ್ಕೆ ಹಣವಿಲ್ಲವಾಯಿತು ಈಗ ಸಹಾ ಬೋರ್ಡಿನವರಿಗೆ ಹಣದ ಅಭಾವ. ಮಾರ್ಗ, ಸಂಕ, ಮೊದಲಾದ್ದಕ್ಕಾಗಿ ಸಾವಿರಗಟ್ಟಲೆ ರೂಪಾಯಿ ಖರ್ಚು ಮಾಡುವ ತಾಲೂಕು ಬೋರ್ಡಿನವರಿಗೆ ರಾತ್ರಿ ಹಗಲು ಎನ್ನದೆ ಅಲ್ಪವೇತನದಿಂದ ಆಸ್ಪತ್ರೆಯಲ್ಲಿ ಕೆಲಸಮಾಡುವ ಕಂಪೌಂಡರರಿಗೆ ಮಾತ್ರ ೨ ಯಾ ೩ ರೂಪಾಯಿ ಹೆಚ್ಚಿಗೆ ಕೊಡಲಿಕ್ಕೆ ಹಣವಿಲ್ಲವಂತೆ ಇದೆಂತಹ ಆಶ್ಚರ್ಯ! ಹಣವಿಲ್ಲದಿದ್ದರೆ ಕಂಪೌಂಡರರ ಇನಾಂ ತೆಗೆದು ಅವರನ್ನು ಮನೆಗೆ ಕಳೆ ಹಿಸುವುದು ಲೇಸಲ್ಲವೇ? ಖರ್ಚಿಗೆ ಸಾಕಾಗದೆ ಅಸಮಾಧಾನದಿಂದ, ಸರ್ವಜನರಿಗೆ ಆಶ್ರಯಸ್ಥಾನವಾದ ವೈದ್ಯಾಲಯಗಳಲ್ಲಿ ಇವರು ಕೆಲಸಮಾಡುವುದು ಅಹಿತವಲ್ಲದೆ ಹಿತಕರವೆಂದಿಗೂ ಆಗಲಾರದು ಮೊನ್ನೆ ಇತ್ತಲಾಗೆ ಕಂಪೌಂಡರರೆಲ್ಲರೂ ಕೂಡಿ ಗವರ್ನರ ಧೊರೆಗಳಿಗೆ ಕಳುಹಿಸಿದ ಮೆಮೋರಿಯಲ್‌ನಲ್ಲಿ ತಮ್ಮ ಸಂಬಳವನ್ನು ಏರಿಸುವದಲ್ಲದೆ ತಮ್ಮ ಸರ್ವಿಸನ್ನು ಲೋಕಲ್‌ಫಂಡಿನಿಂದ, ಪ್ರೊವಿನ್ಸಿಯಲ್ ಸರ್ವಿಸಿಗೆ ಸೇರಿಸಬೇಕಾಗಿ ಬೇಡಿಕೊಂಡಿರುವದು ನಿಜವಾಗಿ ಇವರ ಸರ್ವಿಸನ್ನು ಪೆನ್ಶನ್ ಸರ್ವಿಸಿಗೆ ಸೇರಿಸಬೇಕು

ಇಂತಹ ಭಯಂಕರವಾದ ಕ್ಷಾಮಕಾಲದಲ್ಲಿ ಎಲ್ಲಾ ಕಡೆಗಳಲ್ಲಿ ಅದಷ್ಟು ಮಟ್ಟಿಗೆ ಬಡನೌಕರರ ಕಷ್ಟನಿವಾರಣೆಯಾಗುವ ಕಾಲದಲ್ಲಿ ನಮ್ಮ ಜಿಲ್ಲೆಯ ಬೋರ್ಡಿನೊಳಗಣ ಕಂಪೌಂಡರರ ಕಷ್ಟವು ನಿವಾರಣೆಯಾಗದೆ ವೃದ್ಧಿಯಾಗುವುದೆಂದರೇನು?

ಲೋಕಲ್‌ಬೋರ್ಡಿನೊಳಗಣ ಕಂಪೌಂಡರರೆಲ್ಲರೂ ತಮಗಾದ ಈ ಅನ್ಯಾಯವನ್ನು ಬೋರ್ಡಿಗೆ ತಿಳಿಸುವುದು ಲೇಸಲ್ಲವೇ?

ಇನ್ನಾದರೂ ಜನಪ್ರೀತರೂ, ಸಂಚಾರದವರ ಮನ್ನಣೆಗೆ ಪಾತ್ರರೂ ಅದ ತಾಲೂಕುಬೋರ್ಡ ಪ್ರೆಸಿಡೆಂಟರು ತಂತಮ್ಮ ಬೋರ್ಡಿನೊಳಗಣ ಕಂಪೌಂಡರರೆಲ್ಲರಿಗೂ ಸೆಲೆಕ್ಟಕಮಿಟಿಯವರ ಸಂಬಳದ ದರವನ್ನು ಕಳೆದ ಫೆಬ್ರುವರಿ ತಿಂಗಳಿಂದ ಸಿಕ್ಕುವಂತೆ ಅನುಗ್ರಹ ಮಾಡಿದರೆ ಒಳ್ಳೇದಿತ್ತು ಮಾರ್ಗ, ಸಂಕ, ಮೊದಲಾದವುಗಳಿಗೆ ಇಟ್ಟ ಹಣವನ್ನು ತತ್ಕಾಲಕ್ಕೆ ಖರ್ಚಿಗೆ ಸಾಕಾಗದೆ ಪೇಚಾಡುತ್ತಿರುವ ಈ ಬಡ ನೌಕರರಿಗೆ ಕೊಟ್ಟು ರಕ್ಷಿಸುವುದು ಲೇಸೆಂದು ತೋರುವದು

Just arrived! *Just arrived!*

WANTED.

Agents & Canvassers,

To sell our Wanning Tilly

GENUINE HAARLEM OIL.

We have secured the Sole Agency for the whole of British India to import the Genuine Haarlem oil direct from the manufacturers.

BOOK YOUR ORDER.

ONLY LIMITED STOCK JUST ARRIVED!

ಬೇಕು!

ನಾವು ಹೊಲ್ಲೆಂಡ್ ದೇಶದ ಹಾರ್ಲೇಮ್ ಪಟ್ಟಣದಲ್ಲಿ ವೇನಿಗ್ ಟಿಲ್ಲಿ ಬ್ರದರ್ಸ್ ಕಂಪೆನಿಯವರು ತಯಾರಿಸುವ ಲೋಕಪ್ರಸಿದ್ಧವಾದ

ಜೆನ್‌ವಿನ್ ಹಾರ್ಲೇಮ್ ಆಯಿಲ್.

ಎಂಬ ಔಷಧಿಯ ಬ್ರಿಟಿಷ್ ಹಿಂದೂಸ್ಥಾನಕ್ಕೆಲ್ಲಾ ಏಜಂಟರಾಗಿ ನೇಮಿಸಲ್ಪಟ್ಟಿರುತ್ತೇವೆ. ಈ ಔಷಧಿಯ ಕೆಲವು ಸೀಸೆಗಳು ಮಾತ್ರ ನಮಗೆ ಬಂದಿರುವದರಿಂದ ಬೇಗನೇ ನಿಮ್ಮ ಆರ್ಡರುಗಳನ್ನು ಕೊಡಿರಿ! ಎಲ್ಲೆಲ್ಲಿಯೂ ಏಜಂಟರು ಬೇಕು.

ವಿಳಾಸ.—ಎಸ್. ಇ. ಏಮನ್,

ದಿ ಎಕ್ಲಿಪ್ಸ್ ಏಜನ್ಸಿ, ಬಲ್ಮಠ ರಸ್ತೆ,

ಮಂಗಳೂರು

THE ECLIPSE AGENCY.

MANGALORE

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯ ವಿದ್ಯ.

ವೈದ್ಯ ವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧ ಗಳು ತಿಳಿಯುತ್ತವೆ.	ವೈದ್ಯ ವಿದ್ಯ

ವೈದ್ಯ ವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ಇಲ್ಲಿಗೆ ಒಂದು ಸಾರಿ ಬಂದು ನಿಮಗೆ ಬೇಕುಬೇಕಾದ ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೆಯ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ಕೊಂಡುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

ಇದಲ್ಲದೆ ಹೊಸತಾಗಿ! [illegible] ಕ್ಷಯ, [illegible] ಮುಂತಾದ [illegible] ರೋಗಗಳನ್ನು ನಮ್ಮ [illegible] ಸಿದ್ಧಮಾಡಲಾಗಿರುತ್ತದೆ. [illegible]

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರತ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಯಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ಹಚ್ಚಿಕೊಟ್ಟರೆ ಬಹಳ ಉತ್ತಮ.

4 ಔನ್ಸಿನ ಶೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಶ್ರೀಪಾದಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಯಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೋಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ಕ್ರಯ ರೂ. 1—8—0.

ಪ್ರಶ್ನೋತ್ತರ

ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯ [illegible] ಪತ್ರಗಳು ಬರೆಯುವ ವಿಧಾನ, ಕ್ರಯ, [illegible], ಕರಾರು, [illegible] ವಿಧಾನ—[illegible] ಕ್ರಿಮಿನಲ್ [illegible] ವಿಧಾನ—[illegible] ಕ್ರಯ ದಾಖಲೆ 1—8—0.

[90-19] ವಿಳಾಸ:— "ಸವಿನುಡಿ" ಆಫೀಸು,
122, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಶ್ಯು ರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮೆಗ್ನೆಸಿಯ ಫೋಸ್	12 ಸಿಲಿಸಿಯಾ

ಕ್ರಯ

					ರೂ. ಆ. ಪೈ.
ಎರಡು ಡ್ರಾಮಿನ	D	ಸೈಜ್	ಸೀಸೆ	ಒಂದರ	0—3—6
ನಾಲ್ಕು ,,	C	,,	,,	,,	0—6—0
ಒಂದು ಔನ್ಸಿನ	A	,,	,,	,,	0—12—0

ಹನ್ನೆರಡು ಲವಣಗಳ, ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.	10-0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಯಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲಿಕ್ಟ್ರೋ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ವಿದೇಶ ವರ್ತಮಾನ.

ಹಂಟರ್ ಕಮಿಟಿ ರಿಪೋರ್ಟು:—ಈ ರಿಪೋರ್ಟು ಸ್ವಲ್ಪ ಸಮಯದ ಹಿಂದೆ ಪ್ರಕಟವಾಯಿತು; ಆಗ ಅವರು ಪರಿಶೀಲಿಸುತ್ತಾರೆ. ಪಂಜಾಬಿನ ಗಲಭೆಯ ಸಂಬಂಧದಲ್ಲಿ ಜನರ ಅಭಿಪ್ರಾಯವನ್ನು ತಿಳಿಯಬೇಕಾಗಿದೆ.

ಜರ್ಮನಿ—ಕ್ರೈನ ನದಿಯ ಬಳಿಯಿರುವ ಗಣಿಗಳ ಪ್ರದೇಶದಲ್ಲಿ ಮಜೂರರು ಮುಷ್ಕರ ಹೂಡಿದ್ದು, ಧಾಂಧಲೆ ಮಾಡುತ್ತಿದ್ದದ್ದರಿಂದ ಅವರಿಗೆ ಶಿಕ್ಷೆ ಮಾಡುವದಕ್ಕೆ ಸೈನ್ಯ ಕಳುಹಿಸುವದು ಅಗತ್ಯ. ಅದಕ್ಕೆ ಮಿತ್ರಪಕ್ಷದವರು ಸಮ್ಮತಿಸಬೇಕು ಎಂದು ಜರ್ಮನ ಸರಕಾರದವರು ಮಿತ್ರಪಕ್ಷದವರಿಗೆ ತಿಳಿಸಿದರು. ಮುಷ್ಕರವಿರುವಲ್ಲಿ ಸೈನ್ಯ ಕಳುಹಿಸಿದರೆ ತೊಂದರೆ ಉಂಟಾದೀತು ಎಂಬದರಿಂದ ಅಲ್ಲಿ ಸೈನ್ಯ ಕಳುಹಿಸುವದು ಸಂಧಿಶರ್ತಗಳಿಗೆ ವಿರುದ್ಧ. ಒಂದು ವೇಳೆ ಅವಶ್ಯ ಅಗತ್ಯವೆಂದು ಕಂಡರೆ ರೈನ ನದಿಯ ಬಲದಡದಲ್ಲಿ ಫ್ರಾಂಕಫರ್ಟ, ಡಾರ್ಮಸ್ಟಾಟ ಮುಂತಾದ ಸ್ಥಳಗಳಲ್ಲಿ ಮಿತ್ರಪಕ್ಷದ ಸೈನ್ಯವು ಹೋಗಿ ಬೀಡಬಿಟ್ಟಿರಬೇಕು. ಅನಂತರ ಜರ್ಮನ ಸೈನ್ಯವು ಆ ಪ್ರದೇಶಕ್ಕೆ ಹೋಗಬಹುದು ಎಂದು ಮಿತ್ರಪಕ್ಷದವರು ಉತ್ತರಕೊಟ್ಟರು. ಆ ಉತ್ತರ ಬರುವದರಲ್ಲಿ ಜರ್ಮನ ಸರಕಾರವು ಆ ಪ್ರಾಂತಕ್ಕೆ ತನ್ನ ಸೈನ್ಯವನ್ನು ಕಳುಹಿಸಿಬಿಟ್ಟಿದೆ. ಇದರಿಂದ ಫ್ರೆಂಚ ಮತ್ತು ಜರ್ಮನರಿಗೆ ಜಗಳ ಬಂದೀತೆ ಎಂಬ ಸಂದೇಹವಿದೆ.

ಡೆನಮಾರ್ಕ—ಡೆನಮಾರ್ಕದ ಒಂದು ಭಾಗವಿದ್ದು ಕಡೆಗೆ ಜರ್ಮನರು ಬಲಾತ್ಕಾರದಿಂದ ಕಸಿದುಕೊಂಡಿದ್ದ ಶ್ಲೆಸವಿಗ ಎಂಬ ಪ್ರದೇಶದಲ್ಲಿ ಅಲ್ಲಿಯ ಜನರ ಅಭಿಪ್ರಾಯವನ್ನು ತೆಗೆದುಕೊಂಡು ಅದನ್ನು ಜರ್ಮನರ ವಶ ಅಥವಾ ಡೆನಮಾರ್ಕದ ವಶಕ್ಕೆ ಕೊಡಿಸಬಹುದು ಎಂದು ಸಂಧಿಶರಾರಿನಲ್ಲಿ ಶರ್ತವಿತ್ತು. ಆ ಪ್ರಕಾರ ವೋಟು ಸಂಗ್ರಹಿಸುವಾಗ ಶ್ಲೆಸವಿಗದ ದಕ್ಷಿಣಭಾಗದ ಬಹುಮತವು ಜರ್ಮನ ಕಡೆಗೆ ಬೀಳಲಾಯಿತು. ಅದನ್ನು ಅಂಗೀಕರಿಸಿ ಡೆನ್ಮಾರ್ಕದ ಮಂತ್ರಿಕೂಟದವರು ನಿರ್ಣಯ ಮಾಡಿದ್ದಕ್ಕೆ ಸಿಟ್ಟಾಗಿ ಡೆನಮಾರ್ಕದ ರಾಜರು ಆ ಮಂತ್ರಿಕೂಟವನ್ನು ಕೆಲಸದಿಂದ ರಾಜೀನಾಮೆ ಕೊಡುವಂತೆ ಒತ್ತಾಯಪಡಿಸಿದರು. ಇದಕ್ಕಾಗಿ ಜನರು ಸಿಟ್ಟಿಗೆದ್ದು ಈಗ ಅಲ್ಲಿ ರಾಜಶಾಸನ ಬಿಟ್ಟದ್ದರಿಂದ ಕಳವಳವಾದ ಯತ್ನ ನಡೆಯುತ್ತಿದೆ ಎಂದು ತಂತಿವರ್ತಮಾನಗಳು ಇವೆ.

ರುಶ್ಯ—ಬೋಲಶೆವಿಕರ ಅಧಿಕಾರವು ರುಶ್ಯದಲ್ಲಿ ಬಲವಾದ ಹಾಗೂ ಡೆನಿಕಿನ್ ಮುಂತಾದವರು ಮುಖಭಂಗ ಹೊಂದಿದ ಹಾಗೆ ಸವರ್ತಮಾನವಿದೆ.

ಅಮೇರಿಕ—ತುರ್ಕಿಯೊಡನೆ ಸಂಧಿ ವಿಚಾರದಲ್ಲಿ ತಾವು ಕೈ ಹಾಕುವ ದಿಲ್ಲವಾದರೂ ಕೊನ್ಸ್ಟಾಂಟಿನೋಪಲದ ಹೊರ ಪ್ರದೇಶದಲ್ಲಿ ಕೆಲವಂಶ ಗ್ರೀಸರಾಜ್ಯ ಇನ್ನೂ ಕೆಲವಂಶ ರುಮೇನಿಯಕ್ಕೂ ತುರ್ಕಿಯು ಬಿಟ್ಟುಕೊಡಬೇಕು. ಕಪ್ಪು ಸಮುದ್ರದ ಹೆಬ್ಬಾಗಿಲಿಂದ ಯುದ್ಧದ ಹಡಗುಗಳು ಹಿಂದು ಮುಂದೆ ಓಡಾಡಲಿಕ್ಕೆ ಆತಂಕ ವಿರಬಾರದು. ಮೆಸೊಪೊಟೆಮಿಯ ಪೆಲೆಸ್ತೈನ, ಸೈರಿಯಾ ಮುಂತಾದ ಪ್ರದೇಶಗಳ ವಿಚಾರವು ಲೀಗ್ ಒಫ್ ನೇಶನ್ಸ್ ಕೈಯಲ್ಲಿ ಇರಿಸುವದು ಒಳ್ಳೇದು. ಆರ್ಮೇನಿಯಕ್ಕೂ ಅದೇ ರೀತಿಯಲ್ಲಿ ಅದ್ರ ನಿರ್ಣಯದ ಸೂತ್ರಕ್ಕನುಸಾರವಾಗಿ ಲೀಗ್ ಒಫ್ ನೇಶನ್ಸ್ ಅಧಿಕಾರಕ್ಕೆ ಒಳಪಟ್ಟ ಸ್ವಾತಂತ್ರ್ಯ ಕೊಡಬೇಕು ಎಂದು ಅಮೇರಿಕದ ಸರಕಾರದವರು ಮಿತ್ರಪಕ್ಷದವರಿಗೆ ತಿಳಿಸಿದ್ದಾರೆ.

ಮೊದಲನೆಯ ಕರ್ನಾಟಕ ಪರಿಷತ್ತು—ಬರುವ ಮೇ ತಿಂಗಳ ಪ್ರಾರಂಭದಲ್ಲಿ ಕೂಡತಕ್ಕ ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ದಿವಾನ್ ಬಹದ್ದೂರ್ ವಿ. ಪಿ. ಮಾಧವರಾವ್‌ರವರು ಅಂಗೀಕರಿಸುವರು.

ಪ್ರಾಥಮಿಕ ಶಿಕ್ಷಣದ ಬಿಲ್.

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲ್‌ನವರೂ ಅವರ ಅಧ್ಯಕ್ಷರೂ ಮಾಡಿದ ಯಾವುದೊಂದು ಠರಾವನ್ನಾಗಲಿ ಅಥವಾ ಅಂಥಾ ಠರಾವಿನ ಜಾರಿಯನ್ನಾಗಲಿ ಸಭಾಯುಕ್ತ ಗವರ್ನರರು ರದ್ದುಪಡಿಸುವ ಸ್ವಾತಂತ್ರ್ಯ ಅವರಿಗೆ ಇದೆ. ಅವರ ಹಾಗೆ ರದ್ದುಪಡಿಸುವಾಗ ಕೌನ್ಸಿಲಿನ ಅಥವಾ ಅಧ್ಯಕ್ಷರ ಕಾರ್ಯಕ್ಕೆ ಮುಂತಾದವು ಕಾಸಗಿಗೆ ವಿರೋಧವಾಗಿದೆ, ಎಂಬದನ್ನು ತೋರಿಸಿ ಬರಹಮೂಲಕ ಅವರ ಹುಕುಂ ಕೊಡಬೇಕು. ಒಂದೊಂದು ವೇಳೆ ಕೌನ್ಸಿಲಿನವರಾಗಲಿ ಅಧ್ಯಕ್ಷರಾಗಲಿ ಈ ಎಕ್ಟಿನಮೇರೆಗೆ ತಮಗಿದ್ದ ಜವಾಬ್ದಾರಿಯ ಕಡೆಗೆ ಅಲಕ್ಷ್ಯ ತೋರ್ಪಡಿಸಿದರೆ ಅದನ್ನು ಸರಿಪಡಿಸುವದು ಅವರ ಅವಶ್ಯವೆಂದು ಕಂಡರೆ ಕ್ಲುಪ್ತಸಮಯದೊಳಗೆ ಅದನ್ನು ಸರಿಗೊಳಿಸಬೇಕೆಂದು ಹೇಳುವ ಸ್ವಾತಂತ್ರ್ಯ ಸಭಾಯುಕ್ತ ಗವರ್ನರರಿಗೆ ಇದೆ. ಆ ಮಾಯದ ಯೊಳಗೆ ಆ ಕೆಲಸವು ಜಾರಿಯಾಗದ ಇದ್ದರೆ ಅದರ ನಿರ್ವಹಣೆಯ ಬಗ್ಗೆ ಬೇರೆ ವ್ಯಕ್ತಿಯನ್ನು ನೇಮಿಸಿ ಅದಕ್ಕೆ ತಗಲುವ ಖರ್ಚನ್ನು ಕೌನ್ಸಿಲಿನವರ ಮೇಲೆ ಹೊರಿಸುವದಕ್ಕೂ, ಕೌನ್ಸಿಲಿನ ಈ ಎಕ್ಟಿನಂತೆ ಕಾರ್ಯನಿರ್ವಾಹವನ್ನು ಸರಿಯಾಗಿ ಮಾಡದಿದ್ದರೆ ಆ ಎಲ್ಲಾ ಮೆಂಬರರು ರಾಜೀನಾಮೆ ಕೊಟ್ಟು ಹೊಸ ಮೆಂಬರರ ಚುನಾವಣೆ ಆಗಬೇಕೆಂತಲೂ ನಿರ್ಣಯಿಸುವದಕ್ಕೆ ಸಭಾಯುಕ್ತ ಗವರ್ನರರಿಗೆ ಹಕ್ಕು ಇದೆ.

ಡಿಸ್ಟ್ರಿಕ್ಟ ಕೌನ್ಸಿಲಿನ ಕರ್ತವ್ಯಗಳು—ತನ್ನ ಸರಹದ್ದಿನೊಳಗಿರುವ ಶಾಲೆಗಳ ಸಂಖ್ಯೆ, ಹೆಸರು, ಸ್ಥಳ, ಅವುಗಳಲ್ಲಿರುವ ಕ್ಲಾಸುಗಳನ್ನು ತೋರಿಸುವ ಪಟ್ಟಿಯನ್ನು ತಯಾರಿಸಿ ಇಡತಕ್ಕದ್ದು. ಎಷ್ಟರಮಟ್ಟಿಗೆ ವಿದ್ಯಾಪ್ರಚಾರ ಹಬ್ಬಿ ಇದೆ, ಇನ್ನು ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಅವಕಾಶ ಇದೆ, ಎಲ್ಲೆಲ್ಲಿ ಹೊಸ ಶಾಲೆಗಳನ್ನು ಸ್ಥಾಪಿಸಬಹುದು ಎಂಬುದನ್ನು ಗೊತ್ತುಹಚ್ಚುವದು, ಪ್ರತಿಯೊಂದು ತಾಲೂಕು ಬೋರ್ಡು ಅಥವಾ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಶಾಲೆಗಳನ್ನು ಎಲ್ಲೆಲ್ಲಿ ಸ್ಥಾಪಿಸಬೇಕೆಂದು ನಿರ್ಣಯಿಸುವದು, ದ್ರವ್ಯಾನುಕೂಲತೆ ಸಿಕ್ಕಿದ ಹಾಗೆ ಈ ಶಾಲೆಗಳನ್ನು ಸ್ಥಾಪಿಸುವದು ಮತ್ತು ಇದ್ದ ಶಾಲೆಗಳಲ್ಲಿ ಕ್ಲಾಸುಗಳನ್ನು ಹೆಚ್ಚಿಸುವದು, ಖಾಸಗಿ ಶಾಲೆಗಳಿಗೆ ಮಂಜೂರು ಮಾಡುವದು. ಅವುಗಳ ಮನವಿ ಅರ್ಜಿಗಳನ್ನು ಅಂಗೀಕರಿಸಿ ಗ್ರೆಂಟನ್ನು ನಿರ್ಣಯಿಸುವದು, ಡಿರೆಕ್ಟರರು ತಮ್ಮ ಕೌನ್ಸಿಲಿಗೆ ಒಪ್ಪಿಸಿಕೊಟ್ಟ ಹಣದಿಂದ ಈ ಗ್ರೆಂಟನ್ನು ಆಯಾ ಶಾಲೆಗೆ ಹಂಚುವದು, ಪ್ರಾಥಮಿಕ ಶಾಲೆಗಳ ಉಪಾಧ್ಯಾಯರನ್ನು ತರಬೇತುಮಾಡುವ ಶಾಲೆಗಳ ಪಟ್ಟಿಯನ್ನು ತಯಾರಿಸುವದು. ತನ್ನ ಸರಹದ್ದಿನೊಳಗೆ ಇರುವ ತರಬೇತಾದ ಉಪಾಧ್ಯಾಯರ ಸಂಖ್ಯೆ, ಹೆಸರು ಮತ್ತು ಯೋಗ್ಯತೆಯನ್ನು ತೋರಿಸುವ ಪಟ್ಟಿಯನ್ನು ತಯಾರಿಸುವದು; ತರಬೇತಾದವರ ಸಂಖ್ಯೆ ಏರಿಸುವದಕ್ಕೆ ಏನು ಮಾಡಬಹುದು ಎಂದು ಸೂಚಿಸಿ ಡಿರೆಕ್ಟರ್ ಸಾಹೇಬರಿಗೆ ಬರೆಯುವದು. ಹೀಗೆ ಪ್ರಾಥಮಿಕ ಶಿಕ್ಷಣ ಪ್ರಚಾರದಲ್ಲಿ ಈ ಕೌನ್ಸಿಲು ಡಿರೆಕ್ಟರ ಸಾಹೇಬರ ಕಚ್ಚು ಎಂಬಂತಿರಬೇಕು.

ಈ ಕೌನ್ಸಿಲಿನ ವಿಷಯವಾಗಿ ಈ ವರೆಗೆ ಹೇಳಿದ ಉಪನಿಬಂಧನೆಗಳ ಸಾರಾಂಶದಿಂದ ಈ ಕೌನ್ಸಿಲು ಪ್ರಾಥಮಿಕ ಶಿಕ್ಷಣ ಪ್ರಚಾರದ ಮಟ್ಟಿಗೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು, ತಾಲೂಕುಬೋರ್ಡು, ಮ್ಯುನಿಸಿಪಾಲಿಟಿ ಮತ್ತು ಖಾಸಗಿ ಶಾಲೆಗಳಿಗೆ ಈಗ ಡಿರೆಕ್ಟರರು ಹಂಚುವ ಗ್ರೆಂಟನ್ನು ತಾನು ಹಂಚುವದಕ್ಕೆ ವಹಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಡಿರೆಕ್ಟರರು ಅಥವಾ ಇಂಸ್ಪೆಕ್ಟರ ಪ್ರಾಥಮಿಕ ಶಿಕ್ಷಣ ಜವಾಬ್ದಾರಿಯನ್ನು ವಹಿಸಿ, ಆಯಾಯ ಇನ್ಸ್‌ಪೆಕ್ಟಿಂಗ್ ಆಫೀಸರುಗಳ ಮೂಲಕ ಅವರ ಕಾರ್ಯಕ್ರಮವನ್ನು ನಡಿಸುವ ಬದಲಾಗಿ ಜನತೆಯ ಪ್ರತಿನಿಧಿಗಳೂ ಇಲಾಖಾ ಅಧಿಕಾರಿಗಳೂ ಕೂಡಿದ ಒಂದು ಸಭೆಯು ಒಂದು ಹಕ್ಕ ನ್ಯಾಯವಾಗಿ

[redacted] ಈ ಅಧಿಕಾರವು ಈಗ ಈ ಇಲಾಖೆಯ ಡಿರೆಕ್ಟರ ಅವರಲ್ಲಿ ಇದ್ದು ಬೋರ್ಡುಗಳು ಈ ವರೆಗೆ ವಹಿಸಿಕೊಂಡಿದ್ದ ಈ ವಿಚಾರವನ್ನು ಈ ಕೌನ್ಸಿಲುಗಳು ವಹಿಸುವದು ಅಗತ್ಯವೇ, ಆ ಕೆಲಸವನ್ನು ತಾಲೂಕು ಬೋರ್ಡುಗಳು ಅಥವಾ ಅವುಗಳ ಮೇಲಣ ಡಿಸ್ಟ್ರಿಕ್ಟ್‌ಬೋರ್ಡು ವಹಿಸಬಾರದೇ ಎಂಬ ಪ್ರಶ್ನೆಯು ಹುಟ್ಟಬಹುದು. ಈ ಬೋರ್ಡುಗಳು ವಿದ್ಯಾಪ್ರಚಾರ ಮಾತ್ರವೇ ಅಲ್ಲ ಇತರ ವಿಚಾರಗಳನ್ನೂ ವಹಿಸಿಕೊಂಡಿವೆ. ಹೊಸ ಎಕ್ಟಿನ ಮೇರೆಗೆ ಇವರಲ್ಲಿ ದರ್ಗದಾರ ಮಂದಿ ಪ್ರತಿನಿಧಿಗಳೇ ಹೆಚ್ಚು ಆಗುವರು. ಇವರು ಪರ್ಗದಾರರಲ್ಲದ ಬಡಕೃಷಿಕರ ಹಿತಾಕಾಂಕ್ಷಿತ ಜನರ ಪ್ರತಿನಿಧಿಗಳು ಎಂದು ಹೇಳಲು ಬರುವದಿಲ್ಲ. ಮತ್ತು ವಿದ್ಯಾಪ್ರಚಾರ ಜವಾಬ್ದಾರಿಯನ್ನು ವಹಿಸುವಷ್ಟು ಪ್ರಜ್ಞಾತಿ ಇಲ್ಲ. ಯಾವ ಇಲಾಖೆಯು ಕೆಲಸವು ಹಕ್ಕಿನ ಸಲ್ಲಿಯಲ್ಲಿ ಸರಿಗವಾಗಿ ನಡೆಯಬೇಕಾದರೆ ಜನತೆಗೆ ವಿದ್ಯಾಬಲವು ಸಿಗಬೇಕು. ಅದನ್ನು ನಿರ್ವಹಿಸುವ ರೀತಿಯಲ್ಲಿ ಕೊಡದಿದ್ದರೆ ಹೇರಳ ಹಣವು ದುರ್ವ್ಯಯವಾದಂತಾಗುವದು. ಈ ತಾಲೂಕುಬೋರ್ಡುಗಳ ಮತ್ತು ಖಾಸಗಿ ಶಿಕ್ಷಣ ಅಥವಾ ಉಪಾಧ್ಯಾಯರೇ ಮನೇಜರರಾಗಿರುವ ಶಾಲೆಗಳೊಳಗೆ ವಿವಾದ ಎದ್ದರೆ ಅದನ್ನು ತೀರ್ಮಾನಿಸುವ ಭಾರವು ಜನತೆಯ ಪ್ರತಿನಿಧಿಗಳ ಮತ್ತು ವಿದ್ಯಾಪ್ರಚಾರದವರ ಕೈಯಲ್ಲಿರುವದು ಒಳ್ಳೇದು. ಇದಲ್ಲದೆ ಬೋರ್ಡುಗಳಲ್ಲಿ ಖಾಸಗಿ ಶಾಲೆಗಳ ಪ್ರತಿನಿಧಿಗಳು ಇಲ್ಲದ್ದರಿಂದ ಅಂಥಾ ಬೋರ್ಡುಗಳ ತೀರ್ಮಾನವು ಖಾಸಗಿ ಶಾಲೆಗಳಿಗೆ ಬಾಧಕಕರವೂ ಪಕ್ಷಪಾತವೂ ಇರಬಹುದು. ಆಗ ಇನ್ಸ್‌ಪೆಕ್ಟಿಂಗ್ ಆಫೀಸರುಗಳು ಒಂದು ಕಡೆ ಕಡಲು, ಇನ್ನೊಂದು ಕಡೆ ಹೊಳೆ ಇವುಗಳ ಮಧ್ಯೆ ಸಿಕ್ಕಿದ ಹಾಗಾಗುತ್ತಾರೆ. ಆಗ ಜನತೆಯ ಪ್ರತಿನಿಧಿಗಳೇ ಅಂಥ ವಿವಾದವನ್ನು ನಿರ್ಣಯಿಸುವದು ಎಷ್ಟೋ ಸಲ ನ್ಯಾಯ ಸಮ್ಮತವಾದೀತು.

(ಮುಂದುವರಿಸಲಾಗುವದು)

ಮದ್ರಾಸು ನ್ಯಾಯವಿಧಾಯಕ ಸಭೆ.

ಕಳೆದ ಮಾರ್ಚ ೨೯ನೆ ತಾರೀಕಿಗೆ ಈ ಸಭೆಯ ಅಧಿವೇಶನದಲ್ಲಿ ೧೯೧೯-೨೦ ನೆ ವರ್ಷದ ಜಮಾ ಖರ್ಚು, ಮತ್ತು ೧೯೨೦-೨೧ನೆ ವರ್ಷದ ಜಮಾಖರ್ಚಿನ ಅಂದಾಜುಪಟ್ಟಿಯನ್ನು ಸಭೆಯ ಮಂಜೂರಾತಿಯ ಬಗ್ಗೆ ಇಡುವಾಗ, ನಾಮದಾರ ಟೊಡ್ಹಂಟರ್ ಸಾಹೇಬರು ಖರ್ಚಿನ ವಹಿವಾಟಿನಲ್ಲಿ ಸರಕಾರ ಶಿಬಂದಿಯ ತಲಬುಗಳನ್ನು ಏರಿಸುವದನ್ನು ಕುರಿತು ಚೆನ್ನಾಗಿ ವಿವರಿಸಿದ್ದಾರೆ. ಈ ಮೊದಲು ಪ್ರಕಟಿಸಿದ ಪಟ್ಟಿಯ ಮೇರೆಗೆ ಹಿಂದಿನ ಶಿಲಕು ೨೦೬ ಲಕ್ಷ ೫ ಸಾವಿರ ರೂಪಾಯಿ ಮತ್ತು ೧೯೨೦-೨೧ಕ್ಕೆ ಜಮಾ ಆಗಬಹುದಾದ ೯೬೪ ಲಕ್ಷ ೬೭ ಸಾವಿರ ರೂಪಾಯಿ ಕೂಡಾ ೧೧೭೦ ಲಕ್ಷ ೭೨ ಸಾವಿರ ರೂಪಾಯಿಯ ಪೈಕಿ ಅಂದಾಜು ಖರ್ಚು ೧೦೮೯ ಲಕ್ಷ ೯ ಸಾವಿರ ಕಳೆದು ವರ್ಷಾಂತ್ಯಕ್ಕೆ ೯೦ ಲಕ್ಷ ೬೩ ಸಾವಿರ ರೂಪಾಯಿ ಉಳಿಯಬೇಕಾಗಿತ್ತು. ಆದರೆ ಅನಂತರ ಗೊತ್ತಾದ ಸಂಖ್ಯಾಮಾನದಿಂದ ಇದನ್ನು ಬದಲಾಯಿಸಬೇಕಾಯಿತು. ಹಿಂದಿನ ಶಿಲಕು ೧೯೫ ಲಕ್ಷ ೧೦ ಸಾವಿರ, ಅಂಥಾ ಜಮಾ ೯೮೩ ಲಕ್ಷ ೮೭ ಸಾವಿರ ರೂಪಾಯಿ ಕೂಡಿ ೧೧೭೮ ಲಕ್ಷ ೯೭ ಸಾವಿರದಲ್ಲಿ ೧೧೩೩ ಲಕ್ಷ ೧೯ ಸಾವಿರ ರೂಪಾಯಿ ಅಂದಾಜು ಖರ್ಚು ಕಳೆದ, ೪೪ ಲಕ್ಷ ೭೮ ಸಾವಿರ ರೂಪಾಯಿ ಮಾತ್ರ ವರ್ಷಾಂತ್ಯಕ್ಕೆ ಉಳಿಯಬಹುದು ಎಂದು ನಾಮದಾರ ಟೊಡ್ಹಂಟರ್ ಸಾಹೇಬರ ಹೇಳಿದರು. ಇದರಿಂದ ಪ್ರಥಮದ ಅಂದಾಜಿಗಿಂತಲೂ ಈಗಿನ ಅಂದಾಜು ಖರ್ಚ ಸುಮಾರು ೪೪ ಲಕ್ಷ ಹೆಚ್ಚಿದೆ ಎಂದ ತೋರುವದು. ಇದರಲ್ಲಿ ಮುಕ್ಕಾಲು ಪಾಲು ಸರಕಾರಿ ನಿಬಂದಿಯ ಸಂಬಳಗಳನ್ನು ಹೆಚ್ಚಿಸುವ ನಿಮಿತ್ತ ವೆಚ್ಚವಾಗಲಿಕ್ಕೆ ಇರುವದರಿಂದ ಈ ವಿಷಯವನ್ನು ಸವಿಸ್ತಾರವಾಗಿ ಅವರು ವಿವರಿಸಿರುವರು. ಸರಕಾರಿ ಹುದ್ದೆದಾರರ ಪೈಕಿ ಪ್ರೊವಿನ್ಶಿಲ್ ಮತ್ತು ಇಂಡಿಯನ್ ಸರ್ವಿಸುಗಳ ಸಂಬಳ ದರವನ್ನು ಯುದ್ಧ ಮುಗಿಯುವಷ್ಟರಲ್ಲಿ ಹೆಚ್ಚಿಸಿದರೂ, ಉಳಿದ ಸಂಬಳದಾರರಿಗೆ ಈ ದಿವಸ ಹುಟ್ಟಿದ ಕಷ್ಟನಿವಾರಣೆಗೋಸ್ಕರ ಸಿಗಬೇಕಾದ ಸವಲತ್ತುಗಳು ಸಿಗಲಿಲ್ಲ ಎಂಬ ಜನಾಪವಾದವು ಸರಕಾರದವರ ಮೇಲೆ ಅಲ್ಲಲ್ಲಿ ಕೇಳಿಸುತ್ತಿದೆ, ಇದು ಜನತೆಗೆ ಸರಿಗೆ ಕಾಣುತ್ತದೆ, ಗೊತ್ತಾಗದ್ದರಿಂದ ಉಂಟಾದ ತಪ್ಪು ಗ್ರಹಿಕೆ ಎಂಬ ಅಭಿಪ್ರಾಯವನ್ನು ಸಮರ್ಥಿಸುವದಕ್ಕೆ ನಾಮದಾರ ಟೊಡ್ಹಂಟರ್ ಹೀಗೆಂದರು:—"ಇಂಡಿಯನ್ ವ ಪ್ರೊವಿನ್ಶಲ್ ಸರ್ವಿಸುಗಳ ಸಂಬಳಗಳು ಧಾನ್ಯತುಟ್ಟಿಯ ಕಾರಣ ಏರಿದ ಸಂಬಂಧ ಹೊಂದಿಲ್ಲವಲ್ಲ. ಪಬ್ಲಿಕ್ ಸರ್ವಿಸ ಕಮ್ಮಿಶನದವರು ೧೯೧೩ನೆ ಇಸವಿಯಲ್ಲಿ ನೇಮಿಸಲ್ಪಟ್ಟಾಗ ಯುದ್ಧದ ಸಮಾಚಾರವೇ ಬಂದಿಲ್ಲ, ಆಯಾ ಉದ್ಯೋಗಕ್ಕೆ ಯೋಗ್ಯರಾದ ವ್ಯಕ್ತಿಗಳು ಸೇರಲಿಕ್ಕೂ, ಸೇರಿದವರು ತಮ್ಮ ಕಾರ್ಯನಿರ್ವಾಹವನ್ನು ಅನನ್ಯ ವಾಸ್ಥೆಯಿಂದ ಮಾಡುವದಕ್ಕೂ ಮತ್ತು ಜನತೆಯ ಆಶ್ರಯದಲ್ಲಿರುವ ಉಂಟ ತಂತಾವಾಗುಳ ದಾಸರಾಗದೆ ತಮ್ಮ ಗೌರವವನ್ನು ಕಾಪಾಡಿಕೊಂಡು ಅವರ ಪೋಷಣೆಮಾಡಿಕೊಳ್ಳುವದಕ್ಕೂ ಅನುಕೂಲವಾಗುವ ಸಂಬಳದ ಮಿತಿ ಇಡಬೇಕೆಂಬುದೇ ಈ ಕಮ್ಮಿಶನದ ಉದ್ದೇಶವಾಗಿತ್ತು. ಒಂದಾನೊತ್ತು ಧನಸದ್ದಾರಣೆಯ ಪ್ರಶ್ನೆಯೇ ಆ ಕಾಲದಲ್ಲಿ ಬರಲಿಲ್ಲ. ಸದರಿ ಕಮ್ಮಿಶನದವರು ತಯಾರಿಸಿದ ರಿಪೋರ್ಟು ೧೯೧೫ನೆ ಒಗಸ್ಟ ತಿಂಗಳಲ್ಲಿ ಸರಕಾರದವರಿಗೆ ಕೈ ಸೇರಿದರೂ ೧೯೧೭ನೆ ಇಸವಿಯ ಆರಂಭದವರೆಗೆ ಪ್ರಕಟವಾಗಲಿಲ್ಲ. ಅದರ ಸೂಚನೆಗಳನ್ನು ಜಾರಿಗೆ ತರುವದಕ್ಕೆ ೧೯೧೯ನೆ ವರ್ಷಾಂತ್ಯದವರೆಗೆ ಸಾಧ್ಯವಾಗಲಿಲ್ಲ. ಈ ನಡುವೆ ಪ್ರತಿ ಇಲಾಖೆಯಲ್ಲಿಯೂ ಹೊಸ ಸಿಬಂದಿ ಇಡುವದನ್ನು ಸಿಬಂದಿಯು ಸಂಬಳ ಏರಿಸುವುದು ಮುಂತಾದ ವಿಲೆವಾರಿಗಳ ಕೆಲಸಂಬಂಧಿಯ (ಸರ್ಬಾರ್ಡಿನೇಟ ಸರ್ವಿಸ) ಮಟ್ಟಿಗೆ ನಡೆಯುತ್ತಲೇ ಇತ್ತು. ಇದರಿಂದ ಸಿಬಂದಿಯ ಖರ್ಚು ೧೯೧೦ ೧೧ರಲ್ಲಿ ೫೮೯ ಲಕ್ಷವಿದ್ದದ್ದು ೧೯೨೦-೨೧ರಲ್ಲಿ ೫೪೮ ಲಕ್ಷಕ್ಕೆ ಬಂದು ನಿಂತಿತು. ಇದಲ್ಲದೆ ಮೊತ್ತಮೊದಲು ೩೦ ರೂಪಾಯಿ ವರೆಗಿನ ಸಂಬಳಗಳವರಿಗೂ ಅನಂತರ ೫೦ ರೂಪಾಯಿವರೆಗಿನವರಿಗೂ ವೈ‌ರ್ ಎಲೌಯೆನ್ಸ ವಗೈರೆ ಕೊಡಲಾಗಿತ್ತು. ಹಂಗಾಮಿಯಾಗಿ ಕೊಡುತ್ತಲೆ ಬಂದಿದ್ದರಿಂದ ಈ ಬಗ್ಗೆ ೪೧ ಲಕ್ಷ ರೂಪಾಯಿ ವೆಚ್ಚವಾಗುತ್ತಿದೆ, ಅಂದರೆ ೧೯೧೦-೧೧ನೆ ವರ್ಷದ ಖರ್ಚಿನ ಮೇಲೆ ನೇಕಡಾ ೩೭ರಷ್ಟು ಖರ್ಚು ಹೆಚ್ಚಿತು. ಆದರೆ ಅದೇ ಕಾಲದಲ್ಲಿ ಪಬ್ಲಿಕ ಸರ್ವಿಸ ಕಮ್ಮಿಶನ್ನಿನವರ ಸೂಚನೆ ಮೇರೆಗೆ ಇಂಡಿಯನ್ ಮತ್ತು ಪ್ರೊವಿನಶಲ್ ಸರ್ವಿಸುಗಳ ಸಂಬಳ ಬಿತ್ತಿಯು ಬರೇ ೩೦ ಲಕ್ಷ ಅಥವಾ ನೇಕಡಾ ೫ರಷ್ಟು ಮಾತ್ರ ಹೆಚ್ಚಿದಂತಾಯಿತು. ಅದ್ದರಿಂದ ಕೆಳವರ್ಗದ ಶಕ್ತ ಸಂಕಷ್ಟಗಳನ್ನು ಸರಕಾರದವರು ಗಮನಿಸಲಿಲ್ಲವೆಂದು ಹೇಳುವದು ಅಸಮಂಜಸವಾದೀತು. ಯಾಕೆಂದರೆ ಸೆಲೆಕ್ಟ ಕಮ್ಮಿಟಿಯವರು ಈ ಕೆಳವರ್ಗದವರ ಸಂಬಳದ ವಿಷಯವಾಗಿ ರಿಪೋರ್ಟು ಸರಕಾರಕ್ಕೆ ಸದಾ ಬರುವ ಮುಂಚೆಯೇ ಸರಕಾರದವರು ತಾವಾಗಿಯೇ ಕೆಳವರ್ಗದವರಿಗೆ ಮೇಲು ನೇಕಡಾ ಗಿಂತಲೂ ನೇಕಡಾ ಹೆಚ್ಚಾಗಿ ಹಾಗೂ ತಾತ್ಕಾಲಿಕ ಸಹಾಯವನ್ನು ಮಾಡಿದ್ದಾರೆ.

ಹೀಗೆಂದರೆ ಇನ್ನೂ ಈ ಕೆಳವರ್ಗದವರಿಗೆ ಹೆಚ್ಚಿನ ಸಹಾಯ ದೊರೆತೀತು ಎಂಬ ಸಂದೇಹವು ಹುಟ್ಟಿಕೊಂಡದ್ದರಿಂದ ಅದನ್ನು ಹೋಗಲಾಡಿಸುವದಕ್ಕೆ ನಾಮದಾರ ಟೊಡ್ಹಂಟರ್ ಸಾಹೇಬರು ಈ ವಿಧಾನಗಳನ್ನು ಹೇಳಿದ್ದಾರೆ.

"ಅಂದಾಜುಪಟ್ಟಿಯನ್ನು ೧೯೨೦-೨೧ನೆ ವರ್ಷಕ್ಕೋಸ್ಕರ ತಯಾರಿಸುವ ಸಮಯದಲ್ಲಿ ಸೆಲೆಕ್ಟ ಕಮ್ಮಿಟಿಯು ನೇಮಿಸಲ್ಪಟ್ಟಿದ್ದು ಅದ್ದರಿಂದ ಅದರ ಸೂಚನೆಗಳನ್ನು ಜಾರಿಗೆ ಅವಕಾಶವಿಲ್ಲದ ಸರಕಾರದವರು ತಾವಾಗಿಯೇ ೫೩ ಲಕ್ಷ ರೂಪಾಯಿ ಈ ಬಗ್ಗೆ ಎಂಗಡಿಸಿದರು. ಇದರಲ್ಲಿ ಈ ವರೆಗೆ ಕೊಡುತ್ತ ಬಂದಿರುವ ಭತ್ಯೆಯನ್ನು ಮುಂದುವರಿಸುವದಕ್ಕೆ ಸುಮಾರು ೪೧ ಲಕ್ಷ ರೂಪಾಯಿ ಬೇಕಾಗುತ್ತಿತ್ತು. ಸೆಲೆಕ್ಟ ಕಮ್ಮಿಟಿಯವರ ಪ್ರಥಮ ಸೂಚನೆಯ ಮೇರೆಗೆ ೩೦ ರೂಪಾಯಿಗಿಂತ ಕಡಿಮೆ ಸಂಬಳದ ಗುಮಾಸ್ತರಿಗೂ ಪೇದೆಗಳಿಗೂ ಸಂಬಳದ ದರಗಳನ್ನು ೩೦ ಮತ್ತು ೧೨ ಈ ರೀತಿಯಲ್ಲಿ ಏರಿಸುವದಕ್ಕೆ ೯ ಲಕ್ಷ ರೂಪಾಯಿ ಬೇಕಾಯಿತು. ಪೋಲಿಸ್ ಕೊನಸ್ಟೇಬಲ್ ಮತ್ತು ಹೆಡ್ ಕೊನಸ್ಟೇಬಲರುಗಳಿಗೆ ಮದ್ರಾಸು ಶಹರಿನಲ್ಲಿ ರೂ. ೩-೮-೦ ಮತ್ತು ಇತರ ಕಡೆಗಳಲ್ಲಿ ೩ ರೂಪಾಯಿ ಮೇರೆಗೆ ತಾತ್ಕಾಲಿಕವಾಗಿ ಸಂಬಳವನ್ನು ಹೆಚ್ಚಿಸಬೇಕೆಂದು ಪೋಲಿಸ್ ಇನ್ಸ್‌ಪೆಕ್ಟರ್ ಜನರಲರವರು ಬರೆದುದನ್ನು ಸರಕಾರದವರು ಮಂಜೂರು ಮಾಡಿದ್ದರಿಂದ ಅದಕ್ಕೆ ೧೧ ಲಕ್ಷ ರೂಪಾಯಿ ಬೇಕಾಯಿತು. ಹಾಗಿದ್ದರೆ ೪೧+೯+೧೧ ಅಂದರೆ ೬೧ ಲಕ್ಷ ರೂಪಾಯಿ ಆಗಲೇ ಬೇಕಾದ್ದಲ್ಲಿ ೫೩ ಲಕ್ಷ ಮಾತ್ರ ಪ್ರಥಮ ಅಂದಾಜು ಪಟ್ಟಿಯಲ್ಲಿ ಎಂಗಡಿಸಿದ್ದು ಸಾಕಾಗಲಿಲ್ಲವೆಂದು ತಿಳಿದು ಆದೇ ವರುಷದಲ್ಲಿ ಸೆಲೆಕ್ಟ ಕಮ್ಮಿಟಿಯವರ ರಿಪೋರ್ಟು ಮೇರೆಗೆ ಇನ್ನೂ ಹೆಚ್ಚಿಗೆ ಹಣಬೇಕಾದ್ದರಿಂದ ಪ್ರಾಂತಿಕ ಸರಕಾರದ ಹಿಂದಿನ ಶಿಲಕಿನಿಂದ ೪೩ ಲಕ್ಷ ರೂಪಾಯಿ ಈ ಬಗ್ಗೆ ವಿನಿಯೋಗಿಸುವದಕ್ಕೋಸ್ಕರ ವರಿಷ್ಠ ಸರಕಾರದವರ ಅನುಮತಿಯನ್ನು ಮದ್ರಾಸು ಸರಕಾರದವರು ಪಡೆದರು. ಹೀಗೆ ಈ ಸಂಬಳದ ಬಗ್ಗೆನೆ ಒಟ್ಟಿಗೆ ೫೩+೪೩= ೯೬ ಲಕ್ಷ ರೂಪಾಯಿ ಎಂಗಡಿಸಲಾಗಿ ಹಿಂದೆ ಹೇಳಿದ ವಹಿವಾಟುಗಳಿಗೆ ೬೧ ಲಕ್ಷ ವಿನಿಯೋಗಿಸಿ ೩೫ ಲಕ್ಷ ರೂಪಾಯಿ ಉಳಿಯಿತು. ಆದರೆ ಸೆಲೆಕ್ಟ ಕಮ್ಮಿಟಿಯವರ ಸೂಚನೆಗಳನ್ನು ಸಂಪೂರ್ಣ ಜಾರಿಗೆ ತರುವದಕ್ಕೆ ಇಷ್ಟು ಸಾಲದು ಎಂದು ಗೊತ್ತಾದ್ದರಿಂದ 'ಆಕಸ್ಮಿಕ ಖರ್ಚುಗೋಸ್ಕರ' ಎಂದು ಮಿಸಲಿನಸ್ ಖಾತೆಯಲ್ಲಿ ಎಂಗಡಿಸಿಟ್ಟ ೭ ಲಕ್ಷ ರೂಪಾಯಿಯನ್ನು ಈ ಬಾಬದಲ್ಲಿ ತುಂಬಿಸಲಬಹುದು. ಇದಲ್ಲದೆ ಲೋಕಲ್‌ಬೋರ್ಡುಗಳು ಹೆದ್ದಾರಿಗಳನ್ನು ಸರಿಗೊಳಿಸುವದಕ್ಕೆ ಸಹಾಯಧನವಾಗಿ ಪಡೆಯಲಿಕ್ಕಿರುವ ೧೬ ಲಕ್ಷ ರೂಪಾಯಿಯಲ್ಲಿ ಅವರು ಎಷ್ಟು ವೆಚ್ಚಮಾಡಲಾರರೋ ಅಷ್ಟಕ್ಕೆ ಸರಿಯಾಗಿ ಅವರಿಗೆ ವರ್ಷಾಂತ್ಯದಲ್ಲಿ ಸಹಾಯವಾಡದೆ ಅದು ಮುಂದಿನ ವರ್ಷದ ಖರ್ಚಿಗೆ ಸೇರುವದು. ಆಗ ಈ ೧೬ ಲಕ್ಷ ರೂಪಾಯಿಯನ್ನು ಈಗ ತಲಬುಗಳ ಬಾಬದಲ್ಲಿ ಹಾಕಬಹುದು. ಇದಲ್ಲದೆ ೧೯೨೦-೨೧ರ ಅಂದಾಜು ಪಟ್ಟಿಯಲ್ಲಿ ಯಾವ ಖಾತೆಗೂ ಸೇರದ ೩೫ ಲಕ್ಷ ರೂಪಾಯಿಯನ್ನು ಎಂಗಡಿಸಿಟ್ಟಿದೆ. ಅದನ್ನು ಈ ಸಂಬಳದ ಬಾಬಗೆ ಸೇರಿಸಲು ಸಾಧ್ಯವಿದೆ. ಹೀಗೆಂದರೆ ಮೇಲೆ ಹೇಳಿದ ೯೬+೭+೧೬+೩೫ ಲಕ್ಷ ಅಥವಾ 1¼ ಕೋಟಿಗೆ ಮಿಕ್ಕಿ ಈ ಒಂದು ವಿಚಾರಕ್ಕೋಸ್ಕರವೇ ಹಣದ ಏರ್ಪಾಡು ಇದೆ ಎಂದು ನಾಮದಾರ ಟೊಡ್ಹಂಟರ ಸಾಹೇಬರು ಕೂಲಂಕಷವಾಗಿ ವಿವರಿಸಿದರು.

ಈ ಅಂದಾಜುಪಟ್ಟಿಯನ್ನು ವಿವರಿಸುವಾಗ ಸೆಲೆಕ್ಟ ಕಮ್ಮಿಟಿಯವರ ರಿಪೋರ್ಟು ಹೊರಬಿದ್ದಿರಲಿಲ್ಲ. ಆದರೆ ಈ ಸಲದ ಸಭೆಯ ಅಧಿವೇಶನವು ಮುಗಿಯುವಷ್ಟರಲ್ಲಿ ಆ ರಿಪೋರ್ಟು ಸರಕಾರದವರ ಕೈಸೇರಿ ಆ ವಿಷಯವಾಗಿ ಇದೇ ತಿಂಗಳ ೩ನೇ ತಾರೀಕಿಗೆ ಸರಕಾರದವರು ನ್ಯಾಯವಿಧಾಯಕ ಸಭೆಯ ಮೆಂಬರರೊಡನೆ ಈ ಸಂಬಳಗಳ ಏರ್ಪಾಡನ್ನು ಚರ್ಚಿಸಿದ್ದಾರೆ. ಖಾಸಗಿಯಾಗಿ ಚರ್ಚೆ ನಡೆದದ್ದರಿಂದ ವರ್ತಮಾನ ಪತ್ರಿಕೆಗಳಲ್ಲಿ ಈ ವಿಷಯವು ಪ್ರಕಟವಾಗಲಿಲ್ಲ.

ಈ ಸಂದರ್ಭದಲ್ಲಿ ಗ್ರಾಮ ಉದ್ಯೋಗಸ್ಥರ ಮತ್ತು ಕೊಪಿಸ್ಟ ಇಲಾಖೆಯ ಸಂಬಳಗಳನ್ನ ಕುರಿತು ಬಂದ ಪ್ರಶ್ನೆಗೆ ಉತ್ತರವಾಗಿ ಸರಕಾರವು ಹೀಗೆಂದಿತು.—'ಕೊಪಿಸ್ಟ ಇಲಾಖೆಯ ಸಂಬಳವು ನಕಲು ಶೀಟಿನಿಂದಲೆ ವಸೂಲ ಆಗುವಂಥದ್ದು, ಇವರ ಸಂಬಳ ಹೆಚ್ಚಿಸಬೇಕಾದರೆ ಶೀಟಿನ ದರವನ್ನು ಹೆಚ್ಚಿಸಬೇಕಾಗುತ್ತದೆ. ಈ ವಿಚಾರವು ಸರಕಾರದ ವಿಚಾರದಲ್ಲಿ ಬಾಕಿ ಇದೆ. ಗ್ರಾಮ ಉದ್ಯೋಗಸ್ಥರ ಸಂಬಳದ ದರಗಳನ್ನು ಹೆಚ್ಚಿಸಲಿಕ್ಕೆ ಸೆಲೆಕ್ಟ ಕಮ್ಮಿಟಿಯ ರಿಪೋರ್ಟನ್ನು ಕಾಯ್ದಿರುತ್ತೇವೆ. ಅದರೂ ಆ ಬಗ್ಗೆ ವರ್ಷವೂ ೫೦ ಲಕ್ಷ ರೂಪಾಯಿಗೆ ಕಡಿಮೆಯಾಗಲಾರದು. ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸ್ಥಿತಿಯನ್ನು ಪರ್ಯಾಲೋಚಿಸುವಾಗ 'ಸರಕಾರಿ ಮತ್ತು ಬೋರ್ಡು ಮತ್ತು ಮ್ಯುನ್ಸಿಪಲ್ ಶಾಲೆಗಳ ತರಬೇತಾದ ಉಪಾಧ್ಯಾಯರಿಗೆ ೨೦ ರೂಪಾಯಿಯಂತೆ ಸಂಬಳ ಸಿಗಬೇಕೆಂಬ ಸೂಚನೆಯನ್ನು ಮನ್ನಿಸಿದರೆ ವರ್ಷಕ್ಕೆ ಸುಮಾರು ೩೫ ಲಕ್ಷ ರೂಪಾಯಿ ಬೇಕಾದೀತು. ಆ ಪೈಕಿ ಬರೇ ೩ ಲಕ್ಷ ಮಾತ್ರ ಸರಕಾರದ ಶಾಲೆಗಳ ಮೇಲೆ ಬೀಳುತ್ತದೆ, ಉಳಿದ ೩೨ ಲಕ್ಷ ರೂಪಾಯಿ ತರ ವ ಭಾರವು ಬೋರ್ಡು ಮತ್ತು ಮ್ಯುನ್ಸಿಪಾಲಿಟಿಗಳಿಗೆ ಸೇರುತ್ತದೆ. ಈ ಭಾರವನ್ನು ವಹಿಸಲಿಕ್ಕೆ ಈ ಸಂಸ್ಥೆಗಳು ತಯಾರಾಗಿದ್ದಾವೆಯೆ' ಎಂಬದನ್ನು ಕುರಿತು ಸಭೆಯ ಮೆಂಬರರ ಅಭಿಪ್ರಾಯಬೇಕಾಗಿದೆ. ಈ ೩೫ ಲಕ್ಷ ರೂಪಾಯಿಯಲ್ಲಿ ಇಂಥ ಸಂಸ್ಥೆಗಳಲ್ಲಿ ಕೆಲಸಮಾಡುವ ತರಬೇತಾಗದ ಉಪಾಧ್ಯಾಯರ ಸಂಬಳವು ಸೇರಿಲ್ಲ. ಅವರಿಗೆ ಯಾವ ದರವಿಡಬೇಕು, ಹಾಗೆಯೆ ಖಾಸಗಿ ಶಾಲೆಗಳಿಗೆ ಯಾವ ಬಗೆಯಲ್ಲಿ ಗ್ರೆಂಟನ್ನು ಏರಿಸಬೇಕು ಎಂಬ ವಿಷಯವು ಇನ್ನಷ್ಟು ಗಹನವಾಗಿದೆ ' ಎಂದು ನಾಮದಾರ ಟೊಡ್ಹಂಟರರು ಹೇಳಿದ್ದಾರೆ. ಇವುಗಳ ಇತ್ಯರ್ಥವು ಹೇಗಾದೀತು ಎಂದು ನೋಡಲಿಕ್ಕೆ ಇದೆ.

ದಕ್ಷಿಣ ಕನ್ನಡ.

ಸ್ವೀಕಾರ.

ಉಪ್ಪಿನಂಗಡಿ ತಾಲೂಕಿನ ಪಟೇಲರ ವ ಉಗ್ರಾಣಿಯರ ಪರಿಷತ್ತಿನಲ್ಲಿ ಮಾಡಿದ ಭಾಷಣದ ನಕಲು ನಮಗೆ ತಲ್ಪಿದೆ. ಸ್ಥಳ ಸಂಕೋಚದ ದೆಸೆಯಿಂದ ಪ್ರಕಟಿಸಲಿಲ್ಲ.

ಪತ್ರಕರ್ತ.

ಕಿನ್ನಿ ಕಂಬಳ.—ಕಿನ್ನಿ ಕಂಬಳ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವದ ನಿಮಿತ್ತ ಎಂದಿನಂತೆ ಶ್ರೀ ರಾಮ ನವಮಿಯ ಅದಿತ್ಯವಾರ (ತಾ ೨೮-೩-೨೦) ದಿನ ಮ! ರಾ! ರಾ! ಪಿ ಭವಾನಿರಾವ್ ಅವರ್ಗಳ್, ಯಂ. ಪಿ. ಪಿ ಎಮ್ ಅಸಿಸ್ಟಾಂಟ್ ಸರ್ಜನರವರ ಅಧ್ಯಕ್ಷತೆಯಲ್ಲಿ ಜರಗಿತು. 'ಭಾರತೀಯನ ಗೋಳು' ಎಂಬ ಪದ್ಯವನ್ನು ಹಾಡಿ ಸಭಾ ಕಾರ್ಯವು ಆರಂಭಿಸಿತು. ಐದು ವರುಷದ ಕೋಮಲ ವಾಣಿಯ ಬಾಲಕನೊಬ್ಬನು ಒಂದು ಕಥೆಯನ್ನು ಹೇಳಿ ಸಭಿಕರನ್ನು ಆನಂದ ಗೊಳಿಸಿದನು. ಆ ಮೇಲೆ ಹತ್ತು ವರುಷ ಪ್ರಾಯದೊಳಗಿನ ಮಕ್ಕಳಲ್ಲಿ ಒಬ್ಬನು ಭಾಗವತನಾಗಿಯೂ, ಮತ್ತೊಬ್ಬನು ಮದ್ದಳೆಗಾರನಾಗಿಯೂ, ಇನ್ನೊಬ್ಬನು ಶೃಂಗಾರನಾಗಿಯೂ, ಮಿಕ್ಕವರು ಅರ್ಥದಾರಿಗಳಾಗಿಯೂ, ತಾಳಮದ್ದಳೆ ನಡಿಸಿದರು. ಆ ಮೇಲೆ 'ಕುಂಬಾರನ ಪುಟ್ಟ' ಎಂಬ ನಾಟಕವನ್ನು ಆಡಿ ಸಭಿಕರನ್ನು ತುಷ್ಟಿ ಪಡಿಸಿದರು. ಅಧ್ಯಕ್ಷರು ಹೃದಯಂಗಮವಾದ ಭಾಷಣದಿಂದ ಹೆಡ್ಮಾಸ್ತರು ತನ್ನ ನಿಸ್ವಾರ್ಥ ಪ್ರವರ್ತನೆಯ ಮೂಲಕ ಶಾಲೆಯನ್ನು ನಾಡಾಗಿ ಮಾತ್ರವಲ್ಲ ಚಿಕ್ಕ ನಗರವಾಗಿ ಮಾಡಿದರೆಂದು ಹೇಳಿದರೂ ಅತಿಶಯೋಕ್ತಿಯಾಗದೆಂದೂ, ಇಲ್ಲಿ ಕಲಿಯುವ ವ್ಯವಸಾಯವೇ ಮೊದಲಾದವುಗಳೆಂದಿಗೆ ಚಿಕ್ಕ ವೈದ್ಯಶಾಲೆಯೊಂದನ್ನು ತೆರೆಯುವದು ಯುಕ್ತವೋ ಎಂಬದು ಆಲೋಚಿಸಲ್ಪಡತಕ್ಕ ಪ್ರಮೇಯವೆಂದು ಹೇಳಿದರು. ಸಭೆಯು ಯಥಾಯೋಗ್ಯವಾಗಿ ಕೊನೆಗೊಂಡಿತು. ಶಾಲೆಯ ಹಂಪನ ಕಟ್ಟೆಯು ದಶಾವತಾರ ಮೇಳದವರ ಆಟವು ಬಹು ಯೋಗ್ಯರೀತಿಯಿಂದ ನಡೆಯಿತು. ಸುಮಾರು ಮೂರು ಸಾವಿರ ಮಂದಿಗೆ ಕಡಿಮೆಯಾಗದಷ್ಟು ಪ್ರೇಕ್ಷಕರಿದ್ದರು.

[illegible]
ಮುದ್ರಾಸು [illegible]
[illegible] ಸಂಗತಿಗಳಿಗೆ [illegible]
[illegible] ವಿಚಾರಗಳು
[illegible]
ವರ್ತಮಾನಸಂಗ್ರಹ:—
ಪರದೇಶ ವೃತ್ತಾಂತ [illegible] . . . . . ,,
[illegible] . . . . . ,,
ಮದ್ರಾಸಿನ ನ್ಯಾಯವಿಧಾಯಕ ಸಭೆ . . . . . ,,
ದೇಶೀಯ ಕನಡಿ:—
[illegible], [illegible], ಕದಂಬಾರು, ಸುಳ್ಯ, ಅರಂತೋಡು,
ಕುಂಬಳೆ, ಎಡನಾಡು, ಪುತ್ತೂರು. ೫-೭
ದಕ್ಷಿಣ ಕನ್ನಡ ಜಿಲ್ಲಾ ಕಾನಬೋಗರ ಕಷ್ಟಸಂಕಷ್ಟಗಳು, ... ,,
ಪೀಳಿಯದಲೆಯ ಬಳಿ . . . . . ,,
ಉಪ್ಪಿನಂಗಡಿ ತಾಲೂಕಿನ ತ್ಯಾನಭಾಗರ ಪರಿಷತ್ತಿನಲ್ಲಿ ಶ್ಯಾನಭಾಗರ
ಎಸೋಸಿಯೇಶನಿನ ಕಾರ್ಯದರ್ಶಿಯು ಮಾಡಿದ ಭಾಷಣ . . ೮A.
ಪುತ್ತೂರು ಸೆಕೆಂಡರಿಸ್ಕೂಲ್ ದೀಪಾವಳಿ ಫಂಡಿನ ವರದಿ . . . . ,,
ಪತ್ರವ್ಯವಹಾರ, ಇದೇ ಕರ್ನಾಟಕಕ್ಕೆ ಉಪಯುಕ್ತದ ರೀತಿ ಬಟ್ಟೆಯೋ
ಮಂಗಳೂರೋ ೧, ೨, ... ,,

ಸ್ವದೇಶಾಭಿಮಾನಿ.

ಶಕ ೧೮೪೧ ಚೈತ್ರ ಬ॥ ೬ ಶುಕ್ರವಾರ.

ಸ್ಫುಟವಿಚಾರಗಳು.

೧. ಮದ್ರಾಸು ಪ್ರಾಂತಿಕ ಸರಕಾರದ ಕೈಕೆಳಗಿನ 'ಸಬೋರ್ಡಿನೆಟ ಸರ್ವಿಸ' ಅಂದರೆ ಕೆಳನವುಕರರ ಸಂಬಳದ ದರಗಳನ್ನು ಹೆಚ್ಚಿಸುವುದಕ್ಕೆ ಸೂಚನೆಕೊಡಬೇಕಾಗಿ ನೇಮಕವಷ್ಟ ಕಮ್ಮಿಟಿಯವರು ಈ ತಿಂಗಳ ಪ್ರಾರಂಭದಲ್ಲಿಯೇ ತಮ್ಮ ಸೂಚನೆಗಳನ್ನು ಸರಕಾರದವರ ಮುಂದೆ ಇಟ್ಟಿರುವರು. ಈ ಸೂಚನೆಗಳನ್ನು ಪ್ರಥಮತ ಸರಕಾರದವರು ಪರ್ಯಾಲೋಚಿಸಿ, ಅವುಗಳಲ್ಲಿ ಆಗತ್ಯವೆಂದು ಕಾಣಬಹುದಾದ ಬದಲಾವಣೆಗಳನ್ನು ಸೂಚಿಸಿ, ಇಂಡಿಯಾ ಸರಕಾರದವರಿಗೂ ಅಥವಾ ಸ್ಟೇಟ ಸೆಕ್ರೆಟರಿಗಳಿಗೂ ಬರೆದು ಅವರ ಅನುಮತಿಯನ್ನು ಪಡೆದು ಈ ಕ್ರಮಗಳನ್ನು ಜಾರಿಗೆ ತರಬೇಕಾಗುವುದು. ಆದರೆ ಅವನ್ನು ಪ್ರಾಂತಿಕ ಸರಕಾರದವರು ಕಳೆದ ಶನಿವಾರ ನ್ಯಾಯವಿಧಾಯಕ ಸಭೆಯ ಮೆಂಬರರೊಡನೆ ಖಾಸಗಿಯಿಂದ ಚರ್ಚಿಸಿರುವರು. ಇದರ ಪರಿಣಾಮವು ಏನಾಗಿದೆ, ಮತ್ತು ಈ ಸೂಚನೆಗಳ ಆಧಾರದಿಂದ ಸರಕಾರದವರು ಈ ಕೆಳನವುಕರರಿಗೆ ಯಾವ ಬಗೆಯ ಹಂಗಾಮಿ ಸಹಾಯಗಳನ್ನು ಕೊಡಲಿಕ್ಕೆ ಇದ್ದಾರೆ ಎಂಬದು ಇನ್ನೂ ಗುಪ್ತ ವಿಚಾರದಲ್ಲಿಯೇ ಇದೆ. ಆಫೀಸು ಗುಮಾಸ್ತರಿಗೆ ಸಂಬಳದ ಕನಿಷ್ಠ ಮಿತಿಯನ್ನು ರೂ. ೩೦ಕ್ಕೂ ಪೇದೆಗಳಿಗೆ ರೂ. ೧೨ಕ್ಕೂ ಏರಿಸಿ ಈಗಿನ ಫೋರ್ ಎಲೊವೆನ್ಸ್, ಮುಂಗಾಯಿ ಬತ್ತೆ, ಇವನ್ನು ತೆಗೆದುಹಾಕಬೇಕೆಂಬ ಸೂಚನೆಯು ಇದೇ ಫೆಬ್ರವರಿ ತಿಂಗಳಿಂದಲೇ ಹಂಗಾಮಿಯಾಗಿ ಜಾರಿಗೆ ಬಂದಿದೆ. ಈ ಗುಮಾಸ್ತರಿಗೆ ಸಂಬಳದ ಮಿತಿಯು ೧೫ರಿಂದ ೨೦ಕ್ಕೆ ಏರಿ ಈಗ ಕೆಲವು ವರ್ಷಗಳಾದವು. ಆದರೆ ದವಸದ ತುಟ್ಟಿಯ ನಿಮಿತ್ತ ಆಗಾಗ ಮುಂಗಾಯಿ ಬತ್ತೆ ಅನಂತರ ಯುದ್ಧ ಕಾಲದಲ್ಲಿ ದವಸಗಳು ಪ್ರಿಯವಾದ್ದರಿಂದ ಆ ಕುರಿತು ಬತ್ತೆ, ಇವನ್ನೆಲ್ಲ ಕಳೆದ ವರ್ಷ ಶೇಖರಿಸಿ ರೂ. ೨೦ರಿಂದ ೫೦ರ ವರೆಗೆ ತಲಬುಳ್ಳವರಿಗೆ ಮಾಹೆಯಾನಾ ೬ರಂತೆಯೂ ಕೀಳು ನವುಕರರಿಗೆ ರೂ. ೪ರಂತೆಯೂ ಬತ್ತೆಕೊಡುವುದಾಗಿ ಏರ್ಪಾಡಾಗಿತ್ತು. ಈಗ ಆ ಬತ್ತೆಯ ಬದಲಾಗಿ ಸಂಬಳದ ಮಿತಿಯನ್ನು ಏರಿಸಿ ಮದ್ರಾಸು ಶಹರಿನಲ್ಲಿ ಗುಮಾಸ್ತರಿಗೆ ರೂ. ೩೫ ಪೇದೆಗಳಿಗೆ ರೂ. ೧೫ ಇತರ ಕಡೆಗಳಲ್ಲಿ ರೂ. ೩೦ ಮತ್ತು ರೂ. ೧೨ ಈ ರೀತಿಯಾಗಿ ಸಂಬಳದ ದರಗಳನ್ನು ನಿಶ್ಚಯಿಸಿದ್ದಾರೆ. ಈ ಕ್ರಮಗಳಲ್ಲಿ ಕಡೆಯ ಗುಮಾಸ್ತರಿಗೆ ರೂ. ೪ ಮತ್ತು ಪೇದೆಗಳಿಗೆ ರೂ. ೧ ಮಾತ್ರ ಹೆಚ್ಚಿಗೆ ಸಿಕ್ಕಿದಂತಾಯಿತು. ಈ ವರೆಗೆ ಸರಕಾರದಿಂದ ಪೋಷಾಕು ಸಿಗದ ಪೇದೆಗಳಿಗೆ ವರ್ಷಕ್ಕೆ ೨ ಧೋತ್ರ ಮತ್ತು ಅವರು ಕೆಲಸಮಾಡುವ ಊರಿನ ವಾಯುಗುಣಕ್ಕೆ ಯುಕ್ತವಾದ ೨ ಅಂಗಿಗಳನ್ನೂ ಕೊಡಬೇಕೆಂದು ಸೆಲರಿಕಮಿಟಿಯವರ ಸೂಚನೆ ಇದೆ. ನಾದಿಲವಾರಿನಿಂದ ಸಂಬಳ ಸಿಗುವ ಕೀಳುನವುಕರರಿಗೂ ಪೇದೆಗಳ ದರದಲ್ಲಿಯೇ ಸಂಬಳ ಸಿಗ [illegible] ವಾಗಿ [illegible] ಸ್ವಾತಂತ್ರ್ಯವನ್ನು [illegible] ಗಳನ್ನು ಮಾತ್ರ ಈ ಕಮ್ಮಿಟಿಯವರು ಕೊಟ್ಟಿದ್ದಾರೆ. ವಿಶೇಷ ಪ್ರವೃ ರತೆ ಬೇಕಿಲ್ಲದ ಸಾಮಾನ್ಯ ತರದ ಗುಮಾಸ್ತರಿಗೆ ರೂ. ೩೫ರಿಂದ ವರ್ಷಕ್ಕೊಂದು ರೂಪಾಯಿ ಏರಿಸಿ ೬೫ರ ವರೆಗೆ ಮದ್ರಾಸು ಶಹರಿನಲ್ಲಿಯೂ ೩೦ರಿಂದ ರೂ. ೬೦ರ ವರೆಗೆ ಇತರ ಊರುಗಳಲ್ಲಿಯೂ ಸಿಗಬೇಕೆಂತಲೂ ವಿಶೇಷ ಪ್ರವೃತ್ತಿ ಬೇಕಿರುವ ದೊಡ್ಡ ಆಫೀಸುಗಳಲ್ಲಿ ಅಂದರೆ ರೆವಿನ್ಯೂ ಬೋರ್ಡು, ಸೆಕ್ರೆಟರಿಯಟ್, ಮುಂತಾದ ದೊಡ್ಡ ಆಫೀಸುಗಳಲ್ಲಿ ಆಯಾಯ ತಾರತಮ್ಯದ ಗ್ರೇಡುಗಳನ್ನು ಆಯಾ ಆಫೀಸಿನವರು ಏರ್ಪಡಿಸಬೇಕೆಂತಲೂ ಕಮ್ಮಿಟಿಯವರ ಅಭಿಪ್ರಾಯ. ಆದರೆ ಗುಮಾಸ್ತರಿಂದಲೆ ರೆವಿನ್ಯೂ ಇನ್ಸ್‌ಪೆಕ್ಟರ್, ಡೆಪ್ಯುಟಿ ತಹಸೀಲ್ದಾರ ಮುಂತಾದ ಹುದ್ದೆಗಳಿಗೆ ಬಡ್ತಿ ಸಿಗಲಿಕ್ಕಿರುವ ಸಂದರ್ಭದಲ್ಲಿ ಬರೇ ೩೦ ರೂಪಾಯಿಗೆ ಸಾಮಾನ್ಯವಾಗಿ ಸಿಗುವ ವ್ಯಕ್ತಿಗಳಿಗಿಂತಲೂ ಹೆಚ್ಚಿನ ವಿದ್ಯಾಯೋಗ್ಯತೆಯುಳ್ಳವರು ಸಿಗುವ ಏರ್ಪಾಡು ಇರಬೇಕೆಂದೂ, ಇಂಥವರಿಗೆ ಯೂನಿವರ್ಸಿಟಿಯ ಪರೀಕ್ಷೆಯ ಮುದ್ರೆಯೇ ಇರಬೇಕಿಲ್ಲವಾದರೂ ಸರಕಾರ ನಿಯುಕ್ತ ಒಂದು ಕಮ್ಮಿಶನದವರಿಂದ ನಿರ್ಣಯಿಸಲ್ಪಡುವ ಪರೀಕ್ಷೆಯ ಯೋಗ್ಯತೆಯನ್ನು ಕನಿಷ್ಠ ಮಿತಿಯಾಗಿರಿಸಬೇಕೆಂದು ಕಮ್ಮಿಟಿಯವರು ಹೇಳಿದ್ದಾರೆ. ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಈಗ ೩೫ರಿಂದ ೪೦ರ ವರೆಗೆ ಸಂಬಳದ ದರಗಳಿದ್ದವು. ಇವನ್ನು ರೂ. ೬೦ಕ್ಕೆ ಏರಿಸು ವುದೂ, ಮೆಜಿಸ್ಟ್ರೇಟ ಮತ್ತು ಡಿಪ್ಯುಟಿ ತಹಸಿಲ್ದಾರರಿಗೆ ೧೦೦ ಮತ್ತು ೧೨೫ರ ಗ್ರೇಡುಗಳ ಬದಲಾಗಿ ೧೫೦ ರೂಪಾಯಿ ಸಂಬಳವನ್ನು ಕೊಡುವುದೂ, ತಹಸಿಲ್ದಾರರಿಗೆ ೧೫೦ರಿಂದ ೨೫೦ರ ವರೆಗಿನ ಬೇರೆ ಬೇರೆ ಗ್ರೇಡುಗಳ ಬದಲಾಗಿ ೨೫೦ರ ಒಂದೇ ಗ್ರೇಡನ್ನು ಇಡುವುದೂ, ಈ ಕಮ್ಮಿಟಿಯ ಇತರ ಸೂಚನೆಗಳು. ಡಿಪ್ಯುಟಿಕಲೆಕ್ಟರ ಗ್ರೇಡಿಗೆ ಈ ವರೆಗೆ ೨೫೦ ರೂ. ತಲಬಿನಿಂದ ಪ್ರಾರಂಭ. ಈಗ ಅದನ್ನು ೩೫೦ಕ್ಕೆ ಏರಿಸಬೇಕಾಗಿ ನಿರ್ಣಯಿಸಿರುವುದರಿಂದ ಈಗ ಸೂಚಿಸಿದ ಹೊಸ ಗ್ರೇಡುಗಳಲ್ಲಿ ಸರಕಾರದವರ ಉದಾರ ಹಸ್ತವು ಪ್ರಥಮ ದೃಷ್ಟಿಗೆ ಕಾಣಬಹುದು. ಈ ವಿಷಯವನ್ನು ಸಂಪೂರ್ಣವಾಗಿ ಮುಂದಿನ ಸಂಚಿಕೆಗಳಲ್ಲಿ ಚರ್ಚಿಸುವೆವು.

೨. ಸೆಲರಿ ಕಮ್ಮಿಟಿಯ ರಿಪೋರ್ಟಿನಲ್ಲಿ ಪ್ರಾಥಮಿಕ ಶಾಲೋಪಾಧ್ಯಾಯರ ವಿಷಯವು ಬೇರೆಯಾಗಿ ಚರ್ಚಿಸಲ್ಪಟ್ಟಿದೆ. ಪ್ರಾಥಮಿಕಶಾಲಾ ಉಪಾಧ್ಯಾಯನಿಗೆ ಕನಿಷ್ಠಪಕ್ಷಕ್ಕೆ ರೂಪಾಯಿ ೩೦ ಸಂಬಳ ಸಿಗಬೇಕು, ಹಳ್ಳಿಯಲ್ಲಿ ಅವನು ಶ್ರೀಮಂತರ ಸಗುಮುಖವನ್ನು ಹಾರೈಸುವ ಅಶನಾರ್ಥಿಯಾಗಿರಬಾರದು ಎಂಬದೇ ಈ ದರವನ್ನು ಈ ಕಮ್ಮಿಟಿಯವರು ಸೂಚಿಸಲಿಕ್ಕೆ ಕಾರಣ. ತರಬೇತಾಗಿ ಸಂಪೂರ್ಣ ಯೋಗ್ಯತೆಯುಳ್ಳ ಉಪಾಧ್ಯಾಯನು ಎಂಬದಕ್ಕೆ ಹೈಯರ್ ಎಲಿಮೆಂಟರಿ ಗ್ರೇಡ್ ತರಬೇತಿಯನ್ನು ಹೊಂದಿದವನು ಎಂಬ ಅರ್ಥವನ್ನು ಕಮ್ಮಿಟಿಯವರು ಇಟ್ಟುಕೊಂಡು ಈ ಬಗೆಯ ಸಂಬಳದ ಕನಿಷ್ಠ ಮಿತಿಯನ್ನು ಸೂಚಿಸಿದ್ದಾರೆ. ಈ ದರದಲ್ಲಿ ಸಂಬಳ ಕೊಡಲಿಕ್ಕೆ ದ್ರವ್ಯಾನುಕೂಲವು ತಾಲೂಕುಬೋರ್ಡುಗಳಿಗೆ ಇಲ್ಲವಾದರೆ ಸರಕಾರವು ತಮ್ಮ ಬೊಕ್ಕಸದ ಗಂಟನ್ನು ಬಿಚ್ಚಬೇಕೆಂದೂ ಈಗಿನ ಉಪಾಧ್ಯಾಯರಿಗೆ (ಬೋರ್ಡ ಮತ್ತು ಮ್ಯುನ್ಸಿಪಲ್ ಸಾಲೆಗಳವರಿಗೆ) ತಿಂಗಳಿಗೆ ೬ ರೂಪಾಯಿ ಮೇರೆಗೆ ಯುದ್ಧದ ಬತ್ತೆಯನ್ನೂ ಸರಕಾರದಿಂದ ಹಂಗಾಮಿಯಾಗಿ ಕೊಡಿಸಬೇಕೆಂದೂ ಇವರ ಸೂಚನೆ. ಇದರಲ್ಲಿ ಎರಡು ಅಭಿಪ್ರಾಯಗಳು ಸ್ಪಷ್ಟವಾಗುತ್ತವೆ. ಲೋವರ್ ಎಲಿಮೆಂಟರಿಯವರಿಗೆ ಬರೆ ೬ ರೂಪಾಯಿ ಬತ್ತೆ ಮಾತ್ರ ಸರಕಾರದವರಿಂದ ಈ ಸೂಚನೆ ಮೇರೆಗೆ ಸಿಕ್ಕೀತಲ್ಲದೆ ರೂಪಾಯಿ ೩೦ ಸಿಗುವ ಸುಯೋಗವು ಇಲ್ಲವೊ ಎಂಬಂತೆ ಕಾಣುವುದು. 'ಕೆಪಿಟೇಶನ್ ಗ್ರೆಂಟ' ಒಂದೆ ಬಗೆಯ ಕುಯುಕ್ತಿಗೆ ಮತ್ತು ಸುಳ್ಳು ಹಾಜರಿಗೆ ಎಡೆಕೊಡುತ್ತದೆ ಎಂಬದನ್ನು ಮಿ॥ ಲಿಟ್ಲಹೇಲ್ಸ್ ಸಾಹೇಬರು (ಡಿರೆಕ್ಟರರು) ಹೇಳುವುದನ್ನು ನಾವು ಈ ಮೊದಲೇ ಪ್ರತಿಪಾದಿಸಿದ್ದೇವೆ. ಮತ್ತು ಆ ಕ್ರಮವು ಸರಕಾರಿ ಗ್ರೆಂಟ ಇನ್ ಎಯಿಡ್ ಕೋಡಿನಿಂದ ತೊಲಗಿಹೋಗುವಷ್ಟಕ್ಕೆ ನಾವು ಕಣ್ಣೀರನ್ನು ಸುರಿಸುವುದೂ ಇಲ್ಲ. ಆದರೆ ರೂ. ೩೦ ತಲಬು ಲೋವರ್ ಎಲಿಮೆಂಟರಿ ಗ್ರೇಡ್ ತರಬೇತಿ ಹೊಂದಿದ ಮತ್ತು ಅನುಭವಶಾಲಿಗಳಾದ ಸರ್ವಿಸದಾರರಾದ ಬಡ ಉಪಾಧ್ಯಾಯರಿಗೆ ಸಿಗಲಾರದು ಎಂದು ಹೇಳಿದರೆ ಈ ಬಡಉಪಾಧ್ಯಾಯರು ಚಾತಕ ಪಕ್ಷಿಗಳಂತೆ ಈ ವರೆಗೆ ಬಾಯ್ದೆರೆದು ಹಾರೈಸಿಕೊಂಡಿದ್ದಾಗ ಗಾಳಿಯ ಚಲನೆಯಿಂದ ಮೋಡ ಕಟ್ಟಿ ನೀರು ಸುರಿಯುವ ಬದಲಾಗಿ ಧೂಳು ಎದ್ದು ಬಾಯಿಯನ್ನು ಮುಚ್ಚಿಬಿಟ್ಟಿತು ಎಂದಂತಾಗುವುದು. ಈಗ ಕೆಲಸಮಾಡುವ ಪ್ರಾಥಮಿಕ ಶಾಲೆಗಳಲ್ಲಿರುವ ಲೋವರ್ ಗ್ರೇಡ್ ಉಪಾಧ್ಯಾಯರಲ್ಲಿ ಎಲ್ಲರೂ ಈ ೩೦ ರೂಪಾಯಿ ಸಂಬಳ ಹೊಂದುವ ಯೋಗ್ಯತೆಯುಳ್ಳವರೆಂದು ನಾವು ಸ್ಥಾಧಿಸುವುದಿಲ್ಲ. ಅದರಲ್ಲಿ ಮೈಗಳ್ಳರೂ ದುರ್ನಡತೆಯವರೂ ಅನ್ನಧ್ವಂಸರೂ ಇರಬಹುದು. ಆದರೆ ಕಳೆಕೀಳುವ ಅನುಭವವೂ ಅನುಕೂಲತೆಯೂ ಉಳ್ಳ ಮತ್ತು ಕರ್ತವ್ಯಲಾಲಸೆ ಇರುವ ಮೇಲ್ವಿಚಾರಕರು ಇಲ್ಲವಾದ್ದರಿಂದ ಎಷ್ಟರಮಟ್ಟಿಗೆ ನಿಜವಾದ ಉತ್ಸಾಹಭಂಗರೂ [illegible] ಹಾಯಿಸುವ ಸಮರ್ಥ [illegible] ದಯಾಳುವಾದ [illegible] ಮಾಡುವುದು [illegible] ಅದನ್ನು [illegible] ಪ್ರಯೋಗದ ದಾರಿ. ಪ್ರಥಮದ ದಾರಿಯು [illegible]ತ್ತೇವೆ. ಆದರೆ ಜನಸ್ಥಾಯ [illegible] ಪ್ರತಿಯೊಬ್ಬನಿಗೆ ಬಾಧ ನದ ಮುದ್ರೆಯು [illegible] ಸುಧಾರಣಾಪಥದಿಂದ [illegible] ಅವನು [illegible] ಆಶ್ಚರ್ಯವೇನು? ಈ ವಿಷಯವನ್ನು [illegible].

೩. ಸರಕಾರಿ ನವುಕರರು ಒಂಟಿಯಾಗಿ ತಮ್ಮ ಅಹವಾಲೆಗಳನ್ನು ತಮ್ಮ ಮೇಲಾಧಿಕಾರಿಗಳಿಗಾಗಲಿ ಅಥವಾ ಪ್ರಾಂತಿಕ ಸರಕಾರದವರಿಗಾಗಲಿ ಮನವಿ ಬರಕೊಳ್ಳಬಹುದಾಗಿದ್ದರೂ ಅವರು [illegible] ಒಂದು ಸಂಘವನ್ನು ಏರ್ಪಡಿಸಿ ತಮ್ಮ ಸಂಕಷ್ಟಗಳನ್ನು ಬಹಿರಂಗವಾಗಿ ಚರ್ಚಿಸಿ ಸಲಹೆಗಳನ್ನು ಕೇಳುವ ಕ್ರಮವು ಸರಕಾರದವರಿಗೆ ಸಮ್ಮತವಿದ್ದಿಲ್ಲವೆಂಬದರಿಂದ ನವುಕರರು ಒಟ್ಟುಕೂಡಿ ಇಂಥ ಚರ್ಚೆಗಳನ್ನು ಈ ವರೆಗೆ ನಡೆಸುತ್ತಿದ್ದಿಲ್ಲ. ಆದರೆ ಕೆಲವು ಸಂಘಗಳು ಪರೀಕ್ಷಾರ್ಥವಾಗಿ [illegible]ಯತ್ನದೊಡನೆ ಅವುಗಳ ಮೇಲಣ ನಿರ್ಬಂಧಗಳ ಹೊರೆಯನ್ನು [illegible] ಮಟ್ಟಿಗೆ ಕಡಿಮೆ ಮಾಡಿ, ಒಂದೊಂದು ಇಲಾಖೆಯವರೇ ಮಾತ್ರ ಕೂಡಿದ ಇಂಥ ಸಂಘಗಳನ್ನು ತಾವು ಆಕ್ಷೇಪಿಸುವುದಿಲ್ಲವೆಂದು ಸರಕಾರದವರು ಪ್ರಕಟಿಸಿದ್ದಾರೆ. ಇದು ಇಲಾಖೆಗಳ ಬಡನವುಕರರಿಗೆ ತುಂಬಾ ಸಂತೋಷದ ಮಾತು. 'ದೊರೆ ತನಕ ದೂರು' ಎಂದು ಪೂರ್ವದಿಂದಲೂ ನಾಣ್ಣುಡಿ ಇದೆ. ತಮ್ಮ ಸಂಕಷ್ಟಗಳನ್ನು ಸರಿಯಾಗಿ ಚರ್ಚಿಸಿ ಈ ಕಷ್ಟಕಾಲದಲ್ಲಿ ಠರಾವನೆಮಾಡಿ ಸರಕಾರದವರ ಮುಂದೆ ಮೊರೆಯಿಡಲಿಕ್ಕೆ ಸರಕಾರದವರು ನಿರ್ಬಂಧ ಹಾಕಿದರೆ ಈ ನವುಕರರಲ್ಲಿ ಅಸಮಾಧಾನವು ಹೆಚ್ಚಿ, ಅನೇಕ ಬಗೆಯ ಅನರ್ಥಗಳು, ತದ್ದ್ವಾರಾ ಜನತೆಗೆ ಸರಕಾರದವರ ಕಡೆಗೆ ಅವಿಶ್ವಾಸವೂ ತಲೆದೋರುತ್ತಿದ್ದುವು. ಈಗ ಪ್ರತಿಯೊಂದು ಇಲಾಖೆಯವರೂ ಅಲ್ಲಲ್ಲಿ ಸಭೆಸೇರಿ ನಿವೇದಿಸಿದ ಪತ್ರಗಳು ಸರಕಾರದವರಿಗೆ ಸಕಾಲದಲ್ಲಿ ಬಡನವುಕರರನ್ನು ಕೈಹಿಡಿದು ಎತ್ತುವ ಸಂದರ್ಭವನ್ನೂ, ಅನುಕೂಲತೆಯನ್ನೂ ಕೊಟ್ಟಿವೆ. ಇಂಥ ಸಂಘಗಳು ತಾತ್ಕಾಲಿಕ ಸಂಸ್ಥೆಗಳಾಗದೆ, ಈಗ ಜನತೆಯ ಕೈಯಲ್ಲಿ ಅಧಿಕಾರವು ಮೆಲ್ಲಮೆಲ್ಲಗೆ ಬರುವ ಸಂಧಿಕಾಲದಲ್ಲಿ ಆಯಾಯ ಇಲಾಖೆಯ ನವುಕರರೊಳಗೆ ಪರಸ್ಪರ ಅನ್ಯೋನ್ಯ, ಸಹಾಯದ ಬುದ್ಧಿಯನ್ನು ಹುಟ್ಟಿಸಿ, ಸರ್ವಿಸಿನ ಗೌರವವು ಹೆಚ್ಚುವಂತೆ ಮತ್ತು ಅವರೊಳಗೆ ದುರ್ನಡತೆಯವರಿದ್ದರೆ ಅಂಥವರ ಗುಪ್ತವಿಚಾರ ಮತ್ತು ಅವರನ್ನು ಒಳ್ಳೆ ದಾರಿಗೆ ತರುವ ಪ್ರಯತ್ನ, ಜನತೆಯ ಶ್ರೇಯಸ್ಸೂ ತಮ್ಮ ಶ್ರೇಯಸ್ಸೂ ಬೇರೆಯಲ್ಲ ಎಂಬ ಭಾವನೆ, ಇವುಗಳಿಗೆ ಎಡೆಕೊಟ್ಟರೆ ಆಡಳಿತೆಯ ಕಾರ್ಯವು ಸುಲಭವಾಗುವುದು; ಜನತೆಯ ಮೇಲಣ ಪೀಡನವೂ ಕಡಿಮೆಯಾಗುವುದು; ಜನತೆಗೆ ಸರಕಾರದ ನವುಕರರ ಮೇಲೆ ಭೀತಿಯಿಂದೊಡಗೂಡಿದ ಗುಪ್ತದ್ವೇಷದ ಬದಲಾಗಿ ನಿಜವಾದ ವಿಶ್ವಾಸವೂ ಪ್ರೇಮವೂ ಇರುವುದು.

೪. ಹಂಟರ್ ಕಮಿಟಿ ಅಥವಾ ಪಂಜಾಬದ ಗಲಭೆಯ ಕಮಿಟಿಯ ರಿಪೋರ್ಟು ಇಂಡಿಯಾ ಸೆಕ್ರೆಟರಿಗಳ ಕೈಸೇರಿ ಅವರು ಅದನ್ನು ಪರ್ಯಾಲೋಚಿಸುತ್ತಿದ್ದಾರೆಂದು ತಂತಿವರ್ತಮಾನಗಳು ತಿಳಿಸುತ್ತಿವೆ. ಹಂಟರ್ ಕಮಿಟಿಯ ಮುಂದೆ ಎಲ್ಲಾ ಬಗೆಯ ರುಜುವಾತು ಹಾಜರಾಗಲಿಕ್ಕೆ ಏನೇನು ವಿಘ್ನಗಳು ಬಂದಿವೆ ಎಂಬದನ್ನು ನಾವು ಹಿಂದೆಯೇ ಪ್ರಸ್ತಾಪಿಸಿದ್ದೇವೆ. ಹೀಗಿದ್ದುದರಿಂದ ಈ ಕಮಿಟಿಯ ನಿರ್ಧಾರಗಳು ಜನತೆಯ ಪರವಾಗಿ ಪಂಜಾಬದಲ್ಲಿ ನಿರ್ಮಿತವಾದ ಕಮಿಟಿಯವರ ಸಾಕ್ಷಿಸಂಗ್ರಹದಷ್ಟು ಇತಿಹಾಸದೃಷ್ಟಿಯಿಂದ ಸಂಪೂರ್ಣವಾದುದಾರವು. ಒಂದುವೇಳೆ ಈ ಅಪೂರ್ಣ ರುಜುವಾತನ್ನು ಆಧರಿಸಿ ಸರಕಾರ ಮತ್ತು ಲಷ್ಕರಿ ನವುಕರರ ವರ್ತನವನ್ನು ತುಲನೆಮಾಡಿದರೂ ನ್ಯಾಯಸ್ಥಾನಗಳಲ್ಲಿ ಈ ದುರಾಗ್ರಹಿಗಳಿಗೆ ಎಳೆದೊಯ್ದು ವಿಚಾರ ನಡಿಸುವುದಕ್ಕೆ ಇಂಡೆಮ್ನಿಟಿ ಕಾನೂನಿನ ಸುದರ್ಶನ ಚಕ್ರವು ಅಡ್ಡನಿಂತುಬಿಟ್ಟಿದೆ. ಈ ಚಕ್ರದ ಬೆಂಬಲವಿದ್ದುದರಿಂದಲೇ ಜನರಲ್ ಡಾಯರರಾಗಲಿ, ಸರ್ ಒಡ್ವೈರರಾಗಲಿ ತಮ್ಮತಮ್ಮ ವರ್ತನವನ್ನು ಸವಿಸ್ತಾರವಾಗಿ ವರ್ಣಿಸದ್ದಲ್ಲದೆ ಬ್ರಿಟಿಷ ಶಕ್ತಿಯ ಧಾರೆಯು ಹರಿತವಾಗಿಯೇ ಇದೆ ಎಂಬದನ್ನು ಪ್ರಜೆಗಳ ರೋಮಕೂಪಗಳಲ್ಲಿ ತೂರಿಕೊಳ್ಳುವಂತೆ ಹುರಿಪಡಿಸಲು ತೊಡಗಿದರು. ಅದಿರಲಿ. ನಿಶಸ್ತ್ರಪಾಣಿಗಳಾದ ಆರ್ಮೇನಿಯರನ್ನು ಬಗ್ಗಿಸುವ ಸಂದರ್ಭದಲ್ಲಿ ಆದ ಕೊಲೆಯು ಸುಧಾರಿತ ಸರಕಾರಗಳಿಗೆ ಒಪ್ಪತಕ್ಕದ್ದಲ್ಲ; ಅಂಥ ದುಷ್ಕೃತ್ಯಗಳನ್ನು ಅಣಗಿಸದ ತುರ್ಕಿ ಸರಕಾರವು ಯುರೋಪಿನ ಪರಿಶುದ್ಧ ಕ್ಷೇತ್ರದಲ್ಲಿ ಕಾಲಿಡಲು ಯೋಗ್ಯತೆಯನ್ನು ಕಳಕೊಂಡಿದೆ ಎಂದು ಪ್ರತಿಪಾದಿಸುವ ಬ್ರಿಟಿಷ ಜನಾಂಗವು ಅಶಸ್ತ್ರಪಾಣಿಗಳಾದವರ ಮೇಲೆ ನಡೆದ ಅತ್ಯಾಚಾರ, ತಾರತಮ್ಯ ನೋಡದೆ ಛಡಿ ಹೊಡಿಸಿದ್ದು, ಲೋಟಾಂಗಣ ಹಾಕಿಸಿ ಪ್ರಜಾಜನಗಳನ್ನು ಬೀದಿಗಳಲ್ಲಿ ನಡಿಸಿದ್ದು ಮುಂತಾದ ಹಲವು ಬಗೆಯ ದುರಾಗ್ರಹದ ವರ್ತನಗಳ ವಿಷಯದಲ್ಲಿ ಹೊಣೆಯಾದವರಿಗೆ ತಕ್ಕ ಶಾಸ್ತಿಯನ್ನು ಮಾಡಿ ತನ್ನ ಕೀರ್ತಿಯನ್ನು ಕಾಪಾಡಿಕೊಂಡೀತು ಎಂದು ನಾವು ನಂಬುತ್ತೇವೆ.

...ಸರಕಾರದ ಕಛೇರಿಯಿಂದ ಯಾವುದೊಂದು ಕೃತ್ಯಕ್ಕೆ ಅಥವಾ ಮಹಾಪಾಟಿಗೆ ...ರುವ ಕಾರಣಲಹರಿಯು ಆಯಾಯಾ ವ್ಯಕ್ತಿಯ ಶೀಲ್ಪ ... ಪರಿವರ್ತನೆಯಾಗುತ್ತದೆ ಎಂಬುದು ಕಳೆದ ತಿಂಗಳ ನ್ಯಾಯವಿಧಾಯಕ ಸಭೆಯಲ್ಲಿ ಪ್ರಾಂತಿಕ ಸರಕಾರದ ಎಕ್ಸಿಕ್ಯೂಟಿವ ಕೌನ್ಸಿಲಿನ ಮೆಂಬರುಗಳೂ ಅವರ ಸೆಕ್ರೆಟರಿಗಳೂ ಮತ್ತು ಅನೇಕಾನೇಕ ಗುಮಾಸ್ತ ವೃಂದವೂ ತಂಡ ಕಟ್ಟಿ ಬೇಸಿಗೆಯಲ್ಲಿ ಉಟಕಮಂಡಿಗೆ ಹೋಗುವ ವಿಷಯದಲ್ಲಿ ನಾಮದಾರ ನರಸಿಂಹೆಯ್ಯನವರು ತಂದ ಠರಾವಿಗೆ ಸಿಕ್ಕಿದ ಉತ್ತರದಿಂದ ಗೊತ್ತಾಗುತ್ತದೆ. ಈ ಪ್ರಶ್ನೆಯು ಮದ್ರಾಸಿನ ಕೌನ್ಸಿಲಿನಲ್ಲಿ ಹಲವು ರೂಪವಾಗಿ ಹಲವು ಸಲ ಚರ್ಚೆಗೆ ಬಂದಿದೆ. ಈ ಬಗ್ಗೆ ತಗಲುವ ಲಕ್ಷಗಟ್ಟಲೆ ಖರ್ಚು ನಿಷ್ಪ್ರಯೋಜನವಾದ್ದು, ಸರಕಾರದ ಮೆಂಬರರು ೫ ಯಾ ೬ ತಿಂಗಳು ಆ ಧನ್ಯಸ್ಥಳದಲ್ಲಿ ಆನಂದಾಸಕ್ತರಾಗಿದ್ದಾಗ ಬಯಲು ಪ್ರದೇಶಗಳಲ್ಲಿ ಜನರಿಗೆ ಉಂಟಾಗುವ ತೊಂದರೆ ಅಡಚಣೆಗಳು ಅವರ ದೃಷ್ಟಿಗೆ ಬೀಳುವುದೂ ಇಲ್ಲ, ತಕ್ಕ ಪರಿಹಾರವು ದೊರಕುವುದೂ ಇಲ್ಲ, ಬಂದುವೇಳೆ ಸಿಕ್ಕಿದರೂ ಸಕಾಲದಲ್ಲಿ ಸಿಗುವುದೂ ಇಲ್ಲ ಎಂದು ಜನತೆಯ ಪ್ರತಿನಿಧಿಗಳು ಆಗಾಗ ವಾದಿಸಿದ್ದರು. ...ಇಂಥ ಪ್ರಶ್ನೆಯು ಹಿಂದುಸ್ಥಾನದ ಪ್ರತಿಯೊಂದು ಪ್ರಾಂತಿಕ ಸರಕಾರದ ನ್ಯಾಯವಿಧಾಯಕ ಸಭೆಯ ಮುಂದೆಯೂ ವರಿಷ್ಠ ಕೌನ್ಸಿಲಿನ ಮುಂದೆಯೂ ಚರ್ಚೆಗೆ ಬಂದಿತ್ತು. ಒಂದು ಸಮಯದಲ್ಲಿ ಸೀತಪ್ರದೇಶದಲ್ಲಿಂದ ಬಂದ ಬಿಳೆ ಜನರಿಗೆ ಇಲ್ಲಿಯ ಬೇಸಿಗೆಯ ಧಾವತಿ ತಡೆಯಲಾರದೆ ಅವರು ಬೇಸತ್ತು ಸರಕಾರದ ಕೆಲಸ ಸರಿಯಾಗಿ ಮಾಡಲೊಲ್ಲರು ಎಂದು ಉತ್ತರ ಸಿಕ್ಕಿತು. ...ಬಿಳೀ ಜನಗಳಲ್ಲಿ ಅನೇಕರು ವರ್ತಕರಾಗಿದ್ದವರು ತಾವು ಈ ಬೇಸಿಗೆಯಲ್ಲಿ ಈ ಬಯಲುಪ್ರದೇಶಗಳ ಉಷ್ಣವನ್ನು ಸಹಿಸಲು ಸಾಧ್ಯವಿದ್ದಾಗ ಈ ಸರಕಾರಿ ನವುಕರರಿಗೆ ಮಾತ್ರ ಯಾಕೆ ದುಸ್ಸಾಧ್ಯವಾಗುತ್ತಿದೆ ಎಂದು ಪ್ರಶ್ನೆ ಎತ್ತಿದರು. ಸರಕಾರದ ಬಿಳೆ ನವುಕರರು ಬರೇ ಸುಖಾಕಾಂಕ್ಷೆಯಿಂದ ಈ ರೀತಿಯಾಗಿ ವರ್ತಿಸುವಾಗ ಅದಕ್ಕೆ ಜನತೆಯ ಹಣವನ್ನು ವೆಚ್ಚ ಮಾಡುವುದು ಯೋಗ್ಯವಲ್ಲ ಎಂದು ಈ ಬಿಳೇ ವರ್ತಕರೇ ಸರಕಾರದವರಿಗೆ ಎದುರು ವಾದಿಸಿದರು. ಹೀಗೆ ವಾದಿಸುವಾಗ ಅವರಲ್ಲಿ ಈ ವಿಷಯದಲ್ಲಿ ಒರೆ 'ನಿಷ್ಕಾಮ ಭಕ್ತಿ' ಇತ್ತು ಎಂದು ಹೇಳಬರುವುದಿಲ್ಲ. ಸರಕಾರದ ದೊಡ್ಡದೊಡ್ಡ ಹುದ್ದೆದಾರರೇ ಈ ವರ್ತಕರ ಪೋಷಕರು. ಅವರು ವರ್ಷದಲ್ಲಿ ೪ ಯಾ ೬ ತಿಂಗಳು ತಮ್ಮಿಂದ ದೂರವಾಗಿದ್ದರೆ ತಮಗೆ ಅವರ ಗಿರಾಕಿ ಕಡಿಮೆಯಾಗುತ್ತಿದೆ ಅಥವಾ ಅವರಿಂದ ಸಿಗುವ ಇತರ ಅನುಕೂಲತೆಗಳನ್ನು ಪಡೆಯುವ ಲಾಗ್ವಡು ಹೆಚ್ಚುತ್ತದೆ ಎಂಬ ಸಂದೇಹವು ಅಲ್ಲಲ್ಲಿ ಇದ್ದಿರಬಹುದು. ಅದು ಹೇಗೂ ಇರಲಿ. ಯುರೋಪಿಯನ್ ಮತ್ತು ದೇಶೀಯ ಬಿನ್‌ಸರಕಾರಿ ಮೆಂಬರರು ಎಷ್ಟು ಹಟಹಿಡಿದರೂ ಸರಕಾರದ ಗಂಟೆಯ ಸ್ವರ ಬದಲಾಯಿಸಲಿಲ್ಲ. ವರ್ಷಂಪ್ರತಿ ಈ ಬಗ್ಗೆ ಹೇರಳ ಹಣ ವೆಚ್ಚ— ದುರ್ವ್ಯಯವೆನ್ನಲೂ ಬಹುದು. ಈ ಸಲ ಅದೇ ಪ್ರಶ್ನೆ ಬಂದಾಗ ನೂತನ ಒಂದು ಕಾರಣವನ್ನು ನಾಮದಾರ ಟೊಡ್ಹಂಟರು ಕೊಟ್ಟರು. ಗವರ್ನರ ಸಾಹೇಬರಿಗಾಗಲಿ ಕೌನ್ಸಿಲ್ ಮೆಂಬರರಿಗಾಗಲಿ ಅವರ ನೇಮಕದ ೫ ವರ್ಷಗಳ ಅವಧಿ ಮುಗಿಯುವ ವರೆಗೆ ಪ್ರಿವಿಲೆಜು ಮುಂತಾದ ರಜೆ ಪಡಕೊಳ್ಳಲು ಸಾಧ್ಯವಿಲ್ಲ, ಅದೇ ತರಗತಿಯ ದೊಡ್ಡ ಹುದ್ದೆದಾರರಾದ ಹೈಕೋರ್ಟು ಜಡ್ಜಿಗಳಿಗೆ ಬೇಸಿಯಲ್ಲಿ ೩ ತಿಂಗಳು ರಜೆ ಇದೆ, ರೆವಿನ್ಯೂ ಬೋರ್ಡುಮೆಂಬರ ಕಮ್ಮಿಶನರ್ ಮುಂತಾದವರಿಗ ಅಂದರೆ ಇಡೀ ಸಂಸ್ಥಾನದ ಯಾವುದೊಂದು ಭಾಗಕ್ಕಾದರೂ ಸಕೀಟುಮಾಡುವ ಅಧಿಕಾರವಿದ್ದವರಿಗೆ ಆಗಾಗ ಸ್ಥಳ ಬದಲಾಯಿಸಿ ಬಿಸಿಲಬೇಗೆಯ ಧಾವತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿದೆ, ಅಂಥಾ ಅನುಕೂಲತೆಯು ಗವರ್ನರ್ ಸಾಹೇಬರಿಗ ಮತ್ತು ಕೌನ್ಸಿಲು ಮೆಂಬರರಿಗೆ ಇಲ್ಲ ಎಂದು ಒಂದು ಬಗಯ ಗಿಲಿಟನ್ನು ಹಚ್ಚಿದ ಓಲೆಯನ್ನು ಕಿವಿಗೆ ತೊಡಿಸಿಬಿಟ್ಟರು. ಇವರಿಗೆ ರಜಾ ಸಿಗುವುದಿಲ್ಲ, ಹಲವು ಮಹತ್ವದ ಪ್ರಶ್ನೆಗಳು ಈಗ ಇತ್ಯರ್ಥಕ್ಕೆ ಬಾಕಿ ಇವೆ, ಅವನ್ನು ಗವರ್ನರ್ ದೊರೆಗಳು ಕೌನ್ಸಿಲು ಮೆಂಬರರೊಡನೆ ಆಗಾಗ ಆಲೋಚಿಸಿ ರೂಪುಗೊಳಿಸಬೇಕು ಎಂದು ಮಿ| ಟೊಡ್ಹಂಟರರು ಹೇಳುವ ಮಾತೆಲ್ಲ ಸರಿಯೆ. ಆದರೆ ಅದಕ್ಕಾಗಿ ಇಡೀ ಸೆಕ್ರೆಟೆರಿಯೇಟಿನ ಗುಮಾಸ್ತ ಲಷ್ಕರನ್ನು ಆ ಶೀತಪ್ರದೇಶಕ್ಕೆ ಅಟ್ಟಿಕೊಂಡು ಮನೆಮಾರು, ತಂಗುವ ಸ್ಥಳ ಸರಿಯಾಗಿ ಸಿಗದ, ವಿಲಾಯತಿಯ ಜನಗಳಿಗೆ ಮಾತ್ರ ನಿಲ್ಲಲಿಕ್ಕೆ ಸಾಧ್ಯವಾದ ಬೆಟ್ಟಪ್ರದೇಶಕ್ಕೆ ಮಂದೆ ಹೊಡಕೊಂಡುಹೋಗುವ ಆಗತ್ಯವೇನು? ಅಗತ್ಯವಿರುವ ಒಂದೆರಡು ಮುಖ್ಯ ಗುಮಾಸ್ತರನ್ನು ಮಾತ್ರ ಕರಕೊಂಡು ಹೋಗಿ ವಿಪರೀತ ಸೆಕೆಯ ಕಾಲವನ್ನು ಅಲ್ಲಿ ಕಳೆಯುವುದು ಯಾರಿಗೂ ಆಕ್ಷೇಪಕರವಾಗಿ ಕಾಣಲಾರದು. ಈ ವರ್ಷ ಬೆಟ್ಟಗಳಿಗೆ ಪ್ರಯಾಣದ ತಯಾರಿಯು ಈ ಮೊದಲೇ ನಡೆದಿದ್ದ ಕಾರಣ ಅವನ್ನು ಮನ್ನಾ ಪಡಿಸುವುದು ಸರಿಯಲ್ಲವೆಂದು ಮಿ| ಟೊಡ್ಹಂಟರ್ ಸಾಹೇಬರು ಕೊಟ್ಟ ಇನ್ನೊಂದು ಮಹತ್ವದ ಕಾರಣ. ಆದರೆ ಅವರ ಬೆನ್ನಿಗೆ ಹೇಳಿದ ಮಾತಿನಲ್ಲಿ ಮುಂದಿನ ವರ್ಷ ಈ ರೀತಿಯಾಗಿ ಬೆಟ್ಟಗಳಿಗೆ ಹೋಗುವುದು ಅಗತ್ಯವೋ ಇಲ್ಲವೋ, ಮುಂದೆ ಆಗತಕ್ಕ ನೂತನ ಕೌನ್ಸಿಲಿನವರಿಗೆ ಬಿಟ್ಟು ಬಿಡೋಣವಂತೆ! ಅಂತು ಈ ವಿಷಯಲ್ಲಿ ಚರ್ಚೆ ನಡೆದಾಗ ಈ ಸಲವೂ ಯುರೋಪಿಯನ್ ಮೆಂಬರರು ಈ ಠರಾವಿನ ಪರವಾಗಿಯೇ ತಮ್ಮ ಅಭಿಮತವನ್ನು ಕೊಟ್ಟರು. ಠರಾವು ಮಾತ್ರ ಮಂಜೂರಾಗಲಿಲ್ಲ. ಆದರೆ ಈ ವರ್ಷ ಹಿಂದಿನ ವರ್ಷಗಳಿಗಿಂತಲೂ ಕಡಿಮೆ ಖರ್ಚಾಗುವಂತೆ ಏರ್ಪಾಡಾಗಿದೆ ಎಂದು ತಿಳಿಯುತ್ತಿದೆ.

೨. ಮದ್ರಾಸು ನ್ಯಾಯವಿಧಾಯಕ ಸಭೆಯ ಕಳೆದ ಅಧಿವೇಶನದಲ್ಲಿ 'ಮದ್ರಾಸು ಟೌನ್ ಪ್ಲಾನಿಂಗ್ ಬಿಲ್' ಅಂದರೆ ನಗರ ರಚನೆಯ ಕಾನೂನು ಮಸೂದೆಯು ನಾಮದಾರ ಸರ್ ಪಿ. ರಾಜಗೋಪಾಲಾಚಾರ್ಯರಿಂದ ಸರಕಾರದ ಪರವಾಗಿ ... ತರಲ್ಪಟ್ಟಿತು. ಮುನ್ಸಿಪಾಲಿಟಿಗಳಿರುವ ಊರುಗಳಲ್ಲಿ ಗುಡಿಗುಡಿಸಲುಗಳನ್ನು ಕಟ್ಟುವಾಗ ಯಾವುದೊಂದು ವ್ಯವಸ್ಥೆ ಇಲ್ಲದರಿಂದ ಬೇಕು ಬೇಕಾದ ರೀತಿಯಲ್ಲಿ ಅಂಕುಡೊಂಕಾಗಿ ರಸ್ತೆಗಳನ್ನೂ ಓಣಿಗಳನ್ನೂ ಮಾಡಿಕೊಂಡಿದ್ದರು. ಅಂಟುರೋಗಗಳು ಹಬ್ಬಿದಾಗ ಶುದ್ಧ ವಾಯು ಚಲನೆಗೆ ಅವಕಾಶವನ್ನು ಕೊಡುವುದಕ್ಕೆ ಹಲವು ಊರುಗಳಲ್ಲಿ ಬೀದಿಗಳನ್ನು ಅಗಲಮಾಡುವುದಕ್ಕೂ ಕಟ್ಟಿದ ಮನೆಗಳನ್ನು ತೆಗಿಸುವುದಕ್ಕೂ ಸರಕಾರದವರು ಸುಮಾರು ೪೦ ಲಕ್ಷ ರೂಪಾಯಿ ಸಹಾಯಧನವಾಗಿ ಕೊಡಬೇಕಾಯಿತು. ಮೊದಲೇ ವ್ಯವಸ್ಥೆ ಇದ್ದು ಸಿಕ್ಕಾಬಟ್ಟೆ ಮನೆಗಳನ್ನು ಕಟ್ಟದ ಹಾಗೆ ನಿರ್ಬಂಧವಿಡುತಿದ್ದರೆ ಈ ಬಗೆಯಿಂದ ಹಣವು ಅನಾವ್ರಯವಾಗುತಿದ್ದಿಲ್ಲವಾದ್ದರಿಂದ ಇನ್ನಾದರೂ ಒಂದು ಕ್ರಮವನ್ನು ಏರ್ಪಡಿಸಿ ಅದನ್ನು ಉಲ್ಲಂಘಿಸಿದವರಿಗೆ ಶಿಕ್ಷೆಗೆ ಒಳಪಡಿಸುವುದೇ ಈ ಬಿಲಿನ ಉದ್ದೇಶ. ಈ ಬಗೆಯ ಕಾನೂನು ಅತ್ಯಾವಶ್ಯಕವೆಂದು ನಮ್ಮ ಮುನ್ಸಿಪಾಲಿಟಿಯ ಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ಸರಕಾರದ ಹಣದ ಸಹಾಯದಿಂದ ರಸ್ತೆಗಳನ್ನು ಅಗಲಮಾಡಿ, ಜನ ಕಿಕ್ಕಿರಿದು ಇದ್ದಲ್ಲಿ ಮನೆಗಳನ್ನು ತೆಗಿಸಿ ಹಾಕಿ ಹೊಸ ರಸ್ತೆಗಳನ್ನು ಕಡಿಸುವ ಅಗತ್ಯವು ಈ ಊರಿಗ ಪ್ಲೇಗು ರೋಗದ ಸೋಂಕು ತಗಲಿದ ಮೇಲೆಯೇ ಕಂಡು ಬಂತು. ಆಗ ಅನೇಕ ಕಡೆಗಳಲಿ ಖಾಸಗಿ ಜಾಗಗಳನ್ನು ಕೊಂಡುಕೊಂಡು ರಸ್ತೆಗಳನ್ನು ಕಡಿಸಲಿಕ್ಕೆ ಮುನಿಸಿಪಾಲಿಟಿಯವರು ಉದ್ಯುಕ್ತರಾದರು. ಆದರೂ ಇನ್ನೂ ಊರಿನ ಕೊಳೆ ಹೊಲಸು ... ಹೋಗಿಲ್ಲ. ಮಾರ್ಕೆಟು ಮತ್ತು ಸೆಂಟ್ರಲ್ ವಾರ್ಡುಗಳು ಸನ್ನಿಜ್ವರ ಮುಂತಾದ ವಿಷಮಜ್ವರಗಳಿಗೆ ಇನ್ನೂ ತೌರಮನೆಯಾಗಿವೆ. ಆರೋಗ್ಯರಕ್ಷಣೆಯ ಬೇಕಾದ ಕೆಲವು ರಸ್ತೆಗಳು ಇನ್ನೂ ಬೇಕಾಗಿವೆ. ಈಗ ಕೆಲವು ದಿವಸಗಳಲ್ಲಿ ಸರ್ ರಾಜಗೋಪಾಲಾಚಾರ್ಯರು ಸರ್ಕೀಟು ಮೇಲೆ ನಮ್ಮ ಜಿಲ್ಲೆಗೆ ಸವಾರಿ ಬೆಳಸುವವರಾಗಿದ್ದಾರೆ. ಈ ಸಮಯದಲ್ಲಿ ಈ ಎರಡು ವಾರ್ಡುಗಳನ್ನು ಮುಖ್ಯವಾಗಿ ಮಾರ್ಕೆಟ್ ವಾರ್ಡನ್ನು ಅವರು ಸಂಚರಿಸುವಂತೆ ಜನತೆಯ ಮಖಂಡರಾಗಲಿ ಮುನ್ಸಿಪಲ್ ಚೆಯರ್ಮೆನರಾಗಲಿ ಯುತಿಸಿದರೆ ಸರಕಾರದವರಿಂದ ಅವುಗಳ ದುರುಸ್ತಿಗೆ ಹಣ ಸಹಾಯವನ್ನು ಬೇಡಿಕೊಳ್ಳಲು ಸಾಧ್ಯವಿದೆ ಎಂಬ ವಿಷಯವನ್ನು ಮಂಗಳೂರ ಪ್ರಜಾ ಮುಖಂಡರು ಆಲೋಚಿಸಬೇಕು. ಈ ಎರಡೇ ವಾರ್ಡುಗಳನ್ನು ನಾವು ಎತ್ತಿ ತೋರಿಸಿಕೊಟ್ಟೆವು ಎನ್ನುವಾಗ ನಮಗೆ ಈ ಎರಡು ವಾರ್ಡುಗಳ ಅಭಿಮಾನವಿದೆ ಎಂದು ಭಾವಿಸಲಾಗದು. ... ಗಜ್ಜಿಗೆ ಕಪ್ಪ ವಾರ್ಡ ಈ ಎರಡು ಅಣ್ಣನಾಗಬಹುದೋ ತಮ್ಮನಾಗುವುದೋ ಎಂದು ನಿರ್ಧರಿಸಲಿಕ್ಕೆ ಸುಲಭಸಾಧ್ಯವಿಲ್ಲ. ಉಳಿದ ಮೂರು ವಾರ್ಡುಗಳಲ್ಲಿ ಇನ್ನೂ ಕಲ್ಲಾ ಮತ್ತು ಶುದ್ಧ ನೀರಿನ ಪ್ರವಾಹ ... ಎಂಬುದನ್ನು ನಾವು ಒತ್ತಿ ಹೇಳುವೆವು.

೩. ಅಸಿಸ್ಟಾಂಟ ಸರ್ಜನರಾಗಲೂ ಸಬ್ ಅಸಿಸ್ಟಾಂಟ ಸರ್ಜನರಾಗಲೂ ಭಡ್ತಿ ಬೇಕಾದರೆ ಪ್ರತಿ ೭ ವರ್ಷಗಳಿಗೊಮ್ಮೆ ಒಂದು ಪರೀಕ್ಷೆ ಇರುತ್ತಿತ್ತು. ಇದರಲ್ಲಿ ಪಾಸಾಗದೆ ಅವರಿಗೆ ಭಡ್ತಿಯಾಗುತ್ತಿರಲಿಲ್ಲ. ಇಂಥ ಪರೀಕ್ಷೆಗಳನ್ನು ತೆಗದುಹಾಕಬೇಕು. ಅವುಗಳಿಂದ ಏನೇನೂ ಪ್ರಯೋಜನವಿಲ್ಲವೆಂಬ ಒಂದು ಠರಾವನ್ನು ನಾಮದಾರ ಎ. ಕೆ. ... ಜಾಹಾಗೀರದಾರರಿಂದ ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಚರ್ಚೆಗೆ ಬಂದರು. ಅಸಿಸ್ಟಾಂಟ ಸರ್ಜನರುಗಳಿಗೆ ಈ ಬಗಯ ಸಾಪ್ತಾಹಿಕ ಪರೀಕ್ಷೆಯನ್ನು ತೆಗದುಹಾಕುವುದಕ್ಕೆ ಸರಕಾರದವರು ಈಗಾಗಲೆ ನಿರ್ಣಯಿಸಿದ್ದಾರೆ. ಈ ಅಸಿಸ್ಟಾಂಟ ಸರ್ಜನರಿಗೆ ಮದ್ರಾಸಿಗೆ ಕರೆಸಿ ಹೆಚ್ಚಿನ ಅನುಭವ ಮಾಡಿಕೊಳ್ಳುವದಕ್ಕೆ ಏರ್ಪಾಡು ಮಾಡಿದೆ. ಆದರೆ ಅದೇ ಬಗಯ ಅನುಕೂಲತೆಯನ್ನು ಈ ವರ್ಷ ಸಬ್ ಅಸಿಸ್ಟಾಂಟ ಸರ್ಜನರಿಗೂ ಕೊಡಲಿಕ್ಕೆ ತಕ್ಕ ಸಂಸ್ಥೆಗಳು ಇಲ್ಲ, ಆದರೆ ಮುಂದಿನ ವರ್ಷಕ್ಕೆ ಆ ವಿಷಯವನ್ನು ಆಲೋಚನೆಗೆ ತೆಕ್ಕೊಳ್ಳಲಾಗುವುದು ಮತ್ತು ಸಬ್ ಅಸಿಸ್ಟಾಂಟ ಸರ್ಜನರ ಪೈಕಿ ಅನುಭವಶಾಲಿಗಳೂ ಜಾಣರೂ ಎಂದು ಕಂಡುಬಂದವರಿಗೆ ಈ ಪರೀಕ್ಷೆಗಳಿಂದ ವಿನಾಯಿತಿ ಕೊಡಬಹುದು ಎಂದು ಸರಕಾರದ ಪರವಾಗಿ ನಾಮದಾರ ಸರ್ಜನ ಜನರಲರವರು ಉತ್ತರಕೊಟ್ಟರು. ಈ ಕಾರಣದಿಂದ ಠರಾವು ಹಿಂತೆಗೆಯಲ್ಪಟ್ಟಿತು. ಪ್ರತಿಯೊಂದು ಇಲಾಖೆಯಲ್ಲಿಯೂ ಈ ಬಗಯ ಕೆಲವು ಇಲಾಖಾ ಪರೀಕ್ಷೆಗಳು ಇವೆ ಮತ್ತು ಅವುಗಳ ಉದ್ದೇಶ ನೆರವೇರುವ ಬದಲಾಗಿ ಸುಮ್ಮನೆ ಸರಕಾರಿ ನವುಕರರಿಗೆ ಒಂದು ಬಗಯ ಪೀಡನವೇ ಆಗಿವೆ. ಕೆಲವು ನವುಕರರು ತಮಗೆ ಒಪ್ಪಿಸಿದ ಕೆಲಸ ಹೇಗೂ ಇರಲಿ ಪರೀಕ್ಷೆಯ ಕಡೆಗೆ ದೃಷ್ಟಿ ಇಟ್ಟು ಅದನ್ನು ತೇರಿ ಒಡ್ಡಿ ಹೊಂದುತ್ತಾರೆ. ಕಾರ್ಯಾಸಕ್ತರಾದವರಿಗೆ ಪರೀಕ್ಷೆಯ ತಯಾರಿ ಮಾಡಲಿಕ್ಕೆ ಅವಕಾಶ ದೊರೆಯದೆ ಹಲವು ಸಲ ಹಿಂದೆ ಬೀಳುತ್ತಾರೆ. ಹೀಗಾಗಿ ಕಾರ್ಯಗೌರವವು ಸಿಥಿಲತೆಗೆ ಕ್ರಮೇಣ ಬರುತ್ತಾ ಇದೆ. ಮೇಲಿನ ದೃಷ್ಟಾಂತದಲ್ಲಿ ವೈದ್ಯ ಇಲಾಖೆಯವರಿಗೆ ಒಳ್ಳೆ ಆಸ್ಪತ್ರೆಗಳಿರುವ ಸ್ಥಳಗಳಲ್ಲಿ ಅನುಭವಶಾಲಿಗಳ ಕೆಳಗೆ ಇದ್ದು ಕೈಚಾಲಕ ನಡಿಸಲಿಕ್ಕೆ ಎಡೆ ಕೊಡುವುದೇ ಪ್ರಶಸ್ತವಲ್ಲದೆ ಒಂದು ಮೂಟೆ ಪುಸ್ತಕಗಳನ್ನು ಬಾಯಿಪಾಠ ಮಾಡಿರಿ ಎಂದು ಹೇಳುವುದು ಪ್ರಯೋಜನವಿಲ್ಲ. ಇದೇ ರೀತಿಯ ಪರೀಕ್ಷೆಗಳಲ್ಲಿ ಎಕೌಂಟ ಟೆಸ್ಟ್ ಒಂದು. ಖಜಾನೆಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಈ ಎಕೌಂಟ ಕೋಡಿನ ಪರಿಚಯವು ಚೆನ್ನಾಗಿ ಇರಲೇ ಬೇಕಾಗಿರುವುದರಿಂದ ಆ ಇಲಾಖೆಯಲ್ಲಿ ಕೆಲಸಮಾಡುವವರು ಆ ಪರೀಕ್ಷೆ ಪಾಸಾಗಬೇಕೆಂಬುದರ ಒಂದುವೇಳೆ ಒಪ್ಪಬಹುದು. ರೆವಿನ್ಯೂ ಇಲಾಖೆಯ ಕೆಳ ನವುಕರರು ಹಿಂದೆಲ್ಲ ಒಂದು ಕಾಲದಲ್ಲಿ ಖಜಾನೆಯ ಖಾತೆ ವಹ್ನೆರೆ ನೋಡಿಕೊಳ್ಳುವ ಅಗತ್ಯ ಬೀಳುತ್ತದೆಂದು ಅವರಿಗೆ ಆ ಪರೀಕ್ಷೆ ಅಗತ್ಯವೆಂದಾದರೆ ವಿದ್ಯಾ ಇಲಾಖೆಯ ಉಪಾಧ್ಯಾಯರು ಅದನ್ನು ಪಾಸಾಗದಿದ್ದರೆ ಭಡ್ತಿಗೆ ಅನರ್ಹರು ಎಂದು ಹೇಳುವುದು ಯಾವ ನಿಮಿತ್ತ? ಒಂದುವೇಳೆ ಸಬ್ ಅಸಿಸ್ಟಾಂಟರಾಗುವವರು ತಮ್ಮ ಕೈಕೆಳಗಿನ ನವುಕರ ಪ್ರಯಾಣದ ಬತ್ತೆ, ರಜೆ ಎಲೌವೆನ್ಸ ಮುಂತಾದ್ದನ್ನು ಲೆಕ್ಕ ನೋಡಿಕೊಳ್ಳಬೇಕೆನ್ನುವುದಾದರೆ ಅದನ್ನು ಆ ಎಗ್ಸಿಕ್ಯೂಟಿವ ಆಫೀಸರರಿಗೆ ... ಬಿದ್ದಾಗ ಎಕೌಂಟ ಕೋಡಿನಿಂದ ಸಂಗ್ರಹಿಸಲು ಸಾಧ್ಯವಿಲ್ಲವೆ? ಅಂಥಾ ಆಫೀಸುಗಳಿಗೆ ಎಕೌಂಟುಕೋಡಿನ ಒಂದು 'ಪುಸ್ತಕ'ವನ್ನು ಒದಗಿಸುವುದಕ್ಕೆ ಸರಕಾರದವರು ಕೃಪೆಗಿ ಮಾಡುತ್ತಾರೆ. ಅಂಥಾ ಕೋಡ್ ಪುಸ್ತಕಗಳನ್ನು ಒದಗಿಸಿದರೆ ಇವರು ಸಾಲ್ತಿಯಿಂದ ಬೇಕಾದ ಅನುಭವವನ್ನು ಆಫಿಸರುಗಳು ಮಾಡಿಕೊಳ್ಳಲಾರರೆ? ಇಂತಹ ಪರೀಕ್ಷೆಗಳು ಪ್ರತಿ ಇಲಾಖೆಯಲ್ಲಿಯೂ 'ಹರ್ಡ್ಲ್ಸ್ ರೇಸ್' ಬಗ್ಗೆ ಅಡ್ಡ ಕಟ್ಟಿದ ಅಡ್ಡವಣೆಗಳಂತಿವೆ. ಅವುಗಳ ಮೇಲೆಯೇ ದೃಷ್ಟಿ ಇಟ್ಟು ಸರಕಾರದವರು ಬಡ್ತಿಯನ್ನು ನಿರ್ಧರಿಸುವುದು ಸಾಧ್ಯವಿಲ್ಲವೆಂಬದರಿಂದ ಈಚೀಚೆಗೆ ವಿನಾಯಿತಿಯನ್ನು ಕೊಡಲು ಇಲಾಖಾ ಮೇಲ್ ಆಫೀಸರರು ಉದ್ಯುಕ್ತರಾಗಿದ್ದಾರೆ. ಪೋಲಿಸ ಸಬ್ ಇನ್ಸ್‌ಪೆಕ್ಟರುಗಳಿಗೆ ಈ ಬಗಯ 'ಟೆಸ್ಟ'ಗಳ ಅವಾಂತರವು ಕಡಿಮೆಯಾಗಿದೆ. ಹೀಗೆಯೇ ಪ್ರತಿಯೊಂದು ಇಲಾಖೆಯಲ್ಲಿಯೂ ಈಗಿನ ಪರಿಸ್ಥಿತಿಗೆ ಅನಾವಶ್ಯಕವೆಂದು ಕಾಣುವ ಈ ಪರೀಕ್ಷೆಗಳನ್ನು ತೆಗದುಹಾಕುವ ವಿಷಯವನ್ನು ಯಾರಾದರೂ ನಾಮದಾರ ಮೆಂಬರರು ಸರಕಾರದ ಅವಗಾಹನೆಗೆ ತರುವುದು ಅಗತ್ಯ. ಕೆಲಸದ ಚಟುವಟಿಕೆಯ ಮೇಲೆ ಬಡ್ತಿಯು ಹೊಂದಿರುವುದು ವಿಶೇಷ ಜವಾಬ್ದಾರಿಯ ಹುದ್ದೆಗಳಲ್ಲಿ ಅಗತ್ಯವಲ್ಲದೆ ಬಿ. ಎ. ಎಮ್. ಎ. ವರೆಗೆ ಪಾಸ್ ಮಾಡಿದವರಿಗೆ ಮುದುಕರಾಗುವ ವರೆಗೂ ಇನ್ನೂ ಪುಸ್ತಕಪಾಠ ಮಾಡುವ ತ್ರಾಣ ಎಷ್ಟಿದೆ ಎಂಬದರ ಮೇಲೆ ಬಡ್ತಿಯು ಆಧರಿಸಿರುವುದು ಸರಿಯಲ್ಲ.

ಮಂಗಳೂರು

ವಿನಂತಿ

ಇದೇ ತಿಂಗಳ ೧೪ನೆ ಸಾಯಂಕಾಲ ಮದ್ರಾಸು ಕೌನ್ಸಿಲ್ ಮೆಂಬರ ಸರ್ ಎ. ರಾಜಗೋಪಾಲಾಚಾರ್ಯರು ನಮ್ಮ ಜಿಲ್ಲೆಯ ಸಂಚರಣ ಬಗ್ಗೆ ಇಲ್ಲಿಗೆ ಬರುವವರಿದ್ದಾರೆ. ಪ್ರಾಥಮಿಕ ಶಾಲಾ ಉಪಾಧ್ಯಾಯರು ಈ ಸಮಯದಲ್ಲಿ ಸೆಲೆಕ್ಟ್ ಕಮ್ಮಿಟಿಯವರು ಠರಾವುಗಳನ್ನು ಕರಿತು ಅಂದರೆ ಬೋರ್ಡುಶಾಲಾ ಉಪಾಧ್ಯಾಯರ ಪೈಕಿ ತರಬೇತಾದವರಿ ಮಾಹೆಯಾನಾ ರೂ ೩೦ರಂತೆ ಸಂಬಳ ಸಿಗಬೇಕಾಗಿ ಮಾಡಿದ ಸೂಚನೆಗಳನ್ನು ಕರಿತು ಸದರಿ ಕೌನ್ಸಿಲು ಮೆಂಬರರ ಮುಂದೆ ಬಾಯ್ದೆರೆ ಮನವಿಮಾಡಿಕೊಳ್ಳಬೇಕಾಗಿ ಪುತ್ತೂರು ಮತ್ತು ಕಾಸರಗೋಡು ತಾಲೂಕ ಉಪಾಧ್ಯಾಯರು ನಿಶ್ಚಯಿಸಿದ ವರ್ತಮಾನವು ನಮ್ಮ ತಿಳವಳಿಕೆಗೆ ಬಂದಿದೆ. ಆದರೆ ಮಂಗಳೂರು ತಾಲೂಕಿನವರು ಈ ವಿಷಯದಲ್ಲಿ ಇನ್ನೂ ಏನು ಪ್ರಯತ್ನಿಸಿದಂತೆ ತೋರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಆಲೋಚನೆಮಾಡುವ ಬಗ್ಗೆ ಮಂಗಳೂರು ಇಸ್ಲಾಮಿಯ ಕ್ಲಬಿನ ಮುಂದಿನ ಮೈದಾನಿನಲ್ಲಿ ಇದೇ ೧೧ನೆ ತಾರೀಖಿನ ಸಾಯಂಕಾಲ ಪ್ರಾಥಮಿಕ ಶಾಲಾ ಮಾಸ್ತರುಗಳ ಸಭೆ ಸೇರಬೇಕಾಗಿ ವಿನಂತಿ ಇದೆ.

ಪಿ. ಶ್ರೀನಿವಾಸ ರಾವ ಕ ...

ಮದ್ರಾಸು ಗವರ್ನರ ಕಾರ್ಯನಿರ್ವಾಹಕ ಸಭೆಯ ಮೆಂಬರ ... ಮಹಾಮಾನ್ಯ ಎ. ರಾಜಗೋಪಾಲಾಚಾರ್ಯರವರು ಇದೇ ತಿಂಗಳ ೧೬ ನೇ ಸಾಯಂಕಾಲದ ಮೈಲ್ ಬಂಡಿಯಲ್ಲಿ ಇಲ್ಲಿಗೆ ಬಂದು ತಲ್ಪುವರು. ಮಾರನೆ ದಿನ ಬೆಳಿಗ್ಗೆ ೧೦ ಗಂಟೆ ಲಕ್ಕೆ ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಸಭೆಗೂ ನಂತರ ೧೧ ಗಂಟೆಗೆ ಕೂಡುವ ತಾಲೂಕುಬೋರ್ಡು ಸಭೆಗೂ ಮಧ್ಯಾಹ್ನ ಮೂರು ಗಂಟೆಗೆ ಕೂಡುವ ಡಿಸ್ಟ್ರಿಕ್ಟ್‌ಬೋರ್ಡ ಸಭೆಗೂ ಹಾಜರಾಗುವರು. ತಾ ೧೮ನೆಯಲ್ಲಿ ಮಂಗಳೂರಿನಿಂದ ಕಾರ್ಕಳಕ್ಕೆ ಹೋಗಿ ತಾ ೧೮ನೇ ದಿನ ಕಾರ್ಕಳದಿಂದ ಉಡುಪಿಗೆ ತೆರಳುವರು. ಇದೇ ದಿನ ಉಡುಪಿಯಲ್ಲಿ ಇವರಿದ್ದು ತಾಲೂಕ ಬೋರ್ಡಿನ ಸಭೆಯು ಕೂಡುವದು. ತಾ ೧೯ರಲ್ಲಿ ಉಡುಪಿಯಿಂದ ಮೂಡಬಿದ್ರೆಗೂ ಅಲ್ಲಿಂದ ಮಂಗಳೂರಿಗೂ ತಾ. ೨೧ನೇ ದಿನ ಮಂಗಳೂರಿನಿಂದ ಪುತ್ತೂರಿಗೆ ಹೋಗುವರು. ಪುತ್ತೂರಿನಲ್ಲಿಯೂ ಸಹ ಇವರ ಹಾಜರಿಯಲ್ಲಿ ತಾಲೂಕುಬೋರ್ಡು ಸಭೆಯು ಕೂಡುವದಿದೆ. ತಾ ೨೦ನೆಯಲ್ಲಿ ಪುತ್ತೂರಿನಿಂದ ಕಾಸರಗೋಡಿಗೆ ಹೋಗಿ ೨೧ನೇಯಲ್ಲಿ ಕಾಸರಗೋಡಿನಿಂದ ಮಂಗಳೂರು ಮೈಲಿನಲ್ಲಿ ಈ ಜಿಲ್ಲೆಯಿಂದ ತೆರಳುವರು.

ಸತ್ಯಾಗ್ರಹದ ದಿನಾಚರಣೆಯನ್ನು ಇಲ್ಲಿಯೂ ಆಚರಿಸುವ ಬಗ್ಗೆ ಮ| ರಾ| ರಾ ಕಾರ್ನಾಡ ಸದಾಶಿವರಾಯರವರ ವಿನಂತಿ ಪತ್ರದ ಪ್ರಕಾರ ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾಮಂದಿರದಲ್ಲಿ ಮಂಗಳೂರು ಪುರಜನರ ಮಹಾಸಭೆಯು ತಾ. ೬ನೇ ಮಂಗಳವಾರ ದಿನ ಕೂಡಿತ್ತು. ಮ| ರಾ| ರಾ| ಗಂಗೊಳ್ಳಿ ಕೃಷ್ಣರಾವ್‌ರವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ರೌಲೆಟ್ ಆಕ್ಟನ್ನು ವಜಾಪಡಿಸಬೇಕು, ಮತ್ತು ಜಲಿಯನ್‌ವಾಲಾ ಭಾಗ್ ಸ್ಮಾರಕಕ್ಕೆ ಚಂದಾ ಎತ್ತಬೇಕೆಂಬ ನಿರ್ಣಯವು ಮ| ರಾ| ವಕೀಲ ಮಾಧವರಾಯರಿಂದ ಸಭೆಯ ಮುಂದಿಡೋಣಾಯಿತು. ಮ| ರಾ| ರಾ| ರಂಗನಾಥ ಪೂಂಜರವರು ಈ ನಿರ್ಣಯವನ್ನು ಅನುಮೋದಿಸಿ ಅದು ಸಭೆಯಲ್ಲಿ ಸರ್ವ ಸಮ್ಮತದಿಂದ ಮಂಜೂರಾಯಿತು. ಸಭೆಯಲ್ಲಿ ಜಲಿಯನ್‌ವಾಲಾ ಭಾಗ್ ಸ್ಮಾರಕಕ್ಕೆ ವಂತಿಗೆಯ ಪಟ್ಟಿಯನ್ನು ಹೊರಡಿಸಿ ರೂ ೧೭೫ ಕೂಡಲೆ ವಂತಿಗೆ ಆಯಿತು. ಇದೇ ವಾರದಲ್ಲಿ ಪಟ್ಟಣದಲ್ಲಿ ಇನ್ನೂ ವಂತಿಗೆಯನ್ನು ಕೂಡಿಸಲು ನಿಶ್ಚಯಿಸಿರುತ್ತಾರೆ. ವಂತಿಗೆ ಕೊಟ್ಟಿರುವವರ ಹೆಸರುಗಳು ಮುಂದಿನ ಸಂಚಿಕೆಯಿಂದ ಪ್ರಕಟಿಸಲ್ಪಡುವವು. ಮ| ರಾ| ಡಿ. ಕೆ. ಭಾರದ್ವಾಜರವರು ಸ್ಮಾರಕ ಫಂಡಿನ ಸಹಾಯಾರ್ಥವಾಗಿ ಕೊಟ್ಟ "ಅಮೃತಸರ ಪಟ್ಟಣ"ದ ...

[illegible]

...ಮುಖ್ಯೋಪಾಧ್ಯಾಯಿನಿ ... ಸ್ಮಾರಕ ಫಂಡಿಗೆ ... ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ... ಮಿತ್ರಮಂಡಳಿಯವರು ... ನಾಟಕವನ್ನು ... ನಾಟಕದಿಂದ ... ಕೆಲವನ್ನು ರಾಷ್ಟ್ರೀಯ ಬಾಲಿಕಾ ಪಾಠಶಾಲೆಗೂ ... ಭಾಗ ಸ್ಮಾರಕ ಫಂಡಿಗೂ ಕೊಡಲು ನಿಶ್ಚಯಿಸಿರುವರು. ಇದೇ ರೀತಿ ಈ ಜಿಲ್ಲೆಯ ಇತರ ಕಡೆಗಳಲ್ಲಿಯೂ ಈ ಸ್ಮಾರಕಫಂಡಿಗೆ ಚಂದಾ ಎತ್ತುವ ಪ್ರಯತ್ನಗಳನ್ನು ಕೈಕೊಳ್ಳಬೇಕೆಂದು ಮ| ರಾ| ರಾ| ಕಾರ್ನಾಡ ಸದಾಶಿವರಾವ್‌ರವರು ವಿನಂತಿಸಿರುತ್ತಾರೆ ಅವರ ವಿನಂತಿಯನ್ನು ಜಿಲ್ಲಾ ಜನರು ಪೂರೈಸುವರಾಗಿ ಕೋರುತ್ತೇವೆ.

ಕಳೆದ ವೈಶಾಖ ತಿಂಗಳ ತಾ ೫ನೇ ಸಂಚಿಕೆಯಲ್ಲಿ ಪ್ರಕಟವಾದ ಬಂಟವಾಳ ... ಪಟೇಲ ಮ| ರಾ| ವೆಂಕಟ್ರಾಯ ಪ್ರಭುಗಳ ಆಮಂತ್ರಣದ ಪ್ರಕಾರ ಮಂಗಳೂರು ತಾಲೂಕಿನ ಗ್ರಾಮ ಉದ್ಯೋಗಸ್ಥರ ಸಭೆಯು ಇದೇ ತಿಂಗಳ ಕಳೆದ ತಾ ೪ನೇ ದಿನ ಇಲ್ಲಿಯ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಕೂಡಿತ್ತು ಮ| ರಾ| ವಕೀಲ ಮಾಧವರಾಯರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು ಗ್ರಾಮ ಉದ್ಯೋಗಸ್ಥರ ಸಂಬಳದ ಮೊತ್ತಿಯನ್ನು ತಿಂಗಳು ೧ಕ್ಕೆ ರೂ ೩ಂಕ್ಕೆ ಕಡಮೆಯಾಗಕೂಡದೆಂದೂ ಗ್ರಾಮದಿಂದ ಸರಕಾರದ ಕೆಲಸದ ನಿಮಿತ್ತ ಹೊರಗೆ ಹೋದ ಸಂದರ್ಭದಲ್ಲಿ ಎರಡನೇ ತರಗತಿಯ ಭತ್ತೆಯನ್ನು ಕೊಡಬೇಕೆಂತಲೂ ಮೇಲುದ್ಯೋಗಸ್ಥರಿಗೆ ಸರಬರಾಯಿಯನ್ನು ಒದಗಿಸಿ ಕೊಡುವ ವಾಡಿಕೆಯನ್ನು ತೆಗದುಹಾಕಬೇಕೆಂತಲೂ ಈಗ ಮೇಲಾಫೀಸರರಿಂದ ಕೊಡೋಣಾಗುವ ಶಾಶೀತುಗಳ ಕ್ರಮವನ್ನು ಬದಲಾಯಿಸಬೇಕೆಂತಲೂ ನೊನ್ ಗಜೆಟೆಡ್ ಆಫೀಸರರಿಗ ಕೊಡೋಣಾಗುವ ವಿಧಾನಗಳಲ್ಲಿಯೇ ಗ್ರಾಮ ಉದ್ಯೋಗಸ್ಥರಿಗೆ ಸಹ ರಜೆಯು ಕೊಡೋಣಾಗಬೇಕೆಂತಲೂ ನಿರ್ಣಯಗಳನ್ನು ಈ ಸಭೆಯಲ್ಲಿ ಮಾಡಿರುವರಾಗಿ ತಿಳಿಯುತ್ತೇವೆ

ಕಳೆದ ಬುಧವಾರ ಸಾಯಂಕಾಲ ಮಂಗಳೂರಿನ ಕೆಲವು ಮಹಾಜನರು ಸೇರಿ, ಇಲ್ಲಿಯ ದೇಶೀಯ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯಂತಾಗಿ ಕೆಲಸ ಮಾಡುತ್ತಿದ್ದು ಈಗ ಅವರ ಕೆಲಸದ ಅವಧಿಯು ಮುಗಿದ್ದು ಮದರಾಸಿಗೆ ಹಿಂತಿರುಗಿ ಹೋಗಲಿಕ್ಕಿರುವ ಮಿಸೆಸ್ ಕಜಿನ್ಸ್ ಬಿ ಮ್ಯೂಜಿಕ್ (ಐರ್ಲ್ಯಾಂಡ್) ಅವರಿಗೆ ಉಪಾಹಾರಾದಿ ಸತ್ಕಾರಗಳಿಂದ ಸತ್ಕರಿಸಿ ಒಂದು ಬೆಳ್ಳಿಯ ಚಲೋೀ ಬಟ್ಟಲನ್ನೂ ಒಂದು ಫೌಂಟನ್ ಪೆನ್ನನ್ನೂ ಉಚಿತ ಕೊಟ್ಟರು ಆ ದಿನ ರಾವ್‌ಬಹದೂರ ಯಸ್ ರಘುನಾಥಯ್ಯನವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು ಈ ಸಂದರ್ಭದಲ್ಲಿ ರಾ|ಗಳಾದ ಪಿ ಎನ್ ಭಂಡಾರಕರ್, ಎಮ್ ಎಸ್. ಏಕಂಬರರಾವ್, ರಾಯಸಾಹೇಬ್ ಕುದ್ಮುಲ ರಂಗರಾವ್, ಪಂಜೆ ಮಂಗೇಶರಾವ್, ಗಂಗೊಳ್ಳಿ ಕೃಷ್ಣರಾವ್, ಶ್ರೀಮತಿ ಲಲಿತಾ ಬಾಯಿಯವರುಗಳು ಇವರ ಗುಣಕಥನಗಳನ್ನು ಮಾಡಿದರು

ಮಿಸೆಸ್ ಕಜಿನ್ಸ್‌ರವರವರಿಗ ದೇಶೀಯ ಬಾಲಿಕಾಪಾಠ ಶಾಲೆಯ ಉಪಾಧ್ಯಾಯಿನಿಯರೆಲ್ಲರೂ ಸೇರಿ ಒಂದು ಬಂಗಾರದ ಸರಪಳಿಯನ್ನು ಈ ದಿನ ಸಮರ್ಪಿಸಲಿಕ್ಕಿರುವರು

ಕಳೆದ ಸಂಚಿಕೆಯಲ್ಲಿ ಸೂಚಿಸಿದ ಕಾರ್ಯಕ್ರಮ ಪಟ್ಟಿಯ ಮೇರೆಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಪ್ತಾಹವು ಈ ವರೇಗೆ ಸಾಂಗವಾಗಿ ನಡೆದಿದೆ ನಾಳೆ ಸಾಯಂಕಾಲ ೬ ೩೦ ಗಂಟೆಗೆ ಎನ್ ಎಸ್ ರಾವ್ ಇವರ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಯ ಪ್ರದರ್ಶನ ಮತ್ತು ಆತ್ಮಬಲಿ ಎಂಬ ನಾಟಕಾದಿಗಳಿಂದ ಈ ಸಪ್ತಾಹವು ಕೊನೆಯಾಗುವುದು

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟು ಸೆಕೆಯ ರಜೆಯು ಸಂಬಂಧ ಈ ತಿಂಗಳ ತಾ ೨೭ರಕ್ಕೆ ಮುಚ್ಚಲ್ಪಟ್ಟು ಜೂನ್ ತಾರೀಕು ೨೮ಕ್ಕೆ ಪುನಃ ತೆರೆಯಲ್ಪಡುವದು

ಪಟ್ಟಣದಲ್ಲಿ ಕಳೆದ ಮಾರ್ಚ ತಿಂಗಳಲ್ಲಿ ೧೪೩ ಜನನಗಳೂ ೯೩ ಮರಣಗಳೂ ಸಂಭವಿಸಿದವು ಕಳೆದ ವರುಷದ ಇದೇ ತಿಂಗಳಲ್ಲಿ ೧೪೨ ಜನನಗಳೂ ೧೧೧ ಮರಣಗಳೂ ಇದ್ದವು

ದಕ್ಷಿಣಕನ್ನಡಾ ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಹತ್ತನೇ ವಾರ್ಷಿಕ ವರ್ಧಂತೋತ್ಸವವು ಮಂಗಳೂರ ಹೊಯಿಗೆ ಬಜಾರಿನಲ್ಲಿರ ವ ಜ್ಞಾನೋದಯ ಮಂದಿರದಲ್ಲಿ ಈ ತಿಂಗಳ ತಾರೀಕು ೧೩ನೇ ಮಂಗಳವಾರ ಸಾಯಂಕಾಲ ೪ ೩೦ ಗಂಟೆಗೆ ಜರಗುವದು. ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಜಿಲ್ಲಾ ಕಲೆಕ್ಟರ ದೊರೆಗಳಾದ ಮಿ| ಆರ್. ಎಚ್ ಎಲ್ಲಿಸ್‌ರವರು ಸ್ವೀಕರಿಸುವರು

ಮಂಗಳೂರು ತಾಲೂಕಿನ ತಹಸೀಲದಾರರಾಗಿ ಮದ್ರಾಸು ರೆವಿನ್ಯೂ ಬೋರ್ಡ ಆಫೀಸಿನ ಸೆಟ್ಲ್‌ಮೆಂಟ್ ಇಲಾಖೆಯಲ್ಲಿ ಎರಡನೇ ಅಸಿಸ್ಟಾಂಟರಾಗಿರುವ ಮ| ರಾ| ರಾ| ಹಟ್ಟಂಗಡಿ ಶಂಕರರಾಯರು ಬಳ್ಳಾರಿಯ ಆಕ್ಟಿಂಗ್ ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ

ಕೆದಂಬಾಡಿ:— ಇಲ್ಲಿ ಇರುವ ಸಹಾಯಕ ಶಾಲೆಯು ಗ್ರಾಮದ ಒಂದು ಮೂಲೆಯಾಗಿರುವುದರಿಂದ ಇಲ್ಲಿಯ ಶಾಲಾ ಕಟ್ಟೋಣ ತೆಗದು ಗ್ರಾಮದ ಮಧ್ಯಭಾಗ ಬೆಳ್ಳಾರೆ ರಸ್ತೆಯ ೬ನೇ ಫರ್ಲಂಗಿನ ಸಮೀಪ ಸಾರೆಪುಣೆ ಎಂಬಲ್ಲಿ ಹಾಕಿ ಬೋರ್ಡ ಶಾಲೆ ಮಾಡುತ್ತಿದ್ದರೆ ಈಗ ಕಷ್ಟಪಡುವ ಬಡ ಜನರಿಗೆ ಬಹಳ ಉಪಕಾರವಾಗುತ್ತಿತ್ತು ಶಾಲೆ ಮಿತ್ತಡರ್ಕ ಸುಬ್ರಮ್ಮಣ್ಯಗೌಡರ ಕೊಡಗಿನ ... ಎಂಬಲ್ಲಿಂದ ಒಂದು ಒಳ ದಾರಿಯು ಕೆದ್ಯಂಜ, ಮುಂಡೂರು ಮತ್ತು ಕೆದಂಬಾಡಿ ಗ್ರಾಮಗಳಲ್ಲಿ

[illegible]

ಸುಳ್ಯ:— ಇಲ್ಲಿ ... ಸ್ಟೇಷನ ಪೋಲೀಸಿನವರು ಮಡಿಕೇರಿ ರಸ್ತೆ ... ನಿಂತು ತಂಬಾಕು ಮತ್ತು ಗೋಳಿಭಾಯೆ ಮಾಡುವುದರಿಂದ, ಆಮದು ರಫ್ತಿಗಳ ಪ್ರಯಾಣಿಕರು ಇವರ ತಪಾಸು ವಗೈರೆ ತೀರುವ ವರೇಗೆ ಕಾದುನಿಲ್ಲಬೇಕಾಗುವ ಕಷ್ಟ ಒದಗುತ್ತದರಿಂದ ಇವರ ತಪಾಸು ವಗೈರೆ ಸ್ಟೇಷನಿಗೆ ಸಮೀಪವಾಗಿರುವ ಮಡಿಕೇರಿ ಕೆಂಪಿಂಗ್ ಗ್ರೌಂಡು ಎಂಬ ವಿಂಗಡಿಸಿದ ಸ್ಥಳದಲ್ಲಿ ಮಾಡಿಸುವರೆ ಹುಕುಂ ಆದರೆ ಬಹಳ ಉಪಕಾರವಾಗುತಿತ್ತು.

ಮಂಗಳೂರು ಮಡಿಕೇರಿ ರಸ್ತೆಯು ಕೀವು ... ಸರಿಪಾಟಿ ವರೇಗೆ ಅಲ್ಲಲ್ಲಿ ಹೊಂಡಗಳು ದೊಳುಗಳು ತುಂಬಿಕೊಂಡು ಪ್ರಯಾಣಮಾಡುವ ಜನರಿಗೆ ಬಹಳ ಕಷ್ಟವೇ ಸರಿ ಈ ಪೈಕಿ ಹೆಚ್ಚಾಗಿ ಹೊಂಡಗಳು ಇದ್ದು ಆಗ್ರಾಸ್ಥೆ ಛಂಡಿಗಳು ಮಗುಚಬೇಕಾದ ೪೫ನೇ ಮೈಲು ಕಲ್ಲಿನ ೫, ೬, ೭ನೇ ಫರ್ಲಂಗೆಗಳಲ್ಲಿರುವ ಹೊಂಡಗಳಾದರೂ ಮುಚ್ಚಿಸಿ ಸರಿಪಡಿಸಿ ಕೊಡುತ್ತಿದ್ದರೆ ಬಹಳ ಉಪಕಾರವಾಗುತಿತ್ತು

ಅರಂತೋಡು:— ಇಲ್ಲಿಯ ಬಂಗ್ಲೆಯ ಬಗ್ಗೆ ತೆಗೆಯುವ ಬಾವಿಯು ಶೀಘ್ರದಲ್ಲಿಯೇ ತೆಗಿಸುತ್ತಿದ್ದರೆ, ಪ್ರಯಾಣಿಕರಿಗೆ ಬಹಳ ಸಂತೋಷವಾಗುತಿತ್ತು

ಸಂಪಾಜೆ:— ಈ ಗ್ರಾಮದ ಗೂನಡ್ಕ ಎಂಬಲ್ಲಿ ಒಂದು ಬಾವಿಯು ಇಲ್ಲದೆ ಬಿಡಾರಮಾಡುವ ಸಾಹುಕಾರು ಜನರಿಗೆ ಬಹಳ ಕಷ್ಟವೇ ಸರಿ

ಇಲ್ಲಿಯ ಶಾಲೆಯಲ್ಲಿ ಹುಡುಗರು ೫೬ ಹುಡುಗಿಯರು ೧೧ ಕೂಡಾ ೪೭ ಮಂದಿ ಇದ್ದಾರೆ ಈ ಊರು ಪ್ರಾಂತ್ಯದಲ್ಲಿ ಮಲೇರಿಯ ಜ್ವರವು ಮಕ್ಕಳನ್ನು ಆಗಾಗ್ಗೆ ಪೀಡಿಸುವುದರಿಂದ ಕ್ವಿನಿನ್ ಪೊಟ್ಲೆಗಳು ಶಾಲಾ ಉಪಾಧ್ಯಾಯರ ಕೈಯ ಕೊಟ್ಟು ಮಕ್ಕಳಿಗೆ ಕೊಡಿಸುವ ಏರ್ಪಾಡು ಮಾಡುತ್ತಿದ್ದರೆ ಬಹಳ ಉಪಕಾರವಾಗುತಿತ್ತು

ಎಡಪದವು:— ಇಲ್ಲಿ ಪರಸ್ಪರ ಸಹಕಾರ ಸಂಘದ ಶಾಖೆಯೊಂದನ್ನು ತಾ ೩೦ ೩ ೨೦ನೇ ಶನಿವಾರ ದಿನ ಮ| ರಾ| ಯನ್ ಸುಬ್ಬಣ್ಣ ಭಟ್ಟ ಪ್ರೆಸಿಡೆಂಟರಾಗಿಯೂ, ರಾ ಕೆ ನರಸಿಂಹ ಭಟ್ಟ ಸೆಕ್ರೆಟರಿಗಳಾಗಿಯೂ ಈ ಗ್ರಾಮದ ಪಟೇಲ ಶಾಂತಿರಾಮ ಕ ದ್ರೈರು ವಗೈರೆ ೩ ಮಂದಿ ಪಂಚಾಯ್ತರಾಗಿಯೂ ನೇಮಿಸಿ ಇದೇ ಸಂಘದ ಇನ್ಸ್‌ಪೆಕ್ಟರ್ ರಾ| ಸುಂದರ ಭಟ್ಟ ಬಂದು ಸ್ಥಾಪಿಸಿದ ವರು ಸುಮಾರು ೫೦ ಜನ ಮೆಂಬರುಗಳು ಸೇರಿ ೪೬೦೦೦ ರೂಪಾಯಿ ಅಂದಾಜ ವಾಲ್ಯುವಂತಿಗೆಯು ಅಂದೇ ವಸೂಲಾಯಿತು ಗ್ರಾಮದ ಹಲವು ಮಂದಿ ಮಹಾನುಭಾವರು ಸದ್ರಿ ಸಭೆಗೆ ಚಿತ್ತೈಸಿದ್ದರು. ಈ ಸಂಘವನ್ನು ಸಂಘಕ್ಕೆ ಸೇರಿದವರೆಲ್ಲಾ ಒಳ್ಳೇ ರೀತಿಯಲ್ಲಿ ಪರಸ್ಪರ ಸಹಕಾರಿಗಳಾಗಿ ನಡಿಸುವರೆಂದು ನಂಬುತ್ತೇವೆ ಸಂಘದ ಸಭೆಯು ಪ್ರತಿ ಶನಿವಾರ ರಾ ಎನ್ ಸುಬ್ಬಣ್ಣ ಭಟ್ಟ ಮನೆಯಲ್ಲಿ ಕೂಡ ವದು

ಪುತ್ತೂರು ಎಡ್ಯುಕೇಶನ್ ಸೊಸೈಟಿ.— ಈ ಸಂಘದವರ ಆಡಳಿತೆಯಲ್ಲಿರುವ ಪುತ್ತೂರು ಸೆಕೆಂಡರಿ ಶಾಲೆಯ ವರ್ಧಂತಿ ಉತ್ಸವವು ಜಿಲ್ಲಾ ಕಲೆಕ್ಟರರಾದ ಮಿ| ಆರ್ ಎಚ್ ಎಲ್ಲಿಸರ ಅಧ್ಯಕ್ಷತೆಯಲ್ಲಿ ಇದೇ ಎಪ್ರಿಲ್ ೧೬ನೆ ತಾರೀಕು ಶನಿವಾರ ಸಾಯಂಕಾಲ ೪ ಗಂಟೆಗೆ ಪುತ್ತೂರಲ್ಲಿ ಜರಗಲಿಕ್ಕಿದೆ

ಇಲ್ಲಿಯ ರೆವೆನ್ಯೂ ಡಿವಿಜನಲ್ ಆಫೀಸರರು ತಾ ೧೧ರಿಂದ ೧೪ರ ವರೇಗೆ ಪುತ್ತೂರು, ತಾ ೧೫, ೧೬, ೧೭ ವಿಟ್ಲ, ತಾ ೧೮, ೧೯ ೨೦ ಬಾಯಾರು, ತಾ ೨೧ರಿಂದ ೨೭ರ ವರೇಗೆ ಕರ್ಜಪಳ್ಳ, ತಾ ೨೭ರಿಂದ ೩೦ರ ವರೇಗೆ ಕುಂಬಳೆ ಈ ರೀತಿ ಸರ್ಕೀಟು ಬೆಳಸುವರು

ದಕ್ಷಿಣಕನ್ನಡ ಪಟೇಲ ಶಾನುಭೋಗರ ಕಷ್ಟಸಂಕಷ್ಟಗಳು

ಈಚೆಗೆ ಕೆಲವು ಸಮಯದಿಂದ ಸರಕಾರ ನವುಕರರ ಪೈಕಿ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವ ನೊನಗೆಜೆಟೆಡ್ ಮತ್ತು ಕೀಳು ದರ್ಜೆ ನವುಕರರ ಮನವಿಗಳ ಪ್ರವಾಹವು ಸರಕಾರದ ಆಫೀಸುಗಳನ್ನು ಕದೀಯಿಸಿ ಬಿಟ್ಟಿದ್ದಲ್ಲದೆ ಈ ವಿಷಯವನ್ನು ಸೆಲಿ ಕಮಿಟಿಯವರ ಆಡಂಬರವಿಲ್ಲದೆ ಪರ್ಯಾಲೋಚಿಸುತಿದ್ದಾರೆ ಕಳೆದ ಸಲ ನಮ್ಮ ಜಿಲ್ಲೆಯನ್ನು ನಾನು ಸಂದರ್ಶಿಸಿದಾಗ ಈ ಪಟೇಲ ಶಾನಬೋಗ ಮುಂತಾದ ಗ್ರಾಮ ಉದ್ಯೋಗಸ್ಥರ ಸ್ಥಿತಿಯನ್ನು ಮನಗೊಟ್ಟು ನೋಡುವ ಸಂದರ್ಭ ಒದಗಿದ್ದರಿಂದ ಉಂಟಾದ ಅನುಭವವನ್ನು ಪ್ರಕಟ ಮಾಡದಿದ್ದರೆ ನಾನು ಕರ್ತವ್ಯಾಕರ್ತವ್ಯದ ವಿಚಾರವಿಲ್ಲದವನಾಗುವೆನು

ಪಟೇಲನು ಕಂದಾಯ ವಸೂಲ ಕಾನೂನು ಪ್ರಕಾರ ಜಿಲ್ಲೆ ಕ್ರಿಮಿನಲ್ ಮತ್ತು ಸಿವಿಲ್ ವೆಶೇಷ್ಟ ಮೆಗಳ ವಿಚಾರ, ಜನ ಜಾನುವಾರುಗಳ ಜನನ ಮರಣ ರಿಜಿಸ್ಟ್ರಿ ಸಂಶಯಿಕರ ನಡತೆಯ ಪರಕೀಯರ ಮೇಲೆ ಕಣ್ಣಿಟ್ಟು ಅವರ ಮತ್ತು ತಂಟೆಕೋರ ತಂಡದವರ ಚಲನ ಚಾಲಕಗಳ ಸಮಾಚಾರ, ಹಳ್ಳಿಯಲ್ಲಿ ನೀರಾವರಿಗಳ ಅನುಕೂಲತೆ, ಕಾಡುಗಳ ಅನುಕೂಲತೆ, ಅಂಟುಜಾಡ್ಯಗಳ ಮತ್ತು ಜಾನುವಾರು ಜಾಡ್ಯಗಳ ವ್ಯಾಪಕತ್ವವನ್ನು ರಿಪೋರ್ಟು ಮಾಡೋಣ, ಮತ್ತು ವಿವಿಧ ಬಗೆಯ ರಿಜಿಸ್ಟ್ರಗಳು ಭರ್ತಿ ಸುವದ , ಲೆಕ್ಕ ಪತ್ರಗಳನ್ನು ಇಡುವುದು, ಮುಂತಾದ ಹಲವು ಹದಿನೆಂಟು ಕೆಲಸಗಳನ್ನು ನೋಡಿಕೊಳ್ಳಲಿಕ್ಕೆ ಇದೆ ಶಾನುಭೋಗನು ಪೈರು ಬೆಳೆಸುವ ಮತ್ತು ಬಂಜರು ಸ್ಥಳಗಳ ಅನುಭವವನ್ನು ಬರೆದಿಡುವುದು, ಆ ಸ್ಥಳಗಳನ್ನು ಆಗಾಗ ಸಂಚರಿಸುವುದು, ಸರ್ವೆಕಲ್ಲುಗಳ ತನಿಖೆ, ತಿಂಗಳ ಗಟ್ಟಲೆಯ ಕೃಷಿಯ ಅಜಮಾಯಿಷ ಮಾಡಿ ಮೇಲಾಫೀಸರರಿಗೆ ಬರಕೊಳ್ಳುವುದು, ಜಮಾಬಂದಿ ಲೆಕ್ಕ ತಯಾರಿಸುವುದು, ಅಗಣಿತವಾದ ರಿಜಿಸ್ಟ್ರಗಳನ್ನು ಬರೆದಿಡುವುದು, ಮತ್ತು ಬರವಣ ಕೆಲಸದಲ್ಲಿ ಪಟೇಲರಿಗೆ ಸಹಾಯಕನಾಗಿರುವುದು, ಮುಂತಾದ ಕೆಲಸಗಳನ್ನು ಮಾಡಬೇಕಾಗಿದೆ ಖಜಾನೆಗೆ ಇರ್ಸಾಲು, ಟಪಾಲು ಕೊಂಡು ಹೋಗ ವುದು, ಹಳ್ಳಿಯಲ್ಲಿ ರಾತ್ರಿ ಗಸ್ತು ಮುಂತಾದ ಹಲವು ಕಷ್ಟ ತರದ ಕೆಲಸಗಳನ್ನು ಉಗ್ರಾಣಿ ಮಾಡಬೇಕಾಗಿದೆ ಹಲವು ಪಟೇಲ ಶಾನುಭೋಗರು ತಾಲೂಕು ಆಫೀಸಿಗೆ, ಜಮಾಬಂದಿ ರಿಯ್ಯಕ್ಕೆ ಕರೆಸಲ್ಪಡುವುದಲ್ಲದೆ ಇನ್ ಸ್ಪೆಕ್ಟರ್, ದರ್ಖಾಸ್ತು ಕುದ್ರುಲೆ ತಟ್ಟೀಲ್ಲಿ ಜನಗಳ ದರ್ಖಾಸ್ತು ಸ್ಥಳಗಳನ್ನು ಸರಕಾರಕ್ಕೆ ಬಿಟ್ಟು ಕೊಡೋಣ ಜಂಗ್ಲಿ ಆಟಕಾರಿ, ಸಂಬಂಧವಾದ ವಿಚಾರಣೆ ಕಾಲದಲ್ಲಿ ಆಯಾ ಇಲಾಖಾ ಮೇಲ್ ಆಫೀಸರರ ಬಳಿಗೆ ಹೋಗುವುದು, ಕೈತುಂಬಾ ಕೆಲಸವಿದೆ ಇಷ್ಟಿದ್ದರೂ, ಈ ನವುಕರರಿಗೆ ಸರಕಾರದಿಂದ ಸಿಗುವ ಸಂಬಳದ ದರ ಅತಿ ಕಡಿಮೆ, ಆದರಿಂದ ಈ ನವುಕರರಿಗೆ ತಿಂಗಳಲ್ಲಿ ೧೦ ದಿನ ಸಹಾ ಕುಟುಂಬ ಸಂರಕ್ಷಣೆ ಖರ್ಚು ಸಹಾ ಹೋಗಲಾರದು

ಬಹಳ ಪುರಾತನ ಕಾಲದಲ್ಲಿ ಈ ಉದ್ಯೋಗಗಳನ್ನು ಹಳ್ಳಿಯವರು ಒಂದು ಬಗೆಯ ಗೌರವದಿಂದ ಕಾಣುತ್ತಿದ್ದರು ಹೀಗಾಗಿ ಈ ಉದ್ಯೋಗಸ್ಥರಿಗೆ ಗ್ರಾಮದಲ್ಲಿ ಒಳ್ಳೆ ಮಾನವೂ ಇದ್ದು ಇಂಥ ಉದ್ಯೋಗಗಳಿಗೆ ಸಂಪತ್ತುಳ್ಳ ಮತ್ತು ಹಳ್ಳಿಯಲ್ಲಿ ಮಾತು ನಡೆಯುವ ವರ್ಗದವರೇ ಇರುತಿದ್ದರು ಆಗ ಈ ಬಿಲ್ಲರೆ ವೇತನಕ್ಕಾಗ್ಗಿ ಅವರು ಅಷ್ಟೊಂದು ಪೇಚಾಟ ಪಡಬೇಕಾಗಿದ್ದಿಲ್ಲ. ಆದರೆ ಈ ಸ್ಥಿತಿಯು ಈಗ ... ಹಪ್ಪ- ಇಲ್ಲದ ರಿಜಿಸ್ಟ್ರಗಳನ್ನು ಭರ್ತಿಯುತಿಸು

[illegible]

... ಮೇಲಾಫೀಸರರ ಹಿಂದೆ ... ಅವರಿಗೆ ... ಇನ್ನಿತರ ... ಅವರಿಗೆ ಬಹಳ ಹಿತ್ತಿಲುವ ... ಅಂಥ ಕೆಲಸಗಳಿಗೆ ... ಯೋಗ್ಯರೂ ಧನಾಢ್ಯರೂ ... ಅನೇಕರು ತಮ್ಮ ಜೀವನೋಪಾಯಕ್ಕಾಗಿ ... ಬೇರೆ ರೀತಿಯಿಂದ ಉದರ ನಿರ್ವಾಹ ಮಾಡ... ಅವರು ಪ್ರಯಾಣ ಮಾಡಿದ್ದ ... ಗಳೆ ಗಾಡಿ, ... ಅವರಿಗೆ ಸಿಗುವದಿಲ್ಲ.

ಸಾಮಾನ್ಯ ... ಕಡಿಮೆ ಮಿತಿಯನ್ನು ರೂ ... ಇರಿಸಿಟ್ಟಾರೆ. ಇದಕ್ಕಿಂತಲೂ ... ಆದ ವೇತನವನ್ನು ಹಾಗ್ಗಿಸದು ಗುಮಾಸ್ತರಕ್ಕೆ ಕೆಲಸದ ಅವಾಚ್ಯಾರಿಯು ಈ ಗ್ರಾಮ ಉದ್ಯೋಗಸ್ಥರಿಗೂ ಇದೆ, "ಕೊಡೋದು ಮೂರು ಕಾಸು, ಮಾಡೋದು ಕೆಲಸ ಆರು ಕಾಸು" ಎಂಬದರಿಂದ ಈ ಜನಗಳಲ್ಲಿ ಈಗ ಬಹಳ ಅಸಮಾಧಾನವುಂಟಾಗಿದೆ. ಈ ಅವಸ್ಥೆಯನ್ನು ಬೇಗನೇ ಹೋಗಲಾಡಿಸದಿದ್ದರೆ "ಆಚಾರಕ್ಕೆ ಕಳ್ಳ ಬಿದ್ದ" ಎಂಬಂತೆ ಇವರ ಕೆಲಸದ ಸ್ಥಿತಿಯು ... ಬರುವುದು ಸರಕಾರದ ಆಡಳಿತೆಯು ಅಸ್ತಿವಾರಕ್ಕೆ ಇವರೇ ಕಳಕಲ್ಲು ಆಗಿರುವುದರಿಂದ ಅವರನ್ನು ಕೈಬಿಡದು ಎತ್ತಿದೆ ಅವರ ಕಷ್ಟ ಸಂಕಟಗಳ ಕಡೆಗೆ ಬೆನ್ನು ಹಾಕುವುದು ಯುಕ್ತವಲ್ಲ ಅದ್ದರಿಂದ ಸೆಲಿ ಕಮಿಟಿಯವರು ಇವರ ಮೇಲೆಯ ಕಡೆಗೆ ಕೃಪಾದೃಷ್ಟಿಯನ್ನು ಬೀರಿ ಪಟೇಲ ಶಾನಭೋಗರ ಸಂಬಳ ರೂ 30 ಕ್ಕೂ ಉಗ್ರಾಣಿಗಳ ಸಂಬಳ 15 ಕ್ಕೂ ಏರಿಸಬೇಕಾಗಿ ನನ್ನ ಕೋರಿಕೆ

(ಸಹಿ) ಡಾ| ಯು ರಾಮರಾವ,
ಮದ್ರಾಸು

ವೀಳೆಯದೆಲೆಯ ಬಳ್ಳಿ.

(... 'ಸಾಯಂಟಿಫಿಕ್ ಎಗ್ರಿಕಲ್ಚರಿಸ್ಟ ಪತ್ರಿಕೆಯಿಂದ')

ಎಲೆ ಅಡಕೆಯನ್ನು ಜಗಿಯುವ ಅಭ್ಯಾಸವು ಹಿಂದೂದೇಶದಲ್ಲಿ ಸರ್ವತ್ರವೂ, (ದೊಡ್ಡವರೇನು ಬಡತ್ತರೇನು,) ಬಳಕೆಗೊಂಡಿದೆ ಗೃಹಸ್ಥನಾಳಿಗೆಯು ಸಲ್ಲಕ್ಕೆವಂದರೆ, ವೀಳೆಯದ ಹರಿವಾಣವನ್ನು ಅರ್ಪಿಸುವುದೆಂದು ರೂಢಿ, ಪರದೇಶಿಯರಿಗೆ ಈ ವ್ಯವಸ್ಥೆಯು ಅಷ್ಟೊಂದು ಸಮರ್ಪಕವಾಗಿ ತೋರುವುದಿಲ್ಲವಾದರೂ, ಅದನ್ನು ಬೆಳಯಿಸುವ ವಿಧಾನವನ್ನು ತಿಳಿದರೆ ಅನರ್ಥನೆನ್ನುವತೋ ವೀಳೆಯದೆಲೆಯಲ್ಲಿ ಮೂರು ತರಗಳಿವೆ ದೇಶೀ, ಸಾಂಚಿ, ಮತ್ತು ವಿ ಠಾ ಕೊನೆಯ ಎರಡು ಜಾತಿಯ ಎಲೆಗಳನ್ನು ಅವುಗಳ ಸುವಾಸನೆಯಿಂದಲೆ ತಿಳಿಯಬಹುದಾಗಿದೆ ಮೊದಲನೆಯದು ಬಹಳೇ ಅಗ್ಗ ಸಾಂಚಿಯ ಎಲೆ ದೊರಗು ವಿಠಾ ಬಹಳ ರುಚಿಯುಳ್ಳದು. ಸಾಂಚಿ ಎಲೆಯಿಂದ ಉತ್ತರ ಸೀಮೆಯಲ್ಲಿ ಪರಿಪ ಳದ ಎಣ್ಣೆಗಳನ್ನು ಹಿಂಡುವುದಿದೆ ನಮ್ಮ ಸೀಮೆಯ ಹಲವು ಪ್ರದೇಶಗಳಲ್ಲಿ ಎಲೆಯ ಬಳ್ಳಿಯನ್ನು ಕೃಷಿ ಮಾಡುವವರು ಇತರ ಬೇಸಾಯಗಳಿಗಿಂತ ಸುಲಭವಾಗಿ ಉತ್ತಮ ಲಾಭವನ್ನು ಹೊಂದುತ್ತಿರುವರು ಎಲೆಯ ಕೃಷಿಮಾಡುವ ಉತ್ತಮ ತರಗತಿಯ ಜನಗಳು ತಮ್ಮ ಕೃಷಿ ವಿದ್ಯೆಯನ್ನು ಗುಟ್ಟಾಗಿಯೆ ಇಟ್ಟುಕೊಂಡಿರುವರು ಈ ಗುಟ್ಟುಗಳು ನಮ್ಮೂರ ಜನರೂ ತಿಳಿದುಕೊಂಡರೆ ಎಲೆಯನ್ನು ಬೆಳೆಸಲು ಸುಲಭ ಸಾಧ್ಯವಾಗಿ ಜನರಿಗೆ ಲಾಭವಾದೀತೆಂಬ ಆಸೆಯಿಂದ ನಾಲ್ಕು ಮಾತುಗಳನ್ನು ಇಲ್ಲಿ ಬರಯುತ್ತೇವೆ

ವೀಳೆಯದೆಲೆ ಬೆಳೆವ ಸ್ಥಳವು ತಗ್ಗಾಗಬಾರದು ಬಳ್ಳಿಯ ಬುಡದಲ್ಲಿ ನೀರ ನಿಂತರೆ, ಬೆಳೆಗೆ ಅಪಾಯವು ಅದು ಕಾರಣ, ನೆರೆ ನೀರಿನ ತಳಕ್ಕಿಂತಲೂ ಎತ್ತರವಾಗಿ, ಬಯಲುಗಳಲ್ಲಿ ಈ ಬಳ್ಳಿಯನ್ನು ಬೆಳಸುತ್ತಾರೆ, ಮಣ್ಣು ಕೆಂಪುಕೆಂಪಾದ್ದು ಇರಬೇಕು ತ್ವಾವದುಳ್ಳದ್ದಾಗಬೇಕು ಕಪ್ಪಾದ ಮಣ್ಣಿನಲ್ಲೂ ಸೊಪ್ಪುಗೊಬ್ಬರ ಕೂಡಿದ ಮಣ್ಣಿನಲ್ಲೂ ಕೂಡ ಬೆಳೆ ಚೆನ್ನಾಗಿಯೆ ಆಗುವುದು ಸುತ್ತಲಿನ ಯಾವತ್ತು ಹಸರನ್ನು ಕಿತ್ತು, ಸುತ್ತಲೂ ಗುಳಿಯನ್ನು ತೋಡಿ, ಆ ಗುಳಿಯ ಮಣ್ಣನ್ನು ನೆಲದ ಮೇಲೆ ಹರಡಿಸಿ, ನೆಲವನ್ನು ಏರಿಸುವರು ಅರ್ಧ ಕೋಲಿನಷ್ಟು ಆಳಕ್ಕೆ ನೆಲವನ್ನೆಲ್ಲ ಅಗೆದು, ಹೆಂಟೆಗಳನ್ನು ಪುಡಿಮಾಡಿ, ಸಮತಟ್ಟಾಗಿ ಮಾಡಬೇಕು ನೆಲವುಳ್ಳ ಜಾಗವಾದರೆ, ಹೆಚ್ಚು ತಂಪಿನಿಂದ ಬೆಳೆ ಚೆನ್ನಾಗುವುದು ಬಿರುಗಾಳಿಗಾಗಲಿ, ಮಳೆಯ ಹೊಡತಕ್ಕಾಗಲಿ ಬಳ್ಳಿಗಳು ಹಾಳಾಗದ ಹಾಗೆ, ಬಿದಿರಿನ ಸಲಾಕೆಗಳನ್ನು ಸಿಲ್ಸಿಸಿ, ಅವುಗಳ ಪಂಜರದ ಮರೆ ಈ ಬಳ್ಳಿಗಳನ್ನು ಹಬ್ಬುವುದು ವಾಡಿಕೆ ಈ ಪಂಜರದ ಮೇಲೆ ಪುನಃ ಕುಂಬಳ ಜಾತಿಯ ಬಳ್ಳಿಗಳನ್ನು ನೆಟ್ಟರೆ, ಎಲೆಯ ಬಳ್ಳಿಗೆ ತುಂಬ ತಂಪಾಗುವುದು

ಎರಡು ವರ್ಷ ಬೆಳೆದ ಬಳ್ಳಿಗಳ ತುಂಡುಗಳನ್ನು ಕೊಯಿದು, ಅವನ್ನು ನೆಟ್ಟು, (ಆರೆಂಟು ಗಿಣ್ಣುಗಳ ಉದ್ದ) ಅರೆ ಅಡಿ ದೂರಕ್ಕೆ ಬೆಳಸುವರು ಅಡಿಯನ್ನು ಎಲೆಗಳಿಂದ ಮುಚ್ಚಿ ಎಲೆ ಗೊಬ್ಬರ ಹಾಕಿ, ನೀರು ಹೊಯ್ಯುವರು ಬೇರು ಹಬ್ಬುವ ಮೊದಲು ಬಹಳ ಜಾಗರೂಕತೆಯಿಂದ ನೀರನ್ನು ಎರಿಯುತ್ತಾರೆ ಎಲೆಯ ತೋಟದಲ್ಲಿ ಕೆಲವು ವೇಳೆ ೧೦—೩೦ ವರ್ಷಗಳ ವರೆಗೂ ಬೆಳೆಯಾಗುವುದುಂಟು ಬಳ್ಳಿಗಳು ಸಲಾಕೆಗಳನ್ನು ಆಧರಿಸಿಯೆ ಬೆಳೆವುವು ಮೇಲಿಂದಂತೆ, ಅವನ್ನು ಬಾಗಿಸಿ ಪುನಃ ಕೆಳಗೂ ಇಳಿಯಗೊಡುವರು ಕೆಳಕ್ಕಿಳಿದುವನ್ನು ಮಣ್ಣಲ್ಲಿ ಹೂತು, ಅವು ಅಲ್ಲಿ ಬೇರು ಬಿಡುವ ಹಾಗೆ ಮಾಡಬಹುದು ಹೀಗೆ ಮೂರು ಮೂರು ಬಾರಿಗೂ ನೂಡುವ ಕ್ರಮವೂ ಇದೆ

ಹೆಚ್ಚು ನೀರಾಶಯವುಳ್ಳ ಸ್ಥಳಗಳಲ್ಲಿ ನೀರಾವರಿಯ ವ್ಯವಸ್ಥೆಯೇನೂ ಅಗತ್ಯವಿಲ್ಲ ಬಹು ಕಾಲ ಬಾಳುವ ಬೆಳೆಯಾದ ಕಾರಣ, — ಗೊಬ್ಬರವೂ ವಿಶೇಷ ಫಲಕಾರಿಯಾದುದೇ ಆಗಬೇಕು ಒಣಗಿದ ಎಲೆಗಳನ್ನು ಪರೀಕ್ಷಿಸಿದರೆ, ಅವುಗಳಲ್ಲಿ ಸೀಕಡಾ ೩—೩ರ ಅಂಶವು ತುಂಬಾ ಸೌಲಭ್ಯದ ಅಂಶವಿದೆಯೆಂದು ರಾಸಾಯನಿಕರು ಕಂಡುಕೊಂಡಿರುವರು ಬೇರೆ ವಿಧದ ಎಲೆಗಳಲ್ಲಿ ನೂರು ಭಾಗಗಳಲ್ಲಿ ೧೨ನೇ ಅಂಶವು ಕೂಡ ಈ ವಸ್ತುವು ಇರುವುದಿಲ್ಲ ಅದು ಕಾರಣ, ಅದರಲ್ಲಿರುವ ಈ ಪದಾರ್ಥವು ವಿಶೇಷ ಲಕ್ಷಣವುಳ್ಳುದೆಂದು ಅಭಿಪ್ರಾಯ ಹಿಂಡಿಗೊಬ್ಬರವನ್ನೆ ಹೆಚ್ಚಾಗಿ ಪ್ರಯೋಗಿಸುತ್ತಿರುವುದು ಇದೇ ಕಾರಣದಿಂದ, ಆದರೆ ಎಣ್ಣೆಗಳನ್ನು ಹಿಂಡಿ ಬರಲಿಂದ ಪದಾರ್ಥಗಳ ಗೊಬ್ಬರದ ದೆಸೆಯಿಂದ ಈ ಬಳ್ಳಿಗೆ ಹೆಚ್ಚಿನ ಕೆಡುಕು ಉಂಟೆಂಬುದಾಗಿ ತಿಳಿದು ಬಂದಿದೆ ಅದು ಕಾರಣವ್ನ ಈಗ ಬಂಗಾಳದಲ್ಲಿ ಬಹು ವಿಶೇಷವಾಗಿ, ನೈಟ್ರೇಟನ್ನು (ಸೌರುಗೊಬ್ಬರ) ಉಪಯೋಗಿಸುತ್ತಾರೆ. ಇದರಿಂದ ಬೆಳೆಗೆ ಬೇಕಾಗುವ ಕ್ಷಾರಜನಕವು ಬೇಕಾದಷ್ಟು ತಡದಲೆ ಸಹಜವಾಗಿ ಸುಲಭವಾಗಿ ದೊರೆಯುತ್ತಿದೆ ಬೇಸಗಾಲದಲ್ಲಿ ಮಣ್ಣಿನಲ್ಲಿ ಕ್ಷಾರಜನಕವು ಕಡಿಮೆಯಾಗಿ, ಎಲೆಗಳೂ ಕೆಂಪಗಾಗುವ ಕಾರಣ ಆಗಲೆ ಸೌಲಭ್ಯ ಗೊಬ್ಬರವನ್ನು ಆಗತ್ಯವಾಗಿಯೂ ಉಪಯೋಗಿಸಬೇಕು, ಈ ಗೊಬ್ಬರವು ಮಣ್ಣಲ್ಲಿ ಸೇರಿ, ಬೇರುಗಳ ಮೂಲಕ ಮೇಲೇರುತ್ತ, ಮೇಲ್ಭಾಗದಲ್ಲಿ ತುಂಬ ರಸವಾಗಿ ನಿಲ್ಲುವುದು ಎಲೆಯ ಬಳ್ಳಿಗಳಲ್ಲಿ ಈ ಗೊಬ್ಬರದ ಫಲವನ್ನು ಪ್ರತ್ಯಕ್ಷವಾಗಿ ಸುಲಭವಾಗಿ ಕಾಣಬಹುದಾಗಿದೆ,

ಕೆಲವೇಳೆ ಎಲೆಗಳನ್ನು ಬಿಳಿಯಾಗುವಂತೆ ಮಾಡಿ, ಕೃಷಿಕರು ಮಾರುವುದಿದೆ, ಬಿಳಿ ಎಲೆಗಳಲ್ಲಿ ನೈಟ್ರೇಟು ತುಂಬಾ ಇರುವುದು ನೈಟ್ರೇಟು ಎಷ್ಟು ಹೆಚ್ಚಾಗುವುದೊ, ಅಷ್ಟಕ್ಕೆ ಎಲೆಗಳೂ ಬಿಳುಪಾಗುವ ಹಾಗೆ ಕೃತ್ರಿಮೋಪಾಯಗಳು ಸಾಧಕರೂಗುವುವು ಬಿಳಿ ಎಲೆಗಳಿಗೆ ರುಚಿ ಹೆಚ್ಚು; ಪರಿಮಳವೂ ಹೆಚ್ಚು ಈ ರೀತಿಯಲ್ಲಿ ಸೌಲಭ್ಯದ ಪರಿಣಾಮವು ಚೆನ್ನಾಗಿ ಗುಣಕಾರಿಯಾಗಿದೆ ಎಂದು ಹೇಳಬಹುದು.

ದಕ್ಷಿಣ ಕನ್ನಡದಲ್ಲಿ ಕಳೆದ ವರ್ಷ ವೀಳೆಯದೆಲೆಯ ೧೧೧೪ ಎಕ್ರೆ ವಿಸ್ತೀರ್ಣದ ಸ್ಥಳದಲ್ಲಿ ಸಾಗುವಳಿ ಮಾಡಲ್ಪಟ್ಟಿತಾಗಿ ತಿಳಿದಿದೆ.

ಉಪ್ಪಿನಂಗಡಿ ತಾಲೂಕಿನ ಜ್ಞಾನಭಾಗರ ಪರಿಷತ್ತಿನಲ್ಲಿ ಜ್ಞಾನಭಾಗರ ಎಸೋಸಿಯೇಶನಿನ ಕಾರ್ಯದರ್ಶಿಯು ಓದಿದ ಭಾಷಣ.

(ಗತ ಸಂಚಿಕೆಯಿಂದ ಮುಂದರಿದುದು.)

[illegible]

	I ನೇ ತ.	II ನೇ ತ.	III ನೇ ತ.	IV ನೇ ತ.
[illegible]	[illegible]	[illegible]	[illegible]	[illegible]

[illegible]

ತುರ್ಕಿಯ ವಿಚಾರದಲ್ಲಿ ಮಿತ್ರಪಕ್ಷದವರು ಇನ್ನೂ ಇತ್ಯರ್ಥಿಸಲಿಲ್ಲ. ಹಿಂದೂಸ್ಥಾನದಲ್ಲಿ ಹಿಂದು ಮುಸಲ್ಮಾನ ಮುಖಂಡರು ಅಲ್ಲಲ್ಲಿ ಸಭೆಸೇರಿ ತುರ್ಕಿಯ ಗೌರವವನ್ನು ಹೋಗಾಡಿಸಬಾರದೆಂದೂ ಮುಸಲ್ಮಾನರ ಧರ್ಮಗುರುವಾದ ಸುಲ್ತಾನರಿಗೆ ಮುಸಲ್ಮಾನರ ಪರಿಶುದ್ಧಸ್ಥಳಗಳ ಮೇಲಿನ ಅಧಿಕಾರವನ್ನು ಕಳೆದು ಬಿಡಬಾರದೆಂದೂ ಠರಾವುಗಳನ್ನು ಮಾಡಿದಲ್ಲದೆ, ಖಿಲಾಫತ್ ಪ್ರಶ್ನೆಯನ್ನು ಬ್ರಿಟಿಷ ಮುತ್ಸದ್ದಿಗಳ ಮುಂದೆಯೂ, ಸಾಧ್ಯವಿದ್ದರೆ ಫ್ರಾನ್ಸಿನಲ್ಲಿ ಮಿತ್ರಪಕ್ಷದ ಕೌನ್ಸಿಲಿನ ಮುಂದೆಯೂ ವ್ಯವಹರಿಸಬೇಕೆಂದು ಮುಸಲ್ಮಾನರ ಪ್ರತಿನಿಧಿಗಳ ಒಂದು ಕಮಿಟಿಯು ವಿಲಾಯತಿಗೆ ಹೋಗಿ ಕೆಲವು ಸಮಯವಾಯಿತು. ಕೆಲವು ಕಾಲದ ವರೆಗೆ ನಿರ್ಬಂಧದಲ್ಲಿದ್ದು ಈಚೆಗೆ ಬಿಡುಗಡೆಹೊಂದಿದ ಮಿ| ಮಹಮ್ಮದ ಅಲ್ಲಿ ಸಾಹೇಬರು ಈ ಕಮಿಟಿಯಲ್ಲಿ ಅಗ್ರೇಸರರು. ಇವರು ಮಿ| ಲೊಯಿಡ ಜೋರ್ಜರ ಮುಂದೆಯೂ ಖಿಲಾಫತ್ ಪ್ರಶ್ನೆಯನ್ನು ಕೆಲವು ದಿವಸಗಳ ಹಿಂದೆ ಬಾಯ್ದೆರೆ ವಾದ ಮಾಡಿದ್ದರು. ಆ ಸಮಯದಲ್ಲಿ ತುರ್ಕಿಗೆ ಯುದ್ಧದ ಮೊದಲಿದ್ದ ಪ್ರಾಂತಗಳಲ್ಲಿ ಯಾವದೊಂದು ಅಂಶವನ್ನಾದರೂ ಕಿತ್ತು ತಿಂಗಡಿಸಬಾರದು, ತುರ್ಕಿಯ ವಿಷಯವಾಗಿ ನಿಷ್ಪಕ್ಷಪಾತದಿಂದ ವರ್ತಿಸಬೇಕು ಎಂಬದಾಗಿ ಹೇಳಿದರು. ಆಗ ಮಿ| ಲೊಯಿಡ್ ಜೋರ್ಜರು ಹೇಳಿದ ಮಾತಿನಲ್ಲಿ "ತುರ್ಕಿಯನ್ನು ಮಿತ್ರಪಕ್ಷದವರಲ್ಲಿ ಯಾರೂ ಯುದ್ಧಕ್ಕೆ ಕರೆಸಲಿಲ್ಲ, ಯುದ್ಧಕ್ಕೆ ಮೊದಲು ಬೇರೆ ಬೇರೆ [illegible] ತುರ್ಕಿಗೂ ಜಗಳ ಎದ್ದಾಗ ಬ್ರಿಟಿಷರು ತುರ್ಕಿಯ ಪಕ್ಷವನ್ನೆ ವಹಿಸಿ [illegible] ಸ್ನೇಹಭಾವದಿಂದ ಇದ್ದುದನ್ನೆಲ್ಲ ಸ್ಮರಣೆಗೆ ತಾರದೆ ಜರ್ಮನ [illegible] ಮುಖ್ಯವಾಗಿ ತುರ್ಕಿಯವರು ಜರ್ಮನರು ತೋರಿಸಿದ ಮರೀಚಿಕೆ [illegible] ಸೇರಿಂದು ನಂಬಿ ಈ ಅವಸ್ಥೆಯನ್ನು ತಾವಾಗಿ ತಂದುಕೊಂಡರು. ಈಗ ತುರ್ಕಿಯು ತೀಕ್ಷವನ್ನು ಸಂಪಾದಿಸಬೇಕೆಂದು ಕೇಳುತ್ತದೆ. ನಾವು ಅದನ್ನೆ ಮಾಡುತ್ತಿದ್ದೇವೆ, ಜರ್ಮನಿ, ಆಸ್ಟ್ರಿಯಾ ಇವುಗಳ ವಿಷಯದಲ್ಲಿ ನ್ಯಾಯಪರಿಪಾಲನೆ ಮಾಡಿದಂತೆಯೆ ತುರ್ಕಿಯನ್ನು ಕುರಿತು ಮಾಡಲಿಕ್ಕಿದ್ದೇವೆ" ಎಂದು ಗಂಭೀರವಾದ ನುಡಿಗಳನ್ನಾಡಿದ್ದಾರೆ. ಇದಲ್ಲದೆ ಕೊನಸ್ಟೆಂಟಿನೋಪಲದಿಂದ ತುರ್ಕಿಯ ಸುಲ್ತಾನರನ್ನು ಹೊರಪಡಿಸದಿದ್ದರೂ, ಕಪ್ಪು ಸಮುದ್ರದ ಬಾಯಾದ ಜಲಸಂಧಿ ಬೇಗದ ಕೈಯನ್ನು ಇನ್ನು ತಿರಿಗಿ ತುರ್ಕಿಗೆ ಒಪ್ಪಿಸಲಾರೆವು, ತುರ್ಕಿಯ ದುಷ್ಟ ವರ್ತನದಿಂದ ಬಳಲಿದ ಮುಸಲ್ಮಾನರಲ್ಲದ ಪ್ರಜೆಗಳಿಗೆ ಆತ್ಮನಿರ್ಣಯದ ಸಂಪೂರ್ಣ ಹಕ್ಕನ್ನು ಕೊಡಲಿಕ್ಕಿದ್ದೇವೆ, ಕೊನಸ್ಟೆಂಟಿನೋಪಲದ ಸುತ್ತಲಿರುವ ಥ್ರೇಸ್ ಪ್ರಾಂತದಲ್ಲಿ ತುರ್ಕಿಗಳಿಗಿಂತಲೂ ಗ್ರೀಕರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ಆ ಭಾಗವು ಗ್ರೀಕರ ಕೈವಶವಿರುವುದು; ಡಮಸ್ಕಸದಲ್ಲಿ ನೂತನ ರಾಜ್ಯ ಸ್ಥಾಪನೆಮಾಡಿದ ಅರಬಿ ಅರಸರಾದ ಅಮೀರ ಫೈಸಲರೂ ಹೆಜ್ಜಾಜದಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸಿದ ಸುಲ್ತಾನ ಹುಸ್ಸೇನರೂ ಇನ್ನು ತುರ್ಕಿಯ ಅಧಿಕಾರಕ್ಕೆ ತಲೆಗೊಡುವಂತಿಲ್ಲ, ಬಹಳ ಕಾಲದಿಂದಲೂ ಆರ್ಮೇನಿಯರಿಗೂ ತುರ್ಕರಿಗೂ ಜಗಳಗಳು ಎದ್ದು ಆರ್ಮೇನಿಯರ ಕೊಲೆಗಳು ನಡೆಯುತ್ತಿರುವುದರಿಂದ ಅವರಿಗೂ ಸ್ವಾತಂತ್ರ್ಯ ಬೇಕಾಗಿದೆ, ಪೆಲೆಸ್ತಿನದಿಂದ ಒಂದೆರಡು ಸಾವಿರ ವರ್ಷಗಳ ಹಿಂದೆ ಹೊರಪಟ್ಟ ಯೆಹೂದ್ಯರು ಪುನಃ ತಮ್ಮ ಪರಿಶುದ್ಧಸ್ಥಳವನ್ನು ಸೇರುವ ಕಾಂಕ್ಷೆಯಿಂದ ತಪ್ಪಿಸುತ್ತಲಿ ಇದ್ದಾರೆ ಎಂದು ಮುಂತಾಗಿ ಮಿ| ಲೊಯಿಡ ಜೋರ್ಜರು ಉತ್ತರಕೊಟ್ಟರು. ಮಿ| ಮಹಮ್ಮದಾಲಿಯವರಿಗೂ ಈ ಸಂದರ್ಭದಲ್ಲಿ ನಡೆದ ಚರ್ಚೆಯಲ್ಲಿ ಪೆಲೆಸ್ತಿನ ಸಾಯ್ರಿಯಾ ಮೆಸೊಪೊಟೆಮಿಯ ಬಹಳ ಕಾಲದಿಂದಲೂ ತುರ್ಕಿಯ ಸುಲ್ತಾನರನ್ನೆ ಧರ್ಮಗುರುವಾಗಿಯೂ ಅಧಿರಾಜನಾಗಿಯೂ ಭಾವಿಸಿಕೊಂಡಿದ್ದರು. ಈಗ ಒಂದು ವೇಳೆ ಸುಲ್ತಾನಹುಸ್ಸೇನರೂ, ಅಮೀರ್ ಫೈಸಲರೂ ಸಾಯ್ರಿಯ, ಪೆಲೆಸ್ತಿನಗಳಲ್ಲಿ ಅಧಿಕಾರ ಸ್ಥಾಪಿಸಿದ್ದಾರೆ ಎಂದು ವಾದಿಸಿದರೂ, ತುರ್ಕರಿಗೂ ಅರೇಬಿಯವರಿಗೂ ಇನ್ನು ಪರಸ್ಪರ ಜಗಳಾಡಿ ರಕ್ತಪಾತಮಾಡಬೇಕೆಂಬ ಆಸೆ ಇಲ್ಲ, ಮಿತ್ರಪಕ್ಷದವರು ನಿರ್ಬಂಧಿಸದರೆ ಇವರಿಬ್ಬರಿಗೂ ತಮ್ಮ ಅಧಿಕಾರವನ್ನೆ ತುರ್ಕಿಯ ಸುಲ್ತಾನರ ಆಶ್ರಯದೊಳಗೆ ನಡೆಸಲಿಕ್ಕೆ ಒಪ್ಪಬಹುದು, ಹಾಗೆ ಒಪ್ಪುವಂತೆ ಮಾಡುವುದರಲ್ಲಿ ಹಿಂದೀ ಮುಸಲ್ಮಾನರು ಕಾತರಪಡುತ್ತಿದ್ದಾರೆ, ಆರ್ಮೇನಿಯರ ಕೊಲೆಗೆ ಎಷ್ಟರ ಮಟ್ಟಿಗೆ ಆರ್ಮೇನಿಯರ ಒಳಸಂಚು ಜವಾಬ್ದಾರಿಯಾಗಿದೆ ಎಂದು ಮಿತ್ರಪಕ್ಷದವರ ಒಂದು ಕಮಿಶನವನ್ನು—ಅದರಲ್ಲಿ ಹಿಂದೀ ಮುಸಲ್ಮಾನರ ಪ್ರತಿನಿಧಿಗಳೂ ಇರಬೇಕು—ಸ್ಥಳ ತನಿಖೆ ನಡಿಸುವ ಮುಂಚೆ ಎಕ್ಸ್ ಪಾರ್ಟೆ (ಏಕಪಕ್ಷೀಯ) ಠರಾವು ಮಾಡುವುದು ನ್ಯಾಯಸಮ್ಮತವಲ್ಲ, ಅಂಥಾ ಕಮಿಶನದ ಅಭಿಪ್ರಾಯದಲ್ಲಿ ಈ ಕೊಲೆಗೆ ತುರ್ಕಿಯವರೆ ಜವಾಬ್ದಾರರೆಂದು ರುಜುವಾದರೆ ಅಂಥಾ ಕೊಲೆಪಾತಕರ ಗಳ ಪಕ್ಷವನ್ನು ಹಿಂದೀ ಮುಸಲ್ಮಾನರು ತ್ಯಜಿಸಲಿಕ್ಕೆ ಸಿದ್ಧವೇ ಇದ್ದಾರೆ, ಎಂದು ಹೇಳಿದ್ದಾರೆ. ಇದಲ್ಲದೆ ಮಿ| ಮಹಮ್ಮದಾಲಿಯವರು ಈ ಬಗೆಯ ಕಮಿಶನ್ ಏರ್ಪಡಿಸುವುದಕ್ಕೆ ಮಿತ್ರಪಕ್ಷದ ಪ್ರತಿನಿಧಿಗಳ ಮನಸ್ಸನ್ನು ಸೆಳೆಯಬೇಕೆಂದು ಇಂಗ್ಲಂಡಿನಲ್ಲಿ ಪ್ರಯತ್ನಿಸುವುದಲ್ಲದೆ, ಬ್ರಿಟಿಷ ಪಾರ್ಲಮೆಂಟಿನ ಮುಖಂಡ ಮೆಂಬರರನ್ನೂ, ಅವರಲ್ಲಿಯೂ ಮಜೂರಪಕ್ಷದವರನ್ನು ತನ್ನ ಕಡೆಗೆ ಸೆಳೆಯುವಂತೆ ಸಾಹಸಮಾಡುತಲಿದ್ದಾರೆ. ಇವರ ಪ್ರಯತ್ನಕ್ಕೆ ಬೆಂಬಲವಾಗಿಯೊ ಅಥವಾ ದಕ್ಷಿಣ ಆಫ್ರಿಕದಲ್ಲಿ ಹಿಂದೀ ಜನಗಳಿಗೆ ಪುನಃ ಪೀಡಿಸುವುದಕ್ಕೆ ತಯಾರಾದ ಕಾನೂನುಗಳನ್ನು ಕುರಿತು ಚರ್ಚಿಸುವುದಕ್ಕಾಗಿಯೊ—ಬಹುಶಃ ಎರಡು ಉದ್ದೇಶಗಳೂ ಇರಬಹುದು—ಮಹಾತ್ಮಾಗಾಂಧಿಯವರು ಬೇಗನೆ ವಿಲಾಯತಿಗೆ ಹೋಗುವವರಿದ್ದಾರಂತೆ.

ಡಿಸ್ಟ್ರಿಕ್ಟ್‌ಬೋರ್ಡ ಮೀಟಿಂಗು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಬೋರ್ಡಿನ ಕಳೆದ ತಿಂಗಳ ೩೦ನೆ ತಾರೀಕಿನ ಮೀಟಿಂಗಿನಲ್ಲಿ ಪ್ರೆಸಿಡೆಂಟರ ಗೈರಹಾಜರಿ ಸಂಬಂಧ ವೈಸ್‌ಪ್ರೆಸಿಡೆಂಟರಾದ ರಾವ್ ಸಾಹೇಬ ಪಿ ಕೃಷ್ಣನ್ ನಂಬಿಯಾರರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಕೆಳಗಿನ ಕಾಮಗಾರಿ ಅಂದಾಜುಪಟ್ಟಿಗಳು ಮಂಜೂರಾದವು:—ಹೊಸಂಗಡಿ ಕಂಡ್ಲೂರ ರಸ್ತೆಯಲ್ಲಿ ಬಲ್ಲಿಕಲ್ಲು ಸಂಗ್ರಹಕ್ಕೆ ರೂ. ೭೯೧೦, ಕಡಲೂರು ಘಾಟಿ ರಸ್ತೆಗೆ ರೂ. ೪೫೦, ಡಿ| ಇಂಜಿನಿಯರ್ ಆಫೀಸಿನ ಎಂಜಿನ ಶೆಡ್ಡಿಗೆ ದುರುಸ್ತಿಗೆ ರೂ. ೪೭೫, ಮಂಗಳೂರು ಸಂಪಾಜೆರಸ್ತೆಯ ೧೫/೪ ಮೈಲಿನ ಬಳಿಯಲ್ಲಿ ದುರುಸ್ತಿಗೆ ರೂ. ೪೨೫, ಉಡುಪಿ ಕಾರ್ಕಳ ರಸ್ತೆಯ ೧೯/೭ನೆ ಮೈಲಿಯಲ್ಲಿ ಒಂದು ಮೋಹರಿಯನ್ನು ಪುನಃ ಕಟ್ಟಿಸಲಿಕ್ಕೆ ರೂ. ೮೩೦, ಕಲ್ಯಾಡಿ ಕಡವಿನಲ್ಲಿ ಒಂದು ದೋಣಿಯ ಬಗ್ಗೆ ರೂ. ೮೦, ಮುಲ್ಕಿ ಕಡವಿನ ಉತ್ತರ ಪಡದಲ್ಲಿ ಕಲ್ಲುಧಕ್ಕೆ ಕಟ್ಟಿಸಲಿಕ್ಕೆ ರೂ. ೧೯೦೦; ಮಂಗಳೂರು ಮಡಿಕೇರಿ ರಸ್ತೆಯ ೪೯/೫ ಮೈಲಿಯ ಬಳಿಯಲ್ಲಿರುವ ಸೇತುವೆಯ ದುರುಸ್ತಿಗೆ ರೂ. ೧೩೦೦, ಸೇಟೆಂ ಗ್ರಾಂಟಿನಿಂದ ಕೆಲವು ಕಾಮಗಾರಿಗಳ ಬಗ್ಗೆ ರೂ. ೧೦,೫೪೦.

ಬಮ್ನಾಡು ಮಾಪಿಳ್ಳ ಶಾಲೆಯ ಕಟ್ಟೋಣಕ್ಕೋಸ್ಕರ ರೂ. ೨೯೭೦ನ್ನು ಸಂಕ್ಷನ್ ಮಾಡಬೇಕೆಂದು ಪುತ್ತೂರು ತಾಲೂಕು ಬೋರ್ಡಿನವರು ಬರೆದ ಸೂಚನೆ ಪ್ರಕಾರ ಅದನ್ನು ಸೆಂಕ್ಷನ ಮಾಡಲಾಯಿತು. ಆದರೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆ ಬಗ್ಗೆ ಹಣ ಇಲ್ಲದ ಕಾರಣ ಸರಕಾರದವರಿಗೆ ಬರಕೊಳ್ಳುವದಾಗಿ ನಿರ್ಣಯಿಸಲಾಯಿತು.

ಸರಕಾರಿ ಮೆಟರ್ನಿಟಿ ಆಸ್ಪತ್ರೆಯಲ್ಲಿ ಮದ್ರಾಸಿನಲ್ಲಿ ಸೂಲಗಿತ್ತಿತನ ಕಲಿಯುವ ೪ ವಿದ್ಯಾರ್ಥಿನಿಯರಿಗೆ ಅವರ ಕೇಳಿಕೆ ಮೇರೆಗೆ ವೇತನವನ್ನು ಮಾಹೆಯಾನಾ ರೂ. ೧೦ರಿಂದ ೧೫ಕ್ಕೆ ಏರಿಸಲಾಯಿತು.

ಡಿಸ್ಟ್ರಿಕ್ಟ್‌ಬೋರ್ಡ ಇಂಜಿನಿಯರ್ ಆಫೀಸಿನ ಮತ್ತು ಡಿಸ್ಟ್ರಿಕ್ಟ್‌ಬೋರ್ಡ ಆಫೀಸಿನ ಗುಮಾಸ್ತರು, ಜವಾನರು, ಶಿಪಾಯಿಗಳು ತಮಗೆ ಸರಕಾರಿ ನೌಕರರಿಗೆ ಸಿಕ್ಕಿದ ಹೆಚ್ಚಿನ ದರಗಳ ಮೇರೆಗೆ ಸಂಬಳದ ದರವನ್ನು ಇದೇ ಫೆಬ್ರವರಿ ೧ನೆ ತಾರೀಕಿನಿಂದ ಜಾರಿಯಲ್ಲಿ ತರಬೇಕೆಂದು ಬರಕೊಂಡ ಮನವಿಗಳನ್ನು ಸೆಲೆಕ್ಟ್ ಕಮಿಟಿಯವರ ರಿಪೋರ್ಟು ಪ್ರಕಟವಾಗುವ ವರೆಗೆ ವಿಚಾರಕ್ಕೆ ಬಾಕಿ ಇಡಬೇಕೆಂದು ನಿರ್ಣಯಿಸಲಾಯಿತು. ಪುತ್ತೂರು ತಾಲೂಕುಬೋರ್ಡಿನವರು ತಮ್ಮ ನೌಕರರಿಗೆ ಸಿಗುತ್ತಿದ್ದ ಎಲೊವನ್ಸನ್ನು ಈ ವರ್ಷದಲ್ಲಿ ಕೊಡುವಂತೆ ಠರಾವು ಮಾಡಿ ಅದಕ್ಕೋಸ್ಕರ ರೂ. ೧೨೦೦ ಕೊಡಿಸಬೇಕೆಂದು ಕೇಳಿದ ವಿಷಯವನ್ನು ಈ ರಿಪೋರ್ಟಿನ ಸೂಚನೆಗಳ ಆಧಾರದಿಂದ ವಿಚಾರಮಾಡುವುದಕ್ಕೆ ಬಾಕಿ ಇಡಲಾಯಿತು.

೧೯೨೦-೨೧ನೆ ವರ್ಷದ ಬಗ್ಗೆ ಟೋಲ್ ಗೇಟುಗಳ ಏಲಂ ಪಟ್ಟಿಯು ಮಂಜೂರಾಯಿತು.

ಕೆರಿಯಂಗೋಡು ಚರ್ಕಳ್ಳಾರ ರಸ್ತೆಯನ್ನು ಮುಂದರಿಸಿ [illegible] ಜಿಲ್ಲೆಯ ಗಡಿಗೆ ಮುಟ್ಟಿಸುವುದಕ್ಕೆ ತಯಾರು ಮಾಡಿದ ನಕ್ಷೆಗಳನ್ನು [illegible] ಸ್ಥಳ ಪರಿಶೀಲನೆ ಮಾಡುವ ಬಗ್ಗೆ ಬಾಕಿ ಇಡಲಾಯಿತು.

ವಿಷಯಸೂಚಿ

ಲೇಖನ—
[illegible] ... ೮೧
[illegible] ... ೮೨

ಟಿಪ್ಪಣಿಗಳು—
[illegible] ... ,,
[illegible] ಇಂಗ್ಲಿಷ್ ವಿದ್ಯಾಲಯಗಳ ಶಿಕ್ಷಣ ... ,,
[illegible] ... ,,
[illegible] ... ,,
[illegible] ... ,,
[illegible] ... ,,

ವರ್ತಮಾನಸಂಗ್ರಹಗಳು—
ವಿದೇಶ ವೃತ್ತಾಂತ ... ,,
ಸ್ವದೇಶ ವರ್ತಮಾನ ... ,,
[illegible] ... ,,
[illegible] ... ,,
[illegible] ... ,,

ದಕ್ಷಿಣ ಕನ್ನಡ—
ಹೊಸದುರ್ಗ, [illegible], ಕುಂಬಳೆ, ಪುತ್ತೂರು, ಪೊಳಲಿ, ಮಡಿಕೇರಿ ... ,,
ಮಂಗಳೂರು ತಾಲೂಕಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನದ ಠರಾವುಗಳು ... ೮೩
ಉಪ್ಪಿನಂಗಡಿ ತಾಲೂಕಿನ [illegible] ಸಭಾಗೃಹದಲ್ಲಿ ಶ್ಯಾನಭಾಗರ ಎಸೋಸಿಯೇಶನಿನ ಅಧ್ಯಕ್ಷರು ಮಾಡಿದ ಭಾಷಣ ... ,,
ದುಷ್ಕರ ಸಂಗವದು ಎಷ್ಟಕಷ್ಟ ಬೇಡ (ಪದ್ಯ) ... ,,
ದಾನ (ಪದ್ಯ) ... ,,

ಸ್ವದೇಶಾಭಿಮಾನಿ.

ಶಕ ೧೮೪೧ ಚೈತ್ರ ಬ|| ೧೨ ಶುಕ್ರವಾರ.

ಸಮಾಜೋದ್ಧಾರದ ಮೂಲತತ್ವಗಳು.

೬

(ಆರ್ಯರ ಗುಣಕರ್ಮಗಳ ವ್ಯವಸ್ಥೆ)

ಹಿಂದಿನ ಐದು ಲೇಖಗಳಲ್ಲಿ ಸಮಾಜೋದ್ಧಾರದ ವಿಷಯವಾಗಿ ಬರೆದ ವಿಚಾರಗಳು ಶೃಂಖಲಾನ್ಯಾಯದಿಂದ ಪರಸ್ಪರ ನಿಗಡಿತವಾಗಿಲ್ಲವಾದರೂ ಅದರ ಉದ್ಧಾರಕ್ಕೆ ಆವಶ್ಯಕವಾದ ಶ್ರಮವಿಭಾಗ, ಗೃಹಸಂಸ್ಥೆ, ಸರ್ವತ್ರಸಮತೆ ಮೊದಲಾದ ಹಲವು ಮೂಲತತ್ವಗಳನ್ನು ಕ್ರಮವಾಗಿ ಪ್ರಸ್ತಾಪಿಸಿದ್ದೇವೆ. ಮಾನವ ಜಾತಿಯ ಪ್ರಾಚೀನ ಸುಧಾರಕರಾದ ಆರ್ಯರು ಸಮಾಜದ ಗಳಿಗೆಯನ್ನು ಬಿಚ್ಚದೆ ಸರಿಇಡುವಂತೆ ಗುಣಕರ್ಮಗಳ ಯಾವ ಮಾರ್ಗವನ್ನು ತಯಾರಿಸಿರುವರೂ ಅದನ್ನು ವಾಚಕರ ಅವಗಾಹನಕ್ಕೆ ತಂದು ಕೊಡಲು ಈ ಹೊತ್ತು ಯೋಚಿಸಿದ್ದೇವೆ.

ಒಂದು ವ್ಯಕ್ತಿಯು ಅಥವಾ ಸಂಘವು ಎಷ್ಟು ಚಿಕ್ಕದಿರುವುದೊ ಅಷ್ಟು ಅದರ ವ್ಯವಹಾರವು ಸಂಕುಚಿತವಾಗಿರುವುದು. ವ್ಯವಹಾರದ ರಂಗಸ್ಥಲವು ಚಿಕ್ಕದಾದಷ್ಟು ಅದರ ಕಾಯಿದೆ ಕಾನೂನುಗಳು ಕಡಿಮೆ ಇರುವವು. ಈ ನಿಯಮಗಳನ್ನು ಉದಾಹರಣಗಳ ಮೂಲಕವಾಗಿ ಸ್ಪಷ್ಟಪಡಿಸುವ ಅಗತ್ಯವಿಲ್ಲ. ಲೋಕ ವ್ಯವಹಾರದೊಳಗಿನ ಚಿಕ್ಕ ವ್ಯಕ್ತಿಯ ವರ್ತನವನ್ನು ನೋಡಿದ್ದಲ್ಲಿ ಮೇಲಿನ ಎರಡೂ ಮಾತುಗಳ ಸತ್ಯತೆಯು ತನ್ನಷ್ಟಕ್ಕೆ ಗೋಚರವಾಗುತ್ತದೆ. ವ್ಯಕ್ತಿಯ ಅಲ್ಪತೆಯ ಮೇಲೆ ವ್ಯವಹಾರದ ಸಂಕೋಚ ಮತ್ತು ಆ ಸಂಕೋಚವಿದ್ದಷ್ಟಕ್ಕೆ ಕಾಯಿದೆಗಳ ನ್ಯೂನತೆ ಈ ಮೇರೆಗೆ ಒಂದರ ಮೇಲೆ ಇನ್ನೊಂದು ಅವಲಂಬಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಒಂದು ಸಂಖ್ಯೆಯನ್ನು ಇನ್ನೊಂದರಿಂದ ಭಾಗಿಸುತ್ತ ಹೋದಲ್ಲಿ ಉತ್ತರವು ಕಡಿಮೆ ಸಂಖ್ಯೆಯದು ಬರುತ್ತದೆ, ಅದೇ ಆ ಸಂಖ್ಯೆಯನ್ನು ಅದರಿಂದ ಗುಣಿಸುತ್ತ ಹೋದಲ್ಲಿ ಆ ಉತ್ತರವು ಅಷ್ಟು ಪ್ರಾಲಿನಿಂದ ಹೇಗೆ ಹೆಚ್ಚಾಗುವುದೊ ಹಾಗೆಯೆ ಮೇಲಿನ ಎರಡು ನಿಯಮಗಳನ್ನು ತಲೆಕೆಳಗಾಗಿ ವಿವರಿಸಹೋದರೆ ಎಂದರೆ ಗಣಿತದ ಭಾಷೆಯಿಂದ ಹೇಳುವುದಾದರೆ, ವ್ಯಕ್ತಿಯನ್ನೂ ವ್ಯಕ್ತಿಯ ವ್ಯವಹಾರವನ್ನೂ ಗುಣಿಸಿದ್ದಲ್ಲಿ ಕ್ರಮವಾಗಿ ಆ ವ್ಯವಹಾರವೂ ಅದರ ಕಾನೂನುಗಳೂ ಹೆಚ್ಚಾಗಹತ್ತುತ್ತವೆ. ಇದನ್ನೆ ಇನ್ನೊಂದು ವಿಧವಾಗಿ ಹೇಳೋಣ. ವ್ಯಕ್ತಿಗಳು ಅಥವಾ ಸಂಸ್ಥೆಗಳು ಹೆಚ್ಚಿದಷ್ಟಕ್ಕೆ ಅವುಗಳ ವ್ಯವಹಾರವು ಅಧಿಕವಾಗುತ್ತದೆ. ಹಾಗು ವ್ಯವಹಾರದ ಕ್ಷೇತ್ರವು ವ್ಯಾಪಕವಾದಷ್ಟು ಕಾನೂನುಗಳು ಹೆಚ್ಚಾಗುವವು. ಈ ದೃಷ್ಟಿಯಿಂದ ವಿಚಾರಮಾಡಲು ಮಾನವ ಸಮಾಜದ ರೂಪವು ಸಂಖ್ಯೆಯಿಂದಲೂ, ಉದ್ಯೋಗದಿಂದಲೂ, ಅನುಭವದಿಂದಲೂ ಬೆಳೆಯುತ್ತ ಹೋದ ಹಾಗೆ ಅದರ ಚಿರಸ್ಥಾಯಿತೆಯ ಬಗ್ಗೆ [illegible]

[illegible] ಉಪಾಧ್ಯಾಯನು [illegible] ಹುಡುಗರನ್ನು [illegible] ಅವರಿಗೆ ಅಕ್ಷರಗಳನ್ನು ಬರೆದು ಕೊಡುವನು, ಅವರಿಗೆ ಓದಲು ಕಲಿಸುವನು, ಅವರಿಗೆ ಲೆಕ್ಕಗಳನ್ನು ತಿಳಿಸಿಕೊಡುವನು, ಅವರಿಗೆ ಚಿಕ್ಕಪುಟ್ಟ ಕಥೆಗಳನ್ನು ಹೇಳುವನು, ಅವರಿಗೆ ಹಾಡುಗಳನ್ನು ಕಲಿಸುವನು, ಅವರನ್ನು ದೂರದಲ್ಲಿ ತಿರುಗಾಡಲು ಕರಕೊಂಡು ಹೋಗುವನು. ಸಾರಾಂಶ, ಒಬ್ಬನೆ ಈ ಎಲ್ಲ ಕೆಲಸಗಳನ್ನು ಮಾಡುವನು. ಮತ್ತು ಹಾಗೆ ಮಾಡಲು ಅವನಿಗೆ ಒಂದು ತೊಂದರೆಯೂ ಇರುವುದಿಲ್ಲ; ಇಲ್ಲವೆ ಹುಡುಗರಿಗೆ ಅದರಿಂದ ಒಂದು ಬೇಸರವೂ ಉಂಟಾಗುವುದಿಲ್ಲ. ಪರಂತು, ಹುಡುಗರ ಸಂಖ್ಯೆಯು ಹೆಚ್ಚಾಗುತ್ತ ಹೋಯಿತು, ಶಿಕ್ಷಣದಲ್ಲಿ ಕೆಲವರು ಮುಂದರಿಸಿದರು, ಇನ್ನು ಕೆಲವರು ಹಿಂದೆಯೆ ಉಳಿದರು, ಮತ್ತೆ ಹಲವರು [illegible] ದರು, ಎಂದರೆ ಒಂದೆ ಮಾತಿನಿಂದ ಹುಡುಗರ ಕಲಿಯುವ ವಿಷಯಗಳು ಬೇರೆ ಬೇರೆಯಾದವು; ಆಗ ಮೊದಲಿನ ಆ ಒಬ್ಬ ಉಪಾಧ್ಯಾಯನಿಂದಲೆ ನಿರ್ವಾಹವಾಗುವುದು ಅಸಾಧ್ಯವಾಗಹತ್ತುತ್ತದೆ. ಎಂದಮೇಲೆ ಅವನಿಗೆ ಸಹಾಯಕ ಉಪಾಧ್ಯಾಯರನ್ನು ನೇಮಿಸಬೇಕಾಗುತ್ತದೆ. ಅವರವರಿಗೆ ಬೇರೆ ಪಾಠಗಳನ್ನು ನೇಮಿಸಿಕೊಡಬೇಕಾಗುತ್ತದೆ. ಅವರವರಿಗೆ ಬೇರೆ ಸಮಯವನ್ನು ನೇಮಿಸಿಕೊಡಬೇಕಾಗುತ್ತದೆ. ಮತ್ತು ಅದರಂತೆ ಅವನು ತನ್ನ ಸಂಸ್ಥೆಯ ಚಿರಸ್ಥಾಯಿತೆಯ ಬಗ್ಗೆ ಮೇಲಿನ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಳ್ಳುತ್ತಾನೆ. ಇದು ಹೇಗೋ ಹಾಗೆಯೆ ಪ್ರಾಚೀನ ಋಷಿಗಳು ಸಮಾಜದ ಸ್ವರೂಪವು ಹೆಚ್ಚಿದಂತೆ ಅದನ್ನು ಚಾತುರ್ವರ್ಣ್ಯದ ರೂಪದಿಂದ ನಿಯಮಿಸಿದರು. ಚಾತುರ್ವರ್ಣ್ಯವೆಂದರೆ ಸಮಾಜೋದ್ಧಾರದ ಭವ್ಯವಾದ ಮಂದಿರದ ಪಂಚಾಗದ ಮೊದಲನೆ ಕಲ್ಲು. ಚಾತುರ್ವರ್ಣ್ಯದ ಈ ಕೆಸರುಗಲ್ಲು ಯಾವ ವರೆಗೆ ಗಟ್ಟಿಯಾಗಿ ಇತ್ತೊ ಅದು ವರೆಗೆ ಸಮಾಜದ ಯೋಗಕ್ಷೇಮವು ಅವಿಚ್ಛಿನ್ನವಾಗಿ ಸಾಗಿಕೊಂಡಿತ್ತು.

ಚಾತುರ್ವರ್ಣ್ಯವು ಗುಣಕರ್ಮಗಳ ಆಧಾರದಿಂದ ರಚಿತವಾಗಿದೆ. ಮೇಲೆ ಹೇಳಿದ ಮೇರೆಗೆ ಸಮಾಜವು ದೊಡ್ಡದಾದ ಬಳಿಕ, ವ್ಯಕ್ತಿಗಳಲ್ಲಿ ಗುಣಕರ್ಮಗಳು ವಿಭಿನ್ನವಾಗಿ ತೋರಹತ್ತಿದ ಬಳಿಕ, ಗುಣಗಳ ಮತ್ತು ಕರ್ಮಗಳ ವರ್ಗೀಕರಣದಿಂದ ನಾಲ್ಕು ವರ್ಣಗಳನ್ನು ವ್ಯವಸ್ಥೆಗೊಳಿಸಬೇಕಾಯಿತು. ಒಂದು ವ್ಯಕ್ತಿಯ ಶ್ರೇಯೋಜೀವನಕ್ಕೆ ಈಶ್ವರ ಚಿಂತನ, ಶರೀರ ರಕ್ಷಣ, ಆಹಾರ ಸಂಗ್ರಹ ಇತ್ಯಾದಿ ಕರ್ಮಗಳು ಅವಶ್ಯಕವಾಗಿವೆ. ಈ ಕರ್ಮಗಳನ್ನು ಸಾಧ್ಯಪಡಿಸಿಕೊಳ್ಳಬೇಕಾದರೆ ಯಾವ ಯಾವ ಗುಣಗಳು ಬೇಕಾಗಿರುವವೊ ಅವುಗಳಿಂದ ತುಂಬಿಕೊಂಡಿರುವವರ ವರ್ಗಗಳನ್ನು ಕಲ್ಪಿಸಿ ಹಿಂದಿನವರು ಈ ವರ್ಣಗಳನ್ನು ರಚಿಸಿದರು. ಇಂಥಿಂಥ ವರ್ಣದ ಕರ್ಮಗಳು ಇಂಥಿಂಥವುಗಳು, ಆ ಕರ್ಮಗಳನ್ನು ನಿರ್ವಹಿಸಬೇಕಾದರೆ ಅವರಲ್ಲಿ ಇಂಥಿಂಥ ಗುಣಗಳಿರಬೇಕು, ಈ ವ್ಯವಸ್ಥೆಯಿಂದ ಸಮಾಜವು ಸರಿಯಾಗಿ ವರ್ತಿಸ ಹತ್ತಿತು. ಆಯಾ ವರ್ಣಗಳ ಕರ್ತವ್ಯ ಮಾರ್ಗಗಳು ವಿಭಿನ್ನವಾಗಿದ್ದರೂ ಆ ಕರ್ತವ್ಯಗಳಿಂದ ಉಂಟಾಗುವ ಹಿತವು ಅದೊಂದೆ ವಿಶಿಷ್ಟ ವರ್ಗಕ್ಕೆ ಅಥವಾ ವರ್ಣಕ್ಕೆ ಸಿಗದೆ ಇಡೀ ಸಮಾಜಕ್ಕೆ ಸಿಗುತಿತ್ತು. ಚಂದನ ಬಿಂದುವನ್ನು ಶರೀರದ ಒಂದು ಕಡೆಯಲ್ಲಿ ಲೇಪಿಸಿಕೊಂಡರೂ ಅದು ಎಲ್ಲಾ ಶರೀರವನ್ನು ಸಂತೋಷಗೊಳಿಸುವಂತೆ, ಕ್ಷಾತ್ರ ಕರ್ಮವು ಅಥವಾ ವಾಣಿಜ್ಯವು ಒಂದೊಂದು ವರ್ಗದ ಕರ್ತವ್ಯವಾದರೂ ಅದರಿಂದ ಇಡೀ ದೇಶವು, ಇಡೀ ಸಮಾಜವು ಫಲಭಾಗಿಯಾಗುವುದು. ಇದೀಗ ಚಾತುರ್ವರ್ಣ್ಯದ ಕಲ್ಪನೆಯೊಳಗಿನ ಮುಖ್ಯರಹಸ್ಯವು. ಪರಂತು ಕಾಲಕ್ರಮದಿಂದ ಈ ರಹಸ್ಯವು ಲುಪ್ತವಾಗ ಹತ್ತಿತು. "ಹೊಟ್ಟೆಯೂ ಅವಯವಗಳೂ" ಎಂಬ ರೂಪಕ ಕಥೆಯಲ್ಲಿ ಹೇಳಿದ್ದಂತೆ ಆಯಾ ವರ್ಣಗಳಿಗೆ ಸ್ವಪ್ರತಿಷ್ಠೆಯು ಹೆಚ್ಚಾಗಹತ್ತಿತು. ಅಲ್ಲದೆ, ಮೇಲಿನ ಮುಖ್ಯ ನಾಲ್ಕು ಭೇದಗಳಲ್ಲಿ ಸಾವಿರಾರು ಉಪಭೇದಗಳಾಗತೊಡಗಿದವು. ಈ ಪ್ರಾಮಾಣಿಕ ಭೇದಗಳೊಂದಿಗೆ ಮತ್ಸರ, ಅಸೂಯೆ, ಉಚ್ಚ ನೀಚತೆಯ ಕಲ್ಪನೆ ಇತ್ಯಾದಿ ಅನೇಕ ಅಪ್ರಾಮಾಣಿಕ ಸಂಗತಿಗಳು ಸೇರ ತೊಡಗಿದವು. ಇದೆಲ್ಲದರ ಪರ್ಯವಸಾನವು ಸಮಾಜದ ಅವ್ಯವಸ್ಥೆಯಲ್ಲಿ ಉಂಟಾಗ ಹತ್ತಿತು. ಚಾತುರ್ವರ್ಣ್ಯದ ಶುದ್ಧ ಉದ್ದೇಶವೂ, ಶುದ್ಧ ಸ್ವರೂಪವೂ ಮತ್ತು ಶುದ್ಧ ಘಟನೆಯೂ ಇವೆಲ್ಲ ಸ್ಮೃತಿಶೇಷವಾಗ ಹತ್ತಿದವು. ಸಾರಾಂಶ, ಚಾತುರ್ವರ್ಣ್ಯವು ಮುಂದುಹೋಯಿತು. ಎಂದರೆ ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ಒಂದು ಕಾಲದಲ್ಲಿ ಸಹೇತುಕವಾಗಿ ರೂಢವಾದ ಹೆಸರುಗಳು ಈಗಲೂ ಪ್ರಚಾರದಲ್ಲಿ ಇದ್ದಾಗ್ಯೂ ಅಥವಾ ಇವುಗಳ ಅಭಿಮಾನವು ಜನಗಳಲ್ಲಿ ಬೇಕಾದ್ದಕ್ಕಿಂತಲೂ ಹೆಚ್ಚಾಗಿ ಇದ್ದರೂ ಚಾತುರ್ವರ್ಣ್ಯವು ನಿಜವಾಗಿ ಲುಪ್ತವಾಗಹತ್ತಿತು. ಅದರ ಉದ್ದೇಶವೇ ಭ್ರಷ್ಟವಾದ ಬಳಿಕ ಆ ಹೆಸರುಗಳು ಯಾಕೆ? ಆ ಅಭಿಮಾನವು ಯಾಕೆ? ಕುಂಡಲದಗೋಸ್ಕರ ಕಿವಿಯನ್ನು ಕುತ್ತುವರು. ಆ ಕುಂಡಲವೆ ಬಿದ್ದು ಹೋದ ಬಳಿಕ ಬರೆ ತೂತಿನ ಅಭಿಮಾನವನ್ನು ಯಾಕೆ ಹೊತ್ತುಕೊಳ್ಳುವುದು? ಆದರೂ ಈ ವಿಚಿತ್ರವಾದ ಲೋಕದಲ್ಲಿ ರತ್ನಖಚಿತವಾದ ಕುಂಡಲವು ಬಿದ್ದು ಹೋದರೂ ಬರೆ ತೂತಿನ ದುರಭಿಮಾನವನ್ನು ತಾಳುವ ಪ್ರಾಣಿಗಳೆ ಅನೇಕ ಇವೆ!

ಇರಲಿ, ಸಮಾಜದ ಚಿರಸ್ಥಾಯಿತೆಗಾಗಿ ಬಂದ ಚಾತುರ್ವರ್ಣ್ಯವನ್ನು [illegible] ಆದರಿಂದ ಸಮಾಜಹಿತವೆ [illegible] ಚಾತುರ್ವರ್ಣ್ಯದ ಪ್ರಾಚೀನ ಕಾಲದ [illegible] ಸ್ವರೂಪದಿಂದಲೆ ಪುನರುಜ್ಜೀವನಗೊಳಿಸದೇ ಇಲ್ಲದಿದ್ದರೆ [illegible] ಆದರ್ಶಗಳಾದರು. ಹೀಗಾದಲ್ಲಿ [illegible] ಸಾಮಾಜಿಕ ಸುಧಾರಣೆಯು ನಿಜವಾಗಿ ಸುಲಭವಾದೀತು.

ಸೆಲರಿಕಮ್ಮಿಟಿಯ ರಿಪೋರ್ಟು.

ಕಳೆದ ತಿಂಗಳಲ್ಲಿ ಮದ್ರಾಸಿನ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ೧೯೨೦-೨೧ನೇ ಒಫಿಶಿಯಲ್ ವರ್ಷದ ಜಮಾಖರ್ಚಿನ ಅಂದಾಜು ಪಟ್ಟಿಯನ್ನು ಸಭೆಯ ಮಂಜೂರಾತಿಗೆ ತರುವಾಗ ಸರಕಾರದ ಕಡೆಯಿಂದ ನಾಮದಾರ ಟೊಡ್ಹಂಟರ್ ಸಾಹೇಬರು ಮಾಡಿದ ಭಾಷಣದ ಸಾರಾಂಶವನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಇಂಡಿಯನ್ ಸರ್ವಿಸ ಮತ್ತು ಪ್ರೊವಿನಶಲ್ ಸರ್ವಿಸುಗಳ ವಿಚಾರವನ್ನು ಪಬ್ಲಿಕ ಸರ್ವಿಸ ಕಮಿಶನದವರು ಎತ್ತಿಕೊಳ್ಳುವಾಗ ಯುದ್ಧವು ಆರಂಭಿಸಲೂ ಇಲ್ಲ, ತನ್ನಿಮಿತ್ತವಾಗಿ ಧಾರಣೆ ಏರಬಹುದು ಎಂಬ ಕನಸೂ ಇರಲಿಲ್ಲ. ಹೀಗಾದ್ದರಿಂದ ವಾಸ್ತವಿಕವಾಗಿ ಆಯಾ ಕೆಲಸದ ಗೌರವಕ್ಕೆ ಸರಿಯಾಗಿ ಸಿಗುವುದಾದರೆ ಸಂಬಳದ ಮಿತಿ ಎಷ್ಟು ಎಂಬದನ್ನು ನಿರ್ಧರಿಸುವುದೇ ಸದರಿ ಕಮ್ಮಿಶನದ ಉದ್ದೇಶವಿತ್ತು, ಆ ಕಮ್ಮಿಶನದವರು ಮಾಡಿದ ಶಿಫಾರಸನ್ನು ಅಂಗೀಕರಿಸುವುದರಿಂದ ಕಳೆದ ೧೦ ವರ್ಷಗಳ ಹಿಂದೆ ಈ ಎರಡು ಬಗೆಯ ಸರ್ವಿಸುಗಳಿಗೆ ಖರ್ಚಾಗುತ್ತಿದ್ದ ಹಣಕ್ಕಿಂತ ಬರೇ ಸೇಕಡಾ ೩೧ರಷ್ಟು ಮಾತ್ರ ಖರ್ಚು ಏರಿದಂತಾಯಿತು, ಆದರೆ ಸಬೋರ್ಡಿನೇಟ ಸರ್ವಿಸಿನವರಿಗೆ ಅದೇ ೧೦ ವರ್ಷಗಳಲ್ಲಿ ಸೇಕಡಾ ೬೭ರಷ್ಟು ಮೊಬಲಗು ಏರಿದೆ, ಹೀಗಾಗಿ ಸಬೋರ್ಡಿನೇಟ ಸರ್ವಿಸಿನವರನ್ನು ಕುರಿತು ಉದಾಸೀನಚಿತ್ತರಾಗಿದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದು ನಾಮದಾರ ಟೊಡ್ಹಂಟರ ಸಾಹೇಬರು ಹೇಳಿ ಸರಕಾರದ ಬೆನ್ನು ತಟ್ಟಿದರು. ಕೆಲವು ಸಂದರ್ಭಗಳಲ್ಲಿ ಸೇಕಡಾ ಮತ್ತು ಸರಾಸರಿ ಲೆಕ್ಕಗಳು ಕಾರ್ಯತಃ ಪ್ರಯೋಜನಕಾರಿಯಲ್ಲ, ಕಿವಿಗೆ ಇಂಪನ್ನು ತತ್ಕಾಲಿಕವಾಗಿ ಹುಟ್ಟಿಸಲಿಕ್ಕೆ ಮಾತ್ರ ಅವುಗಳ ಉಪಯೋಗ. ಒಂದು ಮನೆತನಕ್ಕೆ ೫೦ ರೂಪಾಯಿ ಮಾಹೆಯಾನಾ ಆದಾಯ ಇರುವಲ್ಲಿ ೨೫ ರೂಪಾಯಿ ಖರ್ಚಾಗಿ ೨೫ ರೂಪಾಯಿ ಉಳಿದರೆ ಸೇಕಡಾ ೫೦ರಷ್ಟು ಉಳಿಯಿತು ಎಂದೂ, ಇನ್ನೊಂದು ಮನೆತನಕ್ಕೆ ತಿಂಗಳಿಗೆ ೧೦೦೦ ರೂಪಾಯಿ ಸಂಬಳದಲ್ಲಿ ೭೫೦ ರೂಪಾಯಿ ವೆಚ್ಚಮಾಡಿ ೨೫೦ ರೂಪಾಯಿ ಉಳಿದರೆ ಸೇಕಡಾ ೨೫ರಷ್ಟು ಮಾತ್ರ ಉಳಿಯಿತು ಎಂದೂ ತಾರತಮ್ಯ ನೋಡಿ, ಮೊದಲಿನ ಮನೆಯ ಸ್ಥಿತಿಯೇ ಚೆನ್ನಾಗಿದೆ ಎಂದು ನಿರ್ಧರಿಸಿದರೆ ಇದು ಮಾಯಾಶಾಸ್ತ್ರವಲ್ಲದೆ ಬೇರೆ ಯಾವ ಶಾಸ್ತ್ರಕ್ಕೂ ಸಮ್ಮತವಾಗಲಿಕ್ಕಿಲ್ಲ. ಎರಡನೆಯ ಕುಟುಂಬದಲ್ಲಿ ಖರ್ಚಾದ ೭೫೦ರಲ್ಲಿ ನಗನಾಣ್ಯಗಳಿಗೂ ನಾಗರೀಕತನದ ಮುದ್ರೆಗೆ ಅವಶ್ಯಕವೆಂದು ಭಾವಿಸಲ್ಪಡುವ ಇತರ ಹಲವು ಬಗೆಯ ಸಾಹಿತ್ಯಗಳಿಗೆ ಬೇಕಾದ ಖರ್ಚು ಇವನ್ನೆಲ್ಲ ಮೊದಲನೆ ಕುಟುಂಬದಲ್ಲಿ ಜೀವನಾಂಶಕ್ಕೆ ಅತೀ ಅಗತ್ಯವಾದ ಖರ್ಚಿನೊಂದಿಗೆ ಸರಿಹೋಲಿಸಿ ಮೊದಲನೆ ಕುಟುಂಬವು ಧನಿಕನಾಗಬೇಕು ಎಂದು ನಿರ್ಧರಿಸಿದರೆ ಆ ಕುಟುಂಬಕ್ಕೆ ಪರಿಹಾಸ್ಯ ಮಾಡಿದಂತಾದೀತು. ಇದೇ ರೀತಿಯಲ್ಲಿ ಹತ್ತು ವರ್ಷಗಳಲ್ಲಿ ಇಂಡಿಯನ್ ಮತ್ತು ಪ್ರೊವಿನಶನಲ್ ಸರ್ವಿಸಿನವರ ತಲಬು ಪಬ್ಲಿಕ ಸರ್ವಿಸ್ಸಿನವರ ಸೂಚನೆಗಳನ್ನು ಈ ವರ್ಷ ಜಾರಿಗೆ ತರುವುದರಿಂದ ಬರೆ ೩೦ ಲಕ್ಷಕ್ಕೆ ಏರಿದಂತಾಗುವುದು (ಅಥವಾ ಸೇಕಡಾ ೩೧ರಷ್ಟು) ಎಂತಲೂ, ಅದೇ ಹತ್ತು ವರ್ಷಗಳಲ್ಲಿ ಸಬೋರ್ಡಿನೇಟ ಸರ್ವಿಸಿನ ತಲಬು ಎಲ್ಲೋವೆನ್ಸ್ ಕೂಡಿ ೯೦ ಲಕ್ಷಕ್ಕೆ ಏರಿತು (ಅಂದರೆ ಸೇಕಡಾ ೩೭ರಷ್ಟು) ಎನ್ನುವುದು, ಕೇಳುವವರಿಗೆ ಏರೆ ಮಂಕುತಳೆಯಲಿಕ್ಕೆ ಮಾಡಿದ ಜಣಮಂತ್ರವೆನ್ನಬೇಕಾಗುತ್ತದೆ. ಈ ೯೦ ಲಕ್ಷದಲ್ಲಿ ೪೧ ಲಕ್ಷ ರೂಪಾಯಿ ಎಲ್ಲೋವೆನ್ಸ್‌ಗಳ ಬಗ್ಗೆ ಸಲ್ಲುತ್ತದೆ. ಉಳಿದ ೪೦ ಲಕ್ಷ ರೂಪಾಯಿ ಸಿಬಂದಿಯ ಸಂಬಳದ ದರಗಳನ್ನೂ ಕೆಲವು ಕಡೆಗಳಲ್ಲಿ ಇಸಮುಗಳನ್ನೂ ಹೆಚ್ಚಿಸುವುದರಲ್ಲಿ ವೆಚ್ಚವಾಗಿದೆ. ಇಸಮುಗಳನ್ನು ಹೆಚ್ಚಿಸಲಿಕ್ಕೆ ವೆಚ್ಚವಾದ ಮೊಬಲಗನ್ನು ಎಲ್ಲೋವೆನ್ಸಿಗೆ ಕೂಡಿಸಿ ಸರ್ವಿಸಿನ ಖರ್ಚು ಏರಿತು ಎಂದು ಸೇಕಡಾ ತೋರಿಸಿದರೆ ಇದು ನ್ಯಾಯಸಮ್ಮತವಾಗಲಾರದು. ಹೀಗೆನ್ನುವಾಗ ಸರಕಾರದವರು ಧಾನ್ಯದವಸಗಳ ಧಾರಣೆಗಳು ಏರಿದ ನಿಮಿತ್ತ ಕೊಟ್ಟ ಹಂಗಾಮಿ ಸಲಹೆಗಳನ್ನು ನಾವು ತೃಣೀಕರಿಸುತ್ತೇವೆ ಎಂದು ಭಾವನೆಬರಲಾಗದು. ಆದರೆ ತರ್ಕಶಾಸ್ತ್ರ ಪಾಂಡಿತ್ಯವನ್ನು ತೋರ್ಪಡಿಸಲು ನೋಡುವುದು, ಅಥವಾ ಎದುರು ಪಕ್ಷದವರಿಗೆ ಮರ್ಮಗೊತ್ತಿಲ್ಲವೆಂದು ನೆನಸಿ ಕಣ್ಣುಮುಚ್ಚಾಲೆ ಆಟದಂತೆ ಮಾಡುವುದು, ಇದು ಸೆಲರಿಕಮ್ಮಿಟಿಯಂಥ ಮಹತ್ವದ ವಿಷಯದಲ್ಲಿ ಮತ್ತು ಧಾರಣೆಯ ಬೇಗೆಯಿಂದ ಬಸವಳಿದ ಜನಗಳ ಎದುರಿನಲ್ಲಿ ತೋರಿಸತಕ್ಕ ಧೋರಣವಲ್ಲ. ಇದರಲ್ಲಿ ಇನ್ನೊಂದು ವಿಶೇಷವಿದೆ. ಈಗಿನ ಧಾರಣೆಯು ಕೆಲವು ಸಂದರ್ಭಗಳಲ್ಲಿ ಇಮ್ಮಡಿ ಮುಮ್ಮಡಿಯಾಗಿದೆ, ಮತ್ತು ಆ ದರವು ಇನ್ನೂ ಕೆಲವು ವರ್ಷಗಳ ವರೆಗೆ ನಿಂತೀತು ಎನ್ನುವಾಗ ಹಂಗಾಮಿಯಾಗಿ ಕೊಟ್ಟ ಎಲ್ಲೋವೆನ್ಸ್ ಆ ಖಾತೆಗೆ ವಜಾ ಮಾಡಿಕೊಳ್ಳಬೇಕಲ್ಲದೆ ಅದನ್ನು ಸಂಬಳದ ದರ ಏರಿಸಿದೆ ಎಂಬದರಲ್ಲಿ ಕಾಣಿಸುವುದು ಹೇಗೆ ಸಮಂಜಸವಾದೀತು? ಈ ಏರಿದ ಧಾರಣೆ ನಿಮಿತ್ತ ಏರಿದ ೪೧ ಲಕ್ಷ ರೂಪಾಯಿಯನ್ನೂ ಸಿಬಂದಿ ಏರಿದ ಸಂಬಳದ ಏರಿದ ಮೊಬಲಗನ್ನೂ

ಕಳೆದುಹಾಕಿದರೆ ನಿಜವಾಗಿ ಕಳೆದ ೧೦ ವರ್ಷಗಳಲ್ಲಿ ಎಷ್ಟು ಸುಧಾರಣೆಯಾಗಿದೆ ಎಂದು ನಾಮದಾರ ಬೊಡ್ಡುಂಟರರು ವಿವರಿಸಿದರೆ ಅವರು ವ್ಯವಹರಿಸಿದ ಮಾತುಗಳಿಗೆ ಧಾರಣೆಯಿಸಬಹುದು.

ಇದೇ ವಿಷಯದಲ್ಲಿ ನಾಮದಾರ ಯಾಕೂಬ ಹಸನರು ಈ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ತಂದಿದ್ದರು. ಸಲರಿಕಮ್ಮಿಟಿಯ ಸೂಚನೆಗಳು ಮಂಜೂರಾಗಿ ಬರುವ ವರೆಗೆ ಈಗಿನ ಸಂಬಳದ ದರಗಳಲ್ಲಿ ಸೇಕಡಾ ಹೆಚ್ಚಿಸಿ ಈ ಬಡ ನವುಕರರನ್ನು ಉದ್ಧರಿಸಬೇಕೆಂದು ನಾಮದಾರ ಯಾಕೂಬ ಹಸನಸಾಹೇಬರು ವಾದಿಸಿದ್ದರು.

ಮದ್ರಾಸ ಶಹರಿನಲ್ಲಿ ಪೇದೆಗಳಿಗೆ ರೂಪಾಯಿ ೧೮ ಇತರ ಊರುಗಳಲ್ಲಿ ೧೫, ಗುಮಾಸ್ತರಿಗೆ ಕಡಿಮೆ ಸಂಬಳದ ದರವು ಮದ್ರಾಸಿನಲ್ಲಿ ೪೦ ಇತರ ಕಡೆಗಳಲ್ಲಿ ೩೫ ಈ ರೀತಿ ಕೊಡಬೇಕೆಂತಲೂ, ೧೦೦ ರೂಪಾಯಿಗಿಂತ ಕಡಿಮೆ ಸಂಬಳದ ನವುಕರರಿಗೆ ಪ್ರತಿಯೊಬ್ಬನಿಗೆ ಸೇಕಡಾ ೩೦ರಷ್ಟು, ರೂಪಾಯಿ ೧೦೦ಕ್ಕೆ ಮಿಕ್ಕಿದ ಸಬೋರ್ಡಿನೇಟ ಸರ್ವಿಸಿನವರಿಗೆ ಸೇಕಡಾ ೨೦ರಷ್ಟು ಹೆಚ್ಚಿಗೆ ಎಲೋವೆನ್ಸ್ ಸಲರಿ ಕಮಿಟಿಯ ಸೂಚನೆಗಳ ಇತ್ಯರ್ಥವಾಗುವ ವರೆಗೆ ಹಂಗಾಮಿಯಾಗಿ ಕೊಡಿಸಬೇಕೆಂದು ನಾಮದಾರ ಯಾಕೂಬ ಹಸನರವರ ಸೂಚನೆ ಇತ್ತು. ಸಲರಿಕಮ್ಮಿಟಿಯವರ ಸೂಚನೆಗಳು ಪ್ರಕಟವಾದನಂತರ ಅವನ್ನು ನ್ಯಾಯವಿಧಾಯಕ ಸಭೆಯ ಮೆಂಬರರ ಮುಂದೆ ಖಾಸಗಿಯಾಗಿ ಚರ್ಚೆಗೆ ಇಟ್ಟು ಅನಂತರ ಯಾವುದೊಂದು ವಿಲೆವಾರಿಯನ್ನು ನಡೆಸಬಹುದು ಎಂದು ಸರಕಾರದವರು ಹೇಳಿದ್ದರಿಂದ ಈ ಠರಾವು ಹಿದ್ದುಹೋಯಿತು. ನಾಮದಾರ ಯಾಕೂಬ ಹಸನರು ಹೇಳಿದ ಮಾತಿನಲ್ಲಿ ಮುಂಬಯಿಸಂಸ್ಥಾನದಲ್ಲಿ ೧೧೦ರಿಂದ ೧೫೦ರ ಒಳಗಿನ ನವುಕರರಿಗೆ ಸೇಕಡಾ ೧೭||ಯಷ್ಟು ೫೦ ರೂಪಾಯಿ ವರೆಗೆ ತಲಬುಳ್ಳವರಿಗೆ ಸೇಕಡಾ ೭೦ರ ವರೆಗೆ ಸಂಬಳದ ದರಗಳನ್ನು ಹೆಚ್ಚಿಸಿದರೆಂಬ ಸಮಾಚಾರವು ಇತ್ತು. ಆದರೆ ಈ ದೃಷ್ಟಾಂತವನ್ನು ತೋರಿಸಿದ್ದು ವಿಶೇಷ ಫಲಕಾರಿಯಾಗಲಿಲ್ಲ. ಮುಂದೆ ಸಲರಿಕಮ್ಮಿಟಿಯ ರಿಪೋರ್ಟನ್ನು ಪರ್ಯಾಲೋಚಿಸಿದ ನಂತರ ಯಾವ ಹಂಗಾಮಿ ಸಲಹೆಗಳನ್ನು ಮದ್ರಾಸು ಸರಕಾರದವರು ಕೊಡಲಿಕ್ಕಿದ್ದಾರೆಂದು ನೋಡಲಿಕ್ಕೆ ಇದೆ.

ಸ್ಫುಟ ವಿಚಾರಗಳು.

೧. ಲೊರ್ಡಸಿಂಹರು ಹಾಗು ಅವರ ಹಸ್ತಕರಾದ ನಾಮದಾರ ಬಾಸು ಇವರು ಕಳೆದ ವಾರ ವಿಲಾಯತಿಗೆ ಪ್ರಯಾಣವನ್ನು ಬೆಳಸಿದರು. ರಿಫೋರ್ಮ್ ಎಕ್ಟಿನ ಒಳ ನಿಯಮಗಳ ಕೆಲಸವನ್ನು ಮುಗಿಸಿ ಸಿಂಹರು ಅಲ್ಲಿಂದ ಹಿಂತಿರುಗುವರು, ಮತ್ತು ಅನಂತರ ಯಾವದಾವರೂ ಒಂದು ಪ್ರಾಂತಕ್ಕೆ ಗವರ್ನರರಾಗಿ ಬರುವರು ಎಂದು ಹೇಳುತ್ತಾರೆ. ಇರಲಿ. ನೋಕರಶಾಹಿಯು ತನ್ನ ಕಾರ್ಯಸಾಧನದ ಗೋಸ್ಕರ ಸಮಯಾನುಸಾರ ಕೆಲವರನ್ನು ಎತ್ತಿ ಮೇಲಕ್ಕೆ ಹಿಡಿಯುತ್ತದೆ, ಕೆಲವರನ್ನು ಅಸ್ಪೃಶ್ಯರನ್ನಿಡುವಂತೆ ದೂರದಲ್ಲಿಡುತ್ತದೆ ಎಂದು ಮಹಾಜನರು ನೋಕರಶಾಹಿಯ ತಲೆಯ ಮೇಲೆ ಒಂದು ಆಕ್ಷೇಪವನ್ನು ಆಗಾಗ್ಗೆ ಇಡುತಿದ್ದರು. ನೋಕರಶಾಹಿಯ ಮೇಲೆ ಇಡುವ ಈ ಆರೋಪಣೆಗೆ ತಕ್ಕ ಆಧಾರಗಳು ಮಹಾಜನರ ಬಳಿಯಲ್ಲಿ ಇದ್ದೂ ಇರಬಹುದು. ಪರಂತು ಅವು ಏಕ ತರ್ಫಿನವೆಂದು ಹೇಳಿ, ಅವುಗಳ ಬೆಲೆಯನ್ನು ಕಡಿಮೆಮಾಡಿ, ಪುರಾವೆಯ ತರಗತಿಯಿಂದ ಅವುಗಳನ್ನು ಕಳಗಿಳಿಸುವುದು ನೋಕರಶಾಹಿಗೆ ಬಹು ಸುಲಭವಿತ್ತು. ಆದರೆ ಲೊರ್ಡಸಿಂಹರಂಥ ನೋಕರಶಾಹಿಯ ಕೋಟೆಯೊಳಗಿನ ಗುಂಡು ಹಾರಿಸುವವರ ಬಾಯಿಯಿಂದ ಜನತೆಯ ಮೇಲಿನ ವಿಧಾನಕ್ಕೆ ಆಧಾರಭೂತವಾದ ಮಾತುಗಳು ಯಾವಾಗ ಹೊರಬೀಳುತ್ತವೊ ಆಗ ನೋಕರಶಾಹಿಗೆ ತನ್ನ ನಿರ್ಮಲಾಚರಣದ ಸಾತಿಪ್ರತ್ಯವನ್ನು ಅಡಿ ತೋರಿಸುವುದು ಸುಸಾಧ್ಯವಾಗುವುದಿಲ್ಲ! ಲೊರ್ಡ ಸಿಂಹರು ಮತ್ತು ಬಾಸುಗಳು ವಿಲಾಯತಿಗೆ ಹೋಗ ಹೊರಟ ಕಾರಣ ಅವರಿಗೆ 'ಇಂಡಿಯನ್ ಎಸೋಸಿಯೇಶನ್' ಸಂಸ್ಥೆಯ ಕಡೆಯಿಂದ ಒಂದು ಮೇಜವಾನಿಯು ಕೊಡಲ್ಪಟ್ಟಾಯಿತು. ಈ ಸಂದರ್ಭದಲ್ಲಿ ಬಂಗಾಳದ ವೃದ್ಧ ಮುಖಂಡರಾದ ನಾಮ. ಸುರೇಂದ್ರನಾಥ ಬಾನರ್ಜಿಗಳು 'ಲೊರ್ಡಸಿಂಹರೇ ಶಾಂತಪಕ್ಷದ ನಾಯಕರೆ'ಂದು ಹೊಗಳಿ ಸಿಂಹರ ಬಾಯಿಯ ಬೀಗವನ್ನು ತೆರೆದರು.

೨. ಲೊರ್ಡಸಿಂಹರು ಮೇಜವಾನಿಯ ಸಮಾರಂಭದಲ್ಲಿ ನಾಲ್ಕೈದು ಮಾತುಗಳನ್ನು ಆಡಿದಾಗ್ಯೂ ಅವು ನೋಕರಶಾಹಿಯ ಇತ್ತಲಾಗಿನ ಸುಧಾರಣಾಯುಗದ ಕೃತ್ಯಗಳ ಮೇಲೆ ಉತ್ತಮವಾದ ಪ್ರಕಾಶವನ್ನು ಕೊಡುತ್ತಿವೆ. ಅವರಂದದ್ದೇನಂದರೆ:—"ಹಿಂದುಸ್ಥಾನದ ಭವಿತವ್ಯತೆಯು ಶಾಂತಪಕ್ಷದವರ ಮೇಲೆ ಹೊಂದಿಕೊಂಡಿದೆ. ಶಾಂತಪಕ್ಷದ ಧುರೀಣರು ಇಂಗ್ಲಂಡಿನಲ್ಲಿ ಸುಧಾರಣೆಗಳ ವಿಷಯವಾಗಿ ಅಸಾಧಾರಣವಾದ ಕರ್ತವ್ಯಗಳನ್ನು ಮಾಡಿರುವರು." ಎಂದು ಹೇಳಿ ಲೊ. ಸಿಂಹರು ಶಾಂತ ಮತ್ತು ಉಗ್ರಪಕ್ಷದವರ ಐಕ್ಯತೆಯನ್ನು ಕುರಿತು ಅಪೂರ್ವವಾದ ವಿಚಾರಗಳನ್ನು ಪ್ರದರ್ಶಿಸಿದರು. ಈ ಎರಡು ತಂಡಗಳಲ್ಲಿ ಐಕ್ಯವನ್ನು ಸಾಧಿಸಲು ಸದಭಿರುಚಿಯ ಕೆಲವು ಜನರು ಯತ್ನಿಸುತ್ತಿದ್ದಾರೆ; ಆದರೆ ಸ್ವತಃ ಲೊ. ಸಿಂಹರಿಗೆ ಇದೇನೂ ಸಂತೋಷವಿಲ್ಲ! ಉಗ್ರಪಕ್ಷದವರೊಡನೆ ಶಾಂತರು ಸೇರುವುದು ತನ್ನ ಮತಕ್ಕೆ ಕೇವಲ ವಿರೋಧವೆಂದು ಸಿಂಹರು ಚಿತ್ತ ಬಿತ್ತಿ ಹೇಳಿದರು. ಈ ಎರಡು ಪಾರ್ಟಿಗಳು ಹೆಸರಿನಿಂದಲೇ ಭಿನ್ನವಲ್ಲದೆ, ತತ್ವದಿಂದ ಭಿನ್ನವಿಲ್ಲವೆಂದು ಕೆಲವರು ವಾದಿಸುವದಾದರೂ ಸಿಂಹರು ಅದನ್ನು ಒಪ್ಪಿಕೊಳ್ಳುವುದಿಲ್ಲ. ಈ ಸಂಗತಿಯನ್ನು ಅವರು ದೃಷ್ಟಾಂತಗಳ ಮೂಲಕವಾಗಿ ರುಜುಪಡಿಸಿ ತೋರಿಸಿರುತ್ತಾರೆ. ಪಂಜಾಬಿನ ಅನರ್ಥದ ವಿಷಯವನ್ನು ದೃಷ್ಟಾಂತಕ್ಕೆ ಇಟ್ಟುಕೊಂಡು ವಿಚಾರ ಮಾಡಿದರೆ, ಸರಕಾರಿ ಕಮಿಟಿಯ ಎಂದರೆ ಹಂಟರ ಕಮಿಟಿಯ ರಿಪೋರ್ಟ ಹೊರಬೀಳುವ ತನಕ ಶಾಂತಪಕ್ಷವು 'ಚ' ಎಂಬ ಮಾತನ್ನು ಕೂಡ ಹೊರಡಿಸಲಿಲ್ಲ. ಮತ್ತು ಇದೇ ನ್ಯಾಯವಾದ ಮಾರ್ಗವು. ಹಂಟರ ಕಮಿಟಿಯು ನೇಮಕಪಟ್ಟಿದ್ದಾದರೂ ಶಾಂತಪಕ್ಷದ ಪ್ರಯತ್ನ ಫಲವೆ ಸರಿ. ಮತ್ತು ಇದೇ ಕಾರಣದಿಂದ ಹಂಟರ ಕಮಿಟಿಯ ನಿರ್ಣಯವು ನ್ಯಾಯನೀತಿಗಳಿಗನುಸಾರವಾಗಿಯೆ ಹೊರಬದ್ದೀತೆಂದು ಲೊರ್ಡರು ಸಂಪೂರ್ಣ ಆಶಾವಂತರಾಗಿದ್ದಾರೆ. ಶಾಂತಪಕ್ಷವು ಇಷ್ಟು ಉತ್ತಮವಾದ ಧೋರಣದಿಂದ ಈ ಪ್ರಕಾರ ಕೆಲಸಮಾಡುತ್ತಿದ್ದಲ್ಲಿ ಇನ್ನೊಂದು ಪಕ್ಷವು ಏನು ಮಾಡುತಿತ್ತು? ಹಂಟರ ಕಮಿಟಿಯ ರಿಪೋರ್ಟ ಹೊರಬೀಳುವದಕ್ಕಿಂತ ಮುಂಚಿತವಾಗಿಯೆ ಈ ಪಕ್ಷವು ತನ್ನ ಅಭಿಪ್ರಾಯವನ್ನು ಹೊರಗೆ ಹಾಕಿತು. ಎಲ್ಲ ಕಡೆಯಲ್ಲಿ ಬರೆ ಗುಲ್ಲು ಮಾತ್ರ ಎಬ್ಬಿಸುತ್ತದೆ. ಪಂಜಾಬಿನ ವಿಷಯದಲ್ಲಿ ಈ ಎರಡು ಪಕ್ಷಗಳೊಳಗೆ ಇದು ಹೇಗೆ ಅಂತರವಿದೆಯೊ ಹಾಗೆಯೆ ಖಿಲಾಫತಿನ ಪ್ರಶ್ನದ ವಿಷಯದಲ್ಲಿ ಪರಸ್ಪರ ತುಲನೆಮಾಡಿದರೆ ಅವೆರಡರಲ್ಲಿ ಮಹದಂತರವು ಕಂಡುಬರುತ್ತದೆ. ಸಾರಾಂಶ ಲೊರ್ಡ ಸಿಂಹರ ಅಭಿಪ್ರಾಯದಂತೆ ಹಿಂದು ಮಾತೆಗೆ ರಾಜಕೀಯ ದೃಷ್ಟಿಯಿಂದ ಯಾವ ಯಾವುದು ಒಳ್ಳೇದು ಒದಿರುವುದೊ ಅದು ಮೊಡರೇಟರ ಎಂದರೆ ಶಾಂತಪಕ್ಷದವರ ಯತ್ನದಿಂದ ಬಂದಿರುವುದು ಎಂಬುದೆ ಮುಖ್ಯ ತಾತ್ಪರ್ಯವು. ಆಗಲಿ! ಚಿಂತೆ ಇಲ್ಲ! ಯಾರಿಂದದಾವರೇನು? ಒಳ್ಳೆಯದಾದರೆ ಸರಿ. ಆ ಪ ಎಡುಕಿಯ ಕೋಳಿಯು ಕೂಗಿದರೇನು, ಈ ಮುದುಕಿಯ ಕೋಳಿಯು ಕೂಗಿದರೇನು, ಸೂರ್ಯನು ಉದಯಿಸಿದರೆ ನಮಗೆ ಸಾಕು!

೩. ಲೊ. ಸಿಂಹರು ಶಾಂತಪಕ್ಷವನ್ನು ಹೊಗಳಿದ್ದಾಗಲಿ ಅನ್ಯಪಕ್ಷವನ್ನು ತೆಗಳಿದ್ದಾಗಲಿ—ನವರೇ ಹೇಳುವಂತೆ ಒಂದು ಕಾಲದಲ್ಲಿ ಅವರು ಅದರ ಕರ್ಣಧಾರರಾಗಿದ್ದರಿಂದ—ವಿಶೇಷ ಆಶ್ಚರ್ಯವಲ್ಲ. ಪರಂತು ಈಗ ಸಿಂಹರು ಬಾನರ್ಜಿಗಳಂತೆ ಒಂದು ಪಾರ್ಟಿಗೆ ಸೇರಿದವರಲ್ಲ. ಅವರು ದೇಶದೊಳಗಿನ ಎಲ್ಲರ ಮೇಲೆ ಸಮದೃಷ್ಟಿಯಿಂದ ನಡಕೊಳ್ಳಬೇಕಾದ ಅಧಿಕಾರಿ ವರ್ಗಕ್ಕೆ ಸೇರಿದವರು. ಅವರ ಮನಸ್ಸು ಮೊಡರೇಟರಮಯವಾಗಿದ್ದರೂ ಹೊರಗಿನ ತೋರಿಕೆಗಾದರೂ ಅವರ ಮೈಮೇಲೆ ಅಧಿಕಾರದ ವಸ್ತ್ರವಿದೆ. ಆದ್ದರಿಂದ ಈ ವಸ್ತ್ರಕ್ಕೆ ಮಾನಕೊಟ್ಟು ಹೇಳುವುದಾದರೆ ಅವರು ಒಬ್ಬರನ್ನು ಹತ್ತರ ಎಳೆದದ್ದೂ ಇನ್ನೊಬ್ಬರನ್ನು ದೂರಕ್ಕೆ ಒಳ್ಳಿದ್ದೂ ಉಚಿತವಲ್ಲ; ರಾಜನೀತಿಗೆ ಪೂರ್ಣವಾದ ಸಂಗತಿಯಲ್ಲ. ಆದರೆ ನೋಕರಶಾಹಿಯು ತನ್ನ ಕಾರ್ಯವನ್ನು ಸಾಧಿಸುವಾಗ ಇಂಥ ಉಪಾಯವನ್ನೂ ಅವಲಂಬಿಸುತ್ತದೆ ಎಂದು ಲೋರ್ಡ ಮೋರ್ಲೆಯವರು ತಮ್ಮ "ನೆನಪುಗಳೆಂ"ಬ ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ. ಹಾಗು ಪರಲೋಕವಾಸಿಗಳಾದ ಗೋಖಲೇಗಳಂಥ ಧುರೀಣರು ಮತ್ತು ಮುತ್ಸದ್ದಿಗಳು ಈ ಇಂದ್ರಜಾಲದ ಬಲೆಯಲ್ಲಿ ಹೇಗೆ ಸಿಲುಕಿದ್ದರೆಂಬುದನ್ನು ಅವರು ಬಹು ಸರಸವಾಗಿ ತೋರಿಸಿಕೊಟ್ಟಿದ್ದಾರೆ. ಎಂಥ ಮೇಲ ರಾಜಕಾರಣದೊಳಗಿನ ಸ್ವಾಧೀನತೆಯ ಉಪಾಯದ ಆವೃತ್ತಿಯನ್ನು ನೋಕರಶಾಹಿಯು ಈಗೊಮ್ಮೆ ಪ್ರಕಟಿಸಿದೆ. ಇದು ಮೊದಲಿನದ್ದಕ್ಕೆ ಸರಿಯಾಗಿ ತಾಳ ಬೀಳುತ್ತದೆ. ತಥಾಪಿ ಕೆಲವರಾದರೂ ಈ ಎಲ್ಲ ಸಂಗತಿಯನ್ನು ಕಂಡು ಬಾಯಲ್ಲಿ ಬೆರಳಿಟ್ಟು ಬೆರಗಾಗದೆ ಇರಲಿಕ್ಕಿಲ್ಲವೆಂದು ತಿಳಿದರೆ ಅದು ಕೇವಲ ಭ್ರಾಂತಿಮಯ ಕಲ್ಪನೆಯಾಗಲಿಕ್ಕಿಲ್ಲ. ಲೋ. ಸಿಂಹರು ಮೇಲಿನ ಎರಡು ತಂಡಗಳಲ್ಲಿ ಒಡಕಿರುವುದು ಯಾವ ಕಾರಣದಿಂದಲೂ ಬೇಕಾದರೆ ಇಷ್ಟವೆಂದು ಭಾವಿಸಲಿ. ಆದರೆ ನಮ್ಮಂಥವರ ಮನೋದೇವತೆಯು ಈ ಒಡಕಿಗೆ ಕಣ್ಣೀರು ಹಾಕದೆ ಇರಲಿಕ್ಕಿಲ್ಲವೆಂದು ನಾವು ಅತಿ ನಮ್ರತೆಯಿಂದ ಸೂಚಿಸಿ ಈ ವಿಷಯದಲ್ಲಿ ಲೊರ್ಡ ಸಿಂಹರ ರಜೆಯನ್ನು ಪಡಕೊಳ್ಳುವೆವು.

೪. ಹಿಂದುಸ್ಥಾನದಲ್ಲಿ ಇಂಗ್ಲಿಷ್ ವಿದ್ಯಾಲಯಗಳು ಪ್ರಾರಂಭವಾಗಿ ಮುಕ್ಕಾಲು ಶತಕದ ಕಾಲವು ದಾಟಿಹೋದರೂ ಇಲ್ಲಿಯ ಶಿಕ್ಷಣವು ಒಂದೆರಡು ಅಪವಾದಗಳನ್ನು ಬಿಟ್ಟರೆ ಬರೆ ವಾಙ್ಮಯಾತ್ಮಕವಾಗಿರುತ್ತದೆಂಬುದನ್ನು ಈಗ ಎಲ್ಲರು ಒಪ್ಪಿಕೊಳ್ಳುತ್ತಿದ್ದಾರೆ. ಕೇವಲ ವಾಙ್ಮಯಾತ್ಮಕ ಶಿಕ್ಷಣದಿಂದ ಹೊಟ್ಟೆಯ ಪಾಡು ನಡೆಯುವ ಹಾಗಿಲ್ಲ. ಅಲ್ಲದೆ, ಈ ಬಗೆಯ ಶಿಕ್ಷಣವು ಪ್ರಾರಂಭವಾಗಿ ಅದರಲ್ಲಿ ತೇರಗಡೆಯನ್ನು ಹೊಂದುವವರಿಗೆ ಸರಕಾರವು ಕೆಲಸವನ್ನು ಕೊಡುವ ಕ್ರಮವನ್ನಿಟ್ಟುಕೊಂಡಿತ್ತು. ಈ ಕಾರಣದಿಂದ ಎಂದರೆ ಸರಕಾರಿ ಕೆಲಸದ ಆಸೆಯಿಂದ ಅನೇಕರು ಈ ಶಿಕ್ಷಣದ ತೀರ್ಥದಲ್ಲಿ ಮುಣುಗಹತ್ತಿದರು. ಪರಂತು ಮೆಲ್ಲಮೆಲ್ಲನೆ ಸರಕಾರಿ ಹುದ್ದೆಗಳು ಕಡಿಮೆಯಾದವು. ಬೇರೆ ವಿಧದಿಂದ ಹೊಟ್ಟೆ ಹೊರೋಣವೆಂದರೆ ವಾಙ್ಮಯದ ಕಸರತ್ತಲ್ಲದೆ ಇನ್ನೊಂದು ಗೊತ್ತಿರದು. ಇರಲಿ, ನೋಕರಿಯ ಆಸೆಯಿಂದ ಕುಲಪರಂಪರಾಗತವಾದ ಬೇಸಾಯದ, ಶಿಲ್ಪಿತನದ ಅಥವಾ ಇನ್ನೊಂದು ಕೈಗಾರಿಕೆಯ ವೃತ್ತಿಗೆ ಮೊದಲೇ ತಿಲಾಂಜಲಿಯನ್ನು ಕೊಟ್ಟಾಗಿದೆ. ಸಾರಾಂಶ, ಈ ನೋಕರಿಯ ಆಮಿಷವನ್ನು ಬಾಯಿಗಿಟ್ಟು ವಾಙ್ಮಯ ಶಿಕ್ಷಣದ ಗಾಳವನ್ನು ಹಾಕಿದ್ದರಿಂದ ದೇಶದೊಳಗಿನ ಚಿಕ್ಕ ದೊಡ್ಡ ಎಲ್ಲ ವೃತ್ತಿಗಳು ಲುಪ್ತವಾಗಿ ಹೋಗಿದ್ದಾವೆ. ಈ ವಸ್ತುಸ್ಥಿತಿಯನ್ನು ಜನರು ಸರಕಾರದ ಕಣ್ಣಿಗೆ ತಂದುಕೊಟ್ಟರೂ ಅದು ಇಲ್ಲಿ ಶಾಸ್ತ್ರೀಯ ಹಾಗು ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸುವ ಡೌಲು ತೋರಿಸುವದಿಲ್ಲ. ಅಂತು ಶಿಕ್ಷಣದ ದೃಷ್ಟಿಯಿಂದ ಜನತೆಯ ಗೋಳಾಟವು ಈಗ ಮುಕ್ಕಾಲು ಶತಕದಿಂದ ನಡಕೊಂಡೇ ಉಂಟು. ಆದರೂ ಶಿಕ್ಷಣದ ಮತ್ತು ಉದ್ಯೋಗದ ಅಭಿಮಾನಿಗಳು ಅಮೇರಿಕಾ, ಜಪಾನ ಮುಂತಾದ ದೇಶಗಳಲ್ಲಿ ಹಿಂದೀ ವಿದ್ಯಾರ್ಥಿಗಳನ್ನು ಕಳುಹಿಸಿ ವಿಧವಿಧದ ಶಾಸ್ತ್ರೀಯ ಶಿಕ್ಷಣವನ್ನು ಕೊಡಿಸುವ ಉದ್ದೇಶದಿಂದ 'ಹಿಂದುಸ್ಥಾನ ಎಸೋಸಿಏಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯವರು ಅಮೇರಿಕಾ ಮತ್ತು ಜಪಾನ ಈ ದೇಶಗಳಲ್ಲಿಯ ಯುನಿವರ್ಸಿಟಿಗಳ ಮತ್ತು ವಿದ್ಯಾಲಯಗಳ ಮಾಹಿತಿಯನ್ನು ಪ್ರಕಟಿಸಿ ಶಾಸ್ತ್ರೀಯ ಮತ್ತು ಔದ್ಯೋಗಿಕ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗೆ ವಾರ್ಷಿಕ ಖರ್ಚು ಸಾಧಾರಣವಾಗಿ ಎಷ್ಟು ಬರುತ್ತದೆ ಎಂಬದನ್ನು ತೋರಿಸಿದ್ದಾರೆ. ಜಪಾನಿನಲ್ಲಿ ೧೦೦ರಿಂದ ೧೫೦ ಪೌಂಡಿನ ವರೆಗೆ ಸಾಧಾರಣವಾಗಿ ಖರ್ಚು ಬರುತ್ತದೆ; ಆದರೆ ಅಮೇರಿಕೆಯಲ್ಲಿ ೧೫೦ರಿಂದ ೨೦೦ ಪೌಂಡಿನ ವರೆಗೆ ಖರ್ಚು ಬರುತ್ತದೆ. ಖರ್ಚಿನ ದೃಷ್ಟಿಯಿಂದ ಅಮೇರಿಕವು ಕೊಂಚ ಹೆಚ್ಚಿನದಾಗಿ ಕಂಡರೂ ಜಪಾನದಲ್ಲಿರುವ ಭಾಷೆಯ ತೊಂದರೆಯು ಅಲ್ಲಿ ಇಲ್ಲ. ಇದೊಂದು ವಿದ್ಯಾರ್ಥಿಗಳಿಗೆ ಸೌಕರ್ಯವು! ಹಿಂದುಸ್ಥಾನ ಎಸೋಸಿಏಷನ ಸಂಸ್ಥೆಯು ಯೋಗ್ಯ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯ ಇಲ್ಲವೆ ಸಾಲದ ಪರಿಮುಖವಾಗಿ ಸಾಹಾಯ್ಯ ಕೊಟ್ಟು ಪರದೇಶದ ಶಿಕ್ಷಣವು ಹಿಂದುಸ್ಥಾನದಲ್ಲಿ ಬರುವಂತೆ ಮಾಡುತ್ತದಾದ ಕಾರಣ ಈ ಸಂಸ್ಥೆಯು ದೇಶದೊಳಗಿನ ಧನಿಕ ವರ್ಗದ ಉದಾರ ಆಶ್ರಯಕ್ಕೆ ಪಾತ್ರವಾಗಿದೆ.

೫. ದೇಶದ ಒಲವು ಯಾವ ಕಡೆಗಿದೆ ಎಂಬುವದನ್ನು ಪರೀಕ್ಷಿಸುವ ಅನೇಕ ಸಂದರ್ಭಗಳಿರುತ್ತವೆ. ಮೊನ್ನೆ ಮುಂಬಯಿ ಸಂಸ್ಥಾನದಲ್ಲಿ ಇಂಥದೊಂದು ಸಂದರ್ಭವು ಒದಗಿಬಂತು. ಕೋಲಾಪುರ ಪಟ್ಟಣದಲ್ಲಿ ಮುಂಬಯಿಯ ಪ್ರಾಂತಿಕ ಪರಿಷತ್ತು ನಡೆದಿತ್ತು. ಅದರಲ್ಲಿ ಮಿಕ್ಕ ಠರಾವುಗಳ ಜೊತೆಯಲ್ಲೆ 'ಬರುವ ಹೊಸ ಕೌನ್ಸಿಲಿಗೆ ಮತದಾರರು ರಾಷ್ಟ್ರೀಯ ಸಭೆಯು ಕಡುಭಕ್ತರನ್ನೇ ಚುನಾಯಿಸಿ ಕೊಡಬೇಕು' ಎಂಬದೊಂದು ಠರಾವಿತ್ತು. ರಾಷ್ಟ್ರೀಯ ಸಭೆಯ ಶಾಖೆಯಾದ ಪ್ರಾಂತಿಕ ಪರಿಷತ್ತಿನಲ್ಲಿ ಇಂಥ ಠರಾವು ಬರುವುದು ಸಹಜವೆ. ಆ ಪ್ರಕಾರ ಮೇಲಿನ ಠರಾವು ಬಂದ ಮೇಲೆ 'ರಾಷ್ಟ್ರೀಯ ಸಭೆಯ ಅನುಯಾಯಿಗಳೆಂದಲ್ಲ, ಬುದ್ಧಿಶಾಲಿಗಳನ್ನು ಚುನಾಯಿಸಿ ಕೊಡಬೇಕು, ಮತ್ತೆ ಅವರು ಯಾವ ಪಕ್ಷದವರೆ, ಬೇಕಾದರೆ ಇರಲಿ' ಎಂಬದೊಂದು ಉಪಸೂಚನೆಯನ್ನು ಮೇಲಿನ ಠರಾವಿಗೆ ಮಿಸೆಸ್. ಬಿಝುಂಟರು ತಂದರು. ಉಭಯ ಪಕ್ಷದಿಂದಲೂ ಚರ್ಚೆಯು ನಡೆಯಿತು. ಕೊನೆಗೆ ಈ ಉಪಸೂಚನೆಯ ಕಡೆಗೆ ಬರೇ ಏಳನೂರು ಮತ ಹಾಗು ಮೂಲ ಠರಾವಿಗೆ ಎರಡು ಸಾವಿರ ಮತಗಳು ಸಿಕ್ಕಿ ಮೂಲ ಠರಾವೇ ಪಾಸಾಯಿತು. ಇದರ ಅರ್ಥವೇನೆಂದರೆ ದೇಶಕ್ಕೆ ರಾಷ್ಟ್ರೀಯಮತದ ಪ್ರತಿನಿಧಿಗಳೆ ಬೇಕಾಗಿರುವರು. ಮದ್ರಾಸ ಸಂಸ್ಥಾನವಾದರೂ ಇದನ್ನೆ ಅನುಕರಿಸೀತೆಂದು ಹೇಳುತ್ತಾರೆ. ಆದರೆ ಅದನ್ನು ನಂಬುವದು ಹೇಗೆ?

೬. ಹಿಂದೀ ಸುಧಾರಣೆಯನ್ನು ಕುರಿತು ಪಾರ್ಲಿಮೆಂಟಿನಲ್ಲಿ ಒಳನಿಯಮಗಳನ್ನು ತಯಾರಿಸುವ ಕೆಲಸವು ನಡೆಯುವದಿದೆ. ಈ ಕೆಲಸದಲ್ಲಿ ರಾಷ್ಟ್ರೀಯ ಸಭೆಯ ಕಡೆಯಿಂದ ಉಪಯುಕ್ತವಾದ ಮತ್ತು ಮಹತ್ವದ ಸೂಚನೆಗಳನ್ನು ಕೊಡುವುದಕ್ಕಾಗಿ ನಾಮದಾರ ವಿ. ಜೆ. ಪಟೇಲರವರು ಮೊನ್ನೆ ಬುಧವಾರ ವಿಲಾಯತಿಗೆ ಪ್ರಯಾಣವನ್ನು ಬೆಳಸಿದರು. ಇವರು ಹಿಂದೀ ರಾಷ್ಟ್ರೀಯ ಸಭೆಯ ಜನರಲ್ ಸೆಕ್ರೆಟರಿಗಳು. ಪಾರ್ಲಿಮೆಂಟಿನ ಸಂಯುಕ್ತ ಕಮಿಟಿಯ ಮುಂದೆ ಇವರು ಹಿಂದೀ ರಾಷ್ಟ್ರದ ಪರವಾಗಿ ಮಾಡಿದ ಸೇವೆಯು ಸರ್ವಶ್ರುತವಾಗಿಯೆ ಇದೆ. ಅಲ್ಲದೆ, ಮೊನ್ನೆಯ ವರಿಷ್ಠ ಕೌನ್ಸಿಲಿನಲ್ಲಿ ಕೂಡ ಅವರು ರಾಷ್ಟ್ರೀಯರ ಪರವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಅನೇಕ ಸಂಗತಿಗಳನ್ನು ಹೇಗೆ ಬೈಲಿಗೆ ತಂದಿದ್ದಾರೆಂಬುವದನ್ನು ವರ್ತಮಾನ ಪತ್ರಿಕೆಗಳ ವಾಚಕರಿಗೆ ಹೇಳಬೇಕಾದ ಕಾರಣವಿಲ್ಲ. ಇರಲಿ, ರಾಷ್ಟ್ರೀಯ ಸಭೆಯ ಇಂಥ ಉತ್ಸಾಹಿ ಮತ್ತು ಕಡುಭಕ್ತರಾದ ಸೆಕ್ರೆಟರಿಗಳು ವಿಲಾಯತಿಗೆ ತೆರಳಿದ್ದಾರೆ. ಅವರ ಕಾರ್ಯದಲ್ಲಿ ಸಂಪೂರ್ಣ ಯಶಸ್ಸು ಪ್ರಾಪ್ತವಾಗಲೆಂದು ನಾವು ಹಾರೈಯಿಸುವೆವು.

೭. ಮೊನ್ನೆ ಬುಧವಾರದ ಮದ್ರಾಸು ಮೈಲಿನಿಂದ ಕಾರ್ಯಕಾರಿ ಕೌನ್ಸಿಲಿನ ಮೆಂಬರರಾದ ಸರ್ ಪಿ. ರಾಜಗೋಪಾಲಾಚಾರ್ಯರವರು ನಮ್ಮ ಜಿಲ್ಲೆಯ ಸಂದರ್ಶನಕ್ಕಾಗಿ ಬಂದಿರುವರು; ಇವರು ಕಾರ್ಯಕಾರಿ ಕೌನ್ಸಿಲಿನ ಮೆಂಬರಾಗಿದ್ದರೂ ಇವರ ಕೈಕೆಳಗೆ ಮುಖ್ಯವಾಗಿ ಮುನ್ಸಿಪಾಲಿಟಿ ಮತ್ತು ಲೋಕಲ್‌ಬೋರ್ಡ ಖಾತೆಗಳು ಇರುತ್ತವೆ. ಆದ್ದರಿಂದ ಅವರು ತಮ್ಮ ಈ ಸಂದರ್ಶನದಲ್ಲಿ ನಮ್ಮ ಜಿಲ್ಲೆಯ ಸ್ಥಾನಿಕ ಸ್ವರಾಜ್ಯದ ವಿಷಯಗಳನ್ನು ವಿಶೇಷವಾಗಿ ನಿರೀಕ್ಷಿಸುವವರಿದ್ದಾರೆಂದು ಕೇಳುತ್ತೇವೆ. ಇಲ್ಲಿಯ ಸ್ಥಾನಿಕ ಸ್ವರಾಜ್ಯದಲ್ಲಿ—ಮುನ್ಸಿಪಾಲಿಟಿಯಲ್ಲಾಗಲಿ ಬೋರ್ಡಿನಲ್ಲಾಗಲಿ—ಯಾವಯಾವ ಊನಗಳಿವೆ, ಲೋಕೋಪಯುಕ್ತವಾದ ಕಾರ್ಯಗಳನ್ನು ಯಾವಯಾವ ವಿಧದಿಂದ ಮಾಡಬಹುದು, ಆರೋಗ್ಯಖಾತೆ ಹಾಗು ಶಿಕ್ಷಣ ಇವುಗಳ ಪ್ರಯೋಜನವು ಜನತೆಗೆ ಹೆಚ್ಚು ಸಿಗುವಂತೆ ಅವುಗಳ ವಿಸ್ತಾರವನ್ನು ಹೇಗೆ ಮಾಡಬೇಕಾದ್ದು ಇತ್ಯಾದಿ ವಿಷಯಗಳನ್ನು ಸಂಬಂಧಪಟ್ಟ ಆಯಾ ಅಧಿಕಾರಿಗಳು ತೀರ್ಮಾನಿಸಿಕೊಳ್ಳುವುದು ಅವಶ್ಯಕವಾಗಿದೆ.

ಮಂಗಳೂರು

[illegible]

... ಬಾಗಿ ಮೇಲಿನ ಸಂಖ್ಯೆದ [illegible] ತಿಳಿಸುತ್ತಾರೆ. ಆದರೆ ಈ ಸಲ ಸರಕಾರವು ಕಳೆದ ವರುಷದಂತೆ ಹೊಲಸು ತರದ ಅಕ್ಕಿಯು [illegible] ನೋಡಿ, ಯೋಗ್ಯವಾದ ಅಕ್ಕಿಯೇ ಒದಗಿಸುವಂತೆ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳುವುದಾಗಿ ಭರವಸೆ ಪಡುತ್ತೇವೆ.

ಮ|| ರಾ|| [illegible] ಸದಾಶಿವರಾವ್ ಬಿ. ಎ. ಎಲ್. ಎಲ್ ಬಿ. ಇವರಲ್ಲಿಂದ ಮೊನ್ನೆ ಕೆಲವು ವಸ್ತ್ರಗಳು ಮತ್ತು ಇತರ ಕಾಗದ ಪತ್ರಗಳು ಕಳವಾದವು. ಈ ಕಾಗದಪತ್ರಗಳ ಒಟ್ಟಿಗೆ ಜಲಿಯನ್‌ವಾಲಾ ಬಾಗ್ ಫಂಡಿನ ಬಗ್ಗೆ ಕಳೆದ್ಸಲ ... ರಲ್ಲಿ ಸೇರಿದ ಸತ್ಯಾಗ್ರಹ ಮೀಟಿಂಗಿನಲ್ಲಿ ತಯಾರಾದ ವಂತಿಗೆಪಟ್ಟಿಯು ಸಹ ಇತ್ತು. ಈ ಪಟ್ಟಿಯು ಕಳವಾಗಿರುವುದರಿಂದ ಕಳೆದ ಪತ್ರಿಕೆಯಲ್ಲಿ ಸೂಚಿಸಿದಂತೆ ವಂತಿಗೆದಾರರ ಹೆಸರುಗಳನ್ನು ಪ್ರಕಟಿಸಲಾಗಲಿಲ್ಲ. ಈ ಪಟ್ಟಿಯವರಲ್ಲದೆ ನಾಮದಾರ ರಾವ್‌ಬಹದ್ದೂರ ಎನ್ ಸುಬ್ಬರಾಯರು ರೂ. ೫; ಮ|| ರಾ|| ನರಸಿಂಹ ಮರ್ತುಭಂಡಾರಿಗಳು ರೂ. ೩; ಮ|| ರಾ|| ಕೊಣ್ಣಿಕಾರ ಶಿದ್ದನಾಥ ಪೈ ರೂ. ೨; ಮತ್ತು ಬೋಳ ಮಾಧವರಾಯರು ರೂ. ೨; ವಂತಿಗೆ ಕೊಟ್ಟಿರುವರು. ಮೇಲಿನ ವಂತಿಗೆಪಟ್ಟಿಗೆ ಹೆಸರು ಹಾಕಿದವರೆಲ್ಲರೂ ತಮ್ಮ ತಮ್ಮ ಹೆಸರುಗಳನ್ನೂ ತಾವು ಹಾಕಿದ ಮೊಬಲಗನ್ನೂ ತಿಳಿಸಬೇಕಾಗಿಯೂ, ಪಟ್ಟಿಯೊಳಗಣ ವಂತಿಗೆಯನ್ನು ಕೊಡಲು ಬಾಕಿ ಇದ್ದವರು ತಮ್ಮ ವಂತಿಗೆಯನ್ನೂ ಸಹ ತ್ವರ್ಯದಲ್ಲಿ ಕೊಡಬೇಕಾಗಿ ರಾ|| ಸದಾಶಿವರಾಯರು ಅಪೇಕ್ಷಿಸುತ್ತಾರೆ. ಜಿಲ್ಲೆಯ ಆಯಾಯ ಭಾಗಗಳಲ್ಲಿ ಈ ಫಂಡಿಗೆ ವಂತಿಗೆಯು ಕೂಡಿಗೆಯಾಗುತ್ತಿದೆ.

ಬರುವ ಆದಿತ್ಯವಾರ ಸಾಯಂಕಾಲ ೫-೩೦ ಗಂಟೆಗೆ ಇಲ್ಲಿಯ ಆರ್ಯ ಚಿಕಿತ್ಸಾಭವನದ ದ್ವಿತೀಯ ವಾರ್ಷಿಕೋತ್ಸವವು ಜರಗುವುದು. ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಮ|| ರಾ|| ರಾ|| ವಕೀಲು ಗಂಗೊಳ್ಳಿ ಕೃಷ್ಣರಾವ್ ಬಿ. ಎ. ಎಲ್. ಎಲ್. ಬಿ. ಯವರು ಸ್ವೀಕರಿಸುವರು.

ರೆವೆನ್ಯೂ ಬೋರ್ಡ ಮೆಂಬರರಾದ ಮೆ|| ಕೌಚ್‌ಮೆನ್ ದೊರೆಗಳವರು ಈ ದಿನ ಸಾಯಂಕಾಲ ಇಲ್ಲಿಗೆ ತಲ್ಪಲಿಕ್ಕಿರುವರು.

ನಿನ್ನೆ ದಿನ ಸರ್. ಪಿ. ರಾಜಗೋಪಾಲಾಚಾರ್ಯರ ಪತ್ನಿಯವರಿಗೆ ಡಾಕ್ಟರ್ ಎಮ್. ಕೇಶವ ಪೈ ಮತ್ತು ಇವರ ಪತ್ನಿಯವರಿಂದ ಉಪಹಾರ ಸತ್ಕಾರವು ಕೆನರಾ ಹೈಸ್ಕೂಲಿನಲ್ಲಿ ನಡೆಯಿತು. ಇವರು ಕೆನರಾ ಹೈಸ್ಕೂಲನ್ನು ಸಂದರ್ಶಿಸಿ ಅದರ ವಸ್ತುಸಂಗ್ರಹವನ್ನು ನೋಡಿ ಬಹಳ ಸಂತೋಷಗೊಂಡರು.

ಸಹಕಾರ ಸಂಘಗಳ ಬದಲಿ ರಿಜಿಸ್ಟ್ರಾರರಾದ ರಾವ್‌ಬಹದ್ದೂರ ಎ. ವೇದಾಚಲ ಐಯ್ಯರ್ ಬಿ. ಎ. ಯವರು ಇದೇ ೧೬ನೆ ತಾರೀಕಿಗೆ ಇಲ್ಲಿ ಬಂದು ೧೯-೨೦ಲ್ಲು ಇಲ್ಲಿ ಉಳಿದು ಇಲ್ಲಿಂದ ಉಡುಪಿ ಕುಂದಾಪುರ ತಾಲೂಕುಗಳಲ್ಲಿ ಸರ್ಕಿಟುಮಾಡಿ, ೨೩ನೆ ತಾರೀಕಿಗೆ ಪುತ್ತೂರಿಗೆ ಹೋಗಿ ೨೪-೨೫ನೆ ತಾರೀಕಿನಲ್ಲಿ ಅಲ್ಲಿ ಜರಗುವ ಸಹಕಾರ ಪರಿಷತ್ತಿನಲ್ಲಿ ಹಾಜರಿದ್ದು, ೨೬ನೆ ತಾರೀಕಿಗೆ ಪುನಃ ಮಂಗಳೂರಿಗೆ ಬಂದು ೨೭ನೆ ತಾರೀಕಿನ ಮೈಲುಬಂಡಿ ಹತ್ತಿ ಮದ್ರಾಸಿಗೆ ಹೋಗಲಿಕ್ಕಿರುವರು.

ಮ|| ರಾ|| ರಾ|| ಶೆಟ್ಟಿ ಸುಂದರರಾಮ[illegible] ಪುತ್ತೂರು ತಾಲೂಕುಬೋರ್ಡ ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಈ ತಿಂಗಳ ಸೆಶ್ಶನ್ ಮೊಕದ್ದಮೆಗಳ ವಿಚಾರಣೆಯು ತಾ. ೮ ರಿಂದ ಪ್ರಾರಂಭವಾಯಿತು. ವಿಚಾರಣೆಗೆ ತೆಗೆದ ಮೊದಲನೇ ಮೊಕದ್ದಮೆಯು ಕಾಸರಗೋಡು ಸ್ಟೇಶನರಿ ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟದ್ದಾಗಿತ್ತು. ಕಳೆದ ನವಂಬರ ತಿಂಗಳ ತಾ ೧೧ನೇ ಪ್ರಾತಃಕಾಲ ಕಳಿಯೂರ ಗ್ರಾಮದಲ್ಲಿ ಮಹಾಬಲ ಸೆಟ್ಟಿ ಎಂಬವನು ಯಾರೋ ಮನೆಯಿಂದ ಗದ್ದೆಗಳಿಗೆ ಹೋಗುತ್ತಿರುವಾಗ ಕೋವಿಯನ್ನು ಹೊಡೆದರು. ಆದರೆ ಇವನು ದೈವವಶಾತ್ ಮರದ ಅವಗದದಿಂದ ತಪ್ಪಿದನು ಎಂಬುದು ಈ ಮೊಕದ್ದಮೆಯ ವಿಷಯ. ಈ ತಪ್ಪಿಗೆ ಅಪ್ಪಯ್ಯ ಸೆಟ್ಟಿ ವೆಗ್ಗೆಕಿಲ ಮರಡಿಗಳು ಮಂಜ್ಜೇಶ್ವರ ಪೋಲೀಸಿನವರಿಂದ ಗುರಿಮಾಡಲ್ಪಟ್ಟಿದ್ದರು. ದೇವಸ್ಥ ಎಂಬ [illegible] ಸಂಬಂಧ ಆರೋಪಿತರಾದ ಮಂಜಯ್ಯಶೆಟ್ಟಿಗೂ, ಮಹಾಬಲ [illegible] ಪರಸ್ಪರ ಹಗೆ ಇತ್ತು. ಈ ಹಗೆಯನ್ನು ತೀರಿಸುವುದಕ್ಕೆ [illegible] ಉಳಿದ ಎಂಟು ಮಂದಿ ಆರೋಪಿತರೊಡನೆ [illegible] ನಡಿಸಿ ಇವನನ್ನು ಗುರಿಯಿಟ್ಟು ಕೊಲ್ಲಬೇಕೆಂದು [illegible]

[illegible]

ನಾಮದಾರ ಸರ್. ಪಿ. ರಾಜಗೋಪಾಲಾಚಾರ್ಯರವರು ನಿನ್ನೆ ಬೆಳಗ್ಗೆ ೮ ಗಂಟೆಗೆ ಮ್ಯುನಿಸಿಪಲ್ ಮೀಟಿಂಗನ್ನು ಸಂದರ್ಶಿಸಿದರು. ಆಗ ಶುದ್ಧ ನೀರಿನ ಪುರವಠೆಯ ಪ್ರಸ್ತಾಪ ಬಂದಾಗ ಈಗ ಮಾಡಿದ ಅಂದಾಜು ಪಟ್ಟಿಗಿಂತಲೂ ಮೊಬಲಗು ಹೆಚ್ಚಿಗೆ ಏರೀತು. ಅದನ್ನು ತೀರಾ ಸರಕಾರದವರು ಸಹಾಯಧನವಾಗಿ ಕೊಡಲಾರರು. ಅರ್ಧಾಂಶ ಮಟ್ಟಿಗೆ ಒಂದು ವೇಳೆ ಸರಕಾರದ ಸಹಾಯಧನವಾಗಿ ಸಿಗಬಹುದು, ಉಳಿದ ಮೊಬಲಗನ್ನು ಸರಕಾರದವರಿಂದ ಸಾಲವಾಗಿ ಪಡೆಯಬೇಕಾದೀತು ಎಂದು ಹೇಳಿದರು. ಅಲ್ಲಿಂದ ೯ ಗಂಟೆಗೆ ಮಂಗ್ಳೂರು ತಾಲೂಕು ಬೋರ್ಡ ಮೀಟಿಂಗನ್ನು ಸಂದರ್ಶಿಸಿ ಮರಳಿ ಕೋರಿಗುಡ್ಡ (ರಾ|| ನ. ಸುಬ್ಬರಾಯರ) ಬಂಗ್ಲೆಗೆ ವಾಪಸು ಹೋದರು. ಮಧ್ಯಾಹ್ನ ೧೨ ಗಂಟೆಗೆ ಹಲವು ಪ್ರಮುಖಂಡರು ಅವರ ಭೇಟಿತೆಗೊಳ್ಳಲಿಕ್ಕೆ ಬಂದಿದ್ದರು. [illegible] ಮಂಗಳೂರು ತಾಲೂಕಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಡೆಪ್ಯುಟೇಶನು ತಮ್ಮ ಅಹವಾಲಿಗಳನ್ನು ಹೇಳಿಕೊಳ್ಳಲಿಕ್ಕೆ ಅಲ್ಲಿ ಬಂದು ಸೇರಿತು. ಡೆಪ್ಯುಟೇಶನನ್ನು ಕಾಣುವುದು ಅಷ್ಟು ಆಗತ್ಯವಿಲ್ಲ, ಅವರು ಹಿಂದಿನ ದಿನ ಮಾಡಿದ ಠರಾವುಗಳ ನಕಲನ್ನು ತಾನು ಓದಿದ್ದೇನೆ, ಬೋರ್ಡು ಮತ್ತು ಮ್ಯುನಿಸಿಪಲ್ ಸಾಲೆಗಳ ಉಪಾಧ್ಯಾಯರ ಸ್ಥಿತಿಯನ್ನು ಕುರಿತು ಈ ಎರಡು ಸಂಸ್ಥೆಗಳೊಡನೆ ತಾನು ಚರ್ಚಿಸಲಿಕ್ಕಿದ್ದೇನೆ, ಅಂತೂ ಈ ವರ್ಷ ಸರಕಾರ ನವುಕರರಿಗೆ ಬಡ್ತಿಯ ದರಗಳನ್ನು ಕೊಡಿಸುವುದಕ್ಕನೆ ಹಣ ಸಾಲದ್ದರಿಂದ ಬೋರ್ಡಿನವರೇ ಈ ಕುರಿತು ಪ್ರಯತ್ನನಡಿಸುವುದು ಯೋಗ್ಯ ಎಂದು ಡೆಪ್ಯುಟೇಶನಿನ ಪರವಾಗಿ ಮಾತಾಡಿದ ರಾ|| ವಿ. ಎಸ್. ಕಾಮತರಿಗೆ ತಿಳಿಸಿದರು. ಡೆಪ್ಯುಟೇಶನು ನಿರಾಶೆಯಾಗಿ ಹೋಯಿತು.

ಮಧ್ಯಾಹ್ನ ೩ ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗಿಗೂ ಸರ್. ರಾಜಗೋಪಾಲಾಚಾರ್ಯರು ದಯಮಾಡಿಸಿದ್ದರು. ಮೀಟಿಂಗಿನ ಪ್ರಾರಂಭದಲ್ಲಿ ಬೋರ್ಡಿನ ಪರವಾಗಿ ಅಧ್ಯಕ್ಷರಾದ ನಾಮದಾರ ರಾವಬಹದ್ದೂರ ಸುಬ್ಬರಾಯರು ಇವರನ್ನು ಸ್ವಾಗತಮಾಡಿ ದೇಶೀಯರಾದ ಇವರ ಆಡಳಿತೆಯಲ್ಲಿ ಎಷ್ಟು ತಾಲೂಕು ಬೋರ್ಡುಗಳಿಗೆ ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರ ಸಿಕ್ಕಿತು, ಎಷ್ಟು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಬಿನಸರಕಾರಿ ಪ್ರೆಸಿಡೆಂಟರ ನೇಮಕವಾಯಿತು ಎಂದು ವಿವರಿಸಿ ಇದೇ ವರ್ಷದಲ್ಲಿ ಈ ಕ್ರಮವು ಇನ್ನೂ ಕೆಲವು ಜಿಲ್ಲೆಗಳಲ್ಲಿ ಜಾರಿಗೆ ಬರಲಿಕ್ಕಿದೆ ಎಂದು ಸೂಚಿಸಿದ್ದಲ್ಲದೆ ಉಪಾಧ್ಯಾಯರ ಸಂಬಳಗಳಿಗೂ ಎಲ್ಲೊವೆನ್ಸ್‌ಗಳಿಗೂ ಸರಕಾರದಿಂದ ಸಾಕಷ್ಟು ಸಹಾಯ ದೊರೆತಿಲ್ಲ ಎಂದು ಹೇಳಿದರು.

ಈಗ ಸರಕಾರದಲ್ಲಿ ಉಳಿದ ಶಿಲುಕು ಸರಕಾರಿ ನವುಕರರಿಗೆ ಹಂಗಾಮಿ ಬಡ್ತಿಯನ್ನು ಕೊಡಲಿಕ್ಕೆನೆ ಸಾಕಾಗುವುದಿಲ್ಲ ಎಂಬಂತಿದೆ, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳಿಗೆ ಇನ್ನುಮುಂದೆ ಈ ವರೆಗಿನಂತೆ ಸಹಾಯಧನ ಸಿಗುವಹಾಗಿಲ್ಲ, ಯಾಕಂದರೆ ಇಂಡಿಯಾ ಸರಕಾರದಲ್ಲಿ ಕೆಲವು ವರ್ಷಗಳ ವರೆಗೆ ಹೇರಳ ಹಣ ಉಳಿದಿತ್ತು, ಆಗ ಅಲ್ಲಿಂದ ಸಿಕ್ಕಿದ ವರ್ಷಧಾರೆಯ ಕೆಲವು ಹನಿಗಳು ಬೇರೆ ಬೇರೆ ಸಂಸ್ಥೆಗಳ ತೃಷೆನಿವಾರಣೆಗೆ ಕೊಂಚಮಟ್ಟಿಗೆ ಸಹಕಾರಿಯಾದವು, ಆದರೆ ಇನ್ನು ಆ ಬಗೆಯ ಶಿಲಕು ವರಿಷ್ಠಸರಕಾರದಲ್ಲಿಯೇ ಉಳಿಯುವಹಾಗಿಲ್ಲ, ಅದರ ಬಾಧಕವು ಇಲ್ಲಿ ವರೆಗೆ ಬಂದೀತು. ಬೋರ್ಡುಗಳೂ ಮ್ಯುನ್ಸಿಪಾಲಿಟಿಗಳೂ ಸ್ವಾವಲಂಬನಕ್ಕೆ ತಯಾರಿರಬೇಕು, ಹೊಸ ಮುನ್ಸಿಪಲ್ ಎಕ್ಟಿನಲ್ಲಿದ್ದಂತೆ ಬೋರ್ಡುಗಳಿಗೂ ಕಂದಾಯ ಏರಿಸುವ ಅಧಿಕಾರವು ನೂತನವಾಗಿ ತಯಾರಾದ ಲೋಕಲ್ ಬೋರ್ಡುಗಳ ಎಕ್ಟಿನ ಮುಸ್ಸೂದೆಯಲ್ಲಿದೆ, ಅದು ಪಾಸಾದರೆ ಬೋರ್ಡುಗಳು ಆ ರೀತಿಯಿಂದ ತಮ್ಮ ಆದಾಯವನ್ನು ಹೆಚ್ಚಿಸಲಿಕ್ಕೆ ಅನುಕೂಲವಿದೆ, ಈಗ ತಕ್ಷಾಲದಲ್ಲಿ ತೀರಾ ಹಾಳು ಸ್ಥಿತಿಗೆ ಬಂದಿದ್ದ ಶಾಲೆಗಳನ್ನೂ ಶಾಲೆಗಳಲ್ಲಿ ಅನವಶ್ಯಕವೆಂದು ಕಾಣುವ ಉಪಾಧ್ಯಾಯರ ಸಂಖ್ಯೆಯನ್ನೂ ತೆಗೆದುಹಾಕಿ ಉಳಿಯುವ ಉಪಾಧ್ಯಾಯರಿಗೆ ಆದರೂ ಅಶನ ಪೂರೈಸಮಾಡುವುದು ಯೋಗ್ಯ, ಈಗಲೇ ಈ ಬೋರ್ಡಿನವರ ಹಳೇ ಎಕ್ಟಿನ ಅಧಿಕಾರಕ್ಕೆ ಅನುಗುಣವಾಗಿ ರೂಪಾಯಿಗೆ ಇನ್ನೂ ಅರ್ಧಾಣೆಯಂತೆ ಹೆಚ್ಚಿಸಲು ಸಾಧ್ಯವಿದೆ, ಅದರಿಂದ ತಕ್ಕ ಮಟ್ಟಿಗೆ ದ್ರವ್ಯತೃಷೆಯನ್ನು ನಿವಾರಿಸಬಹುದು, ಆಗ ಈ ಖರ್ಚು ಕಾಯಂ ಖರ್ಚು ಎಂದೆಣಿಸಿ, ಮುಂದೆ ಸರಕಾರದಿಂದ ಸಿಗಬಹುದಾದ ಸಹಾಯವು ಆ ಖರ್ಚಿನ ದಾವಾಸಯದಲ್ಲಿ ಹೆಚ್ಚಬಹುದು, ಇದಕ್ಕಾಗಿ ಬೇಗನೆ ಒಂದು ಕಮ್ಮಿಟಿಯನ್ನು ಬೋರ್ಡಿನವರು ಏರ್ಪಡಿಸಿ ತಮ್ಮ ಕೆಳಗಿನ ಎಲ್ಲಾ ಇಲಾಖೆಗಳ ಖರ್ಚನ್ನು ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿ ಖರ್ಚು ತಗ್ಗಿಸಲಿಕ್ಕೆ ಎಲ್ಲಿ ಸಾಧ್ಯವಿದೆ ಎಂದು ನೋಡುವುದು ಯೋಗ್ಯ, ಕೆಲವು ಹೆದ್ದಾರಿಗಳಿಗೆ ಹೇಗೂ ಸರಕಾರವು ದುರುಸ್ತಿ ಬಗ್ಗೆ ಸಹಾಯಧನಕೊಡಲಿಕ್ಕಿದೆ ಎಂದು ನಾಮದಾರ ಸರ್. ಪಿ. ರಾಜಗೋಪಾಲಾಚಾರ್ಯರು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಸಾಯಂಕಾಲ ಇವರ ಆಗಮನ ನಿಮಿತ್ತದಿಂದ ಮಡಿಕೇರಿಗುಡ್ಡೆ ಬಂಗ್ಲೆಯಲ್ಲಿ ೫-೩೦ ಗಂಟೆಗೆ ಗಾರ್ಡನ ಪಾರ್ಟಿ ಇತ್ತು. ಪಟ್ಟಣದ ಹಲವು ಮುಖಂಡರು ಆಮಂತ್ರಿತರಾಗಿದ್ದರು.

ಈ ದಿನ ಬೆಳಗ್ಗೆ ಸರ್. ರಾಜಗೋಪಾಲಾಚಾರ್ಯರು ಕಾರ್ಕಳ ಕಡೆಗೆ ಸವಾರಿ ಬೆಳಸಿದರು.

ದಕ್ಷಿಣ ಕನ್ನಡ

[illegible]

... ಅಸಿಸ್ಟೆಂಟ ಸೆಕ್ರೆಟರಿಯವರನ್ನಾಗಿಯೂ, ಕಾಸರಗೋಡು ಅಬ್ಕಾರಿ ಆಫೀಸಿನ ಹೆಡ್. ಕ್ಲಾರ್ಕರಾದ ರಾ|| ರಘುವೀರರನ್ನು ಟ್ರೆಜರರ್‌ಗಳನ್ನಾಗಿಯೂ ಮತ್ತು ಮುಖ್ಯರಾದ ಮೆಂಬರಗಳಾದ ಪ್ರತ್ಯೇಕ ಪ್ರತ್ಯೇಕ ಶಾಖೆಗಳಿಂದ ಒಟ್ಟು ಒಟ್ಟು ೫ ಜನರನ್ನು ಪಂಚಾಯತದಾರರನ್ನಾಗಿಯೂ ಚುನಾಯಿಸಲಾಯಿತು. ಮತ್ತು ಇನ್ನು ಮುಂದಿನ ಚುನಾವಣೆಗಳನ್ನು ವರ್ಷಕ್ಕೊಮ್ಮೆ ಮಾಡತಕ್ಕದ್ದೆಂದು ಸಹ ಏಕೀಭಾವದಿಂದ ನಿಯಮಿತವಾಯಿತು.

ಇದೆಲ್ಲಾ ಕಳೆದ ಬಳಿಕ ಇನ್ನು ಮುಂದಿನ ಪ್ರೆಸಿಡೆಂಟರವರಾದ ಪಿ. ಎನ್. ಕೃಷ್ಣರಾಯರವರು ಇಲ್ಲಿಯ ಅಕ್ಕಿಯ ಸ್ಥಿತಿಯ ವಿಷಯದಲ್ಲಿ ಚಿಕ್ಕ ಸಂಭಾಷಣೆಯನ್ನು ಮಾಡಿ, ಇಲ್ಲಿಗೆ ತಿಪ್ಪದಲ್ಲಿಯೇ ಬಡವರಿಗೆಲ್ಲಾ ... ಈ ಸಮಾಜದವರಿಗಾದರೂ ಮಳೆಯಕಾಲಕ್ಕೆ ಬೇಕಾಗುವ ರಂಗೂನು ಅಕ್ಕಿಯನ್ನು ತರಿಸಿ [illegible] ಮಾಡಿಸಬೇಕಾಗಿ ನಿಶ್ಚಯಿಸಿದರು. ಈ ಕಾರ್ಯವನ್ನು ತಕ್ಕಷ್ಟು ಬೇಗನೆ [illegible] ಬೇಕಾಗಿ ಇತರ ಮೆಂಬರರೂ ಕೂಡ ಅಪೇಕ್ಷೆ ಮಾಡಿದರು. ಕಡೆಗೆ [illegible] ಕೂಟವನ್ನು ಬರುವ ತಿಂಗಳ ತಾರೀಕು ೯ನೆಯ ಆದಿತ್ಯವಾರಕ್ಕೆ ಮುಂದುವರಿಸಿ ಈ ದಿವಸ ಸಭೆಯು ಮುಕ್ತಾಯಗೊಂಡಿತು.

ರಾಜಮಾರ್ಗದಲ್ಲಿ ಒಂದೊಂದು ಫರ್ಲಾಂಗಿಗೆ ಒಂದರಂತೆ ಅಷ್ಟದರೂ, ಲೋಕಲ್‌ಫಂಡ್ ಲಾಟೀನು ಕಂಬಗಳು ಕೆಲವು ಇರುತ್ತವೆ. ಆದರೆ ಕೃಷ್ಣಪಕ್ಷವಾಗಲಿ, ಶುಕ್ಲಪಕ್ಷವಾಗಲಿ ಅವುಗಳ ಗೋಜಿಗೆ ಯಾರೂ ಹೋಗುವಂತೆ ಕಂಡುಬರುವುದಿಲ್ಲ. ಅಥವಾ ಅಪೂರ್ವವಾಗಿ ಒಂದು ದಿನ ಲಾಟೀನುಗಳು ಹಚ್ಚಿಸಿದುದು ಕಂಡರೆ ಅದೇ ಮಾರ್ಗವಾಗಿ ಅರ್ಧ ತಾಸಿನ ಬಳಿಕ ಹೋದರೆ ಸದರಿ ಲಾಟೀನಿನ ಕಂಬಕ್ಕೆ ತಡವಿ ಬೀಳುವುದು ಅಲ್ಲದೆ ಮತ್ತೇನಿಲ್ಲ. ಈ ಲಾಟೀನುಗಳಿಗೆ ನಂಬಿ ಬಳಕು ಇರದೆ ನಡೆವ ದಾಂಗರ [illegible] ವಿಶೇಷವಾಗಿರುವುದು.

ಹೊಸದುರ್ಗ: — ಈ ವರ್ಷದ ಜಮಾಬಂದಿಯು ಇದೇ ತಿಂಗಳ ತಾ. ೧೦ಕ್ಕೆ ಮುಗಿಯಿತು. ಜಮಾಬಂದಿಯ ಆಫೀಸರರಾದ ಮ|| ರಾ|| ಮಾನವೇದನ ರಾಜರವರು ಎಲ್ಲಾ ರೈತರ ಒಂದು ಸಭೆಯನ್ನು ಏರ್ಪಡಿಸಿ, ಈ ಪ್ರಾಂತ್ಯಗಳಲ್ಲಿ ಏನೆಲ್ಲಾ ಕುಂದುಕೊರತೆಗಳಿವೆ, ಹೇಗೆ ಅವುಗಳನ್ನು ಹೋಗಲಾಡಿಸುವುದು, ಎಂಬ ಇತ್ಯಾದಿ ಸಂಗತಿಗಳನ್ನು ಸದರಿ ಸಭೆಯಲ್ಲಿ ಚರ್ಚಿಸಿ ಕೆಲವು ಮಾರ್ಗಗಳನ್ನೂ ಶಾಲೆಗಳನ್ನೂ ಏರ್ಪಡಿಸುವಂತೆಯೂ, ಹೊಸದುರ್ಗ ಪೇಟೆಯಲ್ಲಿ ಬೆಳಕಿನ ಬಗ್ಗೆ ರಾತ್ರಿ ಕಾಲದಲ್ಲಿ ದೀಪಸ್ತಂಭಗಳನ್ನು ಸ್ಥಾಪಿಸುವರೆಯೂ ಠರಾವುಗಳನ್ನು ಮಾಡಿ ಬರಕೊಂಡಿರುತ್ತಾರೆ — ಜಮಾಬಂದಿಯನ್ನು ನಡಿಸಿದ ಮ|| ರಾ|| ಮಾನವೇದನ ರಾಜರವರಿಗೂ, ತಾಲೂಕ ತಹಸಿಲ್ದಾರ ಮ|| ರಾ|| ಕೃಷ್ಣರಾಯರಿಗೂ, ಇಲ್ಲಿಯ ಡೆಪ್ಯುಟಿ ತಹಸಿಲ್ದಾರ ಮ|| ರಾ|| ನಾರಾಯಣರಾಯರಿಗೂ ಅವರು ಬಡಜನರ ಉದ್ಧರಣೆಗಾಗಿ ವ್ಯಕ್ತಪಡಿಸಿದ ಪ್ರಯತ್ನಗಳಿಗೆ ನಾವು ಮನಃಪೂರ್ವಕವಾಗಿ ವಂದಿಸುತ್ತೇವೆ.

ಕುಂಬಳೆ: — ಡಿಸ್ಟ್ರಿಕ್ಟ್ ಬೋರ್ಡ ಮೆಂಬರರೂ ಕಾಸರಗೋಡಿನ ಸುಪ್ರಸಿದ್ಧ ವಕೀಲರಾದ ಮ|| ರಾ|| ರಾ|| ಕೆ. ಪಿ. ಅಚ್ಯುತಯ್ಯನವರು ಇದೇ ತಾ. ೧೨ನೇ ಸೋಮವಾರ ಬೆಳಗ್ಗೆ ದಿವಂಗತರಾದ ವರ್ತಮಾನದಿಂದ ಕಾಸರಗೋಡಿನವರಿಗೆ ಮಾತ್ರವಲ್ಲ ಇಡೀ ತಾಲೂಕಿನ ಪ್ರಜೆಗಳಿಗೆ ಇವರಿಂದ ದುಃಖವಾಗಿದೆ.

ಇದೇ ಕಳೆದ ಫೆಬ್ರವರಿಯಿಂದ ರೈಲ್ವೆಯವರು ಸಾಮಾನಿನ ಬಗ್ಗೆ ಪ್ರತ್ಯೇಕ ಒಂದು ಗೂಡ್ಸ್ ಟ್ರೈನನಿಟ್ಟು ಇತರ ಟ್ರೈನುಗಳ ಸಮಯವನ್ನು ಬದಲಿ ಮಾಡಿದ ಸಂಬಂಧ ಪ್ರಯಾಣಿಕರಿಗೆ ಹೆಚ್ಚಿನ ಅನಾನುಕೂಲತೆಗಳುಂಟಾಗಿವೆ. ಈ ಸ್ಟೇಶನಿನ ಮೈಲ್‌ಗಾಡಿಯ ಸಮಯ ಬದಲಾವಣೆಗೆ ಸದ್ಯ ಅಸಾಧ್ಯವಾದರೂ ಲೋಕಲ್‌ಗಾಡಿಯನ್ನು ಮಂಗಳೂರಿಂದ ಬೆಳಗ್ಗೆ ೭ ಯಾ ೮ ಘಂಟೆಗಾದರೂ ಹೊರಡಿಸುವಂತೆಯೂ ಮೋಟರ್‌ಗಾಡಿಯನ್ನು ಶಾಲಾ ವಿದ್ಯಾರ್ಥಿಗಳಿಗನುಕೂಲವಾಗುವಂತೆ ಸಹಾ ಬದಲಾಯಿಸುವುದು ಅಗತ್ಯವಾಗಿಯದೆ.

ಅಲ್ಲಿ ನಾಯಿಗಳನ್ನು ಕೊಲ್ಲುವರೆ ಈ ಮೊದಲು ೨—೩ ಹಪ್ತೆಯಿಂದ ಹುಕುಮುಗಳು ಹೊರಟಾಗ್ಯೂ ಹೊಡಿಯುವವರಿಲ್ಲದೆ ನಾಯಿಗಳು ಹುಂಬ ಅದಕ್ಕೆ ಪುನಹ ಹುಚ್ಚುನಾಯಿಗಳ ಕಾಟಕ್ಕೆ ಪ್ರಾರಂಭವಾಗಿದೆ. ಸಾಲದ್ದಕ್ಕೆ ಒಂದು ಕತ್ತೆಕಿರುಬವು ರಾತ್ರಿಸಂಚಾರ ಮಾಡುವುದರಿಂದ ಪೇಟೆಯಲ್ಲಿ ರಾತ್ರಿ ಹಗಲು ಸಂಚಾರವೇ ಕಷ್ಟ! ದಯಾಳು ಬೋರ್ಡಿನವರು ಇನ್ನಾದರೂ ತ್ವರ್ಯ ನಾಯಿಗಳನ್ನು ಹೊಡಿಯುವವನೊಬ್ಬನನ್ನು ನೇಮಿಸಿ ಇಲ್ಲಿಗೆ ಹುಕುಂ ಮಾಡಿಸಬೇಕಾಗಿದೆ.

ಪುತ್ತೂರು: — ರೆವೆನ್ಯೂ ಡಿವಿಜನಲ್ ಆಫೀಸರ ಈದ್ದಪಡಿಯಾದ ಸರ್ಕಿಟು. ತಾ. ೧೧ರಿಂದ ೧೩ ಪುತ್ತೂರು, ತಾ. ೧೪, ೧೫ ಮಂಗಳೂರು, ತಾ. ೧೬ರಿಂದ ೧೯ ಪುತ್ತೂರು, ತಾ. ೨೦ ಕಾಸರಗೋಡು, ತಾ. ೨೧ರಿಂದ ೨೪ ಉಪ್ಪಿನಂಗಡಿ, ತಾ. ೨೫ರಿಂದ ೨೮ ಕುಂಬಳೆ, ತಾ. ೨೮ ಮತ್ತು ೩೦ ಕಾಸರಗೋಡು.

ಪೊಳಲಿ: — ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ಪ್ರತಿವರ್ಷ ನಡಿಯತಕ್ಕ ಕಾಲಾವಧಿ ಮಹೋತ್ಸವವು ಇದೇ ತಾ. ೧೧ನೇ ಆದಿತ್ಯವಾರಕ್ಕೆ ಪೂರೈಸಿತು. ನಾಳೆ ತಾ. ೧೭—೪—೨೦ರಿಂದ ತಾ. ೨೧—೪—೨೦ರ ವರೆಗೆ ಸದರಿ ಸ್ಥಳದಲ್ಲಿ ಅಷ್ಟೋತ್ತರ ಶತಯುಕ್ತ ಸಹಸ್ರ ವಿಪ್ರಭೋಜನ ಮಹಾಂಜನ ಸಂತರ್ಪಣೆ ಗಣಯಾಗ, ಗ್ರಹಯಾಗ, ಚಂಡಿಕಾಯಾಗ, ಗಾಯತ್ರಿ ಪೂಜೆ, ರಂಗಪೂಜೆ, ಮತೋತ್ಸವ ಇತ್ಯಾದಿ ಸೇವೆಗಳನ್ನು ಪುಂಜಮ ದಾಮಣ್ಣ ಭಟ್ಟನವರಿಂದ ನಡಿಸಲ್ಪಡುವುದು. ಭಕ್ತಮಂಡಲಿಯು ಸರ್ವ ಜನರೂ ಬಂದು ಪ್ರಸಾದ ಸ್ವೀಕರಿಸಿಕೊಳ್ಳುವಹಾಗಬೇಕಾಗಿ ವಿನಂತಿ ಇದೆ.

ಮಡಿಕೇರಿ: — ಮದರಾಸ ಗವರ್ನರರು ಈ ತಿಂಗಳ ತಾ. ೧೮ಕ್ಕೆ ಇಲ್ಲಿಗೆ ಚಿತ್ತೈಸಿರುತ್ತಾರೆ. ಇಲ್ಲಿಯ ಕ್ರೈಸ್ತನವರು ಪಂದ್ಯಾಟ ಮೊದಲಾದ [illegible]

ದಿ. ಕೆನರಾ ಎಂಟರ್‌ಪ್ರ್ಯಾಜ್, ಲಿಮಿಟೆಡ್.

ಪುತ್ತೂರು ದಕ್ಷಿಣ ಕನ್ನಡಾ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿನನುಸಾರವಾಗಿ ರಿಜಿಸ್ತ್ರಿ ಮಾಡಲ್ಪಟ್ಟಿದೆ.)

ಮೂಲಧನ:—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನ್ನು ಮನವಿ ಮೂಲಕ ಅಪೇಕ್ಷಿಸಿ ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0; ಮನವಿ ಅಂಗೀಕರಿಸಿದ ಬಳಿಕ ಕೊಡೋಣಾಗುವ ಎಲ್ಲೋಟ್‌ಮೆಂಟ್ ನೋಟಿಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿಯಾದ 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳೋಣಾಗಲಿಕ್ಕಿಲ್ಲ.

ಪ್ರೊಸ್ಪೆಕ್ಟಸಿನ ಬದಲಾಗಿ ಜೊಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟ್ಯಾಂಟ್ ರಿಜಿಸ್ತ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟಿನಲ್ಲಿ ಕಾಣಿಸಿದ ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡ್ಯಾರೆಕ್ಟರರು.

1. ಮ| ರಾ| ರಾ| ಉಳ್ಳಾಲ ಸಾಂತಯ್ಯ ಶೆಣೈ, ಅವರ್ಗಳ್. ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. „ „ ಎಮ್. ನರಸಿಂಹ ಮರ್ತುರ್ಭಂಡಾರಿ, „ ... ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ವ ಸಾಹುಕಾರ, ಮಂಗಳೂರು.
3. „ „ ಎಮ್. ಮುಡ್ಲಗಿರಿ ಪಾಂಡುರಂಗ ಪೈ, „ ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು.
4. „ „ ಎಚ್. ಕೊರಗಪ್ಪ, „ ... ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. „ „ ಮಂಜೇಶ್ವರ ಜನಾರ್ಧನ ಭಟ್, „ ... ತಾಲೂಕು ಬೋರ್ಡ ಮೆಂಬರ್ ವ ಸಾಹುಕಾರ, ಪುತ್ತೂರು.
6. „ „ ಎಚ್. ಅನಂತ ಕಾಮತ್, „ ... ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. „ „ ಅರಿಯಡ್ಕ ಸುಬ್ಬಯ್ಯರೈ, „ ... ವರ್ಗದಾರ, ಅರಿಯಡ್ಕ
8. „ „ ಸೊರಕೆ ಎಳಿಯಣ್ಣ, „ ... ವರ್ಗದಾರ ಮತ್ತು ಸಾಹುಕಾರ, ಪುತ್ತೂರು.
9. „ „ ಎ. ಗೋವಿಂದ ಶೆಣೈ, „ ... ಮೆನೇಜಿಂಗ್ ಡ್ಯರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವೈಸರರು.

1. ಮ| ರಾ| ರಾ| ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. „ „ ಎಮ್. ಮಾಧವರಾವ್ „ —ಬಿ. ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ತ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ.

(2) ಬರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರಿಯುವ ಆಲೋಚನೆ ಇದೆ.

(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ. ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದ್ದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸಮಯವು ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳ್ಳಿಯುವರೆ ಆಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲ್ಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯು ಮೂಲಿಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡ್ಯಾರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಯೆ ಮಾಡತಕ್ಕ ಮನವಿ.

ಮನವಿ ಬಗ್ಯೆ ಛಾಪಾ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡ್ಯಾರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಫೀಸು ಸಮೇತ್ತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ಕೊಂಡುಕೊಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೆಂಬರನು ಡ್ಯಾರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ.

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡ್ಯಾರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
18—3—1920.

A. GOVINDA SHENOY,
Managing Director.

ಜಗದ್ವಿಖ್ಯಾತವಾದ ಶ್ರೀ ದೇವಿಪ್ರಸಾದ ಕಂಪೆನಿ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಸ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿಗರ ಕಿಮ್ಮತು ೦—೩—೦; ಒಂದು ಡಜನು ಬಾಟ್ಲಿಗಳಿಗೆ ರೂ. ೯—೧೨—೦.

"ಗಜಕರ್ಣಾದ ಮುಲಾಮು"

ಗಜಕರ್ಣ, ಉಸಬು, ಖುಜ್ಲಿ, ದದ್ರು, ಹುಳಕಡ್ಡಿ, ಸೊಂಟಕಡ್ಡಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಒಕ್ಕೆ ೦—೩—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು. ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮುಖೇನ.

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಪಾಕರ್ಣಾರು, ದ. ಕನ್ನಡ.

ಜರ್ಮನಾ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಟವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು



ತೋರಿಸುವುದು. ಇದರಲ್ಲಿ ಯಾದೇ ಅಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.

ನಮ್ಮ ವಿಳಾಸ:— ವಿ. ಎ. ಎಸ್. ವಾಚ್ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು

ಹೇನು ಸತ್ತು ಕಾಗೆ ಬಡವಾಯಿತು

ಮೆಣಸಿನ ಕಾಳಪ್ಪ

ಅರ್ಗಣಿ ಮುದ್ದೆ

ಇಲಿಗಳ ಥಕ್ಕ ಥೈ

ಅಂಗಳ ದುಗ್ಗು

ಗುಡುಗುಡು ಗುಮ್ಮಟದೇವರು

ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ. 0—7—0

ವಿ. ಪಿ. ರೂ. 0—8—0.

ಅಕ್ಷರವಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ. ಶಬ್ದಗಳ, ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ **ವಾಚನಪ್ರೀತಿಯು** ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

[illegible]

[illegible] ಉಪಾಧ್ಯಾಯರ [illegible]

[illegible]

ಸೂಚಕರು:—ಮಿ| ಎಚ್. ಪಿ. ಸಿಲ್ವಾ, [illegible] ಬೋರ್ಡ್ ಶಾಲೆಯ ಹೆಡ್ ಮಾಸ್ತರರು.

ಅನುಮೋದಕರು:—ರಾ| ಎನ್. ಸುಬ್ಬಯ್ಯ, ಚೊಕ್ಕಪಟ್ಟ ಮ್ಯುನಿಸಿಪಲ್ ಶಾಲೆಯ ಮಾಸ್ತರರು.

೬ನೆ ಠರಾವು— [illegible] ಸಲಂ ಕಮ್ಮಿಟಿಯವರ [illegible] ಮ್ಯುನಿಸಿಪಾಲಿಟಿಗಳ [illegible] ಈ ಸಭೆಯವರು [illegible] ನಿರ್ಣಯಿಸಲಾಯಿತು.

ಸೂಚಕರು:—ರಾ| ಗುಂಡಿಲ ಸುಬ್ಬರಾವ್, ಮ್ಯುನಿಸಿಪಲ್ ಮಾರ್ಕೆಟ ವಾರ್ಡ ಶಾಲೆ.

ಅನುಮೋದಕರು:—ರಾ| ಎಮ್. ಸಾಂತಪ್ಪ, ಪಡಂಬೂರು ಬೋರ್ಡ ಶಾಲೆ.

೭ನೆ ಠರಾವು—ಸಲಂ ಕಮ್ಮಿಟಿಯವರ ಸೂಚನೆಯ [illegible] ನಿರ್ಣಯಿಸಲಾಯಿತು.

ಸೂಚಕರು:—ರಾ| ಪಿ. ಪಿ. ಸುಬ್ಬರಾವ್, ತಣ್ಣೀರಬಾವಿ ಬೋರ್ಡ ಶಾಲೆ.

ಅನುಮೋದಕರು:—ಮಿ| ಶೇಕ್ ಫರೀದ್, ಕಂಡತ್ಪಳ್ಳಿ ಮ್ಯುನಿಸಿಪಲ್ ಶಾಲೆಯ ಹೆಡ್ ಮಾಸ್ತರ್.

೮ನೆ ಠರಾವು—ಸಲಂ ಕಮ್ಮಿಟಿಯವರು ಸೂಚಿಸಿದ ವಿಧದ ಬಗ್ಗೆ ಹೈಯರ್ ಎಲಿಮೆಂಟರಿ ಗ್ರೇಡ್ ಟ್ರೈನಿಂಗ್ ಹೊಂದಿದವರು [illegible] ನಿರ್ಣಯಿಸಲಾಯಿತು.

ಸೂಚಕರು:—ರಾ| ಕೆ. ಸುಬ್ಬರಾವ್, ಸಿರೇಶ್ಯಾಲ್ಯ ಮ್ಯುನಿಸಿಪಲ್ ಶಾಲೆ.

ಅನುಮೋದಕರು:—ಮಿ| ಗ್ರೆಗೊರಿ ಡಿ. ಸೋಜ, ಚೊಕ್ಕಪಟ್ಟ ಮ್ಯುನಿಸಿಪಲ್ ಶಾಲೆ.

೯ನೆ ಠರಾವು—ಈಗಿನ ಸಂಬಳದ ಗ್ರೇಡುಗಳು [illegible] ಉಪಾಧ್ಯಾಯರಿಗೆ ಸ್ಪೆಶಲ್ ಎಲೊವೆನ್ಸ್ ಕೊಡಬೇಕೆಂತಲೂ ಕೇಳಿಕೊಳ್ಳತಕ್ಕದಾಗಿ ನಿರ್ಣಯಿಸಲಾಯಿತು.

ಸೂಚಕರು—ರಾ| ಎಚ್. ಬಾಬು, ಅತ್ತಾವರ ಮ್ಯುನಿಸಿಪಲ್ ಶಾಲೆ ಹೆಡ್ ಮಾಸ್ತರರು.

ಅನುಮೋದಕರು—ಮಿ| ಸುಲೇಮಾನ ಬ್ಯಾರಿ, ಉಳ್ಳಾಲ ಮಾಪಿಳ್ಳಾ ಬೋರ್ಡ ಶಾಲೆ.

೧೦ನೆ ಠರಾವು—ಸರಕಾರಿ ನವುಕರರ ಪ್ರೊವಿಡೆಂಟ ಫಂಡಿನ ದರಗಳಂತೆ ಬೋರ್ಡ ಶಾಲಾ ಉಪಾಧ್ಯಾಯರ ಪ್ರೊವಿಡೆಂಟ ಫಂಡಿನ ವಂತಿಗೆ ಹಣಕ್ಕೂ ಕನಿಷ್ಠ ಪಕ್ಷಕ್ಕೆ ಸೇಕಡಾ ೫ರಂತೆ ಬಡ್ಡಿಗೆ ಬಡ್ಡಿ ಕೂಡಿಸಿ ಕೊಡಿಸುವಂತೆ ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಸೂಚಕರು:—ರಾ| ಕೆ. ಸುಬ್ಬರಾವ್, ಸಿರೇಶ್ಯಾಲ್ಯ ಮ್ಯುನಿಸಿಪಲ್ ಶಾಲೆ.

ಅನುಮೋದಕರು:—ರಾ| ಬಿ. ರಂಗಪ್ಪ, ಬೋಳಾರ ಮ್ಯುನಿಸಿಪಲ್ ಶಾಲೆಯ ಹೆಡ್ ಮಾಸ್ತರರು.

೧೧ನೆ ಠರಾವು—ಪ್ರಾಥಮಿಕ ಶಾಲಾ ಉಪಾಧ್ಯಾಯರ ಸ್ಥಿತಿಯು ಸುಧಾರಣೆ ಹೊಂದುವುದಕ್ಕೂ ಅವರ ತಿಳುವಳಿಕೆಯನ್ನು ವಾರ್ಷಿಕ ಪರಿಷತ್ತು, ಪ್ರದರ್ಶನ, ಲೆಕ್ಚರುಗಳ ಮೂಲಕ ಹೆಚ್ಚಿಸುವುದಕ್ಕೂ ಅನುಕೂಲವಾಗುವಂತೆ ಜಿಲ್ಲೆಯ ಉಪಾಧ್ಯಾಯರು ಒಂದು ಸಂಘವನ್ನು ಏರ್ಪಡಿಸಬೇಕೆಂತಲೂ ಅದರ ನಿರ್ಬಂಧನೆಗಳನ್ನು ಚರ್ಚಿಸಿ ಇದೇ ಬರುವ ಮೇ ತಿಂಗಳಲ್ಲಿ ಒಂದು ಮಹಾಸಭೆಯನ್ನು ಸೇರಿಸಿ ಮಂಜೂರುಮಾಡಿಸುವಂತೆ ಈ ಕೆಳಗಿನ ಉಪಾಧ್ಯಾಯರ ಒಂದು ಕಮ್ಮಿಟಿಯನ್ನು ಏರ್ಪಡಿಸಿ ಹೆಚ್ಚಿಗೆ ಮೆಂಬರರನ್ನು ಅದರಲ್ಲಿ ಸೇರಿಸಿಕೊಳ್ಳಲಿಕ್ಕೆ ಅವರಿಗೆ ಅಧಿಕಾರ ಕೊಡಬೇಕೆಂತಲೂ ನಿರ್ಣಯಿಸಲಾಯಿತು.

ಸೂಚಕರು:—ರಾ| ಪಿ. ಸಂಕಪ್ಪಯ್ಯ, ಪಡಂಬೂರು ಬೋರ್ಡ ಶಾಲೆ.

ಅನುಮೋದಕರು:—ರಾ| ಯಚ್. ರಾಮಚಂದ್ರಯ್ಯ, ತಣ್ಣೀರುಬಾವಿ ಬೋರ್ಡ ಶಾಲೆ.

ಸದರಿ ಕಮ್ಮಿಟಿಗೆ ಈ ಕೆಳಗಿನವರು ಮೆಂಬರರಾಗಿ ಆರಿಸಲ್ಪಟ್ಟರು. (೧) ರಾ| [illegible] (೨) ರಾ| ಕೋಟೆಕಾರ ಸುಬ್ಬಯ್ಯ, (೩) [illegible] (೪) [illegible] (೫) [illegible] (೬) ರಾ| ಪಿ. ಸಂಕಪ್ಪಯ್ಯ, (೭) ಮಿ| ಎಸ್. ಪಿಂಟೊ, (೮) [illegible] (೯) [illegible] (೧೦) [illegible]

[illegible]

ಸೂಚಕರು:—ರಾ| ವಿ. ಎಸ್. ರಾಮರಾ[illegible]

ಅನುಮೋದಕರು:—ರಾ| ಕೆ. ಸುಬ್ಬಯ್ಯ, ಕೋಟೆಕಾರ ಶಾಲೆಯ ಮಾಸ್ತರರು.

೫ನೆ ಠರಾವು—ಈ ಸಭೆಯಲ್ಲಿ ಮಾಡಿದ ಠರಾವುಗಳ [illegible] ನಿರ್ಣಯಿಸಲಾಯಿತು.

ಸೂಚಕರು:—ಮಿ| ಡಿ. ಎಲ್. ಸಿಲ್ವಾ, ಸಂಟ್ ಝೋನ್ಸ್ ಹೈಯರ್ ಎಲಿಮೆಂಟರಿ ಶಾಲೆ.

ಅನುಮೋದಕರು:—ಮಿ| ಜೆ. ಪಿ. ಗೋವಿಯಸ್, ಬಿಜೈ ಶಾಲೆಯ ಹೆಡ್ ಮಾಸ್ತರರು.

ಉಪ್ಪಿನಂಗಡಿ ತಾಲೂಕಿನ ಶ್ಯಾನಭಾಗರ ಪರಿಷತ್ತಿನಲ್ಲಿ ಶ್ಯಾನಭಾಗರ ಎಸೋಸಿಯೇಶನಿನ ಕಾರ್ಯದರ್ಶಿಯು ಮಾಡಿದ ಭಾಷಣ.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು.)

ಶ್ಯಾನಭಾಗರ ಸಂಬಳ ವ ಭತ್ತೆಯ ಸಂಗತಿಯು ಚರ್ಚೆಗೆ ಬರುವ ಸಮಯದಲ್ಲಿ ಮಿತ್ರ ನೌಕರರಿಗೆ ಮನೆತನದ ಹಕ್ಕು ಇಲ್ಲ, ಶ್ಯಾನಭಾಗರಿಗೆ ಮನೆತನದ ಹಕ್ಕು ಉಂಟು, ಅದೊಂದು ಶ್ಯಾನಭಾಗರಿಗೆ ಭಾರಿ ಪ್ರಯೋಜನದ ಸಂಗತಿ ಎಂತ ಎದುರೊಡ್ಡುತ್ತಾರೆ. ಅದರ ಪ್ರಯೋಜನ ಯಾರ್‍ಯಾರಿಗೆ ಎಷ್ಟೆಷ್ಟರ ಮಟ್ಟಿಗೆ ಉಂಟು ಎಂಬುದು ಈಗ ಆಲೋಚಿಸಬೇಕಾದ ಸಂಗತಿಯಾಗಿರುತ್ತದೆ. ಒಬ್ಬನು ಪ್ರಾಯಸ್ಥನಾದ ಕೂಡಲೇ ಮನೆತನದ ಶ್ಯಾನಭೋಗಿ ನೋಡಲಿಕ್ಕೆ ಪ್ರಾರಂಭಿಸಿದರೆ ಪ್ರಾಯ ವ ಕವೀಸು ಭರ್ತಿಯಾದ ಕೂಡಲೇ ಪೆನ್ಶನ್ ಸಿಕ್ಕುವುದಿಲ್ಲ ಎಂಬುದರಿಂದ ಕೆಲಸ ಬಿಡದೆ ಉದರನಿರ್ವಾಹಕ್ಕಾಗಿ ಮಾತ್ರ ಕೆಲಸ ಮಾಡತಕ್ಕದನ್ನು ವೃದ್ಧನಾಗುವ ತನಕ ೩೦ ಯಾ ೪೦ ವರ್ಷಗಳ ವರೆಗೂ ಶ್ಯಾನಭೋಗಿ ನೋಡುವುದುಂಟು. ಪೆನ್ಶನ್ ಸಿಕ್ಕುವುದಾಗಿದ್ದರೆ ಹಾಗೆ ದುಡಿಯುತ್ತಿದ್ದಿಲ್ಲ. ಅವನ ಅಷ್ಟು ವರ್ಷಗಳ ಆ ಕಾರೀಮಿಯಲ್ಲಿ ಅವನಿಗೆ ಯಾವುದಾದರೂ ಒಂದು ಖಾಸಗಿ ಅನಪತ್ಯವು ಒದಗಿದರೆ ಯಾ ಅವನು ಕಾಹಿಲೆಯಲ್ಲಿ ಬಿದ್ದರೆ ಆತನು ಸಂಬಳ ಇಲ್ಲದೆ ರಜೆ ಪಡೆಯಬೇಕು ವಿನಾ ಅವನಿಗೆ ಸಂಬಳಸಮೇತ ರಜೆ ಸಿಕ್ಕುವದಿಲ್ಲ. ಕೆಲಸಕ್ಕೆ ಅಯೋಗ್ಯನಾದ ಕೂಡಲೇ ಅವನನ್ನು ಕೆಲಸ ಬಿಡಲಿಕ್ಕೆ ಒತ್ತಾಯಪಡಿಸುತ್ತಾರೆ. ಅವನಿಗೆ ಮಗನಿಲ್ಲದಿದ್ದರೆ, ಅಥವಾ ಇದ್ದಾಗ್ಯೂ ಆತನು ಕೆಲಸನೋಡುವಷ್ಟು ಯೋಗ್ಯನಲ್ಲದಿದ್ದರೆ ಬೇರೆ ಜನರನ್ನು ಮೊಕ್ರ್ರು ಮಾಡಿಬಿಡುತ್ತಾರೆ. ಅಗ್ಗೆ ಅಷ್ಟು ವರ್ಷದಿಂದ ಕೆಲಸ ನೋಡಿ ಬಂದು ವೃದ್ಧಾಪ್ಯದ ಸಂಬಂಧ ಕೆಲಸದಿಂದ ತಪ್ಪಿದ ಮನುಷ್ಯನಿಗೆ ಪೆನ್ಶನ್ ಸಿಕ್ಕುವುದೂ ಇಲ್ಲಾ, ಮನೆತನದ ಶ್ಯಾನಭೋಗಿ ಎಂಬ ಕಾರಣದಿಂದ ಅದರ ಯಾವದೊಂದು ಉಪಯೋಗ ಅವನಿಗೆ ಸಿಕ್ಕುವುದೂ ಇಲ್ಲಾ. ಈ ಕಾರಣದಿಂದ ಅವನು ಅನ್ನಕ್ಕೆ ಠಿಕಾಣೆ ಇಲ್ಲದೆ ಕಷ್ಟಪಡಬೇಕಾಗುತ್ತದೆ. ಅವನ ವಾರಿಸ್ದಾರನು ಅಪ್ರಾಯಸ್ಥನಾಗಿರುವ ಸಂಗತಿಯಲ್ಲಿ ಅವನಿಗೆ ಡಿಪ್ಯುಟಿಯಾಗಿ ನೇಮಿಸುವಾಗ್ಯೆ ಆ ಅಪ್ರಾಯಸ್ಥನ ರಕ್ಷಕರು ಹೇಳುವವನನ್ನು ನೇಮಿಸಬೇಕೆಂತ ಬೋರ್ಡ ಪ್ರೊಸೀಡಿಂಗ್ಸು ಇದ್ದರೂ ಮೇಲಾಧಿಕಾರಿಗಳು ಅದಕ್ಕೆ ಲಕ್ಷ್ಯಕೊಡದೆ ತಮಗೆ ಪ್ರೀತಿ ಕಂಡವರಿಗೆ ಮೊಕ್ರ್ರು ಮಾಡುವುದುಂಟು. ಒಂದೊಂದು ಸಂಗತಿಯಲ್ಲಿ ಅಪ್ರಾಯಸ್ಥನ ರಕ್ಷಕರು ಹೇಳುವವನನ್ನು ಡಿಪ್ಯುಟಿ ಮೊಕ್ರ್ರು ಮಾಡಿದಾಗ್ಯೂ ಯಾವದಾದರೊಂದು ಸಂಗತಿಯಿಂದ ಆತನು ಕೆಲಸದಿಂದ ತಪ್ಪಿದರೆ ಪುನಹಾ ಮೊಕ್ರ್ರು ಮಾಡುವಾಗ್ಯೆ ಅಂಥಾ ರಕ್ಷಕರ ಕೂಡೆ ಕೇಳದೇ ತಮಗೆ ಮನಸ್ಸುಕಂಡವರನ್ನು ನೇಮಿಸುತ್ತಾರೆ. ಹೀಗಾದ ಮೇಲೆ ಮನೆತನದ ಹಕ್ಕು ಉಂಟು ಎಂಬುದರ ಪ್ರಯೋಜನವೇನು? [illegible]

[illegible]

ಬೇಕಾದೀತೆಂತ ಹೇಳುತ್ತೇನೆ. ದೂರ ಇರುವವರು ಬರುವಾಗ್ಯೆ ವ ವಾಪಸು ಹೋಗುವಾಗ್ಯೆ ತಗಲುವ ಪ್ರಯಾಣದ ಖರ್ಚು ಇದರಲ್ಲಿ ಎಣಿಸಲಿಲ್ಲ.

(ಮುಂದರಿಯುವದು)

ದುಷ್ಟರ ಸಂಗವದು ಎಷ್ಟಕ್ಕೂ ಬೇಡ.

(ತಿರುಕನೋರ್ವ ನೂರರಿಂದ | ಮುರುಕುಮಠದ ಶಾಲೆಯಲ್ಲಿ ಎಂಬಂತೆ)

ಭೋಗ ಷಟ್ಪದಿ.

ಅಡವಿಯೊಳಗೆ ಬೇಟೆಯನ್ನು | ಹುಡುಕಿ ಹುಡುಕಿಯೊಂದು ತೋಳ |
ಕಡೆಗೆ ಬಿಡದೆ ಹಿಡಿದುದೊಂದು ಹುಲ್ಲೆಮರಿಯನು ||
ಒಡನೆಯದನು ತಿನ್ನುತಿರಲು | ಕಡೆದು ನಿಂತಿತೊಂದು ಎಲುಬು |
ನಡುವೆ ಗಂಟಲೊಳಗೆ ಬಹಳ ನೋವನೀಯುತ || ೧ ||
ಎತ್ತ ಕತ್ತಿಗೆಯನು ತಾನು | ಅತ್ತ ಇತ್ತ ಸುತ್ತಿಸುತ್ತಿ |
ಎತ್ತ ಹೋದರಿಲ್ಲ ಯಾರು ಸಲಹಬಲ್ಲರು ||
ಸತ್ತೆನಯ್ಯೊ! ನೋವಿನಿಂದ | ಇತ್ತು ಧನವ ಕೊಡುವೆನೀಗ |
ಕತ್ತಿನೊಳಗೆ ತಡೆದುನಿಂತ ಎಲುಬ ತೆಗೆವರ || ೨ ||
ಬಿದ್ದುಯಿದ್ದು ಕೂಗುತಿರಲು | ಉದ್ದ ಕಾಲ ಬಕನು ತಾನು |
ಸದ್ದ ಕೇಳಿ ಬಂದು ಎಲುಬ ತೆಗೆಯಲೊಪ್ಪಿದ ||
ಉದ್ದವಾದ ತನ್ನ ಕೊಕ್ಕ | ಶುದ್ಧವಾಗಿ ನೀಡಿ ಬಾಯೊಳ್ |
ಇದ್ದ ಎಲುಬ ಹೊರಗೆ ತೆಗೆದು ಧನವ ಕೇಳ್ದ || ೩ ||
ಸಾಕುಸಾಕು ಗಳಹ ಬೇಡ | ಕಾಕುಜೀವ! ನಡೆಯೊ ನಿನ್ನ |
ಕೊಕ್ಕ ಹೊರಗೆ ತೆಗೆಯಬಿಟ್ಟುದೊಂದೆ ಸಾಲದೆ! ||
ಏಕೆ ಕಾದುತಿರುವೆಯಿನ್ನು? | ಜೋಕೆ! ಹೆಚ್ಚು ಮಾತನಾಡೆ |
ಸೊಕ್ಕಿನಿಂದ ಕೊಕ್ಕ ಮುರಿವೆನೆಂದು ತೋಳನು || ೪ ||
ಕೆಟ್ಟ ಜನರು ತಾವು ಬೀಳೆ | ಕಷ್ಟದೊಳಗೆ ಭಾಷೆಕೊಡುವ |
ದಿಟ್ಟನರಿವ ನೀವೆಂದು ಭಾಗಿ ನಮಿಸುತ ||
ಕಷ್ಟದಿಂದ ದಾಟಲಾಗಿ | ದಿಟ್ಟತನವ ತೋರ್ಪರವರು |
ದುಷ್ಟಜನರ ಇಷ್ಟವರಿಕೆ ಮಿಷ್ಟ ಬೇಡೆಲೊ || ೫ ||

Moodabidri. **S. R. Kordcal.**

ದಾನ.

|| ಚೌಪದಿ ||

ದಾನ ಮಾಡದೆ ಸಂಗ್ರಹಿಸಿ ಇರಿಸುವರ್ಥ |
ಕಾನನದ ಬೆಳದಿಂಗಳಂತೆ—ಬಹು ವ್ಯರ್ಥ ||
ಜೀನತನದಲಿ ಯಾಕೆ ಹಣವ ಗಳಿಸಿಡುವೆ? |
ಮಾನವನೆ! ನೋಡು! ಕೊನೆಗತಿ ದುಃಖ ಪಡುವೆ || ೧ ||
ಆಶಾಂಗನೆಯ ಮರುಳು ತೇಜವನು ಭಜಿಸಿ |
ಪೋಷಿಸುವೆ ಲೋಭವನು—ದಾನವನು ತ್ಯಜಿಸಿ! ||
ಕಾಸು ಕೊಡುವುದಕೆ ಮರುಗುವೆ ಬಹಳ ತೆರದಿ |
ಲೇಸಲ್ಲ! ದಾನದಾ ಮಹಿಮೆ ತಿಳಿ ಭರದಿ! || ೨ ||
"ಈವ ವಿತ್ತವು ಪೋಪುದೆ"ಂದೆಣಿಸ ಬೇಡಾ! |
ಭಾವಿಸಲು ಮುಕ್ತಿಯನು ಕೊಡುವುದದು ಮೂಢಾ! ||
ಸಾವೆಡಸಿ ಇಹಲೋಕವನು ಬಿಟ್ಟ ಮೇಲೆ |
ಕಾವುದದು, ಮುಂದೆ ಕೊಡುವುದು ಸೌಖ್ಯ ಲೀಲೆ! || ೩ ||
ಆದ ಕಾರಣದಿಂದ ದಾನವನು ಗೈದು |
ಮೇದಿನಿಯೊಳಗೆ ಬಾಳು—ಲೋಭವನು ಬೈದು! ||
ವೇದನೆಯ ಕಳೆದು ಸಕಲರಿಗೆ ಸುಖ ಕೊಡಲು |
ಸಾಧಿಸು! ದಿಟದಿ ಮೆರೆಯುವೆ ಇಹಪರದೊಳು || ೪ ||

G. N. L. Pai.

WANTED

Three qualified Secondary grade teachers for the Rusario Secondary School, Mangalore, from 1st June 1920. Apply stating salary expected to the,

Correspondent.

Just arrived! *Just arrived!*

WANTED.

Agents & Canvassers,

To sell our Waaning Tilly

GENUINE HAARLEM OIL.

We have secured the Sole Agency for the whole of British India to import the Genuine Haarlem oil direct from the manufacturers.

BOOK YOUR ORDER.

ONLY LIMITED STOCK JUST ARRIVED!

ಬೇಕು!

ನಾವು ಹೊಲ್ಲೆಂಡ್ ದೇಶದ ಹಾರ್ಲೆಮ್ ಪಟ್ಟಣದಲ್ಲಿ ವೇನಿಂಗ್ ಟಿಲ್ಲಿ ಬ್ರದರ್ಸ್ ಕಂಪೆನಿಯವರು ತಯಾರಿಸುವ ಲೋಕಪ್ರಸಿದ್ಧವಾದ

ಜೆನ್‌ವಿನ್ ಹಾರ್ಲೆಮ್ ಆಯಿಲ್

ಎಂಬ ಔಷಧಿಯ ಬ್ರಿಟಿಷ್ ಹಿಂದುಸ್ಥಾನಕ್ಕೆಲ್ಲಾ ಏಜಂಟರಾಗಿ ನೇಮಿಸಲ್ಪಟ್ಟಿರುತ್ತೇವೆ. ಈ ಔಷಧಿಯ ಕೆಲವು ಸೀಸೆಗಳು ಮಾತ್ರ ನಮಗೆ ಬಂದಿರುವದರಿಂದ ಬೇಗನೆ ನಿಮ್ಮ ಆರ್ಡರುಗಳನ್ನು ಕೊಡಿರಿ. ಎಲ್ಲೆಲ್ಲಿಯೂ ಏಜಂಟರು ಬೇಕು.

ವಿಳಾಸ:—ಎಸ್. ಇ. ಏಮನ್,
ದಿ ಎಕ್ಲಿಪ್ಸ್ ಏಜನ್ಸಿ, ಬಲ್ಮಠ ರಸ್ತೆ,
ಮಂಗಳೂರು.

THE ECLIPSE AGENCY,
MANGALORE.

WANTED.

An young, energetic and qualified compounder who can write a neat and clean hand.

Applications must be written in their own hand and must be accompanied by testimonials of conduct etc.

The starting salary will be Rs. 20 per mensem or according to the qualifications and service. For further particulars apply personally to the undersigned.

P. M. Kamath,
Proprietor,
P. M. Kamath & Co.,
Chemists, MANGALORE.

ಗೊನೊರ್ಹ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಆರ್. ಮಾರ್ಟಿನ್ಸರ ಲಪ್ಸಾ ಎಣ್ಣೆ.

ಇದರ ವಾಸನೆಯು (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಕೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. [illegible] ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. [illegible] ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಬಹುದು.

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦.

ಆರ್ ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗಳು, ಗೂರಲು ಶ್ವಾಸ, [illegible] ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ [illegible] ರೋಗಗಳಿಂದ [illegible] ಒಂದೇ [illegible] ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಿರಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡಲಾರಿರಿ. [illegible]

ಆರ್ ಮಾರ್ಟಿನ್ಸರ ಗ್ಲಿಟ್ರೋಡಯಿನ್.

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎದರು [illegible] ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. [illegible]

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೇರ್ ರೋಡ್,
ರೈಟ್ ಏಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ಹಲ್ಲುಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲು ಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುಸಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸೋರುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದ ಕಷ್ಟಕರವಾಗಿ ಉಸದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವದ ಅನುಕೂಲವಾಗಿ ಬಹು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ವಿಶೇಷ! ಕ್ರಯ ಕಮ್ಮಿ!! ಗುಣ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

[illegible]

[illegible] ಮತ್ತು ಕಂಪೆನಿ,
[illegible] ಮಂಗಳೂರು.

ಫೀಸು ಇಲ್ಲ! ರೋಗಪರೀಕ್ಷೆಗೆ. ಫೀಸು ಇಲ್ಲ!!

ರೋಗಿಯು ಯಾವ ದೇಶದವನೋ ಅದೇ ದೇಶದ ಔಷಧ.

"ನಿಜವಾಗಿ ನೋಡಿದರೆ ಯಾವ ದೇಶದಲ್ಲಿ ಯಾವ ರೋಗವುಂಟಾಗುತ್ತದೊ ಆ ದೇಶದ ಔಷಧವೇ ಅದನ್ನು ಗುಣಪಡಿಸುತ್ತದೆಂದು ಕಂಡು ಬರುತ್ತದೆ. ಸಿಮ್ಸನನೆಂಬ ಪಾಶ್ಚಾತ್ಯ ಪಂಡಿತನು ಕೂಡ ಇದೇ ಮತವನ್ನು ಸ್ವೀಕರಿಸಿದ್ದಾನೆ. ಆದುದರಿಂದಲೇ ಭಾರತವರ್ಷದೊಳಗಿನ ಜನರಿಗೆ ಯಾವ ರೋಗಗಳಾಗುತ್ತವೊ ಅವುಗಳನ್ನು ನಿವಾರಿಸಲು ದೇಶೀಯ ಔಷಧಗಳೆ ಅತ್ಯುತ್ತಮವಾದವುಗಳು."

ಡೊ. ಎನ್. ಜೇ. ಸರದೇಸಾಯಿ,
ಎಮ್. ಡಿ. (ಲಂಡನ್).

ಇನ್ನು ಭಯಪಡದೇ

ಶ್ರೀ ಸಮರ್ಥ ಆಯುರ್ವೇದೀಯ ಔಷಧಾಲಯ,

ಮಹಾಮ್ಮಾಯಿ ದೇವಾಲಯದ ಮಾರ್ಗೆ, ಮಂಗಳೂರು

ಇಲ್ಲಿಗೆ ಬಂದು ನಿಮಗೆ ಬೇಕುಬೇಕಾದ, ತಲೆಗೂ ಶರೀರಕ್ಕೂ ಹಚ್ಚಿಕೊಳ್ಳುವ ವಿವಿಧ ತೈಲಗಳನ್ನೂ ಸೇವನೆಗೆ ಯೋಗ್ಯವಾದ ಒಳ್ಳೊಳ್ಳೆ ಲೇಹಗಳನ್ನೂ, ಆಸವಾರಿಷ್ಟ, ಗುಟಿಕೆ, ಮಾತ್ರೆ, ಮಕರಧ್ವಜ ಮುಂತಾದ ಅನೇಕ ಉಪಯುಕ್ತ ಮತ್ತು ದಿವ್ಯವಾದ ಔಷಧಗಳನ್ನು ತೆಗೆದುಕೊಂಡು ಹೋಗಿ ಗುಣಹೊಂದಿರಿ.

ವೈದ್ಯರು:— ಬಿ. ಆರ್. ಹರಿದಾಸ್, ಚಿಕಿತ್ಸಕರು.

[illegible]

THE WORLD RENOWNED

HAARLEM OIL.

(Genuine Dutch Produce)

A Domestic remedy of extraordinary merits that has stood the test of centuries. A Panacea against all human ailments.

ಲೋಕಪ್ರಸಿದ್ಧವಾದ ಹಾರ್ಲೆಮ್ ತೈಲ.

SUPPLY EXPECTED SHORTLY

Register your orders immediately against disappointment.

CAPABLE AGENCY WANTED.

Priced & particulars from—

The Bombay Stores,

Humpankatta, MANGALORE.

Prize Books! ಬಹುಮಾನ ಪುಸ್ತಕಗಳು. Prize Books!!

ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರಿಂದ Prize Books, ಆಗಿ ಅಂಗೀಕೃತವಾದ ಪುಸ್ತಕಗಳು ಪ್ರತಿಯೊಬ್ಬ ಕರ್ಣಾಟಕ ಬಾಲಕನೂ, ಬಾಲಿಕೆಯೂ ತಪ್ಪದೆ ಓದಬೇಕು. ತಿಳಿಗನ್ನಡ ಭಾಷೆ, ಸುಲಭ ಶೈಲಿ, ಬೆಲೆ ಅತಿ ಸುಲಭ. ಚಂದ್ರಹಾಸ, ಧ್ರುವ, ಪ್ರಹ್ಲಾದ ಹರಿಶ್ಚಂದ್ರ ಪ್ರತಿಯೊಂದಕ್ಕೆ (೦—೨—೦. ವಿನಾಯಕ. ನವಧೋಚಿ (೦—೧—೦) ಮತ್ತು ಸಾವಿತ್ರಿ, ಮಹಿಳಾ ಸುನೀತಿ ಶತಕ (೦—೨—೦).

ಉಪಾಧ್ಯಾಯರುಗಳಿಗೂ, ಪುಸ್ತಕ ವ್ಯಾಪಾರಿಗಳಿಗೂ, ಭಾರಿ ಆರ್ಡರುಗಳ ಮೇಲೆ ಧಾರಾಳವಾದ ಕಮಿಷನು ಉಂಟು.

ಈ ದಿನವೇ ಬರೆಯಿರಿ.

ವಿಳಾಸ:—ಮ್ಯಾನೇಜರ್,
ಸುಬೋಧ ಕುಸುಮಾಂಜಲಿ ಗ್ರಂಥಮಾಲಾ ಕಾರ್ಯಾಲಯ,
2, ಕ್ಲಾರ್ಕ್ಸ್ ಪೇಟೆ, ಸಿ. ಬೆಂಗಳೂರು, ದಂಡು.

ಕೇಸರೀಯವರ ಅತ್ಯುತ್ತಮವಾದ ಮೂರು ಔಷಧಗಳು.

ಲೋಧ್ರ

ಅಥವಾ

ಗರ್ಭಾಶಯ ರೋಗ ನಿವಾರಣಿ:—ಇದು ಸ್ತ್ರೀಯರ ದೇಹ ಪ್ರಕೃತಿಯಲ್ಲಿ ಉಂಟಾಗುವ ವಿವರಿಸಲಸದಳವಾದ ಯಾವತ್ತೂ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವುದು.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅಮೃತ

ಅಥವಾ

ರಕ್ತ ಶುದ್ಧೀಕರಣಕ್ಕೆ ದಿವ್ಯ ಔಷಧ:—ಇದನ್ನು ತೆಗದುಕೊಳ್ಳುವುದರಿಂದ ನೀರಕ್ತತ್ವ (ರಕ್ತವು ಕೆಟ್ಟುಹೋಗುವಿಕೆ) ಅಜೀರ್ಣ, ಮಲಬದ್ಧತೆ, ನಿತ್ರಾಣ, ಶಿರೋಭ್ರಮಣ, ಜ್ಞಾನದುರ್ಬಲತೆ ಮುಂತಾದುವು ಪರಿಹಾರವಾಗುತ್ತವೆ.

ಕ್ರಯ ದೊಡ್ಡ ಬಾಟ್ಲಿ 1ಕ್ಕೆ ರೂ. 3; ಸಣ್ಣದಕ್ಕೆ ರೂ. 1-10-0.

ಅರ್ಕ

ಎಂಬ

ಜ್ವರ ಸಂಹಾರಕ್ಕೆ ರಾಮಬಾಣ:—ಈ ಔಷಧಿಯ ಒಂದೆರಡು ತಟಕುಗಳನ್ನು ಸೇವಿಸುವುದರಿಂದ ಇನ್‌ಫ್ಲುಯೆಂಜಾ ಮುಂತಾದ ಸಕಲ ಜ್ವರಗಳೂ ನಿವಾರಣೆಯಾಗುವುವು.

ಕ್ರಯ ಬಾಟ್ಲಿ 1ಕ್ಕೆ ರೂ. 1—8—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ:—

ಕೇಸರೀ ಕುಟೀರಂ,
ಆಯುರ್ವೇದ ಔಷಧಾಲಯ,
33, ಪೋಲೀಸು ಕಮಿಷನರ ಆಫೀಸು ರಸ್ತೆ,
ಎಗ್‌ಮೋರ, ಮದರಾಸ್.

ಬ್ರಾಂಚ್ ಆಫೀಸು:—
9, ಬಂದರ್ ಸ್ಟ್ರೀಟ್,
ಜಾರ್ಜಟೌನ್, ಮದರಾಸ್.

ಕೂತಲ್ಲಿಗೆ ಬರುವದು

ಯಾವುದೊಂದು ಖರ್ಚಿಲ್ಲದೆ ಪಂಚವರ್ಣಗಳಿಂದ ತಯಾರಿಸಿದ

1920ನೆಯ ಇಸವಿ ಕ್ಯಾಲಂಡರ್.

ಟಪ್ಪಾಲು ಮತ್ತು ಪೇಕಿಂಗ್ ಖರ್ಚಿಗಾಗಿ ೨ ಆಣೆಯ ಟಪ್ಪಾಲು ಸ್ಟಾಂಪನ್ನು ಕಳುಹಿಸಿರಿ.

ವಿಳಾಸ:—

ವಿ. ಎ. ಎಸ್. ಪಾಣಿ ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

NETR N V D A REES.

Cheap and Fashionable

Sarees in all brilliant colours with lustrous borders

Liberal Commission for wholesale Orders.

ಚೆಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಧಾರಾಳೆದರ "ನೇತ್ರಾನಂದ" ಶರವಾದ ಶೀರೆಗಳ ಕೆಳಗಿನ ಕಂಪೆನಿಯವರ ಹತ್ತಿರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.

ನೂರಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹಾಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ. ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರ್ಮಾಮೀಟರ್ ಎಂಬ ಅತ್ಯುಷ್ಣ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೋಮೆಂಟೇಶನ್ ಚೀಲಗಳೂ, ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸೆಯ ಸಾಮಗ್ರಿಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವ್ಯವೂ. ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಟಿಶ್ಯೂ ಔಷಧಗಳನ್ನು ರೋಗ್ಯಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ದರ್ಬಾರ್ ಸೋಪು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ಧರಿಸಿ ಹಾಕಿದರೆ ಶಕ್ತಿಯಿಂದ ಕ್ಷೌರವಾದಾಗ ಕೂಂದದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆಯಬಹುದು.

ನಮ್ಮ ದರ್ಬಾರ್ ಸೋಪು.

ಗಂಧೆ, ಮೊಡವೆ, ಮಚ್ಚೆ, ತುರಿ, ನವೆ, ಮುಂತಾದವುಗಳನ್ನು ಕ್ಷಣಮಾತ್ರದಲ್ಲಿ ಮಾಯ ಮಾಡುವುದು.

3 ಸಾಬೂನುಗಳುಳ್ಳ ಪೆಟ್ಟಿಗೆ ಒಂದಕ್ಕೆ	ರೂ. 0—14—0.
ಒಂದೇ ಸಲ 2 ಪೆಟ್ಟಿಗೆ ತರಿಸಿಕೊಂಡರೆ	„ 1—10—0.
ಕಲಾಯಿ ರೋಮನಾಶಕ ಬುಕ್ಕಿ	„ 0—8—0.

ವಿಳಾಸ— ವೈರಂ ಅಂಡ್ ಕೊ,
ಇರುಳಪ್ಪನ ಬೀದಿ, ಮದರಾಸು.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರುಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ಮಾಲಿಕರೂ ಮೇನೇಜರೂ ಆದ ದಾಮೋದರ ನಂಬೀಶನವರು ಅಧಿಕ್ಯವಾರ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಇದರ ಬ್ರಾಂಚು ಮಂಗಳೂರು ರಥಬೀದಿಯಲ್ಲಿ ತೆರೆದಿರುವುದರಿಂದ ಸದರಿ ಎಲ್ಲಾ ಔಷಧಗಳು ಸದರಿ ಬ್ರಾಂಚಿನಲ್ಲಿ ಕೂಡಾ ಬೇಕಾದಷ್ಟು ಸಿಕ್ಕುವವು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಅಮೃತಾರಿಷ್ಟ—ಇದು ಎಲ್ಲಾ ತರದ ವಿಷಮಜ್ವರ (ಇನ್‌ಫ್ಲುಯೆಂಜಾ) ಒಳಜ್ವರ ಪುರಾಣಜ್ವರ ಇವುಗಳ ಮೇಲೆ ರಾಮಬಾಣದಂತಿರುವುದು. ರಕ್ತಶುದ್ಧಿಗೆ ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ರೂ. ೧—೧೦—೦.

೨. ವೀರ್ಯಪ್ರಸಾದ ವಟಿ—ಇದು ಸ್ವಪ್ನೇಂದ್ರಿಯದಿಂದ ನರಳುತ್ತಿರುವ ಮನುಷ್ಯರಿಗೆ ಅಮೃತದಂತಿರುವುದು. ೨೮ ಮಾತ್ರೆ ಇರುವ ಸೀಸೆ ೧ಕ್ಕೆ ಕ್ರಯ ರೂ. ೧.

೩. ನವನೀತಮಧುಸ್ನುಹಿ—ಇದು ಫಿರಂಗವ್ಯಾಧಿ (ಸಿಫಿಲಿಸ್) ಮೇಹ ಮುಂತಾದ ರೋಗಗಳನ್ನು ಒಳ್ಳೇ ರೀತಿಯಿಂದ ಗುಣಪಡಿಸುತ್ತದೆ. ೨೮ ಕೋಲೆ ಇರುವ ಡಬ್ಬಿ ೧ಕ್ಕೆ ಕ್ರಯ ರೂ. ೩.

೪. ವಿಷೂಚಿಕಾ ಸಂಹಾರಿ—ಎಂಬ ವಾಂತಿಭೇದಿ ಮಾತ್ರೆ. ಈ ಮಾತ್ರೆಯು ಸೇವನೆಯಿಂದ ಎಂಥಾ ಕಠಿಣ ತರವಾದ ವಾಂತಿಭೇದಿಯೂ ನಿಂತು ಹೋಗುವುದು. ೨೮ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ರೂ. ೧—೮—೦.

೫. ನಯನದ್ಯುತಿ—ತಿಮಿರ, ಉರಿಗಣ್ಣು, ನವ ಏಳುವಿಕೆ ಮೊದಲಾದ ಕಣ್ಣಿನ ಎಲ್ಲಾ ರೋಗಗಳನ್ನು ಗುಣಪಡಿಸುವ ಸಿದ್ಧೌಷಧವು. ಅರ್ಧ ಔನ್ಸಿನ ಸೀಸೆ ೧ರ ಕ್ರಯ ರೂ. ೧—೦—೦.

೬. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿಮಾಂದ್ಯ, ಇರುಳುಗಣ್ಣು, ಕೀವು ಬರುವುದು. ತಿಮಿರ ಮುಂತಾದ ಕಣ್ಣಿನ ಎಲ್ಲಾ ತರವ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೮

ವೈದ್ಯರ್ ಪಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ.

ಇನ್‌ಫ್ಲುಯೇನ್ಸಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಸಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಜಾಡ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ, ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಲೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಜಾಡ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬವಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅವರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಸಾ, ನ್ಯುಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹತ್ತುವಂತೆ ತಡೆಕಟ್ಟಿ ಅವು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಸಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಅಲ್ಲದೆ ಇದು ಕಾಲರಾ ರೋಗಗಳನ್ನೂ ಗುಣಪಡಿಸುತ್ತದೆ.

ಕ್ರಯ ಸೀಸೆ ೧ರ ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ.

ಪ್ರಾಮುಖ್ಯ ಏಜಂಟರು:— ದಿ ಇಕ್ವಿಟ್ಯಾ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆತ್ತ ಮೂಲಧನವು ರೂ. 300,000—0—0
Reserve and other sinking Funds ,, 138781—9—2	ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 138,781—9—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ತಡಕೊಳ್ಳೋಣಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st March 1920.

P. Gopal Naik,
Secretary.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾವು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅಗರುಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ದಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಲಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ಕೇಶ ಕೊದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ಮೊದಲು ಇದನ್ನು ತಲೆಗಿಟ್ಟರೆ ಬಹಳ ಉತ್ತಮ.

4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೇರಿಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪಾದಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಿಗಳು ದೊರೆಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ. ದ ಕನಡ.

ಕ್ರಯ ರೂ. 1—8—0. **ಪ್ರಶ್ನೋತ್ತರ ಲೇಖ್ಯಬೋಧಿನಿ.** ಅಂಚೆ ವೆಚ್ಚ ಬೇರೆ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.

ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯಾದ ಒಕ್ಕಣೆಗಳಿವೆ. ಲೌಕಿಕ ವೈದಿಕ ಮರ್ಯಾದೆಗಳಿವೆ. ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲು, ಮರಣಶಾಸನ, ಪಾಲೀಖತ್ತು, ಗುತ್ತಿಗೆ, ಪಾಲುಗಾರಿಕೆ, ಹುಂಡಿ, ಚೆಕ್ಕು, ಇವುಗಳ ಮೊದಲಿಗಳು, ವಿಧಗಳು, ಸ್ಟ್ಯಾಂಪು, ರೆಜಿಸ್ಟ್ರೇಶನ್; ಸಿವಿಲ್ ಕೋರ್ಟು ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಜ್, ಒರಿಜಿನಲ್, ಡಿಕ್ರಿ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ಮಿಯಾದೆ, ಕೋರ್ಟು ಫೀ ಸ್ಟ್ಯಾಂಪು, ರೆವೆನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯದಾರಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಕೋರ್ಟು ವಿಧಾನ—ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನುಗಳೂ ಇದರಲ್ಲಿ ಅಡಗಿವೆ. ಕಾಗದದ ಬರದಿಂದ ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ. ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾಯಿ 1—8—0, ಅಂಚೆಯ ವೆಚ್ಚ ಬೇರೆ.

[30-19] ವಿಳಾಸ:— "ಸವಿನುಡಿ" ಆಫೀಸು,
129, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಶ್ಯು ರೆಮಿಡಿಸ್"
ಎಂಬ
ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್. ಫೋಸ್	8 ಮಗ್ನೆಸಿಯ ಫೋಸ್	12 ಸಿಲಿಸಿಯಾ

ಕ್ರಯ

		ರೂ. ಆ. ಪೈ.
ಎರಡು ಡ್ರಾಮಿನ	D ಸೈಜ್ ಸೀಸೆ ಒಂದರ	0—3—6
ನಾಲ್ಕು ,,	C ,, ,, ,,	0—6—0
ಒಂದು ಔನ್ಸಿನ	A ,, ,, ,,	0—12—0
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ		3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ.		10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗಳೂರು.

ಈ ಔಷಧಾಲಯದಲ್ಲಿ ಬಹಳ ಕಡಿಮೆ ಕ್ರಯದ ಅನುಭವಸಿದ್ಧವಾದ ವನೌಷಧಗಳೂ, ಸಿದ್ಧೌಷಧಗಳೂ ಸಿಕ್ಕುತ್ತವೆ. ಇದನ್ನು ತರಿಸಿ ಉಪಯೋಗಿಸಿದವರಿಗೆ ತಕ್ಷಣವೇ ಆಯುರಾರೋಗ್ಯಭಾಗ್ಯವುಂಟಾಗುವುದು. ಪತ್ಯ ವಿಶೇಷವಿಲ್ಲ, ತರಿಸಿ ಪರೀಕ್ಷಿಸಿ ನೋಡಿರಿ.

1. **ಶತಮೂಲಿಕಾ ಅಮರಸಂಜೀವನೀ ಟೋನಿಕ್**—ಇದರ ಸೇವನೆಯಿಂದ ಕ್ಷಯ, ಕೆಮ್ಮು, ಅಶಕ್ತಿ, ನಿವಾರಣೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಔನ್ಸಿನ ಬಾಟ್ಲಿ 1ಕ್ಕೆ ರೂ. 3.

2. **ಮಧುಮಾಧವಿ ಪಿಲ್ಸ್**—ಬಾಣಂತಿಯರು ಇದನ್ನು 12 ದಿವಸ ಸೇವನೆಮಾಡಿ ನಂತರ 2 ತಿಂಗಳ ವರೇಗೆ ಮಧುಮಾಧವಿ ಟೋನಿಕ್ ಸೇವಿಸಬೇಕು. ಇದರಿಂದ ಬಾಣಂತಿಯರ ನಂಜಿನ ಉಪದ್ರವಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲಿ 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2—0—0.

3. **ಸಿದ್ಧೇಶ್ವರ**—ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಕಫವೂ ಗುಣವಾಗುತ್ತದೆ. ತೊಲೆ 1ಕ್ಕೆ 1-8-0.

4. **ಅಶೋಕಾರಿಷ್ಟ (ಉತ್ತಮ ತರದ್ದು)**—ಇದರ ಸೇವನೆಯಿಂದ ಸ್ತ್ರೀಯರ ಮುಟ್ಟುದೋಷ, ಗರ್ಭಶೂಲೆ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲಿ 1ಕ್ಕೆ 1-4-0.

5. **ಸುದರ್ಶನ ಮಾಲಿನಿ**—ಇದರಿಂದ ಗಂಡಮಾಲೆ, ಫಿರಂಗರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲಿ 1ಕ್ಕೆ 4—0—0.

6. **ವಸಂತಕುಸುಮಾಕರ ತೈಲ**—ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ ರೂ. 1—0—0.

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ನಮ್ಮ ಕೆಟಲಾಗನ್ನು ತರಿಸಿರಿ.

ಎಸ್. ವಿ. ಶಂಕರ, ಉಗ್ರಾಣಕಾರ,
ಮೇನೇಜರ್.
ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ, ಬ್ರಹ್ಮಾವರ, ದ. ಕ.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.

ಧಾತುರಂಜಿತ - ವೈದ್ಯರತ್ನ.

ಅಕ್ರಮರತಿಯಿಂದ ಶರೀರಕ್ಕೆ ಬೇರೆ ನಂತಿರುವ ವೀರ್ಯ ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇವೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟ ಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವೆಲ್ಲಕ್ಕೂ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಗೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟದೆ. ಇದು ಇದ್ದರೆ ಮನೇಲಿ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್‌ಡಿಪೊ,
೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

The Indian Tooth-ache Specific.
ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆಮುಟ್ಟಿದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ ೧ಕ್ಕೆ ಕ್ರಯ ರೂ. 1—4—0; ಟಪಾಲು ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸೊಗಸಾದ ಕಾಫಿ ಹುಡಿ.

I	ಕ್ಲಾಸ್	0—10—0
II	ಕ್ಲಾಸ್	0—8—0
III	ಕ್ಲಾಸ್	0—6—0

ಹೊಟೇಲುಗಳಿಗೂ ಅಂಗಡಿಗಳಿಗೂ ಧಾರಾಳವಾಗಿ ಸ್ವಲ್ಪಲಾಭದ ಮೇಲೆ ಮಾರಾಟ ಮಾಡಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಪರದೇಶ ವರ್ತಮಾನ.

ಜರ್ಮನಿ—[illegible]

ಐರ್ಲೆಂಡು—[illegible]

[illegible]

ಒಳದೇಶ ವರ್ತಮಾನ.

ಖಿಲಾಫತ್ ಪರಿಷತ್ತು—[illegible]

ಮಡಿಕೇರಿ—[illegible]

ದಕ್ಷಿಣ ಕನ್ನಡ.

ಪುತ್ತೂರು:—[illegible]

[illegible]

ಕಾರ್ಕಳ:—[illegible]

(೧) [illegible]

ಸುರತ್ಕಲ್:—[illegible]

[illegible] ಮುಂದಿನ [illegible].

ಬಂಗಾಡಿ:— ಕಳೆದ [illegible] ತಿಂಗಳಲ್ಲಿ ([illegible] ಸಂಘಗಳ) [illegible] ಸಹಕಾರ ಸಂಘ ಎಂಬ ಹೆಸರಿನ) ಒಂದೆ [illegible] ಸಂಘ [illegible] ಒಂದು ಸಂಘ [illegible] ಸಂಘ [illegible] ಬಂಗಾಡಿ ಸಹಕಾರ ಸಂಘದಲ್ಲಿ [illegible] ಸಂಘವನ್ನು [illegible] ಸಂಘಗಳ [illegible] ಸಂಘ [illegible].

ಪ್ರಾಥಮಿಕ ಶಿಕ್ಷಣದ ಬಿಲ್.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

[illegible]

[illegible]

ಸೆಲರಿ ಕಮೀಟಿಯವರ ಸೂಚನೆಗಳು.

[illegible]

ರೆವಿನ್ಯೂ ಇಲಾಖೆ—[illegible]

[illegible]

... ... (ಪದ್ಯ) ... ,,
... ಸಂಗ್ರಹಗಳು:—
... ,,
... ಮಾನ ,,
... ,,
... ಲಾಹೋರ್, ಬಂಗಾಳ ,,
... ,,
... ಸೂಚನೆಗಳು ,,
... ಎಚ್ಚರಿಕೆಯಿಂದ ನೋಡಿಕೊಳ್ಳುವದು. ,,
... ಪವರ್ ,,
... ಎಲಿನೆಂಟಬಸ್ಸೈರ್, ಪುಣಾ ೪A
... (ಬ್ರಹ್ಮ ಸೋದಯ) ಸಮಾಜದ ಹತ್ತನೇ ವಾರ್ಷಿಕ ವರ್ಧಂತ್ಯುತ್ಸವ ,,
... ಪ್ರಕೃತಿ ಸಂಗ್ರ ,,

ಸ್ವದೇಶಾಭಿಮಾನಿ.

ಶಕ ೧೮೪೧ ವೈಶಾಖ ಶು॥ ೫ ಶುಕ್ರವಾರ

ಸಮಾಜೋದ್ಧಾರದ ಮೂಲತತ್ವಗಳು.

(೭)

(ಚಾತುರ್ವರ್ಣ್ಯದ ಪುನರ್ಘಟನೆ)

ಪ್ರಾಚೀನ ಆರ್ಯರು ಸಮಾಜದ ಚಿರಸ್ಥಾಯಿತೆಯ ಸಲುವಾಗಿ ಚಾತುರ್ವರ್ಣ್ಯವನ್ನು ಸ್ಥಾಪಿಸಿದರು, ಪರಂತು ಕಾಲಕ್ರಮೇಣ ಅದರಲ್ಲಿ ಶೈಥಿಲ್ಯವು, ವಿಪರ್ಯಸ್ತತೆಯೂ ಬಂದು ಆ ಚಾತುರ್ವರ್ಣ್ಯವನ್ನೆ ಕವಚಿ ಹಾಕಿದಂತಾಯಿತು. ಚಾತುರ್ವರ್ಣ್ಯದ ಶುದ್ಧಸ್ವರೂಪವೂ ಹಾಗು ಮುಖ್ಯ ಉದ್ದೇಶವೂ ನಷ್ಟವಾದ ಬಳಿಕ ಅದಕ್ಕೆ ಯಾವ ವಿಪರ್ಯಸ್ತಭಾವವು ಬಂದೊದಗಿದೆಯೋ ಅದನ್ನು ದೂರೀಕರಿಸಿ ಸಮಾಜೋದ್ಧಾರವನ್ನು ಮಾಡಬೇಕು, ಹಿಂದಿನ ಮಾದರಿಯಲ್ಲಿ ಪುನಃ ಚಾತುರ್ವರ್ಣ್ಯವನ್ನು ಪ್ರಸ್ಥಾಪಿಸಿ ಸಮಾಜ ಸುಧಾರಣೆಯನ್ನು ಮಾಡಬೇಕು ಎಂದು ೬ನೆಯ ಲೇಖಾಂಕದಲ್ಲಿ ಪ್ರಸ್ತಾಪಿಸಿದ್ದೇವೆ. ಆದರೆ ಹಿಂದಿನ ಮಾದರಿಯಲ್ಲಿ ಚಾತುರ್ವರ್ಣ್ಯವನ್ನು ಪ್ರಸ್ಥಾಪಿಸುವದೆಂದರೇನು ಎಂಬೀ ಸಂಗತಿಯನ್ನು ಇಲ್ಲಿ ಕೊಂಚ ಮಟ್ಟಿಗಾದರೂ ವಿವರಿಸುವುದು ಯುಕ್ತವೆಂದು ತೋರುತ್ತದೆ. ಆದ್ದರಿಂದ ಅದರ ಪುನರ್ಘಟನೆಯನ್ನು ಕುರಿತು ಎರಡು ಮಾತುಗಳನ್ನು ಬರೆಯೋಣ.

೧ ಹಿಂದುಸ್ಥಾನದಲ್ಲಿ ಸದ್ಯಃ ನಾಲ್ಕು ಸಾವಿರ ಜಾತಿಗಳಾಗಿದ್ದಾವೆ ಎಂಬುದು ಎಲ್ಲರಿಗೆ ಗೊತ್ತಿದ್ದ ವಿಷಯವೆ. ನಾಲ್ಕು ಸಾವಿರ ಜಾತಿಗಳೆಂದರೆ ನಾಲ್ಕು ಸಾವಿರ ವರ್ಣಗಳೆಂದು ಅರ್ಥಮಾಡುವುದು ಉಚಿತವಲ್ಲ. ವರ್ಣವು ಬೇರೆ, ಜಾತಿ ಬೇರೆ. ನಾಲ್ಕು ಅಲ್ಲ ಹತ್ತು ಸಾವಿರ ಜಾತಿಗಳಿದ್ದರೂ ಅವುಗಳನ್ನೆಲ್ಲ ನಾಲ್ಕೇ ವರ್ಣಗಳಲ್ಲಿ ಸೇರಿಸಬಹುದು. ಯಾಕೆಂದರೆ ಗುಣಕರ್ಮಗಳ ವಿಭಾಗದ ಮೇಲಿಂದ ವರ್ಣಗಳುಂಟಾದದ್ದು ಎಂಬುದನ್ನು ನಾವು ಹಿಂದೆಯೆ ನೋಡಿದ್ದೇವೆ. 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎಂದು ಗೀತೆಯಲ್ಲಿ ಹೇಳಿದ ಮಾತಿನಿಂದಲೂ ಗುಣಕರ್ಮಗಳೆ ವರ್ಣವಿಭಾಜಕವೆಂಬುದೂ ಸ್ಪಷ್ಟವಾಗುತ್ತದೆ. ಈಗ ಬರೇ ನಾಲ್ಕು ಇದ್ದಲ್ಲಿ ನಾಲ್ಕು ಸಾವಿರ ಜಾತಿಗಳಾದರೂ ಗುಣಕರ್ಮಗಳೇನೂ ಹೆಚ್ಚಲಿಲ್ಲ. ಅವು ಹಿಂದೆ ಇದ್ದಷ್ಟೆ ಇದ್ದಾವೆ. ವರ್ಣವಿಭಾಗಕ್ಕೆ ಮೂಲ ಮತ್ತು ಮುಖ್ಯ ಕಾರಣವಾದ ಗುಣಗಳೂ ಕರ್ಮಗಳೂ ಮೊದಲಿನಷ್ಟೆ ಇದ್ದಾವೆಂದ ಮೇಲೆ ವಿವಿಧ ಜಾತಿಗಳ ಸಂಖ್ಯೆಯು ಹೆಚ್ಚಿದ್ದು ಕೇವಲ ಅಪ್ರಾಮಾಣಿಕವೆಂಬುದು ಸ್ಪಷ್ಟವಾಗುವುದಿಲ್ಲವೆ? ಆದರೆ ಇಲ್ಲಿ ಕೆಲವರು ಹೀಗೆ ಆಕ್ಷೇಪಿಸಬಹುದು. ರೋಗಗಳಿಗೆ ಕಫ, ವಾತ, ಪಿತ್ತ (ಈ ಮೂರೇ ದೋಷಗಳು ಕಾರಣಗಳಾಗಿದ್ದರೂ ರೋಗಗಳು ಹೇಗೆ ಮೂರೇ ಇಲ್ಲವೋ, ಮೇಲಾಗಿ ಮೂರು ಸಾವಿರವೂ ಇರಬಹುದೊ, ಆರು ಸಾವಿರವೂ ಆಗಬಹುದೊ, ಹಾಗೆಯೆ ಗುಣಕರ್ಮಗಳು ವಿವಕ್ಷಿತವಾಗಿದ್ದರೂ ಅವುಗಳಿಂದ ಉದ್ಭವಿಸಿದ ಜಾತಿಗಳು ಬರೇ ನಾಲ್ಕೆ ಇರಬೇಕೆಂದಿಲ್ಲ. ಅವುಗಳ ಸಂಖ್ಯೆಯು ಎಷ್ಟು ಇರಬಹುದು. ಈ ಆಕ್ಷೇಪವು ನಿಜವಾಗಿ ನಿರುತ್ತರವಾದ್ದಲ್ಲ. ರೋಗೋತ್ಪಾದಕವಾದ ದೋಷಗಳು ಮೂರೇ ಇದ್ದರೂ ರೋಗ... ... ಮೂರು ನಿಮಿತ್ತಗಳಿಂದ ... ಕಂಡುಬರುತ್ತದೆ. ಮತ್ತು ಇದೇ ನ್ಯಾಯವನ್ನು ಪ್ರಕೃತ ವರ್ಣವ್ಯವಸ್ಥೆಗೆ ಅನ್ವಯಿಸಲಾಗಿ, ಅಸಂಖ್ಯ ಜಾತಿಗಳು ನಾಲ್ಕು ವರ್ಣಗಳಲ್ಲಿ ಮಗ್ನವಾಗಿ ಹೋಗುತ್ತವೆ. ಆ ಪ್ರಕಾರ ಅವು ನಾಲ್ಕು ವರ್ಣಗಳಲ್ಲಿ, ತಂತಮ್ಮ ವೈಶಿಷ್ಟ್ಯವನ್ನು ತ್ಯಜಿಸಿ ಸಮಾವಿಷ್ಟವಾಗುವುದು ಈ ಹೊತ್ತಿನ ಪರಿಸ್ಥಿತಿಯಲ್ಲಿ ಹಿತಾವಹವಾಗಿದೆ. ವರ್ಣವಿಭಾಜಕವಾದ ಗುಣಕರ್ಮಗಳ ಆಧಾರದಿಂದ ಜಾತಿಗಳು ಉಂಟಾಗಿವೆ ಎಂದು ಹೇಳುವಾಗ ಅವುಗಳಲ್ಲಿ ನಾಲ್ಕಕ್ಕಿಂತ ಅಧಿಕ ಸಂಖ್ಯೆಯನ್ನು ವಾಧಿಸುವುದು ಕೇವಲ ಮೌಢ್ಯವಾಗಿದೆ. ಕೆಲವು ಉದಾಹರಣೆಯನ್ನಿಟ್ಟುಕೊಂಡು ವಿಮರ್ಶಿಸಿದರೆ ಇದರ ಮರ್ಮವು ವಾಚಕರ ಮನಸ್ಸಿಗೆ ಬರುವ ಹಾಗಿದೆ. ಬ್ರಾಹ್ಮಣರಲ್ಲಿ ನೂರು ಜಾತಿಗಳಿಗಿಂತಲೂ ಹೆಚ್ಚೇ ಇರಬಹುದು. ಇವರೆಲ್ಲರು ವಿಭಿನ್ನ ಜ್ಞಾತಿಕರಾದರೂ ಇವರಲ್ಲಿ ಇರುವ ಬ್ರಾಹ್ಮಣ್ಯವು ಒಂದೆಯಾಗಿದೆ. ಇದೆ ರೀತಿಯಲ್ಲಿ ಕ್ಷತ್ರಿಯಾದಿ ಇತರ ವರ್ಣಗಳ ವಿಷಯವು ಮೊದಲಿನ ವ್ಯವಸ್ಥೆಯಂತೆ ಹೇಳುವುದಾದರೆ ತ್ರೈವರ್ಣಿಕರಲ್ಲಿ ಪರಸ್ಪರ ವ್ಯವಹಾರವು ಎಷ್ಟೊ ಸಂಗತಿಗಳಲ್ಲಿ ನಡೆಯುತಿತ್ತು. ಆ ಕಾಲದಲ್ಲಿ ವರ್ಣದ ಸ್ಮರಣವು ಕಂಬಹುದಾ ದ್ಯೋತಕವು ಆಯಾ ಗುಣಕರ್ಮ ವ್ಯವಹಾರಗಳ ವಿಷಯವಾಗಿಯೆ ಇತ್ತಲ್ಲದೆ ಇತರ ವ್ಯವಹಾರದಲ್ಲಿ ಅದರ ನೆನಪು ಆಗುತ್ತಿರಲಿಲ್ಲ. ಪರಂತು ಈಗ ಒಂದೇ ವರ್ಣದಲ್ಲಿ ಯಾವ ವಿವಿಧ ಜಾತಿಗಳಾಗಿವೆಯೊ ಅವು ಅನ್ಯೋನ್ಯವಾಗಿ ಸಂಘಟಿಸಲು ಬಿಡುವುದಿಲ್ಲ. ಇದರಿಂದ ಹಿಂದುಸಮಾಜದ ಹೀನ ಸ್ಥಿತಿಯು ಉಂಟಾಗಿದೆ.

ಹಿಂದುಸಮಾಜದೊಳಗಿನ ಜಾತಿಗಳು ಆಯಾ ವರ್ಣದ ಪ್ರಕಾರ ಒಟ್ಟಿಗೆ ಸೇರಬೇಕು ಎಂದರೆ ಒಳಜಾತಿಗಳು ಹೋಗಿ ಮೊದಲಿನಂತೆ ಚಾತುರ್ವರ್ಣ್ಯವು ಪುನಃ ಸ್ಥಾಪಿತವಾಗಬೇಕು ಎಂಬುದರ ಅರ್ಥವು ಒಮ್ಮಿಗೆನೆ ಸಮಸ್ತ ಭೇದಗಳನ್ನು ಮುರಿದುಬಿಟ್ಟು ಎಲ್ಲವು ಗೋಳಾಕಾರವಾಗಬೇಕೆಂದಲ್ಲ. ಇಲಿಯನ್ನು ಕಂಡೊಡನೆ ಬೆಕ್ಕು ಅದರ ಮೈಮೇಲೆ ಹಾರುವಂತೆ ಒಂದು ಜಾತಿಯು ಇನ್ನೊಂದರ ಹಗ ಸಾಧಿಸುವ ಯಾವ ಪ್ರಚಾರವನ್ನು ಹಾಕಿಕೊಂಡಿದೆಯೊ ಅದನ್ನು ನಿರ್ಮೂಲಿಸುವುದು ಕಾಲಪ್ರಾಪ್ತವಾಗಿದೆ. ಈ ಜಾತಿಭೇದದ ವಿಷಯವು ಆಧುನಿಕ ಶಿಕ್ಷಿತರಲ್ಲಿ ಕೂಡ—ಜಾತಿಭೇದವಿರುವುದು ತಪ್ಪು, ಸಾರ್ವತ್ರಿಕ ಸಮತೆಯು ಇರಬೇಕಾದ್ದು ಯೋಗ್ಯವು ಎಂದು ವಾದಿಸುವ ಸುಧಾರಕರಲ್ಲಿ ಕೂಡ— ಎಷ್ಟು ಮಟ್ಟಿಗೆ ಭೇದಿಸಿದೆ ಎಂದರೆ ಪ್ರಯೋಜನದ ಕಾರ್ಯಗಳು ಉಂಟಾಗುವಾಗ ಅವೆಲ್ಲ ಸ್ವಕೀಯ ಸಂಭವಿಸುತ್ತವೆ. ಹಿಂದುಸ್ಥಾನದ ಆ ತುದಿಯಿಂದ ಈ ತುದಿಯವರೆಗೆ ಎಲ್ಲಿ ನೋಡಿದರೂ ಇದರ ಪ್ರತೀತಿಯು ಕಂಡುಬರುತ್ತದೆ. ಒಂದು ಸಂಸ್ಥೆಯೊಳಗಿನ ದೋಷವು ಇರಬಾರದು, ಅದು ಉಚ್ಚಾಟಿಸಲ್ಪಡಬೇಕು ಎಂಬಿತ್ಯಾದಿ ವಿಚಾರ ಕಾಲದಲ್ಲಿ ಅನೇಕರಿಗೆ ತಿಳಿದಿದ್ದರೂ ವ್ಯವಹಾರ ಕಾಲದಲ್ಲಿ ಅವರಿಗೆ ಅದನ್ನು ಬಿಟ್ಟು ಬಿಡುವುದು ಸಾಧ್ಯವಾಗುವುದಿಲ್ಲ. ಇದು ಕೇವಲ ಶೋಚನೀಯವಾಗಿದೆ. ಇರಲಿ. ನಮಗೆ ಈ ಸಂಬಂಧದಲ್ಲಿ ಆಧುನಿಕರ ದುಷ್ಟ ವ್ಯವಹಾರಗಳನ್ನು ಟೀಕಿಸುವುದು ಅಷ್ಟೊಂದು ಆಗತ್ಯವಿಲ್ಲ. ಪ್ರಾಚೀನ ಕಾಲದ ನಮ್ಮ ವೈದಿಕಸಮಾಜದ ಉದ್ಧರಣವು ಆಗಬೇಕಾದರೆ ಪೂರ್ವವತ್ ಚಾತುರ್ವರ್ಣ್ಯ ಶುದ್ಧಸ್ವರೂಪದಲ್ಲಿ ಬರಬೇಕು. ಇದೇ ನಮಗೆ ಮುಖ್ಯ ಪ್ರತಿಪಾದ್ಯವಾದ ವಿಷಯವಾಗಿದೆ. ಸಮಾಜದ ಚಿರಸ್ಥಾಯಿತೆಗೆ ಚಾತುರ್ವರ್ಣ್ಯ ಬೇಕೆಂದು ನಮ್ಮ ದೇಶಚರಿತ್ರವೆ ಅಲ್ಲ, ಇತರ ಭಾಗಗಳ ಇತಿಹಾಸವು ಕೂಡ ಹೇಳುತ್ತಿದೆ. ಈ ದೇಶದಲ್ಲಿ ಚಾತುರ್ವರ್ಣ್ಯವೆಂಬ ಹೆಸರಿನಿಂದಾದರು ಇನ್ನೊಂದು ಕಡೆಯಲ್ಲಿ ಬೇರೆ ಹೆಸರಿನಿಂದ ಅಥವಾ ರೂಪದಿಂದ ಈ ಸಂಸ್ಥೆಯು ಇದ್ದೆ, ಇರುತ್ತದೆ. ಚಾತುರ್ವರ್ಣ್ಯವೆಂದರೆ ನಾಲ್ಕು ಕಸಬುಗಳು, ನಾಲ್ಕು ತರದ ಉದ್ಯೋಗಗಳು, ನಾಲ್ಕು ವಿಧದ ವೃತ್ತಿಗಳು. ಇವು ರಾಷ್ಟ್ರದ ಸುಖಜೀವನಕ್ಕೂ, ದೇಶದ ಅಭಿವೃದ್ಧಿಗೆ, ರಾಷ್ಟ್ರದ ಐಶ್ವರ್ಯಕ್ಕೆ ಅವಶ್ಯಕವಾದವುಗಳು. ಯಾಕೆಂದರೆ ಈ ವೃತ್ತಿಗಳ ಮೂಲ ಆಧಾರವು ಶ್ರಮವಿಭಾಗದ ತತ್ವವು. ಪ್ರಾಚೀನ ಕಾಲದಲ್ಲಿ ಯಾವ ತತ್ವಕ್ಕೆ ಚಾತುರ್ವರ್ಣ್ಯವೆಂಬ ಹೆಸರು ಕೊಟ್ಟು ಧರ್ಮದ ಹೊದಿಕೆ ಹಾಕಿದ್ದರೊ ಅದಕ್ಕೆ ಈಗಿನ ಸುಧಾರಿಸಿದ ಕಾಲದಲ್ಲಿ, ಈಗಿನ ಸುಶಿಕ್ಷಿತ ಭಾಷೆಯಲ್ಲಿ 'ಶ್ರಮವಿಭಾಗದ ತತ್ವ'ವೆಂದು ಹೇಳುತ್ತಾರೆ. ಈ ಹೊರಗಿನ ಭೇದದ ಎಂದರೆ ವೇದಾಂತಿಗಳ ಭಾಷೆಯಿಂದ ಹೇಳುವುದಾದರೆ, ನಾಮರೂಪಾತ್ಮಕವಾದ ಹೊರಗಿನ ಹೊದಿಕೆಯನ್ನು ಕಳಚಿದರೆ ಅದು ತಾತ್ವಿಕ ದೃಷ್ಟಿಯಿಂದ ಒಂದೇ ವಸ್ತುವಾಗಿದೆ. ಅರ್ಥಾತ್ ಚಾತುರ್ವರ್ಣ್ಯವು ರಾಷ್ಟ್ರದ ಜೀವನಕ್ಕೆ ಉಪಯುಕ್ತ ಮತ್ತು ಅವಶ್ಯಕವಾದ ಪ್ರಯುಕ್ತ ಅದನ್ನು ಪುನರುಜ್ಜೀವಿಸುವುದು ದೇಶಹಿತವಾದಿಗಳ ಮತ್ತು ಸಮಾಜೋದ್ಧಾರಕರ ಆದಿಕರ್ತವ್ಯವಾಗಿದೆ. ಹಿಂದೀ ರಾಷ್ಟ್ರದ ವೈಶಿಷ್ಟ್ಯಕ್ಕೆ ಬಾಧೆಯು ತಪ್ಪದ ರೀತಿಯಲ್ಲಿ ಈ ಜೀರ್ಣಸಂಸ್ಥೆಯನ್ನು ಪುನರುಜ್ಜೀವಿಸಬೇಕೆಂಬುದನ್ನು ಮಾತ್ರ ಯಾರೂ ಮರೆಯಬಾರದು.

... ಮಾಚಾರಗಳು.

... ... ಮತ್ತು ... ಮದ್ರಾಸಿನಲ್ಲಿ ... ... ಧಾರ್ಮಿಕರಾದ ... ... ಅಧ್ಯಕ್ಷತೆಯಲ್ಲಿ ನೆರೆಯಿತು. ಟರ್ಕಿಯ ಖಲೀಫತಿನ ಪ್ರಶ್ನೆಯು ಮುಸಲ್ಮಾನರ ಧಾರ್ಮಿಕ ಬುದ್ಧಿಗೆ ಸಮಾಧಾನಕರವಾಗಿ ... ನಿರ್ಣಯಿಸಲ್ಪಡಬೇಕೆಂಬುದೆ ಹಿಂದಿ ಮುಸಲ್ಮಾನರ ಚಳವಳದ ಮುಖ್ಯ ಸೂತ್ರವಾಗಿದೆ. ಇದೇ ಉದ್ದೇಶದಿಂದ ಮದ್ರಾಸಿನಲ್ಲಿ ಸಹ ಅವರ ಪರಿಷತ್ತು ಕೂಡಿ ನೆರೆದಿತ್ತು. ಸ್ವಾಗತ ಮಂಡಲದ ಮುಖ್ಯಸ್ಥರಾದ ನಾಮದಾರ ಯಾಕೊಬ ಹಸನಸಾಹೇಬರು ತಮ್ಮ ಭಾಷಣದಲ್ಲಿ ತುರ್ಕಸ್ಥಾನದ ಖಲಿಫತಿನ ವಿಷಯವು ಇಸ್ಲಾಮರಿಗೆ ಎಷ್ಟು ಮಹತ್ವದ್ದು, ಬ್ರಿಟಿಷ ಮುತ್ಸದ್ದಿಗಳು ಮಹಮ್ಮದೀಯರ ಧರ್ಮಬುದ್ಧಿಗೆ ಎಳ್ಳಷ್ಟು ಕೂಡ ಆಘಾತವನ್ನು ಕೊಡಲಿಕ್ಕಿಲ್ಲವೆಂಬುದಾಗಿ ಮೊದಲು ಮೊದಲು ಹೇಗೆ ಅಭಿವಚನವನ್ನು ಕೊಟ್ಟರು, ಆದರೆ ಇತ್ತಿತ್ತಲಾಗಿ ಮಿ. ಲೊಯ್ಡ ಜೋರ್ಜರು ಖಲಿಫತ್ ಡೆಪ್ಯುಟೇಶನಿಗೆ ಭೇಟಿಯನ್ನು ಕೂಡ ಕೊಡಲು ಅಲ್ಲಗಳೆದು ಟರ್ಕಿಯ ಪ್ರಶ್ನೆಯನ್ನು ಕುರಿತು ಹೇಗೆ ಅಲಕ್ಷ್ಯಭಾವವನ್ನು ತೋರಿಸಹತ್ತಿದ್ದಾರೆ ಇತ್ಯಾದಿ ಸಂಗತಿಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಖಲಿಫತಿನ ವಿಷಯದಲ್ಲಿ ಇದುವರೆಗೆ ಒಂದೆರಡು ಡೆಪ್ಯುಟೇಷನುಗಳು ಹೋಗಿರುವವಾದರೂ ಇಂಗ್ಲಂಡಿನಲ್ಲೂ, ಬ್ರಿಟಿಷಸಾಮ್ರಾಜ್ಯದ ಇತರ ಭಾಗಗಳಲ್ಲೂ ಹಾಗು ಫ್ರಾನ್ಸ್, ಇಟಲಿ, ಅಮೇರಿಕಾ ಮುಂತಾದ ಕಡೆಗಳಲ್ಲೂ—ಈ ಪ್ರಶ್ನೆಯ ನಿಜಸ್ವರೂಪವನ್ನು ತಿಳಿಸಿಕೊಟ್ಟು ಚಳವಳವನ್ನು ಮಾಡುವುದಕ್ಕಾಗಿ ಇನ್ನೂ ಹಲವು ಸಮರ್ಥರಿಂದ ಕೂಡಿದ ಡೆಪ್ಯುಟೇಶನುಗಳು ಹೋಗುವುದು ಆಗತ್ಯವಿದೆ ಎಂದು ಅವರು ಸೂಚಿಸಿದರು. ಇಸ್ಲಾಮ ಧರ್ಮದ ಮೇಲೆ ಸದ್ಯಃ ಒದಗಿರುವ ಸಂಕಷ್ಟವನ್ನು ಬಗೆಹರಿಸುವುದಕ್ಕಾಗಿ ಮುಸಲ್ಮಾನರು ಯಾವ ಕಷ್ಟಗಳನ್ನೂ ಅನುಭವಿಸಬಲ್ಲರು, ದ್ರವ್ಯ, ಸಮಯ ಇತ್ಯಾದಿಗಳನ್ನು ಮಾತ್ರ ವ್ಯಯಮಾಡುವುದಲ್ಲದೆ ಅವರು ತಮ್ಮ ಪ್ರಾಣದ ಸರ್ವವನ್ನೂ ಸಹ ನೋಡಲಿಕ್ಕಿಲ್ಲ ಎಂಬುದಾಗಿ ನಾಮದಾರ ಯಾಕೊಬ ಹಸನಸಾಹೇಬರು ಹೇಳಿ ದೇವರ ಕೃಪೆಯಿಂದ ಮುಸಲ್ಮಾನರು ಕೈಕೊಂಡ ಕಾರ್ಯದಲ್ಲಿ ಯಶಸ್ಸು ಬರಲಿ, ಮತ್ತು ಈ ಯಶಸ್ಸಿನ ದಾರಿಯನ್ನು ದೇವರು ತೋರಿಸಲಿ ಎಂದು ಸದಿಚ್ಛೆಯನ್ನು ವ್ಯಕ್ತಗೊಳಿಸಿ ತಮ್ಮ ಭಾಷಣವನ್ನು ಮುಕ್ತಾಯ ಪಡಿಸಿದರು.

೨. ನಾಮದಾರ ಯಾಕೊಬ ಹಸನರ ಸ್ವಾಗತಪರವಾದ ಭಾಷಣವು ಆದ ಬಳಿಕ ಅಧ್ಯಕ್ಷರಾದ ಮೌಲಾನಾ ಶೌಕತ ಅಲ್ಲಿ ಇವರು ಉರ್ದುಭಾಷೆಯಿಂದ ಭಾಷಣವನ್ನು ಕೊಟ್ಟರು. ಇವರು ಮತ್ತು ಇವರ ಸಹೋದರರಾದ ಮಿ. ಮಹಮದಅಲ್ಲಿ ಇವರಿಬ್ಬರು ಯುದ್ಧಪ್ರಾರಂಭದ ಕಾಲದಲ್ಲಿ ಸರಕಾರದ ಅವಕೃಪೆಗೆ ಪಾತ್ರರಾಗಿ ಕೆಲವು ಸಮಯ ಪ್ರತಿಬಂಧದ ಕಾರಾಗೃಹದಲ್ಲಿ ಬಿದ್ದಿದ್ದರೂ ಮಿ. ಶೌಕತ ಅಲ್ಲಿಯವರು ಮೊನ್ನೆ ಖಲಿಫತ ಕೊನ್ಫರೆನ್ಸಿನಲ್ಲಿ ಮಾಡಿದ ಭಾಷಣವು ಸಮತೋಲವಾಗಿತ್ತೆಂದು ಹೇಳಬೇಕಾಗುತ್ತದೆ. ಯಾಕೆಂದರೆ, ಹಿಂದೀ ಮುಸಲ್ಮಾನರ ಹಾಗು ಇತರ ಇಸ್ಲಾಮಿಯರ ಆಕಾಂಕ್ಷೆಗಳು ಯಾವವು, ಕೇಳಿಕೆಗಳು ಯಾವವು, ಮತ್ತು ಅವುಗಳನ್ನು ಇಂಗ್ಲೆಂಡ್ ಮತ್ತು ಅದರ ಮಿತ್ರಸಂಘದವರು ಹೇಗೆ ಪೂರೈಸಬಹುದು ಎಂಬಿತ್ಯಾದಿ ವಿಷಯವನ್ನು ಬಹು ಸ್ಪಷ್ಟವಾಗಿ ಪರಿಷತ್ತಿನ ಮುಂದೆ ಇಟ್ಟಿದ್ದಾರೆ. ಅಲ್ಲದೆ ಯುದ್ಧ ಪ್ರಾರಂಭ ಕಾಲದಲ್ಲಿ ಟರ್ಕಿಯ ಪರಿಸ್ಥಿತಿಯನ್ನು ಒಣ್ಣಿಸಿ, ರಷ್ಯವು ಟರ್ಕಿಯ ಶತ್ರುವಾಗಿದ್ದ ಕಾರಣ ಆ ರಷ್ಯವು ಯಾರ ಕಡೆಗೆ ಸೇರಿತೊ ಅದರ ಎದುರು ಕಡೆಗೆ ಸೇರುವುದು ತುರ್ಕಸ್ಥಾನಕ್ಕೆ ಹೇಗೆ ಪ್ರಾಪ್ತವಾಯಿತು ಎಂಬೀ ವಿಷಯವನ್ನು ಮೌಲಾನಾ ಶೌಕತ ಅಲ್ಲಿಗಳು ಚೆನ್ನಾಗಿ ವಿಮರ್ಶಿಸಿದ್ದಾರೆ. ಮುಸಲ್ಮಾನರ ಧರ್ಮಸ್ಥಲಗಳನ್ನೂ, ಪವಿತ್ರಕ್ಷೇತ್ರಗಳನ್ನೂ ಭಂಗಪಡಿಸುವುದಿಲ್ಲವೆಂದು ಬ್ರಿಟಿಷ್ ಸರಕಾರದ ಪರವಾಗಿ ಲೊರ್ಡ ಹಾರ್ಡಿಂಜರು ಎಷ್ಟೊ ಸಾರಿ ಉದ್ಘೋಷಿಸಿ, ಹಿಂದೀ ಮುಸಲ್ಮಾನರ ಹಾಗು ಹಿಂದುಗಳ ಮನುಷ್ಯ ಬಲ ಮತ್ತು ದ್ರವ್ಯ ಬಲವನ್ನು ಪಡೆಕೊಂಡು ಬ್ರಿಟಿಷ್ ಸರಕಾರವು ಯುದ್ಧದಲ್ಲಿ ಜಯಶಾಲಿಯಾಗಿದೆ. ಈ ಸಂಗತಿಯು ನಿರಪವಾದವಾಗಿರುತ್ತ ಹಾಗು ಮೊದಲು ಕೊಟ್ಟ ಇಂಥಾದ ಅಭಿವಚನಗಳಿರುತ್ತ ಕೊನೆಗೆ ಇದೇ ಬ್ರಿಟನು ಮುಸಲ್ಮಾನರ ಪವಿತ್ರ ಕ್ಷೇತ್ರಗಳ ಮೇಲೆ ತನ್ನ ಸೈನ್ಯದ ಮುಖಾಂತರ ಬೊಂಬುಗಳನ್ನು ಬಿಸಾಡಿಸಿ ಅವುಗಳನ್ನು ಆಕ್ರಮಿಸುವುದು ಎಷ್ಟು ವಿಸಂಗತವಾಗಿದೆ ಎಂದು ಅಧ್ಯಕ್ಷರು ಕೇಳಿರುವರು. ಟರ್ಕಿಗೆ ಯುದ್ಧದ ಪೂರ್ವದಲ್ಲಿದ್ದಂತೆ ಈಗಲೂ ಇರಗೊಡಲು ಫ್ರಾನ್ಸಿಗಾಗಲಿ, ಇಟಲಿಯಾಗಲಿ ಅಸಮ್ಮತಪಡುವುದಿಲ್ಲ. ಟರ್ಕಿಯು ಯುರೋಪಿನಲ್ಲಿ ತನ್ನ ಗತವೈಭವವನ್ನು ಹೊಂದಿ ತನ್ನ ಅಮಲಿನಲ್ಲಿರುವ ಇತರ ಧರ್ಮೀಯರಿಗೆ ಒಳ್ಳೆ ರೀತಿಯಿಂದ ನಡೆಸಹತ್ತಿ ಪೂರ್ವವತ್ ಆಳತೊಡಗಿದರೆ ಅದರಿಂದ ಫ್ರಾನ್ಸಿಗಾಗಲಿ ಇಲ್ಲವೆ ಇಟಲಿಗಾಗಲಿ ವಿಷಾದ ಅಥವಾ ಅಸೂಯೆ ಇಲ್ಲವೆ ಹಾನಿಯು ಯಾವುದು ಇಲ್ಲ. ಏಸಿಯಾ ಖಂಡದಲ್ಲಿ ಮೆಸಪೊಟೆಮಿಯಾ ಮೊದಲಾದ ಮಹಮ್ಮದೀಯರ ಪ್ರಾಂತಗಳನ್ನು, ಕೇವಲ ಇಂಗ್ಲಂಡು ಗೆದ್ದುಕೊಂಡಿರುವುದರಿಂದ ಅವುಗಳ ವ್ಯವಸ್ಥೆಯಲ್ಲಿ ಫ್ರಾನ್ಸಾದಿ ಇತರ ರಾಷ್ಟ್ರಗಳಿಗೆ ... ಇಸ್ಲಾಮ ಧರ್ಮದ ... ಮಹತ್ವವೂ.

ವಹಿಸುವುದು ... ಉಳಿದಿದೆಂಬುದು ಸ್ಪಷ್ಟವಾಗುತ್ತದೆ. ಎಂದ ಮೇಲೆ ಮುಸಲ್ಮಾನರ ಪವಿತ್ರ ಕ್ಷೇತ್ರಗಳನ್ನು ಬಲಕಾಯಿಸಿದ ಈ ದೋಷವನ್ನು ಈಗ ಯಾರ ತಲೆಯ ಮೇಲೆ ಹಾಕಲಾಯಿತು ಎಂದು ಶೌಕತ ಅಲ್ಲಿಗಳು ಸಮರ್ಪಕವಾಗಿ ಪ್ರತಿಪಾದಿಸಿದ್ದಾರೆ. ಶೌಕತ ಅಲ್ಲಿಗಳು ಈ ಮೇರೆಗೆ ಯುದ್ಧ ಪ್ರಾರಂಭ ಕಾಲದಿಂದ ಟರ್ಕಿಯ ವಿಷಯಕವಾದ ಎಲ್ಲ ಚರಿತ್ರೆಯನ್ನು ಸಮಾಲೋಚಿಸಿ ಮುಸಲ್ಮಾನರ ನ್ಯಾಯ ಆಕಾಂಕ್ಷೆಗಳ ತೃಪ್ತಿಗೋಸ್ಕರ ರಾಜ್ಯಕರ್ತರು ಯಾವ ಯಾವ ಸಂಗತಿಗಳನ್ನು ಮಾಡುವುದು ಆವಶ್ಯಕವಿದೆ ಎಂಬುದನ್ನು ಸೂಚಿಸಿದ್ದಾರೆ. ಮಕ್ಕಾ, ಮದೀನಾ, ಜರೂಸಲೇಮ್, ಹಜಿಫ್, ಬಗದಾಧ ಇತ್ಯಾದಿ ಇಸ್ಲಾಮ ಪವಿತ್ರಕ್ಷೇತ್ರಗಳು ಖಲಿಫರ ಆಡಳಿತೆಗೆ ಒಳಪಟ್ಟವುಗಳಾಗಿರಬೇಕು. ಜಝೀರತುಲ್ ಅರಬ್ ಅಥವಾ ಅರೇಬಿಯಂಥ ಸಮಸ್ತ ದ್ವೀಪವು ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ವಿವಕ್ಷಿತ ಸೀಮೆಗಳಿಂದ ಯುಕ್ತವಾದ್ದಾಗಿ ಬಿನ್‌ಮುಸಲ್ಮಾನರ ಕೈಗೆ ಹೋಗಬಾರದು, ಹಾಗು ಖಲಿಫರು ಸ್ವತಂತ್ರನಾಗಿರಬೇಕು ಎಂದರೆ ಇಸ್ಲಾಮ ಧರ್ಮವನ್ನು ಸಂರಕ್ಷಿಸುವ ಅವನ ಸ್ವಾತಂತ್ರ್ಯಕ್ಕೆ ಬೇಕಷ್ಟು ರಾಜ್ಯವಿಸ್ತಾರ, ಸೇನಾಬಲ, ಮನುಷ್ಯಬಲ ಮುಂತಾದ ವಿಶಿಷ್ಟ ವಿಷಯಗಳಲ್ಲಿ ಅವನು ಸರ್ವಥಾ ಪರಾವಲಂಬಿಯಾಗಕೂಡದು. ಮುಸಲ್ಮಾನರ ಕಡೆಯ ಈ ಮೂರು ಕೇಳಿಕೆಗಳನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೇಳಿರುವರು. ಅಧ್ಯಕ್ಷರ ಭಾಷಣವಲ್ಲದೆ ಸಭೆಯಲ್ಲಿ ಆದ ಠರಾವುಗಳ ಸ್ವರೂಪವಾದರೂ ಇದೇ ರೀತಿಯಾಗಿತ್ತೆಂದು ತಿಳಿಸಿ ಈ ವಿಷಯವನ್ನು ಇಲ್ಲಿಗೆ ಬಿಡುವೆವು.

೩ ಅಕ್ಕಿಯ ಬೆಲೆಯು ಮೆಲ್ಲಮೆಲ್ಲನೆ ಇಳಿಯುತ್ತ ಬಂದಿದೆ ಎಂದು ಸರಕಾರಿ ಪ್ರಕಟನೆಯ ಮೇಲಿಂದ ಗೊತ್ತಾಗುತ್ತದೆ. ಕಳೆದ ಜನವರಿ ತಿಂಗಳಲ್ಲಿ ಒಂದು ಗೋಣಿಗೆ ರೂ ೧೮—೧೪—೩ಪೈ ಕ್ರಯವಿದ್ದದ್ದು ಈ ಎಪ್ರಿಲ್ ತಿಂಗಳಲ್ಲಿ ೧೭ರೂ ೯ಆ ೩ಪೈಗೆ ಬಂದು ನಿಂತಿದೆ ಎಂದು ತಿಳಿದುಬರುತ್ತದೆ. ಕಳೆದ ವರ್ಷದ ಧಾರಣೆಯ ಸರಾಸರಿಯನ್ನು ನೋಡಿದರೆ ಈ ವರ್ಷದ ಪರಿಸ್ಥಿತಿಯು ಸಮಾಧಾನಕರವೆಂದು ಹೇಳಲಾಗುವುದಿಲ್ಲ. ಯಾಕೆಂದರೆ ಕಳೆದ ವರ್ಷದ ಸರಾಸರಿಯು ೧೭ರೂ ೮ಆ ೩ಪೈ ಇತ್ತು; ಮತ್ತು ಈ ವರ್ಷದ ಧಾರಣೆಯು ಮೇಲೆ ನಿರ್ದೇಶಿಸಿದಂತೆ ಈ ಎಪ್ರಿಲಿನಲ್ಲಿ ೧೭ರೂ ೯ಆಣೆ ೩ಪೈ ಇರುತ್ತದೆ. ಪ್ರಾಂತದೊಳಗಿನ ಜಿಲ್ಲಾ ಪ್ರತಿಬಂಧವನ್ನು ಎಬ್ಬಿಸಿದರಿಂದ ಕಡಪಾ, ಚಿತ್ತೂರು, ಸೇಲಮ ಈ ಮೂರು ಜಿಲ್ಲೆಗಳಲಿ ಅಲ್ಲದೆ ಬೇರೆ ಕಡೆಗಳಲ್ಲಿ ರಂಗೂನ ಅಕ್ಕಿಯನ್ನು ಬರಮಾಡಿಕೊಳ್ಳುವುದಿಲ್ಲವಾದ ಕಾರಣ ಎಂದರೆ ರಂಗೂನು ಅಕ್ಕಿಗೆ ಗಿರಾಕಿ ಇಲ್ಲಾದ್ದರಿಂದ ಅಕ್ಕಿಯ ಧಾರಣೆಯು ಇನ್ನೂ ಕಡಿಮೆಯಾಗುವ ಸಂಭವವಿದೆ ಎಂದು ಆಹಾರಪೂರವಣೆಯ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ. ಪರಂತು ಅಜಮಾಸಿನಿಂದ ಊಹಿಸುವ ಈ ಅಭಿಪ್ರಾಯಕ್ಕೆ ಮುಂದೆ ಬರುವ ಅಥವಾ ಈಗಿರುವ ಧಾರಣೆಯ ಸ್ಥಿತಿಯು ಎಷ್ಟರಮಟ್ಟಿಗೆ ತಾಳೆಬೀಳುತ್ತದೆಂಬುದು ಸಹಜವಾಗಿ ನೋಡಿ ಅನುಭವದಲ್ಲಿ ತೆಕ್ಕೊಳ್ಳಬೇಕಾದ ವಿಷಯವಾದ ಕಾರಣ ಈ ಬಗ್ಗೆ ನಾವು ಮೊದಲೆ ತರ್ಕ ವಿತರ್ಕ ಮಾಡಲು ಸ್ಥಳವನ್ನು ವೆಚ್ಚಮಾಡುವುದಿಲ್ಲ.

೪ ಧಾರವಾಡದಲ್ಲಿ ಬರುವ ತಿಂಗಳ ಮೊದಲನೆ ವಾರದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು ಸೇರುವುದಿದೆ. ಮತ್ತು ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸುಪ್ರಸಿದ್ಧ ಮುತ್ಸದಿಗಳಾದ ದಿವಾನ ವಿ ಪಿ ಮಾಧವ ರಾಯರು ಅಲಂಕರಿಸುವವರಿದ್ದಾರೆಂದು ಪ್ರಕಟವಾಗಿದೆ. ಈ ಕರ್ನಾಟಕ ಪರಿಷತ್ತಿನ ಆಮಂತ್ರಣ ಪತ್ರಿಕೆ ಮತ್ತು ವಿಜ್ಞಾಪನೆ ಪತ್ರವನ್ನು ನಾವು ಪತ್ರಿಕೆಯಲ್ಲಿ ಮೊದಲು ಪ್ರಕಟಿಸಿದ್ದೇವಷ್ಟೆ. ಇವಲ್ಲದೆ ಪತ್ರಿಕೆಯಲ್ಲಿ ಪ್ರಕಟವಾದ ಸಾರ್ವಜನಿಕ ಆಮಂತ್ರಣವಲ್ಲದೆ ಇಲ್ಲಿಯ ಅನೇಕ ಪ್ರಮುಖ ಗೃಹಸ್ಥರಿಗೆ ಆಮಂತ್ರಣಗಳು ಬಂದಿವೆ. ಧಾರವಾಡಕರರು ಕರ್ನಾಟಕ ರಾಜಕೀಯ ಪರಿಷತ್ತನ್ನು ಸೇರಿಸುವ ಮಹತ್ಪರಿಶ್ರಮವನ್ನು ವಹಿಸಿದ್ದು ನಿಜವಾಗಿ ಅವರಿಗೆ ಭೂಷಣಾಸ್ಪದವಾಗಿದೆ. ಹಿಂದುಸ್ಥಾನದೊಳಗಿನ ಮಿಕ್ಕ ಭಾಗಗಳಿಗಿಂತ ನಮ್ಮ ಕರ್ನಾಟಕವು ರಾಜಕೀಯ, ಔದ್ಯೋಗಿಕ, ಶೈಕ್ಷಣಿಕ ಇತ್ಯಾದಿ ಅನೇಕ ವಿಷಯಗಳಲ್ಲಿ ಬಹಳ ಹಿಂದುಳಿದಿದೆ. ಕನ್ನಡಿಗರು ಬೇರೆ ಬೇರೆ ಆಳಿಕೆಗೆ ಒಳಪಟ್ಟಿರುವುದೇ ಇದಕ್ಕೆ ಮುಖ್ಯ ಕಾರಣವು, ಅವರಲ್ಲಿ ಈಗ ಪರಸ್ಪರ ಹೊಕ್ಕುಬಳಿಕೆಯು ಲುಪ್ತವಾಗಿದೆ ಮಾತ್ರವಲ್ಲ, ಧಾರವಾಡ, ಕಾರವಾರ, ಮಂಗಳೂರ, ಬಳ್ಳಾರಿ ಮುಂತಾದ ಕನ್ನಡಿಗರು ಅನ್ಯೋನ್ಯ ಅಪರಿಚಿತರಾಗಿಯೆ ಇದ್ದಾರೆ. ಈ ದುರವಸ್ಥೆಯನ್ನು, ರಾಷ್ಟ್ರೀಯ ಐಕ್ಯಕ್ಕೆ ವಿಘಾತಕವಾದ ಈ ಎಡರನ್ನು ಪರಿಹರಿಸುವುದೆ ಈ ಪರಿಷತ್ತಿನ ಪ್ರಧಾನ ಉದ್ದೇಶವಾಗಿರಬೇಕು. ಮತ್ತು ಇದೇ ಮುಖ್ಯೋದ್ದೇಶವನ್ನಿಟ್ಟುಕೊಂಡು ಧಾರವಾಡ ಬಂಧುಗಳು ಹಾಗು ಇತರ ಎಲ್ಲ ಕನ್ನಡಿಗರು ಈ ಪರಿಷತ್ತಿನ ಅಧಿವೇಶನವನ್ನು ಸಾಂಗಗೊಳಿಸಿಯಾರು ಎಂದು ನಂಬಿದ್ದೇವೆ. ಅರ್ಥಾತ್ ಅಖಿಲ ಕರ್ನಾಟಕದ ಐಕ್ಯದ ಪ್ರಶ್ನೆಯಲ್ಲದೆ ಇನ್ನೂ ಅನೇಕ ವಿಷಯಗಳ ಊಹಾಪೋಹವು ಪರಿಷತ್ತಿನಲ್ಲಿ ನಡೆಯುವುದು ಎಂದೂ ಅನುಚಿತವಾಗಲಾರದು. ಸಾರಾಂಶ—ಬರುವ ತಿಂಗಳಲ್ಲಿ ಜರಗಲಿಕ್ಕಿರುವ ಪರಿಷತ್ತಿಗೆ ಬೇರೆಬೇರೆ ಕಡೆಗಳಲ್ಲಿಯ ಕನ್ನಡಿಗರು ತಂತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಸಾರ್ವತ್ರಿಕ ಹಿಂದೂಸ್ಥಾನದ ಚಳವಳದಲ್ಲಿ ಕರ್ನಾಟಕದ ಸಜೀವತೆಯನ್ನು ತೋರಪಡಿಸಿಯಾರು ಎಂದು ನಂಬಿದ್ದೇವೆ.

೫ ಹೆಣ್ಣು ಉದುರುವ ಕಾಲದಲ್ಲಿ ಬಾಯಿಗೆ ಹುಣ್ಣು ಎಂಬಂತೆ ಬಡ ಉಪಾಧ್ಯಾಯರ ಗತಿಯಾಯಿತು. ಪುತ್ತೂರು, ಕಾಸರಗೋಡು, ಮಂಗಳೂರು ಈ ಮೂರು ಕಡೆಗಳಲ್ಲಿಯೂ ಉಪಾಧ್ಯಾಯರು ತಂಡವಾಗಿ ನೆರೆದು ಪ್ರಾಂತಿಕ ಸರಕಾರದ ಮೆಂಬರ ಸರ್ ಪಿ ರಾಜಗೋಪಾಲಾಚಾರ್ಯರವರನ್ನು ಭೇಟಿಮಾಡಿದರು. ಸ್ವರವು ಒಂದೇ. ಬೋರ್ಡಿನವರೇ ಈ ವಿಚಾರದಲ್ಲಿ ಕೈಹಾಕಬೇಕಲ್ಲದೆ ಸರಕಾರದವರು ಈಗ ಏನು ಮಾಡಲು ಸಾಧ್ಯವಿಲ್ಲ, ಸರಕಾರದ ನವುಕರರಿಗೆನೆ ದರಗಳನ್ನು ಹೆಚ್ಚಿಸಲು ದ್ರವ್ಯಸಹಾಯ ಇಲ್ಲವಂತೆ! ಹಾಗಾದರೆ ಸರಕಾರದ ದ್ರವ್ಯಸಹಾಯದಿಂದಲೇ ಉಪಜೀವನಮಾಡುತ್ತಿರುವ ಬೋರ್ಡುಗಳಾದರೂ ಈ ಬಡ ಉಪಾಧ್ಯಾಯರಿಗೆ ಸಲಹೆಗಳನ್ನು ಕೊಡುವ ಬಗೆ ಹೇಗೆ? ಮಗನ ಉಪನಯನಕ್ಕೋಸ್ಕರ ನಾಲ್ಕು ಕಾಸು ತಿರಿದು ತರುವ ಕಾಂಕ್ಷೆಯಿಂದ ಒಂದ ಬ್ರಾಹ್ಮಣ ಭಿಕ್ಷುವಿಗೆ "ಶೂದ್ರ ಅವಸ್ಥೆಯಲ್ಲಿರುವ ಬಾಲಕನಿಗ ಬ್ರಾಹ್ಮಣ್ಯಕ್ಕೆ ತರುವುದು ಪುಣ್ಯದ ಕೆಲಸ, ಇಹಪರಕ್ಕೆ ಸಾಧನ, ಅದನ್ನು ಬೇಗನೇ ಮಾಡಬೇಕು, ಅಷ್ಟರವರೆಗೆ ಕಾಲವಿಳಂಬ ಮಾಡಲೇ ಬಾರದಿತ್ತು" ಎಂದು ಮಂತ್ರಾದ ಸವಿನುಡಿಗಳಿಂದ ಕಿವಿಗೆ ಒಣ ಇಂಪನ್ನು ಹುಟ್ಟಿಸುವಂತೆ ಉಪಾಧ್ಯಾಯರ ವಿಷಯದಲ್ಲಿ ಸರಕಾರದವರ ಧೋರಣವಾಗಿದೆ ಎನ್ನಬೇಕು. ಉಪಾಧ್ಯಾಯನು ಹಳ್ಳಿಯಲ್ಲಿ ಅನ್ಯದ ಅಶನಾರ್ಥಿಯಾಗಿರಬಾರದಂತೆ! ಬೋರ್ಡಿನವರು ತಮ್ಮ ನವುಕರರಿಗೆ ಅವರ ಕಾರ್ಯ ಗೌರವಕ್ಕೆ ಸರಿಯಾದ ಸಂಬಳವನ್ನು ಕೊಡ ವುದು ಯೋಗ್ಯವಂತೆ! ಬೋರ್ಡಿನವರು ಬರೀ ಬೊಕ್ಕಸದಲ್ಲಿ ಕೈಹಾಕಿದರೆ ಒಗಸೆ ನಾಣ್ಯ ತರುವ ಜಾದು ಆಟವನ್ನು ಕಲಿತಿಲ್ಲ. ಕಂದಾಯವನ್ನು ಇನ್ನೂ ಹೊರಿಸಿ ಅಗತ್ಯವಿರುವ ಸಲಹೆಗಳಿಗೆ ಏರ್ಪಾಡು ಮಾಡಿರಿ ಎನ್ನುವಾಗ ಈಗ ಸರಕಾರವು ಎತ್ತಿದ ಹಣ ದುರ್ವ್ಯಯವಾಗುವುದಿಲ್ಲ ಎಂಬದನ್ನು ಸರಕಾರದವರು ಹೇಳಬಹುದೇ? ಹಲವು ಕಾಲದಿಂದಲೂ ಬೇಸಿಗೆಕಾಲದಲ್ಲಿ ೩ ತಿಂಗಳು ಸುಖವಾಗಿ ನೀಲಗಿರಿಯಲ್ಲಿ ವಿಶ್ರಾಂತಿಸುಖವನ್ನು ಅನುಭವಿಸುವುದಕ್ಕೆ ಬಿರೊಕ್ರಸಿಯವರು ಈಗ ಎಷ್ಟು ವರ್ಷದಿಂದ ಸರಕಾರ ಹಣವನ್ನು ದುರ್ವ್ಯಯಮಾಡಿಲ್ಲ! ಸರಕಾರ ಉದ್ಯೋಗದಾರರಲ್ಲದ ಯುರೋಪಿಯನರೂ ಕೂಡಾ ಈ ಖರ್ಚನ್ನು ಹಲವು ಕಾಲದಿಂದಲೂ ಆಕ್ಷೇಪಿಸುತಲಿದ್ದಾರೆ. ಆದರೂ ಸರಕಾರ ಟೊಂಕಿಯ ಈ ತೂಬೂ ಇನ್ನೂ ಇನ್ನೂ ದೊಡ್ಡದಾಗುತ್ತ ಬರುತಿದೆ. ಇಡೀ ಜನಾಂಗದ ಏಳ್ಗೆಗೆ ಜೀವನಪ್ರಾಯವಾದ ವಿದ್ಯೆಯ ಪ್ರಚಾರಕ್ಕೆ ಆಗ್ಯವಾದ ಹಣಕ್ಕೆ ಮಾತ್ರ ಜನರು ತಾವಾಗಿ ಹೊಸ ಕಂದಾಯ ಎತ್ತಲಿ ಎಂದರೆ ಇದಾವ ನ್ಯಾಯ! ಲೋಕದಲ್ಲಿ ಎಲ್ಲಿಯೂ ಕಾಣದ ರೀತಿಯು—ದ್ರವ್ಯದ ನಿಧಿಯಾದ ಅಮೇರಿಕದಲ್ಲಿಯೂ ಕಾಣದ ರೀತಿಯು—ಎಂಬ ಕಟ್ಟ ದರಗಳು ಇಂಡಿಯನ್ ಸರ್ವೀಸಿನವರಿಗೆ ಇದ್ದರೂ ಕೂಡಾ ಸಾಕಾಗದೆ, ಇನ್ನೂ ಪಬ್ಲಿಕ ಸರ್ವಿಸ್ ಕಮ್ಮಿಶನದ ರಿಪ್ರೋರ್ಟಿನ ಮೇರೆ ಸರ್ವಿಸುಗಳಲ್ಲಿ ದ್ವಿಜರಾದ ಇವರ ಸಂಬಳದ ದರಗಳನ್ನು ಇನ್ನೂ ಹೆಚ್ಚಿಸಿದ್ದಾರೆ. ಇದಕ್ಕೆಲ್ಲ ಹಣ ಎಲ್ಲಿಂದ? ಸರಕಾರದವರು ಈ ಉಪಾಧ್ಯಾಯರ ವಿಷಯದಲ್ಲಿ ಉದಾರ ಧೋರಣವನ್ನು ಕೈಕೊಳ್ಳಬೇಕೆಂದು ನಾವು ಸೆರಗೊಡ್ಡುತ್ತೇವೆ. ಕೆಲಸಮಾಡುವವರಿಗೆ ಹೊಟ್ಟೆ ತುಂಬಾ ಉಣಿಸದೆ ಅರೆಉಪವಾಸದಲ್ಲಿ ಇಟ್ಟು ಅವರು ಸರಿಯಾಗಿ ಕೆಲಸ ಮಾಡುತ್ತಾರೊ ಎಂದು ನೋಡುವುದಕ್ಕೆ ಇರುವ ಸಿಬಂದಿಯನ್ನು ಹೆಚ್ಚಿಸಿದರೆ ಪುರುಷಾರ್ಥವೇನಾಗುವುದು? ಹೀನ ಯೋಗ್ಯತೆಯವರೇ ಹಳ್ಳಿ ಸಾಲೆಗಳ ಉಪಾಧ್ಯಾಯರಾಗಿ ಎಲು ಹೆಚ್ಚಿ ಇಡುವುದಲ್ಲದೆ ಯೋಗ್ಯರಾದವರು ಪ ಎಂದರಿಸದೆ ಇರುವುದಕ್ಕೆ ಈ ಅನುದಾರವಾದ ಸಂಬಳದ ದರಗಳೇ ಮೊದಲಿಂದಲೂ ಕಾರಣವಾಗಿವೆ. ಯುರೋಪ ಮೊದಲಾದ ದೇಶಗಳಲ್ಲಿ ಉಪಾಧ್ಯಾಯರ ಸಂಬಳಕ್ಕೂ ಸಿವಿಲ್‌ಸರ್ವಿಸಿನವರ ಸಂಬಳಕ್ಕೂ ಇರುವ ಅಂತರವು ಇಲ್ಲಿಯ ಅಂತರಕ್ಕಿಂತ ಬಹಳ ಕಡಿಮೆ. ಅಷ್ಟರಿಂದ ಅಲ್ಲಿ ಉಪಾಧ್ಯಾಯರಿಗೆ ಗೌರವವಿದೆ. ಈ ವಿಚಾರವನ್ನು ಸರಕಾರವು ಸ್ಮರಣೆಗೆ ತರುವುದು ಅತೀ ಅಗತ್ಯ.

ಮಂಗಳೂರು.

ಇಲ್ಲಿಯ ಮಹಿಳಾ ಸಭೆಯವರು ಬರುವ ಮೇ ತಾರೀಕು ೧ನೆಯ ಶನಿವಾರ ಸಾಯಂಕಾಲ ೪ ಗಂಟೆಗೆ ಸಂಗೀತ ಮೊದಲಾದುವುಗಳಿಂದ ಕೂಡಿದ ಒಂದು "ಫರ್ದಾಪಾರ್ಟಿ"ಯ ಸತ್ಕಾರವನ್ನು ಬಾವಟೆ ಕಟ್ಟೆಯಲ್ಲಿನ ತಮ್ಮ ಮಂದಿರದಲ್ಲಿ ನಡಿಸಲಿಕ್ಕಿರುವರು. ಇದಕ್ಕೆ ಉಡುಪಿಯ ನಾಮದಾರ ಖಾನ್ ಸಾಹೇಬ್ ಹಾಜಿ ಅಬ್ದುಲ್ಲಾ ಸಾಹೇಬರು, ಕಾರ್ಕಳದ ಮೆ| ಅಬ್ಬಾಸ್ ಸಾಹೇಬರು ಇಲ್ಲಿಯ ಮೆ| ಮಹಮದ್ ಪುತ್ತೂರ ಸಾಹೇಬರು ಮೆ ಕುಂಞಾಮ್ಮ ಸಾಹೇಬರೇ ಮುಂತಾದ ಮಹಮ್ಮದೀಯ ಮುಖಂಡರ ಪತ್ನಿಯವರೂ, ಸರಕಾರಿ ಮಹಮ್ಮದಿಯ ಹುಡುಗಿಯರ ಶಾಲೆಯ ಹುಡುಗಿಯರು ಮೊದಲಾದವರು ಆಮಂತ್ರಿಸಲ್ಪಟ್ಟು ಬರುವವರಿದ್ದಾರೆ. ಗೋಷಾಪದ್ಧತಿಯುಳ್ಳ ಸ್ತ್ರೀಯರು ಬರಲಿಕ್ಕಿರುವುದರಿಂದ ಈ ಸತ್ಕಾರವು ಗೋಷಾಪದ್ಧತಿಗೆ ಯೋಗ್ಯವಾದ ರೀತಿಯಲ್ಲೇ ನಡಿಸಲ್ಪಡುವುದಾಗಿ ತಿಳಿಯುತ್ತೇವೆ.

ಜಿಲ್ಲಾ ಕಲೆಕ್ಟರ ದೊರೆಗಳವರು ಕಳೆದ ತಾರೀಕು ೨೮ಕ್ಕೆ ಕುದುರೆಮುಖಕ್ಕೆ ತೆರಳಿರುವರು. ತಾ ೩೦ರ ವರೆಗೆ ಅಲ್ಲಿದ್ದು ನಂತರ ಇಲ್ಲಿಗೆ ಬರಲಿಕ್ಕಿರುವರು.

ಮುಂಬಾಯಿ ಸ್ಟೀಮ್ ನವಿಗೇಶನ್ ಕಂಪೆನಿಯ ಈ ಹೊಸ ಮಿನ ಕಡೆ ಸ್ಟೀಮರು ಮೇ ತಿಂಗಳ ತಾ ೭ಕ್ಕೆ ಮುಂಬಯಿಯಿಂದ ಬಿಡಲ್ಪಟ್ಟು ತಾ ೧೦ಕ್ಕೆ ಮಂಗಳೂರನ್ನು ಸೇರುವದು.

ಆಯುರ್ವೇದ ಭೂಷಣ ಎಮ್ ವಿ ಶಾಸ್ತ್ರಿಗಳು ಕದ್ರಿಯಲ್ಲಿ ನೂತನವಾಗಿ ಕಟ್ಟಿಸಿದ ವೈದ್ಯಶಾಲೆಯ ಪ್ರವೇಶೋತ್ಸವವು ಇದೇ ಬರುವ ತಾ ೨ನೇ ಆದಿತ್ಯವಾರ—ಸಾಯಂಕಾಲ ೪ ಗಂಟೆಗೆ ಡಿಸ್ಟ್ರಿಕ್ಟ ಜಡ್ಜರಾದ ಮ| ರಾ| ಎನ್ ನಾರಾಯಣ ನಂಬಿಯಾರ್‌ರವರ ಸಮಕ್ಷಮದಲ್ಲಿ ನೆರವೇರುವುದು. ಅಂದು ಆಯುರ್ವೇದವನ್ನು ಕುರಿತು ಹಲವು ಮಹನೀಯರು ಭಾಷಣ ಮಾಡುವರು.

ಹೊಸದುರ್ಗದಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಶ್ರೀ ವೆಂಕಟರಮಣ ದೇವಸ್ಥಾನದ ಬ್ರಹ್ಮಕಲಶ ಪ್ರತಿಷ್ಠೆಯು ಇದೇ ಬರುವ ವೈಶಾಖ ಬ ೭ಯು ಮೇ ತಾ ೧೦ನೆ ಸೋಮವಾರ ಪ್ರಾತಃಕಾಲ ಗಂಟೆ ೧೦-೪೭ಕ್ಕೆ ಶ್ರೀಮತ್ ಕಾಶೀಮಠ ಸಂಸ್ಥಾನ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರ ಹಸ್ತದಿಂದ ನೆರವೇರುವುದು.

ಪ್ರೊಸಿಕ್ಯುಟಿಂಗ್ ಇನ್ಸ್‌ಪೆಕ್ಟರ ಮ| ರಾ| ಕಾರ್ನಾಡ ನಾರಾಯಣರಾಯರು ೨ ವರುಷಗಳ 'ಫರ್ಲೋ'ರಜೆಯನ್ನು ಪಡೆದಿರುವರು. ಅವರ ಬದಲಿಗೆ ಸರ್ಕಲ ಇನ್ಸ್‌ಪೆಕ್ಟರ ಮ| ರಾ| ಮ ಲಕ್ಷ್ಮಣ ಇವರು ನೇಮಕ ಪಟ್ಟಿರುವರು.

ಡಿಸ್ಟ್ರಿಕ್ಟ ಎಸೋಸಿಯೇಶನಿನ ಸಮ್ಮೇಲನವು ಬರುವ ಮೇ ತಾ 2ನೆಯ ಆದಿತ್ಯವಾರ ಸಾಯಂಕಾಲ ಕೊಸ್ಮೊಪೊಲಿಟನ ಕ್ಲಬ್ಬಿನಲ್ಲಿ ನೆರೆಯುವುದು. ಇದರಲ್ಲಿ ಕೃಷಿಕರಿಗೆ ಕಾಡುಗಳ ಸಂಬಂಧ ಇರುವ ಸಂಕಷ್ಟಗಳನ್ನು ಪರ್ಯಾಲೋಚಿಸಿ ಇವುಗಳ ನಿವಾರಣೆಯ ಕುರಿತು ಸರಕಾರಕ್ಕೆ ಅರಿಕೆಮಾಡಿಕೊಳ್ಳಲಾಗುವುದು. ಈ ವಿಷಯಗಳನ್ನೇ ಆಲೋಚಿಸಲ ಜಿಲ್ಲಾ ಕಲೆಕ್ಟರ ದೊರೆಗಳವರು ಮೇಲಿನ ಮೀಟಿಂಗು ನಡೆದ ಮರುದಿನ ಮಧ್ಯಾಹ್ನ ೧೨ ಗಂಟೆಗೆ ಸದರಿ ಸಂಘದ ಪ್ರತಿನಿಧಿಗಳನ್ನು ತನ್ನಲ್ಲಿಗ ಬರಮಾಡಿಕೊಳ್ಳುವರು.

ಸಹಕಾರ ಸಂಘಗಳ ರಿಜಿಸ್ಟ್ರಾರರಾದ ರಾವ್ ಬಹದ್ದೂರ ವೇದಾಚಲಯ್ಯರವರು ತಾ ೧೭ಕ್ಕೆ ಬಂದು ತಲ್ಪುವ ಬದಲಿಗೆ ತಾ ೧೯ನೇ ಸಾಯಂಕಾಲ ಮೈಲ ಬಂಡಿಯಲ್ಲಿ ಇಲ್ಲಿಗೆ ಬಂದರು. ಮಾರನೆ ದಿನ ಬೆಳಿಗ್ಗೆ ಕೋಒಪರೇಟಿವ್ ಸ್ಟೋರ್ ಮತ್ತು ಕೆಥೊಲಿಕ್ ಕೂಒಪರೇಟಿವ್ ಸ್ಟೋರನ್ನು ಸಂದರ್ಶಿಸಿ ತಾ ೨೦ನೇ ಮಧ್ಯಾಹ್ನದ ಮೋಟಾರಿನಲ್ಲಿ ಉಡುಪಿ ಕುಂದಾಪುರತ್ತ ಕಡೆ ಸರ್ಕೀಟು ಬೆಳಸಿರುತ್ತಾರ. ಆ ದಿನ ಮಧ್ಯಾಹ್ನ ಇಲ್ಲಿಗೆ ತಲ್ಪಿ ನಾಳೆಯ ಮಧ್ಯಾಹ್ನದ ... ಮೋಟಾರ ಬಂಡಿಯಲ್ಲಿ ಪುತ್ತೂರಿಗೆ ತೆರಳುವರು.

ಪುತ್ತೂರು ವಕೀಲರಾಗಿದ ಮ| ರಾ| ರಾ| ವೇಣುಗೋಪಾಲಕೃಷ್ಣ ... ಪರಸ್ಪರ ಸಹಾಯಕ ಸಂಘಗಳ ಒನರರಿ ಅಸಿಸ್ಟೆಂಟ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವರು.

ಕೆನರಾ ಬೆಂಕಿನ ಸೆಕ್ರೆಟರಿಗಳಾದ ಮ| ರಾ| ರಾ| ಪಾಂಗಾಳ ಗೋಪಾಲ ನಾಯ್ಕ ರವರು ರಜೆತೆಕ್ಕೊಳ್ಳುತ್ತಿರವುದರಿಂದ ಇವರ ಬದಲಿಗೆ ಸಕ್ರೆಟರಿಗಳಾಗಿ ಬೆಂಕಿನ ಡಿರೆಕ್ಟರರಾದ ಮ| ರಾ| ರಾ| ಕಾಸರಗೋಡ ವೆಂಕಟರಾವ್‌ರವರು ನೇಮಿಸಲ್ಪಟ್ಟಿರುವರು.

ಉಡುಪಿಯಲ್ಲಿ ಸ್ಥಾಪಿಸೋಣಾಗುವ ದಿ ಪಾಂಗಳ ನಾಯಕ್ ಬೆಂಕಿನ ಮುಹೂರ್ತವು ಇದೇ ತಿಂಗಳ ತಾ ೩ನೇ ಆದಿತ್ಯವಾರ ಜರಗುವುದೆಂತಲೂ ತಿಳಿಯುತ್ತೇವೆ.

ಘಜನಿಯ ಮಹಮ್ಮದನು.

ಭಾಮಿನಿ ।

ಪ ರವಗುರ್ಜರ ದೇಶದೊಳಗಿಹ । ನಿರುಪ ಸೊಂಪಿನ ಸೋಮನಾಥನ ।
ತಿರವನೊಡೆದಾ ಧರ್ತ ಘಜನಿಯ ಪೊಡೆಯಮಹಮೂದ ॥
ಬರಲು ನಾಡಿಯ ನ ವಿಗ್ರ ಅವನ। ತರಿಸಿದನು ತಾ ಕೊಳ್ಳೆಹೊಡೆದಿಹ ।
ಪರರ ಧನಕನಕ ನಗರತ್ನದ ರಾಶಿಯನು ನೋಡಿ ॥ ೧ ॥

ಕಂಡು ದಾನ ಧಿಯನ್ನ ಕಂಗಳು । ಕೊಂಡುಪೋಗಲು ಬಾರಲಾರವು ।
ಕಂಡವರ ಪಾಲಾಗಿ ಪೋಗುವುವರಟ ವಿಧಿಯಿಂದ ॥
ಉಂಡುಪಡೆದರ ಸುಖವನ್ನರು ದಂಡವಾಯ್ತು ಎನ್ನ ಕಷ್ಟವು ॥
ಭಂಡನಾದೆನ ಅಕಟಕಟಾ ಯೆನು ತ ಸತ್ತನವ ॥ ೨ ॥

ಬಂದವನ ನೀರಾಗಸಲ್ಪನ । ರಿಂದ ಘಾಡಕ ಹಿಂದುಸ್ಥಾನಕೆ ।
ಹಿಂದುದೇಗುಲಗಳನು ಸ ಲಿಯುತಲೊಡೆದ ವಿಗ್ರಹವ ॥
ಅಂದಗೆಡಿಸ ತ ತಂದಬಡತನ । ವಂದು ಸಿರಿಸಂಪತ್ತಿನೊಳೆಮರೆ ।
ದಿಂದ್ರಲೋಕದ ತೆರದೊಳಿದ್ದಿಹ ನವ ದೇಶದೊಳು ॥ ೩ ॥

ಭಾರಿಯಿಯ ತ ಸೋವ ನಾಥನ । ಚಾರುಕೀರ್ತಿಯು ಅವನ ಕಿವಿಯನು ।
ಸೇರೆ ದೇಗುಲವದನ ಸ ಲಿಯುವೆ ಬಿಡೆನುತಂನೆನುತ ॥
ದೂರವನು ಲಕ್ಷಿಸದೆ ಬಂದವ ನೂರುಗಟ್ಟಿಯ ಪಹರೆಯವರನು ।
ಸೀಂಸುಕ ಯ ಮುಪುರಕ್ಕೆ ನಡೆದನು ಗರ್ಭಗುಡಿಯೊಳಗೆ ॥ ೪ ॥

ಗಡಗಡನೆ ನಡುಗ ತಲೆಯರ್ಚಕ । ಬಿಡಲುಬೇಕ್ಕೆ ಸೋಮನಾಥನ ।
ಕೊಡುವೆ ಬದಲಿಗೆ ರಾಶಿ ಧನಕನಕ ನವರತ್ನಗಳ ॥
ಒಡೆಯಬೇಡನವಗೇನು ಸಿಕ್ಕುವು । ದೊಡೆಯನೊಬ್ಬನೆ ರಾಜಸಾಕ್ಷಿರ ।
ಪ್ರೈತೆಯನೆವ ಗಿವ ನಿನಗೆ ಅಲ್ಲನು ಪೊಡೆಯನೆಂಬಂತೆ ॥ ೫ ॥

ಬೇಡುತಿಹ ಅರ್ಚಕಗೆ ಪೇಳ್ದನು । ಬೇಡನಾವಿಗ್ರಹವ ಮಾರೆನು ।
ನೋಡ ವಿಗ್ರಹಗಳನು ಒಡೆವವನೆಂಬ ಬಿರುದಿರುತ ॥
ಮಾಡೆನಾ ಕೆಲಸವನ ಯೆ ನಲವ । ಕೇಡ ಬರುವುದು ಎನಲು ಅರ್ಚಕ ।
ನೋಡುವನು ನಾನೆನುತಲೊಡೆದನು ಹೊಡೆದು ಬಲಗಯಲಿ ॥ ೬ ॥

ಸಿಡಿದ ಚೆಲ್ಲಲು ಸೋಮನಾಥನ । ಉದರದಿ ಶಿರದಿಂ ಲೆಕ್ಕವಿಲ್ಲದ ।
ವರವಿರಾಜಿತ ಮುತ್ತು ಮಾಣಿಕ ವಜ್ರ ವೈಡೂರ್ಯ ॥
ತರತರದ ನವರತ್ನ ಬೀಳಲು । ಮರುಳನಾದನು ಹರುಷದಿಂದಲಿ ।
ಹೊರಿಸಿದನು ದೇಗುಲದ ಬಾಗಿಲ ಸಹಿತಯೆಲ್ಲವನು ॥ ೭ ॥

ಇವನ ಪರಿಯನು ಸಾರಿಯೆಂಬುತ । ಕವಿವರನು ಬರೆದಿಹನದೆಂತೆನೆ ।
ಇವನ ಅಂಗಗಳೆಲ್ಲ ಮಣ್ಣನು ಸೇರಗೋರಿಯೊಳು ॥
ಇವನ ಕಣ್ಣುಗಳೆರಡು ಮಾತ್ರವೆ । ಇವನು ಕೂಡಿಸಿಟ್ಟ ಧನವನು ।
ಎವೆಯು ಹಾಕದೆ ನೋಡುತಿದ್ದುವು ಕೃಪಣ ದೃಷ್ಟಿಯಲಿ ॥

Moodabidri. S. R Kordcal

[illegible]

ವಿದ್ಯಾ ಇಲಾಖೆ— [illegible]

ವೈದ್ಯ ಇಲಾಖೆ— [illegible]

ಆರೋಗ್ಯ ಇಲಾಖೆ— [illegible]

ಸಹಕಾರಿ ಇಲಾಖೆ— [illegible]

ಪಬ್ಲಿಕ್‌ವರ್ಕ್ಸ್ ಇಲಾಖೆ— [illegible]

ಹುಟ್ಟಿದ ಮಕ್ಕಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವುದು.

[illegible]

೩. ಮಗುವಿಗೆ ಸ್ನಾನಮಾಡಿಸುವುದಕ್ಕೆ ಮುಂಚೆ ಸ್ವಲ್ಪ ಎಣ್ಣೆಯನ್ನು ಹಾಕಬೇಕು. ಇದರಿಂದ ಕೊಳೆ ಬೇಗ ಬಿಡುವದು, ಅದನ್ನು (ಮಗುವಿನ) ಹಾಗೆ ತೀರಾ ತಿಕ್ಕುವುದು ಅನಾವಶ್ಯಕವಾಗುವದು. ಮಕ್ಕಳ ಮೈಮೇಲೆ ಬಂದವು ಕಾಣುವಂತೆ ಮಕ್ಕಳನ್ನು ಉಜ್ಜುವುದನ್ನು ನಾನು ನೋಡಿದ್ದೇನೆ. ಆದರೂ ಮಲಿನತ್ವವು ಹೋಗಿರುತ್ತಿರಲಿಲ್ಲ. ಸ್ವಲ್ಪ ಎಣ್ಣೆಯನ್ನು ಉಪಯೋಗಿಸಿದ್ದರೆ ಮಲಿನತ್ವವು ಒಂದು ನಿಮಿಷಮಾತ್ರದಲ್ಲಿ ತೆರೆಗೆ ಹೋಗುತಿತ್ತು. ನೀರನ್ನು ಅತಿ ಬಿಸಿಯಾಗಿಯಾಗಲಿ, ತಣ್ಣಗಾಗಲಿ, ವಿಶೇಷವಾಗಾಗಲಿ ಹಾಕಬಾರದು.

೪. ಮಗುವಿನ ಕಣ್ಣುಗಳನ್ನೂ, ಬಾಯಿಯನ್ನೂ, ಶುಚಿಯಾದ ಹತ್ತಿಯಿಂದ ನೀರಿನಿಂದ ತೊಳೆಯಬೇಕು. ಮಕ್ಕಳುಗಳ ಕಣ್ಣುಗಳನ್ನು ಅವು ಹುಟ್ಟಿದ ಒಡನೆಯೇ ನೋಡಿ ಕೊಳ್ಳುತ್ತಿದ್ದರೆ, ಪ್ರಪಂಚದಲ್ಲಿ ಅರ್ಧಕರುಡ ಜನರು ಕಡಿಮೆಯಾಗುತ್ತಿದ್ದರೆಂದು ವಾಡಿಕೆಯಾಗಿ ಹೇಳುವುದುಂಟು. ತೊಲಗಿತ್ತಿಯು ಮಗುವಿನ ಕಣ್ಣುಗಳನ್ನು ತೊಳೆದು ಶುಚಿಮಾಡಿಸುವ ವಿಷಯದಲ್ಲಿ ನೀವು ದೃಢವಾಗಿರಬೇಕು. ಹತ್ತಿರದಲ್ಲಿ ಡಾಕ್ಟರು ಇದ್ದರೆ ಅವರಿಗೂ ಸಹ ಹೇಳಿ ಇದಕ್ಕೆ ಗಮನಕೊಡುವಂತೆ ಮಾಡಬೇಕು. ಯಾವ ವ್ಯಾಧಿಯು ಬಾರದಂತೆ ಮಕ್ಕಳ ಕಣ್ಣಿಗೆ ಒಂದು ಸಣ್ಣ ತೊಟ್ಟು ಸಿಲ್ವರ್‌ನೈಟ್ರೇಟ್ ಅಥವಾ ಆರ್‌ಗಿರಾಲ್ ಹಾಕಬೇಕೆಂದು ಅಮೇರಿಕಾ ಖಂಡದಲ್ಲಿ ಸರಕಾರದ ವಿಧಾಯಕವಿರುತ್ತದೆ. ಅಲ್ಲಿರುವ ತೊಲಗಿತ್ತಿಯರೂ, ಡಾಕ್ಟರುಗಳೂ ಇದನ್ನು ಅನುಸರಿಸಿಕೊಂಡು ನಡೆಯುತ್ತಾರೆ. ಇದು ೧೦೦ರಲ್ಲಿ ೯೯ ಕೇಸುಗಳಿಗೆ ಅನಾವಶ್ಯಕವಾಗಿದ್ದರೂ ೧೦೦ ನೇ ಮಗುವನ್ನು ಕುರುಡುತನದಿಂದ ಹೋಗಲಾಡಿಸುವುದರಿಂದ ಈ ವಿಧಾಯಕವು ಒಳ್ಳೆಯದಾಗಿ ತೋರುವುದಿಲ್ಲವೇ?

೫. ಇದನ್ನು ಉದಾಸೀನಮಾಡಿದರೂ, ಮಗುವಿನ ಕಣ್ಣುಗಳೇನಾದರೂ ಕೆಂಪಗಾಗಿದ್ದರೆ ಅಥವಾ ಊದಿದ್ದರೆ ಅವುಗಳನ್ನು ಡಾಕ್ಟರಿಗೆ ತೋರಿಸಿ ತಕ್ಷಣ ಚಿಕಿತ್ಸೆ ಮಾಡಿಸಬೇಕು. ಕೆಲವು ದಿವಸಗಳ ಕಾಲಾವಕಾಶವಾದರೆ ಅದರಿಂದ ಬಹಳ ಕೆಡಕಾಗಬಹುದು. ಆಗ ಬಹಳ ಪ್ರಸಿದ್ಧ ಡಾಕ್ಟರಾಗಿದ್ದರೂ ಕುರುಡುತನವನ್ನು ತಪ್ಪಿಸಲಾರರು. ಈ ತಿಳುವಳಿಕೆಯನ್ನು ಸರ್ವರು ಅವಶ್ಯಕವಾಗಿ ತಿಳಿದುಕೊಳ್ಳಬೇಕು. ತಮ್ಮ ಮಗುವಿಗೆ ದೃಷ್ಟಿ ನಾಯಾಗಬೇಕೆಂದು ತಂದೆತಾಯಿಗಳ ನಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ರಾತ್ರಿಹಗಲು ಶ್ರಮಪಟ್ಟು ಕೆಲವು ಸ್ವಲ್ಪದಿನಗಳು ನಾವಕಾಶ ಮಾಡಿದ್ದಕ್ಕೆ ತಮ್ಮ ಮಗುವಿಗೆ ಕಣ್ಣು ಹೋಯಿತೆಂದು ದುಃಖಿಸುವರು. ಪ್ರಾರಂಭದಲ್ಲಿ ಸ್ವಲ್ಪ ಚಿಕಿತ್ಸೆಯನ್ನು ಡಾಕ್ಟರಿಂದ ಮಾಡಿಸಿದ್ದರೆ, ಕುರುಡುತನ ಸಂಪೂರ್ಣವಾಗಿ ಹೋಗುತ್ತಿತ್ತು. ಮುಂಬಾಯಿ ಅಧಿಪತ್ಯದಲ್ಲಿ ಕಲೆಕ್ಟರಾಗಿರುವ ಮಿ॥ ಜಿ.ಡಿ. ಹೆಂಡರಸನ್‌ರವರು "ಬ್ಲ್ಯಾಂಡ್ ರಿಲೀಫ್ ಎಸೋಸಿಯೇಶನ್" ಎಂಬ ಒಂದು ಸಂಘವನ್ನು ಸ್ಥಾಪಿಸಿರುವುದನ್ನು ಕೇಳಿ ನನಗೆ ಸಂತೋಷವಾಯಿತು. ಒಂದು ಪಟ್ಟಣದಲ್ಲಿ ಮಗುವು ಹುಟ್ಟಿದ ಕೂಡಲೆ ಈ ಸಂಘದವರು ಒಬ್ಬ ತರಬೇತಾದ ಮನುಷ್ಯನನ್ನು ಕಳುಹಿಸಿ ಮಗುವಿನ ಕಣ್ಣನ್ನು ಪರೀಕ್ಷಿಸಿ ಚಿಕಿತ್ಸೆಮಾಡಿಸುವರು.

೬. ಆಹಾರ— ತನ್ನ ತಾಯಿಯ ಹಾಲನ್ನು ಕುಡಿಯುವುದಕ್ಕೆ ಮುಂಚೆ ಮಗುವಿಗೆ ಯಾವ ಆಹಾರವೂ, ಔಷಧಿಯೂ ಬೇಕಾಗಿರುವುದಿಲ್ಲ. ಅದರ ಸಾಧಾರಣ ಸ್ಥಿತಿಯಲ್ಲಿ ಅದರ ಶಕ್ತಿಯೇ ಸಾಕಾಗಿರುವುದು. ಹುಟ್ಟಿದ ಆರು ಗಂಟೆಯಾದ ಮೇಲೆ ಕ್ರಮವಾಗಿ ಮಗುವಿಗೆ ಎದೆಹಾಲನ್ನು ಕುಡಿಸಬೇಕು. ಮೊದಲನೇ ಸಲ ಕುಡಿಸುವ ಹಾಲೇ ಭೇದಿಯನ್ನುಂಟು ಮಾಡುವುದು. ಭೇದಿಗೆ ಹಾಕುವ ಹರಳೆಣ್ಣೆಗಿಂತಲೂ ಇದು ಅತ್ಯುತ್ತಮವಾದದ್ದು. ಮೊಟ್ಟಮೊದಲು ಬರುವ ಹಾಲನ್ನು ಮಗುವು ಬೇಸಿ ಕೊಂಡರೆ, ತರುವಾಯ ಸಾಧಾರಣವಾದ ಹಾಲು ಜಾಗ್ರತೆಯಾಗಿ ಬರುತ್ತದೆ, ಮೂರನೆ ದಿನದವರೆವಿಗೂ ಮಗುವಿಗೆ ತೃಪ್ತಿಯಾಗದೆ ಹೋದರೂ ಅದೇನೂ ಬಾಧಕವಿಲ್ಲ. ಇದರಿಂದ ಮಗುವಿನ ಹೊಟ್ಟೆಯು ಶುದ್ಧಿಯಾಗಿ ಅದು ಕುಡಿದ ಹಾಲನ್ನು ಅಂಗೀಕರಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದು. ಹುಟ್ಟಿದ ಒಂದೆರಡು ದಿನಗಳಲ್ಲಿ ಹಸುವಿನ ಹಾಲು ಕುಡಿಸಿ ಭೇದಿಗೆ ಹರಳೆಣ್ಣೆಯನ್ನು ಹಾಕಿ ಅದರ ಹೊಟ್ಟೆಯನ್ನು ಕೆಡಿಸುವುದಕ್ಕಿಂತಲೂ ಮೊದಲು ಸ್ವಲ್ಪ ಹಸಿವೆಯಾಗಿ ತರುವಾಯ ತನ್ನ ತಾಯಿಯ ಹಾಲನ್ನು ಮಗುವು ಕುಡಿಯುವುದು ಸಾವಿರ ಪಾಲು ಮೇಲೆಂದು ತಿಳಿಯಬೇಕು. ಆಹಾರವನ್ನೇ ಆಗಲಿ, ಔಷಧಿಯನ್ನೇ ಆಗಲಿ, ಕೊಡದೆ ಸ್ವಾಭಾವಿಕವಾಗಿ ಮಗುವು ತನ್ನ ತಾಯಿಯ ಹಾಲನ್ನೇ ಕುಡಿಯುವಂತೆ ಇಡಬೇಕು. ಈ ಪ್ರಕಾರದಲ್ಲಿದ್ದರೆ ಮಗುವು ಮೂರನೇ ದಿವಸದವರೆವಿಗೂ ತಾನು ಕುಡಿದದ್ದನ್ನು ಅರಗಿಸಿಕೊಳ್ಳುತ್ತದೆ. ಮೊಟ್ಟಮೊದಲು ತಾಯಿಯ ಹಾಲನ್ನು ಕುಡಿಯುವುದರಿಂದಲೇ ಮಗುವು ಹುಟ್ಟಿದ ಎರಡು ದಿವಸಗಳಲ್ಲಿ ತಪ್ಪದೆ ಹೊರಕಡೆಗೆ ಹೋಗುತ್ತದೆ. ಹೀಗೆ ಹೊರಕಡೆಗೆ ಹೋಗುವುದು ಭೇದಿಗೆ ಹಾಕುವ ಹರಳೆಣ್ಣೆಯಿಂದಲ್ಲ.

೭. ಆರೋಗ್ಯ ಸ್ಥಿತಿಯಲ್ಲಿರತಕ್ಕ ಮಗುವು ೨೪ ಗಂಟೆಯಲ್ಲಿ ೨೨ ಗಂಟೆ ಕಾಲವು ಮಲಗಬೇಕು, ಹಗಲಲ್ಲಿ ೩ ಗಂಟೆಗೆ ಒಂದಾವರ್ತಿ ಎದೆಹಾಲು ಕುಡಿಸಬೇಕು, ರಾತ್ರಿವೇಳೆಯಲ್ಲಿ ೪ ಗಂಟೆಗೆ ಒಂದಾವರ್ತಿ ಕುಡಿಯಬೇಕು, ಮೊದಲು ಹತ್ತು ದಿನಗಳಲ್ಲಿ ಪ್ರತಿ ದಿನದಲ್ಲಿಯೂ ೨ ಅಥವಾ ೪ ಸಾರಿ ಹೊರಕಡೆಗೆ ಹೋಗಬೇಕು,

ಮಾಡಬೇಕಾದ ವಿಷಯಗಳು.

೧. ಮಗುವಿಗೆ ಹೊದಿಕೆಯ ಇರಬಾರದು. ಗಾಳಿಗೆ ಬಿಡಬಾರದು.
೨. ಮಗುವಿಗೆ ನೀರು ಹಾಕುವಾಗ್ಗೆ ಬಿಸಿನೀರನ್ನು ಮುಳುಗಿಸುವ ಹಾಗೆ ಹೆಚ್ಚಾಗಿ ಹೊಯ್ಯಬಾರದು.
೩. ಹೊಕ್ಕಳನಾಳದ ಮೇಲೆ ಮಣ್ಣು ಮುಂತಾದ್ದನ್ನು ಹಾಕಬಾರದು.
೪. ಮಗುವಿನ ಕಣ್ಣುಗಳ ವಿಷಯದಲ್ಲಿ ಉದಾಸೀನವಾಗಿರಬಾರದು.
೫. ಮಗುವಿಗೆ ಭೇದಿಗೆ ಹರಳೆಣ್ಣೆ ಹಾಕಬಾರದು; ಹಸುವಿನ ಹಾಲನ್ನು ಕುಡಿಸಬಾರದು; ತಾಯಿಯ ಹಾಲು ಬರುವವರೆವಿಗೂ ಕಾಯಬೇಕು.
೬. ಮಗುವು ಅತ್ತಾಗಲೆಲ್ಲಾ ಹಾಲು ಕುಡಿಸಬಾರದು, ಅದಕ್ಕೆ ಕ್ರಮವಾದ ಕಾಲದಲ್ಲಿ ಕುಡಿಸಬೇಕು

(ಪಬ್ಲಿಸಿಟಿ ಬ್ಯುರೊ).

ಪಂಚಾಂಗ ವಿಮರ್ಶೆ.

ವೈಜಯಂತೀ ಪಂಚಾಂಗವು.

ಸಂಪಾದಕ— [illegible]

[illegible]

೧. ಹಳೆಯ ಪದ್ಧತಿಯಿಂದ ಮಾಡಿದ ಪಂಚಾಂಗದೊಳಗಿನ ಗ್ರಹಣದ ಸ್ಪರ್ಶ, ಮೋಕ್ಷಕಾಲಗಳು [illegible] ಒಂದೆರಡು ಘಳಿಗೆಯ ವರೆಗೆ ತಪ್ಪುವವು. ಆದರೆ ವೈಜಯಂತೀ ಪಂಚಾಂಗದೊಳಗಿನ ವೇಳೆಯು ಸರಿಯಾಗಿ ದೃಗ್ಗೋಚರಕ್ಕೆ ಬರುವುದು. ಇದಕ್ಕೆ ಸರಿಯಾದ ಉದಾಹರಣೆಯೆಂದರೆ ಕಳೆದ ಕಾರ್ತಿಕ ಮಾಸದ ಶುಕ್ಲ [illegible] ದಿವಸ ಆದ ಚಂದ್ರ ಗ್ರಹಣವು. ಅದು ಗ್ರಸ್ತಾಸ್ತವಾಗುವುದೆಂದು ಹಳೆಯ ಪದ್ಧತಿಯಿಂದ ಮಾಡಿದ ಪಂಚಾಂಗಗಳಲ್ಲಿ ಬರೆದಿತ್ತು. ಆದರೆ ವೈಜಯಂತೀ ಪಂಚಾಂಗದಲ್ಲಿ ಕೊಟ್ಟ ವೇಳೆಗೆ ಸರಿಯಾಗಿ ಮೋಕ್ಷವಾದ್ದನ್ನು ನಾವು ಪ್ರತ್ಯಕ್ಷವಾಗಿ ನೋಡಿರುವೆವು.

೨. ಗ್ರಹರ ಉದಯಾಸ್ತಗಳು— ಈ ಪಂಚಾಂಗದಲ್ಲಿ ಕೊಟ್ಟ ಉದಯಾಸ್ತಗಳ ಕಾಲ— ಇತರ ಪಂಚಾಂಗದಲ್ಲಿಯ ಕಾಲ ಇವುಗಳ ಮಧ್ಯದ ವ್ಯತ್ಯಾಸವು ೩೪ ದಿನಗಳ ವರೆಗೂ ಬರುವುದು. ಇದರಿಂದ ಮೌಂಜೀ ಬಂಧನ, ವಿವಾಹ ಮುಂತಾದ ಮಂಗಲ ಕಾರ್ಯಗಳು ಶುಕ್ರಾಸ್ತದಲ್ಲಿ ಆಗುವವು. ಉದಯವಾಗಿದ್ದರೂ ಅಸ್ತವಿರುವುದೆಂದು ತಿಳಿದು ಕಾರ್ಯಗಳನ್ನು ಮಾಡಲಿಕ್ಕಿಲ್ಲ. ಈ ರೀತಿಯ ಅಶಂಬದ್ಧತೆಯು ಈ ವೈಜಯಂತೀ ಪಂಚಾಂಗದಲ್ಲಿ ಕೊಟ್ಟ ಕಾಲಗಳಿಂದ ಆಗುವ ಸಂಭವವಿರುವುದಿಲ್ಲ.

೩. ತಿಥಿ ನಕ್ಷತ್ರಗಳ ಸಮಾಪ್ತಿ ಕಾಲದಲ್ಲಿ ಈ ಪಂಚಾಂಗಕ್ಕೂ ಇತರ ಪಂಚಾಂಗಕ್ಕೂ (ಅಷ್ಟಮಿಯ ಸಮಯದಲ್ಲಿ) ಹತ್ತು ಹದಿನೈದು ಘಳಿಗೆಗಳ ಅಂತರವು ಬರುವುದು. ಈ ಮೂಲಕ ಏಕಾದಶೀ, ಗೋಕುಲಾಷ್ಟಮಿ, ರಾಮನವಮಿ, ಶ್ರೀ ನಾಂವತ್ಸರಿಕ ಶ್ರಾದ್ಧ ಮೊದಲಾದ ಧಾರ್ಮಿಕ ಕೃತ್ಯಗಳು ತಪ್ಪು ಕಾಲದಲ್ಲಿಯೆ ಆಗುವ ಸಂಭವವಿರುವುದು. ಆದರೆ ಈ ವೈಜಯಂತೀ ಪಂಚಾಂಗದಲ್ಲಿಯ ಕಾಲದಂತೆ ನಡೆದರೆ ಮೇಲಿನ ತೊಂದರೆಯು ಒದಗಲಾರದು.

೪. ವಸಂತರ ಎಡಿಸನ್ ತಾರೀಕಿಗೆ ಉತ್ತರಾಯಣವು ಪ್ರಾರಂಭವಾಗುತ್ತದೆಂಬೀ ಮಾತು ಆಕಾಶದ ಕಡೆಗೆ ನೋಡುವ ಸಣ್ಣ ಹುಡುಗರಿಗೂ ತಿಳಿಯದೆ ಇರಲಾರದು. ಹೀಗಿದ್ದರೂ ನಾವು ಸುಮಾರು ಜನವರಿ ೧೪ನೇಯ ತಾರೀಕಿಗೆ ಉತ್ತರಾಯಣ ಪ್ರಾರಂಭವೆಂದು ಕಲ್ಪಿಸುತ್ತೇವೆ. ಇದಕ್ಕಿಂತ ಅಜ್ಞತೆಯೆಂದರೆ ಅದು ಎಂಥದಿರಬೇಕು?

೫. ಗ್ರಹರ ಸ್ಪಷ್ಟಗತಿಯಲ್ಲಿ ಎಂದರೆ ಸ್ಫುಟದಲ್ಲಿ ಈ ಪಂಚಾಂಗಕ್ಕೂ ಇತರ ಪಂಚಾಂಗಕ್ಕೂ ಎರಡು ಮೂರು ಭಾಗಗಳ ಅಂತರವು ಕಾಣುವುದು. ಬುಧ ಶುಕ್ರರ ಸ್ಫುಟಗಳಲ್ಲಂತೂ ಎಳೆಂಟು ಅಂಶಗಳ ವ್ಯತ್ಯಾಸವು ಇರುತ್ತದೆ. ಅದರಿಂದ ಗ್ರಹಗಳ ಯುತಿ ಕಾಲವು ಇತರ ಪಂಚಾಂಗಗಳಲ್ಲಿ ಪ್ರತ್ಯಕ್ಷ ನಿದರ್ಶನಕ್ಕೆ ಸರಿಬಾರದೆ ತಪ್ಪುತ್ತದೆ.

ಈ ಎಲ್ಲ ಸಂಗತಿಗಳ ಬಗ್ಗೆ ವಿಚಾರಮಾಡಿ ನೋಡಿದರೆ ಸಧ್ಯಕ್ಕೆ ನಮಗೆ ದೃಕ್ಪ್ರತ್ಯಯಕ್ಕೆ ಸರಿ ಬರುವ ಪಂಚಾಂಗದ ಆವಶ್ಯಕತೆಯು ಇರುವುದೆಂದು ಸ್ಪಷ್ಟವಾಗುತ್ತದೆ. ವೈಜಯಂತೀ ಪಂಚಾಂಗದಲ್ಲಿ ಕೊಟ್ಟ ಗಣಿತದ ಬಗ್ಗೆ ನಾವು ಪ್ರತ್ಯಕ್ಷ ಯಂತ್ರಗಳ ಸಹಾಯದಿಂದ ಅನುಭವವನ್ನು ತೆಗೆದುಕೊಂಡಿರುತ್ತೇವೆ. ಮಹಾಶಯ ಶಂಕರಬೋಯಿಸ ಇವರು ಬಹಳ ಶ್ರಮಪಟ್ಟು ಈ ದೃಕ್ಸಿದ್ಧ ಪಂಚಾಂಗವನ್ನು ಪ್ರಚಾರ ಮಾಡಿದ್ದಕ್ಕಾಗಿ ಅವರ ಉಪಕಾರ ಸ್ಮರಣೆಯನ್ನು ಕನ್ನಡಿಗರು ಮಾಡಿದರೂ ಅದು ಕಡಿಮೆ ಸರಿ.

ಮೇಲೆ ಬರೆದ ಇಷ್ಟು ವಿಷಯಗಳನ್ನೊಳಗೊಂಡಿರುವುದಲ್ಲದೆ ಸಂಪಾದಕರು ಜ್ಯೋತಿ ಶಾಸ್ತ್ರದ ಇತಿಹಾಸವನ್ನು ಸಂಕ್ಷೇಪವಾಗಿ ತಿಳಿಸುವ ಚಿಕ್ಕ ಪ್ರಸ್ತಾವನೆಯನ್ನು ಪಂಚಾಂಗಕ್ಕೆ ಜೋಡಿಸಿರುವರು. ಪ್ರತಿ ಪೂರ್ಣಿಮಾ ಅಮಾವಾಸ್ಯೆಗಳಲ್ಲಿ ಗ್ರಹಗಳ ಸ್ಫುಟ, ದಿನಗತಿಗಳನ್ನು ಕೊಟ್ಟಿರುವುದಲ್ಲದೆ ಗ್ರಹಗಳ ದಕ್ಷಿಣೋತ್ತರ ಶರಗಳನ್ನೂ ಕೂಡ ಕೊಟ್ಟಿರುವರು. ಕಟ್ಟ ಕಡೆಗೆ ಕನ್ನಡ ಬಾಂಧವರಿಗೆ ವಿನಂತಿ ಮಾಡಿಕೊಳ್ಳುವದೇನೆಂದರೆ— ಮೂರು ಆಣೆ ಬೆಲೆಗೆ ಸಿಗುವ ಈ ಪಂಚಾಂಗವನ್ನು ತೆಗೆದುಕೊಂಡು ಇದರಲ್ಲಿಯ ಪ್ರತಿಯೊಂದು ಗಣಿತವನ್ನು ಪರೀಕ್ಷಿಸಿ ಇದಕ್ಕಿಂತಲೂ ಸರಸ ತರದ ಪಂಚಾಂಗವು ಆಗುವ ವರೆಗೆ ಇದನ್ನೆ ಉಪಯೋಗಿಸಿ ಸಂಪಾದಕರ ಶ್ರಮ ಸಾಫಲ್ಯವನ್ನು ಮಾಡಬೇಕು. ಆ ಮೂಲಕ ಇದರಲ್ಲಿ ಮತ್ತ ಹೊಸ ಸುಧಾರಣೆಯನ್ನು ಮಾಡಲಿಕ್ಕೆ ಸಂಪಾದಕರಿಗೆ ಉತ್ತೇಜನ ದೊರೆತಂತಾಗುವುದು.

ಪೌಷ ಶುದ್ಧ ಪ್ರತಿಪತ್,
ಶಕೆ ೧೮೪೧.

ನರಹರ ವೆಂಕಟೇಶ ಕೊಲ್ಹಟಕರ' ಬಿ. ಎಸ್ಸಿ.
ಜ್ಯೋತಿಶ್ಶಾಸ್ತ್ರಾಧ್ಯಾಪಕ ಟ್ರೇನಿಂಗ್,
ಕಾಲೇಜ, ಧಾರವಾಡ.

LOST.

On Thursday (22-4-'20) on my arrival at the Mangalore Station I entrusted a tan coloured leatherette Case containing medicines, to a boy on the platform to be carried out. On my coming out shortly afterwards I could find neither the boy, nor the box. It may probably have been mixed up with the luggage of other passengers. Anybody returning the same to me or giving information concerning same, will be amply rewarded.

Dr. James Herbert,
Clement Cottage, Mangalore.

Just arrived! *Just arrived!*

WANTED.

Agents & Canvassers.

To sell our Waaning Tilly

GENUINE HAARLEM OIL.

We have secured the Sole Agency for the whole of British India to import the Genuine Haarlem oil direct from the manufacturers.

BOOK YOUR ORDER

~~ONLY LIMITED STOCK JUST ARRIVED!~~

ಬೇಕು!

ನಾವು ಹೊಲ್ಲೆಂಡ್ ದೇಶದ ಹಾರ್ಲೆಮ್ ಪಟ್ಟಣದಲ್ಲಿ ವೇನಿಂಗ್ ಟಿಲ್ಲಿ ಬ್ರದರ್ಸ್ ಕಂಪೆನಿಯವರು ತಯಾರಿಸುವ ಲೋಕಪ್ರಸಿದ್ಧವಾದ

ಜೆನ್‌ವಿನ್ ಹಾರ್ಲೆಮ್ ಆಯಿಲ್.

ಎಂಬ ಔಷಧಿಯ ಬ್ರಿಟಿಷ್ ಹಿಂದೂಸ್ಥಾನಕ್ಕೆಲ್ಲಾ ಏಜಂಟರಾಗಿ ನೇಮಿಸಲ್ಪಟ್ಟಿರುತ್ತೇವೆ. ಈ ಔಷಧಿಯ ಕೆಲವು ಸೀಸೆಗಳು ಮಾತ್ರ ನಮಗೆ ಬಂದಿರುವದರಿಂದ ಬೇಗನೇ ನಿಮ್ಮ ಆರ್ಡರುಗಳನ್ನು ಕೊಡಿರಿ! ಎಲ್ಲೆಲ್ಲಿಯೂ ಏಜಂಟರು ಬೇಕು.

ವಿಳಾಸ:—ಎಸ್. ಇ. ಐಮನ್.

ದಿ. ಎಕ್ಲಿಪ್ಸ್ ಏಜನ್ಸಿ, ಬಲ್ಮಠ ರಸ್ತೆ.

ಮಂಗಳೂರು.

THE ECLIPSE AGENCY,

MANGALORE.

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ — ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು. ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧ ಗಳು ಗೊತ್ತಾಗುವವು. — ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು. ವಿಳಾಸವನ್ನು ತಿಳಿಸಿರಿ.

ವಿಳಾಸ:—

ರಾಜವೈದ್ಯ ನಾರಾಯಣಜೀ ಕೇಶವಜೀ,

೨೩. ಜೈನಾಬಜಾರು ರೋಡು, ಮದರಾಸು.

To Get BEST and CHEAPEST

EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:—ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ. ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎವ್‌ರ್ ರೆಡಿ ಸೇಫ್ಟಿ ರೇಜರು ಮತ್ತು ವಸ್ತೂರಿನ ಎಂಟಿಟೀಪ್ ಎಂಬುವ ಜ್ವರದ ಔಷಧವು ನಮ್ಮಲ್ಲಿ ದೊರಕುತ್ತದೆ. ಶೀಘ್ರದಲ್ಲಿ ಬರಕೊಳ್ಳಿರಿ.

TEL. ADDRESS:
PARTSARTHI, Bombay.

BOMBAY CANARA TRADING CO.,

Jamnadas Building, Pitha Street,

FORT: BOMBAY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜೈನಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

WANTED.

An young, energetic and qualified compounder who can write a neat and clean hand.

Applications must be written in their own hand and must be accompanied by testimonials of conduct etc.

The starting salary will be Rs. 20 per mensem or, according to the qualifications and service. For further particulars apply personally to the undersigned.

P. M. Kamath,
Proprietor.

P. M. Kamath & Co.,
Chemists, MANGALORE

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರವಿಸರ್ಜನೆ ಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,

ಮಂಗಳೂರು.

ಮನೋಲ್ಲಾಸಿನೀ ತೈಲ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ಮತ್ತು ನರತ ಕೂದಲು ಕಪ್ಪಾಗುತ್ತವೆ. ಕೇಶಗಳು ಉದುರುವ ಸಂಗತಿಯಲ್ಲಿ ಬಹಳ ಒಳ್ಳೇದು. 4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 0—12—0.

ತ್ರಿಫಲಾದಿ ತೈಲ—ವಾತ, ಪಿತ್ಥ, ಶ್ಲೇಷ್ಮ ಈ ಮೂರು ತರದ ವ್ಯಾಧಿಗಳಿಂದ ಉಂಟಾದ ಕಾಹಿಲೆಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಸ್ನಾನ ಮಾಡುವ ವೇಳೆಯಲ್ಲಿ ಇದನ್ನು ತಲೆಗಿಟ್ಟರೆ ಬಹಳ ಉತ್ತಮ.
4 ಔನ್ಸಿನ ಸೀಸೆ 1ಕ್ಕೆ ಕ್ರಯ ರೂ. 1—0—0.

ಪಂಚಸಾರ ಲೇಹ—ಅಜೀರ್ಣ, ಪಿತ್ಥ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತವೆ. ಮತ್ತು ಇಂದ್ರಿಯವನ್ನು ಬಲಪಡಿಸಿ, ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಶೀಸೆಗೆ ರೂ. 1—4—0.

ಈ ಮೇಲೆ ಬರೆದ ಔಷಧಗಳು ಪಾದಪೂಜ್ಯ ಗುರುಗಳಿಂದ ನಿರೂಪಿಸಿದ ಗ್ರಂಥದ ಆಧಾರದಿಂದ ತಯಾರು ಮಾಡಲ್ಪಟ್ಟಿರುತ್ತವೆ. ಇವುಗಳಲ್ಲದೆ ಇತರ ಎಲ್ಲಾ ಬಗೆಯ ಔಷಧಗಳು ದೊರಿಯುತ್ತವೆ. ಪರಸ್ಥಳದವರು ತಮ್ಮ ಕಾಹಿಲೆ ಸಂಗತಿಯನ್ನು ವಿವರವಾಗಿ ಬರೆದು ಕಳುಹಿಸಿದರೆ ತಕ್ಕ ಔಷಧಗಳನ್ನು ಕಳುಹಿಸಬಹುದು.

ವಿಳಾಸ:—ಆಯುರ್ವೇದಿಕ್ ಮತ್ತು ಹೋಮಿಯೊಪೆತಿಕ್
ಧರ್ಮವೈದ್ಯಶಾಲಾ, ಧರ್ಮಸ್ಥಳ, ದ. ಕನ್ನಡ.

ಕ್ರಯ ರೂ. 1—8—0. **ಪ್ರಶ್ನೋತ್ತರ** ಅಂಚೆ ವೆಚ್ಚ ಬೇರೆ.

ಲೇಖ್ಯಬೋಧಿನಿ.

7ನೇ ಮುದ್ರಣ: ಅನೇಕ ಉಪಯೋಗ ಸಂಗತಿಗಳಿವೆ.
ಕ್ಷೇಮ ಸಮಾಚಾರದ ಕಾಗದಗಳು:—ಬಗೆಬಗೆಯಾದ ಒಕ್ಕಣೆಗಳಿವೆ. ಲೌಕಿಕ ವೈದಿಕ ಮರ್ಯಾದೆಗಳಿವೆ. ಪತ್ರಗಳು ಬರೆಯುವ ವಿಧಾನ, ಕ್ರಯ, ದಾನ, ವಿಲ್ಲು, ಮರಣಶಾಸನ, ಪಾರೀಖತ್ತು, ಗುತ್ತಿಗೆ, ಪಾಲುಗಾರಿಕೆ, ಹುಂಡಿ, ಚೆಕ್ಕು, ಇವುಗಳ ಮಾದರಿಗಳು, ವಿಧಗಳು, ಸ್ಟಾಂಪು, ರಜಿಸ್ಟ್ರೇಷನ್, ಸಿವಿಲ್ ಕೋರ್ಟು ವಿಧಾನ—ಲಾಯರ್ ನೋಟೀಸು, ದಾವೆ ಬರೆಯುವ ರೀತಿ, ಸ್ಮಾಲ್ ಕಾಸ್, ಫರಿಜನರ್, ಶಿಕ್ಷೆ, ಅಪ್ಪೀಲು, ಸ್ಪೆಷಲ್ ಅಪ್ಪೀಲ್, ಅವುಗಳಿಗೆ ಕಾಯಿದೆ, ಕೋರ್ಟು ಫೀ ಸ್ಟಾಂಪು, ರೆವಿನ್ಯೂ ಮುಂತಾದ ಪ್ರಾಮುಖ್ಯವಾದ ರಾಜ್ಯಭಾರಕ್ಕೆ ಸಂಬಂಧಿಸಿದ ಎಲ್ಲಾ ಇಲಾಖೆಗಳಿಗೆ ಬರೆಯುವ ಅರ್ಜಿಗಳು; ಕ್ರಿಮಿನಲ್ ಕೋರ್ಟು ವಿಧಾನ—ಅನೇಕ ಅರ್ಜಿಗಳ ಮಾದರಿಗಳೂ, ಸರಕಾರದ ಕಾನೂನುಗಳೆಲ್ಲವೂ ಇದರಲ್ಲಿ ಅಡಗಿವೆ. ಕಾಗದದ ಖರದಿಂದ ಬಹು ಸ್ವಲ್ಪ ಪ್ರತಿಗಳೇ ಉಳಿದಿವೆ, ಬೇಗ ಬರೆದು ತರಿಸಿಕೊಳ್ಳಿ. ಕ್ರಯ ರೂಪಾಯಿ 1—8—0, ಅಂಚೆಯ ವೆಚ್ಚ ಬೇರೆ.

[80-19] ವಿಳಾಸ:— "ಸವಿನುಡಿ" ಆಫೀಸು,
129, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

"ಟಿಷ್ಯು ರೆಮಿಡಿಸ್"
ಎಂಬ
ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯೂರ್	9 ನಾಟ್ರಮ್ ಮ್ಯೂರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯ

ಕ್ರಯ					ರೂ. ಆ. ಪೈ.
ಎರಡು ಡ್ರಾಮಿನ	D	ಸೈಜ್	ಶೀಸೆ	ಒಂದರ	0—3—6
ನಾಲ್ಕು „	C	„	„	„	0—6—0
ಒಂದು ಔನ್ಸಿನ	A	„	„		0—12—0

ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ 3—0—0

ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನಿ ವೈದ್ಯಶಾಸ್ತ್ರ ಪುಸ್ತಕ ಸಮೇತ. 10—0—0

ಜೀವರಸಾಯನಿ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾರಿಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲಿಕ್ಸ್ ಹೋಮಿಯೊಪೆತಿ ಡಿಸ್ಪೆನ್ಸರಿ, ಮಂಗಳೂರು.

ಈ ಔಷಧಾಲಯದಲ್ಲಿ ಬಹಳ ಕಡಿಮೆ ಕ್ರಯದ ಅನುಭವಸಿದ್ಧವಾದ ವನೌಷಧಗಳೂ, ಸಿದ್ಧೌಷಧಗಳೂ ಸಿಕ್ಕುತ್ತವೆ. ಇದನ್ನು ತರಿಸಿ ಉಪಯೋಗಿಸಿದವರಿಗೆ ತಕ್ಷಣವೇ ಆಯುರಾರೋಗ್ಯಭಾಗ್ಯವುಂಟಾಗುವುದು. ಪತ್ಯ ವಿಶೇಷ ಎಲ್ಲಾ ತರಿಸಿ ನೋಡಿರಿ.

1. ಶತಮೂಲಿಕಾ ಅಮರಸಂಜೀವನೀ ಟೋನಿಕ್—ಇದರ ಸೇವನೆಯಿಂದ ಕ್ಷಯ, ಕೆಮ್ಮು, ಅಶಕ್ತಿ, ನಿವಾರಣೆಯಾಗಿ ಧಾತುಪುಷ್ಟಿಯಾಗುತ್ತದೆ. 24 ಔನ್ಸಿನ ಬಾಟ್ಲಿ 1ಕ್ಕೆ ರೂ. 3.

2. ಮಧುಮಾಧವಿ ಪಿಲ್ಸ್—ಬಾಣಂತಿಯರು ಇದನ್ನು 12 ದಿವಸ ಸೇವನೆಮಾಡಿ ನಂತರ 2 ತಿಂಗಳ ವರೇಗೆ ಮಧುಮಾಧವಿ ಟೋನಿಕ್ ಸೇವಿಸಬೇಕು. ಇದರಿಂದ ಬಾಣಂತಿಯರ ನಂಜಿನ ಉಪದ್ರವಗಳು ಗುಣವಾಗಿ ದೇಹ ಪುಷ್ಟಿಯಾಗುತ್ತದೆ. ಟೋನಿಕ್ ಬಾಟ್ಲಿ 1ಕ್ಕೆ ರೂ. 1. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2—0—0.

3. ಸಿದ್ಧೇಶ್ವರ—ಇದರ ಸೇವನೆಯಿಂದ ಎಲ್ಲಾ ತರದ ಕೆಮ್ಮುಗಳೂ, ಉಬ್ಬಸಗಳೂ, ಕಫವೂ ಗುಣವಾಗುತ್ತದೆ. ತೊಲೆ 1ಕ್ಕೆ 1-8-0.

4. ಅಶೋಕಾರಿಷ್ಟ (ಉತ್ತಮ ತರದ್ದು)—ಇದರ ಸೇವನೆಯಿಂದ ಸ್ತ್ರೀಯರ ಮುಟ್ಟುದೋಷ, ಗರ್ಭಶೂಲೆ, ಯೋನಿರೋಗಗಳು ಗುಣವಾಗಿ ರಕ್ತಶುದ್ಧಿಯಾಗುವುದು. ಬಾಟ್ಲಿ 1ಕ್ಕೆ 1-4-0.

5. ಸುದರ್ಶನ ಮಾಲಿನಿ—ಇದರಿಂದ ಗಂಡಮಾಲೆ, ಫಿರಂಗರೋಗ, ಮೇಹವ್ರಣ, ಮೇಹವಾತ, ಇತ್ಯಾದಿ ದೀರ್ಘಕಾಲದ ರೋಗಗಳು 4 ದಿವಸಗಳಲ್ಲಿ ಗುಣವಾಗುತ್ತದೆ. ಬಾಟ್ಲಿ 1ಕ್ಕೆ 4—0—0.

6. ವಸಂತಕುಸುಮಾಕರ ತೈಲ್ಯ—ಇದನ್ನು ತಲೆಗೆ ಇಟ್ಟುಕೊಂಡಲ್ಲಿ ಸರ್ವ ಶಿರೋರೋಗಗಳು ಗುಣವಾಗಿ ಜ್ಞಾನಶಕ್ತಿಯನ್ನು ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ ರೂ. 1—0—0.

ಇದಲ್ಲದೆ ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಮಾತ್ರೆಗಳೂ, ಭಸ್ಮಗಳೂ, ತೈಲ್ಯಗಳೂ, ಲೇಹಗಳೂ, ಚೂರ್ಣಗಳೂ ಬಹಳ ಕಡಿಮೆ ಕ್ರಯದಲ್ಲಿ ಸಿಕ್ಕುತ್ತವೆ. ನಮ್ಮ ಕೆಟಲಾಗನ್ನು ತರಿಸಿರಿ.

ಎಮ್. ವಿ. ಶಂಕರ, ಉಗ್ರಾಣಕಾರ,
ಮ್ಯಾನೇಜರ್.
ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ, ಬ್ರಹ್ಮಾವರ, ದ. ಕ.

ಅಪೂರ್ವವಾದ ಕನ್ನಡ ವೈದ್ಯಶಾಸ್ತ್ರವು.
ಧಾತುರಂಜಿತ – ವೈದ್ಯರತ್ನ.

ಅಕ್ರಮರೀತಿಯಿಂದ ಶರೀರಕ್ಕೆ ಬೇರೆ ನಂತಿರುವ "ವೀರ್ಯ" ಕೆಟ್ಟು ನೀರಾಗಿ ಪತನವಾಗಿ ವಿಧವಿಧ ಬಣ್ಣದಿಂದ ಧಾತುಸ್ರಾವ, ನಪುಂಸಕತ್ವ, ಟಾಕಿ, ಇನೇ ಮುಂತಾದ ಬಹು ರೋಗಗಳುಂಟಾಗುವವು. ಇದರಲ್ಲಿ ೫ ಭಾಗಗಳಲ್ಲಿ ಈ ವಿಧದ ರೋಗಗಳ ಸ್ವರೂಪ, ಕಾರಣ, ಚಿಕಿತ್ಸೆಗಳು ವಿವರಿಸಲ್ಪಟ್ಟಿವೆ. ಮೂಲೇಂದ್ರಿಯ ರಚನೆ, ವೀರ್ಯ ನಷ್ಟಕ್ರಮ, ನಪುಂಸಕತ್ವ ಭೇದ, ವಂಧ್ಯಾರೋಗ ಭೇದ, ನಿವಾರಣೋಪಾಯ ಇವಲ್ಲದೆ ಅನುಭವಸಿದ್ಧಗಳಾದ ನೂರಾರು ವಿಧ ಲೇಹ್ಯ, ರಸಾಯನಾದಿ ದಿವ್ಯೌಷಧಿಗಳನ್ನು ಕಲ್ಪಿಸುವ ವಿಧಾನ ಮತ್ತು ರೂಢಿಯಲ್ಲಿರುವ ಅನೇಕ ವನಸ್ಪತಿಗಳ ಗುಣ, ಉಪಯೋಗಿಸುವ ಕ್ರಮ, ರಣವೈದ್ಯದಲ್ಲಿ ರಾಜವಂಶೇಶ್ವರಾದಿ ಅನೇಕ ಮಹೌಷಧಿಗಳ ನಿರ್ಮಾಣಕ್ರಮ, ಕುಟುಂಬವೈದ್ಯದಲ್ಲಿ ಜ್ವರ, ಅತಿಸಾರಾದಿಗಳ ಚಿಕಿತ್ಸೆ ಎಂತವರಿಗೂ ತಿಳಿಯುವಂತೆ ಬರೆಯಲ್ಪಟ್ಟಿದೆ. ಇದು ಇದ್ದರೆ ಮನೆಗೆ ಒಬ್ಬ ವೈದ್ಯನೇ ಇದ್ದಂತಾಗುವದು. ಇದರಲ್ಲಿರುವ ಔಷಧಿಗಳನ್ನು ತಯಾರು ಮಾಡಿ ನೂರಾರು ರೂಪಾಯಿಗಳನ್ನು ಸಂಪಾದಿಸಬಹುದು. ಕ್ರಯ ಪುಸ್ತಕ ೧ಕ್ಕೆ ರೂ. ೧—೮—೦.

ನಮ್ಮ ವಿಳಾಸ:— ಭಾರತಿ ಬುಕ್‌ಡಿಪೊ,
೪೯೧, ನಗರ್ತರಪೇಟೆ, ಬೆಂಗಳೂರು ಸಿಟಿ.

The Indian Tooth-ache Specific.
ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ ೧ಕ್ಕೆ ಕ್ರಯ ರೂ. 1—4—0; ಟಪಾಲ ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಹೊಗೆಸೊಪ್ಪಿನ ಪುಡಿ.

I	ಕ್ಲಾಸ್	0—10—0	ಶೇರು 1ಕ್ಕೆ
II	ಕ್ಲಾಸ್	0—8—0	
III	ಕ್ಲಾಸ್	0—6—0	

ಹೊಡೆಯುಗೆಳಿಗೂ ಶಾಪುಗಳಿಗೂ ಧಾರಾಳವಾಗಿ ವೈಲಪಾರ್ಸಲ ಮೂಲಕ ರವಾನಿಸಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ವಿದೇಶ ವರ್ತಮಾನ

[illegible]

...ದ ವೇಳೆ [illegible] ಅಥವಾ [illegible] ಎಂಬುದು ಸ್ಪಷ್ಟವಾಗಿದೆ. ಆದರೆ ಅಮೇರಿಕವು [illegible] ಹಿಂತೆಗೆದ [illegible] ಸೈನ್ಯವನ್ನು ರೈನ್ ಪ್ರಾಂತದ [illegible] ಬಂದದರಿಂದ ಸೈನ್ಯಗಳ ಸಮುದಾಯವು [illegible] ಮಿತ್ರಪಕ್ಷದವರಿಗೆ ಹೆಚ್ಚಿದಂತಾಯಿತು.

ಜರ್ಮನಿಯು ಸಂಧಿ ಶರ್ತಗಳ ಮೇರೆಗೆ ದೇಶದೊಳಗೆ ಶಾಂತತೆಯನ್ನು ಇಡುವುದಕ್ಕೆ ೧ ಲಕ್ಷ ಸೈನ್ಯವನ್ನು ಮಾತ್ರ ಇಡಬೇಕೆಂದು ನಿಬಂಧನೆ ಇತ್ತು. [illegible] ದೇಶದಲ್ಲಿ [illegible] ಕಡಿಮೆಯಾಗಿಲ್ಲವಾದ್ದರಿಂದ ೨ ಲಕ್ಷ ಸೈನ್ಯ ಇಟ್ಟುಕೊಳ್ಳಲು ಬಿಡಬೇಕೆಂದು ಜರ್ಮನ ಸರಕಾರದ ಯುದ್ಧಸನ್ನಾಹದ ಮಂತ್ರಿಯು [illegible] ಬೇಡಿಕೊಂಡಿದ್ದನು. ಆದರೆ ಬ್ರಿಟನ್ ಮತ್ತು ಫ್ರಾನ್ಸ್ ದೇಶದ ಮುಖ್ಯರಿಗೆ [illegible] ಪ್ರಕಟವಾಗಿದೆ. ಜರ್ಮನಿಯು ಕರಾರು ಮೀರಿ ಯುದ್ಧ ಸರಂಜಾಮನ್ನು ನಾಶಗೊಳಿಸುವ ಕಡೆಗೂ, ಸೈನ್ಯದ ಸಂಖ್ಯೆಯನ್ನು ತಗ್ಗಿಸುವ ಕಡೆಗೂ, ಶಸ್ತ್ರಗಳನ್ನು ಒಪ್ಪಿಸಿಕೊಡುವ ಕಡೆಗೂ, ಇನ್ನೂ ಮನಸ್ಸು ಕೊಡಲಿಲ್ಲ; ಮಾತ್ರವಲ್ಲ, ಯುದ್ಧ ಪಕ್ಷದ ದಂಡವನ್ನು ತೆರುವ ಮತ್ತು [illegible] ಸೈನ್ಯದ ಖರ್ಚನ್ನು ತೆರುವ ವಿಷಯಗಳನ್ನು ಇನ್ನೂ ಗಮನಿಸಿದಂತೆ ತೋರುವದಿಲ್ಲ. ಇದಲ್ಲದೆ ಸಂಧಿಗೆ ಸಹಿಮಾಡಿದನಂತರ ನಡೆಸಿದ ಕೆಲವು ಅತ್ಯಾಚಾರಗಳ ಬಗ್ಗೆ ಕ್ಷಮೆ ಕೇಳಲೂ ಇಲ್ಲ ಎಂಬುದನ್ನು ಕುರಿತು ಈ ಪ್ರತ್ಯುತ್ತರದಲ್ಲಿ ಉಲ್ಲೇಖಿಸಿದೆ. ವಾರ್ಸೇಲ್ಸದಲ್ಲಿ ಮಾಡಿದ ಒಪ್ಪಂದಕ್ಕೆ ಯಾವ ರೀತಿಯಲ್ಲಿಯೂ ಭಂಗಬರುವಂತೆ ಪ್ರಯತ್ನಿಸಿದರೆ ಅದು ನಡೆಯಲಾರದು; ಜರ್ಮನಿಗೆ ಸೇರಿದ ಮೂರುದೊಂದು ಪ್ರಾಂತವನ್ನಾದರೂ ಇನ್ನೂ ಮುಂದೆ ತೆಗೆದುಕೊಳ್ಳುವ ಅಭಿಲಾಷೆಯು ಮಿತ್ರಪಕ್ಷದವರಿಗೆ ಇಲ್ಲವಾದರೂ ಜರ್ಮನಿಯು ತನ್ನ ವರ್ತನವನ್ನು ಬದಲಾಯಿಸದಿದ್ದರೆ ಮಿತ್ರಪಕ್ಷದ ಸೈನ್ಯವು ಇನ್ನೂ ಜರ್ಮನ ಪ್ರಾಂತದಲ್ಲಿ ಮುಂದೊತ್ತಿ ಹೋಗಬೇಕಾದೀತು. ಆಗ ಪಕ್ಷ್ಯವಹಾರದಿಂದ ಈ ವಿಷಯಗಳನ್ನು ಇತ್ಯರ್ಥಿಸಿ ಕೊನೆಗಾಣಿಸಲಾರದು, ಆದ್ದರಿಂದ ಜರ್ಮನ ಮುಖ್ಯರಿಗೆ ಸ್ಪಾ ಕ್ಕೆ ಬಂದು, ಶರ್ತಗಳ ಜಾರಿಯ ವಿಷಯದಲ್ಲಿ ಅವರಿಗೆ ಇರುವ ಅಡಚಣೆಗಳನ್ನು ವಿವರಿಸಬೇಕು ಎಂದು ಈ ಪತ್ರವು ಹೇಳುತ್ತದೆ. ಈ ಪತ್ರದ ತಯಾರಿಕೆಯು ಪೈಕಿ ಸೈನ್ಯ ಮುಂದೊತ್ತುವ ವಿಷಯದಲ್ಲಿ ಇಟಲಿಯ ಮಂತ್ರಿಯು ಆಕ್ಷೇಪಿಸಿದರೂ ಜಪಾನು, ಫ್ರಾನ್ಸ್, ಬ್ರಿಟನ್ ಇವು ಒಮ್ಮತವಾಗಿದ್ದಾವೆ.

ಶೆಲೆಸ್ತೀನವೂ ಮೆಸೊಪೊಟೇಮಿಯವೂ ಬ್ರಿಟನ್ನಿಗೆ, ಸಾಯ್ರಿಯವು ಫ್ರಾನ್ಸಿಗೆ ಈ ಶರ್ತಗಳ ಪ್ರಕಾರ ಅಧೀನವಾಗಬೇಕಾಗಿದೆ. ಅರ್ಮೇನಿಯದ ಗಡಿಗಳ ವಿಷಯದಲ್ಲಿ ಯಾವುದೊಂದು ನಿರ್ಣಯಕ್ಕೆ ಬಾರದ್ದರಿಂದ ಪ್ರೆ| ವಿಲ್ಸನರು ಅವನ್ನು ನಿರ್ಧರಿಸಬೇಕಾಗಿ ಸಂಧಿಪರಿಷತ್ತಿನವರು ವಿಲ್ಸನರಿಗೆ ಬರೆದಿದ್ದಾರೆ. ಸ್ಮರ್ನಾದ ಮೇಲೆ ತುರ್ಕಿಗೆ ಅಧಿಕಾರವನ್ನು ಇಟ್ಟಿದ್ದರೂ ೫ ವರ್ಷಗಳನಂತರ ಸ್ಮರ್ನಾ ಪಾರ್ಲಿಮೆಂಟಿನವರು ಆತ್ಮಸಂತೋಷದಿಂದ ಗ್ರೀಸ ರಾಜ್ಯದೊಡನೆ ತಮ್ಮನ್ನು ಸೇರಿಸಬೇಕೆಂದು ಕೇಳಿಕೊಂಡರೆ ಅದನ್ನು ತುರ್ಕಿಯು ಮನ್ನಿಸಬೇಕು; ಚಾಟಲ್ಜಾ ಪ್ರಾಂತದ ಗಡಿ ವರೆಗೆ ಯುರೋಪದಲ್ಲಿ ತುರ್ಕಿಯು ಕೈಬಿಡಬಹುದು. ಡಾರ್ಡನೆಲ್ಸ್ ಮತ್ತು ಬೊಸ್ಪರಸ್ ಜಲಸಂಧಿಗಳ ಪ್ರಾಂತದ ಮೇಲೆ ಒಬ್ಬ ಕಮಿಶನ್ ಇಂದು, ಸಿವಿಲ್ ಕಮಿಶನ್ ಒಂದು ಹೀಗೆ ಎರಡು ವಿಚಾರ ಕರ್ತರು ಇರುವರು. ಡಾರ್ಡನೆಲ್ಸಿಗೆ ಇನ್ನೊಂದು ದಡದಲ್ಲಿಯೂ ಗಲ್ಲಿಪೊಲಿ ಪೆಯಾರ್ ದ್ವೀಪದಲ್ಲಿಯೂ ಮಿತ್ರಪಕ್ಷದ ಲಷ್ಕರಿ ಠಾಣ್ಯಗಳು ಇರುವುವು. ಈ ಶರ್ತಗಳಿಗೆ ಇರುವ ಆಕ್ಷೇಪಗಳನ್ನು ಹೇಳಲಿಕ್ಕೆ ಮತ್ತು ಅವನ್ನು ಒಪ್ಪಿದ್ದಲ್ಲಿ ಅವುಗಳಿಗೆ ತುರ್ಕಿಯ ಪರವಾಗಿ ಸಹಿಕೊಡಲಿಕ್ಕಾಗಿ ಟ್ಯೂಫಿಕ್ ಪಾಶಾ, ರಿಜಾಬೇ, ಜಮೀಲ್ ಪಾಶಾ, ಫರಿಯುದ್ದೀನ್‌ಬೇ, ಜನರಲ್ ಮಹಮ್ಮದ ಪುಸೇನ್ ಇತ್ಯಾದಿ ಮಂದಿ ತುರ್ಕಿ ಸರಕಾರದ ಕಡೆಯಿಂದ ಇದೇ ಬರುವ ೧ನೇ ತಾರೀಕಿಗೆ ಕೊನಸ್ಟೆಂಟಿನೋಪಲದಿಂದ ಹೊರಟು ಪಾರೀಸ್ ಪಟ್ಟಣಕ್ಕೆ ತಲಪುವರು.

ತುರ್ಕಿ—ಇದರೊಡನೆ ತಯಾರಾದ ಸಂಧಿ ಶರ್ತಗಳನ್ನು ಕೇಳುವುದಕ್ಕೆ ತುರ್ಕಿಯ ಪ್ರತಿನಿಧಿಗಳನ್ನು ಬರುವ ಮೇ ೧೧ನೆ ತಾರೀಕಿಗೆ ಪಾರ್ಸಿಗೆ ಆಮಂತ್ರಿಸಿದ್ದಾರೆ. ಯುರೋಪದಲ್ಲಿ ತುರ್ಕಿಗೆ ಎಷ್ಟು ಸ್ಥಳವುಳಿಯಬೇಕು ಎಂಬ ವಿಷಯವನ್ನು [illegible] ವಸಾಹತುಗಳಲ್ಲಿ ಯಾವ ಭಾಗಕ್ಕೆ ಆತ್ಮನಿರ್ಣಯ ಯಾವ ಭಾಗದಲ್ಲಿ ಯುರೋಪಿನ ರಾಷ್ಟ್ರಗಳಿಗೆ ಭೋಗ್ಯಾದಿ ಅಧಿಕಾರ ಹಕ್ಕು ಇರಬೇಕು ಎಂಬ ವಿಷಯವೂ ಈ ಸಂಧಿ ಶರ್ತಗಳಲ್ಲಿದೆ.

ಎಸ್ಸೀರಿಯನರು—ಮೆಸೊಪೊಟೇಮಿಯದ ಉತ್ತರ ಪ್ರಾಂತದಲ್ಲಿ ಅಂದರೆ ಉರುಮಿಯ ಸರೋವರದ ಪಶ್ಚಿಮ ದಡದಲ್ಲಿ ಇದ್ದ ಈ ಜನಾಂಗದವರು ಬ್ರಿಟಿಷರ ಸಂರಕ್ಷಣೆಯೊಳಗಿರುವವರಾಗಿ ಸ್ವಾತಂತ್ರ್ಯಕೊಡಬೇಕೆಂದು ವ್ಯವಹರಿಸಲಿಕ್ಕಾಗಿ ಅವರ ಪ್ರತಿನಿಧಿಗಳು ಲಂಡನ್ನಿಗೆ ಬಂದು ತಲಪಿರುವರು.

ಐರ್ಲೆಂಡು—ಇಲ್ಲಿಯ ಕ್ಷೋಭವು ಅಧಿಕವಾಗಿ ಹೆಚ್ಚುತ್ತಿರುತ್ತಾ ಇದೆ. ಸರಕಾರಕ್ಕೆ ವಿರೋಧ ವರ್ತನವನ್ನು ತೋರಿದ ೧೭೭ ಮಂದಿ ಸೆರೆಯಾಳು ರಾಜಕೀಯ ಕೈದಿಗಳಾಗಿದ್ದು ತಮಗೆ ಸಾಧಾರಣ ಕೈದಿಗಳಂತೆ ಹೀನ [illegible] ಎಂಬ ನೆವದಿಂದ ಆಹಾರ ತೆಗೆದುಕೊಳ್ಳದೆ ಹೋದರು. ಕಡೆಗೆ ಉಪವಾಸದಿಂದ ಪ್ರಾಣವಾಯು ಹಿಂತೆಗೆಯುತ್ತದೋ ಎಂಬಷ್ಟು ಬಲಹೀನರಾದ ಕೆಲವರನ್ನು ಕಾಳಜಿಯಿಂದ ಸರಕಾರವು ಬಿಡುಗಡೆಮಾಡಿತು. ಇನ್ನು ಕೆಲವರು ಇದೇ ದಾರಿಯನ್ನು ಹಿಡಿದಿದ್ದಾರೆ. ಯುದ್ಧ ಆರಂಭಿಸುವ ಕಾಲಕ್ಕೆ ಸರಿಯಾಗಿ ಮಂಜೂರಾದ ಹೋಮರೂಲ್ ಏಕ್ಟನ್ನು ಯುದ್ಧದ ಸಮಾಪ್ತಿಯಾದ ಆರು ತಿಂಗಳ ನಂತರ ಜಾರಿಗೆ ತರಬೇಕಾಗಿ ಅಲ್ಲಿ ಮುಂದರಿಸಲ್ಪಟ್ಟಿತ್ತು. ಈಗ ಆ ದಂಡಯೊಳಗೆ ಹೊಸ ಬಿಲ್ ತಯಾರಾಗಿ ಬ್ರಿಟಿಷ ಪಾರ್ಲಿಮೆಂಟಿನವರ ಮುಂದೆ ಚರ್ಚೆಗೆ ಬಂದಿದೆ. ಇದು ಹಿಂದಿನ ಏಕ್ಟಿನಂತೆ ಅಲ್ಪ್ಸ್ಟರ್ [illegible] ಅಥವಾ ಜನಕ್ಕೆ ಬರುವಷ್ಟರಲ್ಲಿಯೆ ಗರ್ಭದಲ್ಲಿಯೆ ಅವಸಾನ ಹೊಂದುತ್ತದೋ ಎಂದು ತೋರುತ್ತದೆ. ಆದರೆ ಐರ್ಲೆಂಡಿನ ಈಗಿನ ಚಳವಳದಲ್ಲಿ ಬ್ರಿಟಿಷ [illegible] ಉದ್ದೇಶವೇ [illegible].

[illegible] ಮಾತ್ರ [illegible] ಸೇರಬೇಕೆಂದು [illegible] ಉಳಿದವರು [illegible] ಗಣಿಗಳ [illegible] ತಮಗೆ [illegible] ಇದೆ ಎಂದು ಈ ಮುಖಂಡರು ತಿಳಿಸಿದ್ದಾರೆ.

ಪ್ರಿನ್ಸ್ ಆಫ್ ವೇಲ್ಸರ ಪರ್ಯಟನ—ಶ್ರೀಮಂತರು ನ್ಯೂಜೀಲೆಂಡ್ ದ್ವೀಪದಲ್ಲಿ ಇಳಿದಾಗ ಪ್ರಜೆಗಳು ಅವರನ್ನು ಅತೀ ಆದರದಿಂದ ಎದುರುಗೊಂಡರು.

ಹಂಟರ್ ಕಮ್ಮಿಟಿಯ ರಿಪೋರ್ಟು—ಇದು ಬರುವ ಮೇ ತಿಂಗಳಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟವಾಗುವುದು. ಇದರಲ್ಲಿ ನಮೂದಿಸಿದ ವ್ಯಕ್ತಿಗಳನ್ನು ಕುರಿತು ಇಂಡಿಯಾ ಸರಕಾರದವರಿಗೂ ಸ್ಟೇಟುಸೆಕ್ರೆಟರಿಗಳಿಗೂ ತಂತೀ ಮೂಲಕ ಸಂಭಾಷಣೆ ನಡೆಯುತ್ತಲಿದೆಯಂತೆ.

ಬೊಲಶೆವಿಕರ ಸಾಹಸ—ಜನರಲ್ ಡೆನಿಕಿನನನ್ನು ತೀರಾ ಮುರಿದು, ಕಪ್ಪು ಸಮುದ್ರದ ಕರಾವಳಿ ವರೆಗೆ ತಮ್ಮ ಅಧಿಕಾರವನ್ನು ಬೊಲಶೆವಿಕರು ಸ್ಥಾಪಿಸಿದ್ದಾರೆ. ಬಾಲ್ಟಿಕ್ ಕರಾವಳಿಯ ಚಿಕ್ಕ ಪುಟ್ಟ ರಾಜ್ಯಗಳೊಡನೆ ಸಂಧಿಯನ್ನು ಆ ಕಡೆಯಿಂದಲೂ ತಮ್ಮ ಅಧಿಕಾರಕ್ಕೆ ಅಭ್ಯಂತರಗಳಿರದಂತೆ ಇವರು ಮಾಡಿಕೊಂಡಿದ್ದಾರೆ. ಈಚೆಗೆ ವೈದಿವೊಸ್ಟೊಕದ ಬಳಿಯಲ್ಲಿಯೂ ಚೀನದ ಗಡಿಯಲ್ಲಿಯೂ ಇವರಿಗೂ ಜಪಾನರಿಗೂ ಯುದ್ಧ ಹತ್ತಿದೆ. ಆದರೆ ಪರಿಣಾಮ ಗೊತ್ತಾಗಲಿಲ್ಲ. ಕಾರ್ಸ್ ರಾಜ್ಯ ಮತ್ತು ಜೋರ್ಜಿಯ (ಅಂದರೆ ಕಸ್ಪಿಯನ್ ಸರೋವರದ ಒತ್ತಿಗಿರುವ ಸೀಮೆ) ಇವುಗಳೊಡನೆ ಸಖ್ಯಮಾಡಿಕೊಳ್ಳಲಿಕ್ಕೆ ಅವರು ಮಾಡಿದ ಪ್ರಯತ್ನಗಳು ಸಫಲವಾದವಂತೆ. ಒರೆನಬರ್ಗದಿಂದ ತಾಷ್ಕೆಂಡಕ್ಕೆ ಚಾಚಿದ ರೈಲು ರಸ್ತೆ ಈ ವರೆಗೆ ಒಂಟಿ ಲೈನಾಗಿತ್ತು. ಈಗ ಅವರೊತ್ತಿಗೆ ಇನ್ನೊಂದು ಲೈನ್ ಹಾಕಿ ಚಲಾವಣೆಗೆ ಇಮ್ಮಡಿ ಸೌಕರ್ಯಗಳನ್ನು ಮಾಡುವುದರಲ್ಲಿದ್ದಾರೆ. ಅದೇ ರಸ್ತೆಯು ಅಫಘಾನಿಸ್ಥಾನದ ವಾಯವ್ಯ ಗಡಿಯಲ್ಲಿ ಕುಶ್ಕ ಎಂಬಲ್ಲಿ ವರೆಗೆ ಈಗ ಇದೆ. ಅದನ್ನು ಅಫಘಾನಿಸ್ಥಾನದೊಳಗೆ ಮುಂದರಿಸಲಿಕ್ಕಿರುವರೆಂದು ಕಸ್ಪಿಯನ್ ಸಮುದ್ರದ ಕರಾವಳಿಯಲ್ಲಿದ್ದ ಸೈನ್ಯವನ್ನು ಮಧ್ಯ ತುರ್ಕಿಸ್ಥಾನಕ್ಕೆ (ತುರ್ಕಿಯು ರಾಜ್ಯವಲ್ಲ) ತರುವುದಕ್ಕೆ ಇದ್ದಾರೆಂದೂ ತೆಹರಾನದಿಂದ ಲಂಡನ್ ಟೈಂಯುವನ್ನು ಪತ್ರಿಕೆಗೆ ಒಬ್ಬ ಬಾತ್ಮಿದಾರನು ಬರೆದಿದ್ದಾನೆ. ಫಾರ್ಸಿಸ್ಥಾನದ ಉತ್ತರ ಭಾಗಕ್ಕೆ ಒಂದು ಕಾಲದಲ್ಲಿ ರಶ್ಯವು ಒಂದು ಬಗೆಯ ಮಾಮೂಲ್ ಹಕ್ಕನ್ನು ಸ್ಥಾಪಿಸಿತ್ತು. ಅದನ್ನು ರದ್ದುಪಡಿಸಿದ್ದೇವೆ ಎಂದು ಫಾರ್ಸಿಸ್ಥಾನದ ಸರಕಾರಕ್ಕೆ ಬೊಲಶೆವಿಕರು ತಿಳಿಸಿ ಅವರ ಸ್ನೇಹವನ್ನು ಮತ್ತು ಕೃತಜ್ಞತೆಯನ್ನು ಪಡೆಯಲಿಕ್ಕೆ ಪ್ರಯತ್ನಿಸುತ್ತಿದ್ದಾರೆ.

ಒಳದೇಶ ವರ್ತಮಾನ.

ಖಾಸಗಿ ಶಾಲಾ ಉಪಾಧ್ಯಾಯರು—ಮದ್ರಾಸು ಸಂಸ್ಥಾನದ ಖಾಸಗಿ ಶಾಲಾ ಉಪಾಧ್ಯಾಯರು ತಮಗೆ ಈಗ ಸಿಕ್ಕುವ ಸಂಬಳವು ಈಗಿನ ದುಬಾರಿ ಧಾರಣೆಯಿಂದ ಏನೇನೂ ಸಾಕಾಗುವುದಿಲ್ಲವೆಂದು ಒಟ್ಟೊಟ್ಟಾಗಿಯೂ ಉಪಾಧ್ಯಾಯರ ಸಂಘಗಳ ಮೂಲಕವೂ ಸರಕಾರದವರಿಗೆ ಮನವಿ ಮಾಡಿಕೊಂಡಿದ್ದಾರು. ಈ ಪ್ರಸ್ತಾಪವು ನ್ಯಾಯವಿಧಾಯಕ ಸಭೆಯಲ್ಲಿ ಕೂಡಾ ಚರ್ಚೆಗೆ ಬಂದಿತ್ತು. ಈ ಉಪಾಧ್ಯಾಯರಿಗೆ ಮನೆಜಮೆಂಟುಗಳು ಸಂಬಳದ ದರಗಳನ್ನು ಹೆಚ್ಚಿಸುವಂತೆ ಮ.ನ ಜಮೆಂಟಿಗೆ ಸಹಾಯಧನ ಕೊಡಲಿಕ್ಕಾಗಿ ಸರಕಾರದವರು ೧ ಲಕ್ಷ ರೂಪಾಯಿ ಸೆಂಕ್ಷನ್ ಮಾಡಿರುವರು. ಸರಕಾರದ ಈ ಹಂಚಿಕೆಯು ನೆರವೇರುವಂತೆ ಏನು ಮಾಡಬಹುದು ಎಂಬುದನ್ನು ತನಗೆ ನಡಿಸಿ ಅಭಿಪ್ರಾಯ ಕೊಡಲಿಕ್ಕೆ ಸರಕಾರದವರು ಡಿರೆಕ್ಟರ್ ಸಾಹೇಬರಿಗೆ ಬರೆದಿರುವರು. ಸ್ಥಳೀಯ ಮೆನೆಜಮೆಂಟೊಂದು ಈ ಹೆಚ್ಚಿನ ಖರ್ಚನ್ನು ಸಹಿಸಿಕೊಳ್ಳಲಿಕ್ಕೆ ಶಕ್ತಿಯ ಸಾಧ್ಯವಿಲ್ಲ, ಮೆನೆಜಮೆಂಟಿನವರು ತಮ್ಮ ಕೈಲಾದ ಸಾಹಸವನ್ನು ಮಾಡಿದ್ದಾರೆ ಎಂಬುದು ಸಂಪೂರ್ಣವಾಗಿ ಮನವರಿಕೆಯಾದ ಮೇಲೆ ಗ್ರಾಂಟ ಇನ್‌ಏಯಿಡ್ ಕೋಡಿನ ನಿಬಂಧನೆಗಳಿಗೆ ವಿರೋಧವಾಗದ ರೀತಿಯಲ್ಲಿ ಈ ಹಣವನ್ನು ಸೆಕೆಂಡರಿ ಶಾಲೆಗಳ ಮೆನೆಜಮೆಂಟುಗಳಿಗೆ ಹಂಚಿಕೊಡಲಾಗುವದಾಗಿ ಸರಕಾರದ ಪ್ರಕಟನೆ ಇದೆ.

ರೂಮೆನಿಯದ ಯುವರಾಜರು—ಪೂರ್ವ ಖಂಡದಲ್ಲಿ ಪರ್ಯಟನ ಮಾಡಲಿಕ್ಕಿರುವ ರೂಮೇನಿಯದ ಯುವರಾಜರಾದ ರಾಜ ಶ್ರೀಮಂತ ಕೆರೊಲರು ಇದೇ ೨೦ನೇ ತಾರೀಕಿಗೆ ಮುಂಬಯಿ ಬಂದರಕ್ಕೆ ಬಂದು ಇಳಿದರು. ಗವರ್ನರ ಸಾಹೇಬರು ಕಡೆಯಿಂದ ಅವರಿಗೆ ಯೋಗ್ಯ ರೀತಿಯಿಂದ ಸ್ವಾಗತ ಮಾಡಿದ್ದಲ್ಲದೆ ೨೧ ಫಿರಂಗಿ ಗುಂಡುಗಳ ನಾದವು ಶ್ರೀಮಂತರ ಆಗಮನವನ್ನು ತಿಳಿಸಿತು. ಅವರನ್ನು ಎದುರುಗೊಳ್ಳುವುದಕ್ಕೆ ಸಾವಿರ ಗಟ್ಟಲೆಯಿಂದ ಜನರು ಮುಂಬಯಿ ಬಂದರದಲ್ಲಿ ನಿಂತಿದ್ದರು. ಅದೇ ಸಾಯಂಕಾಲ ೬॥ ಗಂಟೆಗೆ ಆಗಂತುಕರು ಸ್ಪೆಶಲ್ ಟ್ರೈನಿನಲ್ಲಿ ಆಗ್ರಾಕ್ಕೆ ಪ್ರಯಾಣ ಬೆಳಸಿ ಈಗ ನವಾಬ ರೈ ಬಿಂದ ಮೈಸೂರಿಯೊಳ ಅತಿಥಿಗಳಾಗಿರುವರು.

ರಾಜಕೀಯ ಚಳವಳ—ಮದ್ರಾಸಿನ ರಾಷ್ಟ್ರೀಯ, ಅಖಂಡ, ಶಾಂತ ಪಕ್ಷ ಮುಂತಾದ ಬೇರೆ ಬೇರೆ ಕೂಟಗಳು ತಮಗಿರುವ ಧ್ಯೇಯವನ್ನು ರೂಪಿಸಿ ಇಸ್ತಿಹಾರುಗಳನ್ನು ಪ್ರಕಟಿಸ ತೊಡಗಿದ್ದಾರೆ. ಪ್ರತಿಯೊಂದು ಕೂಟವು ಮುಂದೆ ಈ ವರ್ಷದ ಅಂತ್ಯಕ್ಕೆ ಹೊಸ ನ್ಯಾಯ ವಿಧಾಯಕ ಸಭೆಗೆ ಆಗ ತಕ್ಕ ಚುನಾವಣೆಯಲ್ಲಿ ತಂತಮ್ಮ ಧ್ಯೇಯಗಳನ್ನು ಸಾಧಿಸಲು ಯತ್ನಿಸುವಂತಹ ಪ್ರತಿನಿಧಿಗಳೇ ಆರಿಸಲ್ಪಡುವಂತೆ ಸಾಹಸಗಳನ್ನು ಮಾಡಬೇಕೆಂದಿದ್ದಾರೆ.

ಹಿಂದುಸ್ಥಾನದಲ್ಲಿ ಬೆಳ್ಳಿಯ ಗಣಿ—ಟಾಟಾ ಕಂಪೆನಿಯವರ ಹೆಬ್ಬದ ಗಣಿಗಳ (ಸಾಕ್ಷಿ ಪ್ರಾಂತ) ಒತ್ತಿಗೆ ಬೆಳ್ಳಿಯ ಅದುರು ಸಿಕ್ಕಿತಂತಲೂ ಅದರಲ್ಲಿ ಒಂದು ಟನ್ನು ಅಗೆದು ತಂದು ಶೋಧಿಸಿದಾಗ ೬೫೦ ತೊಲ ಬೆಳ್ಳಿ ಸಿಕ್ಕಿತಂತಲೂ ಕಲಕತ್ತೆಯಲ್ಲಿ ವರ್ತಮಾನವಿದೆ.

ಮಿ| ಶೌಕತ್ ಅಲ್ಲಿ ಸಾಹೇಬರು—ಇವರು ಪಾಟ್ನಾದಲ್ಲಿ ಮಾಡಿದ ಭಾಷಣದಲ್ಲಿಯೂ ಬ್ರಿಟಿಷ ಸರಕಾರದವರು ಖಿಲಾಫತ್ ಕಾನ್ಫರನ್ಸಿನ ಕೇಳಿಕೆಗಳನ್ನು ಸಲ್ಲಿಸದಿದ್ದರೆ ಈ ಕಾನ್ಫರನ್ಸಿಗೆ ಸೇರಿದವರು ಸರಕಾರದ ಹುದ್ದೆಗಳಿಗೆ ರಾಜಿನಾಮೆ ಕೊಡುವುದು ಮುಂತಾದ ರೀತಿಯಲ್ಲಿ ತಮ್ಮ ಅಸಮಾಧಾನವನ್ನು ತೋರ್ಪಡಿಸುವುದಲ್ಲದೆ ತಂಡತಂಡವಾಗಿ ಈ ದೇಶವನ್ನೆ ಬಿಟ್ಟು ಅಫಘಾನಿಸ್ಥಾನಕ್ಕೆ ಹೋಗಲು ನಿರ್ಧರಿಸಿದ್ದಾರೆ ಎಂದು ಹೇಳಿದರು.

ಮೊರಾದಾಬಾದದ ರೈಲ್ವೆ ಅಪಘಾತ—ಉತ್ತರ ಹಿಂದುಸ್ಥಾನದ ಮೊರಾದಾಬಾದ ಎಂಬಲ್ಲಿ ಒಂದು 'ಎಕ್ಸ್‌ಪ್ರೆಸ್' ಬಂಡಿಯು 'ಗೂಡ್ಸ್' ಬಂಡಿಗೆ [illegible] ಮಾಡಿದರು, ೫೭ ಮಂದಿಗೆ ಪೆಟ್ಟು ತಗಲಿತು. ಗೂಡ್ಸ್ ಟ್ರೇನಿನ ಹಲವು ಗಾಡಿಗಳು ಸುಟ್ಟು ಅಥವಾ ಪುಡಿ ನುಚ್ಚು ನೂರಾಗಿ ಹೋದವು.

ಖಿಲಾಫತ್ ಡೆಪ್ಯುಟೇಶನ್.

ಖಿಲಾಫತ್ ಡೆಪ್ಯುಟೇಶನಿನವರು ಪ್ಯಾರಿಸಿಗೆ ಹೋಗಿ ಅಲ್ಲಿ ಮಿತ್ರಪಕ್ಷದ [illegible] ತಮ್ಮ ಕೇಳಿಕೆಗಳನ್ನು ಅರ್ಪಿಸಬೇಕೆಂದಿದ್ದಾರೆ ಎಂದು [illegible] ವರ್ತಮಾನ

[illegible] ಮುಖಾಂತರ [illegible] ಸಂಬಂಧಿಸಿದ [illegible] ಈ ಕೌನ್ಸಿಲು ಸ್ಥಾಪನೆ [illegible] ಅವರ ಮುಂದೆ ತಮ್ಮ ಅಹವಾಲಿಗಳನ್ನು ಹೇಳಲಿಕ್ಕೆ [illegible] ಕೇಳಿಕೊಂಡದ್ದಕ್ಕೆ ಸಂಧಿ ಪರಿಷತ್ತಿನವರು ಹಿಂದುಸ್ಥಾನದ ಸರಕಾರದ ಸನದೀ ಪ್ರತಿನಿಧಿಗಳ ಹೇಳಿಕೆಯನ್ನು ಈ ಮೊದಲೇ ಪಡೆದಿದ್ದಾರೆ, ಹಿಂದುಸ್ಥಾನದಿಂದ ಬೇರೆ ಪ್ರತಿನಿಧಿಗಳಿಗೆ ಭೇಟಿಕೊಡಲು ಪರಿಷತ್ತಿನವರು ಒಪ್ಪುವುದಿಲ್ಲವೆಂದು ಉತ್ತರ ದೊರಕಿತು. ಖಿಲಾಫತ್ ಪ್ರಶ್ನೆಯು ಸಕಲ ಮುಸಲ್ಮಾನ ವೃಂದಕ್ಕೆ ಸಂಬಂಧ ಪಟ್ಟ ಮಹತ್ವದ ವಿಷಯವಾದ ಕಾರಣ ಅದನ್ನು ಕುರಿತು ಹಿಂದುಸ್ಥಾನದ ಪ್ರತಿನಿಧಿಗಳು ಎಂಬ ಅರ್ಥದಲ್ಲಿ ತಮ್ಮನ್ನು ಸಂಕೋಚ ದೃಷ್ಟಿಯಿಂದ ಲೆಕ್ಕಿಸದೆ ಅಖಿಲ ಮುಸಲ್ಮಾನ ಜನಾಂಗದ ಕಡೆಯವರೆಂದಾದರೂ ಭೇಟಿ ಕೊಡಿಸಬೇಕೆಂದು ಪುನಃ ಡೆಪ್ಯುಟೇಶನವರು ತಿಳಿಸಿದರು. ತುರ್ಕಿಗೆ ಸಂಬಂಧಪಟ್ಟ ಪ್ರಾಮುಖ್ಯ ಶರ್ತಗಳು ಈ ಮೊದಲೇ ಮಿತ್ರಪಕ್ಷದವರಿಂದ ಠರಾವಣೆಯಾಗಿರುವ ಕಾರಣ ಈಗ ಪುನಃ ಈ ಡೆಪ್ಯುಟೇಶನಿಗೆ ಅವರ ಮನೋಗತವನ್ನು ತಿಳಿಸಲು ಅವಕಾಶ ಕೊಟ್ಟು ಫಲವೇನೂ ಇರಲಾರದು ಎಂದು ಬ್ರಿಟಿಷ ಸೆಕ್ರೆಟರಿಗಳು ಮಂತ್ರಿಗಳ ಪರವಾಗಿ ಪ್ರತ್ಯುತ್ತರ ಕೊಟ್ಟರು. ಈ ರೀತಿಯಾಗಿ ನಿರಾಶೆಯ ಉತ್ತರ ದೊರೆತ ಮೇಲೆ ಈ ಡೆಪ್ಯುಟೇಶನವರು ಮಿತ್ರಪಕ್ಷದ ಕೌನ್ಸಿಲಿನ ಅಧ್ಯಕ್ಷರಿಗೂ ಬಂದು ಸೇರಿದ್ದ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳಿಗೂ ಇದೇ ೨೧ನೇ ತಾರೀಕಿಗೆ ಬಿಟ್ಟ ತಂತಿಯಲ್ಲಿ ಈ ಬಗೆಯ ಅನಾದರಣೆ ಉತ್ತರವನ್ನು ಕುರಿತು ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದರು; ಗ್ರೀಸ ರಾಜ್ಯದೊಡನೆ ತುರ್ಕಿಯು ಯುದ್ಧಕ್ಕೆ ಕೈ ಹಾಕಿರಲ್ಲವಾದರೂ ಅಂಥಾ ಗ್ರೀಸ ರಾಜ್ಯವು ತುರ್ಕಿಯ ವಸಾಹತುಗಳಲ್ಲಿ ಕೆಲವನ್ನು ವಿನಾಕಾರಣವಾಗಿ ಕಸಕೊಂಡಿದ್ದುದನ್ನು ಲೆಕ್ಕಿಸದ ಆ ಗ್ರೀಸ ರಾಜ್ಯಕ್ಕೂ ಈ ಪರಿಷತ್ತಿನಲ್ಲಿ ಸ್ಥಾನವನ್ನು ಕೊಟ್ಟು ಹಿಂದುಸ್ಥಾನದ ಮುಸಲ್ಮಾನ ಪ್ರತಿನಿಧಿಗಳಿಗೆ ಮಾತ್ರ ಈ ರೀತಿಯಾಗಿ ಬಾಲಿಂದ ಒದ್ದುಬಿಡುವುದು ನ್ಯಾಯವಲ್ಲ. ಸಂಧಿ ಪರಿಷತ್ತಿನವರು ಲೋಕದಲ್ಲಿ ಶಾಂತಿಯನ್ನು ನೆಲೆಗೊಳಿಸಬೇಕೆಂದಿರುವ ಧ್ಯೇಯಯವನ್ನು ಮೂಲೆಗೊತ್ತಿ ವೈಮನಸ್ಸಿನ ಬೀಜವನ್ನು ಹರಡಿ ಬಿತ್ತರಿಸಿದಂತಾದೀತು ಎಂದು ಡೆಪ್ಯುಟೇಶನ್ನವರು ಮಿತ್ರಪಕ್ಷದ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ, ಇದಲ್ಲದೆ ಕೊನಸ್ಟಂಟಿನೋಪಲವನ್ನು ಮಿತ್ರಪಕ್ಷದವರು ಆಕ್ರಮಿಸಿಕೊಂಡದ್ದು ಶೇಕ್ ಅಲ್ ಇಸ್ಲಾಮ್ ಎಂಬ ಧರ್ಮಸಂಬಂಧವಾದ ಹುದ್ದೆಯವರನ್ನು ನಿರ್ಬಂಧಿಸಿದ್ದು ಮುಸಲ್ಮಾನ ಧರ್ಮದ ಕಡೆಗೆ ಅಪಮಾನ ಮಾಡಿದಂತಾಯಿತು ಎಂದೂ ಈ ಡೆಪ್ಯುಟೇಶನದವರು ಎಚ್ಚರಿಸಿದ್ದಾರೆ.

ದಕ್ಷಿಣ ಕನ್ನಡ

ಕುಕ್ಕುಡ:—ಈ ಗ್ರಾಮದಲ್ಲಿ ಒಂದು ಲೋಕಲ್‌ಫಂಡ್ ಬೋರ್ಡು ಸ್ಕೂಲ್ ಒಂದು ಸಹಕಾರ ಸಂಘದ ಆಫೀಸು, ಪೋಲೀಸ್ ಔಟ್‌ಪೋಸ್ಟ್ ಶೆಡ್ಡು, ಗಾರ್ಡ್ ಶೆಡ್ಡು, ದೊಡ್ಡ ದೇವಸ್ಥಾನ ವಗೈರೆಗಳು ಇದ್ದು, ವರ್ಷಂಪ್ರತಿ ಜಾತ್ರೆ ಉತ್ಸವಕ್ಕೆ ಸುಮಾರು ೫,೬ ಸಾವಿರ ಜನಗಳು ಸೇರಿರುವುದಲ್ಲದೆ ಮೈಸೂರು ಕೊಡಗು ಮುಂತಾದ ಅನೇಕ ಪರದೇಶಸ್ಥರೂ ಕೂಡಾ ಇಲ್ಲಿಗೆ ವ್ಯಾಪಾರಕ್ಕೆ ಬಂದು ಸುಮಾರು ಎರಡು ತಿಂಗಳ ಪರಿಯಂತರ ನಿಂತು ವ್ಯಾಪಾರ ಮಾಡುತ್ತಾ ನಾಲ್ಕು, ಐದು ಲಕ್ಷ ರೂಪಾಯಿಯ ವ್ಯವಹಾರಗಳು ನಡಿಯುತ್ತವೆ.—ಇದಕ್ಕಾಗಿ ಪ. ಪಿ ಮುನ್ಸಿಪಾಲಿಟಿಗಳು ಪಾರ್ಸೆಲ್ ಆಗಾಗ್ಗೆ ತಪ್ಪದೆ ಬರುತ್ತಾ ಇರುತ್ತದೆ. ಇದು ಬಟವಾಡೆಯಾಗುವಾಗ್ಗೆ ಖಿಲಾಸ ಬದಲಾಗುತ್ತದೆ—ಇದರಿಂದ ಕಷ್ಟಕ್ಕೆ ವ ನಷ್ಟಕ್ಕೆ ಗುರಿಯಾಗಬೇಕಾಗುತ್ತದೆ. ಮತ್ತು ಶಾಲೆಯ ಉಪಾಧ್ಯಾಯರಿಗೆ ವ ಸಂಘದವರಿಗೆ ಕೂಡಾ ಕಾಗದ ವಗೈರೆಗಳು ಸರಿಯಾಗಿ ಸಿಕ್ಕದೆ ೧೮ ಮೈಲು ದೂರವಿರುವ ಉಪ್ಪಿನಂಗಡಿಗೆ ಆಗಾಗ್ಗೆ ಹೋಗುತ್ತಾ ಕಷ್ಟಕ್ಕೆ ಗುರಿಯಾಗುತ್ತಾರೆ. ಆದರೆ ಈ ಸಂಗತಿಯಲ್ಲಿ ಲೋಕೋಪಕಾರಿಗಳಾದ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ್ ದೊರೆಗಳವರಾದರೂ ಇದಕ್ಕೆ ಪೂರ್ಣ ಗಮನ ಕೊಟ್ಟು ಈ ಕುಕ್ಕುಡದಲ್ಲಿ ಅತಿಶೀಘ್ರದಿಂದ ಒಂದು ಟಪ್ಪಾಲು ಆಫೀಸು ತೆರೆಯುವಂತೆ ದಯವಿಡುತ್ತಿದ್ದರೆ ಕನ್ಯಾಡಿ, ಉಜಿರೆ, ನೆರಿಯಾಡಿ, ಪಟ್ಟೂರು, ಗೋಳಿತಟ್ಟು, ಶಿರ್ಲಾ, ಈ ಗ್ರಾಮಸ್ಥರಿಗೆ ಹೆಚ್ಚಿನ ಉಪಕಾರ ದೊರೆತಂತಾಗುವುದು.

ಹೆಬ್ರಿ. ಈಗ್ರಾಮದ ಎಪ್ರಿಲ್ ಕಿಸ್ತಿನ ತೀರ್ವೆ ರೂಪಾಯಿ ೬೦೬—೬—೭ ಯನ್ನು ಪಾವತಿಗೆ ಇದೇ ಗ್ರಾಮದ ಶ್ಯಾನುಭೋಗರು ತಾ. 16ನೇ ಬೆಳಿಗ್ಗೆ 4½ ಘಂಟೆಯ ಸಮಯ ಇಲ್ಲಿಂದ ಹೊರಟು I ½ ಮೈಲು ದೂರದಲ್ಲಿರುವ ಜರುವತ್ತು ಎಂಬಲ್ಲಿ ಹೋಗುವಾಗ್ಗೆ ಯಾರೋ ಘಾತುಕರು ಅವರ ಮೇಲೆ ಬಿದ್ದು ಇಸ್ಲೋಲು ಮೊಬಲಗು, ಹಾಜರಿ, ಇಸ್ಲೋಲುಪಟ್ಟಿ, ವಗೈರೆ ವಿಶಿಷ್ಟ ರಿಕಾರ್ಡುಗಳ ಸಮೇತ ದೋಚಿಕೊಂಡು ಹೋದರೆಂಬುದು ಬಹಳ ಶೋಚನೀಯವಾದ ವಿಷಯ! ಇನ್ನುಮುಂದೆ ಯಾವಾಗಲು ಗ್ರಾಮಾಧಿಕಾರಿಗಳ ಭಯದಿಂದ, ತಕ್ಕ ಬಂದೋಬಸ್ತು ಇಲ್ಲದೆ ಇಸ್ಲೋಲು ಮೊಬಲಗನ್ನು ರವಾನಿಸಿಕೊಡುವ ಪಟೇಲರು ಮುಂದಾಗಿ ಜಾಗ್ರತೆ ಇಟ್ಟುಕೊಂಡರೆ ಇಂಥಾ ಕ್ಷಾಮಕಾಲದಲ್ಲಿ ಹೆಚ್ಚಿನ ಪ್ರಯೋಜನ ಕಾಣಿಯಾಗಲಾರದೇ!]

ಪುತ್ತೂರು ಸೆಕೆಂಡರಿ ಶಾಲೆಯ ಎರಡನೆಯ ವರ್ಧಂತಿ ಉತ್ಸವ.

ಕಳೆದ ತಾ. ೧೭ನೇ ಶನಿವಾರ ಅಪರಾಹ್ನ ೪ ಗಂಟೆ ಸಮಯಕ್ಕೆ ವರ್ಧಂತಿ ಉತ್ಸವವು ಜರಗಿತು. ಹಜ್ರತ್ ಜಿಲ್ಲಾ ಕಲೆಕ್ಟರಾದ ಮಿ| ಎಲ್ಲಿಸ್ ದೊರೆಗಳವರು ಅಗ್ರಾಸನರಾಗಿದ್ದರು. ಜಿಲ್ಲೆಯ ರವಿವರ್ಮ ನರಸಿಂಹರಾಜರೂ, ಲಕ್ಷ್ಮೀನಾಥ ಸ್ವಾಮಿಜಯವರೂ, ಇಲ್ಲಿಯ ಡೆಪ್ಯುಟಿ ಕಲೆಕ್ಟರರೂ, ಮುನ್ಸಿಫರೂ, ತಹಸಿಲ್ದಾರರೂ, ಸ.ಜಸ್ಟೀಟರೇ ಮೊದಲಾದ ಪ್ರಮುಖ ಗೃಹಸ್ಥರು ನೆರೆದಿದ್ದರು.

ಜಿಲ್ಲಾ ಕಲೆಕ್ಟರರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಕೂಡಲೆ, ಕೆಲ ಮಂದಿ ವಿದ್ಯಾರ್ಥಿಗಳು ದೇವರ ಪ್ರಾರ್ಥನೆಯನ್ನು ಚೆಲೋ ರೀತಿಯಿಂದ ಹಾಡಿದರು. ಬಳಿಕ ಶಾಲಾ ಹೆಡ್ಮಾಸ್ತರರು ಶಾಲೆಯ ಗತವರುಷದ ವರದಿಯನ್ನು ಓದಿದರು. ಆ ವರದಿಯಲ್ಲಿ ಮೊದಲಾಗಿ ಶಾಲೆ ಪ್ರಾರಂಭವಾದಂದಿನಿಂದ ಒಸೆರಂ ಹೆಡ್ಮಾಸ್ತರರೂ, ಕರೆಸ್ಪೊಂಡೆಂಟರೂ ಆಗಿರುತ್ತಿದ್ದ ಮ| ರಾ| ರಾ| ರಾಯಬಹದ್ದೂರ್ ಎಮ್. ರಘುನಾಥರಾಯರು ಇತ್ತಲಾಗೆ ಅನಾರೋಗ್ಯದ ನಿಮಿತ್ತ ಶಾಲೆಯನ್ನು ಬಿಟ್ಟು ಹೋದುದಕ್ಕಾಗಿ ದುಃಖ ಸೂಚನೆಯನ್ನು ತೋರಿಸಿದ್ದಲ್ಲದೆ ಅವರು ಮಾಡಿದ ಮಹತ್ಕಾರ್ಯಗಳಿಗಾಗಿ ಅವರಿಗೆ ಧನ್ಯವಾದಗಳು ಅರ್ಪಿಸಲಾಯಿತು. ಮತ್ತು ಕಳೆದ ಜೂನ್ ತಿಂಗಳ ಆದಿಯಲ್ಲಿ V ಫಾರ್ಮನ್ನು ಇಡವ ಕಾರಣ IV ಫಾರ್ಮಿನ ವಿದ್ಯಾರ್ಥಿಗಳೂ, IIIನೇ ಫಾರ್ಮಿನ ಹಲವು ಮಂದಿ ಹುಡುಗರೂ ಬೇರೆ ಶಾಲೆಗಳಿಗೆ ಹೋದರು. ಹೀಗಾಗಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು [illegible] ಇಳಿಯಿತು. ಇದರಿಂದ ಶಾಲಾ ಉತ್ಪತ್ತಿಯು ಕಳೆದ ವರುಷ ೪೧೫೯ ರೂಪಾಯಿ ಇದ್ದುದು ಪಾಡಿಯು ವರುಷದಲ್ಲಿ ರೂ. ೩೮೭೦ಕ್ಕೆ ತಗ್ಗಿತು. ಖರ್ಚು ಕಳೆದ ವರ್ಷ ರೂ. ೪೦೬೬ ಆಗಿದ್ದುದು ವರದಿ ವರುಷದಲ್ಲಿ ರೂ. ೫೪೭೦ಕ್ಕೆ ಏರಿತು. ಪುಸ್ತಕ ಭಂಡಾರ, ವಸ್ತುಪ್ರದರ್ಶನಾಲಯ ಮತ್ತು ತೋಟ ಇವುಗಳು ಚೆಲೋ ಸ್ಥಿತಿಯಲ್ಲಿವೆ. ವಿದ್ಯಾರ್ಥಿ ಸಹಕಾರ ಸಂಘವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಲೇ ಇದೆ. ಇದರಿಂದ ಹುಡುಗರಿಗೆ ವ್ಯಾಪಾರ ವ್ಯವಹಾರಗಳ ಮಾಹಿತಿಯೂ, ಆವಾಯುದಾರಿ ಕೆಲಸ ಮಾಡಲು ಶಕ್ತಿಯೂ, ಉತ್ಸಾಹವೂ ಉಂಟಾಗಿದೆ. ವಿದ್ಯಾರ್ಥಿ

[illegible]

ಸ್ವದೇಶಾಭಿಮಾನಿ.

ಶಕ ೧೮೪೨ ವೈಶಾಖ ಶು| ೧೨ ಶುಕ್ರವಾರ.

ಕರ್ಣಾಟಕ ರಾಜಕೀಯ ಪರಿಷತ್ತು.

ಕರ್ಣಾಟಕದಲ್ಲಿ ಈಚೀಚೆಗೆ ಜಾಗ್ರತಿಯು ಉಂಟಾಗಲು ಹತ್ತಿದೆ ಎಂಬುದು ಅದರ ಇತ್ತಲಾಗಿನ ಚರಿತ್ರವನ್ನು ನೋಡುವಾಗ ಹೇಳಬಹುದಾಗಿದೆ. ಮಹಾಯುದ್ಧವು ಅವತರಿಸಿದಂದಿನಿಂದ ಇತರ ದೇಶಗಳಲ್ಲಿ ಉಂಟಾದಂತೆ ಹಿಂದುಸ್ಥಾನದಲ್ಲೂ ಜಾಗ್ರತಿ ಉಂಟಾಯಿತು. ಮತ್ತು ಆ ತೆರೆಯು ಕರ್ಣಾಟಕದ ಭಾಗದಲ್ಲೂ ಅಪ್ಪಳಿಸಿದರಿಂದ ಕೆಲಕೆಲವು ಚಟುವಟಿಕೆಗಳು ಕಾಣಿಸಹತ್ತಿದವು. ಮಹಾಯುದ್ಧದಿಂದ ನಿಜವಾಗಿ ಅನೇಕ ಅನಿಷ್ಟಗಳು ಸಂಭವಿಸಿದ್ದಾವಾದರೂ ಹಿಂದೀ ದೇಶವು ತನ್ನ ಪರಿಸ್ಥಿತಿಯ ವಿಷಯದಲ್ಲಿ ಏನು ಕಣ್ಣು ತೆರೆದಿದೆಯೊ ಆ ಬಗ್ಗೆ ಅದು ಮಹಾಯುದ್ಧದ ಋಣಿಯಾಗದೆ ಇರಲಿಕ್ಕಿಲ್ಲ. ಹಿಂದುಸ್ಥಾನದಲ್ಲಿ ಸದ್ಯಃ ಅವತರಿಸಿದ 'ರಿಫೋರ್ಮ್ ಎಕ್ಟ್'ದರೂ ಮಹಾಯುದ್ಧದ ಒಂದು ಫಲವೇ ಸರಿ. ಎಷ್ಟು ಸತ್ವವುಳ್ಳದ್ದಾಗಲಿ, ನಿಃಸತ್ವವಾಗಲಿ, ತಂದೆತಾಯಿಗಳು ಕೂಡಿ ನೆಂಟಸ್ತಿಕೆ ಹೂಡಿದ ಗಂಡನೊಡನೆ—ಅವನು ಒಳ್ಳೆಯವನಿರಲಿ, ಇಲ್ಲದಿರಲಿ—ಮಗಳಿಗೆ ಮುಂದಿನ ತನ್ನ ಆಯುಷ್ಕಾಲವನ್ನು ಕಳೆಯುವುದು ಹೇಗೆ ಅಪರಿಹಾರ್ಯವಾಗಿರುವುದೊ ಅದೇ ರೀತಿಯಿಂದ ಹಿಂದೂಸ್ಥಾನಕ್ಕಾದರೂ ಈ ಮೊಂಟೆಗ್ಯು-ಎಕ್ಟಿನ ಆಡಳಿತೆಯಲ್ಲಿ ತನ್ನ ಕಾಲವನ್ನು ಕಳೆಯಬೇಕಾಗಿದೆ ಎಂಬುದು ನಿರ್ವಿವಾದವು. ಈ ಎಕ್ಟು ಜಾರಿಯಲ್ಲಿ ಬರುವಾಗ ಈಗ ಇರುವ ರಾಜಕೀಯ ಪರಿಸ್ಥಿತಿಯಲ್ಲಿ ಎಷ್ಟೊ ಬದಲಾವಣೆಗಳು ಆಗಲಿಕ್ಕಿವೆ. ಈ ಬದಲಾವಣೆಗಳು ಕೂಡಿದ ಮಟ್ಟಿಗೆ ಅನುಕೂಲವಾಗುವಂತೆ ಹಿಂದುಸ್ಥಾನವು ಯತ್ನಿಸುತ್ತಿದೆ. ಹಿಂದುಸ್ಥಾನವು ಯತ್ನಿಸುತ್ತಿದೆ ಎಂಬುದರ ಅರ್ಥವು ಹಿಂದೂಸ್ಥಾನದೊಳಗಿನ ಬಂಗಾಲ, ಮಧ್ಯಪ್ರಾಂತ, ಪಂಜಾಬ, ಮುಂಬಯಿ ಮಹಾರಾಷ್ಟ್ರ ಗುಜರಾಥ ಇತ್ಯಾದಿ ಭಾಗಗಳು ಯತ್ನಿಸುತ್ತಿವೆ ಎಂಬುದೆ ಆಗಿದೆ. ಈ ಬೇರೆಬೇರೆ ಭಾಗಗಳಂತೆ ಕರ್ಣಾಟಕವು ಸಹ ತನ್ನಲ್ಲಿ ಜಾಗ್ರತೆಯನ್ನು ಹುಟ್ಟಿಸಿ ಈ ನಾಜೂಕಾದ ಮತ್ತು ಮಹತ್ವದ ಸಂದರ್ಭದಲ್ಲಿ ತನ್ನ ಕರ್ತವ್ಯವೇನು ಎಂಬುದನ್ನು ಆಲೋಚಿಸ ಹತ್ತಿದೆ. ಬರುವ ತಿಂಗಳಲ್ಲಿ ಧಾರವಾಡದಲ್ಲಿ ಜರಗಲಿಕ್ಕಿರುವ ಕರ್ಣಾಟಕ ರಾಜಕೀಯ ಪರಿಷತ್ತಿನ ಮೇಲಿಂದ ಕರ್ಣಾಟಕವು ಎಚ್ಚತ್ತಿದೆ ಎಂಬ ಮಾತು ನಿಷ್ಪನ್ನವಾಗುತ್ತದೆ. ಮಾತ್ರವಲ್ಲ, ಕುಮಟೆಯ 'ಕಾನಡಾವೃತ್ತ'ದ ಗತಸಂಚಿಕೆಯನ್ನು ನೋಡುವಾಗ ಉತ್ತರ ಕಾನಡಾ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಹೊಸದಾಗಿ ಪ್ರಾರಂಭವಾಗುವದಿದೆ ಎಂದು ತಿಳಿದುಬರುತ್ತದೆ. ಇದರ ಮೇಲಿಂದಲೂ ನವಜಾಗ್ರುತಿಯ ತೆರೆಯು ಕರ್ಣಾಟಕದ ಎಲ್ಲ ಭಾಗಗಳಲ್ಲಿ ಪ್ರವೇಶಿಸಿದೆ ಎಂದು ಹೇಳಲು ಸಂಕೋಚವಿರದು. ಅಲ್ಲದೆ, ಹಂಪೆಯಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದಿನಂತೆ ಬಹು ಉತ್ಸಾಹದಿಂದ ಜರಗುವದಿದೆ ಎಂಬುದು ಕನ್ನಡಿಗರಿಗೆ ವಿಶ್ರುತವಾದ ವಿಷಯವೆ ಸರಿ. ಈ ಮಧ್ಯದಲ್ಲಿ ಸಹಕಾರ ಸಂಘದ ಕೊನ್ಫರೆನ್ಸು ಸಹ ಅದೇ ಧಾರವಾಡದಲ್ಲಿ ಜರಗಲಿಕ್ಕಿದೆ. ಸಾರಾಂಶ, ಕನ್ನಡಿಗರು ಎಚ್ಚತ್ತು ತಮ್ಮ ಪರಿಸ್ಥಿತಿಯನ್ನು ವಿಶ್ವತಿಯಲ್ಲಿ ನೋಡಲು ಉಪಕ್ರಮಿಸಿದ್ದಾರೆಂಬುದೂ ಸ್ಪಷ್ಟವಾಗುತ್ತದೆ. ಈ ಅಂಶ ಕರ್ಣಾಟಕವು ಅಭಿನಂದನೀಯವಾಗಿದೆ.

[illegible] ದಗಳಲ್ಲಿ ಈ ವಿಷಯಗಳಿಂದ [illegible] ನಡೆದ [illegible] ಇವುಗಳನ್ನು ಕೂಡ ಎಣಿಸಬಹುದಾಗುತ್ತದೆ. ಇದನ್ನೇ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಪರಿಷತ್ತುಗಳ ಅಥವಾ ಸಮ್ಮೇಳನಗಳ ಸಂಖ್ಯೆಯು ಹೆಚ್ಚಾಗುವುದರಿಂದ ಒಂದು ಜನತೆಯ ಕಾರ್ಯಪಟುತೆಯು ಸಿದ್ಧವಾಗುವುದಿಲ್ಲ; ಎಷ್ಟೊ ಸಾರಿ ಇಂಥ ಪರಿಷತ್ತುಗಳು ಕೇವಲ ಡಾಂಭಿಕವಾಗಿರುತ್ತವೆ. ಇದನ್ನು ನಾವು ಸ್ವತಃ ಬಲ್ಲೆವು. ಪರಂತು ನಾಳೆ ಧಾರವಾಡದಲ್ಲಿ ಜರಗುವ ಪರಿಷತ್ತಿನ ವಿಷಯದಲ್ಲಿ ಇಂಥ ಯಾವ ವಿಧಾನವನ್ನೂ ಯಾರೂ ಮಾಡಲಿಕ್ಕಿಲ್ಲ. ಇದರ ಕಾರಣವೇನೆಂದರೆ; ಕರ್ಣಾಟಕವು ಈ ವರೆಗೆ ರಾಷ್ಟ್ರೀಯ ಮತ್ತು ವೈಯಕ್ತಿಕ ಈ ಎರಡೂ ದೃಷ್ಟಿಯಿಂದ ಅನೇಕ ಹಾನಿಗಳಿಗೆ ಒಳಗಾಗಿದೆ. ಶಿಕ್ಷಣವು ಇತರ ಭಾಗಗಳಲ್ಲಿ ಹೇಗೆ ತಕ್ಕ ಮಟ್ಟಿಗೆ ಸಮಾಧಾನಕರ ಸ್ಥಿತಿಯಲ್ಲಿ ಉಂಟೊ ಹಾಗೆ ಕರ್ಣಾಟಕದಲ್ಲಿ ಸರ್ವಥಾ ಇಲ್ಲ. ಉದ್ಯೋಗಕಲೆಗಳಂತೂ ಲುಪ್ತವಾಗಿಯೆ ಹೋಗಿವೆ. ಕಾವೇರಿ, ಕೃಷ್ಣಾ ಮುಂತಾದ ಮಹಾನದಿಗಳೂ ಋದ್ಧಕರ್ನಾಟಕದಲ್ಲೂ ಹಾಗು ಅಜುಬಾಜುವಿನಲ್ಲೂ ಹರಿಯುತ್ತಿರುವ ಕಾರಣ ಮತ್ತು ಮೇಘರಾಜನ ಕೃಪಾದೃಷ್ಟಿಗೆ ಹೆಚ್ಚಿನ ತೊಡಕು ಇಲ್ಲವಾದ್ದರಿಂದ ಕರ್ಣಾಟಕದ ಪ್ರದೇಶವು ಫಲವತ್ತಾದ್ದು; ತಥಾಪಿ ಜನರಲ್ಲಿ ದಾರಿದ್ರ್ಯವು ತುಂಬಿಕೊಂಡಿದೆ. ವ್ಯಾಪಾರದ ಮಟ್ಟಿಗಾದರೂ ಈ ಕರ್ಣಾಟಕದ ಸ್ಥಿತಿಯು ಕೇವಲ ಶೋಚನೀಯವಾಗಿದೆ ಎಂದಮೇಲೆ, ಶಿಕ್ಷಣ, ಉದ್ಯಮ, ಕೃಷಿ, ವಾಣಿಜ್ಯ ಇವುಗಳ ಸ್ಥಿತಿಯು ಕೇವಲ ನಿಕೃಷ್ಟವಿರುವಲ್ಲಿ ಕನ್ನಡಿಗರಿಗೆ ಅವುಗಳನ್ನು ಬಗೆಹರಿಸಲು, ತಾವು ಯತ್ನಿಸಬೇಕು—ಮನಃ ಪೂರ್ವಕವಾಗಿ ಪ್ರಯತ್ನ ಮಾಡಬೇಕು ಎಂದು ತೋರದೆ ಇದ್ದೀತೆ? ಅರ್ಥಾತ್, ನಾಳೆಯ ಪರಿಷತ್ತು ಕರ್ಣಾಟಕದ ಶಿಕ್ಷಣ, ಉದ್ಯೋಗ, ಕೃಷಿ ಮತ್ತು ವಾಣಿಜ್ಯ ಇವುಗಳ ಪುನರುಜ್ಜೀವನೆಗೆ ಒದಗಿದೀತೆಂಬುದಕ್ಕೆ ಅಡ್ಡಿ ಇಲ್ಲ.

'ರಾಜಕೀಯ ಪರಿಷತ್ತಿ'ನಲ್ಲಿ ಈ ಇತರ ವಿಷಯಗಳ ಸಮಾವೇಶವು ಹೇಗಾದೀತೆಂದು ಹಲವರು ನೆನಸಬಹುದು. ಪರಂತು ರಾಜಕೀಯ ವೆಂದರೆ ಕೇವಲ ಸರಕಾರಿ ಅಧಿಕಾರಿಗಳ ಕೃತ್ಯಗಳನ್ನು ಅಥವಾ ದೋಷಗಳನ್ನು ಚರ್ಚಿಸಿ ಅವುಗಳ ನಿವಾರಣೆಯ ಬಗ್ಗೆ ಯತ್ನಿಸುವುದು ಎಂಬ ಅರ್ಥವಲ್ಲ. ಶಿಕ್ಷಣ, ಉದ್ಯೋಗ, ಕೃಷಿ, ವ್ಯಾಪಾರ ಇತ್ಯಾದಿ ಅನೇಕ ವಿಷಯಗಳು ರಾಷ್ಟ್ರ ಜೀವನಕ್ಕೆ ಅವಶ್ಯಕವಾಗಿರುವುದರಿಂದ ಅವುಗಳ ಉನ್ನತಿಯ ಬಗ್ಗೆ ಯತ್ನಿಸುವುದು ರಾಜಕೀಯ ವಿಷಯವೆ ಆಗಿದೆ ಎಂಬುದನ್ನು ವಿವೇಕದಿಂದ ವಿಚಾರಿಸಿ ನೋಡಿದರೆ ಯಾರಿಗೂ ತಿಳಿದುಬರುವ ಹಾಗಿದೆ. ಮತ್ತು ಇದೇ ಕಾರಣದಿಂದ ಸರಕಾರವಾದರೂ ಮೇಲಿನ ಈ ಎಲ್ಲ ಸಂಗತಿಗಳನ್ನು ತನ್ನ ಕಾನೂನಿನ ಹೊಟ್ಟೆಯಲ್ಲಿ ಸೇರಿಸಿಕೊಂಡು ಅವುಗಳ ಬೇರೆ ಬೇರೆ ಇಲಾಖೆಗಳನ್ನು ಮಾಡಿದೆ. ರಾಷ್ಟ್ರೀಯ ಮತ್ತು ಪ್ರಾಂತಿಕ ಪರಿಷತ್ತುಗಳ ವಾರ್ಷಿಕ ಕಾರ್ಯಕ್ರಮಗಳಲ್ಲಿ ಕೇವಲ ರಾಜಕಾರಣ ಸ್ವಭಾವದ ಠರಾವುಗಳೇ ಹೆಚ್ಚು ಕಂಡುಬಂದರೂ ಕರ್ಣಾಟಕ ಪರಿಷತ್ತಿನಂಥ ಆಯಾ ಭಾಗದ ಸಂಕುಚಿತ ಸಮ್ಮೇಳನದಲ್ಲಿ ಶಿಕ್ಷಣ, ಉದ್ಯೋಗ ಮೊದಲಾದ ವಿಷಯಗಳ ಉದ್ಘಾಟನವಾಗುವುದು ಹಿತಾವಹವಾಗಿದೆ.

ಈ ವಿಷಯವನ್ನೆ ನಾವು ಬೇರೊಂದು ದೃಷ್ಟಿಯಿಂದ ವಿಚಾರ ಮಾಡಬಹುದು. ಮುಂಬಾಯಿ ಸಂಸ್ಥಾನದ ಪರಿಷತ್ತು ಮೊನ್ನೆ ತಾನೇ ಸೇರಿತು. ಆ ಮುಂಬಯಿ ಸಂಸ್ಥಾನದಲ್ಲಿ ಕರ್ಣಾಟಕವು ಅಂತರ್ಭೂತವಾಗುವಾಗ ಪುನಃ ಕರ್ಣಾಟಕಕ್ಕೆ ನವೀನ ಪರಿಷತ್ತಿನ ಆವಶ್ಯಕತೆ ಏನು ಎಂದು ಕೇಳಬೇಕಾಗುತ್ತದೆ. ಅರ್ಥಾತ್, ಸಾಮಾನ್ಯ ರೂಪದಿಂದ ಇಡೀ ಇಲಾಖೆಯ ಎಂದರೆ ಸಂಸ್ಥಾನದ ಹಾಲುಹವಾಲಗಳನ್ನು ಹೇಳಲು ಬಂದಿರುವ ಪರಿಷತ್ತಿನಲ್ಲಿ ಕರ್ಣಾಟಕದ ವಿಶಿಷ್ಟ ಸಂಕಷ್ಟಗಳನ್ನು ಹೇಳುವುದು ಯಾರು? ಮತ್ತು ಅಷ್ಟಕ್ಕೆ ಅವಕಾಶವಾದರೂ ಎಲ್ಲಿ? ಆದ್ದರಿಂದ ತನ್ನ ಕಷ್ಟಗಳನ್ನೂ, ತನ್ನ ಕೊರತೆಗಳನ್ನೂ ಕರ್ಣಾಟಕವು ತನ್ನ ಮುಖದಿಂದಲೆ ಹೇಳಬೇಕೆಂದಿರುವುದು. ಅದಲ್ಲದೆ, ಈ ಪರಿಷತ್ತಿಗೆ ಕನ್ನಡಪ್ರಾಂತಗಳ ಏಕೀಕರಣದ ಪ್ರಶ್ನೆಯು ಅತೀ ಮಹತ್ವದ್ದಾಗಿದೆ. ಬೇರೆ ಬೇರೆ ಆಳಿಕೆಗಳಿಗೆ ಒಳಪಟ್ಟ ಕನ್ನಡಿಗರು ಒಟ್ಟಿಗೆ ಒಂದೇ ಸ್ವರದಿಂದ 'ನಮ್ಮ ಪ್ರಾಂತವನ್ನು ಒಂದಾಗಿಸಿರಿ' ಎಂದು ಕೇಳಿಕೊಳ್ಳುವಾಗ ಆ ಕೇಳಿಕೆಯಲ್ಲಿ ಒಂದು ಬಗೆಯ ಆಕರ್ಷಕತೆಯು ಉಂಟಾಗುತ್ತದೆ. ಸಾರಾಂಶ ಆಯಾ ಭಾಗದ ವಿಶಿಷ್ಟ ಕೊರತೆಗಳನ್ನೂ, ಸಂಕಟಗಳನ್ನೂ ಅವರವರೇ ಸ್ವತಂತ್ರವಾಗಿ ಹೇಳುವುದು ಉಚಿತವಲ್ಲದೆ ದೊಡ್ಡ ಸಭೆಗಳಲ್ಲಿ ಸ್ಥಾನಿಕ ವಿಷಯಗಳನ್ನು ಎತ್ತುವುದೆಂದರೆ ನೆರೆಯವರು ಆಚರಿಸಿದ ಸತ್ಯನಾರಾಯಣವ್ರತದಲ್ಲಿ ತನ್ನ ಒಂದು ತೆಂಗಿನ ಕಾಯಿಯ ಸಮರ್ಪಣೆಯಿಂದ ಸತ್ಯನಾರಾಯಣನನ್ನು ಮೆಚ್ಚಿಸುವಂತಾಗಿದೆ.

ಇರಲಿ; ಕರ್ಣಾಟಕ ರಾಜಕೀಯ ಪರಿಷತ್ತು ಜರಗುವುದು ಯಾವ ದೃಷ್ಟಿಯಿಂದ ನೋಡಿದರೂ ಯುಕ್ತವೆಂದೇ ತೋರುವುದು. ಆದರೆ ನಾವು ಇಲ್ಲಿ ಒಂದು ಸೂಚನೆಯನ್ನು ಕೊಡಬೇಕೆಂದಿರುವೆವು. ಕಾಲಕ್ರಮೇಣ ಹೊಸ ಪರಿಷತ್ತುಗಳು ಬರುತ್ತಿದ್ದ ಹಾಗೆ ಅವುಗಳ ಧೋರಣವು, ಕರ್ತವ್ಯ ಮಾರ್ಗವು ಹಾಗು ಕಾರ್ಯಕ್ರಮವು ಇವ ರಾಷ್ಟ್ರೀಯ ಸಭೆಯೊಡನೆ ವಿಸಂಗತವಿರಬಾರದು. ನಿದ್ರಿತ ಮನುಷ್ಯನು ಎಚ್ಚರಾಗುವುದು ಒಳ್ಳೆದು; ಪರಂತು ಎಚ್ಚತ್ತ ಮೇಲೆ [illegible]

[illegible] ಸಮ್ಮೇಳನ [illegible] ಎಂದು ಮಾತ್ರ ಮಾಡಬೇಡಿರಿ. ಕರ್ಣಾಟಕ [illegible] ಪ್ರವಾದಕ್ಕೆ ಒಳಗಾಗಲಿಕ್ಕಿಲ್ಲವೆಂಬ ಭರವಸೆ ನಮಗಿದೆ. [illegible], ವಿಜಾಪುರ, ಬೆಳಗಾಂವ ಮುಂತಾದ ಕಡೆಯ ಪ್ರಮುಖ [illegible] ಯ ಮುಖಂಡರ ಹಸ್ತಕರಾಗಿ ರಾಷ್ಟ್ರೀಯ ಕಾರ್ಯಗಳಲ್ಲಿ [illegible] ಅಭ್ಯಾಸವುಳ್ಳವರಾಗಿದ್ದಾರೆ. ಅಲ್ಲದೆ, ನಾಳೆಯ ಪರಿಷತ್ತಿಗೆ ಮಹಾತ್ಮ ಗಾಂಧಿ, ಟಿಳಕ, ಕೇಳಕರ ಮುಂತಾದವರು ಆಗಮಿಸುವವರಿದ್ದಾರೆ. ಅವರ ನೇತೃತ್ವದ ಕೆಳಗೆ, ಅವರ ಮಾರ್ಗದರ್ಶಕತೆಯ ಮೇರೆಗೆ ಕರ್ಣಾಟಕ ಪರಿಷತ್ತು ನಡೆಯುವ ಕಾರಣ ಅದು ಅಡ್ಡದಾರಿಗೆ ಬೀಳಲಿಕ್ಕಿಲ್ಲವೆಂದು ಗಟ್ಟಿಯಾಗಿ ಹೇಳಬಹುದು. ರಾಜಕೀಯ, ಶೈಕ್ಷಣಿಕ, ಔದ್ಯೋಗಿಕ ಇತ್ಯಾದಿ ಸಂಗತಿಗಳಲ್ಲಿ ಕರ್ಣಾಟಕವು ಯಾವ ಮಾರ್ಗವನ್ನು ಅವಲಂಬಿಸಬೇಕು, ಅದರ ಪುರೋವೃದ್ಧಿಗೆ ಆವಶ್ಯಕವಾದ ವಿಷಯಗಳು ಏನೆಂದು ಸದರೀ ಪರಿಷತ್ತಿನಲ್ಲಿ ನಿರ್ಣೀತವಾದ ಬಳಿಕ ಆ ಕರ್ಣಾಟಕದಲ್ಲಿ ಅಂತರ್ಭವಿಸುವ ಉ. ಕಾನಡಾ ಮೊದಲಾದ ಜಿಲ್ಲೆಗಳು ಆ ನಿರ್ಣಯಗಳಿಗೆ ಅನುಸಾರವಾಗಿ ತಮ್ಮ ಕಾರ್ಯಗಳನ್ನು ನಾಗಿಸಿಕೊಳ್ಳುವುದು ಯುಕ್ತವಾಗಿದೆ. ಇಲ್ಲವಾದರೆ ಪಕ್ಷಭೇದಗಳ ಎಂದು ಹೇಳುವುದಕ್ಕಿಂತು ಪಕ್ಷದ್ವೇಷಗಳ ಭರತಿಯು ಬರುವ ಈ ಕಾಲದಲ್ಲಿ ಥಕ್ಕನೆ ಎಚ್ಚತ್ತವರು ಪೂರ್ವಾಪರ ವಿಚಾರ ಮಾಡದೆ, ತಮ್ಮ ಕಾರ್ಯದ ಗೂಡನ್ನು ಮುಖ್ಯ ಸಂಸ್ಥೆಗಳ ಸಂಕೋಲೆಗೆ ಜೋಡಿಸದೆ ಇರುವ ಪಕ್ಷದಲ್ಲಿ ಅಕಾರಣವಾಗಿ ಒಡಕಿನ ಪಾಪಕ್ಕೆ ಗುರಿಮಾಡಿಕೊಂಡಂತಾಗುತ್ತದೆ. ಇಂಥ ಪ್ರಸಂಗವನ್ನು ಒಳಜಿಲ್ಲೆಗಳು ತಂದುಕೊಳ್ಳಲಿಕ್ಕಿಲ್ಲವೆಂದು ಆಶಿಸಿ ಧಾರವಾಡದ ಕರ್ನಾಟಕ ಪರಿಷತ್ತು ಹಾಗು ಇತರ ಕಡೆಗಳಲ್ಲಿ ಸೇರಲಿಕ್ಕಿರುವ ಜಿಲ್ಲಾ ಸಭೆಗಳೂ ಯಶಸ್ವಿಯಾಗಲೆಂದು ಹಾರಯಿಸುವೆವು.

ಆಯುರ್ವೇದ ಔಷಧಾಲಯದ ಪ್ರವೇಶ ಸಮಾರಂಭ.

ನಮ್ಮ ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ ಕದ್ರಿಯಲ್ಲಿ ನೂತನವಾಗಿ ತಯಾರಿಸಿದ ಆಯುರ್ವೇದ ಭೂಷಣ ಶ್ರೀಯುತ ಯಮ್. ವಿ. ಶಾಸ್ತ್ರಿಗಳ ಔಷಧಾಲಯದ ಪ್ರವೇಶದ ಸಮಾರಂಭವು ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರ ಅಧ್ಯಕ್ಷತೆಯಲ್ಲಿ ಬಹು ಯಶಸ್ವಿತನದಿಂದ ನಡೆಯಿತು. ಈ ಸಮಾರಂಭದ ವೃತ್ತಾಂತವನ್ನೂ, ಸಮಾರಂಭಕ್ಕೆ ಚಿತ್ತಯಿಸಿದ ಇಲ್ಲಿಯ ಪ್ರಮುಖ ನಾಗರಿಕರ ಹೆಸರುಗಳನ್ನೂ ಮಂಗಳೂರ ವೃತ್ತದಲ್ಲಿ ಕೊಟ್ಟಿದ್ದೇವೆ. ಮಂಗಳೂರಿನಂಥ ದೊಡ್ಡ ಶಹರಿನ ಆಯುರ್ವೇದ ಔಷಧಾಲಯದ ಆವಶ್ಯಕತೆಯು ಇತ್ತು. ಇಲ್ಲಿ ಅನೇಕ ವೈದ್ಯಮಹಾಶಯರು ಆಯುರ್ವೇದೀಯ ಚಿಕಿತ್ಸೆಯನ್ನು ನಡಿಸುತಿದ್ದು ರೋಗಗಳನ್ನು ಗುಣ ಪಡಿಸುತಿದ್ದಾರೆ. ಆದರೂ ಆಯುರ್ವೇದ ಶಾಸ್ತ್ರ, ಆಯುರ್ವೇದ ಚಿಕಿತ್ಸೆ, ಆಯುರ್ವೇದ ಔಷಧ ಇತ್ಯಾದಿ ಸಂಗತಿಗಳನ್ನು ಕಣ್ಣು ಮುಂದೆ ತಂದು ಕೊಡುವ ಕಾಯಂ ಸ್ವಭಾವದ ಒಂದು ಸಂಸ್ಥೆಯು ಅಗತ್ಯವಿತ್ತು. ಆಯುರ್ವೇದ ಭೂಷಣ ಯಮ್. ವಿ. ಶಾಸ್ತ್ರಿಗಳ ಈ ಅಭಿನವ ಮಂದಿರವು ಮೂರ್ತಿಮತ್ತಾಗಿ ಮೇಲಿನ ವಿಷಯಗಳ ಸಾಕ್ಷಿಯನ್ನು ಕೊಡುತ್ತದಾದ ಕಾರಣ ಮೇಲಿನ ನ್ಯೂನತೆಯು ಮಂಗಳೂರಿನ ಮಟ್ಟಿಗಾದರೂ ಹೋಯಿತೆನ್ನಬಹುದು. ಮೊನ್ನೆಯ ಸಮಾರಂಭಕ್ಕೆ ಚಿತ್ತಯಿಸಿದ ಪಟ್ಟಣದೊಳಗಿನ ಮಹಾಜನರನ್ನು ನೋಡುವಾಗ ಶಾಸ್ತ್ರಿಗಳ ಪ್ರಯತ್ನವು, ಉದ್ಯೋಗವು ಹಾಗು ಅವರ ನೂತನ ಸಂಸ್ಥೆಯು ಲೋಕ ಪ್ರಿಯವಾಗ ಹತ್ತಿವೆ ಎಂದು ಹೇಳಲು ಯಾವ ಸಂಕೋಚವೂ ತೋರದು. ಇಲ್ಲಿ ದೇಶೀಯ ಔಷಧಗಳ ವೃತ್ತಿಯನ್ನು ನಡಿಸುವವರು ಅನೇಕರಿದ್ದಾರೆ. ಆದರೆ ವೇದಮೂರ್ತಿಗಳಾದ ವೆಂಕಟೇಶ ಶಾಸ್ತ್ರಿಗಳು ಕೇವಲ ಸ್ವಪ್ರಯತ್ನದಿಂದಲೇ ಚಿರಸ್ಥಾಯಿಯಾದ ಇಂಥ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇದು ಅವರಿಗೆ ತುಂಬಾ ಭೂಷಣಾಸ್ಪದವು. ಈ ಕಾಲದಲ್ಲಿ ಯಾವ ವಿಷಯದಲ್ಲಾದರೂ ವೈಯಕ್ತಿಕ ಪ್ರಯತ್ನಕ್ಕಿಂತ ಸಾಂಘಿಕ ಪ್ರಯತ್ನವು ಆವಶ್ಯವಿರುತ್ತದೆ. ಈ ಸಂಗತಿಯನ್ನು ತಿಳಿದು ಆರ್ಯವೈದ್ಯದ ಇತರ ಅಭಿಮಾನಿಗಳು ಹಾಗು ವ್ಯವಸಾಯಿಗಳು ಶ್ರೀಯುತ ಶಾಸ್ತ್ರಿಗಳ ಪ್ರಮುಖತ್ವದ ಕೆಳಗೆ ಆಯುರ್ವೇದ ಮಂಡಲ ಅಥವಾ ಆರೋಗ್ಯ ಮಂಡಲ ಒಂದನ್ನು ಸ್ಥಾಪಿಸಿಕೊಂಡು ಈ ಶಾಸ್ತ್ರದ ಪ್ರಚಾರವನ್ನು ಶಾಸ್ತ್ರೀಯ ರೀತಿಯಲ್ಲಿ ಮಾಡ ತೊಡಗಿದರೆ ಈಗಿನ ದಿವಸಗಳಲ್ಲಿ ಈ ಸೇವೆಯು ನಿಜವಾಗಿ ಲೋಕೋಪಕಾರಕವಾದೀತೆಂಬುದಕ್ಕೆ ಸಂದೇಹವಿಲ್ಲ. ಆದರೆ ಇಂಥ ಉತ್ತಮ ಮತ್ತು ಪುಣ್ಯಕಾರಕವಾದ ಧ್ಯೇಯಗಳು ಸಾಧ್ಯವಾಗ ಬೇಕಾದರೆ ಅದಕ್ಕೆ ಐಶ್ವರ್ಯವಂತರ ಸಹಾನುಭೂತಿಯೂ, ದ್ರವ್ಯಸಹಾಯವೂ ಬೇಕಾಗಿರುತ್ತವೆ. ಶ್ರೀಯುತ ಶಾಸ್ತ್ರಿಗಳಿಗೆ ಇಂಥ ಅಪೇಕ್ಷಿತ ಸಹಾಯವು ಈ ಜಿಲ್ಲೆಯೊಳಗಿನ ಜನತೆಯ ಕಡೆಯಿಂದ ಲಭಿಸೀತೆಂದು ನಂಬಿ ಆಯುರ್ವೇದದ ಪುನರುಜ್ಜೀವನಕ್ಕೆ ಶಾಸ್ತ್ರಿಗಳು ತಕ್ಕೊಳ್ಳುತ್ತಿರುವ ಪರಿಶ್ರಮವು ಬೇಗನೆ ಫಲೋನ್ಮುಖವಾಗಲೆಂದು ನಾವು ಮನಃ ಪೂರ್ವಕವಾಗಿ ಪ್ರಾರ್ಥಿಸುವೆವು.

ಸ್ಫುಟ ವಿಚಾರಗಳು.

೧. ಮದ್ರಾಸ ಕಡೆಯ ವಿ. ಎಸ್. ರಾಮಾನುಜಮ್ ಎಫ್. ಆರ್. ಎಸ್. ಇವರು ಎಪ್ರಿಲ್ ತಾ. ೨೬ರಲ್ಲಿ ಕಾಲಾಧೀನರಾದರೆಂದು ತಿಳಿಸಲು ನಾವು ತುಂಬಾ ವಿಷಾದಪಡುವೆವು. ಇವರು ಗಣಿತಶಾಸ್ತ್ರದಲ್ಲಿ ಅದ್ವಿತೀಯ ಪಂಡಿತರಾಗಿದ್ದರು. ಮದ್ರಾಸ ವಿಶ್ವವಿದ್ಯಾಲಯದ ಶಿಕ್ಷಣವನ್ನು ಮುಗಿಸುವತ್ತು, ದ್ರವ್ಯಾನುಕೂಲ್ಯವ [illegible]

[illegible] ಇವರು [illegible] ಗಣಿತ [illegible] ದ್ರುವವಾದ ಗಣಿ [illegible] ಇವರ ಈ ಸ್ವ [illegible] ಯಾವ ಕಾರಣದಿಂದಲೂ ಅಂತು [illegible] ಬರಲಿಲ್ಲ. ಕೊನೆಗೆ ಇವರ ಗಣಿತ ವಿಷಯಕ ಬುದ್ಧಿಮತ್ತೆಯು ಇಂಗ್ಲೆಂಡಿನಲ್ಲಿಯ [illegible] ಲಕ್ಷ್ಯ ದಲ್ಲಿ ಬಂದು ಅವರ ಜಿಜ್ಞಾಸೆಯಿಂದ ಮದ್ರಾಸ ಸರಕಾರದ ಆ ಕಾಲದ ಅಧಿಕಾರಿಗಳಾದ ಲೊ. ಪೆಂಟ್ಲೆಂಡ್ ದೊರೆಗಳು ಇವರನ್ನು ಬೆಳಕಿಗೆ ತಂದು ಅಲ್ಲಿ ಸಂಶೋಧಕ [illegible] ವಿಜ್ಞಾಪನೆಯ ಮೇರೆಗೆ ಇವರನ್ನು ವಿಲಾಯತಿಗೆ ಕಳುಹಿಸಿಕೊಟ್ಟರು. ಅಲ್ಲಿ ಮಿ. ರಾಮಾನುಜರು ತಮ್ಮ ಬುದ್ಧಿಮತ್ತೆಯ ಸೂಕ್ಷ್ಮತೆಯನ್ನು ಇನ್ನೂ ನಿದರ್ಶನಗೆ ತಂದುಕೊಟ್ಟು ಗಣಿತ ವಿಷಯಕ ಸಂಶೋಧನಾತ್ಮಕ ಕಾರ್ಯದಲ್ಲಿ ಅಲೌಕಿಕವಾದ ಯಶಸ್ಸನ್ನು ಸಂಪಾದಿಸಿದರು. ಗಣಿತ ವಿಷಯದಲ್ಲಿ ಇವರಂಥ ವಿಚಕ್ಷಣರು ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಇಂಗ್ಲೆಂಡಿನಲ್ಲಿ ಕೂಡ ಬಹಳ ವಿರಳರೆಂದು ಹೇಳುತ್ತಾರೆ. ಮಿ. ರಾಮಾನುಜರ ಗಣಿತ ಶಾಸ್ತ್ರದ ಪ್ರಾವೀಣ್ಯದಿಂದ ಹಿಂದುಸ್ಥಾನದ ಬುದ್ಧಿಮತ್ತೆಯ ಪ್ರಕಾಶವು ಲೋಕದೊಳಗಿನ ಸುಶಿಕ್ಷಿತಭಾಗ ದಲ್ಲಿ ಪಸರಿಸಿಕೊಂಡೇ ಇದೆ. ಇವರು ತೀರಾ ಬಡವರಾಗಿದ್ದರು. ಆದರೂ ಅವರ ಬುದ್ಧಿವೈಭವವು ಮಾತ್ರ ತೀರ ದೊಡ್ಡದಿತ್ತು. ಸಂಪತ್ತಿಗೂ ವಿದ್ಯೆಗೂ ತಾಳೆ ಇಲ್ಲವೆಂಬುದು ರಾಮಾನುಜಚರಿತ್ರೆಯಿಂದ ಇನ್ನೊಮ್ಮೆ ದೃಢವಾಗುತ್ತದೆ. ಇಂಥ ವಿಖ್ಯಾತ ಶಾಸ್ತ್ರಜ್ಞರು ಅಕಾಲದಲ್ಲಿ ಮೃತ್ಯುವಶರಾದದ್ದು ದೇಶದ ಭಯಂಕರ ದುರ್ದೈವವೆ. [illegible] ಕ್ಷಯ ರೋಗವು ಇವರನ್ನು ಇತ್ತಲಾಗೆ ಆವರಿಸಿಕೊಂಡಿತ್ತು. ಆ ರೋಗಕ್ಕೆ ಅವರು ಇಂಗ್ಲೆಂಡಿನಲ್ಲೂ, ಮದ್ರಾಸಿನಲ್ಲೂ ಪ್ರಸಿದ್ಧ ಡಾಕ್ಟರರಿಂದ ಚಿಕಿತ್ಸೆಯನ್ನು ನಡಿಸಿದ್ದರು. ಆದರೂ ಅದರಿಂದ ತಾದೃಶಫಲವು ದೊರಕಲಿಲ್ಲವಾದ ಕಾರಣ ಅವರ ಅಂತ್ಯವಾಯಿತು. ಇವರ ಅವಸಾನದಿಂದ ಶಾಸ್ತ್ರೀಯ ಜಗತ್ತಿನಲ್ಲಿ ಒಂದು ದೊಡ್ಡ ನ್ಯೂನತೆಯು ಉಂಟಾಗಿದೆ.

೯. ಹಿಂದುಸ್ಥಾನದ ಸಂಬಂಧವಾಗಿ ಪಾರ್ಲಿಮೆಂಟಿನಲ್ಲಿ ಆಗಾಗ್ಗೆ ನಡೆಯುತ್ತಿರುವ ಪ್ರಶ್ನೋತ್ತರಗಳ ಕ್ರಮಕ್ಕೆ ಅನುಸಾರವಾಗಿಯೇ ಈಚೆಗೆ ಕೊಮನ್ಸ್ ಸಭೆಯಲ್ಲಿ ಕೆಲವು ಪ್ರಶ್ನೋತ್ತರಗಳು ನಡೆದವು. 'ಬೊಂಬೆ ಕ್ರೋನಿಕಲ್' ಪತ್ರದ ಸಂಪಾದಕರಾದ ಮಿ. ಬಿ. ಜಿ. ಹೊರ್ನಿಮನ್ ಇವರನ್ನು ಯಾವ ವಿಚಾರ ಸಾಚಾರವಿಲ್ಲದೆ ಥಟ್ಟನೆ ವಿರುಗಾಳಿ ಬಂದಂತೆ ಗಡಿಪಾರುಮಾಡಲಿಕ್ಕೆ ಕಾರಣವೇನು? ಈ ಕೃತ್ಯದಲ್ಲಿ ಜವಾಬದಾರರು ಯಾರು? ಇದಕ್ಕೆ ನಿಷ್ಕೃತಿಯು ಯಾವುದು? ಇತ್ಯಾದಿ ಹಲವು ಪ್ರಶ್ನೆಗಳನ್ನು ಮಿ. ಸ್ಪೂರ್, ಮಿ. ರೆಂಡೋಲ್, ಕರ್ನಲ್ ವೆಜವುಡ್ ಈ ಮೂವರು ಮಿ. ಮೊಂಟೆಗ್ಯುಗಳಿಗೆ ಕೇಳಿದರು. ಭಾರತ ಮಂತ್ರಿಗಳಾದ ಮಿ. ಮೊಂಟೆಗ್ಯುಗಳು ಹೊರ್ನಿಮನರ ಈ ಹೊರೆಯನ್ನು ಮುಂಬಯಿ ಸರಕಾರದ ತಲೆಯ ಮೇಲೆ ಹಾಕಿದರು. ಈ ಕೃತ್ಯದಲ್ಲಿ ಮುಂಬಯಿಯ ಅಧಿಪತಿಗಳಾದ ಸರ್. ಲೋಯ್ಡ್ ಜೋರ್ಜರೆ ಸಂಪೂರ್ಣ ಜವಾಬದಾರರು, ಅವರು ಕಾಯಿದೆಗಳಿಗೆ ಅನುಕೂಲವಾಗಿ ಬಂಧಿರುವ ತಮ್ಮ ಅಧಿಕಾರದಂತೆ ಹದ್ದುಪಾರಿನ ಹುಕುಮನ್ನು ಕೊಟ್ಟಿದ್ದಾರೆ ಎಂದು ಮೊಂಟೆಗ್ಯುಗಳು ಉತ್ತರಕೊಟ್ಟರು. ಮಿ. ಮೊಂಟೆಗ್ಯುಗಳ ಈ ಉತ್ತರದ ನಿಜವಾದ ಅರ್ಥವೇನೆಂದರೆ, ಮುಂಬಯಿ ಸರಕಾರವು ಮಾಡಿದ ಕೆಲಸದಲ್ಲಿ ತಾವು ಕೈಹಾಕುವುದಿಲ್ಲ; ಮುಂಬಯಿ ಸರಕಾರವೇ ಈ ವಿಷಯದಲ್ಲಿ ಸರ್ವತಂತ್ರಸ್ವತಂತ್ರವು. ಎಲ್ಲಿಯವರೆಗೆ ಪ್ರಾಂತಿಕ ಸರಕಾರಗಳು ಪ್ರಾಂತಿಕ ಕಾರಭಾರಗಳಲ್ಲಿ ಸ್ವತಂತ್ರವಾದವುಗಳಾದರೂ ವಿಚಾರ ಸಾಚಾರವಿಲ್ಲದೆ ನಡಿಸಿದ ಕೃತ್ಯಗಳನ್ನು ವರಿಷ್ಟ ಸರಕಾರವಾಗಲಿ ಅಥವಾ ಭಾರತ ಮಂತ್ರಿಗಳಾಗಲಿ ವಿಮರ್ಶಿಸುವುದನ್ನು ಈ ರೀತಿಯಿಂದ ಅಲ್ಲಗಳೆಯ ಹೊರಟರೆ ಪ್ರಾಂತಿಕ ಸರಕಾರಗಳಿಗೆ ನಿರಂಕುಶ ಪ್ರಭುತ್ವದ ಗದ್ದಿಗೆಯ ಮೇಲೆ ಕುಳ್ಳಿರಿಸಿದಂತಾಗುತ್ತದೆ. ಇಷ್ಟೇ ಅಲ್ಲ; ಈ ರೀತಿಯ ಪ್ರಭುತ್ವದಿಂದ ಜನರ ವ್ಯಕ್ತಿಸ್ವಾತಂತ್ರ್ಯವು ನಷ್ಟವಾಗಿ ಹೋಗುತ್ತದೆ. ಇಷ್ಟು ಸುಬೋಧವಾದ ಸಂಗತಿಯು ಮಿ. ಮೊಂಟೆಗ್ಯುಗಳಂಥ ಚತುರಪ್ರಮತ್ತು ಉದಾರ ಮಹಾತ್ಮರ ಮನಸ್ಸಿನಲ್ಲಿ ಹೇಗೆ ಬರುವುದಿಲ್ಲ! ಅವರ ಚಿತ್ತಕ್ಕೆ ಈ ಸಂಗತಿಗಳು ವೇದ್ಯವಾಗುವುದಾದರೂ 'ರಾಜನೀತಿ'ಯಪ್ರಭಾವವು ಅವರನ್ನು ತಡೆಗಟ್ಟುತ್ತದೆ.

೩. ಮದ್ರಾಸಿನಲ್ಲಿ ಜರಗಿದ ಖಿಲಾಫತ ಕೊನ್ಫರೆನ್ಸಿನ ವಿಷಯವಾಗಿ ಮಹತ್ವದ ಮಾಹಿತಿಯನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿದ್ದೇವಷ್ಟೆ. ಟರ್ಕಿಯ ಮತ್ತು ಖಿಲಾಫತಿನ ಭವಿತವ್ಯತೆಯ ವಿಷಯವಾಗಿ ಹಿಂದೀ ಮುಸಲ್ಮಾನರಲ್ಲಿ ಎಷ್ಟರ ಮಟ್ಟಿನ ತೀವ್ರ ಸಂವೇದನವುಂಟಾಗಿದೆಂದರೆ ಮದ್ರಾಸಿನ ಸದರಿ ಪರಿಷತ್ತಿನಲ್ಲಿ ಖಿಲಾಫತ್ತಿನ ಸಂರಕ್ಷಣೆಯು ಇಸ್ಲಾಮರ ಮತಕ್ಕನುಕೂಲವಾಗಿ ಆಗುವುದಿಲ್ಲವಾದರೆ ಹಿಂದಿ ಮುಸಲ್ಮಾನರೂ ಹಾಗು ಹಿಂದುಗಳು ಕೂಡ ಸರಕಾರದೊಡನೆ ತಮ್ಮ ಸಹಕಾರ್ಯವನ್ನು ನಿಲ್ಲಿಸಬೇಕೆಂದು ಆಶಯದ ಠರಾವು ಪಾಸಾಯಿತು. ಮುಸಲ್ಮಾನರ ಈ ಸತ್ಯಾಗ್ರಹಕ್ಕೆ ಮಹಾತ್ಮಾ ಗಾಂಧಿಗಳ ಬಲವಿರುವುದರಿಂದ ಇದರಿಂದ ಯಾವ ತರದ ಅನಿಷ್ಟಾಪತ್ತಿಯು ಉಂಟಾಗಲಿಕ್ಕಿಲ್ಲವೆಂದು ಹೇಳಬಹುದು. ಸತ್ಯಾಗ್ರಹದ ವ್ರತವು ನಿರುಪದ್ರವವಾದ್ದೆಂಬುದು ಈಗ ಎಲ್ಲ ಅಧಿಕಾರಿಗಳು ಸಾಮಾನ್ಯವಾಗಿ ಒಪ್ಪುತ್ತಾರೆ. ಮಾತ್ರವಲ್ಲ, ಈ ವ್ರತವು ಪರೋಪಸರ್ಗವನ್ನುಂಟುಮಾಡದೆ ಕಾರ್ಯವನ್ನು ಸಾಧಿಸಿಕೊಡುತ್ತದೆಂಬ ದಕ್ಕೆ ಇದುವರೆಗೆ ಅನೇಕ ದೃಷ್ಟಾಂತಗಳು ಉಪಲಬ್ಧವಾಗಿವೆ. ಆದ್ದರಿಂದ ವಿವೇಕಶಾಲಿಗಳಾದ ಮಹಮ್ಮದೀಯರು ಮಹಾತ್ಮಾಗಾಂಧಿಗಳ ಅನುಯಾಯಿತ್ವವನ್ನು ಅಂಗೀಕರಿಸಿ ಖಿಲಾಫತಿನ ಪ್ರಶ್ನೆಯನ್ನು ತಮಗೆ ಇಷ್ಟವಿರುವಂತೆ ಬಿಡಿಸಿಕೊಳ್ಳಲು ನಿಶ್ಚಯಿಸಿದ್ದಾರೆ ಎಂದು ಮದ್ರಾಸ ಖಿಲಾಫತ ಕೊನ್ಫರೆನ್ಸಿನ ಮೇಲಿನ ಠರಾವನ್ನು ನೋಡುವಾಗ ಕಂಡುಬರುತ್ತದೆ.

[illegible] ಲೀಗ, [illegible] ಲೀಗ, [illegible] ರೂಲ ಲೀಗ ಎಂಬ ಹಲವು ಹೊಸ ಸಭೆಗಳು ತಂತಮ್ಮ ಧ್ಯೇಯಗಳನ್ನೂ, ಮುಂದೆ ಸುಧಾರಿತ ಕೌನ್ಸಿಲಿನಲ್ಲಿ ಜಾರಿಗೆ ತರಲಿಕ್ಕೆ ಯತ್ನಿಸುವ ಸಲಹೆಗಳನ್ನೂ ಕುರಿತು ಉದ್ಬೋಧಕ ಪ್ರಕಟಣೆಗಳನ್ನು ಕೂಡ ಹೊರಡಿಸಿದ್ದಾರೆ ಎಂದು ನಮ್ಮ 'ಒಳದೇಶ ವರ್ತಮಾನ'ದಲ್ಲಿ ನಾವು ಕೊಟ್ಟಿರುವೆವು. ಮೊತ್ತ ಮೊದಲು ಅಂದರೆ ಸುಮಾರು ೩೦ ವರ್ಷಗಳ ಹಿಂದೆ ಸ್ಥಾಪಿತವಾದ ನೆಶನಲ್ ಕೊಂಗ್ರೆಸ್ ಅಥವಾ ರಾಷ್ಟ್ರೀಯ ಪಕ್ಷವು ಕಾಲಕ್ರಮದಲ್ಲಿ ಬೆಳೆಯುತ್ತ ಬಂದು, ಅದರ ಚಳವಳವು ಈಗಿನ ಸುಧಾರಣೆಗಳಿಗೆ ಕಾರಣವಾಯಿತೆನ್ನುವುದು ನಿರ್ವಿವಾದ. ಆದರೆ ಸ್ವಲ್ಪ ಮಟ್ಟಿಗೆ ದುರಭಿಮಾನವೂ, ಪರಸ್ಪರ ವೈಮನಸ್ಸೂ ಇಂಥ ರಾಷ್ಟ್ರೀಯ ಸಭೆಯಲ್ಲಿ ಒಡಕುಗಳನ್ನು ತಂದೊಡ್ಡಿತು. ಅದರ ಹೊಟ್ಟೆಯಲ್ಲಿ ಹುಟ್ಟಿದ ಈ ಮರಿಗಳು ಇನ್ನೂ ತೀರಾ ಕಣ್ಣು ತೆರೆಯದಿದ್ದರೂ ಒಂದನ್ನೊಂದು ಪರಸ್ಪರ ವಿಘಾತಿಯನ್ನು ಉಂಟುಮಾಡುತ್ತಿವೆ ಎಂಬದು ಈಗಿನ ದೇಶೀಯ ವರ್ತಮಾನ ಪತ್ರಿಕೆಗಳಿಂದ ಕಂಡು ಬರುತ್ತಿದೆ. 'ಹಿಂದೂ' ಪತ್ರಿಕೆಯು ದೇಶೀಯರ ಉನ್ನತಿಗೋಸ್ಕರ ಕಾದಾಡುವುದರಲ್ಲಿ ನಿರತವಾಗಿದ್ದು ತನ್ನ ಲೇಖನಗಳ ಗಾಂಭೀರ್ಯ, ಪಾಂಡಿತ್ಯ, ನಿಸ್ವಾರ್ಥತೆಗಳಿಂದ ದಕ್ಷಿಣ ಹಿಂದುಸ್ಥಾನದಲ್ಲಿ ಅದ್ವಿತೀಯವೆನ್ನಿಸಿಕೊಂಡಿತ್ತು, ಅದರಲ್ಲಿಯೂ ಈಗಿನ ಅಂತ್ಯ ಕಲಹಗಳ ಕೆಸರಿನ ಕೊಳೆಯು ಸ್ವಲ್ಪ ಮಟ್ಟಿಗೆ ಕಾಣುತ್ತಿದೆ. ಅಡ್ಯಾರದ 'ಲೋಕಮಾತೆ' ಎನ್ನಿಸಿಕೊಂಡಿರುವ 'ನ್ಯೂ ಇಂಡಿಯಾ' ಒಂದು ಕಡೆ, ಬ್ರಾಹ್ಮಣ ಅಬ್ರಾಹ್ಮಣ ಎಂಬ ಜಗಳದ ಬೀಜವನ್ನು ಬಿತ್ತಿದ 'ಜಸ್ಟಿಸ್' ಪತ್ರಿಕೆಯು ಇನ್ನೊಂದು ಕಡೆ ತಂತಮ್ಮ ಪಕ್ಷದ ಅಹವಾಲೆಗಳನ್ನು ಊದುವಾಗ ಆ ಕೊಂಬುಕಹಳೆಗಳಿಂದ ಹೊರಬಿದ್ದ ಎಂಜಲು ನೀರು ಸಿಕ್ಕಿದವರನ್ನೆಲ್ಲ ತೋಯಿಸುತ್ತದೆ. ಊದುವ ಉತ್ಸಾಹದಲ್ಲಿ ಈ ಎಂಜಲು ಹರಿವು ಉಂಟಾಗಿದೆ ಎಂದು ನಾವು ಒಪ್ಪಿ ಸುಮ್ಮನಾಗಬಹುದು. ಅದಲ್ಲದೆ ಆಯಾ ಪಕ್ಷವು ಪ್ರತಿವಾದಿಸುವ ಧ್ಯೇಯದಲ್ಲಿಯೂ ಅಲ್ಪ ಸ್ವಲ್ಪ ಸತ್ಯತ್ವವೂ ಇದೆ. ಆದರೆ ಈ ಸತ್ಯದ ಗುಳಿಗೆಯನ್ನು ಸಕ್ಕರೆಯಲ್ಲಿ ಅದ್ದಿ ಕೊಟ್ಟರೆ ಪ್ರಯೋಜನಕಾರಿಯಾದೀತಲ್ಲದೆ ಕಾಸರಕದ ಅಥವಾ ಕಹಿಬೇವಿನ ರಸದಲ್ಲಿ ತೇದು ಕೊಟ್ಟರೆ ಯಾರು ನುಂಗ್ಯಾರು? ಈ ಬಗೆಯ ಧೋರಣವು ಯಾವ ಲೀಗಿನವರಿಗಾದರೂ ಪ್ರಶಸ್ತವಾದ್ದಲ್ಲ. ಸುಧಾರಣಾ ಎಕ್ಟಿನ ಮೇರೆಗೆ ನಮಗೆ ಬರುವ ಅಧಿಕಾರದ ಹುರುಳು ಏನಿದೆ, ಜನತೆಗೆ ಸಿಗಬೇಕಾದ—ಈಗಿನ ಸ್ಥಿತಿಯಲ್ಲಿ ಸಾಧ್ಯವಾದ—ಸಲಹೆಗಳು ಯಾವವು, ಅವುಗಳನ್ನು ಸಾಧಿಸಿಕೊಳ್ಳಲಿಕ್ಕೆ ಅಗತ್ಯವಿರುವ ಅನುಭವ ಯಾವುದು ಇದೊಂದನ್ನು ಈ ಬೇರೆಬೇರೆ ತಂಡದವರು ಆಲೋಚಿಸಿದ ಹಾಗೆ ತೋರುವುದಿಲ್ಲ. ಸುಧಾರಣಾ ಎಕ್ಟಿನ ಕಾವಲಿಯನ್ನು ಒಲೆಯ ಮೇಲೆ ಇಟ್ಟಿದೆಯಷ್ಟೆ, ಅದು ಇನ್ನೂ ಬಿಸಿಯಾಗಲೇ ಇಲ್ಲ, ಹಿಟ್ಟು ಕಲಸಿ ತಯಾರಾದ್ದೂ ಇಲ್ಲ, ಅಷ್ಟರೊಳಗೆ ಎಷ್ಟೆಷ್ಟು ದೋಸೆ ಹೊಯ್ದರು, ಯಾರಿಗೆ ಎಷ್ಟು ಬೇಕು, 'ಆ ಕಡೆ ಈ ಕಡೆಯ ನಮ್ಮವರೆಲ್ಲ ಬೇಗ ಬನ್ನಿ' ಎಂಬ ಕೋಲಾಹಲವು ಹತ್ತಿಬಿಟ್ಟಿದೆ. ಈಗಿನ ನೂತನ ಸುಧಾರಣಾ ಕೌನ್ಸಿಲು ಈಗಿನ ತಾಲೂಕು ಬೋರ್ಡುಗಳ ಮತ್ತು ಮುನಿಸಿಪಾಲಿಟಿಗಳಂತೆ ಅದ್ಭುತಾಕಾರವಾದೀತೇ, ಕುಂಭಕರ್ಣನಂತೆ ಆರ್ಧ ವರ್ಷ ಆಹಾರ ತಿಂದು ಆರ್ಧ ವರ್ಷ ನಿದ್ದೆ ಹೋಗುವ ಕುಂಭಕರ್ಣಾವಸ್ಥೆಯನ್ನು ಅನುಸರಿಸೀತೇ ಎಂಬ ಭಯವು ನಮಗಂತು ಇದೆ. ಈ ತಂಡಗಳು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪ್ರತಿಪಾದಿಸುವ ತವಕದಲ್ಲಿ ಪರಸ್ಪರ ಬೈದಾಟ, ಇಲ್ಲದ ಸುಳ್ಳು ಕಲ್ಪನೆಗಳನ್ನು ಕೂಡಾ ಕೆಲವು ಸಂದರ್ಭಗಳಲ್ಲಿ ಪ್ರಕಟಿಸಲಿಕ್ಕೆ ಈ ಪತ್ರಗಳನ್ನು ದಾರಿಯಾಗಿ ಮಾಡಿಕೊಂಡಿರುವುದು ವಿಷಾದಕರ. ಇದು ಲೇಖನಿಯ ದುರುಪಯೋಗ, ಬವರು ನೀರಿನಲ್ಲಿ ಗಾಳ ಹಾಕಿದವರಿಂದ ಸಿಗುವುದೇನು? ಸುಧಾರಣಾ ಎಕ್ಟಿನ ಮೇರೆಗೆ ನಮಗೆ ಸಿಗುವ ಕೆಂಚಿತ್ತು ಅಧಿಕಾರಗಳನ್ನು ಕೂಡಾ ಈಗ ಅತ್ಯುಗ್ರ ಪಕ್ಷದ ಶಿಖಾಮಣಿಗಳೆನಿಸಿ, ಒಂದೇ ಜಾದು ಮಂತ್ರದಲ್ಲಿ ಹಿಂದುಸ್ಥಾನದಲ್ಲಿ ರಾಮರಾಜ್ಯವನ್ನು ಸ್ಥಾಪಿಸುವೆವು ಎಂದು ಜಲ್ಲಿ ಕೊಚ್ಚುವವರ ಕೈಗನೇ ಒಪ್ಪಿಸಿ ಕೊಟ್ಟರೆ ಒಳ್ಳೇದು ಎಂದು ನಮಗೆ ಒಂದೊಂದು ಸಲ ಹೊಳೆಯುತಿದೆ. ಆಡಳಿತೆಯ ರಥವನ್ನು ಬಲು ಪ್ರಯಾಸದಿಂದ ನೂಕುವಾಗ ದೂರದಲ್ಲಿ ನಿಂತು "ಇದು ಸರಿಯಲ್ಲ, ಅದು ಹೀಗಾಗಬೇಕು, ಚುಕ್ಕಾಣಿ ಮರ ಹೀಗೆ ಒತ್ತಬೇಕು, ಹಗ್ಗವನ್ನು ಆ ಕಡೆ ಎಳೆಯಬಾರದು" ಎಂದು ಹೇಳುವವರ ಕೈಗೆ ಈಗಿನ ಬರಿ ಬೊಕ್ಕಸದ ಬೀಗದ ಕೈಯನ್ನು ಕೊಟ್ಟು ಬಿಟ್ಟರೆ ಒಂದೆರಡು ವರ್ಷಗಳಲ್ಲಿ ಈ ಉತ್ತರಕುಮಾರನ ಧೋರಣವನ್ನು ಬಿಟ್ಟು ಇವರು ಬುದ್ಧಿ ತಿಳಿಯುವರು ಎಂದು ಒಂದೊಂದು ಸಲ ಕಾಣುತ್ತದೆ. ಆದರೆ ಹೀಗೆ ಕೋಲಾಹಲ ಎಬ್ಬಿಸುವವರಲ್ಲಿ ನಿಜವಾಗಿಯೂ ರಥ ಎಳೆಯುವ ಕಾಂಕ್ಷೆಯುಳ್ಳವರು ಎಷ್ಟು ಮಂದಿ ಅಥವಾ ರಥಕ್ಕೆ ಅರ್ಪಿಸಿದ ತೆಂಗಿನ ಕಾಯಿ ಬಾಳೆ ಹಣ್ಣುಗಳ ಮೇಲೆ ಮಾತ್ರ ದೃಷ್ಟಿ ಇಟ್ಟವರು ಎಷ್ಟು ಮಂದಿ ಎಂದು ನಿರ್ಧರಿಸಲು ಮಾತ್ರ ಸ್ವಲ್ಪ ಕಷ್ಟಸಾಧ್ಯ.

ಮಂಗಳೂರು.

ರಾವ ಬಹಧ್ದೂರ ಸುಜೀರ ರಘುನಾಥಯ್ಯನವರಿಗೆ ಮಂಗಳೂರು ತಾಲೂಕು ಬೋರ್ಡ ಪ್ರೆಸಿಡೆಂಟರಾಗಿ ಆದ ಚುನಾವಣೆಯು ಮದ್ರಾಸು ಪ್ರಾಂತಿಕ ಸರಕಾರದಿಂದ ಮಂಜೂರಾದ್ದಲ್ಲದೆ ಸದರಿ ತಾಲೂಕು ಬೋರ್ಡಿನವರಿಗೆ ತಮ್ಮ ವೈಸ ಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವನ್ನು ಕೊಟ್ಟಿದೆ ಎಂದು ಹುಕುಮ ಬಂದಿದೆ.

ಈ ಮೊದಲು ಇಲ್ಲಿ ಪೋಲೀಸ್ ಆಫೀಸಿನ ಮೆನೆಜರರಾಗಿದ್ದು ಈಗ [illegible] ಪೊಲೀಸ ಸ್ಕೂಲಿನ ವೈಸ ಪ್ರಿನ್ಸಿಪಾಲರಾಗಿರುವ ಮ| ರಾ| ಗಂಗೊಳ್ಳಿ ಪಾಂಡುರಂಗರಾಯರ ಹಿರೇ ಮಗ ರಾ| ಗಂಗೊಳ್ಳಿ ಗಣೇಶ ಸುಂದರರಾವ್ ಬಿ. ಎ. ಎಲ್. ಎಲ್. ಬಿ. ಇವರು ಇಲ್ಲಿ ಬದಲಿಯಾಗಿ ಪ್ರೋಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ನೇಮಕ ಪಟ್ಟಿರುವರು.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಶ್ರೀಯುತ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳು ಕದ್ರಿಯಲ್ಲಿ ನೂತನವಾಗಿ ಕಟ್ಟಿಸಿದ ಔಷಧಾಲಯ ಪ್ರವೇಶೋತ್ಸವವು ಕಳೆದ ಆದಿತ್ಯವಾರ ಸಾಯಂಕಾಲ ಬಹಳ ಸಂಭ್ರಮದಿಂದ ನೆರವೇರಿತು. ಈ ಔಷಧಾಲಯಕ್ಕೆ ಶ್ರೀ ಗೋಪಾಲ ಭೇಷಜಾಶ್ರಮವೆಂದು ನಾಮಕರಣವಾಗಿದೆ. ಅಂದು ನಿಶ್ಚಿತ ಸಮಯಕ್ಕೆ ಆಮಂತ್ರಿಸಲ್ಪಟ್ಟ ಗೃಹಸ್ಥರೆಲ್ಲರೂ ನೆರೆದು ಬಂದು ಈ ಔಷದಾಲಯದ ಮುಂದುಗಡೆಯಲ್ಲಿ ಹಾಕಿದ ಭವ್ಯವಾದ ಚಪ್ಪರದಲ್ಲಿನ ಆಸನಗಳನ್ನು ಅಲಂಕರಿಸಿದರು. ಸಭಾಸದರಲ್ಲಿ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಾದ ನಾಮದಾರ ರಾವ್ ಬಹದ್ದೂರ್ ಯನ್. ಸುಬ್ಬರಾಯರು; ತಾಲೂಕು ಬೋರ್ಡ ಪ್ರೆಸಿಡೆಂಟ ಸುಜೀರ ರಘುನಾಥಯ್ಯನವರು, ಮುನ್ಸಿಪಲ್ ಚೆಯರ್ಮೆನ್ ಮ. ರಾ. ಬಿ. ಮಹಾಬಲ ಹೆಗ್ಗಡೆಯರು, ರಿಟಾಯರ್ಡ ಡಿಸ್ಟ್ರಿಕ್ಟ ಜಡ್ಜರಾದ ರಾವ್ ಬಹದೂರ್ ಎ. ರಾಮಯ್ಯ ಪೂಂಜರು, ರಿಟಾಯರ್ಡ ಡಿಪ್ಯುಟಿ ಕಲೆಕ್ಟರರಾದ ರಾವ್ ಬಹದೂರ್ ಆರ್. ರಾಮರಾಯರು, ರಾಯ ಸಾಹೇಬ ಕೆ. ರಂಗರಾಯರು, ಪ್ರೊಸಿಕ್ಯುಟಿಂಗ್ ಇನ್ಸ್‌ಪೆಕ್ಟರ್ ರಾವ್ ಸಾಹೇಬ ಕೆ. ನಾರಾಯಣರಾಯರು, ಡಿಪ್ಯುಟಿ ಕಲೆಕ್ಟರಾದ ಮ. ರಾ. ಕೆ. ಸಿ. ಮನವೇದನ್ ರಾಜಾರವರು, ಟ್ರೆಜರಿ ಡಿಪ್ಯುಟಿ ಕಲೆಕ್ಟರರಾದ ರಾವ ಸಾಹೇಬ ಪಿ. ಕೆ. ನಂಬಿಯಾರರು, ಮ| ರಾ| ಗಳಾದ ಕಾರ್ನಾಡ ಸದಾಶಿವರಾವ್, ಕಲ್ಯಾಡಿ ಲಕ್ಷ್ಮೀನಾರಾಯಣರಾವ್, ಅಡಿಗೆ ಶ್ರೀನಿವಾಸರಾವ್, ಪಾಂಗಾಳ ಸುಬ್ಬರಾವ್, ಎ. ವರದರಾವ್, ಕೆ. ಸದಾಶಿವ ಅಡಿಗರೇ ಮೊದಲಾದ ಅನೇಕ ವಕೀಲರೂ ಮ| ರಾ| ಗಳಾದ ನೆಲ್ಲಿಕಾಯಿ ವೆಂಕಟರಾಯರು, ನರಸಿಂಹ ಮರ್ತು ಭಂಡಾರಿಗಳು, ಮಹಮ್ಮದ್ ಪುತ್ತೂರು ಸಾಹೇಬರು, ಅತ್ತಾವರ ಬಾಲಕೃಷ್ಣಶೆಟ್ಟರು, ಡಾಕ್ಟರ ಯಂ. ಶಿವರಾಯರು ಅಡಿಗೆ ಪದ್ಮನಾಭಯ್ಯನವರು, ಮಂಜೇಶ್ವರ ಅನಂತ ಕೃಷ್ಣರಾಯರು, ಶ್ರೀ ಸಮರ್ಥ ಆಯುರ್ವೇದ ಔಷಧಾಲಯದ ವೈದ್ಯರಾದ ಬಿ. ಆರ್. ಹರಿದಾಸರೇ ಮೊದಲಾದ ಅನೇಕ ಮಹನೀಯರು ಹಾಜರಿದ್ದರು.

ಸಭೆಯು ಕೂಡುತ್ತಲೇ ಇಲ್ಲಿಯ ಬ್ಯಾರಿಸ್ಟರಾದ ಆರ್. ಯಂ. ರೋಯಿಯವರು ಇಂಗ್ಲಿಷ ಭಾಷೆಯಲ್ಲಿ, ಸ್ವಾಗತಪರ ಭಾಷಣವನ್ನು ಮಾಡಿದರು. ನಂತರ ಅಂದಿನ ಅಧ್ಯಕ್ಷರಾದ ಡಿಸ್ಟ್ರಿಕ್ಟ ಜಡ್ಜರು ಮ. ರಾ| ಎ. ನಾರಾಯಣ ನಂಬಿಯಾರ್‌ರವರಿಂದ ಈ ಮಂದಿರದ ದ್ವಾರಗಳು ತೆರದು ಪ್ರವೇಶ ಸಮಾರಂಭವಾಗಿ ಅಧ್ಯಕ್ಷರು ಸಭಾಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಈಸಮಯದಲ್ಲಿ ಶ್ರೀಯುತ ಶಾಸ್ತ್ರಿಗಳ ಎಳೇ ಪ್ರಾಯದ ಮಗಳು ಆಯುರ್ವೇದವನ್ನು ಕುರಿತು ಹಾಡಿದ ಸಂಸ್ಕೃತ ಸಂವಾದವು ಮನೋಹರವಾಗಿತ್ತು. ಸಭೆಯಲ್ಲಿ ಸಂಸ್ಕೃತ ಪಂಡಿತ ನಿಡ್ಡೋಡಿ ಅನಂತ ಉಪಾಧ್ಯರು ಆಯುರ್ವೇದದ ಉತ್ಪತ್ತಿ, ಪ್ರಚಾರ ಉಪಯುಕ್ತತೆ ಮೊದಲಾದ ವಿಷಯಗಳನ್ನು ಕುರಿತು ಸಂಸ್ಕೃತ ಉಪನ್ಯಾಸವನ್ನು ಓದಿದರು. ಇವರ ಉಪನ್ಯಾಸದ ತರುವಾಯ ವಕೀಲ ರಾ| ಗಂಗೊಳ್ಳಿ ಕೃಷ್ಣರಾಯರು ಆಯುರ್ವೇದವು ಯೋಗ್ಯ ರೀತಿಯಲ್ಲಿ ಉತ್ಪತ್ತಿಯಾಗಿ, ಹೆಚ್ಚಿನ ವಿಸ್ತಾರವನ್ನು ಹೊಂದಿ, ಅನ್ಯ ದೇಶಗಳಲ್ಲೂ ಕೂಡ ಪ್ರಚಾರಗೊಂಡು, ಕೊನೆಗೆ ಕಾಲಾಂತರಗಳಿಂದ ತನ್ನ ವೈಭವವನ್ನು ಹೇಗೆ ಕಳಕೊಂಡಿತು ಮತ್ತು ಈಗ ಅದು ಹೇಗೆ ಪುನರುಜ್ಜೀವಗೊಳ್ಳುತ್ತಿದೆ ಎಂಬದನ್ನು ವಿಶದವಾಗಿ ಸಭಿಕರಿಗೆ ವಿವರಿಸಿ ಶಾಸ್ತ್ರಿಗಳ ಸತ್ಕಾರ್ಯವನ್ನು ಕೊಂಡಾಡಿ ತಮ್ಮ ಭಾಷಣವನ್ನು ಮುಗಿಸಿದರು. ಶ್ರೀಯುತ ಪಂಡಿತ ಆತ್ಮಾರಾಮ ಶಾಸ್ತ್ರಿಗಳಿಗೆ ಈ ಸಂದರ್ಭದಲ್ಲಿ ಹಾಜರಿದ್ದು ಭಾಷಣವನ್ನು ಮಾಡಲು ಅನನುಕೂಲವಾದ್ದರಿಂದ ಇವರ ಬದಲಾಗಿ ಮ| ರಾ| ಪಂಜೆ ಮಂಗೇಶರಾಯರು ಸಮಯೋಚಿತ ಭಾಷಣಮಾಡಿದರು. ಈ ಮಹನೀಯರುಗಳ ಭಾಷಣಗಳು ಮುಗಿಯುತ್ತಲೇ ಅಧ್ಯಕ್ಷ ಮಹಾಶಯರು ಆಯುರ್ವೇದದ ಚರಿತ್ರೆಯನ್ನು ವಿಸ್ತರಿಸಿ ಹೇಳಿ, ಏತದ್ದೇಶೀಯರಿಗೆ ಇದು ಅತೀ ಉಪಯುಕ್ತವಾಗಿರುವುದೆಂಬುದನ್ನು ತೋರಿಸಿಕೊಟ್ಟು, ಈಗ ಭರತಖಂಡದ ಇತರ ಭಾಗಗಳಲ್ಲಿ ಇದರ ಪ್ರಚುರತೆಯು ವಿಶೇಷವಾಗಿ ಹಬ್ಬಿರುವುದನ್ನು ದೃಷ್ಟಾಂತ ಮೂಲಕ ವ್ಯಕ್ತಪಡಿಸಿ, ಶಾಸ್ತ್ರಿಗಳ ಉದ್ದೇಶವನ್ನೂ, ಪ್ರಯತ್ನವನ್ನೂ ಕೊಂಡಾಡಿ, ಈ ಔಷಧಾಲಯವು ಚಿರಸ್ಥಾಯಿಯಾಗಿ ಕೀರ್ತಿಯನ್ನು ಪಡೆಯಲೆಂದು ಹರಸಿ ತಮ್ಮ ಭಾಷಣವನ್ನು ಮುಕ್ತಾಯಪಡಿಸಿದರು. ಕೊನೆಗೆ ಶಾಸ್ತ್ರಿಗಳು ಅಧ್ಯಕ್ಷರಿಗೂ, ಸಭಾಸದರಿಗೂ ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಗವರ್ನಮೆಂಟ ಕೊಲೆಜಿನ ಅಧ್ಯಾಪಕರಾದ ಮ| ರಾ| ಕೆ. ವೆಂಕಟರಾವ್ ಎಮ್. ಎ. ಎಲ್. ಟಿ ಯವರ ಕೀರ್ತನೆಯು ನಡೆದು ರಾಜಗೀತ ಹಾಡಿದೊಡನೆ ಸಭೆಯು ಹೇರಿತು.

ಟಪ್ಪಾಲ ದ್ವಾರಾ ಲಿಫಾಫೆ ಮುಂತಾದ್ದನ್ನು ಕಳುಹಿಸುವವರು ಲಿಫಾಫೆಗೆ ವಿಳಾಸವನ್ನು ಬರೆಯುವ ಎಡ ಬದಿಯ ಕೆಳ ಬುಡದಲ್ಲಿ ತಮ್ಮ ವಿಳಾಸವನ್ನು ಸಹ ಸ್ಪಷ್ಟವಾಗಿ ಬರೆಯತಕ್ಕದ್ದು. ಹೀಗೆ ವಿಳಾಸ ಬರೆಯುವುದರಿಂದ ಆ ವಸ್ತುವು ಯಾರಿಗೆ ತಲ್ಪತಕ್ಕದೆಂದು ವಿಳಾಸದಲ್ಲಿ ಬರೆದಿರುತ್ತದೋ ಅಂಥವರಿಗೆ ತಲ್ಪಿಸಲಾಗದ ಸಮಯದಲ್ಲಿ ಕಳುಹಿಸಿದವನಿಗೆನೇ ಅವನ್ನು ತೆರೆದು ನೋಡದೆ ಹಿಂದೆ ಕಳುಹಿಸಲಾಗುವುದು. ವಿಳಾಸಗಳು ಸ್ಪಷ್ಟವಾಗಿ ಬರೆಯದೇ ಇರುವುದರಿಂದ ಡೇಡ್ ಲೇಟರ್ ಆಫೀಸಿನಲ್ಲಿ ವರ್ಷಂಪ್ರತಿ ಅನೇಕ ಲಿಫಾಫೆ ಮುಂತಾದುವುಗಳು ನಾಶ ಮಾಡಲ್ಪಡುತ್ತವೆ ಎಂಬುದನ್ನು ಟಪ್ಪಾಲ ಇಲಾಖೆಯವರು ತಿಳಿಸುತ್ತಾರೆ.

ಮುಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯ ಈ ಮೋಸುವಿನ ಕಡೇಯ ಸ್ಟೀಮರು ಮೇ ತಾ. ೧೮ಕ್ಕೆ ಮುಂಬಯಿಂದ ಬಿಡಲ್ಪಟ್ಟು ತಾ. ೧೯ಕ್ಕೆ ಮಂಗಳೂರ ಬಂದರವನ್ನು ಸೇರುವುದು.

[illegible] ಕಾರು ಮುಖಾಮುಖಿ ಕಟ್ಟಿಸುವುದೆಂದು ಆಲೋಚಿಸಿಯದೆ. [illegible] ಈಗ ಅಷ್ಟ ಸ್ಥಳದಿಂದ ಸಾಲೆಯು ಪಶಾರಪೊಳಗೆ [illegible] ಬ್ರಾಹ್ಮಣರು, ಶಿವ ಬ್ರಾಹ್ಮಣರು, [illegible] ಭವನಗಳನ್ನು ಕಟ್ಟಿಸಲು ಪ್ರಯತ್ನ ಮಾಡುತ್ತಿ [illegible] ವಿಷಯಗಳನ್ನು ಓದಿಹೇಳಿದರು.

[illegible] ವಾಯಿತು. ಅನಂತರ ರಾಯಬಹದ್ದೂರ್ ಎಮ್. [illegible] ಛಾವ ಚಿತ್ರದ ತೆರೆಯನ್ನು ಅಧ್ಯಕ್ಷರು ತೆರೆದರು, ಅನಂತರ ಅಧ್ಯಕ್ಷರು:— ಈ ಸಾಲೆಯ ಸ್ಥಿತಿಯನ್ನು ಕಂಡು ತುಂಬಾ [illegible] ರಾಯಬಹದ್ದೂರ್ ಎಮ್. ರಘುನಾಥರಾಯರು ಮೊದಲು [illegible] ನಾನು ಅವರನ್ನು ನೋಡಿದ್ದೆ. ಆಗ ಅವರು ಪರೋಪ [illegible] ನೋಡಿ ತುಂಬಾ ಸಂತೋಷಪಟ್ಟಿದ್ದೆ. ಅಲ್ಲಿ ಅವರ ಇಷ್ಟು [illegible] ಯೋಗಗಳನ್ನು ಮಾಡಿದ್ದನ್ನು ಕೇಳಿ ಆನಂದ ಭರಿತನಾದೆ. ಇಂದು ಅವರ ಭಾವಚಿತ್ರದ ತೆರೆಯನ್ನು ತೆರೆಯುವ ಕಾರ್ಯವು ನನ್ನ ಪಾಲಿಗೆ ಬಂದುದು ನನ್ನ ಭಾಗ್ಯವೆನ್ನಬೇಕು. ಇನ್ಸ್‌ಪೆಕ್ಟರ್ ಅವರುಗಳು ಸಾಲೆಯ ವಿಷಯ ಬರೆದುದನ್ನು ಕೇಳಿ ತುಂಬಾ ಸಂತೋಷಪಟ್ಟೆನು. ಇಷ್ಟು ಉತ್ಕೃಷ್ಟ ಸ್ಥಿತಿಯಲ್ಲಿ ನಡೆಯುತ್ತಿರುವ ಈ ಸಾಲೆಯು ಧನ ಸಹಾಯವಿಲ್ಲದೆ ಸ್ಥಳ ಸಂಕೋಚದ ತೊಂದರೆ ಪಡುತ್ತಿರುವುದನ್ನು ನೋಡಲು ತುಂಬಾ ದುಃಖಿಸುತ್ತೇನೆ. ಆದುದರಿಂದ ಈ ತಾಲೂಕಿನ ಸದ್ಗೃಹಸ್ಥರೆಲ್ಲರೂ ತಮ್ಮ ಶಕ್ತ್ಯಾನುಸಾರ ವಂತಿಗೆ ಕೊಟ್ಟು, ಮೊದಲು ವರೆಗೆ ವಾಗ್ದಾನ ಮಾಡಿದವರು ಕೂಡ ಬೇಗನೆ ತಮ್ಮ ವಾಗ್ದಾನಗಳನ್ನು ತೀರಿಸಿ ಸಾಲೆಯನ್ನು ಸಂಪೂರ್ಣ ಹಾಯ್ ಸ್ಕೂಲನ್ನಾಗಿ ಮಾಡುವರೆಂದು ನಾನು ಕೋರುತ್ತೇನೆ” ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಬಳಿಕ ವಿದ್ಯಾರ್ಥಿಗಳು “ಚೀ: ರತ್ನ ನಾಟಕ ರತ್ನಂ” ಎಂಬ ಒಂದು ನಾಟಕವನ್ನು ಚಲೋ ರೀತಿಯಿಂದ ಅಭಿನಯಿಸಿದರು. ರಾ। ಕೂವಣೆ ಹೆಗ್ಗಡೆಯವರು ಅಧ್ಯಕ್ಷರ ದೊರೆಗಳವರನ್ನು ಅಧ್ಯಕ್ಷಸ್ಥಾನ ವಹಿಸಿದಕ್ಕಾಗಿ ವಂದಿಸಿದರು. ಅನಂತರ ರಾಷ್ಟ್ರಗೀತವನ್ನು ಹಾಡಿ, ಸಭಿಕರನ್ನು ಪನ್ನೀರು, ಪುಷ್ಪ, ಗಂಧ ಮೊದಲಾದುವುಗಳಿಂದ ಉಪಚರಿಸಲು ಸಭೆಯು ಮುಕ್ತಾಯವಾಯಿತು.

SAVOOR SHIVA RAO,
Secretary
Puttur Education Society

ಗ್ರಾಮಸಿಬಂದಿ

ಮಂಗಳೂರು, ಬಂಟವಾಳ ಉಪ್ಪಿನಂಗಡಿ ಮುಂತಾದ ಸ್ಥಳಗಳಲ್ಲಿ ಜರಗಿದ ಗ್ರಾಮ ಉದ್ಯೋಗಸ್ಥರ ಕೊನ್ಫರೆನ್ಸಿನಲ್ಲಿ ಈ ಸಿಬಂದಿಗೆ ಈ ವರೆಗೆ ಸಿಗುತಿದ್ದ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಮಾಡಿದ ಠರಾವುಗಳನ್ನು ಕೆಲವು ಕೊನ್ಫರೆನ್ಸುಗಳಲ್ಲಿ ಆದ ಭಾಷಣಗಳನ್ನು ಹಿಂದಿನ ಸಂಚಿಕೆಗಳಲ್ಲಿ ನಾವು ಪ್ರಕಟಿಸಿದ್ದೇವೆ. ಸೆಲರಿ ಕಮಿಟಿಯವರು ಈ ಸಿಬಂದಿಯ ವಿಷಯವಾಗಿ ಕೊಡಲಿಕ್ಕಿರುವ ಸಲಹೆಗಳನ್ನು ಕೂಡಾ ಪ್ರಸ್ತಾಪಿಸಿದ್ದೇವೆ. ಈ ಸಿಬಂದಿಯ ವೇತನ ವಿಚಾರ ಮಾಡಬೇಕಾದರೆ ಈ ಸಿಬಂದಿಯ ಜನ್ಮ ಕಥೆಯನ್ನು ಸ್ವಲ್ಪ ಇಲ್ಲಿ ಹೇಳಬೇಕಾಗಿದೆ.

ಈ ದೇಶದಲ್ಲಿ ಸಾಮೂಹ್ಯ ಆಡಳಿತೆಯು ಭಾರವು ಆಯಾ ಗ್ರಾಮದ ಗ್ರಾಮ ಪಂಚಾಯತಿಕೆಯ ಮೇಲೆ ಹೊಂದಿತ್ತು ಎಂಬವಕ್ಕೆ ಹಲವು ಆಧಾರಗಳಿವೆ. ರಾಜ್ಯಾಧಿಕಾರವು ಆಗಾಗ ಬೇರೆ ಬೇರೆ ಮತದ ಮತ್ತು ಬೇರೆ ಬೇರೆ ವಂಶದ ಅರಸುಗಳ ಕೈಸೇರಿದ್ದರೂ ಈ ಗ್ರಾಮ ಪಂಚಾಯತದ ಆಡಳಿತೆಯು ಹಳ್ಳಿಯಲ್ಲಿ ತಕ್ಕ ಮಟ್ಟಿಗೆ ಭದ್ರವಾಗಿಯೇ ಇತ್ತು. ಗ್ರಾಮದ ಕಂದಾಯ ವಸೂಲಿ, ಜನಗಳ ಆಚಾರ ವಿಚಾರ, ಗ್ರಾಮ ದೇವತೆಯ ಪಂಚಪರ್ವಗಳ ಏಲಿವಾರ ಇವೆಲ್ಲ ಈ ಗ್ರಾಮ ಪಂಚಾಯತದ ಜವಾಬ್ದಾರಿಯು. ರಾಜರ ಕಡೆಯ ನೌಕರರು ಈ ಪಂಚಾಯತರೊಡನೆ ಎಲ್ಲಾ ಬಗೆಯ ವಹಿವಾಟುಗಳನ್ನು ನಡಿಸಬೇಕಾಗಿತ್ತು. ಪಟೇಲ ಅಥವಾ ಗ್ರಾಮ ಮುನಸೀಫ, ಶ್ಯಾನುಭೋಗ, ಉಗ್ರಾಣಿ ಅಥವಾ ತಳಿಯಾರ (ತಳವಾರ), ಮಣೆಗಾರ ಅಂದರೆ ಕಂದಾಯ ವಸೂಲಿಯಲ್ಲಿ ಸಹಾಯ ಮಾಡುವವ, ನೀರ್ಗಂಟಿ ಅಂದರೆ ಗ್ರಾಮದ ತೋಡು ಕೆರೆಗಳ ನೀರಿನ ಕಟ್ಟುಗಳ ವಿಚಾರ ನಡಿಸುವವ, ಇವರು ಈ ಪಂಚಾಯತದ ಮುಖ್ಯ ಆಡಳಿತ ಸಿಬಂದಿ. ಪಟ್ಟಣ ಶೆಟ್ಟಿಯು ಗ್ರಾಮದ ವ್ಯಾಪಾರ ವಹಿವಾಟು, ಹುಂಡಿ ಚಲಾವಣೆ ಮುಂತಾದವುಗಳ ವಿಚಾರ ನಡಿಸುವವನು. ಶಾಸ್ತ್ರಿ ಅಥವಾ ತಂತ್ರಿ, ಇವರು ಆಚಾರ ವಿಚಾರ, ಸಾಮೋಹಿತ್ಯ ಮತ್ತು ಗ್ರಾಮದೇವಸ್ಥಾನದ ಪೂಜೆಗಳನ್ನು ನಡಿಸುವವರು. ಕಡೆಯ ಅಧಿಕಾರಿಗೆ ದೇವಸ್ಥಾನದ ಆಸ್ತಿಯಿಂದಲೇ ವೇತನ ಸಲ್ಲುತಿತ್ತು. ಚಿಲ್ಲರೆ ಶಾಂತಿ ಮುಂತಾದವುಗಳ ಬಗ್ಗೆ ಆಯಾ ಮನೆತನದಿಂದ ಉಡುಗೆರೆ ದಕ್ಷಿಣೆ ಮುಂತಾದವುಗಳು ಸಲ್ಲುತಿದ್ದುವು. ದೇವಸ್ಥಾನಗಳಿಗೆ ಸರಕಾರದಿಂದ ತಸ್ತೀಕು ಬೇರೆ ಸಲ್ಲುತಿದ್ದುದರಿಂದ ಈ ಪುರೋಹಿತರಿಗೆ ಬೇರೆ ಆಸ್ತಿ ಉತ್ತಾರಬಿಟ್ಟ ದಾಖಲೆಗಳು ಇಲ್ಲ. ಆದರೆ ಇತರ ಸಿಬಂದಿಗೆ ಸರಕಾರದಿಂದ ಕೆಲವು ಸಂದರ್ಭದಲ್ಲಿ ತೀರ್ವೆ ಮಾಫಿಯಿಂದ, ಕೆಲವು ಸಂದರ್ಭದಲ್ಲಿ ಕಾಯಂ ತೀರ್ವೆ ಸ್ವಲ್ಪ ಹೊರಿಸಿ ಕೆಲವು ಆಸ್ತಿಯನ್ನು ಉತ್ತಾರಬಿಟ್ಟಿರುತಿದ್ದರು. ಈ ಆಸ್ತಿಯನ್ನು ಅನುಭವಿಸಿ ಬರುವವರ ಮನೆತನದಲ್ಲಿ ಯೋಗ್ಯನಾದವನು ಆಯಾಯ ಕೆಲಸವನ್ನು ಪಾರಂಪರ್ಯವಾಗಿ ಮಾಡಬೇಕಿತ್ತು. ಇದು ಹಿಂದು ಅರಸುಗಳ ಕಾಲದಿಂದಲೇ ನಡೆದು ಬಂದಿದ್ದು ಅನಂತರದ ಮುಸಲ್ಮಾನ ಅರಸುಗಳೂ ಅದನ್ನೇ ಮುಂಬರಿಸಿ ಮಾಡಿದ್ದಾರೆ.

ಇಂಥ ಇನಾಮು ವರ್ಗಗಳ ದಾಖಲೆಯು ನಮ್ಮ ಜಿಲ್ಲೆಯ ರಿಕಾರ್ಡುಗಳಲ್ಲಿ ಕಂಡು ಬರುವುದಿಲ್ಲ. ಗ್ರಾಮ ಸಿಬಂದಿಯ ಪೈಕಿ ಶ್ಯಾನಭೋಗರ ಬಳಿಯಲ್ಲಿ ಈ ಬಗೆಯ ರಿಕಾರ್ಡು ಇರಬೇಕಾಗಿತ್ತು. ಅದು ಕಾರಣಾಂತರದಿಂದ ನಷ್ಟವಾಯಿತು ಆ ಮೇಲೆ ಅದರ ಪತ್ತೆಯೇ ಇಲ್ಲವೆನ್ನುತ್ತಾರೆ. ಅದಂತಿರಲಿ.

ಈ ಗ್ರಾಮ ಉದ್ಯೋಗಸ್ಥರು ಆಯಾ ಅರಸುಗಳಿಗೆ [illegible] ಯನ್ನು ವಸೂಲು ಮಾಡಿ ತುಂಬಿಸಲಿಕ್ಕೆ ಜವಾಬ್ದಾರರು, ರಾಜಕಾರ್ಯದ ನಿಮಿತ್ತ ಹೊಸ ಕಂದಾಯ ಹಾಕಬೇಕಾಗಿ ಕಂಡು ಬಂದಲ್ಲಿ ಇಡೀ ಗ್ರಾಮದ ಮೇಲೆ ಆ ಧನಮೊತ್ತವನ್ನು ಏರಿಸಿ, ಅದನ್ನು ಲೆಕ್ಕ ತನಖಿಯಿಂದ ಹಂಚಿಹಾಕುವ ಏರ್ಪಾಡನ್ನು ಮಾಡಲಿಕ್ಕೆ ಅಥವಾ ಕಂದಾಯ ಬಾಕಿ ಆದಲ್ಲಿ ಗ್ರಾಮ ಪಂಚಾಯತರಿಗೆ ಎಚ್ಚರಿಸಲಿಕ್ಕೆ ಮಾತ್ರ ರಾಜರ ಕಡೆಯ ಮುತ್ಸದ್ದಿಯೊಬ್ಬನು ಬರುತಿದ್ದನು. ಅಪರಾಧಿಯಾಗಿ ಬಂದ ಆತನಿಗೆ ಸರಬರಾಯಿ ಮಾಡುವ ಭಾರವು ಗ್ರಾಮದ್ದಾಗಿತ್ತು. ಬಂದ ಮುತ್ಸದ್ದಿಯು [illegible]

[illegible] ಮುತ್ತು [illegible] ಅಲ್ಲದೆ [illegible]
ಸಿಬ್ಬಂದಿಗಳನ್ನು ಅವರೇ ಕೊಟ್ಟು ಉಳಿದವುಗಳ ಬಗ್ಗೆ ರೂಪಾಯಿ ಬಿಲ್ಲಿನ ಮಲೆ [illegible] ಆಗ ಆ ಬಗ್ಗೆ ಶಾಸನವು ಇದ್ದ [illegible] ಸ್ವಂತ [illegible] ಗ್ರಾಮಕ್ಕೆ ಸಲ್ಲುತ್ತಿದ್ದು. ಮುಸಲ್ಮಾನ ಸಂಪತ್ಸರದ ಪಟ್ಟಿ, ಹೈದರ ಟಿಪ್ಪುಗಳ ಕಾಲದ ಕಿಸ್ತು, ಶಾಮಿಲ್ ಮುಂತಾದ ಕಂದಾಯಗಳ ಬಗ್ಗೆ ಇದೇ ಭೂಮಿಯ ಧರ್ಮಗಳನ್ನು ಕೊಡಲಾಗಿತ್ತು. ಕಂದಾಯವು ಖಡ್ಡಾಯವಾಗಿದ್ದರೂ ಸರಿಯಾಗಿ ವಸೂಲಾಗಬೇಕೆಂಬ ಈಗಿನ ರೀತಿಯ ಪಟ್ಟುಮುಟ್ಟಿನ ವ್ಯವಸ್ಥೆಯು ಆಗ ಇರಲಿಲ್ಲ. ಆದರೆ ಪರ್ಗಣೆ ವ್ಯವಸ್ಥೆ ನಡೆಸುವ ಅಮಲ್ದಾರನ ಕಾಲದಲ್ಲಿ ಯಾರಿಗೆ, ಬೆಳೆ ಕೊಟ್ಟು ಹೋಯಿತು, ಯಾರಿಗೆ ಎಷ್ಟು ಕಂದಾಯ ವಜಾ ಮಾಡಬೇಕು, ಎಷ್ಟು ಸ್ಥಳ ಹೊಸದಾಗಿ ಸಾಗುವಳಿಯಾಯಿತು ಎಂಬ ವಿಚಾರವು ನಡೆಯುತಿತ್ತು. ಯುದ್ಧ ಮುಂತಾದ ವಿಶೇಷಗಳ ಕಾಲದಲ್ಲಿ ಆಯಾಯ ಗ್ರಾಮದಿಂದ ಸರಕಾರದ ಬಿಟ್ಟಿ ಬೇಗಾರಿ, ಸೈನ್ಯಕ್ಕೆ ಆಹಾರದ ಪುರವಣಿ, ಯುದ್ಧದ ಖರ್ಚಿಗೆ ವಿಶೇಷ ಕಂದಾಯ ಇವುಗಳ ಭಾರವು ಗ್ರಾಮಗಳ ಮೇಲೆ ಹಂಚಿ ಬೀಳುತಿತ್ತು. ಈಗಿನ ಸುಧಾರಿತ ವ್ಯವಸ್ಥೆ ಆಗ ಇದ್ದಿಲ್ಲ, ಕಂದಾಯ ತೆತ್ತವರು ಸರಿಯಾಗಿ ತೆರುತಿದ್ದರೂ, ತೆರದವರ ಮೇಲೆ ಕಠಿಣ ಶಾಸನ ಇರುತಿದ್ದಿಲ್ಲ, ಹೀಗಾಗಿ ಎಲ್ಲವೂ ಬ್ರಿಟಿಷ ಸರಕಾರದ ಕೈಗೆ ಬರುವಾಗ ಶಿಥಿಲತೆಗೆ ಬಂದಿತ್ತು ಎಂದು ಹಲವರ ಅಭಿಪ್ರಾಯವಿದೆ. ಆದರೆ ರಾಜಸ್ಥಾನದ ಶಾಸನ ಬಲವೇ ಕಡಿಮೆಯಾದಲ್ಲಿ ಹಿಂದು ಮುಸಲ್ಮಾನ ರಾಜರೇ ಏಕೆ ಅಲ್ಲ ಯುರೋಪಿಯನ ಸುಧಾರಿತ ರಾಜ್ಯಗಳಲ್ಲಿಯೂ ಅದೇ ದುಸ್ಥಿತಿಯು ಬಂದೊದಗುತ್ತದೆ. ಈ ಕಾರಣದಿಂದ ಗ್ರಾಮ ಪಂಚಾಯತರ ವಿಚಾರವು ನಿಸ್ಸಾರವೆಂದಾಗಲೀ ಗ್ರಾಮ ಪಂಚಾಯತರು ಅವರ ಅಧಿಕಾರಗಳನ್ನು ನಡಿಸುವಷ್ಟು ಯೋಗ್ಯರಲ್ಲವೆಂದಾಗಲೀ ಹೇಳ ಬರುವದಿಲ್ಲ.

(ಮುಂದರಿಸಲಾಗುವುದು.)

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ಇದೇ ಎಪ್ರಿಲ್ ೧೫ನೇ ತಾರೀಕಿಗೆ ಜರಗಿದ ಮೀಟಿಂಗಿನಲ್ಲಿ ಕಾರ್ಯಾರಂಭಕ್ಕೆ ಆದಿಯಾಗಿ ರಾ। ಕುಂಬಳೆ ನರಸಿಂಹನಾಯಕರು ಸೂಚಿಸಿ ಖಾನಸಾಹೇಬರು ಹಾಜಿ ಅಬ್ದುಲಾ ಹಾಜಿ ಖಾಸಿಂಸಾಹೇಬರು ಅನುಮೋದಿಸಿ ಈ ಕೆಳಗಿನ ಠರಾವನ್ನು ಬೋರ್ಡು ಮೆಂಬರರು ಎದ್ದು ನಿಂತು ಆದರಪೂರ್ವಕವಾಗಿ ಅಂಗೀಕರಿಸಿದರು: “ ಈ ಬೋರ್ಡಿನಲ್ಲಿ ೨೫ ವರ್ಷಗಳಿಗಿಂತ ಹೆಚ್ಚಿನ ಕಾಲ ಮೆಂಬರರಾಗಿದ್ದು ಬೋರ್ಡಿನ ಪರವಾಗಿ ವಾತ್ಸಲ್ಯದಿಂದ ಕಾರ್ಯನಿರ್ವಾಹಮಾಡಿದ ಮ। ರಾ। ರಾ। ಕೆ. ಪಿ. ಅಚ್ಯುತಯ್ಯನವರು ಕಾಲವಶರಾದರು ಎಂಬ ವಾರ್ತೆಯನ್ನು ಕೇಳಿ ಅವರ ಕಾರ್ಯಾಸಕ್ತಿಯನ್ನು ಸ್ಮರಿಸುವುದಲ್ಲದೆ ಈ ಮರಣದಿಂದ ಅವರಿಗುಂಟಾಗುವ ದುಃಖವನ್ನು ಬೋರ್ಡಿನವರು ಗಣಿಸಿದವರ ಮಗ ರಾ। ಕೆ. ಪಿ. ಕೇಶವರಾಯರಿಗೆ ತಿಳಿಸಬೇಕೆಂದು ಕುತೂಹಲಪಡುವರು”. ಈ ಠರಾವು ಸರ್ವಾನುಮತದಿಂದ ಮಂಜೂರಾದ ನಂತರ ಕೆಲವು ಅಂದಾಜುಪಟ್ಟಿಗಳು ಪಾಸಾದವು. ಮಂಗಳೂರು ಕಾರ್ಕಳ ರಸ್ತೆಯ ೫ನೆ ಮೈಲು ೪ನೆ ಮತ್ತು ೫ನೆ ಫರ್ಲಾಂಗಿನಲ್ಲಿ ಬದಿಗಳನ್ನು ದುರುಸ್ತಿ ಮಾಡಿಕಟ್ಟುವುದಕ್ಕೆ ಎರಡನೇ ಪಟ್ಟಿಪ್ರಕಾರ ರೂ. ೬೦೦, ಮುಲ್ಕಿ ಬಂಗ್ಲೆಯ ಕಾಯಿದ ದುರುಸ್ತಿಗೆ ರೂ. ೧೩೦, ಮಂಗಳೂರು ಮಡಿಕೇರಿ ರಸ್ತೆಯ ೫೫/೫ನೆ ಮೈಲಿನ ಬಳಿಯಲ್ಲಿ ಸೇತುವೆಯ ದುರುಸ್ತಿಗೆ ರೂ. ೧೦೫೦, ಮಂಗಳೂರು ಪೈಸಾರು ರಸ್ತೆಯಲ್ಲಿ (ಮಂಜರಾಬಾದು) ೨೭/೭ನೆ ಮೈಲಿನ ಬಳಿಯ ಅಮ್ಮೆಯ ಹಳ್ಳದ ಸೇತುವೆಯನ್ನು ಪುನಃ ಕಟ್ಟಲಿಕ್ಕೆ ರೂ. ೧೫೬೦೦, ಮಂಗಳೂರು ಮಡಿಕೇರಿ ರಸ್ತೆಯ ೨೪/೫ನೆ ಮೈಲಿನ ಬಳಿ ಮೋರಿಯನ್ನು ಪುನಃ ಕಟ್ಟಲಿಕ್ಕೆ ರೂ. ೨೩೨೫, ಇಷ್ಟು ಸಂಕ್ಷನಾದವು

ಲೋಕಲ್ ಬೋರ್ಡುಗಳ ಪ್ರೆಸಿಡೆಂಟರಿಗೆ ತಮ್ಮ ವೈಸಪ್ರೆಸಿಡೆಂಟರನ್ನು ಚುನಾಯಿಸುವ ಅಧಿಕಾರವನ್ನು ಕೊಡುವ ವಿಷಯದಲ್ಲಿ ಲೋಕಲ್ ಬೋರ್ಡುಗಳ ಅಭಿಪ್ರಾಯವನ್ನು ಸರಕಾರದವರು ಕೇಳಿದಕ್ಕೆ ವೈಸಪ್ರೆಸಿಡೆಂಟರನ್ನು ಮೆಂಬರುಗಳೇ ಮೀಟಿಂಗಿನಲ್ಲಿ ಚುನಾಯಿಸುವ ಕ್ರಮವು ಯೋಗ್ಯವೆಂದು ಈ ಮೀಟಿಂಗಿನಲ್ಲಿ ಅಭಿಪ್ರಾಯವಾಯಿತು.

ಸುಬ್ರಮಣ್ಯ ಷಷ್ಠಿ ದಾಟಿದ ನಂತರ ಕುಕ್ಕೆಯಲ್ಲಿ ಜಾನುವಾರು ಸಂತೆ ಜರಗುವದು ಯೋಗ್ಯವೆಂದು ಕಲೆಕ್ಟರರು ಬರೆದ ಸೂಚನೆಯನ್ನು ಆಲೋಚನೆ ಬಗ್ಗೆ ಬಾಕಿ ಇಡಲಾಯಿತು; ಆದರೆ ಜಾನುವಾರುಗಳ ಬಗ್ಗೆ ಫೀಸನ್ನು ಇನ್ನು ಮುಂದೆ ವಸೂಲು ಮಾಡಬಾರದೆಂದು ನಿರ್ಣಯವಾಯಿತು. ಕಾಸರಗೋಡು ಶಹರಿನಲ್ಲಿ ತೆರೆಯಲಿಕ್ಕೆ ಆಲೋಚಿಸಿದ ಬೋರ್ಡ ಸೆಕೆಂಡರಿ ಶಾಲೆಯಲ್ಲಿ IV V VI ನೆ ಕ್ಲಾಸುಗಳ ಬಗ್ಗೆ ತಗಲಬಹುದಾದ ಖರ್ಚನ್ನು ಬೋರ್ಡಿನವರ ತಮ್ಮ ಸ್ವಂತ ಬೊಕ್ಕಸದಿಂದಲೇ ವೆಚ್ಚ ಮಾಡಲಿಕ್ಕೆ ಸಿದ್ಧವಿದ್ದಾರೆಂದು ಡಿರೆಕ್ಟರ್ ಸಾಹೇಬರ ಪತ್ರಕ್ಕೆ ಉತ್ತರ ಬರೆಯಬೇಕಾಗಿ ನಿಶ್ಚಯಿಸಲಾಯಿತು.

ಮಂಗಳೂರು ಬಂದರಕ್ಕೆ ಎದುರಾಗಿ ಹೊಳೆಗೂ ಸಮುದ್ರಕ್ಕೂ ನಡುವೆ ಬಾಚಿಕೊಂಡಿದ್ದ ಉಸುಬಿನ ಸ್ಥಳದಲ್ಲಿ ಬಾವಿಗಳು ಪಾಯಿಖಾನೆಗಳು ಮುಂತಾದನ್ನು ಕಟ್ಟಿಸುವ ಬಗ್ಗೆ ಮಂಗಳೂರು ತಾಲೂಕು ಬೋರ್ಡಿನವರಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ದ್ರವ್ಯಾನುಕೂಲ ಸಿಗಬಹುದೇ ಎಂದು ಪ್ರಶ್ನಿಸಿದ್ದಕ್ಕೆ ಆ ಭಾಗವನ್ನು ಮಂಗಳೂರು ಮ್ಯುನಿಸಿಪಾಲಿಟಿಯೊಳಗೆ ಸೇರಿಸಲಿಕ್ಕೆ ಸಾಧ್ಯವುಂಟೇ ಎಂದು ಮ್ಯುನಿಸಿಪಲ್ ಕೌನ್ಸಿಲಿನವರಿಗೆ ಕೇಳಬೇಕೆಂದು ಠರಾವಾಯಿತು.

ಡಿಸ್ಟ್ರಿಕ್ಟ್ ಬೋರ್ಡಿನವರ ಪರವಾಗಿ ಮಂಗಳೂರಿನ ಸರಕಾರಿ ಆಸ್ಪತ್ರೆಯ ಆಲೋಚನೆ ಕಮಿಟಿಯಲ್ಲಿ ಇನ್ನೊಬ್ಬ ಮೆಂಬರರು ಬೇಕಾಗಿದೆ ಎಂದು ಜಿಲ್ಲಾ ಸರ್ಜನರು ತಿಳಿಸಿದಕ್ಕೆ ಸರ್ವಾನುಮತದಿಂದ ರಾವ ಬಹದ್ದೂರ ರಘುನಾಥಯ್ಯನವರನ್ನು ಮೆಂಬರರಾಗಿ ಆರಿಸಲಾಯಿತು.

ಹತ್ತಿಯ ಬೆಳೆಗೆ ಉತ್ತಮ ಗೊಬ್ಬರ.

ನಾಗಪುರದ ವ್ಯವಸಾಯಿಕ ಇಲಾಖಾ ಡೆಪ್ಯೂಟಿ ಡೈರೆಕ್ಟರರು ಬೇರಾರ ಪ್ರಾಂತದಲ್ಲಿ ಹತ್ತಿಯನ್ನು ಉತ್ಕೃಷ್ಟವಾಗಿ ಬೆಳೆಸುವ ಬಗೆಗೆ ವಿಶೇಷವಾದ ಏರ್ಪಾಡನ್ನು ಮಾಡಿಕೊಂಡಿರುವರು. ಇವರು ಮಣಕ್ಕೆ ರೂ. ೭—೮—೦೦ ಮೇರೆಗೆ ಎಷ್ಟೋ ಖಂಡಿ ಸೊಪ್ಪುನ್ನು ರೈತರಿಗೆ ಒದಗಿಸಿಕೊಟ್ಟು, ತನ್ಮೂಲಕವಾಗಿ, ಅವರಿಂದ ಹತ್ತಿ ಬೆಳೆಸಿ, ಲೆಕ್ಕಹಾಕಿ ನೋಡಿ, ಕೊನೆಗೆ ಹತ್ತಿಯ ಬೆಳೆಗೆ ಇದೇ ಉತ್ತಮ ಗೊಬ್ಬರವೆನ್ನುತ್ತಾರೆ. ಮೊದಲೂ, ಸಗಣಿಗೊಬ್ಬರ ಹಾಕಿದಂಥ ಗದ್ದೆಗಳಲ್ಲಿ ಹತ್ತಂಗುಲ ಅಂತರಕ್ಕೆ ಹತ್ತಿಗಿಡಗಳು ಬೆಳೆದೊಡನೆ, ಅವನ್ನು ಸುಮಾರು ಅರ್ಧ ಮೊಳದೂರಕ್ಕೆ ನೆಟ್ಟು, ಎಲ್ಲಿಗೆ ಒಂದು ಮಣ ಪ್ರಕಾರ ಸೊಪ್ಪನ್ನು ಹಾಕುವುದು ಸರಿಯಂತೆ. ಒಂದೊಂದು ಗಿಡಕ್ಕೆ ನಸ್ಯ [illegible] ಸೊಪ್ಪನ್ನು ಹಾಕಿದರೆ ಸಾಕಾಗುವುದು! ಆಮೇಲೆ, ಗಿಡದ ಬುಡಭಾಗವನ್ನು ಚೆನ್ನಾಗಿ ಮಣ್ಣಿಂದ ಮುಚ್ಚಿ, ಅಷ್ಟು ಮಳೆಗೆ ಕರಗಿ ಹಿಂಯದ [illegible]

[illegible] ವಾಗಿ [illegible]

ಕರ್ನಾಟಕ [illegible] ಪ್ರಥಮ ಸಹಕಾರಿ ಪರಿಷತ್ತು.

[illegible] ೧೯ನೆ ತಾರೀಕುಗಳಲ್ಲಿ ಧಾರವಾಡದಲ್ಲಿ [illegible] ಮುಖ್ಯವಾಗಿ ಈ ಕೆಳಗಿನ ವಿಷಯಗಳು ಚರ್ಚೆಗೆ ಬರುವವು.

೧. ಸಹಕಾರಿ ಸಂಘಗಳ ಕ್ರಮಪ್ರಕಟಣೆ.

(a) [illegible] ಮಾಡುವುದು ಹೇಗೆ?

(b) ಸೆಂಟ್ರಲ್ ಬ್ಯಾಂಕುಗಳಿಂದ ಸಿಗುವ ಸಾಲಗಳು ಬೇಗನೆ ಸಿಕ್ಕುವಂತೆ ಮಾಡುವ ಉಪಾಯ.

(c) ಬ್ಯಾಂಕು ಹಣದ ಉಪಯೋಗ.

೨. ಗಿರಣಿಯಿಂಗ್ ಯೂನಿಯನ್‌ಗಳನ್ನು ಹೇಗೆ ಸುಧಾರಿಸಬೇಕು ಮತ್ತು ವ್ಯವಹಾರ ಕ್ಷೇತ್ರಗಳನ್ನು ಹೇಗೆ ವರ್ಧಿಸಬಹುದು?

೩. ಕೋಓಪರೇಟಿವ್ ಸ್ಟೋರುಗಳು ಮತ್ತು ಅವುಗಳನ್ನು ಸಹಕಾರ ಲೇವಾದೇವಿ ಸಂಘಗಳಿಗೆ ಜೋಡಿಸುವ ವಿಚಾರ.

೪. ಕರ್ನಾಟಕ ಪ್ರಾಂತದ ವಿಭಜನೆ.

೫. ಕೃಷಿಕರ ಲೇವಾದೇವಿಗಳ ಆಸ್ತಿವಾರದ ಮೇಲೆ ಕೃಷಿಕರ ಇತರ ಬಗೆಯ ಸಂಘಗಳ ಕ್ರಮವನ್ನು ಕಟ್ಟುವುದು.

(a) ಲೇವಾದೇವಿ ಸಂಘಗಳ ಮೂಲಕ ಮೆಂಬರುಗಳ ಉತ್ಪತ್ತಿ ಕ್ರಯ ಮುಪ್ಪವಹಾರ.

(b) ಜಮೀನು ದುರಸ್ತಿಯ ಸಂಘಗಳು.

೬. ಸಹಕಾರಿ ಆಸ್ಪತ್ರೆಗಳು,

೭. ಸಹಕಾರಿ ಕಟ್ಟಡಗಳ ಸಂಘಗಳು.

ಸದರಿ ಪರಿಷತ್ತಿನ ಸಮ್ಮೇಲನವು ನಾಮದಾರ ಮಿ। ಸಿ. ಎಸ್. ಕರ್ಟಿಸ್ ಸಿ. ಎಸ್. ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ದರಬಾರ ಹೋಲಿನಲ್ಲಿ ಜರಗುವುದು.

ಧಾರವಾಡ
4—4—20.

(ಸಹಿ) ಕೆ. ಬಿ. ಅಂಗಲ್ಲಿ
ಜನರಲ್ ಸೆಕ್ರೆಟರಿ.

ಪತ್ರವ್ಯವಹಾರ.

ಪ್ರಿಯ ವಾಚಕರೇ!

ಇದೇ ಬರುವ ವೈಶಾಖ ಶು। ೧೫ಲ್ಲಿ ಸಂಭವಿಸುವ ಚಂದ್ರ ಗ್ರಹಣವು ನಮ್ಮಲ್ಲಿಯ ಎಲ್ಲ ಪಂಚಾಂಗಗಳಲ್ಲೂ ಉಲ್ಲೇಖಿತವಾಗಿದೆಯಷ್ಟೆ! ಪರಂತು ನಮ್ಮಲ್ಲಿಯ ಪಂಚಾಂಗಕರ್ತರು ದೃಕ್ಸಾಮ್ಯವಿಲ್ಲದ ಅತಿಸ್ಥೂಲವಾದ ಗಣಿತದಿಂದಲೆ ಪಂಚಾಂಗಗಳನ್ನು ಗುಣಿಸುತ್ತಿರುವ ಮೂಲಕ ಗ್ರಹಣಾದಿಕಾಲವು ಪಂಚಾಂಗದಲ್ಲಿ ತೋರಿಸಿದಂತೆ ಪ್ರತ್ಯಕ್ಷ ನಿದರ್ಶನಕ್ಕೆ ಬರುವುದಿಲ್ಲ. ಆದು ಕಾರಣ ಬರುವ ಪೌರ್ಣಿಮೆಯ ಚಂದ್ರ ಗ್ರಹಣದ ಸ್ಪರ್ಶಾದಿಕಾಲಗಳನ್ನು ಸ್ಟಾಂಡರ್ಡ ಸಮಯಾನುಸಾರ ಈ ಕೆಳಗೆ ಬರೆಯುವೆನು.

ಸ್ಪರ್ಶ ಕಾಲ:—ರವಿವಾರ ರಾತ್ರಿ ಘಂಟೆ ೫—೩೬ಕ್ಕೆ, ಚಂದ್ರಾಸ್ತಮಾನ ಕಾಲ ಘಂಟೆ ೬—೮ಕ್ಕೆ, ಮಧ್ಯಕಾಲ ಚಂದ್ರನಾರ ಪ್ರಾತಃಕಾಲ ಘಂಟೆ ೭-೨೧ಕ್ಕೆ, ಮೋಕ್ಷ ಕಾಲ ಘಂಟೆ ೯-೧೧ಕ್ಕೆ. ಚಂದ್ರಾಸ್ತಮಾನವು ಘಂಟೆ ೬-೮ಕ್ಕೆ ಆಗುವದರಿಂದ ಈ ಗ್ರಹಣದ ನಿಮೀಲನ, ಮಧ್ಯ, ಉನ್ಮೀಲನ ಮೋಕ್ಷ ಇವುಗಳನ್ನು ನೋಡಲಿಕ್ಕಾಗುವದಿಲ್ಲ. ಸೂರ್ಯೋದಯವು ೬—೧೦ಕ್ಕಾಗುವದು. ನಮ್ಮಲ್ಲಿಯ ಸುಪ್ರಸಿದ್ಧ ಪಂಚಾಂಗಕರ್ತರೆನಿಸಿದ ಉಡುಪಿಯ ನಾರಾಯಣಾಚಾರ್ಯರು ಚಂದ್ರವಾರ ಪ್ರಾತಃಕಾಲ ಘಂಟೆ ೬—೪೬ಕ್ಕೆ ಚಂದ್ರಾಸ್ತಮಾನವೆಂದು ತಮ್ಮ ಪಂಚಾಂಗದಲ್ಲಿ ಬರೆದಿರುವರು. ಪೌರ್ಣಿಮೆಯ ಸೂರ್ಯೋದಯಕ್ಕೆ ಮೊದಲೆ ಚಂದ್ರಾಸ್ತಮಾನವು ಸೂರ್ಯೋದಯದ ಮೊದಲೆ ಆಗ ಬೇಕೆಂಬುದು ಗಣಿತದ ರಹಸ್ಯವನ್ನು ತಿಳಿದವರಿಗೆ ಸ್ಪಷ್ಟ ಗೋಚರವಾಗುವ ಮಾತು. ಉಡುಪಿಯ ಪಂಚಾಂಗ ಕರ್ತರು ಪೌರ್ಣಿಮೆಯು ಸೂರ್ಯೋದಯ ನಂತರ ಮೂರು ನಾಲ್ಕು ಗಳಿಗೆಯ ವರೆಗಿರುವುದೆಂತ ತಮ್ಮ ಪಂಚಾಂಗದಲ್ಲಿ ತೋರಿಸಿದ್ದಾರೆ. ಹೀಗಿರುತ್ತ ಇವರು ಚಂದ್ರಾಸ್ತಮಾನವು ಸೂರ್ಯೋದಯಾನಂತರ ೧॥ ಗಳಿಗೆಯಲ್ಲೆಂದು ಬರೆದುದು ತಪ್ಪಲ್ಲವೇ? ಗ್ರಹಣ ಸಮಯಗಳಲ್ಲಿ ಇವರು ಬರೆಯುವ ಚಂದ್ರಾಸ್ತಮಾನಕಾಲವು ಸರಿಯಾಗಿರುವುದಿಲ್ಲ. ಗ್ರಹಣದ ಸ್ಪರ್ಶಾದಿಕಾಲಗಳಂತೆ ಇವರ ಪಂಚಾಂಗದ ತಿಥ್ಯಾದಿ ಕಾಲವೂ, ಸಂಕ್ರಮಣ, ಮಹಾ ನಕ್ಷತ್ರ ಪ್ರಾರಂಭಕಾಲ, ಗ್ರಹರ ಮೌಢ್ಯಾದಿಗಳು ದೃಕ್ಸಾಮ್ಯಗಣಿತದಿಂದ ತಯಾರಿಸಲ್ಪಟ್ಟಂತೆ ತೋರುವುದಿಲ್ಲ. ದೃಕ್ಸಾಮ್ಯ ಪಂಚಾಂಗವೇ ಅತ್ಯಂತ ಶ್ರೇಷ್ಠವೆಂದು ಆಗಿಂದಾಗ ಪ್ರತಿಪಾದಿಸುತ್ತಿರುವರು. ಇದು ಸಂತೋಷವೆ. ಚಂದ್ರಾಸ್ತಮಾನವು ೬—೮ಕ್ಕಾಗುವದೋ, ಅಲ್ಲವೆ, ಉಡುಪಿಯ ಪಂಚಾಂಗದಲ್ಲಿ ಬರೆದಂತೆ ೬—೪೬ಕ್ಕಾಗುವದೋ-ಎಂಬೀ ಮಾತನ್ನು ಪ್ರತ್ಯಕ್ಷ ಪರೀಕ್ಷಿಸಬೇಕು. ಸೂರ್ಯೋದಯಾತ್ಪೂರ್ವವೆ ಚಂದ್ರಾಸ್ತಮಾನವಾಗುವುದೆಂದು ನಾವಂತೂ ಖಂಡಿತ ಹೇಳುತ್ತೇವೆ,

ಇತ್ಯಾದಿ, — ವೈಜಯಂತೀ ಪಂಚಾಂಗ ಸಂಪಾದಕರು,

ಸುರತ್ಕಲ್ ಹಿಂದೂ ವಿದ್ಯಾದಾಯಿನಿ ಶಾಲೆಯ ತೃತೀಯ ವಾರ್ಷಿಕ ವರ್ಧಂತಿಯ ಬಾತಮಿಯು ನಮ್ಮ ಹಸ್ತಗತವಾಗುವಾಗ ಸ್ವಲ್ಪ ಕಾಲವಿಳಂಬವಾಗಿ, ಸ್ಥಳಸಂಕೋಚದ ದೆಸೆಯಿಂದ ಈ ಸಲ ಅದನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ಅದನ್ನು ಮುದ್ರಿಸಲಿಕ್ಕಿದ್ದೇನೆ.

ಪತ್ರಿಕೆಕರ್ತ.

Just arrived! Just arrived!

WANTED.

Agents & Canvassers.

To sell our Warning Tilly

GENUINE HAARLEM OIL.

We have secured the Sole Agency for the whole of British India to import the Genuine Haarlem oil direct from the manufacturers

BOOK YOUR ORDER.

ONLY LIMITED STOCK JUST ARRIVED!

ಬೇಕು!

ನಾವು ಹೊಲ್ಲೆಂಡ್ ದೇಶದ ಹಾರ್ಲೀಮ್ ಪಟ್ಟಣದಲ್ಲಿ ವೇನಿಂಗ್ ಟಿಲ್ಲಿ ಬ್ರದರ್ಸ್ ಕಂಪೆನಿಯವರು ತಯಾರಿಸುವ ಲೋಕಪ್ರಸಿದ್ಧವಾದ

ಜೆನ್‌ವಿನ್ ಹಾರ್ಲೀಮ್ ಆಯಿಲ್.

ಎಂಬ ಔಷಧಿಯ ಬ್ರಿಟಿಷ್ ಹಿಂದೂಸ್ಥಾನಕ್ಕೆಲ್ಲಾ ಏಜಂಟರಾಗಿ ನೇಮಿಸಲ್ಪಟ್ಟಿರುತ್ತೇವೆ ಈ ಔಷಧಿಯ ಕೆಲವು ಸೀಸೆಗಳು ಮಾತ್ರ ನಮಗೆ ಬಂದಿರುವದರಿಂದ ಬೇಗನೇ ನಿಮ್ಮ ಆರ್ಡರುಗಳನ್ನು ಕೊಡಿರಿ! ಎಲ್ಲೆಲ್ಲಿಯೂ ಏಜಂಟರು ಬೇಕು

ವಿಳಾಸ — ಎಸ್. ಇ. ಏಮನ್.
ದಿ ಎಕ್ಲಿಪ್ಸ್ ಏಜನ್ಸಿ, ಬಲ್ಮಠ ರಸ್ತೆ
ಮಂಗಳೂರು

THE ECLIPSE AGENCY
MANGALORE

ರಾಜವೈದ್ಯ ನಾರಾಯಣಜೀ ಕೇಶವಜೀ

ಇವರ

ವೈದ್ಯವಿದ್ಯ.

ವೈದ್ಯವಿದ್ಯ	ಈ ಪುಸ್ತಕವು ಎಲ್ಲಾ ಭಾಷೆಗಳಲ್ಲಿಯೂ ಇರುವದು ಇದನ್ನು ಓದುವದರಿಂದ, ಶರೀರದಲ್ಲಿ ಉಂಟಾಗುವ ವ್ಯಾಧಿಗಳನ್ನು ಬಹು ಬೇಗನೆ ಗುಣ ಮಾಡಿಕೊಳ್ಳುವ ಉಪಾಯಗಳು ಮತ್ತು ಔಷಧ ಗಳು ಗೊತ್ತಾಗುವವು	ವೈದ್ಯವಿದ್ಯ

ವೈದ್ಯವಿದ್ಯ.

ಇದು ಎಲ್ಲರಿಗೂ ಉಚಿತವಾಗಿ ಕಳುಹಿಸುವೆವು ವಿಳಾಸವನ್ನು ತಿಳಿಸಿರಿ

ವಿಳಾಸ —
ರಾಜವೈದ್ಯ ನಾರಾಯಣಜೀ ಕೇಶವಜೀ,
೩೭ ಜೈನಾಬಜಾರು ರೋಡು, ಮದರಾಸು

To Get
BEST and CHEAPEST
EVERYTHING FROM BOMBAY

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ — ನಾವು ಈ ಕೆಳಗೆ ಹೆಸರು ತೋರುವ ಕಂಪೆನಿಯನ್ನು ಸದ್ಯಾ ತೆರೆದಿರುತ್ತೇವಾದುದರಿಂದ ಮುಂಬಯಿಯಿಂದ ಬೇಕಾಗುವ ಸಾಮಾನುಗಳನ್ನು ಅತ್ಯಲ್ಪ ಕಮಿಶನಿನ ಮೇಲೆ ಸಪ್ಲೈ ಮಾಡಿಕೊಡುತ್ತೇವೆ ಸಾಮಾನು ತರಿಸಲಪೇಕ್ಷಿಸುವವರು ನಮ್ಮ ಶರ್ತಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ಎಸ್. ರಘು ಸೇಕ್ರ್ಯ ರೇಜರು ವ ತ್ರ ದಸ್ತೂರದ ಎಂಟಿಟೀಪ್ ಎಂಬುವ ಜ್ವರದ ಪಿಲ್ಸುಗಳು ನಮ್ಮಲ್ಲಿ ದೊರಕುತ್ತವೆ ಕ್ಷಿಪ್ರದಲ್ಲಿ ಬರೆಳ್ಳಿರಿ

TEL. ADDRESS
PARTSARTHI, Bombay

BOMBAY CANARA TRADING CO.,
Jamnadas Building, Pitha Street,
FORT BOMBAY

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧ ಔಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S P RAJA & Co,
Kalyanakaraka Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ ಪೋಸ್ಟ, ದ. ಕ.

WANTED.

An young, energetic and qualified compounder who can write a neat and clean hand.

Applications must be written in their own hand and must be accompanied by testimonials of conduct etc

The starting salary will be Rs 20 per mensem or according to the qualifications and service For further particulars apply personally to the undersigned

P M. Kamath,
Proprietor.
P M Kamath & Co,
Chemists, MANGALORE

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು

ಎಲ್ಲಾ ತರದ ಮೇಹಗಳಲ್ಲಿ ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರವಿಸಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಬಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು ಕ್ರಯ — ರೂ 1—0—0

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ— ಎ. ಪೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು

ಮನೋಲ್ಲಾಸಿನೀ ತೈಲ.

ತಲೆನೋವು, ತಲೆತಿರುಗುವದು, ತಲೆವುರಿ ಕಣ್ಣುವುರಿ ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದೆ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆ ೧ಕ್ಕೆ ಆಣೆ ೧೨, ೩ಕ್ಕೆ ರೂ ೨, ದೊಡ್ಡ ಸೀಸೆಗೆ ರೂ. ೧—೮—೦

ಚಂದನಾಸವ. ಮೂತ್ರಕೃಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರ ಹೊಯ್ಯುವಾಗ್ಗೆ ಉರಿ, ಮೂತ್ರನಾಳದಲ್ಲಿ ಹುಣ್ಣಾಗುವದು ಮೂತ್ರದ್ವಾರದಿಂದ ಕೀವು ಬರುವದು, ಸ್ವಪ್ನಾವಸ್ಥೆ ಮುಂತಾದುವನ್ನೂ ಮೇಹರೋಗವನ್ನೂ ಗುಣಪಡಿಸುತ್ತದೆ. ಬಾಟ್ಲಿ ೧ರ ಕ್ರಯ ೧—೮—೦ ೩ಬಾಟ್ಲಿ ಒರ ಕ್ರಯ. ೪—೦—೦

ನಾರೀಸಖಿ ಹೆಂಗಸರು ಕ್ರಮತಪ್ಪಿ ಮುಟ್ಟಾಗುವದು, ರಜೋಸಮಯದಲ್ಲಿ ಅತ್ಯಲ್ಪವಾಗಲಿ ಅತಿರೇಕವಾಗಲಿ ರಕ್ತ ಸುರಿಯುವದು, ಹೊಟ್ಟೆಯಲ್ಲಿ ನೋವಾಗುವದು, ಸೊಂಟನೋವು, ಹೃತ್ಕಂಪ, ಬಿಳೀಪ್ರದರ (ಬಿಳೀ ಸೀರೆ) ಇವೇ ಮೊದಲಾದ ಹೆಂಗಸರ ರೋಗಗಳು ನಿಶ್ಚಯವಾಗಿ ಗುಣವಾಗುತ್ತದೆ ಬಾಟ್ಲಿಗೆ ರೂ ೨—೦—೦

ಚಿನ್ ಚಿನ್ ಬಾಮ್ ಎಲ್ಲಾ ತರದ ನೋವು, ತಲೆನೋವು, ಚಳಿ, ಘಾಯ ಚೇಳುಕಡಿತ, ತಕ್ಷಣ ಗುಣ ಬೆಲೆ ಸುಲಭ, ಭರಣಿ ೧ಕ್ಕೆ ಆ ೬ ಗಜಕರ್ಣದ ಮುಲಾಮು ಡಬ್ಬಿಗೆ ಆ ೪

ದಂತಶೋಧಿನಿಚೂರ್ಣ ಇದು ಹಲ್ಲುಗಳನ್ನು ಚೊಕ್ಕಟವಾಗಿಸಿ ಅಲ್ಲಾಡುವ ಹಲ್ಲುಗಳನ್ನು ಭದ್ರಪಡಿಸಿ ಹಲ್ಲುನೋವು, ದವಡೆ ಕುರು ವಾಯುಕುಣ್ಣು ಹಲ್ಲುಗಳಿಂದ ರಕ್ತ ಕೀವು ಬರುವುದನ್ನು ನಿಲ್ಲಿಸಿ ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಡಬ್ಬಿ ೧ಕ್ಕೆ ಆಣೆ ೫

ಲಂಗ್ಸ್‌ಟೋನು ಕೆಮ್ಮು, ನೆಗಡಿ ಗೂರಲು ಉಬ್ಬಸ, ಕ್ಷಯರೋಗ ಮುಂತಾದ ವ್ಯಾಧಿಗಳನ್ನು ಗುಣಮಾಡಿ ಧಾತುಪುಷ್ಟಿಯನ್ನುಂಟುಮಾಡುತ್ತದೆ. ಡಬ್ಬಿ ೧ಕ್ಕೆ ರೂ. ೨—೮—೦, ಅಂಚೆ ಹಾಸಲು ಬೇರೆ. ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ— ಮನೋಲ್ಲಾಸಿನಿ ಕಂಪೆನಿ,

Manollasini Co, 4 ಕಂಕನಾಡಿ ಪೋಸ್ಟು
4, Kankanady.

ಶಾಲಿವಾಹನಶಕ ೧೮೫೯ನೆಯ ರೌದ್ರಿ ಸಂದ ಉತ್ತರಾಯಣ ವೈಶಾಖ ಶು|| ೧೩ ಶನಿವಾರದಿಂದ ರೌದ್ರಿ ಸಂ|| ವೈಶಾಖ ಬ|| ೪ (ಉತ್ತರಾಯಣ) ಶುಕ್ರವಾರದ ವರೆಗಿನ ಪಂಚಾಂಗ.

(೧೯೩೦ನೆಯ ಮೇ ೭ ವಿದಿನ ಸು.)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ.	ಸೂರ್ಯ ಅಸ್ತ
						ಮ		
1	ಶನಿ	೧೩	೧ ೫	ಚಿತ್ರಾ	೬೦. ೦	೧೯	6 12	6 43
2	ರವಿ	೧೪	೩ ೨೯	ಚಿತ್ರಾ	೧.೪೬	೨೦	6 12	6 44
3	ಸೋಮ	⊙	೫ ೧೬	ಸ್ವಾತಿ	೫.೫೮	೨೧	6 12	6 44
4	ಕುಜ	೧	೯ ೨	ವಿಶಾಖಾ	೧೧ ೧೪	೨೨	6 11	6 44
5	ಬುಧ	೨	೧೩ ೨೮	ಅನುರಾಧಾ	೧೭ ೧೬	೨೩	6 11	6 44
6	ಗುರು	೩	೧೮ ೩೨	ಜ್ಯೇಷ್ಠಾ	೨೩.೪೬	೨೪	6 11	6 44
7	ಶುಕ್ರ	೪	೨೩ ೨೭	ಮೂಲಾ	೩೦ ೨	೨೫	6 10	6 44

ಮಂಗಳೂರಿನ ವಾಯುಸ್ಥಿತಿ.

(೧೯೩೦ನೆಯ ಎಪ್ರಿಲ್)

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜನವರಿ ೧ರಿಂದ
23	93—1	74—7	1—32	
24	92—7	76—3	0—43	
25	91—9	78—7	—	
26	93—6	76—4	0—02	
27	94—3	73—1	2—64	
28	92—9	79—7	0—04	—
29	93—3	79—4	—	—

ಮಂಗಳೂರಿನ ಪೇಟೆ ಧಾರಣೆ.

ದೇನಸು	ಇಂದ ರೂ ಆ	ವರೆಗೆ ರೂ ಆ
ಮಸ್ಕಿ ಅಕ್ಕಿಮುಡಿ ೧ಕ್ಕೆ	9—0	9—12
ಗುಡ್ಡು ,,	8—4	8—12
ದಾಶಿ ಮುಡಿ ೧ಕ್ಕೆ	8—0	8—8
ಅವ್ವಲ್ ಬೆಳ್ತಿಗೆ	10—1[illegible]	11—[illegible]
ಗುಡ್ಡು ಬೆಳ್ತಿಗೆ	9—4	9—8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	17—0	1—8
ಗೋಧಿ ಗೋಣಿ ೧ಕ್ಕೆ	24—0	25—0
ತುರುಕ ಗೋಣಿ ೧ಕ್ಕೆ	13—0	13—12
ಕಡಲೆ ಗೋಣಿ ೧ಕ್ಕೆ	1—0	20—0
ತೊಗರಿ ಗೋಣಿ ೧ಕ್ಕೆ	32—0	25—5
ತೊಗರಿಬೇಳೆ ಗೋಣಿ ೧ಕ್ಕೆ	24—0	32—0
ಉದ್ದು ಗೋಣಿ ೧ಕ್ಕೆ	1[illegible]—8	18—0
ಹೆಸರು ಗೋಣಿ ೧ಕ್ಕೆ	1—8	19—0
ಊರು ಬೆಲ್ಲ ಖಂಡಿ ೧ಕ್ಕೆ	[illegible]—0	—
ಉಪ್ಪು ಗೋಣಿ ೧ಕ್ಕೆ	5—8	5—14
ಕೊಬ್ರಿ ಖಂಡಿ ೧ಕ್ಕೆ	115—0	125—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	—	37—8
ಎಳ್ಳಿಂಡಿ ಖಂಡಿ ೧ಕ್ಕೆ	66—4	5[illegible]—8
ಕೊಬ್ರಿ ಎಣ್ಣೆ ಮಣ ೧ಕ್ಕೆ	9—10	10—0
ಎಳ್ಳೆಣ್ಣೆ ಮಣ ೧ಕ್ಕೆ	11—0	11—4
ಬಿಳಿಎಣ್ಣೆ ಪಟ್ಟಿಗೆ ೧ಕ್ಕೆ	9—4	9—8
ಮೋರಿಸ ಸಕ್ಕರೆ ಮಣ ೧ಕ್ಕೆ	9—10	9—12
ಊರ ಮೆಣಸಿನ ಕಾಯಿ ಮಣ ೧ಕ್ಕೆ	10—0	10—4
ಸಾಸಿವೆ ಮುಡಿ ೧ಕ್ಕೆ	10—0	10—8
ಕೊತ್ತುಂಬರಿ ಮುಡಿ ೧ಕ್ಕೆ	5—0	6—0
ಕಾಫಿ ಖಂಡಿ ೧ಕ್ಕೆ	200—0	260—0
ಬಿಳಿಗೋಟು ಅಡಿಕೆ ಖಂಡಿ ೧ಕ್ಕೆ	90—0	95—0
ಹಳೆ ಬೇಗೋಟು	95—0	100—0
ಕಾಳುಮೆಣಸು ಖಂಡಿ ೧ಕ್ಕೆ	160—0	165—0
ಯಾಲಕ್ಕಿ ಮಣ ೧ಕ್ಕೆ	25—0	30—0
ಗೇರುಬೀಜ ಮುಡಿ ೧ಕ್ಕೆ	3—8	3—12
ಕಪ್ಪುಬೀಜ ಖಂಡಿ ೧ಕ್ಕೆ	100—0	120—0
ತಾಂಬ್ರ ತಗಡು ಮಣ ೧ಕ್ಕೆ	23—4	24—0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	40—0	42—0
ಜೇನ ಮೇಣ ಸೇರು ೧ಕ್ಕೆ	31—8	
ಹಿತ್ತಾಳೆ ತಗಡು ಮಣ ೧ಕ್ಕೆ	24—0	25—0

M. Anantha Prabhu.
The Tailoring House and School of Scientific Tailor's Cutting.
MANGALORE, SOUTH KANARA.

ಕನ್ನಡ ಪಾಠಪುಸ್ತಕಗಳು.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ವಿಳಾಸ:— ಆಂಗ್ಲೋ ಇಂಡಿಯನ್ ಟ್ರೇಡಿಂಗ್ ಕಂಪೆನಿ,
ಪರಿಮಳ ವ್ಯಾಪಾರಿಗಳು, ಬೆಂಗಳೂರು ಸಿಟಿ

ಹಾರ್ಮೋನಿಯಂ ಸ್ವಯಂಬೋಧಿನೀ

ಸ್ವರಾಕ್ಷರಸಹಿತ ಕೊಟ್ಟಿರುತ್ತದೆ. ... ಬೆಲೆ ೧೦ ಆಣೆ.

ಎಚ್. ಎನ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ

ರೇಷ್ಮೆ ಪಂಚೆ, ಆಭೋಮೋಹಿನಿ ಸೆಂಟ್

O. O. LINGAM & Co,
No 2 Ramanuja Iyer Street
SAVCARPET, *Madras.*

ಸುಗಂಧ ಕಲಾನಿಧಿ.

ಅಲ್ಪವಾದ ಬೆಲೆ! ಮಹತ್ತಾದ ವಿಷಯ!!

ವಿಳಾಸ:— ಕೆ ಪುಟ್ಟಪ್ಪ, ಕಲಾನ್ರಸಾರಕ ಕಾರ್ಯಾಲಯ
ನಂ. 12 ಟ್ಯಾಂಕ್‌ರೋಡು,
ಬೆಂಗಳೂರು ಸಿಟಿ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರು ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ರೋಗದ ನಾಮಗಳು.

ಹೆಚ್. ಎಂ. ಮುಲ್ಲಾ, ಸ್ಪೆಂಡಾರ್ಕ ಅರ್ಕಶಫಾ,
33 ಹೆಡ್ ಆಫೀಸ್ ... (ಬೆಳಗಾಂವಿ).

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು

1. ಮಹಾಮದನ ಕಾಮೇಶ್ವರಿ ಲೇಹ—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2. ಮಹಾಜ್ವರಾಂಕುಶ (ಖಾತ್ರಿ ಗುಣ)—ಇನ್ಫ್ಲುಯೆಂಜಾ ನ್ಯೂಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 8

3 ಬಾಲಗ್ರಹಗುಟಿಕೆ—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10.

4 ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೆ ಗುಣ ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲಿ 1ಕ್ಕೆ ಆಣೆ 8

5 ಶ್ವಾಸಕುಠಾರ ಗುಟಿಕೆ—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬುಸ ಕೆಮ್ಮು, ಇವು ಗುಣ ಡಜನಿಗೆ ಆಣೆ 10

6 ಮೇಹಕುಠಾರ—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಪಡಿಸುವದು, ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ ಕ್ರಯ ರೂ 2.

7 ಇಚ್ಛಾಭೇದಿ—ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1ಕ್ಕೆ ಆಣೆ 12

8 ಭೃಂಗರಾಜತೈಲ—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ—(ಕರ್ಪೂರಮಿತ್ರಿ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತಬರುವುದು, ಮುಂತಾದ ದಂತಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

THE BEST COOLING GLASS.
ಹಸನಾದ ಕನ್ನಡಕಗಳು.

ಇದನ್ನು ದೊಡ್ಡವರು ಚಿಕ್ಕವರು ಸಹ ಉಪಯೋಗಿಸಬಹುದು ಇದನ್ನು ಉಪಯೋಗಿಸುವದರಿಂದ ಕಣ್ಣುಗಳು ಯಾವಾಗಲೂ ತಂಪಾಗಿರುವದು ಮತ್ತು ಗಾಳಿ, ಮಣ್ಣು ಮುಂತಾದವುಗಳು ಕಣ್ಣಿಗೆ ಬೀಳದಂತೆ ನಾಲ್ಕು ಬಿಲ್ಲೆಗಳಿರುವವು ಇದರ ಕಂಬಿಗಳು ಯಾವಾಗ್ಲೂ ಬೆಳ್ಳಿಯಹಾಗೆ ಇರುವದು



ಇದರಲ್ಲಿ ಹಸಿರು, ಊದಿ, ಮೇಘವರ್ಣ ಮೊದಲಾದವುಗಳಿರುವದು ಇದನ್ನು ಉಪಯೋಗಿಸುವದರಿಂದ ಕಣ್ಣಿಗೆ ದಿನದಿನ ಥಳಕ ತಗಲದು 1 ನಂಬ್ರ ಇದರ ಕ್ರಯ ರೂ 1 4 0 2 ನಂಬ್ರ ರೂ 2 0 0

ವಿಳಾಸ.— ಮಹಾರಾಟ ಟ್ರೇಡಿಂಗ್ ಕಂಪೆನಿ,
ಸಾಹುಕಾರ ಪೇಟೆ, ಮದರಾಸ್,

೪೮ ಗಂಟೆಗಳೊಳಗಾಗಿ ಖಂಡಿತ ಗುಣಮಾಡುವ
ಸಾಂಟಿಲ್ ಮೆಡಿ ಎಂಬ ಗಂಧದೆಣ್ಣೆಯ ಗುಳಿಗೆಗಳು.

ಇಂಗ್ಲಾಂಡ್, ಪಾರಿಸ್, ಇಂಡಿಯಾ ಸಿಲೋನ್, ಮೊದಲಾದ ದೇಶಗಳಲ್ಲಿ ಲಕ್ಷಾವಧಿ ಜನಗಳು ಉಪಯೋಗಿಸಿ ಸುಖಪಟ್ಟಿದ್ದಾರೆ

(Made in France)



ನಮ್ಮ ವಿಳಾಸ:— ಸಿಟಿ ವಾಚ್ ಕಂಪೆನಿ.
16 ತಿರುಪತಿ ದೇವು ಮದರಾಸ್.

ಉಪ್ಪಿನಂಗಡಿ ತಾಲೂಕಿನ ಶ್ಯಾನಭೋಗರ ಉಪಸ್ಥಿತಿಯಲ್ಲಿ ಶ್ಯಾನಭೋಗರ ಎಸೋಸಿಯೇಶನಿನ ಕಾರ್ಯದರ್ಶಿಯವರು ಮಾಡಿದ ಭಾಷಣ.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

೨೭. ಶ್ಯಾನಭೋಗರಿಗೆ ಈ ತಾಲೂಕಿನಲ್ಲಿ [illegible] ವರ್ಷಕ್ಕೆ ೩ ಕ್ವಾಯರ್ ಕಾಗದ, ೪ ಸ್ಟೀಲ್ ಮೊತೆ, ೧ ಪೆನ್ಸಿಲ್, ೧ ಟಾವು ಬ್ಲೋಟಿಂಗ್ ಪೇಪರ್ ಮಾತ್ರ ಕೊಡುತ್ತಾರೆ. ಹಿಂದು ಕೊಡುವುದಿಲ್ಲ. ಈ ಮೊತೆಗಳು ಯಾವದಕ್ಕೆ ಎಟ್ಟು ಬಾಯುವುದೋ ಗೊತ್ತಿಲ್ಲ. ಈಗ ಕೊಡುವ ಈ ಸ್ಟೇಶನರಿಯಲ್ಲಿ ಕಾಗದ ೬ ತಿಂಗಳಿಗೆ ಬರಬಹುದು, ಪೆನ್ಸಿಲ್ ೩ ತಿಂಗಳಿಗೆ ಬರಬಹುದು, ಬ್ಲೋಟಿಂಗ್ ೧ ತಿಂಗಳಿಗೆ ಸಾಕಾಗಬಹುದು, ಸ್ಟೀಲ್ ಮೊತೆಗಳು ೧ ತಿಂಗಳಿಗೂ ಸಾಕಾಗಲಾರವು. ಮಸಿಯು ಪುಡಿಯಾಗಲೀ ದಪ್ತರ ಬಟ್ಟೆಯಾಗಲೀ ಇಲ್ಲ. ಅದಕ್ಕೆ ಏನು ಮಾಡುವುದೋ ಗೊತ್ತಿಲ್ಲ. ರಿಕಾರ್ಡು ಕೆಟ್ಟುಹೋದರೆ ಶ್ಯಾನಭೋಗ ಜವಾಬದಾರ. ಶ್ಯಾನಭೋಗರಿಗೆ ಅನೇಕ ಲೆಖ್ಖದ ಪುಸ್ತಕಗಳು ಹೊಲಿಯುವುದುಂಟು. ಇದಕ್ಕೆ ಬೇಕಾದ ನೂಲು ವ ಸೂಜಿ ಕೊಡುವ ಪದ್ಧತಿಯಿಲ್ಲ. ಈಗ್ಗಾರಿಂದ ಬೇಕಾದ್ದನ್ನೆಲ್ಲಾ ಶ್ಯಾನಭೋಗರು ಸ್ವಂತದಿಂದ ಕ್ರಯಕೊಟ್ಟು ಪಡಿಯಬೇಕಾಗುತ್ತದೆ. ತಮಗಿಂತ ಹೆಚ್ಚು ಸಂಬಳವಿದ್ದು ಪ್ರಿವಿಲೆಜ ರಜೆ, ಪೆನ್ಶನ್ ವಗೈರೆ ಸಿಗುವ ಇತರ ನೌಕರರಲ್ಲಿ ಒಬ್ಬರೂ ಸ್ವಂತದಿಂದ ಸ್ಟೇಶನರಿಗಳನ್ನು ಕೊಂಡುಕೊಂಡು ಸರಕಾರ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಾರೆಂತ ನಾನು ತಿಳಕೊಳ್ಳುವುದಿಲ್ಲ. ಸ್ಟೇಶನರಿ ಸಾಮಾನುಗಳಿಗೂ ದಿನ ಹೋದಂತೆ ಕ್ರಯವೂ ಮೂರು ಯಾ ನಾಲ್ಕು ಪಾಲಷ್ಟು ಏರಿಯದೆ, ಈಗ ಸಿಗುವ ಚಿಲ್ಲರೆ ಸ್ಟೇಶನರಿ ಸಾಮಾನು ಸಿಕ್ಕಬೇಕಾದರೂ ಹೆಚ್ಚು ಒದ್ದಾಡಬೇಕಾಗುತ್ತದೆ. ಈ ಎಲ್ಲಾ ರಗಳೆಗಿಂತ ನಮಗೆ ಕಂಟಿಂಜೆಂಟಿನ ಬಗ್ಗೆ ನಗದಿಯಿಂದ ತಿಂಗಳು ೧ಕ್ಕೆ ರೂ. ೧—೮—೦ಯಂತೆ ಸಿಗುವ ಹಾಗೆ ಮಾಡಬೇಕೆಂತ ಬೇಡಿಕೊಳ್ಳುವುದು ಉತ್ತಮವೆಂದು ನಾನು ಎಣಿಸುತ್ತೇನೆ.

೨೮. ಶ್ಯಾನಭೋಗರಿಗೆ ಮನೆತನದ ಹಕ್ಕು ಉಟ್ಟದೆ ಎಂಬ ಕಾರಣದಿಂದ ಇತರ ನೌಕರರಂತೆ ಪ್ರಿವಿಲೆಜ ರಜೆ ವ ಪೆನ್ಶನ್ ಇಷ್ಟು ಮಾತ್ರವಿಲ್ಲದಿರುವುದು ಸಹಜವಲ್ಲದೆ ಇತರ ನೌಕರರಿಗೆ ಸಿಕ್ಕುವಂತೆಯೇ ಸಮಯಾನುಸಾರದ ಎಲೋವೆನ್ಸಗಳು ಅಂದರೆ ಫೆಮಿನ ಅಥವಾ ವಾರ್ ಎಲೋವೆನ್ಸಗಳು ಕೊಡದಿದ್ದರೆ ನಾವು ಬಹಳ ಅನ್ಯಾಯ ಹೊಂದುತ್ತೇವಾದುದರಿಂದ ಅಂಥಾ ಎಲೋವೆನ್ಸಗಳು ನಮಗೂ ಸಿಕ್ಕಬೇಕೆಂತ ನಾನು ಎಣಿಸುತ್ತೇನೆ. ಯಾಕೆಂದರೆ ಸಂಬಳ ಜೀವನದ ಖರ್ಚಿಗೆ ಸಾಕಾಗುವುದಿಲ್ಲ ಎಂಬದರಿಂದ ಧರ್ಮಬಗ್ಗೆ ಅದನ್ನು ಕೊಡುವುದಾಗಿರುತ್ತದೆ. ಅದೇ ನ್ಯಾಯವನ್ನನುಸರಿಸಿದರೆ ಇತರ ನೌಕರರ ಹಾಗೆಯೇ ಶ್ಯಾನಭೋಗ ಸಹಾ ನೌಕರನೆಂದೆಣಿಸುವದು; ಅವನಿಗೂ ಅಂಥಾ ಎಲೋವೆನ್ಸ ಸಿಕ್ಕಗೊಡಿಸುವದು ಯಾಕೆ ನ್ಯಾಯವಲ್ಲ?

೨೯. ಮೇಲೆ ನಾವು ಸೂಚಿಸಿದ ಕಾರಣಗಳಿಂದ ಕೆಳಗೆ ಕಾಣಿಸಿದ ಸಂಗತಿಗಳಲ್ಲಿ ನಾವು ಸೀಗ ಹೋರಡಬೇಕಾದರೆ ಏನು ಏರ್ಪಾಡು ಮಾಡಬೇಕಾದ್ದೀತೆಂಬದು ಈ ಜೊತೆನ ಪರಿಷತ್ತಿನಲ್ಲಿ ನಿರ್ಣಯಿಸುವದು ಅಗತ್ಯವೆಂತ ನಾನು ಪ್ರಾರ್ಥಿಸುತ್ತೇನೆ.

ಈ ಕೆಳಗಿನ ಕೆಲವು ವಿಷಯಗಳು:—

- i. ಸಂಬಳ ಏರಿಸುವುದು.
- ii. ತಾಲೂಕು ಹೆಡ್ ಕ್ವಾರ್ಟರಿಗೆ ಬಂದಬಗ್ಗೆ ಭತ್ತೆ ಸಿಗುವುದು.
- iii. ಸ್ಟೇಶನರಿ ಬಗ್ಗೆ ನಗದಿನಿಂದ ಸಿಕ್ಕಬೇಕೆಂಬದು.
- iv. ಇತರ ನೌಕರರಂತೆ ಸಮಯಾನುಸಾರ ಎಲೋವೆನ್ಸಗಳು ಸಿಕ್ಕಬೇಕೆಂಬದು.

೩೦. ಈ ವರೆಗೆ ನಾನು ವಿವರಿಸಿದ್ದು ನಮ್ಮ ಸಂಬಳ, ಭತ್ತೆ, ಸ್ಟೇಶನರಿ, ಮತ್ತು ಸಮಯಾನುಸಾರ ಫೆಮಿನ್ ವಗೈರೆ ಎಲೋವೆನ್ಸಗಳು ಇಷ್ಟರ ಮಟ್ಟಿನ ಸಂಗತಿಯಾಯಿತು. ಮನುಷ್ಯನು ಒದ್ದಾಡುವುದು ಕೇವಲ ಹೊಟ್ಟೆ ಹೊರುವುದಕ್ಕೆನೇ ಅಲ್ಲ. ಮರ್ಯಾದೆಗೂ ಸ್ವಲ್ಪ ಲಕ್ಷ್ಯ ಕೊಡಬೇಕಾಗುತ್ತದೆ.

೩೧. ಶ್ಯಾನಭೋಗರಿಗೆ ಯೋಗ್ಯತೆಗಳು ಹೆಚ್ಚು ಕಡಮ್ಮೆ ಇರುವುದು ಅಗತ್ಯವಾದರೂ ಮರ್ಯಾದೆಯ ಸಂಗತಿಯಲ್ಲಿ ಮಾತ್ರ ಶ್ಯಾನಭೋಗರ ಪಾಲಿಗೆ ಏನೂ ಇಲ್ಲ. ನಮ್ಮ ಮೇಲಾಫೀಸರರಾದ ಡಿಪ್ಟುಟಿ ತಹಸಿಲದಾರ, ತಹಸಿಲದಾರ, ಡಿವಿಜನಲ್ ಆಫೀಸರ ಮುಂತಾದವರ ಮುಂದೆ ನಾವು ಕೈಕಟ್ಟಿ ನಿಲ್ಲಬೇಕಾದದ್ದು ಸಹಜವೇ. ಜಮಾಬಂದಿ ಲೆಖ್ಖಗಳ ತನಖಿ ಮಾಡುವಾಗ್ಯೆ ಒಂದೆರಡು ದಿನಗಳು ಕಾಗುವದುಂಟು. ಅಷ್ಟು ಸಮಯದ ವರೆಗೂ ಕ್ಲಾರ್ಕರ ಮೇಜಿನ ಹತ್ತಿರ ನಿಲ್ಲುಕೊಂಡೇ ಇರಬೇಕು. ಅಂಥಾ ಸಮಯದಲ್ಲಿ ಕಾಲು ಬಚ್ಚಿತೆಂಬದರಿಂದ ಖಾಲಿ ಇರುವ ಒಂದು ಆಸನದಲ್ಲಿ ಶ್ಯಾನಭೋಗನು ಕೂತದಕ್ಕೆ ಅದು ತಮ್ಮ ಗೌರವಕ್ಕೆ ಕುಂದೆಂತ ಭಾವಿಸಿ ಕ್ಲಾರ್ಕರ ಘನಕ್ಕೆ ಉಚಿತವಾಗಿ ಯಾವುದಾದರೂ ಒಂದು ನೆವನದಿಂದ ಅಥವಾ ಶ್ಯಾನಭೋಗನು ಎದ್ದ ಸಮಯ ನೋಡಿ ಆ ಆಸನವನ್ನು ಅಲ್ಲಿಂದ ತಪ್ಪಿಸಿಬಿಡುತ್ತಾರೆ. ತಾಲೂಕು ರಿಕಾರ್ಡಿನಲ್ಲಿ ಒಬ್ಬ ಪ್ಯಾವ್ನ ಇರುತ್ತಾನೆ, ಅವನಾದರೂ ಒಂದು ಹಳೇ ಖುರ್ಚಿ ಅಥವಾ ಸ್ಟೂಲು ಇಟ್ಟುಕೊಂಡು ಅದರಲ್ಲಿ ಕೂತುಕೊಳ್ಳುತ್ತಾನೆ. ಅದು ಯಾರಿಗೂ ಅಹಿತ ಕಾಣುವುದಿಲ್ಲ. ನಮಗೆ ತಾಲೂಕು ಆಫೀಸಿಗೆ ಬಂದಲ್ಲಿ ಒಂದು ಚಾಪೆಗೂ ಗತಿ ಇಲ್ಲ. ಸೆಲದಲ್ಲಿ ಕೂತು ವಸ್ತ್ರ ಮೈಲಿಯಾದರೆ ದೋಬಿಗೆ ಕೊಡಲಿಕ್ಕೆ ಕಾಸಿಗೂ ಗತಿ ಇಲ್ಲವೋ ಎಂತ ಮೇಲಾಫೀಸರರಿಂದ ಹೀನೈಸಿಕೊಳ್ಳಲಿಕ್ಕೂ ಅಸ್ಪದವಾಗುತ್ತದೆ. ಸ್ಟೇಶನರಿ ಯಾ ಫೊರ್ಮುಗಳು ಸಿಕ್ಕಬೇಕಾದರೆ ಕ್ಲಾರ್ಕರ [illegible] ಕಾದುಕೊಳ್ಳಬೇಕಾಗುತ್ತದೆ. ಅಷ್ಟರಲ್ಲಿ ನಮಗೆ ಅನಗತ್ಯವಿರುವವನ್ನು [illegible] ಎಕೌಂಟಂಟ ಯಾ ಕಾಪಿಯಿಸ್ಟರ [illegible]

೩೨. ಇದೇ ರೆವಿನ್ಯೂ ಇಲಾಖೆಗೆ ಸೇರಿದ ಗ್ರಾಮಸಂಬಂಧಿ ನೌಕರರೆಂಬವರು ಮನೆಗೆ "ಫೌಂಡೇಶನ್" ಬನಾದಿ ಇದ್ದ ಹಾಗೆ ಇರುವರು. ಆದರೆ ಯಾಕೋ ಇತರ ಹೆಚ್ಚು ಎಲ್ಲಾ ನೌಕರರು ನಮ್ಮನ್ನು ಮನುಷ್ಯ ಜನ್ಮದವರಂತೆ ಎಣಿಸುವುದೇ ಇಲ್ಲ. ನಾವು ಅಷ್ಟು ನಿಕೃಷ್ಟರೆಂದು ಎಣಿಸುತ್ತಾರೆ. ಇದರ ಕಾರಣಗಳನ್ನು ಕೊಟ್ಟು ಇವರಿಸಲಿಕ್ಕೆ ನಾವು ನಾಚಿಕೆಪಡುತ್ತೇವೆ. "ಅಪ್ಪ ನೆಟ್ಟ ಆಲದ ಮರ" ಎಂಬ ಗಾದೆಯಂತೆ ನಾವು ಈ ಶ್ಯಾನಭೋಗಿ ನೋಡಿ ಬರುವುದು ಹೊರತು ನಾವು ಇದನ್ನು ಬಿಟ್ಟು ಬೇರೆ ಒಬ್ಬನಲ್ಲಿ ಖಾಸಗಿ ನೌಕರಿಗೆ ನಿಂತರೆ, ಒಬ್ಬ ಗಂಡನ ಹೆಂಡತಿಯಂತೆ ತನ್ನ ಧನಿಯೂ ಒಬ್ಬನ ಹಿತಕ್ಕೆ ಸರಿಯಾಗಿ ನಡಕೊಂಡರೆ ಈಗಿನದ್ಕಿಂತ ಹೆಚ್ಚು ಸಂಬಳ ಸಿಕ್ಕಲೂ ಬಹುದು. ನಮ್ಮ ಯೋಗ್ಯತೆಗೆ ತಕ್ಕ ಮರ್ಯಾದೆ ಪಡೆಯಲೂ ಬಹುದು.

೩೩. ನಾನು ಮೇಲೆ ಹೇಳಿದ ಈ ಸಂಕಷ್ಟಗಳು ಶ್ಯಾನಭೋಗನಾಗಿರುವ ಪ್ರತಿಯೊಬ್ಬನಿಗೂ ಗೊತ್ತು ಇದ್ದು ಆ ವಿಷಯದಲ್ಲಿ ಪಶ್ಚಾತ್ತಾಪ ಪಡುತ್ತಾರೆಂತ ನಾನು ಎಣಿಸುತ್ತೇನೆ. ಆದರೆ ಒಬ್ಬೊಬ್ಬನೇ ಆಲೋಚಿಸಿದರೆ ಇದರ ನಿವೃತ್ತಿಯ ದಾರಿಗಳು ಸೂಚಿಸುವದಿಲ್ಲ ಆದ್ದರಿಂದ ಎಲ್ಲಾ ಶ್ಯಾನಭೋಗರು ಕೂಡಿ ಸಂಪತ್ತು ಮಾಡಿ, ಅದರಲ್ಲಿ ಎಲ್ಲರ ಆಲೋಚನೆ ಪಡೆದು ನಿರ್ಣಯಿಸುವದು ಉತ್ತಮ ತೋರಿ ಈ ದಿನ ಈ ಸಭೆ ಕೂಡಿಸಿದ್ದಾಗಿರುತ್ತದೆ. ನಾನು ಇದರಲ್ಲಿ ಸೂಚಿಸಿದಕ್ಕಿಂತ ಹೆಚ್ಚಿನ ಸಂಗತಿಗಳು ತಮ್ಮ ಪೈಕಿ ಯಾರಿಗಾದರೂ ಕಂಡುಬಂದರೆ ದಯವಿಟ್ಟು ಸೂಚಿಸಿ ನಾವೆಲ್ಲರೂ ಕೈಕೊಂಡ ಕೆಲಸದ ಕಡೆಹೊಂದುವ ತನಕ ಏಕಮತ್ಯದಿಂದಲೂ ದೃಢಚಿತ್ತದಿಂದಲೂ ಪರಸ್ಪರ ಅನುರಾಗದಿಂದಲೂ ವಾತ್ಸಲ್ಯವಿಟ್ಟು ವರ್ತಿಸುವವರಾಗಬೇಕೆಂದು ಹೃತ್ಪೂರ್ವಕ ಪ್ರಾರ್ಥಿಸುತ್ತೇನೆ. ಈ ವರೆಗಿನ ವಿದ್ಯಮಾನಗಳಿಂದ ರೇವಿನ್ಯೂ ಬೋರ್ಡಿನವರಾಗಲೀ ಗವರ್ನಮೆಂಟಿನವರಾಗಲೀ ನಮ್ಮ ಮೇಲೆ ಕನಿಕರ ಪಟ್ಟವರಾಗಿ ತೋರುವುದಿಲ್ಲ. ಈ ಪರಿಷತ್ತಿನ ಮೂಲಕ ನಾವು ಬರಕೊಳ್ಳುವ ವಿಜ್ಞಾಪನೆಗಳನ್ನಾದರೂ ದಯವಿಟ್ಟು ಲಾಲಿಸಿ ನಮ್ಮ ಕಷ್ಟಗಳಿಗೆ ತಕ್ಕ ನಿವಾರಣೆಯನ್ನು ಮಾಡುವ ಬಗ್ಗೆ ಶ್ರೀದೇವರೇ ಅವರಿಗೆ ಪ್ರೇರಣೆ ಕೊಟ್ಟು ನಮ್ಮ ಯತ್ನಗಳು ಸಫಲವಾಗಲೆಂದು ಆಶಿಸುತ್ತೇನೆ.

೩೪. ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವದಕ್ಕೆ ಮಾನ್ಯ ಮೊರಹಳ್ಳಿ ಶಿವರಾಯರು ಪ್ರೀತಿಪೂರ್ವಕವಾಗಿ ಒಪ್ಪಿಕೊಂಡದ್ದೇ ಶ್ರೀದೇವರ ಅನುಗ್ರಹವು ನಮ್ಮ ಮೇಲೆ ಇರುವದಕ್ಕೆ ನಿದರ್ಶನವಾಗಿದೆ. ಎಲ್ಲಾ ಪ್ರಜೆಗಳ ಯಾ ಪ್ರಜೆಗಳ ಪೈಕಿ ಯಾವದೊಂದು ವರ್ಗದವರ ಸರ್ವತ್ರ ಹಿತಕ್ಕೆ ಸಂಬಂಧಿಸಿದ ಸಾರ್ವಜನಿಕ ಕಾರ್ಯಗಳಲ್ಲಿ ಅವರು ಎಷ್ಟರ ಮಟ್ಟಿಗೆ ಸಹಕಾರಿಯಾಗುತ್ತಾರೆ, ಮತ್ತು ಅವರ ಸಹಾನುಭೂತಿಯಿಂದ ಎಷ್ಟರ ಮಟ್ಟಿಗೆ ಇಷ್ಟಾರ್ಥಸಿದ್ಧಿ ಮಾಡಿಸಿಕೊಳ್ಳುವದಕ್ಕೆ ಸಾಧ್ಯವಾಗುತ್ತದೆ, ಎಂಬ ವಗೈರೆ ವಿಷಯದಲ್ಲಿ ಅವರನ್ನು ಇದುವರೆಗೂ ಚೆನ್ನಾಗಿ ಅರಿತಿರುವ ನಿಮಗೆ ನಾನು ಏನೂ ಹೇಳಬೇಕಾದ್ದಿಲ್ಲ. ನಮ್ಮ ಉತ್ತರೋತ್ತರ ಅಭಿವೃದ್ಧಿಯ ಬಗ್ಗೆ ಅವರು ಅಧ್ಯಕ್ಷರಾಗಿ ದಯಪಾಲಿಸುವ ಬುದ್ಧಿವಾದದ ಬಲದಿಂದಲೂ ನಿಮ್ಮೆಲ್ಲರ ಅನ್ಯೋನ್ಯ ಪ್ರೀತಿಯ ಸಾಮರ್ಥ್ಯದಿಂದಲೂ ನಾವು ಕೈಕೊಂಡ ಕಾರ್ಯವು ಸ್ವಚ್ಛಂದವಾಗಿ ಪರಿಣಮಿಸಿ ಸಮ್ಮಂಧಪಟ್ಟವರೆಲ್ಲರಿಗೆ ಶ್ರೇಯೋಭಿವೃದ್ಧಿಯಾಗುವದರಲ್ಲಿ ನನಗೇನೂ ಸಂದೇಹ ಕಾಣುವುದಿಲ್ಲ. ಇನ್ನು ಅಧ್ಯಕ್ಷ ಮಹಾಶಯರ ನುಡಿಗಳನ್ನು ಕೇಳುವುದಕ್ಕೆ ಅತ್ಯಂತ ಆತುರಪಡುತ್ತಿರುವ ನಿಮ್ಮ ಮತ್ತು ಅಧ್ಯಕ್ಷರ ನಡುವೆ ಈ ಪ್ರಸಂಗವನ್ನು ಇನ್ನಷ್ಟು ಉದ್ದದಕ್ಕೆ ಬೆಳಸಿ ಇರುವುದಕ್ಕೆ ನನಗೆ ಇಷ್ಟವಿಲ್ಲದುದರಿಂದ ನಿಮ್ಮ ಅಪ್ಪಣೆಯನ್ನು ಕೇಳಿ ನನ್ನ ಈ ವಿನಯಪೂರ್ವಕವಾದ ಮಾತುಗಳನ್ನು ಇಲ್ಲಿಗೆ ಮುಗಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ ದೊರೆಗಳವರಾದ ಆರ್. ಎಚ್. ಎಲ್ಲಿಸ ದೊರೆಗಳವರು, ಐ. ಸಿ. ಯಸ್.

ನೋಟೀಸು

ಸೈನ್ಯದಿಂದ ಬಿಡುಗಡೆ ಹೊಂದಿದ ಲೇಬರರಿಗೂ ಪೋರ್ಟರರಿಗೂ ಯುದ್ಧ ಸಂಬಂಧದ ಗ್ರೆಚ್ಯುಟಿಯಾಗಲೀ, ಬೋನಸ್ಸಾಗಲೀ, ಉಡುಪಿನ ಭತ್ತೆಯಾಗಲಿ ಸಿಕ್ಕಲಾರದೆಂತ ಎಕೌಂಟೆಂಟ ಜನರಲರವರ ತಾರೀಕು 4—10—19ನೇ ನಂಬ್ರ A/ 4409 A. G 6ನೇ ತಂತಿಯಿಂದ ಕಂಡು ಬರುತ್ತದೆಂಬದನ್ನು ಎಲ್ಲವರ ಮಾಹೀತಿ ಬಗ್ಗೆ ಈ ಮೂಲಕ ಪ್ರಕಟಿಸೋಣಾಗುತ್ತದೆ.

S. Kanara Collector's office
Mangalore 20th April 1920

P. K. Nambiar,
For Collector.

WANTED

Compositors, Printers & Book-Binders

For a Press to be opened shortly at Hampankatta.

Apply sharp to,

A. B. SHETTY,
Attavar, MANGALORE.

WANTED

Three qualified Secondary grade teachers for the Rusario Secondary School, Mangalore, from 1st June 1920. Apply stating salary expected to the,

Correspondent.

ನೋಟೀಸು.

ಇದೇ ಬರುವ ಮೇ ತಿಂಗಳ ತಾರೀಕು 1 ಮತ್ತು 2 ಶನಿವಾರ, ಆದಿತ್ಯವಾರ ದಿನ ಬೆಳಿಗ್ಯೆ 9 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಮಂಗಳೂರು ಶಹರ ಡೊಂಗರಕೇರಿ ಕೆನರಾ ಗರ್ಲ್ಸ್‌ಸ್ಕೂಲಿನ ಕಂಪೌಂಡಿನಲ್ಲಿ ಕೆರಾಳಬೋಗಿಯ ಮರನ ಸಿಗಿದ ಜರತಿಗಳನ್ನೂ ಪಕ್ಕಾಸು ವ ಕಿಟಕಿಬಾಗಿಲುಗಳ ತುಂಡುಗಳನ್ನೂ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರೆ ನಿಶ್ಚಯಿಸಿರುವುದರಿಂದ ಮನೆಕಟ್ಟಡಗಳನ್ನು ಕಟ್ಟುವವರು ವ ಕಾಯಿಸುವುಳ್ಳವರು ಬಂದು ತಕ್ಕೊಳ್ಳಬಹುದು.

K. S. Akbar Haji Hayath Pacha.

ನೋಟೀಸು.

ನನ್ನ ಅಳಿಯ ತಿಮ್ಮ ಪೂಜಾರಿ ಎಂಬ ಹುಡುಗನು ಕಳೆದ ತಿಂಗಳ ಲಾಗಾಯಿತು ಮನೆಯಲ್ಲಿ ಒಂದು ಅಲ್ಪವಾದ ತಪ್ಪುಮಾಡಿದುದಕ್ಕಾಗಿ ಗದರಿಸಿದ ಪ್ರಯುಕ್ತ ಯಾರಿಗೂ ತಿಳಿಯದಂತೆ ಎಲ್ಲಿಗೊ ಪಲಾಯನ ಮಾಡಿರುತ್ತಾನೆ. ಯಾವ ಕಡೆಯಲ್ಲಿಯಾದರೂ ಯಾರಿಗಾದರೂ ಆತನು ದೃಷ್ಟಿಗೆ ಬಿದ್ದು ಆ ವಿಚಾರವನ್ನು ನನಗೆ ತಿಳಿಯಪಡಿಸಿದರೆ ಆ ಪ್ರತ್ಯುಪಕಾರವನ್ನು ಎಂದೂ ಮರೆಯದೆ ಸದಾ ಕೃತಜ್ಞತೆಯಿಂದಿರುವೆನು. ಹುಡುಗನ ಗುರುತು:—ಸಾಧಾರಣ 11, 12 ವರುಷ ಪ್ರಾಯ; ಸಾಧಾರಣ ಬಿಳಿ ಅಂಗವುಳ್ಳವನು; ತಲೆಯಲ್ಲಿ ಕ್ರಾಪು; ಕಿವಿಗಳಲ್ಲಿ ಕೆಳಗೆ ಮುರು ಇಲ್ಲ.

ಯಂ. ಕೆ. ಶೇಷ, ಫಿಶ್ ಮರ್ಚೆಂಟ್,
ಮಲ್ಪೆ, ದ. ಕನ್ನಡ.

ನೋಟೀಸು.

ಮಂಗಳೂರು ಶಹರು ಗೋಳಿಕಟ್ಟೆ ಬಜಾರಿನಲ್ಲಿರುವ ಸಾಹುಕಾರ ಪಿ. ಬಿ. ಅಬ್ದುಲ್ಲ ಹಾಜಿಯವರು, ನಮ್ಮ ಕೂಡ ಕ್ರಯಕ್ಕೆ ಪಡೆದ ಫಿಶ್‌ಗುವಾನೊ ಪೈಕಿ ಸುಮಾರು 90ಟನ್ ಫಿಶ್‌ಗುವಾನನ್ನು ಕ್ರಮಪ್ರಕಾರದ ನೋಟೀಸು ಕೊಟ್ಟಾಗ್ಯು ಅವರು ತೆಕ್ಕೊಂಡು ಹೋಗದೆ ನಮ್ಮ ವಶಾ ಇರುವ ಸದ್ರಿ ಮ್ಯಾಲನ್ನು ಇದೇ ಬರುವ ತಾ. 5—5—20ನೇ ದಿವಸ ಮಧ್ಯಾಹ್ನ 3-30 ಗಂಟೆ ಸಮಯ, ಮಂಗಳೂರು ಬಂದರದ ಇದಿರಿನ ಬೆಂಗರೆಯಲ್ಲಿ, ತ್ಯಾಂಪಣ್ಣ ಕರ್ಕೇರ ರೆಂಬವರ ಕಾರಖಾನೆ ಎದುರಿನಲ್ಲಿ ಬಹಿರಂಗವಾದ ಏಲಂ ಮೂಲಕ ವಿಕ್ರಯಿಸೋಣಾಗುವುದು. ಅಗತ್ಯವಿದ್ದವರು, ಮ್ಯಾಲನ್ನು ಮುಂಚಿತವಾಗಿ ನೋಡಬಹುದು. ಏಲಮಿನ ಇತರ ಶರ್ತಗಳನ್ನು ಕೆಳಗೆ ಹೆಸರು ಕಾಣಿಸಿದವರಿಂದ ತಿಳಕೊಳ್ಳಬಹುದು.

ಉರ್ವ 29—4—'20. } ಧಿ ಕೆನರಾ ಮೆನ್ಯೂರು ವರ್ಕ್ಸ್ ಕಂಪೆನಿ. ಬಗ್ಗೆ ಬೋಳಾ ಮಂಗೇಶರಾವ್.

ತಿರುಚಿ ಸುಗಂಧನಿಧಿ ಕಾರಖಾನೆ.

ಅನೇಕ ನಮೂನೆಯ ವಿನಾ ಅಂಬರ್, ಜವ್ವಾಜಿ, ಪುನುಗು, ಕಸ್ತೂರಿ, ಊದುಬತ್ತಿಗಳು, ಬಿಲ್ಲೆಗಳು, ಅರಗಜ, ಪಿತ್ತ್ಲ, ಅತ್ತರುಗಳು, ಸೆಂಟ್ಸ್‌ಗಳು, ಶೃಂಗಾರ ತೈಲ, ಕುಂತಳವರ್ಧಿನಿ ತೈಲ, ಇವೇ ಮೊದಲಾದ ಸುಗಂಧ ದ್ರವ್ಯಗಳು ನಮ್ಮಲ್ಲಿ ತಯಾರಾಗಿ ವಿಕರಿಯಾಗುತ್ತ, ಮೈಸೂರು, ಮದರಾಸು, ಬೊಂಬಾಯಿ, ಕಲ್ಕತ್ತಾ, ಢಿಲ್ಲಿ, ಪಂಜಾಬು ಮುಂತಾದ ಇಂಡಿಯಾ ದೇಶದಲ್ಲೂ ಮತ್ತು ಬರ್ಮಾ, ಸಿಲೋನ್, ಜಪಾನ್ ಮುಂತಾದ ದ್ವೀಪಾಂತರಗಳಲ್ಲೂ ನಮ್ಮ ತಯಾರಿಯ ಸುಗಂಧದ್ರವ್ಯಗಳು ಪ್ರಖ್ಯಾತಿ ಹೊಂದಿವೆ. ಒಂದಾವರ್ತಿ ನಮ್ಮ ಪದಾರ್ಥಗಳನ್ನು ತರಿಸಿನೋಡಿದರೆ ಅವುಗಳ ಗುಣಗಳು ತಿಳಿಯಬರುತ್ತೆ.

ರಹಿಂವಾರ್ ಊದುಬತ್ತಿಗಳು ೨೪ ರೂಪಾಯಿ ತೂಕವುಳ್ಳದ್ದು ಶೇರು ೧ಕ್ಕೆ

ಊದುಬತ್ತಿಗಳು.

ಸುಗಂಧ ಕಳಾನಿಧಿ ಬತ್ತಿ,	ಶೇರು	1ಕ್ಕೆ	12—0—0
ಅನುಮುಗಂಧವರ್ಷಿನಿ	,,	,,	8—0—0
ಪುಷ್ಪೋದ್ಯಾನ	,,	,,	6—0—0
ನಂಬರ್ ಎ ಅಂಬರ್	,,	,,	5—0—0
,, ಬಿ ಅಂಬರ್	,,	,,	3—0—0
,, ಸಿ ಅಂಬರ್	,,	,,	2—0—0
1ನೇ ಜವ್ವಾಜಿ ಬತ್ತಿ	,,	,,	6—0—0
2ನೇ ,,	,,	,,	4—0—0
1ನೇ ಕಸ್ತೂರಿ ಬತ್ತಿ	,,	,,	3—0—0
2ನೇ ,,	,,	,,	2—0—0
1ನೇ ಪುನುಗು ಬತ್ತಿ	,,	,,	1—3—0
2ನೇ ,,	,,	,,	1—0—0

ಅವ್ವಾಲ್ ಹಶೀಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	1-0-0	0-8-0	0-4-0
2ನೇ ,,	0-8-0	0-4-0	0-2-0

ಜವ್ವಾಜಿಗಂಧ ಅಥವಾ ಅರಗಜ.

ಅವಲ್ 1ನೇ ನಂಬರ್	ತೊಲ 1ಕ್ಕೆ		2—0—0
,, 2ನೇ	,,		1—0—0

ಪುದುಕೋಟೆ ಕಸ್ತೂರಿ ಬಿಲ್ಲೆಗಳು.

	1 ತೊಲೆ	½ ತೊಲೆ	¼ ತೊಲೆ
1ನೇ ನಂಬರ್	2-0-0	1-0-0	0-8-0
2ನೇ ,,	1-0-0	0-8-0	0-4-0

ಉತ್ತಮವಾದ ದಶಾಂಗ ಶೇರು 1ಕ್ಕೆ ರೂ 1.

ತಲೆಗೆ ಹಚ್ಚುವ ಕುಂತಳವರ್ಧಿನಿ ತೈಲ ಸೀಸೆ 1ಕ್ಕೆ ರೂ 1. ಸ್ನಾನಕ್ಕೆ ಉಪಯೋಗಿಸುವ ಶೃಂಗಾರಮಲ ತೈಲ ಸೀಸೆ 1ಕ್ಕೆ 1—0—0.

ಎಲ್ಲಾ ಸಾಮಾನುಗಳಿಗೆ ಟಪ್ಪಾಲು ಚಾರ್ಜು ಬೇರೆ ಬೀಳುತ್ತೆ. ವ್ಯಾಪಾರಿಗಳಿಗೆ ಕಮಿಶನ್ ವಜಾಮಾಡಿ ಕಳುಹಿಸುವೆವು. ಬೇಕಾದ ಸಾಮಾನುಗಳ ಹೆಸರು, ನಂಬರು ಬರೆದರೆ ಅದರಂತೆ ನೋಡಿ ರವಾನಿಸುವೆವು. ನಮ್ಮ ಕೆಟಲಾಗು ಉಚಿತವಾಗಿ ರವಾನಿಸುವೆವು. ನಮಗೆ ಕಾಗದ ಬರೆಯತಕ್ಕವರು ತಮ್ಮ ಹೆಸರು, ಗ್ರಾಮ, ಪೋಸ್ಟ್ ಇತ್ಯಾದಿ ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ—ತಿರುಚಿ ಸುಗಂಧನಿಧಿ ಕಾರಖಾನೆ, ಮೇಲಪುದೂರು, ತಿರುಚಿನಾಪಳ್ಳಿ.

ಪುತ್ತೂರು, ದಕ್ಷಿಣ ಕನ್ನಡ.

(1913ನೇ ಇಸವಿಯ ಇಂಡಿಯನ್ ಕಂಪೆನಿಗಳ ಆಕ್ಟಿಗನುಸಾರವಾಗಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.)

ಮೂಲಧನ—ರೂಪಾಯಿ 200,000—ರೂಪಾಯಿ 25ರ 8,000 ಹಿಸೆಗಳಿಗೆ ವಿಭಾಗಿಸಲ್ಪಟ್ಟಿರುತ್ತದೆ. ಹಿಸೆಗಳನ್ನು ... ಯಾರೂ ಪಡಕೊಳ್ಳಬಹುದು.

ಮನವಿಯೊಂದಿಗೆ ಪ್ರತಿ ಹಿಸೆಗೆ ರೂಪಾಯಿ 5 ಮತ್ತು ಪ್ರವೇಶಫೀಸು ಆಣೆ 4 ಅಂತು ರೂ. 5—4—0; ಮನವಿ ಅಂಗೀಕಾರ... ಅಲ್ಲೋಟ್‌ಮೆಂಟ್ ನೋಟೀಸಿನ ವಾಯಿದೆಗೆ ರೂ. 5 ಕೊಡತಕ್ಕದ್ದು. ಬಾಕಿ ರೂ. 15ನ್ನು ಸರಿ ... 3 ಕಂತುಗಳಿಂದ ಕೇಳಿದ ಹಾಗೆ ಪಾವತಿ ಮಾಡತಕ್ಕದ್ದು. ಆದರೆ ಒಂದು ಕಂತು ಕೇಳಿದ ಬಳಿಕ ಕನಿಷ್ಠಪಕ್ಷಕ್ಕೆ 2 ತಿಂಗಳ ಅವಧಿಗೆ ಮುಂಚಿತವಾಗಿ ಇನ್ನೊಂದು ಕಂತು ಕೇಳಲಾಗಲಿಕ್ಕಿಲ್ಲ.

ಪ್ರಾಸ್ಪೆಕ್ಟಸಿನ ಬದಲಾಗಿ ಜೊಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರ ಬಳಿ ದಾಖಲು ಮಾಡಿದ ಸ್ಟೇಟ್‌ಮೆಂಟ ... ಪ್ರಕಾರ ರೂ. 20,000ಕ್ಕೆ ಸರಿಯಾದ 800 ಹಿಸೆಗಳು ಈ ಮೊದಲೇ ಹಂಚಲ್ಪಟ್ಟಿರುತ್ತವೆ.

ಡೈರೆಕ್ಟರರು.

1. ಮ॥ ರಾ॥ ರಾ॥ ಕುಳ್ಯಾಲ ಸಾಂತಯ್ಯ ಶೆಣೈ, ಅವರ್ಗಳ್. ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಮಂಗಳೂರು.
2. „ „ ಎಮ್. ನರಸಿಂಹ ಮಠ್ಪುಭಂಡಾರಿ, „ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ವ ಸಾಹುಕಾರ, ಮಂಗಳೂರು.
3. „ „ ಎಮ್. ಮುದ್ದ ಗಿರಿ ಪಾಂಡುರಂಗ ಪೈ. „ ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ವ ಸಾಹುಕಾರ, ಮಂಗಳೂರು.
4. „ „ ಎಚ್. ಕೊರಗಪ್ಪ, „ ಲೇಂಡಿಂಗ್ ಮತ್ತು ಶಿಪ್ಪಿಂಗ್ ಡ್ಯೂಸ್ ಕಮಿಟಿಯ ಮೆಂಬರ್ ಮತ್ತು ಒನರರಿ ಬೆಂಚ್ ಮೆಜಿಸ್ಟ್ರೇಟ್, ಮಂಗಳೂರು.
5. „ „ ಮಂಜೇಶ್ವರ ಜನಾರ್ದನ ಭಟ್, „ ತಾಲೂಕು ಬೋರ್ಡ ಮೆಂಬರ್ ವ ಸಾಹುಕಾರ, ಪುತ್ತೂರು.
6. „ „ ಎಚ್. ಅನಂತ ಕಾಮತ್, „ ಒನರರಿ ಬೆಂಚ್ ಮೆಜಿಸ್ಟ್ರೇಟ್ ವ ಸಾಹುಕಾರ, ಪುತ್ತೂರು.
7. „ „ ಅರಿಯಡ್ಕ ಸುಬ್ಬಯ್ಯಶೆಟ್ಟಿ, „ ವರ್ತಕಾರ, ಅರಿಯಡ್ಕ.
8. „ „ ಸೊರಕೆ ಎಲಿಯಣ್ಣ, „ ವರ್ತಕಾರ ಮತ್ತು ಸಾಹುಕಾರ, ಪುತ್ತೂರು.
9. „ „ ಎ. ಗೋವಿಂದ ಶೆಣೈ, „ ಮೆನೇಜಿಂಗ್ ಡೈರೆಕ್ಟರ್, ಪುತ್ತೂರು.

ಬೇಂಕರ್ಸ್.

1. ಮದ್ರಾಸ್ ಬೇಂಕ್ ಮತ್ತು 2. ಕೆನರಾ ಬೇಂಕ್, ಲಿಮಿಟೆಡ್, ಮಂಗಳೂರು.

ಲೀಗಲ್ ಎಡ್ವೈಸರರು.

1. ಮ॥ ರಾ॥ ರಾ॥ ಎಚ್. ಗಣಪತಿರಾವ್, ಅವರ್ಗಳ್,—ಪ್ಲೀಡರ್, ಪುತ್ತೂರು.
2. „ „ ಎಮ್. ಮಾಧವರಾವ್ „ —ಬಿ. ಎ., ಬಿ. ಎಲ್, ಪ್ಲೀಡರ್, ಮಂಗಳೂರು.

ರಿಜಿಸ್ಟ್ರಿ ಮಾಡಲ್ಪಟ್ಟ ಆಫೀಸು.

"ಶ್ರೀ ವರದೇಂದ್ರ ಹೋಲ್" ಪೋಸ್ಟ್ ಆಫೀಸ್ ಬಳಿ, ಪುತ್ತೂರು.

ಸೂಚನಾ ಪತ್ರ.

ಉದ್ದೇಶಗಳು—(1) ಬೇಂಕಿಂಗ್ ಯಾನೆ ಹಣದ ಲೇವಾದೇವಿ ಮಾಡುವದು. (2) ವ್ಯಾಪಾರದ ದಲಾಲಿ ವ ಏಜನ್ಸಿ ಮಾಡುವದು. (3) ಕೈಗಾರಿಕೆ ಕಸಬುಗಳನ್ನು ಮಾಡುವದು. (4) ವ್ಯಾಪಾರ ಮಾಡುವದು. (5) ಕೃಷಿ ಮಾಡುವದು (ಉಪಯುಕ್ತವಾದ ಕೈಗಾರಿಕೆ ಸಮೇತ). (6) ಲಾಭಕರವೆಂತ ಕಂಡುಬರುವ ಇತರ ಯಾವ ಉದ್ಯೋಗವನ್ನಾದರೂ ಮಾಡುವದು.

(1) ಪುತ್ತೂರಿನಲ್ಲಿ ಒಂದು ಬೇಂಕು ಸ್ಥಾಪಿಸಲ್ಪಡುತ್ತಿದೆ.

(2) ಒರುವ ವರ್ಷ ಒಂದು ದಲಾಲಿ ಭಂಡಸಾಲೆ ತೆರೆಯುವ ಆಲೋಚನೆ ಇದೆ.

(3) ಹಿಟ್ಟು ತಯಾರಿಸುವ ಕಾರ್ಖಾನೆಯು ಪಶ್ಚಿಮ ಕರಾವಳಿಯಲ್ಲಿ ಬೊಂಬಾಯಿ ವಿನಹಾ ಬೇರೆ ಎಲ್ಲಿಯೂ ಇರುವದಿಲ್ಲ. ಆದಕಾರಣ ಅಂಥಾದ್ದೊಂದು ಕಾರ್ಖಾನೆಯನ್ನು ಸದ್ಯದಲ್ಲಿಯೇ ಮಂಗಳೂರಿನಲ್ಲಿ ಸ್ಥಾಪಿಸುವ ಆಲೋಚನೆ ಇದೆ.

ಮಿಕ್ಕ ಉದ್ದೇಶಗಳನ್ನು ನೆರವೇರಿಸುವರೆ ಹೆಚ್ಚು ದ್ರವ್ಯಾನುಕೂಲತೆಯು ಅವಶ್ಯಕವು. ಮಾತ್ರವಲ್ಲ, ಅವುಗಳಲ್ಲಿ ಹೆಚ್ಚು ತೊಂದರೆಗಳು ವ ನಷ್ಟ ಸಂಭವ ಕೂಡಾ ಇರಬಹುದಾದ ಕಾರಣ ಅವುಗಳು ಕೆಲವು ವರ್ಷಗಳ ತನಕ ಪ್ರಾರಂಭಿಸಲ್ಪಡಲಾರವು.

ಮುನಾಫೆ.

ಪ್ರಥಮ ವರ್ಷದಲ್ಲಿ ಹೆಚ್ಚಿನ ಸೇರುವ ಹಿಸೆಗಳ ಸಂಪಾದನೆಯಲ್ಲಿಯೇ ಕಳೆದುಹೋಗುವದರಿಂದ ಕಂಪೆನಿಗೆ ಸಾಕಷ್ಟು ಮುನಾಫೆ ಉಳಿಯುವರೆ ಆಸ್ಪದವಿಲ್ಲ. ಪರಂತು ಸದ್ಯದಲ್ಲಿಯೇ ಪ್ರಾರಂಭಿಸಲಿಕ್ಕಿರುವ ಉದ್ಯೋಗಗಳು (ಅಂದರೆ—ಬೇಂಕು, ಹಿಟ್ಟಿನ ಕಾರ್ಖಾನೆ ಮತ್ತು ದಲಾಲಿ ಭಂಡಸಾಲೆ, ನಷ್ಟಕ್ಕೆ ಎಡೆಯಿಲ್ಲದ ಮುನಾಫೆಯು ಮೂಲಿಗಳಾಗಿರುವದರಿಂದ ಬರುವ ವರ್ಷದಲ್ಲಿ ಮುನಾಫೆಯ ಹಣದಿಂದ ಕ್ಷೇಮನಿಧಿಗೋಸ್ಕರ ತಕ್ಕ ಅನುಕೂಲತೆಯನ್ನು ಮಾಡಿಯೂ ಸಾಕಷ್ಟು ಡಿವಿಡೆಂಡು ಹಂಚಲು ಸಾಧ್ಯವಾದೀತೆಂತ ಕಂಪೆನಿಯ ಡೈರೆಕ್ಟರರು ಅಭಿಪ್ರಾಯಪಡುತ್ತಾರೆ.

ಹಿಸೆಗಳ ಬಗ್ಗೆ ಮಾಡತಕ್ಕ ಮನವಿ.

ಮನವಿ ಬಗ್ಗೆ ಛಾಪಿಸಿ ಫೋರ್ಮುಗಳು ಕ್ರಯ ವಿನಹಾ ಮೇನೆಜಿಂಗ್ ಡೈರೆಕ್ಟರರಿಂದ ಒದಗಿಸಲ್ಪಡುವವು. ಮನವಿಗಳು ಹಣ ಸಮೇತ ಅವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಯಾದಾಸ್ತು ಮತ್ತು ಕ್ರಮಗಳ ಪುಸ್ತಕವನ್ನು ಕಂಪೆನಿಯ ಆಫೀಸಿನಲ್ಲಿ ಕೆಲಸ ಮಾಡುವ ದಿವಸಗಳಲ್ಲಿ ಯಾರೂ ನೋಡಿಕೊಳ್ಳಬಹುದು. ಹಿಸೆಗಳನ್ನು ಪಡಕೊಂಡವರು ಒಂದು ರೂಪಾಯಿ ಕೊಟ್ಟು ಅವುಗಳ ಪ್ರತಿಯನ್ನು ಸಹಾ ತೊಂಡು ಕಳ್ಳಬಹುದು. ಮನವಿದಾರರು ಕಂಪೆನಿಯ ಯಾದಾಸ್ತು ಮತ್ತು ಕ್ರಮಗಳನ್ನು ಓದಿನೋಡಿ ಅವುಗಳ ಅರ್ಥವನ್ನು ಸರಿಯಾಗಿ ವ ತಾ ತಿಳಕೊಂಡಿದ್ದಾರೆಂತ ತಿಳಕೊಳ್ಳೋಣಾಗುವದು.

25 ಹಿಸೆಗಳನ್ನು ಪಡಕೊಂಡ ಮೆಂಬರನು ಡೈರೆಕ್ಟರನಾಗಲಿಕ್ಕೆ ಅರ್ಹನಾಗಿರುತ್ತಾನೆ.

☞ ಎಲ್ಲಾ ಕಾಗದಪತ್ರಗಳನ್ನು ಮೇನೆಜಿಂಗ್ ಡೈರೆಕ್ಟರರ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪುತ್ತೂರು,
13—3—1920.

A. GOVINDA SHENOY,
Managing Director.

ಶುದ್ಧವಾದ ಮಹೌಷಧಗಳು.

[redacted]

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗತ, ... ಶಾಯ, ತಲೆನೋವು, ಸೊಂಟನೋವು, ದಿನ್ನನೋವು, ... ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಕೊಡುವವು. ಬಾಟ್ಲಿಗೆ ಕಿಮ್ಮತ್ತು ೦—೨—೦; ಒಂದು ಡಜನು ಬಾಟ್ಲಿಗಳಿಗೆ ರೂ. ೧—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸ್ತುಬು, ಬಜ್ಜಿ, ದದ್ದು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಕಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಗಿಕ್ಕೆ ೦—೫—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡೀರಿ.

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾರ್ಕೂರು, ದ. ಕನ್ನಡ.

ಜರ್ಮನ್ ಬೆಳ್ಳಿಯ ರಿಸ್ಟ್ ವಾಚ್.

ಈ ಗಡಿಯಾರವು ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಿ ಈಗಲೇ ಬಂದಿರುವವು. ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಇದರಲ್ಲಿ ಯಾದೇ ಆಗಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇದನ್ನು ಕೈಯಲ್ಲಿ ಕಟ್ಟಿಕೊಂಡು ಎಷ್ಟು ಒರಟು ಕೆಲಸ ಮಾಡಿದಾಗ್ಯೂ ಕೆಡುವುದಿಲ್ಲ. ಕೈಯಲ್ಲಿ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 5—8—0.



ನಮ್ಮ ವಿಳಾಸ:— ವಿ. ಎ. ಎಸ್. ವಾಚ್ ಕಂಪೆನಿ,
ಸಾಹುಕಾರಪೇಟೆ, ಮದ್ರಾಸ್.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದ

ಅಜ್ಜಿ ಕಥೆಗಳು:

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರ್ಗಣಿ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟದೇವರು
ಸಿಗಡಿ ಯಾಕೆ ಒಣಗಲಿಲ್ಲ? ಹುಲಿಯೊ ಇಲಿಯೊ

ಈ ಎಂಟು ಪುಸ್ತಕಗಳ ಕ್ರಯ ಅಂಚೆ ಹಾಸಲು ಸೇರಿ ರೂ. 0—7—0
ವಿ. ಪಿ. ರೂ. 0—8—0.

ಅಕ್ಷರಮಾಹಿತಿಯನ್ನುಂಟುಮಾಡುವದರಲ್ಲಿ ಸಹಕಾರಿಯಾಗಿವೆ. ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ ವಾಚನಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ್ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0	ಕೊಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ 1—2—0
" ಸಣ್ಣ " " 1—6—0	" ಸಣ್ಣ " " 0-12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜೋರ್ಜ್‌ಟೌನ್, ಮದರಾಸ್

ತಂತಿ ವಿಳಾಸ:—
ಪಂಡಿತ್, ಮದರಾಸ್

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ಐ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ದೂರಗಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡಿಸುತ್ತಾ ಇರುವುದು. ಕ್ರಯ ರೂ 1. ಹೆಬ್ಬರಿಗೆಯಿಂದ ಮರೆಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 167, ಬ್ರಾಡ್ವೇ, ಮದರಾಸು.

Local Agents **Raphael & Co.,**
Brito Buildings,
Hampankatta, MANGALORE

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕು ವೈದ್ಯರ ಸಹಾಯವನ್ನು ಕಾದು ನೋಡುವುದು ಸಹಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ [illegible]—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, 260 ಪುಟಗಳುಳ್ಳ ಪುಸ್ತಕಕ್ಕೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ, ಮೂರುದಿನ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ೬ಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ಪ್ಲೇಗಿನ ಗೆಡ್ಡೆ ಕರಗುತ್ತದೆ ಸಂಧುಗಳ ನೋವು ಸೆಳವು ಹೋಗುತ್ತದೆ ಸೀಸೆಗೆ ೬ ಆಣೆ ೬ಕ್ಕೆ ಒಂದು ಇನಾಮು

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ೬ಕ್ಕೆ ಒಂದು ಇನಾಮು

ಬಾಲಸುಭೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ವಾಂತಿ, ವಾಂತಿ, ಅಜೀರ್ಣದ ಭೇದಿ, ಜ್ವರ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಚಟುವಟಿಕೆ ಪುಷ್ಟಿಯುಳ್ಳವರಾಗುತ್ತಾರೆ ಸೀಸೆಗೆ ಆಣೆ 12 ೬ಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ತಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಮಾಂಜನೇಯ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ನಮ್ಮಿಂದ ಕಳುಹಿಸುವ ಡಾಂಗಿಯನ್ನು ತೆಗೆದುಕೊಳ್ಳುವಾಗ ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ, ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ—ವೀರ್ಯವು ನೀರಿನಂತೆ

ಇದ್ದರೂ ನಷ್ಟೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ಕಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟದ ನೋವು ಸ್ವಲ್ಪವಾದರೂ ಇರಲಾರದು ಈ ಸಾಲಾಮಿಸ್ರೀ ಎಲಮಿರಾ ಬೂರ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವದರಿಂದ ಪೂರಾ ಗುಣ ಕೊಡುತ್ತೆ ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಸುಖ ಕೊಡುತ್ತೆ ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಒಂದು ಡಬ್ಬಿಗೆ ರೂಪಾಯಿ 2

"ಈಗ ಭಾಂಗಿಯು ಚಾರ್ಜ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪ್ಪಾಲು ಖರ್ಚ 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಸುಲಭ ಕ್ರಯ!! ಗುಣ ಹೆಚ್ಚು!!!

ರೋಯಲ್ ಇಂಡಿಯನ್ ಬಾಂ.

(ರಿಜಿಸ್ಟರ್ಡ್)

ಇದೇ ಗುರುತನ್ನು ಲಕ್ಷದಲ್ಲಿಡಿರಿ



ಬಾಟ್ಲಿ ಒಂದರ ಕ್ರಯ ಆಣೆ ೮.

ಹಿಂದೂಸ್ಥಾನದಲ್ಲಿ ಬೆಳೆಯುವ ಉತ್ಕೃಷ್ಟವಾದ ವನಸ್ಪತಿಗಳಿಂದ ಪರಿಶೋಧಿಸಿ, ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು—ಇದರ ಉಪಯೋಗದಿಂದ ತಲೆನೋವು, ಶೀತ, ಶಿರೋಭಾರ, ಗಂಟು, ಗಂಟು ನೋವು, ಎದೆಶೀತ, ಎದೆನೋವು, ಉಬ್ಬಸವು, ವಾತ ಸಂಧಿವಾತ, ಅರ್ಧಾಂಗವಾಯು, ಉಳುಕು, ಗಾಯ, ಜಖಮು, ಸೊಂಟದ ನೋವು, ಕಜ್ಜಿ ಇವೇ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ರಾಮಬಾಣದಂತೆ ಗುಣಪಡಿಸುತ್ತದೆ ಸಮುದ್ರ ಪ್ರಯಾಣ, ರೈಲ್ವೆ ಮುಸಾಫರಿ ಯಾ ಹಳ್ಳಿಗಳಲ್ಲಿ ಡಾಕ್ಟರ ಸಹಾಯವಿಲ್ಲದೆ ಇದ್ದ ಪ್ರತಿಯೊಬ್ಬರು ಒಂದು ಬಾಟ್ಲಿಯನ್ನು ಇಟ್ಟುಕೊಳ್ಳುವದು ಅಗತ್ಯ ಒಂದು ಡಜನಿಗೆ ರೂ. ೫—೦—೦, 24 ಬಾಟ್ಲಿಗೆ ರೂ ೯—೮—೦, 60 ಬಾಟ್ಲಿಗೆ ರೂ ೨೦—೦—೦ ವಿ ಪಿ ಖರ್ಚು ಪ್ರತ್ಯೇಕ.

"ಗಜಕರ್ಣದ ಮುಲಾಮು" ಡಬ್ಬಿ ಒಂದರ ಆಣೆ ೪, ದಂತಮಂಜನ ಕಜ್ಜಿ ಮುಲಾಮು ಆಣೆ ೩, ಹೆಯರ್ ಆಯಿಲ್, ಬೇರೆ ಕಡಿತದ ಮದ್ದು, ಇನ್ನೂ ಅನೇಕ ತರದ ಮದ್ದುಗಳನ್ನು ತಯಾರಿಸಿದ್ದೇವೆ. ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡುವೆವು.

ಸೂಚನೆ:—ನಾವು ಮುಂಬಯಿಯಿಂದ ರಫ್ತುಗಳಿಗೆ ಧರ್ಮಾಲಯದಿಂದ ಬಂದ ಪೆಟೆಂಟ ಔಷಧಗಳನ್ನೂ, ಇತರ ಮಾಲ್ಲನ್ನೂ ಆದಷ್ಟು ಮಟ್ಟಿನ ಕಡಿಮೆ ದರದಲ್ಲಿ ಕಳುಹಿಸುವ ಏರ್ಪಾಟನ್ನು ಇಟ್ಟಿರುತ್ತೇವೆ.

Manora & Co.,
Hill Road, P. O. Bandra,
BOMBAY.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಪೋಸ್ಟ ಖರ್ಚು ೬ ಆಣೆ.

ಕೇ. ಟೀ. ಡೋಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

... ವಾನಿಂಗ್‌ಟಿಲ್ಲಿ Waaning Tilly ... ಔಷಧಿ ಸಾಮಾನುಗಳು

ಹಾರ್ಲೆಮ್ ಆಯಿಲ್

(HAARLEM OIL).

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಬರಾಯಿಸಿಕೊಳ್ಳಿರಿ!

ಹಾರ್ಲೆಮ್ ಆಯ್‌ಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ... ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೀವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸನೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯು ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ ಬೇರೆ.

ವಿಳಾಸ — ಹಿಂದೂಸ್ಥಾನದ ಸೋಲ್ ಏಜಂಟರು — ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ —ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning Tilly Bros ಎಂಬ ದಸ್ಕತ ಇರುವ ಪತ್ರವಿರುತ್ತದೆ, ಇದೇ ನಿಜವಾದ ಹಾರ್ಲೆಮ್ ಆಯಿಲ್ ಎಂದ ತಿಳಿಯತಕ್ಕದ್ದು ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಪ್ಪರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ ,ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ ಜನರಿಗೂ, ಬತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟಿ. ಖ. ವಗೈರೆ ಬೇರೆ

2 ವಿಜಯಸಂಜೀವಿನಿ ತೈಲ. ಕಾಲತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧ ವ್ಯಾಧಿಗಳಿಗೆ ದಿವ್ಯ ಔಷಧ ಸ್ತ್ರೀಯರ ರೋಗಗಳಿಗ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ.
೮೦ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ ೧—೦—೦

4 ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮೊಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು ಕ್ರಯ ಬಾಟ್ಲಿ ೧ಕ್ಕೆ ರೂ ೧ ೮-೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು - ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಶೋರನೂರ, (ಮಲಬಾರ).



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಚಿಕ್ಕ ಸೆಟ್ಟು ೧ಕ್ಕೆ ರೂ. ೨—೦—೦. ಮಧ್ಯಮ ತರದ ಸೆಟ್ಟು ೧ಕ್ಕೆ ರೂ ೪—೬—೦ ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ ೫—೦—೦

ರೇಷ್ಮೆ ಸಾಮಾನು ವಗೈರೆ ಕೆಟಲಾಗು ಬೇಕಾದವರಿಗೆ ಉಚಿತವಾಗಿ ಕಳಿಸಲ್ಪಡುವದು.
ಪೋಸ್ಟೇಜ್ ಪ್ಯಾಕಿಂಗ್ ಪ್ರತ್ಯೇಕ.

ADDRESS — Siromuni Narayanacharya,
Chaukamba, BENARES CITY.

ವಿಳಾಸ — ಶಿರೋಮಣಿ ಉಡುಪಿ ನಾರಾಯಣಾಚಾರ್ಯ,
ಚೌಕಂಬಾ, ಕಾಶಿ

ರಬ್ಬರಿನ ಅಕ್ಷರಗಳು.

ಈ ಅಕ್ಷರಗಳು ವಿಲಾಯಿತಿಯಲ್ಲಿ ತಯಾರಾದವು ಕಾಗದಗಳು ಕಾರಡು ಮುಂತಾದವುಗಳನ್ನು ಕಷ್ಟವಿಲ್ಲದೆ ಬಹು ಅಂದವಾಗಿ ನಾವೇ ಪ್ರಿಂಟುಮಾಡಿಕೊಳ್ಳಬಹುದು ಈ ಪೆಟ್ಟಿಗೆಯೊಂದು ಇದ್ದರೆ ರಬ್ಬರು ಮೊಹರುಗಳ ಅಗತ್ಯವೇ ಬೇಡ. ಇದರಲ್ಲಿ ಇಂಕ್‌ಪ್ಯಾಡ್, ಚಿಮಟ, ಇಂಕ್‌ಬಾಟಲ್ ಸಹಿತ ಸೇರಿವೆ

ಕ್ರಯ	110	ಅಕ್ಷರಗಳ	ಪೆಟ್ಟಿ	ರೂ	1—3—0
"	170	"	"	"	1 14—0
"	250	"	"		2—8—0
"	350	"	"		3 12 0

ಸ್ವಿಸ್ ಪಾಕೆಟ್ ವಾಚ್.

ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ೧೧ ಬಹುಮಾನ, ೪ ವರ್ಷ ಗ್ಯಾರಂಟಿ ಸಹಿತ ರೂ ೪—೮—೦.

ಈ ಗಡಿಯಾರವು ಮಜಬೂತಾಗಿರುವದು ಪಾಲಿಶ, ಧೂಳು ಸೇರದಂತೆ ಎರಡು ಕಡೆಯೂ ಡೂಮು ಇರುವದು ಗಂಟೆ ತೋರಿಸುವದರಲ್ಲಿ ಸ್ವಲ್ಪವೂ ವ್ಯತ್ಯಾಸ ಮಾಡುವದಿಲ್ಲ ಇದನ್ನು ತೆರೆದು ನೋಡಿದರೆ ಗೊತ್ತಾಗುವದು ಇದನ್ನು ಲೀವರ್ ಕೆಲಸದಿಂದ ನವವಾಗಿ ತಯಾರಿಸಿದ ಬಹುಮಾನಗಳ ವಿವರ — ಕರವಸ್ತ್ರ ೧, ಕನ್ನಡಿ ೧, ಗುಂಡಿಗಳು ೪, ಗಿಲೀಟಿನ ರೋಜಾ ಹೂವು ೧, ಬೀಸಣಿಗೆ ೧ ಬ್ರೋಚ್ ೧, ಬಾಚಣಿಗೆ ೧, ಸೆಂಟ್ ಬುದ್ದಿ ೧, ಜುಮ್ಕಾ ೧೧ ಬಹುಮಾನಗಳ ಸಹಿತ ರೂ ೪—೮—೦.

ವಿಳಾಸ — ರಾಸ್‌ವಾಚ್ ಎಂಡ್ ಕೋ,
ಇರುಳಪ್ಪನ ಬೀದಿ, ಮದರಾಸು

ಶಾಶ್ವತವಾದ ದೇಹಶಕ್ತಿಯನ್ನು ದುರಭ್ಯಾಸಗಳಿಂದ ಚಿಕ್ಕಂದಿನಲ್ಲಿಯೇ ಕಳೆದುಕೊಂಡು ಈ ಮರಣಾಂತರವೂ ಮುಂದುವರಿಸುವರೇತಕ್ಕೆ?

ಲೋಕಪ್ರಸಿದ್ಧವಾದ

ಸಕಲರೋಗ ಸಂಹಾರಿ

ಎಂಬ ಔಷಧದ ಸೇವನೆಯಿಂದ ವೀರ್ಯವು ನೀರನಂತೆ ಇದ್ದರೂ, ಸ್ವರ್ಶೇಂದ್ರಿಯ ಬಾಧಕವೂ, ಕೈ, ಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವಿಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಬತ್ತಿಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ದೂರ ನಡೆಯುವದರಿಂದ ಮೇಲುಬ್ಬಸ ಬರುವುದೂ, ತಲೆನೋವು ಇವುಗಳೆಲ್ಲವೂ "ಸಕಲರೋಗ ಸಂಹಾರಿ"ಯ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುತ್ತದೆ, ರಕ್ತವನ್ನು ಹೆಚ್ಚಿಸಿ ಧಾತುವನ್ನು ವೃದ್ಧಿಪಡಿಸುವುದರಲ್ಲಿ ಇದಕ್ಕೆ ಸಮಾನವಾದ ಔಷಧವು ಬೇರೆ ಯಾವದು ಇಲ್ಲವು. ಉಪಯೋಗಿಸುವ ವಿಧವು ಔಷಧದ ಜೊತೆಯಲ್ಲಿ ಕಳುಹಿಸುವೆವು, ಕ್ರಯ 16 ತೊಲೆ ಡಬ್ಬಿ 1ಕ್ಕೆ ರೂ 2—0—0,

ವಿಳಾಸ— ಡಾ॥ ಎಂ. ಪೀಟರ್,
ಇರುಳಪ್ಪನ ಬೀದಿ, ಮದರಾಸು.

Printed & Published by V. S. Kamath at the Mangalore Trading Association's Sharada Press, Mangalore.